॥ ಶ್ರೀಮನ್ಮೂಲರಾಮೋ ವಿಜಯತೇ ॥

ಭಾಗ-5

॥ ಶ್ರೀ ಗುರುರಾಜೋ ವಿಜಯತೇ ॥

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

ಅಧ್ಯಕ್ಷರು :

ಪರಮಪೂಜ್ಯ ॥ ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಗೌರವ ಸಂಪಾದಕರು :

ವಿ॥ ರಾಜಾ ಎಸ್. ನಿರಿ ಆಚಾರ್ಯ

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀ ಗುರುರಾಜೋ ವಿಜಯತೇ ॥

ಭಾಗ -೫

ಶ್ರೀಪದ್ಮನಾಭತೀರ್ಥಮುನಿ-ವಿರಚಿತ
ಸತ್ತರ್ಕದೀಪಾವಳಿ

ಶ್ರೀತ್ರಿವಿಕ್ರಮಪಂಡಿತಾಚಾರ್ಯ-ವಿರಚಿತ
ತತ್ವಪ್ರದೀಪ

ಶ್ರೀಜಯತೀರ್ಥಮುನಿ-ವಿರಚಿತ
ತತ್ವಪ್ರಕಾಶಿಕಾ

ಭಾವದೀಪ

ಶ್ರೀವೇದವ್ಯಾಸರ ಬ್ರಹ್ಮಸೂತ್ರ, ಶ್ರೀಮಧ್ವಾಚಾರ್ಯರ ಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ ಟೀಕೆಗಳೊಂದಿಗೆ
ಶ್ರೀಮಂತ್ರಾಲಯಪ್ರಭುಗಳ ಭಾವದೀಪ
ಸಂಸ್ಕೃತ ಮೂಲ ಹಾಗೂ ಕನ್ನಡ ಅನುವಾದ

ವಿಶೇಷವಿಚಾರ ಹಾಗೂ ಸಮಗ್ರ ವಿಶ್ಲೇಷಣೆಯೊಂದಿಗೆ

* * * * * *

ಪ್ರಕಾಶನ :
ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

॥

'ಭಾವದೀಪ' : ಮನ್ಮಥ॥ ಶ್ರಾವಣ ॥ಬಹುಳ ॥ ದ್ವಿತೀಯಾ (ದಿನಾಂಕ : ೩೧-೮-೨೦೧೫) ಶ್ರೀರಾಘವೇಂದ್ರಸ್ವಾಮಿಗಳ ಮಧ್ಯಾರಾಧನೆಯಂದು ಮಂತ್ರಾಲಯ ಕ್ಷೇತ್ರದಲ್ಲಿ ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಈ ಕೃತಿಯನ್ನು ಲೋಕೇಶಾರ್ಪಣೆ ಹಾಗೂ ಲೋಕಾರ್ಪಣೆ ಮಾಡಿದರು.

ಪ್ರಕಾಶನ	:	ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.
ಸಂಪಾದನೆ ಮತ್ತು ಅನುವಾದ	:	ವಿ ॥ ಬೆಮ್ಮತ್ತಿ ವೇಂಕಟೇಶಾಚಾರ್ಯ, ಬೆಂಗಳೂರು.
ಪ್ರಥಮಮುದ್ರಣ	:	2015
ಪುಟಗಳು	:	704
ಬೆಲೆ	:	600 ರೂ
ಪ್ರತಿಗಳು	:	1000

©

Publication Copy right :

ಶ್ರೀಗುರುಸಾರ್ವಭೌಮ ಸಂಶೋಧನ ಮಂದಿರ,
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ,
ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ - 518 345 ಆಂಧ್ರಪ್ರದೇಶ.

ಅಕ್ಷರಜೋಡಣೆ :

ಶ್ರೀಮತಿ ಎಸ್. ನಾಗಲತಾ
ಶ್ರೀ ಬೆಮ್ಮತ್ತಿ ಶ್ರೀನಿವಾಸ

ಮುಖಪುಟ ವಿನ್ಯಾಸ :
ಕೆ. ಗಿರಿ, ಚಿತ್ರ - ಸ್ಕಂದ

ಮುದ್ರಣ :
ಮುಕ್ತಿಪಥ ಮುದ್ರಣಾಲಯ, ಬೆಂಗಳೂರು.

II Srimanmoola Ramo Vijayate II

II Sri Gururajo Vijayate II

Vol. - 5

SRI PADMANABHATIRTHAMUNI'S

SATTARKADIPAVALI

SRI TRIVIKRMAPANDITAACHARYA'S

TATVAPRADIPA

SRIJAYATIRTHAMUNI'S

TATVAPRAKAASHIKAA

BHAVADIPA

Sri Vedavyasa's Brahmasutra,
Sri Madhvacharya's Bhashya,
Teekas - Sattarkadipawali, Tatvapradipa, Tatvaprakaashikaa

Bhavadipa by Sri Mantrayala Prabhu

Sanskrit Original Text with Kannada Translation

with special debate from many commentaries & overall critisism

Published by :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

'BHAVADIPA' : HH Sri Sri Subhudendra Thirta sripada has submitted this 5th volume to Sri Raghavendraswamiji at Mantralaya.

Publication : Sri Gurusarvabhouma Sanshodhana Mandira, Jagadguru Srimanmadhvacharya Mula Mahasamsthana, Sri Raghavendraswamy mutt, Mantralayam. A.P.

Edited & Translated by : Vidwan Bemmatti Venkateshacharya, Bangalore.

First Edition : 2015

Pages : 704

Price : Rs. 600

Copies : 1000

©

Publication Copy right :

Sri Gurusarvabhouma Samshodhana Mandira,
Jagadguru Srimanmadhvacharya Mula Mahasamsthana,
Sri Raghavendraswamy Mutt, Mantralayam - 518 345 A.P.

Type set :

Smt. S. Nagalatha, Bangalore.
Sri Bemmatti Srinivasa

Printed at :

Muktipatha Mudranalaya, Bangalore.

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಬ್ರಹ್ಮಸೂತ್ರ ಭಾಷ್ಯ

ಸತ್ತರ್ಕದೀಪಾವಳಿ ತತ್ವಪ್ರಕಾಶಿಕಾ ತತ್ವಪ್ರದೀಪ

ಭಾವದೀಪ

* * * *

ಅಧ್ಯಕ್ಷರು :

ಶ್ರೀ ಸುಬುಧೇಂದ್ರತೀರ್ಥಶ್ರೀಪಾದರು

ಪೀಠಾಧಿಪತಿಗಳು, ಶ್ರೀರಾಘವೇಂದ್ರಸ್ವಾಮಿಗಳ ಮಠ, ಮಂತ್ರಾಲಯ.

ಗೌರವ ಸಂಪಾದಕರು :

ವಿ॥ ರಾಜಾ ಎಸ್. ಗಿರಿಆಚಾರ್ಯ

ಮಂತ್ರಾಲಯ

ಸಂಪಾದನೆ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು.

॥ Srimanmoola Ramo Vijayate ॥ ॥ Sri Gururajo Vijayate ॥

Brahmasutra Bhashya

Sattrakadipavali Tatvapradipa

Tatvaprakaashikaa

BHAVADIPA

******

President:

HH Sri Subhudhendratirtha Sripadaru

Peetadhipati of Sri Raghavendraswamy Mutt, Mantralayam.

Honorary Editor:

Sri Vidwan Raja S. Giri Acharya

Mantralayam.

Edited & Translated by :

Vidwan Bemmatti Venkateshacharya,

Bangalore.

ಐದನೆಯ
ವಾಙ್ಮಯ-ಕುಸುಮಹಾರ
ಸಮರ್ಪಣೆ

ಶ್ರೀರಾಘವೇಂದ್ರಸ್ವಾಮಿಗಳ ಮಠಾಧೀಶರಾದ ಪರಮಪೂಜ್ಯ ।। ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಈ ಕೃತಿಯನ್ನು ಶ್ರೀರಾಘವೇಂದ್ರತೀರ್ಥಶ್ರೀಪಾದರ ಅಂತರ್ಯಾಮಿಗಳಾದ ಶ್ರೀಮನ್ಮಧ್ವಾಚಾರ್ಯರ ಅಂತರ್ಯಾಮಿಗಳಾದ ಶ್ರೀಮನ್‌ಮೂಲರಾಮಚಂದ್ರದೇವರಿಗೆ ಐದನೆಯ ವಾಙ್ಮಯ ಕುಸುಮಹಾರವನ್ನಾಗಿ ಸಮರ್ಪಣೆ ಮಾಡಿದ್ದಾರೆ.

ಪರಮಪೂಜ್ಯ ॥ ಶ್ರೀಸುಬುಧೇಂದ್ರತೀರ್ಥಶ್ರೀಪಾದರ ಜ್ಞಾನದೀಕ್ಷೆ

ಈ ಕೃತಿಯ ಮುದ್ರಣಕ್ಕೆ ತಗಲುವ ದುಬಾರಿವೆಚ್ಚವನ್ನು ತಮ್ಮ ಪಾದಕಾಣಿಕೆ-ಯಿಂದಲೇ ನಿರ್ವಹಿಸಿದ ಪರಮಪೂಜ್ಯ॥ ಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರು ಈ ಕೃತಿಯ ಆಮೂಲಾಗ್ರ ಪರಿಪೂರ್ಣತೆಗೂ ಕೂಡ ಮುಖ್ಯಕಾರಣರಾಗಿದ್ದಾರೆ. ಮೊದಲನೆಯ ಸಂಪುಟದಲ್ಲಿ ಭಾವದೀಪ ಅನುವಾದವು ವಿಶೇಷವಿಚಾರದೊಂದಿಗೆ ಮುದ್ರಣವಾಯಿತು. ಎರಡನೆಯ ಸಂಪುಟದಲ್ಲಿ ಶ್ರೀಪಾದಂಗಳವರು ಸತ್ತರ್ಕದೀಪಾವಳಿ ಹಾಗೂ ತತ್ವಪ್ರದೀಪಗಳ ಅನುವಾದವನ್ನು ಸೇರಿಸುವಂತೆ ಆದೇಶಿಸಿದರು. ಮೂರನೆಯ ಸಂಪುಟದಲ್ಲಿ ಮೂರು ಟೀಕೆಗಳ ಜೊತೆ ಭಾವದೀಪದ ಅನುವಾದವು ಅಚ್ಚುಕಟ್ಟಾಗಿ ಮುದ್ರಣವಾಯಿತು. ನಾಕನೆಯ ಸಂಪುಟದಲ್ಲಿ ಮೂರು ಟೀಕೆಗಳ ಜೊತೆ ಭಾವದೀಪದ ಅನುವಾದ ಮಾತ್ರವಲ್ಲದೇ ತತ್ವಪ್ರಕಾಶಿಕೆಗೆ ಸಂಬಂಧಪಟ್ಟ ಅನೇಕ ಟಿಪ್ಪಣಿಗಳ ವಿಶೇಷ-ವಿಚಾರ ಹಾಗೂ ವೇದ-ಉಪನಿಷತ್ತುಗಳ ಸಂಪೂರ್ಣವ್ಯಾಖ್ಯಾನವು ಮುದ್ರಣವಾಯಿತು. ಪ್ರಕೃತ ಐದನೆಯ ಸಂಪುಟದಲ್ಲಿ ಟಿಪ್ಪಣಿಯ ವಿಚಾರಗಳನ್ನು ಮತ್ತಷ್ಟು ಹೆಚ್ಚಿಸಿ ಕೆಲವೊಂದೆಡೆ ಮೂಲಸಹಿತವಾಗಿ ಮುದ್ರಿಸಲಾಗುತ್ತಿದೆ. ಹೀಗೆ ಹಂತ ಹಂತವಾಗಿ ಭಾವದೀಪದ ಈ ಯೋಜನೆಯು ಉತ್ತಮಗುಣಮಟ್ಟವನ್ನು ಹೊಂದುತ್ತಿದೆ. ಈ ಗುಣಮಟ್ಟತೆಗೆ ಮುಖ್ಯಕಾರಣರು ಪರಮಪೂಜ್ಯ॥ ಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳವರೇ ಆಗಿದ್ದಾರೆ. ಆದ್ದರಿಂದ ಶ್ರೀಪಾದಂಗಳವರು ಈ ಕೃತಿಗೆ ಮುಖ್ಯಮಾರ್ಗದರ್ಶಕರು, ಮುಖ್ಯಸಂಪಾದಕರು, ಪರಿಪೂರ್ಣ ಪರಿಕಲ್ಪನೆಯುಳ್ಳವರೂ ಆಗಿರುತ್ತಾರೆ.

ಬ್ರಹ್ಮಸೂತ್ರಭಾಷ್ಯವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಕಾಮಧೇನು ಕಲ್ಪವೃಕ್ಷದಂತೆ ಈ ಕೃತಿಯನ್ನು ನೀಡುತ್ತಿರುವ ಶ್ರೀಪಾದಂಗಳವರ ಉದಾರತೆ, ವಿಶಾಲಮನೋಭಾವನೆ ಹಾಗೂ ಜ್ಞಾನದೀಕ್ಷೆ ಈ ಎಲ್ಲಾ ಗುಣಗಳಿಗೆ ಎಂದೆಂದೂ ಶರಣೆನ್ನೋಣ.

- ಸಂಪಾದಕ

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀಮತ್-ಪರಮಹಂಸ-ಪರಿವ್ರಾಜಕಾಚಾರ್ಯ-ಪದ-ವಾಕ್ಯ-ಪ್ರವೀಣ-ಪಾರಾವಾರ-ಪಾರಂಗತ-
ಸರ್ವತಂತ್ರ-ಸ್ವತಂತ್ರ-ಶ್ರೀಮನ್-ಮೂಲರಘುಪತಿ-ವೇದವ್ಯಾಸ-ದೇವ-ದಿವ್ಯ-ಶ್ರೀಪಾದ
ಪದ್ಮಾರಾಧಕ-ಜಗದ್ಗುರು-ಶ್ರೀಮನ್-ಮಧ್ವಾಚಾರ್ಯ-ಮೂಲಮಹಾಸಂಸ್ಥಾನ-
ಮಂತ್ರಾಲಯ-ಶ್ರೀರಾಘವೇಂದ್ರಸ್ವಾಮಿಗಳವರ ಮಠದ ವೇದಾಂತ-ಸಾಮ್ರಾಜ್ಯ-
ದಿಗ್ವಿಜಯ-ವಿದ್ಯಾಸಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ ಸುಯತೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರರಾದ
ಪರಮಪೂಜ್ಯ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ

ಅನುಗ್ರಹ ಸಂದೇಶ

ಭಾವದೀಪ ಶಿನೆಯ ಸಂಪುಟವು ಮೂಲರಾಮಚಂದ್ರದೇವರಿಗೆ ಸಮರ್ಪಣೆ-ಯಾಗುತ್ತಿರುವುದು ನಮಗೆ ಬಹಳ ಸಂತೋಷವಾಗಿದೆ.

ಮೊದಲು ನಾವು ಭಾವದೀಪಕಾರ್ಯದ ಅನುವಾದವನ್ನು ಬೆಮ್ಮತ್ತಿಯವರಿಗೆ ವಹಿಸಿದಾಗ ಸಮಯಕ್ಕೆ ಸರಿಯಾಗಿ ವಿಷಯ ವೈಶಾಲ್ಯತೆಯಿಂದ ಗ್ರಂಥವನ್ನು ಬರೆದು ನೀಡಿದರು. ಅನಂತರ ಕಠಿಣಗ್ರಂಥವೆಂದೇ ಪ್ರಸಿದ್ಧವಾದ ತ್ರಿವಿಕ್ರಮಪಂಡಿತಾಚಾರ್ಯರ ತತ್ವಪ್ರದೀಪಗ್ರಂಥವನ್ನು ಮತ್ತಷ್ಟು ಚೆನ್ನಾಗಿ ಅನುವಾದ ಮಾಡಿದರು. ಅನುವಾದ ಮಾಡಿದ್ದಷ್ಟೇ ಅಲ್ಲದೆ ಎಲ್ಲೆಡೆಯೂ ವಿಶೇಷ ವಿವರಣೆಗಳನ್ನು ನೀಡಿ ಬರೆದುಕೊಟ್ಟರು. ಇದರಿಂದ ನಮಗೆ ಬಹಳ ಸಂತೋಷವಾಯಿತು.

ಅಂತರಾಧಿಕರಣದಿಂದ ದ್ಯುಭ್ವಾದ್ಯಧಿಕರಣದ ತನಕ ಮೂರು ಟೀಕೆಗಳ ಜೊತೆ ಭಾವದೀಪಗ್ರಂಥವು ಈ ಸಂಪುಟದಲ್ಲಿ ಅನುವಾದಗೊಂಡಿದೆ. ಲಿಂಗಪಾದದಲ್ಲಿ ಅನ್ಯತ್ರೈವಪ್ರಸಿದ್ಧವಾದ ಲಿಂಗಾತ್ಮಕಶಬ್ದಗಳನ್ನು ಸಮನ್ವಯ ಮಾಡಿದ್ದಾಯಿತು. ಮತ್ತು ವೈಶ್ವಾನರಾಧಿಕರಣದಲ್ಲಿ 'ವೈಶ್ವಾನರ' ಎಂಬ ಒಂದು ನಾಮಸಮನ್ವಯವನ್ನು ಮಾಡುವ ಮೂಲಕ, ಅನೇಕ ಲಿಂಗಾತ್ಮಕಶಬ್ದಗಳ ಸಮನ್ವಯವನ್ನೂ ಕೂಡ ಸಾಧಿಸಿದ್ದಾಯಿತು.

ದ್ಯಭ್ವಾದ್ಯಧಿಕರಣದಿಂದ ಮೂರನೆಯ ಪಾದವು ಪ್ರಾರಂಭವಾಗುತ್ತಿದೆ. ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳನ್ನು ಹಾಗೂ ಲಿಂಗಾತ್ಮಕಶಬ್ದಗಳನ್ನು ಸಮನ್ವಯ ಮಾಡುವುದೇ ಈ ಪಾದದ ಮುಖ್ಯ ಉದ್ದೇಶ.

ಅನ್ಯತ್ರಪ್ರಸಿದ್ಧವಾದ ಶಬ್ದಗಳನ್ನು ಪರಮಾತ್ಮನಲ್ಲಿ ಸಮನ್ವಯ ಮಾಡಿದಾಗ ಅದೇ ಶಬ್ದಗಳು ಪುನಃ ಉಭಯತ್ರಪ್ರಸಿದ್ಧವಾಗುತ್ತವೆಂಬ ಪರಿಸ್ಥಿತಿ ಎದುರಾಗುತ್ತದೆ. ಉದಾ:- ಆಕಾಶ ಎಂಬ ಶಬ್ದವು ಮೊದಲು ಅನ್ಯತ್ರಪ್ರಸಿದ್ಧವಾಗಿತ್ತು. ವಿಷ್ಣುವಿನಲ್ಲಿ ಸಮನ್ವಯ ಮಾಡಿದಾಗ ಉಭಯತ್ರ-ಪ್ರಸಿದ್ಧವೆಂದು ಹೇಳಿದಂತಾಯಿತು. ಈ ಉದಾಹರಣೆಯಿಂದ ಮೊದಲೆರಡು ಪಾದಗಳಲ್ಲಿ ಮಾಡಲ್ಪಟ್ಟ ಎಲ್ಲಾ ಬಗೆಯ ಶಬ್ದಗಳನ್ನು ಪುನಃ ಈ ಪಾದದಲ್ಲಿಯೂ ಸಮನ್ವಯ ಮಾಡುವ ಆವಶ್ಯಕತೆ ಇದೆ. ಚಂದ್ರಿಕಾಚಾರ್ಯರು ಈ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಇದಷ್ಟೇ ಅಲ್ಲದೇ ಲೋಕರೂಢಿಯಿಂದ ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯವನ್ನೂ ಕೂಡ ಈ ಪಾದವು ಮಾಡುತ್ತಿದೆ. ಮೂರನೆಯ ಪಾದವನ್ನು ಅಧ್ಯಯನ ಮಾಡುವ ಮೊದಲು ಪ್ರತಿಯೊಬ್ಬ ಜಿಜ್ಞಾಸುಗಳು ಈ ಅಂಶವನ್ನು ಗಮನಿಸಲೇಬೇಕು.

ಐದನೆಯ ಸಂಪುಟದಲ್ಲಿ ಮೂರು ಟೀಕೆಗಳ ಜೊತೆ ಭಾವದೀಪವಷ್ಟೇ ಅಲ್ಲದೇ ಉಳಿದೆಲ್ಲಾ ಟಿಪ್ಪಣಿಗಳ ವಿಶೇಷವಿಚಾರಗಳನ್ನು ಅಧ್ಯಯನ ಮಾಡಿ, ಸೇರಿಸುವುದು ಬಹಳ ಪ್ರಶಂಸಾರ್ಹವಾದ ಕಾರ್ಯ. ಇನ್ನು ಮುಂದೆ ಈ ಒಂದು ಪುಸ್ತಕವನ್ನು ಇಟ್ಟುಕೊಂಡರೆ ಸಾಕು. ಬ್ರಹ್ಮಸೂತ್ರಭಾಷ್ಯದ ಅಧ್ಯಯನ ಆಮೂಲಾಗ್ರವಾಗಿ ಆಗುತ್ತದೆಂಬುದರಲ್ಲಿ ಸಂಶಯವಿಲ್ಲ.

ವಿದ್ವಾನ್ ॥ ಬೆಮ್ಮತ್ತಿ ವೆಂಕಟೇಶಾಚಾರ್ಯರು ಧೃತಿಗೆಡದೆ ಮೊದಲಿರುವ ಉತ್ಸಾಹದಲ್ಲಿಯೇ ಲೇಖನಯಜ್ಞದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರ ಜ್ಞಾನಕಾರ್ಯವನ್ನು ಪ್ರೋತ್ಸಾಹಿಸುವ ವಿಷಯದಲ್ಲಿ ಶ್ರೀಮಠವು ಎಂದೆಂದೂ ಕಟಿಬದ್ಧವಾಗಿದೆ. ಈ ಪುಸ್ತಕಕ್ಕೆ ಶ್ರಮವಹಿಸಿದ ಬೆಮ್ಮತ್ತಿ ವೆಂಕಟೇಶಾಚಾರ್ಯರಿಗೆ ಹಾಗೂ ಉಳಿದವರಿಗೂ ಶ್ರೀಮನ್ ಮೂಲರಘಪತಿದೇವರು ಸಂಪೂರ್ಣವಾಗಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಅಸ್ಮದ್ಗುರ್ವಂತರ್ಗತ ಶ್ರೀಮದ್ರಾಘವೇಂದ್ರತೀರ್ಥಗುರ್ವಂತರ್ಗತ-
ಭಾರತೀರಮಣ - ಮುಖ್ಯಪ್ರಾಣಾಂತರ್ಗತ - ಶ್ರೀಮನ್‌ಮೂಲರಘುಪತಿ -
ವೇದವ್ಯಾಸದೇವರು ಸಂಪೂರ್ಣವಾಗಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇತಿ ನಾರಾಯಣಸ್ಮರಣೆಗಳು.

ಮೂರು ದೀಪಗಳ ಭಾವಬೆಳಕಿನಲ್ಲಿ
ಸ್ವಾಗತ ಭಾಷಣ

ವ್ಯಾಸರ ಜ್ಞಾನಶೈಲವೇ ಬ್ರಹ್ಮಸೂತ್ರಗಳು. ಆ ಉತ್ತುಂಗ-ಶೃಂಗಾಂಗಣದಲ್ಲಿ ಉದಯಿಸುತ್ತಿರುವ ಸೂರ್ಯನೇ ಮಧ್ವಮುನಿಗಳ ಭಾಷ್ಯ. ಕೆಲವು ಕುಹಕಿ-ಕುವಾದಿಗಳು ಈ ಜ್ಞಾನಸೂರ್ಯನ ಮೇಲೆ ಧೂಳಿ-ಕೆಸರು ಎರಚುವ ವ್ಯರ್ಥಪ್ರಯತ್ನ ಮಾಡಿ ಸಾಹಸಗೈದಿದ್ದೂ ಉಂಟು, ಮಂಜಿನ ತೆರೆ ಎಳೆಯಲು ಯತ್ನಿಸಿ ಕುಣಿದಾಡಿದ್ದೂ ಉಂಟು

ಆದರೆ ಆ ಜ್ಞಾನಭಾಸ್ಕರನ ದಿವ್ಯಸಾರಥಿಗಳಾದ ಶ್ರೀಪದ್ಮನಾಭತೀರ್ಥರು, ಶ್ರೀ ಜಯತೀರ್ಥರು, ಶ್ರೀತ್ರಿವಿಕ್ರಮಪಂಡಿತರೆಂಬ ಮೂವರು ಮುನಿಗಳು ಕುಹಕಿಗಳ ಧೂಳಿ-ಕೆಸರುಗಳನ್ನು ದಿಕ್ಕಾಪಾಲಾಗಿಸಿ ಮಂಜು ಹರಿದು ತತ್ವಜ್ಞಾನಜ್ಯೋತಿಯ ದಿವ್ಯಪ್ರಭೆಯು ಎಲ್ಲೆಡೆ ಚೆಲ್ಲುವಂತೆ ಮಾಡಿರುವರು.....

ಹೌದು .... ! ಸೂರ್ಯನ ಬೆಳಕಿನಲ್ಲಿಯೂ ದಾರಿ ತಪ್ಪುವವರಿದ್ದಾರೆ ..... ಹಗಲು ಕುರುಡರೂ ಇದ್ದಾರೆ ..... ಬೆಳಕಿನ ಹಿರಿಮೆ-ಮಹಿಮೆಯನ್ನು ಅರಿಯದ ಮಂದಮತಿಗಳ ಸಂಖ್ಯೆಗೇನೂ ಕಡಿಮೆಯಿಲ್ಲ.

ಇಂಥವರನ್ನು ಕೈಹಿಡಿದು ಸರಿದಾರಿಯಲ್ಲಿ ಕರೆದೊಯ್ಯುವವನೇ ನಿಜವಾದ ಮಹಾಸಾಹಸಿ, ಮತ್ತು ಧೀರವೀರಾಗ್ರಣಿ. ಇದು ರಾತ್ರಿಯಲ್ಲ ಹಗಲೆಂದು ಬಡಿದೆಬ್ಬಿಸಬೇಕು. ಬೆಳಕಿನ ಹಿರಿಮೆ-ಮಹಿಮೆಗಳನ್ನು ತಿಳಿಹೇಳಬೇಕು. ಮಂದಮತಿಗಳನ್ನು ಚಾಣಾಕ್ಷ್ಯರನ್ನಾಗಿಸಬೇಕು. ಇದಕ್ಕಾಗಿಯೇ ಧರೆಗಿಳಿದು ಬಂದು ತುಂಗಾತೀರದಲ್ಲಿ ಕಂಗೊಳಿಸುತಿಹರು ಶ್ರೀಗುರುರಾಯರು....!!

ಇವರಿಂದಲೇ ಇಂದು ಬಾನಗಲ ಸತ್‌ಸಿದ್ಧಾಂತವು ಬೆಳಗುತಿಹುದು. ಆಸ್ತಿಕರ ಹುಮ್ಮಸ್ಸು ಚಿಮ್ಮುತಿಹುದು. ಆದ್ದರಿಂದಲೇ ಈ ಯತಿಪುಂಗವರು ಕೇವಲ ಶಕಪುರುಷರಲ್ಲ, ಮಹಾನ್ ಯುಗಪುರುಷರು.

ಮಧ್ವಮುನಿಗಳ ಜ್ಞಾನಸೂರ್ಯನ ಪ್ರಭೆ ಗಾಳಿಬೀಸಿದಲ್ಲೆಲ್ಲಾ ಪ್ರಕಾಶಿಸುವಂತೆ ಮಾಡಿರುವ ಏಕೈಕ ಯತಿಪುಂಗವರೆಂದರೆ ಅದು ಶ್ರೀಗುರುರಾಯರು. ರಾಯರ ಜ್ಞಾನಪ್ರಸಾರದ ಅರಿವಾಗುವುದು ಸಜ್ಜನರಿಗೆ ಮಾತ್ರ. ಸೂರ್ಯನ ಹೊಂಗಿರಣಗಳ ಶಕ್ತಿ ತಾವರೆಗಳ ಪಕಳೆಗಳಿಗೆ ಬಿಟ್ಟು ಗೂಗೆಗಳ ಪಕ್ಷ್ಮಲಪಕಳೆಗಳಿಗೆಲ್ಲಿ ಅರ್ಥವಾದೀತು ..... !!!

ಇಂಥ ಗುರುಗಳ ಕೃಪೆಗೆ ಪಾತ್ರನಾದವನೇ ಧನ್ಯ ..... ಅವನೇ ಮಾನ್ಯ..... ಅವನೇ ಸಜ್ಜನ ..... ಅವನೇ ಮಹಾಜನ....!!!!

ಸಜ್ಜನರ ಉತ್ಸಾಹದ ಮಹಾಪೂರ

ಶ್ರೀ ಸುಬುಧೇಂದ್ರತೀರ್ಥರು

ಸಜ್ಜನರ ಉತ್ಸಾಹಕ್ಕೆ ಈಗೊಂದು ಮಹಾಪೂರ ಬಂದಿದೆ. ಧಾರ್ಮಿಕ ಚಟುವಟಿಕೆಗಳಿಗೆ ಸುವರ್ಣಯುಗ ಪ್ರಾರಂಭವಾಗಿದೆ. ಹೆಗ್ಗಡಲನ್ನು ಕಡೆದು ಜ್ಞಾನಾಮೃತ ಸವಿಯುವ ಔತಣದ ಸಮಯ ಬಂದಿದೆ. ಹೃದಂತರಾಳದ ಮನೋಮಂಡಿಗೆಯನ್ನು ಸವಿಯುವ ನನಸಿನ ಕಾಲ ಬಂದಿದೆ. ಅದುವೇ ಶ್ರೀರಾಘವೇಂದ್ರಸ್ವಾಮಿಗಳ ಪರಂಪರೆಯ ಪೀಠದಲ್ಲಿ ಅದ್ಯ ವಿರಾಜಮಾನರಾದ ಶ್ರೀಸುಬುಧೇಂದ್ರತೀರ್ಥಶ್ರೀಪಾದಂಗಳವರ ಸುವರ್ಣಕಾಲ.

ತಮ್ಮ ಪೀಠಾಧಿಪತ್ಯ ಆರಂಭಗೊಂಡ ಮೂರೇ ವರ್ಷಗಳಲ್ಲಿ ಇವರು ಸಾಧಿಸಿದ ಸಾಗ್ರಸಮಗ್ರ ಐತಿಹಾಸಿಕ ಕಾರ್ಯಗಳ ವೈಖರಿಗಳು ಕಲ್ಪನಾತೀತ. ನಿರಂತರ ಹೆಬ್ಬೊತ್ತಿಗೆಗಳ ಪ್ರಕಾಶನದ ಕಾರ್ಯವನ್ನು ಕೈಗೊಂಡ ಇವರ ಆದಟು - ಉತ್ಸಾಹಗಳನ್ನು ಕಂಡು ನಾನಂತೂ ನಿಬ್ಬೆರಗಾಗಿರುವೆ.

ಶ್ರೀಸುಬುಧೇಂದ್ರಶ್ರೀಪಾದರು ಮೌನವಾಗಿಯೇ ಮಂತ್ರಾಲಯ ಮುನಿಗಳ ವಾಙ್ಮಯಸೇವೆ ಮಾಡಬೇಕೆಂದು ಹಂಬಲಿಸುವ ಮಹಾಚೇತನರು. ತಮ್ಮ ಜೋಳಿಗೆಯ ಸಂಪತ್ತನ್ನೆಲ್ಲಾ ಬಾಚಿ ವಾಙ್ಮಯಕಾರ್ಯದ ಬೊಗಸೆಗೆ ತುಂಬಿ ಸಂತೋಷ ಪಡುವ ಭಾಗ್ಯಶಾಲಿಗಳು. ಸಜ್ಜನರ ಸದ್ಭವಿಷ್ಯಕ್ಕೆ ಇವರೇ ಸದಾಶಾಕಿರಣರು. ಇವರ ಈ ಎಲ್ಲಾ ಮಹಾಗುಣಗಳಿಗೆ ಎಂದೆಂದೂ ಶರಣು ....ಶರಣು.

ಐದನೆಯ ಸಂಪುಟ

ಇಲ್ಲಿಯತನಕ ನಾಕು ಸಂಪುಟಗಳು ಪೂರ್ಣವಾದವು. ಪ್ರಸ್ತುತ ಐದನೆಯ ಸಂಪುಟ ನಿಮ್ಮ ಕೈಯಲ್ಲಿದೆ. ಮೊದಲನೆಯ ಅಧ್ಯಾಯದ ಎರಡನೆಯ ಪಾದದಲ್ಲಿರುವ ಅಂತರಾಧಿಕರಣದಿಂದ ಪ್ರಾರಂಭವಾಗಿ, ಮೂರನೆಯ ಪಾದದ ದ್ಯುಭ್ವಾದ್ಯಧಿಕರಣದ ತನಕ ಈ ಸಂಪುಟದಲ್ಲಿ ಸೇರಿಸಿದ ವಿಷಯ.

ಚಕ್ಷುರಿಂದ್ರಿಯದಲ್ಲಿರುವವನು ಆದಿತ್ಯನಲ್ಲ, ಅಗ್ನಿಯೂ ಅಲ್ಲ, ಮಹಾವಿಷ್ಣುವೇ ಆಗಿದ್ದಾನೆ ಎಂದು ಅಂತರಾಧಿಕರಣವು ಪ್ರತಿಪಾದನೆ ಮಾಡಿದೆ.

ಅಂತಃಸ್ಥತ್ವವೆಂಬ ಭಾವಧರ್ಮದಿಂದ ಸಹಿತವಾದ ನಿಯಮನ ಎಂಬ ಕ್ರಿಯಾರೂಪವಾದ ಲಿಂಗದ ಸಮನ್ವಯಕ್ಕಾಗಿ ಈ ಅಧಿಕರಣ ಹೊರಟಿದೆ. ಹಿಂದಿನ ಅಂತರಾಧಿಕರಣವು ಚಕ್ಷುರಿಂದ್ರಿಯದಲ್ಲಿ ಅಂತರ್ಯಾಮಿಯಾಗಿರುವವನು ಮಹಾವಿಷ್ಣುವೇ ಆಗಿದ್ದಾನೆಂದು ಹೇಳಿದರೆ ಈ ಅಂತರ್ಯಾಮ್ಯಧಿಕರಣವು ಸಕಲಭೂತಗಳ ಹೃದಯದಲ್ಲಿ ನೆಲೆಸಿರುವವನು ಮಹಾವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುತ್ತಿದೆ.

'ದೃಶ್ಯತ್ವಾಭಾವ' ಮೊದಲಾದ ಅಭಾವರೂಪವಾದ ಧರ್ಮಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುವುದಕ್ಕಾಗಿ ಮುಂದಿನ ಅದೃಶ್ಯತ್ವಾಧಿಕರಣವು ಹೊರಟಿದೆ.

'ಪಾಚಕತ್ವ' ಮೊದಲಾದ ಅನೇಕ ಲಿಂಗಗಳನ್ನು ಸಮನ್ವಯ ಮಾಡುವುದಕ್ಕಾಗಿ 'ವೈಶ್ವಾನರ' ಎಂಬ ಒಂದು ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡಲು ವೈಶ್ವಾನರಾಧಿಕರಣವು ಹೊರಟಿದೆ.

ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕಶಬ್ದಗಳ ಸಮನ್ವಯಕ್ಕಾಗಿ ಮೂರನೆಯ ಪಾದವು ಪ್ರಾರಂಭವಾಗುತ್ತದೆ. ಸ್ವರ್ಗಲೋಕ, ಭೂಲೋಕ ಮೊದಲಾದ ಲೋಕಗಳಿಗೆ ಆಶ್ರಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಮೊದಲನೆಯ ಅಧಿಕರಣವು ಲಿಂಗಸಮನ್ವಯವನ್ನು ಮಾಡಿದೆ.

ಈ ಸಂಪುಟದ ಕೆಲವು ಅಪೂರ್ವತೆಗಳು

* ಎರಡನೆಯಪಾದವು ಲಿಂಗಪಾದವಾದರೂ ಕೂಡ ವೈಶ್ವಾನರಾಧಿಕರಣವು ನಾಮಸಮನ್ವಯವನ್ನು ಮಾಡುತ್ತಿದೆ.

ಪಂಡಿತಾಚಾರ್ಯರು ಲಿಂಗಪಾದದ ಕೊನೆಯ ಈ ಅಧಿಕರಣವನ್ನು ಅಧಿಕರಣರಾಜ ಎಂದು ಕರೆಯುತ್ತಿದ್ದಾರೆ. ಆಸ್ಥಾನಗುರುವಿನಿಂದ ರಾಜನು ಶೋಭಿಸುವಂತೆ ಈ ಅಧಿಕರಣರಾಜನು ಪರಮಕರುಣಾಶಾಲಿಗಳಾದ ಸಕಲದೇವತೆಗಳ ಗಣಕ್ಕೂ ಗುರುವಾದ ವೇದವ್ಯಾಸದೇವರೆಂಬ ಗುರುಗಳಿಂದ ವಿರಾಜಿಸುತ್ತಿದೆ ಎಂದಿದ್ದಾರೆ. ಸೂತ್ರಕಾರರಾದ ಶ್ರೀವೇದವ್ಯಾಸದೇವರು ಈ ಅಧಿಕರಣದಲ್ಲಿ ಕೇವಲ ಒಂದು ಶಬ್ದವನ್ನು ಸಮನ್ವಯ ಮಾಡದೇ ಎಲ್ಲಾ ಬಗೆಯ ನಾಮಾತ್ಮಕವಾದ ಶಬ್ದಗಳ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನು ದೃಢವಾಗಿ ಮಾಡುತ್ತಿದ್ದಾರೆ.

* ತತ್ವಪ್ರಕಾಶಿಕೆಯಲ್ಲಿ 'ವೈಶ್ವಾನರ' ಎಂಬ ಒಂದು ನಾಮಾತ್ಮಕಶಬ್ದವನ್ನು ಸಮನ್ವಯ ಮಾಡುವ ಮೂಲಕ ಅನೇಕ ಲಿಂಗಾತ್ಮಕಶಬ್ದಗಳ ಸಮನ್ವಯವು ಈ ಅಧಿಕರಣದಿಂದ ಸಿದ್ಧವಾಗುತ್ತದೆ ಎಂದು ತಿಳಿಸಿದ್ದಾರೆ. ಪ್ರಕೃತ ಪಂಡಿತಾಚಾರ್ಯರು 'ವೈಶ್ವಾನರ' ಎಂಬ ಒಂದು ನಾಮಾತ್ಮಕಶಬ್ದವನ್ನು ಸಮನ್ವಯ ಮಾಡುವ ಮೂಲಕ ಕೇವಲ ಅನೇಕ ಬಗೆಯ ಲಿಂಗಾತ್ಮಕಶಬ್ದಗಳ ಸಮನ್ವಯವು ಸಿದ್ಧವಾಗುವುದಷ್ಟೇ ಅಲ್ಲದೇ ಎರಡು ಪಾದಗಳಲ್ಲಿ ಹೇಳಿದ ಎಲ್ಲಾ ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವೂ ಕೂಡ ದೃಢವಾಗುತ್ತದೆಂಬ ಅಧಿಕ ವಿಚಾರವನ್ನು ತಿಳಿಸಿರುತ್ತಾರೆ. 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಇತ್ಯಾದಿ ಕೊನೆಯ ಐದು ಸೂತ್ರಗಳಲ್ಲಿ ಅನ್ಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳ ಹಾಗೂ ಲಿಂಗಾತ್ಮಕಶಬ್ದಗಳ ಗತಿಯನ್ನು ತಿಳಿಸಿರುತ್ತಾರೆ. ಆದ್ದರಿಂದ ಈ ಅಧಿಕರಣದಿಂದ ಎರಡು ಪಾದಗಳಲ್ಲಿ ಸಮನ್ವಯ ಮಾಡಿದ ಸಕಲ ಶಬ್ದಗಳ ಸಮನ್ವಯವು ದೃಢವಾಗಿ ಸಿದ್ಧವಾಗಲು ಸಾಧ್ಯವಾಗುತ್ತದೆ. ಈ ಅಧಿಕರಣವೇ ಇಲ್ಲದ್ದಿದರೆ, ಎರಡು ಪಾದಗಳಲ್ಲಿ ಮಾಡಿದ ಸಮನ್ವಯದಲ್ಲಿ ದಾರ್ಢ್ಯವೇ ಬರುವುದಿಲ್ಲ. ಆದ್ದರಿಂದ ಪಂಡಿತಾಚಾರ್ಯರು ಇದನ್ನು 'ಅಧಿಕರಣರಾಜ' ಎಂದು ಕರೆದಿದ್ದಾರೆ.

* 'ಅನ್ಯತ್ರಪ್ರಸಿದ್ಧವೈಶ್ವಾನರನಾಮ್ನಃ' ಎಂಬುದಾಗಿ ತತ್ವಪ್ರಕಾಶಿಕೆಯಲ್ಲಿ 'ವೈಶ್ವಾನರ' ಎಂಬ ನಾಮಾತ್ಮಕಶಬ್ದವು ಅನ್ಯತ್ರಪ್ರಸಿದ್ಧವಾದದ್ದೆಂದು ಹೇಳಿದ್ದಾರೆ. ಆದರೆ ತತ್ವಪ್ರದೀಪದಲ್ಲಿ ಪಂಡಿತಾಚಾರ್ಯರು ಉಭಯತ್ರಪ್ರಸಿದ್ಧವೆಂದು ಹೇಳುತ್ತಿದ್ದಾರೆ. ಆದ್ದರಿಂದ ಎರಡೂ ಟೀಕೆಗಳಿಗೆ ಪರಸ್ಪರ ವಿರೋಧ ಬರುತ್ತದಲ್ಲವೇ? ಈ ಪ್ರಶ್ನೆಗೆ ಯಥಾರ್ಥವಾದ ವಿಮರ್ಶೆಯನ್ನು ವೈಶ್ವಾನರಾಧಿ-ಕರಣದ ವಿಶೇಷವಿಚಾರದಲ್ಲಿ ನೀಡಲಾಗಿದೆ. ಹಾಗೂ ಶ್ರೀರಾಘವೇಂದ್ರಸ್ವಾಮಿಗಳ ಭಾವದೀಪ ಟಿಪ್ಪಣಿಯಿಂದ ಈ ಪ್ರಶ್ನೆಗೆ ಸುಂದರವಾದ ಉತ್ತರವನ್ನೂ ಕೂಡ ನೀಡಲಾಗಿದೆ.

* 'ಅನುಸ್ಮೃತೇರ್ಬಾದರಿಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ ಪಂಡಿತಾಚಾರ್ಯರು 'ಬಾದರಿ' ಎಂಬ ಪದಕ್ಕೆ 'ಬಾದರಾತ್ಮಜಃ ಶುಕಃ' ಎಂಬ ವ್ಯಾಖ್ಯಾನವನ್ನು ಮಾಡಿದ್ದಾರೆ. ಬದರಿಯಲ್ಲಿ

ನೆಲೆಸಿರುವ ವೇದವ್ಯಾಸದೇವರು 'ಬಾದರ' ಎಂದು ಕರೆಸಿಕೊಳ್ಳುತ್ತಾರೆ. ಅವರ ಮಗ ಆದ ಕಾರಣ ಶುಕಾಚಾರ್ಯರು 'ಬಾದರಿ' ಎಂದು ಕರೆಸಿಕೊಳ್ಳುತ್ತಾರೆ. ತತ್ವಪ್ರಕಾಶಿಕೆಯಲ್ಲಿ 'ಬಾದರಿ ಆಚಾರ್ಯಃ' ಎಂದಷ್ಟೇ ಬರೆದಿದ್ದಾರೆ. ತತ್ವಪ್ರದೀಪದಲ್ಲಿ 'ಬಾದರಾತ್ಮಜಃ ಶುಕಃ' ಎಂದು ಸ್ಪಷ್ಟಪಡಿಸಿದ್ದಾರೆ.

* ತತ್ವಪ್ರಕಾಶಿಕಾಕಾರರು ಪ್ರತಿಯೊಂದು ಅಧಿಕರಣಗಳ ಪ್ರಾರಂಭದಲ್ಲಿ ಅಧಿಕರಣದ ಸಂಶಯ, ಪೂರ್ವಪಕ್ಷ, ಸಿದ್ಧಾಂತಗಳನ್ನು ನಿಯಮೇನ ತೋರಿಸುತ್ತಾರೆ. ಆದರೆ ಪಂಡಿತಾಚಾರ್ಯರು, ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನಷ್ಟೇ ತೋರಿಸುತ್ತಾರೆ. ಅಧಿಕರಣದ ಸಂಶಯವನ್ನು ತೋರಿಸುವುದಿಲ್ಲ. ಆದರೆ ದ್ಯುಭ್ವಾದ್ಯಧಿಕರಣದ ಪ್ರಾರಂಭದಲ್ಲಿ ಪಂಡಿತಾಚಾರ್ಯರೂ ಕೂಡ ಸ್ಪಷ್ಟವಾಗಿ ಅಧಿಕರಣದ ಸಂಶಯವನ್ನು ತೋರಿಸುತ್ತಾ, ತಾವೇಕೆ ಎಲ್ಲೆಡೆಯೂ ಅಧಿಕರಣ-ಸಂಶಯವನ್ನು ತೋರಿಸುವುದಿಲ್ಲವೆನ್ನಲು ಕಾರಣವನ್ನು ಹೀಗೆ ನೀಡಿದ್ದಾರೆ -

ಶ್ರೀಮದಾಚಾರ್ಯರ ಅನುಸೇವಿಗಳಾದ ಜ್ಞಾನಿಗಳು ಅತ್ಯಂತ ಗಹನವಾದ ಅರ್ಥತತ್ವವನ್ನು ತಿಳಿಯುವುದರಲ್ಲೇ ಆಸಕ್ತರಾಗಿರುತ್ತಾರೆ. ಇಂಥವರಿಗೆ ಪ್ರತಿಯೊಂದು ಅಧಿಕರಣಗಳಲ್ಲಿ ಅಧಿಕರಣ-ರಚನೆಗೆ ಉಪಯುಕ್ತವಾದ ಸಂಶಯಾದಿಗಳ ಪ್ರಕ್ರಿಯೆಯ ತಿಳಿಯುವಿಕೆಯು ಇಷ್ಟವಾಗುವುದಿಲ್ಲ. ಇದು ಕೇವಲ ಬಹಿರ್ಮುಖವಾದ ಸುಖಕಾರಕವಷ್ಟೇ ಹೊರತು, ತತ್ವಬುಭುತ್ಸುಗಳಿಗೆ ಸುಖಪ್ರದವಲ್ಲ. ಆದ್ದರಿಂದ ಬಹಳವಾದ ಹುರುಳಿಲ್ಲದ ಮಾತುಗಳನ್ನು ಪ್ರತಿಯೊಂದು ಅಧಿಕರಣಗಳಲ್ಲಿ ಜ್ಞಾನಿಗಳು ಇಷ್ಟಪಡಲಾರರು.

ನಿಪುಣಮತಿಗಳು ತತ್ವಮಣಿಗಳ ಅನ್ವೇಷಣದಲ್ಲಿ ರತರಾಗಿರುತ್ತಾರೆ. ಪ್ರತಿಕ್ಷಣವೂ ತಮ್ಮ ಸಿದ್ಧಾಂತದ ರಕ್ಷಣೆಯನ್ನು ಮಾಡಿಕೊಳ್ಳುವುದಷ್ಟೇ ಅಲ್ಲದೇ ಪರಪಕ್ಷದ ನಿರಾಕರಣದಲ್ಲಿ ಆಸಕ್ತರಾಗಿರುತ್ತಾರೆ. ಇಂಥವರು ಸಮುದ್ರದಡದಲ್ಲಿ ಕುಳಿತು ಅಲೆಗಳನ್ನು ಎಣಿಸುವ ಕುತೂಹಲದಲ್ಲಿ ಸಮಯ ವ್ಯರ್ಥ ಮಾಡಲಾರರು.

ಶ್ರೀಮಟ್ಟೀಕಾಕೃತ್ಪಾದರು ತತ್ವಪ್ರಕಾಶಿಕೆಯ ಪ್ರತಿಯೊಂದು ಅಧಿಕರಣಗಳಲ್ಲಿ ಸಂಶಯ, ಪ್ರಯೋಜನ ಇವುಗಳೆಲ್ಲವನ್ನೂ ನಿಯಮೇನ ತೋರಿಸುತ್ತಾರೆ. ಜ್ಞಾನಿಗಳ ಪರಂಪರೆಯಲ್ಲಿ ಎಲ್ಲರೂ ಇದನ್ನು ಒಪ್ಪಿರುತ್ತಾರೆ. ಆದ್ದರಿಂದ ಪಂಡಿತಾಚಾರ್ಯರ ಮಾತಿಗೆ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆ ಸಹಜ. ಆದರೆ ಜ್ಞಾನಿಗಳ ದೃಷ್ಟಿಯಲ್ಲಿ ಪಂಡಿತಾಚಾರ್ಯರ ಮಾತು ಹೊರಟಿರುತ್ತದೆ. ಮಂದಮತಿಗಳ ದೃಷ್ಟಿಯಲ್ಲಿ ಶ್ರೀಮಟ್ಟೀಕಾಕೃತ್ಪಾದರು ಸಂಶಯಗಳನ್ನು ಪ್ರದರ್ಶನ ಮಾಡುತ್ತಾರೆ ಎಂದು ತಿಳಿಯಬೇಕು. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

ಹೀಗೆ ಅನೇಕ ಪ್ರಮೇಯಗಳಿಂದ ಹಾಗೂ ನೂತನ ವಿಚಾರಗಳಿಂದ ಕೂಡಿರುವ ಈ ಐದನೆಯ ಸಂಪುಟವನ್ನು ನಿಮಗಾಗಿ ನಿಮ್ಮ ಅಂತರ್ಯಾಮಿಯಲ್ಲಿ ಸಮರ್ಪಿಸುತ್ತಿರುವೆ.

ಲೇಖಕ - ಬೆಮ್ಮತ್ತಿ ವೇಂಕಟೇಶಾಚಾರ್ಯ

ಅನುಕ್ರಮಣಿಕಾ

ಅನುಗ್ರಹ ಸಂದೇಶ	IX - X
ಸ್ವಾಗತ ಭಾಷಣ	XI - XV
ಪ್ರಾಸ್ತಾವಿಕ - (ಆಂಗ್ಲಭಾಷೆ)	XVI - XX
ಅಧಿಕರಣ ಸಾರಾಂಶ	XXI - XXXIX
ಅಂತರಾಧಿಕರಣ	೧-೧೨೬
ಅಂತರ್ಯಾಮ್ಯಧಿಕರಣ	೧೨೭-೨೧೦
ಅದೃಶ್ಯತ್ವಾಧಿಕರಣ	೨೧೧-೩೦೦
ವೈಶ್ವಾನರಾಧಿಕರಣ	೩೦೧-೪೫೬
ದ್ಯುಭ್ವಾದ್ಯಧಿಕರಣ	೪೫೭-೬೨೦
ಪರಿಶಿಷ್ಟ	೬೨೧-೬೩೬
ವಿವರವಾದ ವಿಷಯಾನುಕ್ರಮಣಿಕೆ	೬೩೭-೬೬೫

and Lingas, which are known to be applicable to both Vishnu and elsewhere. These Adhikaranas are as stated below:

Last Four Adhikaranas of the Second Pada:

1. Antaradhikaranam;
2. Antaryamyadhikaranam;
3. Adrusyatvaadhikaranam;
4. Vaishwaanaraadhikaranam;

First Adhikarana of the Third Pada:

5. Dyubhvaadhyaadhikaranam.

Dr Venkateshacharya has provided very useful summaries of the themes dealt with in each of these Adhikaranas. He has also given an account of various debatable issues for further debate and reflections in Goshthis.

I will present in the following few paragraphs, a brief account of the subjects dealt with in these Adhikaranas, for the benefit of comprehension by the Jijnasus..

1. Antaradhikarana:

This Adhikarana has five Sutras. The entity residing inside the Chakshus (Antah) and enjoying Ramamaanah) there, is Vishnu himself and not Agni. The attribute of Antaratva is applicable only to Vishnu. This is so, because the entity existing there is ascribed the attributes such as Amrutatva, Abhayatva, and the terms such as Brahma and Atma, used there are applicable only to Vishnu;

2. Antaryaamyadhikaranam:

This Adhikarana has three Sutras. The Attribute (Linga) considered here is that of existence inside an entity (Antaryaamii) and commanding its properties and activities (Niyamana). It is not either Prakriti or its commander, any Jiva. This is so because many attributes specifically applicable to Parabrahma alone are mentioned and also because the other Dharmas, such as Trigunatva and samsaaritva, which are relevant only for Jiva or Pradhana are not mentioned here.

3. Adrushyatvaadhikaranam:

This Adhikarana has three Sutras. The attribute of not being visible-Adrushyatva is explained to be applicable only to ParaBrahma, and not to Prakriti, Chaturmukha Brahma or Rudra. This is so because, the special features of ParaBrahma - such as being the subject matter of ParaVidya, such as, Rigeda are also mentioned in the same context. This Adrushya entity is also described to be Omniscient- Sarvajna, while Chaturmukha Btahma etc are not possessing this feature. Further the Adrushya entity is described to possess the luster of the Gold while others do not possess that feature.

4. Vaishwanaradhikarana:

. This is the fourth Adhikarana of the second Pada, covered in this Volume. This Adhikarana has nine Sutras. Though this second Pada is meant for explaining the applicability of the different Attributes (Lingas) to Para Brahma, this Adhikarana departs from that system. It explains the applicability of the term Vaishvanara,

which is characterized by many attributes, such as Pachakatva-feature of cooking etc. to describe ParaBrahma. This is so because, the entity, viz. Vaiswanara is further characterized by the word Atma, which is applicable only to Vishnu. Further, in Bhagavadgita, it is stated that, Vishnu alone takes the form of Vaishvanara. The word Vaishwanara does not refer to Agni.

5. Dyubhvadyadhikarana:

This Adhikarana has seven Sutras. Lord V ishnu is the only resort for all the worlds, like Earth, Heaven etc, Pradhan, Vayu, Rudra and Jiva are not such Resorts. Because, the word Swa is used in that context and it means Atma and it is applicable only to Vishnu. Further, this Resort is described to be the final destination of all Muktas, and this Characteristic is applicable only to Vishnu. Further the features of Rudra, such as, smearing Bhasma, being ferocious, and the attributes of Pradhana, being the orgin of all the three Gunas, are not described. The attributes of Jiva or Vayu are also not mentioned here.

In the comparative analysis of the different commentaries, Vidwan Venkateshacharya brings out many subtle points of significant Sastric relevance. These points include, among others, the following:

- Why "Vaiswanaradhikarana" is called in Tatva Pradipa, as "Adhikarana Raja"?
- Why in the Pada meant for establishing the applicability of the lingas noted elsewhere,(anyatra Prasiddha), the samanvaya of a Nama is presented?
- Is Vaiswanara nama , anyatra prasiddha or Ubhayatra Prasiddha?

- Jayatirtha presents, all the components of an Adhikarana, where as Panditacharya essentially presents only Purvapaksha and Siddhanta. Why?
- What is the etymological meaning of the term Badari?

The inquisitive nature of Vidwan Venkateshacharya is explicitly manifest at several places of this Volume as in other Volumes.

I would like to present my respectful Pranams to HH Sri Sri Subudhendra Tirtharu for providing a nvery perceptive and encouraging Anugraha Sandeswha to this Volume.

The task before Vidwan Venkateshacharya is horrendous. Even the first Adhyaya is not completed. But the number of Volumes has reached Five, covering more than 2000 printed pages.

The Anugraha of Sri Raghavendra Swamigalu and the encouraging words and Anugraha of Sri Sri Subudhendra Tirtha alone would instill confidence, courage and strength in Sri Acharya, to complete this Noble task up to its logical conclusion. We add our best wishes to further enhance Acharya's Capability. Obviously, "Praarbdhasya Antyagaaml dhIrah".

We are sure that all Jijnasus would find this Volume also useful like others.

Iti Sam

Vachaspati Dr. V.R.Panchamukhi

Chancellor, Sri Gurusarvabhouma Sanskrit Vidyapeetha and Executive Director, Sri Gurusarvabhouma Samsodhana Mandira. Mantralayam.

INTRODUCTION

BrahmaSutra Bhashya, Sattarka Dipavali, Tatva Pradipa, Tatva Prakashika, Bhavadipa, Tantra Dipika

by

Vachaspati. Dr. V.R.Panchamukhi

Chancellor, SGSVP, Executive Director, SGSM, Mantralayam

Vedas constitute the basic source material for the profound Philosophical Tenets of the Indian Knowledge Heritage. Upanishads, being in the form of Questions and Answers between the Guru and Sishya, provide the quintessence of the Vedic Thoughts. The Six Vedangas- Siksha, Kalpa, Nirukta, Vyakarana, Chandas and Jyotishya constitute the aides for deriving the prominent interpretations of the Vedas. Despite the existence of such support materials for understanding the purport of the Vedas, Vedavyasa felt it necessary to compose 564 BrahmaSutras to facilitate the proper interpretations of the Vedas. Sri Madhwacharya wrote Bhashya on Brahma Sutras, after refuting the twentyone previous Bhashyas with a view to establishing the true purport of the Vedas for the benefit of those who are eligible to realize Moksha.

Sri Madhavacharya also composed three other treatises in Sutra Prasthana- viz. Anuvyakhyana, NyayaVivarana and AnuBhashya, with different objectives in mind. On Sutra Bhashya, Sri Trivikrama Panditacharya wrote the commentary, known as "Tatve Pradipa" and Sri Padmanbha Tirtha wrote a commentary known as "Sattarka Dipavali". These two treatises were the earliest commentaries on Madhva Bhashya, and were regarded with great reverence and deep interest by the Scholars.

It may be noted that the above two Commentaries are, in a way the treatises produced, almost at the time of or very close to the life time of Sri Madhavacharya. Both Padmanabha Tirtha and Trivikrama Panditacharya, were Adwaitins, before being refuted by Madhavacharya, in Vadas, and then converted to Dwaita fold and accepted as the prominent Sishyas of Sri Madhavacharya. In a way the tasks of both of them was to document the Madhva's Siddhanta in an authentic way for the benefit of the posterity. They were familiar with the Samsaya and Purvapaksha and they were keen to highlight the promonence of Madhva Siddhanta. Their style of presentation seems to be one of putting together the crisp Notes taken at the time of the Teaching by Madhwa!!

Sri Jayatirtha- commonly known as Sri Tikarayaru, in view of his profound Commentaries (Tikas) on Madhva Granthas, came on the scene of philosophical discourses, almost fifty years after Madhvacharya. Even though the Advaita Vada had been refuted and almost silenced by the powerful campaign launched by Sri Madhacharya, there had emerged again many strong advocates of

Advaita Vada, in the form of Vidyaranya, Appayya Dixita,etc. just prior to the emergence of Sri Jayatirtha. The task of Sri Jayatirtha was to re-establish the authenticity and finality of Madhva's interpretations of Brahma Sutras.. Hence the great challenge before Sri JayairthaMuni, was to explicitly narrate the Advaita vada, as Purva Paksha and then refute its arguments thread-bare.

In His Tatwvaprakashika, Sri Jayatirtha presents very meticulously, all the basic components of an Adhikarana, viz. Vishaya, Visaya, Purvapaksha, Uttaram (Siddhanta) and Prayojanam.

वशियो वशियश्चैव पूर्वपक्षस्तथोत्तरम् ।
प्रयोजनं पञ्चैते प्राञ्चो ऽधिकिरणं विदुः ।

All the Jijnasus feel greatly indebted to Sri Jayatirtha muni for his presentation of these components of each Adhikarana, in a meticulous manner for the benefit of the poorly endowed Jijnasus. Sri Tikarayaru also shows very systematically, Sastra Sangati, Adhyaya Sangati Pada Sangati and Adhikarana Sangati. The Vishaya Vakyas are also very meticulously brought out. We owe a great deal to the ingenuity and compassion of Tikarayaru.

Sri Raghavendra Tirtha who came on the scene of the philosophical discourses, much much later, after almost more than hundred and fifty years after Sri Jayatirtha, and almost after hundred years after Sri Vyasatirtha, had had a more challenging task of refuting many schools with a view to finally establishing the authenticity of Madhva's thoughts.

The absorbing capacity of the Jijnasus, had been gradually getting reduced and as such, Sri Raghavendra Tirtha had to present more detailed accounts of the Purvapakshas and their refutations and then to present the finality of Madhva Siddhanta.

The reason for giving a brief account of this historical background of the periods when these different treatises were composed is to facilitate the proper appreciation of the style and the contents of these different compositions.

Over time, the power of comprehension of the Jijnasus has been further eroded and we need to have good authentic narration of these different commentaries in simple Kannada language. Dr. Bemmatti Venkateshacharya, has undertaken this most useful and benevolent task of presenting the arguments of Madhva Bhashya, Padmanabhatirtha's Sattarka Dipavali, Sri Trivikrama Panditacharya's Tatvapradipa, Tikacharya's Tatvaprakashika and Sri Raghavendra Swami's Bhavadipa, in one book in very simple and communicable Kannada language. The effort of Dr Venkateshacharya is highly commendable and the readers of these Volumes would certainly bear out my point that he has been very successful in his missions.

This is the fifth Volume in the Series of Volumes and it deals with five Adhikaranas, four Adhikaranasof the Second Pada of the First Adhyaya, and the first Adhikarana of the Third Pada of the First Adhyaya, of the Brahmasutras. The second Pada is aimed at explaining the applicability of the different Lingas- attributes, that are commonly applied in the entities other than Vishnu (Anyatra Prasiddha Lingas), while the third Pada is concerned with the Namas

ತತ್ವಪ್ರಕಾಶಿಕಾ - ಭಾವದೀಪ

ಸಾರಾಂಶ

ಅಂತರಾಧಿಕರಣ

ಅಂತರಾಧಿಕರಣವು ಪ್ರಾರಂಭವಾಗುತ್ತದೆ. ಛಾಂದೋಗ್ಯದ ನಾಲ್ಕನೆಯ ಅಧ್ಯಾಯದಲ್ಲಿ ಉಪಕೋಸಲ ವಿದ್ಯೆಯು ಪ್ರಸಕ್ತವಾಗಿದೆ. ಆ ಸಂದರ್ಭದಲ್ಲಿ ''ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚ ಏತದಮೃತಮಭಯಮೇತದ್ ಬ್ರಹ್ಮ'' ಎಂಬ ವಾಕ್ಯವು ಕೇಳಿಸುತ್ತಿದೆ. ಮೇಲ್ನೋಟಕ್ಕೆ ಅಗ್ನಿಯನ್ನು ಇದು ಪ್ರತಿಪಾದಿಸುವಂತೆ ಕಾಣಿಸುತ್ತಿದೆ. ಆದರೆ ವಿಷ್ಣುವೇ ಪ್ರತಿಪಾದ್ಯನೆಂಬುದು ಅಂತಿಮ ನಿರ್ಣಯ.

ಆದ್ದರಿಂದ ಒಂದುವೇಳೆ ವಿದ್ಯಾಭೇದವು ಅಯುಕ್ತವಾದರೆ ಆವಾಗ ''ಕಂ ಬ್ರಹ್ಮ'' ಎಂಬುದು ಅಧ್ಯಾತ್ಮವಿದ್ಯೆಯೆಂದು ''ಯ ಏಷೋಂತರಾದಿತ್ಯೇ'' ಎಂಬುದು ಅಸ್ಮದ್ವಿದ್ಯೆಯೆಂದು ಹೇಳಬೇಕಾಗುತ್ತದೆ. ಆವಾಗ ಆದಿತ್ಯಸ್ಥ ಪುರುಷನಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಗ್ನಿಪರವಾಗುವುದರಿಂದ ಬಾಧಕವಶಾತ್ ಅಗ್ನಿಯಿಂದ ಅಭಿನ್ನನಾದ ಕಣ್ಣಿನಲ್ಲಿರುವವನಲ್ಲಿ ಕೇಳಿಸಲ್ಪಟ್ಟ ಅಮೃತತ್ವಾದಿಗಳನ್ನು ಗೌಣವೆನ್ನಬೇಕಾಗುತ್ತದೆ. ಹೀಗೆ ಅಗ್ನಿಶ್ರುತ್ಯಾದಿಗಳ ಬಲದಿಂದ ಅಗ್ನಿಯೇ ಚಕ್ಷುರಂತಸ್ಥನಾಗಿದ್ದಾನೆಂದು ಸಿದ್ಧವಾಗುತ್ತದೆ. ಇದು ಪೂರ್ವಪಕ್ಷದ ಫಲ.

ಒಂದು ವೇಳೆ ವಿದ್ಯಾಭೇದವು ಕೂಡುವುದಾದರೆ 'ಅಹಂ' ಶಬ್ದವು ಶಾಸ್ತ್ರದ ಪ್ರಕಾರ ಬ್ರಹ್ಮಪರವಾಗುತ್ತದೆ. ಆವಾಗ ಯಾವುದೇ ಬಾಧಕವಿಲ್ಲದ ಕಾರಣ ಅಮೃತತ್ವಾದಿಗಳು ಮುಖ್ಯವೇ ಆಗುತ್ತವೆ. ಇಂತಹ ಅಮೃತತ್ವಾದಿ ಲಿಂಗಗಳ ಬಲದಿಂದ ವಿಷ್ಣುವೇ ಶ್ರುತಿಪ್ರತಿಪಾದ್ಯನಾಗುತ್ತಾನೆಂಬುದು ಸಿದ್ಧಾಂತದ ಫಲ.

'ಯ ಏಷಃ ಅಂತರಕ್ಷಿಣಿ' ಎಂಬ ಶ್ರುತಿಯಲ್ಲಿ ಚಕ್ಷುರಂತರ್ಗತನಾದವನು ಅಗ್ನಿದೇವತೆಯೆಂದು ಪೂರ್ವಪಕ್ಷ. ಏಕೆಂದರೆ ಅಗ್ನಿಯೇ ಸ್ವತಃ ತನ್ನನ್ನು ಆದಿತ್ಯದೇವತೆಯೆಂದು ಹೇಳಿಕೊಂಡಿದ್ದಾನೆ. ಚಕ್ಷುರಭಿಮಾನಿದೇವತೆ ಹಾಗೂ ಆದಿತ್ಯ ದೇವತೆ ಒಬ್ಬನೇ ಎಂದು 'ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಿಣಿ ಪ್ರಾವಿಶತ್' ಎಂಬ ಶ್ರುತಿಯಿಂದ ತಿಳಿಯುತ್ತದೆ.

'ಅಕ್ಷಿ' ಶಬ್ದವು ಮುಖ್ಯವಾಗಿ ಕಣ್ಣಿಗೆ ಅಭಿಮಾನಿಯಾದ ದೇವತೆಯನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತಿದೆ ಎಂದು ಅಭಿಮಾನ್ಯಧಿಕರಣದಿಂದ ನಿರ್ಣಯವಾಗಿದೆ. ಮತ್ತು 'ಯಶ್ಚಕ್ಷುಷಿ ತಿಷ್ಠನ್' ಎಂಬ ಮತ್ತೊಂದು ಶ್ರುತಿಯಲ್ಲಿ ಪ್ರತಿಪಾದ್ಯವಾದ 'ಚಕ್ಷುಸ್ಯೇ ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ ಅಕ್ಷಿಶಬ್ದದಿಂದ ವಿವಕ್ಷಿತವಾಗಿದೆ. ಆ ಶ್ರುತಿಯಲ್ಲಿ ಹೇಳಲ್ಪಟ್ಟ 'ಚಕ್ಷುಷಃ ಯಂ ಚಕ್ಷುರ್ನವೇದ' ಎಂಬ ವಾಕ್ಯಶೇಷದಿಂದ ಚೇತನಪರವೆಂದು ಸಿದ್ಧವಾದ ಮೇಲೆ ಅಂತರಕ್ಷಿಣಿ ಎಂಬಲ್ಲಿರುವ ಅಕ್ಷಿಯೂ ಸಹ ಚೇತನಪರವೇ ಆಗಬೇಕು. ಈ ವಿಷಯದಲ್ಲಿ ಭಾಷ್ಯ ಹಾಗೂ ಸನ್ಯಾಯರತ್ನಾವಳಿಗಳ ಸಮ್ಮತಿಯೂ ಇದೆ.

ಅಥವಾ 'ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ ಅಕ್ಷಿ ಶಬ್ದವು ಜಡಪರವೆಂದು ಹೇಳಲು ಯಾವುದೇ ಶ್ರುತಿಯಿಲ್ಲ. ಪ್ರತ್ಯುತ ಸ್ಥಾನಾದಿಸೂತ್ರಗಳೆಲ್ಲವು ಸ್ವರಸವೇ ಆಗುತ್ತವೆ. 'ಯ ಏಷಃ ಆದಿತ್ಯೇ' ಎಂಬ ಮತ್ತೊಂದು ವಾಕ್ಯದ ಉಲ್ಲೇಖವು ಅನಾವಶ್ಯಕವಾಗುತ್ತದೆ.

ಆದಿತ್ಯಮಂಡಲ ಹಾಗೂ ಅಕ್ಷಿಗೋಲಕದಲ್ಲಿ ಒಬ್ಬನೇ ಚೇತನನಿರುವುದರಿಂದ 'ಏಕವಿಧತ್ವಾತ್' ಎಂಬ ಟೀಕೆಯು ಸ್ವಾರಸ್ಯವಾಗುತ್ತದೆ. ಆದ್ದರಿಂದ ಜಡಭೂತವಾದ ಅಧಿಷ್ಠಾನಗಳು ಭಿನ್ನವಾದ್ದರಿಂದ ಚೇತನರೂ ಸಹ ಭಿನ್ನರೇ ಆಗಬೇಕೆಂದು ಹೇಳಲಾಗದು.

ವಸ್ತುತಃ 'ಸೋऽಹಮಸ್ಮಿ' ಎಂಬ ಉಪದೇಶವು ವಿಷ್ಣುವಿನದ್ದೆಂದು ಪ್ರಶ್ನಿಸಬಹುದು. ಆದರೆ ಹಿಂದಿನ ಮುಂದಿನ ಪ್ರಕರಣವನ್ನು ನೋಡಿದಾಗ ಅಗ್ನಿಯ ಉಪದೇಶವೆಂದೇ ಸ್ಪಷ್ಟವಾಗುತ್ತದೆ. ಏಕೆಂದರೆ 'ಅಗ್ನಿಂ ಪರಿಚಚಾರ' ಇತ್ಯಾದಿಯಾಗಿ ಅನೇಕ ಬಾರಿ ಅಗ್ನಿ ಶಬ್ದವು ಕೇಳಿಸುತ್ತಿದೆ. ಮತ್ತು ಬಹುವಚನಾಂತವಾಗಿ ನಿರ್ದಿಷ್ಟವಾಗಿವೆ. ಮತ್ತು 'ಗಾರ್ಹಪತ್ಯ' ಮೊದಲಾದ ಅಗ್ನಿಯ ವಿಶೇಷ ರೂಪಗಳನ್ನು ಉಲ್ಲೇಖಿಸಿದೆ. ಈ ಮೂರು ಕಾರಣಗಳಿಂದ ಅಗ್ನಿಯೇ ಪ್ರತಿಪಾದ್ಯನೆನ್ನಬೇಕು.

ಅಂತಿಮಪ್ರಾಣಾಧಿಕರಣದ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿರುವ ನ್ಯಾಯದಂತೆ 'ಅಹಂ' ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. ಸ್ವತಃ ಅಗ್ನಿಯು ತನ್ನನ್ನು ಉಪಾಸನೆ ಮಾಡುವವರನ್ನು ರಕ್ಷಿಸುತ್ತೇನೆಂದು ಹೇಳಿಕೊಂಡಿದ್ದಾನೆ. ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನಿಯನ್ನು ರಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ತನ್ನ ಉಪಾಸನೆಯನ್ನೇ ಅಗ್ನಿಯು ಹೇಳಿಕೊಂಡಿದ್ದಾನೆಂದು ಹೇಳಬೇಕು.

ಅಕ್ಷಿಶ್ರುತಿಯಿಂದ ಅಗ್ನಿಯೇ ಪ್ರತಿಪಾದ್ಯನೆನ್ನಲು ಅನೇಕ ಬಾರಿ ಕೇಳಿಸುವ ಅಗ್ನಿ ಶಬ್ದವೇ ಪ್ರಮಾಣವೆಂದು ಸಾಧಿಸಿದರೂ ಅಷ್ಟೇ ಅಲ್ಲ 'ಸೋऽಹಮಸ್ಮಿ ಸ ಏವಾऽಹಮಸ್ಮಿ' ಎಂಬಲ್ಲಿ ಅವಧಾರಣಸಹಿತವಾದ ಅಭ್ಯಾಸವೂ ಸಹ ಪ್ರಮಾಣವಾಗಿದೆ. ಸ್ವರಸಪ್ರತಿಪನ್ನವಾದ ಅರ್ಥವನ್ನಷ್ಟೇ ಅಭ್ಯಾಸವು ಸ್ಪಷ್ಟಪಡಿಸುತ್ತದೆ.

ಉದಾ :- 'ಗಂಗಾಯಾಂ ಮೀನಃ' ಎಂದು ಹೇಳಿದಾಗ ಗಂಗಾ ಶಬ್ದಕ್ಕೆ ತೀರವೆಂಬರ್ಥವನ್ನು ಭ್ರಾಂತಿಯಿಂದ ಒಬ್ಬನು ತಿಳಿಯುತ್ತಾನೆ. ಆ ಭ್ರಾಂತಿಯನ್ನು ನಿರಾಸ ಮಾಡುವುದಕ್ಕಾಗಿ ಆಪ್ತನಾದವನು 'ಗಂಗಾಯಾಂ ಮೀನಃ' ಎಂಬ ಪದವನ್ನು ಅನೇಕ ಬಾರಿ ಪ್ರಯೋಗಿಸುತ್ತಾನೆ. ಅಂದರೆ ತೀರದಲ್ಲಿ ಮೀನು ಇರುವುದಿಲ್ಲ. ಗಂಗಾಪ್ರವಾಹದಲ್ಲೇ ಮೀನು ಇರುತ್ತದೆಂದು ಗಂಗಾಶಬ್ದದ ಅಭ್ಯಾಸದಿಂದ ಸ್ಪಷ್ಟಪಡಿಸುತ್ತಾನೆ. ಇದರಿಂದ ಮೊದಲು ಪ್ರಯೋಗಿಸಲ್ಪಟ್ಟ ಗಂಗಾಶಬ್ದವು ಸ್ವರಸವಾದ ಪ್ರವಾಹ ಎಂಬರ್ಥವನ್ನೇ ಹೇಳುತ್ತದೆಂದು ತಿಳಿಯಬೇಕು. ಅದರಂತೆ ಪ್ರಕೃತ ಅಗ್ನಿಯೂ ನಾನೇ ಆಗಿದ್ದೇನೆ ಎಂಬ ಮಾತನ್ನು ಅನೇಕ ಬಾರಿ ಪ್ರಯೋಗಿಸುತ್ತಿದ್ದಾನೆ. ಇದರಿಂದ ಉಪದೇಶಕನು ಅಗ್ನಿಯು ಹೊರತು ವಿಷ್ಣುವಲ್ಲವೆಂದು ನಿರ್ಣಯವಾಗುತ್ತದೆ.

ಮತ್ತು ಉಪನಿಷತ್ತಿನಲ್ಲಿ 'ಅಸ್ಮದ್‌ವಿದ್ಯಾ ಆತ್ಮವಿದ್ಯಾ' ಎಂಬುದಾಗಿ 'ಕಂ ಬ್ರಹ್ಮ' ಎಂಬ ಬ್ರಹ್ಮವಿದ್ಯೆಯೇ ಬೇರೆ ಆದಿತ್ಯನ ಅಂತರ್ಗತನಾದವನ ವಿದ್ಯೆಯೇ ಬೇರೆಯೆಂದು ಹೇಳಲಾಗಿದೆ. ಇದರಿಂದಲೂ ಸಹ ಅಗ್ನಿವಿದ್ಯೆಯನ್ನು ಬ್ರಹ್ಮವಿದ್ಯೆಯೆನ್ನಬಾರದೆಂದು ತಿಳಿಯುತ್ತದೆ.

ಟೀಕೆಯ. ಪೂರ್ವಪಕ್ಷದಲ್ಲಿ ಅಗ್ನಿಯನ್ನು ಅಕ್ಷಿಸ್ಥನೆಂದು ಹೇಳಿದರೆ 'ಸಮಾಖ್ಯಾಶ್ರುತಿ' ವಿರೋಧ ಬರುತ್ತದೆಂದು ಹೇಳಿದ್ದಾರೆ, ಇದೇನೂ ತಪ್ಪಲ್ಲ. ಪೂರ್ವಪಕ್ಷಿಯು ಆದಿತ್ಯನಲ್ಲಿರುವವನು ಅಗ್ನಿಯೇ ಆಗಿದ್ದಾನೆಂದು ಎಲ್ಲಿಯ ತನಕ ನಿರ್ಣಯಿಸುವುದಿಲ್ಲವೋ ಅಲ್ಲಿಯ ತನಕ 'ಸಮಾಖ್ಯಾಶ್ರುತಿಯು' ವಿಷ್ಣುಪರವೇ ಆಗಿರುತ್ತದೆ.

ಇದರಂತೆ 'ಅಹಂ' ಶಬ್ದದ ಪ್ರಯೋಗವನ್ನು ವಿಷ್ಣುವಿನಲ್ಲಿ ಔಪಚಾರಿಕವೆನ್ನಲಾಗಿದೆ. ಇದರ ಅಭಿಪ್ರಾಯವೇನೆಂದರೆ ಆದಿತ್ಯನಲ್ಲಿ ಅಂತರ್ಗತನಾದ ವಿಷ್ಣುವಿನ ವಿಷಯದಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದು ಅಭಿಪ್ರಾಯ.

ಮತ್ತು ಅಕ್ಷಿಸ್ಥನಾದವನು ವಿಷ್ಣುವೆಂದು ಹೇಳಿದರೆ ಅಪೂರ್ವತ್ವವು ಬರುತ್ತದೆಂದು ಹೇಳಿದ್ದಾರೆ. ಇದೂ ಸಹ ತಪ್ಪಲ್ಲ. ಅಗ್ನಿಯಲ್ಲಿ ಕಣ್ಣಿಗೆ ಕಾಣಿಸದ ಪ್ರಯುಕ್ತ ಅಪೂರ್ವತ್ವವನ್ನು ಹೇಳಬಹುದು. ಆದರೆ ವಿಷ್ಣು ಅತ್ಯಂತ ಅಲೌಕಿಕನಾದ್ದರಿಂದ ಅಗ್ನಿಗಿಂತ ಅತಿಶಯವಾದ ಅಪೂರ್ವತ್ವವು ವಿಷ್ಣುವಿನಲ್ಲೇ ಇರುತ್ತದೆ. ಅಥವಾ ಹಗಲಿನ ಹೊತ್ತು ಅಗ್ನಿಯ ಪ್ರಭೆಯು ಕಾಣಿಸದ ಕಾರಣ ಆದಿತ್ಯನಲ್ಲಿ ಪ್ರವೇಶವಾಗಿರುತ್ತದೆಂದು ಅನುಮಾನದಿಂದ ಸಾಧಿಸಬಹುದು. ಈ ಕಾರಣದಿಂದಲೂ ಅಗ್ನಿಯಲ್ಲಿ ಅಪೂರ್ವತ್ವವನ್ನು ಹೇಳಲಾಗದು.

'ಅಪಹತೇ ಪಾಪಕೃತ್ಯಾಂ' ಎಂಬುದನ್ನು ಟೀಕೆಯಲ್ಲಿ ಅರ್ಥವಾದ ವಾಕ್ಯವೆಂದಿದ್ದಾರೆ. ಆದರೆ ಇದು ಫಲವಾಕ್ಯವೂ ಆಗಿದೆ. ಅರ್ಥವಾದತ್ವ ಫಲತ್ವ ಎರಡೂ ಇರುವುದರಿಂದ ಟೀಕೆಯಲ್ಲಿ ಅರ್ಥವಾದ ವಾಕ್ಯವೆಂದು ಪರಿಗಣಿಸಿದ್ದು ತಪ್ಪಲ್ಲ? ಅಥವಾ ಫಲವನ್ನು ಹೇಳುವ ವಾಕ್ಯದಲ್ಲಿ ಫಲತ್ವ ಹಾಗೂ ಅರ್ಥವಾದತ್ವಗಳೆರಡೂ ಇದ್ದೇ ಇರುತ್ತದೆಂದು ತಿಳಿಯಬಹುದು.

ಮತ್ತು ಅಮೃತತ್ವ ಅಭಯತ್ವಗಳನ್ನು ಅಗ್ನಿಯಲ್ಲಿ ಉಪಪಾದಿಸಿದ್ದೂ ಸಹ ತಪ್ಪಲ್ಲ. ತನಗಿಂತ ಅಧಮ ದೇವತೆಗಿಂತ ಹೆಚ್ಚು ಅಮೃತತ್ವ ಅಭಯತ್ವಗಳು ಅಗ್ನಿಯಲ್ಲಿ ಇರುತ್ತದೆ. ಅಥವಾ ಈ ಹಿಂದೆ ಉಪಪಾದಿಸಿದ ಅರ್ಥವಾದ ಸಹಿತವಾದ ಬಹುಶ್ರುತಿಗಳ ಬಲದಿಂದ ಮುಖ್ಯವಾದ ಅಮೃತತ್ವವನ್ನೇ ಅಗ್ನಿಯಲ್ಲಿ ಹೇಳಬಹುದು.

ಕಣ್ಣಿನಲ್ಲಿರುವವನು ಭಗವಂತನೇ ಹೊರತು ಅಗ್ನಿಯಲ್ಲ. ಪ್ರತಿಯೊಬ್ಬ ಪುರುಷರ ಎಡಗಣ್ಣಿನಲ್ಲಿ ಸ್ತ್ರೀಪ್ರೇರಕವಾದ ಭಗವಂತನ 'ವಾಮನಿ' ಎಂಬ ರೂಪವಿದೆ. ಬಲಗಣ್ಣಿನಲ್ಲಿ ಪುರುಷ ಪ್ರೇರಕವಾದ 'ಭಾಮನಿ' ಎಂಬ ರೂಪವಿದೆ. ಈ ರೂಪಗಳನ್ನು ಅಗ್ನಿ ಸ್ವರೂಪವೆಂದು ಹೇಳಲು ಸಾಧ್ಯವೇ ಇಲ್ಲ. ಹಾಗೇನಾದರೂ ಹೇಳಿದರೆ ಕಣ್ಣಿನ ಒಳಗಡೆ ಕುಳಿತಿರುವ ಅಗ್ನಿಯನ್ನು ಪ್ರೇರಣೆ ಮಾಡಲು ಅನೇಕ ಜೀವಿಗಳ ಪ್ರವಾಹವೇ ಹರಿಯಬೇಕಾಗುತ್ತದೆ.

ಅಗ್ನಿದೇವತೆಯು 'ಪರಿಹ್ಯೇನಂ ಮ್ರಿಯಂತೇ' ಎಂಬ ಶ್ರುತಿ ಹೇಳುವಂತೆ ಮರಣಶೀಲನಾಗಿದ್ದಾನೆ. 'ಭೀಷಾಸ್ಮಾತ್' ಎಂಬ ಶ್ರುತಿ ಹೇಳುವಂತೆ ಭಗವಂತನಿಗೆ ಹೆದರಿ ಪಲಾಯನ ಮಾಡುತ್ತಾನೆ. ಆದ್ದರಿಂದ ಅಮೃತತ್ವ ಅಭಯತ್ವಗಳೆಲ್ಲವೂ ಸಹ ವಿಷ್ಣುವಿನ ನಿರವಕಾಶಲಿಂಗಗಳೆಂದು ಸಾಬೀತಾಗುತ್ತದೆ.

'ಸೋऽಹಮಸ್ಮಿ' ಎಂದು ಉಪದೇಶಿಸಿದವನು ಅಂತರ್ಯಾಮಿಯೇ ಹೊರತು ಅಗ್ನಿಯಲ್ಲ. ಅಗ್ನಿ ಶಬ್ದದ ಅಭ್ಯಾಸವೂ ಸಹ ಅಗ್ನಿಗೆ ಪ್ರಚೋದಕವಲ್ಲ. ಹಿಂದಿನ ಮುಂದಿನ ವಾಕ್ಯಗಳೆಲ್ಲವೂ ವಿಷ್ಣುವನ್ನು ಬೆಂಬಲಿಸುತ್ತಿರುವಾಗ ಮಧ್ಯದಲ್ಲಿರುವ ಅಭ್ಯಾಸದ ಶಕ್ತಿ ಹೀನವಾಗುತ್ತದೆ.

'ಅಸ್ಮದ್ವಿದ್ಯೆ' 'ಆತ್ಮವಿದ್ಯೆ' ಎಂಬ ವಿದ್ಯಾಭೇದದಿಂದ ಅಗ್ನಿಯು ಶ್ರುತಿಪ್ರತಿಪಾದ್ಯನೆಂಬ ಪೂರ್ವಪಕ್ಷದಲ್ಲಿ ಹುರುಳಿಲ್ಲ. ಏಕೆಂದರೆ ಒಬ್ಬನೇ ಬ್ರಹ್ಮನನ್ನು ವಿಷಯೀಕರಿಸುವ ವಿದ್ಯೆಗಳು ಪ್ರಕಾರಭೇದದಿಂದ ಅನೇಕ ಹೆಸರನ್ನು ಪಡೆಯಬಹುದು. ಬ್ರಹ್ಮವಿಷಯಕವಾದ ದಹರವಿದ್ಯೆ, ಪ್ರಾಣವಿದ್ಯೆ, ವೈಶ್ವಾನರವಿದ್ಯೆಗಳೇ ಇದಕ್ಕೆ ಉದಾಹರಣೆ.

ಈ ಅಧಿಕರಣದಲ್ಲಿ ಒಟ್ಟು ಐದು ಸೂತ್ರಗಳಿವೆ. ಐದು ಸೂತ್ರಗಳ ಜೋಡಣೆಯು ಅತ್ಯಂತ ಸ್ವಾರಸ್ಯಮಯವಾಗಿದೆ. ಅದು ಹೀಗೆ - ಪ್ರಥಮ ಸೂತ್ರವು ವಿಷಯವಾಕ್ಯದಲ್ಲೇ ಇರುವ ಶ್ರುತಿಲಿಂಗಾದಿಗಳನ್ನು ಹೇಳುತ್ತಿರುವ ಕಾರಣ ಮೊದಲೇ ಉಲ್ಲೇಖಿಸಲು ಅರ್ಹವಾಗಿದೆ.

ಸೂತ್ರದಲ್ಲಿರುವ ಅಂತರ ಎಂಬ ಪದಕ್ಕೆ ಕೇವಲ ಅಂತರ್ಯಾಮಿ ಎಂದರ್ಥವಲ್ಲ. ಕಣ್ಣಿನ ಒಳಗಡೆ ಅಂತರ್ಯಾಮಿಯಾಗಿದ್ದು ರಮಿಸುತ್ತಾನೆಂದರ್ಥ. 'ಅಂತರ' ಎಂಬರಲ್ಲಿರುವ 'ಅಂತ್' ಎಂಬ ಉಪಪದವು ಅಂತರ್ಯಾಮಿಯೆಂಬರ್ಥವನ್ನು ಹೇಳಿದರೆ 'ರ' ಎಂಬ ಧಾತು 'ರಮಣ' ಎಂಬರ್ಥವನ್ನು ಹೇಳುತ್ತಿದೆ. ಕೇವಲ ಅಂತರ್ಯಾಮಿಯೆಂಬರ್ಥವು ವಿವಕ್ಷಿತವಾಗಿದ್ದಲ್ಲಿ 'ಅಂತ್' ಎಂಬ ಶಬ್ದವು ಸಾಕಾಗಿತ್ತು. ಈ ರಮಣ ಎಂಬರ್ಥವನ್ನು ಶ್ರುತಿಯಲ್ಲಿರುವ ಆತ್ಮಶಬ್ದವು 'ಆದೇಯಂ ಮಾತಿ' ಎಂಬ ವ್ಯುತ್ಪತ್ತಿಯಿಂದ ಸ್ಪಷ್ಟಪಡಿಸುತ್ತಿದೆ. ಆದ್ದರಿಂದ ಪ್ರಥಮಸೂತ್ರಕ್ಕೆ ಹೀಗರ್ಥ. ಕಣ್ಣಿನ ಒಳಗಡೆ ಅಂತರ್ಯಾಮಿಯಾಗಿ ರಮಿಸುವವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಅಮೃತತ್ವ, ಅಭಯತ್ವಮತ್ತು ಬ್ರಹ್ಮಶಬ್ದ ಆತ್ಮಶಬ್ದಗಳೆಂಬ ಲಿಂಗಗಳೆಂದು ಎಂದು.

ವಿಷಯವಾಕ್ಯಗಳಲ್ಲಿರುವ ಶ್ರುತಿಲಿಂಗಗಳನ್ನು ಪ್ರಮಾಣವನ್ನಾಗಿ ಹೇಳುತ್ತಿರುವುದರಿಂದ ''ಅಂತರ ಉಪಪತ್ತೇಃ'' ಎಂಬ ಸೂತ್ರವು ಮೊದಲು ನಿಮಿತ್ತವಾಗಿವೆ. ಮುಂದಿನ ವಾಕ್ಯದಲ್ಲಿರುವ ಸ್ಥಾನಶಕ್ತಿ ಹಾಗೂ ಸ್ವರೂಪಶಕ್ತಿಗಳೆಂಬ ಲಿಂಗಗಳನ್ನು ಪ್ರತಿಪಾದಿಸುತ್ತಿರುವುದರಿಂದ 'ಸ್ಥಾನಾದಿವ್ಯಪದೇಶಾಚ್ಚ' ಎಂಬ ಸೂತ್ರವು ಎರಡನೆಯ ಸ್ಥಾನವನ್ನು ಹೊಂದಿದೆ.

ಪ್ರಕರಣದ ಪ್ರಾರಂಭದಲ್ಲಿರುವ ಬ್ರಹ್ಮನ ಲಿಂಗವನ್ನು ಪ್ರತಿಪಾದಿಸುವ ಕಾರಣ 'ಸುಖವಿಶಿಷ್ಟಾಭಿಧಾನಾದೇವಚ' ಎಂಬ ಸೂತ್ರವು ಮೂರನೆಯ ಸ್ಥಾನವನ್ನು ಅಲಂಕರಿಸಿದೆ.

ಉಪಕ್ರಮದಿಂದ ಪ್ರಾಪ್ತವಾದ ಬ್ರಹ್ಮಪ್ರಕರಣಕ್ಕೆ ವಿದ್ಯಾಭೇದವು ವಿಚ್ಛೇದಕವಾದಾಗ ಅದನ್ನು ಪರಿಹರಿಸಲು ಉಪಸಂಹಾರದಲ್ಲಿರುವ ಲಿಂಗವನ್ನು ಉಲ್ಲೇಖಿಸುವ ''ಶ್ರುತೋಪನಿಷತ್‌ಕಗತ್ಯಭಿಧಾನಾಚ್ಚ'' ಎಂಬ ಸೂತ್ರವು ನಾಕನೆಯ ಸ್ಥಾನವನ್ನು ಪಡೆದಿದೆ.

ಪರಪಕ್ಷದಲ್ಲಿ ಬಾಧಕಗಳನ್ನು ಸಾಧಿಸುವುದರಿಂದ 'ಅನವಸ್ಥಿತೇರಸಂಭವಾಚ್ಚ ನೇತರಃ' ಎಂಬ ಸೂತ್ರವು ಕೊನೆಯ ಸ್ಥಾನವನ್ನು ಅಲಂಕರಿಸಿದೆ. ಹೀಗೆ ಸೂತ್ರಕಾರರ ಸೂತ್ರದ ಜೋಡಣೆ ಅತ್ಯಂತ ಸ್ವಾರಸ್ಯಮಯವಾಗಿದೆ.

ಅದ್ವೈತ ಮತದ ಪ್ರಕಾರ ಮತ್ತು ರಾಮಾನುಜ ಮತದ ಪ್ರಕಾರ ಈ ಅಧಿಕರಣವು ಪುನರುಕ್ತವಾಗಿದೆ. ಏಕೆಂದರೆ ಪ್ರಥಮಾಧ್ಯಾಯದ ಮೊದಲನೆಯ ಪಾದದಲ್ಲಿರುವ ಅಂತಸ್ತದ್ಧರ್ಮಾಧಿಕರಣವನ್ನು ಇವರಿಬ್ಬರು ಅಂತರಧಿಕರಣವೆಂದೇ ಗುರುತಿಸುತ್ತಾರೆ. ಮತ್ತು ಇಲ್ಲಿಯಂತೆ ಅಲ್ಲಿಯೂ ಸಹ ಛಾಂದೋಗ್ಯದ ಪ್ರಥಮಾಧ್ಯಾಯದ ವಾಕ್ಯವನ್ನು ಬ್ರಹ್ಮಪರವೆಂದು ಸಿದ್ಧಾಂತ ಮಾಡುತ್ತಾರೆ. ಅಲ್ಲಿ 'ಅತ ಯ ಏಷೋ ಅಂತರಕ್ಷಿಣಿ ಪುರುಷೋ ದೃಶ್ಯತೇ' ಎಂಬ ವಾಕ್ಯವನ್ನೇ ಬ್ರಹ್ಮಪರವೆಂದು ಸಿದ್ಧಾಂತ ಮಾಡಿದ ಮೇಲೆ ಪುನಃ ಇಲ್ಲಿ ಆಕ್ಷೇಪಕ್ಕೆ ಅವಕಾಶವೇ ಇರುವುದಿಲ್ಲ.

ಇನ್ನು ಭಾಮತಿಯಲ್ಲಿ ಅಕ್ಷಿಯಲ್ಲಿರುವ ಜೀವವಿಶೇಷನು ಆ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆ. ಈ ಅಧಿಕರಣದ ಪೂರ್ವಪಕ್ಷಕ್ಕೆ ಛಾಯಾಪುರುಷನು ವಿಷಯನಾಗಿದ್ದಾನೆ. ಈ ಅಧಿಕರಣದ ವಿಷಯವಾಕ್ಯದಲ್ಲಿ ದೃಶ್ಯತ್ವಾದಿಗಳು ಕೇಳಿಸುತ್ತಿರುವುದರಿಂದ ಜೀವವಿಶೇಷನಲ್ಲಿ ದೃಶ್ಯತ್ವಾದಿಗಳು ಅಸಂಭಾವಿತವಾಗಿವೆ. ಆದರೆ ಛಾಯಾಪುರುಷನು ಪ್ರತ್ಯಕ್ಷಸಿದ್ಧನಾದ್ದರಿಂದ ದೃಶ್ಯತ್ವಕ್ಕೆ ಆಧಾರನಾಗಿದ್ದಾನೆಂದು ಅಭ್ಯಧಿಕಾಶಂಕೆಯನ್ನು ತೋರಿಸಿದೆ.

ಭಾಮತಿಯ ಈ ಧೋರಣೆ ಸರಿಯಿಲ್ಲ. ಕೇವಲ ದೃಶ್ಯತ್ವವೆಂಬ ಒಂದು ಹೇತು ಇಲ್ಲದ ಕಾರಣ ಜೀವಪಕ್ಷವನ್ನು ಬಿಡುವುದಾದರೆ ಪುರುಷತ್ವ, ಅಮೃತತ್ವ, ಸಂಯದ್ವಾಮತ್ವವೇ ಮೊದಲಾದ ಅನೇಕ ಧರ್ಮಗಳಿಲ್ಲದ ಛಾಯಾಪುರುಷ ಪಕ್ಷವನ್ನು ಖಂಡಿತವಾಗಿಯೂ ಬಿಡಬೇಕು. ಛಾಯಾಪುರುಷನಲ್ಲಿ ಸ್ತೋತ್ರ ಮಾಡುವುದಕ್ಕಾಗಿ ಅಮೃತ ಅಭಯ ಮೊದಲಾದ ಶಬ್ದಗಳನ್ನು ಪ್ರಯೋಗಿಸಲಾಗಿದೆಯೆಂದು ಹೇಳುವುದಾದರೆ ಜೀವಪಕ್ಷದಲ್ಲಿಯೂ ಇದು ಸಮಾನ. ಆದ್ದರಿಂದ ಯಾವುದೇ ಪ್ರಕಾರದಲ್ಲಿಯೂ ಅಭ್ಯಧಿಕಾಶಂಕೆಯನ್ನು ತೋರಿಸಲು ಸಾಧ್ಯವಿಲ್ಲದ ಕಾರಣ ಪುನರುಕ್ತಿದೋಷವನ್ನು ತಪ್ಪಿಸಿಕೊಳ್ಳಲಾಗದು.

ಅದ್ವೈತಿಗಳ ಸಿದ್ಧಾಂತರಚನೆಯೂ ಸರಿಯಿಲ್ಲ. ಅಕ್ಷಿಸ್ಥನಾದವನು ಕಾರ್ಯಬ್ರಹ್ಮನಾದ ಚತುರ್ಮುಖನೆಂದು ಹೇಳಿದರೆ ಅವನಲ್ಲಿ 'ಅಮೃತತ್ವ', 'ಅಭಯತ್ವ' ಮೊದಲಾದ ಧರ್ಮಗಳು ಬರುವುದಿಲ್ಲ. ಅಕಾರ್ಯಬ್ರಹ್ಮನಾದರೆ ಅವನ ಉಪಾಸನೆಯಿಂದ ಅರ್ಚಿರಾದಿಮಾರ್ಗಗಮನವನ್ನು ಹೇಳಿದ್ದು ಅಯುಕ್ತವಾಗುತ್ತದೆ. ಏಕೆಂದರೆ ಕಾರ್ಯಬ್ರಹ್ಮನನ್ನು ಉಪಾಸನೆ ಮಾಡುವವರು ಮಾತ್ರ ಅರ್ಚಿರಾದಿಮಾರ್ಗದಲ್ಲಿ ಹೋಗುತ್ತಾರೆ. ಇದರಂತೆ ಅದ್ವೈತಿಗಳ ಸೂತ್ರ ವ್ಯಾಖ್ಯಾನವೂ ಸಮಂಜಸವಲ್ಲ.

1. ''ಅಂತರ ಉಪಪತ್ತೇಃ'' ಎಂಬಲ್ಲಿ 'ರ' ಶಬ್ದವು ವ್ಯರ್ಥವಾಗುತ್ತದೆ. 'ಅಮೃತತ್ವಾದಿ' ಉಪಪತ್ತಿಗಳು ಕಾರ್ಯಬ್ರಹ್ಮನಲ್ಲಾಗಲೀ ಅಕಾರ್ಯಬ್ರಹ್ಮನಲ್ಲಾಗಲೀ ಕೂಡುವುದಿಲ್ಲ.

2. ''ಸ್ಥಾನಾದಿವ್ಯಪದೇಶಾಚ್ಚ'' ಎಲ್ಲೆಡೆ ವ್ಯಾಪ್ತನಾದ ಪರಬ್ರಹ್ಮನು ಅಲ್ಪಸ್ಥಾನದಲ್ಲಿದ್ದಾನೆಂದು ''ಅರ್ಭಕೌಕಸ್ತ್ವಾತ್'' ಎಂಬ ಸೂತ್ರದಿಂದಲೇ ಸಮರ್ಥಿಸಿದ್ದಾಗಿದೆ. ಅದೇ ವಿಷಯವನ್ನು ಪ್ರತಿಪಾದಿಸುವ ಈ ಸೂತ್ರಕ್ಕೆ ಸಾರ್ಥಕ್ಯವಿಲ್ಲ.

3. ''ಸುಖವಿಶಿಷ್ಟಾಭಿಧಾನಾದೇವಚ'' ಸುಖವಿಶಿಷ್ಟ ಶಬ್ದಕ್ಕೆ ಸುಖ ಸಂಬಂಧವೆಂಬರ್ಥವನ್ನು ಹೇಳಿದರೆ ಜೀವನಲ್ಲಿ ಹೇತು ವ್ಯಭಿಚರಿತವಾಗುತ್ತದೆ. ಅಪರಿಚ್ಛಿನ್ನತ್ವವೆಂಬ ಶ್ರೇಷ್ಠಸುಖದ ಸಂಬಂಧವನ್ನು ವಿವಕ್ಷಿಸಿದರೆ ಸುಖಸ್ವರೂಪನಾದ ನಿಮ್ಮ ಬ್ರಹ್ಮನಲ್ಲಿ ಸುಖಸಂಬಂಧ ಬರುವುದಿಲ್ಲ. ವಿಶಿಷ್ಟಬ್ರಹ್ಮನಲ್ಲಿ ಸುಖಸಂಬಂಧವಿದ್ದರೂ ಸುಖವು ಅಪರಿಚ್ಛಿನ್ನವಾಗಿಲ್ಲ.

4. ''ಶ್ರುತೋಪನಿಷತ್ಕಗಭಿಧಾನಾತ್'' ಅರ್ಚಿರಾದಿ ಮಾರ್ಗವು ಬ್ರಹ್ಮನನ್ನು ಮಿಥ್ಯಾಭೂತವಾಗಿ ಯಾರು ಉಪಾಸನೆ ಮಾಡುತ್ತಾನೋ ಅಂತಹವನಿಗೆ ಮಾತ್ರ ದೊರೆಯುತ್ತದೆಂಬುದು ನಿಮ್ಮ ಸಿದ್ಧಾಂತ. ನಿಜವಾದ ಬ್ರಹ್ಮಜ್ಞಾನಿಗೆ ಈ ಯಾವ ಮಾರ್ಗಗಳೂ ಸಹ ದೊರೆಯುವುದಿಲ್ಲ. ಆದ್ದರಿಂದ ಅರ್ಚಿರಾದಿಮಾರ್ಗ ಗಮನಕ್ಕೆ ಪರಬ್ರಹ್ಮನು ವಿಷಯನಾಗಲು ಸಾಧ್ಯವಿಲ್ಲದ ಕಾರಣ ಅಕ್ಷಿಸ್ಥನು ಬ್ರಹ್ಮನಾಗುವುದಿಲ್ಲ. ಮತ್ತು 'ಶ್ರುತೋಪನಿಷತ್ಕಸ್ಯ' ಎಂದು ಪದವಿಭಾಗ ಮಾಡುವುದಾದರೆ

ಸೂತ್ರದಲ್ಲಿರುವ 'ಕ' ಶಬ್ದವು ವ್ಯರ್ಥವಾಗುತ್ತದೆ. ಸೂತ್ರದಲ್ಲಿರುವ 'ಗತಿ' ಶಬ್ದಕ್ಕೆ 'ಮಾರ್ಗ' ಎಂಬರ್ಥವೂ ಅಸ್ವರಸವಾಗಿದೆ.

5. ''ಅನವಸ್ಥಿತೇರಸಂಭವಾಚ್ಚ ನೇತರಃ'' ಅನವಸ್ಥಾಶಬ್ದಕ್ಕೆ ಅಪ್ರಮಾಣಿಕವಾದ ಅನಂತ ವ್ಯಕ್ತಿ ಕಲ್ಪನೆಯೆಂಬ ದೋಷವು ಅರ್ಥವೆಂದು ಎಲ್ಲರೂ ಒಪ್ಪಿದ್ದಾರೆ. ಇದನ್ನು ಬಿಟ್ಟು ಚಕ್ಷುರಿಂದ್ರಿಯದಲ್ಲಿ ಛಾಯಾಪುರುಷನು ಅವಸ್ಥಿತನಾಗಿಲ್ಲ ಎಂಬರ್ಥವನ್ನು ಹೇಳುವುದು ತಪ್ಪಾಗುತ್ತದೆ. ಮತ್ತು ಸದಾಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳುವುದು ತಪ್ಪು. ಅಷ್ಟೇ ಅಲ್ಲದೆ 'ಉಪಪತ್ತೇಃ' ಎಂಬ ಮೊದಲನೇ ಸೂತ್ರದಿಂದಲೇ ಛಾಯಾಪುರುಷಾದಿಗಳಲ್ಲಿ ಅಮೃತತ್ವಾದಿಗಳು ಇರುವುದಿಲ್ಲವೆಂದು ತಿಳಿಯಲು ಬರುವಾಗ ಪುನಃ ಅದೇ ವಿಚಾರಕ್ಕಾಗಿ ಕೊನೆಯ ಸೂತ್ರ ಹೊರಡುವುದು ವ್ಯರ್ಥ. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ಸೂತ್ರವ್ಯಾಖ್ಯಾನವು ಅಸಾಧುವಾಗಿದೆ.

ರಾಮಾನುಜರೂ ಸಹ ಅದ್ವೈತಮತದ ಸಿದ್ಧಾಂತಕ್ಕೆ ಜೋತುಬಿದ್ದಿದ್ದಾರೆ. ಅವರನ್ನು ಪ್ರತ್ಯೇಕವಾಗಿ ನಿರಾಕರಿಸಬೇಕಿಲ್ಲ. ಇನ್ನು ರಾಮಾನುಜರ ಮತದಲ್ಲಿ ಹೊಸವಿಚಾರವೆಂದರೆ 'ಅತ ಏವ ಚ ಸ ಬ್ರಹ್ಮ' ಎಂಬ ಪ್ರಕ್ಷಿಪ್ತವಾದ ಸೂತ್ರವನ್ನು ನಾಲ್ಕನೆಯ ಸೂತ್ರವೆಂದು ಪರಿಗಣಿಸುತ್ತಾರೆ. ಆದರೆ ಯಾವರೀತಿಯಾಗಿ ಈಕ್ಷತ್ಯಧಿಕರಣದಲ್ಲಿ 'ಪ್ರತಿಜ್ಞಾವಿರೋಧಾತ್' ಎಂಬ ಸೂತ್ರವನ್ನು ಪ್ರಕ್ಷಿಪ್ತವಾದ್ದರಿಂದ ಉಪೇಕ್ಷಿಸಲಾಗಿತ್ತೋ ಅದರಂತೆ ಇದನ್ನೂ ಸಹ ಉಪೇಕ್ಷಿಸಬೇಕು.

ಅದ್ವೈತಿಗಳು ಏನೇ ವ್ಯಾಖ್ಯಾನಿಸಿದರೂ ಎಲ್ಲಾ ಅಧಿಕರಣಗಳಂತೆ ಇಲ್ಲಿಯೂ ಸಹ ಜೀವಬ್ರಹ್ಮಭೇದವನ್ನೇ ಒಪ್ಪಿಕೊಂಡಂತಾಯಿತು. ಚಕ್ಷುರಿಂದ್ರಿಯದಲ್ಲಿ ಜೀವನು ನೆಲೆಸಿಲ್ಲ ಬ್ರಹ್ಮನು ನೆಲೆಸಿದ್ದಾನೆಂದು ಅವರು ಸಾಧಿಸಿದ ಮೇಲೆ ಪುನಃ ಜೀವಬ್ರಹ್ಮಭೇದವನ್ನು ಬಾಯಿಬಿಟ್ಟು ಹೇಳಬೇಕಾಗಿಲ್ಲ.

ಅಂತರ್ಯಾಮ್ಯಧಿಕರಣ

ಅಂತರ್ಯಾಮ್ಯಧಿಕರಣವು ಪ್ರಾರಂಭವಾಗುತ್ತಿದೆ. ಹಿಂದಿನ ಅಧಿಕರಣದಲ್ಲಿ ಚಕ್ಷುರಂತಃಸ್ಥನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಿದ್ದಾಯಿತು. ಆ ನಿರ್ಣಯಕ್ಕೆ ಅಮೃತತ್ವವನ್ನು ಹೇತುವೆಂದು ಹೇಳಿದರು. ಆದರೆ ವಿಷ್ಣುವಿನಲ್ಲಿ ಅಂತಹ ಅಮೃತತ್ವಾದಿ ಹೇತುಗಳೇ ಕೂಡುವುದಿಲ್ಲವೆಂದು ಈ ಅಧಿಕರಣದಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಆನಂತರ್ಯ ಸಂಗತಿಯನ್ನು ತಿಳಿಯಬೇಕು.

'ಅಂತರ್ಯಾಮ್ಯಮೃತಃ' ಎಂಬ ಶ್ರುತಿ ವಾಕ್ಯ ಈ ಅಧಿಕರಣಕ್ಕೆ ವಿಷಯವಾಗಿದೆ. ಇಲ್ಲಿ ಕೇಳಿಸುತ್ತಿರುವ ಅಂತರ್ಯಾಮಿಯು ಪ್ರಕೃತ್ಯಾದಿಗಳೇಕಾಗಬಾರದು? ಎಂಬುದು ಪೂರ್ವಪಕ್ಷಿಗಳ ವಾದ. ವಿಷ್ಣುವೇ ಎಂದು ಸಿದ್ಧಾಂತಿಗಳ ನಿರ್ಣಯ. ಆದ್ದರಿಂದ ಒಂದು ವೇಳೆ ಮುಂದೆ ಹೇಳುವ ಪ್ರಕಾರ ಅಂತರ್ಯಾಮಿಯು ಅಚೇತನಪರವಾದರೆ ಆವಾಗ ಜಡವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಉಪಪನ್ನವಾಗುತ್ತದೆ. ಆವಾಗ ರೂಢ್ಯರ್ಥದಲ್ಲಿ ಬಾಧಕವಿಲ್ಲದ ಕಾರಣ ಪ್ರಕೃತ್ಯಾದಿಗಳನ್ನೇ ಶರೀರವಾಗಿ ಶರೀರವಾಗಿವುಳ್ಳ ವಿಷ್ಣುವೆಂಬರ್ಥವನ್ನು ಸ್ವೀಕರಿಸಬೇಕೆಂಬುದು ಯುಕ್ತವಾಗುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಂತರ್ಯಾಮಿಯೆಂದು ಪೂರ್ವಪಕ್ಷದ ಫಲ. ಜೀವನಿಗಿಂತ ಅಂತರ್ಯಾಮಿಗೆ ಭೇದವನ್ನು ಹೇಳುವ ವಚನಗಳಿರುವುದಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಒಂದು ವೇಳೆ ಚೇತನ ಪರವಾದರೆ ಆವಾಗ ಸಾಕಲ್ಯೇನಾವಿದಿತತ್ತ್ವವು ಪ್ರಕೃತ್ಯಾದಿಗಳಲ್ಲಿ ಕೂಡುವುದಿಲ್ಲ. ಹೀಗೆ ಬಾಧಕವಿರುವುದರಿಂದ ರೂಢಿಯನ್ನು ಬಿಟ್ಟು ಶೀರ್ಯಮಾಣತ್ವ ಎಂಬ ಯೋಗದಿಂದ ವಿಷ್ಣುವಿನಲ್ಲೂ ಸಹ ಪ್ರಕೃತ್ಯಾದಿಗಳೇ ಶರೀರವಾಗಿವೆಯೆಂಬರ್ಥವನ್ನು ಕೂಡಿಸಬಹುದು. ಆದ್ದರಿಂದ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತದ ಫಲ.

ಪೂರ್ವಪಕ್ಷ ಹೀಗಿದೆ - ''ಏಷ ತ ಆತ್ಮಾಅಂತರ್ಯಾಮೀ'' ಎಂಬ ವಿಷಯ ವಾಕ್ಯದಲ್ಲಿ ಪ್ರತಿಪಾದ್ಯವಾದ ಅಂತರ್ಯಾಮಿಯು ಪ್ರಕೃತಿಯೇ ಆಗಿದೆ. ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದರೆ ಶ್ರುತಿಯಲ್ಲಿ

ಹೇಳಲ್ಪಟ್ಟ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನು ಸುಲಭವಾಗಿ ಕೂಡಿಸಬಹುದು. ಪೃಥಿವ್ಯಾದಿಗಳಿಗೆ ಉಪಾದಾನವಾದ್ದರಿಂದ ಸ್ವರೂಪ ಎಂಬರ್ಥದಲ್ಲಿ ಶರೀರಶಬ್ದವನ್ನು ಪ್ರಯೋಗಿಸುವುದು ಕಷ್ಟವಾಗುವುದಿಲ್ಲ. ಆದರೆ ದಿಕ್ ಮೊದಲಾದವುಗಳು ಅಪ್ರಾಕೃತವಾದ್ದರಿಂದ ಪ್ರಕೃತಿಗೆ ಶರೀರಗಳಾಗಿವೆ ಎಂಬ ಮಾತನ್ನು ಕೂಡಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಬ್ರಹ್ಮನು ಅಂತರ್ಯಾಮಿ ಎಂಬ ಪಕ್ಷವನ್ನು ಆಶ್ರಯಿಸಿದಾಗ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನೇ ಕೂಡಿಸಲು ಸಾಧ್ಯವಿಲ್ಲ. 'ಶೀರ್ಯಮಾಣತ್ವ' ಎಂಬ ಯೌಗಿಕಾರ್ಥವನ್ನು ಸ್ವೀಕರಿಸಲು ಹೊರಟರೆ ಅಪ್ರಾಕೃತವಾದ ದಿಗಾದಿಗಳಲ್ಲಿ ಅದೂ ಸಹ ತಪ್ಪಾಗುತ್ತದೆ. ಆದ್ದರಿಂದ ಪ್ರಕೃತಿಯನ್ನೇ ಅಂತರ್ಯಾಮಿಯೆನ್ನಬೇಕು. ದಿಕ್ ಮೊದಲಾದವನ್ನು ಶರೀರವೆಂದು ಹೇಳಿದ್ದರೆ ಗೌಣಾರ್ಥ ಮಾಡಬೇಕು.

ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದಾಗ ಅನೇಕ ಬಾಧಕಗಳಿಗೆ ಅವಕಾಶವಿದೆ –

ಹೇಗೆಂದರೆ 'ಯಃ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ಆಧಾರತ್ವವು ಬಾಧಕವೋ. 'ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ನಿಯಾಮಕತ್ವವು ಬಾಧಕವೋ? ಅಥವಾ 'ಆತ್ಮಾನಂ ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಚೇತನ ನಿಯಾಮಕತ್ವವು ಬಾಧಕವೋ? ಅಥವಾ ಆತ್ಮಾವಿದಿತತ್ವವು ಬಾಧಕವೋ?. ''ಅದೃಷ್ಟೋ ದ್ರಷ್ಟಾಽಶ್ರುತಃ ಶ್ರೋತಾ ಅಮತೋ ಮಂತಾ ಅವಿಜ್ಞಾತೋ ವಿಜ್ಞಾತಾ'' ಎಂಬಲ್ಲಿ ಹೇಳಲ್ಪಟ್ಟ ದ್ರಷ್ಟೃತ್ವಾದಿಗಳು ಬಾಧಕಗಳೋ? ಎಂದು ಪ್ರಶ್ನಿಸುತ್ತೇವೆ ಎಂದರೆ ಈ ಯಾವ ಬಾಧಕಗಳಿಗೂ ಅವಕಾಶವಿಲ್ಲ. ಏಕೆಂದರೆ ಕಾರ್ಯದಲ್ಲಿ ಕಾರಣವಿದೆಯೆಂಬ ಪ್ರಯೋಗವು ಲೋಕದಲ್ಲಿ ಕಾಣಿಸುತ್ತಿದೆ. ಪೃಥಿವಿ ಹಾಗೂ ಪ್ರಕೃತಿಗಳಿಗೆ ಕಾರ್ಯಕಾರಣ ಭಾವವಿದ್ದರೂ ಅಧಾರಾಧೇಯಭಾವದಿಂದ ವ್ಯವಹರಿಸಬಹುದು.

ಇನ್ನು 'ಪೃಥಿವೀಂ ಯಮಯತಿ' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿನಿಯಾಮಕತ್ವವು ಪ್ರಕೃತಿಯಲ್ಲಿ ಕೂಡುವುದಿಲ್ಲವೆಂದು ಹೇಳಬೇಕು. ಆದರೆ ಆತ್ಮನ ಪ್ರವೃತ್ತಿಯು ಶರೀರದ ಮೂಲಕವೇ ಆಗಬೇಕೇ ಹೊರತು ನೇರವಾಗಿ ಆಗುವುದಿಲ್ಲ. ಆದ್ದರಿಂದ ಆತ್ಮನು ಪ್ರಕೃತ್ಯಧೀನವೆಂದು ಹೇಳಬಹುದು.

'ಯಮಾತ್ಮಾ ನ ವೇದ' ಎಂಬಲ್ಲಿ ಆತ್ಮನಿಂದ ಅಂತರ್ಯಾಮಿಯು ತಿಳಿಯಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಇದನ್ನೂ ಸಹ ಪ್ರಕೃತಿಯಲ್ಲಿಕೂಡಿಸಬಹುದು. ಏಕೆಂದರೆ 'ಅಪ್ರತರ್ಕ್ಯಮವಿಜ್ಞೇಯಂ' ಇತ್ಯಾದಿ ವಾಕ್ಯಗಳಂತೆ ಪ್ರಕೃತಿಯನ್ನು ಸಾಕಲ್ಯೇನ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ.

ಅಂತರ್ಯಾಮಿಯಲ್ಲಿ 'ದ್ರಷ್ಟಾ ಶ್ರೋತಾ' ಇತ್ಯಾದಿಯಾಗಿ ದ್ರಷ್ಟೃತ್ವ, ಶ್ರೋತೃತ್ವಾದಿಗಳು ಕೇಳಿಸುತ್ತಿವೆ. ಇವುಗಳು ಪ್ರಾಕೃತವಾದ ಇಂದ್ರಿಯಗಳು ದರ್ಶನ ಸಾಧನವಾದ್ದರಿಂದ ಪ್ರಕೃತಿಯನ್ನು ದ್ರಷ್ಟಾಶ್ರೋತಾ ಇತ್ಯಾದಿಯಾಗಿ ಹೇಳಬಹುದು. ಏಕೆಂದರೆ ಕರಣದಲ್ಲಿ ಕರ್ತೃತ್ವದ ಪ್ರಯೋಗವನ್ನು ಮಾಡುವುದು ಕಂಡಿದೆ. (ಹಂತಾ ರಾಮಶರಃ ಇತ್ಯಾದಿ ಸ್ಥಳದಲ್ಲಿ) ಅಥವಾ ಅಭಿಮಾನಿಯಾದ ಜೀವನಲ್ಲಿ ದ್ರಷ್ಟೃತ್ವಾದಿಗಳಿರುವುದರಿಂದ ಅಭಿಮನ್ಯಮಾನವಾದ ಪ್ರಕೃತಿಯಲ್ಲೂ ಸಹ ದ್ರಷ್ಟೃತ್ವಾದಿಗಳನ್ನು ಹೇಳಬಹುದು. ಆದ್ದರಿಂದ ಪ್ರಕೃತಿಯೇ ಅಂತರ್ಯಾಮಿಯೆಂದು ಹೇಳಿದಾಗ ಯಾವ ಅಡಚಣೆಯಿರುವುದಿಲ್ಲ.

ನಮ್ಮ ಸಿದ್ಧಾಂತದ ಪ್ರಕಾರ ಪ್ರಕೃತಿ ಹಾಗೂ ಅಭಿಮಾನಿಯಾದ ದೇವತೆಯು ಅಂತರ್ಯಾಮಿಯೆಂದು ಪೂರ್ವಪಕ್ಷ ಮಾಡಲಾಗಿದೆ. ಆದರೆ ಅದ್ವೈತಿಗಳು ಹಾಗೂ ರಾಮಾನುಜರು ಇದಕ್ಕೆ ವಿರುದ್ಧವಾಗಿ ಜೀವಸಾಮಾನ್ಯನನ್ನು ಪೂರ್ವಪಕ್ಷಕ್ಕೆ ವಿಷಯನೆನ್ನುತ್ತಾರೆ. ಪ್ರಕೃತಿಯಲ್ಲಿ ಜ್ಞಾನವಿಷಯತ್ವವನ್ನು ಹೇಳುವ ದ್ರಷ್ಟೃತ್ವವು ಕೂಡುವುದಿಲ್ಲವೆಂಬ ಒಂದು ಯುಕ್ತಿ ಬಿಟ್ಟರೆ ಬೇರೆ ಯುಕ್ತಿಯನ್ನು ಅವರು ಹೇಳಲಾರರು.

ಇವರ ವಾದದಲ್ಲಿ ಹುರುಳಿಲ್ಲ. ಸ್ವತಃ ಅವರೇ ಈಕ್ಷತ್ಯಧಿಕರಣದಲ್ಲಿ ಪ್ರಕೃತಿಗೆ ಗೌಣವಾದ ಜ್ಞಾನವಿಷಯತ್ವವನ್ನು ಒಪ್ಪಿದ್ದಾರೆ. ಅಷ್ಟೇ ಅಲ್ಲದೆ ಇದೇ ಅಧಿಕರಣದ ಸಿದ್ಧಾಂತದಲ್ಲಿ ಬ್ರಹ್ಮನಿಗೆ ಆರೋಪಿತವಾದ ಜ್ಞಾನವಿಷಯತ್ವವನ್ನು ಒಪ್ಪಿದ್ದಾರೆ. ಹೀಗೆ ಬೇರೆ ಕಡೆ ಗೌಣವಾದ ದ್ರಷ್ಟೃತ್ವವನ್ನು ಒಪ್ಪುವ ಅವರು ಪ್ರಕೃತಿಯಲ್ಲೇಕೆ ಗೌಣವಾದ ದ್ರಷ್ಟೃತ್ವವನ್ನು

ನಿರಾಕರಿಸುತ್ತಾರೆಂಬುದು ಅರ್ಥವಾಗದ ವಿಚಾರ. ಮತ್ತು ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿದ್ದ ಮೇಲೆ ಸೂತ್ರಕಾರರು 'ನಚ ಸ್ಮಾರ್ತಮ್' ಎಂಬ ಸೂತ್ರದಲ್ಲಿ ಪ್ರಕೃತಿಯನ್ನು ನಿಷೇಧಿಸಿದ್ದೂ ಸಹ ವ್ಯರ್ಥವಾಗುತ್ತದೆ.

ಪ್ರಕೃತಿಯು ಈ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯವಾದಂತೆ ಅಭಿಮಾನಿದೇವತೆಯೂ ಸಹ ಅಂತರ್ಯಾಮಿಯೆಂದು ಪೂರ್ವಪಕ್ಷ ಮಾಡಬಹುದು. ಈ ಪಕ್ಷದಲ್ಲಿ ಪೃಥಿವ್ಯಾದಿಗಳಿಗೆ ಶರೀರತ್ವವನ್ನು ಉಪಪಾದಿಸುವುದು ಸುಲಭವಾಗುತ್ತದೆ. ಆದರೆ ಭಾಮತಿಯಲ್ಲಿ ಒಬ್ಬನೇ ಅಭಿಮಾನಿ ಜೀವನಿಗೆ ಸಮಸ್ತ ಜಗತ್ತಿನ ನಿಯಾಮಕತ್ವವು ಅಸಂಭಾವಿತವಾದ್ದರಿಂದ ಅಭಿಮಾನಿದೇವತೆಯೆಂಬ ಪಕ್ಷವನ್ನು ನಿರಾಕರಿಸಲಾಗಿದೆ.

ಆದರೆ ಅಭಿಮಾನಿದೇವತೆಯನ್ನು ನಿರಾಕರಿಸುವ ಭಾಮತಿಕಾರ ಜೀವಸಾಮಾನ್ಯನನ್ನು ಅಂತರ್ಯಾಮಿಯೆಂದು ಒಪ್ಪಿರುವುದು ಹಾಸ್ಯಾಸ್ಪದ ವಿಚಾರ. ಒಬ್ಬ ಅಭಿಮಾನಿಗೆ ಸಕಲ ಜಗತ್ಪ್ರೇರಕಶಕ್ತಿಯು ಬಾರದಿದ್ದಾಗ ಒಬ್ಬ ಜೀವ ಸಾಮಾನ್ಯನಿಗೆ ಅಂತಹ ಶಕ್ತಿ ಎಲ್ಲಿಂದ ಬರುತ್ತದೆಂದು ತಿಳಿಯುವುದಿಲ್ಲ. ಮತ್ತು ಜೀವಸಾಮಾನ್ಯನು ಅಂತರ್ಯಾಮಿಯೆಂದು ಹೇಳಿದರೆ ಅವನಿಗೆ ಪೃಥಿವೀ, ಪ್ರಾಣ ಮೊದಲಾದವುಗಳ ಸಮುದಾಯವು ಶರೀರವಾಗಿದೆ ಹೊರತು ಕೇವಲ ಪೃಥಿವಿಯಾಗಲೀ, ಕೇವಲ ಪ್ರಾಣಾದಿಗಳಾಗಲೀ ಶರೀರಗಳಾಗಿರುವುದಿಲ್ಲ. ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ಕೇವಲ ಪೃಥಿವ್ಯಾದಿ ಶರೀರತ್ವವು ತಪ್ಪಾಗುತ್ತದೆ. ಆದರೆ ಅಭಿಮಾನಿ ದೇವತೆಯಲ್ಲಿ ಆಯಾ ಭೂತಗಳಿಗೆ ಅಭಿಮಾನಿಯಾಗಿದ್ದಾರೆಂಬ ಕಾರಣದಿಂದಲೇ ಅವುಗಳನ್ನು ಶರೀರವೆಂದು ಹೇಳಬಹುದು.

ಆದ್ದರಿಂದ ಅಭಿಮಾನಿದೇವತೆಗಳೇ ಅಂತರ್ಯಾಮಿಯು ಭಿನ್ನನಾದ್ದರಿಂದ ಅಕ್ಷಿಸ್ಥ ಹೊರತು ವಿಷ್ಣುವಲ್ಲವೆಂಬ ಪೂರ್ವಪಕ್ಷವು ದೃಢವಾಗುತ್ತದೆ. ವಿಷ್ಣುವಿನಲ್ಲಿ ಪೃಥಿವ್ಯಾದಿ ಶರೀರತ್ವವನ್ನು ಯೌಗಿಕವಾಗಿ ಹೇಳಬಹುದು. ಆದರೆ ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ರೂಢ್ಯರ್ಥವನ್ನೇ ಸ್ವೀಕರಿಸಬೇಕು. ಬಾಧಕವಿದ್ದಾಗ ರೂಢ್ಯರ್ಥವನ್ನು ಬಿಡಬಹುದಾದರೂ ಇಲ್ಲಿ ಅಂತಹ ಬಾಧಕಗಳೇನೂ ಕಾಣಿಸುತ್ತಿಲ್ಲ.

ಈ ಎಲ್ಲಾ ಕಾರಣಗಳಿಂದ ಅಂತರ್ಯಾಮಿಯು ಭಿನ್ನನಾದ್ದರಿಂದ ಅಕ್ಷಿಸ್ಥ ಪುರುಷನು ವಿಷ್ಣುವಾಗುವುದಿಲ್ಲ. ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವ ಅಥವಾ ಪ್ರಕೃತಿ ಆಗುತ್ತದೆ. ಅಮೃತತ್ವವೂ ಸಹ ಜೀವ ಅಥವಾ ಪ್ರಕೃತಿಯಲ್ಲಿಯೇ ಉಪಪನ್ನವಾಗುತ್ತದೆ. ಹೀಗಿರುವಾಗ ಹಿಂದಿನ ಅಂತರಾಧಿಕರಣದಲ್ಲಿ ಅಮೃತತ್ವವೆಂಬ ಹೇತುವಿನಿಂದ ಅಕ್ಷಿಸ್ಥನಾದವನು ವಿಷ್ಣುವೇ ಆಗುತ್ತಾನೆಂದು ಸಮರ್ಥಿಸುವುದು ಹೇಗೆ ಯುಕ್ತವಾಗುತ್ತದೆ ? ಇಷ್ಟು ಪೂರ್ವಪಕ್ಷಿಗಳ ಅಭಿಪ್ರಾಯ.

ಅಧಿಕರಣದ ಸಿದ್ಧಾಂತ ಹೀಗಿದೆ - ಸಕಲರಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವನು ಮಹಾವಿಷ್ಣುವೇ ಆಗಿದ್ದಾನೆ. ಯಾವ ಶ್ರುತಿಯು ಹೀಗೆ ಹೇಳುತ್ತಿದೆಯೋ ಅದೇ ಶ್ರುತಿಯಲ್ಲಿ ಕೇಳಿಸುತ್ತಿರುವ ಪೃಥಿವ್ಯಾದ್ಯವಿದಿತತ್ವವು ವಿಷ್ಣುವಿನಲ್ಲಿ ಸುಲಭವಾಗಿ ಬರುತ್ತದೆ. ಪೃಥಿವೀ ಶಬ್ದಕ್ಕೆ ಜಡವೆಂದು ಅರ್ಥವಲ್ಲ. ಹಾಗಾದಲ್ಲಿ ಅಪ್ರಸಕ್ತ ವಿಷಯ ನಿಷೇಧ ಮಾಡಿದಂತಾಗುತ್ತದೆ ಆದ್ದರಿಂದ ಅಭಿಮಾನಿಚೇತನರೆಂಬರ್ಥವನ್ನು ಹೇಳಬೇಕು. ಅಂತಹ ಅಭಿಮಾನಿಚೇತನರಿಂದ ಸಂಪೂರ್ಣವಾಗಿ ತಿಳಿಯಲು ಅಸಮರ್ಥನಾದವನು ಈಶ್ವರನೊಬ್ಬನೇ ಹೊರತು ಪ್ರಕೃತ್ಯಾದಿಗಳಲ್ಲ.

ಅಂತರತ್ವವೂ ಸಹ ವಿಷ್ಣುವಿನ ಧರ್ಮವೇ ಆಗಿದೆ -

ಪೃಥಿವ್ಯಾದ್ಯವಿದಿತತ್ವವು ಪರಮಾತ್ಮನಲ್ಲಿ ಬರುವಂತೆ ಅಂತರತ್ವವೂ ಸಹ ಬರುತ್ತದೆ. ಏಕೆಂದರೆ ಬಾಹ್ಯಪದಾರ್ಥಗಳ ಅಪೇಕ್ಷೆಯಿಲ್ಲದೇ ಯಾರು ವಿಹರಿಸುತ್ತಾರೋ ಅಂತಹವನು 'ಅಂತರಃ' ಎನಿಸುತ್ತಾನೆ. ಮತ್ತು ಅತ್ಯಂತ ಪ್ರಿಯನಾದ್ದರಿಂದಲೂ ಶ್ರೀಹರಿಯು ಅಂತರನೆಂದು ಹೇಳಲ್ಪಟ್ಟಿದ್ದಾನೆ.

ಪೂರ್ವಪಕ್ಷಕ್ಕೆ ಪ್ರಬಲ ಹೇತುವಾಗಿರುವ ಪೃಥಿವ್ಯಾದಿ ಶರೀರತ್ವವೂ ಸಹ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಅಗ್ನಿಯಲ್ಲಿ ಇಂದ್ರ ಶಬ್ದಪ್ರಯೋಗವನ್ನು ಯೌಗಿಕವಾಗಿ ಮತ್ತು ಗೌಣವಾಗಿ ಮಾಡುವಂತೆ ವಿಷ್ಣುವಿನಲ್ಲೂ ಯೌಗಿಕವಾಗಿ ಮತ್ತು ಗೌಣವಾಗಿ ಪೃಥಿವ್ಯಾದಿಶರೀರತ್ವವನ್ನು ಕೂಡಿಸಬೇಕು. ರೂಢ್ಯರ್ಥದಲ್ಲಿ ಬಾಧವಿರುವುದೇ ಇದಕ್ಕೆ ಕಾರಣ.

ಶಾರೀರ ಪದಕ್ಕೆ ಭಾಷ್ಯ ಹಾಗೂ ಟೀಕೆಗಳಲ್ಲಿ ಯೋಗಾರ್ಥವನ್ನಷ್ಟೇ ಹೇಳಲಾಗಿದೆ. ಬೃಹದಾರಣ್ಯಕ ಭಾಷ್ಯದಲ್ಲಿ

ಗೌಣಾರ್ಥವನ್ನು ಹೇಳಲಾಗಿದೆ. ಎರಡೂ ಭಾಷ್ಯಗಳನ್ನು ವಿವಕ್ಷಿಸಿ ಪ್ರಕೃತ ಗ್ರಂಥಕಾರರು ವ್ಯಾಖ್ಯಾನಿಸುತ್ತಿದ್ದಾರೆಂಬ ಅಂಶವನ್ನು ಗಮನಿಸಬೇಕು.

ಪರಮಾತ್ಮನೇ ಅಂತರ್ಯಾಮಿಯೆಂದು ಹೇಳುವುದರಿಂದ 'ಯ ಆತ್ಮನಿ ತಿಷ್ಠನ್' ಎಂಬುದನ್ನು ಸ್ವರಸವಾಗಿ ಅರ್ಥೈಸಿದಂತಾಗುತ್ತದೆ.

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ. ಮೊದಲನೆಯ ಸೂತ್ರವು ಸ್ವಪಕ್ಷದಲ್ಲಿ ಸಾಧಕ ಪ್ರಮಾಣವನ್ನು ಹೇಳಿದೆ.

ಎರಡನೆಯ ಸೂತ್ರವು ಪ್ರಧಾನ ಹಾಗೂ ಜೀವಪಕ್ಷಗಳಲ್ಲಿ ಸಾಧಕವಿಲ್ಲವೆಂದು ಹೇಳಿದೆ. ಏಕೆಂದರೆ ಮೂರನೆಯ ಸೂತ್ರದಲ್ಲಿರುವ 'ಶಾರೀರಶ್ಚ' ಎಂಬ ಪದವು ಎರಡನೆಯ ಸೂತ್ರದಲ್ಲೂ ಅನ್ವಯವಾಗುತ್ತದೆ.

ಮೂರನೆಯ ಸೂತ್ರದಲ್ಲಿ ಜೀವಪಕ್ಷದಲ್ಲಿ ಬಾಧಕವನ್ನು ಹೇಳಲಾಗಿದೆ.

ಬೃಹದಾರಣ್ಯಕ ಭಾಷ್ಯದಲ್ಲಿ ಆತ್ಮಶಬ್ದಕ್ಕೆ ಚತುರ್ಮುಖ ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಜೀವನೆಂಬರ್ಥವನ್ನು ಒಪ್ಪಿ ಜೀವಭೇದದ ವಿಷಯದಲ್ಲಿ ಅದೇ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಿದ್ದಾರೆ. ಇದು ವಿರುದ್ಧವಲ್ಲವೇ? ಎಂದು ಪ್ರಶ್ನಿಸಬಾರದು. ಚತುರ್ಮುಖಬ್ರಹ್ಮನಿಗೆ ನಿಯಾಮಕನಾದ್ದರಿಂದ ಬ್ರಹ್ಮನು ಚತುರ್ಮುಖಬ್ರಹ್ಮನಿಗಿಂತ ಭಿನ್ನನಾಗಿದ್ದಾನೆಂಬ ವಿಷಯವು ಸ್ಪಷ್ಟವಾಗಿ ತಿಳಿಯುತ್ತದೆ. ಚತುರ್ಮುಖನಿಂದಲೇ ಭಿನ್ನನಾದ ಮೇಲೆ ಚತುರ್ಮುಖನಿಂದ ಅಭಿಮನ್ಯಮಾನರಾದ ಸಕಲಜೀವರಿಗಿಂತ ಭಿನ್ನನಾಗಿದ್ದಾನೆಂದು ಇನ್ನೂ ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

'ಅಂತರ' ಶಬ್ದಕ್ಕೆ ಬೃಹದಾರಣ್ಯಕ ಭಾಷ್ಯದಲ್ಲಿ 'ಬಾಹ್ಯವಸ್ತುಗಳ ಅಪೇಕ್ಷೆಯಿಲ್ಲದೇ ಪೀಡಿಸುವಿಕೆ' ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಟೀಕೆಯಲ್ಲಿ ಕೇವಲ ಭೇದವೆಂಬರ್ಥವನ್ನು 'ಅಂತರ' ಶಬ್ದಕ್ಕೆ ಹೇಳಿದ್ದಾರೆ. ಇದರ ವಿರೋಧ ಬರುತ್ತದಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. 'ಆತ್ಮನೋ ಅಂತರಃ' ಎಂಬ ಶ್ರುತಿಯಲ್ಲಿರುವ ಅಂತರ ಶಬ್ದಕ್ಕೆ ಭೇದವೆಂಬರ್ಥವನ್ನು ಟೀಕೆಯಲ್ಲಿ ವಿವಕ್ಷಿಸಲಾಗಿದೆ. ಆದರೆ ಬೃಹದಾರಣ್ಯಕ ಭಾಷ್ಯದಲ್ಲಿ 'ಆತ್ಮನಾಂ ಅಂತರಃ' ಎಂಬಲ್ಲಿರುವ ಅಂತರ ಶಬ್ದವನ್ನು ಸ್ವೀಕರಿಸಿ ಅಂತಃಸ್ಥಿತ್ವ ರಮಣವೆಂಬ ಅರ್ಥವನ್ನು ಹೇಳಿದ್ದಾರೆ. ಆದ್ದರಿಂದ ಪರಸ್ಪರ ವಿರೋಧವಿರುವುದಿಲ್ಲ.

ಬೃಹದಾರಣ್ಯಕದಲ್ಲಿ ಮೂರು ಪ್ರಕರಣಗಳಿವೆ – 1. ಅಭಿಮಾನಿ ದೇವತಾ ಪ್ರಕರಣ, 2. ಅಧಿದೈವ ಪ್ರಕರಣ, 3. ಅಧ್ಯಾತ್ಮ ಪ್ರಕರಣ ಎಂದು. ಈ ಮೂರು ಪ್ರಕರಣಗಳಲ್ಲಿಯೂ ಅಂತರ್ಯಾಮಿಯಾಗಿ ಹೇಳಲ್ಪಟ್ಟವನು ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂಬ ವಿಚಾರವು ನಿರ್ಧಾರವಾಯಿತು.

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ –

ಬೃಹದಾರಣ್ಯಕೋಪನಿಷತ್ತಿನಲ್ಲಿರುವ 'ಯಃ ಪೃಥಿವ್ಯಾಂ ತಿಷ್ಠನ್' ಎಂಬ ವಾಕ್ಯವನ್ನೇ ಅದ್ವೈತಿಗಳೂ ಸಹ ವಿಷಯವಾಕ್ಯವೆಂದು ಹೇಳುತ್ತಾರೆ. ಈ ವಾಕ್ಯದಲ್ಲಿ ಲೋಕ, ವೇದ, ಯಜ್ಞ, ಪ್ರಾಣಿ ಮತ್ತು ಆತ್ಮ ಇವುಗಳ ಒಳಗಡೆ ನಿಯಾಮಕನಾಗಿ ನೆಲೆಸಿರುವ ವ್ಯಕ್ತಿಯನ್ನು ಪ್ರಸ್ತಾಪ ಮಾಡಲಾಗಿದೆ. ಈ ವ್ಯಕ್ತಿಯು ಅದೃಷ್ಟದ ಮೂಲಕ ಜೀವನಾಗಬಹುದು. ಅಥವಾ ಯೋಗಿಪುರುಷನೂ ಆಗಬಹುದು. ಅಥವಾ ದೇವತೆಗಳಾಗಬಹುದು. ಆದರೆ ಶರೀರವಿಲ್ಲದ ಬ್ರಹ್ಮನು ಅಂತರ್ಯಾಮಿಯಾಗಲು ಸಾಧ್ಯವಿಲ್ಲ. ನಿಯಾಮಕನೂ ಸಹ ಆಗಲಾರನು. ಇಷ್ಟು ಪೂರ್ವಪಕ್ಷ.

ಸರ್ವನಿಯಾಮಕತ್ವವು ಬ್ರಹ್ಮನ ಧರ್ಮವಾಗಿದೆ. ಅವನಿಂದ ನಿಯಮ್ಯವಾದ ಪ್ರಪಂಚವೇ ಶರೀರವಾಗಿದೆ. ಅಥವಾ ತನ್ನಲ್ಲಿರುವ ಮಾಯಾಶಕ್ತಿಯಿಂದ ಶರೀರದ ಅಪೇಕ್ಷೆ ಇಲ್ಲದೆಯೂ ಪ್ರಪಂಚವನ್ನು ನಿಯಮನ ಮಾಡುವ ಸಾಮರ್ಥ್ಯ ಅವನಿಗಿದೆ. ಆತ್ಮನಿಗೆ ಒಬ್ಬ ನಿಯಾಮಕನಿರುವುದಾದರೆ ಅವನಿಗೆ ಮತ್ತೊಬ್ಬ ನಿಯಾಮಕನು ಇರಬೇಕಾಗುತ್ತದೆಂದು ಅನವಸ್ಥಾದೋಷಕ್ಕೆ ಅವಕಾಶವಿಲ್ಲ. ನಿಯಮ್ಯನಾದ ಜೀವಾತ್ಮನು ಮತ್ತು ನಿಯಾಮಕನಾದ ಪರಮಾತ್ಮನು ಒಬ್ಬನೇ

ಆಗಿದ್ದಾನೆ. ಇವರಿಬ್ಬರಿಗೆ ತಾತ್ವಿಕವಾದ ಭೇದವಿರುವುದಿಲ್ಲ. ಮತ್ತು ಈ ಪ್ರಕರಣದಲ್ಲಿ 'ಏಷ ತ ಆತ್ಮಾ' ಎಂಬ ಶ್ರುತಿಯಲ್ಲಿ ಆತ್ಮತ್ವ, ಅಮೃತತ್ವ ಮೊದಲಾದ ಧರ್ಮಗಳನ್ನು ಅದೃಶ್ಯತ್ವಾದಿಧರ್ಮಗಳನ್ನು ಹೇಳಲಾಗಿದೆ. ಇವೆಲ್ಲವೂ ಬ್ರಹ್ಮನ ಅಸಾಧಾರಣಧರ್ಮವಾದ್ದರಿಂದ ಬ್ರಹ್ಮನೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತ.

ಈ ಅಧಿಕರಣ ಶರೀರವು ತಪ್ಪು. ಅಜ್ಞಾನವೇ ಕಲ್ಪಿತವಾದದ್ದು. ಅಜ್ಞಾನ ಕಲ್ಪಿತವಾದ ಜಗತ್ತು ಬ್ರಹ್ಮನ ಶರೀರವಾದರೆ ಶುಕ್ತಿಯ ಅಜ್ಞಾನದಿಂದ ಕಲ್ಪಿತವಾದ ರಜತವೂ ಸಹ ಶುಕ್ತಿಯ ಶರೀರವಾಗಬೇಕಾಗುತ್ತದೆ. ಮತ್ತು ನಮ್ಮಂತೆ ಬ್ರಹ್ಮನೂ ಸಹ ಸಂಸಾರಿಯಾಗಬೇಕಾಗುತ್ತದೆ. ಜಗತ್ತನ್ನು ಸೃಷ್ಟಿಮಾಡುವ ಮೊದಲು ಶರೀರ ರಹಿತನಾಗಿ ಇದ್ದಂತೆ ಜಗತ್ತನ್ನು ಸೃಷ್ಟಿಸಿದ ಮೇಲೂ ಶರೀರರಹಿತನಾಗಿಯೇ ಇರಬಹುದಲ್ಲವೇ?

ರೋಗಗ್ರಸ್ಥನಾದ ವ್ಯಕ್ತಿಗೆ ರೋಗವನ್ನು ಪರಿಹರಿಸಲು ಕಾಲ್ಪನಿಕವಾದ ಔಷಧಿಯನ್ನು ನೀಡುವುದರಿಂದ ಅವನ ರೋಗವು ಪರಿಹಾರವಾಗುವುದಿಲ್ಲ. ಅದರಂತೆ ಶರೀರ ಇಲ್ಲದ ವ್ಯಕ್ತಿಗೆ ನಿಯಮನ ಮಾಡಲು ಸಾಧ್ಯವಿಲ್ಲವೆಂದು ಹೇಳಿದಾಗ ಗೌಣವಾದ ಶರೀರವನ್ನು ಒಪ್ಪುವುದರಿಂದೇನೂ ಪ್ರಯೋಜನವಿಲ್ಲ. ಶುದ್ಧಬ್ರಹ್ಮನನ್ನು ನಿಯಾಮಕನೆಂದು ಹೇಳಲು ಸಾಧ್ಯವಿಲ್ಲ. ವಿಶಿಷ್ಟಬ್ರಹ್ಮನನ್ನು ಅವಿದ್ಯಾವಿಷಯನೆಂದು ಹೇಳಲು ಸಾಧ್ಯವಿಲ್ಲ. ಒಟ್ಟಾರೆ ಅದ್ವೈತಸಿದ್ಧಾಂತದಲ್ಲಿ ಸಿಲುಕಿಕೊಂಡಿರುವ ಇಬ್ಬರು ಬ್ರಹ್ಮರಿಗೂ ಏನೂ ಕೆಲಸವಿಲ್ಲ.

ಮತ್ತು ಅದ್ವೈತಿಗಳು ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ನಿಯಮ್ಯನಾದ ಜೀವನಿಗೂ ನಿಯಾಮಕನಾದ ಬ್ರಹ್ಮನಿಗೂ ಅಭೇದವನ್ನು ಒಪ್ಪುವದರ ಮೂಲಕ ಅನವಸ್ಥಾ ದೋಷವನ್ನು ಪರಿಹರಿಸಿದ್ದಾರೆ. ಆದರೆ ಜೀವಾದಿಗಳಿಂದ ಅಭೇದವಿದ್ದ ಮೇಲೆ ಅವರನ್ನು ಬ್ರಹ್ಮನು ಹೇಗೆ ತಾನೇ ನಿಯಮನ ಮಾಡುತ್ತಾನೆ. ಶ್ರುತಿ, ಸೂತ್ರಗಳಲ್ಲೆಲ್ಲಾ ಭೇದವೇ ಹೇಳಲ್ಪಟ್ಟಿರುವಾಗ ಅಭೇದದ ಮಾರ್ಗಕ್ಕೆ ಏಕೆ ಶರಣಾಗುತ್ತಾರೆ. ಇನ್ನು ಕಾಲ್ಪನಿಕ ಭೇದವನ್ನು ಒಪ್ಪುವ ಮೂಲಕ ಕಣ್ಕೊರೆಸುವಂತಹ ಪ್ರಯತ್ನವು ವ್ಯರ್ಥ. ಯಾವರೀತಿಯಾಗಿ ಜೀವಬ್ರಹ್ಮರಿಗೆ ಕಾಲ್ಪನಿಕ ಭೇದವನ್ನು ಒಪ್ಪುತ್ತಾರೋ ಅದರಂತೆ ಈಶ್ವರನನ್ನು ನಿಯಮನ ಮಾಡುವಂತಹ ಕಾಲ್ಪನಿಕ ಭೇದವುಳ್ಳ ಮತ್ತೊಬ್ಬ ವ್ಯಕ್ತಿಯೂ ಇರಬಹುದೆಂದು ಆಪಾದಿಸುತ್ತೇವೆ. ಆದ್ದರಿಂದ ಅದ್ವೈತಿಗಳು ಭಗವಂತನಲ್ಲಿ ಸ್ವಾತಂತ್ರ್ಯವೆಂಬ ಗುಣವನ್ನು ಒಪ್ಪಿಯೇ ತಮಗೆ ಅಂಟಿಕೊಂಡ ದೋಷಗಳನ್ನೆಲ್ಲಾ ಜಾಡಿಸಿಕೊಳ್ಳಬೇಕು. ಬೇರೆ ಉಪಾಯವಿಲ್ಲ. ಅನವಸ್ಥಾ ಪರಿಹಾರಕ್ಕಾಗಿ ಜೀವಬ್ರಹ್ಮರಿಗೆ ಅಭೇದವನ್ನು ಒಪ್ಪುವುದಕ್ಕಿಂತ ಜಡವಾದ ಶರೀರೇಂದ್ರಿಯಾದಿಗಳಿಗೂ ಜೀವನಿಗೂ ಅಭೇದವನ್ನು ಒಪ್ಪಿದ್ದರೆ ಸ್ವಲ್ಪವಾದರೂ ಬುದ್ಧಿವಂತಿಕೆಯನ್ನು ತೋರಿಸಿಕೊಂಡಂತಾಗುತ್ತಿತ್ತು. ಜಡಪದಾರ್ಥಗಳೊಟ್ಟಿಗೆ ಅಭೇದವು ಪ್ರಮಾಣ ವಿರುದ್ಧವೆಂದು ಹೇಳುವುದಾದರೆ; 'ಭೇದೇನೈನಮಧೀಯತೇ' ಇತ್ಯಾದಿ ಸೂತ್ರಗಳಲ್ಲಿ ಜೀವಬ್ರಹ್ಮರ ಭೇದವನ್ನೂ ಸಹ ನಿರಾಕರಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಜಗತ್ತು ಬ್ರಹ್ಮನ ಅವಿದ್ಯಾಕಲ್ಪಿತವಾದ್ದರಿಂದ ಅವನ ಶರೀರವಾಗಿದೆಯೆಂಬ ಸಿದ್ಧಾಂತವು ಅತ್ಯಂತ ಅಯುಕ್ತವಾಗಿದೆ.

ಅನವಸ್ಥಾದೋಷವನ್ನು ಪರಿಹರಿಸುವುದಕ್ಕಾಗಿ ನಿಯಾಮಕರಿಗೆ ಭೇದವನ್ನೇನೂ ಒಪ್ಪಬೇಕಾಗಿಲ್ಲ. ಒಂದು ಶರೀರದಲ್ಲಿ ಎರಡು ಪ್ರತ್ಯಕ್ಚೈತನ್ಯಗಳನ್ನು ಒಪ್ಪಲು ಸಾಧ್ಯವಿಲ್ಲದ ಕಾರಣ ಅವರಿಬ್ಬರಿಗೆ ಐಕ್ಯವನ್ನು ಅನಿವಾರ್ಯವಾಗಿ ಹೇಳಬೇಕೆಂದು ಅದ್ವೈತಿಗಳು ಆಕ್ಷೇಪಿಸುತ್ತಾರೆ. ಆದರೆ ಇದನ್ನು ಒಂದೇ ಶರೀರದಲ್ಲಿ ಜೀವಬ್ರಹ್ಮರಿದ್ದಾರೆ. ಅನೇಕ ಅಭಿಮಾನಿದೇವತೆಗಳೂ ಇದ್ದಾರೆಂದು ಹೇಳುವ ದ್ವೈತಿಗಳಿಗೆ ಮನದಟ್ಟಾಗಿಸಲು ಅದ್ವೈತಿಗಳಿಗೆ ಸಾಧ್ಯವಿಲ್ಲ. ಒಂದು ಶರೀರದಲ್ಲಿ ಪಿಶಾಚಿಯು ಸೇರಿಕೊಂಡಾಗ ಇಬ್ಬರು ಚೇತನರಿರುವುದು ನಮ್ಮ ಅನುಭವದಲ್ಲಿ ಕಾಣಸುತ್ತಿದೆ. ಐತರೇಯೋಪನಿಷತ್ತಿನಲ್ಲಂತೂ ಸ್ಪಷ್ಟವಾಗಿ ''ಹಂತಾಸ್ಮಾತ್ ಶರೀರಾತ್'' ಇತ್ಯಾದಿ ವಾಕ್ಯದಿಂದ ಅನೇಕ ಅಭಿಮಾನಿದೇವತೆಗಳು ಒಂದೇ ಶರೀರದಲ್ಲಿ ಪ್ರವೇಶಿಸಿದ್ದಾರೆಂಬುದು ಕಾಣಸುತ್ತಿದೆ. ಹೀಗೆ ಹೇಳಿದಾಗ ಏನೂ ಬಾಧಕವಿಲ್ಲ. 'ನಾನ್ಯೋಽತೋಽಸ್ತಿ ದ್ರಷ್ಟಾ'' ಎಂಬ ಶ್ರುತಿಯು ಆಪಾತತಃ ಮತ್ತೊಬ್ಬನಿಲ್ಲ ಎಂದು ಹೇಳಿದಂತೆ ಕಾಣಸಬಹುದು. ಆದರೆ ಸ್ವತಂತ್ರನಾದ ಮತ್ತೊಬ್ಬ ದ್ರಷ್ಟೃಪುರುಷನಿಲ್ಲವೆಂದೇ ಆ ಶ್ರುತಿಯ ಅಭಿಪ್ರಾಯ.

ಗೌಣಾರ್ಥವನ್ನು ಹೇಳಲಾಗಿದೆ. ಎರಡೂ ಭಾಷ್ಯಗಳನ್ನು ವಿವಕ್ಷಿಸಿ ಪ್ರಕೃತ ಗ್ರಂಥಕಾರರು ವ್ಯಾಖ್ಯಾನಿಸುತ್ತಿದ್ದಾರೆಂಬ ಅಂಶವನ್ನು ಗಮನಿಸಬೇಕು.

ಪರಮಾತ್ಮನೇ ಅಂತರ್ಯಾಮಿಯೆಂದು ಹೇಳುವುದರಿಂದ 'ಯ ಆತ್ಮನಿ ತಿಷ್ಠನ್' ಎಂಬುದನ್ನು ಸ್ವರಸವಾಗಿ ಅರ್ಥೈಸಿದಂತಾಗುತ್ತದೆ.

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ. ಮೊದಲನೆಯ ಸೂತ್ರವು ಸ್ವಪಕ್ಷದಲ್ಲಿ ಸಾಧಕ ಪ್ರಮಾಣವನ್ನು ಹೇಳಿದೆ.

ಎರಡನೆಯ ಸೂತ್ರವು ಪ್ರಧಾನ ಹಾಗೂ ಜೀವಪಕ್ಷಗಳಲ್ಲಿ ಸಾಧಕವಿಲ್ಲವೆಂದು ಹೇಳಿದೆ. ಏಕೆಂದರೆ ಮೂರನೆಯ ಸೂತ್ರದಲ್ಲಿರುವ 'ಶಾರೀರಶ್ಚ' ಎಂಬ ಪದವು ಎರಡನೆಯ ಸೂತ್ರದಲ್ಲೂ ಅನ್ವಯವಾಗುತ್ತದೆ.

ಮೂರನೆಯ ಸೂತ್ರದಲ್ಲಿ ಜೀವಪಕ್ಷದಲ್ಲಿ ಬಾಧಕವನ್ನು ಹೇಳಲಾಗಿದೆ.

ಬೃಹದಾರಣ್ಯಕ ಭಾಷ್ಯದಲ್ಲಿ ಆತ್ಮಶಬ್ದಕ್ಕೆ ಚತುರ್ಮುಖ ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಜೀವನೆಂಬರ್ಥವನ್ನು ಒಪ್ಪಿ ಜೀವಭೇದದ ವಿಷಯದಲ್ಲಿ ಅದೇ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಿದ್ದಾರೆ. ಇದು ವಿರುದ್ಧವಲ್ಲವೇ? ಎಂದು ಪ್ರಶ್ನಿಸಬಾರದು. ಚತುರ್ಮುಖಬ್ರಹ್ಮನಿಗೆ ನಿಯಾಮಕನಾದ್ದರಿಂದ ಬ್ರಹ್ಮನು ಚತುರ್ಮುಖಬ್ರಹ್ಮನಿಗಿಂತ ಭಿನ್ನನಾಗಿದ್ದಾನೆಂಬ ವಿಷಯವು ಸ್ಪಷ್ಟವಾಗಿ ತಿಳಿಯುತ್ತದೆ. ಚತುರ್ಮುಖನಿಂದಲೇ ಭಿನ್ನನಾದ ಮೇಲೆ ಚತುರ್ಮುಖನಿಂದ ಅಭಿಮನ್ಯಮಾನರಾದ ಸಕಲಜೀವರಿಗಿಂತ ಭಿನ್ನನಾಗಿದ್ದಾನೆಂದು ಇನ್ನೂ ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

'ಅಂತರ' ಶಬ್ದಕ್ಕೆ ಬೃಹದಾರಣ್ಯಕ ಭಾಷ್ಯದಲ್ಲಿ 'ಬಾಹ್ಯವಸ್ತುಗಳ ಅಪೇಕ್ಷೆಯಿಲ್ಲದೇ ಪೀಡಿಸುವಿಕೆ' ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಟೀಕೆಯಲ್ಲಿ ಕೇವಲ ಭೇದವೆಂಬರ್ಥವನ್ನು 'ಅಂತರ' ಶಬ್ದಕ್ಕೆ ಹೇಳಿದ್ದಾರೆ. ಇದರ ವಿರೋಧ ಬರುತ್ತದಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. 'ಆತ್ಮನೋ ಅಂತರಃ' ಎಂಬ ಶ್ರುತಿಯಲ್ಲಿರುವ ಅಂತರ ಶಬ್ದಕ್ಕೆ ಭೇದವೆಂಬರ್ಥವನ್ನು ಟೀಕೆಯಲ್ಲಿ ವಿವಕ್ಷಿಸಲಾಗಿದೆ. ಆದರೆ ಬೃಹದಾರಣ್ಯಕ ಭಾಷ್ಯದಲ್ಲಿ 'ಆತ್ಮಾನಾಂ ಅಂತರಃ' ಎಂಬಲ್ಲಿರುವ ಅಂತರ ಶಬ್ದವನ್ನು ಸ್ವೀಕರಿಸಿ ಅಂತಃಸ್ಥಿತ್ವ ರಮಣವೆಂಬ ಅರ್ಥವನ್ನು ಹೇಳಿದ್ದಾರೆ. ಆದ್ದರಿಂದ ಪರಸ್ಪರ ವಿರೋಧವಿರುವುದಿಲ್ಲ.

ಬೃಹದಾರಣ್ಯಕದಲ್ಲಿ ಮೂರು ಪ್ರಕರಣಗಳಿವೆ – 1. ಅಭಿಮಾನಿ ದೇವತಾ ಪ್ರಕರಣ, 2. ಅಧಿದೈವ ಪ್ರಕರಣ, 3. ಅಧ್ಯಾತ್ಮ ಪ್ರಕರಣ ಎಂದು. ಈ ಮೂರು ಪ್ರಕರಣಗಳಲ್ಲಿಯೂ ಅಂತರ್ಯಾಮಿಯಾಗಿ ಹೇಳಲ್ಪಟ್ಟವನು ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂಬ ವಿಚಾರವು ನಿರ್ಧಾರವಾಯಿತು.

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ –

ಬೃಹದಾರಣ್ಯಕೋಪನಿಷತ್ತಿನಲ್ಲಿರುವ 'ಯಃ ಪೃಥಿವ್ಯಾಂ ತಿಷ್ಠನ್' ಎಂಬ ವಾಕ್ಯವನ್ನೇ ಅದ್ವೈತಿಗಳೂ ಸಹ ವಿಷಯವಾಕ್ಯವೆಂದು ಹೇಳುತ್ತಾರೆ. ಈ ವಾಕ್ಯದಲ್ಲಿ ಲೋಕ, ವೇದ, ಯಜ್ಞ, ಪ್ರಾಣ ಮತ್ತು ಆತ್ಮ ಇವುಗಳ ಒಳಗಡೆ ನಿಯಾಮಕನಾಗಿ ನೆಲೆಸಿರುವ ವ್ಯಕ್ತಿಯನ್ನು ಪ್ರಸ್ತಾಪ ಮಾಡಲಾಗಿದೆ. ಈ ವ್ಯಕ್ತಿಯು ಅದೃಷ್ಟದ ಮೂಲಕ ಜೀವನಾಗಬಹುದು. ಅಥವಾ ಯೋಗಿಪುರುಷನೂ ಆಗಬಹುದು. ಅಥವಾ ದೇವತೆಗಳಾಗಬಹುದು. ಆದರೆ ಶರೀರವಿಲ್ಲದ ಬ್ರಹ್ಮನು ಅಂತರ್ಯಾಮಿಯಾಗಲು ಸಾಧ್ಯವಿಲ್ಲ. ನಿಯಾಮಕನೂ ಸಹ ಆಗಲಾರನು. ಇಷ್ಟು ಪೂರ್ವಪಕ್ಷ.

ಸರ್ವನಿಯಾಮಕತ್ವವು ಬ್ರಹ್ಮನ ಧರ್ಮವಾಗಿದೆ. ಅವನಿಂದ ನಿಯಮ್ಯವಾದ ಪ್ರಪಂಚವೇ ಶರೀರವಾಗಿದೆ. ಅಥವಾ ತನ್ನಲ್ಲಿರುವ ಮಾಯಾಶಕ್ತಿಯಿಂದ ಶರೀರದ ಅಪೇಕ್ಷೆ ಇಲ್ಲದೆಯೂ ಪ್ರಪಂಚವನ್ನು ನಿಯಮನ ಮಾಡುವ ಸಾಮರ್ಥ್ಯ ಅವನಿಗಿದೆ. ಆತ್ಮನಿಗೆ ಒಬ್ಬ ನಿಯಾಮಕನಿರುವುದಾದರೆ ಅವನಿಗೆ ಮತ್ತೊಬ್ಬ ನಿಯಾಮಕನು ಇರಬೇಕಾಗುತ್ತದೆಂದು ಅನವಸ್ಥಾದೋಷಕ್ಕೆ ಅವಕಾಶವಿಲ್ಲ. ನಿಯಮ್ಯನಾದ ಜೀವಾತ್ಮನು ಮತ್ತು ನಿಯಾಮಕನಾದ ಪರಮಾತ್ಮನು ಒಬ್ಬನೇ

ಆಗಿದ್ದಾನೆ. ಇವರಿಬ್ಬರಿಗೆ ತಾತ್ವಿಕವಾದ ಭೇದವಿರುವುದಿಲ್ಲ. ಮತ್ತು ಈ ಪ್ರಕರಣದಲ್ಲಿ 'ಏಷ ತ ಆತ್ಮಾ' ಎಂಬ ಶ್ರುತಿಯಲ್ಲಿ ಆತ್ಮತ್ವ, ಅಮೃತತ್ವ ಮೊದಲಾದ ಧರ್ಮಗಳನ್ನು ಅದೃಶ್ಯತ್ವಾದಿಧರ್ಮಗಳನ್ನು ಹೇಳಲಾಗಿದೆ. ಇವೆಲ್ಲವೂ ಬ್ರಹ್ಮನ ಅಸಾಧಾರಣಧರ್ಮವಾದ್ದರಿಂದ ಬ್ರಹ್ಮನೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತ.

ಈ ಅಧಿಕರಣ ಶರೀರವು ತಪ್ಪು. ಅಜ್ಞಾನವೇ ಕಲ್ಪಿತವಾದದ್ದು. ಅಜ್ಞಾನ ಕಲ್ಪಿತವಾದ ಜಗತ್ತು ಬ್ರಹ್ಮನ ಶರೀರವಾದರೆ ಶುಕ್ತಿಯ ಅಜ್ಞಾನದಿಂದ ಕಲ್ಪಿತವಾದ ರಜತವೂ ಸಹ ಶುಕ್ತಿಯ ಶರೀರವಾಗಬೇಕಾಗುತ್ತದೆ. ಮತ್ತು ನಮ್ಮಂತೆ ಬ್ರಹ್ಮನೂ ಸಹ ಸಂಸಾರಿಯಾಗಬೇಕಾಗುತ್ತದೆ. ಜಗತ್ತನ್ನು ಸೃಷ್ಟಿಮಾಡುವ ಮೊದಲು ಶರೀರ ರಹಿತನಾಗಿ ಇದ್ದಂತೆ ಜಗತ್ತನ್ನು ಸೃಷ್ಟಿಸಿದ ಮೇಲೂ ಶರೀರರಹಿತನಾಗಿಯೇ ಇರಬಹುದಲ್ಲವೇ?

ರೋಗಗ್ರಸ್ಥನಾದ ವ್ಯಕ್ತಿಗೆ ರೋಗವನ್ನು ಪರಿಹರಿಸಲು ಕಾಲ್ಪನಿಕವಾದ ಔಷಧಿಯನ್ನು ನೀಡುವುದರಿಂದ ಅವನ ರೋಗವು ಪರಿಹಾರವಾಗುವುದಿಲ್ಲ. ಅದರಂತೆ ಶರೀರ ಇಲ್ಲದ ವ್ಯಕ್ತಿಗೆ ನಿಯಮನ ಮಾಡಲು ಸಾಧ್ಯವಿಲ್ಲವೆಂದು ಹೇಳಿದಾಗ ಗೌಣವಾದ ಶರೀರವನ್ನು ಒಪ್ಪುವುದರಿಂದೇನೂ ಪ್ರಯೋಜನವಿಲ್ಲ. ಶುದ್ಧಬ್ರಹ್ಮನನ್ನು ನಿಯಾಮಕನೆಂದು ಹೇಳಲು ಸಾಧ್ಯವಿಲ್ಲ. ವಿಶಿಷ್ಟಬ್ರಹ್ಮನನ್ನು ಅವಿದ್ಯಾವಿಷಯನೆಂದು ಹೇಳಲು ಸಾಧ್ಯವಿಲ್ಲ. ಒಟ್ಟಾರೆ ಅದ್ವೈತಸಿದ್ಧಾಂತದಲ್ಲಿ ಸಿಲುಕಿಕೊಂಡಿರುವ ಇಬ್ಬರು ಬ್ರಹ್ಮರಿಗೂ ಏನೂ ಕೆಲಸವಿಲ್ಲ.

ಮತ್ತು ಅದ್ವೈತಿಗಳು ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ನಿಯಮ್ಯನಾದ ಜೀವನಿಗೂ ನಿಯಾಮಕನಾದ ಬ್ರಹ್ಮನಿಗೂ ಅಭೇದವನ್ನು ಒಪ್ಪುವದರ ಮೂಲಕ ಅನವಸ್ಥಾ ದೋಷವನ್ನು ಪರಿಹರಿಸಿದ್ದಾರೆ. ಆದರೆ ಜೀವಾದಿಗಳಿಂದ ಅಭೇದವಿದ್ದ ಮೇಲೆ ಅವರನ್ನು ಬ್ರಹ್ಮನು ಹೇಗೆ ತಾನೇ ನಿಯಮನ ಮಾಡುತ್ತಾನೆ. ಶ್ರುತಿ, ಸೂತ್ರಗಳಲ್ಲೆಲ್ಲಾ ಭೇದವೇ ಹೇಳಲ್ಪಟ್ಟಿರುವಾಗ ಅಭೇದದ ಮಾರ್ಗಕ್ಕೆ ಏಕೆ ಶರಣಾಗುತ್ತಾರೆ. ಇನ್ನು ಕಾಲ್ಪನಿಕ ಭೇದವನ್ನು ಒಪ್ಪುವ ಮೂಲಕ ಕಣ್ಕೊರೆಸುವಂತಹ ಪ್ರಯತ್ನವು ವ್ಯರ್ಥ. ಯಾವರೀತಿಯಾಗಿ ಜೀವಬ್ರಹ್ಮರಿಗೆ ಕಾಲ್ಪನಿಕ ಭೇದವನ್ನು ಒಪ್ಪುತ್ತಾರೋ ಅದರಂತೆ ಈಶ್ವರನನ್ನು ನಿಯಮನ ಮಾಡುವಂತಹ ಕಾಲ್ಪನಿಕ ಭೇದವುಳ್ಳ ಮತ್ತೊಬ್ಬ ವ್ಯಕ್ತಿಯೂ ಇರಬಹುದೆಂದು ಆಪಾದಿಸುತ್ತೇವೆ. ಆದ್ದರಿಂದ ಅದ್ವೈತಿಗಳು ಭಗವಂತನಲ್ಲಿ ಸ್ವಾತಂತ್ರ್ಯವೆಂಬ ಗುಣವನ್ನು ಒಪ್ಪಿಯೇ ತಮಗೆ ಅಂಟಿಕೊಂಡ ದೋಷಗಳನ್ನೆಲ್ಲಾ ಜಾಡಿಸಿಕೊಳ್ಳಬೇಕು. ಬೇರೆ ಉಪಾಯವಿಲ್ಲ. ಅನವಸ್ಥಾ ಪರಿಹಾರಕ್ಕಾಗಿ ಜೀವಬ್ರಹ್ಮರಿಗೆ ಅಭೇದವನ್ನು ಒಪ್ಪುವುದಕ್ಕಿಂತ ಜಡವಾದ ಶರೀರೇಂದ್ರಿಯಾದಿಗಳಿಗೂ ಜೀವನಿಗೂ ಅಭೇದವನ್ನು ಒಪ್ಪಿದ್ದರೆ ಸ್ವಲ್ಪವಾದರೂ ಬುದ್ಧಿವಂತಿಕೆಯನ್ನು ತೋರಿಸಿಕೊಂಡಂತಾಗುತ್ತಿತ್ತು. ಜಡಪದಾರ್ಥಗಳೊಟ್ಟಿಗೆ ಅಭೇದವು ಪ್ರಮಾಣ ವಿರುದ್ಧವೆಂದು ಹೇಳುವುದಾದರೆ; 'ಭೇದೇನೈನಮಧೀಯತೇ' ಇತ್ಯಾದಿ ಸೂತ್ರಗಳಲ್ಲಿ ಜೀವಬ್ರಹ್ಮರ ಭೇದವನ್ನೂ ಸಹ ನಿರಾಕರಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಜಗತ್ತು ಬ್ರಹ್ಮನ ಅವಿದ್ಯಾಕಲ್ಪಿತವಾದ್ದರಿಂದ ಅವನ ಶರೀರವಾಗಿದೆಯೆಂಬ ಸಿದ್ಧಾಂತವು ಅತ್ಯಂತ ಅಯುಕ್ತವಾಗಿದೆ.

ಅನವಸ್ಥಾದೋಷವನ್ನು ಪರಿಹರಿಸುವುದಕ್ಕಾಗಿ ನಿಯಾಮಕರಿಗೆ ಭೇದವನ್ನೇನೂ ಒಪ್ಪಬೇಕಾಗಿಲ್ಲ. ಒಂದು ಶರೀರದಲ್ಲಿ ಎರಡು ಪ್ರತ್ಯಕ್ಚೈತನ್ಯಗಳನ್ನು ಒಪ್ಪಲು ಸಾಧ್ಯವಿಲ್ಲದ ಕಾರಣ ಅವರಿಬ್ಬರಿಗೆ ಐಕ್ಯವನ್ನು ಅನಿವಾರ್ಯವಾಗಿ ಹೇಳಬೇಕೆಂದು ಅದ್ವೈತಿಗಳು ಆಕ್ಷೇಪಿಸುತ್ತಾರೆ. ಆದರೆ ಇದನ್ನು ಒಂದೇ ಶರೀರದಲ್ಲಿ ಜೀವಬ್ರಹ್ಮರಿದ್ದಾರೆ. ಅನೇಕ ಅಭಿಮಾನಿದೇವತೆಗಳೂ ಇದ್ದಾರೆಂದು ಹೇಳುವ ದ್ವೈತಿಗಳಿಗೆ ಮನದಟ್ಟಾಗಿಸಲು ಅದ್ವೈತಿಗಳಿಗೆ ಸಾಧ್ಯವಿಲ್ಲ. ಒಂದು ಶರೀರದಲ್ಲಿ ಪಿಶಾಚಿಯು ಸೇರಿಕೊಂಡಾಗ ಇಬ್ಬರು ಚೇತನರಿರುವುದು ನಮ್ಮ ಅನುಭವದಲ್ಲಿ ಕಾಣಿಸುತ್ತಿದೆ. ಐತರೇಯೋಪನಿಷತ್ತಿನಲ್ಲಂತೂ ಸ್ಪಷ್ಟವಾಗಿ ''ಹಂತಾಸ್ಮಾತ್ ಶರೀರಾತ್'' ಇತ್ಯಾದಿ ವಾಕ್ಯದಿಂದ ಅನೇಕ ಅಭಿಮಾನಿದೇವತೆಗಳು ಒಂದೇ ಶರೀರದಲ್ಲಿ ಪ್ರವೇಶಿಸಿದ್ದಾರೆಂಬುದು ಕಾಣಿಸುತ್ತಿದೆ. ಹೀಗೆ ಹೇಳಿದಾಗ ಏನೂ ಬಾಧಕವಿಲ್ಲ. 'ನಾನ್ಯೋಽತೋಽಸ್ತಿ ದ್ರಷ್ಟಾ' ಎಂಬ ಶ್ರುತಿಯು ಆಪಾತತಃ ಮತ್ತೊಬ್ಬನಿಲ್ಲ ಎಂದು ಹೇಳಿದಂತೆ ಕಾಣಿಸಬಹುದು. ಆದರೆ ಸ್ವತಂತ್ರನಾದ ಮತ್ತೊಬ್ಬ ದ್ರಷ್ಟೃಪುರುಷನಿಲ್ಲವೆಂದೇ ಆ ಶ್ರುತಿಯ ಅಭಿಪ್ರಾಯ.

ಈ ಸಂದರ್ಭದಲ್ಲಿ ವಿವರಣಕಾರನ ವಾದವೊಂದು ಹೀಗಿದೆ - ಅವಚ್ಛೇದಪಕ್ಷ ಹಾಗೂ ಪ್ರತಿಬಿಂಬ ಪಕ್ಷವೆಂದು ಎರಡು ಪಕ್ಷಗಳಿವೆ. ಅವಚ್ಛೇದಪಕ್ಷವೆಂದರೆ ಎಲ್ಲೆಡೆ ವ್ಯಾಪ್ತವಾಗಿರುವ ಆಕಾಶವು ಘಟದಲ್ಲಿಯೂ ಇರುತ್ತವೆ. ಆದರೆ ಬಾಹ್ಯಾಕಾಶವನ್ನು ಘಟದಲ್ಲಿದೆಯೆಂದು ಯಾರೂ ವ್ಯವಹರಿಸುವುದಿಲ್ಲ. ಕೇವಲ ಘಟಾವಚ್ಛಿನ್ನ ಆಕಾಶವಿದೆಯೆಂದೇ ಹೇಳುತ್ತಾರೆ. ಪ್ರತಿಬಿಂಬಪಕ್ಷದಲ್ಲಿ ಪ್ರತಿಬಿಂಬವಾದ ಆಕಾಶವು ಜಲದಲ್ಲಿದೆ. ಎಲ್ಲೆಡೆ ವ್ಯಾಪ್ತವಾದ ಆಕಾಶವೂ ಸಹ ಜಲದಲ್ಲಿದೆ. ಪ್ರಕೃತ ಜೀವನೆಂಬ ಶರೀರದಲ್ಲಿ ನಿಯಾಮಕನಾದ ಬ್ರಹ್ಮನಿದ್ದಾನೆಂದು ಅವಚ್ಛೇದಪಕ್ಷವನ್ನು ಅಂಗೀಕರಿಸಿ ಹೇಳಲು ಸಾಧ್ಯವಿಲ್ಲ. ಆದರೆ ಪ್ರತಿಬಿಂಬಪಕ್ಷವನ್ನು ಸ್ವೀಕರಿಸಿದಾಗ ಶರೀರದಲ್ಲಿ ಅವಿದ್ಯಾವಚ್ಛಿನ್ನನಾದ ಬ್ರಹ್ಮನೂ ಇರಬಹುದು. ನಿಯಾಮಕನಾದ ಬ್ರಹ್ಮನೂ ಸಹ ಇರಬಹುದು ಎಂದು.

ವಿವರಣಕಾರನ ಈ ಅಭಿಪ್ರಾಯವು ಹುರುಳಿಲ್ಲದ್ದು. ಏಕೆಂದರೆ ಘಟಾಕಾಶದಲ್ಲಿ ಬಾಹ್ಯಾಕಾಶವಿರುವುದು ಎಷ್ಟು ಅಸಂಭಾವಿತವೋ ಅದರಂತೆ ನೀರಿನಲ್ಲಿ ಬಿಂಬಭೂತವಾದ ಆಕಾಶವಿರುವುದೂ ಸಹ ಅಷ್ಟೇ ಅಸಂಭಾವಿತ.

ವಸ್ತುತಃ ಜಲದಲ್ಲಿ ಶುದ್ಧವಾದ ಆಕಾಶ, ಅವಚ್ಛಿನ್ನವಾದ ಆಕಾಶ ಹಾಗೂ ಪ್ರತಿಬಿಂಬಭೂತವಾದ ಆಕಾಶಗಳೆಂದು ಮೂರು ಆಕಾಶಗಳಿರುತ್ತದೆ. ಘಟದಲ್ಲಿ ಪ್ರತಿಬಿಂಬವಾದ ಆಕಾಶವಿರುವುದಿಲ್ಲ. ಕೇವಲ ಶುದ್ಧವಾದ ಆಕಾಶ ಹಾಗೂ ಅವಚ್ಛಿನ್ನವಾದ ಆಕಾಶಗಳೆರಡೇ ಇರುತ್ತವೆ. ಹೀಗೆ ವ್ಯತ್ಯಾಸವನ್ನೇನೋ ತೋರಿಸಬಹುದು. ಆದರೆ ದರ್ಪಣದಲ್ಲಿ ಪ್ರತಿಬಿಂಬವಾಗಿರುವ ಮುಖ ಹಾಗೂ ಮುಖಸಾಮಾನ್ಯವಿರುವುದು ಕಾಣಿಸುತ್ತದೆ. ಆದರೆ ಬಿಂಬಭೂತವಾದ ಮುಖವಿದೆಯೆಂದು ಯಾರೂ ಹೇಳುವುದಿಲ್ಲ. ಅದರಂತೆ ಶರೀರದಲ್ಲಿ ಚಿನ್ಮಾತ್ರನಿರಬಹುದು. ಅವಿದ್ಯಾವಚ್ಛಿನ್ನನಾದ ಬ್ರಹ್ಮನಿರಬಹುದು. ನಿಯಾಮಕಬ್ರಹ್ಮನಿದ್ದಾನೆಂದು ಈ ದೃಷ್ಟಾಂತದಿಂದ ಸಮರ್ಥಿಸಲು ಸಾಧ್ಯವಿಲ್ಲ. ಅದ್ವೈತಿಗಳು ಅವಚ್ಛಿನ್ನಬ್ರಹ್ಮ, ಪ್ರತಿಬಿಂಬಬ್ರಹ್ಮ, ಚಿನ್ಮಾತ್ರಬ್ರಹ್ಮನೆಂದು ಮೂರು ಬಗೆಯ ಬ್ರಹ್ಮರನ್ನು ಒಪ್ಪುತ್ತಾರೆ. ಈ ಮೂರು ಬ್ರಹ್ಮರಲ್ಲಿ ಅವಚ್ಛಿನ್ನಬ್ರಹ್ಮ ಹಾಗೂ ಪ್ರತಿಬಿಂಬಬ್ರಹ್ಮರು ಜೀವಸ್ವರೂಪವನ್ನು ತಾಳಿದ್ದರಿಂದ ನಿಯಮ್ಯರೇ ಆಗಿಬಿಟ್ಟಿದ್ದಾರೆ. ಇನ್ನು ಶುದ್ಧಬ್ರಹ್ಮನು ಯಾವುದೇ ಗುಣಗಳನ್ನು ಹೊಂದದ ಕಾರಣ ನಿಯಾಮಕನಾಗಲು ಸಾಧ್ಯವಿಲ್ಲ. ಇದು ಹೇಗಾಯಿತೆಂದರೆ 'ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ, ಎರಡು ತುಂಬದು ಒಂದು ತುಂಬಲೇ ಇಲ್ಲ' ಎಂಬ ದಾಸರ ಒಗಟಿನ ಪದ್ಯದಂತೆ ಮೂರು ಬ್ರಹ್ಮರಲ್ಲಿ ಪ್ರತಿಬಿಂಬಬ್ರಹ್ಮ ಹಾಗೂ ಅವಚ್ಛಿನ್ನಬ್ರಹ್ಮರಿಗೆ ಜೀವಭಾವವಿರುವುದಿಂದ ನಿಯಾಮಕತ್ವ ಬರುವುದಿಲ್ಲ. ಉಳಿದೊಬ್ಬ ಶುದ್ಧಬ್ರಹ್ಮನಲ್ಲಿ ನಿಯಾಮಕತ್ವವನ್ನು ಸ್ವತಃ ಅವರೇ ಒಪ್ಪಿಲ್ಲ. ಒಟ್ಟಾರೆ ದೇಹದ ಒಳಗಡೆ ಕುಳಿತಿರುವ ಬ್ರಹ್ಮನು ನಪುಂಸಕನಂತೆ ವ್ಯರ್ಥವಾಗಿ ಕುಳಿತಿದ್ದಾನೆಂದು ಹೇಳಿದಂತಾಯಿತು.

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - ಬೃಹದಾರಣ್ಯಕೋಪನಿಷತ್ತಿನಲ್ಲಿ 'ಯಃ ಪೃಥಿವ್ಯಾನ್ ತಿಷ್ಠನ್' ಇತ್ಯಾದಿ ವಾಕ್ಯವನ್ನೇ ವಿಷಯವೆನ್ನುತ್ತಾರೆ. ಜೀವನಾಗಲೀ ಅಥವಾ ಯಾರಾದರೂ ಒಬ್ಬ ಯೋಗಿಯಾಗಲೀ, ಪೃಥಿವ್ಯಾದಿ ಲೋಕಗಳ ಅಂತರ್ಯಾಮಿಯಾಗಿರಬಹುದು. ಬ್ರಹ್ಮನಿಗೆ ಶರೀರವಿಲ್ಲದ ಕಾರಣ ಅಂತರ್ಯಾಮಿಯೆನಿಸಲಾರನೆಂದು ಪೂರ್ವಪಕ್ಷ.

ಸಕಲ ಪ್ರಪಂಚವನ್ನೇ ಶರೀರವನ್ನಾಗಿ ಹೊಂದಿರುವ ಅಚಿಂತ್ಯವಾದ ಮಾಯಾಶಕ್ತಿಯನ್ನು ಪಡೆದಿರುವ ಬ್ರಹ್ಮನಿಗೆ ಶರೀರವಿಲ್ಲದಿದ್ದರೂ ಪ್ರಪಂಚವನ್ನು ನಿಯಮನ ಮಾಡುವ ಸಾಮರ್ಥ್ಯವಿದೆ. ಜೀವಾತ್ಮನಿಗೂ, ಪರಮಾತ್ಮನಿಗೂ ಅಭೇದವಿರುವುದರಿಂದ ಇವನಿಗೆ ಇನ್ನೊಬ್ಬ ನಿಯಾಮಕನ ಅವಶ್ಯಕತೆಯಿರುವುದಿಲ್ಲ. ಮತ್ತು ಅದೇ ಪ್ರಕರಣದಲ್ಲಿ ಆತ್ಮತ್ವ, ಅಮೃತತ್ವ ಮೊದಲಾದ ಧರ್ಮಗಳು ಅದೃಶ್ಯತ್ವಾದಿ ಧರ್ಮಗಳೂ ಸಹ ಕೇಳಿಸುತ್ತಿವೆ. ಇವೆಲ್ಲವೂ ಬ್ರಹ್ಮನ ಅಸಾಧಾರಣ ಧರ್ಮಗಳಾದ್ದರಿಂದ ಬ್ರಹ್ಮನೇ ಅಂತರ್ಯಾಮಿಯಾಗಿದ್ದಾನೆ ಹೊರತು ಜೀವನಲ್ಲವೆಂದು ಸಿದ್ಧಾಂತ. ಅದ್ವೈತಿಗಳ ಈ ಅಧಿಕರಣ ಶರೀರವು ಅಯುಕ್ತವಾಗಿದೆ. 'ಯಃ ಆತ್ಮನೀ ತಿಷ್ಠನ್' ಇತ್ಯಾದಿ ಶ್ರುತಿಗಳಲ್ಲಿ ಜೀವನಿಗೂ ಸಹ ಪರಮಾತ್ಮನು ನಿಯಾಮಕನಾಗಿದ್ದಾನೆಂದು ಹೇಳಲ್ಪಟ್ಟಿದೆ. ಅವರಿಬ್ಬರಿಗೂ ಐಕ್ಯವಿದ್ದಲ್ಲಿ ನಿಯಮ್ಯನಿಯಾಮಕಭಾವವು ಹೇಗೆ ಉಪಪನ್ನವಾಗುತ್ತದೆ? ಕಾಲ್ಪನಿಕ ಭೇದವನ್ನು ಒಪ್ಪುವುದಾದರೆ ಈಶ್ವರನಿಗೂ ಸಹ ಮತ್ತೊಬ್ಬ ನಿಯಾಮಕನಿರಬಹುದಲ್ಲವೇ? ಈಶ್ವರನು ಸ್ವತಂತ್ರನಾದ್ದರಿಂದ ಮತ್ತೊಬ್ಬ ನಿಯಾಮಕನ ಅವಶ್ಯಕತೆಯಿಲ್ಲವೆಂದು ಕೊನೆಯಲ್ಲಿ ಉತ್ತರಿಸುವುದಾದರೆ,

ಮೊದಲೇ ಈ ಉತ್ತರವನ್ನು ಹೇಳಿ ಏಕೆ ಜಾಣತನವನ್ನು ತೋರಿಸಲಿಲ್ಲ?

'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬ ಎರಡನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ - ಈ ಪ್ರಕರಣದಲ್ಲಿ ಹೇಳಲ್ಪಟ್ಟ ಅದೃಶ್ಯತ್ವವು ಅಂತರ್ಯಾಮಿಯಲ್ಲಿ ಕೂಡುವುದಿಲ್ಲ. ದ್ರಷ್ಟೃತ್ವ, ಆತ್ಮತ್ವ ಮೊದಲಾದ ಧರ್ಮಗಳು ಪ್ರಕೃತಿಯಲ್ಲಿ ಕೂಡುವುದಿಲ್ಲ ಎಂದು ವ್ಯಾಖ್ಯಾನಿಸುತ್ತಾರೆ. 'ಶಾರೀರಶ್ಚೋಭಯೇಽಪಿ ಹಿ ಭೇದೇನೈವ ಮಧೀಯತೇ' ಎಂಬ ಮೂರನೆಯ ಸೂತ್ರ ವ್ಯಾಖ್ಯಾನ ಹೀಗಿದೆ - ಕಾಣ್ವಮಾಧ್ಯಂದಿನ ಶಾಖೆಗಳಲ್ಲಿ ಹೇಳಲ್ಪಟ್ಟ ಭೇದವು ಸತ್ಯವಲ್ಲ. ಜೀವಬ್ರಹ್ಮರಿಗೆ ಐಕ್ಯವೇ ಇದೆ. ಆದ್ದರಿಂದ ಇವರಿಬ್ಬರಿಗೂ ನಿಯಮ್ಯನಿಯಾಮಕಭಾವವನ್ನಾಗಲೀ ಅದರಿಂದ ಭೇದದ ಸಮರ್ಥನೆಯಾಗಲೀ ಮಾಡಲು ಸಾಧ್ಯವಿಲ್ಲ. ಅದ್ವೈತಿಗಳ ಎರಡನೆಯ ಸೂತ್ರವು ಪ್ರಥಮಸೂತ್ರದಲ್ಲಿರುವ 'ತದ್ಧರ್ಮವ್ಯಪದೇಶಾತ್' ಎಂಬ ಭಾಗದಿಂದಲೇ ಪುನರುಕ್ತವಾಗಿದೆ. ಮೂರನೆಯ ಸೂತ್ರದಲ್ಲಿ ನಿಯಮ್ಯನಿಯಾಮಕರಿಗೆ ಭೇದವೇ ಸ್ಪಷ್ಟವಾಗಿ ಕೇಳಿಸುತ್ತಿರುವಾಗ ಆ ಭೇದವನ್ನು ಕಲ್ಪನಿಕವೆಂದು ಹೇಳುವುದು ಮೂರ್ಖತನ.

ರಾಮಾನುಜ ಭಾಷ್ಯದಲ್ಲಿ ಜೀವನೇ ಅಂತರ್ಯಾಮಿಯೆಂದು ಪೂರ್ವಪಕ್ಷ. ಸಕಲ ಲೋಕ ನಿಯಂತೃತ್ವ ಎಂಬ ಧರ್ಮದಿಂದ ಪರಮಾತ್ಮನೇ ನಿಯಾಮಕನಾದ ಅಂತರ್ಯಾಮಿಯೆಂದು ಸಿದ್ಧಾಂತ.

ಇವರ ಮತವೂ ಸಹ ಯುಕ್ತವಾಗಿದೆ. ಅದ್ವೈತ ಮತದಲ್ಲಿ ಹಾಗೂ ವಿಶಿಷ್ಟಾದ್ವೈತ ಮತದಲ್ಲಿ ಅಧಿದೈವಾದಿಷು ಎಂಬ ಪದವು ವ್ಯರ್ಥವಾಗುತ್ತದೆ. ಆದರೆ ದ್ವೈತದರ್ಶನದಲ್ಲಿ 'ಅಧಿದೈವಾದಿಷು ತದ್ಧರ್ಮವ್ಯಪದೇಶಾತ್' ಎಂಬುದಾಗಿ 'ಅಧಿದೈವಾದಿಷು' ಎಂಬ ಪದವನ್ನು ಸಾಧ್ಯದಲ್ಲಿ ಸೇರದೆ ಹೇತುವಿನಲ್ಲಿ ಸೇರಿರುವ ಕಾರಣ ಅಂತರ್ಯಾಮಿಯೆಂದು ಉಕ್ತನಾದವನು ವಿಷ್ಣುವೇ ಆಗಿದ್ದಾನೆ.

ಅದೃಶ್ಯತ್ವಾಧಿಕರಣ

ಹಿಂದಿನ ಅಧಿಕರಣದಲ್ಲಿ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆನ್ನಲು ಸಾಕಲ್ಯೇನ ಅವಿದಿತತ್ವವನ್ನು ಹೇತುವನ್ನಾಗಿ ಮಾಡಿದರು. ಅಂದರೆ ಅದೃಶ್ಯತ್ವವನ್ನು ಹೇತುವೆಂದು ಹೇಳಿದಂತಾಯಿತು. ಮತ್ತು ಆನಂದಮಯಾಧಿ- ಕರಣದಲ್ಲಿ ಆನಂದಮಯನಾದ ವಿಷ್ಣುವಿಗೆ 'ಅದೃಶ್ಯೇಽನಾತ್ಮ್ಯೇ' ಎಂಬ ತೈತ್ತೀರಿಯದಲ್ಲಿ ಹೇಳಲ್ಪಟ್ಟ ಅದೃಶ್ಯತ್ವಗುಣವನ್ನು ಹೇಳಿದ್ದಾರೆ. ಈ ಅದೃಶ್ಯತ್ವಗುಣವು ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಈ ಅಧಿಕರಣದಲ್ಲಿ ಆಕ್ಷೇಪ ಮಾಡುತ್ತಿದ್ದಾರೆ. ಆದ್ದರಿಂದ ಹಿಂದಿನ ಅಧಿಕರಣದಿಂದ ಆನಂತರ್ಯ ಸಂಗತಿಯು ಇರುತ್ತದೆ. ಮತ್ತು ಆನಂದಮಯಾಧಿಕರಣದಿಂದಲೂ ಪರಂಪರಯಾ ಸಂಗತಿಯು ಇರುತ್ತದೆ.

'ಅಕ್ಷರಾತ್ಪರತಃ ಪರಃ' ಎಂಬುದಾಗಿ ಯಾವ ಅಕ್ಷರವು ಪ್ರಸಕ್ತವಾಗಿದೆಯೋ, ಅದೇ ಅಕ್ಷರವು 'ಅಕ್ಷರಾತ್ಸಂಭವಿತೀಹ ವಿಶ್ವಂ' ಎಂಬಲ್ಲಿರುವ ಅಕ್ಷರಶಬ್ದದಿಂದಲೂ ಪ್ರತಿಪಾದ್ಯವಾದರೆ ಅದೃಶ್ಯತ್ವಾದಿಗುಣವುಳ್ಳ ಜಗತ್ಕಾರಣತ್ವೇನ ಹೇಳಲ್ಪಟ್ಟ ಪರತ್ವಾವಧಿತ್ವವು ಸರ್ವೋತ್ತಮನಾದ ವಿಷ್ಣುವಿನಲ್ಲಿ ಬರುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಕ್ಷರಶಬ್ದವಾಚ್ಯರಾಗುತ್ತಾರೆಂಬುದು ಪೂರ್ವಪಕ್ಷದ ಗುರಿ.

'ಅಕ್ಷರತ್ರಯಮೀರಿತಮ್' ಎಂದು ಮುಂದೆ ಹೇಳುವ ಪ್ರಕಾರ 'ಅಕ್ಷರಾತ್ಪರತಃ' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವೇ ಬೇರೆ. 'ಅಕ್ಷರತ್ಸಂಭವತೀಹ ವಿಶ್ವಂ' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವೇ ಬೇರೆ ಎಂದು ವಿವಕ್ಷಿಸಿದರೆ ಪರತ್ವಾವಧಿತ್ವವು ವಿಷ್ಣುವಿನಲ್ಲಿ ಬರುವುದಿಲ್ಲ. ಆವಾಗ ಪರವಿದ್ಯೆಯ ವಿಷಯನಾದ್ದರಿಂದ ವಿಷ್ಣುವೇ ಅಕ್ಷರನೆನಿಸುತ್ತಾನೆಂಬುದು ಸಿದ್ಧಾಂತದ ಗುರಿ.

ಪೂರ್ವಪಕ್ಷ ಹೀಗಿದೆ - ಆನಂದಮಯಾಧಿಕರಣದಲ್ಲಿ 'ಅದೃಶ್ಯೇಽನಾತ್ಮ್ಯೇ' ಎಂದು ತೈತ್ತಿರೀಯ ವಾಕ್ಯವನ್ನು ಉಲ್ಲೇಖಮಾಡಿ ವಿಷ್ಣುವಿನಲ್ಲಿ ಅದೃಶ್ಯತ್ವಗುಣವನ್ನು ಹೇಳಲಾಗಿದೆ. ಮತ್ತು ಹಿಂದಿನ ಅಂತರ್ಯಾಮ್ಯಧಿಕರಣದಲ್ಲಿ "ಸ ಯೋಽತೋಽಶ್ರುತೋಮತೋ" ಇತ್ಯಾದಿ ಐತರೇಯೋಪನಿಷತ್ತಿನ ವಾಕ್ಯದಿಂದ ವಿಷ್ಣುವಿಗೆ ಅದೃಶ್ಯತ್ವ ಗುಣವನ್ನು ನಿರ್ಣಯಿಸಲಾಗಿದೆ. ಆದರೆ ಮಾಂಡೂಕ್ಯೋಪನಿಷತ್ತಿನಲ್ಲಿ ಇದೇ ಅದೃಶ್ಯತ್ವಗುಣವನ್ನು ಅಕ್ಷರತತ್ತ್ವಕ್ಕೆ ಹೇಳಲಾಗಿದೆ. ಈ ಅಕ್ಷರತತ್ತ್ವವನ್ನು ವಿಷ್ಣುವೆಂದು ನಿರ್ಣಯಿಸಲಾಗದು. ಏಕೆಂದರೆ 'ಅಕ್ಷರತ್ಸಂಭವತೀಹ ವಿಶ್ವಮ್' ಅಕ್ಷರತತ್ತ್ವದಿಂದ ಜಗತ್ತು

ಹುಟ್ಟಿತು ಎಂದು ಹೇಳಿ. 'ಅಕ್ಷರತ್ಪರತಃ ಪರಃ' ಎಂಬುದಾಗಿ ಅಕ್ಷರತತ್ತ್ವಕ್ಕಿಂತಲೂ ವಿಷ್ಣು ಉತ್ತಮೋತ್ತಮನಾಗಿದ್ದಾನೆಂದು ಶ್ರುತಿ ಹೇಳುತ್ತಿದೆ. ಒಂದು ವೇಳೆ ವಿಷ್ಣುವೇ ಅಕ್ಷರನಾದರೆ ಅವನಿಗಿಂತ ಉತ್ತಮನಾದವನನ್ನು ಹೇಳಬೇಕಾಗುತ್ತದೆ. ಆವಾಗ ವಿಷ್ಣು ಸರ್ವೋತ್ತಮತ್ವವೇ ಭಗ್ನವಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಅಕ್ಷರತತ್ತ್ವ ವಿಷ್ಣುವಲ್ಲವೆಂಬುದನ್ನು ಒಪ್ಪಬೇಕು.

ಹಾಗಾದರೆ ಅಕ್ಷರತತ್ವ ಎಂದರೆ ಯಾವುದು ? ಜಡಪ್ರಕೃತಿಯಾಗಬಹುದು. ಶ್ರುತಿಯು 'ತಥಾಕ್ಷರಾತ್ಸಂಭವತೀಹ ವಿಶ್ವಮ್' ಎಂದು ಜಗತ್ತಿಗೆ ಉಪಾದಾನ ಕಾರಣವಾಗಿರುವುದನ್ನು ಅಕ್ಷರ ಎಂದು ಹೇಳುತ್ತಿದೆ. ಜಡಪ್ರಕೃತಿಪಕ್ಷದಲ್ಲಿ ಈ ಉಪಾದಾನಕಾರಣತ್ವವು ಸಮಂಜಸವಾಗುತ್ತದೆ. ಶ್ರುತಿಯಲ್ಲಿ ಕಾರಣತ್ವವನ್ನಷ್ಟೇ ಹೇಳಿರುವುದರಿಂದ ನಿಮಿತ್ತಕಾರಣವೆಂದು ವಿವಕ್ಷಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ನಿಮಿತ್ತಕಾರಣಕ್ಕಿಂತ ಉಪಾದಾನಕಾರಣವು ಅಂತರಂಗವಾದ್ದರಿಂದ ಬಹಿರಂಗವಾದ ನಿಮಿತ್ತಕಾರಣಯೆಂಬರ್ಥವನ್ನು ಬಿಡಬೇಕಾಗುತ್ತದೆ.

ಅಥವಾ ಚೇತನಪ್ರಕೃತಿಯನ್ನು ಅಕ್ಷರವೆನ್ನಬಹುದು. ಗೀತೆಯಲ್ಲಿ ಲಕ್ಷ್ಮೀದೇವಿಯನ್ನು ಅಕ್ಷರವೆಂದು ಹೆಸರಿಸಲಾಗಿದೆ. ವಿಶ್ವಕ್ಕೆ ಉಪಾದಾನಕಾರಣವಾದ ಜಡಪ್ರಕೃತಿಗೆ ಇವಳು ಅಭಿಮಾನಿಯಾದ್ದರಿಂದ ಲಕ್ಷ್ಮೀದೇವಿಯನ್ನು ಉಪಾದಾನಕಾರಣವೆಂದು ಹೇಳಬಹುದು.

ಅಥವಾ ಚತುರ್ಮುಖನೂ ಸಹ ಅಕ್ಷರನಾಗಬಹುದು. ಶ್ರುತಿಯಲ್ಲಿ ಬ್ರಹ್ಮ ಎಂಬ ಹೆಸರು ಪ್ರಸ್ತುತವಾಗಿದೆ. ಜಾಯಮಾನತ್ವ ಮೊದಲಾದ ಲಿಂಗಗಳ ಬಲದಿಂದ ಬ್ರಹ್ಮಶಬ್ದವು ಚತುರ್ಮುಖನನ್ನೇ ಪ್ರತಿಪಾದಿಸುತ್ತದೆ ಹೊರತು ವಿಷ್ಣುವನ್ನಲ್ಲ. ಚತುರ್ಮುಖನು ಜಗತ್ತಿಗೆ ಕಾರಣನೂ ಆಗಿದ್ದಾನೆ. ಆದ್ದರಿಂದ ಅವನೂ ಸಹ ಇಲ್ಲಿ ಅಕ್ಷರನೆಂದು ಪ್ರಸ್ತುತನಾಗಿರಬಹುದು.

ಅಥವಾ ರುದ್ರನಲ್ಲಿ ಪ್ರಸಿದ್ಧವಾದ ಈಶ ಶಬ್ದವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ರುದ್ರನು ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಾಗಬಹುದು.

ಹೀಗೆ ನಾಲ್ಕು ಬಗೆಯಲ್ಲಿ ಪೂರ್ವಪಕ್ಷ ಮಾಡಬಹುದು. ವಿಚಾರ ಮಾಡಿದರೆ ವಿಷ್ಣುವನ್ನು ಅಕ್ಷರನೆಂದು ಒಪ್ಪಲು ತೊಂದರೆಯೇ ಇದೆ. ಶ್ರುತಿಯಲ್ಲಿ ಯಾವುದು ಅಕ್ಷರತತ್ತ್ವವಾಗಿದೆಯೋ? ಅದು ಅಧಮವೆಂದು ಹೇಳಿದೆ. ವಿಷ್ಣು ಸರ್ವೋತ್ತಮನಾದ್ದರಿಂದ ಅಧಮನಾಗಲು ಸಾಧ್ಯವಿಲ್ಲ. ಪರವಿದ್ಯಾವಿಷಯತ್ವವನ್ನು ಶ್ರುತಿ ಹೇಳುತ್ತಿರುವುದರಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಒಪ್ಪಬೇಕಲ್ಲವೇ? ಎಂಬ ಪ್ರಶ್ನೆಗೂ ಸಹ ಅವಕಾಶವಿಲ್ಲ. ಶಾಸ್ತ್ರಯೋನಿತ್ವಾಧಿಕರಣದಲ್ಲಿ ಋಗ್ವೇದಾದಿಗಳನ್ನು ಅಪರವಿದ್ಯೆಯೆಂದು ಅಂಗೀಕರಿಸಿ ಅಂತಹ ಶಾಸ್ತ್ರಗಳಿಂದೆಲ್ಲಾ ವಿಷ್ಣು ಪ್ರತಿಪಾದ್ಯನೆಂದು ಸಿದ್ಧಾಂತಿಗಳೇ ಒಪ್ಪಿದ್ದಾರೆ. ಅಪರವಿದ್ಯೆಗೆ ವಿಷಯನಾದ ಮೇಲೆ ಅದಕ್ಕೆ ವಿರುದ್ಧವಾದ ಪರವಿದ್ಯೆಗೆ ವಿಷ್ಣು ವಿಷಯನಾಗಲಾರನು. ಹಾಗಾಗಿ ಬೇರೆ ಜಡಪ್ರಕೃತ್ಯಾದಿಗಳನ್ನೇ ಪರವಿದ್ಯೆಗೆ ವಿಷಯವೆಂದು ಒಪ್ಪಬೇಕಾಗುತ್ತದೆ.

ಸಿದ್ಧಾಂತವನ್ನು ಪ್ರಾರಂಭಿಸುತ್ತಿದ್ದಾರೆ. ಮೊದಲು ಪರವಿದ್ಯಾವಿಷಯತ್ವವು ವಿಷ್ಣುವಿನ ಅಸಾಧಾರಣಲಿಂಗವಾಗಿದೆಯೆಂಬುದನ್ನು ಸಮರ್ಥಿಸುತ್ತಿದ್ದಾರೆ. ಪೂರ್ವಪಕ್ಷ ಮಾಡುವಾಗ ಅಪರವಿದ್ಯೆಗೆ ವಿಷ್ಣುವು ವಿಷಯನಾಗಿದ್ದಾನೆ ಹೊರತು, ಪರವಿದ್ಯೆಗೆ ವಿಷಯನಾಗುವುದಿಲ್ಲವೆಂದು ಸಮರ್ಥಿಸಿದ್ದರು. ಇದು ತಪ್ಪು. ಯಾವ ಋಗ್ವೇದಾದಿಗಳು ಅಪರವಿದ್ಯೆಯೆಂದು ಪೂರ್ವಪಕ್ಷಕಾರರು ಹೇಳಿದರೋ ಅದೇ ಋಗ್ವೇದಾದಿಗಳು ಪರವಿದ್ಯೆಯೆಂದೂ ಆಗುತ್ತವೆ. ಉಪಾಧಿಭೇದದಿಂದ ಒಂದೇ ಶಾಸ್ತ್ರವು ಪರವಿದ್ಯೆಯೂ ಆಗುತ್ತದೆ. ಅಪರವಿದ್ಯೆಯೂ ಆಗುತ್ತದೆ. ಯಾವರೀತಿಯಾಗಿ ಒಂದೇ ಕರ್ಮವು ನಿಷ್ಕಾಮಭಾವನೆಯಿಂದ ಆಚರಿಸಿದಾಗ ನಿವೃತ್ತಕರ್ಮವಾಗುತ್ತದೆ. ಸಕಾಮ ಭಾವನೆಯಿಂದ ಆಚರಿಸಿದಾಗ ಪ್ರ ವೃತ್ತಕರ್ಮವಾಗುತ್ತದೆ. ಅಥವಾ ನಾವು ತಿನ್ನುವ ಅನ್ನವು ಆರೋಗ್ಯಕ್ಕೆ ಹಿತವಾದ ಪದಾರ್ಥಗಳನ್ನು ಸೇರಿಸಿ ತಿಂದಾಗ ಪಥ್ಯವಾಗುತ್ತದೆ. ಆರೋಗ್ಯಕ್ಕೆ ಅಹಿತವಾದ ಪದಾರ್ಥವನ್ನು ಸೇರಿಸಿ ತಿಂದಾಗ ಅಪಥ್ಯವಾಗುತ್ತದೆ. ಇದರಂತೆ ಒಂದೇ ಋಗ್ವೇದಾದಿ ಶಾಸ್ತ್ರಗಳು ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ ವಿಚಾರಮಾಡಿ ಬ್ರಹ್ಮನನ್ನು ತಿಳಿದಾಗ ಪರವಿದ್ಯೆಯೆನಿಸುತ್ತದೆ, ಇಲ್ಲದಿದ್ದರೆ ಅಪರವಿದ್ಯೆಯೆನಿಸುತ್ತದೆ. ಆದ್ದರಿಂದ ಶ್ರೀಮದಾಚಾರ್ಯರ ಮಾತು 'ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ। ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು

ವಾಚಕಾಃ ॥' 'ಯಾವಾಗ ಋಗ್ವೇದಾದಿಗಳು ವಿಷ್ಣುವನ್ನು ಪ್ರತಿಪಾದಿಸದೆ, ಉಪಾಸನಾ, ಕರ್ಮ ಮೊದಲಾದವನ್ನಷ್ಟೇ ಪ್ರತಿಪಾದಿಸುತ್ತವೋ ಆವಾಗ ಅಪರವಿದ್ಯೆಯೆನಿಸುತ್ತವೆ. ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆಯೆನಿಸುತ್ತಿವೆ' ಎಂದು. ಈ ಮಾತನ್ನು ಎಂದೂ ಮರೆಯಬಾರದು.

ಈ ಸಂದರ್ಭದಲ್ಲಿ ಅದ್ವೈತಿಗಳು ಏನು ಹೇಳುತ್ತಾರೆಂಬುದನ್ನು ತಿಳಿಯಬೇಕು. ವೇದವು ಮಂತ್ರ ಹಾಗೂ ಉಪನಿಷತ್ತು ಎಂದು ಎರಡುವಿಧ. ಉಪನಿಷತ್ ಭಾಗವು ಪರವಿದ್ಯೆಯಾಗುತ್ತದೆ, ಮಂತ್ರ ಭಾಗವು ಅಪರವಿದ್ಯೆಯಾಗುತ್ತದೆ. ಏಕೆಂದರೆ ಉಪನಿಷತ್ ಭಾಗವು ಶುದ್ಧಬ್ರಹ್ಮನನ್ನು ಪ್ರತಿಪಾದಿಸುವ ಮೂಲಕ ಮೋಕ್ಷಕಾರಣವಾಗಿದೆ. ಮಂತ್ರಭಾಗವು ಉಪಾಸನಾ, ಕರ್ಮ ಮೊದಲಾದವುಗಳನ್ನೆಲ್ಲಾ ಪ್ರತಿಪಾದನೆ ಮಾಡುವುದರಿಂದ ಮೋಕ್ಷಸಾಧನವಾಗಿಲ್ಲ ಎಂದು ಅದ್ವೈತಿಗಳ ಅಭಿಪ್ರಾಯ.

ಇದು ಸರಿಯಲ್ಲ. ಏಕೆಂದರೆ ಸಕಲ ಶ್ರುತಿಸ್ಮೃತಿಗಳಿಂದ ಮುಖ್ಯವಾಗಿ ಬ್ರಹ್ಮನೊಬ್ಬನೇ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಕೇವಲ ಉಪನಿಷತ್ ಭಾಗದಿಂದ ಪ್ರತಿಪಾದ್ಯನೆಂಬ ನಿರ್ಣಯ ತಪ್ಪಾಗುತ್ತದೆ. ವಿಚಾರ ಮಾಡಿದರೆ ಮಂತ್ರಭಾಗವು ಉಪಾಸನಾದಿಗಳನ್ನು ವಿವರಿಸುವಂತೆ ಉಪನಿಷತ್ತಿನಲ್ಲಿಯೂ ಅನೇಕ ಕಡೆ ಬ್ರಹ್ಮನವಿಚಾರವು ಇರದೆ ಉಪಾಸನಾದಿಗಳ ವಿಚಾರವೇ ಇರುವುದು ಕಾಣಸುತ್ತದೆ. ಇನ್ನು ಮಂತ್ರಭಾಗದಲ್ಲಿಯೂ ಅನೇಕಕಡೆ ಬ್ರಹ್ಮವಿಚಾರವು ಪ್ರಸಕ್ತವಾಗಿದೆ. ಆದ್ದರಿಂದ ಅದ್ವೈತಿಗಳ ಅಭಿಪ್ರಾಯ ಸರಿಯಲ್ಲ.

ಇನ್ನು ರಾಮಾನುಜರು ಪರೋಕ್ಷಜ್ಞಾನವನ್ನು ಅಪರವಿದ್ಯೆಯೆಂದೂ, ಭಕ್ತಿರೂಪವಾದ ಅಪರೋಕ್ಷಜ್ಞಾನವನ್ನು ಪರವಿದ್ಯೆಯೆಂದೂ ಹೇಳುತ್ತಾರೆ. ಇದೂ ಸಹ ತಪ್ಪು. ವಿದ್ಯಾಶಬ್ದಕ್ಕೆ ಜ್ಞಾನಕರಣವೆಂದರ್ಥ. ಏಕೆಂದರೆ 'ಯಯಾ ತದಕ್ಷರಮಧಿಗಮ್ಯತೇ' ಎಂಬ ಶ್ರುತಿಯಿಂದ ಇದು ಸ್ಪಷ್ಟವಾಗುತ್ತದೆ. ಮತ್ತು ವ್ಯಾಕರಣದ ಪ್ರಕಾರ 'ವಿದ್' ಧಾತುವಿಗೆ 'ಕ್ಯಪ್' ಪ್ರತ್ಯಯವು ಬಂದು ವಿದ್ಯಾ ಎಂಬ ರೂಪವು ನಿಷ್ಪನ್ನವಾಗಿದೆ. ಈ 'ಕ್ಯಪ್' ಪ್ರತ್ಯಯವು ಭಾವಾರ್ಥದಲ್ಲಿರುವಂತೆ ಕರಣ, ಅಧಿಕರಣ ಮೊದಲಾದ ಅರ್ಥಗಳಲ್ಲಿಯೂ ಬರುತ್ತದೆ. ಆದ್ದರಿಂದ ಜ್ಞಾನವೆಂಬರ್ಥವನ್ನು ಹೇಳುವಂತೆ ಜ್ಞಾನಕರಣವೆಂಬರ್ಥವನ್ನೂ ಸಹ ವಿದ್ಯಾಶಬ್ದಕ್ಕೆ ಹೇಳಬಹುದು. ಪ್ರಕೃತ ಜ್ಞಾನಕರಣವೆಂಬರ್ಥವನ್ನೇ ವಿವಕ್ಷಿಸಬೇಕು.

ಪೂರ್ವಪಕ್ಷಮಾಡುವಾಗ ಊರ್ಣನಾಭಿ ಮೊದಲಾದ ದೃಷ್ಟಾಂತಗಳನ್ನು ನೀಡಿ ಶ್ರುತಿಯಲ್ಲಿ ಉಪಾದಾನಕಾರಣತ್ವವೇ ಪ್ರಸಕ್ತವಾಗಿದೆಯೆಂದು ಹೇಳಿದ್ದರು ಇದೂ ಸಹ ತಪ್ಪು. ಊರ್ಣನಾಭಿ, ಪೃಥಿವೀ ಮೊದಲಾದವುಗಳೆಲ್ಲವೂ ನಿಮಿತ್ತಕಾರಣವೇ ಆಗಿವೆ ಹೊರತು, ಉಪಾದಾನಕಾರಣ- ವಾಗಿರುವುದಿಲ್ಲವೆಂಬ ವಿಚಾರವನ್ನು ಪ್ರಕೃತ್ಯಧಿಕರಣದ ಅನುವ್ಯಾಖ್ಯಾನ ಸುಧಾದಿಗ್ರಂಥಗಳನ್ನು ಓದಿ ತಿಳಿದುಕೊಳ್ಳಬೇಕು. ಆದ್ದರಿಂದ ಶ್ರುತಿಯು ನಿಮಿತ್ತಕಾರಣವನ್ನೇ ಹೇಳುತ್ತಿದೆ. ಇದು ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಇದರ ಜೊತೆಗೆ ಸರ್ವಜ್ಞತ್ವ, ಪರವಿದ್ಯಾವಿಷಯತ್ವ ಮೊದಲಾದ ಲಿಂಗಗಳೆಲ್ಲವೂ ವಿಷ್ಣುವಿನದ್ದೇ ಆಗಿರುತ್ತವೆಂದು ತಿಳಿಯಬೇಕು.

ಪೂರ್ವಪಕ್ಷ ಮಾಡುವಾಗ 'ಯ ಸರ್ವಜ್ಞಃ ಸರ್ವವಿತ್' ಎಂಬ ಶ್ರುತಿಯಲ್ಲಿರುವ ಸರ್ವಜ್ಞಪದವು ವಿಶೇಷ್ಯನಾದ ರುದ್ರನನ್ನು ಹೇಳುತ್ತಿದೆ ಎಂದು ಆಕ್ಷೇಪಿಸಿದ್ದರು. ಇದು ತಪ್ಪು. ಸರ್ವಜ್ಞನಾದ ವ್ಯಕ್ತಿಯಿಂದ ಚತುರ್ಮುಖಬ್ರಹ್ಮನು ಹುಟ್ಟಿದನೆಂದು ಮುಂದಿನ ಶ್ರುತಿ ಹೇಳುತ್ತಿದೆ. ಒಂದು ವೇಳೆ ಸರ್ವಜ್ಞಪದದಿಂದ ರುದ್ರನನ್ನು ವಿವಕ್ಷಿಸುವುದಾದರೆ ಚತುರ್ಮುಖನಿಂದ ಹುಟ್ಟಿದ ರುದ್ರನು ಚತುರ್ಮುಖನಿಗೆ ಜನಕನಾಗುತ್ತಾನೆಂದು ಹೇಗೆ ಹೇಳಲು ಸಾಧ್ಯ? ಆದ್ದರಿಂದ ಸರ್ವಜ್ಞಪದವು ವಿಶೇಷಣವಾಚಕವಾಗಿದೆ. ಇದನ್ನು ತಿಳಿಸುವುದಕ್ಕಾಗಿಯೇ ಸೂತ್ರಕಾರರು 'ವಿಶೇಷಣ' ಪದವನ್ನು ಬಳಸಿದ್ದಾರೆ. 'ಸರ್ವವಿತ್' ಎಂಬ ಪದವು ಜಗತ್ಕಾರಣತ್ವಾರ್ಥದಲ್ಲಿರುವುದರಿಂದ ಪುನರುಕ್ತಿ ಬರುವುದಿಲ್ಲವೆಂದು ತಿಳಿಯಬೇಕು.

ಭಾಷ್ಯದಲ್ಲಿ ಈ ಸರ್ವಜ್ಞತ್ವವಿಶೇಷಣದಿಂದ ಜಡಪ್ರಕೃತಿಯನ್ನು ಮಾತ್ರ ನಿಷೇಧ ಮಾಡಿದ್ದಾರೆ. ವಸ್ತುತಃ ಚತುರ್ಮುಖ, ಬ್ರಹ್ಮ ಹಾಗೂ ರುದ್ರಾದಿಗಳಲ್ಲಿ ಮುಖ್ಯವಾದ ಸರ್ವಜ್ಞತ್ವವಿಲ್ಲದ ಕಾರಣ ಇವರನ್ನೂ ಸಹ ನಿರಾಕರಿಸಬಹುದಿತ್ತು. ಆದರೆ ಯಾವ ಪೂರ್ವಪಕ್ಷಿಯು ಚತುರ್ಮುಖಾದಿಗಳನ್ನು ಅಕ್ಷರಶಬ್ದವಾಚ್ಯರೆಂದು ಆಕ್ಷೇಪಿಸುತ್ತಿದ್ದಾನೋ, ಅವನು ಅವರನ್ನೂ

ಜಗತ್ತಿಗೆ ಕಾರಣರಾದ್ದರಿಂದ ಸರ್ವಜ್ಞರೂ ಆಗಿದ್ದಾರೆಂದು ಆಕ್ಷೇಪಿಸುತ್ತಾನೆ. ಹೀಗೆ ವಿಪ್ರತಿಪನ್ನವಾದ ಸರ್ವಜ್ಞತ್ವದಿಂದ ಚತುರ್ಮುಖತ್ವಾದಿಗಳನ್ನು ನಿಷೇಧಿಸುವುದು ತಪ್ಪಾಗುತ್ತದೆ. ಅದಕ್ಕೋಸ್ಕರ ಭಾಷ್ಯಕಾರರು ಜಗತ್ಕರ್ತೃತೆಯನ್ನು ಮಾತ್ರ ನಿಷೇಧಿಸಲು ಇದನ್ನು ಹೇತುವನ್ನಾಗಿ ಉಪಯೋಗಿಸಿದ್ದಾರೆ. ಜಡವಾದ ಪದಾರ್ಥದಲ್ಲಿ ಜ್ಞಾನಕ್ಕೆ ಪ್ರಸಕ್ತಿ ಇಲ್ಲದಿದ್ದಾಗ ಸರ್ವಜ್ಞತ್ವವು ಸುತರಾಂ ಬರುವುದಿಲ್ಲ.

ಇದರಂತೆ ಭಾಷ್ಯದಲ್ಲಿ ಭೇದವ್ಯಪದೇಶವೆಂಬ ಹೇತುವಿನಿಂದ ಚತುರ್ಮುಖ, ರುದ್ರರನ್ನು ಮಾತ್ರ ನಿಷೇಧ ಮಾಡಿದ್ದಾರೆ, ಚಿತ್ಕರ್ತೃತೆಯನ್ನು ನಿಷೇಧ ಮಾಡಿಲ್ಲ. ಏಕೆಂದರೆ ಅಕ್ಷರಗಳಲ್ಲಿ ಉತ್ತಮಾಕ್ಷರ, ಮಧ್ಯಮಾಕ್ಷರ, ಅಧಮಾಕ್ಷರವೆಂಬ ಪ್ರಭೇದವನ್ನು ಪರಿಗಣಿಸದೆ ಭೇದವ್ಯಪದೇಶವನ್ನು ತಿಳಿಯಲು ಸಾಧ್ಯವಿಲ್ಲ. ಹೀಗೆ ತಿಳಿಯುವುದು ಶ್ರೇಷ್ಠವಾದ್ದರಿಂದ ಆಚಾರ್ಯರು ಚಿತ್ಕರ್ತೃತೆಯನ್ನು ನಿಷೇಧಿಸುವುದಕ್ಕಾಗಿ ಭೇದವ್ಯಪದೇಶವನ್ನು ಹೇತುವನ್ನಾಗಿ ಉಪಯೋಗಿಸಿಲ್ಲ.

ಸೂತ್ರದಲ್ಲಿ 'ಇತರ' ಶಬ್ದವನ್ನು ದ್ವಿವಚನದಲ್ಲಿ ಪ್ರಯೋಗಿಸಿದ್ದಾರೆ. ವಸ್ತುತಃ ಜಡಪ್ರಕೃತಿ, ಚತುರ್ಮುಖ, ರುದ್ರ, ಇವರನ್ನೆಲ್ಲಾ ವಿವಕ್ಷಿಸಿದಾಗ ಬಹುವಚವನ್ನು ಪ್ರಯೋಗಿಸಬೇಕಿತ್ತು. ಆದರೆ ಚತುರ್ಮುಖ ಹಾಗೂ ರುದ್ರ ಇವರಿಬ್ಬರನ್ನು ಚೇತನರೆಂದು ಪರಿಗಣಿಸಿ ಜಡಪ್ರಕೃತಿಯನ್ನು ಅಚೇತನವೆಂದು ಪರಿಗಣಿಸಿ ದ್ವೈವಿಧ್ಯಕಲ್ಪನೆಯಿಂದ ದ್ವಿವಚನಪ್ರಯೋಗವು ಯುಕ್ತವಾಗಿದೆಯೆಂದು ತಿಳಿಯಬೇಕು.

ಕಾರ್ತವೀರ್ಯಾರ್ಜುನ, ಪಾಂಡವಾರ್ಜುನಎಂಬುದಾಗಿಇಬ್ಬರುಅರ್ಜುನರಿದ್ದಾರೆ. ಕಾರ್ತವೀರ್ಯಾರ್ಜುನನಿಗಿಂತ ಪಾಂಡವಾರ್ಜುನನು ಉತ್ತಮನಾಗಿದ್ದಾನೆ. ಈ ವಿವಕ್ಷೆಯಿಂದ ಅರ್ಜುನನಿಗಿಂತ ಅರ್ಜುನನು ಉತ್ತಮನು ಎಂಬ ವಾಕ್ಯವನ್ನುಪ್ರಯೋಗಿಸಬಹುದು. ಅದರಂತೆ ಅಕ್ಷರವು ಎರಡು ವಿಧ - ಬ್ರಹ್ಮಾಕ್ಷರ, ಅಬ್ರಹ್ಮಾಕ್ಷರ ಎಂದು. ಅಬ್ರಹ್ಮಾಕ್ಷರಕ್ಕಿಂತ ಬ್ರಹ್ಮಾಕ್ಷರವು ಉತ್ತಮವಾದ್ದರಿಂದ ಅಕ್ಷರಕ್ಕಿಂತ ಅಕ್ಷರವು ಉತ್ತಮವಾಗಿದೆ ಎಂಬ ವಾಕ್ಯವನ್ನು ಪ್ರಯೋಗಿಸಬಹುದು.

ಇದನ್ನೇ ನ್ಯಾಯವಿವರಣೆಯಲ್ಲಿ ''ಅಕ್ಷರಾತ್ಪರತಃ ಪರಸ್ಯಾಪ್ಯಕ್ಷರಾಂತರತ್ವವಚನಾತ್'' ಅಕ್ಷರಕ್ಕಿಂತ ಅಕ್ಷರವು ಉತ್ತಮವಾಗಿದೆಯೆಂದು ಹೇಳಬಹುದೆಂದಿದ್ದಾರೆ.

ಮತ್ತೊಂದು ಗಮನಿಸಬೇಕಾದ ವಿಚಾರ. 'ಅಕ್ಷರಾತ್ಪರತಃ ಪರಃ' ಎಂಬ ಶ್ರುತಿಯಲ್ಲಿ ಪೂರ್ವಪ್ರಸಕ್ತವಾದ ಅಕ್ಷರವನ್ನೇ ಸ್ವೀಕರಿಸಬೇಕೆಂಬುದು ಪೂರ್ವಪಕ್ಷಕಾರರ ವಾದ. 'ಅಕ್ಷರಾತ್ಸಂಭವತೀಹ ವಿಶ್ವಮ್' ಎಂಬಲ್ಲಿ ಜಗತ್ಕಾರಣತ್ವೇನ ಪ್ರಸ್ತುತವಾದ ಚಿತ್ಕರ್ತೃತ್ವಾದಿಗಳನ್ನು ವಿವಕ್ಷಿಸಿ ಅದಕ್ಕಿಂತ ಉತ್ತಮತ್ವವನ್ನು ವಿಷ್ಣುವಿನಲ್ಲಿ ಹೇಳಬೇಕೆಂದು ಪೂರ್ವಪಕ್ಷಕಾರರು ಹೇಳುತ್ತಿದ್ದಾರೆ. ಆದರೆ ಸಿದ್ಧಾಂತದಲ್ಲಿ ಇದನ್ನು ಒಪ್ಪುವುದಿಲ್ಲ. ಹಿಂದೆ ಪ್ರಸಕ್ತವಾಗಿರುವ ಅಕ್ಷರವನ್ನೇ 'ಅಕ್ಷರಾತ್ಪರತಃ ಪರಃ' ಎಂಬ ಅಕ್ಷರಶಬ್ದದಿಂದ ವಿವಕ್ಷಿಸಬೇಕಾಗಿಲ್ಲ. ಪೂರ್ವಮೀಮಾಂಸೆಯಲ್ಲಿಯೂ ಬಾಧಕವಿದ್ದಾಗ ಹಿಂದೆ ಪ್ರಸಕ್ತವಾದದ್ದನ್ನು ಬಿಡಬಹುದೆಂದು ನಿರ್ಣಯಿಸಿದ್ದಾರೆ. ಆದ್ದರಿಂದ ಪೂರ್ವಪ್ರಸಕ್ತವಾದದ್ದನ್ನು ವಿವಕ್ಷಿಸಬೇಕಾಗಿಲ್ಲ ಹೊರತಾಗಿ ಸ್ಕಾಂದಪುರಾಣದ ಆಧಾರದಿಂದ ಹೀಗೆ ಶ್ರುತ್ಯರ್ಥವನ್ನು ತಿಳಿಯಬೇಕು. ಮೂರು ಅಕ್ಷರತತ್ವಗಳಿಗಳಿವೆ, ಜಡಪ್ರಕೃತಿ, ಲಕ್ಷ್ಮೀದೇವಿ, ವಿಷ್ಣು ಎಂದು. ಮೊದಲನೆಯದ್ದು ಅಪರಾಕ್ಷರ ಎನಿಸುತ್ತದೆ. ಎರಡನೆಯದ್ದು ಪರಾಕ್ಷರಯೆನಿಸುತ್ತದೆ. ಮೂರನೆಯವನು ಪರಾತ್ಪರಾಕ್ಷರ ಎನಿಸುತ್ತಾನೆ. ಹೀಗೆ ಈ ವಿವಕ್ಷೆಯಿಂದ ಮಾಂಡೂಕ್ಯೋಪನಿಷತ್ತಿನಲ್ಲಿ 'ಅಕ್ಷರಾತ್ಪರತಃ ಪರಃ' ಎಂದು ವಿಷ್ಣುವನ್ನು 'ಪರಾತ್ಪರಾಕ್ಷರ' ಎಂದು ಕರೆಯಲಾಗಿದೆ. ಅಂದರೆ ಲಕ್ಷ್ಮೀದೇವಿಯು ಅಕ್ಷರವೆನಿಸಿದ ಜಡಪ್ರಕೃತಿಗಿಂತಲೂ ಉತ್ತಮಳಾಗಿದ್ದಾಳೆ, ಅವಳಿಗಿಂತಲೂ ವಿಷ್ಣು ಉತ್ತಮನಾಗಿದ್ದಾನೆ. ಆದ್ದರಿಂದ ವಿಷ್ಣು 'ಅಕ್ಷರಾತ್ಪರತಃ ಪರಃ' ಎನಿಸುತ್ತಾನೆ.

ಶಾಂಕರಭಾಷ್ಯದಲ್ಲಿ ಅದೃಶ್ಯತ್ವಾದ್ಯಧಿಕರಣದ ರಚನೆ ಹೀಗಿದೆ - 'ಯತ್ತದದ್ರೇಶ್ಯಮ್' ಎಂಬ ಅಥರ್ವಣೋಪನಿಷತ್ತಿನ ವಾಕ್ಯವು ವಿಷಯವಾಗಿದೆ. ಈ ಶ್ರುತಿಯಲ್ಲಿಕೇಳಿಸುತ್ತಿರುವ ಅದೃಶ್ಯತ್ವಾದಿಗುಣಗಳು ಪ್ರಧಾನದಲ್ಲಿ ಬರುತ್ತವೆ. ಏಕೆಂದರೆ ಅದೇ ಶ್ರುತಿಯಲ್ಲಿ ಮುಂದೆ 'ಯದ್ಭೂತಯೋನಿಮ್' ಎಂಬುದಾಗಿ ಭೂತಯೋನಿ ಶಬ್ದವನ್ನು ಪ್ರಯೋಗಿಸಲಾಗಿದೆ. ಯೋನಿ ಶಬ್ದಕ್ಕೆ ಉಪಾದಾನಕಾರಣವೆಂದರ್ಥ. ಆದ್ದರಿಂದಲೇ ಶ್ರುತಿಯು 'ಯಥೋರ್ಣನಾಭಿಃ' ಎಂಬುದಾಗಿ ಜೇಡರ ಹುಳುವಿನ ದೇಹ, ಭೂಮಿ, ಪುರುಷದೇಹಗಳನ್ನು ಉದಾಹರಣೆಯನ್ನಾಗಿ ನೀಡಿದೆ. ಆದ್ದರಿಂದ ಜಗತ್ತಿಗೆ ಉಪಾದಾನಕಾರಣವಾದ

ಜಡಪ್ರಕೃತಿಯು ಭೂತಯೋನಿಯೆಂದು ಕರೆಯಲ್ಪಡುತ್ತದೆ. ಆದ್ದರಿಂದ ಅದೃಶ್ಯತ್ವಾದಿಗುಣವುಳ್ಳ ಅಕ್ಷರವೆಂದರೆ ಜಡಪ್ರಕೃತಿಯಾಗುತ್ತದೆಂದು ತಿಳಿಯಬೇಕು. 'ಅಕ್ಷರಾತ್ಪರತಃ ಪರಃ' ಎಂದು ಅಕ್ಷರತತ್ತ್ವಕ್ಕಿಂತ ಬ್ರಹ್ಮನು ಭಿನ್ನನಾಗಿದ್ದಾನೆಂದು ಹೇಳಿರುವುದರಿಂದ ಬ್ರಹ್ಮನನ್ನು ಅಕ್ಷರನೆಂದು ಹೇಳಲು ಸಾಧ್ಯವಿಲ್ಲ. ಅಥವಾ ಭೂತಯೋನಿ ಶಬ್ದಕ್ಕೆ ನಿಮಿತ್ತಕಾರಣವೆಂದು ಅರ್ಥೈಸಿದರೆ ಪುಣ್ಯಪಾಪಗಬಳ ಮೂಲಕ ಜಗತ್ತಿಗೆ ಕಾರಣನಾದ ಜೀವಾತ್ಮನು ಅಕ್ಷರಶಬ್ದವಾಚ್ಯನಾಗುತ್ತಾನೆ. ಇಷ್ಟು ಪೂರ್ವಪಕ್ಷ.

ಶಾಂಕರಭಾಷ್ಯದಂತೆ ಸಿದ್ಧಾಂತ - ಜಗತ್ತು ಬ್ರಹ್ಮನ ಪರಿಣಾಮವೆಂದು ನಾವು ಹೇಳುವುದಿಲ್ಲ ಹೊರತು, ಬ್ರಹ್ಮನವಿವರ್ತವಾಗಿದೆ. ಯಾವರೀತಿಯಾಗಿ ರಜ್ಜುವಿಗೆ ಸರ್ಪವು ವಿವರ್ತಕಾರಣವಾಗಿದೆಯೋ, ಅದರಂತೆ ಜಗತ್ತಿಗೆ ಬ್ರಹ್ಮನು ವಿವರ್ತಕಾರಣನಾಗಿದ್ದಾನೆ. ಇಂತಹ ವಿವರ್ತಕಾರಣವನ್ನು ಭೂತಯೋನಿಶಬ್ದವು ಪ್ರತಿಪಾದಿಸುತ್ತಿದೆ. ಮತ್ತು 'ಅಕ್ಷರಾತ್ಸಂಭವಿತೀಹ ವಿಶ್ವಮ್' ಎಂಬುದಾಗಿ ಅಕ್ಷರತತ್ತ್ವವನ್ನು ಜಗತ್ಕಾರಣವೆಂದು ಹೇಳಿ, ಅದೇ ಅಕ್ಷರತತ್ತ್ವವನ್ನು 'ಯಃ ಸರ್ವಜ್ಞಃ' ಎಂಬುದಾಗಿ ಸರ್ವಜ್ಞವೆಂದು ಶ್ರುತಿ ಹೇಳಿದೆ. ಸರ್ವಜ್ಞತ್ವಾದಿಗಳು ಬ್ರಹ್ಮನ ಧರ್ಮವೇ ಹೊರತು, ಪ್ರಕೃತಿಯ ಧರ್ಮವಲ್ಲ. ಆದ್ದರಿಂದ ಅದೃಶ್ಯತ್ವಾದಿಗುಣಗಳುಳ್ಳವನು ಬ್ರಹ್ಮನೇ ಆಗುತ್ತಾನೆ. ಮತ್ತು 'ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಪರವಿದ್ಯೆಗೆ ಅಕ್ಷರತತ್ತ್ವವು ವಿಷಯವಾಗಿದೆಯೆಂದು ತಿಳಿಯುತ್ತಿದೆ. ಅಕ್ಷರನು ಬ್ರಹ್ಮನಾಗದಿದ್ದರೆ ಪರವಿದ್ಯೆಗೆ ವಿಷಯನೂ ಸಹ ಆಗಲಾರನು. ಆದ್ದರಿಂದ ಜಗತ್ತಿನ ಅಧ್ಯಾಸಕ್ಕೆ ಅಧಿಷ್ಠಾನನಾದ ಶುದ್ಧಬ್ರಹ್ಮನೇ ಅದೃಶ್ಯತ್ವಾದಿಗುಣಗಳುಳ್ಳವನು.

ಅದ್ವೈತಿಗಳ ಈ ಅಧಿಕರಣ ಶರೀರ ಸರಿಯಿಲ್ಲ. ಏಕೆಂದರೆ ಸರ್ಪದ ಆರೋಪಕ್ಕೆ ಹಗ್ಗವು ಹೇಗೆ ಅಧಿಷ್ಠಾನವೋ, ಅದರಂತೆ ಪ್ರಪಂಚದ ಆರೋಪಕ್ಕೆ ಬ್ರಹ್ಮನು ಅಧಿಷ್ಠಾನನಾಗಿದ್ದಾನೆ. ಅಂತಹ ಬ್ರಹ್ಮನು ವಾಚ್ಯನಾದರೆ ನಿರ್ಧರ್ಮಕನಾದ ಶುದ್ಧಬ್ರಹ್ಮನಲ್ಲಿ 'ಧರ್ಮೋಕ್ತೇಃ' ಎಂಬ ಸೂತ್ರೋಕ್ತ ಕಾರಣ ವಚನವು ತಪ್ಪಾಗುತ್ತದೆ. ಮತ್ತು 'ಸೂರ್ಯದ್ವಾರೇಣ ವಿರಜಾಃ ಪ್ರಯಾಂತಿ' ಎಂಬುದಾಗಿ ಸೂರ್ಯನ ಮಾರ್ಗದಲ್ಲಿ ಬ್ರಹ್ಮನನ್ನು ಹೊಂದುತ್ತಾರೆಂದು ಶ್ರುತಿ ಹೇಳುತ್ತಿದೆ. ಅಂತಹ ಬ್ರಹ್ಮನು ಕಾರ್ಯಬ್ರಹ್ಮನಾಗಿದ್ದಾನೆ ಹೊರತು, ಅಧಿಷ್ಠಾನನಾದ ಬ್ರಹ್ಮನಲ್ಲ. ಆದುದರಿಂದ ನಿರ್ಗುಣನಿಗೆ ಇವೆಲ್ಲವೂ ಬಾಧಕವಾಗುತ್ತವೆ. ಆದ್ದರಿಂದ ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ.

ಅದೃಶ್ಯತ್ವಾದಿಗುಣವುಳ್ಳದ್ದು ಪ್ರಕೃತಿ, ಅಕ್ಷರಾತ್ಪರತಃ ಪರನಾದವನು ಜೀವನೆಂದು ಪೂರ್ವಪಕ್ಷಮಾಡಿ ಎರಡೂ ಸಹ ಪರಮಾತ್ಮನೇ ಎಂದು ರಾಮಾನುಜರು ಸಿದ್ಧಾಂತ ಮಾಡಿದ್ದಾರೆ. ಇದು ತಪ್ಪು. ಏಕೆಂದರೆ

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ।
ಅಪ್ರಾಣೋ ಹ್ಯಮನಾಶ್ಶುಭ್ರೋ ಅಕ್ಷರಾತ್ಪರತಃ ಪರಃ' ॥

ಎಂಬುದಾಗಿ ದಿವ್ಯತ್ವ, ಅಮೂರ್ತತ್ವ ವ್ಯಾಪ್ತತ್ವ, ಪ್ರಾಣತ್ವ ಮೊದಲಾದ ಧರ್ಮಗಳಿಂದ ಅಕ್ಷರಾತ್ಪರತಃ ಪರವು ವಿಶಿಷ್ಟವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಆದರೆ ಜೀವನಲ್ಲಿ ಅಮೂರ್ತತ್ವ ಮೊದಲಾದ ಯಾವುದೇ ಧರ್ಮಗಳು ಇರುವುದಿಲ್ಲ. ಆದ್ದರಿಂದ ಜೀವನು ಅಕ್ಷರಾತ್ಪರತಃ ಪರನಾಗುತ್ತಾನೆಂದು ಶಂಕೆಯೇ ಹುಟ್ಟುವುದಿಲ್ಲ.

ವೈಶ್ವಾನರಾಧಿಕರಣ

ಈ ಅಧಿಕರಣದಲ್ಲಿ ನೇರವಾಗಿ ಲಿಂಗವನ್ನು ಸಮನ್ವಯ ಮಾಡುತ್ತಿಲ್ಲ. 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುತ್ತಿದ್ದಾರೆ. ಹಾಗಾದರೆ ಲಿಂಗಸಮನ್ವಯ ಮಾಡುವ ಈ ಪಾದದಲ್ಲಿ ವೈಶ್ವಾನರಾಧಿಕರಣವು ಅಸಂಗತವಾಗುತ್ತದೆಂಬುದು ಮೊದಲನೆಯ ಪ್ರಶ್ನೆ. ಇಂತಹ 'ವೈಶ್ವಾನರ' ಎಂಬ ನಾಮವು ವಿಷ್ಣುವಿನಲ್ಲಿ ಹಾಗೂ ಅಗ್ನಿಯಲ್ಲಿ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವಾಗಿದೆ. ಈ ಪಾದದಲ್ಲಿ ಅನ್ಯತ್ರಪ್ರಸಿದ್ಧಶಬ್ದವನ್ನು ಸಮನ್ವಯ ಮಾಡುತ್ತಿರುವುದರಿಂದಲೂ ಈ ಅಧಿಕರಣಕ್ಕೆ ಇಲ್ಲಿ ಸಂಗತಿ ಇರುವುದಿಲ್ಲವೆಂಬುದು ಎರಡನೆಯ ಪ್ರಶ್ನೆ.

XXXVI

ಒಂದು 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುವುದರಿಂದ ವೈಶ್ವಾನರನೆನಿಸಿದ ವಿಷ್ಣುವಿಗೆ ಸಂಬಂಧಪಟ್ಟ ಎಲ್ಲ ಲಿಂಗಗಳನ್ನು ಸಮನ್ವಯ ಮಾಡಿದಂತಾಗುವುದರಿಂದ ಈ ಅಧಿಕರಣವು ಇಲ್ಲಿ ಸಂಗತವಾಗುತ್ತದೆ. ಮತ್ತು ಉಭಯತ್ರಪ್ರಸಿದ್ಧವೂ ಆಗುವುದಿಲ್ಲ. ಪ್ರಮಾಣತೌಲ್ಯ ಹಾಗೂ ನ್ಯಾಯತೌಲ್ಯಗಳಿದ್ದರೆ ಮಾತ್ರ ಉಭಯತ್ರಪ್ರಸಿದ್ಧವಾಗುತ್ತದೆ. ಅಂದರೆ ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧಿಯನ್ನು ಹೇಳಿದರೆ ಅಂತಹ ಶ್ರುತಿಯಿಂದಲೇ ಅಗ್ನಿಯಲ್ಲಿಯೂ ಪ್ರಸಿದ್ಧಿಯನ್ನು ಹೇಳಬೇಕು. ಅಥವಾ ಲೋಕರೂಢಿಯನ್ನು ಅಗ್ನಿಯಲ್ಲಿ ಹೇಳಿದರೆ ಅಂತಹ ಲೋಕರೂಢಿಯನ್ನೇ ವಿಷ್ಣುವಿನಲ್ಲಿ ಹೇಳಬೇಕು. ಹೀಗಿದ್ದರೆ ಮಾತ್ರ ಉಭಯತ್ರಪ್ರಸಿದ್ಧವೆನಿಸುತ್ತದೆ. ಆದರೆ ಪ್ರಕೃತ ವೈಶ್ವಾನರ ಶಬ್ದವು ಲೋಕರೂಢಿಯಿಂದ ಅಗ್ನಿಯಲ್ಲಿ ಪ್ರಸಿದ್ಧವಾಗಿದೆ. ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ. ಹೀಗಿರುವಾಗ ಉಭಯತ್ರಪ್ರಸಿದ್ಧವೆನ್ನಲು ಸಾಧ್ಯವಿಲ್ಲ ಹೊರತಾಗಿ, ಲೋಕರೂಢಿಯನ್ನು ವಿವಕ್ಷಿಸಿ ಅನ್ಯತ್ರಪ್ರಸಿದ್ಧವೇ ಆಗುತ್ತದೆ.

'ವೈಶ್ವಾನರ' ಶಬ್ದವು ಲಿಂಗಾತ್ಮಕವೆಂದು 'ವಿಶ್ವಜೀವಾಂತರತ್ವಾದ್ವೈರ್ಲಿಂಗೈಃ' ಎಂಬ ಅಣುಭಾಷ್ಯದಲ್ಲಿ ಹೇಳಿದಂತೆ ಕಾಣಿಸುತ್ತದೆ. ಇದು ಸಿದ್ಧಾಂತದಲ್ಲಿ 'ವೈಶ್ವಾನರ' ಶಬ್ದವನ್ನು ಯೌಗಿಕವೆಂದು ಹೇಳಿದ್ದಾರೆ ಎಂಬ ಅಭಿಪ್ರಾಯದಿಂದ; ಹೊರತು, ಉಳಿದ ಶಬ್ದಗಳಂತೆ ಪೂರ್ವಪಕ್ಷ ಸಂದರ್ಭದಲ್ಲಿ ಲಿಂಗಾತ್ಮಕವಾಗಿರುವುದಿಲ್ಲ; ನಾಮಾತ್ಮಕವೇ ಆಗಿರುತ್ತದೆ.

ಈ ಅಧಿಕರಣಕ್ಕೆ ಹಿಂದಿನ ಅದೃಶ್ಯತ್ವಾಧಿಕರಣದ ಜೊತೆಗೆ ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು. ಅದೃಶ್ಯತ್ವಾದಿಗುಣಗಳು ವಿಷ್ಣುವಿನ ಧರ್ಮವೆಂದು ಅಲ್ಲಿ ಹೇಳಲಾಗಿದೆ. ಅಂತಹ ಅದೃಶ್ಯತ್ವಾದಿಗುಣಗಳನ್ನು ಹೇಳುವ ಉಪನಿಷತ್ತಿನಲ್ಲಿ ಸರ್ವಗತತ್ವವನ್ನೂ ಸಹ ಹೇಳಲಾಗಿದೆ. ಅದೇ ಸರ್ವಗತತ್ವಧರ್ಮವನ್ನು ಛಾಂದೋಗ್ಯೋಪನಿಷತ್ತು ವೈಶ್ವಾನರನಲ್ಲಿಹೇಳುತ್ತಿದೆ. ವೈಶ್ವಾನರನು ವಿಷ್ಣುವಲ್ಲದಿದ್ದರೆ ಅದೃಶ್ಯತ್ವಾದಿಗುಣಗಳೂ ಸಹ ವಿಷ್ಣುವಿನ ಧರ್ಮವಾಗುವುದಿಲ್ಲ. ಹೀಗೆ ಹಿಂದಿನ ಅಧಿಕರಣದ ಸಿದ್ಧಾಂತವು ಅಯುಕ್ತವಾಗುತ್ತದೆ. ಈ ಉದ್ದೇಶಕ್ಕೋಸ್ಕರ ಸೂತ್ರಕಾರರು 'ವೈಶ್ವಾನರ' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸಲು ಹೊರಟಿದ್ದಾರೆ.

ಛಾಂದೋಗ್ಯಾದಿ ಉಪನಿಷತ್ತುಗಳಲ್ಲಿ ಪ್ರಸ್ತುತನಾದ ವೈಶ್ವಾನರನು ಜಡವಾದ ಅಗ್ನಿ ಅಥವಾ ಅಗ್ನಿದೇವತೆ ಹೊರತು; ವಿಷ್ಣುವಲ್ಲ. ಏಕೆಂದರೆ ಲೋಕದಲ್ಲಿ ಶ್ರುತ್ಯುಕ್ತ 'ವೈಶ್ವಾನರ' ಶಬ್ದವನ್ನು ಇವರಿಬ್ಬರಲ್ಲಿಯೇ ಪ್ರಯೋಗಿಸುತ್ತಾರೆ. ಆದ್ದರಿಂದ ಶ್ರುತಿಯು ಅಗ್ನಿಯೇ ವೈಶ್ವಾನರನೆನ್ನಲು ಪ್ರಬಲವಾದ ಪ್ರಮಾಣವಾಗಿದೆ. ವಸ್ತುತಃ ಸರ್ವಗತತ್ವಧರ್ಮವು ವಿಷ್ಣುವಿನಲ್ಲಿರಬಹುದು. ಆದರೆ ಲಿಂಗಕ್ಕಿಂತ ಶ್ರುತಿಯು ಪ್ರಬಲವಾಗಿರುವುದರಿಂದ ಅಗ್ನಿಯೇ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾಗಬೇಕು. ಶ್ರುತಿಸಮಾಖ್ಯಾ, ಪುರುಷಸೂಕ್ತ ಸಮಾಖ್ಯಾ, ಆತ್ಮಶಬ್ದ, ಬ್ರಹ್ಮಪ್ರಕರಣ, ಸರ್ವಗತತ್ವಲಿಂಗ ಇವೇ ಮೊದಲಾದ ಅನೇಕ ಪ್ರಮಾಣಗಳು ಸಿದ್ಧಾಂತ ಸ್ಥಾಪಕಗಳಾಗಿವೆಯಲ್ಲವೇ? ಎಂದು ಪ್ರಶ್ನಿಸಬಾರದು. ಸ್ವಭಾವತಃ ಬಲಿಷ್ಠವಾದ ಒಂದೇ ಶ್ರುತಿಯು ಆ ಎಲ್ಲ ಲಿಂಗಗಳನ್ನು ಬಾಧಿಸುತ್ತದೆ. ಹೀಗೆ ಶ್ರುತಿಯ ಆಧಾರದಿಂದ ಅಗ್ನಿದೇವತೆಯು ವೈಶ್ವಾನರನಾಗಿದ್ದಾನೆಂದು ಪೂರ್ವಪಕ್ಷಕಾರನ ಅಭಿಪ್ರಾಯ.

ಅಗ್ನಿಯು ವೈಶ್ವಾನರನಾಗಿದ್ದಾನೆಂಬ ಪೂರ್ವಪಕ್ಷಕ್ಕೆ ಶ್ರುತಿಯು ಆಧಾರವಾಗಿದೆ. ವಿಷ್ಣು ವೈಶ್ವಾನರನಾಗಿದ್ದಾನೆಂಬ ಸಿದ್ಧಾಂತಕ್ಕೆ ಲಿಂಗವು ಆಧಾರವಾಗಿದೆ. ಇವೆರಡರಲ್ಲಿ ಯಾವುದು ಪ್ರಬಲ? ಯಾವುದು ದುರ್ಬಲ? ಎಂಬುದನ್ನು ಮೊದಲು ವಿಚಾರ ಮಾಡಬೇಕು. ವಾಸ್ತವಿಕವಾಗಿ ಅಂತಃಸ್ಥತ್ವಾಧಿಕರಣದ ನ್ಯಾಯವನ್ನು ಸ್ಮರಿಸಿಕೊಂಡರೆ ಅಗ್ನಿಶ್ರುತಿ ಮೊದಲಾದವೆಲ್ಲ ವಿಷ್ಣುವನ್ನೇ ಪ್ರತಿಪಾದಿಸುತ್ತವೆಂದು ತಿಳಿಯುತ್ತದೆ. ಆವಾಗ ಶ್ರುತಿಯು ಸಾವಕಾಶವಾಗುವುದರಿಂದ ದುರ್ಬಲವಾಗುತ್ತದೆ. ಲಿಂಗವು ನಿರವಕಾಶವಾದ್ದರಿಂದ ಪ್ರಬಲವಾಗುತ್ತದೆ. ಆದರೆ ಪ್ರಕೃತ ಪೂರ್ವಪಕ್ಷಕಾರನು ತನ್ನ ವಾದವನ್ನು ಸಮರ್ಥವಾಗಿ ಮಂಡಿಸುತ್ತಿದ್ದಾನೆ. ಒಂದು ವೇಳೆ ಎಲ್ಲಾ ಶಬ್ದಗಳು ಭಗವಂತನನ್ನೇ ಪ್ರತಿಪಾದಿಸುವುದಾದರೆ ಲೋಕವ್ಯವಹಾರವೇ ಇಲ್ಲವಾಗುವ ಪ್ರಸಂಗ ಬರುತ್ತದೆ. ಅದಕ್ಕೋಸ್ಕರ ಅಗ್ನಿ ಮೊದಲಾದ ಶಬ್ದಗಳು ಮುಖ್ಯವಾಗಿ ದೇವತೆಗಳನ್ನು ಪ್ರತಿಪಾದಿಸುತ್ತವೆಂದು ಒಪ್ಪಬೇಕು.

ಇನ್ನು ಮುಖ್ಯಾರ್ಥನಾದವನು ಭಗವಂತ. ಅವನ ಸಂಬಂಧದಿಂದ ದೇವತೆಗಳು ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾಗುತ್ತಾರೆಂದು ಸಿದ್ಧಾಂತಿಗಳು ಉತ್ತರಿಸಬಹುದು. ಹಾಗಾದರೆ ಸಕಲ ಶಬ್ದಗಳಿಗೆ ಎಲ್ಲಾ ಪದಾರ್ಥಗಳಲ್ಲಿ ಲಕ್ಷಣಾವೃತ್ತಿಯನ್ನು ಒಪ್ಪಿದಂತಾಗುತ್ತದೆ. ಹಾಗೇ ಲಕ್ಷಣಾವೃತ್ತಿಯನ್ನು ಒಪ್ಪಿದರೆ ಸಂಸ್ಕೃತ ಸಾಹಿತ್ಯದಲ್ಲಿರುವ ನಾಮಾತ್ಮಕ ಶಬ್ದಗಳೆಲ್ಲವೂ ಪರ್ಯಾಯಪದಗಳಾದವು. ಆವಾಗ ಇಂದ್ರ ಮೊದಲಾದ ಶಬ್ದಗಳು ಇಂದ್ರನನ್ನು ಪ್ರತಿಪಾದಿಸುವಂತೆ ಅಗ್ನ್ಯಾದಿಗಳನ್ನೂ ಸಹ ಪ್ರತಿಪಾದಿಸಬೇಕಾಗುತ್ತದೆ. ಲಕ್ಷಣಾ ಮಾಡಬೇಕಾದರೆ ಲಕ್ಷಣೀಯವಾದ ವಸ್ತುವನ್ನು ಒಂದೇ ಶಬ್ದದಿಂದ ತಿಳಿಯಬೇಕೆಂದೇನೂ ನಿಯಮವಿಲ್ಲ. ತೀರದಲ್ಲಿ ಗಂಗಾಪದಕ್ಕೆ ಲಕ್ಷಣಾ ಮಾಡುವಂತೆ ಪ್ರವಾಹ ಶಬ್ದಕ್ಕೂ ಮಾಡಬಹುದು. 'ದೇವಸರಿತ್' ಎಂಬ ಶಬ್ದಕ್ಕೂ ಮಾಡಬಹುದು. ಹೀಗೊಪ್ಪದಿದ್ದರೆ ಅಗ್ನಿಯಲ್ಲಿ ವಹ್ನಿ ಶಬ್ದವನ್ನೂ ಸಹ ಪ್ರಯೋಗ ಮಾಡದೇ ಇರುವಂತಹ ಸ್ಥಿತಿ ಬರುತ್ತದೆ.

ಇನ್ನು ಪರಮಾತ್ಮನು ಅಗ್ನಿ ಮೊದಲಾದ ಶಬ್ದಗಳಿಂದ ಮುಖ್ಯವಾಗಿ ವಾಚ್ಯನಾಗಿದ್ದಾನೆ. ದೇವತೆಗಳು ಅಮುಖ್ಯವಾಗಿ ವಾಚ್ಯರಾಗಿದ್ದಾರೆಂದು ಸಿದ್ಧಾಂತಿಗಳು ಉತ್ತರಿಸಬಹುದು. ಆದರೆ ಹಾಗೆ ಹೇಳಲು ಕಾರಣವಿಲ್ಲ. ಒಂದು ವೇಳೆ ಅಗ್ನ್ಯಾದಿ ದೇವತೆಗಳನ್ನು ಯಾವುದಾದರೂ ಶಬ್ದವು ಮುಖ್ಯವಾಗಿ ಪ್ರತಿಪಾದಿಸುವುದಾಗಿದ್ದರೆ ಅದರ ಅನ್ವಯಕ್ಕೋಸ್ಕರ ಉಳಿದ ಶಬ್ದವನ್ನು ಅಮುಖ್ಯವಾಗಿ ಕೂಡಿಸಬಹುದಿತ್ತು. ಆದರೆ ಸಿದ್ಧಾಂತದ ಪ್ರಕಾರ ಭಗವಂತನನ್ನು ಬಿಟ್ಟು ಬೇರೆ ಯಾರೂ ಸಹ ಮುಖ್ಯವಾಗಿ ಯಾವುದೇ ಶಬ್ದದಿಂದ ಪ್ರತಿಪಾದ್ಯರಾಗುವುದಿಲ್ಲ.

ಮತ್ತು ಇಂದ್ರಾದಿ ಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿರುವುದಾದರೆ, ಅಗ್ನಿಸೂಕ್ತ, ವಾಯುಸೂಕ್ತ ಎಂಬ ಸೂಕ್ತ ವ್ಯವಸ್ಥೆಯು ಹಾಗೂ ವೈಶ್ವಾನರ ವಿದ್ಯೆ, ಅಗ್ನಿವಿದ್ಯೆಯೆಂಬ ವಿದ್ಯಾವ್ಯವಸ್ಥೆಯೂ ಸಹ ಅಯುಕ್ತವಾಗುತ್ತದೆ. ಈ ಎಲ್ಲ ಕಾರಣಗಳಿಂದ ಲೋಕವ್ಯವಹಾರವನ್ನು ಕೂಡಿಸಬೇಕೆಂದರೆ ವಿಷ್ಣುವನ್ನು ಬಿಟ್ಟು ಬೇರೆ ಪದಾರ್ಥಗಳಲ್ಲಿಯೂ ಮುಖ್ಯವಾಚ್ಯತ್ವವನ್ನೇ ನಾವು ಒಪ್ಪಬೇಕು. ಹಾಗೆ ಒಪ್ಪಿದಾಗ ವೈಶ್ವಾನರ ಶ್ರುತಿಯು ಪೂರ್ವಪಕ್ಷಿಯ ವಿಷಯದಲ್ಲಿ ಪ್ರಬಲವಾದ ಪ್ರಮಾಣವಾಗುತ್ತದೆ.

ಟೀಕೆ, ಭಾಷ್ಯಗಳನ್ನು ನೋಡಿದಾಗ ಅನಿರ್ಧಾರಿತ ಪೂರ್ವಪಕ್ಷವನ್ನು ಮಾಡಿದಂತೆ ಕಾಣಿಸುತ್ತದೆ. ಅಂದರೆ ಪೂರ್ವಪಕ್ಷಯುಕ್ತಿ ಹಾಗೂ ಸಿದ್ಧಾಂತಯುಕ್ತಿಯು ಸಮಬಲವಾಗಿರುವುದರಿಂದ ವಿಷ್ಣುವೇ ವೈಶ್ವಾನರನೆಂದು ನಿರ್ಣಯವಾಗುವುದಿಲ್ಲವೆಂದು ಪೂರ್ವಪಕ್ಷ ಮಾಡಿದ್ದಾರೆ. ಆದರೂ ಸಹ ಚಂದ್ರಿಕಾಚಾರ್ಯರು ನಿಶ್ಚಯಾತ್ಮಕವಾದ ಪೂರ್ವಪಕ್ಷವನ್ನೇ ಸಮರ್ಥಿಸಿದ್ದಾರೆ. ಸಿದ್ಧಾಂತಯುಕ್ತಿಗಿಂತಲೂ ಪೂರ್ವಪಕ್ಷಯುಕ್ತಿಯು ಪ್ರಬಲವಾಗಿದೆ. ಏಕೆಂದರೆ ಅನ್ಯತ್ರಪ್ರಸಿದ್ಧಿಯೆಂಬ ನಿರವಕಾಶಯುಕ್ತಿಯಿಂದ ವೈಶ್ವಾನರ ಶ್ರುತಿಯು ಪ್ರಬಲವಾದ ಪ್ರಮಾಣವಾಗಿದೆ. ಆದ್ದರಿಂದ ವಿಷ್ಣು ವೈಶ್ವಾನರನಾಗಲು ಸಾಧ್ಯವೇ ಇಲ್ಲ. ಅಗ್ನಿಯೇ ವೈಶ್ವಾನರನಾಗುತ್ತಾನೆಂಬ ಪೂರ್ವಪಕ್ಷವನ್ನು ನಿರ್ಣಯ ಮಾಡಿದ್ದಾರೆ. ಇದಕ್ಕನುಗುಣವಾಗಿಯೇ ಟೀಕೆ ಹಾಗೂ ಭಾಷ್ಯಗಳನ್ನು ಅರ್ಥೈಸಿಕೊಳ್ಳಬೇಕು. ನಿಶ್ಚಯ ಮಾಡಲು ಬರುವುದಿಲ್ಲವೆಂದು ಟೀಕೆಯಲ್ಲಿ ಹೇಳಿದ್ದರೂ ಸಹ ಅಗ್ನಿ ಪರವಾಗಿ ನಿಶ್ಚಯಿಸಬಹುದೆಂಬುದನ್ನು ಅಲ್ಲಿ ವಿವಕ್ಷಿಸಿದಾಗ ಸಮಸ್ಯೆಯು ಪರಿಹಾರವಾಗುತ್ತದೆ. ಆದ್ದರಿಂದ ನಿಶ್ಚಯಾತ್ಮಕವಾದ ಪೂರ್ವಪಕ್ಷವನ್ನೇ ಮಾಡಲು ಬರುವಾಗ ಅನಿಶ್ಚಯಾತ್ಮಕವಾದ ಪೂರ್ವಪಕ್ಷವನ್ನೇಕೆ ಮಾಡಬೇಕು? ಅಥವಾ ಅನಿರ್ಧಾರಿತವಾದ ಪೂರ್ವಪಕ್ಷವನ್ನು ಇಟ್ಟುಕೊಂಡರೂ ಸಹ ವಿಷ್ಣುಪರತ್ವವಿಷಯದಲ್ಲಷ್ಟೇ ನಿಶ್ಚಯವಿಲ್ಲವೆಂದಭಿಪ್ರಾಯ. ಅಗ್ನಿವಿಷಯದಲ್ಲಿ ನಿಶ್ಚಯಾತ್ಮಕವಾಗಿ ಯುಕ್ತಿಗಳನ್ನು ಹೇಳಬಹುದು.

ಈ ವೈಶ್ವಾನರಾಧಿಕರಣವು ಹಿಂದಿನೆರಡು ಪಾದಗಳಲ್ಲಿ ಪ್ರಸಕ್ತವಾದ ಎಲ್ಲಾ ಅಧಿಕರಣಗಳ ಸಿದ್ಧಾಂತ ಪ್ರಮೇಯವನ್ನು ಆಕ್ಷೇಪಿಸುತ್ತಿರುವುದರಿಂದ ಎರಡು ಪಾದಗಳಲ್ಲಿರುವ ಎಲ್ಲಾ ಅಧಿಕರಣಗಳಿಗೆ ರಾಜನ ಸ್ಥಾನದಲ್ಲಿದೆ. ಆದ್ದರಿಂದಲೇ ವೈಶ್ವಾನರಾಧಿಕರಣವನ್ನು ಕೊನೆಯಲ್ಲಿ ಉಲ್ಲೇಖಿಸಿದ್ದಾರೆ.

ಸಿದ್ಧಾಂತ ಹೀಗಿದೆ – ಅಜ್ಞಾನಿಗಳು ಅಜ್ಞಾನ ಪ್ರಯುಕ್ತವಾಗಿ ವಿಷ್ಣುಪರವಾದ ಶಬ್ದಗಳನ್ನು ಲೋಕದಲ್ಲಿ ಪ್ರಯೋಗಿಸಿದ್ದಾರೆ. ಅದರಂತೆ ಜ್ಞಾನಿಗಳೂ ಸಹ ಹಾನ, ಉಪಾದಾನ ಮೊದಲಾದ ವ್ಯವಹಾರಕ್ಕೋಸ್ಕರ ಲೋಕದಲ್ಲಿ ಪ್ರಯೋಗಿಸುತ್ತಾರೆ.

ವಸ್ತುತಃ ಸೂಕ್ತಾದಿವ್ಯವಸ್ಥೆಗೆ ಋಗ್ಭಾಷ್ಯದಲ್ಲಿ ಬೇರೆ ಕಾರಣವನ್ನೇ ಹೇಳಿದ್ದಾರೆ –

ಪೃಥಗ್ರೂಪಾಣಿ ವಿಷ್ಣೋಸ್ತು ದೇವತಾಂತರಗಾನಿ ಚ।
ಅಗ್ನ್ಯಾದಿಸೂಕ್ತವಾಚ್ಯಾನಿ ನಾಮ್ನಾ ಸೂಕ್ತಭಿದಾ ಭವೇತ್ ॥

ಭಗವಂತನು ದೇವತಾಂತರ್ಗತನಾಗಿ ಹಾಗೂ ದೇವತೆಗಳಲ್ಲಿ ಅಂತರ್ಗತನಾಗದೇ ಎರಡು ರೂಪಗಳಿಂದ ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಈ ಎರಡು ರೂಪಗಳಲ್ಲಿರುವ ಅಗ್ನ್ಯಾದಿ ಶಬ್ದಗಳನ್ನು ಎವಕ್ಷಿಸಿ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ವ್ಯವಸ್ಥೆಯು ಇರುತ್ತದೆ.

ಹೀಗೆ ಅಗ್ನಿ ಮೊದಲಾದ ಶಬ್ದಗಳ ಪ್ರಯೋಗವೇ ಸೂಕ್ತಾದಿಗಳಿಗೆ ವ್ಯವಸ್ಥಾಪಕವೆಂದು ಹೇಳಿದ್ದಾರೆ.

ಪ್ರಥಮಸೂತ್ರದಲ್ಲಿ ಶ್ರುತಿ ಎಂಬ ಸಾಧಕ ಪ್ರಮಾಣವನ್ನು ಹೇಳಿರುತ್ತಾರೆ. ಎರಡನೆಯ ಸೂತ್ರದಲ್ಲಿ ಸಮಾಖ್ಯಾಪ್ರಮಾಣವನ್ನು ಹೇಳಿರುತ್ತಾರೆ. ಸ್ವಪಕ್ಷ ಸಾಧಕವನ್ನು ಹೇಳಿದ ಮೇಲೆ ಮೂರನೆಯ ಸೂತ್ರದಲ್ಲಿ ವೈಶ್ವಾನರ ಶ್ರುತಿಯಲ್ಲಿರುವ ಅಸಾಧಾರಣವಾದ ಬಾಧಕವನ್ನು ಪರಿಹರಿಸಿದ್ದಾರೆ. ನಾಲ್ಕನೆಯ ಸೂತ್ರದಲ್ಲಿ ಪರಮತ ನಿರಾಕರಣೆ ಇದೆ. ಐದನೆಯ ಸೂತ್ರದಲ್ಲಿ ವೈಶ್ವಾನರ ಶಬ್ದ ಸಮನ್ವಯವು ಸಿದ್ಧವಾಯಿತಾದ್ದರಿಂದ ಸಕಲ ಶಬ್ದಗಳ ವಿಷಯದಲ್ಲಿರುವ ಬಾಧಕವನ್ನು ಪರಿಹರಿಸಿದ್ದಾರೆ. ಆರನೆಯ ಸೂತ್ರದಿಂದ ಮುಂದಿನ ನಾಲ್ಕು ಸೂತ್ರಗಳಲ್ಲಿ ವೇದದಲ್ಲಿರುವ ಸೂಕ್ತಾದಿ ವ್ಯವಸ್ಥೆಗಳನ್ನು ಅನೇಕ ಬಗೆಯಲ್ಲಿ ಸಮರ್ಥಿಸಿದ್ದಾರೆ. ಈ ಕ್ರಮದಲ್ಲಿ ಚಿಂತಿಸಿದಾಗ ಸೂತ್ರಗಳ ಜೋಡಣೆಯು ಅತ್ಯಂತ ಸ್ವರಸವಾಗಿದೆಯೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಕೊನೆಯ ನಾಲ್ಕು ಸೂತ್ರಗಳು ವೈಶ್ವಾನರವೆಂಬ ನಾಮಾತ್ಮಕ ಶಬ್ದದ ಸಮನ್ವಯಕ್ಕಾಗಿ ಹೊರಟಿರುವುದಿಲ್ಲ. ಸಕಲ ಶಬ್ದಗಳ ಸಮನ್ವಯವನ್ನು ಭಗವಂತನಲ್ಲೇ ಮಾಡಿದಾಗ ಬರುವಂತಹ ಬಾಧಕವನ್ನಷ್ಟೇ ಪರಿಹರಿಸಿದೆ. ವಾಸ್ತವಿಕವಾಗಿ ನಾಲ್ಕನೆಯ ಪಾದದ ಕೊನೆಯಲ್ಲಿ ಈ ನಾಲ್ಕು ಸೂತ್ರಗಳನ್ನು ಹೇಳಬೇಕಿತ್ತೆ ಎಂದೆನಿಸುತ್ತದೆ. ಆದರೆ ಕೇವಲ ಪದ, ವರ್ಣ ಸ್ವರಗಳ, ಸಮನ್ವಯದಲ್ಲಿ ಪರ್ಯವಸಾನ ಗೊಳ್ಳುವ ನಾಲ್ಕನೆಯ ಪಾದದಲ್ಲಿ ಈ ಸೂತ್ರಗಳು ಅಸಂಗತವೇ ಆಗುತ್ತಿದ್ದವು. ಆದ್ದರಿಂದ ಸೂತ್ರಕಾರರು ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವು ಮುಗಿಯುತ್ತಿರುವ ಸಂದರ್ಭದಲ್ಲಿ ಈ ನಾಲ್ಕು ಸೂತ್ರಗಳನ್ನು ಹೇಳಿದ್ದು ಅತ್ಯಂತ ಸಂಗತವೇ ಆಗಿದೆ.

ಶಾಂಕರ ಭಾಷ್ಯದಲ್ಲಿ ಸೂತ್ರಾರ್ಥವನ್ನು ಹೀಗೆ ಹೇಳಿದ್ದಾರೆ – ಛಾಂದೋಗ್ಯದಲ್ಲಿ 'ಅಯಮಗ್ನಿರ್ವೈಶ್ವಾನರಃ' ಎಂಬುದಾಗಿ ವೈಶ್ವಾನರ ಶಬ್ದವು ಕೇಳಿಸುತ್ತಿದೆ. ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂವರಲ್ಲಿಯೂ ವೈಶ್ವಾನರ ಶಬ್ದವು ಸಮಾನವಾಗಿ ಪ್ರಯೋಗಿಸಲ್ಪಡುತ್ತದೆ. ಪ್ರಕರಣದ ಪ್ರಾರಂಭದಲ್ಲಿ ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾದ ಆತ್ಮಶಬ್ದವು ಕೇಳಿಸುತ್ತಿರುವುದರಿಂದ ಜೀವನೂ ಸಹ ವೈಶ್ವಾನರನೆನಿಸಬಹುದು. ಇಷ್ಟು ಪೂರ್ವಪಕ್ಷ.

ವೈಶ್ವಾನರ ಹಾಗೂ ಆತ್ಮಶಬ್ದಗಳು ಸಾಧಾರಣವಾಗಿದ್ದರೂ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ದ್ಯುಲೋಕಾದಿಲೋಕಗಳೇ ವೈಶ್ವಾನರನ ಅವಯವವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಹೀಗೆ ಜೀವನಲ್ಲಿಲ್ಲದ ವಿಶೇಷಣಗಳನ್ನು ವೈಶ್ವಾನರನಲ್ಲಿ ಹೇಳಿದ್ದರಿಂದ ಬ್ರಹ್ಮನೇ ಇಲ್ಲಿ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧಾಂತ.

ಶಂಕರ ಭಾಷ್ಯದ ಈ ವ್ಯಾಖ್ಯಾನವು ಅಯುಕ್ತವಾಗಿದೆ. ಏಕೆಂದರೆ ವೈಶ್ವಾನರಶಬ್ದವು ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂರರಲ್ಲಿ ಮಾತ್ರ ಸಾಧಾರಣವಾಗಿಲ್ಲ. ಆತ್ಮನಲ್ಲಿಯೂ ಸಹ ಸಾಧಾರಣವಾಗಿರುವುದರಿಂದ ತ್ರಿತಯ ಸಾಧಾರಣವೆಂಬ ಅದ್ವೈತಿಗಳ ಮಾತು ತಪ್ಪಾಗುತ್ತದೆ.

ಮತ್ತು ಆತ್ಮಶಬ್ದವು ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾಗಿದೆಯೆಂದು ಸಾಧಾರಣಶಬ್ದದ ಅರ್ಥವನ್ನು ಹೇಳಿದರೆ; 'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಎಂಬಲ್ಲಿ 'ಸ್ವಶಬ್ದಾತ್' ಎಂಬ ಶಬ್ದಕ್ಕೆ 'ಆತ್ಮಶಬ್ದಾತ್' ಎಂದು ವ್ಯಾಖ್ಯಾನಿಸಿ ದ್ಯುಭ್ವಾದ್ಯಾಯತನತ್ವವನ್ನು ಬ್ರಹ್ಮನಲ್ಲಿ ಸಮರ್ಥಿಸಿದ್ದಾರೆ. ಇದರಿಂದ ಆತ್ಮಶಬ್ದವು ಕೇವಲ ಬ್ರಹ್ಮನನ್ನು ಪ್ರತಿಪಾದಿಸುತ್ತದೆಂದು

ಅವರು ಒಪ್ಪಿದ್ದಾರೆ. ಇಲ್ಲದಿದ್ದರೆ 'ನಾನುಮಾನಮತಚ್ಛಬ್ದಾತ್' ಎಂಬ ಸೂತ್ರದಲ್ಲಿ ಆತ್ಮಶಬ್ದ ಜೀವನಲ್ಲಿಲ್ಲದ ಕಾರಣ ಜೀವನು ದ್ಯುಭ್ವಾದ್ಯಾಯತನನಾಗುವುದಿಲ್ಲವೆಂದು ನಿರಾಕರಿಸಿದ್ದು ಅವರ ಪ್ರಕಾರವೇ ತಪ್ಪಾಗುತ್ತದೆ.

ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ, ಪರಬ್ರಹ್ಮ ಈ ನಾಲ್ಕರಲ್ಲಿಯೂ ಸಾಧಾರಣವಾದ ವೈಶ್ವಾನರಶಬ್ದಕ್ಕೆ ಪರಮಾತ್ಮನಲ್ಲಿ ಮಾತ್ರ ಇರುವ ಧರ್ಮಗಳನ್ನು ವಿಶೇಷಣವನ್ನಾಗಿ ಹೇಳಲಾಗಿದೆ. ಮುಮುಕ್ಷುಗಳಾದ ಔಪಮನ್ಯವೇ ಮೊದಲಾದ ಐದು ಮಂದಿ ಶಿಷ್ಯಂದಿರು ಬ್ರಹ್ಮನ ಜಿಜ್ಞಾಸೆಯನ್ನು ಮಾಡಿದ್ದಾರೆ. ಆವಾಗ ವೈಶ್ವಾನರನೇ ಬ್ರಹ್ಮನೆಂದು ರಾಜನು ಉಪದೇಶಿಸಿದ್ದಾನೆ. ಹೀಗೆ ಜಿಜ್ಞಾಸ್ಯಮಾನತ್ವಮುಂತಾದ ಬ್ರಹ್ಮನ ಲಿಂಗಗಳಿಂದ ವೈಶ್ವಾನರನಿಗೆ ವಿಶೇಷಣಗಳನ್ನು ಹೇಳಿದ್ದರಿಂದ ವೈಶ್ವಾನರನು ಬ್ರಹ್ಮನೇ ಆಗುತ್ತಾನೆಂದು ಸಿದ್ಧಾಂತ ಮಾಡಿದ್ದಾರೆ.

ಅದ್ವೈತಿಗಳಂತೆ ಇವರ ವ್ಯಾಖ್ಯಾನವೂ ಇರುತ್ತದೆ. ಜಾಠರಾಗ್ನಿಯನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದು ತಪ್ಪಾಗುತ್ತದೆಂಬುದು ಇವರಿಗೂ ಸಮಾನ.

ಮತ್ತು 'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ವೈಶ್ವಾನರನಲ್ಲಿ ನೇರವಾಗಿ ವಿಶೇಷಣವಾಗಿರುವ ಆತ್ಮಶ್ರುತಿಯಿಂದಲೇ ಬ್ರಹ್ಮನು ವೈಶ್ವಾನರನಾಗಿದ್ದಾನೆಂದು ಹೇಳಲು ಬರುವಾಗ ಪ್ರಕರಣದಿಂದ ಲಭಿಸುವ ಲಿಂಗವೆಂಬ ವಿಶೇಷಣದಿಂದ ಪರಮಾತ್ಮನನ್ನು ವೈಶ್ವಾನರನೆಂದು ನಿರ್ಣಯಿಸುವುದು ಅಯುಕ್ತವಾಗಿದೆ.

'ಯಸ್ಯಾಗ್ನಿರಸ್ಯಾಮ್' ಇತ್ಯಾದಿ ಶ್ರುತಿಗಳು ದ್ಯುಲೋಕಾದಿಗಳು ಬ್ರಹ್ಮನ ಅವಯವಗಳೆಂದು ಹೇಳಲ್ಪಟ್ಟಿದೆ. ಶ್ರುತಿಗೆ ಅನುಸಾರಿಯಾಗಿ ಸ್ಮೃತಿಯನ್ನು ವ್ಯಾಖ್ಯಾನಿಸಬೇಕಾದ್ದರಿಂದ ದ್ಯುಲೋಕಾದಿಗಳು ಬ್ರಹ್ಮನ ಅವಯವಗಳೆಂದೇ ಶ್ರುತಿಗಳೂ ಸಹ ಹೇಳುತ್ತಿವೆ. ಆದರೆ ಬ್ರಹ್ಮನೇ ವೈಶ್ವಾನರನೆಂದು ಅದ್ವೈತಿಗಳ ವ್ಯಾಖ್ಯಾನ.

ದ್ಯುಲೋಕದಿಂದ ಪೃಥಿವೀ ಲೋಕಪರ್ಯಂತ. ಸಕಲ ಲೋಕಗಳೂ ಬ್ರಹ್ಮನ ಅವಯವಗಳೇ ಆಗಿವೆಯೆಂದು 'ಅಗ್ನಿರ್ಮೂರ್ಧಾ' ಇತ್ಯಾದಿ ಶ್ರುತಿಗಳು ಪ್ರತಿಪಾದಿಸುತ್ತಿದೆ. ಅಂದರೆ ಶ್ರುತಿಯಲ್ಲಿ ಮಾಡಲ್ಪಟ್ಟ ಉಲ್ಲೇಖವೇ ವೈಶ್ವಾನರನು ಬ್ರಹ್ಮನಾಗಿದ್ದಾನೆನ್ನಲು ಕಾರಣವಾಗಿದೆ.ಯೆಂದು ರಾಮಾನುಜರು ವ್ಯಾಖ್ಯಾನಿಸುತ್ತಾರೆ.

ಇವರಿಬ್ಬರ ಅಭಿಪ್ರಾಯವೂ ಸರಿಯಿಲ್ಲ. ಚಕ್ಷುಷೀ ಚಂದ್ರಸೂರ್ಯೌ ಇತ್ಯಾದಿ ಶ್ರುತಿಯೂ ಸಹ ಸ್ಮೃತಿ ಮೂಲವಾಗಿದೆ. ಮತ್ತು 'ಅಹಂ ವೈಶ್ವಾನರಃ' ಎಂಬ ಶ್ರುತಿಯಲ್ಲಿ ನೇರವಾಗಿಯೇ ಈಶ್ವರನನ್ನು ವೈಶ್ವಾನರನೆಂದು ಹೇಳಿದ್ದಾರೆ. ರಾಮಾನುಜರು 'ಸ್ಮರ್ಯಮಾಣ' ಶಬ್ದಕ್ಕೆ 'ಪ್ರತ್ಯಭಿಜ್ಞಾನಮಾಯ' ಎಂಬರ್ಥವನ್ನು ಹೇಳಿದ್ದಾರೆ. ಈ ಅರ್ಥವು ಸೂತ್ರಾರ್ಥ ಸ್ವಾರಸ್ಯಕ್ಕೆ ಭಂಗವನ್ನುಂಟು ಮಾಡುತ್ತಿದೆ.

ವೈಶ್ವಾನರನು ಬ್ರಹ್ಮನ ಪ್ರತೀತ ಹಾಗೂ ಉಪಾಧಿಯೆಂದು 'ತಥಾ ದೃಷ್ಟ್ಯುಪದೇಶಾತ್' ಎಂಬ ಸೂತ್ರಕ್ಕೆ ಅರ್ಥೈಸುತ್ತಾರೆ. ಆದರೆ ವೈಶ್ವಾನರನು ಪ್ರತೀಕವಾದರೆ ಬ್ರಹ್ಮವಾಚಕವಾಗಲು ಹೇಗೆ ಸಾಧ್ಯ ? ಮನಸ್ಸು ಬ್ರಹ್ಮನಿಗೆ ಪ್ರತೀಕವಾದ ಮಾತ್ರದಿಂದ 'ಮನಸ್' ಶಬ್ದದಿಂದ ಬ್ರಹ್ಮನು ಪ್ರತಿಪಾದ್ಯನಾಗುತ್ತಾನೇನು? ಮತ್ತು ಅಂತಹ ಪ್ರತೀಕೋಪಾಸನೆಯಿಂದ ಯಾವುದೇ ಪಾಪಗಳೂ ಸಹ ಕ್ಷಯವಾಗುವುದಿಲ್ಲ. ಕೇವಲ ನಿರ್ಗುಣೋಪಾಸನೆಯಿಂದಷ್ಟೇ ಪಾಪಕ್ಷಯವಾಗುತ್ತದೆಂಬುದು ಅದ್ವೈತಿಗಳ ಸಿದ್ಧಾಂತ. 'ಅರ್ಭಕೌಕಸ್ತ್ವಾತ್' ಮತ್ತು 'ತಥಾದೃಷ್ಟ್ಯುಪದೇಶಾತ್' ಇತ್ಯಾದಿ ಸೂತ್ರಗಳಲ್ಲಿ ಬ್ರಹ್ಮನಿಗೆ ಪ್ರಾದೇಶ ಮಾತ್ರ ಪರಿಮಾಣವನ್ನು ಸಮರ್ಥಿಸಿದ್ದಾಗಿದೆ. ಪುನಃ ಇಲ್ಲಿಯೂ ಅದನ್ನೇ ಪ್ರತಿಪಾದಿಸಿದರೆ ಪುನರುಕ್ತಿ ಬರುತ್ತದೆಂದು ತಿಳಿಯಬೇಕು. ರಾಮಾನುಜ ಭಾಷ್ಯದಲ್ಲಿಯ 'ಅಭಿವ್ಯಕ್ತೇರಿತಿ' ಇತ್ಯಾದಿ ನಾಲ್ಕು ಸೂತ್ರಗಳು ಬೇರೆ ಬೇರೆ ವಿಷಯವನ್ನು ಪ್ರತಿಪಾದಿಸುತ್ತವೆಂದು ಹೇಳಿದ್ದಾರೆ. ಆದರೆ ಒಂದೇ ವಿಷಯದಲ್ಲಿ ಅಭಿಪ್ರಾಯ ಭೇದಗಳನ್ನು ಸೂಚಿಸುತ್ತಿದೆಯೆಂದು ಹೇಳುವುದೇ ಸ್ವರಸವಾಗುತ್ತದೆ.

ಇಲ್ಲಿ ಪ್ರಥಮಾಧ್ಯಾಯದ ದ್ವಿತೀಯ ಪಾದದ ಸಾರವು ಮುಕ್ತಾಯವಾಯಿತು.

ಗಮನಿಸಿ : ಮೂರನೆಯ ಪಾದದ ದ್ಯುಭ್ವಾದ್ಯಧಿಕರಣದ ಸಾರವನ್ನು ಮುಂದಿನ ಸಂಪುಟದಲ್ಲಿ ನೀಡಲಾಗಿದೆ.

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಅಂತರಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷ ವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಅಂತರಾಧಿಕರಣ

ಬ್ರಹ್ಮಸೂತ್ರ

'ಅಂತರ ಉಪಪತ್ತೇಃ' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ॥ अन्तर उपपत्तेः ॥ (१ - २-१३)

''ಯ ಏಷೋಽಂತರಕ್ಷಿಣಿ ಪುರುಷಃ'' ಎಂಬ ಶ್ರುತಿಯಲ್ಲಿ ಚಕ್ಷುರಿಂದ್ರಿಯದಲ್ಲಿ ನಿಯಾಮಕನಾಗಿರುವವನು ಬ್ರಹ್ಮನೇ ಹೊರತು ಅಗ್ನಿಯಲ್ಲ. ಅಮೃತತ್ವ ಅಭಯತ್ವ ಮೊದಲಾದ ಅಸಾಧಾರಣ ಧರ್ಮಗಳನ್ನು ಬ್ರಹ್ಮಶಬ್ದ ಮೊದಲಾದವುಗಳನ್ನು ಹೇಳಿರುವುದರಿಂದ.

''ಯ ಏಷೋಽಂತರಕ್ಷಿಣಿ'' ಎಂದು ಶ್ರುತಿಯಲ್ಲಿ ಪ್ರತಿಪಾದ್ಯನಾದ, ''ಅಂತರಃ'' = ಕಣ್ಣಿನೊಳಗೆ ನಿಯಾಮಕನಾಗಿರುವವನು ವಿಷ್ಣುವೇ ಆಗಿದ್ದಾನೆ ಹೊರತು ಅಗ್ನಿ ಅಲ್ಲ. ಏಕೆಂದರೆ ''ಉಪಪತ್ತೇಃ'' = ಕಣ್ಣಿನಲ್ಲಿರುವವನಿಗೆ ಅಮೃತತ್ವ, ಬ್ರಹ್ಮಶಬ್ದಗಳು ಕೇಳಿಸುತ್ತಿರುವುದರಿಂದ. ಈ ಎಲ್ಲಾ ಧರ್ಮಗಳು ವಿಷ್ಣುವಿನಲ್ಲಿಯೇ ಉಪಪನ್ನವಾಗುತ್ತವೆಯೆಂದು ಅಭಿಪ್ರಾಯ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಆದಿತ್ಯನಲ್ಲಿರುವವನು ಯಾರು ?

ब्रह्मसूत्रभाष्यम् – आदित्ये विष्णुरित्युक्तम् । 'य एष आदित्ये पुरुषः सोऽहमस्मि स एवाहमस्मि' (छां. ४-११.) इत्यादावग्नीनामेवाऽदित्यादिस्थत्वमुच्यते।

ಅನುವಾದ - ಸೂರ್ಯಮಂಡಲದಲ್ಲಿರುವವನು ವಿಷ್ಣುವೇ ಆಗಿದ್ದಾನೆಂದು ಆನಂದಮಯಾಧಿಕರಣದಲ್ಲಿ ಸಮರ್ಥಿಸಲಾಗಿದೆ. ಆದರೆ ಛಾಂದೋಗ್ಯೋಪನಿಷತ್ತಿನಲ್ಲಿ 'ಸೂರ್ಯಮಂಡಲದಲ್ಲಿರುವ ಪುರುಷನು ನಾನು, ನಾನೇ ಅವನಾಗಿದ್ದೇನೆ' ಎಂದು ಕೇಳಿಸುತ್ತಿದೆ. ಗಾರ್ಹಪತ್ಯ ಮೊದಲಾದ ಅಗ್ನಿಗಳಿಗೆ ಸೂರ್ಯಮಂಡಲದಲ್ಲಿ ಸ್ಥಿತಿಯು ಹೇಳಲ್ಪಟ್ಟಿದೆ.

ಪ್ರತಿಪದಾರ್ಥ - ಈ ಅಧಿಕರಣದಲ್ಲಿ ಚಕ್ಷುರಂತಸ್ಥತ್ವಲಿಂಗವನ್ನು ಸಮನ್ವಯ ಮಾಡಲಾಗಿದೆ. ಶ್ರುತ್ಯಾದಿ ಸಂಗತಿ, ವಿಷಯ, ಸಂಶಯಗಳನ್ನು ನಿರೂಪಿಸುತ್ತಾ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು ತೋರಿಸುತ್ತಿದ್ದಾರೆ-

ಆದಿತ್ಯೇ = ಆದಿತ್ಯನಲ್ಲಿ, ವಿಷ್ಣುಃ ಇತಿ = ಆನಂದಮಯ ಸ್ವರೂಪಿಯಾದ ವಿಷ್ಣು ಇದ್ದಾನೆಂದು, ಉಕ್ತಂ = ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟಿದೆ. ಆದಿತ್ಯೇ = ಸೂರ್ಯನಲ್ಲಿ, ಯಃ ಏಷಃ = ಯಾವಪ್ರಸಿದ್ಧನಾದ, ಪುರುಷಃ = ಪುರುಷನು ನೆಲೆಸಿದ್ದಾನೋ, ಸಃ = ಅವನು, ಅಹಮಸ್ಮಿ =ನಾನಾಗಿದ್ದೇನೆ, ಅಹಮೇವ = ನಾನೇ, ಸಃ = ಅವನು, ಅಸ್ಮಿ = ಆಗಿದ್ದೇನೆ. ಇತ್ಯಾದೌ = ಇವೇ ಮೊದಲಾದ, ಛಾಂದೋಗ್ಯದ ಮಾತುಗಳಲ್ಲಿ, ಅಗ್ನೀನಾಮೇವ = ಗಾರ್ಹಪತ್ಯ ಮೊದಲಾದ ಅಗ್ನಿಗಳಿಗೆ, ಆದಿತ್ಯಾದಿಸ್ಥತ್ವಂ = ಸೂರ್ಯಮಂಡಲ ಮೊದಲಾದವುಗಳಲ್ಲಿ ಸ್ಥಿತಿಯು, ಉಚ್ಯತೇ = ಹೇಳಲ್ಪಟ್ಟಿದೆ.

ಛಾಂದೋಗ್ಯದಲ್ಲಿ ಯಾರನ್ನು ಹೇಳಿದ್ದಾರೆ ?

ಬ್ರಹ್ಮಸೂತ್ರಭಾಷ್ಯಮ್ — ಅತೋऽಕ್ಷ್ಯಾದಿತ್ಯಯೋರೈಕ್ಯಾತ್ 'ಯ ಏಷोऽನ್ತರಕ್ಷಿಣಿ ಪುರುಷೋ ದೃಶ್ಯತೇ' (ಛಾಂ. ೪-೧೪.) ಇತ್ಯತ್ರಾಪ್ಯಗ್ನಿರೇವೋಚ್ಯತೇ ।

ಹಿಂದೆ ಹೇಳಿದ ಕಾರಣದಿಂದ ಕಣ್ಣಿನಲ್ಲಿ ನಿಯಾಮಕನಾಗಿರುವವನು ಸೂರ್ಯಮಂಡಲದಲ್ಲಿರುವುದರಿಂದ ''ಯಏಷೋऽಂತರಕ್ಷಿಣಿ ಪುರುಷೋ ದೃಶತೇ'' ಎಂಬ ವಾಕ್ಯದಲ್ಲಿಯೂ ಅಗ್ನಿಯೇ ಪ್ರತಿಪಾದ್ಯನಾಗುತ್ತಾನೆ.

ಪ್ರತಿಪದಾರ್ಥ - ಹಿಂದೆ ಹೇಳಿದ್ದರಿಂದ ಏನು ಸಮರ್ಥಿಸಿದಂತಾಯಿತು ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ -

ಅತಃ = ಆ ಕಾರಣದಿಂದ, ಅಕ್ಷ್ಯಾದಿತ್ಯಯೋಃ = ಚಕ್ಷುಗ್ಗೋರ್ಲಕ ಸೂರ್ಯಮಂಡಲದಲ್ಲಿರುವವರಿಗೆ, ಐಕ್ಯಾತ್ = ಐಕ್ಯವಿರುವುದರಿಂದ, ಅಕ್ಷಿಣಿ = ಚಕ್ಷುಗ್ಗೋರ್ಲಕದಲ್ಲಿ, ಯಃ = ಯಾವಾತನು, ದೃಶ್ಯತೇ = ಕಾಣಿಸುತ್ತಾನೊ, ಇತ್ಯತ್ರಾಪಿ = ಎಂಬಲ್ಲಿಯೂ, ಏಷಃ = ಹಿಂದೆ ಹೇಳಲ್ಪಟ್ಟ, ಅಗ್ನಿರೇವ = ಅಗ್ನಿಯೇ, ಉಚ್ಯತೇ = ಪ್ರತಿಪಾದ್ಯನಾಗುತ್ತಾನೆ.

ಅಗ್ನಿಜ್ಞಾನದಿಂದ ಮೋಕ್ಷವೇ ?

ಬ್ರಹ್ಮಸೂತ್ರಭಾಷ್ಯಮ್ — ಅತಃ -

'ತದ್ಯಥಾ ಪುಷ್ಕರಪಲಾಶ ಆಪೋ ನ ಶ್ಲಿಷ್ಯನ್ತ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ' (ಛಾಂ. ೪-೧೪.)ಇತ್ಯಗ್ನಿಜ್ಞಾನಾದೇವ ಸರ್ವಪಾಪಾಶ್ಲೇಷಾನ್ಮೋಕ್ಷೋಪಪತ್ತಿರಿತಿ । ಅತोऽಬ್ರವೀತಿ

ಯಾವರೀತಿಯಾಗಿ ಪದ್ಮಪತ್ರಕ್ಕೆ ನೀರು ಹೇಗೆ ಅಂಟುವುದಿಲ್ಲವೊ ಅದರಂತೆ ಚಕ್ಷುರಂತಃಸ್ಥನನ್ನು ತಿಳಿದವನಿಗೆ ಪಾಪವು ಅಂಟುವುದಿಲ್ಲ ಎಂಬ ಛಾಂದೋಗ್ಯದ ಮಾತಿನಂತೆ ಅಗ್ನಿಯ ಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆ. ಆದ್ದರಿಂದ ಆನಂದಮಯನೂ ಸಹ ಅಗ್ನಿಯೇ ಆಗುತ್ತಾನೆಂದು ಪೂರ್ವಪಕ್ಷ.

ಪ್ರತಿಪದಾರ್ಥ - ಅತಃ = ಹಿಂದಿ ಹೇಳಿದ ಕಾರಣದಿಂದ, ಯಥಾ = ಹೇಗೆ, ಪುಷ್ಕರಪಲಾಶೇ = ಪದ್ಮಪತ್ರದಲ್ಲಿ, ಆಪಃ = ನೀರು, ನ ಶ್ಲಿಷ್ಯಂತೇ = ಅಂಟುವುದಿಲ್ಲವೊ, ಏವಂ = ಅದೇರೀತಿ, ಏವಂವಿದಿ = ಕಣ್ಣಿನಲ್ಲಿರುವವನನ್ನು ತಿಳಿಯುವವನಿಗೆ, ಪಾಪಂ ಕರ್ಮ = ಪಾಪ ಕರ್ಮವು, ನಶ್ಲಿಷ್ಯತೇ = ಲೇಪವಾಗುವುದಿಲ್ಲ. ಇತಿ = ಹೀಗೆ, ಅಗ್ನಿ = ಅಗ್ನಿಯ ಜ್ಞಾನದಿಂದಲೇ, ಸರ್ವಪಾಪಾಶ್ಲೇಷಾತ್ = ಎಲ್ಲ ಪಾಪಗಳ ಅಲೇಪದ ಮೂಲಕ, ಮೋಕ್ಷ = ಮೋಕ್ಷದ, ಉಪಪತ್ತಿಃ = ಪ್ರಾಪ್ತಿಯು, ಇತಿ = ಆಗುತ್ತದೆಂದು, ಅತಃ = ಆಕ್ಷೇಪಿಸಿದರೆ, ಅಬ್ರವೀತ್ = ಸೂತ್ರಕಾರರೇ ಉತ್ತರಿಸುತ್ತಿದ್ದಾರೆ.

ಕಣ್ಣಿನಲ್ಲಿರುವವನು ವಿಷ್ಣುವೇ

ಬ್ರಹ್ಮಸೂತ್ರಭಾಷ್ಯಮ್ — ।। अन्तर उपपत्तेः ।।

चक्षुरन्तस्स्थो विष्णुरेव ।'त्रिपादस्यामृतं दिवि' (ऋ. १०-९०-३.) इत्यादिना तस्यैवामृतत्वाद्युपपत्तेः ।

ಚಕ್ಷುರಂತರ್ಗತನಾದವನು ವಿಷ್ಣುವೇ ಆಗಿದ್ದಾನೆ. ಏಕೆಂದರೆ ''ತ್ರಿಪಾದಸ್ಯ ಅಮೃತಂ ದಿವಿ'' ಎಂಬಲ್ಲಿ ಅಮೃತತ್ವವನ್ನು ವಿಷ್ಣುವಿನ ಧರ್ಮವೆಂದು ಹೇಳಲಾಗಿದೆ.

ಪ್ರತಿಪದಾರ್ಥ - ಚಕ್ಷುರಂತಸ್ಥಃ = ಚಕ್ಷುರಿಂದ್ರಿಯದಲ್ಲಿ ನಿಯಾಮಕನಾಗಿರುವವನು, ವಿಷ್ಣುರೇವ = ವಿಷ್ಣುವೇ ಆಗಿದ್ದಾನೆ

ಏಕೆಂದರೆ ಅಸ್ಯ = ಇವನ, ಅಮೃತಂ = ನಾಶ ರಹಿತವಾದ, ತ್ರಿಪಾದಃ = ಮೂರು ಪಾದಗಳು, ದಿವಿ = ದೇವಲೋಕದಲ್ಲಿವೆ. ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ತಸ್ಯೈವ = ವಿಷ್ಣುವಿನಲ್ಲಿಯೇ, ಅಮೃತತ್ವಾದಿ = ಅಮೃತತ್ವ ಮೊದಲಾದ ಧರ್ಮಗಳು, ಉಪಪತ್ತೇಃ = ಯುಕ್ತವಾಗುತ್ತವೆ.

ಸಕಲಭಿನ್ನನಾದ ವಿಷ್ಣು ಸಕಲಶಬ್ದವಾಚ್ಯ

ಬ್ರಹ್ಮಸೂತ್ರಭಾಷ್ಯಮ್ –

ಬ್ರಹ್ಮಾತ್ಮಶಬ್ದಾದ್ಯುಪಪತ್ತೇಶ್ಚ ।'ಸೋऽಹಮಸ್ಮಿ' ಇತ್ಯಾದಿ ತ್ವನ್ತರ್ಯಾಮ್ಯಪೇಕ್ಷಯಾ ।
'ಅನ್ತರ್ಯಾಮಿಣಮೀಶೇಶಮಪೇಕ್ಷ್ಯಾಹಂ ತ್ವಮಿತ್ಯಪಿ ।
ಸರ್ವೇ ಶಬ್ದಾಃ (ಸರ್ವಶಬ್ದಾಃ) ಪ್ರಯುಜ್ಯನ್ತೇ ಸತಿ ಭೇದೇऽಪಿ ವಸ್ತುಷು ।।'
ಇತಿ ಮಹಾಕೌರ್ಮೇ (ಕೌರ್ಮೇ)।।

ಮತ್ತು ''ಏತತ್ ಬ್ರಹ್ಮ'' ಎಂಬಲ್ಲಿ ಹೇಳಲ್ಪಟ್ಟ ಬ್ರಹ್ಮಶಬ್ದ ಹಾಗೂ ಆತ್ಮಶಬ್ದ ವಿಷ್ಣುವಿನಲ್ಲಿಯೇ ಉಪಪನ್ನವಾಗುತ್ತದೆ. ಅಗ್ನಿಯಲ್ಲಿ ಹೇಳಲ್ಪಟ್ಟ ''ಸೋऽಹಮಸ್ಮಿ'' ಮುಂತಾದ ವಾಕ್ಯಗಳು ಅಂತರ್ಯಾಮಿ ವಿವಕ್ಷೆಯಿಂದ ಪರಮಾತನಲ್ಲಿಯೇ ಉಪಪನ್ನವಾಗುತ್ತವೆ –

''ಬ್ರಹ್ಮಾದಿ ದೇವತೆಗಳಿಗೆ ಒಡೆಯನಾದ ಮಹಾವಿಷ್ಣುವು ಸರ್ವಾಂತರ್ಯಾಮಿಯಾಗಿದ್ದಾನೆ. ಆದ್ದರಿಂದ ಅಹಂ, ತ್ವಂ, ಮೊದಲಾದ ಶಬ್ದಗಳನ್ನು ಮತ್ತು ಸಕಲ ಶಬ್ದಗಳನ್ನು ಸಕಲ ಪದಾರ್ಥಗಳಿಂದ ಭೇದವಿದ್ದರೂ ಅವನಲ್ಲಿ ಪ್ರಯೋಗಿಸಲಾಗುತ್ತದೆ'' ಹೀಗೆ ಮಹಾಕೌರ್ಮಪುರಾಣವು ಹೇಳಿದೆ.

ಪ್ರತಿಪದಾರ್ಥ - ಬ್ರಹಾತ್ಮಶಬ್ದಾದಿ = 'ಏತತ್ ಬ್ರಹ್ಮ' ಎಂಬಲ್ಲಿ ಹೇಳಲ್ಪಟ್ಟ ಬ್ರಹ್ಮ ಶಬ್ದ ಆತ್ಮಶಬ್ದ ಮೊದಲಾದವುಗಳು, ಉಪಪತ್ತೇಶ್ಚ = ವಿಷ್ಣುವಿನಲ್ಲಿಯೇ ಉಪಪನ್ನವಾಗುತ್ತವೆ.

ಸೋऽಹಮಸ್ಮಿ = ಅವನೇ ನಾನಾಗಿದ್ದೇನೆ, ಇತ್ಯಾದಿ ತು = ಇವೇ ಮೊದಲಾದ ವಾಕ್ಯಗಳಾದರು, ಅಂತರ್ಯಾಮ್ಯಪೇಕ್ಷಯಾ = ಅಂತರ್ಯಾಮಿಯ, = ದೃಷ್ಟಿಯಿಂದ ಉಪಪನ್ನವಾಗುತ್ತವೆ. ಏಕೆಂದರೆ, ಅಂತರ್ಯಾಮಿಣಂ = ಅಂತರ್ಯಾಮಿಯಾದ, ಈಶೇಶಂ = ಸಕಲ ದೇವತೆಗಳಿಗೆ ಒಡೆಯನಾದ ವಿಷ್ಣುವನ್ನು, ಅಪೇಕ್ಷ್ಯ = ವಿವಕ್ಷಿಸಿ, ಅಹಂ = ನಾನು ಎಂಬ ಶಬ್ದವು, ತ್ವಂ = ನೀನು ಎಂಬ ಶಬ್ದವು, ಮತ್ತು ಇತ್ಯಪಿ = ಈ ರೀತಿಯಾಗಿ, ಸರ್ವೇ ಶಬ್ದಾಃ = ಎಲ್ಲಾ ಶಬ್ದಗಳೂ ಸಹ, ಪ್ರಯುಜ್ಯಂತೇ = ಪ್ರಯೋಗಿಸಲ್ಪಡುತ್ತವೆ. ವಸ್ತುಷು = ಪದಾರ್ಥಗಳಲ್ಲಿ,

ಭೇದೇ ಸತಿ ಅಪಿ = ಭೇದವು ಇದ್ದರೂ ಕೂಡ, ಅಂತರ್ಯಾಮಿಯ ವಿವಕ್ಷೆಯಿಂದ, ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಇತಿ = ಹೀಗೆ, ಮಹಾಕೌರ್ಮೇ = ಮಹಾಕೂರ್ಮಪುರಾಣವು ಹೇಳಿದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ
ಸತ್ತರ್ಕದೀಪಾವಳಿ

ಅಂತರಾಧಿಕರಣದ ವಿಷಯವಾಕ್ಯವೇನು ?

सत्तर्कदीपावलिः – अन्तर उपपत्तेः ।। इदमाम्नायते । 'य एषोऽन्तरक्षिणि पुरुषो दृश्यत एष आत्मा' इति । अत्रात्मेतिशब्दनिर्दिष्टोऽक्षिस्थपुरुषः कोऽयमिति विचार्यते ।

ಈ ಅಧಿಕರಣದ ವಿಷಯವಾಕ್ಯ ಹೀಗಿದೆ - ''ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತ ಏಷ ಆತ್ಮಾ'' ಎಂದು ಈ ಶ್ರುತಿಯಲ್ಲಿ ಆತ್ಮ ಶಬ್ದದಿಂದ ನಿರ್ದೇಶಿಸಲ್ಪಟ್ಟ ಕಣ್ಣಿನಲ್ಲಿರುವ ಪುರುಷನು ಯಾರೆಂದು ವಿಚಾರ ಮಾಡಲಾಗಿದೆ.

ಆದಿತ್ಯ ಪುರುಷಪ್ರಾಪಕ ಶ್ರುತಿಗಳು ಯಾವುವು ?

सत्तर्कदीपावलिः – अत्राधस्तनवाक्यादादित्यस्थः पुरुषः तावदग्निरेवावगम्यते। 'अथ हैनं गार्हपत्योऽनुशशास' 'य एष आदित्ये पुरुषो दृश्यते सोऽहमस्मि' इति 'स एवाहमस्मि' इति 'स यथा चन्द्रस्थपुरुषोऽह्नि विशेषावगतः' 'अथ हैनमन्वाहार्यपचनोऽनुशशास य एष चन्द्रमसि पुरुषो दृश्यते सोऽहमस्मि' इति ।

'ಅಥ ಹೈನಂ ಗಾರ್ಹಪತ್ಯೋಽನುಶಶಾಸ' 'ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋಽಹಮಸ್ಮಿ' 'ಸ ಯಥಾ ಚಂದ್ರಸ್ಥಪುರುಷೋಽಹ್ನಿ ವಿಶೇಷಾವಗತಃ' 'ಅಥ ಹೈನಮನ್ವಾಹಾ

ರ್ಯಪಚನೋऽನುಶಶಾಸ ಯ ಏಷ ಚಂದ್ರಮಸಿ ಪುರುಷೋ ದೃಶ್ಯತೇ ಸೋऽಹಮಸ್ಮಿ' ಇತ್ಯಾದಿಯಾದ ಹೇಳುವ ಶ್ರುತಿಗಳಂತೆ ಆದಿತ್ಯನಲ್ಲಿರುವ ಪುರುಷನೇ ಕಣ್ಣಿನಲ್ಲಿರುವುದರಿಂದ ಅಗ್ನಿಯೇ ಅಕ್ಷಿಸ್ಥನೆನಿಸುತ್ತಾನೆ.

ಆದಿತ್ಯಾಧಿಷ್ಠಾತೃವು ವಿಷ್ಣುವಲ್ಲ

सत्तर्कदीपावलिः – आदित्यस्थपुरुषस्यवाक्षिस्थपुरुषत्वेनाक्ष्यादित्यैक्यस्यानेक श्रुतिसिद्धत्वादग्निरेवायमक्षिस्थपुरुषः स्यात् । अतश्च 'यश्चासावादित्यः' इत्यादिना यदादित्याधिष्ठातृत्वमुक्तं विष्णोस्तदप्यग्नेरेव समायातम् ।

''ಅಥ ಹೈನಂ ಗಾರ್ಹಪತ್ಯೋऽನುಶಶಾಸ'' ಎಂಬುದಾಗಿ ಆದಿತ್ಯನಲ್ಲಿರುವ ಪುರುಷನಿಗೆ ಅಕ್ಷಿಯಲ್ಲಿರುವ ಪುರುಷನಿಂದ ಐಕ್ಯವು ತಿಳಿಯುತ್ತದೆ. ಹೀಗೆ ಅನೇಕ ಶ್ರುತಿಗಳಿಂದ ಅಗ್ನಿಯು ಅಕ್ಷಿಸ್ಥನಾಗಬೇಕು. ಆದ್ದರಿಂದ ''ಯಶ್ಚಾಸಾವಾದಿತ್ಯೇ'' ಇತ್ಯಾದಿಯಾಗಿ ಆದಿತ್ಯನಿಗೆ ವಿಷ್ಣು ಅಧಿಷ್ಠಾನನಾಗಿದ್ದಾನೆಂಬುದು ಅಗ್ನಿಯಲ್ಲಿಯೇ ಸಮನ್ವಯವಾಗುತ್ತದೆ.

ವಿಷ್ಣುಜ್ಞಾನದಿಂದಲೇ ಮೋಕ್ಷವಾಗಬೇಕೆಂಬ ನಿಯಮವಿಲ್ಲ

सत्तर्कदीपावलिः – यद्विष्णुज्ञानमेव मोक्षसाधनं प्रतिपादितम् । 'तमेवं विद्वानमृत इह भवति । नान्यः पन्था' इत्यादिना तदपि न सिद्ध्यति अक्षिस्थपुरुषाग्निविदो मोक्षश्रवणात् । 'एवमेवंविदि पापं कर्म न श्लिष्यते' इत्येवं पूर्वपक्षयति – आदित्य इति ।।

ಇನ್ನು ಹಿಂದೆ ವಿಷ್ಣುಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಲಾಗಿತ್ತು. ಆದರೆ ''ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ'' ಎಂಬ ಶ್ರುತಿಯಲ್ಲಿ ಅಕ್ಷಿಯಲ್ಲಿರುವ ಅಗ್ನಿಯ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಹೇಳಲಾಗಿದೆ. ''ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ'' ಎಂಬ ಶ್ರುತಿಯಂತೆ ಇಂತಹ ಅಗ್ನಿಯ ಜ್ಞಾನಪಡೆದವನು ತನ್ನಜ್ಞಾನದಿಂದ ಪುಣ್ಯ ಪಾಪಗಳ ಸಂಪರ್ಕಕ್ಕೂ ಒಳಗಾಗಲಾರನು. ಈ ಪೂರ್ವಪಕ್ಷವನ್ನು 'ಆದಿತ್ಯೇ' ಎಂಬುದರಿಂದ ಮಾಡುತ್ತಿದ್ದಾರೆ.

ಅಮೃತತ್ವಾದಿಧರ್ಮಗಳು ವಿಷ್ಣು ಮಾತ್ರ ನಿಷ್ಠ

सत्तर्कदीपावलिः – अत्र सूत्रमवतार्य व्याचष्टे – अन्तरित्यादिना ।। अक्षिस्थपुरुषोऽयं विष्णुरेव । 'एष आत्मेति होवाच' 'एतदमृतमेतदभयमेतद् ब्रह्म' इति श्रूयमाणत्वात् । अमृतत्वादिकं विष्णोरेव श्रूयते । 'त्रिपादस्यामृतं दिवि' इत्यादिश्रुत्यन्तरे ।

ಈ ಪೂರ್ವಪಕ್ಷ ನಿರಾಕರಣೆ ವಿಷಯದಲ್ಲಿ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನಿಸಿದ್ದಾರೆ 'ಅಂತಃ' ಎಂಬ ವಾಕ್ಯದಿಂದ. ಅಕ್ಷಿಸ್ಥಪುರುಷನು ವಿಷ್ಣುವೇ ಆಗಿದ್ದಾನೆ. ''ಏಷ ಆತ್ಮೇತಿ ಹೋವಾಚ'' ಎಂದು ತಿಳಿಸಿರುವುದರಿಂದ ಅಮೃತತ್ವಾದಿಗಳು ವಿಷ್ಣುವಿನ ಧರ್ಮವೇ ಆಗಿವೆಯೆಂದು ''ತ್ರಿಪಾದಸ್ಯಾಮೃತಂ ದಿವಿ'' ಎಂಬ ಮತ್ತೊಂದು ಶ್ರುತಿಯಿಂದ ಸ್ಪಷ್ಟವಾಗುತ್ತದೆ.

ಅಗ್ನಿಯಲ್ಲಿರುವ ಧರ್ಮಗಳು ಅಂತರ್ಯಾಮಿ ಪರವಾಗಿದೆ

सत्तर्कदीपावलिः – नच विष्णुवदग्नेरप्यमृतत्वं शङ्कनीयम् । 'तमेताः पञ्चदेवताः परिम्रियन्ते विद्युद् वृष्टिश्चन्द्रमा आदित्योऽग्निः' 'भयादग्निः तपति' इत्यादिश्रुतिविरोधात् । एतद्वाक्यमग्निप्रापकमुक्तं तदन्यथोपपन्नमित्याह – सोऽहमिति ।।

ವಿಷ್ಣುವಿನಂತೆ ಅಗ್ನಿಯಲ್ಲಿಯೂ ಅಮೃತತ್ವವನ್ನು ಶಂಕಿಸಬಾರದು. ''ತಮೇತಾಃ ಪಂಚದೇವತಾಃ ಪರಿಮ್ರಿಯಂತೇ ವಿದ್ಯುದ್ವೃಷ್ಟಿಶ್ಚಂದ್ರಮಾ ಆದಿತ್ಯೋಽಗ್ನಿಃ'', 'ಭಯಾದಗ್ನಿಸ್ತಪತಿ' ಇತ್ಯಾದಿ ಶ್ರುತಿಯಂತೆ ವಿಷ್ಣುವಿಗೆ ಹೆದರಿ ಅಗ್ನಿಯು ಬೆಳಗುತ್ತಾನೆಂದು ತಿಳಿಯುತ್ತದೆ. ಇನ್ನು ಉಳಿದ ಶ್ರುತಿಗಳಲ್ಲಿ ಅಗ್ನಿಪ್ರಾಪಕವಾಗಿ ಹೇಳಿದ್ದನ್ನು ವಿಷ್ಣುವಿನಲ್ಲಿ ಸಮನ್ವಯಗೊಳಿಸಬೇಕೆಂದು 'ಸೋಽಹಂ' ಇತ್ಯಾದಿ ವಾಕ್ಯಗಳಿಂದ ಪ್ರತಿಪಾದಿಸುತ್ತಿದ್ದಾರೆ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಆದಿತ್ಯ, ಚಂದ್ರ, ವಿದ್ಯುತ್ ಇವರಲ್ಲಿರುವವನು ಅಗ್ನಿಯೆಂದು ಪೂರ್ವಪಕ್ಷ

तत्वप्रदीपः – 'यश्चासावादित्ये' 'अन्तरादित्ये मनसा चरन्तम्' इत्यादावादित्ये विष्णुरित्युक्तम् । 'य एष आदित्ये पुरुषो दृश्यते सोऽहमस्मि स एवाहमस्मि', 'य एष चन्द्रमसि पुरुषो दृश्यते सोऽहमस्मि स एवाहमस्मि','य एष विद्युति पुरुषो दृश्यते सोऽहमस्मि स एवाहमस्मि' इत्यग्नीनां गार्हपत्यान्वाहार्यपचनावहनीयानाम् उपकोसलोपदेष्टृणाम् आदित्यादिस्थत्वमुच्यते ।

ತೈತ್ತಿರೀಯೋಪನಿಷತ್ತಿನಲ್ಲಿ 'ಯಶ್ಚಾಸಾವಾದಿತ್ಯೇ' ಎಂಬುದಾಗಿ ಮತ್ತು 'ಅಂತರಾದಿತ್ಯೇ ಮನಸಾ ಚರಂತಮ್' ಇತ್ಯಾದಿಯಾಗಿ ಆದಿತ್ಯನಲ್ಲಿ ಮಹಾವಿಷ್ಣು ನೆಲೆಸಿದ್ದಾನೆಂದು ಹೇಳಲಾಗಿದೆ. ಆದರೆ ಛಾಂದೋಗ್ಯದಲ್ಲಿ 'ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮಿ' ಆದಿತ್ಯನಲ್ಲಿ ಯಾವ ಪುರುಷನು ಕಾಣಿಸುತ್ತಿದ್ದಾನೋ, ಅವನು ನಾನೇ ಆಗಿದ್ದೇನೆ ಎಂದು ಗಾರ್ಹಪತ್ಯಾಗ್ನಿಯು ಉಪಕೋಸಲನಿಗೆ ಉಪದೇಶಿಸಿದ್ದಾನೆ. 'ಯ ಏಷ ಚಂದ್ರಮಸಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮಿ' ಎಂಬುದಾಗಿ ಚಂದ್ರನಲ್ಲಿ ಯಾವ ಪುರುಷನು ಕಾಣಿಸುತ್ತಿದ್ದಾನೋ, ಅವನು ನಾನೇ ಆಗಿದ್ದೇನೆ ಎಂಬುದಾಗಿ ಅನ್ವಾಹಾರ್ಯಪಚನ ಎಂಬ ಅಗ್ನಿಯು ಉಪಕೋಸಲನಿಗೆ ಉಪದೇಶಿಸಿದ್ದಾನೆ. 'ಯ ಏಷ ವಿದ್ಯುತಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮಿ' ಎಂಬುದಾಗಿ ವಿದ್ಯುತ್ತಿನಲ್ಲಿ ಯಾವ ಪುರುಷನು ಕಾಣಿಸುತ್ತಿದ್ದಾನೋ ಅವನೇ ನಾನು ಆಗಿದ್ದೇನೆ ಎಂಬುದಾಗಿ ಆಹವನೀಯ ಅಗ್ನಿಯು ಉಪಕೋಸಲನಿಗೆ ಉಪದೇಶಿಸಿದ್ದಾನೆ. ಆದ್ದರಿಂದ ಆದಿತ್ಯ , ಚಂದ್ರ , ವಿದ್ಯುತ್ ಇವರಲ್ಲಿರುವವನು ಅಗ್ನಿಯೇ ಆಗುತ್ತಾನೆಂದು ತಿಳಿಯುತ್ತದೆ.

ಅಕ್ಷ್ಯಭಿಮಾನಿಯಲ್ಲಿರುವವನು ಅಗ್ನಿಯೇ ?

तत्वप्रदीपः – अतोऽक्षीन्द्रियप्रेरकादित्ययोरैक्यात् 'य एषोऽन्तरक्षिणि पुरुषो दृश्यते' इत्यत्र सत्यकामवाक्येऽपि अक्ष्यभिमान्यन्तस्थोऽग्निरेवोच्यते ।

ಆದ್ದರಿಂದ ಅಕ್ಷೀಂದ್ರಿಯ ಪ್ರೇರಕನಿಗೂ ಆದಿತ್ಯನಿಗೂ ಐಕ್ಯವಿರುವುದರಿಂದ 'ಯ ಏಷೋಽಂತರಿಕ್ಷಿಣಿ ಪುರುಷೋ ದೃಶ್ಯತೇ' ಎಂಬ ಸತ್ಯಕಾಮನ ವಾಕ್ಯದಲ್ಲಿಯೂ ಕೂಡ ಅಕ್ಷ್ಯಭಿಮಾನಿಯಲ್ಲಿ ನೆಲಸಿರುವವನು ಅಗ್ನಿಯೇ ಆಗುತ್ತಾನೆ.

ಅಗ್ನಿಜ್ಞಾನದಿಂದಲೇ ಮೋಕ್ಷ

तत्वप्रदीपः – 'एवमेवंविदि पापं कर्म न श्लिष्यते' इति प्रकृताग्निज्ञानफलत्वेन सर्वपापाश्लेषवचनादग्निज्ञानादेव मोक्षोपपत्तिः ।

'ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ' ಯಾರು ಹೀಗೆ ತಿಳಿಯುತ್ತಾನೋ, ಅವನು ಪಾಪಕರ್ಮದ ಲೇಪವನ್ನು ಹೊಂದಲಾರ ಎಂಬುದಾಗಿ ಪ್ರಕೃತವಾದ ಅಗ್ನಿಯ ಜ್ಞಾನದ ಫಲವನ್ನಾಗಿ ಸರ್ವಪಾಪದ ಅಸಂಗವನ್ನು ಹೇಳಿರುವುದರಿಂದ ಅಗ್ನಿಜ್ಞಾನದಿಂದಲೇ ಮೋಕ್ಷ-ವಾಗುತ್ತದೆ. ವಿಷ್ಣುವಿನ ಜ್ಞಾನವನ್ನು ಸಂಪಾದನೆ ಮಾಡುವ ಅವಶ್ಯಕತೆ ಇಲ್ಲ.

ಈ ಪ್ರಕರಣವು ಅಗ್ನಿಯನ್ನೇ ಹೇಳುತ್ತದೆ

तत्वप्रदीपः – अतः फलवत्त्वादग्नौ समन्वयो युक्तोऽस्य प्रकरणस्येति पूर्वपक्षाभिप्रायः ।

ಆದ್ದರಿಂದ ಮೋಕ್ಷರೂಪ ಪ್ರಯೋಜನವಿರುವುದರಿಂದ ಈ ಪ್ರಕರಣವು ಅಗ್ನಿಯನ್ನೇ ಪ್ರತಿಪಾದನೆ ಮಾಡುತ್ತದೆ. ಇಷ್ಟು ಪೂರ್ವಪಕ್ಷಿಗಳ ಅಭಿಪ್ರಾಯ.

ವೇದಾರ್ಥ ನಿರ್ಣಯಕ್ಕಾಗಿ ಎಲ್ಲಾ ಅಧಿಕರಣಗಳು ಹೊರಟಿವೆ

तत्वप्रदीपः – अतो यावदत्र ब्रह्मणि समन्वयो न निर्णीतः, तावत्

'यश्चासावादित्ये' इत्यादावप्यतिसुनिर्णयो न स्यात् । अतः सर्ववेदार्थनिर्णये प्रत्यधिकरणनिर्णयास्सुदृढा भवन्तीति ज्ञापयन्नधिकरणसङ्गतिमदीदिशत् ।

ಆದ್ದರಿಂದ ಎಲ್ಲಿಯ ತನಕ ಛಾಂದೋಗ್ಯದ ಪ್ರಕರಣವು ಬ್ರಹ್ಮನಲ್ಲಿ ಸಮನ್ವಯ-ವಾಗುವುದಿಲ್ಲವೋ, ಅಲ್ಲಿಯ ತನಕ 'ಯಶ್ಚಾಸಾವಾದಿತ್ಯೇ' ಎಂಬುದಾಗಿ ತೈತ್ತಿರೀಯದಲ್ಲಿ ಹೇಳಿದ ವಾಕ್ಯವೂ ಕೂಡ ನಿಶ್ಚಯವಾಗಿ ವಿಷ್ಣು ಎಂದು ಪ್ರತಿಪಾದನೆ ಮಾಡುತ್ತಿರುವುದು ನಿರ್ಣಯವಾಗುವುದಿಲ್ಲ. ಆದ್ದರಿಂದ ಸಕಲ ವೇದಾರ್ಥಗಳ ನಿರ್ಣಯದಲ್ಲಿ ಪ್ರತಿಯೊಂದು ಅಧಿಕರಣಗಳಲ್ಲಿ ಮಾಡಲ್ಪಡುವ ನಿರ್ಣಯಗಳು ಸುದೃಢವಾಗುತ್ತವೆ ಎಂಬುದನ್ನು ತಿಳಿಸುತ್ತಾ ಅಧಿಕರಣ ಸಂಗತಿಯನ್ನು ಭಾಷ್ಯಕಾರರು ಉಪದೇಶಿಸುತ್ತಿದ್ದಾರೆ.

ವಿಶೇಷವಿಚಾರ - ಛಾಂದೋಗ್ಯದ ಒಂಬತ್ತನೆಯ ಖಂಡದಲ್ಲಿ-

ಉಪಕೋಸಲೋ ಹ ವೈ ಕಾಮಲಾಯನಃ ಸತ್ಯಕಾಮೇ ಜಾಬಾಲೇ ಬ್ರಹ್ಮಚರ್ಯಂ ಉವಾಸ। ತಸ್ಯ ಹ ದ್ವಾದಶವರ್ಷಾಣಿ ಅಗ್ನೀನ್ ಪರಿಚಚಾರ। ಸ ಹ ಸ್ಮ ಅನ್ಯಾನ್ ಅಂತೇವಾಸಿನಃ ಸಮಾವರ್ತಯನ್ ತಂ ಹ ಸ್ಮ ಏವ ನ ಸಮಾವರ್ತಯತಿ। ತಂ ಜಾಯಾ ಉವಾಚ 'ತಪ್ತೋ ಬ್ರಹ್ಮಚಾರೀ। ಕುಶಲಮಗ್ನೀನ್ ಪರಿ ಚ ಚಾರೀತ್ । ಮಾ ತ್ವಾ ಅಗ್ನಯಃ ಪರಿಪ್ರಾವೋಚನ್ । ಪ್ರಬ್ರೂಹಿ ಅಸ್ಮಾ' ಇತಿ। ತಸ್ಮೈ ಹ ಅಪ್ರೋಚ್ಯೈವ ಪ್ರವಾಸಾಂಚಕ್ರೇ।

ಕಾಮಲಾಯನನ ಮಗನಾದ ಉಪಕೋಸಲನು ವೇದಾಧ್ಯಯನಕ್ಕೋಸ್ಕರ ಸತ್ಯಕಾಮನಾದ ಜಾಬಾಲನಲ್ಲಿ ಗುರುಕುಲವಾಸ ಮಾಡಿದ. ಆಚಾರ್ಯರ ಗಾರ್ಹಪತ್ಯ, ಆಹವನೀಯ, ಅನ್ವಾಹಾರ್ಯಪಚನ ಎಂಬ ಮೂರು ಅಗ್ನಿಗಳನ್ನು ಹನ್ನೆರಡು ವರ್ಷ ಪರ್ಯಂತ ಸೇವಿಸಿದ. ಸತ್ಯಕಾಮನಾದರೂ ತನ್ನ ಬೇರೆ ಶಿಷ್ಯರಿಗೆ ವೇದಾಧ್ಯಯನ ಮಾಡಿಸಿ ತಮ್ಮ ಮನೆಗೆ ಹೋಗಲು ಅನುಮತಿ ನೀಡಿದ. ಆದರೆ ಉಪಕೋಸಲನಿಗೆ ಮಾತ್ರ ಉಪದೇಶ ಸಮಾವರ್ತನಗಳನ್ನು ಮಾಡಿಸಲಿಲ್ಲ. ಆಶ್ಚರ್ಯ ! ಸತ್ಯಕಾಮನಿಗೆ ಆತನ ಮಡದಿ ಹೇಳಿದಳು. 'ಬ್ರಹ್ಮಚಾರಿ ಉಪಕೋಸಲನು ತಪಸ್ಸು ಮಾಡಿದ್ದಾನೆ. ನಮ್ಮ ಅಗ್ನಿಗಳನ್ನು ಚೆನ್ನಾಗಿ ಸೇವಿಸಿದ್ದಾನೆ. ಆದರೂ ನೀವಾಗಲಿ, ಅಗ್ನಿಗಳಾಗಲೀ, ಅವನಿಗೆ ಉಪದೇಶ ಮಾಡಿಲ್ಲ. ಇನ್ನಾದರೂ ನೀವು ಅವನಿಗೆ ಉಪದೇಶ ಮಾಡಿರಿ'. ಹೀಗೆ ಪತ್ನಿಯು ಹೇಳಿದರೂ ಉಪದೇಶಿಸದೆ ಸತ್ಯಕಾಮನು ಪ್ರವಾಸಕ್ಕೆ ಹೊರಟ.

ಸ ಹ ವ್ಯಾಧಿನಾ ಅನಶಿತುಂ ದಧ್ಯೇ। ತಂ ಆಚಾರ್ಯಜಾಯಾ ಉವಾಚ - 'ಬ್ರಹ್ಮಚಾರಿನ್ ಅಶಾನ। ಕಿಂ ನು ನ ಅಶ್ನಾಸಿ' ಇತಿ। ಸ ಹ ಉವಾಚ - 'ಬಹವಃ ಹಿ ಅಸ್ಮಿನ್ ಪುರುಷೇ ಕಾಮಾಃ ನಾನಾತ್ಯಯಾಃ। ವ್ಯಾಧಿಭಿಃ ಪ್ರತಿಪೂರ್ಣೋ೯ಽಸ್ಮಿ। ನ ಅಶಿಷ್ಯಾಮಿ' ಇತಿ।

ಅಥ ಹ ಅಗ್ನಯಃ ಸಮೂದಿರೇ - 'ತಪ್ತೋ ಬ್ರಹ್ಮಚಾರೀ। ಕುಶಲಂ ನಃ ಪರಿ ಚ ಚಾರೀತ್। ಹಂತ ಅಸ್ಮೈ ಪ್ರಬ್ರವಾಮ' ಇತಿ। ತಸ್ಮೈ ಹ ಊಚುಃ - 'ಪ್ರಾಣೋ ಬ್ರಹ್ಮ। ಕಂ ಬ್ರಹ್ಮ। ಖಂ ಬ್ರಹ್ಮ' ಇತಿ। ಸ ಹ ಉವಾಚ 'ವಿಜಾನಾಮಿ ಅಹಂ ಯತ್ ಪ್ರಾಣೋ ಬ್ರಹ್ಮ। ಕಂ ಚ ತು ಖಂ ನ ವಿಜಾನಾಮಿ' ಇತಿ। ತೇ ಹ ಊಚುಃ 'ಯದ್ವಾವ ಕಂ ತದೇವ ಖಂ। ಯದೇವ ಖಂ ತದೇವ ಕಂ' ಇತಿ। ಪ್ರಾಣಂ ಚ ಹ ಅಸ್ಮೈ ತದಾಕಾಶಂ ಚ ಊಚುಃ।

ಉಪಕೋಸಲನು ಮಾನಸಿಕ ದುಃಖದಿಂದ ಉಪವಾಸವಿರಲು ಸಂಕಲ್ಪಿಸಿದ. ಆಚಾರ್ಯರ ಪತ್ನಿಯು 'ಬ್ರಹ್ಮಚಾರಿಯೇ ! ಊಟ ಮಾಡು. ಏತಕ್ಕಾಗಿ ಉಪವಾಸವಿರುತ್ತಿ ? ಎಂದು ಕೇಳಿದಳು. ಉಪಕೋಸಲನು 'ನನ್ನಲ್ಲಿ ನಾನಾರೀತಿಯಾದ ಅನೇಕ ಕಾಮನೆಗಳಿವೆ. ಅವು ಪೂರೈಸದಿದ್ದ ಪ್ರಯುಕ್ತ ಮಾನಸಿಕ ಚಿಂತೆಯಿಂದ ಪೂರ್ಣನಾಗಿದ್ದೇನೆ. ಅದಕ್ಕಾಗಿ ಊಟ ಮಾಡುವುದಿಲ್ಲ' ಎಂದು ಹೇಳಿದ.

ಆಗ ಗಾರ್ಹಪತ್ಯಾದಿ ಅಗ್ನಿಗಳು ಪರಸ್ಪರ ಹೇಳಿಕೊಂಡರು. 'ಈ ಬ್ರಹ್ಮಚಾರಿಯು ತಪಸ್ಸು ಮಾಡಿದ್ದಾನೆ. ನಮ್ಮನ್ನು ಚೆನ್ನಾಗಿ ಸೇವಿಸಿದ್ದಾನೆ. ಪಾಪ ! ಅವನಿಗೆ ನಾವು ಉಪದೇಶಿಸೋಣ' ಹೀಗೆ ಹೇಳಿ ಅವನಿಗೆ ಉಪದೇಶಿಸಿದರು.

'ಬಲದೇವತೆಯಾದ ಮುಖ್ಯಪ್ರಾಣನು ಅಪರಬ್ರಹ್ಮ. 'ಕ' ಅಂದರೆ ಅಪರಾಧೀನವಾದ ಬಲಾನಂದಸ್ವರೂಪನಾದವನು ಪರಬ್ರಹ್ಮ, ಮತ್ತು 'ಖ' ಅಂದರೆ ಅಪರಾಧೀನವಾದ ಬಲಜ್ಞಾನಸ್ವರೂಪನಾದವನು ಪರಬ್ರಹ್ಮ ಎಂದು.

ಉಪಕೋಸಲನು ಹೇಳಿದನು - 'ಬಲದೇವತೆಯಾದ ಮುಖ್ಯಪ್ರಾಣನು ಅಪರಬ್ರಹ್ಮನೆಂದು ತಿಳಿಯಿತು. ಆದರೆ ಆನಂದಸ್ವರೂಪನಾದ ಮತ್ತು ಜ್ಞಾನಸ್ವರೂಪನಾದ ಪರಬ್ರಹ್ಮನನ್ನು ಮಾತ್ರ ವಿಶೇಷವಾಗಿ ಅಂದರೆ, 'ಕ' ಮತ್ತು 'ಖ' ಒಬ್ಬರೇ? ಅಥವಾ ಬೇರೆಯೇ ? ಎಂದು ತಿಳಿಯಲಿಲ್ಲ' ಎಂದು. ಅದಕ್ಕೆ ಅಗ್ನಿಗಳು 'ಯಾವ ಪರಬ್ರಹ್ಮನು 'ಕ' ಎನಿಸಿರುವನೋ ಅವನೇ 'ಖ'. ಯಾವ ಪರಬ್ರಹ್ಮನು 'ಖ' ಎನಿಸಿರುವನೋ ಅವನೇ 'ಕ' ಎಂದು. 'ಕ' ಮತ್ತು 'ಖ' ಎನಿಸಿದ ಪರಬ್ರಹ್ಮ ಒಬ್ಬನೇ ಎಂದು ಉಪದೇಶಿಸಿದರು. ಈ ಪ್ರಕಾರವಾಗಿ ಅಗ್ನಿಗಳು ಮುಖ್ಯಪ್ರಾಣನನ್ನೂ ಮತ್ತು ಆಕಾಶನಾಮಕನಾದ ವಿಷ್ಣುವನ್ನೂ ಉಪಕೋಸಲನಿಗೆ ಉಪದೇಶಿಸಿದರು.

ಅಥ ಹ ಏನಂ ಗಾರ್ಹಪತ್ಯೋಽನುಶಶಾಸ - 'ಪೃಥಿವೀ । ಅಗ್ನಿಃ । ಅನ್ನಂ । ಆದಿತ್ಯಃ ।' ಇತಿ । 'ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಮಹಮಸ್ಮಿ' ಇತಿ ।

ಸ ಯ ಏತಮೇವಂ ವಿದ್ವಾನ್ ಉಪಾಸ್ತೇ ಅಪಹತೇ ಪಾಪಕೃತ್ಯಾಂ । ಲೋಕೀ ಭವತಿ। ಸರ್ವಮಾಯುರೇತಿ । ಜ್ಯೋಕ್ ಜೀವತಿ । ನ ಅಸ್ಯ ಅಪರಪುರುಷಾಃ ಕ್ಷೀಯಂತೇ । 'ಉಪ ವಯಂ ತಂ ಭುಂಜಾಮಃ ಅಸ್ಮಿಂಶ್ಚ ಲೋಕೇ ಅಮುಷ್ಮಿಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ।'

ಅನಂತರ ಉಪಕೋಸಲನಿಗೆ ಗಾರ್ಹಪತ್ಯ ಅಗ್ನಿಯು ಪ್ರತ್ಯೇಕವಾಗಿ ಉಪದೇಶ ಮಾಡಿದನು. 'ಪರಬ್ರಹ್ಮನು ಪೃಥು ಅಂದರೆ ವ್ಯಾಪ್ತನಾದ್ದರಿಂದ ಪೃಥಿವೀ ನಾಮಕನಾಗಿ ಪೃಥಿವಿಯಲ್ಲಿದ್ದಾನೆ. ಅಂಗನೇತಾರ ಅಂದರೆ ಜಗನ್ನಿಯಾಮಕನಾದ್ದರಿಂದ ಅಗ್ನಿನಾಮಕನಾಗಿ ಅಗ್ನಿಯಲ್ಲಿದ್ದಾನೆ. ಅತ್ತೃತ್ವದಿಂದ ಅಂದರೆ, ಸಂಹರಿಸುವುದರಿಂದ ಅನ್ನನಾಮಕನಾಗಿ ಅನ್ನದಲ್ಲಿದ್ದಾನೆ. ಜಗತ್ತಿಗೆ ಆದಿಕಾರಣನಾದ್ದರಿಂದ ಆದಿತ್ಯನಾಮಕನಾಗಿ ಆದಿತ್ಯನಲ್ಲಿದ್ದಾನೆ. ಇದು ವ್ಯಾಪ್ತನಾದ ಪರಮಾತ್ಮನ ವಿದ್ಯೆ . ಇನ್ನು ಅಂತರ್ಯಾಮಿಯಾದ ಪರಮಾತ್ಮನ ವಿದ್ಯೆ - ಆದಿತ್ಯನಲ್ಲಿ ಪೂರ್ಣಷಡ್ಗುಣನಾದ ಯಾವ ಭಗವಂತನು ದಿವ್ಯದೃಷ್ಟಿಗೆ ಗೋಚರನಾಗಿರುವನೋ ಅವನೇ, ಅಹೇಯನಾದ್ದರಿಂದ 'ಅಹಂ' ಶಬ್ದದಿಂದ ವಾಚ್ಯನಾಗಿದ್ದು ನನ್ನಲ್ಲಿ ಅಂತರ್ಯಾಮಿಯಾಗಿದ್ದಾನೆ. ಆದಿತ್ಯನಲ್ಲಿರುವ ಅವನ ರೂಪಕ್ಕೂ, ನನ್ನಲ್ಲಿ ಅಂತರ್ಯಾಮಿಯಾಗಿರುವ ರೂಪಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಯಾವ ವ್ಯತ್ಯಾಸವೂ ಇಲ್ಲದೆ ಅವನೇ ನನ್ನ ಅಂತರ್ಯಾಮಿಯಾಗಿದ್ದಾನೆ' ಎಂದು.

''ಯಾರು ವ್ಯಾಪ್ತನೂ ಅಂತರ್ಯಾಮಿಯೂ ಆದ ಈ ವಿಷ್ಣುವನ್ನು ತಿಳಿದು ಉಪಾಸನೆ ಮಾಡುವನೋ ಅವನು ಪಾಪವನ್ನು ಪರಿಹರಿಸಿಕೊಂಡು ವೈಕುಂಠಾದಿ ಲೋಕಗಳನ್ನು ಹೊಂದಿ ಪೂರ್ಣ ಆಯುಸ್ಸನ್ನು ಪಡೆಯುತ್ತಾನೆ. ಯೋಗ್ಯತಾನುಸಾರ ಸರ್ವಜ್ಞನಾಗುತ್ತಾನೆ. ಅವನಿಗೆ ಭೃತ್ಯರ ಕೊರತೆಯಾಗುವುದಿಲ್ಲ. 'ಇಂತಹ ವಿಷ್ಣೂಪಾಸಕನನ್ನು ನಾವು ಇಹ ಮತ್ತು ಪರಗಳೆರಡರಲ್ಲಿಯೂ ಆಶ್ರಯಿಸುತ್ತೇವೆ' ಎಂದೇ ಭೃತ್ಯರು ಹೇಳುತ್ತಾರೆ'' ಎಂದು ಗಾರ್ಹಪತ್ಯಾಗ್ನಿಯು ಉಪದೇಶಿಸಿದನು.

ಅಥ ಹ ಏನಂ ಅನ್ವಾಹಾರ್ಯಪಚನಃ ಅನುಶಶಾಸ - 'ಆಪಃ । ದಿಶಃ । ನಕ್ಷತ್ರಾಣಿ। ಚಂದ್ರಮಾಃ ।' ಇತಿ । 'ಯ ಏಷ ಚಂದ್ರಮಸಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮಿ' ಇತಿ ।

ಸ ಯ ಏತಮೇವಂ ವಿದ್ವಾನುಪಾಸ್ತೇ ಅಪಹತೇ ಪಾಪಕೃತ್ಯಾಂ । ಲೋಕೇ ಭವತಿ । ಸರ್ವಮಾಯುರೇತಿ । ಜ್ಯೋಕ್ ಜೀವತಿ । ನ ಅಸ್ಯ ಅಪರಪುರುಷಾಃ ಕ್ಷೀಯಂತೇ । 'ಉಪ ವಯಂ ತಂ ಭುಂಜಾಮಃ ಅಸ್ಮಿಂಶ್ಚ ಲೋಕೇ ಅಮುಷ್ಮಿಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ'।

ಅನಂತರ ಅನ್ವಾಹಾರ್ಯಪಚನ ಎಂಬ ಅಗ್ನಿಯು ಉಪಕೋಸಲನಿಗೆ ಉಪದೇಶಿಸಿದನು. 'ವಿಷ್ಣುವು ಚೆನ್ನಾಗಿ ಪಾಲಕನಾದ್ದರಿಂದ 'ಆಪಃ' ಎನಿಸಿ ನೀರಿನಲ್ಲಿದ್ದಾನೆ. ಅಭೀಷ್ಟಗಳನ್ನು ಕೊಡುವುದರಿಂದ ದಿಕ್ ನಾಮಕನಾಗಿ ದಿಕ್ಕುಗಳಲ್ಲಿದ್ದಾನೆ. ಯಾರಿಗೂ ಅಧೀನನಾಗದಿರುವುದರಿಂದ ನಕ್ಷತ್ರನಾಮಕನಾಗಿ ನಕ್ಷತ್ರದಲ್ಲಿದ್ದಾನೆ. ಆನಂದರೂಪನಾದ್ದರಿಂದ ಚಂದ್ರನಾಮಕನಾಗಿ ಚಂದ್ರನಲ್ಲಿದ್ದಾನೆ. ಇದು ವ್ಯಾಪ್ತನಾದ ಪರಮಾತ್ಮನ ಉಪದೇಶ. ಇದು ಅಂತರ್ಯಾಮಿಯಾದ ಪರಮಾತ್ಮನ ಉಪದೇಶ - ಪೂರ್ಣಷಡ್ಗುಣನಾದ ಯಾವ ಭಗವಂತನು ಚಂದ್ರನಲ್ಲಿದ್ದು ದಿವ್ಯದೃಷ್ಟಿಗೋಚರನಾಗಿರುವನೋ ಅವನೇ, ಅಹೇಯನಾದ್ದರಿಂದ ಅಹಂಶಬ್ದವಾಚ್ಯನಾಗಿದ್ದು, ನನ್ನಲ್ಲಿ ಅಂತರ್ಯಾಮಿಯಾಗಿದ್ದಾನೆ. ವ್ಯಾಪ್ತರೂಪಕ್ಕಿಂತ ಯಾವ ವಿಶೇಷವೂ ಇಲ್ಲದೆ ಅಂತರ್ಯಾಮಿಯಾಗಿಯೂ ಇದ್ದಾನೆ.

''ಯಾರು ಇದನ್ನು ತಿಳಿದು ಉಪಾಸನೆ ಮಾಡುತ್ತಾನೋ ಅವನು ಪಾಪಗಳನ್ನು ಪರಿಹರಿಸಿಕೊಂಡು ವೈಕುಂಠಾದಿ ಲೋಕಗಳನ್ನು ಹೊಂದಿ, ಪೂರ್ಣ ಆಯುಸ್ಸನ್ನು ಪಡೆಯುತ್ತಾನೆ. ಯೋಗ್ಯತೆಗನುಗುಣವಾಗಿ ಸರ್ವಜ್ಞನಾಗುತ್ತಾನೆ. ಅವನಿಗೆ ಭೃತ್ಯರ ಕೊರತೆಯಾಗುವುದಿಲ್ಲ. 'ಇಂತಹ ವಿಷ್ಣೂಪಾಸಕನನ್ನು ನಾವು ಇಹ ಪರಗಳೆರಡರಲ್ಲಿಯೂ ಬಿಡದೆ ಆಶ್ರಯಿಸುತ್ತೇವೆ' ಎಂದೇ ಭೃತ್ಯರು ಹೇಳುತ್ತಾರೆ'' ಎಂದು ಅನ್ವಾಹಾರ್ಯಪಚನನು ಹೇಳಿದನು.

ಅಥಹ ಏವಮಾಹವನೀಯಃ ಅನುಶಶಾಸ - 'ಪ್ರಾಣಃ। ಆಕಾಶಃ। ದ್ಯೌಃ। ವಿದ್ಯುತ್।' ಇತಿ। 'ಯ ಏಷ ವಿದ್ಯುತಿ ಪುರುಷೋ ದೃಶ್ಯತೇ ಸೋऽಹಮಸ್ಮಿ ಸ ಏವಾಹಮಸ್ಮಿ' ಇತಿ ।

ಸ ಯ ಏತಮೇವಂ ವಿದ್ವಾನ್ ಉಪಾಸ್ತೇ ಅಪಹತೇ ಪಾಪಕೃತ್ಯಾಂ । ಲೋಕೇ ಭವತಿ । ಸರ್ವಮಾಯುರೇತಿ । ಜ್ಯೋಕ್ ಜೀವತಿ । ನ ಅಸ್ಯ ಅಪರಪುರುಷಾಃ ಕ್ಷೀಯಂತೇ । 'ಉಪ ವಯಂ ತಂ ಭುಂಜಾಮಃ ಅಸ್ಮಿಂಶ್ಚ ಲೋಕೇ ಅಮುಷ್ಮಿಂಶ್ಚ ಯ ಏತಮೇವಂ ವಿದ್ವಾನುಪಾಸ್ತೇ ।'

ಅನಂತರ ಆಹವನೀಯ ಎಂಬ ಅಗ್ನಿಯು ಉಪಕೋಸಲನಿಗೆ ಉಪದೇಶಿಸಿದನು. 'ವಿಷ್ಣುವು ಬಲರೂಪನಾದ್ದರಿಂದ ಪ್ರಾಣನಾಮಕನಾಗಿ ಪ್ರಾಣನಲ್ಲಿ, ಅವಕಾಶಪ್ರದನಾದ್ದರಿಂದ ಆಕಾಶನಾಮಕನಾಗಿ ಆಕಾಶದಲ್ಲಿ, ಪ್ರಕಾಶಸ್ವರೂಪನಾದ್ದರಿಂದ ದ್ಯುನಾಮಕನಾಗಿ

ದ್ಯುಲೋಕದಲ್ಲಿ, ಎಲ್ಲವನ್ನೂ ತಿಳಿದಿರುವುದರಿಂದ ವಿದ್ಯುತ್‌ನಾಮಕನಾಗಿ ವಿದ್ಯುತ್ತಿನಲ್ಲಿ ಇದ್ದಾನೆ. ಇದು ವ್ಯಾಪ್ತನಾದ ಪರಮಾತ್ಮನ ಉಪದೇಶ. ಇನ್ನು ಅಂತರ್ಯಾಮಿಯಾದ ಪರಮಾತ್ಮನ ಉಪದೇಶ - ಯಾವ ಭಗವಂತನು ವಿದ್ಯುತ್ತಿನಲ್ಲಿ ಪೂರ್ಣಷಡ್ಗುಣನಾಗಿ ದಿವ್ಯದೃಷ್ಟಿಗೆ ಗೋಚರನಾಗಿರುವನೋ ಅವನೇ ನನ್ನಲ್ಲಿ ಅಂತರ್ಯಾಮಿಯಾಗಿದ್ದಾನೆ. ಅಹೇಯನಾದ್ದರಿಂದ ಅಹಂ ಶಬ್ದವಾಚ್ಯನಾಗಿದ್ದಾನೆ. ವ್ಯಾಪ್ತರೂಪಕ್ಕಿಂತ ಯಾವ ವ್ಯತ್ಯಾಸವೂ ಇಲ್ಲದೇ ನನ್ನಲ್ಲಿ ಅಂತರ್ಯಾಮಿಯಾಗಿಯೂ ಇದ್ದಾನೆ.

ಯಾರು ಈ ವಿಷ್ಣುವನ್ನು ಹೀಗೆ ತಿಳಿದು ಉಪಾಸನೆ ಮಾಡುತ್ತಾನೋ ಅವನು ಪಾಪಗಳನ್ನು ಪರಿಹರಿಸಿಕೊಂಡು ವೈಕುಂಠಾದಿಲೋಕಗಳನ್ನು ಪಡೆದು, ಪೂರ್ಣ ಆಯುಸ್ಸನ್ನು ಹೊಂದುತ್ತಾನೆ. ತನ್ನ ಯೋಗ್ಯತೆಯಂತೆ ಸರ್ವವನ್ನೂ ತಿಳಿಯುತ್ತಾನೆ. ಇವನಿಗೆ ಭೃತ್ಯರ ಕೊರತೆ ಇರುವುದಿಲ್ಲ. 'ಇಂತಹ ವಿಷ್ಣುಭಕ್ತನನ್ನು ನಾವು ಇಹ ಪರ ಲೋಕಗಳೆರಡರಲ್ಲಿಯೂ ಬಿಡದೆ ಆಶ್ರಯಿಸುತ್ತೇವೆ. ಎಂದೇ ಭೃತ್ಯರು ಹೇಳುತ್ತಾರೆ.'' ಎಂದು ಆಹವನೀಯಾಗ್ನಿಯನ್ನು ಉಪದೇಶಿಸಿದನು.

ತೇ ಹ ಊಚುಃ। 'ಉಪಕೋಸಲ ಏಷಾ ಸೋಮ್ಯ ತೇ ಅಸ್ಮದ್ವಿದ್ಯಾ ಆತ್ಮವಿದ್ಯಾ ಚ। ಆಚಾರ್ಯಸ್ತು ತೇ ಗತಿಂ ವಕ್ತಾ' ಇತಿ। ಆಜಗಾಮ ಹ ಅಸ್ಯ ಆಚಾರ್ಯಃ। ತಮಾಚಾರ್ಯಃ ಅಭ್ಯುವಾದ 'ಉಪಕೋಸಲ' ಇತಿ । 'ಭಗವ' ಇತಿ ಹ ಪ್ರತಿಶುಶ್ರಾವ । 'ಬ್ರಹ್ಮವಿದ ಇವ ಸೋಮ್ಯ ತೇ ಮುಖಂ ಭಾತಿ। ಕೋ ನು ತ್ವಾಅನುಶಶಾಸ' ಇತಿ। 'ಕೋ ನು ಮಾ ಅನುಶಿಷ್ಯಾತ್ ಭೋ' ಇತಿ । ಇಹಾವೇ ವ ನಿಹ್ನುತಃ । ಇಮೇ ನೂನಮೀದೃಶಾ ಅನಾದೃಶಾ' ಇತಿ ಹ ಅಗ್ನೀನ್ ಅಭ್ಯೂದೇ। 'ಕಿಂ ನು ಸೋಮ್ಯ ಕಿಲ ತೇ ಅವೋಚನ್' ಇತಿ। 'ಇದಂ ಇತಿ ಹ ಪ್ರತಿಜಜ್ಞೇ।

''ಉಪಕೋಸಲ ! ಈ ವರೆಗೆ 'ಸೋಽಹಮಸ್ಮಿ' ಇತ್ಯಾದಿಯಾಗಿ ಅಂತರ್ಯಾಮಿ ವಿದ್ಯೆಯನ್ನೂ 'ಕಂ ಬ್ರಹ್ಮ' ಇತ್ಯಾದಿಯಾಗಿ ಸರ್ವಗತನಾದ ಬ್ರಹ್ಮನ ವಿದ್ಯೆಯನ್ನೂ ನಾವು ಉಪದೇಶಿಸಿದ್ದೇವೆ. ಇದನ್ನು ತಿಳಿಯಬೇಕು ಹೊರತು ಉಪಾಸನೆ ಮಾಡುವಂಥಹುದಲ್ಲ. ಉಪಾಸನೆಯ ಮಾರ್ಗವನ್ನು ನಿನಗೆ ನಿನ್ನ ಆಚಾರ್ಯರೇ ಹೇಳುವರು' ಎಂದು ತ್ರೇತಾಗ್ನಿಗಳು ಹೇಳಿದರು. ಆಗ ಉಪಕೋಸಲನ ಆಚಾರ್ಯರು ಬಂದರು. 'ಉಪಕೋಸಲ !' ಎಂದು ಕರೆದರು. 'ಪೂಜ್ಯರೇ' ಎಂದು ಉಪಕೋಸಲನು ಪ್ರತಿಯಾಗಿ ಕೇಳಿದ. 'ನಿನ್ನ ಮುಖದಲ್ಲಿ ಬ್ರಹ್ಮಜ್ಞಾನಿಯ ಕಾಂತಿ ಕಾಣುತ್ತಿದೆ. ನಿನಗಾರು ಉಪದೇಶಿಸಿದರು?' ಎಂದು ಗುರುಗಳು ಪ್ರಶ್ನಿಸಿದರು. 'ಬ್ರಹ್ಮವಿದ್ಯೆಯನ್ನು ಯಾರು ತಾನೇ ನನಗೆ ಉಪದೇಶಿಸಬಲ್ಲರು ?

ಭೂಮಿಯಲ್ಲಿರುವ ಮಾನವರೂ, ಪಾತಾಲದಲ್ಲಿರುವ ಅಸುರರೂ, ಭಗವಂತನ ವಿಷಯವನ್ನು ಅಪಲಾಪ ಮಾಡುವವರು. ಉಪದೇಶಕ್ಕೆ ಅಸಮರ್ಥರು. ನನಗೆ ಉಪದೇಶಿಸಿದವರು ದೇವತೆಗಳು ಈ ಅಗ್ನಿಯಂತೆ ಇರುವವರೂ ಜ್ವಾಲೆಯ ಬಣ್ಣದವರೂ ಮತ್ತು ಹಸ್ತಪಾದಾದಿ ಅವಯವಗಳುಳ್ಳವರೂ ಆಗಿದ್ದರು. ಅವರೆ ಪ್ರತ್ಯಕ್ಷರಾಗಿ ನನಗೆ ಉಪದೇಶಿಸಿದರು' ಎಂದು ಉಪಕೋಸಲನು ತನಗೆ ಉಪದೇಶಿಸಿದವರು ಅಗ್ನಿಗಳೆಂಬ ವಿಷಯವನ್ನು ಹೇಳಿದನು. 'ಅವರು ನಿನಗೆ ಏನು ಉಪದೇಶಿಸಿದರು? ಎಂದು ಗುರುಗಳು ಕೇಳಿದರು. ಉಪಕೋಸಲನು ಅಗ್ನಿಗಳು ಇದನ್ನು ಉಪದೇಶಿಸಿದರು ಎಂದು ಅನುವಾದ ಮಾಡಿದ.

'ಲೋಕಾನ್ ವಾವ ಕಿಲ ಸೋಮ್ಯ ತೇ ಅವೋಚನ್ । ಅಹಂ ತು ತೇ ತದ್ ವಕ್ಷ್ಯಾಮಿ । ತದ್ ಯಥಾ ಪುಷ್ಕರಪಲಾಶೇ ಆಪೋ ನ ಶ್ಲಿಷ್ಯಂತೇ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ' ಇತಿ । 'ಬ್ರವೀತು ಮೇ ಭಗವಾನ್' ಇತಿ । ತಸ್ಮೈಹ ಉವಾಚ ।

'ಯ ಏಷಃ ಅಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮಾ' ಇತಿ ಹ ಉವಾಚ । 'ಏತದಮೃತಮಭಯಮೇತದ್ ಬ್ರಹ್ಮ । ಏತಸ್ಮಿನ್ ನ ಕಿಂಚನ ಶ್ಲಿಷ್ಯತಿ । ತದ್ ಯದ್ಯಪ್ಯಸ್ಮಿನ್ ಸರ್ಪಿರ್ವಾ ಉದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ ।'

ಸತ್ಯಕಾಮನು ಉಪಕೋಸಲನಿಗೆ ಹೇಳಿದ - 'ಉಪಕೋಸಲ ! ಅಗ್ನಿಗಳು ನಿನಗೆ ಉಪದೇಶಿಸಿದ್ದು ಸರ್ವಲೋಕಾಧಾರವಾದ ಅಂತರ್ಯಾಮಿ ಭಗವದ್ರೂಪಗಳಲ್ಲವೇ? ಅವು ಕೇವಲ ತಿಳಿಯಲು ಮಾತ್ರ ಯೋಗ್ಯ ಹೊರತು ಉಪಾಸನೆಗೆ ಮತ್ತು ಹೊಂದಲು ಯೋಗ್ಯವಲ್ಲ. ನಾನು ಮಾತ್ರ ನಿನಗೆ, ಯಾವ ಬ್ರಹ್ಮನ ಜ್ಞಾನವನ್ನು ಪಡೆದರೆ ಆ ಜ್ಞಾನಿಗೆ ಕಮಲಪತ್ರದಲ್ಲಿ ನೀರು ಅಂಟದಿರುವಂತೆ 'ಪಾಪಕರ್ಮ ಲೇಪವಾಗಲಾರದೋ ಅಂತಹ ಬ್ರಹ್ಮನನ್ನು ಉಪದೇಶಿಸುತ್ತೇನೆ'.

ಪೂಜ್ಯರು ಉಪದೇಶಿಸಬೇಕೆಂದು ಉಪಕೋಸಲನು ಕೇಳಿಕೊಂಡನು. ಆಗ ಆಚಾರ್ಯರು ಉಪದೇಶಿಸಿದರು - 'ಜ್ಞಾನಿಗಳಿಗೆ ದ್ಯಿವದೃಷ್ಟಿಯಿಂದ ಕಣ್ಣಿನೊಳಗೆ ಯಾವ ಪುರುಷನು ಗೋಚರನಾಗುವನೋ ಅವನೇ ವಾಮನ ಎಂಬ ಹೆಸರುಳ್ಳ ಪರಮಾತ್ಮನಾಗಿದ್ದಾನೆ' ಎಂದು ಹೇಳಿದರು. 'ಅವನು ಸ್ವತಃ ನಿತ್ಯ ಮುಕ್ತನೂ ಭಯರಹಿತನೂ ಗುಣಪೂರ್ಣನೂ ಆಗಿದ್ದಾನೆ. ಅವನಿಗೆ ಯಾವುದರ ಲೇಪವೂ ಇಲ್ಲ. ಇಂತಹ ಅಸಂಗನಾದ ಪರಮಾತ್ಮನು ಕಣ್ಣಿನಲ್ಲಿರುವುದರಿಂದಲೇ ಯಾರಾದರೂ ಕಣ್ಣಿನಲ್ಲಿ ತುಪ್ಪವನ್ನೋ ನೀರನ್ನೋ ಹಾಕಿದರೆ ಅದು ಕಣ್ಣಿಗೆ ಅಂಟದಂತೆ ಬದಿಯಿಂದ ಹರಿದು ಹೋಗುತ್ತದೆ.

ಏತಂ ಸಂಯದ್ವಾಮ ಇತ್ಯಾಚಕ್ಷತೇ । ಏತಂ ಹಿ ಸರ್ವಾಣಿ ವಾಮಾನಿ ಅಭಿಸಂಯತಿ । ಸರ್ವಾಣಿ ಏನಂ ವಾಮಾನ್ಯಭಿಸಂಯಂತಿ ಯ ಏವಂ ವೇದ ।

ಏಷ ಉ ಏವ ವಾಮಾನಿಃ । ಏಷ ಹಿ ಸರ್ವಾಣಿ ವಾಮಾನಿ ನಯತಿ । ಸರ್ವಾಣಿ ವಾಮಾನಿ ನಯತಿ ಯ ಏವಂ ವೇದ ।

ಏಷ ಉ ಏ ವ ಭಾಮನಿಃ । ಏಷ ಹಿ ಸರ್ವೇಷು ಲೋಕೇಷು ಭಾತಿ । ಸರ್ವೇಷು ಲೋಕೇಷು ಭಾತಿ ಯ ಏವಂ ವೇದ ।

ಕಣ್ಣನಲ್ಲಿರುವ ಅಸಂಗನಾದ ಬ್ರಹ್ಮನನ್ನೇ ಜ್ಞಾನಿಗಳು ಸಂಯದ್ವಾಮ ಎನ್ನುತ್ತಾರೆ. ಏಕೆಂದರೆ 'ವಾಮನಿ' ಎಲ್ಲ ಸೌಂದರ್ಯಗಳು, 'ಏನಂ' ಬ್ರಹ್ಮನನ್ನು 'ಸಂಯತಿ' ಹೊಂದಿವೆ. ಯಾರು ಹೀಗೆ ಬ್ರಹ್ಮನನ್ನು ಸಂಯದ್ವಾಮ ಎಂದು ತಿಳಿಯುವರೋ ಅವರಿಗೂ ಸರ್ವಸೌಂದರ್ಯವು ಪ್ರಾಪ್ತವಾಗುತ್ತದೆ.

ಕಣ್ಣನೊಳಗಿನ ಈ ಪರಮಾತ್ಮನೇ ವಾಮನಿ ಎನಿಸಿದ್ದಾನೆ. ಏಕೆಂದರೆ, ವಾಮಾನಿ, ಎಲ್ಲ ಸುಂದರಸ್ತ್ರೀಯರ ಸೌಂದರ್ಯವನ್ನು, ನಯತಿ, ಆ ಸ್ತ್ರೀಯರಿಗೆ ಹೊಂದಿಸುತ್ತಾನೆ. ಯಾರು ಹೀಗೆ ಉಪಾಸನೆ ಮಾಡುವನೋ ಅವನು ಮುಕ್ತಿಯಲ್ಲಿ ತನಗಿಂತ ಅವರರಾದ ಸ್ತ್ರೀಯರ ಸೌಂದರ್ಯವನ್ನು ನಿಯಂತ್ರಿಸುತ್ತಾನೆ.

ಕಣ್ಣನೊಳಗಿನ ಈ ವಾಮನಾಖ್ಯ ಬ್ರಹ್ಮನೇ ಭಾಮನಿ ಎನಿಸಿದ್ದಾನೆ. ಏಕೆಂದರೆ ಇವನು ಎಲ್ಲ ಲೋಕಗಳಲ್ಲಿ, ಭಾತಿ ಎಂದರೆ ಪ್ರಕಾಶಿಸುತ್ತಾನೆ. ಯಾರು ಹೀಗೆ ಉಪಾಸನೆ ಮಾಡುವನೋ ಅವನು ಮುಕ್ತಿಯಲ್ಲಿ ಸರ್ವಲೋಕದಲ್ಲಿಯೂ ಪ್ರಕಾಶಿಸುತ್ತಾನೆ.

ಅಥ ಯದು ಚೈವಾಸ್ಮಿನ್ ಶವ್ಯಂ ಕರ್ಮ ಕುರ್ವಂತಿ, ಯದು ಚ ನ, ಅರ್ಚಿಷಮೇವ ಅಭಿಸಂಭವಂತಿ (ವಿಶಂತಿ) । ಅರ್ಚಿಷಃ ಅಹಃ । ಅಹ ಆಪೂರ್ಯಮಾಣಪಕ್ಷಂ । ಆಪೂರ್ಯಮಾಣಪಕ್ಷಾತ್ ಯಾನ್ ಷಟ್ ಉದಙ್ ಏತಿ ಮಾಸಾನ್ ತಾನ್ । ಮಾಸೇಭ್ಯಃ ಸವಂತ್ಸರಂ । ಸಂವತ್ಸರಾದಾದಿತ್ಯಂ । ಆದಿತ್ಯಾತ್ ಚಂದ್ರಮಸಂ । ಚಂದ್ರಮಸೋ ವಿದ್ಯುತಂ ತತ್ಪುರುಷೋ ಮಾನವಃ । ಸ ಏನಾನ್ ಬ್ರಹ್ಮ ಗಮಯತಿ ।

ಕಣ್ಣನೊಳಗಿರುವ ಅಸಂಗನಾದ ಪರಮಾತ್ಮನನ್ನು ತಿಳಿದ ಜ್ಞಾನಿಗಳು ಮರಣ ಹೊಂದಿದಾಗ ಅವರಿಗೆ ದಹನಾದಿ ಉತ್ತರ ಕರ್ಮಗಳನ್ನು ಮಾಡಲಿ ಅಥವಾ ಮಾಡದಿರಲಿ, ಮೃತರಾದ ಆ ಜ್ಞಾನಿಗಳಂತೂ ಶ್ರೀಹರಿಯ ಅನುಗ್ರಹದಿಂದ ಅರ್ಚಿರ್ ಲೋಕವನ್ನು ಹೊಂದಿ

- ಅಲ್ಲಿಂದ ಅತಿವಾಹಿಕ ಎಂಬ ವಾಯುಲೋಕವನ್ನೂ, ಅನಂತರ ಹಗಲಿಗಭಿಮಾನಿಯಾದ ದೇವತೆಯ ಲೋಕವನ್ನೂ, ಅಲ್ಲಿಂದ ಶುಕ್ಲಪಕ್ಷಾಭಿಮಾನಿ ದೇವತೆಯ ಲೋಕವನ್ನೂ, ಅಲ್ಲಿಂದ ಸೂರ್ಯನು ಉತ್ತರದಲ್ಲಿ ಸಂಚರಿಸುವ ಕಾಲವೆನಿಸಿದ ಉತ್ತರಾಯಣದ ಆರು ತಿಂಗಳಿಗಭಿಮಾನಿಯಾದ ದೇವತೆಯ ಲೋಕವನ್ನೂ, ಅಲ್ಲಿಂದ ಸಂವತ್ಸರಾಭಿಮಾನಿ ಲೋಕವನ್ನೂ, ಅಲ್ಲಿಂದ ಆದಿತ್ಯಲೋಕವನ್ನೂ, ಆದಿತ್ಯಲೋಕದಿಂದ ಚಂದ್ರಲೋಕವನ್ನೂ, ಚಂದ್ರಲೋಕದಿಂದ ವೈಶ್ವಾನರ, ಇಂದ್ರ, ಧ್ರುವಲೋಕಗಳ ಮೂಲಕ ವಿದ್ಯುತ್ತಿಗಭಿಮಾನಿಯಾದ ಭಾರತೀದೇವಿಯನ್ನೂ ಹೊಂದುತ್ತಾರೆ. ಬಳಿಕ ಭಾರತಿಯಪತಿಯೂ, ಭಗವಂತನ ಪ್ರಿಯಭೃತ್ಯನೂ ಆದ ವಾಯುವನ್ನು ಹೊಂದುತ್ತಾರೆ.

ಆ ವಾಯುದೇವರು ದೇಹದಲ್ಲಿ ಭಗವಂತನನ್ನು ಉಪಾಸನೆ ಮಾಡುವ ಜ್ಞಾನಿಗಳನ್ನು ಕಾರ್ಯಬ್ರಹ್ಮನೆನಿಸಿದ ಚತುರ್ಮುಖಬ್ರಹ್ಮದೇವರ ಬಳಿಗೂ, ವ್ಯಾಪ್ತೋಪಾಸಕ ಜ್ಞಾನಿಗಳನ್ನು ಪರಬ್ರಹ್ಮನೆನಿಸಿದ ಪರಮಾತ್ಮನ ಬಳಿಗೂ ಕರೆದುಕೊಂಡು ಹೋಗುವರು.

ಅನುವ್ಯಾಖ್ಯಾನದಲ್ಲಿ 'ಅಂತರ' ಪದದ ಸ್ವಾರಸ್ಯ

तत्वप्रदीपः – 'अन्तर उपपत्तेः' ।। अन्तरशब्देनान्तस्थो रतिरूपो विवक्ष्यते । तथाचोक्तमाचार्यवर्येणैवानुव्याख्याने –

'अन्तः स्थित्वा रमणकृदन्तरस्समुदाहृतः ।
रमणं चाऽत्मशब्देनाऽदेयं मातीति चोच्यते' इति ।।

'ಅಂತರ ಉಪಪತ್ತೇಃ' ಎಂಬ ಸೂತ್ರದಲ್ಲಿರುವ ಅಂತರ ಶಬ್ದದಿಂದ ಅಂತರ್ಯಾಮಿಯು ರಮಣರೂಪನಾಗಿದ್ದಾನೆಂದು ವಿವಕ್ಷಿಸಲಾಗಿದೆ. ಈ 'ಅಂತರ' ಎಂಬ ಪದದ ಸ್ವರಸವಾದ ಅರ್ಥವನ್ನು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಸುಂದರವಾಗಿ ವ್ಯಾಖ್ಯಾನ ಮಾಡಿದ್ದಾರೆ -

'ಅಂತಃ ಸ್ಥಿತ್ವಾ ರಮಣಕೃದಂತರಃ ಸಮುದಾಹೃತಃ ।
ರಮಣಂ ಚಾऽತ್ಮಶಬ್ದೇನಾऽದೇಯಂ ಮಾತೀತಿ ಚೋಚ್ಯತೇ ।।

ಅಂತರ್ಯಾಮಿಯಾಗಿದ್ದು ರಮಣಸ್ವರೂಪನಾಗಿರುವುದರಿಂದ ಪರಮಾತ್ಮನನ್ನು 'ಅಂತರ' ಎಂದು ಕರೆಯಲಾಗಿದೆ. 'ಯ ಏಷ ಆತ್ಮಾ' ಎಂಬಲ್ಲಿರುವ ಆತ್ಮಾ ಎಂಬ ಶಬ್ದವು ಆತ್=

ಯೋಗ್ಯವಾದ ಸುಖವನ್ನು, ಹಾಗೂ ಸುಖಸಾಧನವನ್ನು ಮಾತಿ = ಅನುಭವಿಸುತ್ತಾನೆ. ಎಂಬ ನಿರ್ವಚನದಿಂದ ರಮಣವನ್ನೇ ಹೇಳುತ್ತದೆ.

ವಿಶೇಷವಿಚಾರ - ಅಂತರ್ ಶಬ್ದವು ಉಪಪದವಾಗಿರುವ 'ರಮು ಕ್ರೀಡಾಯಾಂ' ಎಂಬ ಧಾತುವಿನ ಮೇಲೆ ಕರ್ತೃರ್ಥದಲ್ಲಿ 'ಇಮಂತಾಡ್ಡಃ' ಎಂಬ ಉಣಾದಿಸೂತ್ರದಿಂದ ಡಪ್ರತ್ಯಯ ಬರುತ್ತದೆ. 'ಉಣಾದಯೋ ಬಹುಲಂ' ಎಂಬ ಸೂತ್ರದಲ್ಲಿ ಬಹುಲ ಎಂದಿರುವುದರಿಂದ ಅಲೋಂತ್ಯ ಪರಿಭಾಷೆಯಿಂದ ಅಂತರ್ ಎಂಬೀ ಉಪಪದದ ಅಂತ್ಯದಲ್ಲಿರುವ ರೇಫದ ಲೋಪವಾಗುತ್ತದೆ. ಆಗ ಅಂತ+ರಮ್+ಅ(ಡ) ಎಂದಿರಲು ರಮ್ ಧಾತುವಿನ ಟಿ(ಅಮ್)ಗೆ ಲೋಪ. ಆಗ ಅಂತ+ರ್+ಅ= ಅಂತರ ಎಂಬ ಶಬ್ದದ ನಿಷ್ಪತ್ತಿ. ಹೀಗೆ ಈ ಅಂತರ ಶಬ್ದವು 'ಒಳಗಿದ್ದುಕೊಂಡು ಕ್ರೀಡಿಸುತ್ತಿರುವವನು' ಎಂಬ ಅರ್ಥದಲ್ಲಿದೆ. ಅಂತರ ಶಬ್ದದಿಂದ ಈ ಅರ್ಥವು ಸೂತ್ರಕಾರರಿಗೂ ವಿವಕ್ಷಿತವಾಗಿದೆ ಎಂದು ಹೇಳಬಹುದು. ಇಲ್ಲದೆ ಇದ್ದರೆ 'ಅಂತಸ್ತದ್ಧರ್ಮೋಪದೇಶಾತ್' ಎಂದು ಹೇಳಿದಂತೆ 'ಅಂತರುಪಪತ್ತೇಃ' ಎಂದು ಹೇಳಬಹುದಾಗಿತ್ತು. ಆಗ ಒಂದು ಅಕ್ಷರ ಕಡಿಮೆಯಾಗಿ ಸೂತ್ರವೂ ಕೂಡ ಲಘುವಾಗುತ್ತಿತ್ತು. ಅಂತರ ಎಂದು ಪ್ರಯೋಗ ಮಾಡಿದ್ದರಿಂದ ಇದೇ ಅರ್ಥವನ್ನು ಅವರು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆಂದು ಸಿದ್ಧವಾಗುತ್ತದೆ.

'ರಮು ಕ್ರೀಡಾಯಾಂ' ಎಂಬ ಧಾತುವಿಗೆ 'ಇ್ಮಂತಾಡ್ಡಃ' ಎಂಬ ಸೂತ್ರದಿಂದ ಕರ್ತೃರ್ಥದಲ್ಲಿ 'ಡ' ಪ್ರತ್ಯಯ ಬರುತ್ತಿರಲು 'ಚುಟೂ' ಎಂಬ ಸೂತ್ರದಿಂದ ಪ್ರತ್ಯಯದಲ್ಲಿರುವ ಡಕಾರ ವ್ಯಂಜನಕ್ಕೆ ಇತ್ ಸಂಜ್ಞೆ ಬಂದು ಲೋಪವಾಗಿ ಈ ಪ್ರತ್ಯಯವು ಡಿತ್ತಾಗಿರುವುದರಿಂದ 'ಅಭಸ್ಯಾಪಿ ಟೇರ್ಲೋಪಃ' ಎಂಬೀ ನ್ಯಾಯದಿಂದ ಧಾತುಟಿಲೋಪವಾಗಿ ಅಂತ +ರ್+ಅ = ಅಂತರ ಎಂದು ರೂಪ ಸಿದ್ಧಿಯಾಗುತ್ತದೆ.

ಅಂತರ್ ಶಬ್ದದ ರಕಾರಕ್ಕೆ 'ರೋರಿ'ಎಂಬುದರಿಂದ ಲೋಪಬಂದು 'ಢ್ರಲೋಪೇ ಪೂರ್ವಸ್ಯ ದೀರ್ಘೋಣಃ' ಎಂಬ ಸೂತ್ರದಿಂದ ಅಂತಶಬ್ದದ ಕೊನೆ ಅಕಾರಕ್ಕೆ ದೀರ್ಘ ಬಂದರೆ ಅಂತಾರ ಎಂದು ರೂಪವಾಗಬೇಕಿತ್ತಲ್ಲವೇ ಎಂದರೆ, 'ಉಣಾದಯೋ ಬಹುಲಂ' 'ಉಣಾದಿ' ಪ್ರತ್ಯಯಗಳು ಯಾವ ಶಬ್ದದಿಂದ ವಿಹಿತವಾಗಿವೆಯೋ ಅದಕ್ಕಿಂತ ಬೇರೆ ಶಬ್ದಗಳಿಗೂ ಕೂಡ ಬರುತ್ತವೆ. ಅವಿಹಿತವಾದ ಕಾರ್ಯಗಳು ಪ್ರಯೋಗದಿಂದ ಊಹಿಸಲ್ಪಡುತ್ತವೆಂದು ಅಂತರ್ ಶಬ್ದದ ರೇಫಲೋಪವು ವಿಹಿತವಾಗದಿದ್ದರೂ ಉಂಟಾಗಿ ಅಂತ+ರ ಎಂದಾಗಿದೆ. ಹೀಗೆ ಪೂರ್ವ ರೇಫದ ಲೋಪಕ್ಕೆ ಉತ್ತರ ರೇಫವು ಕಾರಣವಲ್ಲವಾದುದರಿಂದ 'ಢ್ರ ಲೋಪೇ ಪೂರ್ವಸ್ಯ'

ಎಂಬಿತ್ಯಾದಿ ಸೂತ್ರದಂತೆ ದೀರ್ಘಬರುವುದಿಲ್ಲವಾದ್ದರಿಂದ 'ಅಂತಾರ'ಎಂದಾಗದೆ ಅಂತರ ಎಂದೇ ರೂಪ ಸಿದ್ಧಿಸುವುದು.

ಉಪಪದಾಂತ್ಯ ರೇಫಲೋಪವು 'ರೋರಿ' ಎಂದು ಸೂತ್ರದಿಂದ ವಿಹಿತವಾದ ರೇಫನಿಮಿತ್ತಕ ಲೋಪವಲ್ಲ. ಹಾಗಿದ್ದಲ್ಲಿ ಪೂರ್ವದ ಅಕಾರಕ್ಕೆ ದೀರ್ಘವು ಬರುತ್ತಿತ್ತು. 'ಪ್ರತ್ಯಯಾಃ ಬಹುಲಂ' ಎಂದು ಹೇಳಿದ ನಿಮಿತ್ತವಾಗಿಯೇ ಅದಕ್ಕೆ ಲೋಪ. ಆದ್ದರಿಂದ ದೀರ್ಘವು ಬರುವುದಿಲ್ಲ. ''ಕ್ವಚಿತ್‌ಪ್ರವೃತ್ತಿಃ ಕ್ವಚಿದಪ್ರವೃತ್ತಿಃ ಕ್ವಚಿದ್ವಿಭಾಷಾ ಕ್ವಚಿದನ್ಯದೇವ। ವಿಧೇರ್ವಿಧಾನಂ ಬಹುಧಾ ಸಮೀಕ್ಷ್ಯ ಚತುರ್ವಿಧಂ ಬಾಹುಲಿಕಂ ವದಂತಿ ॥'' ಎಂದಿರುವಂತೆ ಈ ಬಾಹುಲಿಕವು ನಾಲ್ಕು ವಿಧವಾಗಿದೆ.

ಈ ವಚನಾನುಸಾರವಾಗಿ ಬಹುಲಗ್ರಹಣದಿಂದ ಉಪಪದವಾದ ಅಂತರ್‌ಶಬ್ದದ ಕೊನೆಯ ವರ್ಣಕ್ಕೆ ಲೋಪವು ಬರುತ್ತದೆ ಎಂಬ ಅರ್ಥವು ಸಿದ್ಧವಾಗುತ್ತದೆ.

'ಅಂತಃಸ್ಥಿತ್ವಾ ರಮಣ ಕೃತ್' ಎಂಬುದಾಗಿ ಶ್ರೀಮದಾಚಾರ್ಯರು ಅಂತರ ಶಬ್ದವನ್ನು ಅಂತಃ + ರ ಎಂದು ವಿಭಾಗಿಸಿ ಕಣ್ಣಿನೊಳಗಿದ್ದು ಸುಖವನ್ನು ಅನುಭವಿಸುವವನು (ವಿಷ್ಣು) ಎಂದು ಅರ್ಥಮಾಡಿದ್ದಾರೆ. ಆದರೆ ಇತರ ಮತಾನುಯಾಯಿಗಳು 'ಅಂತರಕ್ಷಣಿ ಪುರುಷ:' ಎಂಬಲ್ಲಿರುವುದು ಅಂತ: ಶಬ್ದವಲ್ಲ ಕಿಂತು 'ಅನ್ಯೋಂತರ ಆತ್ಮಾ' ಎಂಬಲ್ಲಿರುವಂತೆ ಅಂತರ ಶಬ್ದವೇ ಇದೆ. ಅದಕ್ಕಾನುಸಾರವಾಗಿ ಸೂತ್ರದಲ್ಲಿಯೂ ಅಂತರ ಶಬ್ದ ಬಂದಿದೆ ಆದ್ದರಿಂದ ಅಂತಃ+ರ (ರಮಣಕೃತ್) ಎಂದು ವಿಭಾಗಿಸಿ ಅರ್ಥಮಾಡಿದ್ದು ಸರಿಯಲ್ಲ. ಎಂದು ಆಕ್ಷೇಪಿಸಿದ್ದಾರೆ. ಶ್ರುತಿಯಲ್ಲಿರುವುದು ಅಂತರ ಶಬ್ದವೇ ಆಗಿದ್ದರೆ ಅಂತರ ಅಕ್ಷಣಿ ಎಂದಿರಬೇಕಾಗಿತ್ತು. ಎಂಬುದಾಗಿ ಅವರೇ ಪ್ರಶ್ನೆ ಮಾಡಿಕೊಂಡು 'ಸೇದುರಾಜ' ಎಂಬಲ್ಲಿ ಹೇಗೆ ಸಃ ಇತ್ ಉ ಎಂಬುದು ಸೇದು ಎಂದಾಗಿದೆಯೋ ಮತ್ತು ಹಾರ: ಇತ್ವಾ ಎಂಬುದು ಹಾರೇತ್ವಾ ಎಂದಾಗಿದೆಯೋ ಅದರಂತೆ ಅಂತರಃ ಅಕ್ಷಣಿ ಎಂಬುದು ಅಂತರಕ್ಷಣಿ ಎಂದಾಗಿದೆ. ಎಂದು ಸಮಾಧಾನ ಹೇಳಿದ್ದಾರೆ.

ಆದರೆ ಇದು ಸರಿಯಲ್ಲ. ಸೂತ್ರದಲ್ಲಿರುವ ಅಂತರ ಎಂಬುದನ್ನು ಅಂತಃ ಶಬ್ದಸಮಾನಾರ್ಥಕ ಎಂದಿಟ್ಟುಕೊಂಡರೆ ಅಂತಸ್ತದ್ಧರ್ಮ ಎಂಬಲ್ಲಿ ಹೇಳಿದಂತೆ ಅಂತಃ ಎಂಬುದನ್ನು ಬಿಟ್ಟು ಅಂತರಃ ಎಂದು ಹೇಳಿದಕ್ಕೆ ಹೆಚ್ಚಿನ ಅರ್ಥವೇನೂ ದೊರೆಯುವುದಿಲ್ಲ. ಅಂತಃ+ರ ಎಂದು ವ್ಯಾಖ್ಯಾನಿಸಿದರೆ ವಿಶೇಷಾರ್ಥವಿದೆ. ಮತ್ತು ಪರಭಾಷ್ಯದ ರೀತ್ಯಾ ಅಂತಃ ತದ್ಧರ್ಮೋಪದೇಶಾತ್ ಎಂಬಲ್ಲಿ ಅಂತರಕ್ಷಣಿ ಎಂಬುದನ್ನೆ ಉದಾಹರಿಸಿದ್ದರಿಂದ ಅಲ್ಲಿಯೂ ಶ್ರುತ್ಯನುಸಾರಿಯಾಗಿ ಅಂತರಃ ಎಂದೇ ಹೇಳಬೇಕಾಗಿತ್ತು ಎಂದು ಅನುಪಪತ್ತಿ ಬರುತ್ತದೆ.

ಸೂತ್ರದಲ್ಲಿರುವ ಅಂತರ ಶಬ್ದವನ್ನು 'ಅಂತಃ ರಮಣಕೃತ್' ಎಂದೇ ವ್ಯಾಖ್ಯಾನ ಮಾಡುವುದಾದರೆ ಶ್ರುತಿಯಲ್ಲಿಯೂ ಅಂತರಃ ಅಕ್ಷಣಿ ಎಂದೇ ಪದಚ್ಛೇದ ಮಾಡಿ ಅಂತಃಸ್ಥಿತಿ ರೂಪವಾದ ಭಾವಲಿಂಗ ಮತ್ತು ರಮಣರೂಪವಾದ ಕ್ರಿಯಾಲಿಂಗ ಸಮನ್ವಯವನ್ನು ಮಾಡಬಹುದು. ಅದನ್ನು ಬಿಟ್ಟು ರಮಣ ಕೃತ್ ಎಂಬುದು ಏಷ ಆತ್ಮಾ ಎಂಬಲ್ಲಿರುವ ಆತ್ಮ ಶಬ್ದದ ವ್ಯಾಖ್ಯಾನವೆಂದು ಏಕೆ ಹೇಳಬೇಕು ಎಂಬ ಆಕ್ಷೇಪವೂ ಸರಿಯಲ್ಲ ಏಕೆಂದರೆ ಅಂತರಕ್ಷಣಿ ಎಂಬಲ್ಲಿ ಅಂತರಃ ಎಂದು ಪದಚ್ಛೇದ ಮಾಡುವುದಾದರೆ ಅಂತರಾದಿತ್ಯೇ ಇತ್ಯಾದಿ ಎಲ್ಲಾ ಸ್ಥಳದಲ್ಲಿಯೂ ಹಾಗೆಯೇ ಮಾಡಬೇಕಾಗುತ್ತದೆ. ಮತ್ತು ಆತ್ಮ ಶಬ್ದದ ವ್ಯಾಖ್ಯಾನವೇ ರಮಣ ಕೃತ್ ಎಂದು ಹೇಳಲು ಬರುವಾಗ ಶ್ರುತಿಯಲ್ಲಿ ಅಂತರಃ ಎಂಬ ಪದಚ್ಛೇದದ ಕ್ಲಿಷ್ಟ ಕಲ್ಪನೆಯು ಸರಿಯಲ್ಲ.

ಶ್ರುತಿಯಲ್ಲಿ ಅಕ್ಷಿಸ್ಥನಾದವನಷ್ಟೇ ಪ್ರತೀತನಾಗಿದ್ದಾನೆ. ಅವನಿಗೆ ರಮಣಕರ್ತೃತ್ವವು ಪ್ರತೀತವಾಗುತ್ತಿಲ್ಲ. ಶ್ರುತಿಯಲ್ಲಿ ಹೇಳಿದ್ದನ್ನೇ ಸೂತ್ರಗಳು ಪ್ರತಿಜ್ಞೆ ಮಾಡಬೇಕು. ಆದ್ದರಿಂದ ಶ್ರುತಿಯಲ್ಲಿ ಅನುಕ್ತವಾದ ರಮಣಕರ್ತೃತ್ವವನ್ನು ಸೂತ್ರಕಾರರು ಹೇಗೆ ತಾನೆ ಪ್ರತಿಜ್ಞೆಯಲ್ಲಿ ಸೇರಿಸಿಯಾರು? ಎಂದು ಆಶಂಕಿಸಿದರೆ, ಅದಕ್ಕೆ 'ರಮಣಂ ಚಾತ್ಮಶಬ್ದೇನ' ಎಂಬ ಅನುವ್ಯಾಖ್ಯಾನದಿಂದ ಸಮಾಧಾನ ಹೇಳುತ್ತಾರೆ. ಈ ಅನುವ್ಯಾಖ್ಯಾನದಲ್ಲಿರುವ ಮೊದಲು 'ಚ' ಶಬ್ದವು ಕೇವಲ ಅಕ್ಷಿಸ್ಥನಾಗಿದ್ದಾನೆ ಎಂದು ಮಾತ್ರವಲ್ಲ ರಮಣವೂ ಕೂಡಾ ಅಂದರೆ ರಮಣಕರ್ತೃತ್ವವೂ ಕೂಡಾ ಎಂಬೀ ಅರ್ಥದಲ್ಲಿದೆ. ಎರಡನೆ ಚಶಬ್ದವು ಕೇವಲ ಸೂತ್ರದಲ್ಲಿ ಅಲ್ಲ. ಶ್ರುತಿಯಲ್ಲಿಯೂ ಕೂಡ ಹೇಳಿದ್ದಾರೆ ಎಂಬೀ ಅರ್ಥದಲ್ಲಿ. ಅನುವ್ಯಾಖ್ಯಾನದಲ್ಲಿರುವ 'ಆತ್ಮಶಬ್ದೇನ' ಎಂಬುದಕ್ಕೆ 'ಏಷ ಆತ್ಮಾ' ಎಂಬೀ ಶ್ರುತಿಭಾಗದಿಂದ ಆದೇಯಂ = ಸ್ವೀಕರಿಸಲು ಯೋಗ್ಯವಾದ ಅಂದರೆ ಸುಖವನ್ನು, ಹಾಗೂ ಸುಖದ ಸಾಧನವನ್ನು ಮಾತಿ = 'ಅನುಭವಿಸುತ್ತಾನೆ' ಎಂಬ ನಿರ್ವಚನದಿಂದ ಎಂದರ್ಥ. (ಉದಾಹರಣ ವಾಕ್ಯವಾದ ಶ್ರುತಿಯಲ್ಲಿರುವ 'ಏಷ ಆತ್ಮಾ' ಎಂಬೀ ಅಂಶವು ಆದೇಯಂ ಮಾತಿ ಎಂಬೀ ನಿರ್ವಚನದಂತೆ ರಮಣತ್ಕೃತ್ವವನ್ನು ಹೇಳುತ್ತಿದೆ ಎಂದಂತಾಯಿತು) ಆಙ್ ಪೂರ್ವಕವಾದ ದಾ ಧಾತು ಮನ ಧಾತುವಿನ ಮೇಲೆ ಕ್ವಿಪ್ ಪ್ರತ್ಯಯ ಬರುತ್ತದೆ.

ಆತ್ಮನ್ ಎಂಬ ರೂಪ ನಿಷ್ಪತ್ತಿಯು ಹೀಗೆ ಆಗಿದೆ. ಆಙ್ ಉಪಸರ್ಗಪೂರ್ವಕ 'ದಾ' ದಾನೇ ಎಂಬ ಧಾತುವಿಗೆ ಕರ್ಮಾರ್ಥದಲ್ಲಿ ಕ್ವಿಪ್ ಬಂದು ಆ+ದಾ+ಕ್ವಿಪ್ = ಎಂದಿರುವಾಗ ಕ್ವಿಪ್ ಪ್ರತ್ಯಯದ, ಶಕಾರ-ವಕಾರ-ಪಕಾರಗಳು ಇತ್ ಸಂಜ್ಞೆಯುಳ್ಳವುಗಳಾದುದರಿಂದ ಅವುಗಳಿಗೆ ಲೋಪ. ಇಕಾರ ಉಚ್ಚಾರಾರ್ಥ. ಇನ್ನು ಉಳಿದ 'ವ್' ಎಂಬುದಕ್ಕೆ 'ವೇರಪ್ಯಕ್ತಸ್ಯ'

ಎಂಬೀ ಸೂತ್ರದಿಂದ ಲೋಪ. ಹೀಗೆ ಕ್ವಿಪ್ ಪ್ರತ್ಯಯವು ಸಂಪೂರ್ಣವಾಗಿ ಲೋಪ (ಕ್ವಿಪಃ ಸರ್ವಸ್ಯಾಪಿ ಲೋಪಃ) ಹೊಂದುತ್ತದೆ. ಈ ಪ್ರತ್ಯಯವು ಕಿತ್ ಆದುದರಿಂದ 'ಆತೋ ಲೋಪ ಇಟಿ ಚ' ಎಂಬೀ ಸೂತ್ರದಿಂದ ದಾ ಧಾತುವಿನ ಆ ಕಾರಕ್ಕೆ ಲೋಪ ಬಂದರೆ ಆ+ದ್ ಎಂದಾಗುತ್ತದೆ. ಇದರಿಂದ ಆದೀಯತೇ = ಆದೇಯಂ (ಸುಖಂ ತತ್ ಸಾಧನಂ ಚ) ಎಂಬೀ ಅರ್ಥ ಸಿದ್ಧವಾಯಿತು. ಮನ್ ಧಾತುವಿಗೆ ಕರ್ತೃರ್ಥದಲ್ಲಿ ಕ್ವಿಪ್ ಬಂದು ಕ್ವಿಪ್ ಲೋಪವಾದರೆ ಮನ್ ಎಂಬ ರೂಪದ ನಿಷ್ಪತ್ತಿ. ಹೀಗೆ ಮನ್ ಎಂಬೀ ಅಂಶದಿಂದ ಅನುಭವಿಸುತ್ತಾನೆ ಎಂಬೀ ಅರ್ಥ ಸಿದ್ಧಿಸಿತು. ಒಟ್ಟಿಗೆ ಸೇರಿದಾಗ ಆದ್+ಮನ್= ಆತ್ಮನ್ ಎಂಬ ಶಬ್ದ ಸಿದ್ಧವಾಗುತ್ತದೆ. ಆಗ ಆತ್ = ಸ್ವೀಕಾರಾರ್ಹವಾದ ಸುಖ ಹಾಗೂ ಸುಖಸಾಧನಗಳನ್ನು ಮನ್ ಅನುಭವಿಸುತ್ತಾನೆ. ಅಂದರೆ, ರಮಣಕರ್ತೃವಾಗಿದ್ದಾನೆ ಎಂದಂತಾಯಿತು.

''ನಾಶ್ರೌತಂ ಸೂತ್ರಯತೇ ನಾಸೂತ್ರಿತಂ ಭಾಷತೇನಾ ಭಾಷಿತಂ ಟೀಕತೇ। ನಾಟೀಕಿತಂ ಟೌಕತೇ'' ಎಂಬ ಸಂಪ್ರದಾಯಜ್ಞರ ಮಾತಿನಂತೆ ಸೂತ್ರವು ಯಾವಾಗಲು ಶ್ರುತಿಯನ್ನು ಅನುಸರಿಸಿಯೇ ಇರುತ್ತದೆ.

ಚಕ್ಷುರಾಭಿಮಾನಿಯಲ್ಲಿರುವವನು ಮಹಾವಿಷ್ಣುವೇ ಹೊರತು ಅಗ್ನಿಯಲ್ಲ

तत्वप्रदीपः – चक्षुरभिमान्यन्तस्थो विष्णुरेव । 'त्रिपादस्यामृतं दिवि' 'अमृतैवैषा देवता' 'आत्माऽजरोऽमृतोभयो ब्रह्म' इत्यादिना तस्यैवामृतत्वाभयत्वलिङ्गोपपत्तेः । ब्रह्मात्मशब्दोपपत्तेश्च । 'एष आत्मेति होवाच एतदमृतमभयमेतद्ब्रह्म' इति तत्रोक्तम् ।

ಚಕ್ಷುರಭಿಮಾನಿಯಲ್ಲಿ ನೆಲಸಿರುವವನು ಮಹಾವಿಷ್ಣುವೇ ಆಗಿದ್ದಾನೆ. 'ತ್ರಿಪಾದಸ್ಯಾಮೃತಂ ದಿವಿ', 'ಅಮೃತೈವೇಷಾ ದೇವತಾ', 'ಆತ್ಮಾऽಜರೋऽಮೃತೋಭಯೋ ಬ್ರಹ್ಮ' ಇತ್ಯಾದಿ ವಾಕ್ಯದಲ್ಲಿ ಅಮೃತತ್ವ, ಅಭಯತ್ವ ಮೊದಲಾದ ಲಿಂಗಗಳೆಲ್ಲವೂ ಮಹಾವಿಷ್ಣುವಿನಲ್ಲಿ ಉಪಪನ್ನವಾಗುತ್ತವೆ. ಮತ್ತು ಬ್ರಹ್ಮಶಬ್ದ ಆತ್ಮಶಬ್ದಗಳೂ ಕೂಡ ಮಹಾವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. 'ಏಷ ಆತ್ಮೇತಿ ಹೋವಾಚ ಏತದಮೃತಮಭಯಮೇತದ್ಬ್ರಹ್ಮ' ಎಂಬುದಾಗಿ ಇದೇ ಪ್ರಕರಣದಲ್ಲಿ ಈ ವಾಕ್ಯಗಳು ಇರುತ್ತವೆ.

ವಿಶೇಷವಿಚಾರ – ಸತ್ಯಕಾಮನು ಉಪಕೋಸಲನಿಗೆ ಮೂರು ಅಗ್ನಿಗಳು ಉಪದೇಶಿಸಿದ ಇದೇ ಪ್ರಕರಣದಲ್ಲಿ ವಿಷ್ಣುವಿನ ಅಸಾಧಾರಣಧರ್ಮಗಳೇ ಯುಕ್ತವಾಗಿವೆ. ಆದ್ದರಿಂದ ಮಹಾವಿಷ್ಣುವೇ ಈ ಪ್ರಕರಣದಿಂದ ಪ್ರತಿಪಾದ್ಯನಾಗುತ್ತಾನೆ ಎಂದು ನಿರ್ಣಯವಾಗುತ್ತದೆ. ಉಪಕೋಸಲನ ಗುರುವಾದ ಸತ್ಯಕಾಮನು ಇಲ್ಲದಿದ್ದಾಗ ಮೂರುಮಂದಿ ಅಗ್ನಿಗಳು ಉಪದೇಶಿಸುತ್ತಾರೆ. ಅನಂತರ ಉಪಕೋಸಲನು ಆಗಮಿಸಿ ತಾನೂ ಕೂಡ ಉಪದೇಶಿಸುತ್ತಾನೆ. ಉಪಕೋಸಲನಿಗೆ ಸತ್ಯಕಾಮನು ಉಪದೇಶಿಸಿದ ಈ ಪ್ರಕರಣದಲ್ಲಿ ನೇರವಾಗಿ ಮಹಾವಿಷ್ಣುವೇ ಎಲ್ಲರಲ್ಲಿಯೂ ಅಂತರ್ಯಾಮಿಯಾಗಿದ್ದಾನೆಂಬುದು ಸ್ಪಷ್ಟವಾಗುತ್ತದೆ. ಆ ಪ್ರಕರಣ ಹೀಗಿದೆ –

ತೇ ಹ ಊಚುಃ । 'ಉಪಕೋಸಲ ಏಷಾ ಸೋಮ್ಯ ತೇ ಅಸ್ಮದ್ವಿದ್ಯಾ ಆತ್ಮವಿದ್ಯಾ ಚ । ಆಚಾರ್ಯಸ್ತು ತೇ ಗತಿಂ ವಕ್ತಾ' ಇತಿ । ಆಜಗಾಮ ಹ ಅಸ್ಯ ಆಚಾರ್ಯಃ । ತಮಾಚಾರ್ಯಃ ಅಭ್ಯುವಾದ 'ಉಪಕೋಸಲಸಿ' ಇತಿ । 'ಭಗವ' ಇತಿ ಹ ಪ್ರತಿಶುಶ್ರಾವ । 'ಬ್ರಹ್ಮವಿದ ಇವ ಸೋಮ್ಯ ತೇ ಮುಖಂ ಭಾತಿ । ಕೋ ನು ತ್ವಾ ಅನುಶಶಾಸ' ಇತಿ । 'ಕೋ ನು ಮಾ ಅನುಶಿಷ್ಯಾತ್ ಭೋ' ಇತಿ । ಇಹಾವೇ ವ ನಿಹ್ನುತಃ । ಇಮೇ ನೂನಮೀದೃಶಾ ಅನ್ಯಾದೃಶಾ' ಇತಿ ಹ ಅಗ್ನೀನ್ ಅಭ್ಯೂದೇ । 'ಕಿಂ ನು ಸೋಮ್ಯ ಕಿಲ ತೇ ಅವೋಚನ್' ಇತಿ । 'ಇದಂ ಇತಿ ಹ ಪ್ರತಿಜಜ್ಞೇ।

''ಉಪಕೋಸಲ ! ಈ ವರೆಗೆ 'ಸೋಽಹಮಸ್ಮಿ' ಇತ್ಯಾದಿಯಾಗಿ ಅಂತರ್ಯಾಮಿ ವಿದ್ಯೆಯನ್ನೂ 'ಕಂ ಬ್ರಹ್ಮ' ಇತ್ಯಾದಿಯಾಗಿ ಸರ್ವಗತನಾದ ಬ್ರಹ್ಮನ ವಿದ್ಯೆಯನ್ನೂ ನಾವು ಉಪದೇಶಿಸಿದ್ದೇವೆ. ಇದನ್ನು ತಿಳಿಯಬೇಕು ಹೊರತು ಉಪಾಸನೆ ಮಾಡುವಂಥಹುದಲ್ಲ. ಉಪಾಸನೆಯ ಮಾರ್ಗವನ್ನು ನಿನಗೆ ನಿನ್ನ ಆಚಾರ್ಯರೇ ಹೇಳುವರು' ಎಂದು ತ್ರೇತಾಗ್ನಿಗಳು ಹೇಳಿದರು. ಆಗ ಉಪಕೋಸಲನ ಆಚಾರ್ಯರು ಬಂದರು. 'ಉಪಕೋಸಲ !' ಎಂದು ಕರೆದರು. 'ಪೂಜ್ಯರೇ' ಎಂದು ಉಪಕೋಸಲನು ಪ್ರತಿಯಾಗಿ ಕೇಳಿದ. 'ನಿನ್ನ ಮುಖದಲ್ಲಿ ಬ್ರಹ್ಮಜ್ಞಾನಿಯ ಕಾಂತಿ ಕಾಣುತ್ತಿದೆ. ನಿನಗಾರು ಉಪದೇಶಿಸಿದರು ?' ಎಂದು ಗುರುಗಳು ಪ್ರಶ್ನಿಸಿದರು. 'ಬ್ರಹ್ಮವಿದ್ಯೆಯನ್ನು ಯಾರು ತಾನೇ ನನಗೆ ಉಪದೇಶಿಸಬಲ್ಲರು ? ಭೂಮಿಯಲ್ಲಿರುವ ಮಾನವರೂ, ಪಾತಾಲದಲ್ಲಿರುವ ಅಸುರರೂ, ಭಗವಂತನ ವಿಷಯವನ್ನು ಅಪಲಾಪ ಮಾಡುವವರು. ಉಪದೇಶಕ್ಕೆ ಅಸಮರ್ಥರು. ನನಗೆ ಉಪದೇಶಿಸಿದವರು ದೇವತೆಗಳು ಈ ಅಗ್ನಿಯಂತೆ ಇರುವವರೂ ಜ್ವಾಲೆಯ ಬಣ್ಣದವರೂ ಮತ್ತು ಹಸ್ತಪಾದಾದಿ ಅವಯವಗಳುಳ್ಳವರೂ ಆಗಿದ್ದರು. ಅವರೇ ಪ್ರತ್ಯಕ್ಷರಾಗಿ ನನಗೆ ಉಪದೇಶಿಸಿದರು' ಎಂದು ಉಪಕೋಸಲನು ತನಗೆ ಉಪದೇಶಿಸಿದವರು ಅಗ್ನಿಗಳೆಂಬ ವಿಷಯವನ್ನು ಹೇಳಿದನು. 'ಅವರು

ನಿನಗೆ ಏನು ಉಪದೇಶಿಸಿದರು ? ಎಂದು ಗುರುಗಳು ಕೇಳಿದರು. ಉಪಕೋಸಲನು ಅಗ್ನಿಗಳು ಇದನ್ನು ಉಪದೇಶಿಸಿದರು ಎಂದು ಅನುವಾದ ಮಾಡಿದ.

'ಲೋಕಾನ್ ವಾವ ಕಿಲ ಸೋಮ್ಯ ತೇ ಅವೋಚನ್ । ಅಹಂ ತು ತೇ ತದ್ ವಕ್ಷ್ಯಾಮಿ । ತದ್ ಯಥಾ ಪುಷ್ಕರಪಲಾಶೇ ಆಪೋ ನ ಶ್ಲಿಷ್ಯಂತೇ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ' ಇತಿ । 'ಬ್ರವೀತು ಮೇ ಭಗವಾನ್' ಇತಿ । ತಸ್ಮೈ ಹ ಉವಾಚ । ॥ ಖಂಡ ೧೪॥

'ಯ ಏಷಃ ಅಂತರಕ್ಷಣೀ ಪುರುಷೋ ದೃಶ್ಯತೇ ಏಷ ಆತ್ಮಾ' ಇತಿ ಹ ಉವಾಚ । 'ಏತದಮೃತಮಭಯಮೇತದ್ ಬ್ರಹ್ಮ । ಏತಸ್ಮಿನ್ ನ ಕಿಂಚನ ಶ್ಲಿಷ್ಯತಿ । ತದ್ ಯದ್ಯಪ್ಯಸ್ಮಿನ್ ಸರ್ಪಿರ್ವಾ ಉದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ ।'

ಸತ್ಯಕಾಮನು ಉಪಕೋಸಲನಿಗೆ ಹೇಳಿದ - 'ಉಪಕೋಸಲ ! ಅಗ್ನಿಗಳು ನಿನಗೆ ಉಪದೇಶಿಸಿದ್ದು ಸರ್ವಲೋಕಾಧಾರವಾದ ಅಂತರ್ಯಾಮಿ ಭಗವದ್ರೂಪಗಳಲ್ಲವೆ? ಅವು ಕೇವಲ ತಿಳಿಯಲು ಮಾತ್ರ ಯೋಗ್ಯ ಹೊರತು ಉಪಾಸನೆಗೆ ಮತ್ತು ಹೊಂದಲು ಯೋಗ್ಯವಲ್ಲ. ನಾನು ಮಾತ್ರ ನಿನಗೆ, ಯಾವ ಬ್ರಹ್ಮನ ಜ್ಞಾನವನ್ನು ಪಡೆದರೆ ಆ ಜ್ಞಾನಿಗೆ ಕಮಲಪತ್ರದಲ್ಲಿ ನೀರು ಅಂಟದಿರುವಂತೆ 'ಪಾಪಕರ್ಮ ಲೇಪವಾಗಲಾರದೋ ಅಂತಹ ಬ್ರಹ್ಮನನ್ನು ಉಪದೇಶಿಸುತ್ತೇನೆ.'

ಪೂಜ್ಯರು ಉಪದೇಶಿಸಬೇಕೆಂದು ಉಪಕೋಸಲನು ಕೇಳಿಕೊಂಡನು. ಆಗ ಆಚಾರ್ಯರು ಉಪದೇಶಿಸಿದರು - 'ಜ್ಞಾನಿಗಳಿಗೆ ದಿವ್ಯದೃಷ್ಟಿಯಿಂದ ಕಣ್ಣಿನೊಳಗೆ ಯಾವ ಪುರುಷನು ಗೋಚರನಾಗುವನೋ ಅವನೇ ವಾಮನ ಎಂಬ ಹೆಸರುಳ್ಳ ಪರಮಾತ್ಮನಾಗಿದ್ದಾನೆ' ಎಂದು ಹೇಳಿದರು. 'ಅವನು ಸ್ವತಃ ನಿತ್ಯಮುಕ್ತನೂ ಭಯರಹಿತನೂ ಗುಣಪೂರ್ಣನೂ ಆಗಿದ್ದಾನೆ. ಅವನಿಗೆ ಯಾವುದರ ಲೇಪವೂ ಇಲ್ಲ. ಇಂತಹ ಅಸಂಗನಾದ ಪರಮಾತ್ಮನು ಕಣ್ಣಿನಲ್ಲಿರುವುದರಿಂದಲೇ ಯಾರಾದರೂ ಕಣ್ಣಿನಲ್ಲಿ ತುಪ್ಪವನ್ನೋ ನೀರನ್ನೋ ಹಾಕಿದರೆ ಅದು ಕಣ್ಣಿಗೆ ಅಂಟಿದಂತೆ ಬದಿಯಿಂದ ಹರಿದು ಹೋಗುತ್ತದೆ.

ಅಗ್ನಿಯ ಉಪದೇಶವು ಅಂತರ್ಯಾಮಿ ದೃಷ್ಟಿಯಿಂದ

तत्वप्रदीपः – 'दृश्यते ज्ञानदृष्ट्या यस्सूर्ये चक्षुषि चैकराट्' इति हि मानसे । 'सोऽहमस्मि स एवाहमस्मि' इत्यन्तर्याम्यपेक्षयैवोच्यते । अत्र चोक्तं छन्दोगोपनिषद्भाष्ये भगवतैव – 'स एवाहमस्मि' इत्यन्तर्यामिणोस्सर्व

विशेषाभावज्ञापनार्थम् । पूर्वं 'सोऽहमस्मि' इत्यभेदे तात्पर्याधिक्यज्ञापनाय । जीवैक्यपक्ष आदित्ये पुरुषश्चन्द्रमसि विद्यतीति भेदव्यपदेशो न युक्त इति ।।

'ದೃಶ್ಯತೇ ಜ್ಞಾನದೃಷ್ಟ್ಯಾ ಯಃ ಸೂರ್ಯೇ ಚಕ್ಷುಷಿ ಚೈಕರಾಡ್' ಸೂರ್ಯನಲ್ಲಿ ಹಾಗೂ ಚಕ್ಷುರಿಂದ್ರಿಯದಲ್ಲಿ ಸ್ವತಂತ್ರನಾದ ಮಹಾವಿಷ್ಣುವೇ ಜ್ಞಾನದೃಷ್ಟಿಯಿಂದ ಕಾಣಿಸುತ್ತಿದ್ದಾನೆ ಎಂಬುದಾಗಿ ಮಾನಸಗ್ರಂಥದಲ್ಲಿಯೂ ಕೂಡ ಹೇಳಲಾಗಿದೆ. ಆದ್ದರಿಂದ 'ಸೋऽಹಮಸ್ಮಿ ಸ ಏವಾಹಮಸ್ಮಿ' ಎಂಬುದಾಗಿ ಅಗ್ನಿಯ ಉಪದೇಶವು ಅಂತರ್ಯಾಮಿಯ ದೃಷ್ಟಿಯಿಂದಲೇ ಹೊರಟಿದೆ. ಈ ಸಂದರ್ಭದ ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ - 'ಸ ಏವಾಹಮಸ್ಮಿ' ಎಂಬುದಾಗಿ ಅಂತರ್ಯಾಮಿಭಗವದ್ ರೂಪಗಳಿಗೆ ಯಾವುದೇ ವೈಲಕ್ಷಣ್ಯವಿಲ್ಲವೆಂದು ತಿಳಿಸುವುದಕ್ಕಾಗಿ ಪ್ರವೃತ್ತವಾಗಿವೆ. ಹಿಂದೆ 'ಸೋऽಹಮಸ್ಮಿ' ಎಂಬುದಾಗಿ ಹೇಳಿರುವುದರಿಂದ ಭಗವದ್‌ರೂಪಗಳಿಗೆ ಅಭೇದವಿರುವುದರಲ್ಲಿ ತಾತ್ಪರ್ಯಾಧಿಕ್ಯವನ್ನು ತಿಳಿಸುವುದಕ್ಕಾಗಿ, ಜೀವೈಕ್ಯ ಪಕ್ಷದಲ್ಲಿ 'ಆದಿತ್ಯೇ ಪುರುಷಃ ಚಂದ್ರಮಸಿ ವಿದ್ಯತಿ' ಎಂಬುದಾಗಿ ಭೇದವ್ಯಪದೇಶವು ಅಯುಕ್ತವಾಗುತ್ತದೆ ಎಂದು.

ಸೂರ್ಯಾದಿಗಳಲ್ಲಿರುವ ಪರಮಾತ್ಮನೇ 'ಅಹಂ'ಶಬ್ದ ವಾಚ್ಯ

तत्वप्रदीपः –

''यः सूर्यसोमविद्युत्सु तत्तनाम्ना हरिः परः ।
अहेयत्वादहंनामा गार्हपत्यादिसंस्थितः ।।''

इति च तत्वसंहितायाम् ।।छ।।

ಯಃ ಸೂರ್ಯಸೋಮವಿದ್ಯುತ್ಸು ತತ್ತನಾಮ್ನಾ ಹರಿಃ ಪರಃ ।
ಅಹೇಯತ್ವಾದಹಂನಾಮಾ ಗಾರ್ಹಪತ್ಯಾದಿಸಂಸ್ಥಿತಃ ॥

ಸೂರ್ಯ, ಚಂದ್ರ, ವಿದ್ಯುತ್‌ಗಳಲ್ಲಿ ಪೂರ್ಣನಾದ ಯಾವ ಪರಮಾತ್ಮನಿದ್ದಾನೋ, ಅವನೇ ಅಹೇಯನಾದ್ದರಿಂದ ಅಹಂ ಶಬ್ದವಾಚ್ಯನಾಗಿ ಗಾರ್ಹಪತ್ಯ, ಅನ್ವಾಹಾರ್ಯಪಚನ, ಆವಹನೀಯ ಅಗ್ನಿಗಳಲ್ಲಿ ಅಂತರ್ಯಾಮಿಯಾಗಿದ್ದಾನೆ. ಹೀಗೆ ತತ್ವಸಂಹಿತೆಯಲ್ಲಿ ಹೇಳಲಾಗಿದೆ.

ವಿಶೇಷವಿಚಾರ - ಶ್ರುತಿಗೆ ವ್ಯಾಖ್ಯಾನ ಮಾಡಿದ ಭಾಷ್ಯದ ಸಂಪೂರ್ಣ ಸಂದರ್ಭ ಹೀಗಿದೆ -

೧. ಹನ್ನೊಂದರಿಂದ ಹದಿಮೂರನೇ ಖಂಡದವರೆಗಿನ ಮಂತ್ರದಲ್ಲಿರುವ ಪೃಥಿವೀ ಮೊದಲಾದ ಶಬ್ದಗಳು ಭಗವದ್ವಾಚಕ ಹೊರತು ಜಡವಾಚಕವಲ್ಲ. ವಿಷ್ಣುವು ವ್ಯಾಪ್ತನಾದುದರಿಂದ ಪೃಥಿವೀ, ಅಂಗ ಎನಿಸಿದ ಜಗತ್ತಿಗೆ 'ನೇತೃ' ನಿಯಾಮಕನಾದ್ದರಿಂದ ಅಗ್ನಿ, ಸಂಹಾರಕನಾದ್ದರಿಂದ ಅನ್ನ, ಜಗತ್ಕಾರಣನಾದ್ದರಿಂದ ಆದಿತ್ಯ, 'ಆ' ಚೆನ್ನಾಗಿ 'ಪ' ಪಾಲಿಸುವುದರಿಂದ ಆಪ, ಅಭೀಷ್ಟಗಳನ್ನು ಕೊಡುವುದರಿಂದ ದಿಶ, ತನಗೆ ಯಾರೂ ರಾಜರಿಲ್ಲದಿರುವುದರಿಂದ ನಕ್ಷತ್ರ, ಆನಂದರೂಪನಾದ್ದರಿಂದ ಚಂದ್ರ, ಬಲರೂಪನಾದ್ದರಿಂದ ಪ್ರಾಣ, ಅವಕಾಶಪ್ರದನಾದುದರಿಂದ ಆಕಾಶ, ಪ್ರಕಾಶಸ್ವರೂಪನಾದ್ದರಿಂದ ದ್ಯೌ, ಸರ್ವಜ್ಞನಾದುದರಿಂದ ವಿದ್ಯುತ್ ಎನಿಸಿದ್ದಾನೆ. ಸೂರ್ಯ, ಚಂದ್ರ, ವಿದ್ಯುತ್ತುಗಳಲ್ಲಿ ಪೂರ್ಣನಾದ ಯಾವ ಶ್ರೀಹರಿ ಇರುವನೋ ಅವನೇ, ಅಹೇಯನಾದ್ದರಿಂದ ಅಹಂ ಶಬ್ದವಾಚ್ಯನಾಗಿ ಗಾರ್ಹಪತ್ಯ ಅನ್ವಾಹಾರ್ಯಪಚನ, ಆಹವನೀಯಾಗ್ನಿಗಳಲ್ಲಿ ಅಂತರ್ಯಾಮಿಯಾಗಿರುವನು ಎಂದು ತತ್ತ್ವಸಂಹಿತೆಯಲ್ಲಿದೆ.

೨. 'ಯ ಏಷ ಆದಿತ್ಯೇ ಪುರುಷಃ ಸೋऽಹಮಸ್ಮಿ' ಇತ್ಯಾದಿ ವಾಕ್ಯಗಳಲ್ಲಿ ಗಾರ್ಹಪತ್ಯಾದಿ ಅಗ್ನಿಗಳಿಗೂ, ಆದಿತ್ಯಾದಿ ಜೀವರಿಗೂ ಐಕ್ಯವನ್ನು ಹೇಳಲಾಗಿದೆ. ಅಥವಾ ಆದಿತ್ಯಾದಿಗಳಲ್ಲಿರುವ ಬ್ರಹ್ಮನಿಗೂ ಗಾರ್ಹಪತ್ಯಾದಿ ಜೀವರಿಗೂ ಐಕ್ಯ ಹೇಳಲಾಗಿದೆ ಎಂಬ ವ್ಯಾಖ್ಯಾನ ಸರಿಯಲ್ಲ. ಆ ಪಕ್ಷದಲ್ಲಿ 'ಆದಿತ್ಯಃ ಪುರುಷಃ ಸೋऽಹಮಸ್ಮಿ', 'ಆದಿತ್ಯನೇ ನಾನು' ಎಂದು ಇರಬೇಕಾಗಿತ್ತು. ಆದರೆ 'ಆದಿತ್ಯೇ ಪುರುಷಃ' 'ಚಂದ್ರಮಸಿ', 'ವಿದ್ಯುತಿ', ಆದಿತ್ಯನಲ್ಲಿರುವ ಚಂದ್ರನಲ್ಲಿರುವ 'ವಿದ್ಯುತಿನಲ್ಲಿರುವ ಪುರುಷ' ಎಂದು ಭೇದವನ್ನು ತಿಳಿಸುವ ಸಪ್ತಮೀ ವಿಭಕ್ತಿಯ ನಿರ್ದೇಶವಿದೆ. ಐಕ್ಯಪಕ್ಷದಲ್ಲಿ ಇದು ಸರಿಯಾಗಲಾರದು. ಆದಿತ್ಯೇ, ಚಂದ್ರಮಸಿ, ವಿದ್ಯುತಿ ಎಂಬ ಪದಗಳಿಗೆ ಅವರಲ್ಲಿರುವ ಪುರುಷ ಎಂದರ್ಥ ಮಾಡದೇ ಪೂರ್ವವಾಕ್ಯದಲ್ಲಿ ಆದಿತ್ಯ ಚಂದ್ರಮಾಃ, ವಿದ್ಯುತ್ ಎಂದು ಪ್ರಸಕ್ತರಾದ ಆದಿತ್ಯಾದಿಗಳನ್ನೇ ಇಟ್ಟುಕೊಳ್ಳುತ್ತೇವೆ ಎನ್ನುವುದೂ ಸರಿಯಲ್ಲ. ಪೃಥಿವೀ ಅಗ್ನಿಃ ಅನ್ನಂ ಆದಿತ್ಯಃ ಎಂಬಲ್ಲಿ ಪ್ರಥಮಾಂತವಾದ ಆದಿತ್ಯಶಬ್ದ, ಆದಿತ್ಯೇ ಪುರುಷಃ ಎಂಬಲ್ಲಿರುವ ಸಪ್ತಮ್ಯಂತವಾದ ಆದಿತ್ಯಶಬ್ದ ಹೀಗೆ ಎರಡು ಶಬ್ದಗಳಿಂದ 'ಆದಿತ್ಯ' ಮತ್ತು 'ಆದಿತ್ಯನಲ್ಲಿರುವ ಪುರುಷ' ಎಂಬ ಪ್ರತ್ಯೇಕವಾದ ಎರಡು ಅರ್ಥಗಳು ತಿಳಿಯುತ್ತವೆ. ಆದ್ದರಿಂದ ಆದಿತ್ಯಾದಿಗಳಿಗೂ ಅಗ್ನಿಗಳಿಗೂ ಐಕ್ಯವು ಇಲ್ಲಿ ಅಭಿಪ್ರೇತವಾಗಿಲ್ಲ.

೩. 'ಸೋऽಹಮಸ್ಮಿ' ಎಂಬ ವಾಕ್ಯದಿಂದಲೇ ಆದಿತ್ಯನಲ್ಲಿರುವ ಭಗವಂತನಿಗೂ, ಅಗ್ನಿಯಲ್ಲಿ ಅಂತರ್ಯಾಮಿಯಾದ ಭಗವಂತನಿಗೂ ಐಕ್ಯವು ತಿಳಿದು ಬರುವಾಗ ಪುನಃ

'ಸ ಏವಾಹಮಸ್ಮಿ' ಎಂಬ ವಾಕ್ಯವು ಅಂತರ್ಯಾಮಿ ಭಗವದ್ರೂಪಗಳಿಗೆ ಪರಸ್ಪರ ಯಾವ ವೈಲಕ್ಷಣ್ಯವೂ ಇಲ್ಲ ಎಂದು ತಿಳಿಸಲು ಪ್ರವೃತ್ತವಾಗಿದೆ. 'ಸ ಏವಾಹಮಸ್ಮಿ' ಎಂಬ ಒಂದೇ ವಾಕ್ಯದಿಂದಲೇ ವೈಲಕ್ಷಣ್ಯರಹಿತವಾದ ಐಕ್ಯಸಿದ್ಧವಾದರೂ ಪೂರ್ವದಲ್ಲಿ 'ಸೋಽಹಮಸ್ಮಿ' ಎಂದು ಹೇಳಿದ್ದು ಭಗವದ್ರೂಪಗಳ ಐಕ್ಯದಲ್ಲಿ ಅತಿಶಯವಾದ ತಾತ್ಪರ್ಯವನ್ನು ತೋರಿಸಲು. ಆದ್ದರಿಂದ ಎರಡು ವಾಕ್ಯಗಳು ಸಾರ್ಥಕವಾಗಿವೆ. ಜೀವೈಕ್ಯಪಕ್ಷದಲ್ಲಿ ಸಾರ್ಥಕವಾಗುವುದಿಲ್ಲ. 'ಅಹಂ' 'ಅಸ್ಮಿ' ಇತ್ಯಾದಿ ಶಬ್ದಗಳು ಮುಖ್ಯವೃತ್ತಿಯಿಂದ ಅಂತರ್ಯಾಮಿಯನ್ನೇ ಹೇಳುತ್ತವೆ. ಅಂತರ್ಯಾಮಿ ಸಂಬಂಧ ಜೀವನಿಗಿರುವುದರಿಂದ ಜೀವನಲ್ಲೂ ಅಮುಖ್ಯವಾಗಿ ಪ್ರವೃತ್ತವಾಗಿವೆ. ಆದ್ದರಿಂದ ವೇದದಲ್ಲಿ ಬಂದ ಆ ಶಬ್ದಗಳು ಭಗವಂತನನ್ನೇ ಪ್ರತಿಪಾದಿಸುತ್ತವೆ. ಹೀಗೆ ಸೋಽಹಮಸ್ಮಿ ಎಂಬಲ್ಲಿ 'ಅಹಂ' ಶಬ್ದವು ಅಂತರ್ಯಾಮಿ ಪರವಾದ್ದರಿಂದಲೇ ಮುಂದೆ 'ಅಸ್ಮದ್ವಿದ್ಯಾ ಆತ್ಮವಿದ್ಯಾ ಚ' ಎಂಬ ಅಗ್ನಿಗಳ ವಾಕ್ಯದಲ್ಲಿಯೂ ಅಸ್ಮಚ್ಛಬ್ದದಿಂದ ಉಕ್ತನಾದವನು ಅಂತರ್ಯಾಮಿಯಾದ ವಿಷ್ಣು. ಆತ್ಮಶಬ್ದೋಕ್ತನಾದವನು ವ್ಯಾಪ್ತನಾದ ವಿಷ್ಣು. ಹೀಗೆ ಅಗ್ನಿಗಳು ಅಂತರ್ಯಾಮಿ ವಿದ್ಯೆ ಮತ್ತು ವ್ಯಾಪ್ತವಿದ್ಯೆ ಎಂದು ಎರಡು ವಿಧವಾದ ವಿಷ್ಣುವಿದ್ಯೆಯನ್ನು ಉಪಕೋಸಲನಿಗೆ ಹೇಳಿದ್ದಾರೆ ಎಂದು ಸಾಮ ಸಂಹಿತೆಯಲ್ಲಿದೆ.

'ನಾಸ್ಯ ಅಪರಪುರುಷಾಃ ಕ್ಷೀಯಂತೇ' ಎಂದರೆ ಉಪಾಸಕನು ಭೃತ್ಯರುಳ್ಳವನೇ ಆಗುತ್ತಾನೆ, 'ಲೋಕೀ ಭವತಿ' ಎಂದರೆ ಭಗವಲ್ಲೋಕ ಹೊಂದಿದವನಾಗುತ್ತಾನೆ, ಎಂದರ್ಥ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಅಂತರಾಧಿಕರಣದ ಶಾಸ್ತ್ರಸಂಗತಿ ಏನು ?

तत्वप्रकाशिका – अत्राग्निश्रुतिसाहित्येनान्यत्रप्रसिद्धस्य चक्षुरन्तःस्थत्वलिङ्गस्य परब्रह्मणि समन्वयसमर्थनादस्ति शास्त्रादिसङ्गतिः ।

ಈ ಅಧಿಕರಣದಲ್ಲಿ ಅಗ್ನಿಶ್ರುತಿಯ ಜೊತೆಯಲ್ಲಿ ಅನ್ಯತ್ರಪ್ರಸಿದ್ಧವಾದ ಚಕ್ಷುರಿಂದ್ರಿಯಸ್ಥಿತತ್ವ ಲಿಂಗವನ್ನು ಪರಬ್ರಹ್ಮನಲ್ಲಿ ಸಮನ್ವಯ ಮಾಡುತ್ತಿರುವುದರಿಂದ ಶಾಸ್ತ್ರ, ಅಧ್ಯಾಯ, ಪಾದಸಂಗತಿಗಳು ಇವೆ.

ಅಂತರಾಧಿಕರಣದ ವಿಷಯವಾಕ್ಯ ಹೇಗಿದೆ ?

तत्वप्रकाशिका – श्रुत्यादिसङ्गतिं विषयवाक्यं विषयसंशयौ सयुक्तिकं पूर्वपक्षं च दर्शयति – आदित्य इति ।।

ಭಾಷ್ಯದಲ್ಲಿ ''ಆದಿತ್ಯ'' ಇತ್ಯಾದಿ ವಾಕ್ಯಗಳಿಂದ ಶ್ರುತಿಸಂಗತಿ, ವಿಷಯವಾಕ್ಯ, ವಿಷಯ, ಸಂಶಯ ಮತ್ತು ಯುಕ್ತಿಸಹಿತವಾಗಿ ಪೂರ್ವಪಕ್ಷವನ್ನು ತೋರಿಸುತ್ತಿದ್ದಾರೆ.

ಕಣ್ಣಿನಲ್ಲಿರುವವನು ಯಾರು ?

तत्वप्रकाशिका – 'यश्चासावादित्ये' इत्यानन्दमयस्याऽऽदित्यस्थत्वमुक्तम् । ततश्चार्थादक्षिस्थत्वमप्युक्तम् । तदक्षिस्थत्वं छन्दोगश्रुतौ कस्यचित् प्रतीयते ।

ತೈತಿರೀಯೋಪನಿಷತ್ತಿನ ''ಯಶ್ಚಾಸಾವಾದಿತ್ಯೇ'' ಎಂಬಲ್ಲಿ ಆದಿತ್ಯನಲ್ಲಿರುವ ಆನಂದಮಯನು ಅವನೇ ಆದಿತ್ಯನ ಅಂತಃಸ್ಥನಾಗಿದ್ದಾನೆಂದು ಕೇಳಿಸುತ್ತಿದೆ. ಆದ್ದರಿಂದ ಚಕ್ಷುರಿಂದ್ರಿಯದಲ್ಲಿ ಇರುವವನು ಆನಂದಮಯನೆಂದೇ ಅರ್ಥವಾಗುತ್ತದೆ. (ಏಕೆಂದರೆ ಕಣ್ಣು ಮತ್ತು ಸೂರ್ಯ ಇವುಗಳ ಅಂತರ್ಯಾಮಿ ದೇವತೆ ಒಬ್ಬನೇ ಆಗಿದ್ದಾನೆ) ಆದರೆ ಛಾಂದೋಗ್ಯೋಪನಿಷತ್ತಿನಲ್ಲಿ ಚಕ್ಷುರಿಂದ್ರಿಯದಲ್ಲಿರುವನು ಯಾರೋ ಒಬ್ಬ ಪುರುಷನೆಂದು ಹೇಳಿದಂತೆ ತೋರುತ್ತಿದೆ.

ಯಾವ ಉಪನಿಷತ್ತಿನ ವಾಕ್ಯದಲ್ಲಿ ಈ ವಿಚಾರ ಪ್ರಸಕ್ತವಾಗಿದೆ

तत्वप्रकाशिका – 'य एषोऽन्तरक्षणि पुरुषो दृश्यते एष आत्मेति होवाचेतदमृतमभयमेतद् ब्रह्म' इति । तच्च यद्यन्यस्य स्यात्तदाऽऽदित्यस्थत्वमानन्दमयत्वं चान्यस्यैव प्रसज्येतेत्यवश्यं निर्णेयमेव ।

ಆ ಮಂತ್ರವು - ''ಯ ಏಷೋऽಂತರಕ್ಷಿಣಿ ಪುರುಷೋ ದೃಶ್ಯತೇ, ಏಷ ಆತ್ಮೇತಿ ಹೋವಾಚ, ಏತದಮೃತಮಭಯಮೇತದ್ ಬ್ರಹ್ಮ''. ಆದ್ದರಿಂದ ಒಂದು ವೇಳೆ ಚಕ್ಷುಸ್ಸಿನ ಅಂತಃಸ್ಥನಾದವನು ಬೇರೆಯವನಾದರೆ ಆದಿತ್ಯನ ಅಂತಃಸ್ಥನಾದ ಆನಂದಮಯನೂ ಸಹ ಅವನೇ ಆಗಬೇಕಾಗುತ್ತದೆ. ಆದ್ದರಿಂದ ಚಕ್ಷುರಿಂದ್ರಿಯದಲ್ಲಿರುವವನನ್ನು ಯಾರೆಂದು ಅವಶ್ಯವಾಗಿ ನಿರ್ಣಯ ಮಾಡಬೇಕಾಗಿದೆ.

ಅಂತರಾಧಿಕರಣದ ಅಧಿಕರಣ ರಚನೆ

तत्वप्रकाशिका – तदक्षिस्थत्वं विषयः । विष्णोरग्नेर्वेति सन्देहः । 'यश्चासावादित्ये' इत्युक्तिरग्निश्रुतिश्च सन्देहबीजम् । 'य एषोऽन्तरक्षिणि' इति वाक्येऽग्नेरेवाक्षिस्थत्वेनोच्यत इति पूर्वः पक्षः ।

ಕಣ್ಣಿನಲ್ಲಿ ನಿಯಾಮಕನಾಗಿರುವವನು ಯಾರು? ಎಂಬುದೇ ಈ ಅಧಿಕರಣಕ್ಕೆ ವಿಷಯ. ವಿಷ್ಣುವೋ? ಅಥವಾ ಅಗ್ನಿಯೋ? ಎಂದು ಸಂಶಯ. ''ಯಶ್ಚಾಸಾವಾದಿತ್ಯೇ'' ಎಂಬ ತೈತ್ತಿರೀಯ ಶ್ರುತಿ ಮತ್ತು ಅಗ್ನಿಶ್ರುತಿಗಳು ಸಂಶಯಕ್ಕೆ ಕಾರಣ. ''ಯ ಏಷೋಽಂತರಕ್ಷಿಣಿ'' ಎಂಬ ವಾಕ್ಯದಲ್ಲಿ ಅಗ್ನಿಯೇ ಕಣ್ಣಿನಲ್ಲಿ ನಿಯಾಮಕನಾಗಿ ಇದ್ದಾನೆಂದು ಶ್ರುತಿಯು ಹೇಳುತ್ತಿದೆಂದು ಪೂರ್ವಪಕ್ಷ.

ಅಗ್ನಿಯು ಅಕ್ಷಿಸ್ಥನೇ ?

तत्वप्रकाशिका – यतो 'य एष आदित्ये पुरुषः सोऽहमस्मि स एवाहमस्मि' इत्यग्नेरेवाऽऽदित्यस्थत्वमुच्यते । नच वाच्यमग्नेरादित्यस्थत्वेऽपि कुतोऽक्षिस्थत्वमिति ।

ಛಾಂದೋಗ್ಯೋಪನಿಷತ್ತಿನಲ್ಲಿ ''ಯ ಏಷ ಆದಿತ್ಯೇ ಪುರುಷ ಸೋಽಹಮಸ್ಮಿ ಸ ಏವಾಹಮಸ್ಮಿ'' ಎಂದು ಅಗ್ನಿಯೇ ಆದಿತ್ಯನಲ್ಲಿದ್ದಾನೆಂದು ಕೇಳಿಸುತ್ತಿದೆ. ಆದಿತ್ಯನಲ್ಲಿ ಅಂತಃಸ್ಥನಾದವನು ಅಗ್ನಿಯಾದರೆ, ಕಣ್ಣಿನಲ್ಲಿಯೂ ಅವನೇ ಇರಬೇಕೆಂಬ ಪ್ರಶ್ನೆಗೆ ಅವಕಾಶವಿಲ್ಲ.

ಆದಿತ್ಯ-ಅಗ್ನಿಗಳಲ್ಲಿ ಇರುವ ಸಮಾನಧರ್ಮ ಯಾವುದು ?

तत्वप्रकाशिका – आदित्यश्चक्षुर्भूत्वाऽक्षिणी प्राविशदिति श्रुतेरक्ष्यादित्ययोरेकविधत्वादादित्यस्थितत्वेनाग्नेरक्षिस्थत्वसिद्धेः ।

''ಆದಿತ್ಯಃ ಚಕ್ಷುರ್ಭೂತ್ವಾऽಕ್ಷಿಣೀ ಪ್ರಾವಿಶತ್'' (ಆದಿತ್ಯಮಂಡಲದಲ್ಲಿರುವವನೇ ಚಕ್ಷುಗೋಲಕದಲ್ಲಿ ಪ್ರವೇಶ ಮಾಡಿದನು) ಎಂಬ ಶ್ರುತಿಯಿಂದ ಆದಿತ್ಯ ಮತ್ತು ಕಣ್ಣಿನಲ್ಲಿರುವ

ದೇವತೆಯಲ್ಲಿ ಏಕಪ್ರಕಾರತ್ವವು ಕೇಳಿಸುತ್ತಿದೆ. ಆದ್ದರಿಂದ ಆದಿತ್ಯನಲ್ಲಿ ಅಗ್ನಿ ಇದ್ದಾನೆಂದರೆ ಕಣ್ಣಿನಲ್ಲಿಯೂ ಸಹ ಅವನೇ ಇದ್ದಾನೆಂದು ಸಿದ್ಧವಾಗುತ್ತದೆ.

ಅಗ್ನಿ ಶ್ರುತಿಗಳು ಒಂದೋ ? ಅನೇಕವೋ ?

तत्वप्रकाशिका – एतस्मिन् प्रकरणे 'अथ हाग्नयः समूदिरे' 'गार्हपत्योऽनुशशास' इत्यादिबह्वग्निश्रुति सद्भावाच्च ।

ಅಲ್ಲದೆ ಛಾಂದೋಗ್ಯೋಪನಿಷತ್ತಿನ ಈ ಪ್ರಕರಣದಲ್ಲಿಯೇ "ಅಥ ಹಾಗ್ನಯಃ ಸಮೂದಿರೇ" "ಗಾರ್ಹಪತ್ಯೋಽನುಶಶಾಸ" ಇತ್ಯಾದಿಯಾಗಿ ಅಗ್ನಿಶಬ್ದದ ಶ್ರವಣ ಅನೇಕ ಕಡೆ ಕಾಣಿಸುತ್ತಿದೆ.

ಅಭ್ಯಾಸವು ಸಮಾಖ್ಯಾಗಿಂತ ಪ್ರಬಲ ಪ್ರಮಾಣ

तत्वप्रकाशिका – नच वाच्यमग्नेरादित्यस्थत्वकथनमौपचारिकं किन्न स्यात् । 'यश्चासावादित्ये' इति श्रुतिविरोधादिति । 'सोऽहमस्मि स एवाहमस्मि' इत्यभ्यासात् । अभ्यासस्य च समाख्यातो बलवत्त्वात् ।

ಪ್ರಶ್ನೆ - ಅಗ್ನಿಯು ಆದಿತ್ಯನಲ್ಲಿ ಇದ್ದಾನೆಂದು ಹೇಳಿದ್ದು ಕೇವಲ ಔಪಚಾರಿಕವೆಂದು ಏಕೆ ಆಗಬಾರದು? ಇಲ್ಲದಿದ್ದರೆ 'ಯಶ್ಚಾಸಾವಾದಿತ್ಯೇ' ಎಂಬ ಸಮಾಖ್ಯಾ ಶ್ರುತಿಯಿಂದ ವಿರೋಧ ಬರುತ್ತದೆ ಅಲ್ಲವೇ?

ಉತ್ತರ - ಯಾವ ವಿರೋಧವೂ ಬರುವುದಿಲ್ಲ. ಏಕೆಂದರೆ ಶ್ರುತಿಯಲ್ಲಿ "ಸೋಽಹಮಸ್ಮಿ" "ಸ ಏವಾಹಮಸ್ಮಿ" ಎಂದು 'ಅಹಮಸ್ಮಿ' ಎಂದು ಅನೇಕ ಬಾರಿ ಉಚ್ಚಾರಣೆ ಮಾಡಿದ್ದು ಕೇಳಿಸುತ್ತಿದೆ. ಈ ಅಭ್ಯಾಸವಾದರೂ ಸಮಾಖ್ಯಾಪ್ರಮಾಣಕ್ಕಿಂತ ಪ್ರಬಲವಾಗಿದೆ.

ಅಭ್ಯಾಸಕ್ಕೆ ಬಾಧಕ ಪ್ರಮಾಣ ಯಾವುದು ?

तत्वप्रकाशिका – नच विष्णुग्रहणेऽपूर्वतयाऽभ्यासस्यापि बाधः । 'स य एतदेवं विद्वानुपास्तेऽपहते पापकृत्यां लोकीभवति सर्वमायुरेति' इत्यर्थवादात् ।

ಪ್ರಶ್ನೆ - ಛಾಂದೋಗ್ಯಶ್ರುತಿಯಲ್ಲಿರುವ ''ಅಹಂ'' ಶಬ್ದಕ್ಕೆ ಅಗ್ನಿಯೆಂಬ ಅರ್ಥವನ್ನು ಹೇಳದೆ 'ವಿಷ್ಣು' ಎಂದು ಅರ್ಥೈಸಿದರೆ, ಶ್ರುತಿಗೆ ಅಪೂರ್ವತಾ ಬರುತ್ತದೆ. ಇಂತಹ ಅಪೂರ್ವತಾದಿಂದ ಅಭ್ಯಾಸಕ್ಕೆ ಬಾಧ ಬರುತ್ತದಲ್ಲವೆ?

ಉತ್ತರ - ಇದು ಸರಿಯಲ್ಲ. ಏಕೆಂದರೆ ಮುಂದೆ ''ಸ ಯ ಏತದೇವಂ ವಿದ್ವಾನುಪಾಸ್ತೇऽಪಹತೇ ಪಾಪಕೃತ್ಯಾಂ ಲೋಕೀಭವತಿ ಸರ್ವಮಾಯುರೇತಿ'' (ಅಗ್ನಿಯು ಆದಿತ್ಯನಲ್ಲಿದ್ದಾನೆಂದು ತಿಳಿದ ಯಾವ ಪುರುಷನು ಅಗ್ನಿಯನ್ನು ಉಪಾಸನೆ ಮಾಡುತ್ತಾನೋ ಅವನ ಪಾಪಕರ್ಮಗಳೆಲ್ಲವೂ ನಾಶವಾಗಿ ಅಗ್ನಿಯ ಲೋಕದ ಪ್ರಾಪ್ತಿಯಾಗುತ್ತದೆ ಮತ್ತು ಮೋಕ್ಷವನ್ನು ಹೊಂದುತ್ತಾನೆ) ಎಂದು ಅರ್ಥವಾದವು ಕೇಳಿಸುತ್ತಿದೆ.

ಅರ್ಥವಾದವು ಅಭ್ಯಾಸಕ್ಕಿಂತ ಪ್ರಬಲ

तत्वप्रकाशिका – अर्थवादस्य चापूर्वतायाः प्राबल्यात् । अतोऽक्ष्यादित्यस्थोऽग्निरेवेति स एवानन्दमयोऽपीति भावः ।

ಈ ಅರ್ಥವಾದವು ಅಪೂರ್ವತಾಕ್ಕಿಂತ ಪ್ರಬಲವಾಗಿದೆ. ಆದ್ದರಿಂದ ಅಕ್ಷಿ, ಆದಿತ್ಯರಲ್ಲಿ ಇರುವವನು, 'ಅಹಂ' ಶಬ್ದದಿಂದ ವಾಚ್ಯನಾದವನು ಅಗ್ನಿಯೇ ಆಗಿದ್ದಾನೆ ಅವನೇ ಆನಂದಮಯನೂ ಸಹ ಆಗಿದ್ದಾನೆ.

ಕೇವಲ ವಿಷ್ಣುಜ್ಞಾನವೇ ಮೋಕ್ಷಕಾರಕವಲ್ಲ

तत्वप्रकाशिका – न केवलमग्नेरक्षिस्थत्वसिद्धावानन्दमयत्वप्राप्तिः किन्तु यद्विष्णुज्ञानादेव मोक्ष इति मतम्, तदपि बाधितं स्यादित्याह – अत इति ।।

ಆದ್ದರಿಂದ ಬಹಳವಾದ ಅಗ್ನಿಶ್ರುತಿ, ಅಭ್ಯಾಸ, ಅರ್ಥವಾದ ಇವುಗಳ ಸಹಾಯದಿಂದ ಕಣ್ಣು ಮತ್ತು ಸೂರ್ಯನಲ್ಲಿ ನಿಯಾಮಕನಾಗಿ ಇರುವವನು ಅಗ್ನಿಯೇ ಎಂದು ನಿಶ್ಚಯವಾಗುತ್ತದೆ. ಇದರಿಂದ ಅಗ್ನಿಯೇ ಆನಂದಮಯನೆಂದು ಸಿದ್ಧವಾಗುತ್ತದೆ. ಅಲ್ಲದೆ ಕೇವಲ ವಿಷ್ಣುವಿನ ಜ್ಞಾನದಿಂದಲೇ ಮೋಕ್ಷವೆಂದು ಹೇಳುವ ಸಿದ್ಧಾಂತವೂ ಸಹ ಬಾಧಿತವಾಗುತ್ತದೆ ಎಂದು ಅತಃ ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಉಪನಿಷತ್ತು ಯಾರಿಗೆ ಸರ್ವಪಾಪಾಶ್ಲೇಷತ್ವವನ್ನು ಹೇಳುತ್ತದೆ ?

तत्वप्रकाशिका – यतोऽग्निरक्षिस्थोऽतस्तज्ज्ञानान्मोक्षोऽपि भवेत् । 'तद्यथा' इति तज्ज्ञानात् सर्वपापाश्लेषोक्तेः । तज्ज्ञानात्सर्वपापाश्लेषे च मोक्षस्यापि तदन्यथाऽनुपपत्त्यैवोपपत्तेरित्यर्थः ।

ಯಾವ ಅಗ್ನಿಯು ಅಕ್ಷಿಸ್ಥನೋ ಅಂತಹವನ ಜ್ಞಾನದಿಂದಲೇ ಮೋಕ್ಷವು ಆಗುತ್ತದೆ. ಹೇಗೆಂಬುದನ್ನು "ತದ್ಯಥಾ" ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಅಗ್ನಿಜ್ಞಾನವಿರುವ ಪುರುಷನಿಗೆ ಯಾವ ಪಾಪಗಳ ಸಂಬಂಧವೂ ಆಗುವುದಿಲ್ಲವೆಂದು ಸರ್ವಪಾಪಾಶ್ಲೇಷತ್ವವನ್ನು ಛಾಂದೋಗ್ಯೋಪನಿಷತ್ತು ಹೇಳುತ್ತಿದೆ. ಅಂದರೆ ಸರ್ವಪಾಪಾಶ್ಲೇಷತ್ವವು ಮೋಕ್ಷವಾಗದೆ ಆಗುವುದಿಲ್ಲ. ಆದ್ದರಿಂದ ಅಗ್ನಿಜ್ಞಾನದಿಂದಲೇ ಮೋಕ್ಷವೆಂಬುದು ಅನ್ಯಥಾऽನುಪಪತ್ತಿ-ಪ್ರಮಾಣದಿಂದ ಸಿದ್ಧವಾಗುತ್ತದೆ.

'ಅಗ್ನೀನಾಂ' ಎಂಬ ಬಹುವಚನ ಏಕೆ ?

तत्वप्रकाशिका – अत्राऽऽदित्यस्थत्वलिङ्गस्यापि विष्णौ समन्वयसिद्ध्यर्थं वक्रसङ्गत्याऽधिकरणारम्भ इति ज्ञातव्यम् । 'अग्नीनाम्' इति बहुवचनमादिपदद्वयं च बह्वग्निश्रुतिसूचनाय प्रयुक्तम् ।

ಈ ಅಧಿಕರಣದಲ್ಲಿ ಆದಿತ್ಯಸ್ಥತ್ವವೆಂಬ ಲಿಂಗದ ಸಮನ್ವಯವನ್ನೂ ವಿಷ್ಣುವಿನಲ್ಲಿ ಮಾಡಬೇಕಾಗಿದೆ. ಆದ್ದರಿಂದಲೇ ವಕ್ರಸಂಗತಿಯಿಂದ ಅಧಿಕರಣವನ್ನು ಪ್ರಾರಂಭಿಸಿದ್ದಾರೆಂದು ತಿಳಿಯಬೇಕು.

ಭಾಷ್ಯಕಾರರು "ಅಗ್ನೀನಾಂ" ಎಂದು ಬಹುವಚನ ಮತ್ತು ಎರಡುಬಾರಿ ಪ್ರಯೋಗಿಸಲ್ಪಟ್ಟ 'ಆದಿ' ಪದಗಳು' ಅನೇಕ ಅಗ್ನಿಶ್ರುತಿಗಳಿವೆ ಎಂಬುದನ್ನು ಸೂಚಿಸಲು ಪ್ರಯೋಗ ಮಾಡಿದ್ದಾರೆ.

ಅಂತರಾಧಿಕರಣದ ಸಿದ್ಧಾಂತವೇನು ?

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। विष्णुरेव चक्षुरन्तरः । 'एतदमृतमभयम्' इत्यमृतत्वाभयत्वोक्तेः ।

ಸಿದ್ಧಾಂತವನ್ನು ಹೇಳುವ ಸೂತ್ರವನ್ನು ಹೇಳಿ ಸೂತ್ರದ ವ್ಯಾಖ್ಯಾನವನ್ನು ''ಅತಃ'' ಇತ್ಯಾದಿ ವಾಕ್ಯಗಳಿಂದ ಮಾಡುತ್ತಿದ್ದಾರೆ. ವಿಷ್ಣುವೇ ಕಣ್ಣಿನಲ್ಲಿ ನಿಯಾಮಕನಾಗಿದ್ದಾನೆ. ಏಕೆಂದರೆ ಶ್ರುತಿಯಲ್ಲಿ ''ಏತದಮೃತಮಭಯಂ'' ಎಂದು ಅಮೃತತ್ವ ಮತ್ತು ಅಭಯತ್ವವನ್ನು ಅಂತಸ್ಥನಾದವನಿಗೆ ಶ್ರುತಿಯಲ್ಲಿ ಹೇಳಲಾಗಿದೆ. ಈ ಅಮೃತತ್ವ ಮತ್ತು ಅಭಯತ್ವಗಳು ವಿಷ್ಣುವಿನ ಅಸಾಧಾರಣ ಧರ್ಮವಾಗಿವೆ.

ಅಮೃತತ್ವಾದಿ ಧರ್ಮಗಳು ವಿಷ್ಣುವಿನಲ್ಲೇ ಇವೆ

तत्वप्रकाशिका – अमृतत्वादेश्च विष्णावेवोपपत्तेः । 'त्रिपादस्यामृतं दिवि' 'अभयं तितीर्षतां पारम्' इति श्रुतेः ।

ಈ ವಿಷಯದಲ್ಲಿ ''ತ್ರಿಪಾದಸ್ಯಾಮೃತಂ ದಿವಿ'' (ಈ ವಿಷ್ಣುವಿನ ನಾಶರಹಿತವಾದ ಮೂರು ಸ್ವರೂಪಭೂತಾಂಶಗಳು ಪ್ರಕಾಶಮಾನವಾದ ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠ-ಲೋಕಗಳಲ್ಲಿ ಇವೆ) ''ಅಭಯಂ ತಿತೀರ್ಷತಾಂ ಪಾರಮ್''(ಭಯರಹಿತನಾದ ವಿಷ್ಣುವು ಸಂಸಾರ ಸಾಗರವನ್ನು ದಾಟಲು ಇಚ್ಛಿಸುವ ಜ್ಞಾನಿಗಳಿಗೆ ಆಶ್ರಯನಾಗಿದ್ದಾನೆ) ಇತ್ಯಾದಿ ಶ್ರುತಿಗಳೇ ಆಧಾರವಾಗಿವೆ.

ಅಗ್ನಿಗೆ ಅಮೃತತತ್ವಾದಿ ಧರ್ಮಗಳು ಸಂಗತವಾಗುವುದಿಲ್ಲ

तत्वप्रकाशिका – नचाग्नेरमृतत्वाद्युपपद्यते । 'परि ह्येनं म्रियन्ते विद्युद्वृष्टिश्चन्द्रमा आदित्योऽग्निः' 'भीषाऽमादग्निश्चेन्द्रश्च' इत्यादिश्रुतेरिति भावः।

ಅಗ್ನಿದೇವತೆಗೆ ಅಮೃತತ್ವವಾಗಲಿ ಅಭಯತ್ವವಾಗಲಿ ಕೂಡುವುದಿಲ್ಲ. ಏಕೆಂದರೆ ''ಪರಿ ಹ್ಯೇನಂ ಮ್ರಿಯಂತೇ ವಿದ್ಯುದ್ವೃಷ್ಟಿಶ್ಚಂದ್ರಮಾ ಆದಿತ್ಯೋಽಗ್ನಿಃ'' (ಆ ಪರಮಾತ್ಮನ ಸಾಮರ್ಥ್ಯದಿಂದಲೇ ವಿದ್ಯುತ್, ವೃಷ್ಟಿ, ಚಂದ್ರ, ಸೂರ್ಯ, ಅಗ್ನಿ ಎಲ್ಲರೂ ನಾಶಹೊಂದುತ್ತಾರೆ), ''ಭೀಷಾಸ್ಮಾದಗ್ನಿಶ್ಚೇಂದ್ರಶ್ಚ'' (ಪರಮಾತ್ಮನ ಭಯದಿಂದಲೇ ಅಗ್ನಿ, ಇಂದ್ರಾದಿ ದೇವತೆಗಳು ತಮ್ಮ ತಮ್ಮ ಕರ್ತವ್ಯಗಳನ್ನು ಪಾಲನೆ ಮಾಡುತ್ತಾರೆ) ಇತ್ಯಾದಿ ಶ್ರುತಿಗಳು ಈ ವಿಷಯದಲ್ಲಿ ಪ್ರಮಾಣಗಳಾಗಿವೆ.

ಸೂತ್ರಕ್ಕೆ ಎರಡನೆಯ ವಿಧದ ವ್ಯಾಖ್ಯಾನ

तत्वप्रकाशिका – यदेवं निरवकाशत्वानेकत्वाभ्यां बलवल्लिङ्ग-बलाच्चक्षुरन्तःस्थस्य विष्णुत्वनिश्चयः किमु तदोभयथापि बलवत् श्रुतितोऽपीति भावेन सूत्रांशं प्रकारान्तरेण व्याचष्टे – ब्रह्मेति ।।

ಈ ರೀತಿಯಾಗಿ ನಿರವಕಾಶವಾದ್ದರಿಂದ ಮತ್ತು ಅನೇಕವಾದ್ದರಿಂದ ಮತ್ತು ಪ್ರಬಲವಾದ ಲಿಂಗಗಳ ಬಲದಿಂದ ಕಣ್ಣಿನಲ್ಲಿ ನಿಯಾಮಕನಾಗಿರುವವನು ವಿಷ್ಣುವೇ ಎಂದು ನಿಶ್ಚಯ-ವಾಗುತ್ತದೆಂದು ಸಿದ್ಧವಾದಲ್ಲಿ. ಆ ಎರಡೂ ರೀತಿಯಿಂದ ಪ್ರಬಲವಾದ ಶ್ರುತಿಯಿಂದ ವಿಷ್ಣುತ್ವ ನಿಶ್ಚಯವಾಗುತ್ತದೆ ಎಂದು ಮತ್ತೇನು ಹೇಳಬೇಕು ಎಂಬ ಕೈಮುತ್ಯಾಭಿಪ್ರಾಯದಿಂದ ಇನ್ನೊಂದು ಪ್ರಕಾರವಾಗಿ ಸೂತ್ರವನ್ನು ''ಬ್ರಹ್ಮ'' ಎಂಬ ವಾಕ್ಯದಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ.

'ಸೋऽಹಮಸ್ಮಿ' ಎಂಬ ಶ್ರುತಿಗೆ ಗತಿ ಏನು ?

तत्वप्रकाशिका – नन्वेवं बलवच्छ्रुतिलिङ्गबलाद् विष्णुरेव चेदक्षिस्थस्तदादित्यस्थोऽपि स एव स्यात् तर्हि 'सोऽहमस्मि स एवाहमस्मि' इति श्रुतेः का गतिरित्यत आह – सोऽहमिति ।।

ಪ್ರಶ್ನೆ - ಹಾಗಾದರೆ ಬಲವಾದ ಶ್ರುತಿ, ಲಿಂಗಗಳ ಬಲದಿಂದ ವಿಷ್ಣುವೇ ಕಣ್ಣಿನಲ್ಲಿ ನಿಯಾಮಕನಾದರೆ, ಆದಿತ್ಯನಲ್ಲಿಯೂ ನಿಯಾಮಕನಾಗಿರುವವನು ವಿಷ್ಣುವೇ ಆಗುತ್ತಾನೆ. ಹಾಗಾದರೆ ಶ್ರುತಿಯಲ್ಲಿರುವ ''ಸೋऽಹಮಸ್ಮಿ'' ''ಸ ಏವಾಹಮಸ್ಮಿ'' ಎಂದು ಅಗ್ನಿಯನ್ನು ಪ್ರತಿಪಾದನೆ ಮಾಡುವ ಶ್ರುತಿಗಳಿಗೆ ಏನು ಅರ್ಥ?

ಉತ್ತರ - ಈ ಪ್ರಶ್ನೆಗೆ ಉತ್ತರವನ್ನು ''ಸೋऽಹಮಸ್ಮಿ'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಅಂತರ್ಯಾಮಿ ಪರವಾಗಿ ವ್ಯಾಖ್ಯಾನಿಸಲು ಪ್ರಮಾಣದ ಆಧಾರ

तत्वप्रकाशिका – अन्तर्यामिण्यहमादिशब्दवृत्तिं स्मारयति – अन्तर्यामिणमिति ।। एवं श्रुतेः सावकाशत्वेन तदनुयायिनोरभ्यासार्थवादयोरपि सुतरां सावकाशत्वम् ।।१३।।

ಅಂತರ್ಯಾಮಿಯಲ್ಲಿ 'ಅಹಂ' ಇತ್ಯಾದಿ ಶಬ್ದಪ್ರವೃತ್ತಿ ಇರುತ್ತದೆಂಬುದನ್ನು ''ಅಂತರ್ಯಾಮಿಣಂ'' ಎಂಬ ಸ್ಮೃತಿ ಪ್ರಮಾಣದಿಂದ ತೋರಿಸುತ್ತಿದ್ದಾರೆ.

ಈ ರೀತಿಯಾಗಿ ''ಸೋऽಹಮಸ್ಮಿ'' ಇತ್ಯಾದಿ ಶ್ರುತಿಗಳು ಸಾವಕಾಶವಾಗಿವೆ. ಈ ಶ್ರುತಿಯನ್ನು ಅನುಸರಿಸಿರುವ ಅಭ್ಯಾಸ, ಅರ್ಥವಾದಗಳಿಗೂ ಸಹ ಸಾವಕಾಶತ್ವವನ್ನು ಹೇಳಲೇಬೇಕು. ಆದ್ದರಿಂದ ಕಣ್ಣಿನಲ್ಲಿ ನಿಯಾಮಕನಾಗಿರುವವನು ವಿಷ್ಣುವೇ ಎಂದು ಹೇಳಲು ಯಾವ ವಿರೋಧವೂ ಇಲ್ಲ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಭಾಷ್ಯವಾಕ್ಯಗಳಿಗೆ ಸಂಗತಿಪರ ಅರ್ಥ

भावदीपः – ।। अग्निश्रुतीति ।। सा चानेकरूपाऽग्रे व्यक्ता । 'उच्यते' इत्यन्तं भाष्यं सङ्गतिपरत्वेन व्याचष्टे – यश्चेति ।। 'अक्ष्यादित्ययोरैक्यात्' इत्युक्तिलब्धमर्थमाह – ततश्चेति ।।

ಟೀಕೆಯಲ್ಲಿ 'ಅಗ್ನಿಶ್ರುತಿನಾಂ' ಎಂದಿದೆ. ಇದರ ಅಭಿಪ್ರಾಯ ಅಗ್ನಿ ಶ್ರುತಿಗಳು ಅನೇಕ ವಿಧವಾಗಿವೆ. ಅವೆಲ್ಲವೂ ಮುಂದೆ ಸ್ಪಷ್ಟವಾಗುತ್ತದೆ. ಭಾಷ್ಯದಲ್ಲಿರುವ 'ಉಚ್ಯತೇ' ಎಂಬಲ್ಲಿಯ ತನಕ ಭಾಗವನ್ನು ಸಂಗತಿಪರವಾಗಿ 'ಯಶ್ಚ' ಎಂಬ ಇತ್ಯಾದಿ ವಾಕ್ಯಗಳಿಂದ ವ್ಯಾಖ್ಯಾನ ಮಾಡುತ್ತಿದ್ದಾರೆ. ಭಾಷ್ಯದಲ್ಲಿರುವ 'ಅಕ್ಷ್ಯಾದಿತ್ಯಯೋರೈಕ್ಯಾತ್' ಎಂಬ ಮಾತಿನಿಂದ ಲಬ್ಧವಾದ ಅರ್ಥವನ್ನು 'ತತಶ್ಚ' ಇತ್ಯಾದಿ ವಾಕ್ಯಗಳಿಂದ ಹೇಳುತ್ತಿದ್ದಾರೆ.

ಆರ್ಥಿಕ ಪುನರುಕ್ತಿ ಹೇಗೆ ?

भावदीपः – अर्थादिति ।। द्वयोरेकदेवताधिष्ठानत्वेनाऽऽदित्यस्थस्यैवाक्षिस्थ-त्वादेकत्रोक्तावन्यत्राप्युक्तिरार्थिकीत्यर्थः ।

ಟೀಕೆಯಲ್ಲಿ 'ಅರ್ಥಾತ್' ಎಂಬ ಪದವಿದೆ. ಇದರ ಅಭಿಪ್ರಾಯ ಚಕ್ಷುರಿಂದ್ರಿಯ ಮತ್ತು ಆದಿತ್ಯ ಮಂಡಲಗಳು ಒಬ್ಬನೇ ದೇವತೆಗೆ ಅಧಿಷ್ಠಾನವಾಗಿರುವುದರಿಂದ ಆದಿತ್ಯಮಂಡಲದಲ್ಲಿ ಯಾವ ದೇವತೆ ಇರುತ್ತಾನೆಯೋ ಅವನೇ ಚಕ್ಷುರಿಂದ್ರಿಯದಲ್ಲಿಯೂ ಇರುತ್ತಾನೆಂದು ಅಭಿಪ್ರಾಯ. ಆದ್ದರಿಂದ ಆದಿತ್ಯ-

ಮಂಡಲದಲ್ಲಿ ಆನಂದಮಯನಿದ್ದಾನೆಂದರೆ ಚಕ್ಷುರಿಂದ್ರಿಯದಲ್ಲಿಯೂ ಆನಂದಮಯನಿದ್ದಾನೆಂದು ಅರ್ಥಾತ್ ಸಿದ್ಧವಾಗುತ್ತದೆ. ಆದಿತ್ಯಮಂಡಲ ಹಾಗೂ ಚಕ್ಷುರಿಂದ್ರಿಯಗಳು ಒಬ್ಬನೇ ದೇವತೆಗೆ ಅಧಿಷ್ಠಾನವಾಗಿರುವುದರಿಂದ ಆದಿತ್ಯನಲ್ಲಿರುವವನೇ ಚಕ್ಷುಸ್ಸಿನಲ್ಲಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ಒಂದು ಕಡೆಯಲ್ಲಿ ಇದ್ದಾನೆಂದು ಹೇಳಿದ್ದರಿಂದ ಮತ್ತೊಂದು ಕಡೆಯಲ್ಲಿಯೂ ಸಹ ಅವನೇ ಇದ್ದಾನೆಂದು ಹೇಳಿದರೆ ಆರ್ಥಿಕ ಪುನರುಕ್ತಿದೋಷ ಬರುತ್ತದೆಂದರ್ಥ.

ಛಾಂದೋಗ್ಯದಲ್ಲಿ ಎಲ್ಲಿ ಹೇಳಿದ್ದಾರೆ ?

भावदीपः – 'इत्यत्राप्यग्निरेवोच्यते' इत्यस्य तात्पर्योक्तिः – छन्दोगेति।। चतुर्थेऽध्याय इति योज्यम् । कस्यचिद् अग्नेः । कुत्रेत्यतो 'य एष आदित्ये' इत्यादिपूर्वभाष्यमिति मत्वा तदुदाहरति – य एष इति ।।

''ಇತ್ಯತ್ರಾಪಿ ಅಗ್ನಿರೇವೋಚ್ಯತೇ'' ಎಂಬ ಭಾಷ್ಯದ ಮಾತಿಗೆ ತಾತ್ಪರ್ಯವನ್ನು ''ಛಂದೋಗ'' ಎಂಬ ಮಾತಿನಿಂದ ಹೇಳುತ್ತಿದ್ದಾರೆ. ಇಲ್ಲಿ ಛಾಂದೋಗ್ಯದ ನಾಲ್ಕನೆಯ ಅಧ್ಯಾಯವೆಂದು ಯೋಜನೆ ಮಾಡಿಕೊಳ್ಳಬೇಕು. ಟೀಕೆಯಲ್ಲಿ ''ಕಸ್ಯಚಿತ್'' ಎಂದಿದೆ. ಇದರ ಅಭಿಪ್ರಾಯ ಅಗ್ನಿ ಎಂದು ತಿಳಿಯಬೇಕು. ಎಲ್ಲಿ? ಎಂದು ಪ್ರಶ್ನೆ ಬಂದರೆ - ''ಯ ಏಷ ಆದಿತ್ಯೇ'' ಇತ್ಯಾದಿ ಹಿಂದಿನ ಭಾಷ್ಯವನ್ನು ತಿಳಿದು ಆ ಶ್ರುತಿಯನ್ನೇ ''ಯ ಏಷಃ'' ಇತ್ಯಾದಿ ಮಂತ್ರಗಳನ್ನು ಉದಾಹರಿಸುತ್ತಿದ್ದಾರೆ.

ಉಪನಿಷತ್ತಿನ ಪ್ರತಿಪದಾರ್ಥವೇನು ?

भावदीपः – दृश्यते दिव्यदृष्ट्या ज्ञानिभिरित्यर्थः । उवाच उपकोसलाय सत्यकामः । भाष्ये 'दृश्यते' इत्यन्तोक्तावपि शेषोक्तिः सिद्धान्तोपयोगित्वायेति भावः । कथं प्रतीयत इत्याकाङ्क्षायां 'य एष आदित्ये' इत्यादिवाक्येन तत्प्रकारोक्तिर्वक्ष्यमाणदिशा सुज्ञानेति । 'य एष' इत्यादेः 'ऐक्याद्' इत्यन्तस्य तात्पर्यमाह – तच्चेति ।। 'य एषोऽन्तरक्षिणि' इति वाक्योक्तमक्षिस्थत्वं च 'य एष' इत्यादिभाष्यवाक्यलब्धादग्नेरक्षिस्थत्वेनोच्य-मानत्वाद्धेतोर्यद्यग्नेः स्यादित्यर्थः ।

''ದೃಶ್ಯತೇ'' ಎಂದರೆ ಜ್ಞಾನಿಗಳ ದಿವ್ಯದೃಷ್ಟಿಗೆ ಗೋಚರನಾಗುತ್ತಾನೆಂದರ್ಥ. ''ಉವಾಚ'' ಎಂದರೆ ಉಪಕೋಸಲನನ್ನು ಕುರಿತು ಸತ್ಯಕಾಮರು ಹೇಳಿದರು ಎಂದರ್ಥ. ಭಾಷ್ಯದಲ್ಲಿ ''ಯ ಏಷೋऽಂತರಕ್ಷಣಿ ಪುರುಷೋ ದೃಶ್ಯತೇ'' ಎಂದಷ್ಟೇ ಶ್ರುತಿಯನ್ನು ಹೇಳಿದ್ದರೂ ಸಹ ಟೀಕೆಯಲ್ಲಿ ಶ್ರುತಿಯ ಶೇಷವನ್ನು ಪೂರಣ ಮಾಡಿದ್ದರ ಉದ್ದೇಶ ಸಿದ್ಧಾಂತಕ್ಕೆ ಅನುಕೂಲಕ್ಕೋಸ್ಕರವೆಂದು ತಿಳಿಯಬೇಕು.

भावदीपः – उक्तमित्यन्तवाक्यताख्त्पर्यमाह – तदेति ।। इति सङ्गतिसम्भवादवश्यं निर्णेयमित्यर्थः ।

ಭಾಷ್ಯದಲ್ಲಿರುವ 'ಉಕ್ತಂ' ಎಂಬಲ್ಲಿಯ ತನಕ ತಾತ್ಪರ್ಯವನ್ನು 'ತದಾ' ಎಂಬ ವಾಕ್ಯದಿಂದ ಹೇಳಿದ್ದಾರೆ. ''ಇತಿ'' ಎಂದರೆ ಸಂಗತಿಯು ಹೀಗೆ ಇರುವುದರಿಂದ ಅವಶ್ಯವಾಗಿ ನಿರ್ಣಯ ಮಾಡಬೇಕಾಗಿದೆ ಎಂದರ್ಥ.

ವಿಶೇಷವಿಚಾರ - ಆಕ್ಷೇಪ - ಈ ಶ್ರುತಿಯಲ್ಲಿ ಪ್ರತಿಪಾದ್ಯನಾದ ಅಭಯನು ಅಗ್ನಿಯೆಂದಾದರೆ ಹಿಂದಿನ ಸೂತ್ರದಲ್ಲಿ ಪ್ರತಿಪಾದಿಸಲ್ಪಟ್ಟವನೂ ಸಹ ಅಗ್ನಿಯೇ ಆಗುತ್ತಾನೆಂದು ಹೇಳಿದಿರಿ. ಇದು ಹೇಗೆ ಸರಿ? ಏಕೆಂದರೆ 'ಯ ಏಷಃ' ಎಂಬ ಶ್ರುತಿಯಲ್ಲಿ ಅಭ್ಯಾಸ ಹಾಗೂ ಅರ್ಥವಾದ ಸಹಿತವಾದ ಅಗ್ನಿಶ್ರುತಿ ಮೊದಲಾದ ವಿಶೇಷ ಹೇತುಗಳು ಇರುವುದರಿಂದ ಈ ಶ್ರುತಿಯಿಂದಷ್ಟೇ ಅಗ್ನಿಯು ಪ್ರತಿಪಾದ್ಯನಾಗಲಿ. ಆದರೆ 'ಅಭಯಂ ತಿತೀರ್ಷತಾಂ' ಎಂಬ ಶ್ರುತಿಯಲ್ಲಿ ಇಂತಹ ಲಿಂಗಗಳು ಇರುವುದಿಲ್ಲ.

ಇದಕ್ಕೆ ಕಾರಣ - 'ಇಂದ್ರಸ್ಯಾತ್ಮಾ' ಎಂಬಲ್ಲಿ ಪ್ರತಿಪಾದ್ಯನಾದ ಇಂದ್ರನು ಬೇರೆಯವನಾದರೆ 'ಇಂದ್ರೋ ರಾಜಾ' ಎಂಬಲ್ಲಿಯೂ ಸಹ ಬೇರೆಯವನೇ ಆಗುತ್ತಾನೆಂದು ಹೇಳಬಾರದು. 'ಇಂದ್ರೋ ರಾಜಾ' ಎಂಬಲ್ಲಿ ಹೇಳಲ್ಪಟ್ಟ ಲಿಂಗಗಳು ವಿಷ್ಣುಧರ್ಮಗಳಾದ್ದರಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ಇದರ ಬಲದಿಂದ 'ಇಂದ್ರಸ್ಯಾತ್ಮಾ' ಎಂಬ ವಾಕ್ಯದ ಬಲದಿಂದಲೂ ವಿಷ್ಣುವೇ ಪ್ರತಿಪಾದ್ಯನೆಂದು ನಿರ್ಣಯಿಸಬಹುದಲ್ಲವೇ?

ಸಮಾಧಾನ - ಇದು ತಪ್ಪು. ಅಭಯ ಶಬ್ದಕ್ಕೆ ಬೇರೆ ಪದಾರ್ಥದಿಂದ ಭಯವಿಲ್ಲದಿರುವಿಕೆ ಎಂದರ್ಥ. ಸ್ವತಂತ್ರನಾದವನಿಗಷ್ಟೇ ಈ ಅಭಯತ್ವವನ್ನು ಹೇಳಲು ಸಾಧ್ಯ, ಹೊರತು ಬೇರೆಯವನಿಂದ ನಿಯಮ್ಯನಾದವನಲ್ಲಿ ಹೇಳಲಾಗದು. ಆದ್ದರಿಂದ ಅಗ್ನಿಯನ್ನೇ ಅಭಯಸ್ವರೂಪನೆನ್ನಬೇಕು.

ಇಬ್ಬರು ಸ್ವತಂತ್ರರಾಗಲು ಸಾಧ್ಯವಿಲ್ಲದ ಕಾರಣ. ಹಿಂದಿನ ಸೂತ್ರವಾಕ್ಯದಲ್ಲಿ ಪ್ರತಿಪಾದ್ಯನಾದ ಅಭಯಸ್ವರೂಪನೂ ಸಹ ಅಗ್ನಿಯೇ ಆಗುತ್ತಾನೆ. ಈ ಕಾರಣದಿಂದ ಉಳಿದ ವಿಷ್ಣು ಹಾಗೂ ಲಿಂಗಗಳ ಶ್ರುತಿಗಳನ್ನೂ ಸಹ ಅಗ್ನಿಯಲ್ಲಿಯೇ ಹೇಗಾದರೂ ಸಮನ್ವಯಗೊಳಿಸಬೇಕು. ಏಕೆಂದರೆ ನಿರವಕಾಶವಾದ ಒಂದೇ ಲಿಂಗದಿಂದ ಸಾವಕಾಶವಾದ ಅನೇಕ ಶ್ರುತಿಲಿಂಗಗಳಿಗೆ ಬಾಧವನ್ನು ಹೇಳಬಹುದಾದ್ದರಿಂದ ಗುಹಾವಿಷ್ಟತ್ವವು ಅಗ್ನಿಯಲ್ಲೇ ಬರುತ್ತದೆ.

ಬ್ರಹ್ಮತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸುವಂತೆ ಅಗ್ನಿಯಲ್ಲೂ ಸಹ ಸಮರ್ಥಿಸಬಹುದು. ಅಗ್ನಿಯಲ್ಲಿ ಅಮೃತತ್ವವನ್ನು ಆಶಂಕಿಸುತ್ತಿರುವುದರಿಂದ ಅಕ್ಷರತ್ವಾದಿಗಳನ್ನೂ ಸಹ ಅಗ್ನಿಯಲ್ಲೇ ಆಶಂಕಿಸಲು ಬರುತ್ತದೆ. ಹೀಗೆ ಅಕ್ಷರತ್ವ, ಅಭಯತ್ವ ಮೊದಲಾದ ಧರ್ಮಗಳಿಂದ ವಿಷ್ಣುವನ್ನು ಶ್ರುತಿಪ್ರತಿಪಾದ್ಯನೆಂದು ಶಂಕಿಸಲು ಸಾಧ್ಯವಿಲ್ಲ. ಹೀಗೆ ಭಾಷ್ಯವು ಫಲಪರವಾಗುತ್ತದೆಂದೂ ಸಹ ತಿಳಿಯಬೇಕು. ವಿಷಯವನ್ನು ಪ್ರತಿಪಾದನೆ ಮಾಡುವ ಟೀಕೆಯನ್ನು 'ಅತ್ರ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಚಕ್ಷುರಂತಸ್ಥನಾದವನೇ ಈ ಅಧಿಕರಣದ ವಿಷಯನಾಗಿದ್ದಾನೆಂದರ್ಥ. ವಸ್ತುತಃ ಇಲ್ಲಿ 'ಅಕ್ಷಿಸ್ಥಃ' ಎಂದು ಹೇಳಬೇಕಿತ್ತು. ಆದರೆ ಚಕ್ಷುರಂತಸ್ಥನೆಂದು ಹೇಳಿದ್ದರಿಂದ ಆದಿತ್ಯನಿಗೂ ಚಕ್ಷುಸ್ಸಿಗೂ ಅಭೇದವನ್ನು ತಿಳಿಸಿದ್ದಾರೆ. ''ಆದಿತ್ಯಶ್ಚಕ್ಷುರ್ಭೂತ್ವಾ'' ಎಂಬ ಪ್ರಮಾಣವಿರುವುದರಿಂದ. ಇಲ್ಲಿಯೂ ಗಮನಿಸಬೇಕಾದ ಅಂಶವೊಂದಿದೆ. ಪ್ರಾಚೀನ ಟೀಕಾಕಾರರ ಪ್ರಕಾರ ಅಕ್ಷಿಯೆಂದರೆ ದೇವತೆಯೆಂದರ್ಥ. ಟೀಕಾರಾಯರ ಪ್ರಕಾರ ಜಡವೆಂದರ್ಥ.

ಆದಿತ್ಯಸ್ಥತ್ವ ಹಾಗೂ ಅಕ್ಷಿಸ್ಥತ್ವ ಶಬ್ದಾರ್ಥವೇನು ?

भावदीपः – ननु पूर्वत्र 'यश्चासावादित्ये' इत्यादित्यस्थत्वं नाम विष्णोरादित्यदेवतास्थत्वम् । यदाहुस्तद्भाष्ये 'स विष्णुस्सर्वजीवेषु नृषु देवेषु च स्थितः । एक एव' इत्यादि । उक्तं च प्राग् 'भेदव्यपदेशाच्च' इत्यत्र 'स यश्चायम्' इत्यानन्दमयस्यापकृष्टोत्कृष्टजीवेषु पुरुषादित्य-दोषलक्षितेषु स्थितिकथनादिति । तथाचार्थादापद्यमानमक्षिस्थत्वमप्यक्षि-देवतास्थत्वमेव स्यात् । अत्र चाक्षिस्थत्वं नामाक्षिगोलकस्थत्वम्। 'य एष

आदित्ये' इत्यादित्यस्थत्वमप्यादित्यमण्डलस्थत्वमेवेति अक्ष्यादित्ययोरेक-विधत्वादित्यादिवक्ष्यमाणटीकावाक्यादेवावसीयते ।

ಅಕ್ಷೇಪ - ಹಿಂದೆ ''ಯಶ್ಚಾಸಾವಾದಿತ್ಯೇ'' ಎಂಬುದಾಗಿ ಆದಿತ್ಯಸ್ಥತ್ವ ಶಬ್ದಕ್ಕೆ ವಿಷ್ಣು ಆದಿತ್ಯದೇವತೆಯಲ್ಲಿ ಇದ್ದಾನೆ ಎಂಬ ಅರ್ಥವನ್ನು ಹೇಳಿದ್ದರು. ಏಕೆಂದರೆ ಆ ಶ್ರುತಿಯ ಭಾಷ್ಯದಲ್ಲಿ ''ಸ ವಿಷ್ಣುಃ ಸರ್ವಜೀವೇಷು ನೃಷು ದೇವೇಷು ಚ ಸ್ಥಿತಃ । ಏಕ ಏವ'' - ವಿಷ್ಣು ಸಕಲಜೀವರಲ್ಲಿ ಮನುಷ್ಯರಲ್ಲಿ ದೇವತೆಗಳಲ್ಲಿ ಏಕಾಕಿಯಾಗಿ ನೆಲೆಸಿದ್ದಾನೆಂದು ಹೇಳಿದ್ದಾರೆ. ಆನಂದಮಯಾಧಿಕರಣದ ''ಭೇದವ್ಯಪದೇಶಾಚ್ಚ'' ಸೂತ್ರದಲ್ಲಿಯೂ ಸಹ ಪುರುಷ ಶಬ್ದದಿಂದ ಉಪಲಕ್ಷ್ಯರಾದ ಉತ್ಕೃಷ್ಟ ಹಾಗೂ ಅಪಕೃಷ್ಟ ಜೀವರಲ್ಲಿ ಪರಮಾತ್ಮ ನೆಲೆಸಿದ್ದಾನೆಂದು ಹೇಳಿದ್ದಾರೆ.

ಆದ್ದರಿಂದ ಆದಿತ್ಯಸ್ಥತ್ವದಿಂದ ಅರ್ಥಾತ್ ಅಪದ್ಯಮಾನವಾದ ಅಕ್ಷಿಸ್ಥತ್ವಶಬ್ದಕ್ಕೆ ಅಕ್ಷಿದೇವತೆಯಲ್ಲಿಯೇ ಇದ್ದಾನೆಂದು ಆನಂದಮಯಾಧಿಕರಣದಲ್ಲಿ ಹೇಳಬೇಕು.

ಆದರೆ ಪ್ರಕೃತ ಅಕ್ಷಿಸ್ಥತ್ವಶಬ್ದಕ್ಕೆ ಅಕ್ಷಿಗೋಲಕದಲ್ಲಿದ್ದಾನೆಂದೇ ಅರ್ಥ ಹೊರತು ಅಕ್ಷಿದೇವತೆಯಲ್ಲಿ ಇದ್ದಾನೆಂದು ಅರ್ಥವಲ್ಲ. ಏಕೆಂದರೆ ''ಯ ಏಷ ಆದಿತ್ಯೇ'' ಎಂದು ಅಕ್ಷಿಸ್ಥತ್ವವೆಂದರೆ ಅಕ್ಷಿ ಗೋಲಕದಲ್ಲಿರುವುದು ಎಂದರ್ಥ, ಆದ್ದರಿಂದ ''ಯ ಏಷಃ ಆದಿತ್ಯೇ'' ಎಂಬಲ್ಲಿ ಆದಿತ್ಯಸ್ಥತ್ವಶಬ್ದಕ್ಕೂ ಸಹ ಆದಿತ್ಯ ಮಂಡಲದಲ್ಲಿಯೇ ಇದ್ದಾನೆಂದು ಅರ್ಥ ಮಾಡಬೇಕು. ಏಕೆಂದರೆ ''ಅಕ್ಷಿ ಹಾಗೂ ಆದಿತ್ಯ ಮಂಡಲಗಳಿಗೆ ಏಕವಿಧತ್ವವಿರುವುದರಿಂದ'' ಹೀಗೆ ಮುಂದಿನ ಟೀಕಾವಾಕ್ಯದಿಂದ ಅಕ್ಷಿಗೋಲಕದಲ್ಲಿ ಇದ್ದಾನೆಂದು ಸ್ಪಷ್ಟವಾಗುತ್ತದೆ.

ವಿಶೇಷವಿಚಾರ - ಪೂರ್ವಪಕ್ಷ - ಚಕ್ಷುರಂತಸ್ಥನಾದವನು ಅಗ್ನಿಯೇ ಆಗಿದ್ದಾನೆ. 'ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋऽಹಮಸ್ಮಿ'' ಎಂಬುದಾಗಿ ಅಗ್ನಿಯೇ ತನ್ನನ್ನು ಆದಿತ್ಯನಿಷ್ಠನೆಂದು ಹೇಳಿದ್ದಾನೆ ಚಕ್ಷುರಭಿಮಾನಿದೇವತೆಯು ಹಾಗೂ ಆದಿತ್ಯಾಭಿಮಾನಿದೇವತೆಯು ಒಬ್ಬನೇ ಆಗಿದ್ದಾನೆಂದು 'ಆದಿತ್ಯಶ್ಚಕ್ಷುರ್ಭೂತ್ವಾऽಕ್ಷಿಣಿ ಪ್ರಾವಿಶತ್'' ಎಂಬ ಶ್ರುತಿಯಿಂದ ತಿಳಿಯುತ್ತದೆ.

ವಸ್ತುತಃ 'ಅಕ್ಷಿಣಿ ಪ್ರಾವಿಶತ್' ಎಂಬಲ್ಲಿ 'ಅಕ್ಷಿ' ಶಬ್ದವು ಆದಿತ್ಯದೇವತಾಪರವೆನ್ನಲು ಬಾಧಕವಿದೆ. ಆದ್ದರಿಂದ ಜಡಪರವೇ ಆಗಿರುತ್ತದೆ. ಆದರೆ 'ಅಂತರಕ್ಷಿಣಿ ಪುರುಷಃ ಎಂಬಲ್ಲಿರುವ 'ಅಕ್ಷಿ' ಶಬ್ದವು ದೇವತಾಪರವೇ ಆಗುತ್ತದೆ. ಏಕೆಂದರೆ ಈ 'ಅಕ್ಷಿ' ಶಬ್ದವು 'ಚಕ್ಷುಸ್' ಶಬ್ದದ

ಪರ್ಯಾಯಪದವಾಗಿದೆ. ಅಭಿಮಾನ್ಯಧಿಕರಣದ ನ್ಯಾಯದಿಂದ 'ಅಕ್ಷಿ' ಶಬ್ದವು ಅಭಿಮಾನಿ ದೇವತೆಯನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ.

''ಯಶ್ಚಕ್ಷುಷಿ ತಿಷ್ಠನ್ ಯಶ್ಚಕ್ಷುಷೋಽಂತರಃ'' ಎಂಬ ಮತ್ತೊಂದು ಶ್ರುತಿಯಲ್ಲಿ ಅಂತರ್ಯಾಮಿಯಾದ ಪುರುಷನಿಗೆ ಚಕ್ಷುಸ್ಸನ್ನು ಅಧಿಷ್ಠಾನವೆಂದು ಹೇಳಲಾಗಿದೆ. ಇದೇ ಚಕ್ಷುಸ್ಸಿನ ಪ್ರತ್ಯಭಿಜ್ಞಾನವು 'ಅಂತರಕ್ಷಿಣಿ' ಎಂಬ ಶ್ರುತಿಯಿಂದ ಬರುತ್ತದೆ. ಆದ್ದರಿಂದ 'ಯಶ್ಚಕ್ಷುಷಿ' ಎಂಬ ವಾಕ್ಯದಲ್ಲಿ ಅಂತರ್ಯಾಮಿಪುರುಷನಿಗೆ ಅಧಿಷ್ಠಾನ ಭೂತವಾದ ಚಕ್ಷುಸ್ಸೆಂದರೆ ''ಯಂ ಚಕ್ಷುರ್ನ ವೇದ'' ಎಂಬ ವಾಕ್ಯಶೇಷದಿಂದ ಚೇತನವೆಂದು ದೃಢವಾಗುತ್ತದೆ. ಆದ್ದರಿಂದ 'ಚಕ್ಷುಸ್' ಶಬ್ದದ ಪರ್ಯಾಯ ಪದವೆನಿಸಿದ 'ಅಕ್ಷಿ' ಶಬ್ದವೂ ಸಹ ಚೇತನಪರವೇ ಆಗುತ್ತದೆ. 'ಯ ಏಷೋಽಂತರಕ್ಷಿಣಿ' ಎಂಬ ಶ್ರುತಿಯು 'ಅಕ್ಷಿಣೀ ಪ್ರಾವಿಶತ್' ಎಂಬ ಶ್ರುತಿಯಂತೆ ಜಡಪ್ರತಿಪಾದಕವಾಗುವುದಿಲ್ಲವೆಂದು ನಿರ್ಣಯವಾಗುತ್ತದೆ.

'ಸ್ಥಾನಾದಿವ್ಯಪದೇಶಾಚ್ಚ' ಎಂಬ ಸೂತ್ರದಲ್ಲಿ ತುಪ್ಪ ಮೊದಲಾದ ಪದಾರ್ಥಗಳ ಸಂಪರ್ಕವು ಜಡಭೂತವಾದ ಚಕ್ಷುರಿಂದ್ರಿಯಕ್ಕೆ ಇಲ್ಲವೆಂದು ಹೇಳಿದ್ದಾರೆ. ಲೇಪವಿಲ್ಲದಿರುವಿಕೆಯೆಂಬ ಶಕ್ತಿಯು ಜಡದಲ್ಲಿ ಹೇಳಿರುವಾಗ 'ಅಕ್ಷಿ' ಶಬ್ದದಿಂದ ಚೇತನನನ್ನು ಹೇಗೆ ವಿವಕ್ಷಿಸುತ್ತೀರಿ? ಎಂದು ಪ್ರಶ್ನಿಸಬಾರದು. ಲೇಪವಿಲ್ಲದಿರುವಿಕೆಯೆಂಬ ಗುಣಕ್ಕೆ ಮುಖ್ಯವಾಗಿ ಆಶ್ರಯನಾದವನು ವಿಷ್ಣುವೇ ಆಗಿದ್ದಾನೆ. ಅಂತಹ ವಿಷ್ಣುವಿಗೆ ಜಡಭೂತವಾದ ಅಕ್ಷಿಯು ಅಧಿಷ್ಠಾನವಾಗಿರುವುದರಿಂದ ಲೇಪವಿಲ್ಲದಿರುವಿಕೆಯೆಂಬ ಗುಣಕ್ಕೆ ಜಡವು ಸ್ಥಾನವಾಗಿದೆ ಎಂದು ಸೂತ್ರವು ಸಮರ್ಥಿಸುತ್ತಿದೆ. ಹಾಗಾದರೆ ಸ್ಥಾನಾದಿಸೂತ್ರದಲ್ಲಿ ಜಡವೇ ಅಂತರ್ಯಾಮಿಪುರುಷನಿಗೆ ಅಧಿಷ್ಠಾನವೆಂದು ಹೇಳಿದೆಯಲ್ಲವೇ? ಎಂದರೆ ಅಂತರ್ಯಾಮಿಪುರುಷನಿಗೆ ಜಡಭೂತವಾದ ಚಕ್ಷುರಿಂದ್ರಿಯವು ಅಭಿಮಾನಿದೇವತೆಯ ಮೂಲಕ ಅಧಿಷ್ಠಾನವಾಗಿದೆ ಹೊರತು ನೇರವಾಗಿ ಆಧಾರವಾಗಿಲ್ಲ. ಆದ್ದರಿಂದಲೇ ಭಾಷ್ಯದಲ್ಲಿ ಮತ್ತು ಸನ್ನ್ಯಾಯರತ್ನಾವಳಿಯಲ್ಲಿ ''ಅಕ್ಷ್ಯಾದಿತ್ಯಯೋರೈಕ್ಯಾತ್'' ಎಂದು ಅಕ್ಷಿಗೂ ಆದಿತ್ಯನಿಗೂ ಐಕ್ಯವನ್ನು ಹೇಳಿದ್ದಾರೆ. 'ಅಕ್ಷ್ಯಾದಿತ್ಯಯೋಃ' ಎಂಬ ಟೀಕೆಯನ್ನೂ ಸಹ ಭಾಷ್ಯಕ್ಕೆ ಅನುಸಾರಿಯಾಗಿ ಭೇದವನ್ನು ನಿಷೇಧ ಮಾಡುವ ಮೂಲಕ ಅಂದರೆ ಒಂದೇ ಪ್ರಕಾರವನ್ನು ಹೇಳುತ್ತಿದೆಯೆಂದೇ ಅರ್ಥೈಸಬೇಕು.

ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟ ಆದಿತ್ಯಸ್ಥ ಯಾರು ?

ಭಾವದೀಪಃ – तथाच कथमन्यस्याक्षिस्थत्वे प्राचीनमप्यन्यत् स्यादिति पूर्वपक्षे तदाक्षेपः सिद्धान्ते चात्राक्षिस्थत्वं विष्णोश्चेत्, प्राचीनमपि विष्णोरेवेति समाधानं चेति चेदत्राहुः । वक्ष्यमाणदिशा वामनिभामनिशब्दोक्त सर्वस्त्रीपुंसप्रेरकत्वेनाग्नेस्तत्तदक्षिस्थत्वे स एव पूर्वत्राप्युक्तादित्यमण्डलस्थ आपन्न इति तेनैवोपपत्तौ तत्रस्थतया किमीश्वरेण इत्याक्षेपे वक्ष्यमाणयुक्तिभिरन्यस्य केवलस्य प्रेरकत्वानुपपत्त्या चाक्षिस्थस्य विष्णुत्वे पागादित्यमण्डलस्थोऽप्यक्ष्यादित्य देवतास्थोऽपि स एवेति सिद्ध्यतीति ।

ಆಕ್ಷೇಪ - ಆದ್ದರಿಂದ ಒಬ್ಬನು ಅಕ್ಷಿಸ್ಥನಾದರೇ ಆನಂದಮಯಾಧಿಕರಣದಲ್ಲಿ ಪ್ರಸಕ್ತನಾದವನೂ ಸಹ ಅಕ್ಷಿಸ್ಥನೇ ಆಗಬೇಕೆಂದು ಹೇಗೆ ಪೂರ್ವಪಕ್ಷ ಮಾಡುತ್ತಿರಿ? ಮತ್ತು ಈ ಅಧಿಕರಣದಲ್ಲಿ ಅಕ್ಷಿಸ್ಥನಾದವನು ವಿಷ್ಣುವೆಂದು ನಿರ್ಣಯಿಸಿದ ಮಾತ್ರಕ್ಕೆ ಆನಂದಮಯಾಧಿಕರಣದ ಅಕ್ಷಿಸ್ಥನೂ ಸಹ ವಿಷ್ಣುವೇ ಆಗುತ್ತಾನೆಂಬ ಸಿದ್ಧಾಂತವನ್ನು ಹೇಗೆ ಮಾಡುತ್ತೀರಿ?

ಸಮಾಧಾನ - ಮುಂದೆ ಹೇಳುವ ಪ್ರಕಾರ ವಾಮನಿ ಮತ್ತು ಭಾಮನಿ ಶಬ್ದಗಳಿಂದ ಪ್ರತಿಪಾದ್ಯನಾದವನು, ಸಕಲ ಸ್ತ್ರೀ ಪುರುಷ ಪ್ರೇರಕನಾದ ಅಗ್ನಿಯೇ ಆಗಿದ್ದಾನೆ. ಇಂತಹ ಅಗ್ನಿಯು ಆಯಾ ಸ್ತ್ರೀ ಪುರುಷರ ಕಣ್ಣಿನಲ್ಲಿದ್ದಾನೆಂದು ನಿರ್ಣಯವಾದ ಮೇಲೆ ಹಿಂದಿನ ಆನಂದಮಯಾಧಿಕರಣದಲ್ಲಿ ಉಕ್ತನಾದ ಆದಿತ್ಯಮಂಡಲಸ್ಥನೂ ಸಹ ಅಗ್ನಿಯೇ ಆಗುತ್ತಾನೆ. ಹೀಗಿರುವಾಗ ಈಶ್ವರನನ್ನು ಚಕ್ಷುರಿಂದ್ರಿಯದಲ್ಲಿದ್ದಾನೆಂದು ಏಕೆ ಒಪ್ಪಬೇಕು? ಎಂದು ಆಕ್ಷೇಪ ಮಾಡಿದಾಗ ಮುಂದೆ ಹೇಳುವ ಯುಕ್ತಿಗಳಿಂದ ಅಗ್ನಿ ಮೊದಲಾದ ಇತರ ದೇವತೆಗಳು ಸ್ವತಂತ್ರವಾಗಿ ಪ್ರೇರಕರಾಗುವುದಿಲ್ಲ. ಆದ್ದರಿಂದ ವಿಷ್ಣುವನ್ನೇ ಅಕ್ಷಿಸ್ಥವೆನ್ನಬೇಕು. ಹೀಗೆ ಈ ಅಧಿಕರಣದಲ್ಲಿ ಸಿದ್ಧವಾದ ಮೇಲೆ ಹಿಂದಿನ ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟ ಆದಿತ್ಯಮಂಡಲದಲ್ಲಿರುವವನೂ ಸಹ ವಿಷ್ಣುವೇ ಆಗುತ್ತಾನೆ ಎಂದು ಸಿದ್ಧವಾಗುತ್ತದೆಂದು ಕೆಲವರು ಉತ್ತರಿಸುತ್ತಾರೆ.

ಅಭಿಮಾನಿದೇವತೆಗಳಲ್ಲಿರುವನೆಂದು ಕೆಲವರ ವ್ಯಾಖ್ಯಾನ

ಭಾವದೀಪಃ – अन्ये तूपनिषद्भाष्यादावादित्यादेरभिमानिदेवतात्वोपगमेन तत्स्थत्वार्थोक्तावप्यत्र भाष्ये सर्वश्रुतावादित्यादिपदेन मण्डलादिजडमेव पूर्वोत्तर पक्षयोरुपेत्याऽऽक्षेपसमाधी । यथोत्तरनये 'य आत्मनि तिष्ठन्' इत्यादावात्मादिशब्दस्य तदभिमानिचतुर्मुखरूपार्थस्य बृहद्भाष्योक्तत्वेऽपीह भाष्ये जीवार्थत्वमेवोपेत्य जीवान्तर्यामिणो भेदोक्तिः 'भेदेनैनम्' इति सूत्रे, तथाऽत्रापि । पूर्वटीका तु पुरुषपदोक्तजीवाभिप्राया । अत एव तत्र 'स यश्चायं पुरुषे' इत्येव भाष्योक्तिरित्याहुः ।

ಇನ್ನು ಕೆಲವರು ಉಪನಿಷದ್‌ಭಾಷ್ಯಾದಿಗಳಲ್ಲಿ ಆದಿತ್ಯಾದಿಶಬ್ದಗಳಿಗೆ ಅಭಿಮಾನಿದೇವತೆಗಳೆಂದು ಹೇಳಿರುವುದರಿಂದ ಆದಿತ್ಯನಲ್ಲಿ ಇದ್ದಾನೆಂದು ಹೇಳಿದರೆ ಅಭಿಮಾನಿದೇವತೆಗಳಲ್ಲಿದ್ದಾನೆಂದು ತಿಳಿಯಬೇಕು. ಆದರೆ ಪ್ರಕೃತ ಅಧಿಕರಣದ ಭಾಷ್ಯದಲ್ಲಿ ಆದಿತ್ಯಾದಿ ಪದಗಳಿಗೆ ಆದಿತ್ಯ ಮಂಡಲ ಮೊದಲಾದ ಜಡವಾಚಕಗಳನ್ನು ಅಂಗೀಕರಿಸುವ ಮೂಲಕ ಆಕ್ಷೇಪ ಮತ್ತು ಸಮಾಧಾನವನ್ನು ಮಾಡಿದ್ದಾರೆ. ಏಕೆಂದರೆ ಮುಂದಿನ ಅಧಿಕರಣದಲ್ಲಿ ಹೀಗೆ ಹೇಳಿದ್ದಾರೆ - ''ಯ ಆತ್ಮನಿ ತಿಷ್ಠನ್'' ಇತ್ಯಾದಿ ವಾಕ್ಯಗಳಲ್ಲಿ 'ಆತ್ಮಾದಿ' ಶಬ್ದಕ್ಕೆ ತದಭಿಮಾನಿಯಾದ ಚತುರ್ಮುಖಬ್ರಹ್ಮನೆಂಬ ಅರ್ಥವನ್ನು ಬೃಹದ್ಭಾಷ್ಯದಲ್ಲಿ ಹೇಳಿದ್ದರು. ಈ ಅಧಿಕರಣದ ಭಾಷ್ಯದಲ್ಲಿ ಜೀವನೆಂಬ ಅರ್ಥವನ್ನೇ ಅಂಗೀಕರಿಸಿ ಜೀವಾಂತರ್ಯಾಮಿಗೂ ಜೀವನಿಗೂ ಭೇದವನ್ನು ''ಭೇದೇನೈನಮ್'' ಎಂಬ ಸೂತ್ರದಲ್ಲಿ ಹೇಳಿದ್ದಾರೆ. ಅದರಂತೆ ಇಲ್ಲಿಯೂ ತಿಳಿಯಬೇಕು. ಆದ್ದರಿಂದಲೇ ಆ ಸೂತ್ರದ ಭಾಷ್ಯದಲ್ಲಿ ''ಸ ಯಶ್ಚಾಯಂ ಪುರುಷೇ'' ಎಂದಷ್ಟೇ ಹೇಳಿದ್ದಾರೆ. ಹೀಗೆ ಕೆಲವರ ಸಮಾಧಾನ.

ಚಂದ್ರಿಕೆಯಲ್ಲಿ ಹೇಳಿದ ಸಮಾಧಾನ

ಭಾವದೀಪಃ – चन्द्रिकायां तु तत्त्वप्रदीपादिप्राचीनटीकारीत्या आदित्यादिपदानाम् आदित्यादिदेवतार्थत्वमेवोपेत्य अग्नेरक्षिदेवतास्थत्वे प्राचीनादित्यदेवतास्थोऽपि स एवेत्याक्षेपे अक्षिदेवतास्थस्य विष्णुत्वादादित्यदेवतास्थोऽपि स एवेति समाधिरिति सङ्गतिरुपपादिता ।

ಚಂದ್ರಿಕಾಗ್ರಂಥದಲ್ಲಿ ತತ್ವಪ್ರದೀಪ ಮೊದಲಾದ ಪ್ರಾಚೀನಟೀಕಾಕಾರರ ಪಕ್ಷವನ್ನು ಒಪ್ಪಿ ಆದಿತ್ಯಾದಿ ಪದಗಳಿಗೆ ಆದಿತ್ಯಾದಿ ದೇವತೆಗಳೆಂಬ ಅರ್ಥವನ್ನೇ ಸ್ವೀಕರಿಸಿದ್ದಾರೆ. ಆದ್ದರಿಂದ ಅಗ್ನಿಯು ಅಕ್ಷಿ ದೇವತೆಯಲ್ಲಿ ಇದ್ದಾನೆಂದು ಇಲ್ಲಿ ಹೇಳಿದರೆ ಹಿಂದೆ ಆದಿತ್ಯದೇವತೆಯಲ್ಲಿಯೂ ಸಹ ಅಗ್ನಿ ಇದ್ದಾನೆಂದು ಆಕ್ಷೇಪ ಬರುತ್ತದೆ. ವಿಷ್ಣು ಅಕ್ಷಿದೇವತೆಯಲ್ಲಿ ಇದ್ದಾನೆಂದು ನಿರ್ಣಯವಾದರೆ ಆದಿತ್ಯನಲ್ಲಿಯೂ ವಿಷ್ಣುವೇ ಇದ್ದಾನೆಂದು ನಿರ್ಣಯವಾಗುತ್ತದೆ. ಹೀಗೆ ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ಸಂಗತಿಯನ್ನು ಹೇಳಿದ್ದಾರೆ.

ಸಂಗತಿಪರ ಭ್ಯಾಷವೇ ಪೂರ್ವಪಕ್ಷ ಪರ

भावदीपः – सङ्गतिपरतया व्याख्यातमेव भाष्यं पूर्वपक्षतद्युक्तितत्फलोक्ति-परतयाऽपि व्याकुर्वन् तत्राप्यग्निरेवोच्यत इति प्रतिज्ञार्थं तावदाह – य एषोऽन्तरक्षणीति ।। कुत इत्यत आदित्यस्थत्वादिति भावेन प्रवृत्तस्य 'य एष आदित्ये' इत्यादेरत इत्यन्तस्य भाष्यस्यात इत्युक्त्या यत इत्यध्याहृत्यार्थमाह – यत इति ।

ಸಂಗತಿಪರವಾಗಿಯೇ ವಾಖ್ಯಾನಿಸಿದ ಭಾಷ್ಯವನ್ನು ಪೂರ್ವಪಕ್ಷ ಹಾಗೂ ಪೂರ್ವಪಕ್ಷಯುಕ್ತಿಯನ್ನು ಪೂರ್ವಪಕ್ಷಫಲ ಪರವಾಗಿ ವ್ಯಾಖ್ಯಾನಿಸುತ್ತಾ ಅಗ್ನಿಯೇ ಪ್ರತಿಪಾದ್ಯನಾಗಿದ್ದಾನೆಂಬ ಪ್ರತಿಜ್ಞಾಭಾಗವನ್ನು ''ಯ ಏಷೋಂಽತರಕ್ಷಣಿ'' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ಏಕೆಂದರೆ ಅಗ್ನಿಯೇ ಆದಿತ್ಯನಲ್ಲಿದ್ದಾನೆ. ಈ ಅಭಿಪ್ರಾಯದಿಂದ ಹೊರಟಿರುವ ''ಯ ಏಷಃ ಆದಿತ್ಯೇ'' ಎಂಬಲ್ಲಿಂದ ಪ್ರಾರಂಭಿಸಿ ''ಅತಃ'' ಎಂಬಲ್ಲಿಯ ತನಕದ ಭಾಷ್ಯವನ್ನು ''ಯತಃ'' ಎಂಬುದರಿಂದ ವ್ಯಾಖ್ಯಾನಿಸುತ್ತಿದ್ದಾರೆ. ಭಾಷ್ಯದಲ್ಲಿ ''ಅತಃ'' ಎಂದಿರುವುದರಿಂದ ''ಯತಃ'' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

ಭಾಷ್ಯದ ವ್ಯಾಖ್ಯಾನ

भावदीपः – भाष्ये युक्तिसूचनायाग्नीनामित्युक्तावप्याकाङ्क्षाक्रमेण तद् व्याख्यातुं श्रौताहमादिपदस्थैकवचनानुरोधेनाग्नेरित्युक्तम् । श्रुतौ स एवेत्युक्तेरग्नेरेवेत्युक्तम् ।। अत एवेति।। अग्नेरादित्यस्थत्वादेवेत्यर्थः ।

अक्ष्यादित्ययोरैक्यादिति वाक्यमक्षिस्थोऽग्निरित्यत्रादित्यस्थत्वस्यैव हेतुत्वोपपादकत्वेन व्यावर्त्य शङ्कापूर्वं व्याचष्टे – नच वाच्यमिति ।।

ಭಾಷ್ಯದಲ್ಲಿ ಯುಕ್ತಿಯನ್ನು ಸೂಚನೆ ಮಾಡುವುದಕ್ಕಾಗಿ ''ಅಗ್ನೀನಾಮ್'' ಎಂದು ಹೇಳಿರಬಹುದಿತ್ತು. ಆದರೆ ಆಕಾಂಕ್ಷಾಕ್ರಮದಿಂದ ಅದನ್ನು ವ್ಯಾಖ್ಯಾನಿಸಲು ಶ್ರುತಿಯಲ್ಲಿ ಏಕವಚನದಿಂದ ಕೂಡಿರುವ ''ಅಹಂ'' ಮೊದಲಾದ ಪದವಿರುವುದರಿಂದ ''ಅಗ್ನೇಃ'' ಎಂದೇ ಟೀಕೆಯಲ್ಲಿ ಹೇಳಿದ್ದಾರೆ. ಶ್ರುತಿಯಲ್ಲಿರುವ ''ಸ ಏವ'' ಎಂಬುದಕ್ಕೆ ''ಅಗ್ನೇರೇವ'' ಎಂಬುದು ವ್ಯಾಖ್ಯಾನವಾಗಿದೆಯೆಂದು ತಿಳಿಯಬೇಕು. ''ಅತ ಏವ'' ಎಂಬುದಕ್ಕೆ ಅಗ್ನಿಯು ಆದಿತ್ಯನಲ್ಲಿ ಇರುವವನೆಂದು ಅರ್ಥ.

''ಅಕ್ಷ್ಯಾದಿತ್ಯಯೋರೈಕ್ಯಾತ್''- ''ಅಕ್ಷಿ ಹಾಗೂ ಆದಿತ್ಯರಿಗೆ ಐಕ್ಯವಿರುವುದರಿಂದ'' ಎಂಬ ವಾಕ್ಯವನ್ನು ಅಗ್ನಿಯು ಅಕ್ಷಿಸ್ಥನಾಗಿದ್ದಾನೆನ್ನಲು ಆದಿತ್ಯಸ್ಥವೇ ಹೇತುವಾಗಿದೆ ಎಂಬುದನ್ನು ಉಪಪಾದಿಸುವುದಕ್ಕಾಗಿ ವ್ಯಾವರ್ತ್ಯವಾದ ಶಂಕೆಯನ್ನು ತೋರಿಸುವ ಮೂಲಕ ''ನಚ'' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಅಕ್ಷಿ ಹಾಗೂ ಆದಿತ್ಯಶಬ್ದಗಳು ಜಡಪರವೇ ?

भावदीपः – आदित्यः आदित्यमण्डलाभिमानी चक्षुरूपान्तरेण चक्षुर्देवता भूत्वा अक्षिणी गोलके प्राविशदित्यैतरेयश्रुतावादित्यमण्डलस्य यद्देवताकत्वं चक्षुर्गोलकस्यापि तद्देवताकत्वरूपैकविधत्वोक्तेरित्यर्थः । भाष्यस्थैक्यपदमेकविधत्वपरम् । अक्ष्यादित्यपदे तु जडपरे इति भावः ।

''ಆದಿತ್ಯಃ ಆದಿತ್ಯಮಂಡಲಾಭಿಮಾನೀ ಚಕ್ಷುಃ ರೂಪಾಂತರೇಣ ಚಕ್ಷುರ್ದೇವತಾ ಭೂತ್ವಾ ಅಕ್ಷಿಣೀ ಗೋಲಕೇ ಪ್ರಾವಿಶತ್'' - ಆದಿತ್ಯಮಂಡಲಾಭಿಮಾನಿಯಾದವನು, ಚಕ್ಷುಃ = ಮತ್ತೊಂದು ರೂಪದಿಂದ ಚಕ್ಷುರ್ದೇವತೆಯು ಭೂತ್ವಾ = ಆಗಿ, ಅಕ್ಷಿಣೀ = ಅಕ್ಷಿಗೋಲಕದಲ್ಲಿ, ಪ್ರಾವಿಶತ್ = ಪ್ರವೇಶಿಸಿದನು. ಹೀಗೆ ಆದಿತ್ಯಮಂಡಲದಲ್ಲಿ ಯಾವ ದೇವತೆ ಇದ್ದಾನೋ ಚಕ್ಷುರ್ಗೋಲಕದಲ್ಲಿಯೂ ಅವನೇ ಇದ್ದಾನೆಂಬ ಏಕವಿಧತ್ವವನ್ನು ಶ್ರುತಿಯು ಹೇಳಿದೆ. ಆದ್ದರಿಂದ ಭಾಷ್ಯದಲ್ಲಿರುವ ಐಕ್ಯಪದಕ್ಕೆ 'ಏಕಪ್ರಕಾರದಲ್ಲಿರುವಿಕೆ' ಎಂದರ್ಥ. ಅಕ್ಷಿ ಹಾಗೂ ಆದಿತ್ಯ ಪದಗಳು ಜಡಪರವಾಗಿವೆಯೆಂದು ತಿಳಿಯಬೇಕು.

ವಿಶೇಷವಿಚಾರ - ಅಥವಾ 'ಅಕ್ಷಿಣಿ ಪ್ರಾವಿಶತ್' ಎಂಬಲ್ಲಿ ಯಾವರೀತಿಯಾಗಿ 'ಅಕ್ಷಿ' ಶಬ್ದವು ಜಡಪರವಾಗಿದೆಯೋ ಅದರಂತೆ 'ಅಂತರಕ್ಷಿಣಿ ಪುರುಷಃ' ಎಂಬಲ್ಲಿರುವ 'ಅಕ್ಷಿ' ಶಬ್ದವೂ

ಜಡಪರ ಆಗಿದೆಯೆಂದೇ ಹೇಳೋಣ. ಇದರಿಂದ ಸ್ಥಾನಾದಿ ಸೂತ್ರಗಳೆಲ್ಲವೂ ಸ್ವರಸವಾಗುತ್ತವೆ. ಮತ್ತು ''ಯ ಏಷ ಆದಿತ್ಯೇ ಪುರುಷೋ ದೃಶ್ಯತೇ'' ''ಯ ಏಷೋऽಂತರಕ್ಷಿಣಿ ಪುರುಷೋ ದೃಶ್ಯತೇ'' ಎಂಬೆರಡು ವಾಕ್ಯಗಳನ್ನು ಉಲ್ಲೇಖಿಸುವ ಅವಶ್ಯಕತೆಯೂ ಇರುವುದಿಲ್ಲ.

ಜಡಭೂತವಾದ ಅಕ್ಷಿ ಹಾಗೂ ಆದಿತ್ಯಗಳು ಭಿನ್ನವಾದ್ದರಿಂದ ಆದಿತ್ಯನಲ್ಲಿ ಇದ್ದಾನೆಂದ ಮಾತ್ರಕ್ಕೆ ಅಕ್ಷಿಯಲ್ಲಿದ್ದಾನೆಂದೇನು ಸಿದ್ಧವಾಗುವುದಿಲ್ಲವಲ್ಲ? ಎಂದು ಪ್ರಶ್ನಿಸಬಾರದು. ''ಆದಿತ್ಯಶ್ಚಕ್ಷುಃ'' ಎಂಬ ಶ್ರುತಿಯಲ್ಲಿ ಆದಿತ್ಯಮಂಡಲದಲ್ಲಿರುವ ಚೇತನನೇ ಜಡಭೂತವಾದ ಅಕ್ಷಿಯೆಂಬ ಗೋಲಕದಲ್ಲಿ ಪ್ರವೇಶಿಸಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಜಡಭೂತವಾದ 'ಅಕ್ಷಿಗೋಲಕ' ಹಾಗೂ ಆದಿತ್ಯಮಂಡಲಗಳು ಒಬ್ಬನೆ ಚೇತನನಿಗೆ ಅಧಿಷ್ಠಾನವಾಗಿವೆಯೆಂದು ಏಕವಿಧತ್ವವನ್ನು ತಿಳಿಯಬೇಕು.

'ಯ ಏಷಃ ಆದಿತ್ಯೇ ಪುರುಷಃ ದೃಶ್ಯತೇ' ಎಂಬಲ್ಲಿಯೂ ಸಹ ಆದಿತ್ಯಪದದಿಂದ ಆದಿತ್ಯಮಂಡಲವೇ ಪ್ರತಿಪಾದ್ಯವಾಗಿವೆ. 'ಐಕ್ಯಾತ್' ಎಂಬ ಭಾಷ್ಯದಲ್ಲಿಯೂ ಜಡವಾದ ಅಕ್ಷಿಗೋಲಕ ಹಾಗೂ ಆದಿತ್ಯಮಂಡಲಗಳಿಗೆ ಐಕ್ಯವನ್ನು ವಿವಕ್ಷಿಸಲಾಗದ ಕಾರಣ ಏಕವಿಧತ್ವವನ್ನೇ ವಿವಕ್ಷಿಸಬೇಕು. ಅಂದರೆ ಎರಡೂ ಅಧಿಷ್ಠಾನಗಳಲ್ಲಿರುವ ಚೇತನನು ಒಬ್ಬನೇ ಆಗಿದ್ದಾನೆಂದು ಟೀಕೆಯ ಅಭಿಪ್ರಾಯ.

ವಸ್ತುತಃ ಅಂಶಾಧಿಕರಣನ್ಯಾಯವನ್ನು ವಿವಕ್ಷಿಸಿದಾಗ ''ಅಸಾವಾದಿತ್ಯಸ್ತ್ರಿವೃತ್ ತ್ರಿವೃದಿವ ವೈ ಚಕ್ಷುಃ. ಶುಕ್ಲಂ ಕೃಷ್ಣಂ ಕನಿನೀಕಾ'' ಎಂಬ ಶ್ರುತಿಯಲ್ಲಿ ಅಕ್ಷಿಗೋಲಕ ಹಾಗೂ ಸೂರ್ಯಮಂಡಲಗಳು ಬಿಳಿ, ಕಪ್ಪು, ಕೆಂಪು ಬಣ್ಣಗಳಿಂದ ಕೂಡಿರುವುದರಿಂದ ಪೃಥಿವೀ, ಜಲ ಹಾಗೂ ತೇಜಸ್ಸಿನ ವಿಕಾರಭೂತವಾಗಿವೆಯೆಂದು ತ್ರಿವೃತ್ವವನ್ನು ಹೇಳಿದ್ದಾರೆ. ತ್ರಿವೃತ್ವವೆಂಬ ಧರ್ಮದಿಂದ ಆದಿತ್ಯಮಂಡಲ ಹಾಗೂ ಅಕ್ಷಿಗೋಲಕಗಳಿಗೆ ಸಾಮ್ಯವನ್ನು ಅಲ್ಲಿ ಹೇಳಿದ್ದಾರೆ. ಆದರೆ ಅಂತಹ ಸಾಮ್ಯವನ್ನು ಇಲ್ಲಿ ವಿವಕ್ಷಿಸಲಾಗದು. ಅದರಿಂದ ಆದಿತ್ಯಮಂಡಲದಲ್ಲಿರುವವನೇ ಅಕ್ಷಿಗೋಲಕದಲ್ಲಿದ್ದಾನೆಂದು ಸಿದ್ಧವಾಗುವುದಿಲ್ಲ.

ತತ್ವಪ್ರದೀಪದಲ್ಲಿ ಮಾಡಿದ ಚೇತನಪರ ವ್ಯಾಖ್ಯಾನ

ಭಾವದೀಪಃ – तत्वप्रदीपे तु तयोस्तदभिमानिचेतनत्वमुपेत्यैक्यपदं तदेवतैक्यपरत्वेन यथाश्रुतमेव व्याख्यातम् । अस्त्वग्नेरेवादित्यस्थत्वं तथाप्यग्निशब्द एव विष्णुपरोऽस्त्वित्यतस्तस्याग्निपरत्वे 'सोऽहमस्मि स

एवाहमस्मि' इत्याद्यभ्यासार्थवादसहितबहुश्रुतिभ्य इति न्यायविवरण-मनुसृत्याग्नीनामिति भाष्यस्थबहुवचन सूचितयुक्तिमाह – एतस्मिन्निति ।। बहुश्रुतिभ्य इत्यत्र बहुवचनान्तश्रुतिभ्यो बह्वग्निश्रुतिभ्य इत्यर्थद्वयमुपेत्य भाष्यमपि तथा द्रव्यार्थमिति मत्वा अग्नय इति गार्हपत्य इति चोदाहृतम्।

ತತ್ವಪ್ರದೀಪದಲ್ಲಾದರೂ 'ಆದಿತ್ಯ' ಹಾಗೂ 'ಚಕ್ಷುಃ' ಎಂಬ ಪದಗಳಿಗೆ ತದಭಿಮಾನಿಯಾದ ಚೇತನಪರತ್ವವನ್ನೇ ಒಪ್ಪಿ ಐಕ್ಯಪದಕ್ಕೆ ಅವುಗಳ ಅಂತರ್ಯಾಮಿಯಾದವನಿಗೆ ಐಕ್ಯವನ್ನು ಹೇಳುವ ಮೂಲಕ ಯಥಾಶ್ರುತವಾಗಿಯೇ ವ್ಯಾಖ್ಯಾನಿಸಿದ್ದಾರೆ.

ಅಗ್ನಿಯೇ ಆದಿತ್ಯಸ್ಥನಾಗಲಿ ಆದರೆ ಅಗ್ನಿಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತದೆಂದು ಹೇಳೋಣ? ಎಂಬ ಪ್ರಶ್ನೆಗೆ, ''ತಸ್ಯ ಅಗ್ನಿಪರತ್ವೇ ಸೋऽಹಮಸ್ಮಿ ಸ ಏವಾಹಮಸ್ಮಿ'' ಎಂಬ ನ್ಯಾಯವಿವರಣಕ್ಕೆ ಅನುಸಾರಿಯಾದ ಮತ್ತು ''ಅಗ್ನೀನಾಂ'' ಎಂಬ ಭಾಷ್ಯದಲ್ಲಿರುವ ಬಹುವಚನದಿಂದ ಸೂಚಿತವಾದ ಯುಕ್ತಿಯನ್ನು ಹೇಳುತ್ತಿದ್ದಾರೆ ''ಏತಸ್ಮಿನ್'' ಇತ್ಯಾದಿಯಾಗಿ. ''ಬಹುಶ್ರುತಿಭ್ಯಃ'' ಎಂಬುದಕ್ಕೆ ಬಹುವಚನಾಂತವಾದ ಶ್ರುತಿಗಳಿಂದ ಅಥವಾ ಅನೇಕ ಅಗಿಶಬ್ದಗಳುಳ್ಳ ಶ್ರುತಿಗಳಿಂದ ಎಂಬ ಎರಡು ಬಗೆಯ ಅರ್ಥವನ್ನು ವಿವಕ್ಷಿಸಬೇಕು. ಭಾಷ್ಯವೂ ಸಹ ಹೀಗೆ ಎರಡು ಬಗೆಯ ಅರ್ಥವನ್ನು ವಿವಕ್ಷಿಸಿದೆ ಎಂದು ತಿಳಿದು ''ಅಗ್ನಯಃ'' ಎಂದು ''ಗಾರ್ಹಪತ್ಯಃ'' ಎಂದು ಉದಾಹರಿಸಲಾಗಿದೆ.

ಗಾರ್ಹಪತ್ಯಾಗ್ನಿಯು ಆದಿತ್ಯನಲ್ಲಿದ್ದಾನೆನ್ನಲು ದೃಷ್ಟಾಂತ

भावदीपः – बह्वग्नीत्यपि बहुवचनान्ताग्निश्रुतिसद्भावाद् गार्हपत्यादि-बह्वग्निश्रुतिसद्भावादित्यपि द्वेधा व्याख्येयम् । आदिपदेन 'अग्नीन् परिचचार। कुशलं नः पर्यचारीत् । उपवयन्तं भुञ्जाम' इत्यादि पूर्वत्र । 'अथ हैनमन्वाहार्यपचनोऽनुशशास य एष चन्द्रमसि पुरुषो दृश्यते सोऽहमस्मि स एवाहमस्मि' इत्युत्तरत्र वाक्यं गृह्यते । अत एव भाष्ये 'य एष चन्द्रमसि य एष विद्युति' इत्यादिवाक्यद्वयोपादानाय चन्द्रादित्यस्थत्वोपादानाय

चापि पदद्वयं तदुक्तिस्तु यथान्वाहार्यपचनाहवनीययोश्चन्द्रविद्युत्स्थत्वम्, तथाऽस्यापि गार्हपत्यस्यादित्यस्थत्वमिति दृष्टान्तत्वेनेति बोध्यम् ।

''ಬಹ್ವಗ್ನಿ'' ಎಂಬುದಕ್ಕೂ ಸಹ ಬಹುವಚನಾಂತ ಅಗ್ನಿಶ್ರುತಿವಿರುವುದರಿಂದ 'ಗಾರ್ಹಪತ್ಯ ಮೊದಲಾದ ಅನೇಕ ಅಗ್ನಿಶ್ರುತಿಗಳು ಇರುವುದರಿಂದ' ಎಂದು ಎರಡು ಬಗೆಯಾಗಿ ವ್ಯಾಖ್ಯಾನಿಸಬೇಕು. ಆದಿ ಪದದಿಂದ ''ಅಗ್ನೀನ್ಪರಿಚಚಾರ। ಕುಶಲಂ ನಃ ಪರ್ಯಚಾರೀತ್ । ಉಪವಯಂತಂ ಭುಂಜಾಮಃ'' ಎಂಬ ಹಿಂದಿನ ವಾಕ್ಯವನ್ನು ''ಅಥ ಹೈನಮನ್ವಾಹಾರ್ಯಪಚನೋऽನುಶಶಾಸ ಯ ಏಷ ಚಂದ್ರಮಸಿ ಪುರುಷೋ ದೃಷ್ಯತೇ ಸೋऽಹಮಸ್ಮಿ'' ಎಂಬುದಾಗಿ ಮುಂದಿನ ವಾಕ್ಯವನ್ನು ಸ್ವೀಕರಿಸಬೇಕು. ಆದ್ದರಿಂದಲೇ ಭಾಷ್ಯದಲ್ಲಿ ''ಯ ಏಷ ಚಂದ್ರಮಸಿ ಯ ಏಷ ವಿದ್ಯುತಿ'' ಇತ್ಯಾದಿಯಾಗಿ ಎರಡು ವಾಕ್ಯಗಳನ್ನು ಸ್ವೀಕರಿಸುವುದಕ್ಕಾಗಿ ಮತ್ತು ಚಂದ್ರ ಮತ್ತು ಆದಿತ್ಯರಲ್ಲೇ ಇದ್ದಾನೆಂದು ಉಪಪಾದಿಸುವುದಕ್ಕಾಗಿ ಎರಡು ಬಾರಿ ''ಆದಿ'' ಪದವನ್ನು ಭಾಷ್ಯದಲ್ಲಿ ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ ಯಾವರೀತಿಯಾಗಿ ''ಅಗ್ನಿಗಳು ಚಂದ್ರ ಮತ್ತು ವಿದ್ಯುತ್‌ಗಳಲ್ಲಿ ಹೇಗೆ ನೆಲೆಸಿದ್ದಾರೋ ಅದರಂತೆ ಗಾರ್ಹಪತ್ಯಾಗ್ನಿಯೂ ಸಹ ಆದಿತ್ಯನಲ್ಲಿದ್ದಾನೆಂದು ದೃಷ್ಟಾಂತದಾರ್ಷ್ಟಾಂತಿಕಭಾವವನ್ನು ತಿಳಿಯಬೇಕು.

ವಿಶೇಷವಿಚಾರ - ಪ್ರಶ್ನೆ - ಅಕ್ಷಿಗೋಲಕ ಹಾಗೂ ಆದಿತ್ಯ ಮಂಡಲಗಳಲ್ಲಿ ಇರುವ ಚೇತನನು ಒಬ್ಬನೇ ಆಗಿದ್ದಾನೆಂದು ಒಪ್ಪೋಣ. ಆದರೆ 'ಸೋऽಹಮಸ್ಮಿ' ಎಂದು ಉಪದೇಶಿಸಿದವನು ವಿಷ್ಣುವೇ ಆಗಿದ್ದಾನೆ ಹೊರತು ಅಗ್ನಿಯಲ್ಲವೆಂದು ಹೇಳಬಾರದಲ್ಲವೆ?

ಉತ್ತರ - ''ಅಗ್ನೀನ್ ಪರಿಚಚಾರ ಅಥ ಹಾಗ್ನಯಃ ಸಮೂದಿರೇ'' ಇತ್ಯಾದಿಯಾಗಿ ಅನೇಕಬಾರಿ ಅಗ್ನಿ ಶಬ್ದವು ಕೇಳಿಸುತ್ತಿದೆ. ಮತ್ತು 'ಅಗ್ನಯಃ' ಎಂಬುದಾಗಿ ಬಹುವಚನಾಂತವಾದ ಅಗ್ನಿಶಬ್ದವಿದೆ. ಅಷ್ಟೇ ಅಲ್ಲದೇ ''ಅಥ ಹೈನಂ ಗಾರ್ಹಪತ್ಯೋऽನುಶಶಾಸ'' ''ಅಥ ಹೈನಮನ್ವಾಹಾರ್ಯಪಚನೋऽನುಶಶಾಸ'' ''ಅಥ ಹೈನಮಾಹವನೀಯೋऽನುಶಶಾಸ'' ಇತ್ಯಾದಿ ಶ್ರುತಿಯಲ್ಲಿ ಅಗ್ನಿಯ ವಿಶೇಷ ರೂಪಗಳೆಂದು ಲೋಕಪ್ರಸಿದ್ಧವಾದ 'ಗಾರ್ಹಪತ್ಯ, ಅನ್ವಾಹಾರ್ಯಪಚನ, ಆಹವನೀಯ' ಎಂಬ ಅನೇಕ ಅಗ್ನಿಗಳು ಶ್ರುತವಾಗಿವೆ. ಸಿದ್ಧಾಂತಿಗಳೂ ಸಹ ಈ ಶ್ರುತಿಯಲ್ಲಿರುವ 'ಗಾರ್ಹಪತ್ಯಾದಿ' ಶಬ್ದಗಳಿಂದ ಅಗ್ನಿಪರತ್ವವನ್ನು ಅಂಗೀಕರಿಸಿದ್ದಾರೆ.

ಪ್ರಶ್ನೆ - 'ಸೋऽಹಮಸ್ಮಿ' ಎಂಬ ಮಾತು ಅಗ್ನಿಯ ಉಪದೇಶವೆಂದು ಒಪ್ಪೋಣ? ಆದರೆ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ 'ಅಹಂ'

ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದ ಬ್ರಹ್ಮನೇ ಅಕ್ಷಿಯಲ್ಲಿದ್ದಾನೆಂದು ಉಪಾಸನೆ ಮಾಡಬೇಕೆಂದು ಸಿದ್ಧವಾಗುತ್ತದಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು. ''ಉಪವಯಂತಂ ಭುಂಜಾಮಃ'' ಎಂಬುದಾಗಿ ಉಪಾಸಕನನ್ನು ಪಾಲನೆ ಮಾಡುತ್ತೇನೆಂದು ಅಗ್ನಿಯು ಹೇಳಿಕೊಂಡಿದ್ದಾನೆ. ಸ್ತುತಿರೂಪವಾದ ಈ ಅರ್ಥವಾದವು ಅಗ್ನಿಯು ಉಪಾಸ್ಯನಾಗದಿದ್ದರೆ ಕೂಡುವುದಿಲ್ಲ. ಆದ್ದರಿಂದ ಅಗ್ನಿದೇವತೆಯೇ 'ಅಹಂ' ಶಬ್ದ ಪ್ರತಿಪಾದ್ಯನಾಗಿದ್ದಾನೆ. ಉಪಾಸಕರನ್ನು ಪಾಲಿಸುವವನೇ ಬೇರೆ ಉಪಾಸ್ಯನೇ ಬೇರೆ ಎಂಬುದು ಯುಕ್ತವಲ್ಲ.

ಭಾಷ್ಯದ ದ್ವಿರುಕ್ತಿಯಿಂದ ವ್ಯಾವರ್ತ್ಯವಾದ ಪೂರ್ವಪಕ್ಷ

भावदीपः – भाष्ये द्विरुक्तिसूचितां न्यायविवरणे कण्ठोक्तामभ्यासरूपयुक्तिं व्यावर्त्य शङ्कापूर्वमाह – **नचेति** ।। **अग्नेरादित्यस्थत्वकथनमिति** ।। आदित्यस्थत्ववति विष्णावग्नियुक्ताहंशब्द औपचारिक इत्यर्थः । शास्त्रदृष्टचेत्युक्तमुख्यत्वाच्छादने नेयमुक्तिः 'अन्तर्यामिणम्' इत्यग्रे स्मृत्युक्तेः तद्व्यावर्त्योवत्यर्था । अत एव स्मारयतीति वक्ष्यति – **यश्चेति** ।। 'स यश्चायं पुरुषे । यश्चासावादित्ये । स एकः ।' इति तैत्तिरीये विष्णोरेवादित्यस्थत्वोक्तेरिति भावः ।।

ಭಾಷ್ಯದಲ್ಲಿ ದ್ವಿರುಕ್ತಿಯಿಂದ ಸೂಚಿತವಾದ ಮತ್ತು ನ್ಯಾಯವಿವರಣದಲ್ಲಿ ಕಂಠತಃ ಹೇಳಲ್ಪಟ್ಟ ಅಭ್ಯಾಸವೆಂಬ ಯುಕ್ತಿಯಿಂದ ವ್ಯಾವರ್ತ್ಯವಾದ ಶಂಕೆಯನ್ನು ಹೇಳುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ ''ನಚ'' ಇತ್ಯಾದಿಯಾಗಿ. ಟೀಕೆಯಲ್ಲಿ ''ಅಗ್ನೇಃ ಆದಿತ್ಯಸ್ಥತ್ವಕಥನಂ'' ಎಂದು ಇದೆ. ಅಂದರೆ ಆದಿತ್ಯಸ್ಥವೆಂಬ ಧರ್ಮವಿರುವ ವಿಷ್ಣುವಿನಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದು ತಿಳಿಯಬೇಕು.

''ಶಾಸ್ತ್ರದೃಷ್ಟ್ಯಾ'' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ 'ಅಹಂ' ಶಬ್ದಕ್ಕೆ ಮುಖ್ಯಾರ್ಥವನ್ನು ಆಚ್ಛಾದನೆ ಮಾಡಿ ಈ ಮಾತುಗಳು ಹೇಳಲ್ಪಟ್ಟಿವೆ. ''ಅಂತರ್ಯಾಮಿಣಂ'' ಎಂಬುದಾಗಿ ಮುಂದೆ ಹೇಳುವ ಸ್ಮೃತಿಯ ಮಾತಿನಿಂದ ವ್ಯಾವರ್ತ್ಯವಾದ ಶಂಕೆಯನ್ನು ತಿಳಿಸುವುದಕ್ಕೋಸ್ಕರ ಈ ಮಾತು ಹೇಳಲ್ಪಟ್ಟಿದೆ. ಆದ್ದರಿಂದಲೇ 'ಸ್ಮಾರಯತಿ' ಎಂದು ಮುಂದೆ ಹೇಳುತ್ತಾರೆ. ''ಯಶ್ಚ'' ಎಂಬ ಟೀಕಾಮಾತಿಗೆ ಹೀಗೆ

चापि पदद्वयं तदुक्तिस्तु यथान्वाहार्यपचनाहवनीययोश्चन्द्रविद्युत्स्थत्वम्, तथाऽस्यापि गार्हपत्यस्यादित्यस्थत्वमिति दृष्टान्तत्वेनेति बोध्यम् ।

''ಬಹ್ವಗ್ನಿ'' ಎಂಬುದಕ್ಕೂ ಸಹ ಬಹುವಚನಾಂತ ಅಗ್ನಿಶ್ರುತಿವಿರುವುದರಿಂದ 'ಗಾರ್ಹಪತ್ಯ ಮೊದಲಾದ ಅನೇಕ ಅಗ್ನಿಶ್ರುತಿಗಳು ಇರುವುದರಿಂದ' ಎಂದು ಎರಡು ಬಗೆಯಾಗಿ ವ್ಯಾಖ್ಯಾನಿಸಬೇಕು. ಆದಿ ಪದದಿಂದ ''ಅಗ್ನೀನ್ಪರಿಚಚಾರ। ಕುಶಲಂ ನಃ ಪರ್ಯಚಾರೀತ್ । ಉಪವಯಂತಂ ಭುಂಜಾಮಃ'' ಎಂಬ ಹಿಂದಿನ ವಾಕ್ಯವನ್ನು ''ಅಥ ಹೈನಮನ್ವಾಹಾರ್ಯಪಚನೋऽನುಶಶಾಸ ಯ ಏಷ ಚಂದ್ರಮಸಿ ಪುರುಷೋ ದೃಷ್ಯತೇ ಸೋऽಹಮಸ್ಮಿ'' ಎಂಬುದಾಗಿ ಮುಂದಿನ ವಾಕ್ಯವನ್ನು ಸ್ವೀಕರಿಸಬೇಕು. ಆದ್ದರಿಂದಲೇ ಭಾಷ್ಯದಲ್ಲಿ ''ಯ ಏಷ ಚಂದ್ರಮಸಿ ಯ ಏಷ ವಿದ್ಯುತಿ'' ಇತ್ಯಾದಿಯಾಗಿ ಎರಡು ವಾಕ್ಯಗಳನ್ನು ಸ್ವೀಕರಿಸುವುದಕ್ಕಾಗಿ ಮತ್ತು ಚಂದ್ರ ಮತ್ತು ಆದಿತ್ಯರಲ್ಲೇ ಇದ್ದಾನೆಂದು ಉಪಪಾದಿಸುವುದಕ್ಕಾಗಿ ಎರಡು ಬಾರಿ ''ಆದಿ'' ಪದವನ್ನು ಭಾಷ್ಯದಲ್ಲಿ ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ ಯಾವರೀತಿಯಾಗಿ ''ಅಗ್ನಿಗಳು ಚಂದ್ರ ಮತ್ತು ವಿದ್ಯುತ್‌ಗಳಲ್ಲಿ ಹೇಗೆ ನೆಲೆಸಿದ್ದಾರೋ ಅದರಂತೆ ಗಾರ್ಹಪತ್ಯಾಗ್ನಿಯೂ ಸಹ ಆದಿತ್ಯನಲ್ಲಿದ್ದಾನೆಂದು ದೃಷ್ಟಾಂತದಾರ್ಷ್ಟಾಂತಿಕಭಾವವನ್ನು ತಿಳಿಯಬೇಕು.

ವಿಶೇಷವಿಚಾರ - ಪ್ರಶ್ನೆ - ಅಕ್ಷಿಗೋಲಕ ಹಾಗೂ ಆದಿತ್ಯ ಮಂಡಲಗಳಲ್ಲಿ ಇರುವ ಚೇತನನು ಒಬ್ಬನೇ ಆಗಿದ್ದಾನೆಂದು ಒಪ್ಪೋಣ. ಆದರೆ 'ಸೋऽಹಮಸ್ಮಿ' ಎಂದು ಉಪದೇಶಿಸಿದವನು ವಿಷ್ಣುವೇ ಆಗಿದ್ದಾನೆ ಹೊರತು ಅಗ್ನಿಯಲ್ಲವೆಂದು ಹೇಳಬಾರದಲ್ಲವೆ?

ಉತ್ತರ - ''ಅಗ್ನೀನ್ ಪರಿಚಚಾರ ಅಥ ಹಾಗ್ನಯಃ ಸಮೂದಿರೇ'' ಇತ್ಯಾದಿಯಾಗಿ ಅನೇಕಬಾರಿ ಅಗ್ನಿ ಶಬ್ದವು ಕೇಳಿಸುತ್ತಿದೆ. ಮತ್ತು 'ಅಗ್ನಯಃ' ಎಂಬುದಾಗಿ ಬಹುವಚನಾಂತವಾದ ಅಗ್ನಿಶಬ್ದವಿದೆ. ಅಷ್ಟೇ ಅಲ್ಲದೇ ''ಅಥ ಹೈನಂ ಗಾರ್ಹಪತ್ಯೋऽನುಶಶಾಸ'' ''ಅಥ ಹೈನಮನ್ವಾಹಾರ್ಯಪಚನೋऽನುಶಶಾಸ'' ''ಅಥ ಹೈನಮಾಹವನೀಯೋऽನುಶಶಾಸ'' ಇತ್ಯಾದಿ ಶ್ರುತಿಯಲ್ಲಿ ಅಗ್ನಿಯ ವಿಶೇಷ ರೂಪಗಳೆಂದು ಲೋಕಪ್ರಸಿದ್ಧವಾದ 'ಗಾರ್ಹಪತ್ಯ, ಅನ್ವಾಹಾರ್ಯಪಚನ, ಆಹವನೀಯ' ಎಂಬ ಅನೇಕ ಅಗ್ನಿಗಳು ಶ್ರುತವಾಗಿವೆ. ಸಿದ್ಧಾಂತಿಗಳೂ ಸಹ ಈ ಶ್ರುತಿಯಲ್ಲಿರುವ 'ಗಾರ್ಹಪತ್ಯಾದಿ' ಶಬ್ದಗಳಿಂದ ಅಗ್ನಿಪರತ್ವವನ್ನು ಅಂಗೀಕರಿಸಿದ್ದಾರೆ.

ಪ್ರಶ್ನೆ - 'ಸೋऽಹಮಸ್ಮಿ' ಎಂಬ ಮಾತು ಅಗ್ನಿಯ ಉಪದೇಶವೆಂದು ಒಪ್ಪೋಣ? ಆದರೆ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ 'ಅಹಂ'

ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದ ಬ್ರಹ್ಮನೇ ಅಕ್ಷಿಯಲ್ಲಿದ್ದಾನೆಂದು ಉಪಾಸನೆ ಮಾಡಬೇಕೆಂದು ಸಿದ್ಧವಾಗುತ್ತದಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು. ''ಉಪವಯಂತಂ ಭುಂಜಾಮಃ'' ಎಂಬುದಾಗಿ ಉಪಾಸಕನನ್ನು ಪಾಲನೆ ಮಾಡುತ್ತೇನೆಂದು ಅಗ್ನಿಯು ಹೇಳಿಕೊಂಡಿದ್ದಾನೆ. ಸ್ತುತಿರೂಪವಾದ ಈ ಅರ್ಥವಾದವು ಅಗ್ನಿಯು ಉಪಾಸ್ಯನಾಗದಿದ್ದರೆ ಕೂಡುವುದಿಲ್ಲ. ಆದ್ದರಿಂದ ಅಗ್ನಿದೇವತೆಯೇ 'ಅಹಂ' ಶಬ್ದ ಪ್ರತಿಪಾದ್ಯನಾಗಿದ್ದಾನೆ. ಉಪಾಸಕರನ್ನು ಪಾಲಿಸುವವನೇ ಬೇರೆ ಉಪಾಸ್ಯನೇ ಬೇರೆ ಎಂಬುದು ಯುಕ್ತವಲ್ಲ.

ಭಾಷ್ಯದ ದ್ವಿರುಕ್ತಿಯಿಂದ ವ್ಯಾವರ್ತ್ಯವಾದ ಪೂರ್ವಪಕ್ಷ

भावदीपः – भाष्ये द्विरुक्तिसूचितां न्यायविवरणे कण्ठोक्तामभ्यासरूपयुक्तिं व्यावर्त्य शङ्कापूर्वमाह – नचेति ।। अग्नेरादित्यस्थत्वकथनमिति ।। आदित्यस्थत्ववति विष्णावग्नियुक्ताहंशब्द औपचारिक इत्यर्थः । शास्त्रदृष्टचेत्युक्तमुख्यत्वाच्छादने नेयमुक्तिः 'अन्तर्यामिणम्' इत्यग्रे स्मृत्युक्तेः तद्व्यावर्त्योवत्यर्था । अत एव स्मारयतीति वक्ष्यति – यश्चेति ।। 'स यश्चायं पुरुषे । यश्चासावादित्ये । स एकः ।' इति तैत्तिरीये विष्णोरेवादित्यस्थत्वोक्तेरिति भावः ।।

ಭಾಷ್ಯದಲ್ಲಿ ದ್ವಿರುಕ್ತಿಯಿಂದ ಸೂಚಿತವಾದ ಮತ್ತು ನ್ಯಾಯವಿವರಣದಲ್ಲಿ ಕಂಠತಃ ಹೇಳಲ್ಪಟ್ಟ ಅಭ್ಯಾಸವೆಂಬ ಯುಕ್ತಿಯಿಂದ ವ್ಯಾವರ್ತ್ಯವಾದ ಶಂಕೆಯನ್ನು ಹೇಳುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ ''ನಚ'' ಇತ್ಯಾದಿಯಾಗಿ. ಟೀಕೆಯಲ್ಲಿ ''ಅಗ್ನೇಃ ಆದಿತ್ಯಸ್ಥತ್ವಕಥನಂ'' ಎಂದು ಇದೆ. ಅಂದರೆ ಆದಿತ್ಯಸ್ಥವೆಂಬ ಧರ್ಮವಿರುವ ವಿಷ್ಣುವಿನಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದು ತಿಳಿಯಬೇಕು.

''ಶಾಸ್ತ್ರದೃಷ್ಟ್ಯಾ'' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ 'ಅಹಂ' ಶಬ್ದಕ್ಕೆ ಮುಖ್ಯಾರ್ಥವನ್ನು ಆಚ್ಛಾದನೆ ಮಾಡಿ ಈ ಮಾತುಗಳು ಹೇಳಲ್ಪಟ್ಟವೆ. ''ಅಂತರ್ಯಾಮಿಣಂ'' ಎಂಬುದಾಗಿ ಮುಂದೆ ಹೇಳುವ ಸ್ಮೃತಿಯ ಮಾತಿನಿಂದ ವ್ಯಾವರ್ತ್ಯವಾದ ಶಂಕೆಯನ್ನು ತಿಳಿಸುವುದಕ್ಕೋಸ್ಕರ ಈ ಮಾತು ಹೇಳಲ್ಪಟ್ಟಿದೆ. ಆದ್ದರಿಂದಲೇ 'ಸ್ಮಾರಯತಿ' ಎಂದು ಮುಂದೆ ಹೇಳುತ್ತಾರೆ. ''ಯಶ್ಚ'' ಎಂಬ ಟೀಕಾಮಾತಿಗೆ ಹೀಗೆ

ಅರ್ಥ - 'ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ ಸ ಏಕಃ' ಎಂದು ತೈತ್ತಿರೀಯದಲ್ಲಿ 'ವಿಷ್ಣುವೇ ಆದಿತ್ಯಸ್ಥನೆಂದು ಹೇಳಿದ್ದರಿಂದ' ಎಂದು ತಿಳಿಯಬೇಕು.

ವಿಷ್ಣುಪರವಾಗಿ ಅರ್ಥೈಸಿದಾಗ ಹೆಚ್ಚಿನ ಅಪೂರ್ವತಾ

भावदीपः – बलवत्त्वादिति ।। स्थानान्तरस्थसमाख्यापेक्षया एकस्थानस्य शीघ्रोपस्थितिकत्वादिति भावः । न्यायविवरणोक्तमर्थवादसाहित्यं व्यावर्त्य शङ्कापूर्वमाह – नचेति ।। अपूर्वतयेति ।। अत्यलौकिकविष्णुग्रहणे अग्निग्रहणादप्यपूर्वं लभ्यत इत्यपूर्वतयेत्युक्तम् । अपहते अपहति । वस्तुतः फलवत्त्वमेव फलं न फलस्योक्तिः । सा तु अर्थवाद इति मत्वाऽर्थवाद इत्युक्तम् । एवंरूपाल्पफलेन स्तुतिर्ब्रह्मणि न युक्तेति भावः ।। प्राबल्यादिति ।। तद्बीजस्य समन्वयसूत्रेऽभिधानादिति भावः ।

''ಬಲವತ್ವಾತ್'' ಎಂದರೆ ಬೇರೆ ಸ್ಥಾನದಲ್ಲಿರುವ ಸಮಾಖ್ಯಾಪ್ರಮಾಣಕ್ಕಿಂತ ಅದೇ ಪ್ರಕರಣ-ದಲ್ಲಿರುವ ಪ್ರಮಾಣವು ಶೀಘ್ರೋಪಸ್ಥಿತವಾಗುತ್ತದೆಂದು ಅಭಿಪ್ರಾಯ. ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ಅರ್ಥವಾದದ ಸಾಹಿತ್ಯವನ್ನು ಅಲ್ಲಗಳೆಯುತ್ತಾ ಶಂಕಾಮೂಲಕವಾಗಿ ''ನಚ'' ಇತ್ಯಾದಿ ವಾಕ್ಯಗಳಿಂದ ಹೇಳುತ್ತಿದ್ದಾರೆ. ''ಅಪೂರ್ವತಯಾ'' ಎಂದರೆ ಅತ್ಯಂತ ಅಲೌಕಿಕನಾದ ವಿಷ್ಣುವೆಂಬ ಅರ್ಥವನ್ನು ಸ್ವೀಕರಿಸಿದಾಗ ಕೇವಲ ಅಲೌಕಿಕನಾದ ಅಗ್ನಿ ಎಂಬರ್ಥಕ್ಕಿಂತ ಹೆಚ್ಚಿನ ಅಪೂರ್ವತಾವನ್ನು ಹೇಳಿದಂತಾಗುತ್ತದೆ. ''ಅಪಹತೇ'' ಎಂಬ ಶಬ್ದವನ್ನು 'ಅಪಹತಿ' ಎಂದು ಶಬ್ದವ್ಯತ್ಯಾಸ ಮಾಡಿಕೊಂಡು ಅರ್ಥೈಸಬೇಕು.

ವಸ್ತುತಃ ಫಲವತ್ವವೇ ಫಲದ ಲಕ್ಷಣ ಹೊರತು ಫಲವನ್ನು ಹೇಳುವುದು ಫಲದ ಲಕ್ಷಣವಲ್ಲ. ಫಲದ ಹೇಳುವಿಕೆಯು ಅರ್ಥವಾದದ ಲಕ್ಷಣವೆಂದು ತಿಳಿದು ಟೀಕೆಯಲ್ಲಿ ಅರ್ಥವಾದವೆಂದೇ ಹೇಳಿದ್ದಾರೆ. ಹೀಗೆ ಅಲ್ಪಫಲದಿಂದ ಸ್ತೋತ್ರ ಮಾಡುವಿಕೆಯು ಬ್ರಹ್ಮನಲ್ಲಿ ಕೊಡುವುದಿಲ್ಲವೆಂದು ಅಭಿಪ್ರಾಯ. ''ಪ್ರಾಬಲ್ಯಾತ್'' ಎಂದರೆ ಪ್ರಾಬಲ್ಯದ ಕಾರಣವನ್ನು ಸಮನ್ವಯ ಸೂತ್ರದಲ್ಲಿ ಹೇಳಿದ್ದಾರೆಂದು ತಿಳಿಯಬೇಕು.

ಭಾಷ್ಯದ ವಾಕ್ಯಗಳು ಫಲಪರವಾಗಿವೆ

भावदीपः – इत्यत्राग्निरेवोच्यत इति प्रतिज्ञातार्थमुपसंहरति – **अत इति** ।। अभ्यासार्थवादसहितबह्वग्निश्रुतिसत्त्वादित्यर्थः । इत्यत्रापीति भाष्यस्थापिपदार्थोक्तिः – **आदित्येति** ।। एतत्प्रकरणानन्दमयप्रकरणयोर्विद्यमानत्वादित्यर्थः । तेनोक्तमित्यन्तभाष्यवाक्यस्यापि फलपरत्वेन तात्पर्यमुक्तं ध्येयम् ।

''इत्यत्रापि अग्निरेवोच्यते'' ಎಂಬ ಪ್ರತಿಜ್ಞೆಯನ್ನು ಉಪಸಂಹಾರ ಮಾಡುತ್ತಿದ್ದರೆ ''अतः'' ಇತ್ಯಾದಿಯಾಗಿ. ಅಭ್ಯಾಸ ಹಾಗೂ ಅರ್ಥವಾದ ಸಹಿತವಾದ ಬಹ್ವಗ್ನಿಶ್ರುತಿಯು ಪ್ರಮಾಣವಾಗಿರುವುದರಿಂದ ಎಂದು ''अतः'' ಶಬ್ದಕ್ಕೆ ಅರ್ಥ. ಇತ್ಯತ್ರಾಪಿ ಎಂದು ಭಾಷ್ಯದಲ್ಲಿರುವ 'अपि' ಪದದ ಅರ್ಥವನ್ನೇ ಆದಿತ್ಯವೆಂದು ಹೇಳಿದ್ದಾರೆ. ಈ ಪ್ರಕರಣ ಹಾಗೂ ಆನಂದಮಯ ಪ್ರಕರಣದಲ್ಲಿ ಹೇಳಿರುವುದೆಂದರ್ಥ. ಇದರಿಂದ ''ಉಕ್ತಂ'' ಎಂಬಲ್ಲಿಯ ತನಕದ ಭಾಷ್ಯವಾಕ್ಯವನ್ನು ಫಲಪರವಾಗಿ ವ್ಯಾಖ್ಯಾನಿಸಿದಂತಾಯಿತು.

ಪೂರ್ವಪಕ್ಷ ಪರವೆಂಬ ಭ್ರಾಂತಿಯ ನಿವಾರಣೆ

भावदीपः – 'तद् यथा' इति वाक्ये विष्णुलिङ्गश्रवणाद् विष्णुरेवाक्षिस्थः किन्न स्यादित्यतो वा अग्नौ समन्वये फलाभावादित्यतो वा प्रवृत्तमतस्तद् यथेत्यादिभाष्यम् । इदमेवैतत्पूर्वपक्षफलमिति भ्रान्तिं निरस्यन्नवतारयति – **न केवलमिति** ।। **इति मतमिति** ।। 'जन्माद्यस्य यतः' 'तन्निष्ठस्य मोक्षोपदेशात्' 'नेतरोऽनुपपत्तेः' इत्यादिसूत्रेष्वभिमतमित्यर्थः – **मोक्षोऽपीति** ।। न केवलमानन्दमयत्वमित्यपेरर्थः । अनुक्तस्योपपादनायोगादुपपत्तिरित्युक्त्या ज्ञानान्मोक्षोभवेदिति लभ्यते । आदित्ये विष्णुः इत्युक्तमित्यनेनाग्नेरानन्दमयत्वप्राप्तिरूपफलस्य सूचनादपीति लब्धमिति भावः । इदानीं यथान्यासं भाष्यं योजयति – **तद् यथेतीति** ।।

''ತದ್ಯಥಾ'' ಎಂಬ ವಾಕ್ಯದಲ್ಲಿ ವಿಷ್ಣುಲಿಂಗ ಕೇಳಿಸುತ್ತಿರುವುದರಿಂದ ವಿಷ್ಣುವೇ ಏಕೆ ಅಕ್ಷಿಸ್ಥನಾಗಬಾರದು? ಎಂಬುದಕ್ಕೆ ಅಥವಾ ಅಗ್ನಿಯಲ್ಲಿ ಸಮನ್ವಯ ಮಾಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ಉತ್ತರಿಸುವುದಕ್ಕಾಗಿ ''ಅತಃ'' ಎಂಬ ವಾಕ್ಯವು ಹೊರಟಿದೆ. ಇದೇ ಈ ಪೂರ್ವಪಕ್ಷದ ಫಲವೆಂಬ ಭ್ರಾಂತಿಯನ್ನು ನಿವಾರಣೆ ಮಾಡುವುದಕ್ಕಾಗಿ ಈ ವಾಕ್ಯವು ಹೊರಟಿದೆ.

''ಇತಿ ಮತಂ'' ಎಂದರೆ ''ಜನ್ಮಾದ್ಯಸ್ಯ ಯತಃ'', ''ತನ್ನಿಷ್ಠಸ್ಯ ಮೋಕ್ಷೋಪದೇಶಾತ್'' ''ನೇತರೋನುಪಪತ್ತೇಃ'' ಇತ್ಯಾದಿ ಸೂತ್ರಗಳಲ್ಲಿ ಅಭಿಮತವಾಗಿದೆಯೆಂದರ್ಥ. ''ಮೋಕ್ಷೋಪಿ'' ಎಂಬಲ್ಲಿರುವ 'ಅಪಿ' ಪದಕ್ಕೆ ಕೇವಲ ಆನಂದಮಯತ್ವವೆಂದಷ್ಟೇ ಅಲ್ಲ. ಹೇಳದ ವಿಷಯವನ್ನು ಉಪಪಾದಿಸಲು ಸಾಧ್ಯವಿಲ್ಲದ ಕಾರಣ ''ಉಪಪತ್ತಿಃ'' ಎಂಬ ಮಾತಿನಿಂದ ಜ್ಞಾನದಿಂದ ಮೋಕ್ಷವು ದೊರೆಯುತ್ತದೆಂದು ಹೇಳಿದಂತಾಗುತ್ತದೆ. ಆದಿತ್ಯನಲ್ಲಿ ವಿಷ್ಣುವಿದ್ದಾನೆಂದು ಹೇಳಿದ್ದರಿಂದ ಅಗ್ನಿಯಿಂದ ಆನಂದಮಯತ್ವವು ಪ್ರಾಪ್ತವಾಗುತ್ತದೆಂದು ಹೇಳಿದ್ದರಿಂದಲೂ ಜ್ಞಾನದಿಂದ ಮೋಕ್ಷವನ್ನು ಉಪಪಾದಿಸಿದಂತಾಯಿತು. ಪ್ರಕೃತ ಭಾಷ್ಯದ ವಾಕ್ಯವನ್ನು ಯಥಾಸ್ಥಿತವಾಗಿ ವಿವಕ್ಷಿಸಿ ''ತದ್ಯಥಾ'' ಎಂಬ ವಾಕ್ಯದಿಂದ ಯೋಜನೆ ಮಾಡುತ್ತಿದ್ದಾರೆ.

ವಕ್ರಸಂಗತಿಯಿಂದ ಅಧಿಕರಣವು ಆರಂಭಣೀಯವೇ ?

भावदीपः – ननु विष्णुज्ञानान्मोक्ष इति प्रागुक्तमयुक्तम् । तद् यथेत्यत्राक्षिस्थाग्निज्ञानान्मोक्षश्रवणादिति ऋजुसङ्गत्या एतदारम्भसम्भवाद् आनन्दमयस्य आदित्यस्थत्वमुक्तम् । ततश्चार्थादक्षिस्थत्वमप्युक्तं तदक्षिस्थत्वं च्छान्दोग्ये अग्नेः श्रूयत इति प्रागुक्तमादित्यस्थत्वम् आनन्दमयत्वं च तस्यैवेति वक्रसङ्गत्या एतदारम्भः किमर्थ इत्यत आह – अत्रेति ।।

ವಿಷ್ಣು ಜ್ಞಾನದಿಂದ ಮೋಕ್ಷವಾಗುತ್ತದೆಂದು ಹಿಂದೆ ಹೇಳಿದ್ದರು. ಇದು ತಪ್ಪು. ''ತದ್ಯಥಾ'' ಎಂಬಲ್ಲಿ ಅಕ್ಷಿಯಲ್ಲಿರುವ ಅಗ್ನಿಯ ಜ್ಞಾನದಿಂದ ಮೊಕ್ಷವಾಗುತ್ತದೆಂದು ಹೇಳಿರುವುದರಿಂದ. ಹೀಗೆ ಋಜು ಸಂಗತಿಯಿಂದಲೇ ಈ ಅಧಿಕರಣವನ್ನು ಆರಂಭಿಸಲು ಸಾಧ್ಯವಿದೆ. ಆದರೆ ಆನಂದಮಯನಿಗೆ ಆದಿತ್ಯಸ್ಥತ್ವವನ್ನು ಹೇಳಿದ್ದರಿಂದ ಅರ್ಥಾತ್ ಅಕ್ಷಿಸ್ಥತ್ವವನ್ನೂ ಹೇಳಿದಂತಾಯಿತು. ಅದೇ ಅಕ್ಷಿಸ್ಥತ್ವವನ್ನು

ಛಾಂದೋಗ್ಯದಲ್ಲಿ ಅಗ್ನಿಗೆ ಹೇಳಲಾಗಿದೆ. ಆದ್ದರಿಂದ ಹಿಂದೆ ಹೇಳಿದ ಆದಿತ್ಯಸ್ಥತ್ವ ಮತ್ತು ಆನಂದಮಯತ್ವಗಳು ಅಗ್ನಿಯಲ್ಲಿಯೇ ಬರುತ್ತವೆ. ಹೀಗೆ ವಕ್ರ ಸಂಗತಿಯನ್ನು ಹೇಳುವ ಮೂಲಕ ಮುಂದಿನ ಈ ಅಧಿಕರಣವನ್ನು ಆರಂಭಿಸುತ್ತಿದ್ದಾರೆ. ಇದು ತಪ್ಪಲ್ಲವೆ? ಎಂಬ ಪ್ರಶ್ನೆಗೆ 'ಅತ್ರ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಸಂಗತಿಯ ಮಾಹಿತಿಗಾಗಿ ತಾತ್ಪರ್ಯಚಂದ್ರಿಕಾ

भावदीपः – वक्राश्रयणे हि अत्राक्षिस्थत्वसमन्वये प्राचीनमादित्यस्थत्वमपि विष्णोरेव सिद्ध्यति, नान्यथेत्यर्थः । अधिकं चन्द्रिकायाम् । आदित्यस्थत्व-लिङ्गस्यापि विष्णौ समन्वयसिद्ध्यर्थमित्युपलक्षणं पूवपक्षोत्थानार्थं चेत्यपि ध्येयम् । आदित्यवाक्य इवाक्षिवाक्ये पूर्वपक्षप्रापकस्यापि अभानाद्

ವಕ್ರಸಂಗತಿಯನ್ನು ಆಶ್ರಯಿಸಿದಾಗ ಅಕ್ಷಿಸ್ಥತ್ವದ ಸಮನ್ವಯವು ಸಿದ್ಧವಾದರೆ ಹಿಂದಿನ ಆದಿತ್ಯಸ್ಥತ್ವವು ವಿಷ್ಣುವಿನಲ್ಲಿ ಸಮನ್ವಯವಾಗುತ್ತದೆ. ಇಲ್ಲದಿದ್ದರೆ ಸಿದ್ಧವಾಗುವುದಿಲ್ಲ. ಹೆಚ್ಚಿನ ವಿಚಾರವನ್ನು ಚಂದ್ರಿಕಾಗ್ರಂಥವನ್ನು ಓದಿ ತಿಳಿಯಬಹುದು. ಆದಿತ್ಯಸ್ಥತ್ವಲಿಂಗದ ಸಮನ್ವಯವು ವಿಷ್ಣುವಿನಲ್ಲಿ ಸಿದ್ಧವಾಗಬೇಕೆಂಬುದು ಉಪಲಕ್ಷಣವಾಗಿದೆ. ಪೂರ್ವಪಕ್ಷದ ಸ್ಥಾಪನೆಗೋಸ್ಕರ ಹೀಗೆ ಹೇಳಿದ್ದಾರೆಂಬುದನ್ನೂ ವಿವಕ್ಷಿಸಬೇಕು. ಏಕೆಂದರೆ ಆದಿತ್ಯವಾಕ್ಯದಂತೆ ಅಕ್ಷಿವಾಕ್ಯದಲ್ಲಿ ಪೂರ್ವಪಕ್ಷ-ಪ್ರಾಪಕಲಿಂಗಗಳು ಇರುವುದಿಲ್ಲ.

ವಿಶೇಷವಿಚಾರ - ಟೀಕೆಯ ಪೂರ್ವಪಕ್ಷದಲ್ಲಿ ಕೆಲವು ಗೊಂದಲಗಳಿವೆ - ಆದಿತ್ಯನಲ್ಲಿರುವವನು ಅಗ್ನಿಯೇ ಆಗಿದ್ದಾನೆಂದು ಪೂರ್ವಪಕ್ಷಕಾರರು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟ ತೈತ್ತಿರೀಯ ಉಪನಿಷತ್ತಿನಲ್ಲಿ ವಿಷ್ಣುವನ್ನು ಆದಿತ್ಯನೆನ್ನಲಾಗಿದೆ. ಆದ್ದರಿಂದ ಆದಿತ್ಯಶ್ರುತಿಯೆಂಬ ಸಮಾಖ್ಯಾಪ್ರಮಾಣದಿಂದ ವಿರೋಧ ಬರುತ್ತದಲ್ಲವೇ? ಎಂದು ಟೀಕೆಯಲ್ಲಿ ಪ್ರಶ್ನಿಸಲಾಗಿದೆ. ಇದು ಹೇಗೆ ಸರಿ? ಏಕೆಂದರೆ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಆದಿತ್ಯಾಂತರ್ಗತನು ಅಗ್ನಿಯೆಂದು ಯಾವ ಪೂರ್ವಪಕ್ಷಿಯು ಆಕ್ಷೇಪಿಸುತ್ತಿದ್ದಾನೋ? ಆ ಪೂರ್ವಪಕ್ಷಿಯು ತೈತ್ತಿರೀಯದಲ್ಲಿರುವ ಆದಿತ್ಯಾಂತರ್ಗತನನ್ನೂ ಸಹ ಅಗ್ನಿಯೆಂದೇ ಆಕ್ಷೇಪಿಸುತ್ತಾನೆ. ಹೀಗಿರುವಾಗ ತೈತ್ತಿರೀಯದ ಸಮಾಖ್ಯಾಶ್ರುತಿಯು

ವಿಷ್ಣುಪರವಾಗಿದೆಯೆಂದು ಸಮರ್ಥಿಸಲು ಹೇಗೆ ಸಾಧ್ಯ ? ಈ ಆಕ್ಷೇಪಕ್ಕೆ 'ತತ್ರ ಚ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಇದರ ಅಭಿಪ್ರಾಯ ಹೀಗಿದೆ - ಛಾಂದೋಗ್ಯದಲ್ಲಿರುವ ಆದಿತ್ಯಾಂತರ್ಗತನು ಅಗ್ನಿಯೆಂದು ನಿರ್ಣಯವಾಗಿದ್ದಲ್ಲಿ ಸಮಾಖ್ಯಾ ಶ್ರುತಿಯನ್ನು ಆಕ್ಷೇಪಿಸಬಹುದಿತ್ತು. ಆದರೆ ಪೂರ್ವಪಕ್ಷಿಯ ಪ್ರಮೇಯವು ಎಲ್ಲಿಯತನಕ ಸಿದ್ಧವಾಗುವುದಿಲ್ಲವೋ ಅಲ್ಲಿಯ ತನಕ ತೈತ್ತಿರೀಯದಲ್ಲಿರುವ ಸಮಾಖ್ಯಾಶ್ರುತಿಯು ವಿಷ್ಣುಪರವೇ ಆಗಿರುತ್ತದೆ. ಈ ದೃಷ್ಟಿಯಿಂದ ಟೀಕಾರಾಯರು ಸಮಾಖ್ಯಾ ಶ್ರುತಿಯನ್ನು ವಿಷ್ಣುಪರವೆಂದು ವಿವಕ್ಷಿಸಿ ಪ್ರಶ್ನಿಸಿದ್ದಾರೆ.

ಟೀಕೆಯಲ್ಲಿ ಮತ್ತೊಂದೆಡೆ 'ಅಹಂ' ಶಬ್ದವು ವಿಷ್ಣುವಿನಲ್ಲಿ ಔಪಚಾರಿಕವಾಗಿದೆ. ಅಗ್ನಿ ದೇವತೆಯಲ್ಲಿ ಮುಖ್ಯವಾಗಿದೆಯೆಂದು ಹೇಳಿರುತ್ತಾರೆ. ಇದು ಹೇಗೆ ಸರಿ ? ಏಕೆಂದರೆ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ 'ಅಹಂ' ಶಬ್ದವನ್ನು ವಿಷ್ಣುವಿನಲ್ಲಿ ಮುಖ್ಯವಾಗಿ ಸಮರ್ಥಿಸಿದ್ದಾಗಿದೆಯಲ್ಲವೇ?

ಈ ಪ್ರಶ್ನೆಗೆ 'ತಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಇದರ ಅಭಿಪ್ರಾಯ ಹೀಗಿದೆ - ಟೀಕಾ ಮಾತಿಗೆ ವಿಷ್ಣುವಿನಲ್ಲಿ 'ಅಹಂ' ಶಬ್ದವು ಅಮುಖ್ಯವಾಗಿದೆ ಎಂದು ಅಭಿಪ್ರಾಯವಲ್ಲ. ಹೊರತಾಗಿ ಆದಿತ್ಯಾಂತರ್ಗತನಾದ ವಿಷ್ಣುವಿನಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದರ್ಥ. ವಸ್ತುತಃ 'ಅಹಂ' ಶಬ್ದವನ್ನು ವಿಷ್ಣುವಿನಲ್ಲಿ ಮುಖ್ಯವಾಗಿದೆಯೆಂದು 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಹೇಳಿರಬಹುದು. ಆದರೆ ಅದನ್ನು ಆಚ್ಛಾದನೆ ಮಾಡಿ ಇಲ್ಲಿ ಆಶಂಕಿಸಲಾಗಿದೆ. ಆದ್ದರಿಂದ ನ್ಯಾಯವಿವರಣ ಟೀಕೆಯಲ್ಲಿ 'ನಚ ''ಪ್ರಾಣೋ ವಾ ಅಹಮಸ್ಮಿ'' ಇತಿ ವದ್ ಅಂತರ್ಯಾಮ್ಯಪೇಕ್ಷಯೇತಿ ವಾಚ್ಯಮ್, ''ಸೋऽಹಮಸ್ಮಿ'' ಇತ್ಯುಕ್ತ್ವಾ ಪುನಃ ''ಸ ಏವಾಹಮಸ್ಮಿ'' ಇತಿ ಸಾವಧಾರಣಮುಕ್ತತ್ವಾದವಧಾರಣೇನ ಚ ಪ್ರಕಾರಾಂತರಾಣಾಂ ಸರ್ವೇಷಾಂ ವ್ಯಾವರ್ತಿತತ್ವಾತ್'' ಎಂಬಂತೆ ಇಲ್ಲಿ ಅಂತರ್ಯಾಮಿಯ ವಿವಕ್ಷೆಯಿಂದ 'ಅಹಂ' ಶಬ್ದವನ್ನು ಪ್ರಯೋಗಿಸಿರುವುದಿಲ್ಲ. ಏಕೆಂದರೆ 'ಸೋऽಹಮಸ್ಮಿ' ಎಂದು ಅಗ್ನಿಯು ಉಪದೇಶಿಸಿ ಪುನಃ 'ಸ ಏವಾಹಮಸ್ಮಿ' ಎಂದು ಅವಧಾರಣ ಪುರಸ್ಸರವಾಗಿ 'ಅಹಂ' ಶಬ್ದವನ್ನು ಪ್ರಯೋಗಿಸಿದ್ದಾನೆ. ಈ ಅವಧಾರಣದಿಂದ ಬೇರೆ ಪ್ರಕಾರಗಳನ್ನೆಲ್ಲಾ ವ್ಯಾವೃತ್ತಿ ಮಾಡಲಾಗಿದೆ. ಈ ಗ್ರಂಥದಿಂದ ಔಪಚಾರಿಕ ಶಂಕೆಗಿಂತ ಇದನ್ನು ಪ್ರತ್ಯೇಕವಾಗಿ ಆಶಂಕಿಸಿ ನಿರಾಕರಿಸಿದ್ದಾರೆಂದು ತಿಳಿಯಬೇಕು.

ಇದು ವ್ಯಧಿಕರಣವಲ್ಲವೇ? ಏಕೆಂದರೆ ಟೀಕೆಯಲ್ಲಿ ಅಗ್ನಿಯು ಆದಿತ್ಯಾಂತರ್ಗತನೆಂಬುದು ಔಪಚಾರಿಕವೆಂದು ಶಂಕಿಸಲಾಗಿದೆ ಹೊರತು 'ಅಹಂ' ಶಬ್ದವು ಔಪಚಾರಿಕವಾಗಿದೆಯೆಂದು ಆಶಂಕಿಸಿಲ್ಲ. ಹೀಗಿರುವಾಗ ವಿಷ್ಣುವಿನಲ್ಲಿ 'ಅಹಂ' ಶಬ್ದಕ್ಕೆ ಮುಖ್ಯತ್ವವನ್ನು ಹೇಳಿದ್ದಕ್ಕೆ ಏನು ಸಂಗತಿ? ಎಂಬ ಪ್ರಶ್ನೆಗೆ 'ಅತ್ರಹಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಆದ್ದರಿಂದಲೇ ನ್ಯಾಯವಿವರಣೆಯ ಟೀಕೆಯಲ್ಲಿ ''ಆತ್ಮಾ ಮೇ ಭದ್ರಸೇನಃ'' 'ಭದ್ರಸೇನನು ನನ್ನ ಆತ್ಮನಾಗಿದ್ದಾನೆ' ಎಂಬಲ್ಲಿ ಯಾವರೀತಿಯಾಗಿ ಆತ್ಮಶಬ್ದವು ಔಪಚಾರಿಕವಾಗಿ ಪ್ರಯೋಗಿಸಲಾಗುತ್ತದೋ ಅದರಂತೆ 'ಸೋऽಹಮಸ್ಮಿ' ಎಂಬ 'ಅಹಂ' ಶಬ್ದವೂ ಸಹ ಔಪಚಾರಿಕವೆಂದು ಏಕೆ ಹೇಳಬಾರದು ? ಈ ಪ್ರಶ್ನೆಗೆ 'ಅನ್ಯಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅನ್ಯಥಾ' ಎಂಬ ಪದಕ್ಕೆ ಅಗ್ನಿಯು ಆದಿತ್ಯನಲ್ಲಿದ್ದಾನೆಂಬುದು ಔಪಚಾರಿಕವಾದರೆ ಎಂದರ್ಥ.

ಇನ್ನು ಟೀಕೆಯಲ್ಲಿ ಅಕ್ಷಿಶಬ್ದದಿಂದ ವಿಷ್ಣುಪ್ರತಿಪಾದ್ಯನಾದರೆ ಅಪೂರ್ವತ್ವ ಬರಬಹುದು. ಆದರೆ ಅಗ್ನಿಯೆಂಬರ್ಥವನ್ನು ಸ್ವೀಕರಿಸಿದಾಗ ಅಪೂರ್ವತ್ವವು ಬರುವುದಿಲ್ಲವೆಂದು ಹೇಳಿದ್ದಾರೆ. ಇದು ತಪ್ಪು? ಅಗ್ನಿಯೆಂಬರ್ಥವನ್ನು ಸ್ವೀಕರಿಸಿದಾಗಲೂ ಅಪೂರ್ವತ್ವವು ಬಂದೇ ಬರುತ್ತದೆ. ಏಕೆಂದರೆ ಅಗ್ನಿಯು ಕಣ್ಣಿನಲ್ಲಿದ್ದಾನೆಂಬುದು ಪ್ರತ್ಯಕ್ಷಾದಿಗಳಿಂದ ಸಿದ್ಧವಾಗಿರುವುದಿಲ್ಲವೆಂಬ ಪ್ರಶ್ನೆಗೆ 'ತಥಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಟೀಕೆಯಲ್ಲಿ ಹೇಳಲ್ಪಟ್ಟ ಅರ್ಥವಾದತ್ವವು ಹೇಗೆ ಸಮಂಜಸವಾಗುತ್ತದೆಂದು ಆಕ್ಷೇಪಿಸಿ ಸಮಾಧಾನವನ್ನು ಹೇಳುತ್ತಿದ್ದಾರೆ 'ಯದ್ಯಪಿ' ಇತ್ಯಾದಿ ವಾಕ್ಯದಿಂದ.

'ಅಪಹತೇ' ಎಂಬ ಪದವು ವೈದಿಕ ಪ್ರಯೋಗವಾದ್ದರಿಂದ 'ಅಪಹಂತಿ' ಎಂಬರ್ಥದಲ್ಲಿದೆ. ಅರ್ಥವಾದದಿಂದ ಬ್ರಹ್ಮಪಕ್ಷವನ್ನು ಹೇಗೆ ನಿರಾಸ ಮಾಡುತ್ತೀರಿ? ಎಂಬ ಪ್ರಶ್ನೆಗೆ 'ನಚ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಸ್ವಕಾರ್ಯ' ಎಂಬ ಪದಕ್ಕೆ ಹೀಗರ್ಥ. 'ಐಂದ್ರ್ಯಾ ಗಾರ್ಹಪತ್ಯಮುಪತಿಷ್ಠತೇ' ಎಂಬ ವಾಕ್ಯವು ಅಗ್ನಿಪರವೇ ಆಗಿದೆ. ಹಾಗಾದರೆ 'ಐಂದ್ರ್ಯಾ' ಎಂಬ ಪದವನ್ನು ಹೇಗೆ ಕೂಡಿಸುವುದು? ಎಂಬ ಪ್ರಶ್ನೆಗೆ ವಿನಿಯೋಗವಶದಿಂದ ಇಂದ್ರಪ್ರಕಾಶಕವಾದ 'ಕದಾಚನ ಸ್ತರೀರಸಿ ನೇಂದ್ರ' ಎಂಬ ಮಂತ್ರದಿಂದ ಗಾರ್ಹಪತ್ಯಾಗ್ನಿಗೆ ಹವಿಷ್ ಶ್ರವಣವೇ ಮೊದಲಾದ ತನ್ನ ಕಾರ್ಯಗಳ ವಿಷಯದಲ್ಲಿ ಐಶ್ವರ್ಯವಿದೆ. ಅಂದರೆ ಅನೇಕ ಹವಿಷ್ ಪದಾರ್ಥಗಳ ಸಾಮೀಪ್ಯವನ್ನು ಅಗ್ನಿಯು ಹೊಂದಿರುವ ಕಾರಣ ಐಶ್ವರ್ಯವುಳ್ಳವನಾಗಿದ್ದಾನೆಂದು 'ಇಂದ್ರ' ಪದವನ್ನು ಅಗ್ನಿಯಲ್ಲಿ ಪ್ರಯೋಗಿಸಿದ್ದು ಕಾಣಿಸುತ್ತದೆ. ಅದರಂತೆ ಇಲ್ಲಿಯೂ ತಿಳಿಯಬೇಕು.

'ಅಗ್ನಿನಾಮಿತಿ' ಎಂಬ ಭಾಷ್ಯದ ವ್ಯಾಖ್ಯಾನ

ಭಾವದೀಪಃ – ಭಾಷ್ಯೇ ಅಗ್ನೀನಾಮಿತಿ ಬಹುವಚನಂ ಆದಿಪದದ್ವಯಂ ತ್ರಯಾಣಾಮಗ್ನೀನಾಮಕ್ಷಿಸ್ಥತ್ವ ಪ್ರದರ್ಶನಾರ್ಥಮುಕ್ತಮಿತಿ ಭ್ರಾನ್ತಿಂ ನಿರಾಹ – **ಅಗ್ನೀನಾಮಿತೀತಿ** ।। 'ಅಥ ಹೈನಂ ಗಾರ್ಹಪತ್ಯೋऽನುಶಶಾಸ । ಯ ಏಷ ಆದಿತ್ಯೇ ಪುರುಷಃ' ಇತ್ಯಾದೇಃ 'ಅಥ ಹೈನಮನ್ವಾಹಾರ್ಯಪಚನೋऽ ನುಶಶಾಸ । ಯ ಏಷ ಚನ್ದ್ರಮಸಿ ಪುರುಷಃ' ಇತ್ಯಾದೇಃ 'ಅಥ ಹೈನಮಾಹವನೀಯೋऽನುಶಶಾಸ । ಯ ಏಷ ವಿದ್ಯುತಿ ಪುರುಷಃ' ಇತ್ಯಾದೇಃ ಶ್ರವಣಾದ್ ಗಾರ್ಹಪತ್ಯಾದೀನಾಂ ತ್ರಯಾಣಾಂ ಕ್ರಮೇಣಾದಿತ್ಯಾದಿತ್ರಯಸ್ಥತ್ವಮುಚ್ಯತೇ । ತಥಾಚ ಪ್ರಸಿದ್ಧ-ಗಾರ್ಹಪತ್ಯಸ್ಯೈವಾದಿತ್ಯಸ್ಥ ತ್ವಾದಕ್ಷಿಸ್ಥತ್ವಮಿತಿ ಪ್ರದರ್ಶನಾರ್ಥಂ ನತು ತ್ರಯಾಣಾಮಪ್ಯಾದಿತ್ಯಸ್ಥತದ್ಧಾರಾऽಕ್ಷಿಸ್ಥತ್ವೋಕ್ತ್ಯರ್ಥಮಿತ್ಯರ್ಥಃ ।।

ಭಾಷ್ಯದಲ್ಲಿ 'ಅಗ್ನೀನಾಂ' ಎಂಬುದಾಗಿ ಬಹುವಚನಪ್ರಯೋಗವನ್ನು ಮಾಡಿದ್ದಾರೆ. ಮತ್ತು ಎರಡರಲ್ಲೂ ಆದಿ ಪದಗಳ ಪ್ರಯೋಗವಿದೆ. ಇದರಿಂದ ಮೂರು ಅಗ್ನಿಗಳಿಗೆ ಅಕ್ಷಿಸ್ಥತ್ವವನ್ನು ಪ್ರದರ್ಶಿಸಿದ್ದಾರೆಂದು ಭ್ರಾಂತಿ ಬರುತ್ತದೆ. ಅದನ್ನು ನಿರಾಸ ಮಾಡುವುದಕ್ಕಾಗಿ 'ಅಗ್ನೀನಾಮ್ ಇತಿ' ಎಂದು ಹೇಳಿದ್ದಾರೆ.

''ಅಥ ಹೈನಂ ಗಾರ್ಹಪತ್ಯೋ೭ನುಶಶಾಸ । ಯ ಏಷ ಆದಿತ್ಯೇ ಪುರುಷಃ'' ಎಂದು ಗಾರ್ಹಪತ್ಯಾಗ್ನಿಯು ಆದಿತ್ಯನಲ್ಲಿ, ''ಅಥ ಪುರುಷಃ'' ಎಂಬುದಾಗಿ ಅನ್ವಾಹಾರ್ಯಪಚನವೆಂಬ ಅಗ್ನಿಯು ಚಂದ್ರನಲ್ಲಿ, ''ಅಥ ಹೈನಮನ್ವಾಹಾರ್ಯಪಚನೋ೭ನುಶಶಾಸ । ಯ ಏಷ ಚಂದ್ರಮಸಿ ಪುರುಷಃ'' ಎಂದು ಆಹವನೀಯ ಎಂಬ ಅಗ್ನಿಯು ವಿದ್ಯುತ್‌ನಲ್ಲಿ ಕೇಳಿಸುತ್ತಿದೆ. ಆದ್ದರಿಂದ ಗಾರ್ಹಪತ್ಯವೆಂಬ ಅಗ್ನಿಯೇ ಆದಿತ್ಯನಲ್ಲಿದ್ದಾನೆಂದು. ಆದ್ದರಿಂದ ಅವನೇ ಅಕ್ಷಿಯಲ್ಲಿದ್ದಾನೆಂದು ತಿಳಿಯಬೇಕು ಹೊರತು ಮೂರು ಮಂದಿ ಅಗ್ನಿಗಳಿಗೂ ಆದಿತ್ಯಸ್ಥತ್ವವನ್ನು ಹೇಳುವ ಅಭಿಪ್ರಾಯ ಇರುವುದಿಲ್ಲ.

ಅನುವ್ಯಾಖ್ಯಾನದಲ್ಲಿರುವ ಆತ್ಮಶಬ್ದಾರ್ಥದ ಸಂಗ್ರಹ

ಭಾವದೀಪಃ – ಭಾಷ್ಯೇ ವಿಪ್ರತಿಪನ್ನಚಕ್ಷುರನ್ತಃಸ್ಥತ್ವಮಾತ್ರಸ್ಯಾನ್ತರಕ್ಷಣೀತಿ ಶ್ರುತ್ಯನುರೋಧೇನ ಚಕ್ಷುರನ್ತಃಸ್ಥಃ ಇತ್ಯುಕ್ತಾವಪಿ ಸೂತ್ರೇ 'ಅನ್ತಃಸ್ಥಿತ್ವಾ ರಮಣಕೃದನ್ತರಃ

समुदाहृतः । रमणं चात्मशब्देनादेयं मातीति चोच्यते ।।' इत्यनु-भाष्योक्तदिशाऽऽत्मशब्दार्थसङ्ग्रहाय अन्तर इत्युक्तम् । अत एव भाष्ये अमृतत्वादीत्येव हेतूक्तिरिति मत्वा सूत्रभाष्ययोरर्थमाह – विष्णुरेव चक्षुरन्तर इति ।। भाष्येऽप्यन्तस्थो रमणकृदित्यपि योज्यमिति भावः ।

ಭಾಷ್ಯದಲ್ಲಿ ವಿಪ್ರತಿಪನ್ನವಾದ ಚಕ್ಷುರಂತಸ್ಥತ್ವವನ್ನು ಮಾತ್ರ ಅಂತರಕ್ಷಿಣ ಎಂಬ ಶ್ರುತಿಗೆ ಅನುಸಾರಿಯಾಗಿ ಹೇಳಿದ್ದಾರೆ. ಆದರೆ ಸೂತ್ರದಲ್ಲಿ 'ಅಂತಃಸ್ಥಿತ್ವಾ ರಮಣಕೃದಂತರಃ ಸಮುದಾಹೃತಃ ರಮಣಂ ಚಾತ್ಮಶಬ್ದೇನಾದೇಯಂ ಮಾತೀತಿ ಚೋಚ್ಯತೇ ।।' ಎಂಬ ಅನುವ್ಯಾಖ್ಯಾನದ ಮಾತಿನಂತೆ ಆತ್ಮಶಬ್ದಾರ್ಥವನ್ನು ಸಂಗ್ರಹಿಸುವುದಕ್ಕಾಗಿ 'ಅಂತರಃ' ಎಂದು ಹೇಳಿದ್ದಾರೆ.

ಆದ್ದರಿಂದಲೇ ಭಾಷ್ಯದಲ್ಲಿ ಅಮೃತತ್ವಾತ್ ಎಂದೇ ಹೇತು ಮಾಡಿದ್ದಾರೆಂದು ತಿಳಿದು ಸೂತ್ರ ಹಾಗೂ ಭಾಷ್ಯಗಳ ಅರ್ಥವನ್ನು 'ವಿಷ್ಣುರೇವ ಚಕ್ಷುರಂತರಃ' ಎಂದು ಹೇಳಿದ್ದಾರೆ. ಭಾಷ್ಯದಲ್ಲಿಯೂ ಸಹ 'ಅಂತಸ್ಥೋ ರಮಣಕೃತ್' ಎಂಬುದನ್ನು ಯೋಜನೆ ಮಾಡಿಕೊಳ್ಳಬೇಕು.

ಭಾಷ್ಯ ಹಾಗೂ ಸೂತ್ರಗಳಿಗೆ ವಿಸಂವಾದವಿಲ್ಲವೆಂಬ ಸಮರ್ಥನೆ

भावदीपः – यद्वाऽनुभाष्येऽन्तर इत्यस्यान्तःस्थित्वा रमणकृदित्यर्थोक्तावपीह भाष्येऽग्रे ब्रह्मशब्दादीत्यादिपदेनात्मशब्दस्यापि हेतूकरणायान्तरत्वमन्तःस्थत्वमात्रं विवक्षितम् । चक्षुरन्तःस्थ इति भाष्यसूत्राविसंवादाय टीकायां विष्णुरेव चक्षुरन्तर इति व्याख्येयं दर्शितं ज्ञेयम् । अत एव सङ्क्षेपभाष्ये 'पूर्णानन्दोऽन्तरः' इत्यन्तरनयार्थोऽन्तर इत्युक्तिः । तत्वप्रदीपे तु अन्तरशब्देन अन्तःस्थो विवक्षित इत्याद्युक्तम् ।।

ಅಥವಾ ಅನುವ್ಯಾಖ್ಯಾನದಲ್ಲಿ 'ಅಂತರಃ' ಎಂಬುದಕ್ಕೆ 'ಅಂತಃಸ್ಥಿತ್ವಾ ರಮಣಕೃತ್' ಎಂಬರ್ಥವನ್ನು ಹೇಳಿದ್ದರೂ ಸೂತ್ರ ಭಾಷ್ಯಗಳಲ್ಲಿ ಮುಂದೆ 'ಬ್ರಹ್ಮಶಬ್ದಾದಿ' ಎಂಬುದಾಗಿ ಆದಿಪದದಿಂದ ಆತ್ಮಶಬ್ದವನ್ನು ಹೇತು ಮಾಡಿದ್ದಾರೆ. ಆದಕ್ಕೋಸ್ಕರ ಇಲ್ಲಿ ಅಂತಃಸ್ಥತ್ವವನ್ನು ಮಾತ್ರ ವಿವಕ್ಷಿಸಬೇಕು. ಭಾಷ್ಯದಲ್ಲಿ 'ಚಕ್ಷುರಂತಸ್ಥಃ' ಎಂದು ವಿವಕ್ಷಿಸಿದರೆ ಭಾಷ್ಯ ಹಾಗೂ ಸೂತ್ರಗಳಿಗೆ ಅವಿಸಂವಾದ ಬರುತ್ತದೆಂದು

ಟೀಕೆಯಲ್ಲಿ 'ವಿಷ್ಣುರೇವ ಚಕ್ಷುರಂತರಃ' ಎಂದು ಹೇಳಿದ್ದಾರೆ. ತತ್ವಪ್ರದೀಪದಲ್ಲಾದರೂ ಅಂತರ ಶಬ್ದದಿಂದ ಅಂತಃಸ್ಥನಾಗಿದ್ದಾನೆಂಬ ಅರ್ಥವನ್ನೇ ವಿವಕ್ಷಿಸಿದ್ದಾರೆ.

'ಲಿಂಗಾತ್' ಎಂದು ಹೇಳದೆ, 'ಉಪಪತ್ತೇಃ' ಎಂದೇಕೆ ಹೇಳಿರುವರು ?

भावदीपः – सूत्रे भाष्ये च लिङ्गादित्यनुक्त्वा उपपत्तेरित्युक्तिर्लिङ्ग-निरवकाशत्वाय । नचानुक्तस्य लिङ्गस्य तदुक्तिर्युक्तेति तल्लब्धं हेतुमाह – एतदमृतमिति ।। तन्निरवकाशत्वोक्तिपरतया सूत्रशेषभाष्यं व्याचष्टे – अमृतत्वादेश्चेति ।।

ಸೂತ್ರದಲ್ಲಿ ಹಾಗೂ ಭಾಷ್ಯದಲ್ಲಿ 'ಲಿಂಗಾತ್' ಎಂದು ಹೇಳದೆ 'ಉಪಪತ್ತೇಃ' ಎಂದು ಹೇಳಿದ್ದರಿಂದ ಲಿಂಗವು ನಿರವಕಾಶವಾಗಿದೆಯೆಂದು ತಿಳಿಸಿದ್ದಾರೆ. ಅನುಕ್ತವಾದ ಲಿಂಗಕ್ಕೆ ನಿರವಕಾಶತ್ವ ಹೇಳುವುದು ಅಯುಕ್ತವಲ್ಲವೇ ? ಎಂಬ ಪ್ರಶ್ನೆಗೆ ಅದರಿಂದ ತಿಳಿಯುವ ಹೇತುವನ್ನು 'ಏತದಮೃತಮ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಆ ಲಿಂಗಗಳಿಗೆ ನಿರವಕಾಶತ್ವವನ್ನು ಹೇಳುವ ಮೂಲಕ ಸೂತ್ರಶೇಷವನ್ನು ವ್ಯಾಖ್ಯಾನಿಸುವ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಅಮೃತತ್ವಾದೇಃ' ಇತ್ಯಾದಿಯಾಗಿ.

ಇದು ಮೂರನೆಯ ಹೇತು

भावदीपः – इत्यादिनेत्यादिपदोक्तं दर्शयन् हेतावियं तृतीयेत्याह – त्रिपादिति ।। पुरुषसूक्ते । अभयमिति काठके । भाष्ये तस्यैवेत्युक्ति-लब्धमन्यत्रानवकाशत्वं व्यनक्ति – नचेति ।। तत्र हेत्वाकाङ्क्षायाम् इत्यादिनेति भाष्यस्थादिपदेनोपात्तं वाक्यं 'म्रियन्ते पञ्चदेवताः इति ऋग्भाष्यं हृदि कृत्वा प्रकारान्तरेणाऽऽह – परिम्रियन्त इति ।।

'ಇತ್ಯಾದಿನಾ' ಎಂಬಲ್ಲಿರುವ ಆದಿಪದದ ಅರ್ಥವನ್ನು ತಿಳಿಸುತ್ತಾ ಮೂರನೆಯ ಹೇತುವೆಂದು 'ತ್ರಿಪಾತ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. 'ತ್ರಿಪಾತ್' ಎಂಬುದು ಪುರುಷಸೂಕ್ತದ ಮಂತ್ರ. 'ಅಭಯಂ' ಎಂಬುದು ಕಾಠಕದ ಮಂತ್ರ. ಭಾಷ್ಯದಲ್ಲಿ 'ತಸ್ಯೈವ' ಎಂದು ಹೇಳಿದ್ದರಿಂದ ಲಬ್ಧವಾದ ಅರ್ಥವು ಬೇರೆಲ್ಲೂ ಬರುವುದಿಲ್ಲವೆಂದು 'ನಚ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಈ ವಿಷಯದಲ್ಲಿ ಹೇತುವಿನ ಆಕಾಂಕ್ಷೆ ಬಂದರೆ ಭಾಷ್ಯದ 'ಇತ್ಯಾದಿನಾ' ಎಂಬಲ್ಲಿರುವ ಆದಿಪದದಿಂದ ಸ್ವೀಕರಿಸಲ್ಪಟ್ಟ 'ಮ್ರಿಯಂತೇ ಪಂಚದೇವತಾಃ' ಎಂಬ ಋಗ್‌ಭಾಷ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತೊಂದು ಪ್ರಕಾರದಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ 'ಪರಿಮ್ರಿಯಂತೇ' ಇತ್ಯಾದಿಯಾಗಿ.

ಐತರೇಯಬ್ರಾಹ್ಮಣದಲ್ಲಿ ಹಾಗೂ ತೈತ್ತಿರೀಯದಲ್ಲಿ ಅಗ್ನಿಪರ ವಾಕ್ಯಗಳು

ಭಾವದೀಪಃ – ಐತರೇಯಬ್ರಾಹ್ಮಣೇ 'ತಮೇತಾಃ ಪರಿ' ಇತಿ । ಲಕ್ಷಣೇ ಕರ್ಮಪ್ರವಚನೀಯಃ ತೇನ ಕಾರ್ಯಬ್ರಹ್ಮಣಾ ನಿಮಿತ್ತೇನೇತ್ಯರ್ಥಃ । ಋಗ್ಭಾಷ್ಯಟೀಕಾಯಾಮ್ 'ಏಷ ವೈ ಬ್ರಹ್ಮ ಯೋऽಯಂ ಪವತೇ ತಮೇತಾಃ' ಇತಿ ಪೂರ್ವವಾಕ್ಯೋದಾಹರಣೇನ ವಾಯುಪರತಯಾ ವ್ಯಾಖ್ಯಾನಾತ್ । 'ಭೀಷಾ' ಇತಿ ತೈತ್ತಿರೀಯೇ ಭೀಷಾ ಭಯೇನ ಅಸ್ಮಾದಸ್ಯ । 'ಭಯಾದಸ್ಯಾಗ್ನಿಃ' ಇತಿ ಶ್ರುತ್ಯನ್ತರಾತ್।

ಐತರೇಯ ಬ್ರಾಹ್ಮಣದಲ್ಲಿ 'ತಮೇತಾಃ ಪರಿ' ಎಂದಿದೆ. ಲಕ್ಷಣಾರ್ಥದಲ್ಲಿ 'ಕರ್ಮಪ್ರವಚನೀಯ' ಸಂಜ್ಞೆಯು ಬಂದಿದೆ. ಇದರಿಂದ ಕಾರ್ಯ ಬ್ರಹ್ಮನೆಂಬ ನಿಮಿತ್ತದಿಂದ ಎಂಬರ್ಥವು ಬಂದಿದೆ. ಋಗ್‌ಭಾಷ್ಯ ಟೀಕೆಯಲ್ಲಿ ''ಏಷ ವೈ ಬ್ರಹ್ಮ'' ಎಂಬ ಹಿಂದಿನ ವಾಕ್ಯವನ್ನು ಉದಾಹರಿಸುವ ಮೂಲಕ ವಾಯುಪರವಾಗಿ ವ್ಯಾಖ್ಯಾನಿಸಿದ್ದಾರೆ. ''ಭೀಷಾಸ್ಮಾತ್'' ಎಂಬುದಾಗಿ ತೈತ್ತಿರೀಯದಲ್ಲಿ ''ಭೀಷಾ = ಭಯದಿಂದ ಅಸ್ಮಾತ್ = ಅಗ್ನಿಗೆ ಎಂದು ಕೇಳಿಸುತ್ತಿದೆ.

ನ್ಯಾಯವಿವರಣದಿಂದ ವಿರೋಧವಿಲ್ಲ

ಭಾವದೀಪಃ – ಏತೇನಾಭ್ಯಾಸಾರ್ಥವಾದಸಹಿತಶ್ರುತಿಭ್ಯೋ ನಿರವಕಾಶೋಪಪತ್ತೇರೇವ ಪ್ರಾಬಲ್ಯಮಿತಿ ನ್ಯಾಯವಿವರಣೋಕ್ತಂ ಲಿಙ್ಗನಿರವಕಾಶತ್ವಂ ವಿವೃತಂ ಧ್ಯೇಯಮ್ । ನನ್ವೇವಂ ತದ್ವಿರೋಧೋऽಗ್ರೇತನ ಭಾಷ್ಯಸ್ಯೇತ್ಯತೋ ನಿರವಕಾಶೋಪಪತ್ತೇರೇವ ಪ್ರಾಬಲ್ಯಮಿತ್ಯೇವಕಾರಾರ್ಥಂ ವ್ಯಞ್ಜಯನ್ನವತಾರಯತಿ – ಯದೇತಿ ।।

ಹೀಗೆ ಹೇಳಿದ್ದರಿಂದ ಅಭ್ಯಾಸ ಅರ್ಥವಾದ ಸಹಿತವಾದ ಶ್ರುತಿಗಳಿಂದ ನಿರವಕಾಶವಾದ ಉಪಪತ್ತಿಯೇ ಪ್ರಬಲವೆಂದು ನ್ಯಾಯವಿವರಣದಲ್ಲಿ ಹೇಳಿದ್ದನ್ನು ವಿವರಿಸಿದಂತಾಯಿತು. ಹಾಗಾದರೆ ಮುಂದಿನ ಭಾಷ್ಯಕ್ಕೆ ನ್ಯಾಯವಿವರಣದ ಮಾತಿನಿಂದ ವಿರೋಧ ಬರುತ್ತದಲ್ಲವೆ ? ಎಂಬ ಪ್ರಶ್ನೆಗೆ

ನಿರವಕಾಶವಾದ ಉಪಪತ್ತಿಯೇ ಪ್ರಬಲವೆಂದು ಏವಕಾರಾರ್ಥವನ್ನು ಸ್ಪಷ್ಟಪಡಿಸುತ್ತಾ ವಿವರಿಸುತ್ತಿದ್ದಾರೆ 'ಯದಾ' ಇತ್ಯಾದಿಯಾಗಿ.

ಶ್ರುತಿಯು ಸ್ವಾಭಾವಿಕವಾಗಿಯೇ ಪ್ರಬಲ

ಭಾವದೀಪಃ – ಉಭಯಥಾಪೀತಿ ।। ನಿರವಕಾಶತ್ವಾನೇಕತ್ವಾಭ್ಯಾಮಿತ್ಯರ್ಥಃ । ನಿರವಕಾಶತ್ವಂ ಚ ಪ್ರಾಗೇವೋಕ್ತಮಿತ್ಯಾಶಯಃ । ಆದಿಪದೇನಾತ್ಮಶಬ್ದೋ ಗ್ರಾಹ್ಯಃ । ಕಿಮಿತ್ಯೇವಕಾರಾರ್ಥೋಕ್ತ್ಯಾ ತದ್ವಿರೋಧೋऽಪಾಸ್ತ ಇತಿ ಭಾವಃ । ಶ್ರುತಿತोऽಪೀತ್ಯುಕ್ತ್ಯಾ ಜಾತ್ಯಾಪಿ ಪ್ರಾಬಲ್ಯಂ ಸೂಚಯತಿ – ಬಲವತ್ ಶ್ರುತೀತಿ ।।

'ಉಭಯಥಾಪಿ' ಎಂದರೆ ನಿರವಕಾಶ ಹಾಗೂ ಅನೇಕತ್ವಲಿಂಗಗಳಿಂದ ಎಂದರ್ಥ. ನಿರವಕಾಶತ್ವವನ್ನು ಈ ಹಿಂದೆಯೇ ಹೇಳಿದ್ದಾಗಿದೆ. ಆದಿ ಪದದಿಂದ ಆತ್ಮ ಶಬ್ದವನ್ನು ಸ್ವೀಕರಿಸಬೇಕು. ಹೀಗೆ ಏವಕಾರದ ಅರ್ಥವನ್ನು ಹೇಳಿದ್ದರಿಂದ ವಿರೋಧವನ್ನು ಪರಿಹರಿಸಿದಂತಾಯಿತು. ''ಶ್ರುತಿತೋऽಪಿ'' ಎಂದು ಹೇಳಿದ್ದರಿಂದ ಸ್ವಾಭಾವಿಕವಾಗಿಯೂ ಪ್ರಬಲವಾಗಿದೆ ಎಂದು 'ಬಲವತ್ ಶ್ರುತಿ' ಎಂಬುದರಿಂದ ಹೇಳುತ್ತಿದ್ದಾರೆ.

'ಅಹಂ' ಶಬ್ದವು ಆತ್ಮನಲ್ಲಿ ಸ್ವರಸವಾಗುತ್ತದೆ

ಭಾವದೀಪಃ – ಕುಶಲಂ ನ ಇತ್ಯಾದಾವಿವ ವಕ್ತರಿ ಸ್ವರಸಸ್ಯಾಹಂಶಬ್ದಸ್ಯಾನ್ಯ-ಪರತ್ವಮನ್ಯಾಯ್ಯಮಿತಿ ಶಙ್ಕಾನುತ್ತಯೇ ಹೇತ್ವಂಶಾನುವಾದಃ । ಆದಿತ್ಯಸ್ಥತ್ವಲಿಙ್ಗಸ್ಯಾಪಿ ಸಮನ್ವಯಾರ್ಥಮಿತ್ಯುಕ್ತಮುತ್ತರವಾಕ್ಯಸಙ್ಗತ್ಯರ್ಥಮನುವಾದೇನ ವ್ಯನಕ್ತಿ – ತದಾದಿತ್ಯಸ್ಥोऽಪೀತಿ ।। ಶ್ರುತೇರಗ್ನಿಯುಕ್ತಾಹಂಶಬ್ದಸ್ಯ ಶಾಸ್ತ್ರದೃಷ್ಟಿಸೂತ್ರ ಏವೋಕ್ತತ್ವಾದಾಹ – ಸ್ಮಾರಯತೀತಿ ।। ಸ್ಮಾರಣಂ ಚ ಪೂರ್ವೋಕ್ತಾಜ್ಞಾನೇನೌಪಚಾರಿಕಮಿತಿ ಶಙ್ಕಿತತ್ವಾತ್ ಕೃತಮ್। ಸ್ಮಾರಯತಿ ಸ್ಮೃತ್ಯಾ ದರ್ಶಯತೀತಿ ವಾऽರ್ಥಃ ।

''ಕುಶಲಂ ನಃ'' ಎಂಬ ಪ್ರಯೋಗದಂತೆ ಅಹಂ ಶಬ್ದವನ್ನು ಆತ್ಮನಲ್ಲಿ ಸ್ವರಸವಾಗಿ ಕೂಡಿಸಲು ಬರುವಾಗ ಅನ್ಯ ಪರತ್ವವನ್ನು ಒಪ್ಪುವುದು ಅನ್ಯಾಯ. ಈ ಶಂಕೆಯು ಹುಟ್ಟಬಾರದೆಂದು ಹೇತ್ವಂಶವನ್ನು ಅನ್ವಯ ಮಾಡಿದ್ದಾರೆ. ಆದಿತ್ಯಸ್ಥತ್ವವೆಂಬ ಲಿಂಗದ ಸಮನ್ವಯಕ್ಕೋಸ್ಕರವೆಂಬ ಉತ್ತರ ವಾಕ್ಯದ

ಸಂಗತಿಗೋಸ್ಕರ ಅನುವಾದಮಾಡಿ ವ್ಯಾಖ್ಯಾನಿಸುತ್ತಿದ್ದಾರೆ 'ತದಾದಿಸ್ಥೋಪಿ' ಎಂಬ ವಾಕ್ಯದಿಂದ, ಶ್ರುತಿಗೆ ಅಗ್ನಿಪ್ರಯುಕ್ತವಾದ ಅಹಂ ಶಬ್ದವನ್ನು 'ಶಾಸ್ತ್ರದೃಷ್ಟ್ಯಾ' ಸೂತ್ರದಲ್ಲಿ ಹೇಳಿದಂತೆ ವ್ಯಾಖ್ಯಾನಿಸಬಹುದೆಂದು ''ಸ್ಮಾರಯತಿ'' ಎಂದು ಹೇಳಿದ್ದಾರೆ. ಸ್ಮರಣೆಯನ್ನಾದರೂ ಹಿಂದೆ ಹೇಳಿದ ಅಜ್ಞಾನಪ್ರಯುಕ್ತವಾಗಿ ಔಪಚಾರಿಕವಾಗಿ ತಿಳಿಯಬೇಕು. ಸ್ಮಾರಯತಿ ಎಂಬ ಶಬ್ದಕ್ಕೆ ಸ್ಮೃತಿಯಿಂದ ತೋರಿಸುತ್ತಾರೆಂದರ್ಥ.

ಅಭ್ಯಾಸ ಹಾಗೂ ಅರ್ಥವಾದಗಳು ಸಾವಕಾಶವಾಗಿವೆ

भावदीपः – स्मृतावीशेशमिति स्वातन्त्र्यरूपनिमित्तोक्तिः । सर्वशब्दाः भूतानि विष्णुर्भुवनानि विष्णुः प्राणः सर्वाणि भूतानि मनुरभवम्' इत्यादित्यस्थभूतमन्वादिशब्दाः नाभेदनिमित्तेनेत्याह – **सतीति** ।। एतेन निरवकाशोपपत्तेरेवेत्युक्तिलब्धमभ्यासार्थवादयोः सावकाशत्वं भाष्ये व्यक्तीकृतमनुवादेन दर्शयति – **एवं श्रुतेरिति** ।। अग्निप्रयुक्ताहंशब्दस्येत्यर्थः। सोऽहमस्मीत्यादिभाष्यस्थादिपदार्थः – **अभ्यास इत्यादि** ।। एतत्प्रकरण-श्रुताग्निगार्हपत्यादिशब्दानांप्रसिद्धाग्निपरत्वेऽप्यग्निप्रयुक्ताहं शब्दस्या-ग्न्यन्तर्यामिपरत्वेनाग्निश्रुतित्वाभावात् तद्घटितोऽभ्यासोऽर्थवादश्च तदन्तर्यामिनिष्ठ इत्यर्थः । अहमादिपदानामन्तर्यामिणि प्रवृत्तिप्रकारं प्रागेवावोचाम ।।१३।।

ಸ್ಮೃತಿಯಲ್ಲಿ 'ಈಶೇಶಮ್' ಎಂಬ ಪದದಿಂದ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ಹೇಳಿದ್ದಾರೆ.

'ಸರ್ವಶಬ್ದಾಃ' ಎಂದರೆ 'ಭೂತಾನಿ ವಿಷ್ಣುಃ ಭುವನಾನಿ ವಿಷ್ಣುಃ ಪ್ರಾಣಃ ಸರ್ವಾಣಿ ಭೂತಾನಿ ಮನುರಭವಮ್' ಎಂಬುದಾಗಿ ಆದಿತ್ಯಸ್ಥವಾದ ಭೂತ ಹಾಗೂ ಮನ್ವಾದಿ ಶಬ್ದಗಳು ಅಭೇದದ ವಿವಕ್ಷೆಯಿಂದ ಪ್ರಯೋಗಿಸಲ್ಪಟ್ಟಿಲ್ಲವೆಂದು 'ಸತಿ' ಎಂಬ ವಾಕ್ಯದಿಂದ ಹೇಳಿದ್ದಾರೆ.

ಹಿಂದೆ ಹೇಳಿದ ಪ್ರಕಾರವಾಗಿ ''ನಿರವಕಾಶೋಪಪತ್ತೇರೇವ'' ಎಂಬ ಮಾತಿನಿಂದ ಅಭ್ಯಾಸ ಮತ್ತು ಅರ್ಥವಾದಗಳು ಸಾವಕಾಶವಾಗಿವೆ ಎಂಬುದನ್ನು ಭಾಷ್ಯದಲ್ಲಿ ಪ್ರಕಟಪಡಿಸಿದ್ದಾರೆ. ಅದನ್ನು ಅನುವಾದ ಮಾಡುವ ಮೂಲಕ ''ಏವಂ ಶ್ರುತೇಃ''ಎಂಬ ವಾಕ್ಯವು ಹೊರಟಿದೆ. ''ಶ್ರುತೇಃ'' ಎಂದರೆ ಅಗ್ನಿಯಿಂದ

ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದ ಎಂದರ್ಥ. ''ಸೋऽಹಮಸ್ಮಿ'' ಇವೇ ಮೊದಲಾದ ಭಾಷ್ಯದಲ್ಲಿರುವ 'ಆದಿ' ಪದದ ಅರ್ಥವು ಅಭ್ಯಾಸವೇ ಇತ್ಯಾದಿಯಾಗಿ ಹೇಳಿದ್ದಾರೆ.

ಈ ಪ್ರಕರಣದಲ್ಲಿ ಕೇಳಿಬರುವ ಅಗ್ನಿ, ಗಾರ್ಹಪತ್ಯವೇ ಮೊದಲಾದ ಶಬ್ದಗಳು ಪ್ರಸಿದ್ಧವಾದ ಅಗ್ನಿಯ ಪರವಾಗಿಯೇ ಇವೆ. ಆದರೆ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅವನ ಅಂತರ್ಯಾಮಿ ಪರವಾಗಿ ಇದೆ. ಆದ್ದರಿಂದ ಈ ಶ್ರುತಿಗಳು ಅಗ್ನಿಶ್ರುತಿಗಳೆಂದು ಹೇಳಲು ಬರುವುದಿಲ್ಲ. ಆದ್ದರಿಂದ ಈ ಶ್ರುತಿಗಳಲ್ಲಿರುವ ಅಭ್ಯಾಸ ಅಥವಾ ಅರ್ಥವಾದಗಳೂ ಸಹ ಅಗ್ನಿಯ ಅಂತರ್ಯಾಮಿಪರವಾಗಿಯೇ ಇವೆ. ''ಅಹಂ'' ಇವೇ ಮೊದಲಾದ ಶಬ್ದಗಳು ಹೇಗೆ ಅಂತರ್ಯಾಮಿ ಪರವಾಗಿ ಪ್ರವೃತ್ತವಾಗಿವೆ ಎಂಬುದನ್ನು ಅಂತಿಮಪ್ರಾಣಾಧಿಕರಣದಲ್ಲಿ ಹೇಳಲಾಗಿದೆ.

ಬ್ರಹ್ಮಸೂತ್ರ

'ಸ್ಥಾನಾದಿವ್ಯಪದೇಶಾಚ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। स्थानादिव्यपदेशाच्च ।।१ - २ - १४ ।।

ಚಕ್ಷುರಿಂದ್ರಿಯವೆಂಬ ಸ್ಥಾನದಲ್ಲಿ ಅಸಂಗವೆಂಬ ಶಕ್ತಿವಿಶೇಷವಿದೆ. ಅಂತರ್ಯಾಮಿಯಾದ ವ್ಯಕ್ತಿಯಲ್ಲಿ ವಿಲಕ್ಷಣಸಾಮರ್ಥ್ಯವಿರುವುದರಿಂದ ಚಕ್ಷರಿಂದ್ರಿಯದಲ್ಲಿಯೂ ಅಸಂಗವೆಂಬ ಶಕ್ತಿಯು ಬಂದಿದೆ. ಆದ್ದರಿಂದ ಚಕ್ಷುರಿಂದ್ರಿಯದಲ್ಲಿರುವವನು ವಿಷ್ಣುವೇ ಆಗಿದ್ದಾನೆ.

ಬ್ರಹ್ಮನಿಗೆ ಸ್ಥಾನವಾದ ಕಣ್ಣಿನಲ್ಲಿ ಬ್ರಹ್ಮನ ಅಸಂಗ ಶಕ್ತಿ ಬಂದಿರುತ್ತದೆ. 'ವ್ಯಪದೇಶಾತ್'= ''ಸರ್ಪಿರ್ವಾ ಉದಕಂ ವಾ ಸಿಂಚತಿ'' ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ಚಕ್ಷುರಂತಸ್ಥನಾದವನಿಗೆ ಅಸಂಗವೆಂಬ ಧರ್ಮವು ಕೇಳಿಸುತ್ತಿದೆ. ಚಕ್ಷುರಿಂದ್ರಿಯಕ್ಕೂ ಅಸಂಗವೆಂಬ ಧರ್ಮವಿರುವುದರಿಂದ, ಚಕ್ಷುರಿಂದ್ರಿಯದಲ್ಲಿ ನಿಯಾಮಕನಾಗಿರುವವನು ವಿಷ್ಣುವೇ ಆಗಿದ್ದಾನೆ.

ಬ್ರಹ್ಮಸೂತ್ರಭಾಷ್ಯ

ಸ್ಥಾನಶಕ್ತಿಯಿಂದಲೂ ವಿಷ್ಣುವೇ ಅಂತರನು

ಬ್ರಹ್ಮಸೂತ್ರಭಾಷ್ಯಮ್ — 'तद्यदस्मिन् सर्पिर्वोदकं वा सिञ्चति वर्त्मनी एव गच्छति' (छां. ४-१५.) इत्यादिस्थानशक्तिः ।

वामनिर्भामनिरित्याद्यात्मशक्तिश्चोच्यते । तस्य ह्येतल्लिङ्गम् ।

ಅನುವಾದ - ಪರಮಾತ್ಮನು ಕಣ್ಣಿನಲ್ಲಿರುವುದರಿಂದ ಕಣ್ಣಿಗೆ ತುಪ್ಪವನ್ನು ಅಥವಾ ನೀರನ್ನು ಹಾಕಿದರೆ ಅದೇ ದಾರಿಯಲ್ಲಿಯೇ ಹಿಂದೆ ಬರುತ್ತದೆ ಕಣ್ಣಿಗೆ ಅಂಟಿಕೊಳ್ಳುವುದಿಲ್ಲ.'' ಎಂಬುದಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ಸ್ಥಾನಶಕ್ತಿಯು ಹೇಳಲಾಗಿದೆ. ಮತ್ತು 'ವಾಮನಿಃ' 'ಭಾಮನಿಃ' ಎಂಬುದಾಗಿ ಸ್ತ್ರೀ ಪುರುಷರನ್ನು ನಿಯಮನ ಮಾಡುವ ಆತ್ಮಶಕ್ತಿಯನ್ನೂ ಸಹ ಕಣ್ಣಿನಲ್ಲಿರುವ ಭಗವಂತನಿಗೆ ಹೇಳಲಾಗಿದೆ. ಇವೆರಡೂ ಸಹ ವಿಷ್ಣುವಿನ ಲಿಂಗಗಳೇ ಆಗಿವೆ.

ಪ್ರತಿಪದಾರ್ಥ - ಅಸ್ಮಿನ್ = ಈ ಕಣ್ಣಿನಲ್ಲಿ, ಸರ್ಪಿರ್ವಾ = ತುಪ್ಪವನ್ನಾಗಲಿ, ಉದಕಂ ವಾ = ನೀರನ್ನಾಗಲಿ, ಯತ್ = ಬೇರೆ ವಸ್ತುವನ್ನು, ಸಿಂಚತಿ ಚೇತ್ = ಹಾಕಿದರೆ, ತತ್ = ಆ ವಸ್ತುವು, ವರ್ತ್ಮನೀ ಏವ = ಕಣ್ಣಿನ ಮಾರ್ಗದಲ್ಲಿಯೇ, ಗಚ್ಛತಿ = ಹೊರಬರುತ್ತದೆ. ಇತ್ಯಾದಿ = ಇವೇ ಮೊದಲಾದ, ಸ್ಥಾನಶಕ್ತಿಃ = ಸ್ಥಾನ ಶಕ್ತಿಯು, ಛಾಂದೋಗ್ಯದಲ್ಲಿ ಹೇಳಲ್ಪಟ್ಟಿದೆ. ಮತ್ತು, ಸಃ = ಅವನು, ವಾಮನಿಃ = ಸ್ತ್ರೀಯರ ನಿಯಾಮಕನು, ಭಾಮನಿಃ = ಪುರುಷರ ನಿಯಾಮಕನು, ಇತ್ಯಾದಿ = ಇವೇ ಮೊದಲಾಗಿ ಆತ್ಮಶಕ್ತಿಃ = ಸ್ವರೂಪಶಕ್ತಿಯು, ಉಚ್ಯತೇ = ಹೇಳಲ್ಪಟ್ಟಿದೆ. ಏತತ್ = ಈ ಎಲ್ಲ ಧರ್ಮಗಳು, ವಿಷ್ಣುವಿನದ್ದೇ ಆಗಿವೆಯೆನ್ನಲು ಲಿಂಗಂ = ಕಾರಣಗಳು

ವಿಷ್ಣುವಿನ ಅಸಾಧಾರಣ ಗುಣಗಳು

ಬ್ರಹ್ಮಸೂತ್ರಭಾಷ್ಯಮ್ — 'स ईशः सोऽसपत्नः स हरिः सः परः स परोवरीयान् यदिदं

चक्षुषि सर्पिर्वोदकं वा सिञ्चति वर्त्मनी एव गच्छति स वामनः स भामनः स आनन्दः सोऽच्युतः' इति हि चतुर्वेदशिखायाम् ।।

ಅನುವಾದ - ವಿಷ್ಣುವೇ ನಿಯಾಮಕನು, ಶತ್ರುಗಳಿಲ್ಲದವನು, ಪಾಪಪರಿಹಾರಕನು, ಸರ್ವೋತ್ತಮನು, ಉತ್ತಮರಾದ ಬ್ರಹ್ಮಾದಿದೇವತೆಗಳಿಗಿಂತಲೂ ಶ್ರೇಷ್ಠನಾದವನು, ಅವನ ಸಾನ್ನಿಧ್ಯದಿಂದ ಕಣ್ಣಿನಲ್ಲಿ ತುಪ್ಪ ನೀರು ಮೊದಲಾದವುಗಳನ್ನು ಹಾಕಿದರೆ ಅದೇ ಮಾರ್ಗದಲ್ಲಿಯೇ ಹಿಂದಕ್ಕೆ ಬರುತ್ತವೆ. ಅಂತಹ ವಿಷ್ಣುವೇ ಉತ್ತಮಸ್ತ್ರೀಯರಿಗೆ ಸೌಂದರ್ಯಪ್ರದನು. ಪುರುಷರಿಗೆ ತೇಜಃಪ್ರದನು ಆನಂದರೂಪನು, ಅವನೇ ನಾಶರಹಿತನೂ ಆಗಿದ್ದಾನೆ. ಹೀಗೆ ಚತುರ್ವೇದಶಿಖೆಯಲ್ಲಿ ಹೇಳಲ್ಪಟ್ಟಿದೆ..

ಪ್ರತಿಪದಾರ್ಥ - ಸಃ = ಚಕ್ಷುರಿಂದ್ರಿಯದಲ್ಲಿರುವ ವಿಷ್ಣುವೇ, ಈಶಃ = ನಿಯಾಮಾಕನಾಗಿದ್ದಾನೆ, ಸಃ = ಅವನೇ, ಅಸಪತ್ನಃ = ಶತ್ರುಗಳಿಲ್ಲದವನಾಗಿದ್ದಾನೆ, ಸಃ = ಅವನೇ, ಹರಿಃ = ಪಾಪಪರಿಹಾರಕನಾಗಿದ್ದಾನೆ, ಸಃ = ಅವನೇ, ಪರಃ = ಶ್ರೇಷ್ಠನಾಗಿದ್ದಾನೆ, ಸಃ = ಅವನೇ, ಪರೋವರೀಯಾನ್ = ಬ್ರಹ್ಮಾದಿದೇವತೆಗಳಿಗಿಂತಲೂ ಉತ್ತಮನಾಗಿದ್ದಾನೆ. ಯತ್ = ಯಾರ ಸಾಮರ್ಥ್ಯದಿಂದ, ಚಕ್ಷುಷಿ = ಕಣ್ಣಿಗೆ, ಸರ್ಪಿವಾ = ತುಪ್ಪವನ್ನಾಗಲಿ, ಉದಕಂ ವಾ = ನೀರನ್ನಾಗಲಿ, ಸಿಂಚತಿ = ಹಾಕಿದರೆ, ವರ್ತ್ಮನೀ ಏವ = ಹಾಕಿದ ಮಾರ್ಗದಲ್ಲಿಯೇ, ಗಚ್ಛತಿ = ಹೊರಬರುತ್ತದೆ. ಸಃ = ಅಂತಹ ಚಕ್ಷುರಿಂದ್ರಿಯದಲ್ಲಿರುವ ವಿಷ್ಣುವೇ, ವಾಮನಃ = ಸ್ತ್ರೀಯರಿಗೆ ಸೌಂದರ್ಯವನ್ನು ನೀಡುವವನು, ಸಃ = ಅವನೇ, ಭಾಮನಃ = ಪುರುಷರಿಗೆ ತೇಜಸ್ಸನ್ನು ನೀಡುವವನು. ಸಃ = ಅವನೇ, ಆನಂದಃ = ಆನಂದಮಯನು, ಸಃ = ಅವನೇ, ಅಚ್ಯುತಃ = ನಾಶವಿಲ್ಲದವನು, ಇತಿ = ಹೀಗೆ, ಚತುರ್ವೇದಶಿಖಾಯಾಂ = ಚತುರ್ವೇದಶಿಖೆಯಲ್ಲಿ ಹೇಳಲ್ಪಟ್ಟಿದೆ.

ಅಸಂಗನ ಸಂಪರ್ಕದಿಂದ ಚಕ್ಷುರಿಂದ್ರಿಯವು ಅಸಂಗವಾಗಿದೆ

ब्रह्मसूत्रभाष्यम् – 'यत्स्थानत्वादिदं चक्षुरसङ्गं सर्ववस्तुभिः ।

स वामनः परोऽस्माकं गतिरित्येव चिन्तयेत् ।।' इति वामने ।।१४।।

ಅನುವಾದ - ಯಾರ ಸಂಪರ್ಕದಿಂದ ನಮ್ಮ ಕಣ್ಣು ಸಕಲ ಪದಾರ್ಥಗಳಿಂದ ಅಸಂಗವಾಗಿದೆಯೋ ಅಂತಹ ಶ್ರೇಷ್ಠನಾದ ವಾಮನನೆನಿಸಿದ ಭಗವಂತನೇ ನಮಗೆ ಗತಿಯೆಂದು ಉಪಾಸನೆ ಮಾಡಬೇಕು. ಎಂದು ವಾಮನ ಪುರಾಣದಲ್ಲಿ ಹೇಳಲ್ಪಟ್ಟಿದೆ.

ಪ್ರತಿಪದಾರ್ಥ - ಇದಂ ಚಕ್ಷುಃ = ನಮ್ಮೆಲ್ಲರ ಕಣ್ಣು, ಯತ್‌ಸ್ಥಾನತ್ವಾತ್ = ಯಾರ ಸಂಪರ್ಕದಿಂದ, ಸರ್ವವಸ್ತುಏಗೆ = ಸಕಲ ಪದಾರ್ಥಗಳಿಂದ, ಅಸಂಗಂ = ಸಂಪರ್ಕ ರಹಿತವಾಗುತ್ತದೊ, ಸಃ = ಅಂತಹ, ಸರ್ವಃ = ಸರ್ವೋತ್ತಮನಾದ, ವಾಮನಃ = ಸೌಂದರ್ಯಪ್ರದನಾದ ಮಹಾವಿಷ್ಣುವೇ, ನಃ = ನಮಗೆ, ಗತಿಃ = ಆಶ್ರಯನು, ಇತ್ಯೇವ = ಇದೇ ಪ್ರಕಾರದಲ್ಲಿ, ಚಿಂತಯೇತ್ = ಉಪಾಸನೆ ಮಾಡಬೇಕು, ಇತಿ = ಹೀಗೆ, ವಾಮನೇ = ವಾಮನ ಪುರಾಣದಲ್ಲಿ ಹೇಳಲ್ಪಟ್ಟಿದೆ.

ಸತ್ತರ್ಕದೀಪಾವಳಿ

ಅಕ್ಷಿಸ್ಥನಾದವನು ವಿಷ್ಣುವೆನ್ನಲು ಮತ್ತೊಂದು ಹೇತು

स्थानादिव्यपदेशाच्च ।। १-२-१४ ।।

इतोऽप्यक्षिस्थपुरुषो विष्णुरेवेत्येतत्प्रतिपादकं सूत्रमुपन्यस्य व्याचष्टे – स्थानादित्यादिना ।। अयमर्थः – असङ्गो विष्णुरेव अक्षिस्थः पुरुष इति ज्ञापयितुं स्थानस्य चक्षुषोऽसङ्गत्वं निर्दिश्यते । 'चक्षुषि सर्पिर्वोदकं वा सिञ्चति वर्त्मनी एव गच्छति' इति, तथा 'एष उ एव भामनिरेष हि सर्वाणि वामानि नयति एष उ एव भामनिरेष हि सर्वेषु लोकेषु भाति' इत्यक्षिस्थः पुरुषः परमात्मधर्मविशिष्टत्वेनोच्यते । अयमुक्तलक्षणो विष्णुरेवेत्यत्र श्रुत्यन्तरं दर्शयति – स ईश इति ।। 'कं ब्रह्म खं ब्रह्म' इति यो बृहत्सुखज्ञानः परमात्मा प्रकृतः स एवाक्ष्यन्तरपुरुषोऽभि धीयते ।।

ಅನುವಾದ - ಮತ್ತೊಂದು ಕಾರಣದಿಂದಲೂ ಕಣ್ಣಿನಲ್ಲಿರುವ ಪುರುಷನು ವಿಷ್ಣುವೇ ಆಗಿದ್ದಾನೆಂದು ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನಿಸಿದ್ದಾರೆ - 'ಸ್ಥಾನಾದಿ' ಇತ್ಯಾದಿಯಾಗಿ.

ಒಟ್ಟು ಅರ್ಥ - ಅಸಂಗನಾದ ವಿಷ್ಣುವೇ ಅಕ್ಷಿಸ್ಥನಾದ ಪುರುಷನೆಂದು ತಿಳಿಸಲು ಸ್ಥಾನವಾಗಿರುವ ಚಕ್ಷುರಿಂದ್ರಿಯಕ್ಕೆ ಅಸಂಗಶಕ್ತಿಯನ್ನು ನಿರ್ದೇಶಿಸಲಾಗಿದೆ ''ಚಕ್ಷುಷಿ ಸರ್ಪಿರ್ವೋದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ'' ಎಂದು. ಹಾಗೆಯೇ ''ಏಷ ಉ ಏವ ಭಾಮನಿರೇಷ ಹಿ ಸರ್ವಾಣಿ ವಾಮಾನಿ ನಯತಿ ಏಷ ಉ ಏವ ಭಾಮನಿರೇಷ ಹಿ ಸರ್ವೇಷು ಲೋಕೇಷು ಭಾತಿ'' ಎಂದು ಅಕ್ಷಿಸ್ಥಪುರುಷನು ಪರಮಾತ್ಮನ ಧರ್ಮಗಳಿಂದ ವಿಶಿಷ್ಟನಾಗಿದ್ದಾನೆ. ಇಂತಹವನು ವಿಷ್ಣುವೇ ಆಗಿದ್ದಾನೆನ್ನಲು ಮತ್ತೊಂದು ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳುತ್ತಿದ್ದಾರೆ 'ಸ ಈಶಃ' ಎಂದು. 'ಕಂ ಬ್ರಹ್ಮ ಖಂ ಬ್ರಹ್ಮ' ಎಂಬುದಾಗಿ. ಬಹಳ ಸುಖವುಳ್ಳ ಬಹಳ ಜ್ಞಾನವುಳ್ಳ ಪರಮಾತ್ಮನು ಪ್ರಕೃತನಾಗಿದ್ದಾನೆ. ಅವನೇ ಕಣ್ಣಿನಲ್ಲಿರುವ ಪುರುಷನೆಂದು ಶ್ರುತಿ ಹೇಳುತ್ತಿದೆ.

ತತ್ತ್ವಪ್ರದೀಪ

ವಿಷ್ಣುವೇ 'ವಾಮನಿ' ಹಾಗೂ 'ಭಾಮನಿ' ಆಗಿದ್ದಾನೆ

तत्वप्रदीपः – ''स्थानादिव्यपदेशाच्च'' ।। 'वामं' = सौन्दर्यं, 'भामं' = तेजः; सौन्दर्यतेजःप्रधानत्वात् स्त्रीपुरुषा वामभामशब्दशब्दिताः । तन्नेता वामनिर्भामनिश्च । भानाद्वा भामनिः । 'यदिदं चक्षुषि' इत्यादिश्रुतरेयमर्थः – यस्माद्धरेः सन्निहितादस्मिंश्चक्षुषि सर्पिर्वोदकं वा किञ्चित् सिञ्चति चेत्तद्वर्त्मनी एव गच्छति स भामनः स वामन इति ।।छ।।

ಚತುರ್ವೇದಶಿಖೆಯಲ್ಲಿರುವ 'ವಾಮನಃ' ಹಾಗೂ 'ಭಾಮನಃ' ಎಂಬೆರಡು ಶಬ್ದಗಳಿವೆ. 'ವಾಮ' ಎಂದರೆ 'ಸೌಂದರ್ಯ' ಎಂದರ್ಥ. 'ಭಾಮ' ಎಂಬ ಶಬ್ದಕ್ಕೆ 'ತೇಜಸ್ಸು' ಎಂದರ್ಥ. ಸ್ತ್ರೀಯರಲ್ಲಿ ಸೌಂದರ್ಯವು ಪ್ರಧಾನವಾಗಿರುವುದರಿಂದ 'ವಾಮ' ಎಂದು ಕರೆಸಿಕೊಳ್ಳುತ್ತಾರೆ.

ಪುರುಷರಲ್ಲಿ ತೇಜಸ್ಸು ಪ್ರಧಾನವಾಗಿರುವುದರಿಂದ 'ಭಾಮ' ಎಂದು ಕರೆಸಿಕೊಳ್ಳುತ್ತಾರೆ. ಈ ಎಲ್ಲಾ ಸ್ತ್ರೀ ಹಾಗೂ ಪುರುಷರನ್ನು ನಿಯಮನ ಮಾಡುವ ಕಾರಣ ಪರಮಾತ್ಮನು 'ವಾಮನಿಃ ಭಾಮನಿಃ' ಎಂದು ಕರೆಸಿಕೊಳ್ಳುತ್ತಾನೆ. ಆದ್ದರಿಂದ 'ವಾಮಂ ನೇತಾ ಇತಿ ವಾಮನಿಃ ಭಾಮಂ ನೇತಾ ಇತಿ ಭಾಮನಿಃ' ಎಂಬ ನಿಷ್ಪತ್ತಿಯನ್ನು ತಿಳಿಯಬೇಕು. ಅಥವಾ 'ಭಾನಾತ್ ಭಾಮನಿಃ' ಎಂಬ ನಿಷ್ಪತ್ತಿಯನ್ನೂ ಕೂಡ ಹೇಳಬಹುದು. ನಿರಂತವಾಗಿ ಪ್ರಕಾಶಿಸುತ್ತಿರುವನಾದ್ದರಿಂದಲೂ 'ಭಾಮನಿ' ಎಂದು ಕರೆಸಿಕೊಳ್ಳುತ್ತಾನೆ.

'ಯದಿದಂ ಚಕ್ಷುಷಿ' ಎಂಬ ಶ್ರುತಿಯ ಅಭಿಪ್ರಾಯ ಹೀಗಿದೆ - ಯಾವ ಕಾರಣದಿಂದ ಶ್ರೀಹರಿಯು ಚಕ್ಷುರಿಂದ್ರಿಯದಲ್ಲಿ ಸನ್ನಿಹಿತನಾಗಿದ್ದಾನೋ, ಆ ಕಾರಣದಿಂದ ತುಪ್ಪ ಅಥವಾ ನೀರನ್ನು ಕಣ್ಣಿಗೆ ಹಾಕಿದರೆ ಅದು ಅಂಟಿಕೊಳ್ಳುವುದಿಲ್ಲ. ಅದೇ ದಾರಿಯಲ್ಲಿ ಹೊರಬರುತ್ತದೆ. ಅಲ್ಲಿ ಸನ್ನಿಧಾನವನ್ನು ಹೊಂದಿರುವ ಪರಮಾತ್ಮನೇ ವಾಮನ ಹಾಗೂ ಭಾಮನ ಎಂದು ಕರೆಸಿಕೊಳ್ಳುತ್ತಾನೆ ಎಂದು.

ವಿಶೇಷವಿಚಾರ - ಪ್ರಶ್ನೆ - ಪರಮಾತ್ಮನು ಕಣ್ಣಿನಲ್ಲಿ ಮಾತ್ರವಲ್ಲದೇ ಸಮಗ್ರದೇಹದಲ್ಲಿಯೇ ಸನ್ನಿಹಿತನಾಗಿದ್ದಾನೆ. ಆದ್ದರಿಂದ ಕಣ್ಣು ಹೇಗೆ ಪರಮಾತ್ಮನ ಸನ್ನಿಧಾನದಿಂದ ಅಸಂಗವಾಗುತ್ತದೋ, ಸಮಗ್ರದೇಹವೂ ಕೂಡ ಅಸಂಗವಾಗಲಿ.

ಉತ್ತರ - ಪರಮಾತ್ಮನನ್ನು ಪ್ರತಿಯೊಂದು ಅಧಿಷ್ಠಾನದಲ್ಲಿ ಬೇರೆ ಬೇರೆ ಗುಣಗಳಿಂದ ಉಪಾಸನೆ ಮಾಡಬೇಕು. ಕಣ್ಣಿನಲ್ಲಿರುವ ಪರಮಾತ್ಮನನ್ನು ಅಸಂಗ ಎಂಬ ಗುಣದಿಂದ ಉಪಾಸನೆ ಮಾಡಬೇಕೆಂದು ತಿಳಿಸುವುದಕ್ಕಾಗಿ ಶ್ರುತಿಯಲ್ಲಿ ಹೀಗೆ ಹೇಳಿದ್ದಾರೆ ಹೊರತು, ಬೇರೆಡೆ ಸನ್ನಿಹಿತನಾಗಿಲ್ಲ ಎಂದು ಅರ್ಥವಲ್ಲ. 'ತಥಾ ಚೇತೋರ್ಪಣಾರ್ಥಂ ಹಿ ನಿಗದ್ಯತೇ' ಎಂಬುದಾಗಿ ಪ್ರಥಮಪಾದದ ಸೂತ್ರದಲ್ಲಿ ಈ ಪ್ರಶ್ನೆಗೆ ಉತ್ತರಿಸಿದ್ದಾರೆ.

ಸೂತ್ರದಲ್ಲಿರುವ 'ಸ್ಥಾನ' ಶಬ್ದವು ಅಸಂಗ ಎಂಬ ಸ್ಥಾನದ ಶಕ್ತಿಯನ್ನು ಹೇಳುತ್ತಿದೆ. ಕಣ್ಣು ಎಂಬ ಸ್ಥಾನದಲ್ಲಿರುವ ಶಕ್ತಿ ಪರಮಾತ್ಮನ ಶಕ್ತಿಯೇ ಆಗಿದೆ. ಕಣ್ಣಿನಲ್ಲಿ ಸನ್ನಿಹಿತನಾದ ಪರಮಾತ್ಮನ ಅಸಾಧಾರಣಗುಣಗಳು ಈ ಶ್ರುತಿಯಿಂದ ತಿಳಿಯುತ್ತಿದೆ.

ಛಾಂದೋಗ್ಯದಲ್ಲಿ ಬರುವ ಈ ಪ್ರಕರಣ ಹೀಗಿದೆ -

'ಏತಂ ಸಂಯದ್ವಾಮ ಇತ್ಯಾಚಕ್ಷತೇ । ಏತಂ ಹಿ ಸರ್ವಾಣಿ ವಾಮಾನಿ ಅಭಿಸಂಯಂತಿ । ಸರ್ವಾಣಿ ಏನಂ ವಾಮಾನ್ಯಭಿಸಂಯಂತಿ ಯ ಏವಂ ವೇದ ।

ಅನುವಾದ - ಮತ್ತೊಂದು ಕಾರಣದಿಂದಲೂ ಕಣ್ಣಿನಲ್ಲಿರುವ ಪುರುಷನು ವಿಷ್ಣುವೇ ಆಗಿದ್ದಾನೆಂದು ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ವ್ಯಾಖ್ಯಾನಿಸಿದ್ದಾರೆ - 'ಸ್ಥಾನಾದಿ' ಇತ್ಯಾದಿಯಾಗಿ.

ಒಟ್ಟು ಅರ್ಥ - ಅಸಂಗನಾದ ವಿಷ್ಣುವೇ ಅಕ್ಷಿಸ್ಥನಾದ ಪುರುಷನೆಂದು ತಿಳಿಸಲು ಸ್ಥಾನವಾಗಿರುವ ಚಕ್ಷುರಿಂದ್ರಿಯಕ್ಕೆ ಅಸಂಗಶಕ್ತಿಯನ್ನು ನಿರ್ದೇಶಿಸಲಾಗಿದೆ ''ಚಕ್ಷುಷಿ ಸರ್ಪಿರ್ವೋದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ'' ಎಂದು. ಹಾಗೆಯೇ ''ಏಷ ಉ ಏವ ಭಾಮನಿರೇಷ ಹಿ ಸರ್ವಾಣಿ ವಾಮಾನಿ ನಯತಿ ಏಷ ಉ ಏವ ಭಾಮನಿರೇಷ ಹಿ ಸರ್ವೇಷು ಲೋಕೇಷು ಭಾತಿ'' ಎಂದು ಅಕ್ಷಿಸ್ಥಪುರುಷನು ಪರಮಾತ್ಮನ ಧರ್ಮಗಳಿಂದ ವಿಶಿಷ್ಟನಾಗಿದ್ದಾನೆ. ಇಂತಹವನು ವಿಷ್ಣುವೇ ಆಗಿದ್ದಾನೆನ್ನಲು ಮತ್ತೊಂದು ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳುತ್ತಿದ್ದಾರೆ 'ಸ ಈಶಃ' ಎಂದು. 'ಕಂ ಬ್ರಹ್ಮ ಖಂ ಬ್ರಹ್ಮ' ಎಂಬುದಾಗಿ. ಬಹಳ ಸುಖವುಳ್ಳ ಬಹಳ ಜ್ಞಾನವುಳ್ಳ ಪರಮಾತ್ಮನು ಪ್ರಕೃತನಾಗಿದ್ದಾನೆ. ಅವನೇ ಕಣ್ಣಿನಲ್ಲಿರುವ ಪುರುಷನೆಂದು ಶ್ರುತಿ ಹೇಳುತ್ತಿದೆ.

ತತ್ತ್ವಪ್ರದೀಪ

ವಿಷ್ಣುವೇ 'ವಾಮನಿ' ಹಾಗೂ 'ಭಾಮನಿ' ಆಗಿದ್ದಾನೆ

तत्वप्रदीपः – ''स्थानादिव्यपदेशाच्च'' ।। 'वामं' = सौन्दर्यं, 'भामं' = तेजः; सौन्दर्यतेजःप्रधानत्वात् स्त्रीपुरुषा वामभामशब्दशब्दिताः । तन्नेता वामनिर्भामनिश्च । भानाद्वा भामनिः । 'यदिदं चक्षुषि' इत्यादिश्रुतरेयमर्थः – यस्माद्धरेः सन्निहितादस्मिंश्चक्षुषि सर्पिर्वोदकं वा किञ्चित् सिञ्चति चेत्तद्वर्त्मनी एव गच्छति स भामनः स वामन इति ।।छ।।

ಚತುರ್ವೇದಶಿಖೆಯಲ್ಲಿರುವ 'ವಾಮನಃ' ಹಾಗೂ 'ಭಾಮನಃ' ಎಂಬೆರಡು ಶಬ್ದಗಳಿವೆ. 'ವಾಮ' ಎಂದರೆ 'ಸೌಂದರ್ಯ' ಎಂದರ್ಥ. 'ಭಾಮ' ಎಂಬ ಶಬ್ದಕ್ಕೆ 'ತೇಜಸ್ಸು' ಎಂದರ್ಥ. ಸ್ತ್ರೀಯರಲ್ಲಿ ಸೌಂದರ್ಯವು ಪ್ರಧಾನವಾಗಿರುವುದರಿಂದ 'ವಾಮ' ಎಂದು ಕರೆಸಿಕೊಳ್ಳುತ್ತಾರೆ.

ಪುರುಷರಲ್ಲಿ ತೇಜಸ್ಸು ಪ್ರಧಾನವಾಗಿರುವುದರಿಂದ 'ಭಾಮ' ಎಂದು ಕರೆಸಿಕೊಳ್ಳುತ್ತಾರೆ. ಈ ಎಲ್ಲಾ ಸ್ತ್ರೀ ಹಾಗೂ ಪುರುಷರನ್ನು ನಿಯಮನ ಮಾಡುವ ಕಾರಣ ಪರಮಾತ್ಮನು 'ವಾಮನಿಃ ಭಾಮನಿಃ' ಎಂದು ಕರೆಸಿಕೊಳ್ಳುತ್ತಾನೆ. ಆದ್ದರಿಂದ 'ವಾಮಂ ನೇತಾ ಇತಿ ವಾಮನಿಃ ಭಾಮಂ ನೇತಾ ಇತಿ ಭಾಮನಿಃ' ಎಂಬ ನಿಷ್ಪತ್ತಿಯನ್ನು ತಿಳಿಯಬೇಕು. ಅಥವಾ 'ಭಾನಾತ್ ಭಾಮನಿಃ' ಎಂಬ ನಿಷ್ಪತ್ತಿಯನ್ನೂ ಕೂಡ ಹೇಳಬಹುದು. ನಿರಂತವಾಗಿ ಪ್ರಕಾಶಿಸುತ್ತಿರುವನಾದ್ದರಿಂದಲೂ 'ಭಾಮನಿ' ಎಂದು ಕರೆಸಿಕೊಳ್ಳುತ್ತಾನೆ.

'ಯದಿದಂ ಚಕ್ಷುಷಿ' ಎಂಬ ಶ್ರುತಿಯ ಅಭಿಪ್ರಾಯ ಹೀಗಿದೆ - ಯಾವ ಕಾರಣದಿಂದ ಶ್ರೀಹರಿಯು ಚಕ್ಷುರಿಂದ್ರಿಯದಲ್ಲಿ ಸನ್ನಿಹಿತನಾಗಿದ್ದಾನೋ, ಆ ಕಾರಣದಿಂದ ತುಪ್ಪ ಅಥವಾ ನೀರನ್ನು ಕಣ್ಣಿಗೆ ಹಾಕಿದರೆ ಅದು ಅಂಟಿಕೊಳ್ಳುವುದಿಲ್ಲ. ಅದೇ ದಾರಿಯಲ್ಲಿ ಹೊರಬರುತ್ತದೆ. ಅಲ್ಲಿ ಸನ್ನಿಧಾನವನ್ನು ಹೊಂದಿರುವ ಪರಮಾತ್ಮನೇ ವಾಮನ ಹಾಗೂ ಭಾಮನ ಎಂದು ಕರೆಸಿಕೊಳ್ಳುತ್ತಾನೆ ಎಂದು.

ವಿಶೇಷವಿಚಾರ - ಪ್ರಶ್ನೆ - ಪರಮಾತ್ಮನು ಕಣ್ಣಿನಲ್ಲಿ ಮಾತ್ರವಲ್ಲದೇ ಸಮಗ್ರದೇಹದಲ್ಲಿಯೇ ಸನ್ನಿಹಿತನಾಗಿದ್ದಾನೆ. ಆದ್ದರಿಂದ ಕಣ್ಣು ಹೇಗೆ ಪರಮಾತ್ಮನ ಸನ್ನಿಧಾನದಿಂದ ಅಸಂಗವಾಗುತ್ತದೋ, ಸಮಗ್ರದೇಹವೂ ಕೂಡ ಅಸಂಗವಾಗಲಿ.

ಉತ್ತರ - ಪರಮಾತ್ಮನನ್ನು ಪ್ರತಿಯೊಂದು ಅಧಿಷ್ಠಾನದಲ್ಲಿ ಬೇರೆ ಬೇರೆ ಗುಣಗಳಿಂದ ಉಪಾಸನೆ ಮಾಡಬೇಕು. ಕಣ್ಣಿನಲ್ಲಿರುವ ಪರಮಾತ್ಮನನ್ನು ಅಸಂಗ ಎಂಬ ಗುಣದಿಂದ ಉಪಾಸನೆ ಮಾಡಬೇಕೆಂದು ತಿಳಿಸುವುದಕ್ಕಾಗಿ ಶ್ರುತಿಯಲ್ಲಿ ಹೀಗೆ ಹೇಳಿದ್ದಾರೆ ಹೊರತು, ಬೇರೆಡೆ ಸನ್ನಿಹಿತನಾಗಿಲ್ಲ ಎಂದು ಅರ್ಥವಲ್ಲ. 'ತಥಾ ಚೇತೋರ್ಪಣಾರ್ಥಂ ಹಿ ನಿಗದ್ಯತೇ' ಎಂಬುದಾಗಿ ಪ್ರಥಮಪಾದದ ಸೂತ್ರದಲ್ಲಿ ಈ ಪ್ರಶ್ನೆಗೆ ಉತ್ತರಿಸಿದ್ದಾರೆ.

ಸೂತ್ರದಲ್ಲಿರುವ 'ಸ್ಥಾನ' ಶಬ್ದವು ಅಸಂಗ ಎಂಬ ಸ್ಥಾನದ ಶಕ್ತಿಯನ್ನು ಹೇಳುತ್ತಿದೆ. ಕಣ್ಣು ಎಂಬ ಸ್ಥಾನದಲ್ಲಿರುವ ಶಕ್ತಿ ಪರಮಾತ್ಮನ ಶಕ್ತಿಯೇ ಆಗಿದೆ. ಕಣ್ಣಿನಲ್ಲಿ ಸನ್ನಿಹಿತನಾದ ಪರಮಾತ್ಮನ ಅಸಾಧಾರಣಗುಣಗಳು ಈ ಶ್ರುತಿಯಿಂದ ತಿಳಿಯುತ್ತಿದೆ.

ಛಾಂದೋಗ್ಯದಲ್ಲಿ ಬರುವ ಈ ಪ್ರಕರಣ ಹೀಗಿದೆ -

'ಏತಂ ಸಂಯದ್ವಾಮ ಇತ್ಯಾಚಕ್ಷತೇ । ಏತಂ ಹಿ ಸರ್ವಾಣಿ ವಾಮಾನಿ ಅಭಿಸಂಯಂತಿ । ಸರ್ವಾಣಿ ಏನಂ ವಾಮಾನ್ಯಭಿಸಂಯಂತಿ ಯ ಏವಂ ವೇದ ।

ಏಷ ಉ ಏವ ವಾಮನಿಃ । ಏಷ ಹಿ ಸರ್ವಾಣಿ ನಾಮಾನಿ ನಯತಿ । ಸರ್ವಾಣಿ ವಾಮಾನಿ ನಯತಿ ಯ ಏವಂ ವೇದ ।

ಏಷ ಉ ಏವ ಭಾಮನಿಃ । ಏಷ ಹಿ ಸರ್ವೇಷು ಲೋಕೇಷು ಭಾತಿ । ಸರ್ವೇಷು ಲೋಕೇಷು ಭಾತಿ ಯ ಏವಂ ವೇದ ।

ಕಣ್ಣಿನಲ್ಲಿರುವ ಅಸಂಗನಾದ ಬ್ರಹ್ಮನನ್ನೇ ಜ್ಞಾನಿಗಳು ಸಂಯದ್ವಾಮ ಎನ್ನುತ್ತಾರೆ. ಏಕೆಂದರೆ 'ವಾಮನಿ' ಎಲ್ಲ ಸೌಂದರ್ಯಗಳು, 'ಏನಂ' ಬ್ರಹ್ಮನನ್ನು, 'ಸಂಯತಿ' ಹೊಂದಿವೆ. ಯಾರು ಹೀಗೆ ಬ್ರಹ್ಮನನ್ನು ಸಂಯದ್ವಾಮ ಎಂದು ತಿಳಿಯುವರೋ ಅವರಿಗೂ ಸರ್ವಸೌಂದರ್ಯವು ಪ್ರಾಪ್ತವಾಗುತ್ತದೆ.

ಕಣ್ಣಿನೊಳಗಿನ ಈ ಪರಮಾತ್ಮನೇ ವಾಮನಿ ಎನಿಸಿದ್ದಾನೆ. ಏಕೆಂದರೆ ವಾಮಾನಿ, ಎಲ್ಲ ಸುಂದರಸ್ತ್ರೀಯರ ಸೌಂದರ್ಯವನ್ನು, ನಯತಿ, ಆ ಸ್ತ್ರೀಯರಿಗೆ ಹೊಂದಿಸುತ್ತಾನೆ. ಯಾರು ಹೀಗೆ ಉಪಾಸನೆ ಮಾಡುವನೋ ಅವನು ಮುಕ್ತಿಯಲ್ಲಿ ತನಗಿಂತ ಅವರರಾದ ಸ್ತ್ರೀಯರ ಸೌಂದರ್ಯವನ್ನು ನಿಯಂತ್ರಿಸುತ್ತಾನೆ.

ಕಣ್ಣಿನೊಳಗಿನ ಈ ವಾಮನಾಖ್ಯ ಬ್ರಹ್ಮನೇ ಭಾಮನಿ ಎನಿಸಿದ್ದಾನೆ. ಏಕೆಂದರೆ ಇವನು ಎಲ್ಲ ಲೋಕಗಳಲ್ಲಿ, ಭಾತಿ ಎಂದರೆ ಪ್ರಕಾಶಿಸುತ್ತಾನೆ. ಯಾರು ಹೀಗೆ ಉಪಾಸನೆ ಮಾಡುವನೋ ಅವನು ಮುಕ್ತಿಯಲ್ಲಿ ಸರ್ವಲೋಕದಲ್ಲಿಯೂ ಪ್ರಕಾಶಿಸುತ್ತಾನೆ.

'ಅಥ ಯದು ಚೈವಾಸ್ಮಿನ್ ಶವ್ಯಂ ಕರ್ಮ ಕುರ್ವಂತಿ, ಯದು ಚ ನ, ಅರ್ಚಿಷಮೇವ ಅಭಿಸಂಭವಂತಿ (ವಿಶಂತಿ) । ಅರ್ಚಿಷಃ ಅಹಃ । ಅಹ ಆಪೂರ್ಯಮಾಣಪಕ್ಷಮ್ । ಆಪೂರ್ಯಮಾಣಪಕ್ಷಾತ್ ಯಾನ್ ಷಟ್ ಉದಜ್ ಏತಿ ಮಾಸಾನ್ ತಾನ್ । ಮಾಸೇಭ್ಯಃ ಸಂವತ್ಸರಮ್ । ಸಂವತ್ಸರಾದಾದಿತ್ಯಮ್ । ಆದಿತ್ಯಾತ್ ಚಂದ್ರಮಸಮ್ । ಚಂದ್ರಮಸೋ ವಿದ್ಯುತಂ ತತ್ಪುರುಷೋ ಮಾನವಃ ।

ಸ ಏನಾನ್ ಬ್ರಹ್ಮ ಗಮಯತಿ ।

ಏಷ ದೇವಪಥೋ ಬ್ರಹ್ಮಪಥಃ । ಏತೇನ ಖಲು ಪ್ರತಿಪದ್ಯಮಾನಾಃ ಇಮಂ ಮಾನವಮಾವರ್ತಂ ನಾವರ್ತಂತೇ ನಾವರ್ತಂತೇ ।'

ಕಣ್ಣಿನೊಳಗಿರುವ ಅಸಂಗನಾದ ಪರಮಾತ್ಮನನ್ನು ತಿಳಿದ ಜ್ಞಾನಿಗಳು ಮರಣ ಹೊಂದಿದಾಗ ಅವರಿಗೆ ದಹನಾದಿ ಉತ್ತರ ಕರ್ಮಗಳನ್ನು ಮಾಡಲಿ ಅಥವಾ ಮಾಡದಿರಲಿ, ಮೃತರಾದ ಆ ಜ್ಞಾನಿಗಳಂತೂ ಶ್ರೀಹರಿಯ ಅನುಗ್ರಹದಿಂದ ಅರ್ಚಿರ್

ಲೋಕವನ್ನು ಹೊಂದಿ- ಅಲ್ಲಿಂದ ಆತಿವಾಹಿಕ ಎಂಬ ವಾಯುಲೋಕವನ್ನೂ, ಅನಂತರ ಹಗಲಿಗಭಿಮಾನಿಯಾದ ದೇವತೆಯ ಲೋಕವನ್ನೂ, ಅಲ್ಲಿಂದ ಶುಕ್ಲಪಕ್ಷಾಭಿಮಾನಿ ದೇವತೆಯ ಲೋಕವನ್ನೂ, ಅಲ್ಲಿಂದ ಸೂರ್ಯನು ಉತ್ತರದಲ್ಲಿ ಸಂಚರಿಸುವ ಕಾಲವೆನಿಸಿದ ಉತ್ತರಾಯಣದ ಆರು ತಿಂಗಳಿಗಭಿಮಾನಿಯಾದ ದೇವತೆಯ ಲೋಕವನ್ನೂ, ಅಲ್ಲಿಂದ ಸಂವತ್ಸರಾಭಿಮಾನಿ ಲೋಕವನ್ನೂ, ಅಲ್ಲಿಂದ ಆದಿತ್ಯಲೋಕವನ್ನೂ, ಆದಿತ್ಯಲೋಕದಿಂದ ಚಂದ್ರಲೋಕವನ್ನೂ, ಚಂದ್ರಲೋಕದಿಂದ ವೈಶ್ವಾನರ, ಇಂದ್ರ, ಧ್ರುವಲೋಕಗಳ ಮೂಲಕ ವಿದ್ಯುತ್ತಿಗಭಿಮಾನಿಯಾದ ಭಾರತೀದೇವಿಯನ್ನೂ ಹೊಂದುತ್ತಾರೆ. ಬಳಿಕ ಭಾರತಿಯ ಪತಿಯೂ, ಭಗವಂತನ ಪ್ರಿಯಭೃತ್ಯನೂ ಆದ ವಾಯುವನ್ನು ಹೊಂದತ್ತಾರೆ.

ಆ ವಾಯುದೇವರು ದೇಹದಲ್ಲಿ ಭಗವಂತನನ್ನು ಉಪಾಸನೆ ಮಾಡುವ ಜ್ಞಾನಿಗಳನ್ನು ಕಾರ್ಯಬ್ರಹ್ಮನೆನಿಸಿದ ಚತುರ್ಮುಖಬ್ರಹ್ಮದೇವರ ಬಳಿಗೂ, ವ್ಯಾಪ್ತ್ಯೋಪಾಸಕ ಜ್ಞಾನಿಗಳನ್ನು ಪರಬ್ರಹ್ಮನೆನಿಸಿದ ಪರಮಾತ್ಮನ ಬಳಿಗೂ ಕರೆದುಕೊಂಡು ಹೋಗುವರು.

ಈ ಅರ್ಚಿರಾದಿ ಮಾರ್ಗವೇ ದೇವತೆಗಳಿಂದ ಅಧಿಷ್ಠಿತವಾದ ಪ್ರಯುಕ್ತ ದೇವಪಥ ಎಂದೂ, ಬ್ರಹ್ಮಪ್ರಾಪ್ತಿಗೆ ಸಾಧನವಾದ್ದರಿಂದ ಬ್ರಹ್ಮಪಥ ಎಂದೂ ಹೇಳಲ್ಪಡುತ್ತದೆ. ಈ ಮಾರ್ಗದಿಂದ ಕಾರ್ಯಬ್ರಹ್ಮನನ್ನಾಗಲಿ ಪರಬ್ರಹ್ಮನನ್ನಾಗಲಿ ಪಡೆದವರು ಸಂಸಾರಕ್ಕೆ ಮರಳುವುದಿಲ್ಲ.

ತತ್ತ್ವಪ್ರಕಾಶಿಕಾ

ವಿಷ್ಣುವಿನಲ್ಲಿ 'ಸರ್ಪಿರ್ವೋದಕಂ ವಾ' ಎಂಬ ಶ್ರುತಿಯ ಸಮನ್ವಯ

तत्वप्रकाशिका – स्थानादिव्यपदेशाच्च ।। १-२-१४ ।।

युक्त्यन्तरेण विष्णोश्चक्षुरन्तःस्थत्वं साधयत्सूत्रमुपन्यस्य व्याचष्टे – स्थानादीति ।। अत्राक्षिस्थपुरुषसम्बन्धादक्ष्णोरसङ्गत्वाख्यशक्तिर्व्यपदिश्यते 'तद् यदस्मिन् सर्पिर्वोदकं वा' इति । 'एतं संयद्वाम इत्याचक्षत एतं हि सर्वाणि वामान्यभिसंयन्ति । एष उ एव वामनिरेष हि सर्वाणि वामानि नयति एष उ एव भामनिरेष हि सर्वेषु लोकेषु भाति' इति चक्षुरन्तःस्थस्य संयद्वामत्वादिस्वरूपशक्तिश्चोच्यते । एतदुभयबलात् चक्षुरन्तःस्थो विष्णुरेवेत्यर्थः।

ಮತ್ತೊಂದು ಯುಕ್ತಿಯಿಂದಲೂ ವಿಷ್ಣುವೇ ಚಕ್ಷುಸ್ಸಿನಲ್ಲಿ ಅಂತಃಸ್ಥನಾಗಿದ್ದಾನೆಂಬುದನ್ನು ಸಾಧನೆ ಮಾಡಲು ಸೂತ್ರವನ್ನು ಹೇಳಿ ''ಸ್ಥಾನಾದಿ'' ಇತ್ಯಾದಿ ವಾಕ್ಯಗಳಿಂದ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. ''ತದ್ಯದಸ್ಮಿನ್‌ಸರ್ಪಿರ್ವೋದಕಂ ವಾ'' ಎಂಬ ಶ್ರುತಿಯಲ್ಲಿ ಕಣ್ಣಿನಲ್ಲಿರುವ ಪರಮಾತ್ಮನ ಸಂಬಂಧದಿಂದ ಕಣ್ಣಿಗೆ ಅಸಂಗಶಕ್ತಿಯು ಕೇಳಿಬರುತ್ತದೆ.

ಈ ರೀತಿಯಾಗಿ ''ಏತಂ ಸಂಯದ್ವಾಮ ಇತ್ಯಾಚಕ್ಷತೇ ಏತಂ ಹಿ ಸರ್ವಾಣಿ ವಾಮಾನಿ ಅಭಿಸಂಯಂತಿ । ಏಷ ಉ ಏವ ವಾಮನಿಃ । ಏಷ ಹಿ ಸರ್ವಾಣಿ ವಾಮಾನಿ ನಯತಿ । ಏಷ ಉ ಏವ ಭಾಮನಿಃ । ಏಷ ಹಿ ಸರ್ವೇಷು ಲೋಕೇಷು ಭಾತಿ ॥'' ಇವನನ್ನು ಸಂಯದ್ವಾಮನೆನ್ನುತ್ತಾರೆ, ಏಕೆಂದರೆ ಅವನಿಗೆ ಕಲ್ಯಾಣ ಪ್ರಾಪ್ತವಾಗುತ್ತದೆ. ಇವನಿಗೆ 'ವಾಮನಿ' ಎನ್ನುತ್ತಾರೆ. ಏಕೆಂದರೆ ಈ ಚಕ್ಷುರಂತಸ್ಥನಾದ ವಾಮನನ್ನು ಸುಂದರ ಪದಾರ್ಥಗಳ ಪ್ರೇರಕನು. ಇವನಿಗೇ ಭಾಮನಿ ಎನ್ನುತ್ತಾರೆ, ಏಕೆಂದರೆ ಸರ್ವಲೋಕದಲ್ಲೂ ಪ್ರಕಾಶಮಾನನಾಗಿದ್ದಾನೆ'' ಎಂದು ಶ್ರುತಿಯಲ್ಲಿ ಕಣ್ಣಿನಲ್ಲಿರುವವನಿಗೆ ವಾಮನ ಮತ್ತು ಭಾಮನವೆಂಬ ಸ್ವರೂಪಶಕ್ತಿಯು ಉಪನಿಷತ್ತಿನಲ್ಲಿ ಕೇಳಿಸುತ್ತಿದೆ. ಈ ಎರಡು ಧರ್ಮಗಳಾದ ಅಸಂಗತ್ವ ಮತ್ತು ವಾಮನಾದಿಶಬ್ದಗಳ ಬಲದಿಂದ ಕಣ್ಣಿನಲ್ಲಿ ಅಂತಃಸ್ಥನಾದವನು ವಿಷ್ಣುವೇ ಆಗಿದ್ದಾನೆಂದರ್ಥ.

ಕಣ್ಣಿನಲ್ಲಿರುವ ಪರಮಾತ್ಮನ ಕಾರ್ಯ

ತತ್ವಪ್ರಕಾಶಿಕಾ – ಯಸ್ಮಾದಯಂ ಪುರುಷೋऽಕ್ಷಿಣಿ ವಿದ್ಯತೇ ತತ್ ತಸ್ಮಾತ್ ಅಸ್ಮಿನ್ ಚಕ್ಷುಷಿ ಯದಿ ಸರ್ಪಿರ್ವೋದಕಂ ವಾ ಕಶ್ಚಿತ್ ಸಿಞ್ಚತಿ ತರ್ಹಿ ವರ್ತ್ಮನೀ ಪ್ರತ್ಯೇವ ಗಚ್ಛತಿ ನ ಚಕ್ಷುಃ ಸ್ಪೃಶತೀತ್ಯರ್ಥಃ ।

ಯಾವ ಕಾರಣದಿಂದ ಪರಮಾತ್ಮನು ಕಣ್ಣಿನಲ್ಲಿದ್ದಾನೋ, ಆ ಕಾರಣದಿಂದ ಕಣ್ಣಿನಲ್ಲಿ ತುಪ್ಪ ಅಥವಾ ನೀರನ್ನು ಹಾಕಿದರೆ ಅದು ಕಣ್ಣಿನಲ್ಲಿರುವ ಬಹಿರ್ಗಮನಮಾರ್ಗಕ್ಕೆ ಹೋಗುತ್ತದೆಯೇ ಹೊರತು, ಚಕ್ಷುರಿಂದ್ರಿಯವನ್ನು ಸ್ಪರ್ಶ ಮಾಡುವುದಿಲ್ಲ ಎಂದು ಶ್ರುತಿಯ ಅರ್ಥ.

ಚಕ್ಷುರಂತಸ್ಥನು ವಿಷ್ಣುವೆನ್ನಲು ಹೇತುದ್ವಯಗಳು

ತತ್ವಪ್ರಕಾಶಿಕಾ – ಏತಲ್ಲಿಙ್ಗದ್ವಯಸದ್ಭಾವೇऽಪಿ ಕುತೋऽಕ್ಷಿಸ್ಥಸ್ಯ ವಿಷ್ಣುತ್ವನಿಶ್ಚಯ ಇತ್ಯತ ಆಹ – ತಸ್ಯೇತಿ ।। ಏತದಿತಿ ಸ್ವಸಮ್ಬನ್ಧೇನಾಕ್ಷ್ಣೋರಸಙ್ಗತ್ವಾಪಾದಕತ್ವಮ್ ।

कुत एतत्तस्य लिङ्गमिति तत्राह – स इति ।। यद् यस्माद् यस्य प्रभावात् । इदं चक्षुषीति समस्तम् ।। १४ ।।

ಈ ಎರಡು ಲಿಂಗಗಳಿದ್ದರೂ ಕಣ್ಣಿನಲ್ಲಿರುವವನು ವಿಷ್ಣುವೇ ಎಂದು ಹೇಗೆ ನಿರ್ಣಯವಾಗುತ್ತದೆ? ಎಂಬ ಪ್ರಶ್ನೆಗೆ 'तस्य' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಭಾಷ್ಯದಲ್ಲಿರುವ 'ಏತತ್' ಶಬ್ದದ ಅಭಿಪ್ರಾಯ ತನ್ನ ಸಂಬಂಧದಿಂದ ಕಣ್ಣುಗಳಿಗೆ ಅಸಂಗತ್ವರೂಪವಾದ ಶಕ್ತಿಯನ್ನು ಕೊಡುವುದು ಎಂದು. ಇವು ವಿಷ್ಣುವಿನ ಲಿಂಗಗಳು ಏಕೆ? ಎಂಬ ಪ್ರಶ್ನೆಗೆ ''सः'' ಎಂಬ ಚರ್ತುವೇದಶಿಖಾದ ವಾಕ್ಯವನ್ನು ಪ್ರಮಾಣವಾಗಿ ಹೇಳುತ್ತಿದ್ದಾರೆ. 'यत्' ಎಂದರೆ ಯಾರ ಪ್ರಭಾವದಿಂದ ಎಂದರ್ಥ. 'ಇದಂ ಚಕ್ಷುಷಿ' ಎನ್ನುವುದು ಸಮಸ್ತಪದವು.

ಭಾವದೀಪ

ಚಕ್ಷುರಿಂದ್ರಿಯದಲ್ಲಿರುವವನು ವಿಷ್ಣುವೆಂದು ಹೇಗೆ ನಿರ್ಣಯವಾಗುತ್ತದೆ ?

भावदीपः – स्थानादिव्यपदेशाच्च ।। १-२-१४ ।।

अपूर्वहेतुसमुच्चायकसौत्रचशब्दानुरोधादाह – युक्त्यन्तरेणेति ।। भाष्ये सौत्रस्थानादिपदाभ्यां स्थानात्मकशक्त्युक्तेः कथं विष्णोश्चक्षुरन्तःस्थोपपादकत्वमित्यतोऽसङ्गभगवत्स्थानत्वाच्चक्षुषोऽसङ्गत्वमुच्यत इति छान्दोग्यभाष्यानुरोधेन 'यत्स्थानत्वाद्' इति स्मृत्यनुरोधेन च भाष्यं व्याचष्टे – अत्रेति ।। एतच्छ्रुताविति्यर्थः । उक्तं हेतुं श्रुतौ दर्शयितुं शेषमुपादत्ते – तद् यदस्मिन्निति ।।

ಅಪೂರ್ವವಾದ ಹೇತುವನ್ನು ಸಮುಚ್ಚಯ ಮಾಡುವುದಕ್ಕಾಗಿ ಸೂತ್ರದಲ್ಲಿ 'ಚ' ಶಬ್ದವನ್ನು ಪ್ರಯೋಗಿಸಿದ್ದಾರೆ. ಅದಕ್ಕೆ ಅನುಸಾರಿಯಾಗಿ ''युक्त्यंतरेण'' ಎಂಬ ಟೀಕಾಮಾತು ಹೊರಟಿದೆ. ಭಾಷ್ಯದಲ್ಲಿ ಸೂತ್ರದಲ್ಲಿರುವ ಸ್ಥಾನಾದಿಪದಗಳಿಂದ ಸ್ಥಾನ ಎಂಬ ಶಕ್ತಿಯು ಹೇಳಲ್ಪಟ್ಟಿದೆ. ಇದರಿಂದ

ವಿಷ್ಣು ಚಕ್ಷುರಿಂದ್ರಿಯದಲ್ಲಿದ್ದಾನೆಂದು ಹೇಗೆ ನಿರ್ಣಯವಾಗುತ್ತದೆ ? ಎಂಬ ಪ್ರಶ್ನೆಗೆ ಚಕ್ಷುರಿಂದ್ರಿಯದಲ್ಲಿ ಇರುವ ಭಗವಂತನು ಅಸಂಗನಾಗಿದ್ದಾನೆ ಅವನ ಸಂಪರ್ಕದಿಂದ ಚಕ್ಷುರಿಂದ್ರಿಯವೂ ಅಸಂಗವಾಗಿದೆ ಎಂಬ ಛಾಂದೋಗ್ಯಭಾಷ್ಯಕ್ಕೆ ಅನುಸಾರಿಯಾಗಿ 'ಯತ್‌ಸ್ಥಾನತ್ವಾತ್' ಎಂಬ ಶ್ರುತಿಗೆ ಅನುಸಾರಿಯಾಗಿ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಅತ್ರ'' ಇತ್ಯಾದಿ ವಾಕ್ಯದಿಂದ. 'ಅತ್ರ' ಎಂದರೆ ಈ ಶ್ರುತಿಯಲ್ಲಿ ಎಂದರ್ಥ. ನಾವು ಹೇಳಿದ ಹೇತುವು ಶ್ರುತಿಯಲ್ಲಿಯೇ ಇದೆ ಎಂಬುದನ್ನು ತೋರಿಸುವುದಕ್ಕಾಗಿಯೇ ಉಳಿದ ಶ್ರುತಿಭಾಗವನ್ನು 'ತದ್ಯದಸ್ಮಿನ್' ಎಂಬ ವಾಕ್ಯದಿಂದ ಉಲ್ಲೇಖಿಸುತ್ತಿದ್ದಾರೆ.

'ವಾಮನಿ' ಹಾಗೂ 'ಭಾಮನಿ' ಶಬ್ದಗಳ ಅರ್ಥ

भावदीपः – इत्याद्यात्मशक्तिरित्यत्रादिपदार्थं वक्तुं सर्ववाक्यं पठति – एतमिति ।। वामानि सुन्दराणि । वामनिः सौन्दर्यप्रधानस्त्रीनेता । भामनिः तेजःप्रधानपुरुषनेता । सर्वलोकेषु भातीति भामनिः । संयद्वामत्वादीत्यादिपदेन वामनिभामनिशब्दितस्त्रीपुंसनेतृत्वग्रहः । भाष्ये शेषोक्तिः – एतदुभयेति ।। श्रुतौ 'तद्' इत्यस्य परमर्शविषयं दर्शयन्नर्थमाह – यस्मादिति ।।

'ಇತ್ಯಾದ್ಯಾತ್ಮಶಕ್ತಿಃ' ಎಂಬಲ್ಲಿರುವ ಆದಿಪದದ ಅರ್ಥವನ್ನು ಹೇಳುವುದಕ್ಕಾಗಿ ಸಂಪೂರ್ಣ ವಾಕ್ಯವನ್ನು ಪಠಿಸುತ್ತಿದ್ದಾರೆ ''ಏನಮ್'' ಇತ್ಯಾದಿಯಾಗಿ. 'ವಾಮಾನಿ' ಎಂದರೆ ಸೌಂದರ್ಯಗಳನ್ನು ಎಂದರ್ಥ. ''ವಾಮನಿಃ'' = ಸೌಂದರ್ಯವೇ ಪ್ರಧಾನವಾದ ಗುಣವುಳ್ಳ ಎಲ್ಲಾ ಸ್ತ್ರೀಯರನ್ನು ನಿಯಮನ ಮಾಡುವವನು. ಭಾಮನಿಃ = ತೇಜಸ್ಸೇ ಪ್ರಧಾನವಾದ ಗುಣವುಳ್ಳ ಸಕಲಪುರುಷರನ್ನು ನಿಯಮನ ಮಾಡುವವನು. ಅಥವಾ ಸಕಲ ಲೋಕಗಳಲ್ಲಿ ಭಾಸಮಾನನಾದವನು. 'ಸಂಯದ್ ವಾಮತ್ವಾದಿ' ಎಂಬ ಆದಿಪದದಿಂದ ವಾಮನಿ ಭಾಮನಿ ಶಬ್ದಗಳಿಂದ ತಿಳಿಯುವ ಸ್ತ್ರೀಪುರುಷ-ನಿಯಾಮಕತ್ವ ಎಂಬ ಧರ್ಮವನ್ನು ಸ್ವೀಕರಿಸಬೇಕು. ಭಾಷ್ಯದಲ್ಲಿ ಶ್ರುತಿಯ ಶೇಷಭಾಗವನ್ನು ಹೇಳಿದ್ದರಿಂದ ಈ ಎರಡೂ ಭಗವಂತನ ಧರ್ಮಗಳೆಂದು ವಿವಕ್ಷಿಸಬೇಕೆಂದು ತಿಳಿಯುತ್ತದೆ. ಶ್ರುತಿಯಲ್ಲಿ 'ತತ್' ಎಂಬುದರಿಂದ ಪರಾಮರ್ಶಿಸಬೇಕಾದ್ದನ್ನು ತೊರಿಸುತ್ತಾ ಅರ್ಥವನ್ನು ಹೇಳುತ್ತಿದ್ದಾರೆ 'ಯಸ್ಮಾತ್' ಇತ್ಯಾದಿಯಾಗಿ.

'ಸರ್ಪಿರ್ವಾ' ಎಂಬ ಶ್ರುತಿಯಿಂದ ಅಸಂಗತ್ವವು ಅರ್ಥಾತ್ ಸಿದ್ಧವಾಗುತ್ತದೆ

भावदीपः – 'तद्' इत्यनुवादेन तस्मादिति व्याख्या । असङ्गपुरुषाश्रयत्वादित्यर्थः। अस्मिन्नित्यनुवादः । यदित्यस्यार्थः – यदीति।। एवकारार्थः – न चक्षुरिति ।। असङ्गत्वोक्तेः श्रुतावस्फुटत्वात्तां व्याचख्यौ । संयद्वामवाक्यं तु स्फुटत्वान्न व्याख्यातम् ।

'ತತ್' ಎಂದು ಅನುವಾದ ಮಾಡಿದ್ದರಿಂದ 'ತಸ್ಮಾತ್' ಎಂಬುದು ವ್ಯಾಖ್ಯಾನವೆಂದು ತಿಳಿಯುತ್ತದೆ. ಅದಕ್ಕನುಸಾರಿಯಾಗಿ ಭಗವಂತನಿಗೆ ಆಶ್ರಯವಾದ್ದರಿಂದ ಎಂದರ್ಥ. 'ಅಸ್ಮಿನ್' ಎಂಬುದು ಶ್ರುತಿಯ ಅನುವಾದ. 'ಯತ್' ಎಂಬುದರ ಅರ್ಥವೇ 'ಯದಿ' ಎಂಬುದು. ಏವಕಾರದ ಅರ್ಥವನ್ನು 'ನ ಚಕ್ಷುಃ' ಎಂದು ಹೇಳಿದ್ದಾರೆ. ಅಸಂಗತ್ವವು ಶ್ರುತಿಯಲ್ಲಿ ಸ್ಪಷ್ಟವಾಗಿ ತಿಳಿಯದ ಕಾರಣ ಅದನ್ನು ವ್ಯಾಖ್ಯಾನಿಸಿದ್ದಾರೆ. ''ಸಂಯದ್ವಾಮ'' ವಾಕ್ಯದ ಅರ್ಥವು ಸ್ಪಷ್ಟವಾಗಿ ತಿಳಿಯುವುದರಿಂದ ಅದನ್ನು ವ್ಯಾಖ್ಯಾನಿಸಿಲ್ಲ.

ತತ್ವಪ್ರದೀಪಕಾರರು ಹೇಳಿದ 'ವಾಮನಿ' ಹಾಗೂ 'ಭಾಮನಿ' ಪದಗಳ ಅರ್ಥ

भावदीपः – दुर्गमत्वात् स्थानशक्तेः विष्णुलिङ्गत्वं व्यनक्ति – एतदितीति।। फलितोक्तिः – यस्य प्रभावादिति ।। स वामन इत्यन्वयः । वामभामशब्दौ सौन्दर्यतेजोवाचिनौ । तत्प्रधानत्वात् स्त्रीपुंसौ वामभामशब्दोक्तौ । तन्नियामको वामनो भामन इति तत्त्वप्रदीपोक्तार्थः ।

ಸ್ಥಾನಶಕ್ತಿಯನ್ನು ತಿಳಿಯಲು ಕಷ್ಟವಾದ್ದರಿಂದ ವಿಷ್ಣುಲಿಂಗವಾಗಿದೆ ಎಂಬುದನ್ನು 'ತಾವತ್' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಫಲಿತವಾದ ಅರ್ಥವನ್ನು ''ಯಸ್ಯ ಪ್ರಭಾವಾತ್'' ಎಂದು ಹೇಳಿದ್ದಾರೆ. ಸಹ ಶಬ್ದಕ್ಕೆ 'ವಾಮನ' ಎಂಬಲ್ಲಿ ಅನ್ವಯ.

ವಾಮ ಶಬ್ದಕ್ಕೆ ಸೌಂದರ್ಯವೆಂದರ್ಥ ಭಾಮ ಶಬ್ದಕ್ಕೆ ತೇಜಸ್ಸು ಎಂದರ್ಥ. ಈ ಗುಣಗಳನ್ನು ಪ್ರಧಾನವಾಗಿ ಹೊಂದಿರುವ ಸ್ತ್ರೀ ಹಾಗೂ ಪುರುಷರು ವಾಮ ಹಾಗೂ ಭಾಮ ಶಬ್ದಗಳಿಂದ ಪ್ರತಿಪಾದ್ಯರಾಗುತ್ತಾರೆ. ಇವರನ್ನು ನಿಯಮನ ಮಾಡುವುದರಿಂದ ಪರಮಾತ್ಮನು ವಾಮನ ಹಾಗೂ ಭಾಮನ ಎಂದು ಕರೆಸಿಕೊಳ್ಳುತ್ತಾನೆ. ಹೀಗೆ ತತ್ವಪ್ರದೀಪಕಾರರು ಹೇಳಿದ್ದಾರೆ.

ವಾಮನ ಹಾಗೂ ಭಾಮನಗಳೇ, 'ವಾಮನಿ' ಹಾಗೂ 'ಭಾಮನಿ'

भावदीपः – 'एकदेशविकृतम् अनन्यवद् भवति' इति न्यायेन वामनवा मन्यादिशब्दानामेकार्थत्वात् । उक्तार्थे श्रुतिरियं ध्येया । लिङ्गस्य विष्णुस्थत्वोक्त्यर्थं 'स हरिः' इत्यादिपूर्वशेषोक्तिः । भाष्यादावक्ष्यन्तःस्थ इति वाच्ये चक्षुरन्तःस्थ इत्यसकृदुक्तिः भाष्योक्तस्मृत्यनुरोधेन ।। १४ ।।

''ಏಕದೇಶವಿಕೃತಮ್ ಅನನ್ಯವದ್ ಭವತಿ'' ಎಂಬ ನ್ಯಾಯದಂತೆ ವಾಮನ ಹಾಗೂ ಭಾಮನ ಶಬ್ದಗಳು ಮತ್ತು ಭಾಮನಿ ವಾಮನಿ ಶಬ್ದಗಳು ಒಂದೇ ಅರ್ಥವನ್ನು ಹೊಂದಿರುತ್ತವೆ. ಮೇಲೆ ಹೇಳಿದ ಅರ್ಥವನ್ನು ಈ ಶ್ರುತಿಗೆ ತಿಳಿಯಬೇಕು. ಲಿಂಗವು ವಿಷ್ಣುವಿನಲ್ಲೂ ಇದೆ ಎಂದು ತೋರಿಸಲು 'ನ ಹರಿಃ' ಎಂಬುದಾಗಿ ಪೂರ್ವವಾಕ್ಯದ ಶೇಷವನ್ನು ಹೇಳಿದ್ದಾರೆ. ಭಾಷ್ಯದಲ್ಲಿ ಮತ್ತು ಟೀಕೆಯಲ್ಲಿ ''ಅಕ್ಷ್ಯಂತಸ್ಥಃ' ಎಂದು ಹೇಳಬೇಕಿತ್ತು. ಆದರೆ ಭಾಷ್ಯದಲ್ಲಿ ಉದಾಹರಿಸಿದ್ದ ಸ್ಮೃತಿಗೆ ಅನುಸಾರಿಯಾಗಿ ''ಚಕ್ಷುರಂತಸ್ಥಃ'' ಎಂದು ಅನೇಕಬಾರಿ ಪ್ರಯೋಗಿಸಿದ್ದಾರೆ.

ಬ್ರಹ್ಮಸೂತ್ರ

'ಸುಖವಿಶಿಷ್ಟಾಭಿಧಾನಾದೇವ ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। सुखविशिष्टाभिधानादेव च ।।१-२- १५ ।।

ಪ್ರಾರಂಭದಲ್ಲಿ 'ಕಂ ಬ್ರಹ್ಮ' ಎಂಬುದಾಗಿ ಪೂರ್ಣಸುಖವುಳ್ಳ ಪರಬ್ರಹ್ಮನು ಪ್ರಸಕ್ತನಾಗಿದ್ದಾನೆ. ಆದ್ದರಿಂದ ಈ ಪ್ರಕರಣವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆ. ಅಂತಹ ಪ್ರಕರಣದಲ್ಲಿ ಹೇಳಿರುವ ಅಕ್ಷಿಸ್ಥನು ವಿಷ್ಣುವೇ ಆಗುತ್ತಾನೆ.

'ಚ' ಶಬ್ದವು ಸಮುಚ್ಚಯಾರ್ಥದಲ್ಲಿ ಇದೆ. ''ಸುಖವಿಶಿಷ್ಟಾಭಿಧಾನಾತ್ - ''ಕಂ ಬ್ರಹ್ಮ' ಇತ್ಯಾದಿಯಾಗಿ ಛಾಂದೋಗ್ಯದಲ್ಲಿ, ವಿಶಿಷ್ಟಸುಖವನ್ನು ಅಂದರೆ ಪೂರ್ಣಸುಖವನ್ನು ಚಕ್ಷುರಂತಸ್ಥನಿಗೆ ಹೇಳಿರುವುದರಿಂದ ವಿಷ್ಣುವೇ ಅಕ್ಷಿಸ್ಥನಾಗಿದ್ದಾನೆ. ಪೂರ್ಣಸುಖದಿಂದಲೇ ವಿಷ್ಣುವೆಂದು ತಿಳಿಯುವಾಗ ''ಖಂ ಬ್ರಹ್ಮ'' ಎಂಬುದಾಗಿ ಪೂರ್ಣಜ್ಞಾನವನ್ನು ಹೇಳಿರುವುದಿಂದಲೂ ವಿಷ್ಣುವೇ ಅಕ್ಷಿಸ್ಥನೆಂದು ದೃಢವಾಗುತ್ತದೆ.

ಬ್ರಹ್ಮಸೂತ್ರಭಾಷ್ಯ

ಬ್ರಹ್ಮಪ್ರಕರಣದಲ್ಲಿ ಅಗ್ನಿಯು ಪ್ರಸಕ್ತನಾಗಲಾರ

ब्रह्मसूत्रभाष्यम् — ।। सुखविशिष्टाभिधानादेव च ।।१५।।

'प्राणो ब्रह्म कं ब्रह्म खं ब्रह्मेति' (छां. ४-१०.) 'विज्ञानमानन्दं ब्रह्म' (बृ. ५-९-२८.) 'आनन्दो ब्रह्मेति व्यजानात्' (तै. ३-६.) इत्यादेस्तस्यैव तल्लक्षणम् ।

'लक्षणं परमानन्दो विष्णोरेव न संशयः ।
अव्यक्तादितृणान्तास्तु विप्लुडानन्दभागिनः ।।' इति ब्रह्मवैवर्ते ।

न च मुख्ये सत्यमुख्यं युज्यते ।। १५ ।।

ಅನುವಾದ - ಛಾಂದೋಗ್ಯದ ಪ್ರಾರಂಭದಲ್ಲಿ ''ಕಂ ಬ್ರಹ್ಮ'' ಎಂಬುದಾಗಿ ಪೂರ್ಣ ಸುಖಸ್ವರೂಪಿಯಾದ ಬ್ರಹ್ಮನನ್ನು ಹೇಳಲಾಗಿದೆ. ಈ ಕಾರಣದಿಂದಲೂ ಅಕ್ಷಿಸ್ಥನಾದವನು ವಿಷ್ಣುವೇ ಆಗುತ್ತಾನೆ. ''ವಿಜ್ಞಾನಮಾನಂದಂ ಬ್ರಹ್ಮ'', ''ಆನಂದೋ ಬ್ರಹ್ಮೇತಿ ವ್ಯಜಾನಾತ್'' ಮೊದಲಾದ ಆಧಾರಗಳಿಂದ, ಪೂರ್ಣಾನಂದ ಮೊದಲಾದವುಗಳು ವಿಷ್ಣುವಿನ ಅಸಾಧಾರಣ ಧರ್ಮಗಳಾಗಿವೆ.

ಪೂರ್ಣಾನಂದವೆಂಬ ಲಕ್ಷಣವು ವಿಷ್ಣುವಿನ ಲಕ್ಷಣವೇ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಲಕ್ಷ್ಮೀದೇವಿಯಿಂದ ಆರಂಭಿಸಿ ತೃಣಪರ್ಯಂತ ಸಕಲ ಜೀವಿಗಳ ಆನಂದವನ್ನು ಸೇರಿಸಿದರೆ ಅವನ ಆನಂದದ ಮುಂದೆ ಬಿಂದುವಿನಂತೆ ಇದೆ. ಆನಂದಪದಕ್ಕೆ ಮುಖ್ಯಾರ್ಥವನ್ನೇ ವಿವಕ್ಷಿಸಲು ಬರುವಾಗ ಅಮುಖ್ಯಾರ್ಥವಾದ ಅಗ್ನಿಯ ಆನಂದವನ್ನು ವಿವಕ್ಷಿಸಬಾರದು.

ಪ್ರತಿಪದಾರ್ಥ - ಪ್ರಾಣಃ = ಪ್ರಾಣ ಶಬ್ದವಾಚ್ಯನಾದ ಪರಮಾತ್ಮನೇ, ಬ್ರಹ್ಮ = ಸಕಲಗುಣಪರಿಪೂರ್ಣನು, ಕಂ = ಸುಖವು, ಬ್ರಹ್ಮ = ಪೂರ್ಣವಾಗಿದೆ. ಖಂ = ಜ್ಞಾನವು, ಬ್ರಹ್ಮ = ಪೂರ್ಣವಾಗಿದೆ, ಇತಿ = ಹೀಗೆ ನಿರವಧಿಕವಾದ ಜ್ಞಾನಾನಂದಗಳು ಛಾಂದೋಗ್ಯದಲ್ಲಿ ಕೇಳಿಸುತ್ತಿದೆ.

ವಿಜ್ಞಾನಂ = ವಿಶೇಷ ಜ್ಞಾನಸ್ವರೂಪನು, ಆನಂದಂ = ಆನಂದಸ್ವರೂಪನು, ಬ್ರಹ್ಮ = ಗುಣಪೂರ್ಣನು, ಮತ್ತು ಆನಂದಃ = ಆನಂದ ರೂಪನು, ಬ್ರಹ್ಮೇತಿ = ಗುಣಪೂರ್ಣನೆಂದು. ವ್ಯಜಾನಾತ್ = ಹೇಳಿದನು, ಇತ್ಯಾದೇಃ = ತೈತ್ತಿರೀಯದಲ್ಲಿ ಕೇಳಿಸುತ್ತಿರುವ ಪ್ರಮಾಣಗಳಿಂದ, ತತ್ = ಈ ಎಲ್ಲ ಗುಣಗಳು, ತಸ್ಯೈವ = ವಿಷ್ಣುವಿನಲ್ಲಿ ಲಕ್ಷಣಂ = ಅಸಾಧಾರಣ ಧರ್ಮಗಳಾಗಿವೆ.

ಪರಮಾನಂದಃ = ಅಪರಿಮಿತವಾದ ಆನಂದವೂ, ವಿಷ್ಣೋರೇವ = ವಿಷ್ಣುವಿನದ್ದೇ, ಲಕ್ಷಣಂ = ಲಕ್ಷಣವೆಂದು ತಿಳಿಯಬೇಕು. ಈ ವಿಷಯದಲ್ಲಿ ನ ಸಂಶಯಃ = ಸಂಶಯವೇ ಇಲ್ಲ.

ಅವ್ಯಕ್ತಾದಿ = ಲಕ್ಷ್ಮೀದೇವಿಯನ್ನಾರಂಭಿಸಿ, ತೃಣಾಂತಾಸ್ತು = ತೃಣಪರ್ಯಂತ ಜೀವಸಮುದಾಯವು, ವಿಪ್ಲುಡಾನಂದಭಾಗಿನಃ = ಬಿಂದುವಿನಷ್ಟು ಆನಂದವುಳ್ಳವರಾಗಿದ್ದಾರೆ. ಇತಿ = ಹೀಗೆ, ಬ್ರಹ್ಮವೈವರ್ತೇ = ಬ್ರಹ್ಮವೈವರ್ತ-ಪುರಾಣದಲ್ಲಿ ಹೇಳಲ್ಪಟ್ಟಿದೆ.

ಮುಖ್ಯೇ ಸತಿ = ಮುಖ್ಯಾರ್ಥವನ್ನೇ ವಿವಕ್ಷಿಸಿ ಪೂರ್ಣಾನಂದತ್ವವು ವಿಷ್ಣುವಿನಲ್ಲಿ ಹೇಳಲು ಬರುವಾಗ, ಅಮುಖ್ಯಂ = ಅಜ್ಞಾನಿಗಳಲ್ಲಿರುವ ಅಲ್ಪವಾದ ಆನಂದವನ್ನು ವಿವಕ್ಷಿಸುವುದು, ನ ಯುಜ್ಯತೇ = ಯುಕ್ತವಾಗುವುದಿಲ್ಲ.

ಸತ್ತರ್ಕದೀಪಾವಳಿ

ಅಲ್ಪಸುಖಿಯಾದ ಅಗ್ನಿಯು ಅಂತರನಲ್ಲ

सत्तर्कदीपावलिः – सुखविशिष्टाभिधानादेव च ।। अतोऽपि नाग्निरत्रोच्यत इत्येवं व्याचष्टे – सुखेति ।। सूत्रमुपन्यस्य बृहत्सुखो विष्णुरेवेत्येतद्वाक्यान्त-रैर्द्रढयति – विज्ञानमित्यादिना ।। नन्वग्नेरीषत्सुखात्मकत्वसम्भवात्त-त्परित्यागः कथमित्यत आह – नचेति ।।

ಇನ್ನೊಂದು ಕಾರಣದಿಂದಲೂ ಅಗ್ನಿಯು ಪ್ರತಿಪಾದ್ಯನಲ್ಲವೆಂದು 'ಸುಖ' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಸೂತ್ರವನ್ನು ಉಪನ್ಯಾಸ ಮಾಡಿ ಬಹಳ ಸುಖವುಳ್ಳವನು ವಿಷ್ಣುವೇ ಆಗಿದ್ದಾನೆಂಬುದನ್ನು ಬೇರೆ ವಾಕ್ಯಗಳಿಂದ ಸಮರ್ಥಿಸುತ್ತಿದ್ದಾರೆ 'ವಿಜ್ಞಾನಂ' ಇತ್ಯಾದಿಯಾಗಿ.

ಅಗ್ನಿಯಲ್ಲಿ ಸ್ವಲ್ಪ ಸುಖವಿರುವುದರಿಂದ ಅವನನ್ನು ಹೇಗೆ ಬಿಡುವುದು ? ಎಂಬ ಪ್ರಶ್ನೆಗೆ 'ನಚ' ಇತ್ಯಾದಿಯಾಗಿ ಉತ್ತರಿಸುತ್ತಿದ್ದಾರೆ.

ತತ್ತ್ವಪ್ರದೀಪ

'ಕಂ ಬ್ರಹ್ಮ ಖಂ ಬ್ರಹ್ಮ' ಎಂಬ ಶ್ರುತಿಯ ಸಮನ್ವಯ

तत्वप्रदीपः – ''सुखविशिष्टाभिधानादेव च'' ।। 'कं ब्रह्म खं ब्रह्म' इति विशिष्टसुखाभिधानादेव केवलं चक्षुरन्तस्थ ईश्वर इत्यवसीयते । चकाराद्विशिष्ट-ज्ञानाभिधानादेव च । 'सुखविशिष्टाभिधानादि'ति व्युत्पत्त्यर्थमुक्तम् । अनयोर्हि श्रौतयोः कंखमिति शब्दयोः स्वतः पूर्णसुखज्ञानवाचिनोर्ब्रह्मपद-समानाधिकृतयोः सङ्कोचकारणाभावाद्विशिष्टं पूर्णं सुखं ज्ञानं चैवार्थ इत्यभिप्रायेण । नच मुख्ये सत्यमुख्यं युज्यत इत्याह ।।

'ಕಂ ಬ್ರಹ್ಮ ಖಂ ಬ್ರಹ್ಮ' ಎಂಬುದಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ಸರ್ವೋತ್ತಮವಾದ ಸುಖವನ್ನು ಹೇಳಿರುವುದರಿಂದ ಚಕ್ಷುಸ್ಸಿನಲ್ಲಿ ಅಂತರ್ಯಾಮಿಯಾಗಿರುವವನು ಈಶ್ವರನೇ ಎಂದು ನಿಶ್ಚಯವಾಗುತ್ತದೆ. ಸೂತ್ರದಲ್ಲಿರುವ 'ಚ'ಕಾರವು ವಿಶಿಷ್ಟಜ್ಞಾನದ ಅಭಿಧಾನವನ್ನು ಸಮುಚ್ಚಯ ಮಾಡುತ್ತಿದೆ. 'ಸುಖವಿಶಿಷ್ಟಾಭಿಧಾನಾತ್' ಎಂಬುದಾಗಿ ಹೇಳಿರುವುದು ವ್ಯುತ್ಪತ್ತಿಗೋಸ್ಕರ. ಅದು ಹೀಗೆ - ಶ್ರುತಿಯಲ್ಲಿರುವ 'ಕಂ' ಎಂಬ ಶಬ್ದವು ಪೂರ್ಣಸುಖವನ್ನು ಹೇಳುತ್ತಿದೆ. 'ಖಂ' ಎಂಬ ಶಬ್ದವು ಪೂರ್ಣಜ್ಞಾನವನ್ನು ಹೇಳುತ್ತಿದೆ. ಈ ಪೂರ್ಣಸುಖ ಹಾಗೂ ಪೂರ್ಣಜ್ಞಾನ ಎಂಬರ್ಥದಲ್ಲಿಯೇ ಬ್ರಹ್ಮಪದವೂ ಕೂಡ ಪ್ರಯುಕ್ತವಾಗಿದೆ. ಬ್ರಹ್ಮಪದದ ಸಮಾನ ಅರ್ಥವನ್ನು ಹೇಳುವ 'ಕಂ' ಹಾಗೂ 'ಖಂ' ಎಂಬ ಶಬ್ದಗಳಿಗೆ ಪೂರ್ಣಸುಖ, ಪೂರ್ಣಜ್ಞಾನ ಎಂಬರ್ಥವನ್ನು ಬಿಟ್ಟು, ಸಂಕುಚಿತವಾದ ಅರ್ಥವನ್ನು ಮಾಡಲು ಯಾವುದೇ

ಕಾರಣವಿಲ್ಲ. ಇದನ್ನು ತಿಳಿಸುವುದಕ್ಕಾಗಿ ಸೂತ್ರದಲ್ಲಿ 'ಸುಖವಿಶಿಷ್ಟಾಭಿಧಾನಾತ್' ಎಂದಿದ್ದಾರೆ. ವಿಶಿಷ್ಟಶಬ್ದಕ್ಕೆ ಪೂರ್ಣವಾದದ್ದು ಎಂದರ್ಥ. ಪೂರ್ಣವಾದ ಸುಖವನ್ನು ಚಶಬ್ದದಿಂದ ಪೂರ್ಣವಾದ ಜ್ಞಾನವನ್ನು ಶ್ರುತಿಯಲ್ಲಿ ಹೇಳಿರುವುದರಿಂದ ಎಂಬುದು ಅಭಿಪ್ರಾಯ. 'ನ ಚ ಮುಖ್ಯೇ ಸತ್ಯಮುಖ್ಯಂ ಯುಜ್ಯತೇ' ಎಂಬುದಾಗಿ ಭಾಷ್ಯಕಾರರು ಹೇಳಿದ್ದಾರೆ. ಪರಿಪೂರ್ಣವಾದ ಸುಖ ಹಾಗೂ ಜ್ಞಾನಗಳೆಂಬ ಮುಖ್ಯಾರ್ಥವನ್ನೇ ವಿವಕ್ಷಿಸಲು ಬರುವಾಗ, ಸಾವಧಿಕವಾದ ಸುಖ ಹಾಗೂ ಜ್ಞಾನಗಳೆಂಬ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಅಯುಕ್ತವಾಗುತ್ತದೆ.

ವಿಶೇಷವಿಚಾರ - 'ಪ್ರಾಣೋ ಬ್ರಹ್ಮ' ಇತ್ಯಾದಿ ವಾಕ್ಯಗಳಿಂದ ಶ್ರುತಿಯ ಪ್ರಕರಣವು ಪ್ರಾರಂಭವಾಗಿದೆ. 'ಪ್ರಾಣ' ಎಂಬ ಶಬ್ದಕ್ಕೆ 'ಮುಖ್ಯಪ್ರಾಣ' ಎಂದರ್ಥ. ಇವನು ಎಲ್ಲಾ ಜೀವಿಗಳಿಗಿಂತ ಪರಿಪೂರ್ಣನಾಗಿದ್ದಾನೆ. ಮತ್ತು ಸುಖವು ಪರಿಪೂರ್ಣವಾಗಿದೆ. ಜ್ಞಾನವು ಪರಿಪೂರ್ಣವಾಗಿದೆ. ಹೀಗೆ ಮುಖ್ಯಪ್ರಾಣನಿಗಿಂತಲೂ ನಿರವಧಿಕವಾದ ಸುಖ ಹಾಗೂ ಜ್ಞಾನಗಳಿಂದ ಪೂರ್ಣವಾದ ತತ್ವದ ಪ್ರಸ್ತಾಪ ಮಾಡಲಾಗಿದೆ. ನಿರವಧಿಕವಾದ ಸುಖಜ್ಞಾನ ಬ್ರಹ್ಮನ ಲಕ್ಷಣವೇ ಆಗಿದೆ. ಅಗ್ನಿಯು ಅಧಮದೇವತೆಗಳಿಗಿಂತ ನಿರವಧಿಕವಾದ ಜ್ಞಾನ ಹಾಗೂ ಸುಖಗಳಿಂದ ಯುಕ್ತನಾಗಿರುವುದಿಲ್ಲ. ಬ್ರಹ್ಮಪದವೂ ಕೂಡ ಈ ಸಂದರ್ಭದಲ್ಲಿದೆ. ಇದರ ಮುಖ್ಯಾರ್ಥ ನಿರವಧಿಕವಾದ ಪೂರ್ಣತ್ವ. ಈ ಪದದ ಅರ್ಥವನ್ನು ಸಂಕೋಚ ಮಾಡಿ ಅಗ್ನಿಯ ಬಗ್ಗೆ ಅರ್ಥೈಸುವುದು ಅಸಾಧುವಾಗುತ್ತದೆ. ಆದ್ದರಿಂದ ಪ್ರಾರಂಭದಲ್ಲಿ ಬ್ರಹ್ಮಪ್ರಸ್ತಾಪವಿರುವುದರಿಂದ ಈ ಪ್ರಕರಣವು ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತದೆ. ಹಾಗಾಗಿ ಚಕ್ಷುರಿಂದ್ರಿಯದಲ್ಲಿ ಅಂತರ್ಯಾಮಿಯಾಗಿರುವನು ಮಹಾವಿಷ್ಣುವೇ ಆಗಿದ್ದಾನೆಂದು ಸ್ಪಷ್ಟವಾಗುತ್ತದೆ.

ಛಾಂದೋಗ್ಯೋಪನಿಷತ್ತಿನ ಭಾಷ್ಯ ಹೀಗಿದೆ -

'ಪ್ರಾಣೋ ಬ್ರಹ್ಮ ಬಲರೂಪಂ ಬ್ರಹ್ಮ। ಕಂ ಆನಂದರೂಪಂ। ಖಂ ಜ್ಞಾನರೂಪಂ।
ಅಪರಂ ಬ್ರಹ್ಮ ಸ ಪ್ರಾಣಃ ಸಾಕ್ಷಾದ್ಯೋ ಬಲದೇವತಾ।
ಜ್ಞಾನಾನಂದಾತ್ಮಕಂ ಪೂರ್ಣಂ ಪರಂ ಬ್ರಹ್ಮ ಸ್ವಯಂ ಹರಿಃ।
ನೈಜಾನಂದಬಲೋದ್ರೇಕಃ ಕಮಿತ್ಯುಕ್ತೋ ಮನೀಷಿಭಿಃ।
ಬಲಜ್ಞಾನ ಸಮಾಹಾರಃ ಪೂರ್ಣಃ ಖಮಿತಿ ಶಬ್ದಿತಃ।
ತದಾತ್ಮಕಃ ಪರೋ ವಿಷ್ಣುರಾಕಾಶ ಇತಿ ಕೀರ್ತಿತಃ।

ಏವಂ ಪ್ರಾಣಸ್ತಥಾऽऽಕಾಶೋ ಬ್ರಹ್ಮಣೇ ದ್ವೇ ಪ್ರಕೀರ್ತಿತೇ ॥ ಇತಿ ಚ ।

ಪ್ರಾಣಶಬ್ದಸ್ಯ ವಾಯುರರ್ಥಃ ಪ್ರಸಿದ್ಧಃ । ಕಖಯೋಃ ಭಿನ್ನಾರ್ಥತ್ವಶಂಕಯಾ 'ಕಂ ಚ ತು ಖಂ ಚ ನ ವಿಜಾನಾಮಿ' ಇತ್ಯಾಹ । ಅತ ಏವ ಐಕ್ಯಾಭಿಪ್ರಾಯೇಣ 'ಯದ್ವಾ ವ ಕಂ ತದೇವ ಖಂ । ಯದೇವ ಖಂ ತದೇವ ಕಂ । ಇತ್ಯೂಚುಃ ॥

ಪ್ರಾಣೋ ಬ್ರಹ್ಮ ಎಂದರೆ ಬಲದೇವತೆಯಾದ ಮುಖ್ಯವಾಯುವು ಅಪರಬ್ರಹ್ಮ. ಕಂ ಆನಂದರೂಪನಾದವನು ಮತ್ತು ಖಂ ಜ್ಞಾನರೂಪನಾದವನು ಪರಬ್ರಹ್ಮ ಎಂದರ್ಥ.

ಸಾಕ್ಷಾತ್ ಬಲದೇವತೆಯಾದ ಮುಖ್ಯಪ್ರಾಣನು ಅಪರಬ್ರಹ್ಮ. ಪೂರ್ಣಜ್ಞಾನಾನಂದಾತ್ಮಕನು ಪರಬ್ರಹ್ಮ. ಸ್ವತಂತ್ರ ಆನಂದಬಲಾತಿಶಯ ಸ್ವರೂಪವನ್ನು ಜ್ಞಾನಿಗಳು 'ಕ' ಎನ್ನುತ್ತಾರೆ. ಸ್ವತಂತ್ರ ಬಲಜ್ಞಾನ ಸಮುದಾಯ ಸ್ವರೂಪವನ್ನು 'ಖ' ಎನ್ನುತ್ತಾರೆ. ಆದ್ದರಿಂದ ಆನಂದಬಲಸ್ವರೂಪನಾದ ವಿಷ್ಣು 'ಕ' ಎನಿಸುತ್ತಾನೆ. ಅವನೆ ಬಲಜ್ಞಾನಸ್ವರೂಪನಾದ್ದರಿಂದ 'ಖ' ಎನಿಸುತ್ತಾನೆ. ಅವನೆ ಆಕಾಶನಾಮಕನಾಗಿದ್ದಾನೆ. ಹೀಗೆ ಮುಖ್ಯಪ್ರಾಣ ಮತ್ತು ಆಕಾಶ ಎಂದು ಇಬ್ಬರು ಅಪರ-ಪರಬ್ರಹ್ಮರೆಂದು ಪರಿಗಣಿತರಾಗಿದ್ದಾರೆ ಎಂದು ಪ್ರಮಾಣವಿದೆ.

ಪ್ರಾಣಶಬ್ದಕ್ಕೆ ವಾಯು ಎಂಬ ಅರ್ಥ ಪ್ರಸಿದ್ಧವಾದದ್ದರಿಂದ ಉಪಕೋಸಲನು ತಿಳಿದಿದ್ದೇನೆ ಎನ್ನುತ್ತಿದ್ದಾನೆ. 'ಕ', 'ಖ' ಶಬ್ದಗಳಿಗೆ 'ಸುಖ ಜ್ಞಾನ' ಎಂಬ ಅರ್ಥ ಪ್ರಸಿದ್ಧವಾಗಿದ್ದರೂ 'ಕ' ಮತ್ತು 'ಖ' ಪರಸ್ಪರ ಭಿನ್ನರೋ ? ಎಂಬ ಸಂಶಯ ಬರುವುದರಿಂದ 'ಕ' ಮತ್ತು 'ಖ'ಗಳನ್ನು ತಿಳಿಯಲಿಲ್ಲ ಎಂದು ಹೇಳಿದ್ದಾನೆ. ಆದ್ದರಿಂದ 'ಕ' ಮತ್ತು 'ಖ'ಗಳಿಗೆ ಐಕ್ಯಮಾತ್ರವನ್ನು ಬೋಧಿಸುವ ಉದ್ದೇಶದಿಂದ, ಯಾವ ಬ್ರಹ್ಮನು 'ಕ' ಆಗಿರುವನೋ ಅವನೆ 'ಖ'. ಮತ್ತು 'ಖ' ಎನಿಸಿರುವ ಬ್ರಹ್ಮನೇ 'ಕ' ಎಂದು ಅಗ್ನಿಗಳು ಹೇಳಿದರು.

ತತ್ತ್ವಪ್ರಕಾಶಿಕಾ

ಪೂರ್ಣಸುಖವುಳ್ಳ ವಿಷ್ಣುವೇ ಚಕ್ಷುರಂತಸ್ಥ

तत्त्वप्रकाशिका – सुखविशिष्टाभिधानादेव च ॥ प्रकरणबलाच्च चक्षुरन्तःस्थत्वं विष्णोः प्रतिपादयत् सूत्रमुपन्यस्य तदुपात्तश्रुतिमेवोदाहरति – सुखेति ॥ अत्रोपक्रमे 'प्राणो ब्रह्म' इति मुख्यप्राणस्याखिलजीवेभ्यः

पूर्णत्वमुक्त्वा 'कं ब्रह्म खं ब्रह्म' इति सुखसंविदोरपि पूर्णत्वमुच्यते । तथाचास्य प्रकरणस्योपक्रमे पूर्णसुखाभिधानादेव वैष्णवत्वं सिद्ध्यति किमुत पूर्णज्ञानाभिधानादपि । ततः प्रकरणबलाच्च चक्षुरन्तःस्थो विष्णुरेवेति भावः ।

ಪ್ರಕರಣದ ಬಲದಿಂದ ವಿಷ್ಣುವೇ ಚಕ್ಷುರಂತಸ್ಥನೆಂಬುದನ್ನು ಪ್ರತಿಪಾದನೆ ಮಾಡುವ ಸೂತ್ರವನ್ನು ಹೇಳಿ ಆ ಸೂತ್ರದಿಂದ ಗೃಹಿತವಾದ ಶ್ರುತಿಯನ್ನು ''ಸುಖ'' ಎಂಬುದರಿಂದ ಹೇಳುತ್ತಿದ್ದಾರೆ. ಛಾಂದೋಗ್ಯೋಪನಿಷತ್ತಿನ ಉಪಕೋಸಲಾಖ್ಯಾನ ಪ್ರಕರಣದ ಉಪಕ್ರಮದಲ್ಲಿ ''ಪ್ರಾಣೋ ಬ್ರಹ್ಮ'' ಹೀಗೆಂದು ಮುಖ್ಯಪ್ರಾಣನಿಗೆ ಜೀವಾಪೇಕ್ಷೆಯಿಂದ ಗುಣಪೂರ್ಣತ್ವವನ್ನು ಹೇಳಿ, ಮುಂದೆ ''ಕಂ ಬ್ರಹ್ಮ ಖಂ ಬ್ರಹ್ಮ'' ಎಂದು ಸುಖ ಮತ್ತು ಜ್ಞಾನಗಳಿಗೆ ಪೂರ್ಣತ್ವವು ಕೇಳಿಸುತ್ತಿದೆ. ಈ ಪ್ರಕರಣದ ಪ್ರಾರಂಭದಲ್ಲಿಯೇ ಪೂರ್ಣಸುಖವನ್ನು ಹೇಳಿರುವುದಿಂದಲೇ ಇದು ವಿಷ್ಣುಪ್ರಕರಣವೆಂದು ಸಿದ್ಧವಾಗುತ್ತದೆ. ಇನ್ನು ಪೂರ್ಣಜ್ಞಾನವು ಕೇಳಿಸುತ್ತಿರುವುದರಿಂದ ಇದು ವಿಷ್ಣುಪ್ರಕರಣವೆಂದು ಪ್ರತ್ಯೇಕವಾಗಿ ಹೇಳುವುದೇನು? ಆದ್ದರಿಂದ ಪ್ರಕರಣದ ಬಲದಿಂದಲೂ ಸಹ ಚಕ್ಷುರಂತಃಸ್ಥನು ವಿಷ್ಣುವೇ ಆಗಿದ್ದಾನೆಂದು ಅಭಿಪ್ರಾಯ.

ಪ್ರಕರಣದ ಪ್ರಾರಂಭದಲ್ಲಿ ವಿಷ್ಣುವೇ ಪ್ರಸಕ್ತನು

तत्वप्रकाशिका – उपक्रमे पूर्णसुखसंविदभिधानेऽपि कुतोऽस्य प्रकरणस्य वैष्णवत्वमित्यत आह – विज्ञानमिति ।। पूर्णानन्दसंवित्त्वस्य ब्रह्मलक्षणत्वादुपक्रमे तदभिधाने ब्रह्मैवोपक्रान्तं स्यादिति भावः । श्रौतमपि विज्ञानादिपदं पूर्णज्ञानवाचि ।

ಶಂಕಾ - ಪ್ರಕರಣದ ಪ್ರಾರಂಭದಲ್ಲಿ ಪೂರ್ಣಸುಖ, ಪೂರ್ಣಜ್ಞಾನವನ್ನು ಹೇಳಿದ ಮಾತ್ರದಿಂದಲೇ ಇದು ವಿಷ್ಣುಸಂಬಂಧವೆಂದು ಹೇಗೆ ಸಿದ್ಧವಾಗುತ್ತದೆ?

ಸಮಾಧಾನ - ಭಾಷ್ಯದಲ್ಲಿ ''ವಿಜ್ಞಾನಮಯಂ'' ಎಂಬ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಿದ್ದಾರೆ. ಪೂರ್ಣಾನಂದ ಮತ್ತು ಪೂರ್ಣಜ್ಞಾನಗಳು ಬ್ರಹ್ಮನ ಲಕ್ಷಣವಾದ್ದರಿಂದ, ಪ್ರಕರಣದ ಪ್ರಾರಂಭದಲ್ಲಿ ಅವನ್ನು ಹೇಳಿದ್ದರಿಂದ ವಿಷ್ಣುವನ್ನೇ ಹೇಳಿದಂತಾಗುತ್ತದೆ. ಶ್ರುತಿಗಳಲ್ಲಿಯೂ ಸಹ ವಿಜ್ಞಾನವೇ ಮೊದಲಾದ ಪದಗಳು ಪೂರ್ಣಜ್ಞಾನಾದಿಗಳನ್ನೇ ಹೇಳುತ್ತವೆ.

ಪೂರ್ಣಜ್ಞಾನಸುಖಗಳು ವಿಷ್ಣುವಿನದ್ದೇ ಲಕ್ಷಣ

तत्वप्रकाशिका – ननु सकलचेतनानामपि पूर्णानन्दत्वात् कथमेतद् विष्णुलक्षणमित्यत आह – लक्षणमिति ।। अन्येषामापेक्षिकमेव पूर्णसुखत्वं न ब्रह्मवन्निरवधिकम् इति भावः । नन्वग्न्यादिसुखस्यापेक्षिकतयापि पूर्णत्वसद्भावात्तेषां किन्न स्यादित्यत आह – नचेति ।। मुख्ये निरवधिकपूर्णत्वे सति सम्भवति नामुख्यमापेक्षिकं पूर्णत्वं युज्यत इत्यर्थः । नचोपक्रमे प्राणस्यापि श्रुतत्वेन प्राकरणिकत्वम् । श्रुतिलिङ्गादिबाधकसद्भावात् ।। १५ ।।

ಶಂಕಾ - ಪ್ರಕರಣದ ಪ್ರಾರಂಭದಲ್ಲಿ ಪೂರ್ಣಜ್ಞಾನಾದಿಗಳನ್ನು ಹೇಳಿದ್ದರೂ ಅವುಗಳು ವಿಷ್ಣುವಿನ ಲಕ್ಷಣವೆಂದು ಹೇಳಲು ಬರುವುದಿಲ್ಲ. ಏಕೆಂದರೆ ಸಕಲಚೇತನರೂ ಸಹ ಪೂರ್ಣಾನಂದರಾಗಿದ್ದಾರಲ್ಲವೇ?

ಸಮಾಧಾನ - ಭಾಷ್ಯಕಾರರು ''ಲಕ್ಷಣಂ'' ಎಂಬ ವಾಕ್ಯದಿಂದ ಸಮಾಧಾನವನ್ನು ಹೇಳುತ್ತಿದ್ದಾರೆ. ಇತರ ಜೀವರ ಪೂರ್ಣಾನಂದತ್ವವು ಮತ್ತೊಬ್ಬರನ್ನು ಅವಲಂಭಿಸಿರುತ್ತದೆ. ಮತ್ತು ಬ್ರಹ್ಮನಂತೆ ಸೀಮೆ ಇಲ್ಲದ ಪೂರ್ಣಾನಂದತ್ವವಲ್ಲ.

ಶಂಕಾ - ಅಗ್ನಿಯೇ ಮೊದಲಾದ ಜೀವರ ಸುಖವು ಆಪೇಕ್ಷಿಕವಾಗಿದ್ದರೂ ಅವರ ಸುಖವು ಪೂರ್ಣವಾಗಿರುತ್ತದಲ್ಲವೇ? ಮತ್ತು ಇದು ಅಗ್ನಿದೇವರ ಪ್ರಕರಣವಾಗಿರುವುದರಿಂದ ಅಗ್ನಿಯನ್ನೇ ಏಕೆ ತೆಗೆದುಕೊಳ್ಳಬಾರದು?

ಸಮಾಧಾನ - ಭಾಷ್ಯಕಾರರು 'ನಚ' ಎಂಬ ವಾಕ್ಯದಿಂದ ಉತ್ತರವನ್ನು ಕೊಡುತ್ತಿದ್ದಾರೆ. ಪರಮಾತ್ಮನ ನಿರವಕಾಶವಾದ ಪೂರ್ಣತ್ವವನ್ನು ಹೇಳಲು ಬರುವಾಗ ಅಗ್ನಿಯೇ ಮೊದಲಾದ ದೇವತೆಗಳ ಆಪೇಕ್ಷಿಕಪೂರ್ಣತ್ವವನ್ನು ಹೇಳುವುದು ಯುಕ್ತವಲ್ಲ.

ಈ ಪ್ರಕರಣದ ಪ್ರಾರಂಭದಲ್ಲಿ ''ಪ್ರಾಣೋ ಬ್ರಹ್ಮ'' ಎಂದು ಮುಖ್ಯಪ್ರಾಣನೇ ಪ್ರಸಕ್ತನಾಗಿರುವುದರಿಂದ ಈ ಪ್ರಕರಣವು ಮುಖ್ಯಪ್ರಾಣನ ಪ್ರಕರಣವೆಂದು ಹೇಳುವುದು ಯುಕ್ತವಲ್ಲ. ಏಕೆಂದರೆ ''ಪುರುಷ'', ''ಆತ್ಮ'', ''ಬ್ರಹ್ಮ'' ಮುಂತಾದ ವಿಷ್ಣುವಿನ ಶಬ್ದಗಳಿರುವುದರಿಂದ ಮತ್ತು

''ಅಮೃತತ್ವ'' ಮತ್ತು ''ಅಭಯತ್ವ'' ಎಂಬ ವಿಷ್ಣುವಿನ ಲಿಂಗಗಳು ಇವೆ. ಇವುಗಳು ಮುಖ್ಯಪ್ರಾಣನ ಪ್ರಕರಣವೆಂದು ನಿರ್ಣಯ ಮಾಡಲು ಬಾಧಕವಾಗಿವೆ.

ಭಾವದೀಪ

ಸೂತ್ರದ ಜೊತೆ ಭಾಷ್ಯದ ಅರ್ಥ

भावदीपः – भाष्यस्य सूत्रेणान्वयं मत्वा 'विशिष्टसुखवत्वाच्च ब्रह्मत्वं च विशिष्टता' इत्यनुभाष्यदिशा भाष्यार्थमाह – **अत्रेति ।। श्रुताविति्यर्थः ।। पूर्णत्वमिति ।।** तद्भाष्ये तु 'अपरं ब्रह्म स प्राणः साक्षाद् यो बलदेवता । ज्ञानानन्दात्मकं पूर्णं परब्रह्म हरिः स्वयम् ।।' इति कंखंपदयोरेव पूर्णसुखादिवाचित्वाद् 'विज्ञानं ब्रह्म' इत्यादाविव पूर्णानन्दं पूर्णज्ञानं च परं ब्रह्मेत्यर्थान्तरमुक्तम् ।

ಭಾಷ್ಯದ ಮಾತಿಗೆ ಸೂತ್ರದ ಜೊತೆಗೆ ಅನ್ವಯ ಮಾಡಿ 'ವಿಶಿಷ್ಟಸುಖವತ್ವಾಚ್ಚ ಬ್ರಹ್ಮತ್ವಂ ಚ ವಿಶಿಷ್ಟತಾ' ಎಂಬ ಅನುವ್ಯಾಖ್ಯಾನದ ಪ್ರಕಾರ ಭಾಷ್ಯದ ಅರ್ಥವನ್ನು 'ಅತ್ರ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಅತ್ರ ಎಂದರೆ ಶ್ರುತಿಯಲ್ಲಿ ಎಂದರ್ಥ. ಪೂರ್ಣತ್ವಮ್ ಎಂದು ಟೀಕೆಯಲ್ಲಿದೆ. ಅಂದರೆ ಆ ಶ್ರುತಿಯ ಭಾಷ್ಯದಲ್ಲಿ 'ಅಪರಂ ಬ್ರಹ್ಮ ಸ ಪ್ರಾಣಃ ಸಾಕ್ಷಾದ್ಯೋ ಬಲದೇವತಾ । ಜ್ಞಾನಾನಂದಾತ್ಮಕಂ ಪೂರ್ಣಂ ಪರಬ್ರಹ್ಮ ಹರಿಃ ಸ್ವಯಮ್ ॥' 'ಬಲದೇವತೆಯಾದ ಮುಖ್ಯಪ್ರಾಣನು ಅಪರಬ್ರಹ್ಮ ಆಗಿದ್ದಾನೆ. ಜ್ಞಾನಾನಂದಾತ್ಮಕನಾದ ಪೂರ್ಣನಾದ ಹರಿಯು ಸ್ವತಃ ಪರಬ್ರಹ್ಮನಾಗಿದ್ದಾನೆ'. ಹೀಗೆ ಕಮ್ ಮತ್ತು ಖಮ್ ಪದಗಳಿಗೆ ಪೂರ್ಣಸುಖ ಎಂಬರ್ಥವಿರುವುದರಿಂದ 'ವಿಜ್ಞಾನಮ್ ಬ್ರಹ್ಮ' ಇತ್ಯಾದಿ ಸ್ಥಾನದಂತೆ ಪೂರ್ಣಾನಂದನು ಪೂರ್ಣಜ್ಞಾನನು ಪರಬ್ರಹ್ಮ ಎಂದು ಮತ್ತೊಂದು ಅರ್ಥವನ್ನು ಹೇಳಿದ್ದಾರೆ.

ಉಪಕ್ರಮದಲ್ಲಿ ಕೇಳಿಸುತ್ತಿರುವ ಪೂರ್ಣಾನಂದತ್ವಾದಿ ಗುಣಗಳು

भावदीपः – अत्र 'प्राणो ब्रह्म' इत्येतदंशोदाहरणं च श्रुतेति सूत्रे कगतीति कशब्देन प्राणब्रह्मणोस्तन्त्रेणोपादानस्य वक्ष्यमाणत्वात् । कं

ब्रह्मेति कशब्देन ब्रह्मण इव प्राणस्यापि प्राणो ब्रह्मेति प्रकृतत्वमस्ति । अन्यथा 'स एनान् ब्रह्म गमयति' इति श्रुतौ स इति तच्छब्दश्रवणेन प्राणपरामर्शो न स्यादित्युत्तरार्थत्वेनेति भावः । श्रुतिलिङ्गवाक्यानामुपक्रमोपसंहारयोः श्रुतत्वे तन्निश्चायकतया लिङ्गत्वमिति शब्दादेवेत्यत्र वक्ष्यमाणदिशा पूर्णानन्दादिरूपलिङ्गमुपक्रमे श्रुतं सद् उपक्रमस्य वैष्णवत्वनिर्णायकतया अस्य प्रकरणस्य विष्णौ तात्पर्यवत्त्वरूपं वैष्णवत्वमनुमापयतीति सूत्रार्थमाह – तथाचेति ।

ಪ್ರಕೃತ 'ಪ್ರಾಣೋ ಬ್ರಹ್ಮ' ಎಂಬ ಅಂಶವನ್ನು ಏಕೆ ಉದಾಹರಿಸಿದ್ದಾರೆ? ಎಂದರೆ 'ಶ್ರುತ' ಎಂಬ ಸೂತ್ರದಲ್ಲಿ 'ಕಗತಿ' ಎಂದು 'ಕ' ಶಬ್ದವನ್ನು ಹೇಳಿದ್ದರಿಂದ ಪ್ರಾಣ ಹಾಗೂ ಬ್ರಹ್ಮ ಎಂಬ ಪದಗಳನ್ನು ಎರಡು ಬಾರಿ ಅನ್ವಯಿಸಿಕೊಳ್ಳಬೇಕೆಂದು ಮುಂದೆ ಹೇಳುತ್ತಾರೆ. ಪೂರ್ಣಾನಂದವೇ ಮೊದಲಾದ ಲಿಂಗವು ಉಪಕ್ರಮದಲ್ಲಿ ಕೇಳಿಸುತ್ತಿರುವುದರಿಂದ ಅಂತಹ ಉಪಕ್ರಮವು ವಿಷ್ಣುಪರವಾಗಿದೆ ಎಂಬುದನ್ನು ನಿರ್ಣಯಿಸುವುದಕ್ಕಾಗಿ ಈ ಪ್ರಕರಣವು ವಿಷ್ಣುವಿನಲ್ಲಿ ತಾತ್ಪರ್ಯವುಳ್ಳಂತಹ ವೈಷ್ಣವತ್ವವನ್ನು ಸಾಧಿಸುತ್ತದೆಂದು ''ತತ್ ಚ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ವಿಶಿಷ್ಟಸುಖವೆಂದು ಹೇಳಬೇಕಲ್ಲವೇ ?

भावदीपः – पूर्णसुखेति ।। 'कडाराः कर्मधारये' इति विशिष्टपदस्य परनिपात इति भावः । सौत्रैवकारार्थमाह – किमुतेति ।। एतेन भाष्ये खं ब्रह्मेत्युक्तेरुपयोगो दर्शितः ।

ಸೂತ್ರದಲ್ಲಿರುವ 'ಸುಖವಿಶಿಷ್ಟ' ಎಂಬ ಪದಕ್ಕೆ ಪೂರ್ಣಸುಖವೆಂದರ್ಥ 'ಕಡಾರಾಃ ಕರ್ಮಧಾರಯೇ' ಎಂಬ ಸೂತ್ರದಂತೆ ವಿಶಿಷ್ಟಪದವು ಪರನಿಪಾತವನ್ನು ಹೊಂದಿದೆ. ಇಲ್ಲದಿದ್ದರೆ ವಿಶಿಷ್ಟಸುಖವೆಂದಾಗಬೇಕಿತ್ತು. ಸೂತ್ರದಲ್ಲಿರುವ 'ಏವ' ಕಾರದ ಅರ್ಥವನ್ನು 'ಕಿಮುತ' ಎಂದು ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿರುವ 'ಖಮ್ ಬ್ರಹ್ಮ 'ಎಂಬುದಕ್ಕೆ ಪ್ರಯೋಜನವನ್ನು ತೋರಿಸಿದಂತಾಯಿತು.

ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಇಲ್ಲ

ಭಾವದೀಪಃ – ननु विज्ञानमित्यादौ पूर्णत्ववाचिपदाभावात् कथं पूर्णानन्द-संवित्त्वस्येत्युक्तिरित्यत आह – **श्रौतमपीति** ।। न केवलं कमित्यादिपदमित्यपेरर्थः । 'मुख्यस्य निर्विशेषेण' इति न्यायात् । पूर्णज्ञानादेरेव मुख्यत्वाद् अन्यथा लक्षणस्यातिव्याप्त्यापत्तेरिति भावः ।

"ವಿಜ್ಞಾನಂ ಆನಂದಮ್" ಎಂಬಲ್ಲಿ ಪೂರ್ಣತ್ವವನ್ನು ಹೇಳುವ ಯಾವುದೇ ಪದಗಳಿಲ್ಲ. ಆದ್ದರಿಂದ ಪೂರ್ಣಾನಂದವನ್ನು ಮತ್ತು ಪೂರ್ಣಜ್ಞಾನವನ್ನು ಇದರಿಂದ ಹೇಗೆ ಹೇಳುತ್ತೀರಿ ? ಎಂಬ ಪ್ರಶ್ನೆಗೆ "ಶ್ರೌತಮಪಿ" ಎಂಬುದರಿಂದ ಉತ್ತರಿಸಿದ್ದಾರೆ. ಕೇವಲ 'ಕಮ್' ಇತ್ಯಾದಿ ಪದಗಳಷ್ಟೆ ಅಲ್ಲವೆಂದು 'ಅಪಿ' ಪದದ ಅರ್ಥ. "ಮುಖ್ಯಸ್ಯ ನಿರ್ವಿಶೇಷೇಣ" ಎಂಬ ನ್ಯಾಯದಂತೆ ಪೂರ್ಣ ಜ್ಞಾನಾದಿಗಳು ಮುಖ್ಯವಾಗಿರುವುದರಿಂದ ಕೇವಲ ಜ್ಞಾನವೆಂದಷ್ಟೇ ಹೇಳಿದರೂ ಪೂರ್ಣಜ್ಞಾನವೆಂದೇ ಅರ್ಥವಾಗುತ್ತದೆ. ಹೀಗೆ ಹೇಳದಿದ್ದರೆ ಜ್ಞಾನಾನಂದಗಳಿಂದ ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಬರುತ್ತದೆಂದು ತಿಳಿಯಬೇಕು.

ಅನ್ಯರ ಆನಂದವು ಅಲ್ಪವಾಗಿದ್ದರೂ ಪೂರ್ಣ

ಭಾವದೀಪಃ – अन्येषामापेक्षिकमेवेति । यथोदञ्चनकुम्भादेः सरित्सागरयोरपि।

अल्पेन महता वापि पूर्तिर्योग्यतया भवेत् ।।
एवं नारादिब्रह्मान्तजीवानां साधनैरपि ।।

अनादिसिद्धैर्भक्त्याद्यैः पूर्तिर्योग्यतया भवेत् ।
अल्पैः पूर्तिस्तथाल्पानां महद्भिर्महतामपि ।।

इति प्रथमाध्याये बृहद्भाष्ये व्यक्तमेतत् । विवरिष्यते चात्रापि 'भूम्नः क्रतुवज्ज्यायस्त्वम्' इत्यादौ तृतीयेऽध्याये ।

'ಅನ್ಯೇಷಾಂ ಆಪೇಕ್ಷಿಕಮೇವ' ಎಂಬ ಟೀಕೆಗೆ ಮಡಿಕೆ ಹಾಗೂ ಸಣ್ಣ ಪಾತ್ರೆಗಳಲ್ಲಿ ನೀರು ಹಿಡಿಸುವಂತೆ ಅಥವಾ ನದಿ ಸಮುದ್ರಗಳಲ್ಲಿ ನೀರು ಹಿಡಿಸುವಂತೆ ಬೇರೆಯವರ ಆನಂದವು ಆಪೇಕ್ಷಿಕವಾಗಿದೆ ಎಂದರ್ಥ.

ಅಲ್ಪೇನ ಮಹತಾ ವಾಪಿ ಪೂರ್ತಿಯೋಗ್ಯತಯಾ ಭವೇತ್ ॥
ಏವಂ ನಾರಾದಿ ಬ್ರಹ್ಮಾಂತಜೀವಾನಾಂ ಸಾಧನೈರಪಿ ॥
ಅನಾದಿಸಿದ್ಧೈರ್ಭಕ್ತಾದ್ಯೈಃ ಪೂರ್ತಿರ್ಯೋಗ್ಯತಯಾ ಭವೇತ್ ॥
ಅಲ್ಪೈಃ ಪೂರ್ತಿಸ್ತಥಾಲ್ಪತಾಂ ಮಹದ್ಭಿರ್ಮಹತಾಮಪಿ ॥

ಯೋಗ್ಯತೆಯು ಅಲ್ಪವಾಗಿರಲಿ ಅಥವಾ ಮಹತ್ತಾಗಿರಲಿ ಬ್ರಹ್ಮದೇವರಿಂದ ಆರಂಭಿಸಿ ಮನುಷ್ಯ ಪರ್ಯಂತ ಸಕಲ ಜೀವರ ಸಾಧನೆಗೆ ತಕ್ಕಂತೆ ಅನಾದಿಸಿದ್ಧವಾದ ಭಕ್ತಾದಿಗಳಿಂದ ಆಯಾ ಜೀವರು ಪೂರ್ಣರಾಗುತ್ತಾರೆ. ಅಲ್ಪಯೋಗ್ಯತೆಯುಳ್ಳ ಜೀವರು ಅಲ್ಪತ್ವದಿಂದಲೇ ಪೂರ್ಣರಾಗುತ್ತಾರೆ. ದೊಡ್ಡ ಯೋಗ್ಯತೆಯುಳ್ಳ ಜೀವರು ದೊಡ್ಡ ಪರಿಮಾಣದಿಂದಲೇ ಪೂರ್ಣರಾಗಿರುತ್ತಾರೆ. ಹೀಗೆ ಬೃಹದ್ ಭಾಷ್ಯದ ಪ್ರಥಮಾಧ್ಯಾಯವು ಈ ವಿಷಯವನ್ನು ಸ್ಪಷ್ಟಮಾಡಿದೆ. ಮುಂದೆ ಸೂತ್ರಕಾರರೂ ಸಹ ''ಭೂಮ್ನಃ ಕ್ರತುವತ್'' ಎಂಬ ಸೂತ್ರದಲ್ಲಿ ಈ ವಿಷಯವನ್ನೇ ವಿವರಿಸಿದ್ದಾರೆ.

ವಿಶಿಷ್ಟಸುಖ ಎಂಬ ಪ್ರಯೋಗದಿಂದ ತಿಳಿಯುವ ಪ್ರಮೇಯ

भावदीपः – यद्वा तथापि पुर्णान्दत्वममुक्तानां व्यपेक्षयेति पञ्चमे बृहद्भाष्योक्तदिशा आपेक्षिकमित्यर्थः । अथवा 'एतस्यैवानन्दस्यान्यानि भूतानि मात्रामुपजीवन्ति' इत्यादेर्भगवदायत्तमित्यर्थः । एतेन सूत्रे पूर्णसुखेत्यनुक्त्वा विशिष्टसुखेत्युक्तिरापेक्षिकपूर्णत्वस्य जीवेष्वपि सत्त्वेन व्यभिचारात् सर्वव्यावृत्तपूर्णत्वलाभायेति सूचितं प्रकरणत्वं प्रकरण-प्रतिपाद्यत्वम् ।। श्रुतिलिङ्गादीति ।। पुरुष आत्मा ब्रह्मेति श्रुत्यमृतत्वादि-लिङ्गब्रह्मप्रकरणरूपबाधकेत्यर्थः ।। १५ ।।

ಅಥವಾ 'ತಥಾಪಿ ಪೂರ್ಣಾನಂದತ್ವಮಮುಕ್ತಾನಾಂ ವ್ಯಪೇಕ್ಷಯಾ' ಎಂಬ ಬೃಹದ್‌ಭಾಷ್ಯದ ಪಂಚಮಾಧ್ಯಾಯದಲ್ಲಿ ಹೇಳಿರುವಂತೆ ಆಪೇಕ್ಷಿಕವಾದ ಪೂರ್ಣಾನಂದವನ್ನೂ ಸಹ ತಿಳಿಯಬಹುದು. ಅಥವಾ ಭಗವಂತನ ಆನಂದದ ಲೇಶದಿಂದಲೇ ಸಕಲ ಪ್ರಾಣಿಗಳು ಉಪಜೀವಿಸಿದ್ದಾರೆ. ಎಂಬುದಾಗಿ ಭಗವಂತನ ಅಧೀನವೆಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ಸೂತ್ರದಲ್ಲಿ ಪೂರ್ಣಸುಖ ಎಂದು

ಹೇಳದೆ ವಿಶಿಷ್ಟಸುಖ ಎಂದು ಹೇಳಿದ್ದರಿಂದ ಆಪೇಕ್ಷಿಕವಾದ ಪೂರ್ಣತ್ವವನ್ನು ಜೀವರಲ್ಲಿಯೂ ಸಹ ಹೇಳಬಹುದೆಂದು ತಿಳಿಯುತ್ತದೆ. ಹೀಗೆ ಪರಮಾತ್ಮನ ಪೂರ್ಣಸುಖತ್ವಲಕ್ಷಣಕ್ಕೆ ಜೀವಾದಿಗಳ ಪೂರ್ಣಸುಖದಲ್ಲಿ ವ್ಯಭಿಚಾರ ಬರುವುದರಿಂದ ಸಕಲ ವ್ಯಾವೃತ್ತವಾದ ಪೂರ್ಣತ್ವದ ಲಾಭಕ್ಕಾಗಿ ಸೂತ್ರದಲ್ಲಿ ವಿಶಿಷ್ಟಸುಖ ಎಂದು ಹೇಳಿದ್ದಾರೆ. ಪ್ರಾಕರಣಿಕಶಬ್ದಕ್ಕೆ ಪ್ರಕರಣಪ್ರತಿಪಾದ್ಯವೆಂದು ಅರ್ಥ. ಶ್ರುತಿಲಿಂಗಾದಿ ಎಂದರೆ ಪುರುಷ, ಆತ್ಮ, ಬ್ರಹ್ಮ ಮೊದಲಾದ ಶ್ರುತಿಗಳು, ಅಮೃತತ್ವ ಮೊದಲಾದ ಲಿಂಗಗಳು ಪ್ರಾಣನ ವಿಷಯದಲ್ಲಿ ಬಾಧಕಗಳಾಗಿವೆ ಎಂದರ್ಥ.

ಬ್ರಹ್ಮಸೂತ್ರ

'ಶ್ರುತೋಪನಿಷತ್ಕಗತ್ಯಭಿಧಾನಾಚ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्राम् – ।। श्रुतोपनिषत्कगत्यभिधानाच्च ।। ।।१-२- १६ ।।

ಅನುವಾದ - ಯಾರು ಈ ವಿದ್ಯೆಯನ್ನು ಶ್ರವಣ ಮನನ ಧ್ಯಾನ ಮಾಡುತ್ತಾರೋ ಅಂತಹವರಿಗೆ ವಾಯುವಿನ ದೆಸೆಯಿಂದ ಪರಮಾತ್ಮನು ದೊರೆಯುತ್ತಾನೆ. ಹೀಗೆ ಹೇಳಿದ್ದರಿಂದಲೂ ಅಕ್ಷಿಸ್ಥನಾದವನು ಬ್ರಹ್ಮನೇ ಆಗಿದ್ದಾನೆ.

ಶ್ರುತೋಪನಿಷತ್ = ಶ್ರವಣ-ಮನನ-ಧ್ಯಾನ ಇವುಗಳನ್ನು ಹೊಂದಿದ ಮನುಷ್ಯರಿಗೆ, ಕೇನ = ಮುಖ್ಯಪ್ರಾಣನಿಂದ, ಕಯೋಃ = ಪರಬ್ರಹ್ಮನ, ಗತೇಃ = ಪ್ರಾಪ್ತಿಯನ್ನು ಹೇಳಲ್ಪಟ್ಟಿರುವುದರಿಂದ, '' ಸ ಏನಾನ್ ಬ್ರಹ್ಮ ಗಮಯತಿ'' ಎಂಬುದಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವುದಿಂದಲೂ, ಚಕ್ಷುರಂತರ್ಗತನಾದವನು ವಿಷ್ಣುವೇ ಆಗಿದ್ದಾನೆ.

ಬ್ರಹ್ಮಸೂತ್ರಭಾಷ್ಯ

ಬ್ರಹ್ಮಪ್ರಾಪ್ತಿವೆಂಬ ಪ್ರಯೋಜನವೂ ಸಹ ಆಧಾರವಾಗಿದೆ

ब्रह्मसूत्रभाष्यम् – ।। श्रुतोपनिषत्कगत्यभिधानाच्च ।। ।। १६ ।।

'स एनान् ब्रह्म गमयति' (छां. ४-१५) इति ।
न ह्यन्यविद्ययाऽन्यगतिर्युक्ता ।।

ಅನುವಾದ - ಅಗ್ನಿಯ ವಿದ್ಯೆಯನ್ನು ತಿಳಿದವನು ಬ್ರಹ್ಮನನ್ನೇ ಹೊಂದುತ್ತಾನೆ ಎಂದು ಛಾಂದೋಗ್ಯವು ಹೇಳಿದೆ. ಬೇರೆಯವರ ವಿದ್ಯೆಯಿಂದ ಅವನ ಪ್ರಾಪ್ತಿಯನ್ನು ಹೇಳುವುದು ಅಯುಕ್ತವಾಗುತ್ತದೆ. ಆದ್ದರಿಂದ ಅಗ್ನಿವಿದ್ಯೆಗೆ ಪರಮಾತ್ಮನೇ ವಿಷಯನು.

ಪ್ರತಿಪದಾರ್ಥ - ಸಃ = ಅಗ್ನಿಯ ಉಪಾಸಕನು, ಏನಾನ್ ಬ್ರಹ್ಮ = ಇಂತಹ ಬ್ರಹ್ಮನನ್ನು, ಗಮಯತಿ = ಹೊಂದುತ್ತಾನೆ. ಇತಿ = ಹೀಗೆ ಛಾಂದೋಗ್ಯವು ಹೇಳಿದೆ. ಅನ್ಯವಿದ್ಯಯಾ = ಅಗ್ನಿಯ ವಿದ್ಯೆಯಿಂದ, ಅನ್ಯ ಗತಿಃ = ಪರಮಾತ್ಮನ ಪ್ರಾಪ್ತಿಯು, ನಹಿ = ಯುಕ್ತವಾಗುವುದಿಲ್ಲ.

ಸತ್ತರ್ಕದೀಪಾವಳಿ

ಅಗ್ನಿವಿದ್ಯೆಯಿಂದ ವಿಷ್ಣು ದೊರೆಯುವುದಿಲ್ಲ

सत्तर्कदीपावलिः – श्रुतोपनिषत्कगत्यभिधानाच्च ।। स एनान् ब्रह्म गमयतीति अक्षिस्थपुरुषज्ञानाद् ब्रह्मगमनश्रवणादप्यसौ विष्णुरेव नाग्निः । नह्यग्निविद्यया विष्णुगतिर्युज्यते । 'यान्ति देवव्रता देवान् पितॄन् यान्ति पितृव्रताः । भूतानि यान्ति भूतेज्याः यान्ति मद्याजिनोऽपि माम्' इति भगवद्वचनविरोधादित्येतमर्थं सूत्रेण दर्शयति – श्रुतेत्यादिना ।।

'ಸ ಏನಾನ್ ಬ್ರಹ್ಮ' ಎಂಬಲ್ಲಿ ಅಕ್ಷಿಯಲ್ಲಿರುವ ಪುರುಷನ ಜ್ಞಾನದಿಂದ ಬ್ರಹ್ಮನು ದೊರೆಯುತ್ತಾನೆಂದು ತಿಳಿಯುತ್ತದೆ. ಆದ್ದರಿಂದ ಅಕ್ಷಿಸ್ಥನಾದವನು ವಿಷ್ಣುವೇ ಆಗಿರುತ್ತಾನೆ ಹೊರತು ಅಗ್ನಿಯಲ್ಲ ಅಗ್ನಿವಿದ್ಯೆಯಿಂದ ವಿಷ್ಣು ದೊರೆಯಲು ಸಾಧ್ಯವಿಲ್ಲ. ಏಕೆಂದರೆ 'ಯಾಂತಿ' ಎಂಬ ಗೀತಾ ಮಾತಿನ ವಿರೋಧ ಬರುತ್ತದೆ. ಹೀಗೆ ಸೂತ್ರವನ್ನು ''ಶ್ರುತ'' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ತತ್ತ್ವಪ್ರದೀಪ

ಸೂತ್ರದಲ್ಲಿರುವ 'ಉಪನಿಷತ್ಕ' ಎಂಬ ಪದದ ಅರ್ಥ

तत्वप्रदीपः – ''श्रुतोपनिषत्कगत्यभिधानाच्च'' ।। 'स एनान् ब्रह्म गमयति' इति 'श्रुतोपनिषत्कानां' श्रुतोपनिषद्गतोपासनानां ब्रह्मगत्यभिधानाच्चान्तरो विष्णुरेव । अस्यामुपनिषण्णं ब्रह्मेत्युपनिषदुपासना, अनया ब्रह्मोपनिषदतीति वा । ब्रह्मोपासकस्यैव हि ब्रह्मगतिः । तदेतदाह – न त्वन्यविद्ययेति ।।छ।।

'स एनान् ब्रह्म गमयति' ಎಂಬುದಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ಅಗ್ನಿವಿದ್ಯೆಯನ್ನು ತಿಳಿದು ಉಪಾಸನೆಯನ್ನು ಮಾಡುವವನು ಬ್ರಹ್ಮನನ್ನೇ ಹೊಂದುತ್ತಾನೆ ಎಂದು ಹೇಳಲಾಗಿದೆ. ಆದ್ದರಿಂದ ಅಗ್ನಿವಿದ್ಯೆಯು ಬ್ರಹ್ಮವಿದ್ಯೆ ಎಂದೇ ಇದರಿಂದ ನಿರ್ಣಯವಾಗುತ್ತದೆ. ಆದ್ದರಿಂದ ಅಂತರ್ಯಾಮಿಯಾಗಿರುವವನು ಮಹಾವಿಷ್ಣುವೇ ಆಗುತ್ತಾನೆ. ಈ ಸೂತ್ರದಲ್ಲಿರುವ 'ಉಪನಿಷತ್ಕ' ಎಂಬ ಪದದ ಅರ್ಥ ಹೀಗಿದೆ - 'ಅಸ್ಯಾಂ ಉಪನಿಷಣ್ಣಂ ಬ್ರಹ್ಮ ಇತಿ ಉಪನಿಷತ್' ಎಂಬ ವ್ಯುತ್ಪತ್ತಿಯಂತೆ ಯಾವ ಉಪಾಸನೆಯಲ್ಲಿ ಬ್ರಹ್ಮನು ಅಚಲವಾಗಿ ನೆಲೆಸಿದ್ದಾನೋ, ಅಂಥ ಉಪಾಸನೆಯು 'ಉಪನಿಷತ್ಕ' ಎಂದು ಕರೆಸಿಕೊಳ್ಳುತ್ತದೆ. ಅಥವಾ 'ಅನಯಾ ಬ್ರಹ್ಮ ಉಪನಿಷದತಿ' ಎಂಬ ವ್ಯುತ್ಪತ್ತಿಯಂತೆ ಉಪಾಸನೆಯಿಂದ ಬ್ರಹ್ಮನು ದೊರೆಯುತ್ತಾನೋ, ಅಂಥ ಬ್ರಹ್ಮನು 'ಉಪನಿಷತ್ಕ' ಎಂದು ಕರೆಸಿಕೊಳ್ಳುತ್ತಾನೆ. 'ಬ್ರಹ್ಮನನ್ನು ಉಪಾಸನೆ ಮಾಡುವವನಿಗೆ ಮಾತ್ರ ಬ್ರಹ್ಮನು ದೊರೆಯುತ್ತಾನೆ' ಎಂಬುದು ಒಟ್ಟು ಅಭಿಪ್ರಾಯ. ಇದನ್ನೇ ಭಾಷ್ಯದಲ್ಲಿ 'ನಹಿ ಅನ್ಯವಿದ್ಯಯಾ' ಇತ್ಯಾದಿಯಾಗಿ ಹೇಳಿದ್ದಾರೆ.

ವಿಶೇಷವಿಚಾರ - ಚಕ್ಷುರಿಂದ್ರಿಯದೊಳಗಿದ್ದು ರಮಿಸುತ್ತಿರುವವನು ಪರಮೇಶ್ವರನೇ ಎಂದನ್ನುವುದನ್ನು ಉಪಪಾದನೆ ಮಾಡಲು ''ಸುಖವಿಶಿಷ್ಟಾಭಿಧಾನಾದೇವ ಚ'' ಎಂದು ಇನ್ನೊಂದು ಸೂತ್ರ ಹೊರಟಿದೆ. ಇಲ್ಲಿ ವಿಶಿಷ್ಟಪದ ಏತಕ್ಕೆ? ವ್ಯರ್ಥವಲ್ಲವೇ? ಸುಖಾಭಿಧಾನಾದೇವ ಚ ಎಂದು ಹೇಳಿದರೆ ಸಾಕಾಗುತ್ತದೆ. ''ಸುಖದ ಅಭಿಧಾನ ಎಂದಿಷ್ಟೇ ಹೇಳಿದರೆ ಸಾಲದು. ಸುಖಸಂಬಂಧವನ್ನು ಹೇಳಬೇಕಾಗಿದೆ. ಅದಕ್ಕಾಗಿ 'ವಿಶಿಷ್ಟ' ಎಂದಿರುವುದು ಸಾರ್ಥಕವೆನಿಸುತ್ತದೆ.'' ಎಂದನ್ನುವುದು ಸರಿಯಲ್ಲ. ಆಗ 'ಸುಖಿತ್ವಾಭಿಧಾನಾತ್ ಎಂದಿದ್ದರೆ

ಸಾಕಾಗುತ್ತಿತ್ತು. 'ಇನಿ'ಪ್ರತ್ಯಯದಿಂದ ಸಂಬಂಧ ಎಂಬೀ ಅರ್ಥಸಿದ್ಧಿಸುತ್ತದೆಯಷ್ಟೆ. ಹಾಗೆ ಹೇಳಿದಾಗ ಸುಖಸಂಬಂಧ ಎಂಬ ಐದು ಅಕ್ಷರಗಳ ಬದಲು ಸುಖಿತ್ವ ಎಂಬ ಮೂರೇ ಅಕ್ಷರಗಳನ್ನು ಹೇಳಿದಂತಾಗಿ ಸೂತ್ರಶರೀರವೂ ಲಘುವಾಗುತ್ತದೆ. ಪ್ರಕೃತ ಸುಖವನ್ನು ಮಾತ್ರ ಹೇಳಿದರೆ ಸಾಕಾಗುತ್ತದೆ. ಅದರ ಸಂಬಂಧವನ್ನೂ ಹೇಳುವುದು ಯುಕ್ತವೂ ಅಲ್ಲ. ಏಕೆಂದರೆ, 'ಪ್ರಾಣೋ ಬ್ರಹ್ಮ ಕಂ ಬ್ರಹ್ಮ' ಇತ್ಯಾದಿ ಶ್ರುತಿಯಲ್ಲಿ ಸುಖಸ್ವರೂಪ ಎಂದಿಷ್ಟೇ ಹೇಳಲಾಗಿದೆ ಹೊರತು ಸುಖಸಂಬಂಧಿ ಎಂದಲ್ಲ

'ಸುಖಾಭಿಧಾನಾತ್' ಎಂದು ಹೇಳಿದರೆ ಸಾಕು. ವಿಶಿಷ್ಟಪದ ಬೇಕಿಲ್ಲ. ಸೂತ್ರವೂ ಕೂಡ ಲಘುವಾದ ಶರೀರವುಳ್ಳದ್ದಾಗಿರುತ್ತಿತ್ತು. ವಿಶಿಷ್ಟಪದವು ಮೂರು ಅಚ್ ವುಳ್ಳದ್ದಾದರೆ ಸುಖಿಪದವು ಎರಡು ಅಚ್‌ಗಳುಳ್ಳದ್ದಾದುದರಿಂದ ಲಾಘವ ಇದೆ ಎಂದು ಲಾಘವ ಚಿಂತನೆಯನ್ನು ಹೇಳಿದರೆ ಸುಖಿ ಶಬ್ದ ಹಾಗೂ ಸುಖವಿಶಿಷ್ಟಶಬ್ದಗಳು ಪರ್ಯಾಯವಾಚಕಗಳಾದ್ದರಿಂದ 'ಪರ್ಯಾಯೇಷು ನ ಲಾಘವಗೌರವಚಿಂತಾ' ಎಂಬ ಪರಿಭಾಷಾನುಸಾರ ಲಾಘವ-ಗೌರವ ಚಿಂತೆಯೆ ಬರುವುದಿಲ್ಲ. ಈ ಶಂಕೆಗೆ ಸಮಾಧಾನ ಹೀಗಿದೆ - ಪರ್ಯಾಯವಾಚಕ ಪದಗಳಲ್ಲಿ ರೂಢಿಯಿಂದ ಲಾಘವ-ಗೌರವ ಚಿಂತನೆ ಮಾಡಬಾರದೆಂದು ಪರಿಭಾಷೆಯ ಅಭಿಪ್ರಾಯವಾಗಿದೆ. ಪ್ರಕೃತದಲ್ಲಿ ಸುಖಿ ಶಬ್ದವು ರೂಢಿಯಿಂದ ಸುಖ ಸಂಬಂಧಬೋಧಕವಾದರೂ ಸುಖವಿಶಿಷ್ಟಶಬ್ದವು ಹಾಗೆ ಬೋಧಕವಾಗಿಲ್ಲ. ಮತ್ತು ಯೋಗದಿಂದಲೇ ಆಗಿದೆಯಾದ್ದರಿಂದ, ಲಾಘವ-ಗೌರವ ಚಿಂತನೆಗೆ ಅವಕಾಶವಾಗಿದೆ ಎಂದರ್ಥ. ಅಥವಾ ಇದೇ ಅಸ್ವಾರಸ್ಯದಿಂದಲೇ 'ಅಯುಕ್ತಂ ಚ ಸುಖಸಂಬಂಧಾಭಿಧಾನಂ' ಎಂದು ಹೇಳಿದ್ದಾರೆಂದು ತಿಳಿಯಬೇಕು.

ತತ್ತ್ವಪ್ರಕಾಶಿಕಾ

ಅಕ್ಷಿಸ್ಥಪ್ರಕರಣವು ವಿಷ್ಣುವಿನದ್ದೋ, ಅಗ್ನಿಯದ್ದೋ ?

तत्त्वप्रकाशिका – श्रुतोपनिषत्कगत्यभिधानाच्च ।। १-२-१६ ।।

नैवमुपक्रमेऽप्यक्षिस्थप्रकरणस्य वैष्णवत्वं युक्तम् । 'प्राणो ब्रह्म' 'कमिति विद्याम्' 'य एष आदित्ये पुरुषः' इत्यादिविद्यां चोक्त्वा

अग्निभिरुपकोसलैषा सौम्य तेऽस्मद्विद्याऽऽत्मविद्या चेत्युक्तत्वेनाद्यविद्याया विष्णुविषयत्वस्य, द्वितीयविद्याया अग्निविषयत्वस्यैव युक्तत्वादक्षिस्थ-विद्यायाश्चादित्यस्थविद्ययैकार्थत्वात् । नचोपक्रमविरोधः । 'ह्यम्यग्निम्' इत्यादाविवोपपत्तेः । न चास्मद्विद्येत्यन्तर्यामिविषयतया योज्यं तथा सत्यात्मविद्येति पृथगुक्त्ययोगात् । तस्मादग्निविषयत्वमेव चक्षुरन्तःस्थविद्याया इत्याशङ्कां परिहरत्सूत्रं पठित्वा तदुपात्तश्रुतिमेवोदाहरति – श्रुतेति ।।

ಈ ಅಕ್ಷಿಸ್ಥಪ್ರಕರಣದ ಪ್ರಾರಂಭದಲ್ಲಿ ''ಪ್ರಾಣೋ ಬ್ರಹ್ಮ'' ಎಂದು ಕೇಳಿಸುತ್ತಿರುವುದರಿಂದ ಈ ಪ್ರಕರಣವು ವಿಷ್ಣುಸಂಬಂಧಿಯಾದ ಪ್ರಕರಣವೆಂದು ಹೇಳಿದ್ದು ಕೂಡುವುದಿಲ್ಲ. ಏಕೆಂದರೆ ಮೂರು ಅಗ್ನಿದೇವತೆಗಳು (ಗಾರ್ಹಪತ್ಯ, ಅನ್ವಾಹಾರ್ಯಪಚನ, ಮತ್ತು ಆಹವನೀಯ) ಉಪಕೋಸಲನೆಂಬ ಶಿಷ್ಯನಿಗೆ ''ಪ್ರಾಣೋ ಬ್ರಹ್ಮ'' ''ಕಮಿತಿ ವಿದ್ಯಾಂ'' ಎಂದು ಆತ್ಮವಿದ್ಯೆಯನ್ನು ಹೇಳಿದ್ದಾರೆ. ಮತ್ತು ''ಯ ಏಷ ಆದಿತ್ಯೇ ಪುರುಷಃ'' ಎಂದು ಆದಿತ್ಯವಿದ್ಯೆಯನ್ನು ಹೇಳಿ, ಮುಂದೆ. ''ಏಷಾ ಸೌಮ್ಯ ತೇऽಸ್ಮದ್ವಿದ್ಯಾऽತ್ಮವಿದ್ಯಾ ಚ'' ಹೇ ಸೌಮ್ಯ ಉಪಕೋಸಲ, ನಾವು ನಿನಗೆ ನಮ್ಮ ವಿಷಯಕ ವಿದ್ಯೆಯನ್ನೂ ಮತ್ತು ಆತ್ಮವಿದ್ಯೆಯನ್ನೂ ಹೇಳಿದ್ದೇವೆ ಎಂದು ಹೇಳಿದ್ದಾರೆ. ಮೊದಲಿನ ವಿದ್ಯೇ ವಿಷ್ಣು ಸಂಬಂಧಿಯಾಗಿದ್ದು, ಎರಡನೆಯ ವಿದ್ಯೆಯು ಅಗ್ನಿ ಸಂಬಂಧಿಯಾಗಿದೆ. ಅಕ್ಷಿಸ್ಥವಿದ್ಯಾ ಮತ್ತು ಆದಿತ್ಯವಿದ್ಯಾವು ಒಂದೇ ಅರ್ಥವನ್ನು ಪ್ರತಿಪಾದನೆ ಮಾಡುವುದರಿಂದ ಅಕ್ಷಿಸ್ಥನು ಅಗ್ನಿಯೇ ಹೊರತು ವಿಷ್ಣುವಲ್ಲ. ಆದರೆ ''ಪ್ರಾಣೋ ಬ್ರಹ್ಮ'' ಎಂದು ಪ್ರಾರಂಭವಿರುವುದರಿಂದ ಉಪಕ್ರಮದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಏಕೆಂದರೆ ಆರಂಭದಲ್ಲಿ ವಿಷ್ಣು ಸಂಬಂಧಿಯಾದ ಉಪಕ್ರಮವಿದ್ದರೂ ಮುಂದೆ ''ಅಸ್ಮದ್‌ವಿದ್ಯಾ'' ಎಂದು ಸ್ಪಷ್ಟವಾಗಿ ಕೇಳಿಬರುವುದರಿಂದ ಇದು ಅಗ್ನಿಪ್ರಕರಣವೆಂದೇ ಹೇಳಬೇಕು.

''ಅಸ್ಮದ್ವಿದ್ಯಾ'' ಎಂಬಲ್ಲಿ ''ಅಸ್ಮತ್'' ಪದವನ್ನು ಅಂತರ್ಯಾಮಿ ಪರವಾಗಿ (ಅಗ್ನಿಯ ಅಂತರ್ಯಾಮಿ ಎಂದು) ಕೂಡಿಸಬಹುದಲ್ಲವೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಅಂತರ್ಯಾಮಿ ಎಂಬ ಅರ್ಥವನ್ನು ಸ್ವೀಕಾರ ಮಾಡಿದರೆ ''ಆತ್ಮವಿದ್ಯಾ'' ಎಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇರಲಿಲ್ಲ.

ಅಗ್ನಿಪ್ರಕರಣವೆಂಬ ಪೂರ್ವಪಕ್ಷದ ನಿರಾಕರಣೆ

तत्वप्रकाशिका – नैतद्विद्याया अग्निविषयत्वं युक्तमपि तु विष्णुविषयत्वमेव। 'अथ यदुचैवास्मिन्, शव्यं कर्म कुर्वन्ति यदु चैनाऽर्चिष मेवाभिसम्भवन्त्यर्चिषोऽहरन्ह आपूर्यमाणपक्षमापूर्यमाणपक्षाद्यान् षद् उदङ् ति मासा५स्तान् मासेभ्यः संवत्सर५ संवत्सरादादित्यमादित्याच्चन्द्रमसं चन्द्रमसो विद्युतं तत्पुरुषो मानवः स एतान् ब्रह्म गमयति' इति श्रुतैतद्विद्यानां ब्रह्मगत्यभिधानादिति भावः ।

ಆದ್ದರಿಂದ ಚಕ್ಷುರಂತಸ್ಥವಿದ್ಯೆಯು ಅಗ್ನಿವಿಷಯಕವೇ ಆಗಿದೆ ಎಂದು ಶಂಕಾವನ್ನು ಮಾಡಿದರೆ, ಅದನ್ನು ಪರಿಹಾರ ಮಾಡುವ ಸೂತ್ರವನ್ನು ಹೇಳಿ, ಸೂತ್ರದಲ್ಲಿ ಅಡಗಿರುವ ಶ್ರುತಿಯನ್ನೇ ಉದಾಹರಿಸುತ್ತಿದ್ದಾರೆ ''ಶ್ರುತ'' ಎಂದು. ಈ ವಿದ್ಯೆಯು ಅಗ್ನಿವಿಷಯಕವಲ್ಲ ವಿಷ್ಣುವಿಷಯಕವೇ ಆಗಿದೆ. ಏಕೆಂದರೆ ಛಾಂದೋಗ್ಯೋಪನಿಷತ್ತಿನ ಮಂತ್ರವು ಈ ರೀತಿಯಾಗಿದೆ- ಅಥ ಯದು ಚೈವಾಸ್ಮಿನ್ ಶವ್ಯಂ ಕರ್ಮ ಕುರ್ವಂತಿ, ಯದು ಚ ನ, ಅರ್ಚಿಷಮೇವ ಅಭಿಸಂಭವಂತಿ (ವಿಶಂತಿ) । ಅರ್ಚಿಷಃ ಅಹಃ । ಅಹ ಆಪೂರ್ಯಮಾಣಪಕ್ಷಂ। ಆಪೂರ್ಯಮಾಣಪಕ್ಷಾತ್ ಯಾನ್ ಷಟ್ ಉದಙ್ ತಿ ಮಾಸಾನ್ ತಾನ್ । ಮಾಸೇಭ್ಯಃ ಸಂವತ್ಸರಂ । ಸಂವತ್ಸರಾದಾದಿತ್ಯಂ । ಆದಿತ್ಯಾತ್ ಚಂದ್ರಮಸಂ । ಚಂದ್ರಮಸೋವಿದ್ಯುತಂ । ತತ್ಪುರುಷೋ ಮಾನವಃ ।

ಸ ಏನಾನ್ ಬ್ರಹ್ಮ ಗಮಯತಿ ।

ಕಣ್ಣಿನೊಳಗಿರುವ ಅಸಂಗನಾದ ಪರಮಾತ್ಮನನ್ನು ತಿಳಿದ ಜ್ಞಾನಿಗಳು ಮರಣ ಹೊಂದಿದಾಗ ಅವರಿಗೆ ದಹನಾದಿ ಉತ್ತರ ಕರ್ಮಗಳನ್ನು ಮಾಡಲಿ ಅಥವಾ ಮಾಡದಿರಲಿ, ಮೃತರಾದ ಆ ಜ್ಞಾನಿಗಳಂತೂ ಶ್ರೀಹರಿಯ ಅನುಗ್ರಹದಿಂದ ಅರ್ಚಿರ್ ಲೋಕವನ್ನು ಹೊಂದಿ - ಅಲ್ಲಿಂದ ಅತಿವಾಹಿಕ ಎಂಬ ವಾಯುಲೋಕವನ್ನೂ, ಅನಂತರ ಹಗಲಿಗಭಿಮಾನಿಯಾದ ದೇವತೆಯ ಲೋಕವನ್ನೂ, ಅಲ್ಲಿಂದ ಶುಕ್ಲಪಕ್ಷಾಭಿಮಾನಿ ದೇವತೆಯ ಲೋಕವನ್ನೂ, ಅಲ್ಲಿಂದ ಸೂರ್ಯನು ಉತ್ತರದಲ್ಲಿ ಸಂಚರಿಸುವ ಕಾಲವೆನಿಸಿದ ಉತ್ತರಾಯಣದ ಆರುತಿಂಗಳಿಗಳಿಮಾನಿಯಾದ

ದೇವತೆಯ ಲೋಕವನ್ನೂ, ಅಲ್ಲಿಂದ ಸಂವತ್ಸರಾಭಿಮಾನಿ ಲೋಕವನ್ನೂ, ಅಲ್ಲಿಂದ ಆದಿತ್ಯಲೋಕವನ್ನೂ, ಆದಿತ್ಯಲೋಕದಿಂದ ಚಂದ್ರಲೋಕವನ್ನೂ, ಚಂದ್ರಲೋಕದಿಂದ ವೈಶ್ವಾನರ, ಇಂದ್ರ, ಧ್ರುವಲೋಕಗಳ ಮೂಲಕ ವಿದ್ಯುತ್ತಿಗಭಿಮಾನಿಯಾದ ಭಾರತೀ-ದೇವಿಯನ್ನೂ ಹೊಂದುತ್ತಾರೆ. ಬಳಿಕ ಭಾರತಿಯ ಪತಿಯೂ, ಭಗವಂತನ ಪ್ರಿಯಭೃತ್ಯನೂ ಆದ ವಾಯುವನ್ನು ಹೊಂದುತ್ತಾರೆ.

ಆ ವಾಯುದೇವರು ದೇಹದಲ್ಲಿ ಭಗವಂತನನ್ನು ಉಪಾಸನೆ ಮಾಡುವ ಜ್ಞಾನಿಗಳನ್ನು ಕಾರ್ಯಬ್ರಹ್ಮನೆನಿಸಿದ ಚತುರ್ಮುಖಬ್ರಹ್ಮದೇವರ ಬಳಿಗೂ ವ್ಯಾಪ್ತೋಪಾಸಕ ಜ್ಞಾನಿಗಳನ್ನು ಪರಬ್ರಹ್ಮನೆನಿಸಿದ ಪರಮಾತ್ಮನ ಬಳಿಗೂ ಕರೆದುಕೊಂಡು ಹೋಗುವರು. ಹೀಗೆ ಈ ವಿಶಿಷ್ಟ ಜ್ಞಾನದ ಫಲ ಬ್ರಹ್ಮಪ್ರಾಪ್ತಿ ಎಂದು ಅಭಿಪ್ರಾಯ.

'ಶ್ರುತೋಪನಿಷತ್ಕಗತಿ' ಎಂಬ ಸೂತ್ರದಲ್ಲಿರುವ ಪದಗಳ ವ್ಯಾಖ್ಯಾನ

तत्वप्रकाशिका – श्रुतपदं मनननिदिध्यासनोपलक्षकम् । कगतिरिति ब्रह्मगतिः । कं ब्रह्मेति प्रकृतत्वात् । केन वायुना गतिरिति वा । 'को वायुरिति शब्दितः' इत्यभिधानात् । अथवा श्रुतोपनिषदुपकोसलं प्रति एतद्विद्याफलत्वेन कगत्यभिधानादिति । नच वाच्यमत्र कगतिकथनमेव श्रूयते न तद्विद्याफलत्वेनेति । सर्वेषु लोकेषु भाति य एवं वेदेति फलश्रुतिसामीप्यात्। अन्यथा असङ्गतेश्च ।

ಸೂತ್ರದಲ್ಲಿರುವ ''ಶ್ರುತ'' ಪದದಿಂದ ಮನನ ನಿದಿಧ್ಯಾಸನವನ್ನು ಉಪಲಕ್ಷಣವಾಗಿ ಸ್ವೀಕರಿಸಬೇಕು. ''ಕ ಗತಿ'' ಎಂದರೆ ''ಬ್ರಹ್ಮಗತಿ'' ಎಂದರ್ಥ. ಏಕೆಂದರೆ ''ಕಂ ಬ್ರಹ್ಮ'' ಎಂದು ಹಿಂದೆ ಪ್ರಕೃತವಾಗಿದೆ. ಅಥವಾ ''ಕೇನ = ವಾಯುನಾ ಗತಿಃ'' ಎಂದು ಅರ್ಥಾಂತರ ಮಾಡಬಹುದು. ಏಕೆಂದರೆ ''ಕೋ ವಾಯುರಿತಿ ಶಬ್ದಿತಃ'' ಎಂದು ಕೋಶವಿದೆ. ಅಥವಾ ಯಾರು ಈ ಉಪನಿಷತ್ತನ್ನು ಶ್ರವಣ ಮಾಡಿದ್ದಾರೋ, ಅಂದರೆ ಉಪಕೋಸಲನನ್ನು ಕುರಿತು ಆ ವಿದ್ಯೆಯ ಫಲವಾದ ಬ್ರಹ್ಮಪ್ರಾಪ್ತಿಯನ್ನು ಹೇಳಿದ್ದಾರೆಂದು ತಿಳಿಯಬೇಕು.

ಪ್ರಶ್ನೆ - ಈ ಛಾಂದೋಗ್ಯಶ್ರುತಿಯಲ್ಲಿ ಕೇವಲ 'ಕ' ಗತಿಯೆಂದು ಮಾತ್ರ ಕೇಳಿಸುತ್ತಿದೆ ಹೊರತು, ಅಕ್ಷಿಸ್ಥ ವಿದ್ಯೆಯ ಫಲವೆಂದು ಹೇಳಿಲ್ಲವಲ್ಲ?

ಉತ್ತರ - 'ಕ' ಗತಿಯನ್ನು ಹೇಳಿರುವ ಶ್ರುತಿಯ ಪೂರ್ವವಾಕ್ಯವು ''ಸರ್ವೇಷು ಲೋಕೇಷು ಭಾತಿ ಯ ಏವಂ ವೇದ'' (ಯಾರು ಈ ವಿದ್ಯೆಯನ್ನು ತಿಳಿಯುತ್ತಾರೆಯೋ ಅವರು ಎಲ್ಲಾ ಲೋಕಗಳಲ್ಲಿಯೂ ಪ್ರಕಾಶಮಾನರಾಗಿರುತ್ತಾರೆ) ಎಂದು ಈ ವಿದ್ಯೆಯ ಫಲವು ಪಠಿತವಾಗಿದೆ. ಈ ಮಂತ್ರವು ಅಕ್ಷಿಸ್ಥವಿದ್ಯೆಯ ಫಲವಲ್ಲದಿದ್ದರೆ ಮಧ್ಯದಲ್ಲಿ ಇದನ್ನು ಹೇಳುವುದು ಅಸಂಗತವಾಗುತ್ತಿತ್ತು.

ಇದು ಅಗ್ನಿವಿದ್ಯೆ ಏಕಲ್ಲ?

तत्वप्रकाशिका – अस्त्वेतद्विद्याया ब्रह्मप्राप्तिः फलम्, तथापि कुतो नाग्निविषयत्वमित्यत आह – नहीति ।। यदीयमग्निविद्या तर्ह्येतद्विद्ययाऽग्निप्राप्तिरेव फलत्वेनोच्यते, न ब्रह्मप्राप्तिः । 'देवान् देवयजो यान्ति मद्भक्ता यान्ति मामपि' इत्यादेरन्यविद्ययाऽन्यगतेरयुक्तत्वात् । अतो ब्रह्मप्राप्तिफलैतद्विद्याया ब्रह्मपरत्वमेवेति भावः ।

ಪ್ರಶ್ನೆ - ಆಗಲಿ, ನೀವು ಹೇಳಿದ ಪ್ರಕಾರ ಈ ಅಕ್ಷಿಸ್ಥ ವಿದ್ಯೆಯ ಫಲವು ಬ್ರಹ್ಮಪ್ರಾಪ್ತಿ ಎಂದು ಆಗಲಿ. ಆದರೂ ಸಹ ಈ ಪ್ರಕರಣವು ಅಗ್ನಿ ವಿಷಯವೇ ಆಗಿದೆ ಎಂದು ಏಕೆ ಹೇಳಬಾರದು?

ಉತ್ತರ - ಈ ಪ್ರಶ್ನೆಗೆ ಆಚಾರ್ಯರು ಭಾಷ್ಯದಲ್ಲಿ ''ನಹಿ'' ಎಂಬ ವಾಕ್ಯದಿಂದ ಉತ್ತರಿಸುತ್ತಿದಾರೆ. ಒಂದು ವೇಳೆ ಈ ವಿದ್ಯೆಯು ಅಗ್ನಿವಿದ್ಯೆ ಆಗಿದ್ದ ಪಕ್ಷದಲ್ಲಿ ಫಲರೂಪವಾಗಿ ಅಗ್ನಿಪ್ರಾಪ್ತಿಯನ್ನೇ ಹೇಳಬೇಕೇ ಹೊರತು ಬ್ರಹ್ಮಪ್ರಾಪ್ತಿಯನ್ನಲ್ಲ. ಏಕೆಂದರೆ ಗೀತೆಯಲ್ಲಿ ''ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ'' ಅನ್ಯ ದೇವತೆಗಳನ್ನು ಆರಾದನೆ ಮಾಡಿದವರು ಆಯಾ ದೇವತೆಗಳನ್ನೇ ಹೊಂದುತ್ತಾರೆ, ನನ್ನ ಭಕ್ತರು ನನ್ನನ್ನೇ ಹೊಂದುತ್ತಾರೆ ಎಂದು ಶ್ರೀಕೃಷ್ಣನ ಮಾತಿದೆ. ಆದ್ದರಿಂದ ಅಗ್ನಿವಿದ್ಯೆಯಿಂದ ಬ್ರಹ್ಮ ಪ್ರಾಪ್ತಿಯನ್ನು ಹೇಳುವುದು ಯುಕ್ತವಲ್ಲ. ಆದ್ದರಿಂದ ಬ್ರಹ್ಮ ಪ್ರಾಪ್ತಿರೂಪವಾದ ಫಲವನ್ನು ಹೇಳಿರುವುದರಿಂದ ಈ ವಿದ್ಯೆಯು ಬ್ರಹ್ಮಪರವಾಗಿಯೇ ಇದೆ ಎಂದು ಸಿದ್ಧವಾಗುತ್ತದೆ.

ಅಗ್ನ್ಯಂತರ್ಗತ ಪರಮಾತ್ಮನ ಉಪಾಸನೆಯೇ ಪ್ರಕರಣದ ಉದ್ದೇಶ

तत्वप्रकाशिका – नचास्मद्विद्येत्युक्तिविरोधः । तस्य अन्तर्यामि-विषयत्वोपपत्तेः । श्रुतेरपि निरवकाशत्वोपपत्तेः प्राबल्यात् । नचात्मविद्येति पृथगुक्तिविरोधः । तस्याः सर्वगतात्मविद्यात्वाभिधायकत्वात् । तस्यैव ब्रह्मत्वात् ।। १६ ।।

ಈಗ 'ಅಸ್ಮದ್ವಿದ್ಯಾ' ಎಂದು ಅಗ್ನಿದೇವತೆಗಳು ಸ್ಪಷ್ಟವಾಗಿ ಹೇಳಿರುವುದರಿಂದ, ಇದರ ವಿರೋಧ ಬರುತ್ತದೆಂದು ಹೇಳಬಾರದು. ಏಕೆಂದರೆ ''ಅಸ್ಮತ್'' ಎಂದರೆ ''ನಮ್ಮ ಅಂತರ್ಯಾಮಿ'' ಎಂದರ್ಥವನ್ನೂ ಮಾಡಿ ಶ್ರುತಿಯಲ್ಲಿರುವ ಆ ಶಬ್ದವನ್ನು ಹೊಂದಿಸಬಹುದು. ಏಕೆಂದರೆ ಸಾವಕಾಶವಾದ ಅಸ್ಮತ್ ಶಬ್ದವು ಶ್ರುತಿಗಿಂತ ನಿರವಕಾಶವಾದ ಬ್ರಹ್ಮಪ್ರಾಪ್ತಿರೂಪವಾದ ಫಲವೆಂಬ ಉಪಪತ್ತಿಯು ಪ್ರಬಲವಾಗಿದೆ.

''ಅಸ್ಮದ್ವಿದ್ಯಾ'' ಮತ್ತು ''ಆತ್ಮವಿದ್ಯಾ'' ಎಂದು ಪ್ರತ್ಯೇಕವಾಗಿ ಏಕೆ ಹೇಳಬೇಕು? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಉತ್ತರ - ಆತ್ಮವಿದ್ಯಾ ಎಂದರೆ ಸರ್ವಗತನಾದ ಪರಮಾತ್ಮನ ವಿದ್ಯೆ ಎಂದೂ, ''ಅಸ್ಮದ್ವಿದ್ಯಾ'' ಎಂದರೆ ಅಗ್ನಿಯ ಅಂತರ್ಯಾಮಿಯಾದ ಪರಮಾತ್ಮನ ವಿದ್ಯೆಯೆಂದು ಅರ್ಥ ಮಾಡಬೇಕು. ಅಂದರೆ ಈ ರೀತಿಯಿಂದ ಪರಮಾತ್ಮನ ಜ್ಞಾನವನ್ನು ಹೊಂದಬೇಕೆಂಬುದೇ ಶ್ರುತಿಯ ಅಭಿಪ್ರಾಯ. ಈ ಸರ್ವಗತನಾದ ಆತ್ಮನೇ ಬ್ರಹ್ಮನು.

ಭಾವದೀಪ

ಮೂರು ವಿದ್ಯೆಯನ್ನು ಶ್ರುತಿ ಹೇಳುತ್ತಿಲ್ಲ

भावदीपः – शङ्कते – नैवमिति ।। प्राणो ब्रह्मेत्येतदंशानुवादस्तु विद्यात्रैविध्य-शङ्कानिरासायात्मविद्यात्वेन सङ्ग्रहार्थमित्येके ।

'ನೈವಂ' ಇತ್ಯಾದಿ ವಾಕ್ಯದಿಂದ ಆಶಂಕಿಸುತ್ತಿದ್ದಾರೆ. ಟೀಕೆಯಲ್ಲಿ 'ಪ್ರಾಣೋ ಬ್ರಹ್ಮ' ಎಂಬ ಅಂಶವನ್ನೇಕೆ ಅನುವಾದ ಮಾಡಿದ್ದಾರೆಂದರೆ ಮೂರು ಬಗೆಯ ವಿದ್ಯೆಯನ್ನು ಶ್ರುತಿ ಹೇಳುತ್ತಿದೆಯೆಂಬ

ಶಂಕೆ ಬರುತ್ತಿತ್ತು. ಅದನ್ನು ಪರಿಹರಿಸಿ ಎಲ್ಲವೂ 'ಆತ್ಮವಿದ್ಯಾತ್ವ' ಧರ್ಮದಿಂದ ಸಮಾನವಾಗಿದೆಯೆಂದು ತಿಳಿಸಲು 'ಪ್ರಾಣೋ ಬ್ರಹ್ಮ' ಎಂಬುದನ್ನು ಉಲ್ಲೇಖಿಸಿದ್ದಾರೆಂದು ಕೆಲವರು ಹೇಳುತ್ತಾರೆ.

ದೃಷ್ಟಾಂತಕ್ಕಾಗಿ 'ಪ್ರಾಣೋ ಬ್ರಹ್ಮ' ಎಂದು ಕೆಲವರ ಅಭಿಪ್ರಾಯ

भावदीपः – केचित्तु प्राणोपक्रमेऽपि बाधकाद् यथा न प्राणविद्यात्वं सर्वस्य, तथा ब्रह्मोपक्रमेऽप्यग्नीनामादित्यस्थत्वोक्तिबाधकेन न ब्रह्मविद्यात्वम्, किन्तु अग्निविद्यात्वमेवेति दृष्टान्तार्थं 'प्राणो ब्रह्म' इत्यंशानुवादः, अत एव प्राक् श्रुतिलिङ्गादिबाधकसद्भावान्न प्रकरणित्वं प्राणस्येत्युक्तमित्याहुः ।

ಇನ್ನು ಕೆಲವರ ಸಮಾಧಾನ ಹೀಗಿದೆ - ಉಪಕ್ರಮದಲ್ಲಿ ಪ್ರಾಣಶಬ್ದವಿದ್ದರೂ ಬಾಧಕವಿರುವುದರಿಂದ ಇದು ಹೇಗೆ ಸಂಪೂರ್ಣ ಪ್ರಾಣ ವಿದ್ಯೆ ಆಗುವುದಿಲ್ಲವೋ, ಅದರಂತೆ ಉಪಕ್ರಮದಲ್ಲಿ ಬ್ರಹ್ಮಶಬ್ದವಿದ್ದರೂ ಅಗ್ನಿಗಳಿಗೆ ಆದಿತ್ಯಸ್ಥತ್ವವೆಂಬ ಬಾಧಕವನ್ನು ಹೇಳಿದ್ದರಿಂದ ಬ್ರಹ್ಮವಿದ್ಯೆ ಎನಿಸುವುದಿಲ್ಲ. ಹೊರತಾಗಿ ಅಗ್ನಿವಿದ್ಯೆಯೇ ಆಗುತ್ತದೆ. ಹೀಗೆ ದೃಷ್ಟಾಂತವನ್ನು ತೋರಿಸುವುದಕ್ಕಾಗಿ 'ಪ್ರಾಣೋ ಬ್ರಹ್ಮ' ಎಂಬ ಅಂಶವನ್ನು ಅನುವಾದ ಮಾಡಿದ್ದಾರೆ. ಆದ್ದರಿಂದಲೇ ಹಿಂದೆ ಶ್ರುತಿ ಲಿಂಗ ಮೊದಲಾದ ಬಾಧಕಗಳಿರುವುದರಿಂದ ಪ್ರಾಣನು ಪ್ರಕರಣಪ್ರತಿಪಾದ್ಯನಾಗುವುದಿಲ್ಲವೆಂದು ಹೇಳಿದ್ದರೆಂದು.

ಅಕ್ಷಿಸ್ಥ ಪ್ರಕರಣವು ವಿಷ್ಣು ಪ್ರತಿಪಾದಕವಲ್ಲವೆಂದು ಆಕ್ಷೇಪ

भावदीपः – श्रुतौ सान्निध्यमनुरुध्य व्युत्क्रमेणोक्तावपि स्वयं यथाक्रममन्वयमाह – आद्येति ।। कं ब्रह्मेत्युक्तविद्याया इत्यर्थः । तावता अक्षिस्थो विष्णुरित्यत्र किमायातम्? अत आह – अक्षिस्थेति ।।

ಶ್ರುತಿಯಲ್ಲಿ ಸಾನ್ನಿಧ್ಯವನ್ನು ಅನುಸರಿಸಿ ವಿಪರೀತವಾಗಿ ಹೇಳಿದ್ದರೂ ಗ್ರಂಥಕಾರರು ಯಥಾರೀತಿಯಾಗಿ ಅನ್ವಯ ಮಾಡಿ ಹೇಳುತ್ತಿದ್ದಾರೆ 'ಆದ್ಯವಿದ್ಯಾಯಾಃ' ಇತ್ಯಾದಿಯಾಗಿ 'ಕಂ ಬ್ರಹ್ಮ' ಇತ್ಯಾದಿಯಾಗಿ ಹೇಳಲ್ಪಟ್ಟ ವಿದ್ಯೆಯೇ ಆದ್ಯವಿದ್ಯೆ ಎನಿಸುತ್ತದೆ. ಹೀಗೆ ಹೇಳಿದ್ದರಿಂದ ಅಕ್ಷಿಸ್ಥನಾದವನು ವಿಷ್ಣುವಾಗಿದ್ದಾನೆಂಬ ವಿಷಯದಲ್ಲಿ ಹೇಗೆ ಆಕ್ಷೇಪಿಸಿದಂತಾಯಿತು ? ಎಂಬ ಪ್ರಶ್ನೆಗೆ 'ಅಕ್ಷಿಸ್ಥ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಅಗ್ನಿಪ್ರಕರಣವೆನ್ನಲು ನಿಶ್ಚಾಯಕ ಪ್ರಮಾಣ

ಭಾವದೀಪಃ – 'ಹ್ವಯಾಮ್ಯಗ್ನಿಮ್ ಪ್ರಥಮಂ ಸ್ವಸ್ತಯೇ' ಇತ್ಯತ್ರಾಗ್ನೇರುಪಕ್ರಮೇऽಪಿ 'ಸವಿತಾರಮೂರ್ತಯೇ' 'ಹಿರಣ್ಮಯೇನ ಸವಿತಾ ರಥೇನ' ಇತ್ಯಾದಿಸವಿತೃಶ್ರುತಿಲಿಙ್ಗಾದಿನಾ ತತ್ಪ್ರಕರಣಂ ಸಾವಿತ್ರಂ ಹ್ವಯಾಮ್ಯೇಕಾದಶಸಾವಿತ್ರಮಿತ್ಯನುಕ್ರಮಣಿಕೋಕ್ತೇಃ । ತಥಾऽತ್ರಾಪ್ಯ ಸ್ಮದ್ವಿದ್ಯೇತ್ಯಗ್ನಿಭಿರುಕ್ತತ್ವಾದಗ್ನಿಪ್ರಕರಣಮಿತ್ಯರ್ಥಃ । ಏತೇನ ಪ್ರಾಣಸ್ಯ ನ ಪ್ರಕರಣಿತ್ವಮಿತ್ಯೇತದಪ್ಯುಪಪಾದಿತಂ ಬೋಧ್ಯಮ್

'ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ' ಎಂಬಲ್ಲಿ ಅಗ್ನಿಯು ಉಪಕ್ರಮದಲ್ಲಿ ಪ್ರಸಕ್ತನಾಗಿದ್ದರೂ 'ಸವಿತಾರಮೂರ್ತಯೇ ಹಿರಣ್ಮಯೇನ ಸವಿತಾ ರಥೇನ' ಇತ್ಯಾದಿಯಾಗಿ ಸವಿತೃಶ್ರುತಿ ಹಾಗೂ ಸವಿತೃಲಿಂಗಗಳ ಬಲದಿಂದ ಆ ಪ್ರಕರಣವು ಸಾವಿತ್ರಪ್ರಕರಣವೆಂದು ತಿಳಿಯುತ್ತದೆ. 'ಹ್ವಯಾಮ್ಯೇಕಾದಶಸಾವಿತ್ರಮ್' ಎಂದು ಅನುಕ್ರಮಣಿಕೆಯಲ್ಲಿ ಹೇಳಿದ್ದರಿಂದ ಅದರಂತೆ ಇಲ್ಲಿಯೂ 'ಅಸ್ಮದ್‌ವಿದ್ಯಾ' ಇತ್ಯಾದಿಯಾಗಿ ಅಗ್ನಿಗಳ ಉಪದೇಶವಿರುವುದರಿಂದ ಅಗ್ನಿಪ್ರಕರಣವೆಂದು ನಿಶ್ಚಯಿಸಬಹುದು. ಹೀಗೆ ಹೇಳಿದ್ದರಿಂದ ಪ್ರಾಣನು ಪ್ರಕರಣಪ್ರತಿಪಾದ್ಯನಲ್ಲವೆಂದು ತಿಳಿಯುತ್ತದೆ.

ನ್ಯಾಯವಿವರಣದಲ್ಲಿರುವ ಆದಿಪದಾರ್ಥ

ಭಾವದೀಪಃ – ಇತಿ ಪೃಥಗುಕ್ತೀತಿ ।। ಏತೇನ ನ್ಯಾಯವಿವರಣೇ 'ಸೋऽಹಮಸ್ಮಿ ಸ ಏವಾಹಮಸ್ಮಿ' ಇತ್ಯಾದ್ಯಭ್ಯಾಸೇತ್ಯತ್ರಾಸ್ಮದ್ವಿದ್ಯಾ ಆತ್ಮವಿದ್ಯೇತಿ ವಿದ್ಯಾಶಬ್ದಾಭ್ಯಾಸೋऽ-ಪ್ಯಾದಿಪದೇನ ಗೃಹೀತ ಇತಿ ದರ್ಶಿತ ಇತ್ಯಾಹುಃ ।

ಇದರಿಂದ 'ಸೋऽಹಮಸ್ಮಿ ಸ ಏವಾಹಮಸ್ಮಿ ಇತ್ಯಾದ್ಯಭ್ಯಾಸ' ಎಂಬ ನ್ಯಾಯವಿವರಣ ವಾಕ್ಯದಲ್ಲಿರುವ ಆದಿಪದದಿಂದ 'ಅಸ್ಮದ್‌ವಿದ್ಯಾ ಆತ್ಮವಿದ್ಯಾ' ಎಂಬ ವಿದ್ಯಾಶಬ್ದದ ಅಭ್ಯಾಸವನ್ನೂ ಸ್ವೀಕರಿಸಬೇಕು. ಅದಕ್ಕಾಗಿ 'ದರ್ಶಿತಃ' ಎಂಬ ಪದವನ್ನು ಬಳಸಿದ್ದಾರೆಂದು ಕೆಲವರು ಹೇಳುತ್ತಾರೆ.

ಪ್ರಕರಣವು ಅಗ್ನಿವಿಷಯಕವಲ್ಲವೆಂಬ ಸಿದ್ಧಾಂತದ ಸ್ಥಾಪನೆ

ಭಾವದೀಪಃ – ಭಾಷ್ಯಸ್ಯ ಸೂತ್ರೇಣಾನ್ವಯಂ ದರ್ಶಯನ್ 'ಸ ಏನಾನ್' ಇತಿ ಪದದ್ವಯಪರಾಮೃಷ್ಟಂ ವಕ್ತುಂ ಕೃತ್ಸ್ನವಾಕ್ಯಮುಪಾಪದಾನಃ ಸೂತ್ರಾರ್ಥಮಾಹ – ನೈತದಿತಿ ।। ಅನ್ತರೋ

विष्णुरेवेत्यनुवृत्तस्य तात्पर्योक्तिरियम् । श्रवणमात्रस्य ब्रह्मप्राप्त्यहेतुत्वाद् 'य एवं वेद' इत्यपरोक्षस्याप्युक्तेरिति भावेनाह – उपलक्षकमिति ।।

ಭಾಷ್ಯದಲ್ಲಿರುವ ಮಾತುಗಳಿಗೆ ಸೂತ್ರದ ಜೊತೆ ಅನ್ವಯ ತೋರಿಸುತ್ತಾ 'ಸಃ' ಏನಾನ್, ಎಂಬೆರಡು ಪದಗಳಿಂದ ಪರಾಮರ್ಶಿಸಿದ್ದನ್ನು ಹೇಳುವುದಕ್ಕಾಗಿ ಸಂಪೂರ್ಣ ವಾಕ್ಯವನ್ನು ಉಲ್ಲೇಖಿಸುತ್ತಾ ಸೂತ್ರಾರ್ಥವನ್ನು ಹೇಳುತ್ತಿದ್ದಾರೆ 'ನೈತತ್' ಇತ್ಯಾದಿಯಾಗಿ. 'ಅಂತರಃ ವಿಷ್ಣುರೇವ' ಎಂದು ಅನುವೃತ್ತವಾಗಿದೆ. ಇದರ ತಾತ್ಪರ್ಯವನ್ನೇ ಟೀಕೆಯಲ್ಲಿ 'ನೈತತ್' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಕೇವಲ ಬ್ರಹ್ಮನ ಬಗ್ಗೆ ಶ್ರವಣ ಮಾಡುವುದರಿಂದ ಬ್ರಹ್ಮಪ್ರಾಪ್ತಿಯು ಉಂಟಾಗುವುದಿಲ್ಲ. ಆದ್ದರಿಂದ 'ಯ ಏವಂ ವೇದ' ಎಂಬುದಾಗಿ ಅಪರೋಕ್ಷವನ್ನೂ ಹೇಳಿದ್ದಾರೆಂಬ ಅಭಿಪ್ರಾಯದಿಂದ 'ಉಪಲಕ್ಷಕಮ್' ಎಂದು ಟೀಕೆಯಲ್ಲಿ ಹೇಳಿದ್ದಾರೆ.

ಸೂತ್ರಕ್ಕೆ ಬೇರೆ ಬೇರೆ ಅರ್ಥಗಳು

भावदीपः – ।। इति वेति ।। 'प्राणो ब्रह्म' इति तस्यापि प्रकृतत्वादिति भावः । पूर्वमेनानित्युक्तबहुवचनान्तपरत्वेनार्थ उक्तः । अधुना 'आचार्यस्तु ते गतिं वक्ता' इति 'अहं तु ते तद् वक्ष्यामि' इति युष्मच्छब्देन प्रकृतश्रोतृपरत्वेनार्थमाह – अथवेति ।। तदा नोपलक्षणमिति भावः

'ಪ್ರಾಣೋ ಬ್ರಹ್ಮ' ಎಂಬುದೂ ಸಹ ಪ್ರಕೃತವಾಗಿದೆಯೆಂದು ತಿಳಿಯಬೇಕು. ಹಿಂದೆ ಏನಾನ್ ಎಂಬ ಬಹುವಚನಾಂತವಾದ ಶ್ರುತಿಗೆ ಅನುಗುಣವಾಗಿ ಸೂತ್ರವನ್ನು ವ್ಯಾಖ್ಯಾನಿಸಿದ್ದರು. ಈಗ 'ಆಚಾರ್ಯಸ್ತು ತೇ ಗತಿಂ ವಕ್ತಾ' 'ಅಹಂ ತು ತೇ ತದ್‌ವಕ್ಷ್ಯಾಮಿ' ಎಂಬುದಾಗಿ 'ಯುಷ್ಮತ್' ಶಬ್ದದಿಂದ ಪ್ರಕೃತವಾದದ್ದನ್ನು ಶ್ರೋತೃಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ ಅಥವಾ ಇತ್ಯಾದಿಯಾಗಿ. ಈ ಪಕ್ಷದಲ್ಲಿ ಉಪಲಕ್ಷಣವಾಗಿ ಯಾವುದನ್ನೂ ಇಟ್ಟುಕೊಳ್ಳಬೇಕಾಗಿಲ್ಲವೆಂದು ತಿಳಿಯಬೇಕು.

ಬ್ರಹ್ಮಪ್ರಾಪ್ತಿಯು ಫಲವೆಂದ ಮಾತ್ರಕ್ಕೆ ಅಗ್ನಿಪರವೇಕಲ್ಲ?

भावदीपः – ।। एतदिति ।। एतद्विद्योपासनाफलत्वेनेत्यर्थः ।। अन्यथेति।। एतद्विद्याप्रस्तावे यत्किञ्चित्फलरूपगत्युक्तेरसङ्गतेरिति भावः । हिशब्द-सूचितमाह – देवानिति ।। इत्यादेः गीतायामित्यर्थः । 'ज्ञात्वा परत्वं

विष्णोस्तु पृथग् देवान् यजन्नरः । याति देवांस्तदज्ञात्वा तम एव प्रपद्यते ।।' इति तात्पर्यं ज्ञेयम् । तेन 'येऽप्यन्यदेवताभक्ताः' इत्यादिविरोधिनेति ध्येयम्

ಟೀಕೆಯಲ್ಲಿರುವ 'ಏತದ್‌ವಿದ್ಯಾಫಲತ್ವೇನ' ಎಂಬ ಶಬ್ದಕ್ಕೆ ಏತದ್‌ವಿದ್ಯೋಪಾಸನೆಯ ಫಲದಿಂದ ಎಂದರ್ಥ. 'ಅನ್ಯಥಾ' ಎಂದರೆ ಏತದ್‌ವಿದ್ಯೆಯ ಪ್ರಸ್ತಾಪದಲ್ಲಿ ಯತ್‌ಕಿಂಚಿತ್ ಫಲವೆಂಬ ಗತಿಯನ್ನು ಹೇಳಿದ್ದು ಅಸಂಗತವಾಗುತ್ತದೆಂದು ತಿಳಿಯಬೇಕು. ಹಿ ಶಬ್ದದಿಂದ ಸೂಚಿತವಾದದ್ದನ್ನು 'ದೇವಾನ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. 'ಇತ್ಯಾದೇಃ' ಎಂದರೆ ಗೀತೆಯಲ್ಲಿ ಎಂದರ್ಥ. ಗೀತಾತಾತ್ಪರ್ಯದಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾರೆ - ''ಜ್ಞಾತ್ವಾ ಪರತ್ವಂ ವಿಷ್ಣೋಸ್ತು ಪೃಥಗ್ ದೇವಾನ್ ಯಜನ್ನರಃ । ಯಾತಿ ದೇವಾಂಸ್ತದಜ್ಞಾತ್ವಾ ತಮ ಏವ ಪ್ರಪದ್ಯತೇ ॥'' ಎಂದು.

'ತೇನ' ಶಬ್ದಕ್ಕೆ 'ಯೇಪ್ಯನ್ಯದೇವತಾಃ ಭಕ್ತಾಃ' ಇತ್ಯಾದಿ ವಿರೋಧಪ್ರಮಾಣವಿರುವುದರಿಂದ ಎಂದರ್ಥ.

ಅನ್ಯವಿದ್ಯೆಯಿಂದ ಅನ್ಯಪ್ರಾಪ್ತಿಯು ಇಷ್ಟವಲ್ಲ

भावदीपः – ।। अत इति ।। अन्यविद्यया अन्यगतेरयुक्तत्वादित्यर्थः । 'अस्मच्छब्दोदितोऽन्तस्थः आत्मा व्याप्तो जनार्दनः । अग्रयो द्विविधं विष्णुमब्रुवन् उपकोसलम् ।।' इति छान्दोग्यभाष्यदिशा 'सोऽहमस्मि' इत्यादि त्वन्तर्याम्यपेक्षयेति भाष्यस्थादिपदेनास्मद्विद्येत्युक्तिरपि ग्राह्येति भावेनोत्तरमाह – तस्या इति ।।

ಅನ್ಯವಿದ್ಯೆಯಿಂದ ಅನ್ಯಗತಿಯು ಅಯುಕ್ತವಾದ್ದರಿಂದ ಎಂದು ''ಅತಃ'' ಶಬ್ದಕ್ಕೆ ಅರ್ಥ. ''ಅಸ್ಮಚ್ಛಬ್ದೋದಿತೋಂಽತಸ್ಥ ಆತ್ಮಾ ವ್ಯಾಪ್ತೋ ಜನಾರ್ದನಃ । ಅಗ್ನಯೋ ದ್ವಿವಿಧಂ ವಿಷ್ಣುಮಬ್ರುವನ್ ಉಪಕೋಸಲಂ'' ಎಂದು ಛಾಂದೋಗ್ಯಭಾಷ್ಯದಲ್ಲಿ ಹೇಳಿದ ಪ್ರಕಾರ 'ಸೋಽಹಮಸ್ಮಿ' ಇತ್ಯಾದಿ ವಾಕ್ಯವನ್ನು ಅಂತರ್ಯಾಮಿಯಲ್ಲಿಯೇ ಕೂಡಿಸಬೇಕು. ಭಾಷ್ಯದಲ್ಲಿರುವ ಆದಿಪದದಿಂದ 'ಅಸ್ಮದ್ ವಿದ್ಯಾ' ಎಂಬ ಮಾತನ್ನು ಸ್ವೀಕರಿಸಬೇಕೆಂಬ ಅಭಿಪ್ರಾಯದಿಂದ ಉತ್ತರಿಸುತ್ತಿದ್ದಾರೆ 'ತಸ್ಯಾಃ' ಇತ್ಯಾದಿಯಾಗಿ.

ಸೂತ್ರದಲ್ಲಿರುವ 'ಉಪಪತ್ತೇಃ' ಎಂಬ ಪದದ ವ್ಯಾಖ್ಯಾನ

ಭಾವದೀಪಃ – उपपत्तेरित्युक्त्या सौत्रोपपत्तेरित्यस्य न केवलं श्रुतिलिङ्गोपपत्तेरित्यर्थः । किन्तु सोऽहमस्मीत्याद्युक्ताहंशब्दार्थवादानाम् अस्मद्विद्येत्युक्तेश्चान्तर्याम्यपेक्षयोप पत्तेरिति वृत्त्यन्तरं भाष्ये चोपपद्यत इति शेष इति सूचितमित्याहुः ।

'ಉಪಪತ್ತೇಃ' ಎಂದು ಹೇಳಿದ್ದರಿಂದ ಸೂತ್ರದಲ್ಲಿರುವ 'ಉಪಪತ್ತೇಃ' ಎಂಬ ಶಬ್ದಕ್ಕೆ ಕೇವಲ ಶ್ರುತಿಲಿಂಗಗಳೆಂಬ ಉಪಪತ್ತಿ ಇರುವುದರಿಂದ ಎಂದಷ್ಟೇ ಅರ್ಥವಲ್ಲ. ಹೊರತಾಗಿ 'ಸೋಽಹಮಸ್ಮಿ' ಇತ್ಯಾದಿಯಾಗಿ ಹೇಳಲ್ಪಟ್ಟ ''ಅಹಂ'' ಶಬ್ದ ಹಾಗೂ ಅರ್ಥವಾದಗಳ ಬಲದಿಂದ 'ಅಸ್ಮದ್‌ವಿದ್ಯಾ' ಎಂಬ ಶ್ರುತಿಯನ್ನು ಅಂತರ್ಯಾಮ್ಯಪೇಕ್ಷೆಯಿಂದ ಕೂಡಿಸಬೇಕಾದ್ದರಿಂದ ಎಂಬ ಮತ್ತೊಂದರ್ಥವನ್ನು ವಿವಕ್ಷಿಸಬೇಕು. ಇದನ್ನು 'ಭಾಷ್ಯೇ ಚ ಉಪಪದ್ಯತೇ ಇತಿ ಶೇಷಃ' ಎಂಬುದರಿಂದ ಸೂಚಿಸಿದ್ದಾರೆಂದು ಕೆಲವರ ವ್ಯಾಖ್ಯಾನ.

ಪುರುಷಶಬ್ದ ಆತ್ಮಶಬ್ದಗಳೂ ಕೂಡ ಹೇತು

ಭಾವದೀಪಃ – ननु वक्तरि स्वरसस्यास्मच्छब्दस्य कुतोऽन्यपरत्वम् इत्यतो निरवकाशोपपत्तेरेव प्राबल्यमिति न्यायविवरणोक्तहेतुमाह – श्रुतेरपीति ।। अस्मदिति श्रुतेरपीत्यर्थः ।। निरवकाशेति ।। प्रागुक्तदिशाऽनेकेत्यपि ग्राह्यम्।। उपपत्तेरिति ।। अमृतत्वाभयत्वरूपलिङ्गस्येत्यर्थः । पुरुषात्मब्रह्मशब्दानामुप-लक्षणमेतत् । यद्वा निरवकाशश्रुतिलिङ्गोपपत्तेरित्यर्थः ।।

ಯಾರು ಉಪದೇಶ ಮಾಡುತ್ತಿದ್ದರೋ, ಆಂತಹ ಅಗ್ನಿಯಲ್ಲಿಯೇ 'ಅಸ್ಮತ್' ಶಬ್ದವನ್ನು ಕೂಡಿಸಲು ಬರುವಾಗ ಅನ್ಯಪರತ್ವವನ್ನು ಏಕೆ ಒಪ್ಪಬೇಕು ? ಎಂಬ ಪ್ರಶ್ನೆಗೆ 'ನಿರವಕಾಶೋಪಪತ್ತೇರೇವ ಪ್ರಾಬಲ್ಯಮ್' ಎಂಬ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ಹೇತುವನ್ನು 'ಶ್ರುತೇರಪಿ' ಎಂಬುದರಿಂದ ಹೇಳುತ್ತಿದ್ದಾರೆ.

'ಅಸ್ಮದ್' ಎಂಬ ವಾಕ್ಯಕ್ಕೆ ಶ್ರುತಿಗೂ ಸಹ ಎಂಬರ್ಥವನ್ನು ವಿವಕ್ಷಿಸಬೇಕು. 'ನಿರವಕಾಶ' ಎಂದರೆ ಹಿಂದೆ ಹೇಳಿದ ಪ್ರಕಾರ ಅನೇಕ ನಿರವಕಾಶ ಉಪಪತ್ತಿಗಳಿರುವುದರಿಂದ ಎಂದರ್ಥ. 'ಉಪಪತ್ತೇಃ'

ಎಂದರೆ ಅಮೃತತ್ವ ಅಭಯತ್ವ ಮೊದಲಾದ ಉಪಪತ್ತಿಗಳಿಂದ ಎಂದರ್ಥ. ಪುರುಷಶಬ್ದ ಆತ್ಮಶಬ್ದ ಇವುಗಳನ್ನೂ ಸಹ ಉಪಲಕ್ಷಣಯಾ ವಿವಕ್ಷಿಸಬೇಕು. ಅಥವಾ ನಿರವಕಾಶವಾದ ಶ್ರುತಿ ಹಾಗೂ ಲಿಂಗ ಗಳೆಂಬ ಉಪಪತ್ತಿಗಳಿಂದ ಎಂದೂ ಸಹ ವ್ಯಾಖ್ಯಾನಿಸಬಹುದು.

ಆತ್ಮವಿದ್ಯೆಯ ವ್ಯಾಖ್ಯಾನ

ಭಾವದೀಪಃ – सर्वगतात्मेति ।। तत्रैव भाष्ये 'अस्मच्छब्दोदितोऽन्तस्थः आत्मा व्याप्तो जनार्दनः' इत्युक्तेरिति भावः । ननु श्रुतौ 'क आत्मा' इत्यश्रवणाद् ब्रह्मेत्येव श्रवणादस्मद्विद्या ब्रह्मविद्या चेत्येव वाच्यमित्यत आह – तस्यैवेति ।। सर्वगतात्मन एवेत्यर्थः ।

ಸರ್ವಗತವಾದ ಆತ್ಮವಿದ್ಯೆ ಎಂದರೆ ಅದೇ ಶ್ರುತಿಯ ಭಾಷ್ಯದಲ್ಲಿ 'ಅಸ್ಮಚ್ಛಬ್ದೋದಿತೋऽಂತಸ್ಥಃ ಆತ್ಮಾ ವ್ಯಾಪ್ತೋ ಜನಾರ್ದನಃ' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ಶ್ರುತಿಯಲ್ಲಿ 'ಕ ಆತ್ಮಾ' ಎಂದು ಕೇಳಿಸುತ್ತಿಲ್ಲ. ಕೇವಲ ಬ್ರಹ್ಮ ಎಂದಷ್ಟೇ ಕೇಳಿಸುತ್ತದೆ. ಹೀಗಿರುವಾಗ 'ಅಸ್ಮದ್‌ವಿದ್ಯಾ ಬ್ರಹ್ಮವಿದ್ಯಾ' ಎಂದೇ ಹೇಳಬೇಕಲ್ಲವೆ ? ಎಂಬ ಪ್ರಶ್ನೆಗೆ ''ತಸ್ಯೈವ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ತಸ್ಯೈವ' ಎಂದರೆ ಸರ್ವಗತನಾದ ಆತ್ಮನೇ, ಎಂದರ್ಥ.

ಅಸ್ಮದ್‌ವಿದ್ಯೆ ಹಾಗೂ ಆತ್ಮವಿದ್ಯೆಗಳು

ಭಾವದೀಪಃ – ब्रह्मात्मशब्दयोः पर्यायत्वादिति भावः । कमानन्दरूपं ब्रह्म परं ब्रह्मेति तद्भाष्योक्तार्थमुपेत्येयमुक्तिः । 'ब्रह्मत्वं च विशिष्टते' इत्यनुभाष्योक्तदिशा सुखादिस्थपूर्णत्ववाचित्वेन कमित्यादेर्विशेषणत्वे तस्यैव ब्रह्मत्वादित्युक्त्ययोगात् ।।१६।।

ಬ್ರಹ್ಮಶಬ್ದ ಹಾಗೂ ಆತ್ಮಶಬ್ದಗಳು ಪರ್ಯಾಯ ಪದಗಳಾದ್ದರಿಂದ ಎಂದು ತಿಳಿಯಬೇಕು. ಕಮ್ = ಆನಂದರೂಪನಾದ, ಬ್ರಹ್ಮ = ಪರಬ್ರಹ್ಮನು ಎಂದು ಉಪನಿಷದ್‌ಭಾಷ್ಯದ ಅರ್ಥವನ್ನು ಅಂಗೀಕರಿಸಿ ಈ ಅರ್ಥವನ್ನು ಹೇಳಿದ್ದಾರೆ. 'ಬ್ರಹ್ಮತ್ವಂಚ ವಿಶಿಷ್ಟತಾ' ಎಂಬ ಅನುವ್ಯಾಖ್ಯಾನದ ಮಾತಿನಂತೆ ಸುಖಾದ್ಯರ್ಥದಲ್ಲಿರುವ ''ಕಮ್'' ಪದವು ಬ್ರಹ್ಮನಲ್ಲಿ ವಿಶೇಷಣವಾದ ಮೇಲೆ ಅದನ್ನು ಬ್ರಹ್ಮನೆಂದು ಹೇಳಲು ಸಾಧ್ಯವಿಲ್ಲ.

ಬ್ರಹ್ಮಸೂತ್ರ

'ಅನವಸ್ಥಿತೇರಸಂಭವಾಚ್ಚ ನೇತರಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् — ।। अनवस्थितेरसम्भवाच्च नेतरः ।। १-२-१७ ।।

ಅನುವಾದ - ಅಗ್ನಿಯೂ ಸಹ ಒಬ್ಬ ಜೀವನಾಗಿರುವುದರಿಂದ ಚಕ್ಷುರಿಂದ್ರಿಯದಲ್ಲಿ ಇದ್ದು ಅವನು ಪ್ರೇರಕನಾದರೆ, ಅವನಿಗೂ ಸಹ ಮತ್ತೊಬ್ಬ ಪ್ರೇರಕನು ಬೇಕಾಗುತ್ತದೆ. ಹೀಗೆ ಅನವಸ್ಥಾದೋಷ ಬರುವುದರಿಂದ ಮತ್ತು ಜೀವಸ್ವರೂಪನಾದ ಅಗ್ನಿಗೆ ಪ್ರೇರಕತ್ವವು ಅಸಂಭಾವಿತವಾಗಿರುವುದರಿಂದಲೂ ಬ್ರಹ್ಮನನ್ನು ಬಿಟ್ಟು ಅಗ್ನಿ ಮೊದಲಾದ ಜೀವರು ಚಕ್ಷುರಿಂದ್ರಿಯದಲ್ಲಿ ಅಂತರ್ಗತರಾಗಲು ಸಾಧ್ಯವಿಲ್ಲ.

ಇತರಃ = ಅಗ್ನಿಯು, ನ = ಚಕ್ಷುರಂತರ್ಗತನಲ್ಲ ಹೊರತಾಗಿ ವಿಷ್ಣುವೇ ಆಗಿದ್ದಾನೆ. ಏಕೆಂದರೆ ಅನವಸ್ಥಿತೇಃ = ಜೀವಸ್ವರೂಪನಾದ ಅಗ್ನಿಯೂ ಮತ್ತೊಬ್ಬ ಜೀವನಿಗೆ ಪ್ರೇರಣ ಮಾಡುವುದಾದರೆ, ಅಗ್ನಿಯೂ ಸಹ ಜೀವನೇ ಆಗಿರುವುದರಿಂದ ಅವನಿಗೆ ಮತ್ತೊಬ್ಬನ ನಿಯಾಮಕತೆಯ ಅನಿವಾರ್ಯತೆ ಇದೆ. ಹೀಗೆ ಅನವಸ್ಥಾದೋಷ ಬರುವುದರಿಂದ, ಚ = ಮತ್ತು, ಅಸಂಭವಾತ್ = ಅಗ್ನ್ಯಾದಿ ಜೀವರುಗಳಿಗೆ ಜೀವಾಂತರ-ನಿಯಾಮಕತ್ವವು ಅಸಂಭಾವಿತವಾಗಿರುವುದಿಂದಲೂ ವಿಷ್ಣುವೇ ಅಕ್ಷಿಸ್ಥನಾಗಿದ್ದಾನೆ

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಅಂತರಾಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಅಗ್ನಿಯು ಅಂತರನಾದಲ್ಲಿ ಬಾಧಕವಿದೆ

ब्रह्मसूत्रभाष्यम् –

जीवस्य जीवान्तरनियामकत्वेऽनवस्थितेः, साम्यादसम्भवाच्च न जीवः नियमप्रमाणाभावात् । अनीश्वरापेक्षत्वाच्च ।। १७ ।।

।। इति अन्तराधिकरणम् ।। ४ ।।

ಅನುವಾದ - ಅಗ್ನಿಯು ಜೀವನಾದ್ದರಿಂದ ಅವನಿಗೆ ಮತ್ತೊಬ್ಬ ನಿಯಮಾಕನು ಬೇಕಾಗುತ್ತದೆ. ಹೀಗೆ ಅನವಸ್ಥಾದೋಷ ಬರುತ್ತದೆ. ಮತ್ತು ಇತರ ಜೀವರಂತೆ ನಿಯಮ್ಯನಾದ್ದರಿಂದ ನಿಯಾಮಕತ್ವವು ಅವನಿಗೆ ಅಸಂಭಾವಿತವಾಗಿದೆ. ಜೀವನಾದ ಅಗ್ನಿಯು ನಿಯಮ್ಯನಲ್ಲ ಎಂಬ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲ. ಮತ್ತು ಈಶ್ವರನನ್ನು ಅಪೇಕ್ಷೆ ಪಡದ ಅಗ್ನಿಗೆ ಅಕ್ಷಿನಿಯಾಮಕತ್ವವನ್ನೂ ಸಹ ಹೇಳಲಾಗುವುದಿಲ್ಲ.

ಪ್ರತಿಪದಾರ್ಥ - ಜೀವಸ್ಯ = ಜೀವನೇ ಆಗಿರುವ ಅಗ್ನಿಗೆ, ಜೀವಾಂತರ ನಿಯಾಮಕತ್ವೇ = ಉಳಿದ ಜೀವರುಗಳ ನಿಯಾಮಕತ್ವವನ್ನು ಹೇಳಿದರೆ, ಅನವಸ್ಥಿತೇಃ = ಅನವಸ್ಥಾ ದೋಷವು ಬರುತ್ತದೆ. ಮತ್ತು ಸಾಮ್ಯಾತ್ = ಉಳಿದ ಜೀವರಂತೆ ನಿಯಮ್ಯತ್ವವು ಸಮಾನವಾಗಿರುವುದರಿಂದ, ಅಸಂಭವಾಚ್ಚ = ನಿಯಾಮಕತ್ವವು ಕೂಡುವುದಿಲ್ಲ. ಆದ್ದರಿಂದ ನ ಜೀವಃ = ಜೀವನಾಗಿರುವ ಅಗ್ನಿಯು ನಿಯಾಮಕನಾಗುವುದಿಲ್ಲ. ನಿಯಮೇ = ನಿಯಮ್ಯನಲ್ಲವೆಂಬ ವಿಷಯದಲ್ಲಿ, ಪ್ರಮಾಣಾಭಾವಾತ್ = ಯಾವುದೇ ಪ್ರಮಾಣಗಳು ಇರುವುದಿಲ್ಲ, ಚ = ಮತ್ತು, ಅನೀಶ್ವರಾಪೇಕ್ಷತ್ವಾತ್ = ಈಶ್ವರನ ಅಪೇಕ್ಷೆ ಇಲ್ಲದಿರುವುದರಿಂದಲೂ, ಅಗ್ನಿಗೆ ಚಕ್ಷುರಂತಸ್ಥವು ಯುಕ್ತವಾಗುವುದಿಲ್ಲ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಅಂತರಾಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

ಚಕ್ಷುರಿಂದ್ರಿಯನಿಯಾಮಕನು ಅಗ್ನಿಯಲ್ಲ

सत्तर्कदीपावलिः – अनवस्थितेरसम्भवाच्च नेतरः ।। युक्त्यन्तरबलादप्यादित्येऽक्षिणि च नियामकत्वेन स्थितो यः चक्षुषि तिष्ठन्नित्यादिश्रुत्यन्तरे सिद्धो नाग्निरित्येतत्प्रतिपादयत्सूत्रमुपन्यस्य व्याचष्टे – अनवस्थितेरित्यादिना ।। अस्यार्थः । यथा जनपदनियोजितस्य तत्प्रजानां च नियम्यनियामकभावः क्षितिपत्यधीनः । एवमग्न्यादित्यानां जीवानां परस्परनियामकभावश्चेदसौ सर्वेशाज्ञाधीन एव भवेत् । अन्यथैकस्य जीवस्यान्येन जीवेन नियम्यत्वे तस्याप्यन्येन जीवेन नियम्यत्वं तस्याप्यन्येनेत्यनवस्था स्यात् । जीवत्वाविशेषान्नियम्यनियामकभावासम्भवश्च स्यात् तेषाम् । नचेश्वराज्ञानिरपेक्षत्वेन कस्यचित् जीवस्य नियम्यत्वं कस्यचित् नियामकत्वमित्यत्र प्रमाणमस्ति । अत उक्तहेतुभ्यां मुख्यनियामकस्य पुरुषोत्तमान्यस्यासम्भवात् । असावेव दिव्यदृष्टिगोचरोऽक्ष्यन्तरपुरुष इति सिद्धम् ।।

।। इति सत्तर्कदीपावळ्याम् अन्तराधिकरणम् ।।

ಮತ್ತೊಂದು ಯುಕ್ತಿಯ ಬಲದಿಂದಲೂ ಆದಿತ್ಯನಲ್ಲಿ ಮತ್ತು ಚಕ್ಷುರಿಂದ್ರಿಯದಲ್ಲಿ ನಿಯಾಮಕನಾಗಿರುವವನು 'ಯಃಶ್ಚಕ್ಷುಷಿ' ಎಂಬ ಮತ್ತೊಂದು ಶ್ರುತಿಯಿಂದ ಸಿದ್ಧನಾದ ಅಗ್ನಿಯು ಪ್ರತಿಪಾದ್ಯನಾಗುವುದಿಲ್ಲ. ಈ ವಿಷಯವನ್ನು ನಿರೂಪಿಸುವ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ 'ಅನವಸ್ಥಿತೇಃ' ಇತ್ಯಾದಿಯಾಗಿ.

ಸೂತ್ರಾರ್ಥ ಹೀಗಿದೆ - ಯಾವರೀತಿಯಾಗಿ ಒಂದು ಗ್ರಾಮದ ನಿಯಾಮಕನಿಗೆ ಮತ್ತು

ಪ್ರಜೆಗಳಿಗೆ ಇರುವ ನಿಯಮ್ಯನಿಯಾಮಕಭಾವವು ರಾಜನ ಅಧೀನವಾಗಿರುತ್ತದೋ ಅದರಂತೆ ಅಗ್ನಿ ಮೊದಲಾದ ಜೀವರುಗಳಿಗೆ ಇರುವ ಪರಸ್ಪರ ನಿಯಮ್ಯನಿಯಾಮಕಭಾವವು ಸರ್ವಾಧಿಪತಿಯಾದ ಭಗವಂತನ ಅಧೀನವಾಗಿದೆ. ಹೀಗೊಪ್ಪದಿದ್ದರೆ ಒಬ್ಬ ಜೀವನಿಗೆ ಮತ್ತೊಬ್ಬ ನಿಯಾಮಕನು ಅವನಿಗೆ ಮಗದೊಬ್ಬ ನಿಯಾಮಕನೆಂದು ಅನವಸ್ಥಾದೋಷ ಬರುತ್ತದೆ. ಎಲ್ಲರೂ ಜೀವರೇ ಆಗಿರುವುದರಿಂದ ಯಾರೊಬ್ಬನನ್ನೂ ನಿಯಮ್ಯನಲ್ಲವೆಂದು ಹೇಳಲು ಸಾಧ್ಯವಿಲ್ಲ. ಮತ್ತು ಭಗವಂತನ ಅಪೇಕ್ಷೆ ಇಲ್ಲದೆ ಯಾರೊಬ್ಬ ಜೀವನಲ್ಲಿಯೂ ನಿಯಮ್ಯತ್ವವಾಗಲೀ, ನಿಯಾಮಕತ್ವವಾಗಲೀ ಇರುತ್ತದೆನ್ನಲು ಪ್ರಮಾಣವಿಲ್ಲ.

ಹೀಗೆ ಮೇಲೆ ಹೇಳಿದ ಎರಡು ಹೇತುಗಳಿಂದ ಪುರುಷೋತ್ತಮನನ್ನು ಬಿಟ್ಟು ಮತ್ತೊಬ್ಬನು ಮುಖ್ಯ ನಿಯಾಮಕನಾಗಲು ಸಾಧ್ಯವೇ ಇಲ್ಲ. ಆದ್ದರಿಂದ ಭಗವಂತನೇ ದಿವ್ಯದೃಷ್ಟಿಗೆ ಗೋಚರನಾದ ಅಕ್ಷಿಸ್ಥಪುರುಷನಾಗಿದ್ದಾನೆಂದು ನಿರ್ಣಯವಾಯಿತು.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಅಂತರಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ಅಗ್ನಿಯೇ ನಿಯಾಮಕನೆಂದರೆ ಅನವಸ್ಥಾದೋಷ

तत्वप्रदीपः – ''अनवस्थितेरसम्भवाच्च नेतरः'' ॥ जीवत्वसाम्यादनव-स्थितिः । परतन्त्रत्वसाम्यादसम्भवः । नियमप्रमाणाभावोऽनीश्वरापेक्षत्वं चोभावुभयत्रापि हेतू ॥७॥

॥ इत्यन्तराधिकरणम् ॥

ಜೀವತ್ವದ ಸಾಮ್ಯವಿರುವುದರಿಂದ ಅನವಸ್ಥಾದೋಷವು ಬರುತ್ತದೆ. ಪರತಂತ್ರತ್ವದ ಸಾಮ್ಯವಿರುವುದರಿಂದ ಅಸಂಭವ ದೋಷವು ಬರುತ್ತದೆ. 'ನಿಯಮಪ್ರಮಾಣಾಭಾವ' ಮತ್ತು

'ಅನೀಶ್ವರಾಪೇಕ್ಷತ್ವ' ಎಂಬೆರಡು ಧರ್ಮಗಳು ಎರಡು ವಿಷಯದಲ್ಲಿಯೂ ಅನವಸ್ಥಾ ಹಾಗೂ ಅಸಂಭವ ಎರಡೂ ಕಡೆಯು ಹೇತುಗಳಾಗಿವೆ.

ವಿಶೇಷವಿಚಾರ - ಅಗ್ನಿಯು ಒಬ್ಬ ಜೀವನಾಗಿರುವುದರಿಂದ ಅವನು ಮತ್ತೊಬ್ಬನಿಗೆ ನಿಯಾಮಕನಾದರೆ ಆ ಜೀವನಿಗೂ ಮತ್ತೊಬ್ಬ ನಿಯಾಮಕನು ಅವಶ್ಯಕವಾಗಿರುವುದರಿಂದ ಅನವಸ್ಥಾದೋಷ ಬರುತ್ತದೆ. ಅಗ್ನಿಯು ನಿಯಮ್ಯನಲ್ಲ ಎಂಬ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲ. ಮತ್ತು ಮತ್ತೊಬ್ಬ ಅನೀಶ್ವರನನ್ನೇ ಅಪೇಕ್ಷಿಸಿದ್ದಾನೆ.

ಅಗ್ನಿಯೂ ಕೂಡ ಇತರ ಜೀವರಂತೆ ನಿಯಮ್ಯನಾಗಿರುವುದರಿಂದ ಅವನಲ್ಲಿ ನಿಯಾಮಕತ್ವವು ಅಸಂಭಾವಿತವಾಗಿದೆ. ಅಗ್ನಿಯು ನಿಯಮ್ಯನಲ್ಲ ಎಂಬ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲ. ಮತ್ತು ಅವನು ಸ್ವತಂತ್ರ ಎಂಬ ವಿಷಯದಲ್ಲೂ ಕೂಡ ಆಧಾರವಿಲ್ಲ. ಹೀಗೆ ನಿಯಮಪ್ರಮಾಣಾಭಾವ ಹಾಗೂ ಅನೀರೀಶ್ವರಾಪೇಕ್ಷತ್ವ ಎಂಬೆರಡು ಧರ್ಮಗಳನ್ನು ಎರಡೂ ಕಡೆಯು ಹೇತುವನ್ನಾಗಿ ತಿಳಿಯಬೇಕು.

ತತ್ವಪ್ರಕಾಶಿಕಾ

ವಿಪಕ್ಷೇ ಬಾಧಕ ಪ್ರಮಾಣ

तत्वप्रकाशिका – अनवस्थितेरसम्भवाच्च नेतरः ।। १-२-१७ ।।

एवमुपपत्त्यादियुक्तिभिर्विष्णोरक्षिस्थत्वं प्रतिपाद्य विपक्षे बाधकेनापि समर्थयत्सूत्रमुपन्यस्य व्याचष्टे – अनवस्थितेरिति ।। नायं चक्षुरन्तःस्थोऽन्निर्भवेत् । अस्य तत्तत्प्रेरकत्वेन तत्तच्चक्षुःस्थितेरभिप्रेतत्वात् । नचाग्नेरन्यप्रेरकत्वं युक्तम्, जीवत्वात् । जीवस्य तस्य जीवान्तरनियामकत्वे तस्यापि जीवान्तर नियामकमित्यनवस्थानात् । पूर्वपूर्वचेष्टासिद्धावुत्तरोत्तरचेष्टा-सिद्धिरिति मूलक्षतेः । अभ्युपगम्य चेदमुदितम् । अग्नेरपि प्रेर्येण सह जीवत्वसाम्यात् प्रेरणासम्भवाच्चेत्यर्थः ।

ಇದುವರೆಗೂ ಉಪಪತ್ತಿಯೇ ಮೊದಲಾದ ಯುಕ್ತಿಗಳಿಂದ (ಅಮೃತತ್ವ, ಸ್ಥಾನಶಕ್ತಿ, ಸುಖಪೂರ್ಣತಾ ಮುಂತಾದವುಗಳು) ವಿಷ್ಣುವೇ ಕಣ್ಣಿನಲ್ಲಿ ನಿಯಾಮಕನೆಂದು ಪ್ರತಿಪಾದನೆ ಮಾಡಿದ್ದಾಯಿತು. ಇನ್ನು ಮುಂದೆ ಅಕ್ಷಿಸ್ಥನು ಅಗ್ನಿಯೇ ಎಂದು ಒಪ್ಪಿದರೆ ಯಾವರೀತಿ ಬಾಧ ಬರುತ್ತದೆಂದು ಹೇಳಿ ಅದಕ್ಕೆ ವಿಷ್ಣುತ್ವ ಸಮರ್ಥನೆ ಮಾಡುವ ಸೂತ್ರವನ್ನು ಹೇಳಿ, ಸೂತ್ರದ ವ್ಯಾಖ್ಯಾನವನ್ನು ''ಅನವಸ್ಥಿತೇಃ'' ಎಂಬ ವಾಕ್ಯದಿಂದ ಮಾಡುತ್ತಿದ್ದಾರೆ.

ಚಕ್ಷುರಂತಃಸ್ಥನು ಅಗ್ನಿಯು ಆಗುವುದಿಲ್ಲ. ಏಕೆಂದರೆ ಚಕ್ಷುರಂತಃಸ್ಥನಿಗೆ ''ಸಂಯದ್ವಾಮ'' ''ವಾಮನಿ'' ''ಭಾಮನಿ'' ಇತ್ಯಾದಿ ಶಬ್ದಗಳಿಂದ ಆಯಾ ಜೀವರಗಳಿಗೆ ಪ್ರೇರಕನೆಂದು ಹೇಳಬೇಕು. ಆದರೆ ಅಗ್ನಿಗೆ ಈ ರೀತಿಯಾದ ಪ್ರೇರಕತ್ವವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಅಗ್ನಿಯೂ ಸಹ ಜೀವನೇ ಆಗಿರುವುದರಿಂದ, ಅವನು ಮತ್ತೊಬ್ಬ ಜೀವನಿಗೆ ನಿಯಾಮಕನೆಂದು ಒಪ್ಪಿಕೊಂಡರೆ, ಆ ಅಗ್ನಿಗೆ ಮತ್ತೊಬ್ಬ ಜೀವನು ನಿಯಾಮಕನೆಂದು ಹೇಳಬೇಕು. ಈ ರೀತಿಯಾಗಿ ಹೇಳುತ್ತಾ ಹೋದರೆ ಅನವಸ್ಥಾ ಎಂಬ ದೋಷ ಬರುತ್ತದೆ. ಹಿಂದಿನವರ ಚೇಷ್ಟೆಯು ಅಸಿದ್ಧವಾದರೆ ಮುಂದಿನವರ ಚೇಷ್ಟೆಯೂ ಅಸಿದ್ಧವಾಗುತ್ತದೆ. ಈ ರೀತಿಯಾಗಿ ಅಗ್ನಿಯ ಪ್ರೇರಕತ್ವವು ಅಸಿದ್ಧವಾಗಿ ಅನವಸ್ಥಾದೋಷದಿಂದ ಮೂಲ ಕ್ಷತಿಯಾಗುತ್ತದೆ. ಅಗ್ನಿಯು ಪ್ರೇರಕನೆಂದು ಒಪ್ಪಿಕೊಂಡು ಅನವಸ್ಥಾದೋಷವನ್ನು ಹೇಳಿದ್ದಾರೆ. ಆದರೆ ಪ್ರೇರಕನಾದ ಅಗ್ನಿಗೂ ಪ್ರೇರ್ಯನಾದ ಜೀವನಿಗೂ ಜೀವತ್ವವೆಂಬ ಧರ್ಮವು ಸಾಮ್ಯವಿರುವುದರಿಂದ ಅಗ್ನಿಗೆ ಪ್ರೇರಣತ್ವವು ಯಾವ ಕಾಲಕ್ಕೂ ಕೂಡುವುದಿಲ್ಲವೆಂದು ಅರ್ಥ.

ಅಗ್ನಿಯು ಸ್ವತಂತ್ರನೆಂದು ಹೇಳಿ ಅನವಸ್ಥಾವನ್ನು ಪರಿಹರಿಸಲಾಗದು

तत्वप्रकाशिका – जीवप्रेरकाग्नेः स्वातन्त्र्याभ्युपगमान्नानवस्थेत्यत आह – नियमेति ।। अग्नेः स्वतन्त्रत्वे जीवान्तरस्यापि तत् स्यात् । अन्यथाऽग्नेरपि तन्न स्यात् । जीवत्वसाम्येऽप्यग्नेरेव स्वातन्त्र्यं नान्येषामिति नियमे प्रमाणाभावात् । अतोऽग्नेः स्वातन्त्र्यायोगात् सुस्थैवानवस्थेति भावः ।

ಜೀವರಿಗೆ ಪ್ರೇರಕನಾದ ಅಗ್ನಿಯು ಸ್ವತಂತ್ರನಾಗಿದ್ದಾನೆಂದು ಒಪ್ಪಿ ಅನವಸ್ಥಾದೋಷವನ್ನು ಪರಿಹಾರ ಮಾಡಿಕೊಳ್ಳಬಹುದಲ್ಲವೇ? ಎಂದು ಪ್ರಶ್ನೆ ಮಾಡಿದರೆ ಆಚಾರ್ಯರು ಭಾಷ್ಯದಲ್ಲಿ

''ನಿಯಮ'' ಎಂಬ ವಾಕ್ಯದಿಂದ ಉತ್ತರವನ್ನು ಹೇಳುತ್ತಿದ್ದಾರೆ. ಒಂದು ವೇಳೆ ಅಗ್ನಿಯು ಸ್ವತಂತ್ರನಾಗಿದ್ದ ಪಕ್ಷದಲ್ಲಿ ಅನ್ಯಜೀವರೂ ಸಹ ಸ್ವತಂತ್ರರಾಗಲಿ. ಇಲ್ಲದ್ದಿದ್ದರೆ ಅಗ್ನಿಯೂ ಸಹ ಸ್ವತಂತ್ರನಾಗಲಾರ. ಜೀವತ್ವಸಾಮ್ಯವಿದ್ದರೂ ಅಗ್ನಿಮಾತ್ರ ಸ್ವತಂತ್ರ, ಅನ್ಯ ಜೀವರು ಅಸ್ವತಂತ್ರರು ಎಂದು ಹೇಳಲು ಯಾವ ಪ್ರಮಾಣಗಳ ಆಧಾರವೂ ಇಲ್ಲ. ಆದ್ದರಿಂದ ಅಗ್ನಿಗೆ ಸ್ವಾತಂತ್ರ್ಯವು ಸಿದ್ಧವಾಗದ್ದರಿಂದ ಅನವಸ್ಥಾ ದೋಷವೂ ಸಹ ಪರಿಹಾರವಾಗುವುದಿಲ್ಲ.

ಈಶ್ವರನೇ ಅಕ್ಷಿಸ್ಥನೆನ್ನಲು ಅನೇಕ ಪ್ರಮಾಣಗಳಿವೆ

तत्वप्रकाशिका – अस्तु अग्नेः अस्वातन्त्र्यं तथापि तत्प्रेरकस्येश्वरस्य स्वातन्त्र्यसम्भवान्नानवस्थेत्यत आह – अनीश्वरेति ।।त्वयेश्वरानभ्युपगमान्नैवमनवस्थापरिहार इत्यर्थः । ईश्वराभ्युपगमे स एव अक्षिस्थतया युक्त्यादिप्राप्तः किमपोद्यते ।

ಅಗ್ನಿಯು ಅಸ್ವತಂತ್ರನಾಗಲಿ ಅದರೂ ಸಹ ಅವನಿಗೆ ಪ್ರೇರಕನಾದ ಈಶ್ವರನು ಸ್ವತಂತ್ರನಾಗಿರುವುದರಿಂದ ಅನವಸ್ಥಾದೋಷ ಪರಿಹಾರವಾಗುತ್ತದಲ್ಲವೆ? ಎಂಬ ಪ್ರಶ್ನೆಗೆ ಉತ್ತರವನ್ನು ''ಅನೀಶ್ವರ'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ನೀನು ಈಶ್ವರನನ್ನೇ ಅಂಗೀಕಾರ ಮಾಡಿಲ್ಲವಾದ್ದರಿಂದ ಅನವಸ್ಥಾದೋಷವು ಪರಿಹಾರವಾಗುವುದಿಲ್ಲ ಎಂದು ಅರ್ಥ. ಒಂದು ವೇಳೆ ಈಶ್ವರನನ್ನು ಅಂಗೀಕಾರ ಮಾಡುತ್ತೇನೆಂದರೆ, ಈಶ್ವರನೇ ಅಕ್ಷಿಸ್ಥನಾಗಿದ್ದಾನೆ ಎಂಬುದಕ್ಕೆ ಅನೇಕ ಯುಕ್ತಿಗಳು ಇರಬೇಕಾದರೆ ಯಾವಕಾರಣದಿಂದ ಅದನ್ನು ವಿರೋಧಿಸುತ್ತೀರಿ?

ಈಶ್ವರನನ್ನು ಒಪ್ಪದೇ ನಿಯಮ್ಯನಿಯಾಮಕಭಾವ ಕೂಡಿಸಲಾಗದು

तत्वप्रकाशिका – ननु जीवत्वसाम्येऽपि नीचोच्यभाववन्नियम्यनियामकभावसम्भवः किन्न स्यादित्यत आह – नियमेति ।। नियामकविशेषे प्रमाणाभावात् न दृष्टान्तमात्रेण नियम्यनियामकभावसम्भव इति भावः । ननु भवताप्यग्न्यादिजीवानां जीवान्तरनियामकत्वाभ्युपगमात् कथं तदसम्भव इत्यतो वाऽऽह – अनीश्वरेति ।। यथा सति राज्ञि मण्डलेशे प्रजानां तच्छक्त्या

नियम्यनियामकभावः सम्भवति, नत्वराजके लोके तथाऽस्मत्पक्षे जीवानामीश्वरशक्त्या जीवान्तरनियामकत्वमुपपद्यते न परपक्षे । परमेश्वरानङ्गीकारादिति भावः । तस्माद् विष्णुरेव अक्ष्यादित्यस्थो दिव्यदृष्टिगोचरोऽतः स एवानन्दमयस्तज्ज्ञानादेव मोक्ष इति सिद्धम् ।। १७ ।।

।। इति श्रीमज्जयतीर्थभिक्षुविरचितायां तत्वप्रकाशिकायाम् अन्तराधिकरणम् ।।

ಪ್ರಶ್ನೆ - ಅಗ್ನಿ ಮತ್ತು ಜೀವ ಇಬ್ಬರಲ್ಲೂ ಜೀವತ್ವವೆಂಬ ಧರ್ಮದ ಸಾಮ್ಯವಿದ್ದರೂ ಸಹ 'ನೀಚ' ಮತ್ತು 'ಉಚ್ಚ' ಭಾವವಿರುವುದರಿಂದ 'ನಿಯಮ್ಯನಿಯಾಮಕಭಾವ' ಏಕಿರಬಾರದು?

ಉತ್ತರ - ಈ ಪ್ರಶ್ನೆಗೆ ಉತ್ತರವನ್ನು ''ನಿಯಮ'' ಎಂಬ ವಾಕ್ಯದಿಂದ ಹೇಳಿದ್ದಾರೆ. ಅಂದರೆ ಅಗ್ನಿಯು ಇತರ ಜೀವರ ನಿಯಾಮಕನೆಂಬ ವಿಷಯದಲ್ಲಿ ಪ್ರಮಾಣವಿಲ್ಲದ್ದರಿಂದ ಕೇವಲ ಉಚ್ಚನೀಚದೃಷ್ಟಾಂತದಿಂದಲೇ ನಿಯಮ್ಯನಿಯಾಮಕಭಾವವನ್ನು ಹೇಳಲು ಬರುವುದಿಲ್ಲ ಎಂದು ಅಭಿಪ್ರಾಯ.

ಪ್ರಶ್ನೆ - ಸಿದ್ಧಾಂತಿಗಳೂ ಸಹ ಅಗ್ನಿಯೇ ಮೊದಲಾದ ಜೀವರಿಗೆ ಜೀವಾಂತರನಿಯಾಮಕತ್ವವನ್ನು ಒಪ್ಪಿರುವಾಗ, ಹೇಗೆ ನಿಯಮ್ಯನಿಯಾಮಕಭಾವವನ್ನು ಅಸಂಭವವೆಂದು ಹೇಳುತ್ತೀರಿ?

ಉತ್ತರ - ಈ ಪ್ರಶ್ನೆಗೂ ಸಹ ಉತ್ತರವನ್ನು 'ಅನೀಶ್ವರ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಇದರ ಅಭಿಪ್ರಾಯ - ಒಬ್ಬ ಚಕ್ರವರ್ತಿಯ ಆಧಿಪತ್ಯದಲ್ಲಿ ಅವನ ಆಜ್ಞೆ ಮತ್ತು ಸಾಮರ್ಥ್ಯದಿಂದ ಅವನ ಅಧೀನರಾದ ಬೇರೆ ಗ್ರಾಮದ ಮುಖ್ಯಸ್ಥರಿಗೆ ನಿಯಮ್ಯನಿಯಾಮಕಭಾವವು ಕೂಡುತ್ತದೆ. ಆದರೆ ಯಾವ ರಾಜ್ಯದಲ್ಲಿ ರಾಜನೇ ಇರುವುದಿಲ್ಲವೊ ಅಲ್ಲಿ ನಿಯಮ್ಯನಿಯಾಮಕಗಳನ್ನು ಹೇಳಲು ಬರುವುದೇ ಇಲ್ಲ. ಅದರಂತೆ ನಮ್ಮ ಪಕ್ಷದಲ್ಲಿ ಈಶ್ವರನ ಶಕ್ತಿಯಿಂದ ಜೀವರಲ್ಲಿ ನಿಯಮ್ಯನಿಯಾಮಕಭಾವವು ಕೊಡುತ್ತದೆ. ಆದರೆ ಪರಪಕ್ಷದವರು ಈಶ್ವರನನ್ನೇ ಅಂಗೀಕರಿಸಿಲ್ಲ-ವಾದ್ದರಿಂದ ಈ ನಿಯಮ್ಯನಿಯಾಮಕ ಭಾವವನ್ನು ಹೇಳಲು ಬರುವುದಿಲ್ಲ.

ಆದ್ದರಿಂದ ಅಕ್ಷಿ ಹಾಗೂ ಆದಿತ್ಯರಲ್ಲಿ ವಿಷ್ಣುವೇ ಅಂತಸ್ಥನಾಗಿದ್ದಾನೆ. ಅವನು ದಿವ್ಯದೃಷ್ಟಿಗೆ ಗೋಚರನಾಗಿದ್ದಾನೆ. ಅವನೇ ಆನಂದಮಯನಾಗಿದ್ದಾನೆ ಮತ್ತು ಅವನ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಅಂತರಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಭಾವದೀಪ

ಅನವಸ್ಥಾದೋಷಕ್ಕೆ ಅಸಿದ್ಧಿಯ ಪರಿಹಾರ

भावदीपः – उपपत्त्यादीत्यादिपदेन स्थानादिशक्तिसुखविशिष्टाभिधानादिग्रहः । न जीव इत्यस्यार्थः – **नायमिति** ॥ अन्तर इत्यनुवर्तत इति भावः । भाष्योक्तापादकस्यासिद्धिनिरासाय परिष्करोति – **अस्य तत्तत्प्रेरकत्वेनेति** ॥ वामनिभामनिशब्दाभ्यां सर्वस्त्रीपुंसनेतृत्वस्याक्षिस्थे श्रुतौ प्रतीतेरिति भावः ।

ಟೀಕೆಯಲ್ಲಿರುವ ''ಉಪಪತ್ಯಾದಿ'' ಎಂಬಲ್ಲಿರುವ ''ಆದಿ'' ಪದದಿಂದ 'ಸ್ಥಾನಾದಿಶಕ್ತಿ', 'ಸುಖವಿಶಿಷ್ಟಾಭಿಧಾನಾತ್' ಮೊದಲಾದ ಹೇತುಗಳನ್ನು ಸ್ವೀಕರಿಸಬೇಕು. ಭಾಷ್ಯದಲ್ಲಿರುವ ''ನ ಜೀವಃ'' ಎಂಬ ಪದದ ಅರ್ಥವನ್ನು ''ನಾಯಂ'' ಎಂದು ಹೇಳಿದ್ದಾರೆ. ಅಂತರ ಎಂಬುದನ್ನು ಅನುವೃತ್ತಿ ಮಾಡಿಕೊಂಡು 'ನ ಜೀವಃ ಅಂತರಃ' ಎಂದು ವಿವಕ್ಷಿಸಬೇಕು.

ಭಾಷ್ಯದಲ್ಲಿ ಆಪಾದನೆ ಮಾಡಿರುವ ಅನವಸ್ಥಾದೋಷಕ್ಕೆ ಅಸಿದ್ಧಿಯನ್ನು ಪರಿಹರಿಸಲು, ''ಅಸ್ಯ ತತ್ತತ್ಪ್ರೇರಕತ್ವೇನ'' ಎಂದು ಪರಿಷ್ಕರಿಸುತ್ತಿದ್ದಾರೆ. ವಾಮನಿ ಭಾಮನಿ ಶಬ್ದಗಳಿಂದ ಸಕಲ ಸ್ತ್ರೀ ಮತ್ತು ಪುರುಷರುಗಳ ಪ್ರೇರಕನೆಂದು ಹೇಳಲಾಗಿದೆ. ಪರಮಾತ್ಮನ ಇಂತಹ ಎರಡು ರೂಪಗಳನ್ನು ಶ್ರುತಿ ಹೇಳುತ್ತಿದೆಯೆಂದು ತಿಳಿಯಬೇಕು.

'ಅಸಂಭವಾತ್' ಎಂಬ ಭಾಷ್ಯಕ್ಕೆ ವ್ಯಾಘಾತವಿಲ್ಲ

भावदीपः – भाष्ये नाग्निरिति वाच्ये जीवपदोक्त्या सूचितां युक्तिमाह – जीवत्वादिति ।। जीवस्येत्यादेरर्थः – जीवस्येति ।। असम्भवादित्यस्य पूर्वोक्तेन व्याघातनिरासायाह – अभ्युपगम्येति ।। प्रेरकत्वमित्यर्थः । इदम् अनवस्थानम् । अनवस्थानिरासायाग्नेः स्वातन्त्र्यशङ्कनादग्नेरेवेति नियमदूषणमसङ्गतमित्यतो व्याचष्टे – अग्नेरिति ।। त्वया पूर्वपक्षिणा ।। नैवमिति ।। तेन प्राणाभावादित्यनेन समुच्चयार्थश्चशब्द इति भावः ।। नीचोच्चेति ।। 'वृद्धिह्रासभात्त्वमन्तर्भावाद्' 'यावदधिकारमवस्थिति-राधिकारिकाणाम्' 'इयदामननात्' 'नाविशेषाद्' इत्यादिसूत्रैरानन्दस्य मीमांसा भवति । वाग्वाव नाम्नो भूयसि इत्यादिभिश्चाङ्गीकृततरतम-भाववदित्यर्थः । नियमशब्दार्थः – नियामकेति ।।

ಭಾಷ್ಯದಲ್ಲಿ 'ನ ಅಗ್ನಿಃ' ಎಂದು ಹೇಳಬೇಕಿತ್ತು. ಆದರೆ 'ನ ಜೀವಃ' ಎಂದು ಹೇಳಿದ್ದಾರೆ. ಹೀಗೆ ಜೀವನೆಂದು ಹೇಳಿದ್ದರ ಪ್ರಯೋಜನವನ್ನು 'ಜೀವತ್ವಾತ್' ಎಂದು ಟೀಕೆಯಲ್ಲಿ ಹೇಳಿದ್ದಾರೆ. 'ಜೀವತ್ವ' ಎಂಬ ಯುಕ್ತಿಯನ್ನು ತೋರಿಸಿದಂತಾಯಿತು. ಭಾಷ್ಯದಲ್ಲಿರುವ 'ಜೀವಸ್ಯ' ಇತ್ಯಾದಿ ವಾಕ್ಯದ ಅರ್ಥವನ್ನೇ ಟೀಕೆಯಲ್ಲಿ 'ಜೀವಸ್ಯ ತಸ್ಯ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ.

'ಅಸಂಭವಾತ್' ಎಂದು ಭಾಷ್ಯದಲ್ಲಿ ಹೇಳಿದ್ದಕ್ಕೆ ವ್ಯಾಘಾತ ಬರುತ್ತದೆ. ಅದರ ಪರಿಹಾರಕ್ಕಾಗಿ 'ಅಭ್ಯುಪಗಮ್ಯ' ಎಂದಿದ್ದಾರೆ. ಪ್ರೇರಕತ್ವವನ್ನು ಅಗ್ನಿಯಲ್ಲಿ ಅಂಗೀಕರಿಸಿ ಹೇಳಿದ್ದಾರೆಂದರ್ಥ. 'ಇದಂ' ಶಬ್ದಕ್ಕೆ ಅನವಸ್ಥಾನ ಎಂದರ್ಥ. ಅನವಸ್ಥಾನಿರಾಸ ಮಾಡುವುದಕ್ಕಾಗಿ ಅಗ್ನಿಗೆ ಸ್ವಾತಂತ್ರ್ಯವಿಲ್ಲವೆನ್ನಬೇಕು. ಆದ್ದರಿಂದ ಅಗ್ನಿಯೇ ನಿಯಾಮಕನೆಂದು ಹೇಳಿದರೆ ಅನವಸ್ಥಾ ಬರುತ್ತದೆಂದು ಹೇಳಿದ್ದು ಅಸಂಗತವಾಗುತ್ತದಲ್ಲವೆ ? ಎಂಬ ಪ್ರಶ್ನೆಗೆ 'ಅಗ್ನೇಃ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

'ತ್ವಯಾ' ಎಂದರೆ ಪೂರ್ವಪಕ್ಷಿಯಿಂದ ಎಂದರ್ಥ. 'ನೈವಂ' ಎಂದು ಹೇಳಿದ್ದರಿಂದ 'ಪ್ರಮಾಣಾ-ಭಾವಾತ್' ಎಂಬುದರಿಂದ ಸಮುಚ್ಚಯಾರ್ಥದಲ್ಲಿ ಚ ಶಬ್ದವಿದೆಯೆಂದು ತಿಳಿಯುತ್ತದೆ.

'ನೀಚೋಚ್ಚ' ಇತ್ಯಾದಿ ವಾಕ್ಯದ ಅಭಿಪ್ರಾಯ ಹೀಗಿದೆ - 'ವೃದ್ಧಿಹ್ರಾಸಭಾಕ್ತ್ವಮಂತರ್ಭಾವಾತ್' ಎಂಬ ಸೂತ್ರದಲ್ಲಿ ಮತ್ತು 'ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಮ್', 'ಇಯದಾಮನನಾತ್', ಸೂತ್ರಗಳಿಂದ ಆನಂದದ ಮೀಮಾಂಸೆ ಮಾಡಲಾಗಿದೆ. ಅವರವರ ಯೋಗ್ಯತೆಗೆ ತಕ್ಕಂತೆ ಆನಂದವನ್ನು ವಿಭಾಗ ಮಾಡಿದ್ದಾರೆ. 'ವಾಗ್ವಾವ ನಾಮ್ನೋ ಭೂಯಸಿ' ಎಂಬಲ್ಲಿ ಎಲ್ಲಾ ಜೀವರ ತಾರತಮ್ಯವನ್ನು ಒಪ್ಪಿದ್ದಾರೆ. ಆದ್ದರಿಂದ ಎಲ್ಲರೂ ಜೀವರೇ ಆಗಿದ್ದರೂ ನಿಚೋಚ್ಚಭಾವ-ವಿರುತ್ತದೆಂದು ತಿಳಿಯಬೇಕು. ನಿಯಮಶಬ್ದಕ್ಕೆ ನಿಯಾಮಕ ಎಂದರ್ಥ.

ರುದ್ರಾದಿಗಳ ನಿಯಾಮಕತ್ವವು ಭಗವದಧೀನ

ಭಾವದೀಪಃ – यद्यपि इन्द्रो वै देवानामोजिष्ठो रुद्रो वाव लोकाधारः वायुना वै गोतमसूत्रेणायं च लोक इत्यादिश्रुतिः । 'रुद्रं समाश्रिता देवाः रुद्रो ब्रह्माणमाश्रितः' इत्यादिस्मृतिश्चास्ति । तथापि 'न ऋते त्वत् क्रियते किञ्चनारे' इत्यादौ तेषामपि स्वतन्त्रेश्वराधीनतावगतेरिति भावः ।। **भवतापीति** ।। 'कत्येव देवाः प्रजा विधारयन्तः' इत्यादिप्रमाणैः 'स्वामिनः फलश्रुतेः' इत्यादिसूत्रैश्च सिद्धान्तिना तथोपगमादिति भावः ।

ವಸ್ತುತಃ 'ಇಂದ್ರೋ ವೈ ದೇವಾನಾಮೋಜಿಷ್ಠಃ', 'ರುದ್ರೋ ವಾ ವ ಲೋಕಾಧಾರಃ', 'ವಾಯು ನಾ ವೈ ಗೌತಮಃ' ಇವೇ ಮೊದಲಾದ ಶ್ರುತಿಗಳಿಂದ 'ರುದ್ರಂ ಸಮಾಶ್ರಿತಾ ದೇವಾಃ ರುದ್ರೋ ಬ್ರಹ್ಮಾಣಮಾಶ್ರಿತಃ' ಮೊದಲಾದ ಸ್ಮೃತಿಗಳಿಂದ ರುದ್ರಾದಿ ದೇವತೆಗಳು ನಿಯಾಮಕರಾಗಿದ್ದಾರೆಂದು ತಿಳಿಯುತ್ತದೆ.

ಆದರೆ 'ನ ಋತೇ ತ್ವತ್‌ಕ್ರಿಯತೇ ಕಿಂಚನಾರೇ' ಎಂಬ ಶ್ರುತಿಯಿಂದ ರುದ್ರಾದಿಗಳ ನಿಯಾಮಕತ್ವವು ಭಗವಂತನ ಅಧೀನವೇ ಆಗಿದೆಯೆಂದು ತಿಳಿಯುತ್ತದೆ.

'ಭವತಾಪಿ' ಇತ್ಯಾದಿ ಟೀಕೆಯ ಅಭಿಪ್ರಾಯ ಹೀಗಿದೆ - 'ಕತ್ಯೇವ ದೇವಾಃ ಪ್ರಜಾ ವಿಧಾರಯಂತಃ' ಮೊದಲಾದ ಪ್ರಮಾಣಗಳಿಂದ 'ಸ್ವಾಮಿನಃ ಫಲಶ್ರುತೇಃ' ಮೊದಲಾದ ಸೂತ್ರಗಳಿಂದ ಸಿದ್ಧಾಂತಿಗಳು ಅಗ್ನಿಗೆ ನಿಯಾಮಕತ್ವವನ್ನು ಒಪ್ಪಿದ್ದಾರೆಂದು ತಿಳಿಯಬೇಕು.

ಸಾಧಕಪ್ರಮಾಣಗಳು ಹಾಗೂ ಬಾಧಕಪ್ರಮಾಣಗಳು

भावदीपः – प्रतीतानुपपत्तिनिरासेन फलोक्त्याऽधिकरणार्थमुपसंहरति – तस्मादिति ।। उपपत्तिस्थानादिशक्तिपूर्णसुखाद्यभिधानश्रुतोपनिषद्ब्रह्म-गत्यभिधान रूप साधकानवस्थारूपविपक्षबाधकहेतूनां सद्भावादित्यर्थः ।। अन्तरस्तत्त्वित्यस्यार्थः – विष्णुरेवेत्यादि ।।

ಆಪಾತತಃ ತೋರುವ ಅಗ್ನಿಯೇ ನಿಯಾಮಕನೆಂಬ ಅನುಪಪತ್ತಿಯನ್ನು ನಿರಾಸ ಮಾಡಿದ್ದಾಯಿತು. ಆದ್ದರಿಂದ ಅಧಿಕರಣದ ಪ್ರಯೋಜನವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ 'ತಸ್ಮಾತ್' ಇತ್ಯಾದಿ ವಾಕ್ಯದಿಂದ. ಇಲ್ಲಿಯತನಕ ಹೇಳಿದ ಉಪಪತ್ತಿಗಳೆಂದರೆ ಸ್ಥಾನಾದಿಶಕ್ತಿ, ಪೂರ್ಣಸುಖಾದ್ಯಭಿಧಾನ, ಶ್ರುತೋಪನಿಷತ್‌ಬ್ರಹ್ಮಗತ್ಯಭಿಧಾನ ಮೊದಲಾದವು. ಇವುಗಳು ಸಾಧಕಪ್ರಮಾಣಗಳಾಗಿವೆ. ಅನವಸ್ಥಾ, ಅಸಂಭವ ಮೊದಲಾದವು ವಿಪಕ್ಷದಲ್ಲಿ ಬಾಧಕಪ್ರಮಾಣಗಳಾಗಿವೆ. ಇವುಗಳ ಆಧಾರದಿಂದ ಸಿದ್ಧಾಂತ-ಸ್ಥಾಪನೆಯಾಗುತ್ತದೆ. 'ಅಂತರಃ' 'ತತ್ತು' ಎಂಬ ಪ್ರತಿಜ್ಞೆಯ ಅರ್ಥವನ್ನೇ ಟೀಕೆಯಲ್ಲಿ 'ವಿಷ್ಣುರೇವ' ಎಂದು ಹೇಳಿದ್ದಾರೆ.

ಆದಿತ್ಯನೇ ಚಕ್ಷುರಂತಸ್ಥ

भावदीपः – आदित्येति ।। अत्र पूर्वत्र च विद्यमानादित्यस्थ इत्यार्थिकोऽर्थः । आदित्यादिस्थ इत्यादिपदेनाग्निग्रहः । नन्वेवं कथं तर्हि अक्षणि पुरुषो दृश्यत इत्युक्तिः । 'तदव्यक्तमाह हि' इति तस्याव्यक्तैकस्वभावत्वादित्यत आह – दिव्येति ।। 'दृश्यते ज्ञानदृष्ट्या यः सूर्ये चक्षुषि चैकराट्' इति प्रथमाध्यायछान्दोग्यभाष्योक्तेरिति भावः ।

ಅಕ್ಷಿಸ್ಥನೆಂದು ಶ್ರುತಿಯಿಂದಲೇ ತಿಳಿಯುತ್ತದೆ. ಆದಿತ್ಯಸ್ಥನೆಂಬುದು ಆರ್ಥಿಕಾರ್ಥ. 'ಆದಿತ್ಯಾದಿಸ್ಥಃ' ಎಂದು ಹೇಳಿದಾಗ ಆದಿ ಪದದಿಂದ ಅಗ್ನಿಸ್ಥನೆಂಬುದನ್ನು ಇಟ್ಟುಕೊಳ್ಳಬೇಕು.

ಹಾಗಾದರೆ 'ಅಕ್ಷಿಣಿ ಪುರುಷೋ ದೃಶ್ಯತೇ' ಎಂದು ಹೇಗೆ ಹೇಳಿದರು ? ಏಕೆಂದರೆ ಅವ್ಯಕ್ತನಾಗಿ ಗೋಚರಿಸುತ್ತಾನೆಂದು 'ಹಿ' ಶಬ್ದ ತಿಳಿಸುತ್ತಿದೆ. ಏಕೆಂದರೆ ವಿಷ್ಣು ಅವ್ಯಕ್ತೈಕಸ್ವಭಾವವುಳ್ಳವನಾಗಿದ್ದಾನೆ.

ಆದ್ದರಿಂದ 'ದೃಶ್ಯತೇ' ಎಂಬ ಪ್ರಯೋಗವು ತಪ್ಪಾಗುತ್ತದಲ್ಲವೆ ? ಎಂಬ ಪ್ರಶ್ನೆಗೆ 'ದಿವ್ಯದೃಷ್ಟಿಗೋಚರಃ' ಎಂದು ಉತ್ತರಿಸುತ್ತಿದ್ದಾರೆ.

'ದೃಶ್ಯತೇ ಜ್ಞಾನದೃಷ್ಟ್ಯಾ ಯಃ ಸೂರ್ಯೇ ಚಕ್ಷುಷಿ ಚೈಕರಾಟ್' ಆದಿತ್ಯನಲ್ಲಿರುವವನೇ ಚಕ್ಷುರಿಂದ್ರಿಯದಲ್ಲಿ ಜ್ಞಾನದೃಷ್ಟಿಯಿಂದ ಗೋಚರಿಸುತ್ತಾನೆ' ಎಂದು ಛಾಂದೋಗ್ಯ ಭಾಷ್ಯದ ಪ್ರಥಮಾಧ್ಯಾಯದಲ್ಲಿ ಹೇಳಿದ್ದಾರೆ.

भावदीपः – अतो विष्णोरेवादित्यस्थत्वादित्यर्थः ।। **मोक्ष इति** ।। 'तद् यथा पुष्करपलाश' इत्यादिनोक्त इत्यर्थः । यत्त्वत्र केनचित् सूत्राणां भाष्यटीकार्थेऽस्वरसादिदूषणमुद्भावितम्, तत्तु भाष्यटीकारीत्या सूत्रार्थाभिमर्शिनां न चमत्कारावहमिति नात्र तदुद्धारः प्रपञ्चितोऽस्माभिः ।। १७ ।।

।। इति राघवेन्द्रयतिकृते भावदीपे अन्तराधिकरणम् ।।

ಟೀಕೆಯಲ್ಲಿರುವ 'अतः' ಎಂಬ ಪದಕ್ಕೆ ಆದಿತ್ಯನಲ್ಲಿರುವವನಾದ್ದರಿಂದ ಎಂದರ್ಥ. 'ಮೋಕ್ಷ' ಎಂದು ಟೀಕೆಯಲ್ಲಿದೆ. ತದ್ಯಥಾ ಪುಷ್ಕರಪಲಾಶಃ ಎಂಬಲ್ಲಿ ಚಕ್ಷುರಂತಸ್ಥನಾದ ವಿಷ್ಣುವಿನ ಜ್ಞಾನದಿಂದಲೇ ಮೋಕ್ಷವೆಂದು ಹೇಳಿದ್ದಾರೆ.

ಕೆಲವರು ಸೂತ್ರಗಳಿಗೆ ಭಾಷ್ಯ ಹಾಗೂ ಟೀಕೆಗಳಿಂದ ಅಸ್ವಾರಸ್ಯ ತೋರಿಸಿದ್ದಾರೆ. ಇದು ಭಾಷ್ಯ ಹಾಗೂ ಟೀಕೆಗಳ ಪ್ರಕಾರ ಸೂತ್ರಾರ್ಥವನ್ನು ತಿಳಿದುಕೊಳ್ಳಬೇಕಾದ ನಮ್ಮಂತಹವರು ಮಾಡುವ ವಿಮರ್ಶೆ ಅಲ್ಲ. ಹಾಗೆ ಹೇಳುವುದರಿಂದ ಚಮತ್ಕಾರವನ್ನು ತೋರಿಸಿಕೊಂಡಂತೇನು ಆಗುವುದಿಲ್ಲ. ಆದ್ದರಿಂದ ಅವರ ಪಕ್ಷವನ್ನು ಇಲ್ಲಿ ತೋರಿಸಿಯೂ ಇಲ್ಲ.

।। ಇಲ್ಲಿ ಶ್ರೀಮದ್ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಅಂತರಾಧಿಕರಣದಲ್ಲಿ ಕನ್ನಡ ಅನುವಾದವು ಮುಗಿಯಿತು ।।

।। ಶ್ರೀ ಮಧ್ವೇಶಾರ್ಪಣಮಸ್ತು ।।

ತಂತ್ರದೀಪಿಕೆಯಲ್ಲಿ ಸರ್ವಗತತ್ವಾಧಿಕರಣದ ಸೂತ್ರಗಳು

।। श्रीः ।।

श्री राघवेन्द्रतीर्थविरचिता

तन्त्रदीपिका

अन्तराधिकरणम् -४

अन्तर उपपत्तेः ।। १-२-१३ ।।

अत्र नये चक्षुरन्तःस्थितिरूपभावयुक्तरमणरूपक्रियालिङ्गं समन्वीयते । तत्त्वित्यस्ति ।

ಈ ಅಧಿಕರಣದಲ್ಲಿ ಚಕ್ಷುರಂತಸ್ಥಿತತ್ವ ಭಾವರೂಪವಾದ ಧರ್ಮದಿಂದ ಸಹಿತವಾದ ರಮಣ ಎಂಬ ಕ್ರಿಯಾರೂಪವಾದ ಲಿಂಗದ ಸಮನ್ವಯವನ್ನು ಮಾಡುತ್ತಿದ್ದಾರೆ. ಇಲ್ಲಿಯೂ ಸಹ 'ತತ್' ಎಂಬ ಪದಗಳನ್ನು ಅನುವೃತ್ತಿ ಮಾಡಿಕೊಳ್ಳಬೇಕು

'य एषोऽन्तरक्षिणि पुरुषो दृश्यते एष आत्मा' इत्युक्तोऽन्तरश्चक्षुरन्तः स्थित्वा रममाणो ब्रह्मैव न त्वग्निः । 'एतदमृतमभयमेतद् ब्रह्म' इत्युक्ता-मृतत्वाभयत्वलिङ्गब्रह्मशब्दानां तत्रैवोपपत्तेरित्यर्थः ।

'य एषोऽन्तरक्षिणि पुरुषो दृश्यते' ಎಂಬ ಛಾಂದೋಗ್ಯದಲ್ಲಿ ಹೇಳಲ್ಪಟ್ಟಿರುವ ಅಂತರಃ = ಚಕ್ಷುರಿಂದ್ರಿಯದ ಒಳಗಡೆ ನೆಲೆಸಿ ಕ್ರೀಡಿಸುವವನು ಬ್ರಹ್ಮನೇ ಆಗಿದ್ದಾನೆ ಹೊರತು. ಅಗ್ನಿಯಲ್ಲ. ಉಪಪತ್ತೇಃ = 'ಏತದಮೃತಮಭಯಮೇತದ್ ಬ್ರಹ್ಮ' ಎಂಬಲ್ಲಿ ಪ್ರತಿಪಾದ್ಯವಾದ

ಅಮೃತತ್ವ ಅಭಯತ್ವ ಮೊದಲಾದ ಲಿಂಗಗಳು. ಬ್ರಹ್ಮಶಬ್ದ ಮೊದಲಾದ ಶ್ರುತಿಗಳು ಬ್ರಹ್ಮನಲ್ಲಿಯೇ ಉತ್ಪನ್ನವಾಗುವುದರಿಂದ ಎಂದು ಸೂತ್ರಾರ್ಥ.

'अन्तरक्षिणि' इति श्रुतावन्तःस्थत्वोक्तावपि 'एष आत्मा' इत्यात्मपदेनाऽदेयं मातीति रमणस्याप्युक्तेः अन्तरुपपदाद् रमतेर्ञमन्तात् डप्रत्ययेनान्तर इति निरदिक्षत् । अत एव तदित्यनुवृत्तावपि पुंनिर्देशः ।।

'ಅಂತರಕ್ಷಿಣಿ' ಎಂಬ ಸೂತ್ರದಲ್ಲಿ ಚಕ್ಷುರಂತಸ್ಥತ್ವ ಎಂಬ ಲಿಂಗವು ಕೇಳಿಸುತ್ತಿದೆ. ಆದರೂ ಸಹ 'ಏಷ ಆತ್ಮಾ' ಎಂದು ಆತ್ಮ ಪದದಿಂದ 'ಆದೇಯಂ ಮಾತಿ' ಎಂಬ ವ್ಯುತ್ಪತ್ತಿಯನ್ನು ಆಶ್ರಯಿಸಿದಾಗ ರಮಣ ಎಂಬ ಕ್ರಿಯೆಯೂ ಸಹ ಹೇಳಲ್ಪಟ್ಟಿದೆಯೆಂದು ತಿಳಿಯುತ್ತದೆ. ಆದ್ದರಿಂದ 'ಅಂತರ್' ಎಂಬ ಉಪಪದದಿಂದ ಕೂಡಿದ ಞಮಂತವಾದ 'ರಮ್' ಧಾತುವಿಗೆ ಡಪ್ರತ್ಯಯವನ್ನು ಸೇರಿಸಿದಾಗ 'ಅಂತರಃ' ಎಂಬ ಪದವು ನಿಷ್ಪನ್ನವಾಗುತ್ತದೆ. ಇದನ್ನೇ ಸೂತ್ರಕಾರರು ಉಲ್ಲೇಖಿಸಿದ್ದಾರೆ. ಆದ್ದರಿಂದಲೇ ಈ 'ತತ್' ಎಂಬುದು ಅನುವೃತ್ತವಾಗಿದ್ದರೂ 'ಅಂತರಃ' ಎಂದು ಪುಲ್ಲಿಂಗದಿಂದ ನಿರ್ದೇಶಿಸಿದ್ದಾರೆ.

इतश्चैवमित्याह –

स्थानादिव्यपदेशाच्च ।। १-२-१४ ।।

स्थानमक्षि । आदिपदात् तदधिष्ठातृ गृह्यते । स्थानादिशब्दात् स्थानादिशक्तिरुपलक्ष्यते । स्थानरूपाक्षिशक्तेरधिष्ठातृशक्तेश्च व्यपदेशाच्चान्तरो ब्रह्मैवेत्यर्थः ।

ಮತ್ತೊಂದು ಕಾರಣದಿಂದಲೂ 'ಅಂತರಃ' ಎನಿಸಿದವನು ಬ್ರಹ್ಮನೇ ಆಗಿದ್ದಾನೆಂದು ಹೇಳುತ್ತಿದ್ದಾರೆ.

ಸ್ಥಾನಾದಿವ್ಯಪದೇಶಾತ್ (೧-೨-೧೪)

ಸ್ಥಾನ ಶಬ್ದಕ್ಕೆ ಅಕ್ಷಿಯೆಂದರ್ಥ. ಆದಿ ಪದದಿಂದ ಚಕ್ಷುರಿಂದ್ರಿಯಕ್ಕೆ ಆಶ್ರಯನಾದ ಪರಮಾತ್ಮನನ್ನು ಸ್ವೀಕರಿಸಬೇಕು. ಸ್ಥಾನಾದಿ ಶಬ್ದದಿಂದ ಅಸಂಗ ಎಂಬ ಸ್ಥಾನಾದಿಶಕ್ತಿಗಳನ್ನು ಉಪಲಕ್ಷಣಯಾ ತೆಗೆದುಕೊಳ್ಳಬೇಕು. ಸ್ಥಾನವೆಂಬ ಅಕ್ಷಿಯ ಮತ್ತು ಅದಕ್ಕೆ ಆಶ್ರಯನಾದ ಭಗವಂತನ ಶಕ್ತಿಯ ಉಲ್ಲೇಖವಿರುವುದರಿಂದ ಅಂತರ ಎನಿಸಿದವನು ಬ್ರಹ್ಮನೇ ಆಗುತ್ತಾನೆಂದು ಸೂತ್ರಾರ್ಥ.

'तद् यदस्मिन् सर्पिर्वोदकं वा सिञ्चति' इत्यादिनाऽक्ष्णोऽसङ्गत्वशक्ति रुच्यते । एवं 'एतं संयद्वाम इत्याचक्षते' इत्यादिनाऽक्ष्यन्तःस्थस्य संयद्वामत्वशक्तिश्चोच्यते ।

तद्वयमक्ष्यन्तःस्थस्य ब्रह्मत्व एव युक्तमिति भावः ।।

'ತದ್ ಯದಸ್ಮಿನ್ ಸರ್ಪಿರ್ವೋದಕಂ ವಾ ಸಿಂಚತಿ' ಇತ್ಯಾದಿ ಶ್ರುತಿಯಲ್ಲಿ ಅಕ್ಷಿಗೆ ಅಸಂಗತ್ವ ಶಕ್ತಿಯು ಹೇಳಲ್ಪಟ್ಟಿದೆ. ಇದೇ ರೀತಿಯಾಗಿ 'ಏತಂ ಸಂಯದ್ವಾಮ ಇತ್ಯಾಚಕ್ಷತೇ' ಇತ್ಯಾದಿ ಶ್ರುತಿಯಿಂದ ಅಕ್ಷಿಯಲ್ಲಿರುವವನಿಗೆ ಸಂಯದ್ವಾಮತ್ವಶಕ್ತಿಯು ಹೇಳಲ್ಪಟ್ಟಿದೆ. ಈ ಎರಡೂ ಶಕ್ತಿಗಳು ಅಕ್ಷಿಯಲ್ಲಿರುವವನು ಬ್ರಹ್ಮನೆಂದು ಅಂಗೀಕರಿಸಿದರೆ ಮಾತ್ರ ಯುಕ್ತವಾಗುತ್ತವೆ.

प्रकरणबलाच्चैवमित्याह –

सुखविशिष्टाभिधानादेव च ।। १-२-१५ ।।

विशिष्टं च तत्सुखं च सुखविशिष्टं 'कडाराः कर्मधारये' इति परनिपातः। सुखेन विशिष्टमिति वा, सुखेषु विशिष्टमिति वा सुखविशिष्टम् । 'कं ब्रह्म खं ब्रह्म' इत्युपक्रमे कं सुखं ब्रह्म पूर्णमिति पूर्णत्वविशिष्टसुखरूपत्वाभिधानाच्चान्तरो ब्रह्मैवेत्यर्थः ।

ಪ್ರಕರಣದ ಬಲದಿಂದಲೂ ಅಕ್ಷಿಯಲ್ಲಿರುವವನು ಭಗವಂತನೇ ಆಗಿದ್ದಾನೆಂದು ಹೇಳುತ್ತಿದ್ದಾರೆ.

ಸುಖವಿಶಿಷ್ಟಾಭಿಧಾನಾದೇವ ಚ (೧-೨-೧೫)

'ವಿಶಿಷ್ಟಂ ಚ ತತ್ಸುಖಂ ಚ ಸುಖವಿಶಿಷ್ಟಂ' ಎಂದು ವಿಗ್ರಹ. 'ಕಡಾರಾಃ ಕರ್ಮಧಾರಯೇ' ಎಂಬ ಸೂತ್ರದಿಂದ ವಿಶಿಷ್ಟಪದವು ಸಮಾಸದಲ್ಲಿ ಪರನಿಪಾತವನ್ನು ಹೊಂದಿದೆ. ಅಥವಾ 'ಸುಖೇನವಿಶಿಷ್ಟಂ ಸುಖವಿಶಿಷ್ಟಂ' ಎಂದು ಅಥವಾ 'ಸುಖೇಷು ವಿಶಿಷ್ಟಂ ಸುಖವಿಶಿಷ್ಟಂ' ಎಂದೂ ಸಹ ವಿಗ್ರಹವನ್ನು ಮಾಡಬಹುದು. 'ಕಂ ಬ್ರಹ್ಮ,' 'ಖಂ ಬ್ರಹ್ಮ' ಎಂದು ಉಪಕ್ರಮದಲ್ಲಿ 'ಕಂ ಸುಖನು, ಬ್ರಹ್ಮ ಪೂರ್ಣನು' ಎಂಬುದಾಗಿ ಪೂರ್ಣತ್ವವಿಶಿಷ್ಟವಾದ ಸುಖರೂಪತ್ವವನ್ನು ಹೇಳಿರುವುದರಿಂದಲೂ ಅಂತರನು ಬ್ರಹ್ಮನೇ ಆಗುತ್ತಾನೆಂದು ಸೂತ್ರಾರ್ಥ.

एवेत्यनेन तिष्ठतु तावत् खं ब्रह्मेति पूर्णज्ञानाभिधानमित्याह । विशिष्टेति जीवे व्यभिचारनिरासाय ।।

'ಏವ' ಎಂದು ಹೇಳಿದ್ದರಿಂದ 'ಖಂ ಬ್ರಹ್ಮ' ಎಂದು ಪೂರ್ಣಜ್ಞಾನವೆಂದು ಹೇಳಿರುವುದು ಹಾಗೆಯೇ ಇರಲಿ ಎಂದು ತಿಳಿಸಿದ್ದಾರೆ. ವಿಶಿಷ್ಟ ಎಂಬ ಪದವನ್ನೂ ಹೇಳಿದ್ದರಿಂದ ಬ್ರಹ್ಮನಲ್ಲಿರುವ ಸುಖಪೂರ್ಣತ್ವವು ಜೀವನಲ್ಲಿ ಬರುವುದಿಲ್ಲವೆಂದು ವ್ಯಭಿಚಾರವನ್ನು ಪರಿಹರಿಸಿದ್ದಾರೆ.

अस्तु कं ब्रह्मेत्युक्ता ब्रह्मविद्या । अक्षिविद्या त्वग्निपराऽस्त्वित्यत आह – **श्रुतोपनिषत्कगत्यभिधानाच्च ।। १-२-१६ ।।**

श्रुतेत्युपलक्षणम् । केति ब्रह्मवायू तन्त्रेणोक्तौ । 'प्राणो ब्रह्म कं ब्रह्म' इति तयोः प्रकृतत्वात् । श्रुतोपनिषदां श्रुतमतध्यातैतद्विद्यानां पुंसां केन वायुना कस्य ब्रह्मणो गतेः प्राप्तेः 'स एनान् ब्रह्म गमयति' इत्यभिधानाच्चान्तरो ब्रह्मैवेत्यर्थः ।

अन्यविद्याश्रवणादिनाऽन्यप्राप्तेरयोगादिति भावः ।।

'ಕಂ ಬ್ರಹ್ಮ' ಎಂದು ಹೇಳಿರುವುದು ಬ್ರಹ್ಮವಿದ್ಯೆಯೆಂದು ಒಪ್ಪೋಣ ಆದರೆ ಅಕ್ಷಿ ವಿದ್ಯೆ ಮಾತ್ರ ಅಗ್ನಿಪರವೇ ಆಗಲಿ ಎಂಬ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಿದ್ದಾರೆ.

ಶ್ರುತೋಪನಿಷತ್ಕಗತ್ಯಭಿಧಾನಾಚ್ಚ (೧-೨-೧೬)

ಶ್ರುತ ಎಂಬುದು ಉಪಲಕ್ಷಣವಾಗಿದೆ. 'ಕಂ ಬ್ರಹ್ಮ' ಎಂಬುದರಿಂದ ಬ್ರಹ್ಮವಾಯುಗಳು ಪ್ರಕೃತರಾದ್ದರಿಂದ ಒಮ್ಮೆ ಉಚ್ಚರಿಸಿದ 'ಕ' ಶಬ್ದದಿಂದಲೇ ಬ್ರಹ್ಮವಾಯುಗಳಿಬ್ಬರೂ ಪ್ರತಿಪಾದ್ಯರಾಗಿದ್ದಾರೆ. ಶ್ರುತೋಪನಿಷದಾಂ = ಅಕ್ಷಿವಿದ್ಯೆ, ಶ್ರವಣ, ಮನನ, ಧ್ಯಾನ ಇವುಗಳನ್ನು ಮಾಡಿದ ಪುರುಷರಿಗೆ ಕೇನ = ವಾಯುವಿನಿಂದ, ಕಸ್ಯ = ಬ್ರಹ್ಮನ, ಗತೇಃ = ಪ್ರಾಪ್ತಿಯು, ಅಭಿಧಾನಾತ್ = 'ಸ ಏನಾನ್ ಬ್ರಹ್ಮ ಗಮಯತಿ' ಎಂದು ಹೇಳಿರುವುದರಿಂದಲೂ ಅಂತರ ಎನಿಸಿದವನು ಬ್ರಹ್ಮನೇ ಆಗುತ್ತಾನೆಂದು ಸೂತ್ರಾರ್ಥ. ಒಬ್ಬರ ವಿದ್ಯೆಯಿಂದ ಮತ್ತೊಬ್ಬರನ್ನು ಹೊಂದುವುದು ಸಾಧ್ಯವಿಲ್ಲವೆಂದು ತಿಳಿಯಬೇಕು.

विपक्षे बाधकेनाप्येवमित्याह –

अनवस्थितेरसम्भवाच्च नेतरः ।। १-२-१७ ।।

अन्तर इतरोऽग्निर्न । किन्तु ब्रह्मैव । कुतः? अनवस्थितेः । जीवस्याग्नेर्जीवान्तरप्रेरकत्वे तस्यापि प्रेरकान्तरेण भाव्यम् । तस्यापि तथेत्यनवस्थानात् । अङ्गीकृत्य चेदमुदितम् । अग्नेरपि प्रेर्येण जीवत्वसाम्येन प्रेरणासम्भवाच्चेत्यर्थः ।।

'ಅಂತರ' ಎಂಬ ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನೆಂದು ಒಪ್ಪದಿದ್ದರೆ ಬಾಧಕವಿದೆಯೆಂದು ಹೇಳುತ್ತಿದ್ದಾರೆ.

ಅನವಸ್ಥಿತೇರಸಂಭವಾಚ್ಚ ನೇತರಃ (೧-೨-೧೭)

ಅಂತರನು ಇತರಃನ = ಬ್ರಹ್ಮನಿಗಿಂತ ಭಿನ್ನನಾದ ಅಗ್ನಿಯಲ್ಲ. ಹೊರತು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಅನವಸ್ಥಿತೇಃ = ಜೀವನೇ ಆದ ಅಗ್ನಿಗೆ ಜೀವಾಂತರಪ್ರೇರಕತ್ವವನ್ನು ಒಪ್ಪಿದರೆ ಅವನಿಗೂ ಮತ್ತೊಬ್ಬ ಪ್ರೇರಕನ ಅವಶ್ಯಕತೆ ಇದೆ. ಆ ಪ್ರೇರಕನಿಗೂ ಮತ್ತೊಬ್ಬ ಪ್ರೇರಕನು ಬೇಕಾಗಿರುವುದರಿಂದ ಅನವಸ್ಥಾ ದೋಷ ಬರುತ್ತದೆ. ಅಗ್ನಿಗೆ ಪ್ರೇರಕತ್ವವನ್ನು ಒಪ್ಪಿದಾಗ ಅನವಸ್ಥಾವನ್ನು ಹೇಳಿದ್ದಾರೆ. ಆದರೆ ಅಗ್ನಿಯು ಪ್ರೇರಕನೇ ಅಲ್ಲ. ಹೊರತಾಗಿ ಪ್ರೇರ್ಯನಾದ ಜೀವನಿಂದ ಸಮಾನಧರ್ಮವುಳ್ಳವನಾದ್ದರಿಂದ ಪ್ರೇರಣೆಯೇ ಇವನಿಗೆ ಅಸಂಭಾವಿತವಾಗಿದೆ. ಈ ಕಾರಣದಿಂದಲೂ ಅಗ್ನಿಯು ಅಂತರ ಎನಿಸಲು ಸಾಧ್ಯವಿಲ್ಲ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಅಂತರಾಧಿಕರಣವು ಮುಗಿಯಿತು ॥

* * * * *

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಅಂತರಾಧಿಕರಣ ಮತ್ತು ವಿಮರ್ಶೆ

ಮಾಯಾವಾದಿಗಳ ಪ್ರಕಾರ ಮತ್ತು ರಾಮಾನುಜರ ಪ್ರಕಾರ ಈ ಅಧಿಕರಣವು 'ಅಂತಸ್ತದ್ಧರ್ಮೋಪದೇಶಾತ್' ಎಂಬ ಅಧಿಕರಣದಿಂದ ಪುನರುಕ್ತವಾಗುತ್ತದೆ. ಮೊದಲು ಮಾಯಾವಾದಿಗಳ ಅಧಿಕರಣ ಶರೀರವನ್ನು ತಿಳಿಯೋಣ -

''ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ'' ಎಂಬುದನ್ನೇ ಮಾಯಾವಾದಿಗಳೂ ಈ ಅಧಿಕರಣದಿಂದ ವಿಷಯವಾಕ್ಯವೆಂದು ಹೇಳುತ್ತಾರೆ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಕಣ್ಣಿನಲ್ಲಿರುವವನು ಛಾಯಾಪುರುಷನೊ? ಅಥವಾ ಬ್ರಹ್ಮನೋ? ಎಂದು ಸಂಶಯ. (ಛಾಯಾಪುರುಷ ಶಬ್ದಕ್ಕೆ ಪ್ರತಿಬಿಂಬ ಎಂದರ್ಥ. ಪರಸ್ಪರ ಇಬ್ಬರು ವ್ಯಕ್ತಿಗಳು ಎದುರುಬದುರು ನಿಂತು ಕಣ್ಣನ್ನು ನೋಡಿದಾಗ ಇಬ್ಬರ ಕಣ್ಣಿನಲ್ಲಿಯೂ ಅವರವರ ಪ್ರತಿಬಿಂಬವು ಕಾಣಿಸುತ್ತದೆ. ಈ ಪ್ರತಿಬಿಂಬವನ್ನೇ ಕಣ್ಣಿನಲ್ಲಿರುವುದೆಂದು ಮಾಯಾವಾದಿಗಳು ಪೂರ್ವಪಕ್ಷ ಮಾಡುತ್ತಾರೆ.)

ಪೂರ್ವಪಕ್ಷ - 'ಋತಂ ಪಿಬಂತೌ' ಎಂಬ ಶ್ರುತಿಯಲ್ಲಿ ಪಾತೃತ್ವಲಿಂಗವು ಮೊದಲು ತಿಳಿಯುತ್ತದೆ. ಆದ್ದರಿಂದ ಇಬ್ಬರು ಚೇತನರೇ ಈ ಶ್ರುತಿಯಿಂದ ಪ್ರತಿಪಾದ್ಯರೆಂದು ತಿಳಿಯುತ್ತದೆ. ಮೊದಲು ತಿಳಿಯುವ ಈ ವಿಚಾರವನ್ನು ಗೌರವಿಸಿ ಅನಂತರ ತಿಳಿಯುವ ಗುಹಾಪ್ರವೇಶಾದಿಗಳನ್ನು ಹೇಗಾದರೂ ವ್ಯಾಖ್ಯಾನಿಸಬಹುದು. ಅದರಂತೆ ''ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ'' ಎಂಬಲ್ಲಿಯೂ 'ದೃಶ್ಯತೇ' ಎಂಬುದಾಗಿ ಕಣ್ಣಿಗೆ ಕಾಣಿಸುವ ವ್ಯಕ್ತಿಯ ಜ್ಞಾನವು ಮೊದಲು ತಿಳಿಯುತ್ತದೆ. ಈ ಪ್ರತ್ಯಕ್ಷವಿಷಯತ್ವವು ಛಾಯಾಪುರುಷನಲ್ಲೇ ಯುಕ್ತವಾಗುವುದರಿಂದ ಮೊದಲು ತಿಳಿಯಲ್ಪಟ್ಟಿದ್ದಾನೆ. ಆದ್ದರಿಂದ ಮೊದಲು ಪ್ರಾಪ್ತವಾದ ಛಾಯಾಪುರುಷನ ತಿಳುವಳಿಕೆಗೆ ಮನ್ನಣೆ ನೀಡಿ ಅನಂತರ ತಿಳಿಯುವು ಅಮೃತತ್ವ ಅಭಯತ್ವಾದಿಗಳನ್ನು ಛಾಯಾಪುರುಷನಿಗೆ ಅನುಸಾರಿಯಾಗಿ ಅರ್ಥೈಸಬೇಕು. ಅಂದರೆ ಛಾಯಾಪುರುಷನಲ್ಲಿ ಅಮೃತತ್ವ ಅಭಯತ್ವಗಳು ಯಥಾರ್ಥವಾಗಿ ಇಲ್ಲದಿದ್ದರೂ ಕೇವಲ

ಸ್ತೋತ್ರ ಮಾಡುತ್ತಿರುವುದರಿಂದ ಯುಕ್ತವಾಗುತ್ತದೆಂದು 'ಕಥಂಚಿತ್' ವ್ಯಾಖ್ಯಾನಿಸಬೇಕು. ಇದನ್ನೇ ಭಾಮತಿಯಲ್ಲಿ ಹೇಳಿದ್ದಾರೆ -

ಏಷ ದೃಶ್ಯತೇ ಇತ್ಯೇತತ್ತತ್ಯಕ್ಷೇऽರ್ಥೇ ಪ್ರಯುಜ್ಯತೇ ।
ಪರೋಕ್ಷಂ ಬ್ರಹ್ಮ ನ ತಥಾ ಪ್ರತಿಬಿಂಬೇ ತು ಯುಜ್ಯತೇ ॥
ಉಪಕ್ರಮವಶಾತ್ ಪೂರ್ವಮಿತರೇಷಾಂ ಹಿ ವರ್ಣನಮ್ ।
ಕೃತಂ ನ್ಯಾಯನಯೇನೈವ ಸ ಖಿಲ್ವತ್ರಾನುಷಜ್ಯತೇ ॥

'ಏಷಃ ದೃಶ್ಯತೇ' ಎಂಬುದಾಗಿ ಶ್ರುತಿಯು ಪ್ರತ್ಯಕ್ಷ ಸಿದ್ಧವಾದ ವ್ಯಕ್ತಿಯನ್ನು ಪ್ರತಿಪಾದಿಸುತ್ತಿದೆ. ಬ್ರಹ್ಮನು ಪರೋಕ್ಷನಾದ್ದರಿಂದ ಅವನಲ್ಲಿ ಈ ಪ್ರಯೋಗವು ಕೂಡುವುದಿಲ್ಲ. ಆದರೆ ಛಾಯಾಪುರುಷನಲ್ಲಿ ಪ್ರತ್ಯಕ್ಷ ವಿಷಯತ್ವವು ಕೂಡುತ್ತದೆ. ಹೀಗೆ ಉಪಕ್ರಮಕ್ಕೆ ಅನುಗುಣವಾಗಿ ಉಳಿದ ಅಮೃತತ್ವಾದಿಗಳನ್ನು ಅರ್ಥೈಸಬೇಕು. ಹೀಗೆ ಯಾವ ನ್ಯಾಯವನ್ನು ಹಿಂದಿನ ಗುಹಾಧಿಕರಣದಲ್ಲಿ ಹೇಳಲಟ್ಟಿದೆಯೋ? ಆ ನ್ಯಾಯವನ್ನೇ ಅನುಷಂಗ ಮಾಡಬೇಕು. ಇಷ್ಟು ಪೂರ್ವಪಕ್ಷ.

ಬ್ರಹ್ಮನೇ 'ಯ ಏಷಃ' ಎಂಬ ಶ್ರುತಿಯಿಂದ ಪ್ರತಿಪಾದ್ಯನು. ಅಮೃತತ್ವ ಅಭಯತ್ವಾದಿಲಿಂಗಗಳು ಅವನಲ್ಲೇ ಯುಕ್ತವಾಗುತ್ತದೆ. ಪ್ರಥಮ ಪ್ರಾಪ್ತವಾದ ಪ್ರತ್ಯಕ್ಷವಿಷಯನಾದ ಛಾಯಾಪುರುಷನನ್ನೇ ವಿವಕ್ಷಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. 'ದೃಶ್ಯತೇ' ಎಂಬ ಪದಕ್ಕಿಂತ ಮೊದಲು ಚೇತನವಾಚಿಯಾದ ಪುರುಷ ಪದವು ಕೇಳಿಸುತ್ತಿದೆ. ಈ ಪುರುಷ ಪದದಿಂದ ಪರಮಾತ್ಮನೇ ತಿಳಿಯುತ್ತಾನೆ. 'ಯ ಏಷಃ' ಎಂಬ ಸರ್ವನಾಮ ಶಬ್ದಗಳು ಸನ್ನಿಹಿತನಾದ ಪುರುಷಪದಪ್ರತಿಪಾದ್ಯನಲ್ಲಿ ಅನ್ವಯವನ್ನು ಹೊಂದಿ. ನಿರಾಕಾಂಕ್ಷಿತವಾಗಿವೆ. ಪುರುಷಪದವಿಲ್ಲದಿದ್ದರೆ 'ಯ ಏಷಃ' ಎಂಬ ಪದವು ಯಾರನ್ನು ಹೇಳುತ್ತಿದೆ ಎಂಬ ಆಕಾಂಕ್ಷೆಯೇ ಶಾಂತವಾಗುತ್ತಿರಲಿಲ್ಲ. ಇದರಂತೆ 'ದೃಶ್ಯತೇ' ಎಂಬ ಪದವೂ ಸಹ ಸನ್ನಿಹಿತನಾದ ಪುರುಷಪದಾರ್ಥದಲ್ಲಿ ಅನ್ವಯವನ್ನು ಹೊಂದಿ ನಿರಾಕಾಂಕ್ಷಿತವಾಗಿದೆ.

ಹಾಗಾದರೆ ಪರೋಕ್ಷನಾದ ಬ್ರಹ್ಮನಲ್ಲಿ 'ದೃಶ್ಯತೇ' ಎಂಬ ಪ್ರತ್ಯಕ್ಷಪದ ಪ್ರಯೋಗವು ಹೇಗೆ ಕೂಡುತ್ತದೆ? ಎಂದು ಶಂಕಿಸಬಾರದು. ಬ್ರಹ್ಮವಿಷಯಕವಾದ ಶಾಸ್ತ್ರಜನ್ಯಜ್ಞಾನವು ಅತ್ಯಂತ ಸ್ಪಷ್ಟವಾಗಿರುವುದರಿಂದ ಶ್ರುತಿಯು ಔಪಚಾರಿಕವಾಗಿ 'ದೃಶ್ಯತೇ' ಎಂದು ಹೇಳಿದೆ. ಇದನ್ನೇ ಭಾಮತಿಯಲ್ಲಿ ಹೀಗೆ ಹೇಳಿದ್ದಾರೆ - 'ಯ ಏಷಃ' ಎಂಬೆರಡು ಸರ್ವನಾಮಪದಗಳು ಸಾಕಾಂಕ್ಷಿತವಾಗಿರುವಾಗ ಸನ್ನಿಹಿತವಾದ ಪುರುಷಪದಾರ್ಥದಲ್ಲಿ ಅನ್ವಯವನ್ನು ಹೊಂದಿ ನಿರಾಕಾಂಕ್ಷಿತವಾಗಿದೆ ಎಂದು.

ವಸ್ತುತಃ ಶಾಂಕರ ಭಾಷ್ಯದಲ್ಲಿ ''ಕಿಂ ಪ್ರತಿಬಿಂಬ ಉತ ಜೀವಃ ಅಥೇಂದ್ರಿಯಾಸ್ಯಾಧಿಷ್ಠಾತೃದೇವತಾ ಉತ ಪರಮಾತ್ಮಾ'' ಪ್ರತಿಬಿಂಬನೋ? ಅಥವಾ, ಇಂದ್ರನೋ? ಅಥವಾ ಅಧಿಷ್ಠಾತೃ ದೇವತೆಯೋ? ಅಥವಾ ಪರಮಾತ್ಮನೋ? ಎಂಬುದಾಗಿ ನಾಲ್ಕು ಬಗೆಯ ಸಂಶಯಕೋಟಿಯನ್ನು ತೋರಿಸಿದ್ದಾರೆ. ಆದರೆ ಗ್ರಂಥಕಾರರು ಎರಡೇ ಕೋಟಿಗಳನ್ನು ತೋರಿಸಿದ್ದಾರಲ್ಲಾ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಭಾಮತಿಯಲ್ಲಿ ''ಜೀವದೇವತಯೋರಧಿಕಾಶಂಕಾऽಯೋಗಾತ್ ''ಸಂಭವಮಾತ್ರೇಣ ಜೀವದೇವತೇ ಭಾಷ್ಯೇ ಉಪನ್ಯಸ್ತೇ'' ವಸ್ತುತಃ ಜೀವ ಹಾಗೂ ದೇವತೆಗಳ ಪಕ್ಷದಲ್ಲಿ ಅಧಿಕಾಶಂಕೆಯು ಇಲ್ಲದ ಕಾರಣದಿಂದ ಕೇವಲ ಸಂಭವಾನ ಪೂರ್ವಕವಾಗಿ ಜೀವ ಹಾಗೂ ದೇವತೆಗಳೆಂಬ ಕೋಟಿಗಳು ಶಂಕರಭಾಷ್ಯದಲ್ಲಿ ಹೇಳಿರುತ್ತಾರೆ.'' ಹೀಗೆ ಭಾಮತಿಯಲ್ಲಿ ಹೇಳಿರುವ ಪ್ರಯುಕ್ತ ಗ್ರಂಥಕಾರರು ಎರಡೇ ಕೋಟಿಗಳನ್ನು ಪ್ರದರ್ಶಿಸಿರುತ್ತಾರೆ.

ರಾಮಾನುಜರ ಅಧಿಕರಣ ಶರೀರ ಹೀಗಿದೆ - ಅಕ್ಷಿಗೆ ಆಧಾರನಾದ ಪುರುಷನು, ಪ್ರತಿಬಿಂಬನೋ? ಅಥವಾ ಜೀವನೋ? ಅಥವಾ ದೇವತೆಯೋ? ಅಥವಾ ಪರಮಾತ್ಮನೋ? ಎಂದು ಸಂಶಯ. 'ಯ ಏಷಃ' ಎಂಬೆರಡು ಪದಗಳಿರುವುದರಿಂದ ಪ್ರಸಿದ್ಧಾರ್ಥದಲ್ಲಿರುವ 'ದೃಶ್ಯತೇ' ಎಂಬ ಪದವಿರುವುದರಿಂದ ಪ್ರತಿಬಿಂಬಾದಿ ಮೂವರಲ್ಲಿ ಯಾರಾದರೂ ಒಬ್ಬರು 'ಅಕ್ಷಿಗೆ' ಆಧಾರರಾಗಿರುತ್ತಾರೆ. ಉಪಕ್ರಮಕ್ಕೆ ಅನುಸಾರಿಯಾಗಿ ಉಳಿದ ಅಮೃತತ್ವಾದಿಗಳನ್ನು ಶ್ರುತಿಪರವಾಗಿ ಅರ್ಥೈಸಬೇಕೆಂದು ಪೂರ್ವಪಕ್ಷ.

ನಿರೂಪಾಧಿಕತ್ವ, ಆತ್ಮತ್ವ, ಅಮೃತತ್ವ, ಅಭಯತ್ವ, ಸಂಯದ್ವಾಮತ್ವ ಮೊದಲಾದ ಲಿಂಗಗಳೆಲ್ಲವೂ ಪರಮಾತ್ಮನಲ್ಲೇ ಉಪಪನ್ನವಾಗುವುದರಿಂದ ಪರಮಾತ್ಮನೇ ಅಕ್ಷಿಸ್ಥನಾಗಿದ್ದಾನೆ. 'ಯಃ ಚಕ್ಷುಷು ತಿಷ್ಠನ್' ಇತ್ಯಾದಿಯಾಗಿ ಬೇರೆ ಶ್ರುತಿಯಿಂದ 'ದೃಶ್ಯತೇ' ಎಂಬ ಪದವು ಪ್ರಸಿದ್ಧನೆಂದಷ್ಟೇ ಹೇಳುತ್ತಿದೆ. 'ಯ ಏಷಃ' ಎಂಬೆರಡು ಪದಗಳು ಮತ್ತು 'ದೃಶ್ಯತೇ' ಎಂಬ ಪದವು ಪರಮಾತ್ಮನನ್ನು ಉಪಾಸನಾ ಮಾಡುವ ಅಧಿಕಾರವುಳ್ಳವರಿಗೆ ಅಪರೋಕ್ಷನಾಗುತ್ತಾನೆಂದಷ್ಟೇ ಹೇಳುತ್ತಿದೆ. ಆದ್ದರಿಂದ ಪರಮಾತ್ಮನೇ ಅಕ್ಷಿಸ್ಥನೆಂದು ಸಿದ್ಧಾಂತ.

ಹೀಗೆ ಅದ್ವೈತಿಗಳು ಹಾಗೂ ರಾಮಾನುಜರು ಒಂದೇ ರೀತಿಯಲ್ಲೇ ಈ ಅಧಿಕರಣವನ್ನು ರಚಿಸಿರುತ್ತಾರೆ.

ಅದ್ವೈತಮತದಲ್ಲಿ ಹಾಗೂ ರಾಮಾನುಜ ಮತದಲ್ಲಿ ಅಂತಸ್ಥತ್ವಾಧಿಕರಣದಿಂದ ಈ ಅಧಿಕರಣವು ಪುನರುಕ್ತವಾಗಿದೆ. ಏಕೆಂದರೆ ಅಂತಸ್ಥತ್ವಾಧಿಕರಣದಲ್ಲಿ ಆದಿತ್ಯನಲ್ಲಿದ್ದಾನೆಂದು ಹೇಳುವುದರ ಜೊತೆಗೆ ಅಕ್ಷಿಯಲ್ಲಿದ್ದಾನೆಂದೂ ಸಹ ಹೇಳಲಾಗಿದೆ.

ಪ್ರಶ್ನೆ - ಅಂತಸ್ತತ್ವಾಧಿಕರಣದಲ್ಲಿ ಉದ್ಗೀಥೋಪಾಸನೆಯಲ್ಲಿರುವ ಅಕ್ಷಿ ವಾಕ್ಯವು ವಿಷಯವಾಗಿದೆ. ಆದರೆ ಈ ಅಧಿಕರಣದಲ್ಲಿ ಉಪಕೋಸಲವಿದ್ಯೆಯಲ್ಲಿರುವ ಅಕ್ಷಿವಾಕ್ಯವು ವಿಷಯವಾಗಿದೆ. ಹೀಗೆ ಸಮನ್ವಯವಾಗುತ್ತಿರುವ ವಾಕ್ಯಗಳು ವಿಭಿನ್ನವಾಗಿರುವುದರಿಂದ ಪುನರುಕ್ತಿಯನ್ನು ಹೇಗೆ ಹೇಳುತ್ತೀರಿ?

ಉತ್ತರ - ಕೇವಲ ವಿಷಯವಾಕ್ಯದ ಭೇದದಿಂದ ಪುನರುಕ್ತಿಯನ್ನು ಪರಿಹರಿಸಲಾಗದು. ಒಂದೊಂದು ವಾಕ್ಯಕ್ಕೂ ಒಂದೊಂದು ಅಧಿಕರಣ ಹೊರಡುವುದಾದರೆ ಶಾಸ್ತ್ರವು ಪರ್ಯವಸಾನವಾಗದಿರಬೇಕಾದೀತು. ಮತ್ತು ಅಂತಸ್ತತ್ವಾಧಿಕರಣದ ವಿಷಯವಾಕ್ಯದಂತೆ ಈ ಅಧಿಕರಣದ ವಿಷಯವಾಕ್ಯದಲ್ಲೂ ಸಹ ಬೇರೆಡೆ ಅಸಂಭಾವಿತವಾದ ಅಮೃತತ್ವವೇ ಮೊದಲಾದ ಬ್ರಹ್ಮನ ಧರ್ಮಗಳು ಕೇಳಿಸುತ್ತಿವೆ. ಅಷ್ಟೇ ಅಲ್ಲದೆ ಅಲ್ಲಿ ಒಮ್ಮೆ ಬ್ರಹ್ಮಶಬ್ದವು ಕೇಳಿಸಿದರೆ ಇಲ್ಲಿ ಅನೇಕ ಬಾರಿ ಬ್ರಹ್ಮಶಬ್ದವು ಕೇಳಿಸುತ್ತಿದೆ. ಆದ್ದರಿಂದ ಎರಡೂ ಕಡೆ ಬ್ರಹ್ಮನ ಲಿಂಗಗಳು ಸಮಾನವಾಗಿವೆ.

ಆಕ್ಷೇಪ - ಅಂತಸ್ತತ್ವಾಧಿಕರಣದಿಂದ ಪುನರುಕ್ತಿಯನ್ನು ಹೇಳಲಾಗದು. ಏಕೆಂದರೆ ಒಟ್ಟು ನಾಲ್ಕು ಬಗೆಯಲ್ಲಿ ಅಂತಸ್ತತ್ವಾಧಿಕರಣದಿಂದ ವೈಲಕ್ಷಣ್ಯವನ್ನು ಇಲ್ಲಿ ತಿಳಿಯಬಹುದು -

೧) ಅಂತಸ್ತತ್ವಾಧಿಕರಣದಲ್ಲಿ ''ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ'' ಎಂಬ ವಾಕ್ಯದಿಂದ ಬ್ರಹ್ಮನು ಆದಿತ್ಯನಲ್ಲಿದ್ದಾನೆಂದು ಸಮರ್ಥಿಸಲಾಗಿದೆ. ಆದರೆ ಈ ಅಧಿಕರಣದಲ್ಲಿ ಕಣ್ಣಿನಲ್ಲಿದ್ದಾನೆಂದು ಸಮರ್ಥಿಸಲಾಗಿದೆ.

೨) ಅಂತಸ್ತತ್ವಾಧಿಕರಣದಲ್ಲಿ ಛಾಂದೋಗ್ಯದ ಮೊದಲನೆಯ ಅಧ್ಯಾಯದಲ್ಲಿ 'ಉದ್ಗಿಥೋಪಾಸನೆ'ಯನ್ನು ಹೇಳುವ ವಾಕ್ಯವು ವಿಷಯವಾಗಿದೆ. ಈ ಅಧಿಕರಣದಲ್ಲಿ ಛಾಂದೋಗ್ಯದ ನಾಲ್ಕನೆಯ ಅಧ್ಯಾಯದಲ್ಲಿರುವ ಉಪಕೋಸಲವಿದ್ಯೆಯಲ್ಲಿರುವ ವಾಕ್ಯವು ವಿಷಯವಾಗಿದೆ.

೩) ಅಂತಸ್ತತ್ವಾಧಿಕರಣದಲ್ಲಿ ''ಸೈವರ್ಕ್ ತತ್ಸಾಮ ತದುಕ್ಥಂ ತದ್ಯಜುಸ್ತದ್ಬ್ರಹ್ಮ' ಎಂಬುದಾಗಿ ಸರ್ವಾತ್ಮಕತ್ವವೇ ಮೊದಲಾದ ಬ್ರಹ್ಮಲಿಂಗಗಳು ಕೇಳಿಸುತ್ತಿವೆ. ಆದರೆ ಈ ಅಧಿಕರಣದಲ್ಲಿ ಅಂತಹ ಬ್ರಹ್ಮಲಿಂಗಗಳು ಇರುವುದಿಲ್ಲ.

೪) ''ಯಃ ಏಷಃ '' ಎಂಬ ಪದಗಳು 'ಪ್ರಸಿದ್ಧ' ಎಂಬರ್ಥವನ್ನು 'ದೃಶ್ಯತೇ' ಎಂಬ ಪದವು ಅಪರೋಕ್ಷ ಎಂಬರ್ಥವನ್ನು ಹೇಳುತ್ತವೆಂದು ಇಲ್ಲಿ ನಿರ್ದೇಶಿಸಲಾಗಿದೆ. ಆದರೆ ಅಲ್ಲಿ ಇದನ್ನು ಹೇಳದ ಕಾರಣ ಆ ವಾಕ್ಯಕ್ಕಿಂತ ವಿಲಕ್ಷಣವಾದ ಶಂಕೆಯನ್ನು ಮಾಡಿದಂತಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಪುನರುಕ್ತಿಯನ್ನು ಪರಿಹರಿಸಬಹುದಲ್ಲವೇ?

ಇದು ತಪ್ಪು. ದೃಶ್ಯತ್ವವಿಲ್ಲದ ಕಾರಣ ಜೀವಪಕ್ಷವನ್ನು ಬಿಡುವುದಾದರೆ ವಿಷಯವಾಕ್ಯದಲ್ಲೇ ಇರುವ ಪುರುಷತ್ವ, ಅಮೃತತ್ವ, ಮೊದಲಾದ ಧರ್ಮಗಳು ಮತ್ತು ಹಿಂದಿನ ವಾಕ್ಯದಲ್ಲಿರುವ ಅಕ್ಷಿಯಲ್ಲಿರುವವನ ಜ್ಞಾನದಿಂದ ಪಾಪಲೇಪವು ಮುಂದಿನ ವಾಕ್ಯದಲ್ಲಿರುವ ಸಂಯದ್ವಾಮತ್ವಾದಿಗಳು ಛಾಯಾಪುರುಷನಲ್ಲಿ ಸರ್ವಥಾ ಬರಲಾರವು. ಆದ್ದರಿಂದ ಒಂದು ಧರ್ಮವಿಲ್ಲದ ಕಾರಣ ಜೀವಪಕ್ಷವನ್ನು ಬಿಡುವುದಾದರೆ ಅನೇಕ ಧರ್ಮಗಳಿಲ್ಲದ ಕಾರಣ ಛಾಯಾಪುರುಷಪಕ್ಷವನ್ನು ಖಂಡಿತವಾಗಿಯೂ ಬಿಡಬೇಕು.

ಒಂದು ವೇಳೆ ಛಾಯಾಪುರುಷನಲ್ಲಿ ಅಮೃತತ್ವಾದಿ ಧರ್ಮಗಳನ್ನು ಸ್ತುತಿಗೋಸ್ಕರವೆಂದು ಕಥಂಚಿತ್ ಕೂಡಿಸುವುದಾದರೆ ಜೀವಪಕ್ಷದಲ್ಲಿಯೂ ಸಹ ಪ್ರಯತ್ನ ಪಟ್ಟು ದೃಶ್ಯತ್ವಾದಿಧರ್ಮಗಳನ್ನು ಏಕೆ ಕೂಡಿಸಬಾರದು? ಆದ್ದರಿಂದ ಅಂತಸ್ತತ್ವಾಧಿಕರಣಕ್ಕಿಂತ ವಿಭಿನ್ನವಾದ ಪೂರ್ವಪಕ್ಷವು ಈ ಅಧಿ ಕರಣದಲ್ಲಿ ಭಾಮತಿಯ ಪ್ರಕಾರ ಹುಟ್ಟಲು ಸಾಧ್ಯವೇ ಇಲ್ಲ?

ನಮ್ಮ ಮತದಲ್ಲಿ ಈ ದೋಷವಿಲ್ಲ. ಏಕೆಂದರೆ 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದಲ್ಲಿ ಇಂದ್ರಾದಿ ಶ್ರುತಿಗಳಿಂದ ಇಂದ್ರಾದಿಗಳೇ ಅಂತಸ್ಥರೆಂದು ಪೂರ್ವಪಕ್ಷ ಮಾಡಿ ಇಂದ್ರಾದಿಗಳಲ್ಲವೆಂದು ಸಿದ್ಧಾಂತ ಮಾಡಲಾಗಿದೆ. ಆದರೆ ಈ ಅಧಿಕರಣದಲ್ಲಿ ಅಭ್ಯಾಸ, ಅರ್ಥವಾದ ಸಹಿತವಾದ ಬಹುಶ್ರುತಿಗಳಿವೆ. ಈ ಎಲ್ಲಾ ಪ್ರಮಾಣಗಳಿಂದ ಅಗ್ನಿಯು ಚಕ್ಷುರಂತಸ್ಥನೆಂದು ಪೂರ್ವಪಕ್ಷ ಮಾಡಿ ಅಗ್ನಿಯಲ್ಲವೆಂದು ಸಿದ್ಧಾಂತ ಮಾಡಲಾಗಿದೆ. ಹೀಗೆ ಎರಡೂ ಅಧಿಕರಣಗಳಿಗೆ ಬಹಳಷ್ಟು ವೈಲಕ್ಷಣ್ಯವಿರುವುದರಿಂದ ನಮ್ಮ ಸಿದ್ಧಾಂತದ ಪ್ರಕಾರ ಪುನರುಕ್ತಿದೋಷ ಬರುವುದಿಲ್ಲ.

ಇಲ್ಲಿಯ ತನಕ ಅದ್ವೈತಿಗಳ ಅಧಿಕರಣಶರೀರವನ್ನು ನಿರಾಕರಿಸಿದ್ದಾಯಿತು. ಪ್ರಕೃತ ಅವರ ಸೂತ್ರಾರ್ಥವನ್ನು ನಿರಾಕರಿಸುತ್ತಿದ್ದಾರೆ. ಮೊದಲನೆಯ ಸೂತ್ರವನ್ನು ನಮ್ಮ ಮತದ ಪ್ರಕಾರ ಕ್ರಿಯಾಲಿಂಗಸಮನ್ವಯರೂಪವೆಂದು ಹೇಳುವುದಿಲ್ಲ ಹೊರತಾಗಿ ಒಳಗಿರುವಿಕೆ ಎಂಬ ಧರ್ಮವನ್ನಷ್ಟೇ ಹೇಳುತ್ತಾರೆ. ಈ ಅರ್ಥವನ್ನು ವಿವಕ್ಷಿಸಿದಾಗ ''ಅಂತರುಪಪತ್ತೇಃ'' ಎಂದು ನಿರ್ದೇಶಿಸಿದರೆ ಸಾಕು. 'ಅಂತರ ಉಪಪತ್ತೇಃ' ಎಂಬ 'ರ' ಶಬ್ದದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಸೂತ್ರದ ಪ್ರತಿಜ್ಞೆಯೇ ಅದ್ವೈತಿಗಳ ಪ್ರಕಾರ ತಪ್ಪಾಗುತ್ತದೆಂದು 'ಸೂತ್ರಕ್ರಮಸ್ತು' ಇತ್ಯಾದಿ ಹಿಂದಿನ ಗ್ರಂಥದಿಂದಲೇ ತಿಳಿಸಿದಂತಾಯಿತು. ಇನ್ನು 'ಉಪಪತ್ತೇಃ' ಎಂಬ ಹೇತ್ವಂಶವು 'ಕಾರ್ಯಬ್ರಹ್ಮ' ಇತ್ಯಾದಿ ಗ್ರಂಥದಿಂದ ದೂಷಿಸಿದಂತಾಯಿತು ಎಂಬ ಅಭಿಪ್ರಾಯದಿಂದ ಪ್ರತ್ಯೇಕವಾಗಿ ಇಲ್ಲಿ ಗ್ರಂಥಕಾರರು ಪ್ರಥಮ ಸೂತ್ರವನ್ನು ದೂಷಣೆ ಮಾಡಿಲ್ಲ. ಮುಂದಿನ 'ಸ್ಥಾನಾದಿವ್ಯಪದೇಶಾಚ್ಚ' ಇತ್ಯಾದಿ ಸೂತ್ರಗಳನ್ನು

ದೂಷಿಸಲು ಹೊರಟಿದ್ದಾರೆ. ಮೊದಲು ಎರಡನೆಯ ಸೂತ್ರಾರ್ಥವನ್ನು ಅನುವಾದ ಮಾಡಿ 'ಯಚ್ಚ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಪ್ರಥಮಸೂತ್ರದ ಮೇಲೆ ಬರುವ ಅನುಪಪತ್ತಿಯ ಪರಿಹಾರಕ್ಕಾಗಿ ಎರಡನೆಯ ಸೂತ್ರವು ಹೊರಟಿದೆಯೆಂದು ಅದ್ವೈತಿಗಳು ಹೇಳುತ್ತಾರೆ. ಹೊರತು ನಾವು ಹೇಳುವಂತೆ ಅಕ್ಷಿಸ್ಥನಾದವನು ಬ್ರಹ್ಮನೆಂಬ ವಿಷಯದಲ್ಲಿ ಈ ಸೂತ್ರವು ಮತ್ತೊಂದು ಹೇತುವನ್ನು ಹೇಳುತ್ತಿದೆಯೆಂದು ವ್ಯಾಖ್ಯಾನಿಸುವುದಿಲ್ಲ.

ಎಲ್ಲೆಡೆ ಇರುವ ಬ್ರಹ್ಮನು ಅತ್ಯಲ್ಪಸ್ಥಾನವಾದ ಚಕ್ಷುರಿಂದ್ರಿಯದಲ್ಲಿ ಇರದಿದ್ದರೂ ಕೇವಲ ಉಪಾಸನೆಗೋಸ್ಕರ ಅಕ್ಷಿಸ್ಥನೆಂದು ಶ್ರುತಿಯು ಹೇಳುತ್ತಿದೆಯೆಂಬುದಾಗಿ ಎರಡನೆಯ ಸೂತ್ರದಲ್ಲಿ ವ್ಯಾಖ್ಯಾನಿಸುತ್ತಾರೆ. ಅಂದರೆ 'ಯಃ ಪೃಥಿವ್ಯಾಂ ತಿಷ್ಠನ್' ಎಂದು ಉಪಕ್ರಮವಾದ ಪ್ರಕರಣದಲ್ಲಿ 'ಯಶ್ಚಕ್ಷುಷಿ ತಿಷ್ಠನ್' ಎಂಬುದಾಗಿ ಚಕ್ಷುಸ್ಸಿನ ಅಂತರ್ಯಾಮಿಯಾಗಿರುವನೆಂಬ ಸ್ಥಾನವನ್ನು ನಿರ್ದೇಶಿಸಿದ್ದು ಕೇವಲ ಉಪಾಸನೆಗೋಸ್ಕರ ''ಯ ಏಷೋऽಂತರಕ್ಷಿಣಿ'' ಎಂದು ಹೇಳಿರುವುದರಿಂದ.

ಅದ್ವೈತಿಗಳು 'ಸುಖವಿಶಿಷ್ಟಾಭಿಧಾನಾದೇವಚ' ಎಂಬ ಮೂರನೇ ಸೂತ್ರವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. - ಪ್ರಕರಣದ ಆರಂಭದಲ್ಲಿ ''ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮ'' ಎಂದು ಸುಖವಿಶಿಷ್ಟನಾದ ಬ್ರಹ್ಮನನ್ನು ಹೇಳಿರುವುದರಿಂದಲೂ ಪ್ರಕೃತ ಶ್ರುತಿಯಲ್ಲಿ ಹೇಳಲ್ಪಟ್ಟ ಅಕ್ಷಿಸ್ಥನು ಪರಬ್ರಹ್ಮನೇ ಆಗುತ್ತಾನೆ. ಆದ್ದರಿಂದಲೇ ಅಗ್ನಿದೇವತೆಯು ತನ್ನ ಮಹತ್ವವನ್ನು ಹೇಳಿ ಮೊದಲು ಪ್ರಸ್ತುತನಾದ ಬ್ರಹ್ಮನ ಬಗ್ಗೆಯೂ ಹೇಳಿ 'ಅಸ್ಮದ್ವಿದ್ಯಾ ಆತ್ಮವಿದ್ಯಾ' ಎಂದು ಉಪದೇಶಿಸಲಾಗಿದೆ. ಕೊನೆಯಲ್ಲಿ ವಿದ್ಯೆ ಫಲಿಸಬೇಕಾದ್ದರಿಂದ ನಿನ್ನ ಗುರುಗಳು ವಿದ್ಯೆಯಿಂದುಂಟಾಗುವ ಫಲವನ್ನು ಉಪದೇಶಿಸಲಾಗಿದೆ. ಮುಂದೆ ಗುರುಗಳು ಪದ್ಮಪತ್ರದಂತೆ ಅಕ್ಷಿಸ್ಥನಲ್ಲಿರುವ ಜ್ಞಾನದಿಂದ ಪಾಪದ ಅಲೇಪ ಹಾಗೂ ಬ್ರಹ್ಮನ ಪ್ರಾಪ್ತಿಯು ಉಂಟಾಗುತ್ತದೆಂದು ಉಪದೇಶಿಸುತ್ತಾರೆ.

ಹೀಗೆ ವ್ಯಾಖ್ಯಾನಿಸುವಾಗ ''ಯದ್ವಾವ ಕಂ ತದೇವ ಖಂ ಯದೇವ ಖಂ ತದೇವ ಕಂ'' ಎಂಬ ವಾಕ್ಯಶೇಷದಲ್ಲಿ ''ಕಂ ಬ್ರಹ್ಮ'' ಎಂಬಲ್ಲಿರುವ 'ಕ' ಶಬ್ದವು ಲೌಕಿಕಸುಖವನ್ನು ಹೇಳುತ್ತದೆಂಬ ಭ್ರಾಂತಿ ಬರುತ್ತದೆ. ಅದನ್ನು ನಿರಾಸ ಮಾಡುವುದಕ್ಕಾಗಿ ಅಪರಿಚ್ಛಿನ್ನತ್ವವನ್ನು ಸುಖದಲ್ಲಿ ವಿಶೇಷಣವನ್ನಾಗಿ ಹೇಳುವ 'ಖ' ಶಬ್ದವನ್ನು ಶ್ರುತಿಯು ಹೇಳಿದೆ. ಇದರಿಂದ ಸುಖವು ಅಪರಿಚ್ಛಿನ್ನವಾಗಿದೆಯೆಂಬರ್ಥವು

ತಿಳಿಯುತ್ತದೆಂದು ಹೇಳಬೇಕು. ಇಲ್ಲದಿದ್ದರೆ ಕೇವಲ ಸುಖಸಂಬಂಧವನ್ನು ಹೇಳಿದಂತಾಗಿ ಜೀವನೂ ಸಹ ಅಕ್ಷಿಸ್ಥನಾಗಬೇಕಾಗುತ್ತದೆ.

'ಶ್ರುತೋಪನಿಷತ್ಕಗತ್ಯಭಿಧಾನಾಚ್ಚ' ಎಂಬ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ - ಶ್ರುತೋಪನಿಷತ್ಕಸ್ಯ = ರಹಸ್ಯವಿದ್ಯೆಯನ್ನು ತಿಳಿದ ಬ್ರಹ್ಮಜ್ಞಾನಿಯು ಶ್ರುತ್ಯಂತರದಲ್ಲಿ ಪ್ರಸಿದ್ಧವಾದ ಅರ್ಚಿರಾದ - ಮಾರ್ಗವೆಂಬ ಗತಿಯನ್ನು ಹೊಂದುತ್ತಾನೆಂದು ಶ್ರುತ್ಯಂತರದಲ್ಲಿ ಹೇಳಲಾಗಿದೆ. ಆದ್ದರಿಂದ ಪ್ರಕೃತ ಶ್ರುತಿಯಲ್ಲಿ ಅಕ್ಷಿಸ್ಥನಾದವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಯಾರು ಬ್ರಹ್ಮಜ್ಞಾನಿಯಲ್ಲವೋ ಅವನಿಗೆ ಅರ್ಚಿರಾದಿ ಮಾರ್ಗದಲ್ಲಿ ಪ್ರವೇಶವಿರುವುದಿಲ್ಲವೆಂದು.

ಇದೂ ಕೂಡ ಸರಿಯಿಲ್ಲ. ನಿಮ್ಮ ಮತದಲ್ಲಿ ಅರ್ಚಿರಾದಿಮಾರ್ಗವು ಉಪಾಸಕನಿಗಷ್ಟೇ ದೊರೆಯುತ್ತದೆ ಹೊರತು ಬ್ರಹ್ಮಜ್ಞಾನಿಗೆ ದೊರೆಯುವುದಿಲ್ಲ. ಅಷ್ಟೇ ಅಲ್ಲದೆ ಸೂತ್ರದಲ್ಲಿ 'ಕಗತ್ಯಭಿಧಾನಾತ್' ಎಂದು ಅನ್ವಯ ಮಾಡುವುದೇ ಸೂಕ್ತ ಹೊರತು 'ಶ್ರುತೋಪನಿಷತ್ಕ' ಎನ್ನುವುದು ಸೂಕ್ತವಲ್ಲ. 'ಕಗತ್ಯಭಿಧಾನಾತ್' ಎಂದು ಹೇಳಿದಾಗ 'ಸ ಏನಾನ್ ಬ್ರಹ್ಮ ಗಮಯತಿ'' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಬ್ರಹ್ಮಗತಿಗೆ 'ಕಂ ಬ್ರಹ್ಮ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ 'ಕ' ಶಬ್ದ ನಿರ್ದಿಷ್ಟವಾದ ಬ್ರಹ್ಮವಿಷಯತ್ವವನ್ನು ಹೇಳಿದಾಗ ಶ್ರುತಿಯನ್ನು ಅನುಸರಿಸಿದಂತಾಗುತ್ತದೆ. ಬ್ರಹ್ಮಪ್ರಾಪ್ತಿ ಸಾಧನವಾದ ವಿದ್ಯೆಗೆ ಸಾಕ್ಷಾತ್ ಬ್ರಹ್ಮವಿಷಯತ್ವವನ್ನು ಹೇಳಿದಂತಾಗುತ್ತದೆ. ವಿದ್ಯೆಗೂ ತತ್ಸಾಧ್ಯವಾದ ಪ್ರಾಪ್ತಿಗೂ ಏಕವಿಷಯತ್ವವೆಂಬ ನಿಯಮವಿರುವುದರಿಂದ ನಮ್ಮ ವ್ಯಾಖ್ಯಾನವೇ ಸಾಧುವಾಗಿದೆ. ಹೊರತು ಮಾರ್ಗಕ್ಕೆ ಅರ್ಚಿರಾದಿತ್ವವನ್ನು ಹೇಳಿದ ಮಾತ್ರದಿಂದ ಈ ಪ್ರಯೋಜನವು ದೊರೆಯುವುದಿಲ್ಲ.

ಮತ್ತು ''ಶೇಷಾದ್ವಿಭಾಷಾ'' ಎಂಬ ಸೂತ್ರದಲ್ಲಿ 'ಕ' ಪ್ರತ್ಯಯವನ್ನು ವಿಕಲ್ಪವಾಗಿ ಹೇಳಿರುವುದರಿಂದ ಬಹುವ್ರೀಹಿಸಮಾಸ ಮಾಡಿದರೂ ಸಹ 'ಕ' ಪ್ರತ್ಯಯವು ವ್ಯರ್ಥವಾಗುತ್ತದೆ. ಮತ್ತು ನಿಮ್ಮ ವ್ಯಾಖ್ಯಾನದಲ್ಲಿ ಸೂತ್ರದಲ್ಲಿರುವ 'ಗತಿ' ಶಬ್ದಕ್ಕೆ ಮಾರ್ಗವೆಂಬರ್ಥವು ಅಸ್ವರಸವಾಗುತ್ತದೆ.

'ಅನವಸ್ಥಿತೇೞರಸಂಭವಾಚ್ಚ' ಎಂಬ ಕೊನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನ ಮಾಡಲಾಗಿದೆ. ಛಾಯೆಯು ನಿರಂತರವಾಗಿ ಚಕ್ಷುರಿಂದ್ರಿಯದಲ್ಲಿ ಇರುವುದಿಲ್ಲ. ಜೀವನಾದರೂ ಸಹ ಸಕಲ ಶರೀರೇಂದ್ರಿಯಗಳ ಸಂಬಂಧವನ್ನು ಹೊಂದಿರುವ ಕಾರಣ ಕೇವಲ ಚಕ್ಷುರಿಂದ್ರಿಯದಲ್ಲಿ ಇರಲಾರನು.

ಮತ್ತು ಅಮೃತತ್ವಾದಿಗಳು ಛಾಯಾಪುರುಷನಲ್ಲಾಗಲೀ, ಜೀವನಲ್ಲಾಗಲೀ ಅಸಂಭಾವಿತವಾದ್ದರಿಂದ 'ನೇತರಃ' = ಇತರ ಪದಾರ್ಥಗಳು ಚಕ್ಷುರಿಂದ್ರಿಯದಲ್ಲಿ ಇರಲು ಸಾಧ್ಯವಿಲ್ಲ ಎಂದು.

ಇದೂ ಸಹ ತಪ್ಪು. 'ಅನವಸ್ಥಿತಿ' ಶಬ್ದಕ್ಕೆ ಅಪ್ರಮಾಣಕವಾದ ಅನಂತ ವ್ಯಕ್ತಿಗಳನ್ನು ಕಲ್ಪಿಸುವಿಕೆ ಎಂಬರ್ಥವೇ ಲೋಕದಲ್ಲಿ ಪ್ರಸಿದ್ಧವಾಗಿದೆ ಹೊರತು ''ಇರುವುದಿಲ್ಲ'' ಎಂಬರ್ಥವು ಪ್ರಸಿದ್ಧವಾಗಿಲ್ಲ. ಮತ್ತು 'ಸದಾ' ಶಬ್ದ 'ಚಕ್ಷುಷ್ಯೇವ' ಎಂಬ ಶಬ್ದ ಇವುಗಳನ್ನೆಲ್ಲಾ ಅಧ್ಯಾಹಾರ ಮಾಡಬೇಕಾಗುತ್ತದೆ. ಮತ್ತು ''ಉಪಪತ್ತೇಃ'' ಎಂಬುದರಿಂದಲೇ ಬ್ರಹ್ಮನನ್ನು ಬಿಟ್ಟು ಬೇರೆ ಕಡೆ ಅಮೃತತ್ವ ಮೊದಲಾದವುಗಳು ಅಸಂಭಾವಿತವೆಂಬರ್ಥ ತಿಳಿಯುವುದರಿಂದ ಪುನಃ 'ಅಸಂಭವಾತ್' ಎಂಬ ಪದವು ವ್ಯರ್ಥವಾಗುತ್ತದೆ. ಇದೇ ರೀತಿಯಾಗಿ ಬೇರೆ ಅಧಿಕರಣದಲ್ಲಿರುವ ಸೂತ್ರಗಳಲ್ಲಿಯೂ ಅನುಪಪತ್ತಿಯನ್ನು ತಿಳಿಯಬೇಕು. ಅಥವಾ ಪ್ರಥಮ ಸೂತ್ರದಲ್ಲಿ ಅನುಪಪತ್ತಿಯನ್ನು ತಿಳಿಯಬೇಕು.

ರಾಮಾನುಜರ ಮತವು ಅದ್ವೈತಮತಕ್ಕಿಂತ ಏನೂ ವ್ಯತ್ಯಾಸವಿಲ್ಲದ ಕಾರಣ ಅದ್ವೈತಮತದ ನಿರಾಕರಣೆಯಿಂದಲೇ ಇವರ ಮತವನ್ನೂ ಸಹ ನಿರಾಕರಿಸಿದಂತಾಯಿತು.

ಇನ್ನು ಕೆಲವರು 'ಅತ ಏವ ಚ ಸ ಬ್ರಹ್ಮ' ಎಂಬ ಸೂತ್ರವನ್ನು ಈ ಅಧಿಕರಣದಲ್ಲಿ ಸೇರಿಸುತ್ತಾರೆ. ಆದರೆ ಈಕ್ಷತ್ಯಧಿಕರಣದಲ್ಲಿ 'ಪ್ರತಿಜ್ಞಾವಿರೋಧಾತ್' ಎಂಬ ಸೂತ್ರವನ್ನು ಸೇರಿಸಿದ್ದು ಹೇಗೆ ಪ್ರಕ್ಷಿಪ್ತವಾಗಿದೆಯೋ ಅದರಂತೆ ಇದೂ ಸಹ ಪ್ರಕ್ಷಿಪ್ತವಾಗಿದೆಯೆಂದು ಉಪೇಕ್ಷಿಸಬೇಕು.

ಉಳಿದ ಅಧಿಕರಣಗಳಂತೆ ಈ ಅಧಿಕರಣದಲ್ಲೂ ಸಹ 'ಅನವಸ್ಥಿತೇರಸಂಭವಾತ್' 'ನೇತರಃ' ಎಂಬುದಾಗಿ ಜೀವನನ್ನು ನಿಷೇಧ ಮಾಡಿ ಬ್ರಹ್ಮನನ್ನು ಅಕ್ಷಿಸ್ಥನೆಂದು ಹೇಳಿದ್ದರಿಂದ ಜೀವಬ್ರಹ್ಮರಿಗೆ ಭೇದವನ್ನೇ ಅದ್ವೈತಿಗಳು ಸಾಧಿಸಿದಂತಾಗುತ್ತದೆ.

ಇಲ್ಲಿಗೆ ಅಂತರಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಅಂತರ್ಯಾಮ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಭಾವದೀಪ

ವಿಶೇಷ ವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಅಂತರ್ಯಾಮ್ಯಧಿಕರಣ

ಬ್ರಹ್ಮಸೂತ್ರ

'ಅಂತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। अन्तर्याम्यधिदैवादिषु तद्धर्मव्यपदेशात् ।। १८ ।।

ಸೂತ್ರಾರ್ಥ - 'ಏಷ ಆತ್ಮಾಂತರ್ಯಾಮೀ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಅಧಿದೈವಾದಿಪ್ರಕರಣಗಳಲ್ಲಿ ಅವಿದಿತತ್ವವೇ ಮೊದಲಾದ ವಿಷ್ಣುವಿನ ಧರ್ಮಗಳನ್ನು ಹೇಳಿರುವುದರಿಂದ.

ಅರ್ಥ — 'ಏಷ ಆತ್ಮಾ ಅಂತರ್ಯಾಮೀ' ಎಂಬ ಬೃಹದಾರಣ್ಯಕಶ್ರುತಿಯು ಈ ಸೂತ್ರಕ್ಕೆ ವಿಷಯವಾಗಿದೆ. ಇಲ್ಲಿ ಹೇಳಲ್ಪಟ್ಟ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ; ಹೊರತು ಪ್ರಕೃತ್ಯಾದಿಗಳಲ್ಲ. ಏಕೆಂದರೆ ಅಧಿದೈವಾದಿಷು = ಅಧಿದೈವ, ಅಧ್ಯಾತ್ಮ, ಅಧಿಭೂತ ಮೊದಲಾದ ಪ್ರಕರಣಗಳಲ್ಲಿ, ತದ್ಧರ್ಮವ್ಯಪದೇಶಾತ್ = ಅಂತರ್ಯಾಮಿಯಲ್ಲಿ 'ಯಂ ಪೃಥಿವೀ ನ ವೇದ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅವಿದಿತತ್ವ ಮೊದಲಾದ ಬ್ರಹ್ಮನ ಧರ್ಮಗಳನ್ನು ಹೇಳಿರುವುದರಿಂದ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಬೃಹದಾರಣ್ಯಕ ಅಂತರ್ಯಾಮಿಯ ಬಗ್ಗೆ ಏನು ಹೇಳುತ್ತದೆ ?

ब्रह्मसूत्रभाष्यम् —

'यः पृथिव्यां तिष्ठन् (पृथिव्या अन्तरो यं पृथिवी न वेद यस्य पृथिवी शरीरं यः पृथिवीमन्तरो यमयत्येष त आत्माऽन्तर्याम्यमृतः') (बृ. ५-७-३) इत्यादि अन्तर्याम्युच्यते ।

ಅನುವಾದ - 'ಯಾರು ಪೃಥಿವಿಯಲ್ಲಿ ಗರುಡನಲ್ಲಿ ನೆಲೆಸಿ ಅದಕ್ಕಿಂತಲೂ ಭಿನ್ನನಾಗಿ ಇರುವನೋ, ಯಾರನ್ನು ಪೃಥಿವೀ ಅಭಿಮಾನಿ ಗರುಡನು ತಿಳಿಯಲು ಸಾಧ್ಯವಿಲ್ಲವೋ ಯಾರು ಅಲ್ಲಿದ್ದು ಸ್ವರಮಣನಾಗಿ ಎಲ್ಲವನ್ನೂ ನಿಯಮನ ಮಾಡುತ್ತಾನೋ, ಅಂತಹ ಪುರುಷನೇ ನಿನ್ನ ಒಳಗಿದ್ದು ನಿಯಮಿಸುತ್ತಿದ್ದಾನೆ. ಈ ಪುರುಷನೇ ನಿನಗೆ ಸ್ವಾಮಿಯಾಗಿದ್ದಾನೆ. ಎಲ್ಲರ ಅಂತರ್ಯಾಮಿಯೂ ಆಗಿದ್ದಾನೆ. ಮತ್ತು ನಾಶ ರಹಿತನಾಗಿದ್ದಾನೆ'

ಇವೇ ಮೊದಲಾದ ವಾಕ್ಯಗಳಿಂದ ಎಲ್ಲರಲ್ಲಿಯೂ ಒಬ್ಬನೇ ವ್ಯಕ್ತಿಯು ನೆಲೆಸಿದ್ದಾನೆಂದು ಹೇಳಲ್ಪಟ್ಟಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಅಂತಃಸ್ಥತ್ವ ಎಂಬ ಭಾವಧರ್ಮದಿಂದ ಸಹಿತವಾದ ನಿಯಮನ ಎಂಬ ಕ್ರಿಯಾರೂಪವಾದ ಲಿಂಗದ ಸಮನ್ವಯವನ್ನು ಬ್ರಹ್ಮನಲ್ಲಿ ಮಾಡಲಾಗಿದೆ. ವಿಷಯ-ವಾಕ್ಯವನ್ನು ಉದಾಹರಿಸುವ ಮೂಲಕ ವಿಷಯವನ್ನು ತೋರಿಸುತ್ತಿದ್ದಾರೆ.

ಯಃ = ಯಾವಾತನು, ಪೃಥಿವ್ಯಾಂ = ಭೂಮಿಯಲ್ಲಿ ಗರುಡನಲ್ಲಿ, ತಿಷ್ಠನ್ = ನೆಲೆಸಿದವನಾಗಿ, (ಪೃಥಿವ್ಯಾಃ = ಪೃಥಿವಿಯಿಂದ ಹಾಗೂ ತದಭಿಮಾನಿದೇವತೆಯಿಂದ, ಅಂತರಃ = ಭಿನ್ನನಾಗಿದ್ದಾನೋ, ಯಂ =

ಯಾವಾತನನ್ನು, ಪೃಥಿವೀ = ಪೃಥಿವೀ ಅಭಿಮಾನಿ ಗರುಡನು, ನ ವೇದ = ಸಾಕಲ್ಯೇನ ತಿಳಿಯುವುದಿಲ್ಲವೋ, ಯಸ್ಯ = ಯಾವನಿಗೆ, ಪೃಥಿವೀ = ಪೃಥಿವಿಯೇ, ಪೃಥಿವೀ ಅಭಿಮಾನಿ ದೇವತೆಯೇ, ಶರೀರಂ = ಅವನ ವಶವಾಗಿರುವ ಕಾರಣದಿಂದ ದೇಹವಾಗಿದೆಯೋ, ಯಃ = ಯಾವಾತನು, ಪೃಥಿವೀಂ = ಪೃಥಿವೀ, ಹಾಗೂ ಗರುಡರನ್ನು, ಅಂತರಃ = ಅತ್ಯಂತ ಪ್ರಿಯನಾಗಿ, ಯಮಯತಿ = ಪ್ರೇರಣೆ ಮಾಡುತ್ತಾನೋ, ಏಷಃ = ಅಂತಹ ಈ ಪುರುಷನೇ, ತೇ= ನಿನಗೆ, ಆತ್ಮಾ = ಹೃದಯದಲ್ಲಿ ನೆಲೆಸಿರುವ ಸ್ವಾಮಿಯು ಮತ್ತು, ಅಂತರ್ಯಾಮೀ = ಎಲ್ಲೆಡೆ ಎಲ್ಲರ ಹೃದಯದಲ್ಲಿ ನೆಲೆಸಿರುವವನು, ಅಮೃತಃ = ನಾಶ ರಹಿತನು, ನಿತ್ಯನೂ ಆಗಿದ್ದಾನೆ.)

ಇತ್ಯಾದಿ = ಇವೇ ಮೊದಲಾದ ವಾಕ್ಯಗಳಿಂದ (ವಾಕ್ಯಗಳಲ್ಲಿ), ಅಂತರ್ಯಾಮೀ = ಎಲ್ಲರ ಹೃದಯದಲ್ಲಿ ನೆಲೆಸಿರುವ ವ್ಯಕ್ತಿಯು ಒಬ್ಬನೇ ಎಂದು, ಉಚ್ಯತೇ = ಕರೆಸಿಕೊಳ್ಳುತ್ತಾನೆ.

ಅಂತರ್ಯಾಮಿಯು ಪ್ರಕೃತಿಯೋ ? ಜೀವನೋ ಆಗಬಹುದೇ ?

ब्रह्मसूत्रभाष्यम् – तत्र च 'एतदमृतम्' (छां. ४-१५.१) इत्युक्तममृतत्वमुच्यते। स च 'यस्य पृथिवी शरीरम्' इत्यादिना सर्वात्मकत्वात् प्रकृतिस्तत्तज्जीवो वा युक्तः ।

ಅನುವಾದ -ಆ ಪರಮಾತ್ಮನಲ್ಲಿ 'ಏತದಮೃತಮ್, ಏತದಭಯಮ್' ಇತ್ಯಾದಿಯಾಗಿ ಛಾಂದೋಗ್ಯದಲ್ಲಿ ಹೇಳಿದಂತೆ ನಾಶವಿಲ್ಲದಿರುವಿಕೆಯು ತಿಳಿಯುತ್ತದೆ. 'ಯಸ್ಯ ಪೃಥಿವೀ ಶರೀರಮ್' ಇತ್ಯಾದಿಯಾಗಿ ಸರ್ವಾತ್ಮಕತ್ವವು ಹೇಳಲ್ಪಟ್ಟಿದೆ. ಈ ಧರ್ಮವು ಪ್ರಕೃತಿ ಅಥವಾ ಆಯಾ ಜೀವರಲ್ಲಿ ಕಂಡುಬರುವುದರಿಂದ ಅಮೃತತ್ವಧರ್ಮವು ಅವರಿಗೇ ಸರಿಹೊಂದುತ್ತದೆ.

ಪ್ರತಿಪದಾರ್ಥ -- ಹಿಂದಿನ ಅಧಿಕರಣದ ವಿಷಯವಾಕ್ಯದಿಂದ ಸಂಗತಿಯನ್ನು ತೋರಿಸುತ್ತಿದ್ದಾರೆ.

ತತ್ರ ಚ = ಅದೇ ಪ್ರಕರಣದಲ್ಲಿ, ಏತದಮೃತಂ = 'ಏತದಮೃತಮ್', ಏತದಭಯಂ' ಎಂದು ಛಾಂದೋಗ್ಯದಲ್ಲಿ, ಉಕ್ತಮ್ = ಹೇಳಲಾಗಿರುವ. ಅಮೃತಂ = ನಾಶವಿಲ್ಲದಿರುವಿಕೆ ಎಂಬ ಧರ್ಮವು, ಉಚ್ಯತೇ = ಹೇಳಲ್ಪಟ್ಟಿದೆ.

ಸ ಚ = ಇಂತಹ ಧರ್ಮಗಳಿಂದ ವಿಶಿಷ್ಟನಾದವನು, 'ಪೃಥಿವೀ ಶರೀರಂ' = ಪೃಥಿವಿಯೇ ಶರೀರವು, ಯಸ್ಯ = ಯಾವನಿಗಿದೆಯೋ, ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಸರ್ವಾತ್ಮಕತ್ವಾತ್ = ಎಲ್ಲೆಡೆ ವ್ಯಾಪ್ತವಾಗಿರುವಿಕೆ ಎಂಬ ಕಾರಣದಿಂದ, ಪ್ರಕೃತಿಃ = ಚಿತ್‌ಪ್ರಕೃತಿ ಅಥವಾ ಜಡಪ್ರಕೃತಿಯು, ತತ್ತಜ್ಜೀವೋ ವಾ = ಅಥವಾ ಅಲ್ಲಿರುವ ಆಯಾಯಾ ಜೀವರು, ಯುಕ್ತಃ = ಅಂತರ್ಯಾಮಿತ್ವವೆಂಬ ಧರ್ಮವುಳ್ಳವರೆಂದು ಹೇಳಬಹುದು.

ವಿಷ್ಣುವಿಗೆ ಸರ್ವಶರೀರತ್ವವಿದೆಯೇ ?

ब्रह्मसूत्रभाष्यम् — नहि विष्णोः पृथिव्यादिशरीरत्वमङ्गीक्रियत इति ।

ಅನುವಾದ - ವಿಷ್ಣುವಿಗೆ ಪೃಥಿವಿಯ ಶರೀರವಾಗಿರುವಿಕೆಯನ್ನು ಅಂಗೀಕರಿಸುವುದಿಲ್ಲ. ಆದ್ದರಿಂದ ವಿಷ್ಣುವು ಅಂತರ್ಯಾಮಿಯಲ್ಲ. ಹೀಗೆ ಆಕ್ಷೇಪ.

ಪ್ರತಿಪದಾರ್ಥ - ಯಾವ ರೀತಿಯಾಗಿ ಪ್ರಕೃತಿಯನ್ನು ಅಂತರ್ಯಾಮಿಯೆಂದು ಹೇಳುವ ಲಿಂಗಗಳಿರುವುದರಿಂದ ಪ್ರಕೃತ್ಯಾದಿಗಳನ್ನು ಅಂತರ್ಯಾಮಿಯೆಂದು ಹೇಳಲಾಗುತ್ತದೋ ಅದರಂತೆ ಅಮೃತತ್ವ ಎಂಬ ಲಿಂಗದಿಂದ ವಿಷ್ಣುವನ್ನು ಅಂತರ್ಯಾಮಿಯೆಂದು ಏಕೆ ಹೇಳಬಾರದು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಪೃಥಿವ್ಯಾದಿಶರೀರತ್ವಂ = ಪೃಥಿವಿ ಮೊದಲಾದವುಗಳ ದೇಹವಾಗಿರುವಿಕೆಯು, ವಿಷ್ಣೋಃ ನಾಂಗೀಕ್ರಿಯತೇ = ವಿಷ್ಣುವಿಗೆ ಒಪ್ಪುವುದಿಲ್ಲ. ಆದ್ದರಿಂದ ವಿಷ್ಣು ಸರ್ವಾಂತರ್ಯಾಮಿಯು ಆಗುವುದಿಲ್ಲ. ಇತಿ = ಹೀಗೆ ಪೂರ್ವಪಕ್ಷ-ಸ್ವರೂಪವು.

ಅಂತರ್ಯಾಮಿಯು ವಿಷ್ಣುವೇ ?

ब्रह्मसूत्रभाष्यम् — अत आह -

।। अन्तर्याम्यधिदैवादिषु तद्धर्मव्यपदेशात् ।। ।।१८।।

'यं पृथिवी न वेद, यः पृथिव्या अन्तरः' (बृ. ५-७-३.) इत्यादिना अधिदैवादिषु तद्धर्मव्यपदेशाद् विष्णुरेवान्तर्यामी ।

ಅನುವಾದ- ಹಿಂದಿನ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ 'ಯಂ ಪೃಥಿವೀ ನ ವೇದ' ಇತ್ಯಾದಿಯಾಗಿ ಬೃಹದಾರಣ್ಯಕದ ವಾಕ್ಯಗಳಿಂದ ಬೃಹದಾರಣ್ಯಕದಲ್ಲಿರುವ ಅಧಿದೈವ, ಅಧಿಭೂತ, ಅಧ್ಯಾತ್ಮ ಈ ಮೂರು ಪ್ರಕರಣಗಳಲ್ಲಿಯೂ ಅಂತರ್ಯಾಮಿಯೆಂದು ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ. ಆ ಧರ್ಮಗಳೂ ಸಹ ವಿಷ್ಣುವಿನದ್ದೇ ಆಗಿವೆ.

ಪ್ರತಿಪದಾರ್ಥ - ಸಿದ್ಧಾಂತವನ್ನು ಮಾಡುತ್ತಾ ಸೂತ್ರವನ್ನು ಹೇಳಿ ವ್ಯಾಖ್ಯಾನಿಸುತ್ತಿದ್ದಾರೆ. ಅತಃ = ಹಿಂದಿನ ಪೂರ್ವಪಕ್ಷದ ನಿರಾಕರಣೆಗೋಸ್ಕರ, ಆಹ = ಸೂತ್ರಕಾರರು 'ಅಂತರ್ಯಾಮ್ಯಧಿ-ದೈವಾದಿಷು ತದ್ಧರ್ಮೋಪದೇಶಾತ್' ಎಂದು ಹೇಳಿದ್ದಾರೆ.

ಪೃಥಿವೀ = ಪೃಥಿವಿಯು ಗರುಡನು, ಯಂ = ಯಾವನನ್ನು , ನ ವೇದ = ತಿಳಿಯಲಾರಳೋ(ನೋ), ಪೃಥಿವ್ಯಾಃ = ಪೃಥಿವಿಯಿಂದ ಗರುಡನಿಂದ, ಯಃ = ಯಾವಾತನು, ಅಂತರಃ = ಅಂತರ್ಯಾಮಿಯಾಗಿದ್ದು ಭಿನ್ನನಾಗಿದ್ದಾನೋ ಪ್ರೇರಣೆ ಮಾಡುತ್ತಾನೋ, ಇತ್ಯಾದಿನಾ = ಇವೇ ಮೊದಲಾದ ಬೃಹದಾರಣ್ಯಕದ ಮಾತುಗಳಿಂದ ಅಧಿದೈವಾದಿಷು = ಅಧಿದೈವ, ಅಧಿಭೂತ, ಅಧ್ಯಾತ್ಮ ಮೊದಲಾದ ಪ್ರಕರಣಗಳಲ್ಲಿ, ತದ್ಧರ್ಮವ್ಯಪದೇಶಾತ್ = ಆ ವಿಷ್ಣುವಿನ ಧರ್ಮಗಳೇ ಹೇಳಲ್ಪಟ್ಟಿರುವುದರಿಂದ, ವಿಷ್ಣುರೇವ = ಮಹಾವಿಷ್ಣುವೇ ಅಂತರ್ಯಾಮೀ = ಸರ್ವಾಂತರ್ಯಾಮಿಯಾಗಿದ್ದಾನೆ.

ಋಗ್ವೇದಸಂಹಿತೆ ಮತ್ತು ಆರಣ್ಯಕಗಳಲ್ಲಿ ಪ್ರತಿಪಾದ್ಯನಾದವನು ವಿಷ್ಣುವೇ

ಬ್ರಹ್ಮಸೂತ್ರಭಾಷ್ಯಮ್ –

स हि-'न ते विष्णो जायमानो न जातः' (ऋ.७-९९-२) 'स योऽतोऽश्रुतोऽगतोऽमतोऽनतोऽदृष्टोऽविज्ञातोऽनादिष्टः सर्वेषां भूतानामन्तरपुरुषः' (ऐ.आ. ३-२-४.) इत्यादिनाऽविदितोऽन्तरश्च ॥ १८ ॥

ಅನುವಾದ - ಅಂತಹ ವಿಷ್ಣುವು ಶ್ರುತ್ಯುಕ್ತಧರ್ಮವುಳ್ಳವನು ಎಂದರೆ 'ಎಲೈ ! ವಿಷ್ಣುವೇ ಹಿಂದೆ ಹುಟ್ಟಿದವನಾಗಲೀ, ಮುಂದೆ ಹುಟ್ಟುವ ಜೀವರಾಶಿಗಳಾಗಲೀ ಯಾರೂ ಸಹ ನಿನ್ನ ಮಹಿಮೆಯನ್ನು ಇದುವರೆಗೂ ತಿಳಿದಿಲ್ಲ. ಮುಂದೆ ತಿಳಿಯುವುದೂ ಇಲ್ಲ' ಎಂದು ಋಗ್ವೇದದಲ್ಲಿ;

ಮತ್ತು ಐತರೇಯ ಆರಣ್ಯಕದಲ್ಲಿಯೂ 'ಪ್ರಸಿದ್ಧನಾದ ವಿಷ್ಣುವೇ ಸಂಪೂರ್ಣವಾಗಿ ಕೇಳುವುದರಿಂದ ತಿಳಿಯಲು ಅಸಮರ್ಥನು, ಹೊಂದಲು ಅಶಕ್ಯನು, ತಿಳಿಯಲು ಸಾಧ್ಯವಿಲ್ಲದವನು, ಯಾರಿಗೂ ಮಣಿಯಲಾರದವನು. ಕಾಣಲು ಸಾಧ್ಯವಿಲ್ಲದವನು. ಜ್ಞಾನಕ್ಕೆ ನಿಲುಕದವನು. ಯಾರಿಂದಲೂ ಆಜ್ಞೆಗೆ ಒಳಗಾಗದವನು. ಸಕಲಪ್ರಾಣಿಗಳ ಹೃದಯದಲ್ಲಿ ಭಿನ್ನನಾಗಿ ನೆಲೆಸಿ ಪ್ರೇರಣೆ ಮಾಡುವ ಮಹಾಪುರುಷನು ಇವನೇ --ಹೀಗೆ ಹೇಳಿದೆ. ಇಂತಹ ಶ್ರುತಿಗಳಿಂದ ಅಪ್ರಮೇಯನೂ ಅಂತರ್ಯಾಮಿಯಾದವನೂ ವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ -- ಅವಿದಿತತ್ವಾದಿಗಳನ್ನು ಅಂತಹ ವಿಷ್ಣುವಿನ ಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಸ ಹಿ = ಅಂತಹ ವಿಷ್ಣುವೇ, ಋಗ್ವೇದದಲ್ಲಿ ಹೀಗೆ ಹೇಳಲ್ಪಟ್ಟಿದ್ದಾನೆ - ಹೇ ವಿಷ್ಣೋ = ಎಲೈ ವಿಷ್ಣುವೇ, ಜಾಯಮಾನಃ = ಮುಂದೆ ಹುಟ್ಟುವ ಸಕಲಜೀವರಾಶಿಗಳು, ಜಾತಃ = ಇಲ್ಲಿಯ ತನಕ ಹುಟ್ಟಿದ ಸಕಲ ಜೀವರಾಶಿಗಳು, ತೇ = ನಿನ್ನ ಅಗಾಧವಾದ ಮಹಿಮೆಯನ್ನು, ನ = ತಿಳಿಯಲು ಸಾಧ್ಯವೇ ಇಲ್ಲ. ಎಂದು.

ಐತರೇಯೋಪನಿಷತ್ತಿನಲ್ಲೂ - ಯಃ = ಯಾವ ಪ್ರಸಿದ್ಧನಾದ, ಸಃ = ಆ ವಿಷ್ಣುವು, ಅಶ್ರುತಃ = ಸಂಪೂರ್ಣವಾಗಿ ಕೇಳುವಿಕೆಯಿಂದ ತಿಳಿಯಲು ಸಾಧ್ಯವಿಲ್ಲದವನು. ಅಗತಃ = ಹೊಂದಲು ಅಸಮರ್ಥನು, ಅಮತಃ = ಮನನದಿಂದ ತಿಳಿಯಲು ಸಾಧ್ಯವಿಲ್ಲದವನು, ಅನತಃ = ಯಾರಿಗೂ ಮಣಿಯಲಾರದವನು, ಅದೃಷ್ಟಃ = ಕಾಣಲು ಸಾಧ್ಯವಿಲ್ಲದವನು, ಅವಿಜ್ಞಾತಃ = ಜ್ಞಾನಕ್ಕೆ ನಿಲುಕದವನು. ಅನಾದಿಷ್ಟಃ = ಯಾರ ಆಜ್ಞೆಗೂ ಒಳಗಾಗದವನು. ಸರ್ವೇಷಾಂ ಭೂತಾನಾಂ = ಸಕಲಪ್ರಾಣಿಗಳ ಅಂತರಪುರುಷಃ = ಒಳಗಡೆ ನೆಲೆಸಿ ಪುರುಷನಾಗಿರುವವನು -- ಹೀಗೆ ಹೇಳಿದೆ.

ಇತ್ಯಾದಿನಾ = ಇವೇ ಮೊದಲಾದ ಶ್ರುತಿಗಳಿಂದ, ಅವಿದಿತಃ = ಅಪ್ರಮೇಯನೂ, ಚ = ಮತ್ತು, ಅಂತರಃ = ಅಂತರ್ಯಾಮಿಯಾದವನು (ಮಹಾವಿಷ್ಣುವೇ) ಆಗಿದ್ದಾನೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ವಿಷ್ಣುವೇ ಅಂತರ್ಯಾಮಿ ಏಕಾಗಬೇಕು ?

सत्तर्कदीपावलिः –

अन्तर्याम्यधिदैवादिषु तद्धर्मव्यपदेशात् ।।१-२-१८।।
नच स्मार्तमतद्धर्माभिलापात् ।। १-२-१९ ।।
शारीरश्चोभयेऽपि हि भेदेनैनमधीयते ।। १-२-२० ।।

'एतमदमृतमभयम्' इति यदक्ष्यन्तरपुरुषस्य विष्णुत्वसाधकममृतत्वमुक्तं तदन्तर्यामिणः श्रूयते । 'एष त आत्माऽन्तर्याम्यमृतः' इति अन्तर्यामी

विष्णोरन्यः प्रतीयत इत्याशङ्क्य विष्णुरेवान्तर्यामीति प्रतिपादयितुमुत्तराधिकरणमारभ्यते ।।

'ಏತದಮೃತಮಭಯಮ್' ಇತ್ಯಾದಿ ಶ್ರುತಿಯಲ್ಲಿ ಚಕ್ಷುರಿಂದ್ರಿಯದಲ್ಲಿರುವ ಪುರುಷನು ವಿಷ್ಣುವೇ ಆಗಿದ್ದಾನೆನ್ನಲು ಅಮೃತತ್ವವೆಂಬ ಧರ್ಮವನ್ನು ಹೇಳಲಾಯಿತು. ಆದರೆ ಈ ಧರ್ಮವು ಅಂತರ್ಯಾಮಿಯಲ್ಲಿ ಕೇಳಿಸುತ್ತಿದೆ. ಅದು ಹೀಗೆ -- ''ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ'' ಎಂದು. ಒಂದು ವೇಳೆ ಅಂತರ್ಯಾಮಿಯು ವಿಷ್ಣುವಿಗಿಂತ ಭಿನ್ನನಾದರೆ ಅವನೇ ಅಮೃತತ್ವ ಧರ್ಮವುಳ್ಳವನಾಗುತ್ತಾನೆಂದು ಆಶಂಕಿಸಿ, ಅಂತರ್ಯಾಮಿಯಾದವನು ವಿಷ್ಣುವೇ ಆಗಿದ್ದಾನೆಂದು ಪ್ರತಿಪಾದಿಸುವುದಕ್ಕಾಗಿ ಈ ಅಧಿಕರಣವು ಹೊರಟಿರುತ್ತದೆ.

ಕಾಣ್ವರು ಅಂತರ್ಯಾಮಿಯ ಬಗ್ಗೆ ಏನು ಹೇಳುತ್ತಾರೆ ?

सत्तर्कदीपावलिः – यः पृथिव्यां तिष्ठन्निति ।। यं पृथिवी न वेद पृथिवी देवता न वेदेत्यर्थः ।। उभयेऽपीति ।। काण्वा माध्यन्दिनायनाश्चान्तर्यामिणः सकाशाज्जीवमधीयत इत्यर्थः ।

''ಯಂ ಪೃಥಿವೀ ನ ವೇದ'' ಇತ್ಯಾದಿ ವಾಕ್ಯವು ಈ ಅಧಿಕರಣದ ವಿಷಯವಾಗಿದೆ. ಯಾವ ವ್ಯಕ್ತಿಯನ್ನು ಪೃಥಿವೀ ಎಂದರೆ ಪೃಥಿವ್ಯಭಿಮಾನಿಯಾದ ದೇವತೆಯು ತಿಳಿಯುವುದಿಲ್ಲವೋ ಎಂದು ಈ ಶ್ರುತಿಗೆ ಅರ್ಥ.

''ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ'' ಎಂಬ ಸೂತ್ರದಲ್ಲಿ 'ಉಭಯೇಽಪಿ' ಎಂದರೆ ಕಾಣ್ವಶಾಖಿಗಳು ಹಾಗೂ ಮಾಧ್ಯಂದಿನ ಶಾಖಿಗಳು ಅಂತರ್ಯಾಮಿಗಿಂತ ಜೀವನು ಭಿನ್ನನಾಗಿದ್ದಾನೆಂದು ಅಧ್ಯಯನ ಮಾಡುತ್ತಾರೆ ಎಂದರ್ಥ.

ಶರೀರ ಶಬ್ದ ಯೌಗಿಕವೇ ?

सत्तर्कदीपावलिः – 'यस्य पृथिवी शरीरम्' इत्यादिषु शरीरशब्दो न भोगायतनादित्वाभिप्रायः, किन्तु यौगिक इत्याह – शीर्यत इति ।।

।। इति सत्तर्कदीपावळ्याम् अन्तर्याम्याधिकरणम् ।।

"ಯಸ್ಯ ಪೃಥಿವೀ ಶರೀರಂ" ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ಶರೀರಶಬ್ದವು (ರೂಢವಾಗಿರುವ) ಭೋಗಕ್ಕೆ ಆಶ್ರಯವಾದ ದೇಹ ಎಂಬರ್ಥವನ್ನು ಹೇಳುತ್ತಿಲ್ಲ. ಹೊರತು ನಿತ್ಯವಾಗಿ ನಾಶ ಹೊಂದುವ ವಸ್ತುವೆಂದು ಯೌಗಿಕವಾದ ಅರ್ಥವನ್ನು ಹೇಳುತ್ತಿದೆ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಅಂತರ್ಯಾಮ್ಯಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ವಿಷಯವಾಕ್ಯದ ಪೂರ್ಣಪಾಠ

तत्वप्रदीपः – 'यः पृथिव्यां तिष्ठन्' इत्यादीति प्रथमा सप्तम्यर्थे; तृतीयार्थे वा । 'यः पृथिव्यां तिष्ठन् पृथिव्या अन्तरो यं पृथिवी न वेद यस्य पृथिवी शरीरं यः पृथिवीमन्तरो यमयत्येष त आत्माऽन्तर्याम्यमृत' इत्यादिवाक्येषु अन्तर्याम्युच्यते ।

'ಯಃ ಪೃಥಿವ್ಯಾಂ ತಿಷ್ಠನ್ ಇತ್ಯಾದಿ' ಎಂಬ ಭಾಷ್ಯದ ವಾಕ್ಯದಲ್ಲಿರುವ 'ಇತ್ಯಾದಿ' ಎಂಬ ಪ್ರಥಮಾವಿಭಕ್ತಿಯು 'ಇತ್ಯಾದಿಷು' ಎಂಬ ಸಪ್ತಮ್ಯರ್ಥದಲ್ಲಿ ಪ್ರಯುಕ್ತವಾಗಿದೆ. ಅಥವಾ 'ಇತ್ಯಾದಿಭಿಃ' ಎಂಬುದಾಗಿ ತೃತೀಯಾರ್ಥದಲ್ಲಿ ಪ್ರಯುಕ್ತವಾಗಿದೆ. ಭಾಷ್ಯದಲ್ಲಿ 'ಯಃ ಪೃಥಿವ್ಯಾಂ ತಿಷ್ಠನ್' ಎಂದಷ್ಟೇ ಉಲ್ಲೇಖಿಸಿದ್ದಾರೆ. ಅದರ ಪೂರ್ಣಪಾಠ ಹೀಗಿದೆ - 'ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮಂತರೋ ಯಮಯತ್ಯೇಷ ತ ಆತ್ಮಾಂತರ್ಯಾಮೃತಃ' ಇತ್ಯಾದಿ ವಾಕ್ಯಗಳಲ್ಲಿ ಅಂತರ್ಯಾಮಿಯನ್ನು ಹೇಳಲಾಗಿದೆ.

ವಿಶೇಷವಿಚಾರ - ಎಂಬ ಪಾಠವು ಕಾಣಿಸುತ್ತಿದೆ. 'ಇತ್ಯಾದಿನಾ'ಎಂಬುದು ಪಾಠಾಂತರ. ಆದರೆ 'ಇತ್ಯಾದಿ' ಎಂಬ ಸರಿಯಾದ ಪಾಠ. 'ಥ್ಯಾ'ಅದಕ್ಕೆ ಸಂವಾದಿಯಾಗಿಯೇ ತತ್ವಪ್ರದೀಪಕಾರರು 'ಇತ್ಯಾದೀತಿ ಪ್ರಥಮಾ' ಎಂದು ಉಲ್ಲೇಖಿಸಿದ್ದಾರೆ. ಭಾಷ್ಯದ ಮಾತು 'ಇತ್ಯಾದಿ' ಎಂಬುದಾಗಿ ಇರುವುದರಿಂದಲೇ 'ಇತ್ಯಾದಿಷು' ಎಂಬ 'ಸಪ್ತಮ್ಯರ್ಥವನ್ನು ವಿವಕ್ಷಿಸಬೇಕೆಂದು ತತ್ವಪ್ರದೀಪಕಾರರು ವ್ಯಾಖ್ಯಾನ ಮಾಡುತ್ತಿದ್ದಾರೆ. ಅಥವಾ 'ಇತ್ಯಾದಿಭಿಃ' ಎಂಬುದಾಗಿ ತೃತೀಯಾರ್ಥವನ್ನೂ ಕೂಡ ತಿಳಿಯಬಹುದು. ಆಗ 'ಯ ಪೃಥಿವ್ಯಾಂ ತಿಷ್ಠನ್' ಇತ್ಯಾದಿ ವಾಕ್ಯಗಳಲ್ಲಿ, ಅಥವಾ ಇತ್ಯಾದಿ ವಾಕ್ಯಗಳಿಂದ ಅಂತರ್ಯಾಮಿಯನ್ನು ಪ್ರತಿಪಾದನೆ ಮಾಡಲಾಗಿದೆ ಎಂಬರ್ಥವನ್ನು ಹೇಳಿದಂತಾಗುತ್ತದೆ.

ಮುದ್ರಿತ ಪುಸ್ತಕಗಳಲ್ಲಿ 'ಯಃ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿಂದ ಪ್ರಾರಂಭಿಸಿ 'ಆತ್ಮಾಂತರ್ಯಾಮ್ಯಮೃತಃ' ಎಂಬಲ್ಲಿಯ ತನಕ ಭಾಷ್ಯದ ವಾಕ್ಯವನ್ನಾಗಿ ನೀಡಿದ್ದಾರೆ. ಆದರೆ 'ಯಃ ಪೃಥಿವ್ಯಾಂ ತಿಷ್ಠನ್' ಎಂಬುದಷ್ಟೇ ಭಾಷ್ಯದಲ್ಲಿರುವ ವಿಷಯವಾಕ್ಯದ ಶರೀರವೆಂದು ಪ್ರಾಚೀನಕೋಶಗಳಲ್ಲಿದೆ.

ಅಕ್ಷಿಪುರುಷನಲ್ಲಿ ಅಮೃತತ್ವ

तत्वप्रदीपः – तत्र च वाक्येषु तस्मिन्नन्तर्यामिणि 'एतदमृतमभयम्' इत्यक्षिपुरुषस्योक्तममृतत्वं 'एष आत्माऽन्तर्याम्यमृत' इत्युच्यते ।

ಈ ವಿಷಯ ವಾಕ್ಯಗಳಲ್ಲಿ ಅಂತರ್ಯಾಮಿಯಲ್ಲಿ 'ಏತದಮೃತಭಯಮ್' ಎಂಬುದಾಗಿ ಅಕ್ಷಿಪುರುಷನಿಗೆ ಯಾವ ಅಮೃತತ್ವವು ಹೇಳಲ್ಪಟ್ಟಿದೆಯೋ, ಅದನ್ನು 'ಏಷ ಆತ್ಮಾಂತರ್ಯಾಮ್ಯಮೃತಃ' ಎಂಬುದಾಗಿ ಹೇಳಲಾಗಿದೆ.

ವಿಶೇಷವಿಚಾರ - ಭಾಷ್ಯದಲ್ಲಿರುವ 'ತತ್ರ' ಎಂಬ ಪದಕ್ಕೆ 'ತತ್ರ ಚ ವಾಕ್ಯೇಷು' ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ. 'ತಸ್ಮಿನ್ ಅಂತರ್ಯಾಮಿಣಿ' ಎಂಬುದನ್ನು ಅಧ್ಯಾಹಾರ ಮಾಡಿದ್ದಾರೆ. 'ಇತ್ಯುಕ್ತಮ್' ಎಂಬುದಕ್ಕೆ 'ಅಕ್ಷಿಪುರುಷನಿಗೆ ಹೇಳಲ್ಪಟ್ಟ' ಎಂಬರ್ಥವನ್ನು ಹೇಳಿದ್ದಾರೆ. ಆದ್ದರಿಂದ ಅಕ್ಷಿಪುರುಷನಲ್ಲಿ ಹೇಳಲ್ಪಟ್ಟ ಅಮೃತತ್ವವನ್ನು 'ಏಷ ಆತ್ಮಾಂತರ್ಯಾಮ್ಯಮೃತಃ' ಎಂಬ ವಾಕ್ಯವು ಅಂತರ್ಯಾಮಿಯಲ್ಲಿ ಹೇಳುತ್ತಿದೆ ಎಂಬರ್ಥವು 'ತಚ್ಚುತೇ ಎಂಬ ಭಾಷ್ಯದ ವಾಕ್ಯದಿಂದ ತಿಳಿಯುತ್ತದೆ.

'सर्वात्मकत्वात् प्रकृतिः' ಎಂಬ ಭಾಷ್ಯದ ವ್ಯಾಖ್ಯಾನ

तत्वप्रदीपः – स च 'यस्य पृथिवी शरीरम्' इत्यादिना सर्वात्मकत्वात् प्रकृतिरित्यादेरयमर्थः । स चान्तर्यामी जडप्रकृतिर्युज्यते । 'यस्य पृथिवी शरीरम्' इति शरीरशब्दस्य स्वरूपवाचकत्वात् । सर्वोपादानत्वेन सर्वात्मकत्वाच्च तस्याः ।

ಇಲ್ಲಿ ಹೇಳಲ್ಪಟ್ಟ ನಾಶರಹಿತವಾದ ಅಂತರ್ಯಾಮಿಯನ್ನು 'ಯಸ್ಯ ಪೃಥಿವೀ ಶರೀರಮ್' ಎಂಬ ವಾಕ್ಯವು 'ಸರ್ವಾತ್ಮಕ' ಎಂದು ಹೇಳುತ್ತಿದೆ. ಆದ್ದರಿಂದ 'सर्वात्मकत्वात्त्वात् प्रकृतिः' ಇತ್ಯಾದಿ ಭಾಷ್ಯದ ಅಭಿಪ್ರಾಯ ಹೀಗಿದೆ - ಅಂತರ್ಯಾಮಿಯಾದದ್ದು ಜಡಪ್ರಕೃತಿ ಆಗುತ್ತದೆ. ಏಕೆಂದರೆ 'ಯಸ್ಯ ಪೃಥಿವೀ ಶರೀರಮ್' ಎಂಬ ಶ್ರುತಿಯಲ್ಲಿರುವ 'ಶರೀರ'ಶಬ್ದಕ್ಕೆ ಸ್ವರೂಪ ಎಂದರ್ಥ. ಅಥವಾ ಜಡಪ್ರಕೃತಿಯು ಎಲ್ಲಕ್ಕೂ ಉಪಾದಾನಕಾರಣವಾಗಿರುವುದರಿಂದಲೂ ಸರ್ವಾತ್ಮಕ ಎಂದು ಕರೆಸಿಕೊಳ್ಳುತ್ತದೆ.

ವಿಶೇಷವಿಚಾರ - 'ಶರೀರ' ಶಬ್ದವನ್ನು 'ಸ್ವರೂಪ' ಎಂಬರ್ಥದಲ್ಲಿ ಪ್ರಯೋಗಿಸುವುದು ಇತ್ಯಾದಿ ಪ್ರಯೋಗಗಳಲ್ಲಿ ಕಂಡಿದೆ. ಅದರಂತೆ 'ಯಸ್ಯ ಪೃಥಿವೀ ಶರೀರಮ್' ಎಂಬಲ್ಲಿರುವ ಶರೀರ ಎಂಬ ಶಬ್ದವೂ ಸಹ ಸ್ವರೂಪಾರ್ಥದಲ್ಲಿದೆ ಎಂದು ವಿವಕ್ಷಿಸಿ, 'ಜಡಪ್ರಕೃತಿ' ಎಂಬರ್ಥವನ್ನು ಸುಲಭವಾಗಿ ತಿಳಿಯಬಹುದು.

ಸರ್ವಾಂತರ್ಯಾಮಿ ಚಿತ್‌ಪ್ರಕೃತಿ

तत्वप्रदीपः – चित्प्रकृतिर्वा, सर्वाभिमानेन सर्वशरीरत्वात् । सर्वादानेन सर्वव्याप्त्या च सर्वात्मकत्वाच्च तस्याः । तत्तदभिमानी जीवो वा ।

ಚಿತ್‌ಪ್ರಕೃತಿಯನ್ನೇ ಅಂತರ್ಯಾಮಿ ಎಂದು ಹೇಳಬಹುದು. ಸಕಲಕ್ಕೂ ಅಭಿಮಾನಿ ದೇವತೆಯಾಗಿರುವುದರಿಂದ ಸಕಲವೂ ಕೂಡ ಚಿತ್‌ಪ್ರಕೃತಿಯ ಶರೀರವಾಗಿದೆ. ಮತ್ತು ಎಲ್ಲಾ ಜಡಪದಾರ್ಥಗಳಿಗೆ ಉಪಾದಾನಕಾರಣವಾಗಿರುವುದರಿಂದ ಎಲ್ಲೆಡೆಯೂ ವ್ಯಾಪ್ತವಾಗಿರುವುದರಿಂದ ಸರ್ವಾತ್ಮಕದಿಂದಲೂ ಅಂತರ್ಯಾಮಿ ಎಂದು ಹೇಳಬಹುದು.

ಅಥವಾ ಆಯಾ ಜಡಪದಾರ್ಥಗಳ ಅಭಿಮಾನಿಯಾದ ಜೀವರನ್ನು ಅಂತರ್ಯಾಮಿ ಎಂದು ಹೇಳಬಹುದು.

ವಿಷ್ಣು ಅಂತರ್ಯಾಮಿ ಅಲ್ಲವೆಂದು ಪೂರ್ವಪಕ್ಷ

तत्वप्रदीपः – नहि विष्णोः पृथिव्यादिरूपं तदभिमानित्वं वाऽस्ति, येन तच्छरीरत्वमुच्येतेत्यत आह – अन्तर्याम्यधिदैवादिषु तद्धर्मव्यपदेशात् ।

ವಿಷ್ಣುವಿಗೆ ಪೃಥಿವ್ಯಾದಿಸ್ವರೂಪವನ್ನು ಅಥವಾ ಪೃಥಿವ್ಯಾದಿಗಳ ಅಭಿಮಾನಿತ್ವವನ್ನು ಹೇಳಲು ಸಾಧ್ಯವಿಲ್ಲ. ಹಾಗೇ ಹೇಳಿದ್ದಲ್ಲಿ ಪೃಥಿವ್ಯಾದಿಗಳೇ ವಿಷ್ಣುವಿನ ಶರೀರವೆಂದು ಹೇಳಬಹುದಿತ್ತು. ಈ ಪ್ರಶ್ನೆಗೆ 'ಅಂತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್' ಎಂಬ ಸೂತ್ರದಿಂದ ಉತ್ತರಿಸುತ್ತಿದ್ದಾರೆ.

ಮಹಾವಿಷ್ಣುವೇ ಅಂತರ್ಯಾಮಿಯೆಂದು ಸಿದ್ಧಾಂತ

तत्वप्रदीपः – विष्णुरेवान्तर्यामी, अधिदैवाधिभूताध्यात्मप्रकरणेषु अन्तर्यामिणोऽविदितत्वान्तरत्वादिविष्णुधर्मव्यपदेशात् । 'यः पृथिव्यां तिष्ठन्' इत्याद्यधिदैवम् । 'यः सर्वेषु भूतेषु तिष्ठन्' इत्याद्यधिभूतम् । 'यः प्राणेषु तिष्ठन्' इत्यद्यध्यात्मम् ।

ಮಹಾವಿಷ್ಣುವೇ ಅಂತರ್ಯಾಮಿಯಾಗಿದ್ದಾನೆ. ಅಧಿದೈವ, ಅಧಿಭೂತಾ, ಅಧ್ಯಾತ್ಮ ಈ ಮೂರು ಪ್ರಕರಣಗಳಲ್ಲಿ ಯಾವ ಅಂತರ್ಯಾಮಿಯು ಪ್ರತಿಪಾದ್ಯನಾಗಿದ್ದಾನೋ, ಅವನಲ್ಲಿ ಅವಿದಿತತ್ವ, ಅಂತರತ್ವ ಮೊದಲಾದ ಧರ್ಮಗಳನ್ನು ಹೇಳಲಾಗಿದೆ. ಇವೆಲ್ಲವೂ ವಿಷ್ಣುವಿನ ಅಸಾಧಾರಣಧರ್ಮವಾಗಿರುವುದರಿಂದ ಮಹಾವಿಷ್ಣುವೇ ಅಂತರ್ಯಾಮಿಯಾಗಿದ್ದಾನೆ ಎಂದು ನಿರ್ಣಯವಾಗುತ್ತದೆ.

'ಯಃ ಪೃಥಿವ್ಯಾಂ ತಿಷ್ಠನ್' ಎಂಬುದು ಅಧಿದೈವಪ್ರಕರಣವಾಗಿದೆ. 'ಯಃ ಸರ್ವೇಷು ಭೂತೇಷು ತಿಷ್ಠನ್' ಅಧಿಭೂತವಾದ ಪ್ರಕರಣವಾಗಿದೆ. 'ಯಃ ಪ್ರಾಣೇಷು ತಿಷ್ಠನ್' ಎಂಬುದು ಅಧ್ಯಾತ್ಮ ಪ್ರಕರಣವಾಗಿದೆ.

ವಿಶೇಷವಿಚಾರ - 'ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋ, ಯಂ ಪೃಥಿವೀ ನ ವೇದ, ಯಸ್ಯ ಪೃಥಿವೀ ಶರೀರಂ, ಯಃ ಪೃಥಿವೀಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।

ಯಾರು ಪೃಥಿವೀನಾಮಕ ಗರುಡ ಹಾಗೂ ಗರುಡಪತ್ನಿಯರಲ್ಲಿದ್ದು ಅವರಿಗಿಂತ ಭಿನ್ನನಾಗಿದ್ದಾನೋ, ಅವರು ಯಾರನ್ನು ತಿಳಿದಿಲ್ಲವೋ, ಅವರು ಯಾರಿಗೆ ಅಧೀನರಾಗಿದ್ದು ಶರೀರದಂತಿರುವರೋ, ಯಾರು ಅವರ ಒಳಗಿದ್ದು ತಾನು ಸುಖಪಡುತ್ತಾ ಅವರಿಗೂ ಸುಖ ಉಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋ ಅಪ್ಸು ತಿಷ್ಠನ್ ಅದ್ಭ್ಯೋऽಂತರೋ, ಯಮಾಪೋ ನ ವಿದುಃ, ಯಸ್ಯಾಪಃ ಶರೀರಂ, ಯೋऽಪೋऽಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಜಲಾಭಿಮಾನಿ ವರುಣನಲ್ಲಿ ಇದ್ದು ವರುಣನಿಂದ ಭಿನ್ನನಾಗಿದ್ದಾನೋ ವರುಣನು ಯಾರನ್ನು ತಿಳಿದಿಲ್ಲವೋ, ವರುಣ ಯಾರಿಗೆ ಶರೀರದಂತಿರುವನೋ, ಯಾರು ವರುಣನ ಒಳಗಿದ್ದು ಸುಖ ಉಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋऽಗ್ನೌ ತಿಷ್ಠನ್ ಅಗ್ನೇರಂತರೋ, ಯಮಗ್ನಿರ್ನ ವೇದ, ಯಸ್ಯಾಗ್ನಿಃ ಶರೀರಂ ಯೋऽಗ್ನಿಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಭೂತಾಗ್ನಿಯ ಅಭಿಮಾನಿಯಲ್ಲಿ ಇದ್ದು, ಆ ಅಗ್ನಿಯಿಂದ ಭಿನ್ನನಾಗಿದ್ದಾನೋ, ಅಗ್ನಿಯು ಯಾರನ್ನು ತಿಳಿದಿಲ್ಲವೋ, ಅಗ್ನಿಯು ಯಾರಿಗೆ ಶರೀರದಂತಿರುವನೋ, ಯಾರು ಅಗ್ನಿಯ ಒಳಗಿದ್ದು ಸುಖ ಉಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋऽಂತರಿಕ್ಷೇ ತಿಷ್ಠನ್ ಅಂತರಿಕ್ಷಾದಂತರೋ, ಯಮಂತರಿಕ್ಷಂ ನ ವೇದ, ಯಸ್ಯಾಂತರಿಕ್ಷಂ ಶರೀರಂ, ಯೋऽಂತರಿಕ್ಷಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಅಂತರಿಕ್ಷನಾಮಕರಾದ ರುದ್ರ ಮತ್ತು ವಾಯು ಪತ್ನಿ ಶ್ರದ್ಧಾದೇವಿಯರಲ್ಲಿ ಇದ್ದು ಅವರಿಂದ ಭಿನ್ನನಾಗಿದ್ದಾನೋ, ರುದ್ರಶ್ರದ್ಧಾದೇವಿಯರು ಯಾರನ್ನು ತಿಳಿದಿಲ್ಲವೋ, ರುದ್ರ-ಶ್ರದ್ಧಾದೇವಿಯರು ಯಾರಿಗೆ ಶರೀರದಂತಿರುವರೋ ಯಾರು ರುದ್ರ-ಶ್ರದ್ಧಾದೇವಿಯರಲ್ಲಿದ್ದು

ಸುಖ ಉಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋ ವಾಯೌ ತಿಷ್ಠನ್ ವಾಯೋರಂತರೋ, ಯಂ ವಾಯುರ್ನ ವೇದ, ಯಸ್ಯ ವಾಯುಃ ಶರೀರಂ, ಯೋ ವಾಯುಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।

ಯಾರು ಮುಖ್ಯಪ್ರಾಣನಲ್ಲಿದ್ದು ಮುಖ್ಯಪ್ರಾಣನಿಂದ ಭಿನ್ನನೋ, ಯಾರನ್ನು ಮುಖ್ಯಪ್ರಾಣನು ತಿಳಿದಿಲ್ಲವೋ, ಮುಖ್ಯಪ್ರಾಣನು ಯಾರಿಗೆ ಶರೀರದಂತಿರುವನೋ, ಯಾರು ಮುಖ್ಯಪ್ರಾಣನಲ್ಲಿದ್ದು ಸುಖ ಉಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ಇನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋ ದಿವಿ ತಿಷ್ಠನ್ ದಿವೋऽಂತರೋ, ಯಂ ದ್ಯೌರ್ನ ವೇದ, ಯಸ್ಯ ದ್ಯೌಃ ಶರೀರಂ, ಯೋ ದಿವಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ದ್ಯುನಾಮಕರಾದ ಸರಸ್ವತಿ ಉಮೆಯರಲ್ಲಿದ್ದು ಸರಸ್ವತಿ ಉಮೆಯರಿಂದ ಭಿನ್ನನೋ ಯಾರನ್ನು ಸರಸ್ವತಿ ಉಮೆಯರು ತಿಳಿದಿಲ್ಲವೋ, ಸರಸ್ವತಿ-ಉಮೆಯರು ಯಾರಿಗೆ ಶರೀರದಂತಿರುವರೋ, ಯಾರು ಸರಸ್ವತಿ ಉಮೆಯರಲ್ಲಿದ್ದು ಸುಖ ಉಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯ ಆದಿತ್ಯೇ ತಿಷ್ಠನ್ ಆದಿತ್ಯಾದಂತರೋ, ಯಮಾದಿತ್ಯೋ ನ ವೇದ, ಯಸ್ಯ ಆದಿತ್ಯಃ ಶರೀರಂ, ಯ ಆದಿತ್ಯಮಂತರೋ ಯಮಯತಿ, ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಸೂರ್ಯನಲ್ಲಿದ್ದು ಸೂರ್ಯನಿಂದ ಭಿನ್ನನೋ, ಸೂರ್ಯನು ಯಾರನ್ನು ತಿಳಿದಿಲ್ಲವೋ, ಸೂರ್ಯನು ಯಾರಿಗೆ ಶರೀರದಂತಿರುನೋ, ಯಾರು ಸೂರ್ಯನಲ್ಲಿದ್ದು ಸುಖ ಉಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ, ನಿತ್ಯನಾದ ಅಂತರ್ಯಾಮಿ.

'ಯೋ ದಿಕ್ಷು ತಿಷ್ಠನ್ ದಿಗ್ಭ್ಯೋऽಂತರೋ, ಯಂ ದಿಶೋ ನ ವಿದುಃ ಯಸ್ಯ ದಿಶಃ ಶರೀರಂ, ಯೋ ದಿಶೋऽಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ದಿಕ್ಕುಗಳ ಅಭಿಮಾನಿ ದೇವತೆಗಳಲ್ಲಿದ್ದು ಅವರಿಂದ ಭಿನ್ನನೋ, ಅವರು ಯಾರನ್ನು ತಿಳಿದಿಲ್ಲವೋ, ಅವರು ಯಾರಿಗೆ ಶರೀರದಂತಿರುವರೋ, ಯಾರು ಅವರುಗಳಲ್ಲಿದ್ದು

ಸುಖವನ್ನುಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ, ನಿತ್ಯನಾದ ಅಂತರ್ಯಾಮಿ.

'ಯಶ್ಚಂದ್ರತಾರಕೇ ತಿಷ್ಠನ್ ಚಂದ್ರತಾರಕಾದಂತರೋ, ಯಂ ಚಂದ್ರತಾರಕಂ ನ ವೇದ, ಯಸ್ಯ ಚಂದ್ರ ತಾರಕಂ ಶರೀರಂ, ಯಶ್ಚಂದ್ರತಾರಕಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಚಂದ್ರನಾಮಕ ಕಾಮನಲ್ಲಿಯೂ, ತಾರಕನಾಮಕ ಇಂದ್ರನಲ್ಲಿಯೂ ಇದ್ದು ಇಂದ್ರ ಕಾಮರಿಂದ ಭಿನ್ನನೋ, ಇಂದ್ರಕಾಮರು ಯಾರನ್ನು ತಿಳಿದಿಲ್ಲವೋ ಇಂದ್ರಕಾಮರು ಯಾರಿಗೆ ಶರೀರದಂತಿರುವರೋ, ಯಾರು ಇಂದ್ರ ಕಾಮರಲ್ಲಿದ್ದು ಸುಖ ಉಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ, ನಿತ್ಯನಾದ ಅಂತರ್ಯಾಮಿ.

'ಯ ಆಕಾಶೇ ತಿಷ್ಠನ್ ಆಕಾಶಾದಂತರೋ, ಯಮಾಕಾಶೋ ನ ವೇದ, ಯಸ್ಯಾಕಾಶಃ ಶರೀರಂ, ಯ ಆಕಾಶಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಆಕಾಶಾಭಿಮಾನಿ ಗಣಪತಿಯಲ್ಲಿದ್ದು ಗಣಪತಿಯಿಂದ ಭಿನ್ನನೋ, ಗಣಪತಿಯು ಯಾರನ್ನು ತಿಳಿದಿಲ್ಲವೋ, ಗಣಪತಿಯು ಯಾರಿಗೆ ಶರೀರದಂತಿರುವನೋ ಯಾರು ಗಣಪತಿಯಲ್ಲಿದ್ದು ಸುಖವನ್ನುಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ, ನಿತ್ಯನಾದ ಅಂತರ್ಯಾಮಿ.

'ಯಸ್ತಮಸಿ ತಿಷ್ಠನ್ ತಮಸೋऽಂತರೋ, ಯಂ ತಮೋ ನ ವೇದ, ಯಸ್ಯ ತಮಃ ಶರೀರಂ, ಯಸ್ತಮೋऽಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ತಮೋನಾಮಕಳಾದ ದುರ್ಗಾದೇವಿಯಲ್ಲಿದ್ದು, ದುರ್ಗಾದೇವಿಯಿಂದ ಭಿನ್ನನೋ, ದುರ್ಗಾದೇವಿಯು ಯಾರನ್ನು ತಿಳಿದಿಲ್ಲವೋ, ದುರ್ಗಾದೇವಿಯು ಯಾರಿಗೆ ಶರೀರದಂತಿರುವಳೋ, ಯಾರು ದುರ್ಗಾದೇವಿಯಲ್ಲಿದ್ದು ಸುಖವನ್ನುಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ, ನಿತ್ಯನಾದ ಅಂತರ್ಯಾಮಿ.

'ಯಸ್ತೇಜಸಿ ತಿಷ್ಠನ್ ತೇಜಸೋऽಂತರೋ, ಯಂ ತೇಜೋ ನ ವೇದ, ಯಸ್ಯ ತೇಜಃ ಶರೀರಂ, ಯಸ್ತೇಜೋऽಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ। ಇತ್ಯಧಿದೈವತಂ ॥'

ಯಾರು ತೇಜೋನಾಮಕಳಾದ ಶ್ರೀದೇವಿಯಲ್ಲಿದ್ದು, ಶ್ರೀದೇವಿಯಿಂದ ಭಿನ್ನನೋ, ಶ್ರೀದೇವಿಯು ಯಾರನ್ನು ತಿಳಿದಿಲ್ಲವೋ, ಶ್ರೀದೇವಿಯು ಯಾರಿಗೆ ಶರೀರದಂತಿರುವಳೋ, ಯಾರು ಶ್ರೀದೇವಿಯಲ್ಲಿದ್ದು ಸುಖವನ್ನುಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ, ನಿತ್ಯನಾದ ಅಂತರ್ಯಾಮಿ. ಇಲ್ಲಿಗೆ ದೇವತೆಗಳಲ್ಲಿ ಅಂತರ್ಯಾಮಿ ನಿರೂಪಣೆ ಮುಗಿಯಿತು.

ಈ ಬ್ರಾಹ್ಮಣದಲ್ಲಿ ಅಂತರ್ಯಾಮಿ ಜೀವನೇ ಏಕಾಗಿರಬಾರದು ? ಪರಮಾತ್ಮನಿಗೆ ಜಡಶರೀರವಿಲ್ಲ ತಾನೆ ? ಎಂದರೆ ಇಲ್ಲಿ ಹೇಳಿದ ಪೃಥಿವ್ಯಾದಿಗಳು ದೇವತೆಗಳು. ಏಕೆಂದರೆ ಅವುಗಳನ್ನು ಅಧಿದೈವ ಎಂದು ಉಪನಿಷತ್ತೇ ಹೇಳಿದೆ. 'ಯಂ ಪೃಥಿವೀ ನ ವೇದ' ಎಂದು ಮುಂತಾಗಿ, ಪೃಥಿವೀ ಮುಂತಾದುದು ಅಂತರ್ಯಾಮಿಯನ್ನು ತಿಳಿದಿಲ್ಲ ಎಂದು ಹೇಳಿದೆ. ಪೃಥಿವೀ ಮುಂತಾದುದು ಜಡಪದಾರ್ಥವಾಗಿರುತ್ತಿದ್ದರೆ ಜಡವಸ್ತು ಯಾವುದನ್ನೂ ಎಂದೂ ತಿಳಿಯುವ ಪ್ರಸಕ್ತಿ ಇಲ್ಲದಿರುವುದರಿಂದ ಅಂತರ್ಯಾಮಿಯನ್ನು ತಿಳಿದಿಲ್ಲ ಎಂದು ಹೇಳುವುದು ಅನುಚಿತವಾಗುತ್ತದೆ. ಆದ್ದರಿಂದ ಇಲ್ಲಿ ಪೃಥಿವಿ ಇತ್ಯಾದಿಗಳು ಜಡವಲ್ಲ. ದೇವತೆಗಳು. ದೇವತೆಗಳೂ ಜೀವರಿಗೆ ಯಾವ ರೀತಿಯಿಂದಲೂ ಶರೀರವಾಗಿರಲು ಶಕ್ಯವಿಲ್ಲ. ಪರಮಾತ್ಮನಿಗೆ ಮಾತ್ರ ಅವರು ಸರ್ವಾತ್ಮನಾ ಅಧೀನರಾದುದರಿಂದ ಶರೀರದಂತಿರುವರೆಂದೇ ಉಪನಿಷತ್ತು ಹೇಳುತ್ತಿದೆ. ಆದ್ದರಿಂದ ಅಂತರ್ಯಾಮಿ ಪರಮಾತ್ಮನೇ.

'ಅಥಾದಿಭೂತಂ । ಯಃ ಸರ್ವೇಷು ಭೂತೇಷು ತಿಷ್ಠನ್ ಸರ್ವೇಭ್ಯೋ ಭೂತೇಭ್ಯೋ೭ಂತರೋ, ಯಂ ಸರ್ವಾಣಿ ಭೂತಾನಿ ನ ವಿದುಃ ಯಸ್ಯ ಸರ್ವಾಣಿ ಭೂತಾನಿ ಶರೀರಂ, ಯಃ ಸರ್ವಾಣಿ ಭೂತಾನ್ಯಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ । ಇತ್ಯಧಿಭೂತಂ ॥'

ಇನ್ನು ಮುಂದೆ ಜೀವರಲ್ಲಿ ಅಂತರ್ಯಾಮಿ ನಿರೂಪಣೆ. ಯಾರು ಎಲ್ಲಾ ಜೀವರಲ್ಲಿದ್ದು ಜೀವರಿಂದ ಭಿನ್ನನೋ, ಎಲ್ಲಾ ಜೀವರು ಯಾರನ್ನು ತಿಳಿದಿಲ್ಲವೋ, ಜೀವರು ಯಾರಿಗೆ ಶರೀರದಂತಿರುವರೋ, ಯಾರು ಜೀವರಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ. ಇಲ್ಲಿಗೆ ಜೀವಾಂತರ್ಯಾಮಿ ನಿರೂಪಣೆ ಮುಗಿಯಿತು.

'ಅಥಾಧ್ಯಾತ್ಮಮ್ । ಯಃ ಪ್ರಾಣೇ ತಿಷ್ಠನ್ ಪ್ರಾಣಾದಂತರೋ, ಯಂ ಪ್ರಾಣೋ ನ ವೇದ, ಯಸ್ಯ ಪ್ರಾಣಃ ಶರೀರಂ, ಯಃ ಪ್ರಾಣಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ ।'

ಇನ್ನು ಮುಂದೆ ಶರೀರದಲ್ಲಿ ಅಂತರ್ಯಾಮಿ ನಿರೂಪಣೆ. ಯಾರು ಪ್ರಾಣನಾಮಕನಾದ ಘ್ರಾಣೇಂದ್ರಿಯಾಭಿಮಾನಿ ದೇವತೆಯಲ್ಲಿದ್ದು ಅವನಿಂದ ಭಿನ್ನನೋ, ಅವನು ಯಾರನ್ನು ತಿಳಿದಿಲ್ಲವೋ, ಅವನು ಯಾರಿಗೆ ಶರೀರದಂತಿರುವನೋ, ಯಾರು ಅವನಲ್ಲಿದ್ದು ಸುಖವನ್ನುಂಟುಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋ ವಾಚಿ ತಿಷ್ಠನ್ ವಾಚೋಽಂತರೋ, ಯಂ ವಾಙ್ ನ ವೇದ, ಯಸ್ಯ ವಾಕ್ ಶರೀರಂ, ಯೋ ವಾಚಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ವಾಗಿಂದ್ರಿಯಾಭಿಮಾನಿಯಲ್ಲಿದ್ದು ಅವನಿಂದ ಭಿನ್ನನೋ, ಅವನು ಯಾರನ್ನು ತಿಳಿದಿಲ್ಲವೋ, ಅವನು ಯಾರಿಗೆ ಶರೀರದಂತಿರುವನೋ, ಯಾರು ಅವನಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯಶ್ಚಕ್ಷುಷಿ ತಿಷ್ಠನ್ ಚಕ್ಷುಷೋಽಂತರೋ, ಯಂ ಚಕ್ಷುರ್ನ ವೇದ, ಯಸ್ಯ ಚಕ್ಷುಃ ಶರೀರಂ, ಯಶ್ಚಕ್ಷುರಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಚಕ್ಷುರಿಂದ್ರಿಯಾಭಿಮಾನಿಯಲ್ಲಿದ್ದು ಅವನಿಂದ ಭಿನ್ನನೋ ಅವನು ಯಾರನ್ನು ತಿಳಿದಿಲ್ಲವೋ, ಅವನು ಯಾರಿಗೆ ಶರೀರದಂತಿರುವನೋ, ಯಾರು ಅವನಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯಃ ಶ್ರೋತ್ರೇ ತಿಷ್ಠನ್ ಶ್ರೋತ್ರಾದಂತರೋ, ಯಂ ಶ್ರೋತ್ರಂ ನ ವೇದ, ಯಸ್ಯ ಶ್ರೋತ್ರಂ ಶರೀರಂ, ಯಃ ಶ್ರೋತ್ರಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಶ್ರೋತೇಂದ್ರಿಯಾಭಿಮಾನಿಯಲ್ಲಿದ್ದು ಅವನಿಂದ ಭಿನ್ನನೋ, ಅವನು ಯಾರನ್ನು ತಿಳಿದಿಲ್ಲವೋ, ಅವನು ಯಾರಿಗೆ ಶರೀರದಂತಿರುವನೋ, ಯಾರು ಅವನಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯಃ ಮನಸಿ ತಿಷ್ಠನ್ ಮನಸೋಽಂತರೋ, ಯಂ ಮನೋ ನ ವೇದ, ಯಸ್ಯ ಮನಃ ಶರೀರಂ, ಯೋ ಮನೋಽಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಮನೋಭಿಮಾನಿಯಲ್ಲಿದ್ದು ಮನಸ್ಸಿನ ಅಭಿಮಾನಿಯಿಂದ ಭಿನ್ನನೋ, ಮನಸ್ಸಿನ ಅಭಿಮಾನಿ ಯಾರನ್ನು ತಿಳಿದಿಲ್ಲವೋ, ಮನಸ್ಸಿನ ಅಭಿಮಾನಿ ಯಾರಿಗೆ ಶರೀರದಂತಿರುವನೋ, ಯಾರು ಮನಸ್ಸಿನ ಅಭಿಮಾನಿಯಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯಸ್ತ್ವಚಿ ತಿಷ್ಠನ್ ತ್ವಚೋಽಂತರೋ, ಯಂ ತ್ವಕ್ ನ ವೇದ, ಯಸ್ಯ ತ್ವಕ್ ಶರೀರಂ, ಯಸ್ತ್ವಚಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ತ್ವಗಿಂದ್ರಿಯಾಭಿಮಾನಿಯಲ್ಲಿದ್ದು ತ್ವಗಿಂದ್ರಿಯಾಭಿಮಾನಿಯಿಂದ ಭಿನ್ನನೋ, ತ್ವಗಿಂದ್ರಿಯಾಭಿಮಾನಿ ಯಾರನ್ನು ತಿಳಿದಿಲ್ಲವೋ, ತ್ವಗಿಂದ್ರಿಯಾಭಿಮಾನಿ ಯಾರಿಗೆ ಶರೀರದಂತಿರುವನೋ, ಯಾರು ತ್ವಗಿಂದ್ರಿಯಾಭಿಮಾನಿಯಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋ ವಿಜ್ಞಾನೇ ತಿಷ್ಠನ್ ವಿಜ್ಞಾನಾದಂತರೋ, ಯಂ ವಿಜ್ಞಾನಂ ನ ವೇದ, ಯಸ್ಯ ವಿಜ್ಞಾನಂ ಶರೀರಂ, ಯಃ ವಿಜ್ಞಾನಮಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ।'

ಯಾರು ಎಲ್ಲ ಜೀವರ ಅಭಿಮಾನಿಯಾದ ಚತುರ್ಮುಖನಲ್ಲಿದ್ದು ಚತುರ್ಮುಖನಿಂದ ಭಿನ್ನನೋ, ಚತುರ್ಮುಖನು ಯಾರನ್ನು ತಿಳಿಯುವುದಿಲ್ಲವೋ, ಚತುರ್ಮುಖನು ಯಾರಿಗೆ ಶರೀರದಂತಿರುವನೋ, ಯಾರು ಚತುರ್ಮುಖನಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

'ಯೋ ರೇತಸಿ ತಿಷ್ಠನ್ ರೇತಸೋಽಂತರೋ, ಯಂ ರೇತೋ ನ ವೇದ, ಯಸ್ಯ ರೇತಃ ಶರೀರಂ, ಯಃ ರೇತೋಽಂತರೋ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ'

ಯಾರು ರೇತಸ್ಸಿನ ಅಭಿಮಾನಿಯಲ್ಲಿದ್ದು ಅವನಿಂದ ಭಿನ್ನನೋ, ಅವನು ಯಾರನ್ನು ತಿಳಿಯುವುದಿಲ್ಲವೋ, ಅವನು ಯಾರಿಗೆ ಶರೀರದಂತಿರುವನೋ, ಯಾರು ಅವನಲ್ಲಿದ್ದು ಸುಖವನ್ನುಂಟು ಮಾಡುವನೋ ಮತ್ತು ನಿಯಮಿಸುವನೋ ಅವನೇ ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ.

ಅದೃಷ್ಟೋ ದ್ರಷ್ಟಾ। ಅಶ್ರುತಃ ಶ್ರೋತಾ। ಅಮತೋ ಮಂತಾ। ಅವಿಜ್ಞಾತೋ ವಿಜ್ಞಾತಾ। ನಾನ್ಯೋಽತೋಽಸ್ತಿ ದ್ರಷ್ಟಾ। ನಾನ್ಯೋಽತೋಽಸ್ತಿ ಶ್ರೋತಾ। ನಾನ್ಯೋಽತೋಽಸ್ತಿ

ಮಂತಾ । ನಾನ್ಯೋऽತೋऽಸ್ತಿ ವಿಜ್ಞಾತಾ । ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ । ಅತೋऽನ್ಯದಾರ್ತಮ್ । ತತೋ ಹೋದ್ದಾಲಕ ಆರುಣಿರುಪರರಾಮ ।

ಈ ಅಂತರ್ಯಾಮಿಯು ಪೂರ್ಣವಾಗಿ ನೋಡಲಾಗದವನು, ಪೂರ್ಣವಾಗಿ ನೋಡುವವನು. ಪೂರ್ಣವಾಗಿ ಕೇಳಲಾಗದವನು, ಪೂರ್ಣವಾಗಿ ಕೇಳುವವನು. ಪೂರ್ಣವಾಗಿ ಮನಸ್ಸಿನಿಂದ ತಿಳಿಯಲಾಗದವನು, ಪೂರ್ಣವಾಗಿ ಮನಸ್ಸಿನಿಂದ ತಿಳಿಯುವವನು. ಪೂರ್ಣವಾಗಿ ಬುದ್ಧಿಗೆ ನಿಲುಕದವನು, ಪೂರ್ಣವಾಗಿ ಬುದ್ಧಿಯಿಂದ ತಿಳಿಯುವವನು. ಇವನನ್ನು ಬಿಟ್ಟರೆ ಬೇರೆ ಯಾರೂ ಸ್ವತಂತ್ರವಾಗಿ ನೋಡುವವರಿಲ್ಲ. ಇವನನ್ನು ಬಿಟ್ಟು ಬೇರೆ ಯಾರೂ ಸ್ವತಂತ್ರವಾಗಿ ಕೇಳುವವರಿಲ್ಲ. ಇವನನ್ನು ಬಿಟ್ಟು ಬೇರೆ ಯಾರೂ ಸ್ವತಂತ್ರವಾಗಿ ಮನಸ್ಸಿನಿಂದ ತಿಳಿಯುವವರಿಲ್ಲ. ಇವನನ್ನು ಬಿಟ್ಟು ಬೇರೆ ಯಾರೂ ಸ್ವತಂತ್ರವಾಗಿ ಬುದ್ಧಿಯಿಂದ ತಿಳಿಯುವವರಿಲ್ಲ. ಇವನು ನಿನ್ನ ನಿಯಾಮಕನಾದ ನಿತ್ಯನಾದ ಅಂತರ್ಯಾಮಿ. ಇವನನ್ನು ಬಿಟ್ಟು ಬೇರೆಯವರೆಲ್ಲರೂ ದುಃಖಿಗಳು, ಹೀಗೆ ಹೇಳಿ ಅರುಣರ ಮಗ ಉದ್ದಾಲಕನು ವಿರಮಿಸಿದನು.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಈ ಅಧಿಕರಣಕ್ಕೆ ಶಾಸ್ತ್ರಾದಿ ಸಂಗತಿ ಹೇಗೆ ?

तत्वप्रकाशिका – अत्र पृथिव्यादिशरीरत्वलिङ्गसाहित्येन अन्यत्र-प्रसिद्धान्तर्यामित्वलिङ्गस्य विष्णौ समन्वयप्रतिपादनादस्ति शास्त्रादिसङ्गतिः । विषयवाक्योदाहरणपूर्वकं विषयं दर्शयति – य इति ।।

ಈ ಅಂತರ್ಯಾಮ್ಯಧಿಕರಣದಲ್ಲಿ ಪೃಥಿವ್ಯಾದಿಶರೀರತ್ವ (ಪೃಥಿವೀ ಮೊದಲಾದವುಗಳೇ ಶರೀರವಾಗಿರುವಿಕೆ) ಎಂಬ ಲಿಂಗದ ಜೊತೆಗೆ ಅನ್ಯತ್ರಪ್ರಸಿದ್ಧವಾದ ಅಂತರ್ಯಾಮಿತ್ವ ಎಂಬ

ಲಿಂಗದ ಸಮನ್ವಯವನ್ನು ವಿಷ್ಣುವಿನಲ್ಲಿ ಪ್ರತಿಪಾದಿಸಲಾಗಿದೆ. ಆದ್ದರಿಂದಲೇ ಈ ಅಧಿಕರಣಕ್ಕೆ ಶಾಸ್ತ್ರಸಂಗತಿ ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ.

ಈ ಅಧಿಕರಣದ ವಿಷಯವಾಕ್ಯವನ್ನು ಉದಾಹರಿಸುವ ಮೂಲಕವಾಗಿ ವಿಷಯವನ್ನು ಪ್ರದರ್ಶಿಸುತ್ತಿದ್ದಾರೆ. ''ಯಃ ಪೃಥಿವ್ಯಾಂ'' ಇತ್ಯಾದಿ ಭಾಷ್ಯದ ಮಾತಿನಲ್ಲಿ.

ಈ ಅಧಿಕರಣದ ಶ್ರುತಿ ಸಂಗತಿ ಹೇಗೆ ?

तत्वप्रकाशिका – श्रुत्यादिसङ्गतिं दर्शयति – तत्रेति ।। 'एतदमृतमभयम्' इत्यक्षिस्थपुरुषस्यामृतत्वमुक्तम् । तत् काण्वमाध्यन्दिनश्रुत्योरन्तर्यामिणः कस्यचिच्छ्रूयते 'एष त आत्माऽन्तर्याम्यमृतः' इति । स चान्तर्यामी यदि विष्णोरितरः स्यात्तदाऽमृतत्वं चान्यनिष्ठं नाक्षिस्थस्य विष्णुत्वसाधकं स्यादिति, अवश्यं निर्णेतव्य एव ।

ಶ್ರುತಿ ಸಂಗತಿ ಹಾಗೂ ಅಧಿಕರಣಸಂಗತಿಗಳನ್ನು ''ತತ್ರ ಚ'' ಎಂಬ ಭಾಷ್ಯದಿಂದ ತೋರಿಸಿದ್ದಾರೆ.

ಹಿಂದಿನ ಅಧಿಕರಣದಲ್ಲಿ ಕಣ್ಣಿನಲ್ಲಿರುವವನು ಪರಮಾತ್ಮನೇ ಆಗಿದ್ದಾನೆಂದು ನಿರ್ಣಯಿಸಲಾಯಿತು. ಆದರೆ 'ಏತದಮೃತಮಭಯಮ್' ಎಂಬ ಛಾಂದೋಗ್ಯದ ಮಾತಿನಲ್ಲಿ ಕಣ್ಣಿನಲ್ಲಿರುವ ಪುರುಷನಲ್ಲಿ 'ಅಮೃತತ್ವ' ಎಂಬ ಧರ್ಮವು ಕೇಳಿಸುತ್ತಿದೆ. ಇದೇ ಧರ್ಮವನ್ನು ಕಾಣ್ವಶ್ರುತಿ ಹಾಗೂ ಮಾಧ್ಯಂದಿನ ಶ್ರುತಿಗಳು ಅಂತರ್ಯಾಮಿಯಾದ ಯಾರೋ ಒಬ್ಬನಲ್ಲಿ 'ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ' ಎಂಬುದಾಗಿ ಹೇಳುತ್ತಿವೆ. ಆದ್ದರಿಂದ ಇಂತಹ ಅಂತರ್ಯಾಮಿಯು ಒಂದು ವೇಳೆ ವಿಷ್ಣುವಿಗಿಂತ ಬೇರೆಯವನಾದರೆ ಅವನಲ್ಲಿ ಕೇಳಿಸಲ್ಪಟ್ಟ ಅಮೃತತ್ವವೂ ಸಹ ಬೇರೆಯವನಲ್ಲೇ ಇರಬೇಕು. ಈ ಎಲ್ಲ ಕಾರಣಗಳಿಂದ ಹಿಂದಿನ ಅಧಿಕರಣದಲ್ಲಿ ಸಾಧಿಸಲ್ಪಟ್ಟ ವಿಷ್ಣುವೇ ಅಕ್ಷಿಸ್ಥನಾಗಿದ್ದಾನೆಂಬ ಪ್ರಮೇಯವು ಸಿದ್ಧವಾಗುವುದಿಲ್ಲ. ಆದ್ದರಿಂದ ಅಮೃತತ್ವ ಧರ್ಮವು ಇರುವಂತಹ ಅಂತರ್ಯಾಮಿಯು ಯಾರೆಂದು ಅವಶ್ಯವಾಗಿ ನಿರ್ಣಯಿಸಬೇಕಾಗಿದೆ.

ವಿಶೇಷವಿಚಾರ - ಪ್ರಶ್ನೆ - ''ತತ್ರ ಚ ''ಏತದಮೃತಮ್'' ಇತ್ಯುಕ್ತಮಮೃತತ್ವ-ಮುಚ್ಯತೇ'' 'ಈ ಅಧಿಕರಣದ ವಿಷಯವಾಕ್ಯದಲ್ಲಿ 'ಅಮೃತಂ' ಎಂಬ ಪದದಿಂದ ಅಮೃತತ್ವವು ಹೇಳಲ್ಪಟ್ಟಿದೆ'. ಇತ್ಯಾದಿ ಭಾಷ್ಯ ಹಾಗೂ ಟೀಕೆಗಳಲ್ಲಿ ಹಿಂದಿನ ಅಧಿಕರಣದ ಶ್ರುತಿವಾಕ್ಯದಿಂದ ಸಂಗತಿಯು ತೋರುತ್ತದೆಯೇ ಹೊರತು ಹಿಂದಿನ ಅಧಿಕರಣದಿಂದ ಸಂಗತಿಯನ್ನು ಹೇಳಿರುವುದು ಕಾಣಿಸುವುದಿಲ್ಲ. ಆದ್ದರಿಂದ 'ಶ್ರುತ್ಯಾದಿಸಂಗತಿಂ ದರ್ಶಯತಿ' 'ಶ್ರುತಿಸಂಗತಿ; ಅಧಿಕರಣಸಂಗತಿ ಮೊದಲಾದವುಗಳನ್ನು ತೋರಿಸುತ್ತಿದ್ದಾರೆ.' ಎಂಬ ಟೀಕೆಯು ಅಯುಕ್ತವಾಗುತ್ತದಲ್ಲವೆ?

ಸಮಾಧಾನ - ಶ್ರುತಿಸಂಗತಿಯಿಂದ ಅಧಿಕರಣಸಂಗತಿಯು(ವ್ಯಾಪ್ತ) ಅವಿನಾಭೂತ-ವಾದ್ದರಿಂದ ಶ್ರುತಿಸಂಗತಿಯನ್ನು ಹೇಳಿದರೆ ಅಧಿಕರಣ ಸಂಗತಿಯನ್ನೂ ಸಹ ಹೇಳಿದಂತಾಗುತ್ತದೆ ಎಂದು ಅಭಿಪ್ರಾಯ. ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪ ಮಾಡುವ ಮೂಲಕ ಈ ಅಧಿಕರಣದ ಸಂಗತಿಯನ್ನು ತಿಳಿಯಬೇಕು. ಈ ಕ್ರಮವು ಹಿಂದಿನ ಅಧಿಕರಣಗಳಲ್ಲಿ ಹೇಳಿದ ಬಗೆಯಲ್ಲೇ ತಿಳಿಯಬೇಕು. ಹೀಗೆ ಹೇಳಿದ್ದರಿಂದ; ಅಮೃತತ್ವವನ್ನೇ ಈ ಅಧಿಕರಣದಲ್ಲಿ ಆಕ್ಷೇಪಿಸುತ್ತಿದ್ದಾರೆ. ಆದ್ದರಿಂದ ವಿಷ್ಣುವಿಗೆ ಅಂತರ್ಯಾಮಿತ್ವವನ್ನು ಹಿಂದೆ ಆಕ್ಷೇಪಿಸಿದಂತೆ ಇಲ್ಲಿ ಆಕ್ಷೇಪಿಸುತ್ತಿಲ್ಲವೆಂದು ಸೂಚಿಸಿದಂತಾಯಿತು.

ಅಂತರ್ಯಾಮ್ಯಧಿಕರಣದ ವಿಷಯಾದಿಗಳು

तत्वप्रकाशिका – तदन्तर्यामित्वमत्र विषयः । किं विष्णोरन्यस्य वा? इति सन्देहः । अमृतत्वं पृथिव्यादिशरीरत्वं च सन्देहबीजमिति भावः । सयुक्तिकं पूर्वपक्षयति – स चेति ।।

ಈ ಅಧಿಕರಣಕ್ಕೆ ಅಂತರ್ಯಾಮಿತ್ವವೇ ವಿಷಯ. ಅಂತರ್ಯಾಮಿತ್ವವು ವಿಷ್ಣುವಿನ ಧರ್ಮವೋ ಅಥವಾ ಬೇರೆಯವರದ್ದೋ ಎಂಬುದೇ ಸಂದೇಹ? ಅಮೃತತ್ವ ಹಾಗೂ ಪೃಥಿವ್ಯಾದಿ ಶರೀರತ್ವ ಎಂಬ ಧರ್ಮಗಳು ಸಂದೇಹಕ್ಕೆ ಕಾರಣ ಎಂದು ತಿಳಿಯಬೇಕು. ಯುಕ್ತಿಬದ್ಧವಾದ ಪೂರ್ವಪಕ್ಷವನ್ನು ''ಸ ಚ'' ಎಂಬ ಭಾಷ್ಯದ ವಾಕ್ಯವು ತೋರಿಸುತ್ತಿದೆ.

ವಿಶೇಷವಿಚಾರ - ಬೃಹದಾರಣ್ಯಕದ ಮೂರನೇ ಅಧ್ಯಾಯದಲ್ಲಿರುವ ವಿಷಯವಾಕ್ಯ ಹೀಗಿದೆ - ''ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋ ಯಂ ಪೃಥಿವೀ ನ ವೇದ ಯಸ್ಯ

ಪೃಥಿವೀ ಶರೀರಂ ಯಃ ಪೃಥಿವೀಮಂತರೋ ಯಮಯತ್ಯೇಷತ ಆತ್ಮಾಽಂತರ್ಯಾಮ್ಯಮೃತಃ'' ಎಂದು. ಇಲ್ಲಿ ಅಪ್, ಅಗ್ನಿ, ಅಂತರಿಕ್ಷ, ವಾಯು, ಆದಿತ್ಯ, ದಿಕ್, ಚಂದ್ರ, ನಕ್ಷತ್ರ, ಆಕಾಶ, ತಮಸ್ಸು, ತೇಜಸ್ಸು ಮೊದಲಾದ ಆಧಿದೈವಿಕ ಪದಾರ್ಥಗಳಲ್ಲಿ ''ಯಸ್ಸರ್ವೇಷು ಭೂತೇಷು'' ಎಂಬಲ್ಲಿ ಹೇಳಲ್ಪಟ್ಟ ಆಧಿಭೌತಿಕಪದಾರ್ಥಗಳಲ್ಲಿ; ಪ್ರಾಣ, ವಾಕ್, ಚಕ್ಷುಷ್, ಶ್ರೋತ್ರ, ಮನಸ್ಸು, ತ್ವಕ್, ವಿಜ್ಞಾನ, ರೇತಸ್ಸು ಮೊದಲಾದ ಆಧ್ಯಾತ್ಮಿಕ ಪದಾರ್ಥಗಳಲ್ಲಿ ಇದ್ದಾನೆಂದು ಶ್ರುತನಾದ ಅಂತರ್ಯಾಮಿಯೇ ಈ ಅಧಿಕರಣಕ್ಕೆ ವಿಷಯನಾಗಿದ್ದಾನೆಂದು ತಿಳಿಯಬೇಕು.

ಅಂತರ್ಯಾಮಿಯು ಪ್ರಕೃತಿಯಾಗಬಹುದೇ ?

तत्वप्रकाशिका – सोऽन्तर्यामी प्रकृतिर्भवेत् । ''यस्य पृथिवी शरीरं यस्याऽपः शरीरम्'' इत्यादिनाऽन्तर्यामिणः पृथिव्यादिशरीरत्वस्य श्रवणात् । तस्य च प्रकृतावुपपत्तेः शरीरशब्दस्य स्वरूपेऽपि प्रयोगात् । प्रकृतेश्च पृथिव्यादिसर्वात्मकत्वात् ।

ಶ್ರುತಿಯಲ್ಲಿ ಕೇಳಿಸುತ್ತಿರುವ ಅಂತರ್ಯಾಮಿಯು ಪ್ರಕೃತಿಯೇ ಆಗಬೇಕು. ಏಕೆಂದರೆ 'ಯಸ್ಯ ಪೃಥಿವೀ ಶರೀರಂ ಯಸ್ಯಾಪಃ ಶರೀರಂ' ಪೃಥಿವಿಯು ಯಾರಿಗೆ ಶರೀರವಾಗಿದೆಯೋ, 'ನೀರು ಯಾರಿಗೆ ಶರೀರವಾಗಿದೆಯೋ' ಇತ್ಯಾದಿಯಾಗಿ ಅಂತರ್ಯಾಮಿಯು ಪೃಥಿವೀ ಮೊದಲಾದವುಗಳನ್ನೇ ಶರೀರವನ್ನಾಗಿ ಹೊಂದಿದ್ದಾನೆಂದು ಹೇಳಲಾಗಿದೆ. ಈ ಪೃಥಿವ್ಯಾದಿ ಶರೀರತ್ವವು ಪ್ರಕೃತಿಯಲ್ಲಿ ಉಪಪನ್ನವಾಗುತ್ತದೆ. ಶರೀರಶಬ್ದವು 'ದೇಹ' ಎಂಬ ಅರ್ಥದಲ್ಲಿ ಪ್ರಸಿದ್ಧವಿರುವಂತೆ 'ಸ್ವರೂಪ' ಎಂಬರ್ಥದಲ್ಲಿಯೂ ಪ್ರಯೋಗಿಸಬಹುದು. ಪ್ರಕೃತಿಯಾದರೂ ಸಹ ಪೃಥಿವಿಯೇ ಮೊದಲಾದ ಸಕಲ ಪದಾರ್ಥಗಳ ಸ್ವರೂಪವಾಗಿದೆ.

ಪೃಥಿವಿಯು ತನಗೆ ತಾನೇ ಆಧಾರನಾಗಲು ಸಾಧ್ಯವಿಲ್ಲ

तत्वप्रकाशिका – न च 'यः पृथिव्यां तिष्ठन्' इत्यादेरनुपपत्तिः ।

ಪ್ರಶ್ನೆ - ಪ್ರಕೃತಿಯನ್ನು ಅಂತರ್ಯಾಮಿಯೆಂದು ಹೇಳುತ್ತಿದ್ದೀರಿ ಹಾಗಾದರೆ ಪೃಥಿವೀ ಮತ್ತು ಅಂತರ್ಯಾಮಿ ಎರಡೂ ಒಂದೇ ಆದ್ದರಿಂದ 'ಪೃಥಿವ್ಯಾಂ ತಿಷ್ಠನ್' 'ಪೃಥಿವಿಯಲ್ಲಿ

ನಿಂತು' ಎಂಬ ಮಾತು ಅನುಪಪನ್ನವಾಗುತ್ತದೆ. ಏಕೆಂದರೆ ತಾನೇ ತನಗೆ ಆಧಾರವಾಗಲು ಸಾಧ್ಯವಿಲ್ಲವಲ್ಲವೇ?

ಕಾರಣವು ಕಾರ್ಯದಲ್ಲಿರುತ್ತದೆ

तत्वप्रकाशिका – 'व्याप्तं कार्येषु कारणम्' इत्यादिना कारणस्य कार्यस्थत्वोक्तेः ।

ಸಮಾಧಾನ - ಈ ಪ್ರಶ್ನೆಯು ಸರಿಯಲ್ಲ; ಏಕೆಂದರೆ ಲೋಕದಲ್ಲಿ 'ವ್ಯಾಪ್ತಂ ಕಾರ್ಯೇಷು ಕಾರಣಮ್' ಕಾರ್ಯದಲ್ಲಿ ಕಾರಣವು ವ್ಯಾಪ್ತವಾಗಿದೆ ಎಂಬ ಪ್ರಯೋಗವಿದೆ. ಅದರಂತೆ ಕಾರ್ಯ ಹಾಗೂ ಕಾರಣಗಳಿಗೆ ಐಕ್ಯವಿದ್ದರೂ ಸಹ ಆಧಾರಾಧೇಯಭಾವವನ್ನು ಹೇಗೆ ಕೂಡಿಸುತ್ತೇವೋ ಅದರಂತೆ ಪ್ರಕೃತಿಯು ಪೃಥಿವಿಯ ಸ್ವರೂಪವಾಗಿದ್ದರೂ 'ಪೃಥಿವ್ಯಾಂ ತಿಷ್ಠನ್' ಎಂಬ ಪ್ರಯೋಗವನ್ನು ಕೂಡಿಸಬಹುದು.

ಪೃಥಿವೀ ನಿಯಮನವೂ ಔಪಚಾರಿಕ

तत्वप्रकाशिका – 'पृथिवीं यमयति' इत्येतदप्युपचारेण नेतव्यम् ।

ಪ್ರಶ್ನೆ - ಪ್ರಕೃತಿಯನ್ನೇ ಅಂತರ್ಯಾಮಿಯೆಂದು ಹೇಳಿದರೆ 'ಪೃಥಿವೀಂ ಯಮಯತಿ' ಪೃಥಿವಿಯನ್ನು ನಿಯಮನ ಮಾಡುತ್ತದೆ ಎಂಬ ಮಾತನ್ನು ಹೇಗೆ ಕೂಡಿಸುವುದು.

ಉತ್ತರ - ಈ ವಾಕ್ಯವನ್ನು ಗೌಣವಾಗಿ ವ್ಯಾಖ್ಯಾನಿಸಬೇಕು. ಕಾರ್ಯವು ಕಾರಣದ ಅಧೀನವಾದ್ದರಿಂದ ಕಾರಣವು ಕಾರ್ಯಕ್ಕೆ ವಿಷಯವಾಗಿದೆ ಎಂದು ಇದರ ಅರ್ಥ.

ಜೀವನೂ ಅಂತರ್ಯಾಮಿಯಾಗಬಹುದು

तत्वप्रकाशिका – पृथिव्यादिजीवस्यैव तदन्तर्यामित्वम् । पृथिव्यादि-शरीरत्वादेस्तस्मिन्नतिसुघटत्वादिति भावः ।

ಅಥವಾ ಪೃಥಿವ್ಯಾದಿಗಳಲ್ಲಿ ಅಭಿಮಾನಿಯಾಗಿರುವ ಜೀವನೇ ಅಂತರ್ಯಾಮಿಯಾಗಿದ್ದಾನೆಂದು

ಹೇಳಬಹುದು. ಏಕೆಂದರೆ ಅಭಿಮಾನಿಯಾದ ಜೀವನಿಗೆ ಪೃಥಿವೀ ಮೊದಲಾದವು ಶರೀರಗಳಾಗಿವೆ. ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಉಪಪಾದಿಸಬಹುದೆಂದು ತಿಳಿಯಬೇಕು.

ಅಮೃತತ್ವ ಲಿಂಗ ವಿಷ್ಣುವಿನಲ್ಲಿಲ್ಲವೇ ?

तत्वप्रकाशिका – ननु यथा प्रकृत्यादिलिङ्गेन तेषामन्तर्यामित्वं तथाऽमृतत्वलिङ्गेन विष्णोः किं न स्यादित्यत आह – न हीति ।।

ಶಂಕೆ - ಯಾವ ರೀತಿಯಾಗಿ ಪೃಥಿವೀಶರೀರತ್ವ ಮೊದಲಾದ ಲಿಂಗಗಳಿಂದ ಪ್ರಕೃತಿ ಅಥವಾ ಜೀವರು ಅಂತರ್ಯಾಮಿಗಳಾಗಿದ್ದಾರೆಂದು ಹೇಳುತ್ತೀರೋ ಅದರಂತೆ ಅಮೃತತ್ವಲಿಂಗದಿಂದ ವಿಷ್ಣುವೇ ಅಂತರ್ಯಾಮಿಯಾಗಬಹುದಲ್ಲವೇ?

ಸಮಾಧಾನ - ಈ ಶಂಕೆಗೆ ''ನಹಿ'' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಅದು ಹೀಗೆ —

ಲಿಂಗವಿದ್ದರೂ ಸಹ ಶರೀರತ್ವ ಕೂಡಿಸಲು ಬರುವುದಿಲ್ಲ

तत्वप्रकाशिका – विद्यामानेऽपि विष्णुलिङ्गे न तस्यान्तर्यामित्वम् । पृथिव्यादिशरीरत्वस्य कयाऽपि विधयाऽवकाशाभावात् ।

ಅಮೃತತ್ವವೆಂಬ ವಿಷ್ಣುವಿನ ಲಿಂಗವು ಶ್ರುತಿಯಲ್ಲಿ ಕೇಳಿಸುತ್ತಿರಬಹುದು. ಆದರೂ ಸಹ ವಿಷ್ಣುವಿಗೆ ಅಂತರ್ಯಾಮಿತ್ವವು ಕೂಡುವುದಿಲ್ಲ. ಏಕೆಂದರೆ ಅದೇ ಸಂದರ್ಭದಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿ ಶರೀರತ್ವವು ವಿಷ್ಣುವಿನಲ್ಲಿ ಯಾವುದೇ ಪ್ರಕಾರದಿಂದಲೂ ಸಾವಕಾಶ ಮಾಡಲು ಸಾಧ್ಯವಿಲ್ಲ.

ಸಾವಕಾಶದಿಂದ ನಿರವಕಾಶಕ್ಕೆ ಬಾಧ

तत्वप्रकाशिका – तस्य पृथिव्यादिभिन्नत्वचिच्छरीरत्वोररीकारेण पृथिव्यादिशरीरत्वानङ्गीकारात् । अमृतत्वस्य कथञ्चित्प्रकृत्यादावपि सावकाशत्वात् । सावकाशस्य च निरवकाशेन बाधोपपत्तेः ।

ಏಕೆಂದರೆ ವಿಷ್ಣುವು ಪೃಥಿವ್ಯಾದಿ ಸಕಲಪದಾರ್ಥಗಳಿಗಿಂತ ಭಿನ್ನನಾಗಿದ್ದಾನೆ ಹಾಗೂ ಚಿನ್ಮಯಶರೀರನಾಗಿದ್ದಾನೆ. ಹೀಗೆ ಸಿದ್ಧಾಂತಿಗಳೇ ಒಪ್ಪಿರುವುದರಿಂದ ಪೃಥಿವೀ ಮೊದಲಾದವು-ಗಳನ್ನು ವಿಷ್ಣುವಿನ ಶರೀರವೆಂದು ಯಾವ ಪ್ರಕಾರದಿಂದಲೂ ಹೇಳಲಾಗದು. ಆದರೆ ವಿಷ್ಣುವಿನ ಧರ್ಮವೆನಿಸಿದ ಅಮೃತತ್ವವನ್ನು ಪ್ರಕೃತ್ಯಾದಿಗಳಲ್ಲಿ ಹೇಗಾದರೂ ಸಾವಕಾಶ ಮಾಡಬಹುದು. ಸಾವಕಾಶವಾದ ಧರ್ಮವು ನಿರವಕಾಶವಾದ ಯುಕ್ತಿಯಿಂದ ಬಾಧಿತ- ವಾಗುತ್ತದೆ.

ಅಮೃತತ್ವವು ವಿಷ್ಣುತ್ವ ಸಾಧಕಧರ್ಮವಲ್ಲ ಎಂದು ಪೂರ್ವಪಕ್ಷ

तत्वप्रकाशिका – अतोऽन्तर्यामी न विष्णुरपि तु प्रकृत्यादय एवेति नामृतत्वमक्षिस्थस्य विष्णुत्वसाधकमिति भावः ।

ಆದ್ದರಿಂದ ಅಂತರ್ಯಾಮಿಯಾದವನು ವಿಷ್ಣುವಾಗಲು ಸಾಧ್ಯವಿಲ್ಲ. ಹೊರತಾಗಿ ಪ್ರಕೃತಿ ಅಥವಾ ಜೀವರೇ ಆಗುತ್ತಾರೆ. ಹೀಗಿರುವಾಗ ಅಮೃತತ್ವಧರ್ಮವು ಅಕ್ಷಿಸ್ಥನಾದವನು ವಿಷ್ಣುವೇ ಆಗಿದ್ದಾನೆಂಬುದಕ್ಕೆ ಸಾಧಕಪ್ರಮಾಣವಾಗುವುದಿಲ್ಲವೆಂದು ಪೂರ್ವಪಕ್ಷದ ಅಭಿಪ್ರಾಯ.

ಅವಿದಿತತ್ವಾದಿಗಳು ವಿಷ್ಣುಧರ್ಮವೇ ಆಗಿವೆ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। अन्तर्यामी विष्णुरेव । अन्तर्यामिणः पृथिव्याद्यविदितत्वतदन्तरत्वाख्य-धर्मव्यपदेशात् । अविदितत्वादेश्च विष्णुधर्मत्वात् ।

ಸಿದ್ಧಾಂತವನ್ನು ಸ್ಥಾಪಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. ''ಅತಃ'' ಇತ್ಯಾದಿಯಾಗಿ.

ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಪೃಥಿವಿ ಮೊದಲಾದವುಗಳಿಂದ ತಿಳಿಯದಿರುವಿಕೆ ಮತ್ತು ಅವುಗಳ ಅಂತರ್ಯಾಮಿಯಾಗಿರುವಿಕೆ ಮೊದಲಾದ ಧರ್ಮಗಳನ್ನು

ಶ್ರುತಿಯು ಹೇಳುತ್ತಿದೆ. ಈ ಅವಿದಿತತ್ವ ಮೊದಲಾದವುಗಳೆಲ್ಲವೂ ವಿಷ್ಣುವಿನ ಧರ್ಮವೇ ಆಗಿವೆ ಎಂಬ ವಿಚಾರವು ಸ್ಪಷ್ಟವಾಗಿದೆ.

ವಿಶೇಷವಿಚಾರ - ಅಧಿಕರಣದ ಸಿದ್ಧಾಂತ ಹೀಗಿದೆ - ಸಕಲರಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವನು ಮಹಾವಿಷ್ಣುವೇ ಆಗಿದ್ದಾನೆ. ಯಾವ ಶ್ರುತಿಯು ಪೂರ್ವಪಕ್ಷವನ್ನು ಹೇಳುತ್ತಿದೆಯೋ ಅದೇ ಶ್ರುತಿಯಲ್ಲಿ ಕೇಳಿಸುತ್ತಿರುವ ಪೃಥಿವ್ಯಾದ್ಯವಿದಿತತ್ವವು ವಿಷ್ಣುವಿನಲ್ಲಿ ಸುಲಭವಾಗಿ ಬರುತ್ತದೆ. ಪೃಥಿವೀ ಶಬ್ದಕ್ಕೆ ಜಡವೆಂದು ಅರ್ಥವಲ್ಲ. ಹಾಗಾದಲ್ಲಿ ಅಪ್ರಸಕ್ತ ವಿಷಯವನ್ನು ನಿಷೇಧ ಮಾಡಿದಂತಾಗುತ್ತದೆ. ಆದ್ದರಿಂದ ಅಭಿಮಾನಿಚೇತನರೆಂಬರ್ಥವನ್ನು ಹೇಳಬೇಕು. ಅಂತಹ ಅಭಿಮಾನಿಚೇತನರಿಂದ ಸಂಪೂರ್ಣವಾಗಿ ತಿಳಿಯಲು ಅಸಮರ್ಥನಾದವನು ಈಶ್ವರನೊಬ್ಬನೇ ಹೊರತು ಪ್ರಕೃತ್ಯಾದಿಗಳಲ್ಲ.

ಅಂತರತ್ವವೂ ಸಹ ವಿಷ್ಣುವಿನ ಧರ್ಮವೇ ಆಗಿದೆ -

ಪೃಥಿವ್ಯಾದ್ಯವಿದಿತತ್ವವು ಪರಮಾತ್ಮನಲ್ಲಿ ಬರುವಂತೆ ಅಂತರತ್ವವೂ ಸಹ ಬರುತ್ತದೆ. ಏಕೆಂದರೆ ಬಾಹ್ಯಪದಾರ್ಥಗಳ ಅಪೇಕ್ಷೆಯಿಲ್ಲದೇ ಯಾರು ವಿಹರಿಸುತ್ತಾರೋ ಅಂತಹವನು 'ಅಂತರಃ' ಎನಿಸುತ್ತಾನೆ. ಮತ್ತು ಅತ್ಯಂತ ಪ್ರಿಯನಾದ್ದರಿಂದಲೂ ಶ್ರೀಹರಿಯು ಅಂತರನೆಂದು ಹೇಳಲ್ಪಟ್ಟಿದ್ದಾನೆ.

ಪೂರ್ವಪಕ್ಷಕ್ಕೆ ಪ್ರಬಲ ಹೇತುವಾಗಿರುವ ಪೃಥಿವ್ಯಾದಿ ಶರೀರತ್ವವೂ ಸಹ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಅಗ್ನಿಯಲ್ಲಿ ಇಂದ್ರ ಶಬ್ದಪ್ರಯೋಗವನ್ನು ಯೌಗಿಕವಾಗಿ ಮತ್ತು ಗೌಣವಾಗಿ ಮಾಡುವಂತೆ ವಿಷ್ಣುವಿನಲ್ಲೂ ಯೌಗಿಕವಾಗಿ ಮತ್ತು ಗೌಣವಾಗಿ ಪೃಥಿವ್ಯಾದಿಶರೀರತ್ವವನ್ನು ಕೂಡಿಸಬೇಕು. ರೂಢ್ಯರ್ಥದಲ್ಲಿ ಬಾಧವಿರುವುದೇ ಇದಕ್ಕೆ ಕಾರಣ.

ಪೃಥಿವ್ಯಾದಿಗಳು ಜಡವಲ್ಲ

तत्वप्रकाशिका – नच वाच्यं पृथिव्यादीनां जडत्वेन तदज्ञेयत्वं सर्वस्यापि सम्भवतीति । पृथिव्यादीनामधिदैवत्वेन जडत्वाभावादिति भावः ।

ಶಂಕೆ - ಪೃಥಿವ್ಯಾದಿಗಳೆಲ್ಲವೂ ಜಡವಾದ್ದರಿಂದ ಇವುಗಳಿಂದ ತಿಳಿಯದಿರುವಿಕೆಯು ಸಕಲ ಪದಾರ್ಥಗಳಲ್ಲೂ ಪ್ರಾಪ್ತವಾಗುತ್ತದಲ್ಲವೇ?

ಸಮಾಧಾನ - ಇದು ತಪ್ಪು. ಪ್ರಕೃತ ಪೃಥಿವ್ಯಾದಿಗಳು ಅಧಿದೈವವಾದ್ದರಿಂದ ಪೃಥಿವ್ಯಾದಿಶಬ್ದಗಳಿಂದ ಅವುಗಳ ಅಂತರ್ಯಾಮಿಯಾದ ದೇವತೆಯೇ ಪ್ರಸಕ್ತನಾಗಿರುತ್ತಾನೆ. ಆದ್ದರಿಂದ ಪೃಥಿವ್ಯಾದಿಶಬ್ದಗಳು ಜಡಪರವಾಗಿವೆ ಎಂದು ಹೇಳಬಾರದು.

ಚಕ್ಷುರಾದಿಗಳು ಮಾತ್ರವೇ ಜಡ

तत्वप्रकाशिका – चक्षुरादीनां जडत्वेऽप्यत्रोक्तस्यैव तत्र कथनान्न विरोधः ।

ವಸ್ತುತಃ ಚಕ್ಷುರಾದಿಶಬ್ದಗಳು ಜಡಪರವಾಗಿರಬಹುದು. ಆದರೆ 'यः चक्षुषि तिष्ठन्' ಎಂಬಲ್ಲಿ ಹೇಳಿರುವುದನ್ನೇ 'य एषोऽन्तरक्षिणि' ಎಂಬಲ್ಲಿಯೂ ಹೇಳಿರುವುದರಿಂದ ವಿರೋಧಕ್ಕೆ ಅವಕಾಶವಿಲ್ಲ.

ಅವಿದಿತತ್ವಧರ್ಮವು ವಿಷ್ಣುಪರವಾಗಲು ಕಾರಣವೇನು ?

तत्वप्रकाशिका – अविदितत्वादेः कुतो विष्णुधर्मत्वमित्यत आह – स हीति ।। नच पृथिव्यादिजीवाविदितत्वं प्रकृतेः पृथिव्यादिजीवस्य वोपपद्यते ।। १८ ।।

ಇನ್ನು ಅವಿದಿತತ್ವಾದಿಗಳನ್ನು ವಿಷ್ಣು ಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ? ಎಂದು ಪ್ರಶ್ನಿಸಬಹುದು. ಇದಕ್ಕೆ ''ಸಹಿ'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಪೃಥಿವ್ಯಾದಿಪದಾರ್ಥಗಳ ಅಭಿಮಾನಿಗಳಾದ ಜೀವರಿಂದ ಪ್ರಕೃತಿಯು ಅಥವಾ ಪೃಥಿವ್ಯಾದಿ ಜೀವರುಗಳು ಅಜ್ಞೇಯರಾಗಲು ಸಾಧ್ಯವಿಲ್ಲ. ಆದ್ದರಿಂದ ಇದೂ ಪರಮಾತ್ಮನ ಲಿಂಗವೇ ಆಗಿದೆ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಶ್ರುತಿಯಲ್ಲಿ ಅಮೃತತ್ವ ಮತ್ತು ಅಭಯತ್ವ ಎಂಬ ಎರಡು ಧರ್ಮಗಳ ಪ್ರಸ್ತಾವವಿದೆ

ಭಾವದೀಪಃ – अन्तर्याम्यधिदैवादिषु तद्धर्मव्यपदेशात् ।। १-२-१८ ।।

इत्यन्तभाष्यं सङ्गतिपरत्वेन व्याकुर्वन् ''एतदमृतं इत्युक्तम्'' इति वाक्यं व्याचष्टे – एतदिति ।। उभयेऽपीति । सूत्रोक्त्यनुरोधात् ''तत्र च अमृतत्वमुच्यते'' इत्यंशार्थमाह – तत्काण्वेति ।।

''ಇತಿ'' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನಿಸುತ್ತಾ ''ಏತದಮೃತಂ ಇತ್ಯುಕ್ತಂ'' ಎಂಬ ವಾಕ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಏತತ್'' ಇತ್ಯಾದಿ ಟೀಕಾ ಗ್ರಂಥದಿಂದ. ಶ್ರುತಿಯಲ್ಲಿರುವ ''ಏತತ್'' ಎಂದರೆ ಅಮೃತತ್ವ ಮತ್ತು ಅಭಯತ್ವ ಎಂಬ ಎರಡು ಲಿಂಗಗಳೆಂದರ್ಥ. ಸೂತ್ರವನ್ನು ಅನುಸರಿಸಿ ಭಾಷ್ಯದಲ್ಲಿ ಹೇಳಿರುವ ''ತತ್ರ ಚ ಅಮೃತತ್ವಮುಚ್ಯತೇ'' ಎಂಬ ವಾಕ್ಯಭಾಗದ ಅರ್ಥವನ್ನು '' ತತ್‌ಕಾಣ್ವ'' ಇತ್ಯಾದಿ ಮಾತಿನಿಂದ ಹೇಳುತ್ತಿದ್ದಾರೆ.

ಎರಡು ಶಾಖೆಗಳಲ್ಲಿ ಬಂದ ಒಂದೇ ವಾಕ್ಯ ಯಾವುದು ?

ಭಾವದೀಪಃ – 'यः पृथिव्याम्' इत्यादिवाक्यस्य काण्वमाध्यन्दिनशाखयोरेक-रूपत्वादिति भावः । 'उच्यते' पञ्चमेऽध्याये । अन्तर्यामिणः कस्यचिदित्यनेन तत्रेत्यस्यान्तर्यामिणीत्यर्थो दर्शितः ।

''ಯಃ ಪೃಥಿವ್ಯಾಂ'' ಇತ್ಯಾದಿ ವಾಕ್ಯವು ಕಾಣ್ವಶಾಖೆಯಲ್ಲಿ ಹಾಗೂ ಮಾಧ್ಯಂದಿನಶಾಖೆಯಲ್ಲಿ ಒಂದೇ ರೀತಿಯಾಗಿ ರಚಿಸಲ್ಪಟ್ಟಿದೆ ಎಂದು ಅಭಿಪ್ರಾಯ. ''ಉಚ್ಯತೇ'' ಎಂದರೆ ಐದನೆಯ ಅಧ್ಯಾಯದಲ್ಲಿ ''ಅಂತರ್ಯಾಮಿಣಃ ಕಸ್ಯಚಿತ್'' ಎಂಬುದರಿಂದ. ''ತತ್ರ'' ಎಂದರೆ ಅಂತರ್ಯಾಮಿಣಃ'' ಎಂಬ ಅರ್ಥವನ್ನು ತೋರಿಸಿದ್ದಾರೆ.

ಪರಾಮೃಷ್ಟ ವಾಕ್ಯದ ಅನುವಾದ

भावदीपः – 'कस्यचित्' प्रकृत्यादेः । किं तदमृतत्वोक्तिपरं वाक्यमित्यतः तत्रेति परामृष्टवाक्यशेषमाह – एष त इति ।।

''ಕಸ್ಯಚಿತ್'' ಎಂದರೆ ಪ್ರಕೃತ್ಯಾದಿಗಳಿಗೆ ಎಂದರ್ಥ. ಅಮೃತತ್ವವನ್ನು ಹೇಳುವ ವಾಕ್ಯ ಯಾವುದು? ಎಂಬ ಪ್ರಶ್ನೆಗೆ ''ತತ್ರ'' ಎಂಬುದರಿಂದ ಪರಾಮರ್ಶಿಸಲ್ಪಟ್ಟ ವಾಕ್ಯಶೇಷವನ್ನು ''ಏಷ ತೇ'' ಎಂಬುದರಿಂದ ಹೇಳುತ್ತಿದ್ದಾರೆ.

ಪೂರ್ವಪಕ್ಷ ಮತ್ತು ಸಿದ್ಧಾಂತ ಯುಕ್ತಿಯ ಸೂಚಕ ಪದ ಯಾವುದು ?

भावदीपः – अत एव भाष्ये आत्माऽन्तर्यामीत्येव वाच्ये अमृत इत्यंशोऽप्युक्त इति भावः । 'यस्य पृथिवी शरीरम्' इत्यंशोक्तिः पूर्वपक्षयुक्तेः, 'यं पृथिवी न वेद यः पृथिव्यामन्तरः' इत्यंशोक्तिः सिद्धान्तयुक्तेः, 'यः पृथिवीमन्तरः' इत्यंशोक्तिर्भेदाध्ययनस्य सूचनायेत्याशयः ।

ಆದ್ದರಿಂದಲೇ ಭಾಷ್ಯದಲ್ಲಿ ''ಆತ್ಮಾಽಂತರ್ಯಾಮೀ'' ಎಂದಷ್ಟೇ ಹೇಳಿದ್ದರೂ ಸಾಕಾಗಿತ್ತು. ಆದರೂ ಸಹ ''ಅಮೃತಃ'' ಎಂಬ ಅಂಶವನ್ನೂ ಹೇಳಿದ್ದಾರೆ ಎಂದು ಅಭಿಪ್ರಾಯ. ಹಾಗೂ ''ಯಸ್ಯ ಪೃಥಿವೀ ಶರೀರಂ'' ಎಂಬ ಅಂಶವನ್ನು ಹೇಳಿದ್ದರಿಂದ ಪೂರ್ವಪಕ್ಷ ಯುಕ್ತಿಯನ್ನು, ''ಯಂ ಪೃಥಿವೀ ನ ವೇದ'' ''ಯಃ ಪೃಥಿವ್ಯಾಮಂತರಃ'' ಎಂಬ ಅಂಶವನ್ನು ಹೇಳಿದ್ದರಿಂದ ಸಿದ್ಧಾಂತಯುಕ್ತಿಯನ್ನು ಮತ್ತು ''ಯಃ ಪೃಥಿವೀಮಂತರಃ'' ಎಂಬ ಅಂಶವನ್ನು ಹೇಳಿದ್ದರಿಂದ ಭೇದಾಧ್ಯಯನವನ್ನೂ ಸಹ ಸೂಚಿಸಿದ್ದಾರೆಂದು ತಿಳಿಯಬೇಕು.

ವಿಶೇಷವಿಚಾರ - ಈ ಅಧಿಕರಣದ ಪೂರ್ವಪಕ್ಷದಲ್ಲಿ ಅಂತರತ್ವವನ್ನೂ ಸಹ ಬೇರೆಯವರಲ್ಲೇ ಮುಂದೆ ಹೇಳುತ್ತಾರೆ. ಆದ್ದರಿಂದ 'ವಿವಕ್ಷಿತಗುಣೋಪಪತ್ತೇಃ' ಎಂಬ ಸೂತ್ರದಲ್ಲಿ ''ಸರ್ವೇಷಾಂ ಭೂತಾನಾಮ್ ಅಂತರಃಪುರುಷಃ'' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ವಿಷ್ಣುಲಿಂಗವೆಂದು ಸಮರ್ಥಿಸಲಾದ ಅಂತರತ್ವದಿಂದ ಇಲ್ಲಿಯೂ ಅಂತರ್ಯಾಮಿಯು ವಿಷ್ಣು ಏಕಾಗಬಾರದು? ಎಂಬ ಶಂಕೆಯನ್ನು ಪರಿಹರಿಸಿದಂತಾಯಿತು. ಹೇಗೆಂದರೆ ಅಧಿಕರಣದ ಫಲವಾದ ಅಂತರತ್ವವನ್ನು ಬೇರೆಯವರಲ್ಲಿ ಆಕ್ಷೇಪಿಸುತ್ತಿರುವುದರಿಂದ.

ಪ್ರಶ್ನೆ - ಅಮೃತತ್ವವನ್ನು ಹೇಗೆ ಆಕ್ಷೇಪಿಸುತ್ತೀರಿ ?

ಉತ್ತರ - ಭಾಷ್ಯ ಮತ್ತು ಟೀಕೆಗಳಲ್ಲಿ ಹಾಗೂ ಚಂದ್ರಿಕಾದಲ್ಲಿ ಅಮೃತತ್ವದ ಆಕ್ಷೇಪವು ಅಂತರತ್ವದ ಜೊತೆಗೆ ಕೇಳಿಸುತ್ತಿರುವುದರಿಂದ ಆಕ್ಷೇಪಿಸಲಾಗಿದೆ.

ಮತ್ತೇನೆಂದರೆ ಈ ಅಧಿಕರಣದಲ್ಲಿ ''ಯಶ್ಚಕ್ಷುಷಿ ತಿಷ್ಠನ್'' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಚಕ್ಷುರಂತಃಸ್ಥನು ಬೇರೆಯವನಾಗಿದ್ದಾನೆಂದು ಈ ಅಧಿಕರಣದಲ್ಲಿ ಆಕ್ಷೇಪಿಸುತ್ತಿದ್ದಾರೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಅಕ್ಷಿಸ್ಥನೂ ಸಹ ಬೇರೆಯವನೇ ಆಗುತ್ತಾನೆಂಬ ಸಂಗತಿಯನ್ನು ಹೇಳುವುದು ಋಜು ಸಂಗತಿ ಎನಿಸುತ್ತದೆ.

ಒಂದುವೇಳೆ ಅಂತರ್ಯಾಮಿತ್ವವು ವಿಷ್ಣುವಿಗಿಂತ ಬೇರೆಯವರಲ್ಲಿ ಬರುವುದಾದರೆ ಆಗ 'ಅಂತರ್ಯಾಮ್ಯಮೃತಃ' ಎಂಬಲ್ಲಿಯೂ ಸಹ ಅಮೃತತ್ವವೂ ಸಹ ಬೇರೆಯವರಲ್ಲೇ ಬರುತ್ತದೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ನಿರ್ಣಯಿಸಲ್ಪಟ್ಟ ಅಮೃತತ್ವ ಧರ್ಮವುಳ್ಳ ಅಕ್ಷಿಸ್ಥನೂ ಸಹ ಬೇರೆಯವನೇ ಆಗುತ್ತಾನೆಂದು ಆಕ್ಷೇಪಿಸಸುವುದು ವಕ್ರವಾದ ಸಂಗತಿಯಾಗಿದೆ. ಇಲ್ಲಿ ಪೂರ್ವ ಪ್ರತಿಜ್ಞಾತವಾದ ಋಜು ಸಂಗತಿಯನ್ನು ಹೇಳಿದಾಗ ಸೂತ್ರದಲ್ಲಿರುವ ಪ್ರತಿಜ್ಞಾಂಶವನ್ನೇ ಸಮರ್ಥಿಸಿದಂತಾಗುತ್ತದೆ. ಆದರೆ ವಕ್ರಸಂಗತಿಯನ್ನು ಆಶ್ರಯಿಸಿದಾಗ ಹೇತ್ವಂಶವನ್ನು ಸಮರ್ಥಿಸಿದಂತಾಗುತ್ತದೆ. ಇವುಗಳಲ್ಲಿ ಸೂತ್ರ ಘಟಿತವಾದ ಪ್ರತಿಜ್ಞಾಂಶವನ್ನು ಸಮರ್ಥಿಸುವುದೇ ಶ್ರೇಷ್ಠವಾದ್ದರಿಂದ ಋಜು ಸಂಗತಿಯನ್ನೇ ಹೇಳುವುದು ಹೆಚ್ಚು ಸೂಕ್ತವಾಗಿದೆ.

ಆದರೂ ಸಹ ಸರ್ವಾನುಗುಣ್ಯಕ್ಕಾಗಿ ಅಥವಾ ಅಮೃತತ್ವದ ಮೂಲಕ ಚಕ್ಷುರಾದಿ ಇಂದ್ರಿಯಸ್ಥಿತನಾದವನೂ ವಿಷ್ಣುವೇ ಆಗಿದ್ದಾನೆಂಬ ಶಂಕೆಯು ತೋರಬಾರದೆಂದು ಹಾಗೇ (ವಕ್ರಸಂಗತಿಯನ್ನೇ) ಆಕ್ಷೇಪಿಸಲಾಗಿದೆ. ಪ್ರಕೃತ ನ್ಯಾಯಸುಧೆಯಲ್ಲಿ ಹೇಳಿದಂತೆ 'ಕಣ್ಣನೊಳಗಿದ್ದು ರಮಣವನ್ನು ಮಾಡುವವನು' ಎಂಬ ನೇರವಾದ ಅಂತರತ್ವದ ಆಕ್ಷೇಪವೂ ಹಿಂದೆ ಸರ್ವಗತತ್ವಾಧಿಕರಣದಲ್ಲೇ ವಿವರಿಸಿದ್ದಾಗಿದೆಯೆಂದು ತಿಳಿಯಬೇಕು.

'ಸಃ' ಎಂಬ ಭಾಷ್ಯದ ಶಬ್ದದಿಂದ ಯಾರು ವಿವಕ್ಷಿತರು ?

भावदीपः – स च 'यस्य पृथिवी' इत्यादिवाक्यतात्पर्यम् ।। स चेति।। 'अन्तर्याम्यमृतः' इति वाक्योक्त इत्यर्थः । 'स च' इत्यस्यार्थः –

अन्तर्यामीति।। प्रकृतिर्जीवो वेत्यस्यार्थः – इतर इति ।। सर्वात्मकत्वात् इयुक्तयुक्त्येत्यर्थः ।

"ಸ ಚ ಯಸ್ಯ ಪೃಥಿವೀ" ಇತ್ಯಾದಿ ಭಾಷ್ಯವಾಕ್ಯದ ತಾತ್ಪರ್ಯವನ್ನು "ಸ ಚ ಅಂತರ್ಯಾಮೀ" ಇತ್ಯಾದಿ ಟೀಕಾವಾಕ್ಯಗಳಿಂದ ವಿವರಿಸುತ್ತಿದ್ದಾರೆ. "ಸ ಚ " ಎಂದರೆ "ಅಂತರ್ಯಾಮ್ಯಮೃತಃ' ಎಂಬ ವಾಕ್ಯದಲ್ಲಿ ಹೇಳಿದ ರೀತಿ ಎಂದರ್ಥ. ಭಾಷ್ಯದಲ್ಲಿರುವ "ಸ ಚ" ಪದದ ಅರ್ಥವನ್ನು "ಅಂತರ್ಯಾಮೀ" ಎಂದು ಟೀಕೆಯಲ್ಲಿ ಬರೆದಿದ್ದಾರೆ. "ಪ್ರಕೃತಿರ್ಜೀವೋ ವಾ" ಎಂಬ ಭಾಷ್ಯಕ್ಕೆ "ಇತರಃ" ಎಂಬ ಅರ್ಥವನ್ನು ಬರೆದಿದ್ದಾರೆ. "ಸರ್ವಾತ್ಮಕತ್ವಾತ್" ಎಂಬ ಹಿಂದೆ ಹೇಳಿದ ಯುಕ್ತಿಯಿಂದ ಎಂದರ್ಥ.

भावदीपः – 'तत्र च' इत्यादेः 'उच्यते' इत्यन्तस्य तात्पर्यमाह – तदेति ।। इत्यवश्येति ।। इति सङ्गतिसम्भवादित्यर्थः ।। अन्यस्य वेति ।। जडप्रकृत्यादेरित्यर्थः । 'द्रष्टा श्रोता' इति द्रष्टृत्वादेः श्रवणात् न प्रकृतेरत्रावकाश इति तु अक्षरनये निरस्तप्रायं भविष्यतीति भावः ।

"ತತ್ರ ಚ" ಎಂಬಲ್ಲಿಂದ ಪ್ರಾರಂಭಿಸಿ "ಉಚ್ಯತೇ" ಎಂಬಲ್ಲಿಯ ತನಕ ಇರುವ ಭಾಷ್ಯದ ತಾತ್ಪರ್ಯವನ್ನು "ತದಾ" ಎಂಬುದರಿಂದ ಹೇಳುತ್ತಿದ್ದಾರೆ. "ಇತಿ ಅವಶ್ಯಂ" ಎಂದರೆ ಹೀಗೆ ಸಂಗತಿಯು ಕೂಡುವುದರಿಂದ ಎಂದರ್ಥ. "ಅನ್ಯಸ್ಯ ವಾ" ಎಂದರೆ ಜಡಪ್ರಕೃತ್ಯಾದಿಗಳಿಗೆಂದರ್ಥ. "ದ್ರಷ್ಟಾ ಶ್ರೋತಾ" ಇತ್ಯಾದಿ ಶ್ರುತಿಯಿಂದ ದ್ರಷ್ಟೃತ್ವಾದಿಗಳು ಅಂತರ್ಯಾಮಿಯಲ್ಲಿ ಕೇಳಿಸುತ್ತಿರುವುದರಿಂದ ಪ್ರಕೃತಿಯು ಇಲ್ಲಿ ಪ್ರತಿಪಾದ್ಯವಾಗುವುದಿಲ್ಲ ಎಂಬ ವಿಚಾರವು ಅಕ್ಷರಾಧಿಕರಣದಲ್ಲೇ ಪ್ರಾಯಃ ನಿರಸ್ತವಾಗುತ್ತದೆಂದು ತಿಳಿಯಬೇಕು.

ಟೀಕೆಯಲ್ಲಿರುವ ಅನ್ಯಪದದ ಅಭಿಪ್ರಾಯವೇನು ?

भावदीपः – भाष्ये 'प्रकृतिर्जीवो वा' इत्युक्तावप्यन्यस्येत्युक्तिः प्रकृति-जीवान्यतरानिश्चयेऽपि विष्ण्वन्यत्वेन पूर्वपक्षेऽवधारणं युक्तमिति दर्शयितुम् ।

ಭಾಷ್ಯದಲ್ಲಿ ಪ್ರಕೃತಿ ಹಾಗೂ ಜೀವರೆಂಬ ಪಕ್ಷಗಳನ್ನು ಪ್ರತ್ಯೇಕವಾಗಿ ಪರಿಗಣಿಸಿರಬಹುದು. ಆದರೂ ಸಹ ಟೀಕೆಯಲ್ಲಿ "ಅನ್ಯಸ್ಯ" ಎಂದು ಅದನ್ನು ವ್ಯಾಖ್ಯಾನಿಸಿದ್ದಾರೆ. ಏಕೆಂದರೆ ಪ್ರಕೃತಿ ಹಾಗೂ

ಜೀವರೆಂಬ ಎರಡು ಪೂರ್ವಪಕ್ಷಕೋಟಿಗಳು ಅನಿತ್ಯವಾದರೂ ಸಹ ವಿಷ್ಣುವಿಗಿಂತ ಅನ್ಯವಾದ ವಸ್ತು ಅಂತರ್ಯಾಮಿಯಾಗುತ್ತದೆಂಬ ಪೂರ್ವಪಕ್ಷದಲ್ಲಿ ಅವಧಾರಣೆಯನ್ನು ತೋರಿಸುವುದಕ್ಕಾಗಿ ಹಾಗೆ ಹೇಳಿರುತ್ತಾರೆ.

ವಿಶೇಷವಿಚಾರ - 'ಅಂತರ್ಯಾಮ್ಯಮೃತಃ' ಎಂಬ ಶ್ರುತಿ ವಾಕ್ಯ ಈ ಅಧಿಕರಣಕ್ಕೆ ವಿಷಯವಾಗಿದೆ. ಇಲ್ಲಿ ಕೇಳಿಸುತ್ತಿರುವ ಅಂತರ್ಯಾಮಿಯು ಪ್ರಕೃತ್ಯಾದಿಗಳೇಕಾಗಬಾರದು? ಎಂಬುದು ಪೂರ್ವಪಕ್ಷಿಗಳ ವಾದ. ವಿಷ್ಣುವೇ ಎಂದು ಸಿದ್ಧಾಂತಿಗಳ ನಿರ್ಣಯ. ಆದ್ದರಿಂದ ಒಂದು ವೇಳೆ ಮುಂದೆ ಹೇಳುವ ಪ್ರಕಾರ ಅಂತರ್ಯಾಮಿಯು ಅಚೇತನಪರವಾದರೆ ಆವಾಗ ಜಡವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಉಪಪನ್ನವಾಗುತ್ತದೆ. ಆವಾಗ ರೂಢ್ಯರ್ಥದಲ್ಲಿ ಬಾಧಕವಿಲ್ಲದ ಕಾರಣ ಪ್ರಕೃತ್ಯಾದಿಗಳನ್ನೇ ಶರೀರವಾಗಿವುಳ್ಳ ವಿಷ್ಣುವೆಂಬರ್ಥವನ್ನು ಸ್ವೀಕರಿಸಬೇಕೆಂಬುದು ಯುಕ್ತವಾಗುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಂತರ್ಯಾಮಿ-ಯೆಂದು ಪೂರ್ವಪಕ್ಷದ ಫಲ. ಜೀವನಿಗಿಂತ ಅಂತರ್ಯಾಮಿಗೆ ಭೇದವನ್ನು ಹೇಳುವ ವಚನಗಳಿರುವುದಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಒಂದು ವೇಳೆ ಚೇತನ ಪರವಾದರೆ ಆವಾಗ ಸಾಕಲ್ಯೇನಾವಿದಿತತ್ತ್ವವು ಪ್ರಕೃತ್ಯಾದಿಗಳಲ್ಲಿ ಕೂಡುವುದಿಲ್ಲ. ಹೀಗೆ ಬಾಧಕವಿರುವುದರಿಂದ ರೂಢಿಯನ್ನು ಬಿಟ್ಟು 'ಶೀರ್ಯಮಾಣತ್ವ' ಎಂಬ ಯೋಗದಿಂದ ವಿಷ್ಣುವಿನಲ್ಲೂ ಸಹ ಪ್ರಕೃತ್ಯಾದಿಗಳೇ ಶರೀರವಾಗಿವೆಯೆಂಬರ್ಥವನ್ನು ಕೂಡಿಸಬಹುದು. ಆದ್ದರಿಂದ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತದ ಫಲ.

ಸಂಗತಿಪರವಾದ ಭಾಷ್ಯವು ಪೂರ್ವಪಕ್ಷಪರವೂ ಆಗುತ್ತದೆ

भावदीपः – सङ्गतिपरतया व्याख्यातमेव भाष्यं पूर्वपक्षतद्युक्तितत्फलोक्ति-परत्वेन व्याकुर्वन् स चेति वाक्यं तावदवतारयति – सयुक्तिकमिति ।। व्यवहितत्वादन्वयोक्त्या प्रतिज्ञांशं व्याचष्टे – स इति ।।

ಸಂಗತಿಪರವಾಗಿ ವ್ಯಾಖ್ಯಾನಿಸಿದ ಭಾಷ್ಯವನ್ನು ಪೂರ್ವಪಕ್ಷ, ಪೂರ್ವಪಕ್ಷಯುಕ್ತಿ ಹಾಗೂ ಪೂರ್ವಪಕ್ಷಫಲಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಮತ್ತು ''ಸ ಚ'' ಎಂಬ ವಾಕ್ಯಕ್ಕೆ ಅವತಾರಿಕೆಯನ್ನು ''ಸ ಯುಕ್ತಿಕಂ'' ಎಂಬ ವಾಕ್ಯದಿಂದ ನೀಡುತ್ತಿದ್ದಾರೆ. ವ್ಯವಹಿತವಾಗಿರುವುದರಿಂದ ಅನ್ವಯವು ತಿಳಿಯುವುದಿಲ್ಲ. ಆದ್ದರಿಂದ ಅನ್ವಯವನ್ನು ಹೇಳುವ ಮೂಲಕ ಪ್ರತಿಜ್ಞಾಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಸಃ '' ಇತ್ಯಾದಿಯಾಗಿ.

ಭಾಷ್ಯದಲ್ಲಿರುವ ಹೇತು ಹೇಗೆ ಸಂಗತವಾಗುತ್ತದೆ ?

भावदीपः – आदिपदार्थोक्तिपूर्वं हेत्वंशं व्याचष्टे – यस्येति ।। उपपत्तेरित्युक्तं व्यनक्ति – शारीरेति ।। 'पूर्वपक्षस्य शरीरम्' इत्यादौ स्वरूपेऽपि प्रयोगादित्यर्थः । एवं परिष्कृत्य भाष्यस्थं हेतुं सङ्गमयति – प्रकृतेश्चेति ।।

'ಆದಿ' ಪದದ ಅರ್ಥವನ್ನು ಹೇಳುವ ಮೂಲಕ ಹೇತ್ವಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಯಸ್ಯ'' ಎಂಬುದಾಗಿ. ''ಉಪಪತ್ತೇಃ'' ಎಂಬ ಮಾತನ್ನು ''ಶಾರೀರ'' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. ಶರೀರಶಬ್ದವನ್ನು ಸ್ವರೂಪದಲ್ಲಿಯೂ ಪ್ರಯೋಗಿಸುವುದು ಕಾಣಿಸುತ್ತದೆ. ''ಪೂರ್ವಪಕ್ಷಸ್ಯ ಶರೀರಂ'' ಎಂದು ಹೇಳಿದಾಗ ಶರೀರ ಶಬ್ದಕ್ಕೆ ಸ್ವರೂಪವೆಂದಷ್ಟೇ ಅರ್ಥ. ಹೀಗೆ ಪರಿಷ್ಕರಿಸಿ ಭಾಷ್ಯದಲ್ಲಿರುವ ಹೇತುವನ್ನು ಸಮನ್ವಯ ಮಾಡುತ್ತಿದ್ದಾರೆ 'ಪ್ರಕೃತೇಶ್ಚ' ಎಂಬ ವಾಕ್ಯದಿಂದ.

भावदीपः – उपादानत्वात् प्रकृतेः उपादानोपादेययोः 'खण्डितं रूपमेवात्र विकारोऽपि विकारिणः' इत्युक्तेरभेदादिति भावः । 'यस्य दिशः शरीरम्' 'यस्यात्मा शरीरम्' इत्यादि तु ब्रह्मपक्षेऽपि न स्वरसमिति भावः।। इत्यादिनेति ।। पञ्चमे 'कारणेषु स्थितं कार्यं व्याप्तं कार्येषु कारणम्' इति गीतातात्पर्योक्तस्मृत्येत्यर्थः ।

ಪ್ರಕೃತಿಯು ಉಪಾದಾನಕಾರಣವಾಗಿದೆ. ಉಪಾದಾನ ಹಾಗೂ ಉಪಾದೇಯಗಳಿಗೆ ಅಭೇದವಿದೆಯೆಂಬುದು ''ಖಂಡಿತಂ ರೂಪಮೇವಾತ್ರ ವಿಕಾರೋಽಪಿ ವಿಕಾರಿಣಃ'' ಎಂಬ ಪ್ರಸಂಗದಲ್ಲಿ ಸಿದ್ಧವಾಗಿದೆ. ''ಯಸ್ಯ ದಿಶಃ ಶರೀರಂ' 'ಯಸ್ಯಾತ್ಮಾ ಶರೀರಂ'' ಎಂಬುದಾಗಿ ಬ್ರಹ್ಮಪಕ್ಷದಲ್ಲಿಯೂ ಸಹ ಕೂಡಿಸಬಹುದು. ಆದರೆ ಇದು ಅಸ್ವರಸವಾಗಿದೆಂದು ತಿಳಿಯಬೇಕು. ''ಇತ್ಯಾದಿನಾ'' ಎಂಬುದಕ್ಕೆ ಹೀಗರ್ಥ - ಗೀತಾತಾತ್ಪರ್ಯದ ಐದನೆಯ ಅಧ್ಯಾಯದಲ್ಲಿ ''ಕಾರಣೇಷು ಸ್ಥಿತಂ ಕಾರ್ಯಂ ವ್ಯಾಪ್ತಂ ಕಾರ್ಯೇಷು ಕಾರಣಂ'' ಎಂಬುದಾಗಿ ಕಾರಣವು ಕಾರ್ಯದಲ್ಲಿ ಇರುತ್ತದೆ ಇತ್ಯಾದಿಯಾಗಿ ಹೇಳಿದ್ದಾರೆ.

ವಿಷ್ಣುಕೃತವಾದ ತತ್ವವಿವೇಕ ಗ್ರಂಥ ಏನು ಹೇಳುತ್ತದೆ ?

भावदीपः – कार्यस्यत्वेति ।। 'खण्डितं रूपमेव' इति तत्वविवेकोक्त्या भेदस्यापि सत्त्वेन पटे तन्तव इत्यादिवदुपपत्तेरिति भावः ।। उपचारेणेति।। कार्यस्य कारणायत्तत्वात् प्रकृत्यधीनत्वेन नेयमित्यर्थः ।

''ಖಂಡಿತಂ ರೂಪಮೇವಾತ್ರ ವಿಕಾರೋಽಪಿ ವಿಕಾರಿಣಃ'' ಎಂಬುದಾಗಿ ತತ್ವವಿವೇಕದಲ್ಲಿ ಹೇಳಿರುವುದರಿಂದ ಕಾರ್ಯ ಮತ್ತು ಕಾರಣಗಳಿಗೆ ಭೇದವೂ ಸಹ ಇರುತ್ತದೆ. ಆದ್ದರಿಂದ ''ಪಟೇ ತಂತವಃ'' ಎಂಬ ಪ್ರಯೋಗದಲ್ಲಿ ಪಟ ಮತ್ತು ತಂತುಗಳಿಗೆ ಭೇದವಿದ್ದರೂ ಪಟಕ್ಕೆ, ಕಾರ್ಯಸ್ಥತ್ವವನ್ನು ಹೇಳಬಹುದು. ಅದರಂತೆ ಇಲ್ಲಿಯೂ ಸಹ ಎಂದು ತಿಳಿದುಕೊಳ್ಳಬೇಕು. ''ಉಪಚಾರೇಣ'' ಎಂದರೆ ಕಾರ್ಯವು ಕಾರಣಾಧೀನವಾದ್ದರಿಂದ ಪ್ರಕೃತ್ಯಧೀನವಾಗಿ ಕೂಡಿಸಬೇಕೆಂದರ್ಥ.

ಶಾರೀರಸೂತ್ರ ನಿರಾಕರಿಸುವ ಪೂರ್ವಪಕ್ಷ ಯಾವುದು ?

भावदीपः – एवं 'नच स्मार्तम्' इति सूत्रव्यावर्त्यमुक्त्वा 'शारीरश्च' इति सूत्रव्यावर्त्यं 'तत्तज्जीवो वा' इति भाष्योक्तं पूर्वपक्षमाह – पृथिव्यादीति।।

ಹೀಗೆ ''ನಚ ಸ್ಮಾರ್ತಮ್'' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ಹೇಳಿ ಈಗ ''ಶಾರೀರಶ್ಚ'' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ''ತತ್ತಜ್ಜೀವೋ ವಾ'' ಎಂದು ಭಾಷ್ಯದಲ್ಲಿ ಹೇಳಿರುವ ಪೂರ್ವಪಕ್ಷವನ್ನು ''ಪೃಥಿವ್ಯಾದಿ'' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ.

ಭಾಷ್ಯದಲ್ಲಿ ಪೂರ್ವಪಕ್ಷದಲ್ಲಿ ಜೀವಪಕ್ಷದಲ್ಲಿ ಏನು ಹೇಳಿಲ್ಲ ?

भावदीपः – भाष्ये प्रकृतिपक्षे सर्वात्मकत्वादिति हेतूक्तिवज्जीवपक्षे हेत्वनुक्तेरभिप्रायमाह – अतिसुघटत्वादिति भाव इति ।

ಭಾಷ್ಯದಲ್ಲಿ ಪ್ರಕೃತಿಯ ಪೂರ್ವಪಕ್ಷ ಕೋಟಿಯನ್ನು ಹೇಳಬೇಕಾದರೆ, ''ಸರ್ವಾತ್ಮಕತ್ವಾತ್'' ಎಂಬ ಹೇತುವನ್ನು ಹೇಳಿರುತ್ತಾರೆ. ಆದರೆ ಜೀವಪಕ್ಷದ ಪೂರ್ವಪಕ್ಷಕ್ಕೆ ಯಾವುದೇ ಹೇತುವನ್ನು ಹೇಳಿರುವುದಿಲ್ಲ. ಇದಕ್ಕೆ ಕಾರಣವನ್ನು ''ಅತಿಸುಘಟತ್ವಾದಿತಿ ಭಾವಃ'' ಎಂಬ ಟೀಕೆಯಿಂದ ಹೇಳಿರುತ್ತಾರೆ.

ಆದಿಪದದಿಂದ ಗ್ರಾಹ್ಯವಾದ ಶ್ರುತಿವಾಕ್ಯ ಯಾವುದು ?

ಭಾವದೀಪಃ – पृथिव्याद्यभिमानिजीवान् प्रति पृथिव्यादेः स्थूलशरीरत्वादिति भावः । आदिपदेन 'यः पृथिव्यां तिष्ठन्' 'यः पृथिव्यामन्तरो यमयति' इत्यादिर्गृह्यते ।।

ಪೃಥಿವಿಯೇ ಮೊದಲಾದ ಅಭಿಮಾನಿ ದೇವತೆಗಳಿಗೆ ಪೃಥಿವ್ಯಾದಿಗಳೇ ಸ್ಥೂಲಶರೀರವೆಂದರ್ಥ. ಆದಿಪದದಿಂದ 'ಯಃ ಪೃಥಿವ್ಯಾಂ ತಿಷ್ಠನ್ ಯಃ ಪೃಥಿವ್ಯಾಮಂತರೋ ಯಮಯತಿ'' ಇತ್ಯಾದಿ ವ್ಯಾಕ್ಯಗಳನ್ನು ಸ್ವೀಕರಿಸಬೇಕು.

'ತೇಷಾಂ' ಎಂದು ಬಹುವಚನ ಏಕೆ ?

ಭಾವದೀಪಃ – तेषामिति ।। पूर्वं जीवो वेति सूत्रभाष्यदिशा जीव इत्येकवचनोक्तावपि तत्तदभिमानिनां बहुत्वेन तेषामित्यनुवादः । एकैकस्याभिमानिनः पृथिव्याद्यनेकशरीरकत्वायोगादिति भावः ।

''ತೇಷಾಂ'' ಎಂಬ ಟೀಕಾವಾಕ್ಯದ ಅಭಿಪ್ರಾಯ ಹೀಗಿದೆ - ಹಿಂದೆ ''ಜೀವೋ ವಾ'' ಎಂಬುದಾಗಿ ಸೂತ್ರಭಾಷ್ಯದ ಪ್ರಕಾರ ಏಕವಚನವನ್ನು ಹೇಳಿದ್ದರು. ಆದರೆ ಈಗ ಅಭಿಮಾನಿ ದೇವತೆಗಳು ಬಹಳ ಮಂದಿ ಇರುವುದರಿಂದ ''ತೇಷಾಂ'' ಎಂಬುದಾಗಿ ಬಹುವಚನದಿಂದ ಅನುವಾದ ಮಾಡಿದ್ದಾರೆ. ಒಬ್ಬೊಬ್ಬ ಅಭಿಮಾನಿದೇವತೆಗಳಿಗೆ ಪೃಥಿವಿಯೇ ಮೊದಲಾದ ಅನೇಕ ಶರೀರಗಳು ಇರಲು ಸಾಧ್ಯವಿಲ್ಲವೆಂದು ಅಭಿಪ್ರಾಯ.

ಉಪಾದಾನತ್ವವು ಮೂರು ವಿಧವಾಗಿಯೂ ಬ್ರಹ್ಮನಲ್ಲಿ ಇಲ್ಲ

ಭಾವದೀಪಃ – कयापीति ।। पृथिव्याद्यात्मकत्वे तत्तद्देहत्वेन वा सिद्धान्ते वक्ष्यमाणदिशा स्मर्यमाणत्वरूपयोगेन वेत्यर्थः । तद् व्यनक्ति – तस्येति।। जन्मादिसूत्रे 'यो नः पिता' इति वाक्योक्त्या भाष्ये कर्तृत्वमेव ब्रह्मणो नोपादानत्वमित्युक्तेर्भिन्नत्वमिति भावः ।

''ಕಯಾಪಿ ವಿಧಯಾ'' ಎಂಬ ಟೀಕೆಗೆ ಹೀಗರ್ಥ - ಪೃಥಿವೀ ಮೊದಲಾದವುಗಳ ಸ್ವರೂಪದಿಂದ, ಅಥವಾ ಪೃಥಿವೀ ಮೊದಲಾದವುಗಳು ದೇಹವಾಗಿರುವುದರಿಂದ, ಅಥವಾ ಸಿದ್ಧಾಂತದಲ್ಲಿ ಮುಂದೆ ಹೇಳುವ ಪ್ರಕಾರ ಸ್ಮರ್ಯಮಾಣತ್ವರೂಪವೆಂಬ ಯೋಗದಿಂದ ವಿಷ್ಣುವಿನಲ್ಲಿ ಪೃಥಿವ್ಯಾದಿ ಶರೀರತ್ವವನ್ನು ಕೂಡಿಸಲು ಬರುವುದಿಲ್ಲವೆಂದು ಅಭಿಪ್ರಾಯ. ಅದನ್ನೇ ಸ್ಪಷ್ಟಪಡಿಸುತ್ತಿದ್ದಾರೆ ''ತಸ್ಯ'' ಎಂಬ ವಾಕ್ಯದಿಂದ. ಜನ್ಮಾಧಿಕರಣದಲ್ಲಿ ''ಯೋ ನಃ ಪಿತಾ'' ಎಂಬ ವಾಕ್ಯದ ಆಧಾರದಿಂದ ಭಾಷ್ಯದಲ್ಲಿ ಕರ್ತೃತ್ವವನ್ನೇ ಬ್ರಹ್ಮನ ಲಕ್ಷಣವೆಂದಿದ್ದಾರೆ ಹೊರತು ಉಪಾದಾನತ್ವವನ್ನು ಬ್ರಹ್ಮನ ಲಕ್ಷಣವೆಂದು ಹೇಳಿರುವುದಿಲ್ಲ. ಆದ್ದರಿಂದ ಉಪಾದಾನತ್ವವು ಕರ್ತೃತ್ವಕ್ಕಿಂತ ಭಿನ್ನವಾದ್ದರಿಂದ ವಿಷ್ಣುವಿನಲ್ಲಿ ಕೂಡಿಸಲು ಬರುವುದಿಲ್ಲವೆಂದು ತಿಳಿಯಬೇಕು.

ವಿಷ್ಣುವಿಗೆ ಚಿನ್ಮಾತ್ರ ಶರೀರತ್ವ ಹೇಳುವ ಸೂತ್ರ ಯಾವುದು ?

ಭಾವದೀಪಃ – चिच्छरीरेति ।। 'विकारत्वान्नेति चेत् तदुक्तम्' इत्यत्र 'अरूपवदेव हि' इति नये 'आह च तन्मात्रम्' इति सूत्रे च तथोक्तेरिति भावः । योगाद् रूढेर्बलवत्त्वेनेत्यपि ग्राह्यम् । एतेन 'पृथिव्यादिशरीरत्वं निरवकाशम्' इति न्यायविवरणोक्तं निरवकाशत्वं विवृतं ध्येयम् ।

'ಚಿಚ್ಛರೀರ'' ಎಂದರೆ - ಸಿದ್ಧಾಂತಿಗಳು ವಿಷ್ಣುವಿಗೆ ಚಿನ್ಮಯವಾದ ಶರೀರವನ್ನು ''ವಿಕಾರತ್ವಾನ್ನೇತಿ ಚೇತ್ತದುಕ್ತಂ'' ಮತ್ತು ''ಅರೂಪವದೇವ ಹಿ'' ಮತ್ತು ''ಆಹ ಚ ತನ್ಮಾತ್ರಂ'' ಎಂಬ ಸೂತ್ರಗಳಲ್ಲಿ ಅಂಗೀಕರಿಸಿರುತ್ತಾರೆ. ಮತ್ತು ಯೋಗಕ್ಕಿಂತ ರೂಢಿಯೇ ಪ್ರಬಲವಾಗಿರುವುದರಿಂದ ಪೃಥಿವ್ಯಾದಿ-ಶರೀರತ್ವವನ್ನು ವಿಷ್ಣುವಿನಲ್ಲಿ ಕೂಡಿಸಲು ಸಾಧ್ಯವಿಲ್ಲವೆಂಬ ಅರ್ಥವನ್ನು ಇಲ್ಲಿ ಸ್ವೀಕರಿಸಬೇಕು. ಹೀಗೆ ಹೇಳಿದ್ದರಿಂದ ''ಪೃಥಿವ್ಯಾದಿಶರೀರತ್ವಂ ನಿರವಕಾಶಂ'' ಎಂಬ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ನಿರವಕಾಶತ್ವವನ್ನೂ ವಿವರಿಸಿದಂತಾಯಿತು ಎಂದು ಅಭಿಪ್ರಾಯ.

ಭಾಷ್ಯದಲ್ಲಿ ತತ್ತಜ್ಜೀವಃ ಎಂಬ ಪ್ರಯೋಗ ಏಕೆ ?

ಭಾವದೀಪಃ – 'कथञ्चित्' स्वरूपनित्यत्वेन एव पृथिव्याद्यविदितत्वमपि 'अप्रतर्क्यमविज्ञेयम्' इत्यादिना कथञ्चिन्नेयमिति । भाष्यस्यैकवचनेन परमत इव एक जीव इति भ्रान्तिं निरस्यन्नुपसंहरति – अतो

निरवकाशलिङ्गादिति ।। प्रकृत्यादय इति ।। अत एव भाष्ये तत्तज्जीव इत्युक्तिरिति भावः ।

''ಕಥಂಚಿತ್'' ಎಂದರೆ ಸ್ವರೂಪತಃ ನಿತ್ಯವಾದ್ದರಿಂದ ಎಂದರ್ಥ. ಮತ್ತು ಪೃಥಿವ್ಯಾದ್ಯವಿದಿತತ್ವವೂ ಸಹ ''ಅಪ್ರತರ್ಕ್ಯಂ ಅವಿಜ್ಞೇಯಂ'' ಎಂಬ ವಾಕ್ಯದಂತೆ ಹೇಗಾದರೂ ಪ್ರಕೃತಿಯಲ್ಲಿ ಕೂಡಿಸಬಹುದೆಂದರ್ಥ. ಭಾಷ್ಯದಲ್ಲಿರುವ ಏಕವಚನದಿಂದ ಪರ ಮತದಲ್ಲಿ ಒಪ್ಪುವಂತೆ ಒಬ್ಬನೇ ಜೀವನು ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆಂಬ ಭ್ರಾಂತಿಯು ಬರುತ್ತದೆ. ಅದನ್ನು ನಿರಾಕರಿಸುತ್ತಾ ಪೂರ್ವಪಕ್ಷವನ್ನು ಉಪಸಂಹಾರ ಮಾಡುತ್ತಿದ್ದಾರೆ ''ಅತಃ ನಿರವಕಾಶಲಿಂಗಾತ್'' ಎಂಬ ಮಾತಿನಿಂದ. ''ಪ್ರಕೃತ್ಯಾದಯಃ'' ಎಂದು ಹೇಳಿದ್ದರಿಂದಲೇ ಭಾಷ್ಯದಲ್ಲಿ ''ತತ್ತಜ್ಜೀವಃ'' ಎಂದು ಹೇಳಿದ್ದಾರೆಂದು ತಿಳಿಯಬೇಕು.

ವಿಶೇಷವಿಚಾರ - ''ಏಷ ತ ಆತ್ಮಾಽಂತರ್ಯಾಮೀ'' ಎಂಬ ವಿಷಯ ವಾಕ್ಯದಲ್ಲಿ ಪ್ರತಿಪಾದ್ಯವಾದ ಅಂತರ್ಯಾಮಿಯು ಪ್ರಕೃತಿಯೇ ಆಗಿದೆ. ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದರೆ ಶ್ರುತಿಯಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನು ಸುಲಭವಾಗಿ ಕೂಡಿಸಬಹುದು. ಪೃಥಿವ್ಯಾದಿಗಳಿಗೆ ಉಪಾದಾನವಾದ್ದರಿಂದ ಸ್ವರೂಪ ಎಂಬರ್ಥದಲ್ಲಿ ಶರೀರಶಬ್ದವನ್ನು ಪ್ರಯೋಗಿಸುವುದು ಕಷ್ಟವಾಗುವುದಿಲ್ಲ. ಆದರೆ ದಿಕ್ ಮೊದಲಾದವುಗಳು ಅಪ್ರಾಕೃತವಾದ್ದರಿಂದ ಪ್ರಕೃತಿಗೆ ಶರೀರಗಳಾಗಿವೆ ಎಂಬ ಮಾತನ್ನು ಕೂಡಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಬ್ರಹ್ಮನು ಅಂತರ್ಯಾಮಿ ಎಂಬ ಪಕ್ಷವನ್ನು ಆಶ್ರಯಿಸಿದಾಗ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನೇ ಕೂಡಿಸಲು ಸಾಧ್ಯವಿಲ್ಲ. 'ಶೀರ್ಯಮಾಣತ್ವ' ಎಂಬ ಯೌಗಿಕಾರ್ಥವನ್ನು ಸ್ವೀಕರಿಸಲು ಹೊರಟರೆ ಅಪ್ರಾಕೃತವಾದ ದಿಗಾದಿಗಳಲ್ಲಿ ಅದೂ ಸಹ ತಪ್ಪಾಗುತ್ತದೆ. ಆದ್ದರಿಂದ ಪ್ರಕೃತಿಯನ್ನೇ ಅಂತರ್ಯಾಮಿಯೆನ್ನಬೇಕು. ದಿಕ್ ಮೊದಲಾದವನ್ನು ಶರೀರವೆಂದು ಹೇಳಿದ್ದರೆ ಆ ವಾಕ್ಯಗಳಿಗೆ ಗೌಣಾರ್ಥ ಮಾಡಬೇಕು.

ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದಾಗ ಅನೇಕ ಬಾಧಕಗಳಿಗೆ ಅವಕಾಶವಿದೆ-

ಪ್ರಶ್ನೆ - ೧. 'ಯಃ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ಆಧಾರತ್ವವು ಬಾಧಕವೋ. 'ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ನಿಯಾಮಕತ್ವವು ಬಾಧಕವೋ?

೨. ಅಥವಾ 'ಆತ್ಮಾನಂ ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಚೇತನ ನಿಯಾಮಕತ್ವವು ಬಾಧಕವೋ? ಅಥವಾ ಆತ್ಮಾವಿದಿತತ್ವವು ಬಾಧಕವೋ?.

೩. ''ಅದೃಷ್ಟೋ ದ್ರಷ್ಟಾಽಶ್ರುತಃ ಶ್ರೋತಾ ಅಮತೋ ಮಂತಾ ಅವಿಜ್ಞಾತೋ ವಿಜ್ಞಾತಾ'' ಎಂಬಲ್ಲಿ ಹೇಳಲ್ಪಟ್ಟ ದ್ರಷ್ಟೃತ್ವಾದಿಗಳು ಬಾಧಕಗಳೋ?

ಸಮಾಧಾನ - ಈ ಯಾವ ಬಾಧಕಗಳಿಗೂ ಅವಕಾಶವಿಲ್ಲ. ಏಕೆಂದರೆ ಕಾರ್ಯದಲ್ಲಿ ಕಾರಣವಿದೆಯೆಂಬ ಪ್ರಯೋಗವು ಲೋಕದಲ್ಲಿ ಕಾಣಿಸುತ್ತಿದೆ. ಪೃಥಿವಿ ಹಾಗೂ ಪ್ರಕೃತಿಗಳಿಗೆ ಕಾರ್ಯಕಾರಣ ಭಾವವಿದ್ದರೂ ಅಧಾರಾಧೇಯಭಾವದಿಂದ ವ್ಯವಹರಿಸಬಹುದು.

ಇನ್ನು 'ಪೃಥಿವೀಂ ಯಮಯತಿ' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿನಿಯಾಮಕತ್ವವು ಪ್ರಕೃತಿಯಲ್ಲಿ ಕೂಡುವುದಿಲ್ಲವೆಂದು ಹೇಳಬೇಕು. ಆದರೆ ಆತ್ಮನ ಪ್ರವೃತ್ತಿಯು ಶರೀರದ ಮೂಲಕವೇ ಆಗಬೇಕೇ ಹೊರತು ನೇರವಾಗಿ ಆಗುವುದಿಲ್ಲ. ಆದ್ದರಿಂದ ಆತ್ಮನು ಪ್ರಕೃತ್ಯಧೀನವೆಂದು ಹೇಳಬಹುದು.

'ಯಮಾತ್ಮಾ ನ ವೇದ' ಎಂಬಲ್ಲಿ ಆತ್ಮನಿಂದ ಅಂತರ್ಯಾಮಿಯು ತಿಳಿಯಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಇದನ್ನೂ ಸಹ ಪ್ರಕೃತಿಯಲ್ಲಿ ಕೂಡಿಸಬಹುದು. ಏಕೆಂದರೆ 'ಅಪ್ರತರ್ಕ್ಯಮವಿಜ್ಞೇಯಂ' ಇತ್ಯಾದಿ ವಾಕ್ಯಗಳಂತೆ ಪ್ರಕೃತಿಯನ್ನು ಸಾಕಲ್ಯೇನ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ.

ಅಂತರ್ಯಾಮಿಯಲ್ಲಿ 'ದ್ರಷ್ಟಾ ಶ್ರೋತಾ' ಇತ್ಯಾದಿಯಾಗಿ ದ್ರಷ್ಟೃತ್ವ, ಶ್ರೋತೃತ್ವಾದಿಗಳು ಕೇಳಿಸುತ್ತಿವೆ. ಇವುಗಳು ಪ್ರಾಕೃತವಾದ ಇಂದ್ರಿಯಗಳು ದರ್ಶನ ಸಾಧನವಾದ್ದರಿಂದ ಪ್ರಕೃತಿಯನ್ನು ದ್ರಷ್ಟಾಶ್ರೋತಾ ಇತ್ಯಾದಿಯಾಗಿ ಹೇಳಬಹುದು. ಏಕೆಂದರೆ ಕರಣದಲ್ಲಿ ಕರ್ತೃತ್ವದ ಪ್ರಯೋಗವನ್ನು (ಹಂತಾ ರಾಮಶರಃ ಇತ್ಯಾದಿ ಸ್ಥಳದಲ್ಲಿ) ಮಾಡುವುದು ಕಂಡಿದೆ.

ಅಥವಾ ಅಭಿಮಾನಿಯಾದ ಜೀವನಲ್ಲಿ ದ್ರಷ್ಟೃತ್ವಾದಿಗಳಿರುವುದರಿಂದ ಅಭಿಮನ್ಯಮಾನವಾದ ಪ್ರಕೃತಿಯಲ್ಲೂ ಸಹ ದ್ರಷ್ಟೃತ್ವಾದಿಗಳನ್ನು ಹೇಳಬಹುದು. ಆದ್ದರಿಂದ ಪ್ರಕೃತಿಯೇ ಅಂತರ್ಯಾಮಿಯೆಂದು ಹೇಳಿದಾಗ ಯಾವ ಅಡಚಣೆಯಿರುವುದಿಲ್ಲ.

'ಇತ್ಯಾದಿ' ಎಂಬ ಪದಕ್ಕೆ ಮೂರು ವಿಧವಾದ ಅರ್ಥ

भावदीपः – तत्र चेत्यादिभाष्यं फलपरिमितिभावेन । तत्तात्पर्यमाह **– नामृतत्वमिति ।।** 'इत्याद्यन्तर्याम्युच्यते' इति भाष्ये इत्यादीति प्रथमा सप्तम्यर्थे, तृतीयार्थे वा । 'सप्तसु प्रथमा' इति सूत्रात् । क्रियाविशेषणं वा । 'इत्यादिवाक्येषु इत्यर्थः' इति तत्त्वप्रदीपे व्याख्यातम् ।

''तत्र च'' ಇತ್ಯಾದಿ ಭಾಷ್ಯವು ಫಲಪರವಾಗಿದೆ ಎಂಬ ಅಭಿಪ್ರಾಯದಿಂದ ಅದರ ತಾತ್ಪರ್ಯವನ್ನು ''ನಾಮೃತತ್ವಂ'' ಎಂದು ಹೇಳಿದ್ದಾರೆ. ''ಇತ್ಯಾದ್ಯಂತರ್ಯಾಮ್ಯುಚ್ಯತೇ'' ಎಂಬ ಭಾಷ್ಯದಲ್ಲಿ, ''ಇತ್ಯಾದಿ'' ಎಂಬುದು ಪ್ರಥಮಾವಿಭಕ್ತಿಯಲ್ಲಿದೆ. ಇದು ಸಪ್ತಮೀ ಅಥವಾ ತೃತೀಯಾ ಅರ್ಥದಲ್ಲಿ ಇದೆಯೆಂದು ತಿಳಿಯಬೇಕು. ಏಕೆಂದರೆ ''ಸಪ್ತಸು ಪ್ರಥಮಾ'' ಎಂಬ ಸೂತ್ರದ ಆಧಾರದಿಂದ ಪ್ರಥಮಾವಿಭಕ್ತಿಯನ್ನು ಎಲ್ಲಾ ವಿಭಕ್ತ್ಯರ್ಥಗಳಲ್ಲಿ ಪ್ರಯೋಗಿಸುವುದು ತಪ್ಪಾಗುವುದಿಲ್ಲ. ''ಅಥವಾ'' ಇತ್ಯಾದಿ ಎಂಬುದನ್ನು ''ಉಚ್ಯತೇ'' ಎಂಬ ಕ್ರಿಯಾ ಪದದಲ್ಲಿ ಅನ್ವಯ ಮಾಡಬಹುದು. ''ಇತ್ಯಾದಿ ವಾಕ್ಯೇಷು ಇತ್ಯರ್ಥಃ'' ಇತ್ಯಾದಿ ವಾಕ್ಯಗಳಲ್ಲಿ ಅಂತರ್ಯಾಮಿ ಎಂಬ ಅರ್ಥದಲ್ಲಿ ಹೇಳಲಾಗಿದೆ ಎಂಬುದಾಗಿ ತತ್ವಪ್ರದೀಪದಲ್ಲಿ ವ್ಯಾಖ್ಯಾನ ಮಾಡಿರುತ್ತಾರೆ.

ಬೃಹದ್ಭಾಷ್ಯದಲ್ಲಿ ಹೇಳಿದ ಅಂತರತ್ವ ಸ್ವರೂಪವೇನು ?

भावदीपः – सूत्रक्रममनुरुद्ध्य व्युत्क्रमेण भाष्यं व्याचष्टे – अन्तर्यामीति।। तद्धर्मेत्यत्र तच्छब्दार्थः – अन्तर्यामिण इति ।। अन्तरत्वेति ।। 'बाह्यापेक्षां विना यस्तु रमते सोऽन्तरः स्मृतः । अतिप्रियत्वाच्च हरेरन्तरत्वमुदाहृतम् ।।' इति बृहद्भाष्योक्तरूपान्तरत्वेत्यर्थः ।

ಸೂತ್ರಕ್ರಮವನ್ನು ಅನುಸರಿಸಿ ಸ್ವಲ್ಪ ವ್ಯತ್ಯಾಸ ಮಾಡಿ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಅಂತರ್ಯಾಮಿ'' ಎಂದು. ''ತದ್ಧರ್ಮ'' ಎಂಬಲ್ಲಿರುವ ''ತತ್'' ಶಬ್ದದ ಅಥವನ್ನು ''ಅಂತರ್ಯಾಮಿಣಃ'' ಎಂಬುದಾಗಿ ಹೇಳಿರುತ್ತಾರೆ. ''ಅಂತರತ್ವ'' ಎಂದರೆ ''ಬಾಹ್ಯಾಪೇಕ್ಷಾಂ ವಿನಾ ಯಸ್ತು ರಮತೇ ಸೋಽಂತರಃ ಸ್ಮೃತಃ । ಅತಿಪ್ರಿಯತ್ವಾಚ್ಚ ಹರೇರಂತರತ್ವಮುದಾಹೃತಂ'' ಬಾಹ್ಯಪದಾರ್ಥಗಳ ಅಪೇಕ್ಷವಿಲ್ಲದೆ ಯಾರು ಸ್ವರಮಣನಾಗಿದ್ದಾನೋ, ಮತ್ತು ಅತ್ಯಂತ

ಪ್ರಿಯನಾಗಿದ್ದಾನೋ ಅಂತಹ ಹರಿಯಲ್ಲಿಯೇ ಅಂತರತ್ವವು ಸಿದ್ಧವಾಗುತ್ತದೆ'' ಎಂದು ಬೃಹದ್ಭಾಷ್ಯದಲ್ಲಿ ಹೇಳಿದ್ದಾರೆ. ಅಂತಹ ಅಂತರತ್ವವನ್ನು ಇಲ್ಲಿ ವಿವಕ್ಷಿಸಬೇಕು.

'ಅಂತರ' ಶಬ್ದದ ಅರ್ಥವೇನು ?

भावदीपः – एतच्च 'यः पृथिव्यामन्तरो यमयति' इति वाक्योक्तमन्तरत्वं ज्ञेयम् । नतु 'पृथिव्या अन्तरम्' इत्युक्तान्तरत्वम् तस्य 'अन्तरो विविक्तः' इति भेदरूपार्थत्वस्य वक्ष्यमाणत्वात् । भाष्ये 'पृथिव्या अन्तरः' इति प्रतीकमुखेन 'यः पृथिवीमन्तरः' इति वाक्यमेवाभिप्रेतम् ।

ಈ ವ್ಯಾಖ್ಯಾನವನ್ನು ''ಯಃ ಪೃಥಿವೀಮಂತರೋ ಯಮಯತಿ''ಎಂಬ ವಾಕ್ಯದಲ್ಲಿ ಕೇಳಿಸುತ್ತಿರುವ ಅಂತರಶಬ್ದ ಅರ್ಥವಾಗಿದೆಯೆಂದು ತಿಳಿಯಬೇಕೇ ಹೊರತು ''ಪೃಥಿವ್ಯಾ ಅಂತರಂ'' ಎಂಬಲ್ಲಿ ಇರುವ ಅಂತರ ಶಬ್ದದ ಅರ್ಥವಲ್ಲ. ಆ ಅಂತರತ್ವಕ್ಕೆ ಭೇದ ಎಂದರ್ಥ ಎಂದು ಮುಂದೆ ಹೇಳುತ್ತೇವೆ. ಭಾಷ್ಯದಲ್ಲಿ ''ಪೃಥಿವ್ಯಾ ಅಂತರೋಂ೦ತಸ್ಥಃ'' ಎಂಬ ಪ್ರತೀಕವನ್ನು ಗ್ರಹಣ ಮಾಡುವ ಮೂಲಕ ''ಯಃ ಪೃಥಿವೀಮಂತರಃ'' ಎಂಬ ವಾಕ್ಯವನ್ನೇ ವ್ಯಾಖ್ಯಾನ ಮಾಡುತ್ತಾರೆಂದು ತಿಳಿಯಬೇಕು.

ವಿಶೇಷವಿಚಾರ - ಪೃಥಿವ್ಯಾದಿಗಳು ಜಡವಾದ್ದರಿಂದ ಜ್ಞಾನದ ಪ್ರಸಕ್ತಿಯೇ ಬರುವುದಿಲ್ಲ. ಅವುಗಳಲ್ಲಿ ತಿಳುವಳಿಕೆಯನ್ನು ನಿಷೇಧ ಮಾಡಿದರೆ ಅಪ್ರಸಕ್ತನಿಷೇಧವಾಗುತ್ತದೆ. ಆದ್ದರಿಂದ ಪೃಥಿವ್ಯಾದಿ ಶಬ್ದಗಳಿಗೆ ವಾಚ್ಯತ್ವೇನ ತದಭಿಮಾನಿ ಚೇತನರನ್ನೇ ವಿವಕ್ಷಿಸಬೇಕು. ಅಂತಹ ಚೇತನರಿಂದ ಸಮಗ್ರವಾಗಿ ತಿಳಿಯಲ್ಪಡದ ವಸ್ತು ಎಂದರೆ ಈಶ್ವರನೇ ಹೊರತು ಪ್ರಕೃತ್ಯಾದಿಗಳಲ್ಲ.

'ಯಂ ಪೃಥಿವೀ ನ ವೇದ'' ಇತ್ಯಾದಿ ವಾಕ್ಯಗಳಲ್ಲಿ ಪೃಥಿವೀ ಮೊದಲಾದ ಶಬ್ದಗಳು ಜಡ ಪ್ರತಿಪಾದಕವಾದರೆ 'ಯಂ' ಎಂಬುದಾಗಿ ವಿಷಯನಿರ್ದೇಶ ಮಾಡಿದ್ದು ವ್ಯರ್ಥವಾಗುತ್ತದೆ. ಮತ್ತು ''ಯಮಾತ್ಮಾ ನ ವೇದ'' ಎಂಬುದಾಗಿ ಚೇತನರಿಂದ ತಿಳಿಯಲು ಸಾಧ್ಯವಿಲ್ಲವೆಂದು ಹೇಳಿದ್ದೂ ಸಹ ಅನುಪಪನ್ನವಾಗುತ್ತದೆ. ಮತ್ತು ಜಡದಲ್ಲಿ ಅಪ್ರಸಕ್ತವಾದ ತಿಳುವಳಿಕೆಯನ್ನು ನಿಷೇಧಿಸಿದಂತಾಗುತ್ತದೆ.

ಭಾಷ್ಯದಲ್ಲಿ ಪಾಠಾಂತರ

ಭಾವದೀಪಃ – यद्वा 'पृथिव्या अन्तरः' इति पृथिव्या अन्तरोऽन्तःस्थः इत्यन्तःस्थरूपान्तत्वस्येत्यर्थः । क्वचित् तदन्तःस्थत्वाख्येति पाठः । 'अन्तःस्थो देवतानां च न विदुर्यं च देवताः' इति काण्वभाष्योक्तेः । 'अन्तरो विविक्तः' इत्युक्तिस्तु अर्थान्तरमुपेत्येति ज्ञेयम् ।

ಅಥವಾ ''ಪೃಥಿವ್ಯಾ ಅಂತರಃ'' ಎಂಬ ವಾಕ್ಯದಲ್ಲಿ ಪೃಥಿವಿಯ ಅಂತರ್ಯಾಮಿಯಲ್ಲಿ ಅಂತಃಸ್ಥನಾದವನನ್ನು ಎಂಬುದಾಗಿ ಅಂತಃಸ್ಥತ್ವರೂಪ ಅಂತರತ್ವವೆಂಬ ಅರ್ಥವನ್ನು ವಿವಕ್ಷಿಸಬಹುದು. ಕೆಲವಡೆ ''ಅಂತಃಸ್ಥತ್ವಾಖ್ಯಾ'' ಎಂಬ ಪಾಠವಿದೆ. ''ಅಂತಸ್ಥೋ ದೇವತಾನಾಂ ಚ ನ ವಿದುರ್ಯಂ ಚ ದೇವತಾ'' ಎಂದು ಕಾಣ್ವಭಾಷ್ಯವು ಈ ವಿಷಯದಲ್ಲಿ ಸಂವಾದಿಯಾಗಿದೆ. ''ಅಂತರೋ ವಿವಿಕ್ತಃ'' ಎಂಬುದಾಗಿ ಅಂತರ ಶಬ್ದಕ್ಕೆ ಅರ್ಥವನ್ನು ಹೇಳಿರುವುದು ಮತ್ತೊಂದು ಅರ್ಥವನ್ನು ವಿವಕ್ಷಿಸಿ ಹೇಳಿದ್ದಾರೆಂದು ತಿಳಿಯಬೇಕು.

ವಿಶೇಷವಿಚಾರ - ಉಪನಿಷತ್ತಿನಲ್ಲಿ ''ದಿವ್ಯೋ ದೇವ ಏಕೋ ನಾರಾಯಣಃ'' ಎಂದು ಪ್ರಾರಂಭವಾಗಿ ''ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮಂತರೇ ಸಂಚರನ್ ಯಂ ಪೃಥಿವೀ ನ ವೇದ'' ಯಾರಿಗೆ ಪೃಥಿವಿಯು ಶರೀರವಾಗಿದೆಯೋ? ಯಾರು ಪೃಥಿವಿಯಲ್ಲಿ ಸಂಚರಿಸುತ್ತಾನೋ? ಯಾರನ್ನು ಪೃಥಿವಿಯಲ್ಲಿ ತಿಳಿಯುವುದಿಲ್ಲವೋ?'' ಇತ್ಯಾದಿಯಾಗಿ ಅಂತರ್ಯಾಮಿಧರ್ಮಗಳನ್ನು ಹೇಳಿ ''ಏಷ ಸರ್ವಭೂತಾಂತರಾತ್ಮಾಽಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ'' ಇವನು ಸಕಲ ಭೂತಗಳ ಅಂತರಾತ್ಮನು, ನಿರ್ದೋಷಿಯು, ದಿವ್ಯಸ್ವರೂಪವುಳ್ಳವನು, ಕ್ರೀಡಾದಿಗುಣವಿಶಿಷ್ಟನು ಹಾಗೂ ಅದ್ವಿತೀಯನು ನಾರಾಯಣನೇ ಆಗಿದ್ದಾನೆಂದು ಉಪಸಂಹಾರದಲ್ಲಿ ಹೇಳಲಾಗಿದೆ. ಈ ಸಮಾಖ್ಯಾಶ್ರುತಿಯ ಆಧಾರದಿಂದ ನಾರಾಯಣನೇ ಸರ್ವಾಂತರ್ಯಾಮಿ ಎಂದು ನಿರ್ಣಯವಾಗುತ್ತದೆ. ಹಾಗೂ ಪೂರ್ವಪಕ್ಷಕ್ಕೆ ಪ್ರಬಲ ಹೇತುವಾಗಿರುವ ಪೃಥಿವ್ಯಾದಿ ಶರೀರತ್ವವೂ ಸಹ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ.

ನಿಷ್ಕೃಷ್ಟವಾದ ಸೂತ್ರಾರ್ಥ ಏನು ?

ಭಾವದೀಪಃ – तद्धर्मेति तच्छब्दस्यार्थान्तरमाह – विष्णुधर्मत्वादिति ।। एतेन तस्य विष्णोरविदितत्वादिधर्मस्य तत्रान्तर्यामिणि व्यपदेशादिति

सूत्रार्थो दर्शितः । 'अधिदैवादिषु' इत्युक्तेरुपयोगं व्यावर्त्यपूर्वमाह – नचेति।।

''ತದ್ಧರ್ಮ'' ಎಂಬಲ್ಲಿರುವ ''ತತ್'' ಶಬ್ದಕ್ಕೆ ಮತ್ತೊಂದು ಅರ್ಥವನ್ನು ''ವಿಷ್ಣುಧರ್ಮತ್ವಾತ್'' ಎಂಬುದಾಗಿ ಹೇಳುತ್ತಿದ್ದಾರೆ. ಹೀಗೆ ಹೇಳಿದ್ದರಿಂದ ತತ್ = ವಿಷ್ಣುವಿನ, ಧರ್ಮ = ಅವಿದಿತತ್ವಾದಿ ಧರ್ಮಗಳನ್ನು, ತತ್ರ = ಅಂತರ್ಯಾಮಿಯಲ್ಲಿ, ವ್ಯಪದೇಶಾತ್ = ಹೇಳಿದ್ದಾರೆ ಎಂದು ಸೂತ್ರಾರ್ಥವನ್ನು ಹೇಳಿದಂತಾಗುತ್ತದೆ. ''ಅಧಿದೈವಾದಿಷು'' ಎಂದು ಹೇಳಿದ್ದಕ್ಕೆ ಪ್ರಯೋಜನವನ್ನು ಪೂರ್ವಪಕ್ಷವನ್ನು ನಿರಾಕರಿಸುವ ಮೂಲಕವಾಗಿ ತೋರಿಸುತ್ತಿದ್ದಾರೆ ''ನಚ '' ಇತ್ಯಾದಿ ವಾಕ್ಯಗಳಿಂದ.

ಸಕಲದೇವಾವೇದ್ಯತ್ವವೂ ವಿಷ್ಣುಲಿಂಗ

भावदीपः – अधिदैवत्वेनेति ।। देवैः साकल्येनावेद्यत्वं विष्णोरेव लिङ्गमित्यर्थः । जडत्वेऽप्रसक्तनिषेधः स्यादित्यर्थः । 'परमं तं नाप श्रोत्रादिना' इति ज्योतिर्नये व्याख्यातत्वान्नात्र श्रुतिं व्याचख्यौ । 'स योऽतः' इति श्रुत्यर्थस्तूक्तोऽस्माभिर्विवक्षितगुणेत्यत्र।

''ಅಧಿದೈವತ್ವೇನ'' ಎಂದರೆ ದೇವತೆಗಳಿಂದ ಸಂಪೂರ್ಣವಾಗಿ ಹೇಳಲಾಗದ ವಸ್ತುವೆಂದರೆ ವಿಷ್ಣುವೇ ಆಗಿದ್ದಾನೆ ಇಂತಹ ಅವೇದ್ಯತ್ವವು ವಿಷ್ಣುವಿನ ಲಿಂಗವಾಗಿದೆಯೆಂದರ್ಥ. ಒಂದು ವೇಳೆ ಜಡವು ಜ್ಞಾನಕ್ಕೆ ವಿಷಯವಾಗದ ಕಾರಣ ಅವಿದಿತತ್ವವನ್ನು ಹೇಳಬಹುದೆಂದರೆ ಅಪ್ರಸಕ್ತನಿಷೇಧ ಮಾಡಿದಂತಾಗುತ್ತದೆ. ''ಪರಂ ತಂ ನಾಪ ಶ್ರೋತ್ರಾದಿನಾ'' - ಶ್ರೋತ್ರಾದಿ ಇಂದ್ರಿಯಗಳಿಂದ ವಿಷ್ಣುವನ್ನು ತಿಳಿಯಲಾಗುವುದಿಲ್ಲ ಎಂದು ಶ್ರುತಿಯ ಅರ್ಥವನ್ನು ಜ್ಯೋತಿರಧಿಕರಣದಲ್ಲಿ ವ್ಯಾಖ್ಯಾನ ಮಾಡಿದ್ದರಿಂದ ಪ್ರಕೃತ ಅದನ್ನು ವ್ಯಾಖ್ಯಾನಿಸಿಲ್ಲ. ''ಸ ಯೋಽತಃ'' ಎಂಬ ಶ್ರುತಿಯ ಅರ್ಥವನ್ನು ''ವಿವಕ್ಷಿತಗುಣೋಪಪತ್ತೇಶ್ಚ'' ಎಂಬ ಸೂತ್ರದ ವ್ಯಾಖ್ಯಾನದ ಸಂದರ್ಭದಲ್ಲಿ ನಾವೇ ಹೇಳಿರುತ್ತೇವೆ.

ಪ್ರಕರಣಾನುಸಾರವಾಗಿ ಆದಿತ್ಯಾದಿಗಳನ್ನು ಜಡವಾಗಿ ಹಾಗೂ ಅಂತರ್ಯಾಮಿಪರವಾಗಿ ಅರ್ಥೈಸಬೇಕು

भावदीपः – चक्षुरादीनामिति ।। पूर्वत्र '' य एषोऽन्तरक्षिणि'' इत्यादावक्ष्यादित्यचन्द्रविद्युतां जडत्वेऽपि अत्राधिदैवाध्यात्मादिप्रकरणेषु

उक्तस्य पृथिव्यादिचक्षुरादिदेवतास्थस्यैव । तत्र पूर्वत्राक्ष्यादावुक्तेरमृतत्व-मुखेन पूर्वक्षेपसमाध्यविरोध इत्यर्थः । श्रुतौ लिङ्गस्यान्ययोगव्यवच्छेदानुक्तेः स्वयमाह – नचेति ।।

ಹಿಂದೆ "ಯೇ ಏಷೋऽಂತರಕ್ಷಣಿ" ಎಂಬಲ್ಲಿ ಅಕ್ಷಿ, ಆದಿತ್ಯ, ಚಂದ್ರ, ವಿದ್ಯುತ್ ಮೊದಲಾದವುಗಳು ಜಡವಾಗಿದ್ದರೂ ಅಧಿದೈವ, ಅಧ್ಯಾತ್ಮ ಪ್ರಕರಣದಲ್ಲಿ ಹೇಳಲ್ಪಟ್ಟ ವ್ಯಕ್ತಿಯು ಪೃಥಿವೀ, ಚಕ್ಷುರಿಂದ್ರಿಯ ಮೊದಲಾದ ದೇವತೆಗಳ ಅಂತರ್ಯಾಮಿಯೇ ಆಗಿದ್ದಾನೆಂದು ತಿಳಿಯಬೇಕು. ಹಾಗಾದರೆ ಹಿಂದಿನ ಮಾತಿನಿಂದ ವಿರೋಧ ಬರುತ್ತದೆಂದು ಶಂಕಿಸಬಾರದು. ಹಿಂದೆ ಅಕ್ಷ್ಯಾದಿಗಳು ಪ್ರಸಕ್ತವಾದಾಗ ಅಮೃತತ್ವ ಧರ್ಮದಿಂದ ಸಮಾಧಾನ ನೀಡಲಾಯಿತು. ಈಗ ದೇವತೆಗಳಲ್ಲಿ ವಿಷ್ಣು ಇದ್ದಾನೆಂದು ಸಮಾಧಾನ ಹೇಳುತ್ತಿದ್ದಾರೆ. ಶ್ರುತಿಯಲ್ಲಿ ಲಿಂಗಕ್ಕೆ ಅನ್ಯಯೋಗವ್ಯವಚ್ಛೇದವನ್ನು ಹೇಳದ ಕಾರಣ "ನಚ" ಎಂಬ ವಾಕ್ಯದಿಂದ ಸ್ವತಃ ತಾವೇ ಹೇಳುತ್ತಿದ್ದಾರೆ.

ಅಪ್ರತರ್ಕ್ಯಾದಿ ಶಬ್ದಗಳ ಆಂತರ್ಯವೇನು ?

भावदीपः – अप्रतर्क्यमविज्ञेयमित्यादि तु दुर्ज्ञानत्वादिपरम् ।

"सुक्ष्मत्वादप्रसिद्धत्वाद् गुणबाहुल्यतस्तथा ।
अनिर्देश्यौ तथाऽव्यक्तावचिन्त्यौ श्रीश्च माधव"

इति द्वादशे गीतातात्पर्योक्तेः । "श्रुत्वाऽऽत्मानं वेद न चैव कश्चित्"इति तु व्याख्यातं 'सर्वत्र प्रसिद्धे' इत्यादिनय इति भावः ।

"ಅಪ್ರತರ್ಕ್ಯಮವಿಜ್ಞೇಯಂ" ಇತ್ಯಾದಿ ವಾಕ್ಯಗಳಿಗೆ ತಿಳಿಯಲು ಸಾಧ್ಯವಿಲ್ಲವೆಂದಷ್ಟೇ ಅರ್ಥವನ್ನು ಮಾಡಬೇಕು. ಏಕೆಂದರೆ

"ಸೂಕ್ಷ್ಮತ್ವಾದಪ್ರಸಿದ್ಧತ್ವಾದ್ ಗುಣಬಾಹುಲ್ಯತಸ್ತಥಾ।
ಅನಿರ್ದೇಶ್ಯೌ ತಥಾऽವ್ಯಕ್ತಾವಚಿಂತ್ಯೌ ಶ್ರೀಶ್ಚ ಮಾಧವಃ"

ಸೂಕ್ಷ್ಮನೂ, ಅಪ್ರಸಿದ್ಧನೂ, ಅನೇಕ ಗುಣಗಳಿಂದ ಕೂಡಿದವನೂ ಆಗಿರುವುದರಿಂದ ಅನಿರ್ದೇಶ್ಯನಾದವನು ಅವ್ಯಕ್ತನೂ ಅಚಿಂತ್ಯನೂ ಆಗಿದ್ದಾನೆಂದು ತಿಳಿಯಬೇಕು. ಲಕ್ಷ್ಮೀದೇವಿ ಮತ್ತು

ಮಾಧವನು ಸೂಕ್ಷ್ಮರು, ಅಪ್ರಸಿದ್ಧರು, ಬಹುಗುಣಗಳಿಂದ ಕೂಡಿದವರು, ಅನಿರ್ದೇಶ್ಯರು, ಅವ್ಯಕ್ತರು, ಅಚಿಂತ್ಯರು ಆಗಿದ್ದಾರೆಂದು ಗೀತಾತಾತ್ಪರ್ಯದ ಹನ್ನೆರಡನೇ ಅಧ್ಯಾಯದಲ್ಲಿ ಹೇಳಿದ್ದಾರೆ. ಅದರ ಪ್ರಕಾರ ಇಲ್ಲಿ ವ್ಯಾಖ್ಯಾನಿಸಬೇಕು. ''ಶ್ರುತ್ವಾऽऽತ್ಮಾನಂ ವೇದ ನ ಚೈವ ಕಶ್ಚಿತ್'' ಎಂಬ ಶ್ಲೋಕಕ್ಕೆ ''ಸರ್ವತ್ರ ಪ್ರಸಿದ್ಧೋಪದೇಶಾತ್'' ಎಂಬ ಸೂತ್ರದಲ್ಲಿ ವ್ಯಾಖ್ಯಾನಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಅಂತರ ಶಬ್ದಕ್ಕೆ ಎರಡನೆಯ ಮಜಲಿನ ಅರ್ಥ

भावदीपः – अन्तरत्वं च बाह्यापेक्षां विना रममाणत्वरुपं वा । पृथिव्यादि देवतान्तःस्थत्वरूपं वा । द्वेधापि विष्णोरन्यत्रानवकाशमिति ''विवक्षित-गुणोपपत्तेः'' इत्यत्रोक्तप्रायमिति भावः ।।१८।।

ಅಂತರತ್ವವನ್ನು ಬಾಹ್ಯಾಪೇಕ್ಷೆ ಇಲ್ಲದೆ ಕ್ರೀಡಿಸುವವನು ಎಂಬರ್ಥದಲ್ಲಿ ಕೂಡಿಸಬೇಕು. ಅಥವಾ ಪೃಥಿವ್ಯಾದಿದೇವತೆಗಳಲ್ಲಿ ನೆಲಿಸಿದ್ದಾನೆಂದು ತಿಳಿಯಬೇಕು. ಎರಡೂ ಅರ್ಥಗಳಲ್ಲಿ ಭಗವಂತನನ್ನು ಬಿಟ್ಟು ಬೇರೆ ಕಡೆ ಅಂತರತ್ವವು ಉಪಪನ್ನವಾಗುವುದಿಲ್ಲ. ಇದನ್ನು ''ವಿವಕ್ಷಿತಗುಣೋಪಪತ್ತೇಃ'' ಎಂಬ ಸೂತ್ರದಲ್ಲಿ ಹೇಳಲಾಗಿದೆ. ಆದ್ದರಿಂದ ಇಲ್ಲಿ ಪುನಃ ಹೇಳುವುದಿಲ್ಲ ಎಂದಭಿಪ್ರಾಯ.

ಬ್ರಹ್ಮಸೂತ್ರ

'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। नच स्मार्तमतद्धर्माभिलापात् ।। १९ ।।

ಸೂತ್ರಾರ್ಥ - ಕಾಪಿಲಸ್ಮೃತಿಯಲ್ಲಿ ತ್ರಿಗುಣತ್ವವೆಂಬ ಪ್ರಕೃತಿಯ ಧರ್ಮವನ್ನಾಗಲೀ, ಸಂಸಾರಿತ್ವವೆಂಬಜೀವನಧರ್ಮವನ್ನಾಗಲೀಹೇಳದಕಾರಣಪ್ರಕೃತಿಗೆಅಂತರ್ಯಾಮಿತ್ವವು ಕೂಡುವುದಿಲ್ಲ.

ಸಮುಚ್ಚಯಾರ್ಥದಲ್ಲಿ ಚ ಶಬ್ದವಿದೆ. ಸ್ಮಾರ್ತಮ್ = ಕಾಪಿಲಸ್ಮೃತಿಯಲ್ಲಿ ಹೇಳಲ್ಪಟ್ಟ, ಪ್ರಧಾನವಾಗಲೀ ಜೀವವಾಗಲೀ ಅಂತರ್ಯಾಮಿಯಾಗುವುದಿಲ್ಲ. ಏಕೆಂದರೆ ಅತದ್ಧರ್ಮಾಭಿಲಾಪಾತ್ = ಪ್ರಧಾನ, ಜೀವ ಮೊದಲಾದವುಗಳ ಧರ್ಮಗಳನ್ನು ಅಂದರೆ ತ್ರಿಗುಣತ್ವ, ಸಂಸಾರಿತ್ವ ಮೊದಲಾದವುಗಳನ್ನು ಹೇಳಿರುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಕಾಪಿಲಸ್ಮೃತಿಯಲ್ಲಿ ಯಾರು ಪ್ರಸಕ್ತರು ?

ब्रह्मसूत्रभाष्यम् – त्रिगुणत्वादिप्रधानधर्मानुक्तेर्न स्मृत्युक्तं प्रधानमन्तर्यामी ॥१९॥

ಅನುವಾದ - ಸತ್ವ, ರಜಸ್ಸು, ತಮಸ್ಸು ಮೊದಲಾದ ಗುಣಗಳ ಸ್ವರೂಪವನ್ನು ಹೊಂದಿದ ಪ್ರಕೃತಿಯ ಯಾವುದೇ ಧರ್ಮಗಳನ್ನು ಇಲ್ಲಿ ಹೇಳಿರುವುದಿಲ್ಲ. ಆದ್ದರಿಂದ ಕಾಪಿಲಸ್ಮೃತಿಯಲ್ಲಿ ಹೇಳಲ್ಪಟ್ಟ ಪ್ರಕೃತಿಯು ಅಂತರ್ಯಾಮಿಯು ಆಗುವುದಿಲ್ಲ.

ಪ್ರತಿಪದಾರ್ಥ - ಹಿಂದೆ ನಿರವಕಾಶಲಿಂಗದಿಂದ ವಿಷ್ಣು ಅಂತರ್ಯಾಮಿಯಾಗಿದ್ದಾನೆಂಬುದನ್ನು ಸಮರ್ಥಿಸಿದರು. ಈಗ ಪ್ರಕೃತ್ಯಾದಿಗಳೇ ಅಂತರ್ಯಾಮಿಯಾಗಬಹುದಲ್ಲವೇ? ಎಂಬ ಪೂರ್ವಪಕ್ಷಿ ಮಾಡಿದ ಆಕ್ಷೇಪವನ್ನು ನಿರಾಕರಿಸುತ್ತಿದ್ದಾರೆ.

ತ್ರಿಗುಣತ್ವ = ಸತ್ವ ರಜಸ್ಸು ತಮಸ್ಸು ಎಂಬ ಮೂರು ಗುಣಗಳಿಂದ ಕೂಡಿರುವಿಕೆಯೇ, ಆದಿ = ಮೊದಲಾದ, ಪ್ರಧಾನ = ಪ್ರಕೃತಿಯ, ಧರ್ಮ = ಯಾವುದೇ ಧರ್ಮಗಳನ್ನು, ಅನುಕ್ತೇಃ = ಅಂತರ್ಯಾಮಿಯಲ್ಲಿ ಹೇಳದ ಕಾರಣ, ಸ್ಮೃತ್ಯುಕ್ತಂ = ಕಾಪಿಲಸ್ಮೃತಿಯಲ್ಲಿ ಹೇಳಲ್ಪಟ್ಟ, ಪ್ರಧಾನಂ = ಪ್ರಕೃತಿಯು, ನ ಅಂತರ್ಯಾಮೀ = ಅಂತರ್ಯಾಮಿ ಆಗುವುದಿಲ್ಲ.

ತತ್ವಪ್ರದೀಪ

ಪ್ರಕೃತಿಯು ಅಂತರ್ಯಾಮಿ ಅಲ್ಲವೆನ್ನಲು ಕಾರಣ

तत्वप्रदीपः – ''नच स्मार्तमतद्धर्माभिलापात्'' ॥ त्रिगुणत्वजडत्वाद्यभिलापाभावान्न प्रधानमत्रोक्तम् । कपिलस्मरणमात्रपरिकल्पितं न श्रुतियुक्त्युपेतमिति 'स्मृत्युक्तम्' इत्युक्तम् । आत्मत्वामृतत्वादृष्टत्वद्रष्टृत्वाद्यतद्धर्माभिलापाच्च ॥छ॥

'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬ ಸೂತ್ರದಲ್ಲಿ ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳ ಬಗ್ಗೆ ಮತ್ತು ಜಡತ್ವ ಎಂಬುದರ ಬಗ್ಗೆ ಹೇಳಿಲ್ಲವಾದ್ದರಿಂದ ಪ್ರಕೃತಿಯು ಪ್ರತಿಪಾದ್ಯವಾಗುವುದಿಲ್ಲ. ನಿರೀಶ್ವರಸಾಂಖ್ಯಮತ ಪ್ರವರ್ತಕನಾದ ಕಪಿಲೋಕ್ತವಾದ-ಸ್ಮೃತಿಯಷ್ಟೇ ಪ್ರಕೃತಿಪರವಾಗಿದೆ ಹೊರತು, ಶ್ರುತಿಯುಕ್ತಿಗಳ ಆಧಾರದಿಂದ ಪ್ರಕೃತಿಯು ಪ್ರತಿಪಾದ್ಯ ಎಂದು ನಿರ್ಣಯವಾಗುವುದಿಲ್ಲ. ಇದನ್ನು ತಿಳಿಸುವುದಕ್ಕಾಗಿ ಭಾಷ್ಯದಲ್ಲಿ 'ಸ್ಮೃತ್ಯುಕ್ತಮ್' ಎಂದು ಹೇಳಿದ್ದಾರೆ. ಅತೃತ್ವ, ಅಮೃತತ್ವ, ಅದೃಷ್ಟತ್ವ, ದೃಷ್ಟತ್ವ ಇವೆಲ್ಲವೂ ಪರಮಾತ್ಮನ ಅಸಾಧಾರಣಧರ್ಮಗಳೇ ಆಗಿವೆ ಹೊರತು, ಪ್ರಕೃತಿ ಧರ್ಮಗಳು ಎಂದು ಹೇಳಲು ಸಾಧ್ಯವಿಲ್ಲ.

ತತ್ವಪ್ರಕಾಶಿಕಾ

ಪ್ರಕೃತಿಗೆ ಅಂತರ್ಯಾಮಿತ್ವವನ್ನು ಎಲ್ಲಿ ನಿರಾಕರಿಸಿದ್ದಾರೆ ?

तत्वप्रकाशिका – ।। नच स्मार्तमतद्धर्माभिलापात् ।। १९ ।।

एवं निरवकाशलिङ्गेन विष्णोरन्तर्यामित्वं समर्थ्य, यदुक्तं प्रकृतेरन्तर्यामित्वमिति तदपाकुर्वत्सूत्रमुपन्यस्य व्याचष्टे – न चेति ।।

ಇಲ್ಲಿಯ ತನಕ ಅವಿದಿತತ್ವವೇ ಮೊದಲಾದ ನಿರವಕಾಶಲಿಂಗಗಳಿಂದ ವಿಷ್ಣುವಿಗೆ ಅಂತರ್ಯಾಮಿತ್ವವನ್ನು ಸಮರ್ಥಿಸಿದ್ದಾಯಿತು. ಪ್ರಕೃತ ಪ್ರಕೃತಿಯು ಅಂತರ್ಯಾಮಿಯಾಗಿದೆ ಎಂಬ ಹಿಂದೆ ಹೇಳಿದ ಪೂರ್ವಪಕ್ಷವನ್ನು ನಿರಾಕರಿಸುವ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. ''ನಚ'' ಇತ್ಯಾದಿಯಾಗಿ.

ಸ್ಮಾರ್ತ ಶಬ್ದದ ಅರ್ಥವೇನು ?

तत्वप्रकाशिका – स्मार्तं = कापिलस्मृतौ पृथिव्याद्यात्मकतयोक्तं प्रधानं नान्तर्यामि अविदितत्वाद्यनन्यथासिद्धविष्णुधर्मवत् । त्रिगुणत्वोपादानत्वादि-प्रधानधर्मोक्त्यभावादित्यर्थः ।

''ಸ್ಮಾರ್ತ೦'' ಎಂಬ ಸೂತ್ರದಲ್ಲಿರುವ ಪದಕ್ಕೆ 'ಕಾಪಿಲಸ್ಮೃತಿಯಲ್ಲಿ ಹೇಳಲ್ಪಟ್ಟ ಎಂದರ್ಥ. ಪೃಥಿವ್ಯಾದಿಗಳ ಸ್ವರೂಪವಾಗಿದೆ ಎಂದು ಮೇಲ್ನೋಟಕ್ಕೆ ಕಾಣುವ ಪ್ರಧಾನವು ಅಂತರ್ಯಾಮಿ ಆಗುವುದಿಲ್ಲ. ಏಕೆಂದರೆ ಬೇರೆ ಎಲ್ಲೂ ಉಪಪನ್ನವಾಗದ 'ಅವಿದಿತತ್ವ' ಎಂಬ ಧರ್ಮವನ್ನು ಅಂತರ್ಯಾಮಿಯಾದ ವಿಷ್ಣುವಿನಲ್ಲಿ ಶ್ರುತಿಯು ಹೇಗೆ ಹೇಳಿದೆಯೋ ಅದರಂತೆ ಕೇವಲ ಪ್ರಕೃತಿಯಲ್ಲೇ ಪ್ರಸಿದ್ಧವಾದ ತ್ರಿಗುಣತ್ವ ಅಥವಾ ವಿಶ್ವೋಪಾದಾನತ್ವ ಮೊದಲಾದ ಧರ್ಮಗಳನ್ನು ಆ ಪ್ರಕರಣದಲ್ಲಿ ಶ್ರುತಿಯು ಹೇಳುತ್ತಿಲ್ಲ. ಆದ್ದರಿಂದ ಪ್ರಕೃತಿಯು ಅಂತರ್ಯಾಮಿ-ಯಾಗುವುದಿಲ್ಲವೆಂದು ಸೂತ್ರದ ಅಭಿಪ್ರಾಯ.

ಚಶಬ್ದವು ತುಶಬ್ದದ ಅರ್ಥವನ್ನು ಹೇಳುತ್ತದೆ

तत्वप्रकाशिका – चशब्दो विष्णुरेवान्तर्यामी नतु प्रधानमिति तुशब्दार्थः ।।१९।।

ಸೂತ್ರದಲ್ಲಿರುವ ಚಶಬ್ದವು ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆ; ಹೊರತು ಪ್ರಧಾನವು ಅಂತರ್ಯಾಮಿಯಾಗಿಲ್ಲ ಎಂದು ತುಶಬ್ದಾರ್ಥದಲ್ಲಿ ಇರುತ್ತದೆ.

ಭಾವದೀಪ

ಸೂತ್ರಕ್ಕೆ ನೇರವಾಗಿ ಟೀಕೆಯಲ್ಲಿ ವ್ಯಾಖ್ಯಾನ

भावदीपः – नच स्मार्तमतद्धर्माभिलापात् ।। १-२-१९ ।।

स्मार्तमित्युक्तिः पूर्वपक्षयुक्तिसूचनायेति भावेन व्याचष्टे – **स्मार्तमिति।।** सौत्रपदानुवादोऽयम् । कापिलेत्यादिभाष्यपदव्याख्या ।

ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್ ಸೂತ್ರದಲ್ಲಿರುವ ''ಸ್ಮಾರ್ತಮ್'' ಎಂಬ ಪದವು ಪೂರ್ವಪಕ್ಷಯುಕ್ತಿಯನ್ನು ಸೂಚಿಸುತ್ತಿದೆ. ಈ ವಿಚಾರವನ್ನು ಟೀಕೆಯಲ್ಲಿ ''ಸ್ಮಾರ್ತಮ್'' ಎಂಬ

ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಟೀಕೆಯಲ್ಲಿರುವ ''ಸ್ಮಾರ್ತಮ್'' ಪದವು ಸೂತ್ರದಲ್ಲಿರುವ ಪದದ ಅನುವಾದರೂಪವಾಗಿದೆ. ''ಕಾಪಿಲ'' ಇತ್ಯಾದಿ ಮಾತುಗಳು ಭಾಷ್ಯದಲ್ಲಿರುವ ಪದಗಳ ವ್ಯಾಖ್ಯಾನ-ರೂಪವಾಗಿದೆ.

'ಅತದ್ಧರ್ಮ' ಶಬ್ದದ ಅಭಿಪ್ರಾಯವೇನು ?

भावदीपः – सूत्रे तदिति स्मार्तं परामृश्यते ततोऽन्यदतत् ब्रह्म तद्धर्माभिलापादित्युक्तौ पूर्वेण पौनरुक्त्यं मत्वा भाष्ये अतदिति नञः प्रसज्य प्रतिषेधार्थतयाऽभिलापपदेनान्वयमुपेत्य अनुक्तेरित्युक्तमिति भावेन व्याचष्टे – अविदितत्वेति ।।

ಸೂತ್ರದಲ್ಲಿ ''ತತ್'' ಎಂಬ ಪದವಿದೆ. ''ತತ್'' ಎಂಬ ಪದದಿಂದ ಸ್ಮೃತ್ಯುಕ್ತವಾದ ಪ್ರಕೃತಿಯನ್ನು ಪರಾಮರ್ಶಿಸಬೇಕು. ಅಂತಹ ಪ್ರಕೃತಿಗಿಂತ ಭಿನ್ನವಾದದ್ದು ಬ್ರಹ್ಮವೆಂಬ ಪದಾರ್ಥ. ಅದ್ದರಿಂದ ''ಅತತ್'' ಎಂಬ ಪದಕ್ಕೆ ಬ್ರಹ್ಮನೆಂದರ್ಥ. ''ತದ್ಧರ್ಮಾಭಿಲಾಪಾತ್'' ಎಂದರೆ ಬ್ರಹ್ಮನ ಧರ್ಮವು ಹೇಳಲ್ಪಟ್ಟಿರುವುದೆಂದರ್ಥ. ಹೀಗೆ ವಿವಕ್ಷಿಸಿದರೆ ಹಿಂದಿನ ಸೂತ್ರದ ಅರ್ಥವನ್ನೇ ಹೇಳಿದಂತಾಗಿ ಪುನರುಕ್ತಿದೋಷ ಬರುತ್ತದೆ. ಅದಕೋಸ್ಕರ ಭಾಷ್ಯದಲ್ಲಿ ''ಅತತ್'' ಎಂಬಲ್ಲಿರುವ ''ನಞ್'' ಗೆ ಪ್ರಸಜ್ಯಪ್ರತಿಷೇಧಾರ್ಥಕತ್ವವನ್ನು ಅಂಗೀಕರಿಸಿ ''ಅತತ್'' ಎಂಬ ಪದದಿಂದ ಅನ್ವಯವನ್ನು ಅಂಗೀಕರಿಸಿದ್ದಾರೆ, ಅದ್ದರಿಂದ ''ಅನುಕ್ತೇಃ'' ಎಂದು ಹೇಳಿದ್ದಾರೆ. ಅಂದರೆ ಪ್ರಕೃತಿಯ ಧರ್ಮಗಳನ್ನು ಹೇಳದ ಕಾರಣ ಬ್ರಹ್ಮನೇ ಪ್ರತಿಪಾದ್ಯನಾಗಬೇಕೆಂದು ಸೂತ್ರಾರ್ಥ. ಈ ಅಭಿಪ್ರಾಯದಿಂದ ''ಅವಿದಿತತ್ವ'' ಎಂದು ಟೀಕೆಯಲ್ಲಿ ಹೇಳಿರುತ್ತಾರೆ.

ಅವಿದಿತತ್ವ ಶಬ್ದದ ಸಮಾಸ ಹೇಗೆ ?

भावदीपः – 'अकर्तरि च कारके सञ्ज्ञायाम्' इत्यादाविव नञः समास इति भावः । शरीरत्वं च सावकाशयिष्याम इति भावः । जीवसमुच्चायक इति भ्रान्तिं निराह – चशब्द इति ।।

ಹೀಗೆ ನಞ್‌ಗೆ ಪ್ರಸಜ್ಯ ಪ್ರತಿಷೇಧಾರ್ಥಕತ್ವವನ್ನು ಒಪ್ಪಿ ಅನ್ವಯ ಮಾಡಿದಾಗ ಸಮಾಸವಾಗುವುದಿಲ್ಲವೆಂಬ ಶಂಕೆಗೆ ಅವಕಾಶವಿಲ್ಲ. ಏಕೆಂದರೆ ''ಅಕರ್ತರಿ ಚ ಕಾರಕೇ

ಸಂಜ್ಞಾಯಾಮ್'' ಇತ್ಯಾದಿ ಸೂತ್ರದಲ್ಲಿ ಪ್ರಸಜ್ಯಪ್ರತಿಷೇಧಾರ್ಥದಲ್ಲಿರುವ 'ನಞ್' ಗೆ ಸಮಾಸ ಮಾಡಿರುವುದು ಕಂಡಿದೆ. ಶರೀರತ್ವವನ್ನಾದರೂ ಮುಂದೆ ಸಾವಕಾಶ ಮಾಡುತ್ತೇವೆಂದು ಅಭಿಪ್ರಾಯ. 'ಚ' ಶಬ್ದವು ಜೀವನನ್ನು ಸಮುಚ್ಚಯ ಮಾಡುತ್ತದೆಂಬ ಭ್ರಾಂತಿಯನ್ನು ನಿರಾಕರಿಸುವುಕ್ಕಾಗಿ ''ಚಶಬ್ದಃ'' ಇತ್ಯಾದಿ ಟೀಕೆಯು ಹೊರಟಿದೆ.

ತತ್ವಪ್ರದೀಪದಲ್ಲಿನ ವ್ಯಾಖ್ಯಾನದ ಅಂತರ್ಯವೇನು ?

भावदीपः – तत्वप्रदीपे तु आत्मत्वादमृतत्वादृष्टत्वाद्यतद्धर्मा-भिलापाच्चेति सूत्रोक्तांशस्य वृत्यन्तरमुक्तम्, नच पौनरुक्त्यम् । आद्यसूत्रोपात्त-लिङ्गाल्लिङ्गान्तराणामेवात्र गृहीतेरिति भावः ।। १९ ।।

ತತ್ವಪ್ರದೀಪದಲ್ಲಾದರೂ ಆತ್ಮತ್ವ, ಅಮೃತತ್ವ ಅದೃಷ್ಟತ್ವ ಮೊದಲಾದ ಪ್ರಕೃತಿಯಲ್ಲಿ ಬಾರದ ಧರ್ಮಗಳನ್ನು ಹೇಳಿರುವುದರಿಂದ ಸೂತ್ರದಲ್ಲಿರುವ ಅಂಶಕ್ಕೆ ಮತ್ತೊಂದು ಬಗೆಯ ವಾಖ್ಯಾನವನ್ನು ಮಾಡಿರುತ್ತಾರೆ. ಈ ಪಕ್ಷದಲ್ಲಿಯೂ ಸಹ ಪುನರುಕ್ತಿಗೆ ಅವಕಾಶವಿಲ್ಲ. ಏಕೆಂದರೆ ಮೊದಲನೆಯ ಸೂತ್ರದಲ್ಲಿ ಯಾವ ಲಿಂಗವನ್ನು ವಿವಕ್ಷಿಸಿದ್ದಾರೋ ಅದಕ್ಕಿಂತ ಭಿನ್ನವಾದ ಲಿಂಗಗಳನ್ನೇ ಈ ಸೂತ್ರದಲ್ಲಿ ವಿವಕ್ಷಿಸಿರುತ್ತಾರೆ.

ಬ್ರಹ್ಮಸೂತ್ರ

'ಶಾರೀರಿಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् –।। शारीरश्चोभयेऽपि हि भेदेनैनमधीयते ।। २० ।।

ಸೂತ್ರಾರ್ಥ - ಕಾಣ್ವಶಾಖಿಗಳು ಹಾಗೂ ಮಾಧ್ಯಂದಿನ ಶಾಖಿಗಳು ಅಂತರ್ಯಾಮಿಯಿಂದ ಜೀವನು ಭಿನ್ನನಾಗಿದ್ದಾನೆಂದು ಅಧ್ಯಯನ ಮಾಡುತ್ತಾರೆ. ಈ ಕಾರಣದಿಂದ ಶಾರೀರನಾದ ಜೀವನು ಅಂತರ್ಯಾಮಿಯಾಗಲು ಸಾಧ್ಯವಿಲ್ಲ.

ಅರ್ಥ - ಚಶಬ್ದವು 'ನಞ್' ಅನ್ನು ಅನುಕರ್ಷಣಮಾಡುವುದಕ್ಕಾಗಿ ಹೇಳಲ್ಪಟ್ಟಿದೆ. ಹಿ= ಯಾವ ಕಾರಣದಿಂದ, ಉಭಯೇ = ಮಾಧ್ಯಂದಿನ ಶಾಖಿಗಳು ಮತ್ತು ಕಾಣ್ವಶಾಖಿಗಳು, ಭೇದೇನ = 'ಆತ್ಮನೋऽಂತರಃ' 'ವಿಜ್ಞಾನಾದಂತರಃ' ಎಂಬುದಾಗಿ ಜೀವನನ್ನು ಅಂತರ್ಯಾಮಿಗಿಂತ ಭಿನ್ನನೆಂದು, ಅಧೀಯತೇ = ಅಧ್ಯಯನ ಮಾಡುತ್ತಾರೆ. ತಸ್ಮಾತ್ = ಆದ್ದರಿಂದ ಶಾರೀರಃ = ಜೀವನು, ನ = ಅಂತರ್ಯಾಮಿಯಾಗುವುದಿಲ್ಲ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅಂತರ್ಯಾಮ್ಯಧಿಕರಣವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಶಾಖಾಭೇದದಿಂದ ಉಪಾಸನಾಭೇದವನ್ನು ಹೇಳಲಾಗಿದೆ

ब्रह्मसूत्रभाष्यम् – 'य आत्मनि तिष्ठन्नात्मनोऽन्तरो (यमात्मा न वेद यस्याऽत्मा शरीरं य आत्मानमन्तरो यमयत्येष त आत्माऽन्तर्याम्यमृतः') (बृ.माध्यन्दिनपाठः) 'यो विज्ञाने तिष्ठन् (विज्ञानादन्तरो यं विज्ञानं न वेद यस्य विज्ञानं शरीरम्') (बृ. ५-७-२२.) इत्युभयेऽपि हि शाखिनो भेदेनैनं जीवमधीयते ।

ಅನುವಾದ - ''ಯಾವಾತನು ಜೀವರುಗಳಲ್ಲಿ ನೆಲೆಸಿ ಜೀವನಿಂದ ಭಿನ್ನನಾಗಿ ಇರುತ್ತಾನೋ, ಅಂತಹ ಯಾರನ್ನು ಜೀವನು ತಿಳಿಯಲು ಸಾಧ್ಯವಿಲ್ಲವೋ ಯಾರಿಗೆ ಆತ್ಮನು ಶರೀರದಂತಿದ್ದಾನೋ, ಯಾರು ಆತ್ಮನನ್ನು ನಿಯಮನ ಮಾಡುತ್ತಾನೋ, ಅಂತಹ ಆತ್ಮನು ನಿನ್ನ ಅಂತರ್ಯಾಮಿಯಾಗಿ ಅಮೃತನಾಗಿದ್ದಾನೆ. -- ಹೀಗೆ ಮಾಧ್ಯಂದಿನಶಾಖೆಯು ಹೇಳಿದೆ. ''ಯಾರು ಜ್ಞಾನಿಯಾದ ಜೀವನಲ್ಲಿ ನೆಲೆಸಿ ಜೀವನಿಂದ ಭಿನ್ನನಾಗಿ ಜೀವನಿಗೆ ತಿಳಿಯಲು ಸಾಧ್ಯವಿಲ್ಲದವನಾಗಿ ಜೀವನೇ ಶರೀರವಾಗಿ ಇರುವವನಾಗಿ ಹೇಳಲ್ಪಟ್ಟಿದ್ದಾನೋ' ಹೀಗೆ ಎಂದು ಕಾಣ್ವಶಾಖೆಯಲ್ಲಿದೆ. ಪರಮಾತ್ಮನನ್ನು ಕಾಣ್ವಶಾಖಿಗಳು

ಹಾಗೂ ಮಾಧ್ಯಂದಿನಶಾಖಿಗಳು ಜೀವನಿಗಿಂತ ಭಿನ್ನನಾಗಿ ಅಂತರ್ಯಾಮಿಯು ಇದ್ದಾನೆಂದು ಅಧ್ಯಯನ ಮಾಡುತ್ತಿದ್ದಾರೆ. ಈ ಕಾರಣದಿಂದಲೂ ವಿಷ್ಣುವೇ ಅಂತರ್ಯಾಮಿಯೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಪೂರ್ವಪಕ್ಷದಲ್ಲಿ ಜೀವನು ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿತ್ತು. ಈ ವಿಷಯದಲ್ಲಿ ಯಾವುದೇ ಸಾಧಕಪ್ರಮಾಣಗಳಿಲ್ಲವೆಂದು ಹಿಂದೆ ನಿರಾಕರಣೆ ಮಾಡಿದ್ದರೂ ಸಹ ಈಗ ಬಾಧಕಪ್ರಮಾಣವನ್ನು ಹೇಳುವ ಮೂಲಕ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ಯಃ = ಯಾವಾತನು, ಆತ್ಮನಿ = ಜೀವನಲ್ಲಿ, ತಿಷ್ಠನ್ = ನೆಲೆಸಿರುವವನಾಗಿ,
ಆತ್ಮನಃ = ಜೀವನಿಂದ, ಅಂತರಃ = ಭಿನ್ನನಾಗಿ, ಯಂ = ಯಾವಾತನನ್ನು, ಆತ್ಮಾ = ಜೀವನು, ನ ವೇದ = ತಿಳಿಯಲಾರನೋ, ಯಸ್ಯ = ಯಾವಾತನಿಗೆ, ಆತ್ಮಾ = ಜೀವನು, ಶರೀರಂ = ಶರೀರನಾಗಿದ್ದಾನೋ, ಯಃ = ಯಾವಾತನು, ಆತ್ಮಾನಂ = ಜೀವನನ್ನು, ಅಂತರಃ = ಅಂತರ್ಯಾಮಿಯಾಗಿದ್ದು, ಯಮಯತಿ = ಪ್ರೇರಣೆ ಮಾಡುತ್ತಾನೋ, ಏಷಃ = ಅಂತಹ ಈ ಭಗವಂತನೇ, ತೇ = ನಿನ್ನ, ಆತ್ಮಾ = ಸ್ವಾಮಿಯು ಹಾಗೂ, ಅಂತರ್ಯಾಮೀ = ಒಳಗಡೆ ನೆಲೆಸಿವವನು; ಹಾಗೂ,
ಅಮೃತಃ = ನಾಶರಹಿತನೂ ಆಗಿದ್ದಾನೆ. ಹೀಗೆ ಬೃಹದಾರಣ್ಯಕೋಪನಿಷತ್ತು ಹೇಳಿದೆ.

ಯಃ = ಯಾವಾತನು ವಿಜ್ಞಾನೇ = ವಿಶೇಷಜ್ಞಾನಿಯಾದ ಜೀವನಲ್ಲಿ, ತಿಷ್ಠನ್ = ನೆಲೆಸಿ, ವಿಜ್ಞಾನಾತ್ = ಜೀವನಿಗಿಂತ, ಅಂತರಃ = ಭಿನ್ನನಾಗಿ, ವಿಜ್ಞಾನಂ = ಜೀವನಿಗೆ ನ ವೇದ = ತನ್ನನ್ನು ತಿಳಿಸಿಕೊಡುವುದಿಲ್ಲವೋ, ಯಸ್ಯ = ಯಾವಾತನಿಗೆ, ವಿಜ್ಞಾನಂ = ಜೀವನೇ, ಶರೀರಂ = ದೇಹವಾಗಿದ್ದಾನೋ, ಇತಿ = ಹೀಗೆ, ಉಭಯೇಽಪಿ = ಕಾಣ್ವಶಾಖೆಗಳು ಹಾಗೂ ಮಾಧ್ಯಂದಿನ ಶಾಖಿಗಳು, ಏನಂ = ಇಂತಹ, ಜೀವಂ = ಜೀವನನ್ನು, ಭೇದೇನ = ಅಂತರ್ಯಾಮಿಗಿಂತ ಭಿನ್ನನನ್ನು, ಅಧೀಯತೇ

= ಅಧ್ಯಯನ ಮಾಡುತ್ತಾರೆ, ಹಿ = ಯಾವಕಾರಣದಿಂದ ಹೀಗೆ ಮಾಡುತ್ತಾರೋ ಅಂತಹ ಬಾಧಕಗಳಿರುವ ಕಾರಣದಿಂದಲೂ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆ.

ಜಗತ್ತು ವಿಷ್ಣುವಿಗೆ ಏಕೆ ಶರೀರ ?

ब्रह्मसूत्रभाष्यम् –
'शीर्यते नित्यमेवास्माद् विष्णोस्तु जगदीदृशम् ।
रमते च परो ह्यस्मिन् शरीरं तस्य तज्जगत् ।।'
इति वचनान्न शरीरत्वविरोधः ।। २० ।।

।। इत्यन्तर्याम्यधिकरणम् ।। ५ ।।

ಅನುವಾದ - ಯಾವ ಕಾರಣದಿಂದ ಈ ಸಮಸ್ತಜಗತ್ತು ನಿರಂತರವಾಗಿ ನಿಯಮೇನ ವಿಷ್ಣುವಿನಿಂದಲೇ ಸಂಹಾರಕ್ಕೆ ಒಳಗಾಗುತ್ತದೋ ಮತ್ತು ಇದರಲ್ಲಿ ಭಗವಂತನಿದ್ದು ಕ್ರೀಡಿಸುವುದರಿಂದ ಈ ಜಗತ್ತು ಅವನಿಗೆ ಶರೀರವಾಗಿದೆಯೋ ಆ ಕಾರಣದಿಂದಲೂ ಜಗತ್ತು ಪರಮಾತ್ಮನ ಶರೀರವಾಗಿದೆ ಎಂಬ ಪ್ರಮಾಣವಿರುವುದರಿಂದ ಅಂತರ್ಯಾಮಿತ್ವ, ಪೃಥಿವೀ ಶರೀರತ್ವಾದಿಗಳಿಗೆ ವಿರೋಧವು ಬರುವುದಿಲ್ಲ.

ಪ್ರತಿಪದಾರ್ಥ -- ವಿಷ್ಣು ಅಂತರ್ಯಾಮಿಯೆಂದು ಹೇಳಿದ್ದು ಕೂಡುವುದಿಲ್ಲ. ಪೃಥಿವ್ಯಾದಿ ಶರೀರತ್ವವು ಪ್ರಕೃತಿಯ ಧರ್ಮವಾಗಿರ-ಬೇಕಾದರೆ ಯಾವುದೇ ಪ್ರಕೃತಿಯ ಧರ್ಮಗಳು ಹೇಳಲ್ಪಟ್ಟಿಲ್ಲ ಎಂಬ ಧೋರಣೆಯು ತಪ್ಪಾಗುತ್ತದೆ. ಈ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಯಸ್ಮಾತ್ = ಯಾವಕಾರಣದಿಂದ, ಈದೃಶಂ = ಇಂತಹ ಸಮಸ್ತಜಗತ್ತು, ಅಸ್ಮಾತ್ = ವಿಷ್ಣುವಿನಿಂದಲೇ, ನಿತ್ಯಮೇವ = ನಿರಂತರವಾಗಿ, ಶೀರ್ಯತೇ = ನಶಿಸುತ್ತದೋ, ಆದ್ದರಿಂದ ಈ ಜಗತ್ತು ವಿಷ್ಣುವಿನ ಶರೀರವೆಂದು ಕರೆಯಲ್ಪಟ್ಟಿದೆ. ಮತ್ತು ಪರಃ = ಸರ್ವೋತ್ತಮನಾದ ಪರಮಾತ್ಮನು, ಅಸ್ಮಿನ್ = ಈ ಜಗತ್ತಿನಲ್ಲಿ, ಹಿ = ಯಾವ ಕಾರಣದಿಂದ, ರಮತೇ = ವಿಹರಿಸುತ್ತಾನೋ, ತತ್ = ಆ ಕಾರಣದಿಂದಲೇ, ಜಗತ್ = ಜಗತ್ತು,

ತಸ್ಯ = ಪರಮಾತ್ಮನ ಶರೀರವೆಂದು ವ್ಯವಹಾರವಿದೆ ಹೊರತು ಕೇವಲ ರೂಢಿಯಿಂದಲ್ಲ.

ಇತಿ = ಹೀಗೆ, ವಚನಾತ್ = ಪ್ರಮಾಣವಿರುವುದರಿಂದ, ಶರೀರತ್ವ-ವಿರೋಧಃ = ಪೃಥಿವ್ಯಾದಿಶರೀರಿ ಎಂಬ ಮಾತಿನ ವಿರೋಧವು, ನ = ಬರುವುದಿಲ್ಲ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ಚಿತ್‌ಪ್ರಕೃತಿಯೂ ಕೂಡ ಅಂತರ್ಯಾಮಿಯಲ್ಲ

तत्वप्रदीपः – ''शारीरश्चोभयेऽपि हि भेदेनैनमधीयते'' ॥ अतद्धर्माभिलापादेव तत्तजीवाशङ्कायां निरस्तायां योगिजीवमन्तर्यामिणमाशङ्क्यमानं विशेषयुक्त्या निराकरोति । उभयेऽपि हि शाखिनो माध्यन्दिनाः काण्वाश्चाविशेषितं जीवमन्तर्यामिणो भेदेनाधीयत इति ॥ 'च'कारात् 'यस्तेजसि तिष्ठन्' 'यस्तमसि तिष्ठन्' इत्यादिश्रीदुर्गारूपायाश्चित्प्रकृतेश्च भेदेनाधीतत्वान्न चित्प्रकृतिरन्तर्यामिणीत्यभिप्रायः ॥

॥ इत्यन्तर्याम्यधिकरणम् ॥

'ಶಾರೀರಶ್ಚೋಭಯೇऽಪಿ ಹಿ ಭೇದೇನೈನಮಧೀಯತೇ' ಎಂಬ ಸೂತ್ರದಲ್ಲಿ ಹೀಗೆ ಸಮರ್ಥಿಸುತ್ತಾರೆ - ಜೀವಾದಿಗಳ ಧರ್ಮವನ್ನು ಪ್ರತಿಪಾದನೆ ಮಾಡದಿರುವುದರಿಂದಲೇ ಪೃಥಿವ್ಯಾದ್ಯಭಿಮಾನಿ ಜೀವರು ಈ ಪ್ರಕರಣದಿಂದ ಪ್ರತಿಪಾದ್ಯರಾಗಿದ್ದಾರೆಂಬುದನ್ನು ನಿರಾಕರಣೆ ಮಾಡಿದಂತಾಗುತ್ತದೆ. ಆದ್ದರಿಂದ ಒಬ್ಬ ಯೋಗಿ ಜೀವನು ಅಂತರ್ಯಾಮಿಯಾಗಿರಬಹುದಲ್ಲವೇ ಎಂಬ ಆಶಂಕೆಯನ್ನು ಈಗ ವಿಶೇಷಯುಕ್ತಿಯಿಂದ ಈ ಸೂತ್ರದಲ್ಲಿ ನಿರಾಕರಿಸುತ್ತಿದ್ದಾರೆ. ಕಾಣ್ವ ಹಾಗೂ ಮಾಧ್ಯಂದಿನ ಎಂಬ ಇಬ್ಬರು ಶಾಖೆಗಳು ಯಾವುದೇ ವಿಶೇಷ ಧರ್ಮಗಳಿಲ್ಲದ ಜೀವನನ್ನು ಅಂತರ್ಯಾಮಿಗಿಂತ ಭಿನ್ನನಾಗಿದ್ದಾನೆಂದೇ ಅಧ್ಯಯನ ಮಾಡುತ್ತಾರೆ. 'ಚ'ಕಾರದಿಂದ

'ಯಸ್ತೇಜಸಿ ತಿಷ್ಠನ್' ಎಂಬ ಶ್ರುತಿಯಿಂದ ಶ್ರೀರೂಪವನ್ನು, 'ಯಸ್ತಮಸಿ ತಿಷ್ಠನ್' ಎಂಬ ದುರ್ಗಾರೂಪವನ್ನು ಹೊಂದಿರುವ ಚಿತ್‌ಪ್ರಕೃತಿಗಿಂತ ಭೇದವನ್ನೂ ಕೂಡ ಅಧ್ಯಯನ ಮಾಡುತ್ತಾರೆ ಎಂದು ತಿಳಿಯಬೇಕು. ಆದ್ದರಿಂದ ಚಿತ್‌ಪ್ರಕೃತಿಯೂ ಕೂಡ ಅಂತರ್ಯಾಮಿ-ಯಾಗುವುದಿಲ್ಲ ಎಂದು ಅಭಿಪ್ರಾಯ. ,

ವಿಶೇಷವಿಚಾರ - ಹಿಂದಿನ ಸೂತ್ರದಲ್ಲಿ 'ಅತದ್ಧರ್ಮಾಭಿಲಾಪಾತ್' ಎಂಬ ಮಾತಿನಿಂದ ಜೀವನು ಅಂತರ್ಯಾಮಿಯಾಗಿದ್ದಾರೆಂಬುದನ್ನು ನಿರಾಕರಿಸಿದಂತಾಯಿತು. ಪುನಃ ಅದೇ ವಿಚಾರವನ್ನು ಈ ಸೂತ್ರದಲ್ಲಿಯೂ ಹೇಳುತ್ತಿದ್ದಾರಲ್ಲವೇ? ಎಂಬ ಪ್ರಶ್ನೆಗೆ, ಬಹಳ ಸುಂದರವಾಗಿ ತತ್ವಪ್ರದೀಪಕಾರರು ಉತ್ತರಿಸಿದ್ದಾರೆ. ಹಿಂದಿನ ಸೂತ್ರದಲ್ಲಿ ಆಯಾ ಜಡಪದಾರ್ಥಗಳ ಅಭಿಮಾನಿಯಾದ ಜೀವನು ಅಂತರ್ಯಾಮಿಯಾಗಿದ್ದಾನೆಂಬುದನ್ನು ನಿರಾಕರಿಸಿದರು. ಈ ಸೂತ್ರದಲ್ಲಿ ಯೋಗಿಯಾದ ಜೀವನೊಬ್ಬನು ಅನೇಕ ತತ್ವಗಳಲ್ಲಿ ಏಕೆ ಅಂತರ್ಯಾಮಿಯಾಗಿರಬಾರದು? ಎಂಬ ಆಶಂಕೆಯನ್ನು ನಿರಾಕರಿಸುತ್ತಿದ್ದಾರೆ. ಇದು ತತ್ವಪ್ರದೀಪದ ವೈಶಿಷ್ಟ್ಯ.

ಅಂತರ್ಯಾಮಿ ಪ್ರಕರಣದಲ್ಲಿ 'ಯಸ್ತೇಜಸಿ ತಿಷ್ಠನ್' ಎಂದು ಮತ್ತು 'ಯಸ್ತಮಸಿ ತಿಷ್ಠನ್' ಎಂಬುದಾಗಿ ಲಕ್ಷ್ಮೀದೇವಿಯ ಶ್ರೀ ಹಾಗೂ ದುರ್ಗಾರೂಪಗಳಲ್ಲಿಯೂ ಮಹಾವಿಷ್ಣುವು ಅಂತರ್ಯಾಮಿಯಾಗಿದ್ದಾನೆಂದು ಪ್ರತಿಪಾದನೆ ಮಾಡಲಾಗಿದೆ. ಇದನ್ನು ಅಧ್ಯಯನ ಮಾಡುವ ಕಾಣ್ವಶಾಖಿಗಳು ಲಕ್ಷ್ಮೀದೇವಿಯು ಭಗವಂತನಿಗಿಂತ ಭಿನ್ನಳಾಗಿದ್ದಾಳೆಂದೇ ತಿಳಿಯುತ್ತಾರೆ.

ಹಿಂದೆ ಪೂರ್ವಪಕ್ಷ ಮಾಡುವಾಗ ಶರೀರಪದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲು ಸಾಧ್ಯವಾಗುವುದಿಲ್ಲ ಎಂದು ಆಕ್ಷೇಪಿಸಲಾಗಿತ್ತು. ಈಗ ಅದಕ್ಕೂ ಕೂಡ ಅವಕಾಶವಿಲ್ಲ. ಏಕೆಂದರೆ ಶರೀರಪದಕ್ಕೆ ಅಧೀನವೆಂದಷ್ಟೇ ಅರ್ಥವನ್ನು ವಿವಕ್ಷಿಸಬೇಕು. ಪೃಥಿವ್ಯಾದಿಗಳೆಲ್ಲವೂ ಪರಮಾತ್ಮನ ಅಧೀನವಾಗಿರುವುದರಿಂದ 'ಶರೀರ' ಎಂದು ಕರೆಸಿಕೊಳ್ಳುತ್ತವೆ. ಅಥವಾ 'ಶ್ರೀರಣಂ ಅಸ್ಯ ಅಸ್ತೀತಿ ಶರೀ' ಎಂಬ ವ್ಯುತ್ಪತ್ತಿಯನ್ನು ವಿವಕ್ಷಿಸಿದಾಗ ವಿಷ್ಣುವಿನ ದೆಸೆಯಿಂದ ಇದು ನಾಶವನ್ನು ಹೊಂದುವ ಕಾರಣ 'ಶರೀ' ಎಂದು ಕರೆಸಿಕೊಳ್ಳುತ್ತದೆ. ಮತ್ತು ವಿಷ್ಣುವಿನ ಕ್ರೀಡಾಸ್ಥಾನವಾಗಿರುವುದರಿಂದ 'ರ' ಎಂದು ಕರೆಸಿಕೊಳ್ಳುತ್ತದೆ. ಹೀಗೆ ಸಮಸ್ತ ಜಗತ್ತು ವಿಷ್ಣುವಿನ ಶರೀರವಾಗಿದೆ. ಆದ್ದರಿಂದ 'ಪೃಥಿವೀ ಶರೀರಂ' ಎಂಬುದೂ ಕೂಡ ವಿಷ್ಣುವಿನಲ್ಲಿ ಸಮನ್ವಯವಾಗುತ್ತವೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಅಂತರ್ಯಾಮ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ಜೀವನಿಗೆ ಅಂತರ್ಯಾಮಿತ್ವವನ್ನು ವಿಶೇಷವಾಗಿ ನಿರಾಕರಿಸುವ ಯುಕ್ತಿ ಯಾವುದು ?

तत्वप्रकाशिका – ।। शारीरश्चोभयेऽपि हि भेदेनैनमधीयते ।। २० ।।

यज्जीवोऽन्तर्यामीत्युक्तं तदपि संसारित्वाद्यतद्धर्माभिलापादिना निरस्तमपि विशेषयुक्त्या पराकुर्वत्सूत्रमुपन्यस्य व्याचष्टे – शारीरश्चेति ।।

ಜೀವನು ಅಂತರ್ಯಾಮಿಯಾಗುತ್ತಾನೆಂಬ ಪೂರ್ವಪಕ್ಷವನ್ನು ಹಿಂದೆ ಮಾಡಲಾಗಿತ್ತು. ಇದನ್ನೂ ಸಹ ಹಿಂದಿನ ಸೂತ್ರದಲ್ಲಿ 'ಅತದ್ಧರ್ಮಾಭಿಲಾಪಾತ್' ಎಂಬ ಮಾತಿನಿಂದ ಜೀವನ ಧರ್ಮವೆನಿಸಿದ ಸಂಸಾರಿತ್ವಾದಿಗಳನ್ನು ಶ್ರುತಿಯು ಹೇಳದ ಕಾರಣ ನಿರಸ್ತವಾಯಿತು. ಆದರೂ ಸಹ ಪ್ರಕೃತ ವಿಶೇಷ ಯುಕ್ತಿಯನ್ನು ಹೇಳುವ ಮೂಲಕ ಪೂರ್ವಪಕ್ಷವನ್ನು ನಿರಾಕರಣೆ ಮಾಡುವವರಾಗಿ ಸೂತ್ರವನ್ನು ಪಠಿಸಿ ''ಶಾರೀರಶ್ಚ' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಶಾಖಾಭೇದದಿಂದ ಉಪಾಸನಾಭೇದ ಹೇಳುವ ಎರಡು ಶಾಖೆಗಳು ಯಾವುವು ?

तत्वप्रकाशिका – चशब्दान्नत्रः समाकर्षः । 'आत्मनोऽन्तरः' इति माध्यन्दिनाः 'विज्ञानादन्तरः' इति काण्वाश्च जीवमन्तर्यामिणः सकाशाद् भेदेनाधीयते ।

ಸೂತ್ರದಲ್ಲಿರುವ 'ಚ' ಶಬ್ದದಿಂದ ಹಿಂದಿನ ಸೂತ್ರದಲ್ಲಿರುವ 'ನ' ಎಂಬುದನ್ನು ಸಮಾಕರ್ಷ ಮಾಡಬೇಕು. 'ಆತ್ಮನೋऽಂತರಃ' ಎಂದು ಮಾಧ್ಯಂದಿನಶಾಖಿಗಳು, ಹಾಗೂ 'ವಿಜ್ಞಾನಾದಂತರಃ' ಎಂಬುದಾಗಿ ಕಾಣ್ವಶಾಖಿಗಳೂ ಸಹ ಜೀವನನ್ನು ಅಂತರ್ಯಾಮಿಗಿಂತ ಭಿನ್ನನೆಂದು ಅಧ್ಯಯನ ಮಾಡುತ್ತಾರೆ.

ವಿಜ್ಞಾನಶಬ್ದದಿಂದ ಪ್ರಕೃತನು ಯಾರು ?

तत्वप्रकाशिका – 'हि' यस्मादतो न शारीरश्चान्तर्यामीत्यर्थः । आत्मनः

सकाशाद् अन्तरो विविक्तः । विज्ञानपदेन शारीरः कुतः? इति चेत्, उदाहृत-श्रुतिसमाख्यानादेव ।

ಯಾವ ಕಾರಣದಿಂದ ಮಾಧ್ಯಂದಿನಶಾಖಿಗಳು ಹಾಗೂ ಕಾಣ್ವಶಾಖಿಗಳು ಜೀವನಿಗಿಂತ ಭಿನ್ನನೆಂದು ಅಂತರ್ಯಾಮಿಯನ್ನು ತಿಳಿಯುತ್ತಾರೋ ಆ ಕಾರಣದಿಂದ ಜೀವನನ್ನು ಅಂತರ್ಯಾಮಿಯೆಂದು ಹೇಳಲು ಸಾಧ್ಯವಿಲ್ಲ ಎಂದರ್ಥ. ಆತ್ಮನಃ = ಜೀವಾತ್ಮನಿಗಿಂತ, ಅಂತರಃ = ಅಂತರ್ಯಾಮಿಯು ಭಿನ್ನನಾಗಿದ್ದಾನೆ ಎಂದು ಶ್ರುತಿಯ ಅರ್ಥ. ವಿಜ್ಞಾನಪದಕ್ಕೆ ಜೀವಾತ್ಮನೆಂಬ ಅರ್ಥವು ಹೇಗೆ ಕೂಡುತ್ತದೆ? ಎಂದರೆ 'य आत्मनि तिष्ठन्' ಎಂಬ ಮಾಧ್ಯಂದಿನ ಶ್ರುತಿಯ ಸಮಾನಾರ್ಥಕವಾದ 'यो विज्ञाने तिष्ठन्' ಎಂಬ ಹಿಂದೆ ಉದಾಹರಿಸಿದ ಕಾಣ್ವಶ್ರುತಿಯ ಪ್ರಮಾಣವು ಸಂವಾದಿಯಾಗಿರುವುದರಿಂದ ವಿಜ್ಞಾನಪದಕ್ಕೆ ಜೀವನೆಂಬರ್ಥವೇ ಸಾಧುವಾಗಿರುತ್ತದೆ.

ವಿಷ್ಣುವಿನಲ್ಲಿ ಪ್ರಧಾನಧರ್ಮ ಹೇಳದ ಪ್ರಮಾಣ ಯಾವುದು ?

तत्वप्रकाशिका – ननु विष्णावसम्भाव्यमानपृथिव्यादिशरीरत्वस्य प्रधानादिधर्मस्यात्रोक्तेः कथं विष्णोरन्तर्यामित्वम्? कथं च प्रधानादि-धर्मानभिलापः? इत्यत आह – शीर्यत इति ।।

ವಿಷ್ಣುವಿನಲ್ಲಿ ಅತ್ಯಂತ ಅಸಂಭಾವಿತವಾದ 'ಪೃಥಿವ್ಯಾದಿಶರೀರತ್ವ' ಎಂಬ ಪ್ರಕೃತಿಯ ಧರ್ಮವನ್ನು ಶ್ರುತಿಯಲ್ಲಿ ಅಂತರ್ಯಾಮಿಗೆ ಹೇಳಲಾಗಿದೆ. ಹೀಗಿರುವಾಗ ವಿಷ್ಣುವನ್ನು ಅಂತರ್ಯಾಮಿಯೆಂದು ಹೇಳಲು ಹೇಗೆ ಸಾಧ್ಯ ? ಮತ್ತು ಪ್ರಕೃತಿಯ ಧರ್ಮವನ್ನು ಶ್ರುತಿಯು ಹೇಳುತ್ತಿಲ್ಲವೆಂಬ ಸಿದ್ಧಾಂತವಾದರೂ ಹೇಗೆ ಸರಿಯಾಗುತ್ತದೆ? ಎಂಬೆರೆಡು ಪ್ರಶ್ನೆಗಳಿಗೆ ''ಶೀರ್ಯತೇ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಶರೀರಶಬ್ದವನ್ನು ವಿಷ್ಣುವಿನಲ್ಲಿ ಯೌಗಿಕವಾಗಿ ಹೇಳಬೇಕು

तत्वप्रकाशिका – यद्यपि विष्णौ नोक्तप्रकारद्वयेन पृथिव्यादि-शरीरत्वोपपत्तिः । तथापि योगवृत्त्या तस्मिन् पृथिव्यादिशरीरत्वव्यपदेशोपपत्तेः

न तद्विरोधो विष्ण्वन्तर्यामित्वस्य । नाप्यतद्धर्माभिलापोक्तेः विरोध इति भावः ।

ಮತ್ತೇನೆಂದರೆ, ವಿಷ್ಣುವಿನಲ್ಲಿ ಹಿಂದೆ ಪ್ರಕೃತಿಯಲ್ಲಿ ಹೇಳಿದ ಎರಡುಪ್ರಕಾರಗಳಿಂದ ಪೃಥಿವ್ಯಾದಿಶರೀರತ್ವವನ್ನು ಹೇಳಲು ಸಾಧ್ಯವಿಲ್ಲ. ಆದರೂ ಸಹ ಯೋಗವೃತ್ತಿಯಿಂದ ಪೃಥಿವ್ಯಾದಿಶರೀರತ್ವವನ್ನು ವಿಷ್ಣುವಿನಲ್ಲಿ ಹೊಂದಿಸಬಹುದು. ಆದ್ದರಿಂದ ಪೃಥಿವ್ಯಾದಿಶರೀರತ್ವವು ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆನ್ನಲು ವಿರೋಧವಾಗುವುದಿಲ್ಲ. ಅಥವಾ ಪ್ರಕೃತಿಯ ಧರ್ಮವನ್ನು ಇಲ್ಲಿ ಹೇಳದ ಕಾರಣದಿಂದಲೂ ವಿರೋಧವಿಲ್ಲವೆಂದು ತಿಳಿಯಬೇಕು.

ಯೋಗರೂಢಿಗಳಲ್ಲಿ ಪ್ರಬಲ ಯಾವುದು ?

तत्वप्रकाशिका – यद्यपि योगाद्रूढेः प्राबल्यम् । तथापि निरवकाशा-विदितत्वादिलिङ्गबलेन योगाङ्गीकारो युज्यते । अतोऽन्तर्यामी विष्णुरेवेति, स एव अमृतोऽक्षिस्थश्चेति सिद्धम् ।।२०।।

।। इति श्रीमज्जयतीर्थभिक्षुविरचितायां तत्वप्रकाशिकायाम्
अन्तर्याम्याधिकरणम् ।।

ವಸ್ತುತಃ 'ಯೋಗಾದ್ ರೂಢಿರ್ಬಲೀಯಸೀ' ಎಂಬ ನ್ಯಾಯದಂತೆ ಯೌಗಿಕಾರ್ಥಕ್ಕಿಂತಲೂ ರೂಢ್ಯರ್ಥವೇ ಪ್ರಬಲವಾಗಿರುತ್ತದೆ. ಆದರೂ ಸಹ ಅವಿದಿತತ್ವವೇ ಮೊದಲಾದ ನಿರವಕಾಶ-ಲಿಂಗಗಳಿಂದ ಯೌಗಿಕಾರ್ಥವನ್ನು ಸ್ವೀಕರಿಸುವುದು ಯುಕ್ತವಾಗುತ್ತದೆ. ಆದ್ದರಿಂದ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ. ಅವನೇ ಅಮೃತನೂ ಹಾಗೂ ಅಕ್ಷಿಸ್ಥನೂ ಆಗಿದ್ದಾನೆಂದು ನಿರ್ಣಯವಾಯಿತು.

।। ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ
ಅಂತರ್ಯಾಮ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ಭಾವದೀಪ

ಶಾರೀರಪದವನ್ನು ಅಪಕರ್ಷ ಮಾಡಬೇಕು ?

भावदीपः – ।। शारीरश्चोभयेऽपि हि भेदेनैनमधीयते ।। २० ।।

निरस्तमपीति ।। 'शारीरश्च' इत्यपि पूर्वत्राकृष्य व्याख्येयमिति भावः।। **विशेषेति ।।** तेन न पौनरुक्त्यमिति भावः । विशेषयुक्त्या निराकरणं च योगिजीवस्यान्तिर्यामिशङ्कानिरासार्थमित्युक्तं तत्त्वप्रदीपे ।

।। शारीरश्चोभयेऽपि हि भेदेनैनमधीयते ।।

ಟೀಕೆಯಲ್ಲಿ ''ನಿರಸ್ತಮಪಿ'' ಎಂದು ಹೇಳಿರುವುದರಿಂದ ''ಶಾರಿರಶ್ಚ''ಎಂಬ ಸೂತ್ರದ ಭಾಗವನ್ನು ಹಿಂದಿನ ಸೂತ್ರದಲ್ಲಿ ಅನ್ವಯಮಾಡಿ ವ್ಯಾಖ್ಯಾನಿಸಬೇಕೆಂದು ತಿಳಿಯುತ್ತದೆ. ''ವಿಶೇಷಯುಕ್ತಯಃ'' ಎಂದು ಹೇಳಿದ್ದರಿಂದ ಪುನರುಕ್ತಿಗೆ ಅವಕಾಶವಿಲ್ಲವೆಂದು ತಿಳಿಯಬೇಕು. ತತ್ವಪ್ರದೀಪದಲ್ಲಿ ವಿಶೇಷ-ಯುಕ್ತಿಯಿಂದ ನಿರಾಕರಿಸಿದ್ದರಿಂದ ಯೋಗಿಯಾದ ಜೀವನು ಅಂತರ್ಯಾಮಿಯಾಗಬಹುದಲ್ಲವೆ? ಎಂಬ ಶಂಕೆಯನ್ನು ನಿರಾಕರಿಸಿದ್ದಾರೆಂದು ವ್ಯಾಖ್ಯಾನಿಸಿದ್ದಾರೆ.

ಸೂತ್ರದಲ್ಲಿನ ಚ ಶಬ್ದವು ಸಮುಚ್ಚಯಾರ್ಥಕವಾಗಿದೆಯೆ ?

भावदीपः – तथा चकाराद् 'यस्तेजसि तिष्ठन्' इत्यादिभेदाध्ययनाच्चित्क-प्रकृतिर्नान्तर्यामीति समुच्चयार्थ इत्यप्युक्तम् ।

ಸೂತ್ರದಲ್ಲಿರುವ ''ಚ'' ಕಾರವು ''ಯಸ್ತೇಜಸಿ ತಿಷ್ಠನ್'' ಎಂಬುದಾಗಿ ಭೇದವನ್ನು ಅಧ್ಯಯನ ಮಾಡುವ ಕಾರಣ ಚಿತ್‌ಪ್ರಕೃತಿಯು ಅಂತರ್ಯಾಮಿ ಆಗುವುದಿಲ್ಲವೆಂಬುದನ್ನು ಸಮುಚ್ಚಯ ಮಾಡುತ್ತದೆ ಎಂದೂ ಸಹ ವ್ಯಾಖ್ಯಾನಿಸಿರುತ್ತಾರೆ.

ವಿವಿಕ್ತಶಬ್ದದ ಅಂತರ್ಯವೇನು ?

भावदीपः – भाष्योक्तकृत्स्नवाक्ये भेदोक्त्यंशं दर्शयन् सूत्रभाष्ययोरर्थमाह **– आत्मन इति ।।** 'ही'ति सौत्रानुवादेन 'यस्मात्' इति व्याख्या । पूर्वमन्तर इत्यस्यान्तरत्वाख्यलिङ्गार्पकतया व्याख्यानेऽपि इह 'आत्मानमन्तर' इत्यस्यापि उक्तत्वेन अपौनरुक्त्यायऽत्मन इत्यादिपञ्चम्युपपत्तये साक्षाद्भेदोक्ति-लाभाय चार्थमाह **– विविक्त इति ।।**

ಭಾಷ್ಯದಲ್ಲಿ ಹೇಳಲ್ಪಟ್ಟ ವಾಕ್ಯದಲ್ಲಿ ಭೇದವನ್ನು ಹೇಳುವ ಭಾಗವನ್ನು ತೋರಿಸುತ್ತಾ ಸೂತ್ರ ಹಾಗೂ ಭಾಷ್ಯಗಳ ಅರ್ಥವನ್ನು ''ಆತ್ಮನಃ'' ಎಂಬ ವ್ಯಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ''ಹಿ'' ಎಂಬುದಾಗಿ ಸೂತ್ರದಲ್ಲಿರುವ ಪದವನ್ನು ಅನುವಾದ ಮಾಡಿ ''ಯಃ'' ಎಂದು ವ್ಯಾಖ್ಯಾನಿಸಿದ್ದಾರೆ. ಹಿಂದೆ ''ಅಂತರಃ'' ಎಂಬ ಶಬ್ದಕ್ಕೆ ಅಂತರತ್ವವೆಂಬ ಲಿಂಗವೆಂದು ವ್ಯಾಖ್ಯಾನಿಸಿದ್ದರೂ ಸಹ ಪ್ರಕೃತ ಆತ್ಮಾನಮಂತರಃ'' ಎಂಬಲ್ಲಿರುವ ಅಂತರಶಬ್ದಕ್ಕೂ ಸಹ ಅಂತರತ್ವ ಎಂಬ ಅರ್ಥವನ್ನು ಹೇಳುತ್ತಿದ್ದರೂ ಸಹ ಪುನರುಕ್ತಿಗೆ ಅವಕಾಶವಿಲ್ಲ. ಮತ್ತು ''ಆತ್ಮನಃ'' ಎಂಬಲ್ಲಿರುವ ಪಂಚಮೀವಿಭಕ್ತಿಯು ಉಪಪನ್ನವಾಗಬೇಕೆಂದರೆ ನೇರವಾಗಿ ಭೇದವನ್ನು ಹೇಳಬೇಕು. ಈ ಎರಡು ವಿಷಯವನ್ನು ಪ್ರತಿಪಾದಿಸುವುದಕ್ಕಾಗಿ ''ವಿವಿಕ್ತಃ'' ಎಂದು ಹೇಳಿರುತ್ತಾರೆ.

ವಿಶೇಷವಿಚಾರ - 'ಅಪಾದಾನೇ ಪಂಚಮೀ' ಎಂಬ ಪ್ರಕರಣದಲ್ಲಿ 'ಅನ್ಯಾರಾದಿತರರ್ತೇದಿಕ್ಶಬ್ದಾಂಚೂತ್ತರಪದಾಜಹಿಯುಕ್ತೇ' ಇತ್ಯಾದಿ ಸೂತ್ರದಲ್ಲಿ 'ಅನ್ಯ' ಎಂಬರ್ಥದಲ್ಲಿ ಪಂಚಮಿಯನ್ನು ವಿಧಾನ ಮಾಡಲಾಗಿದೆ. ಮತ್ತು ಬಾಹ್ಯಾಪೇಕ್ಷೆಯಿಲ್ಲದೇ ಕ್ರೀಡಿಸುವಿಕೆ ಎಂಬರ್ಥವನ್ನು ವಿವಕ್ಷಿಸುವುದಾದಲ್ಲಿ 'ಪೃಥಿವ್ಯಾಃ' ಎಂಬ ಷಷ್ಠೀ ವಿಭಕ್ತಿಯೂ ಸಹ ವ್ಯರ್ಥವಾಗುತ್ತದೆಂದು ತಿಳಿಯಬೇಕು.

ಅವಿದಿತತ್ವವನ್ನು ತಿಳಿಸುವುದಕ್ಕಾಗಿ 'ಯಂ' ಇತ್ಯಾದಿ ವಾಕ್ಯವನ್ನು ಅವಶ್ಯವಾಗಿ ಹೇಳಬೇಕು. ತನ್ಮೂಲಕವಾಗಿ 'ಯಃ ಪೃಥಿವೀಮಂತರಃ' ಎಂಬ ವಾಕ್ಯವಷ್ಟೇ ಅಭಿಪ್ರೇತವಾಗಿದೆ. ಆದ್ದರಿಂದಲೇ ಟೀಕೆಯಲ್ಲಿ ಯಾವುದೇ ಒಂದು ವಿಶೇಷವಾದ ವಾಕ್ಯವನ್ನು ಉಲ್ಲೇಖಿಸದಲೇ ಪ್ರಥಮ ಸೂತ್ರದಲ್ಲಿ 'ಪೃಥಿವ್ಯಾದ್ಯವಿದಿತತ್ವಾಂತರತ್ವಾಖ್ಯಧರ್ಮವ್ಯಪದೇಶಾತ್' ಎಂದು ಸಾಮಾನ್ಯವಾಗಿ ಹೇಳಿದ್ದಾರೆ.

ಸಕಾಶಾತ್ ಎಂದು ಟೀಕೆಯಲ್ಲಿ ಏಕೆ ಹೇಳಿದ್ದಾರೆ ?

भावदीपः – 'अङ्ग्योऽन्तरः' इत्यादिप्रकरणबलात् पञ्चम्यन्तत्वेऽपि स्पष्टत्वात् सकाशादित्युक्तम् । अन्तरशब्दस्य 'उदरमन्तरं कुरुते' इत्यादाविव भेदार्थत्वेऽपि धर्मधर्म्यभेदाद्वा 'अर्श आद्यच्'प्रत्ययान्तत्वेन वा विविक्त इत्युक्तम् । 'अन्यथाऽन्तरमवकाशावधिपरिधानान्तर्धिभेदसादृश्ये' इत्यमरोक्तेः पुल्लिङ्गं न स्यात्।

''अद्भ्योऽन्तरः'' ಇತ್ಯಾದಿ ಪ್ರಕರಣಗಳಿಂದ ಪಂಚಮ್ಯಂತವೆಂದು ನಿರ್ಣಯವಾಗಿದ್ದರೂ ಸಹ ಸ್ಪಷ್ಟಪಡಿಸಲು ''ಸಕಾಶಾತ್'' ಎಂದು ಹೇಳಿರುತ್ತಾರೆ. ಅಂತರ ಶಬ್ದಕ್ಕೆ ''ಉದರಮಂತರಂ ಕುರುತೇ'' ಎಂಬಲ್ಲಿ ಹೇಗೆ ಭೇದಾರ್ಥವು ಪ್ರಸಿದ್ಧವಾಗಿದೆಯೋ ಅಂದರಂತೆ ಇಲ್ಲಿಯೂ ಸಹ ಜೀವನೆಂಬ ಅರ್ಥವನ್ನು ಒಪ್ಪಬೇಕು. ಇದಕ್ಕೆ ಎರಡು ಕಾರಣಗಳಿವೆ. ೧. ಧರ್ಮ ಹಾಗೂ ಧರ್ಮಿಗಳಿಗೆ ಅಭೇದವಿರುವುದರಿಂದ, ೨. ''ಅರ್ಶ ಆದ್ಯಚ್'' ಎಂಬುದಾಗಿ ಅಚ್‌ಪ್ರತ್ಯಯಬಂದಿರುವುದು. ಇದರಿಂದ ''ವಿವಿಕ್ತಃ'' ಎಂದು ಪುಲ್ಲಿಂಗದಿಂದ ಟೀಕೆಯಲ್ಲಿ ಹೇಳಿರುತ್ತಾರೆ. ಇಲ್ಲದಿದ್ದರೆ ''ಅಂತರಮವಕಾಶಾವಧಿಪರಿಧಾನಾಂತರ್ಧಿಭೇದಸಾದೃಶ್ಯೇ'' ಎಂದು ಅಮರದಲ್ಲಿ ಅಂತರ ಶಬ್ದಕ್ಕೆ ನಪುಸಂಕಲಿಂಗವನ್ನು ಹೇಳಿರುವುದರಿಂದ ಪುಲ್ಲಿಂಗ ಪ್ರಯೋಗವು ತಪ್ಪಾದೀತು.

ಭಾಷ್ಯದಲ್ಲಿ ಸಮಗ್ರ ಶ್ರುತಿವಾಕ್ಯ ಏಕೆ ?

भावदीपः – भाष्ये समग्रवाक्योक्तिः शाखयोरेकरूप्येण समाख्यात्व-सिद्ध्या विज्ञानपदमात्मपदवत् जीवार्थकमिति दर्शनाय वा । 'आत्मनि तिष्ठन्' इत्यादिना सर्वेणाप्याधाराधेयभावकर्मकर्तृभावशरीरशरीरिभावादिना भेदाध्ययनसूचनाय वा । अत एव समाख्यानादिति वक्ष्यतीत्याहुः।

ಭಾಷ್ಯದಲ್ಲಿ ಸಮಗ್ರ ಶ್ರುತಿವಾಕ್ಯವನ್ನು ಏಕೆ ಹೇಳಿದ್ದಾರೆಂದರೆ ಎರಡು ಶಾಖೆಗಳು ಏಕರೂಪವಾಗಿರುವುದರಿಂದ ಸಮಾಖ್ಯಾಪ್ರಮಾಣವು ಪ್ರಬಲವಾಗಿದೆಯೆಂದು ಸಿದ್ಧವಾಗುತ್ತದೆ. ಅಥವಾ ವಿಜ್ಞಾನಪದವು ಆತ್ಮಪದದಂತೆ ಜೀವವೆಂಬ ಅರ್ಥವನ್ನು ಹೇಳುತ್ತದೆಂದು ತಿಳಿಸುವುದಕ್ಕಾಗಿಯೂ ಸಮಗ್ರವಾಕ್ಯವನ್ನು ಹೇಳಿರುತ್ತಾರೆ. ಅಥವಾ ''ಆತ್ಮನಿ ತಿಷ್ಠನ್'' ಇತ್ಯಾದಿಯಾಗಿ

ಸಕಲ ಪದಾರ್ಥಗಳಿಂದ ಆಧಾರ ಆಧೇಯಭಾವವು, ಕರ್ಮ-ಕರ್ತೃಭಾವವು, ಶರೀರ-ಶರೀರಿಭಾವವು ಇರುವುದರಿಂದ ಭೇದಾಧ್ಯಯನ ಮಾಡುತ್ತಿದ್ದಾರೆಂದು ಸೂಚಿಸುವುದಕ್ಕಾಗಿಯೂ ಸಮಗ್ರ ವಾಕ್ಯವನ್ನು ಉದಾಹರಿಸಿರುತ್ತಾರೆ. ಆದ್ದರಿಂದಲೇ 'ಸಮಾಖ್ಯಾನಾತ್' ಎಂದು ಮುಂದೆ ಹೇಳುತ್ತಾರೆ ಎಂದು ಕೆಲವರ ವ್ಯಾಖ್ಯಾನ.

ಅಂತರ್ಯಾಮಿಗೆ ಭೇದ ಹೇಳುವ ಉಭಯ ಸಮ್ಮತವಾಕ್ಯ ಯಾವುದು ?

ಭಾವದೀಪಃ – पूर्वमधिदैवेत्युक्त्या पृथिव्यादेश्चेतनत्वावगमेन 'पृथिव्या अन्तरः' इति प्राथमिकवाक्योक्त्यापि जीवान्तर्यामिणोर्भेदसिद्धौ चेतनत्वेनोभय-सम्मतत्वादात्मनीति वाक्यमुक्तं भाष्ये ।

ಹಿಂದೆ ಅಧಿದೈವಗಳೆಂದು ಹೇಳಲ್ಪಟ್ಟ ಪೃಥಿವ್ಯಾದಿಗಳನ್ನು ಚೇತನಗಳೆಂದು ಪರಿಗಣಿಸಿದ್ದರಿಂದ ''ಪೃಥಿವ್ಯಾ ಅಂತರಃ'' ಎಂಬ ಪ್ರಾರಂಭದ ವಾಕ್ಯದಲ್ಲಿ ಪೃಥಿವಿಯ ಅಂತರ್ಯಾಮಿಯು ಹೇಳಲ್ಪಟ್ಟಿದ್ದರು, ಜೀವ ಹಾಗೂ ಅಂತರ್ಯಾಮಿಗೆ ಭೇದವನ್ನು ಸ್ಥಾಪಿಸುವುದಕ್ಕಾಗಿ ಚೇತನತ್ವವು ಉಭಯಸಮ್ಮತವಾದ್ದರಿಂದ ''ಆತ್ಮನಿ'' ಎಂಬ ವಾಕ್ಯವನ್ನು ಭಾಷ್ಯದಲ್ಲಿ ಹೇಳಿರುತ್ತಾರೆ.

ಬೃಹದ್ಭಾಷ್ಯದಲ್ಲಿ ಹೇಳಿದ ಅರ್ಥವಿಶೇಷವೇನು ?

ಭಾವದೀಪಃ – 'आत्मा विज्ञानमिति च सर्वजीवाभिमानवान् ब्रह्मैवोक्तः' इति बृहद्भाष्ये तु सर्वजीवनियामकाद् विरिञ्चादपि भिन्नोऽन्तर्यामी किमु जीवादिति कैमुत्यायार्थान्तरमुक्तम् । अत एव तत्रैव षष्ठे 'यो विज्ञाने तिष्ठन्' 'य आत्मनि तिष्ठन्' इत्याद्युभययोर्जीवाभिप्रायेण पाठ इत्यप्युक्तम्। अधिकं चन्द्रिकायाम् ।

''ಆತ್ಮಾ ವಿಜ್ಞಾನಂ'' ಎಂಬುದು ಸಕಲ ಜೀವರಿಗೆ ಅಭಿಮಾನಿಯು ಜೀವೋತ್ತಮನಾದ ಚತುರ್ಮುಖಬ್ರಹ್ಮನೆಂದು ಬೃಹದ್ಭಾಷ್ಯದಲ್ಲಿ ಸಕಲ ಜೀವರ ನಿಯಾಮಕನಾದ ಚತುರ್ಮುಖಬ್ರಹ್ಮನಿಗಿಂತ ಅಂತರ್ಯಾಮಿಯು ಭಿನ್ನನಾಗಿದ್ದಾನೆಂದು ಹೇಳಲಾಗಿದೆ. ಜೀವೋತ್ತಮನಾದ ಚತುರ್ಮುಖಬ್ರಹ್ಮನಿಗಿಂತ ಅಂತರ್ಯಾಮಿಯು ಭಿನ್ನನೆಂದು ಹೇಳಿದ ಮೇಲೆ ಜೀವನಿಗಿಂತ ಭಿನ್ನ ಎಂದು ಪ್ರತ್ಯೇಕವಾಗಿ

ಹೇಳಬೇಕೇನು? ಎಂದು ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಆದ್ದರಿಂದಲೇ ಬೃಹದ್ಭಾಷ್ಯದಲ್ಲೇ ಆರನೆಯ ಅಧ್ಯಾಯದಲ್ಲಿ ''ಯೋ ವಿಜ್ಞಾನೇ ತಿಷ್ಠನ್', 'ಯಃ ಆತ್ಮನಿ ತಿಷ್ಠನ್'' ಎಂದು ವಿಜ್ಞಾನ ಮತ್ತು ಆತ್ಮಪದಗಳಿಂದ ಜೀವನನ್ನೇ ವಿವಕ್ಷಿಸಿದ್ದಾರೆ. ಆದ್ದರಿಂದ ''ಪಾಠಃ'' ಎಂದು ಹೇಳಿರುತ್ತಾರೆ. ಹೆಚ್ಚಿನ ವಿಚಾರವನ್ನು ಚಂದ್ರಿಕೆಯಲ್ಲಿ ತಿಳಿಯಬೇಕು.

ವಿಶೇಷವಿಚಾರ - ಶಂಕಾ - 'ಯ ಆತ್ಮನಿ' ಮತ್ತು 'ಯೋ ವಿಜ್ಞಾನೇ' ಇತ್ಯಾದಿ ಶ್ರುತಿಗಳನ್ನು ವ್ಯಾಖ್ಯಾನಿಸುವಾಗ ಬೃಹದಾರಣ್ಯಕ ಭಾಷ್ಯದಲ್ಲಿ 'ಆತ್ಮಾ ವಿಜ್ಞಾನಮಿತಿ ಚ ಸರ್ವಜೀವಾಭಿಮಾನವಾನ್ । ಬ್ರಹ್ಮೈವೋಕ್ತಃ..... ।' ಆತ್ಮ ಹಾಗೂ ವಿಜ್ಞಾನ ಶಬ್ದಗಳಿಂದ ಸಕಲ ಜೀವರ ಅಭಿಮಾನಿಯಾದ ಚತುರ್ಮುಖನೇ ಪ್ರತಿಪಾದ್ಯನಾಗಿದ್ದಾನೆಂದು ವ್ಯಾಖ್ಯಾನಿಸಿದ್ದಾರೆ. ಆದ್ದರಿಂದ 'ಶಾರೀರಸ್ಯ' ಎಂಬ ಸೂತ್ರದ ವಿಷಯವಾಕ್ಯದಲ್ಲಿರುವ ಆತ್ಮ ಹಾಗೂ ವಿಜ್ಞಾನ ಶಬ್ದಗಳು ಚತುರ್ಮುಖಬ್ರಹ್ಮನನ್ನು ಪ್ರತಿಪಾದಿಸುತ್ತವೆಂದು ಹೇಳಿರುವಾಗ ನೀವು ಜೀವನನ್ನು ಪ್ರತಿಪಾದಿಸುತ್ತವೆಂದು ವಿವಕ್ಷಿಸಿ ಜೀವನಿಂದ ಅಂತರ್ಯಾಮಿಗೆ ಭೇದವನ್ನು ಹೇಗೆ ಸಮರ್ಥಿಸುತ್ತೀರಿ ?

ಸಮಾಧಾನ - ಬೃಹದಾರಣ್ಯಕ ಭಾಷ್ಯದಲ್ಲಿ ಚತುರ್ಮುಖಬ್ರಹ್ಮಪರವಾಗಿ ಅರ್ಥೈಸಿರುವುದು ಸತ್ಯ. ಆದರೆ ಈ ಅಧಿಕರಣದ ಪೂರ್ವಪಕ್ಷವನ್ನು ತೋರಿಸುವಾಗ 'ಯ ಆತ್ಮನಿ' ಎಂಬಲ್ಲಿರುವ ಆತ್ಮಾದಿ ಶಬ್ದಗಳಿಗೆ ಆತ್ಮನಿಗೆ ಅಭಿಮಾನಿಯಾದ ದೇವತೆಯನ್ನು ವಿವಕ್ಷಿಸಿದರೆ. 'ಯಃ ಪೃಥಿವ್ಯಾಂ'' ಎಂಬಲ್ಲೂ ಸಹ ಪೃಥಿವೀ ಮೊದಲಾದ ಶಬ್ದಗಳಿಗೆ ಪೃಥಿವ್ಯಭಿಮಾನಿದೇವತೆಯನ್ನೇ ವಿವಕ್ಷಿಸಬೇಕಾಗುತ್ತದೆ. ಹಾಗೆ ಮಾಡಿದರೆ 'ಯಃ ಪೃಥಿವ್ಯಾಂ' ಇತ್ಯಾದಿ ವಾಕ್ಯಗಳಿಂದಲೇ ಭೇದವನ್ನು ಅಧ್ಯಯನ ಮಾಡಬೇಕಾದೀತು. ಆದರೆ ಪೂರ್ವಪಕ್ಷಿಗಳು ಪೃಥಿವ್ಯಾದಿಶಬ್ದಗಳಿಗೆ ಜಡಪರತ್ವವನ್ನು ಒಪ್ಪಿರುತ್ತಾರೆ. ಮತ್ತು ಆತ್ಮ ಹಾಗೂ ವಿಜ್ಞಾನ ಶಬ್ದಗಳಿಗೆ ಶಾರೀರನಾದ ಜೀವಪರತ್ವವನ್ನು ಒಪ್ಪಿರುತ್ತಾರೆ. ಆದ್ದರಿಂದ ಅಂತಹ ಪೂರ್ವಪಕ್ಷಿಯನ್ನು ಕುರಿತು ''ಯ ಆತ್ಮನಿ'' ಇತ್ಯಾದಿ ವಾಕ್ಯಗಳಿಂದ ಅಂತರ್ಯಾಮಿಗೆ ಶಾರೀರನಿಂದ = ಜೀವನಿಂದ ಭೇದವಿದೆ ಎನ್ನಲು ಪ್ರಮಾಣವನ್ನು ಹೇಳಿದ್ದಾರೆ. ಆದ್ದರಿಂದ ಬೃಹದಾರಣ್ಯಕ ಭಾಷ್ಯದ ವಿರೋಧಕ್ಕೆ ಅವಕಾಶವಿಲ್ಲ.

ಅಥವಾ ಜೀವಾಭಿಮಾನಿ ಚತುರ್ಮುಖನಿಗಿಂತಲೂ ಅವನಿಗೆ ನಿಯಾಮಕನಾದ ಕಾರಣ ಅವನಿಂದ ಅವನ ಅಂತರ್ಯಾಮಿಯು ಭಿನ್ನನಾದ ಮೇಲೆ ಚತುರ್ಮುಖನಿಗಿಂತ ಭಿನ್ನರಾದ ಜೀವರಿಂದ ಅಂತರ್ಯಾಮಿಗೆ ಭೇದವು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ ಎಂಬ ಅಭಿಪ್ರಾಯದಿಂದ ಆತ್ಮಶಬ್ದವು ಚತುರ್ಮುಖ ಪರ ಎಂದು ಶಂಕಾ ಮಾಡಲಾಗಿದೆ.

ಅಥವಾ 'ಯಃ ಪೃಥಿವ್ಯಾಂ' ಇತ್ಯಾದಿ ಶ್ರುತಿಯಲ್ಲಿ ಪೃಥಿವಾದ್ಯಭಿಮಾನಿ ದೇವತೆಯೇ ಅಂತರ್ಯಾಮಿಯಾಗಿದ್ದಾನೆಂದು ಪೂರ್ವಪಕ್ಷಿಯು ಹೇಳುತ್ತಿದ್ದಾನೆ. ಅಂತಹ ಪೂರ್ವಪಕ್ಷಿಯು 'ಯ ಆತ್ಮನಿ' ಎಂಬ ಶ್ರುತಿಯಲ್ಲಿಯೂ ಜೀವಾಭಿಮಾನಿಯಾದವನೇ ಅಂತರ್ಯಾಮಿಯಾಗಿದ್ದಾನೆಂದು ಹೇಳಬೇಕು.

ಇದು ತಪ್ಪು. 'ಆತ್ಮಾ ವಿಜ್ಞಾನಂ' ಎಂಬ ಸ್ಮೃತಿಯಿಂದ ಮತ್ತು ಪೃಥಿವ್ಯಾದಿಶಬ್ದಗಳ ಪ್ರಾಯಪಾಠಗಳ ಬಲದಿಂದ ಹಾಗೂ ಅಭಿಮಾನ್ಯಧಿಕರಣದ ನ್ಯಾಯದಿಂದಲೂ ಸಹ ಜೀವಾಭಿಮಾನಿಯಾದವನೇ ಆತ್ಮಶಬ್ದದ ಅರ್ಥನೆನಿಸಿರುತ್ತಾನೆ. ಆದರೆ 'ಯ ಆತ್ಮನಿ' ಇತ್ಯಾದಿ ಶ್ರುತಿಯಿಂದ ಪ್ರತಿಪಾದ್ಯನಾದ ವ್ಯಕ್ತಿಯು ಅಂತರ್ಯಾಮಿಯಾದರೂ ಅಭಿಮಾನಿಗಿಂತ ಭಿನ್ನನೆಂದು ಪ್ರಸಿದ್ಧನಾಗಿದ್ದಾನೆ. ಈ ಅಭಿಪ್ರಾಯದಿಂದ ಬೃಹದಾರಣ್ಯಕ ಭಾಷ್ಯದಲ್ಲಿ ಚತುರ್ಮುಖಪರತ್ವವನ್ನು ಆತ್ಮಶಬ್ದಕ್ಕೆ ಹೇಳಿರುತ್ತಾರೆ.

'ಯಃ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿ ಪೃಥಿವ್ಯಾದ್ಯಭಿಮಾನಿ ದೇವತೆಗಳಿಗಿಂತ ಭೇದವಿದೆಯೆಂಬ ಅಧ್ಯಯನವಾದರೂ ಸಮಾನನ್ಯಾಯದಿಂದ ಹೇಳಿದಂತಾಗುತ್ತದೆಂದು ಪ್ರತ್ಯೇಕವಾಗಿ ಹೇಳಿರುವುದಿಲ್ಲ.

ಉಪನಿಷತ್ತಿನಲ್ಲಿ 'ಯಃ ಪೃಥಿವ್ಯಾಂ ತಿಷ್ಠನ್' ಇತ್ಯಾದಿಯಾದ ವಾಕ್ಯವೇ ಮೊದಲಿರುತ್ತದೆ. ಆದರೆ ಭಾಷ್ಯದಲ್ಲಿ ಮೊದಲಿರುವ ವಾಕ್ಯವನ್ನು ಬಿಟ್ಟು ಅನಂತರ ಪ್ರಸಕ್ತವಾದ 'ಯಃ ಆತ್ಮನಿ ತಿಷ್ಠನ್, ಯೋ ವಿಜ್ಞಾನೇ ತಿಷ್ಠನ್' ಎಂಬೆರಡು ವಾಕ್ಯಗಳನ್ನು ಸ್ವೀಕರಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ ಈ ಎರಡು ವಾಕ್ಯಗಳಿಗೆ ಸಮಾನಾರ್ಥತ್ವವಿದೆ. ಚೇತನಪರತ್ವವೆಂಬರ್ಥವು ಪೂರ್ವಪಕ್ಷಿಗಳಿಗೂ ಹಾಗೂ ಸಿದ್ಧಾಂತಿಗಳಿಗೂ ಸಮ್ಮತವಾಗಿದೆ.

ಪ್ರಶ್ನೆ - ಅಂತರ ಶಬ್ದಕ್ಕೆ ಬೃಹದಾರಣ್ಯಕ ಭಾಷ್ಯದಲ್ಲಿ ಭಾಹ್ಯಾಪೇಕ್ಷೆ ಇಲ್ಲದೆ ರಮಿಸುವಿಕೆ ಎಂಬರ್ಥವನ್ನು ಹೇಳಿದ್ದಾರೆ. ಈ ಅಧಿಕರಣದ ಭಾಷ್ಯದಲ್ಲಿಯೂ, ಪ್ರಥಮ ಸೂತ್ರದ 'ಅಂತಃಸ್ತದ್ಧರ್ಮ' ಎಂಬುದರ ಅರ್ಥವೇ ಅಂತರತ್ವವೆಂದು ವ್ಯಾಖ್ಯಾನಿಸಿದ್ದಾರೆ. ಭೇದಾಧ್ಯಯನವಾದರೂ ಸಹ 'ಯ ಆತ್ಮನಿ ತಿಷ್ಠನ್ ಯಸ್ಯಾತ್ಮಾ ಶರೀರಂ ಯ ಆತ್ಮಾನಾಂ ಯಮಯತ್ಯೇಷ ತ ಆತ್ಮಾ'' ಇತ್ಯಾದಿಯಾದ ಭೇದಕಾಧ್ಯಯನದಿಂದ ಸಿದ್ಧವಾಗುತ್ತದೆ.

ಇನ್ನು 'ಏಷ ತ ಆತ್ಮಾ' ಎಂಬಲ್ಲಿರುವ ಆತ್ಮಶಬ್ದಕ್ಕೆ ಸ್ವರೂಪವೆಂದರ್ಥವನ್ನು ಮಾಡಬಾರದು. 'ತೇ' ಎಂಬಲ್ಲಿರುವ ಷಷ್ಠೀ ವಿಭಕ್ತಿಗೆ ಗೌಣಾರ್ಥವನ್ನು ಮಾಡಿದಂತಾಗುತ್ತದೆ. ಶರೀರಶಬ್ದದ ಸನ್ನಿಧಾನದಿಂದ ಆತ್ಮಶಬ್ದಕ್ಕೆ ಶರೀರಕ್ಕೆ ಪ್ರತಿಸಂಬಂಧಿಯಾದ ಆತ್ಮನೆಂಬರ್ಥವನ್ನೇ ಹೇಳಬೇಕು. ಈ ಉದ್ದೇಶದಿಂದಲೇ ಭಾಷ್ಯದಲ್ಲಿ 'ಯಃ ಆತ್ಮನಿ' ಇತ್ಯಾದಿ ವಾಕ್ಯಗಳನ್ನೂ ಸಹ

ಉದಾಹರಿಸಿರುತ್ತಾರೆ. ಹೀಗೆ ಭಾಷ್ಯದಲ್ಲಿ 'ಅಂತರ' ಶಬ್ದಕ್ಕೆ ಒಳಗಡೆ ಇದ್ದು ರಮಿಸುವಿಕೆ ಎಂಬರ್ಥವನ್ನು ಹೇಳಿರುವಾಗ ಭೇದಾಧ್ಯಯನದ ವಿಷಯದಲ್ಲಿ ಪ್ರಮಾಣವಾಗುತ್ತದೆಂದು ಹೇಗೆ ಹೇಳುತ್ತಿದ್ದೀರಿ?

ಉತ್ತರ - ಭಾಷ್ಯದಲ್ಲಿ ಕೈಮುತ್ಯದಿಂದ ಭೇದಾಧ್ಯಯನವನ್ನು ಹೇಳಿದ್ದಾರೆ. ಆದರೆ ನೇರವಾಗಿಯೇ ಭೇದಾಧ್ಯಯನವು ಸಿದ್ಧವಾಗಬೇಕೆಂಬ ಉದ್ದೇಶದಿಂದ ಟೀಕೆಯಲ್ಲಿ 'ಯ ಆತ್ಮನೋऽಂತರಃ' ಎಂಬಲ್ಲಿರುವ 'ಅಂತರ' ಶಬ್ದಕ್ಕೆ ಭೇದವೆಂಬರ್ಥವನ್ನು ಸ್ವೀಕರಿಸಿದ್ದಾರೆ.

ಬೃಹದಾರಣ್ಯಕ ಭಾಷ್ಯದಲ್ಲಾದರೂ 'ಯ ಆತ್ಮಾನಮತರಃ' ಎಂಬ ಮತ್ತೊಂದು ಶ್ರುತಿಯಲ್ಲಿರುವ 'ಅಂತರ' ಶಬ್ದವನ್ನೇ ಸ್ವೀಕರಿಸಿದ್ದಾರೆ. ಹೀಗೆ ಹೇಳಿದ್ದರಿಂದ ಪುನರುಕ್ತಿದೋಷ ಪರಿಹಾರವೆಂಬ ಮತ್ತೊಂದು ಪ್ರಯೋಜನವೂ ಲಾಭವಾಯಿತು. 'ಯ ಆತ್ಮಾನೋऽಂತರಃ, ಯೋ ವಿಜ್ಞಾನಾದಂತರಃ, ಯೋऽದ್‌ಭ್ಯೋऽಂತರಃ' ಇವೇ ಮೊದಲಾದ ಶ್ರುತಿಗಳಲ್ಲಿರುವ ಪಂಚಮಿ ವಿಭಕ್ತಿಯೂ ಸಹ ಸ್ವರಸವಾಯಿತು.

'ಯಂ ಪೃಥಿವೀ ನ ವೇದ, ಯಃ ಪೃಥಿವ್ಯಾ ಅಂತರಃ ಇತ್ಯಾದಿನಾ' ಇತ್ಯಾದಿಯಾದ ಪ್ರಥಮಸೂತ್ರದ ಭಾಷ್ಯದಲ್ಲಿ ಕೇವಲ ಪ್ರತೀಕ ಗ್ರಹಣಕ್ಕಾಗಿ 'ಪೃಥಿವೀಮಂತರಃ' ಎಂದು ಹೇಳಿರುತ್ತಾರೆ. ಈ ಅಭಿಪ್ರಾಯದಿಂದಲೇ 'ಅಂತರೋ ವಿವಿಕ್ತಃ' ಎಂಬ ಮಾತನ್ನೂ ಸಹ ಹೇಳಿದ್ದಾರೆಂದು ತಿಳಿಯಬೇಕು.

ವಿಷ್ಣುವಿಗೆ ಜಗಚ್ಛರೀರತ್ವದ ವಿಷಯದಲ್ಲಿ ನ್ಯಾಯವಿವರಣದ ವಿವರಣೆ ಏನು ?

भावदीपः – कथं 'शीर्यते' इति वचनेनोक्तशङ्कानिरासः । तदात्मकत्वत-द्देहत्वयोरन्यतरस्यापि विष्णावसमाधानादित्यतः पृथिव्यादिशरीरत्वमपि न निरवकाशम् । यौगिकशरीरत्वोपपत्तेर्विष्णोरपीति न्यायविवरणरीत्या भावमाह – यद्यपीति ।।

''ಶೀರ್ಯತೇ'' ಎಂಬ ಪ್ರಮಾಣದಿಂದ ಹಿಂದಿನ ಪೂರ್ವಪಕ್ಷವು ಹೇಗೆ ಪರಿಹಾರವಾಗುತ್ತದೆ. ಏಕೆಂದರೆ ತದಾತ್ಮಕತ್ವ ಹಾಗೂ ತದ್ದೇಹತ್ವ ಈ ಎರಡನ್ನೂ ಸಹ ವಿಷ್ಣುವಿನಲ್ಲಿ ಕೂಡಿಸಲು ಬರುವುದಿಲ್ಲವೆಂಬ ಆಶಂಕೆಗೆ ಪೃಥಿವ್ಯಾದಿಶರೀರಗಳೂ ಸಹ ನಿರವಕಾಶವಾದ ಲಿಂಗವಲ್ಲ. ಏಕೆಂದರೆ ಯೌಗಿಕವಾಗಿ ಶರೀರಶಬ್ದವು ವಿಷ್ಣುವಿನಲ್ಲಿ ಉಪಪನ್ನವಾಗುತ್ತದೆಂಬ ನ್ಯಾಯವಿವರಣದ ಪ್ರಕಾರ ಸಮಾಧಾನವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಯದ್ಯಪಿ'' ಇತ್ಯಾದಿ ವಾಕ್ಯಗಳಿಂದ.

ಶರೀರತ್ವ ಕೂಡಿಸಲು ಎರಡು ವಿಧಗಳಿವೆಯೇ ?

भावदीपः – उक्तप्रकारेति ।। तदात्मकत्वतद्देहकत्वप्रकारद्वयेनेत्यर्थः । आत्मादेरपि देहादिद्वारा शीर्यताऽस्त्येवेति 'यस्यात्मा शरीरम्' इत्याद्युपपत्तिरिति भावः ।

ಟೀಕೆಯಲ್ಲಿ ''ಉಕ್ತಪ್ರಕಾರ'' ಎಂದರೆ ತದಾತ್ಮಕತ್ವ ಹಾಗೂ ತದ್ದೇಹಕತ್ವವೆಂಬ ಎರಡು ಪ್ರಕಾರಗಳಿಂದ ಎಂದರ್ಥ. ಆತ್ಮಾದಿಗಳಿಗೂ ಕೂಡ ದೇಹಾದಿಗಳ ಮುಖಾಂತರ ನಾಶಾದಿಗಳು ಉಂಟಾಗುತ್ತದೆ. ಆದ್ದರಿಂದ ''ಯಸ್ಯಾತ್ಮಾ ಶರೀರಂ'' ಎಂಬುದು ಉಪಪನ್ನವಾಗುತ್ತದೆ ಎಂದು ತಿಳಿಯಬೇಕು.

ಗೌಣಶರೀರತ್ವ ಉಲ್ಲೇಖದ ಆಂತರ್ಯವೇನು ?

भावदीपः – बृहद्भाष्ये तु

'पृथिव्याद्या देवतास्तु देहवद्यद्वशत्वतः ।
शरीरमिति चोच्यन्ते यस्य विष्णोर्महात्मनः ।।'

इति यद् गौणशरीरत्वरूपं समाध्यन्तरमुक्तम्, तत्तु पुराणादौ जगतो ब्रह्मकायत्वाद्युक्तेरपि निर्वाहार्थम्। तत्र शीर्यतारूपयोगसम्भवादिति ज्ञेयम् ।

ಬೃಹದ್ಭಾಷ್ಯದಲ್ಲಿ

''ಪೃಥಿವ್ಯಾದ್ಯಾ ದೇವತಾಸ್ತು ದೇಹವದ್ಯದ್ವಶತ್ವತಃ।
ಶರೀರಮಿತಿ ಚೋಚ್ಯಂತೇ ಯಸ್ಯ ವಿಷ್ಣೋರ್ಮಹಾತ್ಮನಃ''

ಎಂದು ಗೌಣವಾದ ಶರೀರವನ್ನು ವಿವಕ್ಷಿಸಿ ಮತ್ತೊಂದು ಸಮಾಧಾನವನ್ನು ಹೇಳಿರುತ್ತಾರೆ. ಇದು ಕೇವಲ ಪುರಾಣಾದಿಗಳಲ್ಲಿ ಹೇಳಲ್ಪಟ್ಟ ಜಗತ್ತೇ ಬ್ರಹ್ಮನ ಶರೀರವಾಗಿದೆ ಎಂದು ಹೇಳಿದ ಮಾತುಗಳನ್ನೂ ಸಹ ಕೂಡಿಸುವುದಕ್ಕಾಗಿ ಎಂದು ತಿಳಿಯಬೇಕು. ಏಕೆಂದರೆ ಶೀರ್ಯತ್ವವೆಂಬ ಯೋಗಾರ್ಥವನ್ನು ಅಲ್ಲಿ ವಿವಕ್ಷಿಸಲಾಗದು.

'ಇತಿವಚನಾತ್' ಎಂಬ ಭಾಷ್ಯದ ಅಭಿಪ್ರಾಯವೇನು ?

भावदीपः – 'तथापि' इत्याद्यङ्गीकारवादः । वस्तुतस्त्वज्ञरूढ्यपेक्षयास्मृत्युक्त-योग प्राबल्यस्य 'कम्पनात्' इत्यत्र व्युत्पादयिष्यमाणत्वात् । स्मार्तयोगादेव पौराणिकरूढेरपि भावाच्च । अत एव भाष्ये 'इति वचनात्' इति योगस्य वाचनिकत्वमुक्तम् ।

''ತಥಾಪಿ'' ಎಂಬುದು ಅಂಗೀಕಾರವಾದವಾಗಿದೆ. ವಿಚಾರ ಮಾಡಿದರೆ ಅಜ್ಞರೂಢಿಗಿಂತಲೂ ಸ್ಮೃತಿಯಲ್ಲಿ ಹೇಳಿದ ಯೋಗರೂಢಿಯು ಪ್ರಬಲವಾಗಿದೆ ಎಂದು ''ಕಂಪನಾತ್'' ಎಂಬ ಸೂತ್ರದಲ್ಲಿ ಮುಂದೆ ಸಮರ್ಥಿಸುತ್ತಾರೆ. ಸ್ಮೃತಿಸಿದ್ಧವಾದ ಯೋಗದ ಜೊತೆಗೆ ಪೌರಾಣಿಕರೂಢಿಯೂ ಸಹ ಇರುತ್ತದೆ ಎಂದು ತಿಳಿಯಬೇಕು. ಆದ್ದರಿಂದಲೇ ಭಾಷ್ಯದಲ್ಲಿ ''ಇತಿ ವಚನಾತ್'' ಎಂದು ಯೋಗವು ಸ್ಮೃತಿವಚನದಿಂದ ಸಿದ್ಧವಾಗಿದೆಯೆಂದು ಹೇಳಿದ್ದಾರೆ.

ಸಿದ್ಧಾಂತಫಲವನ್ನು ಎಲ್ಲಿ ಹೇಳಿದ್ದಾರೆ ?

भावदीपः – निरवकाशेति ।। जन्मादिनयरीत्येति भावः ।। अत इति ।। निरवकाशानेकलिङ्गसत्वात् परपक्षे साधकाभावाद्बाधकभावाच्च सूत्रत्रयोक्त-हेत्वंशार्थः । स एवेति फलोक्तिः ।। २० ।।

।। इति राघवेन्द्रयतिकृते भावदीपे अन्तर्याम्याधिकरणम् ।।

ನಿರವಕಾಶತ್ವವನ್ನು ಜನ್ಮಾಧಿಕರಣದಲ್ಲಿ ಹೇಳಿದ ಪ್ರಕಾರ ತಿಳಿಯಬೇಕು. ನಿರವಕಾಶವಾದ ಅನೇಕ ಲಿಂಗಗಳಿರುವುದರಿಂದ ಮತ್ತು ಪರಪಕ್ಷದಲ್ಲಿ ಸಾಧಕವಿಲ್ಲದಿರುವುದರಿಂದ ಮತ್ತು ಬಾಧಕ-ವಿರುವುದರಿಂದ ಎಂದು ಮೂರುಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಭಾಗದ ಅರ್ಥವನ್ನು ''ಅತಃ'' ಎಂಬ ಪದವು ಹೇಳುತ್ತಿದೆ. ''ಸ ಏವ'' ಎಂದು ಸಿದ್ಧಾಂತದ ಫಲವನ್ನು ಹೇಳುತ್ತಿದ್ದಾರೆ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಅಂತರ್ಯಾಮ್ಯಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ಅಂತರ್ಯಾಮ್ಯಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।
।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

प्रणम्य गुणसम्पूर्णं दोषातीतं रमापतिम् ।
पूर्णबोधं गुरूनन्यान् कुर्मः सूत्रार्थसङ्ग्रहम् ।।

प्रथमाध्यायस्य द्वितीयः पादः
अन्तर्याम्यधिकरणम् (१।२।५)

ಅಧಿದೈವಶಬ್ದಕ್ಕೆ ಉಪಲಕ್ಷಣಯಾ ಅರ್ಥವೇನು ?

।। अन्तर्याम्यधिदैवादिषु तद्धर्मव्यपदेशात् ।। १-२-१८ ।।

अत्र नयेऽन्तःस्थितिरूपभावयुक्तं नियमनाख्यं क्रियात्मकं लिङ्गं समन्वीयते । अधिदैवादिपदेन तत्तत्प्रकरणं लक्ष्यते । तदिति तन्त्रम् । 'तत्तु' इत्यस्ति ।

ಈ ಅಧಿಕರಣದಲ್ಲಿ 'ಅಂತಃಸ್ಥಿತಿ' ಎಂಬ ಭಾವಧರ್ಮದಿಂದ ಸಹಿತವಾದ ನಿಯಮನ ಎಂಬ ಕ್ರಿಯಾರೂಪವಾದ ಲಿಂಗವನ್ನು ಸಮನ್ವಯಮಾಡುತ್ತಿದ್ದಾರೆ. ಸೂತ್ರದಲ್ಲಿರುವ 'ಅಧಿದೈವಾದಿ' ಎಂಬಲ್ಲಿ ಆದಿಪದದಿಂದ ಅಧಿದೈವ ಪ್ರಕರಣವನ್ನು ವಿವಕ್ಷಿಸುವಂತೆ ಅಧಿಭೂತಪ್ರಕರಣ,

ಅಧ್ಯಾತ್ಮಪ್ರಕರಣಗಳನ್ನೂ ಸಹ ಲಕ್ಷಣಯಾ ವಿವಕ್ಷಿಸಬೇಕು. 'ತದ್ಧರ್ಮವ್ಯಪದೇಶಾತ್' ಎಂಬಲ್ಲಿರುವ 'ತತ್'ಎಂಬ ಪದವನ್ನು ಎರಡು ಬಾರಿ ಆವೃತ್ತಿಮಾಡಿಕೊಳ್ಳಬೇಕು. 'ತತ್ತು' ಎಂಬ ಪದವಂತೂ ಇಲ್ಲಿಯೂ ಅನ್ವಯವಾಗುತ್ತದೆ.

ಅಂತರ್ಯಾಮ್ಯಧಿಕರಣದ ಸೂತ್ರಾರ್ಥವೇನು ?

''ಏಷ ತ ಆತ್ಮಾऽತರ್ಯಾಮ್ಯಮೃತಃ'' ಇತಿ ಶ್ರುತೋऽನ್ತರ್ಯಾಮೀ ಬ್ರಹ್ಮೈವ ನ ತು ಪ್ರಕೃತಿಸ್ತತ್ತದಭಿಮಾನೀ ವಾ । ಕುತಃ? ಅಧಿದೈವಾಧಿಭೂತಾದಿಪ್ರಕರಣೇಷು ತಸ್ಯಾನ್ತರ್ಯಾಮಿಣಃ ಸಮ್ಬನ್ಧಿತಯಾ ತಸ್ಯ ಬ್ರಹ್ಮಣೋ ಧರ್ಮಸ್ಯ ''ಯಂ ಪೃಥಿವೀ ನ ವೇದ ಯಂ ಪೃಥಿವೀಮನ್ತರೋ ಯಮಯತಿ'' ಇತ್ಯಾದಿನಾ ಪೃಥಿವ್ಯಾದ್ಯವಿದಿತತ್ವಾನ್ತರತ್ವಾದೇರ್ವ್ಯಪದೇಶಾದಿತ್ಯರ್ಥಃ ।

'ಏಷ ತ ಆತ್ಮಾऽಂತರ್ಯಾಮ್ಯಮೃತಃ' ಎಂಬ ಶ್ರುತಿಯಲ್ಲಿ ಅಂತರ್ಯಾಮಿಯಾಗಿ ಪ್ರತಿಪಾದ್ಯನಾದವನು ಬ್ರಹ್ಮನೇ ಆಗಿದ್ದಾನೆ. ಪ್ರಕೃತಿಯಾಗಲೀ ಪೃಥಿವ್ಯಾದಿಗಳ ಅಭಿಮಾನಿ ಜೀವರುಗಳಾಗಲೀ ಪ್ರತಿಪಾದ್ಯರಾಗಿಲ್ಲ. ಏಕೆಂದರೆ, ಅಧಿದೈವ, ಅಧಿಭೂತ, ಅಧ್ಯಾತ್ಮಪ್ರಕರಣಗಳಲ್ಲಿ ತಸ್ಯ = ಅಂತರ್ಯಾಮಿಗೆ ಸಂಬಂಧಿಸಿದ, ತಸ್ಯ = ಬ್ರಹ್ಮನ ಧರ್ಮಸ್ಯ = 'ಯಂ ಪೃಥಿವೀ ನ ವೇದ', 'ಯಃ ಪೃಥಿವೀಮಂತರೋ ಯಮಯತಿ' ಇತ್ಯಾದಿ ಶ್ರುತಿಗಳಿಂದ ತಿಳಿಯಲ್ಪಡುವ ಪೃಥಿವ್ಯಾದ್ಯವಿದಿತತ್ವ, ಅಂತರತ್ವ ಮೊದಲಾದ ಧರ್ಮಗಳ ವ್ಯಪದೇಶಾತ್ = ಉಲ್ಲೇಖ ಮಾಡಿರುವುದರಿಂದ ಎಂದು.

ಸೂತ್ರದಲ್ಲಿ ಅಧಿದೈವ ಶಬ್ದದ ಪ್ರಯೋಗ ಏಕೆ ?

तत्त्वित्यनुवृत्तावपि पुंनिर्देशो निर्णेयश्रुत्यनुसारात् । 'तद्धर्मव्यपदेशात्' इत्येव पूर्तावधिदैवेत्युक्तिः पृथिव्यादेश्चेतनत्वसूचनार्था । तेन जडावेद्यत्वं प्रकृत्यादावपि युक्तमिति न शङ्क्यम् ।

ವಸ್ತುತಃ 'ತತ್ತು' ಎಂಬ ಪದವು ಅನುವೃತ್ತಿಯಿಂದ ಸಿದ್ಧವಾಗುತ್ತಿದೆ. ಆದರೂ ಸಹ 'ಏಷ ತ ಆತ್ಮಾ' ಎಂಬ ನಿರ್ಣೇಯಶ್ರುತಿಗೆ ಅನುಸಾರಿಯಾಗಿ 'ಅಂತರ್ಯಾಮೀ' ಎಂಬುದಾಗಿ ಪುಲ್ಲಿಂಗ ಪ್ರಯೋಗವನ್ನು ಮಾಡಿದ್ದಾರೆ.

'ತದ್ಧರ್ಮವ್ಯಪದೇಶಾತ್' ಎಂಬುದರಿಂದಲೇ ಸೂತ್ರದ ತಾತ್ಪರ್ಯವನ್ನು ಹೇಳಿದಂತಾಗುತ್ತದೆ. ಪುನಃ 'ಅಧಿದೈವ' ಎಂದು ಹೇಳಿರುವ ಉದ್ದೇಶವೇನೆಂದರೆ ಪೃಥಿವ್ಯಾದಿಗಳು ಚೇತನ-ರಾಗಿದ್ದಾರೆಂಬುದನ್ನು ಸೂಚಿಸುವುದಕ್ಕಾಗಿ. ಇದರಿಂದ ಜಡಪದಾರ್ಥಗಳಿಂದ ತಿಳಿಯಲ್ಪಡ-ದಿರುವಿಕೆಯು ಪ್ರಕೃತ್ಯಾದಿಗಳಲ್ಲಿಯೂ ಯುಕ್ತವಾಗುತ್ತದೆಂಬ ಶಂಕೆಯನ್ನು ನಿರಾಕರಿಸಿದಂತಾಯಿತು.

ಪ್ರಕೃತಿ-ಜೀವರುಗಳಿಗೆ ಅಂತರ್ಯಾಮಿತ್ವವಿದೆಯೇ ?

ननु पृथिव्यादिशरीरत्वलिङ्गात् प्रकृतिजीवौ किं न स्यातामित्यत आह- नच स्मार्तमतद्धर्माभिलापात् ।। १-२-१९।।

'ಯಸ್ಯ ಪೃಥಿವೀ ಶರೀರಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿಶರೀರತ್ವವೆಂಬ ಲಿಂಗದಿಂದ ಪ್ರಕೃತಿ ಅಥವಾ ಅಭಿಮಾನಿಜೀವರು ಏಕೆ ಅಂತರ್ಯಾಮಿಗಳಾಗಬಾರದು? ಎಂಬ ಆಕ್ಷೇಪಕ್ಕೆ ಉತ್ತರವನ್ನು ನೀಡುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. ''ನ ಚ ಸ್ಮಾರ್ತಮತದ್ಧರ್ಮಾಭಿಲಾಪಾತ್''

ಸ್ಮಾರ್ತಶಬ್ದಕ್ಕೆ ಸಾಂಖ್ಯಸ್ಮೃತಿಯಲ್ಲಿ ಹೇಳಿದ ಎಂದರ್ಥ

चस्त्वर्थे । शारीरश्चेत्यनुकृष्यते । स्मार्तं साङ्ख्यस्मृत्युक्तं प्रधानम् । अन्तर्यामी तदेव न तु स्मार्तं शारीरो जीवश्च । कुतः? अतद्धर्माभिलापात्। तयोः स्मार्तजीवयोर्धर्माणां त्रिगुणत्वसंसारित्वादीनामभिलापाभावादित्यर्थः ।

ಸೂತ್ರಾರ್ಥ ಹೀಗಿದೆ - ಸೂತ್ರದಲ್ಲಿರುವ 'ಚ' ಶಬ್ದವನ್ನು 'ತು' ಶಬ್ದದ ಅರ್ಥದಲ್ಲಿ ಬಳಸಿದ್ದಾರೆ. 'ಶಾರೀರಶ್ಚ' ಎಂಬ ಮುಂದಿನ ಸೂತ್ರದ ಪದವನ್ನು ಇಲ್ಲಿ ಅನುಕರ್ಷಮಾಡಬೇಕು. 'ಸ್ಮಾರ್ತಮ್' ಎಂದರೆ ಸಾಂಖ್ಯಸ್ಮೃತಿಯಲ್ಲಿ ಹೇಳಲ್ಪಟ್ಟಿರುವ ಪ್ರಕೃತಿ ಎಂದರ್ಥ. ಅಂತರ್ಯಾಮಿಯು ಬ್ರಹ್ಮನೇ ಆಗಿದ್ದಾನೆ ಹೊರತು ಸ್ಮೃತಿಸಿದ್ಧವಾದ ಪ್ರಕೃತಿಯಾಗಲೀ

ಶಾರೀರನಾದ ಜೀವನಾಗಲೀ ಆಗುವುದಿಲ್ಲ. ಏಕೆಂದರೆ, 'ಅತದ್ಧರ್ಮಾಭಿಲಾಪಾತ್' ಸ್ಮೃತ್ಯುಕ್ತವಾದ ಪ್ರಕೃತಿ ಮತ್ತು ಜೀವರುಗಳ, ತ್ರಿಗುಣತ್ವ, ಸಂಸಾರಿತ್ವ ಮೊದಲಾದ ಧರ್ಮಗಳನ್ನು, ಅಭಿಲಾಪಾಭಾವಾತ್ = ಉಲ್ಲೇಖಮಾಡದ ಕಾರಣ ಎಂದು.

ಶಾರೀರತ್ವವನ್ನು ಸಾವಕಾಶ ಮಾಡಲು ಬರುತ್ತದೆ

शारीरत्वं तु ''शीर्यते नित्यमेवास्मात्'' इत्यादिना सावकाशमिति भावः ।

ಸೂತ್ರದಲ್ಲಿ 'ಶೀರ್ಯತೇ ನಿತ್ಯಮೇವಾಸ್ಮಾತ್' ಎಂಬ ಪ್ರಮಾಣವನ್ನು ಅನುಸರಿಸಿ ಪೃಥಿವ್ಯಾದಿಶರೀರತ್ವವು ಬ್ರಹ್ಮನಲ್ಲಿ ಸಾವಕಾಶವಾಗಿದೆಯೆಂದು ತಿಳಿಸಿದ್ದಾರೆ.

ಸ್ಮಾರ್ತ ಶಬ್ದದ ಆಂತರ್ಯವೇನು ?

स्मार्तेत्युक्तिः स्मृत्युक्तदिशा सर्वस्य तदुपादानकतया तदभेदेन तत्स्वरूपत्वाभिप्रयेण पृथिव्यादिशरीरत्वमिति पूर्वपक्षे युक्तिं सूचयितुम् ।

ಸ್ಮಾರ್ತ ಎಂದು ಹೇಳಿದ್ದರಿಂದ ಸಾಂಖ್ಯಸ್ಮೃತಿಯ ಪ್ರಕಾರ ಸಕಲವಸ್ತುಗಳು ಪ್ರಕೃತಿಗೆ ಉಪಾದಾನಕಾರಣವಾದ್ದರಿಂದ ಪ್ರಕೃತಿಯಿಂದ ಅಭಿನ್ನವಾಗಿವೆ. ಆದ್ದರಿಂದಲೇ ಪ್ರಕೃತಿಯು ಸಕಲಪದಾರ್ಥಗಳ ಸ್ವರೂಪವಾಗಿದೆಯೆಂಬ ಅಭಿಪ್ರಾಯದಿಂದ ಪೃಥಿವ್ಯಾದಿಶರೀರತ್ವವು ಪ್ರಕೃತಿಗೆ ಯುಕ್ತವಾಗುತ್ತದೆ. ಈ ಪೂರ್ವಪಕ್ಷಯುಕ್ತಿಯನ್ನು ಸೂಚಿಸಿದ್ದಾರೆ.

ಸೂತ್ರದಲ್ಲಿರುವ ಶಾರೀರಶಬ್ದದ ಅಭಿಪ್ರಾಯವೇನು ?

शारीरेत्युक्तिरपि शारीरत्वात्तत्तच्छरीरत्वं तत्तदभिमानिजीवस्य युक्तमिति सूचयितुमित्याहुः ।

ಇದರಂತೆ ಸೂತ್ರದಲ್ಲಿ ಶಾರೀರವೆಂಬ ಪದವೂ ಸಹ ಶರೀರವುಳ್ಳವರಾದ್ದರಿಂದ ಅಭಿಮಾನಿಜೀವರುಗಳು ಪೃಥಿವ್ಯಾದಿಗಳನ್ನೇ ಶರೀರವನ್ನಾಗಿ ಹೊಂದಿದ್ದಾರೆ ಎಂಬರ್ಥದಲ್ಲಿದೆ. ಆದ್ದರಿಂದ ಇದು ಯುಕ್ತವಾಗುತ್ತದೆಂದು ಸೂಚಿಸಿದ್ದಾರೆಂದು ಹೇಳುತ್ತಾರೆ.

ತತ್ವಪ್ರದೀಪದಲ್ಲಿ ಹೇಳಿದ ಸ್ಮಾರ್ತಶಬ್ದದ ಅಭಿಪ್ರಾಯವೇನು ?

तत्त्वप्रदीपे तु कापिलस्मृतिमात्रल्पितं, नतु श्रुत्युक्तमिति स्मार्तमित्युक्तम् ।

ತತ್ವಪ್ರದೀಪದಲ್ಲಾದರೂ ಸಾಂಖ್ಯರ ಪ್ರಕೃತಿಯು ಕಾಪಿಲಸ್ಮೃತಿಯಿಂದ ಮಾತ್ರ ಕಲ್ಪಿತವಾಗಿದೆ; ಹೊರತು ಶ್ರುತಿಸಿದ್ಧವಾಗಿಲ್ಲವೆಂದು ಸೂಚಿಸಲು ''ಸ್ಮಾರ್ತಮ್'' ಎಂದು ಪ್ರಯೋಗಿಸಿದ್ದಾರೆಂದು ಹೇಳಿದ್ದಾರೆ.

ಸೂತ್ರದಲ್ಲಿನ ನಞ್ ಅಭಿಪ್ರಾಯವೇನು ?

प्रसज्यप्रतिषेधार्थकनञः क्रियासापेक्षत्वेनाऽसामर्थ्येऽपि ''असूर्यं पश्याः'' इत्यादाविवाकर्तरि चेति ज्ञापनात् समासः ।।

ಸೂತ್ರದಲ್ಲಿರುವ ನಞ್ಪದವು ಪ್ರಸಜ್ಯಪ್ರತಿಷೇಧಾರ್ಥಕದಲ್ಲಿರುವುದರಿಂದ ಕ್ರಿಯಾಸಾಪೇಕ್ಷವಾಗಿದೆ. ಆದ್ದರಿಂದ ಸಮಾಸವನ್ನು ಹೊಂದುವುದಿಲ್ಲ. ಆದರೆ 'ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ವ್ಯಾಕರಣ ಸೂತ್ರದಿಂದ ಸೂಚಿಸಿದಂತೆ 'ಅಸೂರ್ಯಂ ಪಶ್ಯಾಃ' ಎಂಬಲ್ಲಿ ಹೇಗೆ ಸಮಾಸವಾಗುತ್ತದೋ ಅದರಂತೆ ಇಲ್ಲಿಯೂ ಸಹ ಸಮಾಸವಾಗಿದೆಯೆಂದು ತಿಳಿಯಬೇಕು.

ಜೀವಪಕ್ಷದಲ್ಲಿ ಭಾದಕವಿದೆಯೇ ?

जीवपक्षे साधकं नेत्युक्त्वा बाधकं चाह -

।। शारीरश्चोभयेपि हि भेदेनैनमधीयते ।। १-२-२० ।।

ಜೀವನು ಅಂತರ್ಯಾಮಿಯಾಗಿದ್ದಾನೆಂಬ ಪಕ್ಷದಲ್ಲಿ ಯಾವುದೇ ಸಾಧಕಪ್ರಮಾಣಗಳಿರುವುದಿಲ್ಲವೆಂದು ಹೇಳಿ ಬಾಧಕಪ್ರಮಾಣವು ಇರುತ್ತದೆಂದು ತಿಳಿಸಲು ಮುಂದಿನ ಸೂತ್ರ ಹೊರಟಿದೆ. 'ಶಾರೀರಶ್ಚೋಭಯೇಪಿ ಹಿ ಭೇದೇನೈನಮಧೀಯತೇ'

ಶಾರೀರನು ಅಂತರ್ಯಾಮಿಯಾಗದೇ ಇರಲು ಇಬ್ಬರ ಅಧ್ಯಯನ ಕಾರಣ

नेति वर्तते । 'आत्मनोऽन्तरः' इति माध्यन्दिनायनाः 'विज्ञानादन्तरो विविक्तः' इति काण्वाश्चैनं जीवं प्रकृतादन्तर्यामिणो भेदेनाधीयते हि तस्मादतो न शारीरश्चान्तर्यामीत्यर्थः ।

ಸೂತ್ರಾರ್ಥ ಹೀಗಿದೆ -- ಹಿಂದಿನ ಸೂತ್ರದಿಂದ 'ನ' ಎಂಬುದನ್ನು ಅನುವೃತ್ತಿ ಮಾಡಬೇಕು. ಹಿ = ಯಾವ ಕಾರಣದಿಂದ, ಭೇದೇನೈನಮಧೀಯತೇ = 'ಆತ್ಮನೋऽಂತರಃ' ಎಂಬುದಾಗಿ ಮಾಧ್ಯಂದಿನಶಾಖಿಗಳು ಹಾಗೂ 'ವಿಜ್ಞಾನಾದಂತರಃ' ಎಂಬುದಾಗಿ ಕಾಣ್ವಶಾಖಿಗಳು ಜೀವನನ್ನು ಅಂತರ್ಯಾಮಿಯಿಂದ ಭಿನ್ನನಾಗಿದ್ದಾನೆಂದು ಅಧ್ಯಯನ ಮಾಡುತ್ತಾರೋ, ಅತಃ = ಆ ಕಾರಣದಿಂದ, ಶಾರೀರಶ್ಚ = ಜೀವನೂ ಸಹ, ನ = ಅಂತರ್ಯಾಮಿಯಾಗುವುದಿಲ್ಲ.

ಜೀವಶಬ್ದಕ್ಕೆ ಎರಡು ಅರ್ಥ

आत्मविज्ञानशब्दयोर्जीवार्थत्वादिति भावः । चकारो ''यस्तेजसि तिष्ठन्'' इत्यादिभेदाध्ययनात् चित्प्रकृतिर्नान्तर्यामीति समुच्चयार्थ इति तत्त्वप्रदीपकोक्तिः ।

ಏಕೆಂದರೆ ಆತ್ಮಾ ಮತ್ತು ವಿಜ್ಞಾನಶಬ್ದಗಳು ಜೀವ ಎಂಬರ್ಥದಲ್ಲಿ ಇರುವುದರಿಂದ ಎಂದು ಅಭಿಪ್ರಾಯ. ಸೂತ್ರದಲ್ಲಿರುವ ಚಶಬ್ದವು 'ಯಸ್ತೇಜಸಿ ತಿಷ್ಠನ್' ಎಂಬುದಾಗಿ ಚಿತ್ಪ್ರಕೃತಿಯನ್ನು ಅಂತರ್ಯಾಮಿಯಿಂದ ಭಿನ್ನವಾಗಿ ಅಧ್ಯಯನ ಮಾಡುವುದರಿಂದ ಚಿತ್ಪ್ರಕೃತಿಯು ಅಂತರ್ಯಾಮಿಯಾಗುವುದಿಲ್ಲವೆಂಬುದನ್ನು ಸಮುಚ್ಚಯ ಮಾಡುತ್ತಿದೆ. ಹೀಗೆ ತತ್ವಪ್ರದೀಪಕಾರರು ವ್ಯಾಖ್ಯಾನಿಸುತ್ತಾರೆ.

ಚಶಬ್ದಕ್ಕೆ ಪ್ರಾಚೀನ ಟೀಕಾ ಹಾಗೂ ನವೀನ ಟೀಕೆಗಳನುಸಾರ ಅರ್ಥವೇನು ?

नञोऽनुकर्षणार्थ इति टीकोक्तिः । आद्यसूत्रेऽनुवृत्तावधारणव्यावर्त्यं सयुक्तिकं दर्शयितुमिमौ योगौ ।।५।।

ಟೀಕೆಯಲ್ಲಿ ಹಿಂದಿನ ಸೂತ್ರದಿಂದ ನಞ್ ಎಂಬುದನ್ನು ಅನುವೃತ್ತಿಮಾಡಿಕೊಳ್ಳುವುದಕ್ಕಾಗಿ ಚಶಬ್ದವನ್ನು ಹೇಳಿರುತ್ತಾರೆಂದು ವ್ಯಾಖ್ಯಾನಿಸಿದ್ದಾರೆ.

ಮೊದಲನೆಯ ಸೂತ್ರದಲ್ಲಿ ಅನುವೃತ್ತವಾದ 'ತತ್ತು' ಎಂಬುದು ಅವಧಾರಣಾರ್ಥದಲ್ಲಿದೆ. ಇದರಿಂದ ವ್ಯಾವರ್ತ್ಯವಾದ ವಿಷಯವನ್ನು ಯುಕ್ತಿಬದ್ಧವಾಗಿ ತೋರಿಸಲು ಯೌಗಿಕಾರ್ಥವನ್ನು ಹೇಳುವ ಮುಂದಿನ ಎರಡು ಸೂತ್ರಗಳನ್ನು ರಚಿಸಿದ್ದಾರೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಮುಗಿಯಿತು ॥

* * * * *

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಅಂತರ್ಯಾಮ್ಯಧಿಕರಣ
ಮತ್ತು
ವಿಮರ್ಶೆ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - ಬ್ರಹ್ಮನಿಗೆ ಶರೀರವೇ ಇರುವುದಿಲ್ಲ. ಶರೀರವಿದ್ದರೆ ಮಾತ್ರ ಬೇರೆ ಪದಾರ್ಥಗಳನ್ನು ನಿಯಂತ್ರಣ ಮಾಡಲು ಸಮರ್ಥನಾಗುತ್ತಾನೆ. ಆದರೆ ಶರೀರವೇ ಇಲ್ಲದ ಬಟ್ಟೆ ಮೊದಲಾದ ವಸ್ತುಗಳು ಮತ್ತೊಂದನ್ನು ನಿಯಂತ್ರಿಸಲು ಹೇಗೆ ಅಸಮರ್ಥವಾಗಿವೆಯೋ? ಅದರಂತೆ ಬ್ರಹ್ಮನೂ ಸಹ ಶರೀರರಹಿತನಾಗಿರುವುದರಿಂದ ಬೇರೆ ಪದಾರ್ಥಗಳನ್ನು ನಿಯಂತ್ರಿಸಲು ಅಸಮರ್ಥನಾಗಿದ್ದಾನೆಂದು ಪೂರ್ವಪಕ್ಷ.

ಶರೀರರಾಹಿತ್ಯವೆಂಬ ಹೇತುವೇ ಅಸಿದ್ಧವಾಗಿದೆ. ಯಾವರೀತಿಯಾಗಿ ಚೈತ್ರನ ಕರ್ಮದಿಂದ ನಿಯಮಿತವಾದ ಶರೀರವು ಚೈತ್ರನ ಶರೀರವೆಂದು ಕರೆಸಿಕೊಳ್ಳುತ್ತದೋ ಅದರಂತೆ ಬ್ರಹ್ಮವಿಷಯಕವಾದ ಅವಿದ್ಯೆಯಿಂದ ಕಲ್ಪಿತವಾದ ಜಗತ್ತೇ ಬ್ರಹ್ಮನಿಗೆ ಶರೀರವಾಗಿದೆ. ಇಂತಹ ತನ್ನ ಶರೀರವಾದ ಜಗತ್ತನ್ನು ಬ್ರಹ್ಮನು ನಿಯಂತ್ರಣ ಮಾಡಬಹುದೆಂದು ಸಿದ್ಧಾಂತ.

ಇದನ್ನೇ ಭಾಮತಿಯಲ್ಲಿ ಹೀಗೆ ಹೇಳಲಾಗಿದೆ -

ಬ್ರಹ್ಮನಿಗೆ ಶರೀರವಿಲ್ಲವೆಂದರೆ ಏನರ್ಥ? ನಿಯಮ್ಯವಾದ ದೇಹಕ್ಕಿಂತ ಅತಿರಿಕ್ತವಾದ ದೇಹವಿಲ್ಲವೆಂದು ಹೇಳುವುದಾದರೆ ನಿಯಮ್ಯವಾದ ತನ್ನ ಶರೀರಕ್ಕಿಂತ ಅತಿರಿಕ್ತವಾದ ದೇಹವಿಲ್ಲದಿದ್ದರೂ ತನ್ನ ದೇಹಕ್ಕೆ ನಿಯಾಮಕನಾಗಬಹುದು. ಇನ್ನು ದೇಹಸಂಬಂಧವೇ ಇಲ್ಲವೆಂದು ಹೇಳುವುದಾದರೆ ಜೀವನ ಕರ್ಮದಿಂದ ಜೀವನು ಹೇಗೆ ಶರೀರವನ್ನು ಪಡೆಯುತ್ತಾನೋ ಅದರಂತೆ ಅವಿದ್ಯೆಯಿಂದ ಬ್ರಹ್ಮನೂ ಸಹ ಜಗತ್ತನ್ನೇ ಶರೀರವನ್ನಾಗಿ ಪಡೆಯುತ್ತಾನೆ ಎಂದು.

ಇದು ಸರಿಯಲ್ಲ. ಬ್ರಹ್ಮನ ಅವಿದ್ಯಾದಿಂದ ಕಲ್ಪಿತವಾದ ಜಗತ್ತು ಬ್ರಹ್ಮನ ಶರೀರವಾಗಿದೆಯೆಂದು ಹೇಳುತ್ತಿದ್ದೀರಿ. ಹಾಗಾದರೆ ಬ್ರಹ್ಮನು ಹೇಗೆ ಸ್ವತಃ ಶರೀರಶೂನ್ಯನಾಗಿದ್ದಾನೋ? ಅದರಂತೆ ರಜತ ಹಾಗೂ ದೇಹಗಳೂ ಸಹ ಸ್ವತಃ ಶರೀರಶೂನ್ಯವಾಗಿವೆ. ಆದ್ದರಿಂದ ಬ್ರಹ್ಮನ ಅವಿದ್ಯಾದಿಂದ ಕಲ್ಪಿತವಾದದ್ದು ಬ್ರಹ್ಮನ ಶರೀರವೆಂದು ಹೇಳುವಂತೆ ಶುಕ್ತಿಯ ಅಜ್ಞಾನದಿಂದ ಕಲ್ಪಿತವಾದ ರಜತವೂ ಸಹ ಶುಕ್ತಿಯ ಶರೀರವಾಗಬೇಕಾಯಿತು. ಸ್ಥಾಣುವಿನ ಅಜ್ಞಾನದಿಂದ ಕಲ್ಪಿತವಾದ ದೇಹವೂ ಸ್ಥಾಣುವಿನ ಶರೀರವೆಂದಾಗಬೇಕಾದೀತು.

ಮತ್ತು ಬ್ರಹ್ಮನೂ ತನ್ನ ಅಜ್ಞಾನದಿಂದ ಕಲ್ಪಿತನಾದ್ದರಿಂದ ನಮ್ಮಂತೆ ಬ್ರಹ್ಮನೂ ಸಹ ಸಂಸಾರಿಯಾಗಬೇಕಾದೀತು. ಅಂದರೆ ಅವಿದ್ಯಾಕಲ್ಪಿತವಾದದ್ದನ್ನೇ ಸಂಸಾರವೆಂದು ಅದ್ವೈತಿಗಳು ಹೇಳುವ ಕಾರಣ ಬ್ರಹ್ಮನೂ ಸಹ ಸ್ವ-ಅಜ್ಞಾನಕಲ್ಪಿತನಾದ್ದರಿಂದ ಸಂಸಾರಿಯಾಗಬೇಕಾದೀತೆಂದು ಅಭಿಪ್ರಾಯ.

ಮತ್ತು ಜಗತ್ತು ಸೃಷ್ಟಿಯಾಗುವ ಮೊದಲು ಬ್ರಹ್ಮನು ಅಶರೀರನಾಗಿದ್ದನು. ಅಶರೀರಿಯಾದ ಬ್ರಹ್ಮನಿಂದ ಜಗತ್ತಿನ ಸೃಷ್ಟಿಯಾಯಿತೆಂದು ಹೇಳುವಂತೆ ಅಶರೀರಿಯಾದ ಬ್ರಹ್ಮನಿಂದಲೇ ನಿಯಂತೃತ್ವವು ನಡೆಯಬಹುದು. ನಿಯಮನಕ್ಕೋಸ್ಕರ ಶರೀರವನ್ನು ಒಪ್ಪುವ ಅವಶ್ಯಕತೆಯಿರುವುದಿಲ್ಲ.

ಶರೀರವಿಲ್ಲದ ಕಾರಣ ನಿಯಂತೃತ್ವವು ಕೂಡುವುದಿಲ್ಲವೆಂದು ಆಶಂಕಿಸಿದಾಗ ಗೌಣವಾದ ಶರೀರವನ್ನು ಒಪ್ಪುವುದು ಅಯುಕ್ತವಾಗುತ್ತದೆ. (ನಿರ್ಗತಿಕನಾದ ವ್ಯಕ್ತಿಯಲ್ಲಿ ಗೌಣವಾದ ಹಣವನ್ನು ಸಮರ್ಪಿಸುವುದರಿಂದ ಅವನು ಶ್ರೀಮಂತನಾಗಲಾರ)

ಮತ್ತೆ - ಶುದ್ಧಬ್ರಹ್ಮನಿಗೆ ಶರೀರವನ್ನು ಅದ್ವೈತಿಗಳು ಒಪ್ಪುವುದಾದರೆ ಅವನಿಗೆ ನಿಯಂತೃತ್ವವನ್ನು ಒಪ್ಪಲು ಸಾಧ್ಯವಿಲ್ಲ. ಅಶುದ್ಧಬ್ರಹ್ಮನಿಗೆ ಶರೀರವನ್ನು ಒಪ್ಪುವುದಾದರೆ ಅವಿದ್ಯಾವಿಷಯನೆಂದು ಹೇಳಬೇಕು. ಆದರೆ ಅವಿದ್ಯಾಕಲ್ಪಿತನಾದ ಅಶುದ್ಧಬ್ರಹ್ಮನು ಅವಿದ್ಯೆಗೆ ವಿಷಯನಾಗಲು ಹೇಗೆ ಸಾಧ್ಯ ? ಇನ್ನು ಅವಿದ್ಯೆಗೆ ಶುದ್ಧಬ್ರಹ್ಮನು ವಿಷಯನಾಗಬಹುದು ಆದರೆ ಅವನಲ್ಲಿ ನಿಯಂತೃತ್ವ ಮೊದಲಾದ ಧರ್ಮಗಳನ್ನು ಹೇಳಲು ಬರುವುದಿಲ್ಲ.

ಮತ್ತು ಅದ್ವೈತಿಗಳ ಮತ್ತೊಂದು ಮಾತು ಹೀಗಿದೆ - ದೇಹೇಂದ್ರಿಯಾದಿಗಳಿಗೆ ಜೀವನು ನಿಯಾಮಕನಾಗಿದ್ದಾನೆ. ಇಂತಹ ಜೀವನು ಬೇರೊಬ್ಬ ನಿಯಾಮಕನಿಂದ ನಿಯಮ್ಯನಾದರೆ ಅಂತಹ ನಿಯಾಮಕನಾದ ಈಶ್ವರನಿಗೂ ಸಹ ಭಿನ್ನವಾದ ಮತ್ತೊಬ್ಬ ನಿಯಾಮಕನು ಇರಬೇಕಾಗುತ್ತದೆ. ಅವರಿಗೂ ಮತ್ತೊಬ್ಬ ನಿಯಾಮಕನ ಅನಿವಾರ್ಯತೆ ಇರುವುದರಿಂದ ಅನವಸ್ಥಾ ದೋಷವು ಬರುತ್ತದೆ. ಇದನ್ನು ಪರಿಹರಿಸಬೇಕೆಂದರೆ ನಿಯಂತೃವಾಗಿರುವ ಬ್ರಹ್ಮನು ನಿಯಮ್ಯನಾದ ಜೀವನಿಗಿಂತ ಅಭಿನ್ನನಾಗಿದ್ದಾನೆಂದೇ ಹೇಳಬೇಕು. ಆವಾಗ ಮತ್ತೊಬ್ಬ ನಿಯಮಕನ ಅಪೇಕ್ಷೆಯು ಬಾರದ ಕಾರಣ ಅನವಸ್ಥಾ ದೋಷವು ಪರಿಹಾರವಾಗುತ್ತವೆ ಎಂದು.

ಅದ್ವೈತಿಗಳ ಈ ನಿಲುವು ಅಯುಕ್ತವಾಗಿದೆ. ಅನವಸ್ಥಾದೋಷ ಪರಿಹಾರಕ್ಕಾಗಿ ಅಭೇದವನ್ನು ಹೇಳುವುದಾದರೆ ಸುತರಾಂ ನಿಯಂತೃತ್ವವೂ ಕೂಡುವುದಿಲ್ಲ.

ಮತ್ತು 'ಭೇದೇನೈನಮಧೀಯತೇ' ಎಂಬುದಾಗಿ ಸೂತ್ರವು ಭೇದವನ್ನೇ ಹೇಳುತ್ತಿದೆ. ಶ್ರುತಿಯೂ ಸಹ ಭೇದವನ್ನೇ ಹೇಳುತ್ತಿರುವುದರಿಂದ ಇವುಗಳಿಗೆ ಅಸ್ವಾರಸ್ಯವನ್ನು ಹೇಳಿದಂತಾಗುತ್ತದೆ.

ಕಾಲ್ಪನಿಕವಾದ ಭೇದವನ್ನು ಒಪ್ಪಿ ನಿಯಂತೃತ್ವಾದಿಗಳನ್ನು ಕೂಡಿಸಬಹುದಲ್ಲವೇ? ಎಂದು ಶಂಕಿಸಬಾರದು. ಹಾಗಾದರೆ ಯಾವರೀತಿಯಾಗಿ ದೇಹೇಂದ್ರಿಯಾದಿಗಳನ್ನು ನಿಯಮನ ಮಾಡುವ ಜೀವನಿಗೆ ವ್ಯಾವಹಾರಿಕ ಭೇದವುಳ್ಳ ಮತ್ತೊಬ್ಬ ಈಶ್ವರನು ನಿಯಾಮಕನಾಗಿದ್ದಾನೆಂದು ಹೇಳುತ್ತೀರೋ? ಅದರಂತೆ ನಿಯಾಮಕನಾದ ಅಂತಹ ಈಶ್ವರನಿಗೂ ವ್ಯಾವಹಾರಿಕಭೇದವುಳ್ಳ ಮತ್ತೊಬ್ಬ ನಿಯಾಮಕನನ್ನು ಒಪ್ಪಲೇಬೇಕಾಗುತ್ತದೆ. ಅವರಿಗೂ ಸಹ ವ್ಯಾವಹಾರಿಕಭೇದವುಳ್ಳ ಮತ್ತೊಬ್ಬ ನಿಯಾಮಕನ ಅಪೇಕ್ಷೆಯಿರುವುದರಿಂದ ವ್ಯಾವಹಾರಿಕ ನಿಯಂತೃಪರಂಪರೆಯಿರುವುದರಿಂದ ಅನವಸ್ಥಾದೋಷವು ಅದ್ವೈತಿಗಳಿಗೆ ತಪ್ಪಿದ್ದಲ್ಲ.

ಇನ್ನು ''ನ ವೈಶೇಷ್ಯಾತ್'' ಎಂಬಲ್ಲಿ ಹೇಳಿದ ನ್ಯಾಯದ ಪ್ರಕಾರ ಭಗವಂತನಿಗೆ ಸ್ವಾತಂತ್ರ್ಯ ಮೊದಲಾದ ವಿಶೇಷಗುಣವಿರುತ್ತದೆ. ಆದ್ದರಿಂದ ಅವನಿಗೆ ಮತ್ತೊಬ್ಬ ನಿಯಾಮಕನನ್ನು ಒಪ್ಪಬೇಕಾಗಿಲ್ಲ ಎಂದು ಉತ್ತರಿಸಿದರೆ ಅನವಸ್ಥಾ ಪರಿಹಾರವನ್ನು ಅಭೇದದಿಂದ ಮಾಡಿದಂತೆ ಆಗಲಿಲ್ಲ ; ಹೊರತಾಗಿ ಸ್ವಾತಂತ್ರ್ಯದಿಂದ ಎಂದಾಯಿತು. ಆದ್ದರಿಂದ ಸತ್ಯವಾದಭೇದವಿದ್ದರೆ ಏನು ತೊಂದರೆ ?

ಮತ್ತು ಅನವಸ್ಥಾದೋಷಕ್ಕೆ ಹೆದರಿ ಶರೀರ ಹಾಗೂ ಜೀವರಿಗೆ ಐಕ್ಯವೆಂದು ಒಪ್ಪಬೇಕಾಗುತ್ತದೆ. ಪ್ರಮಾಣವಿರೋಧಬರುತ್ತದೆಂದರೆ ಜೀವ ಹಾಗೂ ಪರಮಾತ್ಮನ ಐಕ್ಯವಿಷಯದಲ್ಲಿಯೂ 'ಭೇದೇನೈನಮಧೀಯತೇ' ಎಂಬ ಸೂತ್ರದಲ್ಲಿ ಹೇಳಿದ ಪ್ರಕಾರ ಅನೇಕ ಪ್ರಮಾಣಗಳ ವಿರೋಧವು ಬರುತ್ತದೆ.

ಹೀಗೆ ಅನವಸ್ಥಾವನ್ನು ಪರಿಹರಿಸುವುದಕ್ಕಾಗಿ ಅಭೇದವನ್ನು ಒಪ್ಪುವುದಾದರೆ ಕಾರ್ಯಕಾರಣಗಳಿಗೂ ಸಹ ಅಭೇದ ಬರಬೇಕಾದೀತು. ತನ್ನ ಕಾರ್ಯಕ್ಕೆ ಪೃಥಿವ್ಯಾದಿಗಳೂ ಕಾರಣವಾಗಿರಬಹುದು. ಆದರೆ ಈ ಎಲ್ಲಾ ಪೃಥಿವ್ಯಾದಿಗಳೂ ಬ್ರಹ್ಮನ ಕಾರ್ಯವಾಗಿವೆ. ಅಂತಹ ಬ್ರಹ್ಮನೂ ಸಹ ಮತ್ತೊಂದು ಪದಾರ್ಥದಿಂದ ಕಾರ್ಯಭೂತನೇ ಆಗಬೇಕು. ಹೀಗೆ ಅನವಸ್ಥಾ ದೋಷವು ಬರುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ಪೃಥಿವೀ ಹಾಗೂ ಬ್ರಹ್ಮನಿಗೂ ಅಭೇಧವನ್ನು ಒಪ್ಪಬೇಕಾದೀತು. ಹಾಗೆ ಅಭೇದ ಒಪ್ಪಿದರೆ ಪ್ರಮಾಣವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಜೀವ ಹಾಗೂ ಪರಮಾತ್ಮರ ಐಕ್ಯವಿಷಯದಲ್ಲಿಯೂ ಈ ದೋಷವು ಸಮಾನವಾಗಿದೆ ಎಂದು ಹಿಂದೆಯೇ ಹೇಳಲಾಗಿದೆ.

ಅನುವಾದ - ಜೀವನಿಂದ ಬ್ರಹ್ಮನು ಅಭಿನ್ನನಾಗಿದ್ದಾನೆಂದು ಅದ್ವೈತಿಗಳು ಹೇಳುವ ಕಾರಣ ಹೀಗಿದೆ - ಒಂದೇ ಶರೀರದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳು ಇರಲು ಸಾಧ್ಯವಿಲ್ಲ. ಆದ್ದರಿಂದ ಜೀವನಿಂದ ಬ್ರಹ್ಮನಿಗೆ ಐಕ್ಯ ಹೇಳಿದಾಗ ಒಬ್ಬನೇ ಪ್ರತ್ಯಕ್‌ಚೈತನ್ಯನನ್ನು ಒಪ್ಪಿದಂತಾಗುತ್ತದೆ ಎಂದು.

ಇದು ತಪ್ಪು. ಭೇದವಾದಿಗಳಾದ ನಮ್ಮನ್ನು ಕುರಿತು ನಿನಗೆ ಹೀಗೆ ಸಮರ್ಥಿಸಲು ದೃಷ್ಟಾಂತವೇ ಇರುವುದಿಲ್ಲ. ನಾವು ಒಂದೇ ಶರೀರದಲ್ಲಿ ಜೀವ ಹಾಗೂ ಬ್ರಹ್ಮರನ್ನು ಒಪ್ಪುತ್ತೇವೆ. ಇಂತಹ ನಮ್ಮನ್ನು ಕುರಿತು ಒಂದೇ ದೇಹದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳಿರುವಿರುವುದಿಲ್ಲವೆಂಬ ಪ್ರಮೇಯವನ್ನು ಸಾಧಿಸಲಾಗದು.

ಅಷ್ಟೇ ಅಲ್ಲದೆ, ಉಳಿದ ಶರೀರದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳಿರುವುದು ಅನುಭವಸಿದ್ಧವಾಗಿದೆ. ಯಾವ ಶರೀರದಲ್ಲಿ ಪಿಶಾಚಿಯು ಸೇರಿಕೊಂಡಿರುತ್ತದೋ ಅದು ಆ ಶರೀರದಲ್ಲಿ ನಿಂತು 'ಅಹಮ್'

ಎಂದು ಹೇಳುತ್ತದೆ. ಮೊದಲೇ ಇರುವ ಜೀವನೂ ಸಹ 'ಅಹಮ್' ಎನ್ನುತ್ತಾನೆ. ಹೀಗೆ ಒಂದೇ ಶರೀರದಲ್ಲಿ ಅಹಮರ್ಥವೆಂಬ ಎರಡು ಪ್ರತ್ಯಕ್‌ಚೈತನ್ಯಗಳಿರುವುದು ಅನುಭವಸಿದ್ಧವಾಗಿವೆ.

ಮತ್ತು ಐತರೇಯೋಪನಿಷತ್ತಿನಲ್ಲಿ ಸ್ಪಷ್ಟವಾಗಿ ''ಹಂತಾಸ್ಮಾಚ್ಛರೀರಾದುತ್ಕ್ರಮಾಮ ತದ್ಯಸ್ಮಿನ್ ಉತ್ಕ್ರಾಂತೇ'' ''ಹಂತೇದಂ ಪುನಶ್ಶರೀರಂ ಪ್ರವಿಶಾಮ ತದ್ಯಸ್ಮಿನ್ ನಃ ಪ್ರಪನ್ನೇ'' ಯಾರು ಈ ಶರೀರವನ್ನು ಬಿಟ್ಟುಹೋಗುವುದರಿಂದ ಶರೀರವು ಬೀಳುತ್ತದೋ ಯಾರ ಪ್ರವೇಶದಿಂದ ಶರೀರವು ಎದ್ದೇಳುತ್ತದೋ ಅವನೇ ಶ್ರೇಷ್ಠನು ಎಂಬುದಾಗಿ ಚಕ್ಷುರಾದ್ಯಭಿಮಾನಿದೇವತೆಗಳು ವಿವಾದ ಮಾಡಿದ್ದಾರೆ. ಈ ವಿವಾದದಿಂದ ಒಂದೇ ದೇಹದಲ್ಲಿ ಅನೇಕ ಚಕ್ಷುರಾದ್ಯಭಿಮಾನಿ- ದೇವತೆಗಳ 'ಅಹಮ್' ಎಂಬ ಪ್ರಯೋಗವು ಕೇಳಿಸುತ್ತಿದೆ. ಅಂದರೆ ಒಂದೇ ಶರೀರದಲ್ಲಿ ಅನೇಕ ಅಭಿಮಾನಿದೇವತೆಗಳಿದ್ದಾರೆಂಬುದನ್ನು ಉಪನಿಷತ್ತಿನ ಆಧಾರದಿಂದ ಒಪ್ಪಿಕೊಳ್ಳಬೇಕು.

ಒಂದೇ ದೇಹದಲ್ಲಿ ಅನೇಕ ಅಹಮರ್ಥರನ್ನು ಒಪ್ಪಿದರೆ ಏನೂ ಬಾಧಕವಿರುವುದಿಲ್ಲ.

ಆಕ್ಷೇಪ - ಅಂತರ್ಯಾಮಿಯನ್ನು ಹೇಳಿದ ಮೇಲೆ ''ನಾನ್ಯೋಽತೋಽಸ್ತಿ ದ್ರಷ್ಟಾ'' 'ಬ್ರಹ್ಮನಿಗಿಂತ ಅನ್ಯನಾದ ಮತ್ತೊಬ್ಬ ದ್ರಷ್ಟೃಪುರುಷನು ದೇಹದಲ್ಲಿರುವುದಿಲ್ಲ' ಎಂದು ನಿಷೇಧಿಸುತ್ತಿದೆ. ಹೀಗೆ ಮತ್ತೊಬ್ಬ ದ್ರಷ್ಟೃಪುರುಷನಿಲ್ಲವೆಂಬ ನಿಷೇಧವೇ ಬಾಧಕವಾಗಿದೆಯಲ್ಲವೇ?

ಸಮಾಧಾನ - ಈ ಬಾಧಕವನ್ನು ನ್ಯಾಯಾಮೃತಾದಿ ಗ್ರಂಥಗಳಲ್ಲಿ ನಿರಾಕರಿಸಿದ್ದೇವೆ. ಮುಖ್ಯವಾದ ದ್ರಷ್ಟೃಯೆನಿಸಿದವನು ಪರಮಾತ್ಮನೇ; ಹೊರತು ಜೀವನಲ್ಲ. ಜೀವನು ಅಸ್ವತಂತ್ರ ದ್ರಷ್ಟೃಯೆನಿಸಿ-ದ್ದಾನೆಂದು ಈ ಶ್ರುತಿಯ ಒಟ್ಟು ತಾತ್ಪರ್ಯ.

ಜೀವಬ್ರಹ್ಮೈಕ್ಯ ವಿಚಾರದಲ್ಲಿ ವಿವರಣ ಗ್ರಂಥ ಹೀಗೆ ಹೇಳಿದೆ - ''ಯೋ ವಿಜ್ಞಾನೇ ತಿಷ್ಠನ್'' ಇತ್ಯಾದಿ ಅಂತರ್ಯಾಮಿ ಪ್ರಕರಣದಲ್ಲಿ ಬ್ರಹ್ಮನು ಜೀವಾವಚ್ಛೇದಗಳಲ್ಲಿ ನಿಯಾಮಕನಾಗಿದ್ದಾನೆಂದು ಕೇಳಿಸುತ್ತಿದೆ.

ಇದು ವಸ್ತುತಃ ಅವಚ್ಛೇದಪಕ್ಷದಲ್ಲಿ ಯುಕ್ತವಾಗುವುದಿಲ್ಲ. ಏಕೆಂದರೆ ಘಟಾವಚ್ಛಿನ್ನವಾದ ಆಕಾಶವಿರುವ ಪ್ರದೇಶದಲ್ಲಿ ಬಾಹ್ಯಾಕಾಶವಿರುವುದು ಕಾಣಿಸುತ್ತಿಲ್ಲ. ಅಂದರೆ ಘಟದ ಒಳಗಡೆ ಘಟಾಕಾಶವಿದೆಯೆಂದು ಹೇಳುತ್ತಾರೆ ಹೊರತು. ಬಾಹ್ಯಾಕಾಶವಿದೆಯೆಂದು ಹೇಳುವುದಿಲ್ಲ. ಹೀಗೆ

ಒಂದು ಪ್ರದೇಶದಲ್ಲಿ ಎರಡು ಪದಾರ್ಥಗಳಿರುವುದು ಸಾಧ್ಯವಿಲ್ಲದ ಕಾರಣ ಜೀವ ಇರುವ ಪ್ರದೇಶದಲ್ಲಿ ಎಲ್ಲೆಡೆ ವ್ಯಾಪ್ತನಾದ ಬ್ರಹ್ಮನು ಇರಲು ಸಾಧ್ಯವಿಲ್ಲ.

ಹೀಗೆ ಅವಚ್ಛೇದಪಕ್ಷದಲ್ಲಿ ಜೀವ ಹಾಗೂ ಬ್ರಹ್ಮರು ಒಂದೇ ದೇಹದಲ್ಲಿ ಒಟ್ಟಿಗೆ ಇರುವುದು ಅಸಂಭಾವಿತವಾಗಬಹುದು. ಆದರೆ ಪ್ರತಿಬಿಂಬಪಕ್ಷದಲ್ಲಿ ಒಂದೇ ದೇಹದಲ್ಲಿ ಇಬ್ಬರೂ ಸಹ ಇರಬಹುದು. ಉದಾ :- ಜಲದಲ್ಲಿ ಸ್ವಾಭಾವಿಕವಾದ ಆಕಾಶವಿದೆ. ಅದೇ ಸಂದರ್ಭದಲ್ಲಿ ಪ್ರತಿಬಿಂಬವಾದ ಆಕಾಶವೂ ಸಹ ಕಾಣಿಸುತ್ತದೆ. ಹೀಗೆ ಒಂದೇ ಜಲ ಎಂಬ ಪದಾರ್ಥದಲ್ಲಿ ಬಿಂಬಭೂತವಾದ ಆಕಾಶ ಹಾಗೂ ಪ್ರತಿಬಿಂಬಭೂತವಾದ ಆಕಾಶವಿರುವುದು ಕಾಣಿಸುತ್ತಿದೆ. ಅದರಂತೆ ಒಂದೇ ದೇಹದಲ್ಲಿ ಬಿಂಬನಾದ ಬ್ರಹ್ಮನು ಹಾಗೂ ಪ್ರತಿಬಿಂಬನಾದ ಜೀವನು ಇರಬಹುದು.

ಈ ಹಿಂದಿನ ವಾದಕ್ಕೆ ಉತ್ತರ ಹೀಗೆ - ಘಟಾಕಾಶದಲ್ಲಿ ಬಾಹ್ಯಾಕಾಶವು ಹೇಗೆ ತೋರುತ್ತಿಲ್ಲವೋ? ಅದರಂತೆ ನೀರಿನಲ್ಲಿಯೂ ಪ್ರತಿಬಿಂಬಭೂತವಾದ ಆಕಾಶ ತೋರಿದರೂ ಬಿಂಬಭೂತವಾದ ಆಕಾಶವು ತೋರುವುದಿಲ್ಲ.

ಆಕಾಶವು ಒಟ್ಟು ಮೂರು ಬಗೆಯಾಗಿದೆ - ೧. ಆಕಾಶ ಸಾಮಾನ್ಯ, ೨. ಅವಚ್ಛಿನ್ನ ಆಕಾಶ, ೩. ಬಾಹ್ಯಾಕಾಶ ಎಂದು. ಘಟದ ಒಳಗಡೆ ಆಕಾಶಸಾಮಾನ್ಯವಿದೆ. ಮತ್ತು ಘಟಾವಚ್ಛಿನ್ನಾಕಾಶವೂ ಇದೆ. ಆದರೆ ಬಾಹ್ಯಾಕಾಶವು ಇರಲು ಸಾಧ್ಯವಿಲ್ಲವೆಂದು ನೀವೇ ಒಪ್ಪುತ್ತೀರಿ.

ಅದರಂತೆ ಪ್ರತಿಬಿಂಬ ಪಕ್ಷದಲ್ಲಿಯೂ ಮೂರು ಬಗೆಯ ಆಕಾಶವಿದೆ. ೧. ಆಕಾಶ ಸಾಮಾನ್ಯ, ೨. ಪ್ರತಿಬಿಂಬ ಆಕಾಶ, ೩. ಬಿಂಬಾಕಾಶ ಎಂದು. ಜಲದಲ್ಲಿ ಆಕಾಶ ಸಾಮಾನ್ಯ ಮತ್ತು ಪ್ರತಿಬಿಂಬಭೂತವಾದ ಆಕಾಶವಿದೆಯೆಂದು ಹೇಳಲು ಏನೂ ತೊಂದರೆಯಿಲ್ಲ. ಆದರೆ ಬಿಂಬಭೂತವಾದ ಆಕಾಶವು ಕಾಣಿಸುತ್ತಿದೆಯೆಂಬುದು ಮಾತ್ರ ಬಹಳ ತಪ್ಪಾಗುತ್ತದೆ.

ಆಕ್ಷೇಪ - ಘಟಕ್ಕೂ ಮತ್ತು ಜಲಕ್ಕೂ ವ್ಯತ್ಯಾಸವಿದೆ. ಜಲದಲ್ಲಿ ಆಕಾಶಸಾಮಾನ್ಯ ಹಾಗೂ ಪ್ರತಿಬಿಂಬಭೂತವಾದ ಆಕಾಶ ಎರಡೂ ಇರುವಂತೆ ಜಲಾವಚ್ಛಿನ್ನವಾದ ಆಕಾಶವೆಂಬ ಮೂರನೆಯ ಆಕಾಶವೊಂದಿದೆ. ಆದರೆ ಘಟದಲ್ಲಿ ಆಕಾಶಸಾಮಾನ್ಯ ಹಾಗೂ ಘಟಾವಚ್ಛಿನ್ನಆಕಾಶಗಳೆರಡೇ ಇರುತ್ತವೆ. ಬಿಂಬಪ್ರತಿಬಿಂಬಭಾವವಿಲ್ಲದ ಕಾರಣ ಪ್ರತಿಬಿಂಬಭೂತವಾದ ಆಕಾಶವಿದೆಯೆಂದು ಹೇಳಲಾಗದು. ಅದರಂತೆ ಶರೀರದಲ್ಲಿ ಚಿನ್ಮಾತ್ರನಿದ್ದಾನೆ. ದೇಹಾವಚ್ಛಿನ್ನವಾದ ಜೀವನಾದ ಆತ್ಮನಿದ್ದಾನೆ.

ಮತ್ತು ಪ್ರತಿಬಿಂಬಭೂತನಾದ ನಿಯಾಮಕಬ್ರಹ್ಮನಿದ್ದಾನೆ. ಹೀಗೆ ಜಲದ ದೃಷ್ಟಾಂತದಿಂದ ಒಂದೇ ಶರೀರದಲ್ಲಿ ಜೀವನ ಅಸ್ತಿತ್ವ ಹಾಗೂ ನಿಯಾಮಕಬ್ರಹ್ಮನ ಅಸ್ತಿತ್ವವನ್ನು ಕೂಡಿಸಬಹುದಲ್ಲವೇ?

ಆಕಾಶಕ್ಕೆ ಜಲದಿಂದ ಅವಚ್ಛೇದಕವಿರುವುದರಿಂದ ಮೂರುಬಗೆಯ ಆಕಾಶಗಳನ್ನು ಜಲದಲ್ಲಿ ಹೇಳಬಹುದು. ಆದರೆ ಬಿಂಬಪ್ರತಿಬಿಂಬಭಾವ ಇರುವ ಸ್ಥಳದಲ್ಲೆಲ್ಲಾ ಹೀಗೆ ಮೂರುಬಗೆಯಲ್ಲಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ದರ್ಪಣಾದಿಗಳಲ್ಲಿ ಮುಖದ ಪ್ರತಿಬಿಂಬವು ಕಾಣಿಸುತ್ತದೆ. ಇಂತಹ ದರ್ಪಣದಲ್ಲಿ ಅವಚ್ಛಿನ್ನವಾದ ಮುಖವನ್ನಾಗಲೀ ಕೇವಲ ಮುಖವನ್ನಾಗಲೀ ಹೇಳಲು ಸಾಧ್ಯವಿಲ್ಲ. ಕೇವಲ ಪ್ರತಿಬಿಂಬಭೂತವಾದ ಮುಖವಷ್ಟೇ ಇರುತ್ತದೆ. ಆದ್ದರಿಂದ ಪ್ರತಿಬಿಂಬಪಕ್ಷದಲ್ಲಿ ಒಂದೇ ದೇಹದಲ್ಲಿ ಎರಡು ಚೈತನ್ಯವನ್ನು ಉಪಪಾದಿಸಬಹುದೆಂಬ ನಿಮ್ಮ ಯುಕ್ತಿಯು ಅಸಾಧುವಾಗಿದೆ.

ಆಕ್ಷೇಪ - ಹಾಗಾದರೆ ಆಕಾಶದೃಷ್ಟಾಂತದಂತೆ ಬ್ರಹ್ಮನನ್ನು ನಾವು ವಿವಕ್ಷಿಸುತ್ತೇವೆ ಹೊರತು, ದರ್ಪಣದ ದೃಷ್ಟಾಂತದಂತೆ ಬ್ರಹ್ಮನನ್ನು ವಿವಕ್ಷಿಸುವುದಿಲ್ಲ. ಬ್ರಹ್ಮನಿಗೆ ಅವಿದ್ಯೆಯೆಂಬ ಉಪಾಧಿಯಿಂದ ಅವಚ್ಛೇದವನ್ನು ಹೇಳಬಹುದು. ಯಾವರೀತಿಯಾಗಿ ಜಲದಲ್ಲಿ ಅವಚ್ಛಿನ್ನವಾದ ಆಕಾಶ, ಆಕಾಶಸಾಮಾನ್ಯ ಹಾಗೂ ಪ್ರತಿಬಿಂಬಭೂತವಾದ ಆಕಾಶವು ಇರುತ್ತವೋ ಅದರಂತೆ ಶರೀರದಲ್ಲಿ ಅವಚ್ಛಿನ್ನನಾದ ಬ್ರಹ್ಮನು, ಪ್ರತಿಬಿಂಬಭೂತನಾದ ಬ್ರಹ್ಮನು ಚಿನ್ಮಾತ್ರನು ಇರಬಹುದೆಂದು ಹೇಳಿದರೆ ಏನು ತಪ್ಪು?

ಇದು ತಪ್ಪು. ವಸ್ತುತಃ ಜಲದಲ್ಲಿ ಜಲಾವಚ್ಛಿನ್ನವಾದ ಆಕಾಶವಿದ್ದರೆ ಮಾತ್ರವೇ ಆಕಾಶಸಾಮಾನ್ಯ ಹಾಗೂ ಪ್ರತಿಬಿಂಬಭೂತವಾದ ಆಕಾಶಗಳಿರುವುದು ಕಾಣಿಸುತ್ತದೆ.

ಆದರೂ ಸಹ ಜಲದಲ್ಲಿ ಬಾಹ್ಯಾಕಾಶವಾಗಲೀ, ಬಿಂಬಾಕಾಶವಾಗಲೀ ಇರುವುದಿಲ್ಲ. ಅದರಂತೆ ಬ್ರಹ್ಮನು ಜೀವನೆಂಬ ಶರೀರದಲ್ಲಿ ಚಿನ್ಮಾತ್ರರೂಪದಿಂದಾಗಲೀ, ಅವಚ್ಛಿನ್ನರೂಪದಿಂದಾಗಲೀ ಇರಬಹುದು. ಆದರೆ ನಿಯಾಮಕರೂಪದಿಂದ ಇರಲು ಸಾಧ್ಯವಿಲ್ಲ. ಹೇಗೆ ನೀರಿನಲ್ಲಿ ಬಾಹ್ಯಾಕಾಶವಾಗಲೀ, ಬಿಂಬಾಕಾಶವಾಗಲೀ ಇರುವುದಿಲ್ಲವೋ ಅದರಂತೆ ಬಿಂಬಭೂತನಾದ ಬ್ರಹ್ಮನಾಗಲೀ, ನಿಯಾಮಕ ಬ್ರಹ್ಮನಾಗಲೀ ಜೀವನಲ್ಲಿ ಇರುವುದಿಲ್ಲ.

ಇನ್ನು ಕೇವಲ ಆಕಾಶಮಾತ್ರಸ್ಥಾನದಲ್ಲಿ ಇರುವ ಚಿನ್ಮಾತ್ರನನ್ನು ದೇಹದಲ್ಲಿದ್ದಾನೆಂದು ಹೇಳಬೇಕು. ಆದರೆ ಇವನು ನಿಯಾಮಕನಾಗಲು ಸಾಧ್ಯವಿಲ್ಲ.

ಆದ್ದರಿಂದ ಅವಚ್ಛೇದ ಹಾಗೂ ಪ್ರತಿಬಿಂಬಗಳನ್ನು ಪ್ರತ್ಯೇಕವಾಗಿ ವಿವಕ್ಷಿಸಿದಾಗ; ಅಥವಾ ಒಟ್ಟಿಗೇ ವಿವಕ್ಷಿಸಿದಾಗ ಎರಡೂ ಪಕ್ಷಗಳಲ್ಲಿಯೂ ಬ್ರಹ್ಮನಿಗೆ ಅಂತರ್ಯಾಮಿತ್ವವು ಯುಕ್ತವಾಗುವುದಿಲ್ಲ.

ಜಲವು ಅವಚ್ಛೇದಕ್ಕೂ ಉಪಾಧಿಯಾಗುತ್ತದೆ. ಪ್ರತಿಬಿಂಬಕ್ಕೂ ಉಪಾಧಿಯಾಗುತ್ತದೆ. ಆದ್ದರಿಂದ ಅವಚ್ಛಿನ್ನಆಕಾಶವಿದೆಯೆಂದೂ; ಪ್ರತಿಬಿಂಬಭೂತವಾದ ಆಕಾಶವಿದೆಯೆಂದೂ ಸಹ ಹೇಳಬಹುದು. ಇವೆರಡಕ್ಕಿಂತ ಅತಿರಿಕ್ತವಾಗಿ ಆಕಾಶಮಾತ್ರವನ್ನು ಜಲದಲ್ಲಿ ಹೇಳಲು ಸಾಧ್ಯವಿಲ್ಲ. ಅದರಂತೆ ಪ್ರಕೃತ ದೇಹದಲ್ಲಿ ಅವಿದ್ಯಾಪ್ರತಿಬಿಂಬಿತನನ್ನು ಹಾಗೂ ಅವಿದ್ಯಾವಚ್ಛಿನ್ನನನ್ನು ಹೇಳಬಹುದು. ಆದರೆ ಅವಿದ್ಯಾಪ್ರತಿಬಿಂಬಿತನಾದ ವ್ಯಕ್ತಿಯಾಗಲೀ ಅವಿದ್ಯಾವಚ್ಛಿನ್ನನಾದ ವ್ಯಕ್ತಿಯಾಗಲೀ ಜೀವನೇ ಆಗಿದ್ದಾನೆ. ಈ ಎರಡಕ್ಕಿಂತ ವಿಭಿನ್ನವಾಗಿ ನಿಯಾಮಕಬ್ರಹ್ಮನಾಗಲೀ ಶುದ್ಧಚಿನ್ಮಾತ್ರನಾಗಲೀ ದೇಹದಲ್ಲಿದ್ದಾನೆಂದು ಹೇಳಲು ಸಾಧ್ಯವಿಲ್ಲ. ದರ್ಪಣಾದಿಗಳಲ್ಲಿಯೂ ಪ್ರತಿಬಿಂಬಕ್ಕಿಂತ ಅತಿರಿಕ್ತವಾದ ಮುಖವೆಂಬ ವ್ಯಕ್ತಿಯನ್ನು ಹೇಳಲು ಸಾಧ್ಯವಿಲ್ಲವೆಂಬ ವಿಚಾರವು ನ್ಯಾಯಾಮೃತಾದಿ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿದೆ.

ರಾಮಾನುಜರು ಹಾಗೂ ಅದ್ವೈತಿಗಳು ಮೊದಲನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ - ''ಅಂತರ್ಯಾಮ್ಯಧಿದೇವಾದಿಷು ತದ್ಧರ್ಮವ್ಯಪದೇಶಾತ್'' ಎಂಬ ಪ್ರಕರಣಗಳಲ್ಲಿ ಯಾರು ಅಂತರ್ಯಾಮಿಯಾಗಿ ಶ್ರುತನಾಗಿದ್ದಾನೋ ಅವನು ಪರಮಾತ್ಮನೇ ಆಗಿದ್ದಾನೆ. ಏಕೆಂದರೆ ಪರಮಾತ್ಮನ ಧರ್ಮಗಳು ಕೇಳಿಸುತ್ತಿರುವುದರಿಂದ ಎಂದು.

ಇದು ತಪ್ಪು. ಹಾಗೇ ಅರ್ಥೈಸುವುದಾದರೆ 'ಅಧಿದೈವಾದಿಷು' ಎಂಬ ಪದವೇ ವ್ಯರ್ಥವಾಗುತ್ತದೆ. ಅಧಿದೈವಾದಿ ಪ್ರಕರಣಗಳಲ್ಲಿ ಎಂದು ಹೇಳದಿದ್ದರೂ ಅಂತರ್ಯಾಮಿಯು ಪರಮಾತ್ಮನೇ ಆಗಿದ್ದಾನೆಂದು ನಿರ್ಣಯಿಸಲು ಬರುತ್ತದೆ.

ವಿಷಯವಾಕ್ಯವನ್ನು ಸೂಚಿಸುವುದಕ್ಕಾಗಿ ಅಧಿದೈವವೆಂಬ ಪದವು ಸಾರ್ಥಕವಲ್ಲವೇ? ಎಂದು ಪ್ರಶ್ನಿಸಬಾರದು. ಅಂತರ್ಯಾಮಿ ಪದದಿಂದಲೇ ಅಂತರ್ಯಾಮಿ ಶಬ್ದಗಳಲ್ಲಿರುವ ಎಲ್ಲಾ ಶ್ರುತಿವಾಕ್ಯಗಳು ಈ ಅಧಿಕರಣಕ್ಕೆ ವಿಷಯವಾಗುತ್ತದೆಂದು ಸಿದ್ಧವಾಗುತ್ತದೆ.

ಹೀಗೊಪ್ಪದಿದ್ದರೆ 'ಅಂತಸ್ತದ್ಧರ್ಮೋಪದೇಶಾತ್' ಇತ್ಯಾದಿ ಸೂತ್ರಗಳಲ್ಲಿಯೂ 'ಆದಿತ್ಯಾದಿಷು ಅಂತಃ' ಎಂಬುದಾಗಿ ಸಾಧ್ಯವನ್ನು ನಿರ್ದೇಶಿಸಬೇಕಾಗಿತ್ತು. ಏಕೆಂದರೆ _ಅಲ್ಲಿಯೂ ಸಹ ಆದಿತ್ಯಾದ್ಯಂತರ್ಗತತತ್ವವನ್ನೇ ಸಮರ್ಥಿಸುತ್ತಿರುವುದರಿಂದ.

ಆದ್ದರಿಂದ ನಾವು ಹೇಳುವಂತೆ ಅಧಿದೈವ, ಅಧ್ಯಾತ್ಮ, ಅಧಿಭೂತಾದಿಪ್ರಕರಣಗಳಲ್ಲಿ ಭಗವಂತನ ಧರ್ಮಗಳು ಹೇಳಲ್ಪಟ್ಟಿರುವುದರಿಂದ ಅಂತರ್ಯಾಮಿಯೆಂದು ಶ್ರುತನಾದವನು ಅವನೇ ಆಗುತ್ತಾನೆಂದು ಯಥಾಶ್ರುತವಾಗೇ ಅನ್ವಯ ಮಾಡಬೇಕು; ಹೊರತು ಅಧಿದೈವಾದಿಪ್ರಕರಣಗಳಲ್ಲಿ ಅಂತರ್ಯಾಮಿಯಾದವನು ಪರಮಾತ್ಮನೆಂದು ಅನ್ವಯ ಮಾಡಬಾರದು.

ನಿಮಗೂ ಸಹ ಅಧಿದೈವಶಬ್ದಕ್ಕೆ ಅಧಿದೈವಾದಿಪ್ರಕರಣವೆಂಬರ್ಥದಲ್ಲಿ ಲಕ್ಷಣಾ ಮಾಡುವಂತಹ ದೋಷ ಬರುತ್ತದಲ್ಲವೇ? ಎಂದು ಶಂಕಿಸಬಾರದು. ವೈಯರ್ಥ್ಯಕ್ಕಿಂತ ಲಕ್ಷಣಾವು ದೊಡ್ಡ ದೋಷವಲ್ಲ. ವೈಯರ್ಥ್ಯ ಹಾಗೂ ಲಕ್ಷಣಾ ಈ ದೋಷಗಳಲ್ಲಿ ವೈಯರ್ಥ್ಯವೇ ದೊಡ್ಡ ದೋಷ. ನಿಮಗೆ ವೈಯರ್ಥ್ಯ ಬರುತ್ತದೆ. ನಮಗೆ ಲಕ್ಷಣಾ ಬರುತ್ತದೆ.

ನಮ್ಮ ಪ್ರಕಾರ ಸೂತ್ರವನ್ನು ವ್ಯಾಖ್ಯಾನಿಸಿದಾಗ ಕೇವಲ ತದ್ಧರ್ಮವ್ಯಪದೇಶರೂಪವಾದ ಹೇತುವಷ್ಟೇ ಇರುವುದಲ್ಲ ಹೊರತಾಗಿ, ಭಗವತ್ಪ್ರತಿಪಾದಕವಾದ ಧರ್ಮಗಳ ಅಭ್ಯಾಸವೂ ಸಹ ಇರುತ್ತದೆಂದು ಹೇಳಿದಂತಾಗುತ್ತದೆ.

ಇನ್ನು ಪರರು 'ನಚ ಸ್ಮಾರ್ತಮ್' ಎಂಬ ಎರಡನೇ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - 'ಅತದ್ಧರ್ಮಾಭಿಲಾಪ' ಎಂದರೆ ಪ್ರಧಾನದ (ಪ್ರಕೃತಿಯ) ಧರ್ಮಕ್ಕೆ ವಿರುದ್ಧವಾದ ಧರ್ಮವನ್ನು ಹೇಳಿರುವುದರಿಂದ ಬ್ರಹ್ಮನೇ ಅಂತರ್ಯಾಮಿಯಾಗುತ್ತಾನೆ.

ಇದು ತಪ್ಪು. ಮೊದಲನೆಯ ಸೂತ್ರದಲ್ಲಿರುವ ''ತದ್ಧರ್ಮವ್ಯಪದೇಶಾತ್'' ಎಂಬ ಹೇತುವಿನಿಂದಲೇ ಈ ವಿಷಯವು ಸಿದ್ಧವಾಗಿರುವಾಗ ಪುನರುಕ್ತಿ ಬರುತ್ತದೆ. ಏಕೆಂದರೆ ಮೊದಲನೆಯ ಸೂತ್ರದಲ್ಲಿ ಬ್ರಹ್ಮನ ಧರ್ಮಗಳು ಹೇಳಲ್ಪಟ್ಟಿರುವುದರಿಂದ ಎಂದು ಅರ್ಥೈಸಲಾಯಿತು. ಬ್ರಹ್ಮನ ಧರ್ಮಗಳೆಲ್ಲವೂ ಪ್ರಧಾನದ ಧರ್ಮಕ್ಕೆ ವಿರುದ್ಧವೇ ಆಗಿವೆ. ಆದ್ದರಿಂದ ಒಂದೇ ಹೇತುವನ್ನು ಎರಡು ಸೂತ್ರದಲ್ಲಿ ಹೇಳಿದರೆ ಪುನರುಕ್ತಿಯು ಬಂದೇ ಬರುತ್ತದೆ. ಆದ್ದರಿಂದ ನಾವು ಹೇಳುವಂತೆ 'ಅತದ್ಧರ್ಮಾಭಿಲಾಪಾತ್' ಎಂಬ ಹೇತುವಿಗೆ ತ್ರಿಗುಣತ್ವವೇ ಮೊದಲಾದ ಪ್ರಕೃತಿಯ ಧರ್ಮಗಳನ್ನು ಹೇಳದ ಕಾರಣ ಎಂದು ವ್ಯಾಖ್ಯಾನಿಸಬೇಕು.

ಮತ್ತು ''ಭೇದವ್ಯಪದೇಶಾತ್'' ''ಭೇದವ್ಯಪದೇಶಾಚ್ಚಾನ್ಯಃ'' ''ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್'' ಇತ್ಯಾದಿಯಾದ. ಹಿಂದೆ ಬಂದಿರುವ ಅನೇಕ ಸೂತ್ರಗಳಲ್ಲಿ ಭೇದವೇ ಪ್ರತಿಪಾದಿಸಲ್ಪಟ್ಟಿವೆ. ಪ್ರಕೃತ ಪ್ರಸಕ್ತವಾಗಿರುವ ''ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ'' ಎಂಬ ಸೂತ್ರವೂ

ಸಹ ಭೇದವನ್ನೇ ಹೇಳುತ್ತಿದೆ. ಮುಂದೆ ಹೇಳಲಿರುವ ''ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ'' ''ಭೇದವ್ಯಪದೇಶಾತ್'' ಇತ್ಯಾದಿ ಅನೇಕ ಸೂತ್ರಗಳಲ್ಲಿ ಭೇದವನ್ನೇ ಪ್ರತಿಪಾದಿಸುತ್ತಾರೆ. ಹೀಗೆ ಹಿಂದಿನ, ಮುಂದಿನ ಮತ್ತು ಈಗಿನ ಸೂತ್ರಗಳೆಲ್ಲವೂ ಭೇದವನ್ನೇ ಪ್ರತಿಪಾದಿಸುತ್ತಿವೆ. ಇದಕ್ಕೆ ವಿರುದ್ಧವಾಗಿ ನೀವು ಅಭೇದವನ್ನು ಹೇಗೆ ಪ್ರತಿಪಾದಿಸುತ್ತೀರಿ?

ಅದ್ವೈತಮತವನ್ನು ದೂಷಿಸುವ ಭೇದಪ್ರತಿಪಾದಕ ಸೂತ್ರಗಳ ಸಮೂಹವನ್ನು ಅದ್ವೈತಿಗಳು ತಮ್ಮ ಸಿದ್ಧಾಂತ ಪರವಾಗಿ ನಾಚಿಕೆ ಬಿಟ್ಟು ವ್ಯಾಖ್ಯಾನಿಸುತ್ತಾರೆ. ಇದು ಹೇಗೆ? ಎಂಬುದು ಆಶ್ಚರ್ಯ.

ಒಂದು ವೇಳೆ ಭೇದಪ್ರತಿಪಾದಕವಾದ ಸೂತ್ರಗಳೆಲ್ಲವೂ ಮಿಥ್ಯಾಭೂತವಾದ ಭೇದವನ್ನು ಪ್ರತಿಪಾದಿಸುತ್ತಿವೆ ಎಂದು ತಮ್ಮ ವಾದವನ್ನು ಅದ್ವೈತಿಗಳು ಸಮರ್ಥಿಸಿಕೊಳ್ಳುವುದಾದರೆ ವೇದಪ್ರತಿಪಾದ್ಯವಾದ ಸುಳ್ಳು ಎಂಬ ಪದಾರ್ಥವನ್ನು ಈ ಸೂತ್ರಗಳು ಪ್ರತಿಪಾದಿಸುತ್ತಿವೆ ಎಂದು ಹೇಳಿದಂತಾಯಿತು.

ಹಾಗಾದರೆ ಬೌದ್ಧಾಗಮವೂ ಸಹ ವೇದಕ್ಕೆ ವ್ಯಾಖ್ಯಾನವಾಗಬಹುದು. ನಿನ್ನಂತೆ ಬೌದ್ಧನೂ ಸಹ ಬ್ರಹ್ಮಸೂತ್ರಗಳನ್ನು ವ್ಯಾಖ್ಯಾನಿಸುತ್ತಾನೆ.

ವೇದವನ್ನು ವ್ಯಾಖ್ಯಾನಿಸಿದ ಮೇಲೆ ಬೌದ್ಧನು. ಎಲ್ಲವೂ ಸಹ ಮಿಥ್ಯಾ. ತತ್ತ್ವವು ಶೂನ್ಯ ಎಂದು ಸಮರ್ಥಿಸಿ 'ಅಸದ್ವಾ ಇದಮಗ್ರ ಆಸೀತ್' ಇತ್ಯಾದಿ ಕೆಲವೇ ಕೆಲವು ಪ್ರಮಾಣಗಳನ್ನು ಆಧಾರವನ್ನಾಗಿ ನೀಡುತ್ತಾನೆ. ಆದ್ದರಿಂದ ಅಂತಹ ವೇದವೂ ಸಹ ಅವನಿಗೆ ತತ್ತ್ವವೇದಕವೇ ಆಗಬೇಕಾಗುತ್ತದೆ.

ಬೌದ್ಧರು ವೇದವನ್ನು ಅಪೌರುಷೇಯವಾದ್ದರಿಂದ ಪ್ರಮಾಣವೆಂದು ಹೇಳುವುದಿಲ್ಲ. ನಾವಾದರೂ ಅಪೌರುಷೇಯತ್ವವನ್ನು ಒಪ್ಪುತ್ತೇವಲ್ಲವೇ ಎಂದು ಅದ್ವೈತಿಗಳು ಅಹಂಕಾರದಿಂದ ಉತ್ತರಿಸಬಹುದು. ಆದರೆ ಕೇವಲ ವ್ಯವಹಾರಿಕವಾದ ವಿಷಯವನ್ನು ಪ್ರತಿಪಾದಿಸುವ ಮಾತ್ರದಿಂದ ಅಪೌರುಷೇಯ ಪ್ರಯುಕ್ತವಾದ ಪ್ರಾಮಾಣ್ಯವನ್ನು ವೇದಕ್ಕೆ ಸಮರ್ಥಿಸಿ- ದಂತಾಗುವುದಿಲ್ಲ. ಪ್ರಾಮಾಣ್ಯವು ನೀವು ನೀಡುವ ಕಾರಣದಿಂದ ಸಂತೋಷವನ್ನು ಹೊಂದುವುದಿಲ್ಲ.

ಅನೇಕ ಶ್ರುತಿಗಳ ಆಧಾರದಿಂದ ಪ್ರಯತ್ನಪೂರ್ವಕವಾಗಿ ಸೂತ್ರಗಳಿಂದ ಭೇದವನ್ನು ಸಮರ್ಥಿಸಲಾಗಿದೆ. ಹೀಗಿರುವಾಗ ಸ್ವತಃ ಭಾಷ್ಯಕಾರನೆಂಬ ಪಟ್ಟಿಯನ್ನು ಹಾಕಿಕೊಂಡ ನೀನು ಸೂತ್ರಗಳಿಗೆ ಸುಳ್ಳು ಸುಳ್ಳಾದ ಅರ್ಥವನ್ನು ಹೇಳುವುದು ಹೇಗೆ ಸರಿಯಾಗುತ್ತದೆ.

ಬೌದ್ಧನು ವೇದಪ್ರಾಮಾಣ್ಯವನ್ನು ಒಪ್ಪುವುದಿಲ್ಲ. ವೇದಬಾಹ್ಯನಾಗಿದ್ದಾನೆ. ಆದ್ದರಿಂದಲೇ ಅವೈದಿಕನಾಗಿದ್ದಾನೆಂದು ತಿಳಿದು ಎಲ್ಲ ವೈದಿಕರು ಬೌದ್ಧರನ್ನು ದೂರವಿಟ್ಟಿದ್ದಾರೆ.

ಆದರೆ ಅದ್ವೈತಿಗಳು ವೇದದ ಒಳಗಡೆ ಪ್ರವೇಶಿಸಿ ವೈದಿಕರೆಂಬ ಪಟ್ಟಿಯನ್ನು ಕಟ್ಟಿಕೊಂಡು ವೇದದ ಅಪ್ರಮಾಣ್ಯವನ್ನೇ ಸಾಧಿಸುವ ಗುರಿಯನ್ನು ಇಟ್ಟುಕೊಂಡಿದ್ದಾರೆ. ಇಂತಹ ಮಾಯಾವಾದಿಗಳು ಎಲ್ಲಾ ವೈದಿಕರಿಗೆ ಹಿತಶತ್ರುಗಳಾಗಿದ್ದಾರೆ. ಶತ್ರುವಿಗಿಂತ ಹಿತಶತ್ರುವಾದವನು ಬಹಳ ಅಪಾಯಕಾರಿ. ಆದ್ದರಿಂದ ಬೌದ್ಧರಿಗಿಂತಲೂ ಇಂತಹ ಮಾಯಾವಾದಿಗಳನ್ನು ಬಹಳಷ್ಟು ದೂರದಲ್ಲಿಡಬೇಕು.

ಇಲ್ಲಿಗೆ ಅಂತರ್ಯಾಮ್ಯಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಅದೃಶ್ಯತ್ವಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ.
ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ
ವಿಶೇಷ ವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ
ಮತ್ತು
ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ಅದೃಶ್ಯತ್ವಾಧಿಕರಣ

ಬ್ರಹ್ಮಸೂತ್ರ

'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। अदृश्यत्वादिगुणको धर्मोक्तेः ।। (१-२-२१)

ಅಥರ್ವಣೋಪನಿಷತ್ತಿನಲ್ಲಿ 'ಯತ್ತದದ್ರೇಶ್ಯಮ್' ಇತ್ಯಾದಿಯಾಗಿ ಹೇಳಲ್ಪಟ್ಟ ಅದೃಶ್ಯತ್ವಾದಿಗುಣಗಳು ಪರಮಾತ್ಮನಲ್ಲೇ ಬರುತ್ತವೆ. ಏಕೆಂದರೆ ಮೋಕ್ಷಕಾರಣವಾದ ಪರವಿದ್ಯೆಗೆ ಅಕ್ಷರರೂಪನಾದ ಭಗವಂತನನ್ನು ವಿಷಯನೆಂದು ಹೇಳಿರುವುದರಿಂದ.

ಅರ್ಥ - ಅದೃಶ್ಯತ್ವಾದಿಗುಣಕಃ = ಯತ್ತದದ್ರೇಶ್ಯಂ ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅದೃಶ್ಯತ್ವಾದಿ ಧರ್ಮಗಳಿಂದ ವಿಶಿಷ್ಟನಾದವನು ಅಕ್ಷರಶಬ್ದವಾಚ್ಯನಾದ ವಿಷ್ಣುವೇ ಆಗುತ್ತಾನೆ ಹೊರತು ಪ್ರಕೃತ್ಯಾದಿಗಳಲ್ಲ. ಏಕೆಂದರೆ ಧರ್ಮೋಕ್ತೇಃ = ಋಗ್ವೇದವೇ ಮೊದಲಾದ ಪರವಿದ್ಯಾವಿಷಯತ್ವವೆಂಬ ವಿಷ್ಣುವಿನ ಧರ್ಮವನ್ನು ಯಯಾ ಎಂಬ ಶ್ರುತಿಯಲ್ಲಿ ಹೇಳಿರುವುದರಿಂದ,

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಅದೃಶ್ಯತ್ವವಿರುವುದು ವಿಷ್ಣುವಿನಲ್ಲೋ, ಅಕ್ಷರನಲ್ಲೋ ?

ब्रह्मसूत्रभाष्यम् — अदृश्यत्वादिगुणा विष्णोरुक्ताः ।

ಅನುವಾದ - ಆನಂದಮಯಾಧಿಕರಣದಲ್ಲಿ ಅದೃಶ್ಯತ್ವ ಮೊದಲಾದ ಗುಣಗಳನ್ನು ವಿಷ್ಣುವಿನಲ್ಲಿ ಸ್ಥಾಪಿಸಲಾಗಿದೆ. ಆದರೆ ಮುಂಡಕೋಪನಿಷತ್ತಿನಲ್ಲಿ ಅಕ್ಷರನಲ್ಲಿ ಅದೃಶ್ಯತ್ವವನ್ನು ಹೇಳಿದ್ದು ಕಾಣಿಸುತ್ತಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ದೃಶ್ಯತ್ವಾಭಾವ ಮೊದಲಾದ ಲಿಂಗಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗಿದೆ. ಹಿಂದಿನ ಅಧಿಕರಣದಿಂದ ಮತ್ತೆ ಬೇರೆ ಅಧಿಕರಣದ ವಿಷಯ ವಾಕ್ಯಗಳಿಂದ ಸಂಗತಿಯನ್ನು ಸಾಂಗತ್ಯದ ಮೂಲಕ ವಿಷಯವಾಕ್ಯವನ್ನು ಉದಾಹರಿಸುವವರಾಗಿ ವಿಷಯ, ಸಂಶಯ ಪೂರ್ವಪಕ್ಷಗಳನ್ನು ಹೇಳುತ್ತಿದ್ದಾರೆ -

ಅದೃಶ್ಯತ್ವಾದಿ ಗುಣಾಃ = ಕಣ್ಣಿಗೆ ಕಾಣಿಸದಿರುವಿಕೆ, ಮೊದಲಾದ ಅಭಾವರೂಪವಾದ ಧರ್ಮಗಳನ್ನು, ವಿಷ್ಣೋಃ = ವಿಷ್ಣುವಿಗೆ, ಉಕ್ತಾಃ = ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟಿದೆ.

ಮುಂಡಕೋಪನಿಷತ್ತಿನಲ್ಲಿ ಅದೃಶ್ಯತ್ವದ ಬಗ್ಗೆ

ब्रह्मसूत्रभाष्यम् — तत्र —

'यत्तदद्रेश्यमग्राह्यम् (अगोत्रमवर्णमचक्षुःश्रोत्रं तदपाणिपादम् । नित्यं विभुं सर्वगतं सुसूक्ष्मं तदव्ययं यद् भूतयोनिं परिपश्यन्ति धीराः)' (१) (मुं.१-१-६) इत्युक्त्वा —

(೧) ಬ್ರಾಕೆಟ್‌ನ ಒಳಗಿರುವುದು ಪ್ರಾಚೀನ ಕೋಶದಲ್ಲಿ ಕಾಣಿಸುವುದಿಲ್ಲ

ಅನುವಾದ - ''ಯಾವ ತತ್ವವು ಅದೃಶ್ಯವು ಮನಸ್ಸಿನಿಂದ ತಿಳಿಯಲು ಅಶಕ್ಯವೋ ವಸಿಷ್ಠ ಮೊದಲಾದ ಗೋತ್ರಗಳುಳ್ಳದ್ದೂ, ಪ್ರಾಕೃತ ಬಣ್ಣವಿಲ್ಲದ್ದೂ, ಪ್ರಾಕೃತ ಕಣ್ಣುಗಳುಳ್ಳದ್ದೂ ಮೊದಲಾದ ಇಂದ್ರಿಯಗಳು ಇಲ್ಲವೋ ಪ್ರಾಕೃತವಾದ ರೂಪ ಇಲ್ಲವೋ ಪ್ರಾಕೃತ ಕಿವಿಗಳಿಲ್ಲದ್ದು ಪ್ರಾಕೃತ ಕರ್ಮೇಂದ್ರಿಯಗಳಿಲ್ಲದ್ದು ನಾಶವಿಲ್ಲದ್ದು ಎಲ್ಲೆಡೆ ತುಂಬಿರುವಂತಹದ್ದು ಎಲ್ಲರ ಒಳಗಡೆ ಅಂತರ್ಯಾಮಿಯಾಗಿರುವಂತಹದ್ದು ಅಣುವಾಗಿರುವಂತಹದ್ದು ಕುಗ್ಗುವಿಕೆ ಮೊದಲಾದ ಧರ್ಮಗಳಿಲ್ಲದ್ದು ಆಗಿದೆಯೊ ಅಂತಹ ಪರಿಪೂರ್ಣವಾದ ವಸ್ತುವನ್ನೇ ಜ್ಞಾನಿಗಳು ಜಗತ್ತಿಗೆ ಕಾರಣವನ್ನಾಗಿ ತಿಳಿಯುತ್ತಾರೆ. ಹೀಗೆ ಮುಂಡಕೋಪನಿಷತ್ತಿನಲ್ಲಿ ಹೇಳಿದೆ.

ಪ್ರತಿಪದಾರ್ಥ -- ತತ್ರ = ಆವಿಷಯದಲ್ಲಿ, ಯತ್ = ಯಾವ ತತ್ವವು, ಅದ್ರೇಶ್ಯಂ = ಸಂಪೂರ್ಣವಾಗಿ ನೋಡಲು ಸಾಧ್ಯವಿಲ್ಲವೋ, ಅಗ್ರಾಹ್ಯ = ಬುದ್ಧಿಯಿಂದ ಗ್ರಹಿಸಲು ಸಾಧ್ಯವಿಲ್ಲವೋ, ಅಗೋತ್ರಂ = ವಸಿಷ್ಠ ಮೊದಲಾದ ಗೋತ್ರರೆಂದು ಹೇಳಲು ಬರುವುದಿಲ್ಲವೋ, ಅವರ್ಣಂ = ಪ್ರಾಕೃತವಾದ ರೂಪವಿಲ್ಲದ್ದೋ, ಅಚಕ್ಷುಃ = ಪ್ರಾಕೃತವಾದ ಕಣ್ಣುಗಳು ಇಲ್ಲದ್ದೋ, ಅಶ್ರೋತ್ರಂ = ಪ್ರಾಕೃತವಾದ ಕಿವಿಗಳೂ ಇಲ್ಲದ್ದೋ, ತದಪಾಣಿಪಾದಂ = ಪ್ರಾಕೃತವಾದ ಕರ್ಮೇಂದ್ರಿಯಗಳಿಂದ ರಹಿತ-ವಾಗಿದೆಯೋ, ನಿತ್ಯಂ = ಸ್ವರೂಪತಃ ನಾಶವಿಲ್ಲದ್ದು, ವಿಭುಂ = ಎಲ್ಲೆಡೆ ವ್ಯಾಪಿಸಿದೆಯೋ, ಸರ್ವಗತಂ = ಎಲ್ಲರ ಒಳಗಡೆ ಅಂತರ್ಯಾಮಿ-ಯಾಗಿದೆಯೋ, ಸುಸೂಕ್ಷ್ಮಂ = ಅತ್ಯಂತ, ಸೂಕ್ಷ್ಮವಾಗಿದೆಯೋ, ತದವ್ಯಯಂ = ಕುಗ್ಗುವಿಕೆ ಮುಂತಾದ ಧರ್ಮಗಳಿಲ್ಲದ್ದೋ, ತತ್= ಅಂತಹ, ಪರಿಪೂರ್ಣವಾದ ತತ್ವವನ್ನು, ಧೀರಾಃ = ಜ್ಞಾನಿಗಳು, ಯದ್ಭೂತಯೋನಿಂ = ಜಗತ್ತಿನ ಸೃಷ್ಟ್ಯಾದಿಕಾರಣವನ್ನಾಗಿ, ಪರಿಪಶ್ಯಂತಿ = ತಿಳಿಯುತ್ತಾರೆ. ಇತ್ಯುಕ್ತ್ವಾ= ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಿದೆ.

ಅದೃಶ್ಯತ್ವದ ಬಗ್ಗೆ ಸಂಶಯ ಬರಲು ಕಾರಣವೇನು ?

ಬ್ರಹ್ಮಸೂತ್ರಭಾಷ್ಯಮ್ –

**('यथोर्णनाभिः सृजते गृह्णते च यथा पृथिव्यामोषधयः सम्भवन्ति ।
यथा सतः पुरुषात् केशलोमानि तथाऽक्षरात् सम्भवतीह विश्वम् ।।')[1]
(मुं.१-१-७.) इत्युक्त्वा,**

ಜೇಡರಹುಳು ಬಲೆಯನ್ನು ತನ್ನ ಬಾಯಿಂದ ನಿರ್ಮಿಸುತ್ತದೆ. ಕೆಲಸವಾದ ಮೇಲೆ ತಾನೇ ತಿಂದುಬಿಡುತ್ತದೆ. ಇದರಂತೆ ಭೂಮಿಯಲ್ಲಿ ಸಸ್ಯ ಮೊದಲಾದುವುಗಳು ಹುಟ್ಟುತ್ತವೆ ಅದರಂತೆ, ಬದುಕಿರುವ ಮನುಷ್ಯನ ಶರೀರದಿಂದ ಕೇಶ, ರೋಮ ಮೊದಲಾದವುಗಳು ಹುಟ್ಟುತ್ತವೆ ಇದರಂತೆ, ನಾಶರಹಿತನಾದ ಪರಮಾತ್ಮನ ದೆಸೆಯಿಂದ ಸಮಸ್ತ ಬ್ರಹ್ಮಾಂಡವು ಹುಟ್ಟುತ್ತದೆ.

ಬ್ರಹ್ಮಸೂತ್ರಭಾಷ್ಯಮ್ – तस्माच्च – 'अक्षरात् परतः परः' (मुं. २-१-२.) इति परः प्रतीयते । इत्यतोऽब्रवीति ।। अदृश्यत्वादिगुणको धर्मोक्तेः ।।२१।।

ಅನುವಾದ - ಹೀಗೆ ಶ್ರುತಿಯಲ್ಲಿ ಹೇಳಿ ಅಂತಹ ಸರ್ವೋತ್ತಮನಾದ ಅಕ್ಷರತತ್ವಕ್ಕಿಂತ, ಉತ್ತಮವಾದ ವಸ್ತುವಿಗಿಂತಲೂ ಉತ್ತಮವಾದುದೆಂದು, ವಿಷ್ಣುವನ್ನು ಸರ್ವೋತ್ತಮನೆಂದು ಹೇಳಿದೆ. ಇಲ್ಲಿ ಅದೃಶ್ಯತ್ವವನ್ನು ಅಕ್ಷರತತ್ವದಲ್ಲಿ ವಿಶೇಷಣವಾಗಿ ಹೇಳಿದ್ದರಿಂದ. ಅಕ್ಷರಶಬ್ದದಿಂದ ವಾಚ್ಯವಾದ ವಸ್ತು ಯಾವುದು? ಎಂಬ ಸಂಶಯಕ್ಕೆ ಅವಕಾಶ ಇದೆ. ಆದ್ದರಿಂದ ಸೂತ್ರಕಾರರು ಉತ್ತರಿಸುತ್ತಿದ್ದಾರೆ.

।। ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ।। ಎಂಬುದಾಗಿ.

ಇದನ್ನೇ ದೃಷ್ಟಾಂತ ಪುರಸ್ಸರವಾಗಿ ಸ್ಪಷ್ಟಪಡಿಸುತ್ತಾರೆ -

ಪ್ರತಿಪದಾರ್ಥ -- ಊರ್ಣನಾಭಃ = ಜೇಡರಹುಳು, ಯಥಾ = ಯಾವರೀತಿಯಾಗಿ, ಸೃಜತೇ = ತನ್ನ ಎಂಜಲಿನಿಂದ ಬಲೆಯನ್ನು ಸೃಷ್ಟಿಸುತ್ತದೋ, ಗೃಹ್ಣತೇ = ಕೆಲಸವಾದ ಮೇಲೆ ತಾನೇ ತಿನ್ನುತ್ತದೋ,

(೧) ಬ್ರಾಕೆಟ್‌ನ ಒಳಗಿರುವುದು ಪ್ರಾಚೀನ ಕೋಶದಲ್ಲಿ ಕಾಣಸುವುದಿಲ್ಲ

ಚ = ಮತ್ತು, ಯಥಾ = ಯಾವರೀತಿಯಾಗಿ, ಪೃಥಿವ್ಯಾಂ = ಭೂಮಿಯಲ್ಲಿ, ಓಷಧಯಃ = ಶಕ್ತಿಗಳು, ಸಂಭವಂತಿ = ಹುಟ್ಟುತ್ತವೋ, ಯಥಾ = ಯಾವರೀತಿಯಾಗಿ, ಸತಃ = ಬದುಕಿರುವ, ಪುರುಷಾತ್ = ಪುರುಷನ ಶರೀರದಿಂದ, ಕೇಶಲೋಮಾನಿ = ಕೇಶ, ರೋಮ, ಮೊದಲಾದವು, ಸಂಭವಂತಿ = ಪುನಃ ಪುನಃ ಹುಟ್ಟುತ್ತವೋ, ತಥಾ = ಅದೇರೀತಿಯಾಗಿ, ಅಕ್ಷರಾತ್ = ನಾಶರಹಿತನಾದ ಪರಮಾತ್ಮನ ದೆಸೆಯಿಂದ, ವಿಶ್ವಮ್ = ಸಕಲ ಜಗತ್ತೂ, ಸಂಭವತಿ = ಹುಟ್ಟುತ್ತದೆ, ಇತಿ = ಹೀಗೆ, ಇಹ = ಮುಂಡಕೋಪನಿಷತ್ತಿನಲ್ಲಿ, ಉಕ್ತ್ವಾ = ಹೇಳಿ, ತಸ್ಮಾತ್ = ಅಂತಹ, ಪರತಃ = ಸರ್ವೋತ್ತಮವಾದ, ಅಕ್ಷರಾತ್= ಅಕ್ಷರತತ್ವದ ದೆಸೆಯಿಂದ, ಪರಃ = ಶ್ರೇಷ್ಠನಾದ ಭಗವಂತನನ್ನು ಹೇಳಿದ್ದು, ಪ್ರತೀಯತೇ = ಕಾಣಿಸುತ್ತದೆ. ಅತಃ = ಅಂತಹ, ಅಕ್ಷರ ತತ್ವವು ಯಾವುದು ಎಂಬ ಶಂಕೆಗೆ, ಬ್ರವೀತಿ = ಸೂತ್ರಕಾರರೇ ಉತ್ತರಿಸುತ್ತಿದ್ದಾರೆ ''ಅದೃಶ್ಯತ್ವಾದಿಗುಣಕೋ ಧರ್ಮೋ೯ಕ್ತೇಃ''

ಅದೃಶ್ಯತ್ವವು ಪ್ರಕೃತಿಯಲ್ಲಿದೆ

ब्रह्मसूत्रभाष्यम् –

पृथिव्यादिदृष्टान्तमुक्त्वा 'अक्षरात् सम्भवतीह विश्वम्' (मुं.१-१-७) इत्यतः परं तत्परतः पराभिधानात् 'कूटस्थोऽक्षर उच्यते' (भ.गी. १५-१६) इति स्मृतेश्च प्रकृतेः प्राप्तिः ।

ಪೃಥಿವಿ, ಜೇಡರ ಹುಳ, ಮನುಷ್ಯ ಮೊದಲಾದ ದೃಷ್ಟಾಂತಗಳನ್ನು ಹೇಳಿ, 'ಅಕ್ಷರತತ್ವದಿಂದ ಸಮಸ್ತ ಜಗತ್ತು ಹುಟ್ಟುತ್ತದೆ' ಎಂದು ಹೇಳಿ, ಅನಂತರ ಅದಕ್ಕಿಂತ ಸರ್ವೋತ್ತಮನನ್ನಾಗಿ ಹೇಳಿದ ಕಾರಣ 'ಕೂಟಸ್ಥೋ೯ಕ್ಷರ ಉಚ್ಯತೇ' ಎಂಬುದಾಗಿ ಗೀತೆಯಲ್ಲಿ ಹೇಳಿದ್ದರಿಂದಲೂ ಸಹ ಅಕ್ಷರ ಶಬ್ದದಿಂದ ಲಕ್ಷ್ಮೀದೇವಿಯು ಹೇಳಲ್ಪಟ್ಟಿದ್ದಾಳೆ. ಆದ್ದರಿಂದ ಉಲ್ಲೇಖಿಸಲ್ಪಟ್ಟಿದೆ.

ಪ್ರತಿಪದಾರ್ಥ -- ಅದೃಶ್ಯತ್ವ ಮೊದಲಾದ ಗುಣಗಳು ವಿಷ್ಣುವಿನದ್ದು ಅಲ್ಲವೆಂದಾದರೆ ವಾಕ್ಯಕ್ಕೆ ನಿರ್ವಿಷಯತ್ವ ಬರುವ ಕಾರಣ ಅಪ್ರಾಮಾಣ್ಯ-

ದೋಷವು ಬರುತ್ತದೆ. ಈ ಪ್ರಶ್ನೆಯನ್ನು ಪರಿಹರಿಸುವುದಕ್ಕಾಗಿ ಪೂರ್ವಪಕ್ಷವನ್ನೇ ಸಮರ್ಥಿಸುತ್ತಿದ್ದಾರೆ.

ಪೃಥಿವ್ಯಾದಿದೃಷ್ಟಾಂತಂ = ಪೃಥಿವಿ, ಜೇಡರ ಹುಳ, ಮನುಷ್ಯ ಮೊದಲಾದ ಉದಾಹರಣೆಗಳನ್ನು, ಉಕ್ತ್ವಾ = ಹೇಳಿ, ಅಕ್ಷರಾತ್ = ಅಕ್ಷರತತ್ವದಿಂದ, ವಿಶ್ವಂ = ಪ್ರಪಂಚವು ಸಂಭವತಿ ಹುಟ್ಟುತ್ತದೆ, ಇತಿ = ಈ ರೀತಿಯಾಗಿ, ಉಕ್ತ್ವಾ = ಹೇಳಿ, ತತ್ = ಆ ಅಕ್ಷರ ತತ್ವಕ್ಕಿಂತ, ಪರತಃ = ಉತ್ತಮವಾದ ವಸ್ತು, ಪರ = ಉತ್ತಮವಾದ ವಸ್ತುವನ್ನು, ಅಭಿಧಾನಾತ್ = ಕೊನೆಯಲ್ಲಿ ಹೇಳಿರುವುದರಿಂದ, ಅಷ್ಟೇ ಅಲ್ಲದೆ ಕೂಟಸ್ಥೋऽಕ್ಷರ ಉಚ್ಯತೇ' ನಿರ್ವಿಕಾರಳಾದ ಲಕ್ಷ್ಮೀದೇವಿಯು ಅಕ್ಷರಶಬ್ದ ವಾಚ್ಯಳಾಗಿದ್ದಾಳೆ. ಇತಿ = ಈ ರೀತಿಯಾಗಿ, ಸ್ಮೃತೇಃ ಚ = ಗೀತೆಯಲ್ಲಿ ಹೇಳಿರುವುದರಿಂದಲೂ, ಪ್ರಕೃತೇಃ = ಚಿತ್ಪ್ರಕೃತಿಯೆನಿಸಿದ ಲಕ್ಷ್ಮೀದೇವಿಗೆ, ಪ್ರಾಪ್ತಿಃ = ಅದೃಶ್ಯತ್ವವು ಪ್ರಾಪ್ತವಾಗುತ್ತದೆ.

ಹಿರಣ್ಯಗರ್ಭನಲ್ಲೂ ಅದೃಶ್ಯತ್ವವಿದೆ

ಬ್ರಹ್ಮಸೂತ್ರಭಾಷ್ಯಮ್ — ಬ್ರಹ್ಮಶಬ್ದಾತ್ತತ್ಪರತಃ ಪರಾಭಿಧಾನಾದೇವ ಚ ಹಿರಣ್ಯಗರ್ಭಸ್ಯ ।

ಅನುವಾದ - ಅಥವಾ 'ಸ ಬ್ರಹ್ಮವಿದ್ಯಾಮ್' ಎಂಬ ಬ್ರಹ್ಮಪ್ರಕರಣದಲ್ಲಿ ಬ್ರಹ್ಮಶಬ್ದವು ಕೇಳಿಸುತ್ತಿದೆ. ಮತ್ತು ವಿಷ್ಣು ಅಕ್ಷರತತ್ತ್ವಕ್ಕಿಂತ ಉತ್ತಮೋತ್ತಮನೆಂದು ಹೇಳಿರುವ ಕಾರಣ, ಚತುರ್ಮುಖಬ್ರಹ್ಮನೂ ಸಹ ಅಕ್ಷರಶಬ್ದದಿಂದ ಪ್ರತಿಪಾದ್ಯನಾಗಬಹುದು.

ಪ್ರತಿಪದಾರ್ಥ -- ಅದೃಶ್ಯತ್ವ ಎಂಬ ಧರ್ಮವು ಚತುರ್ಮುಖ ಬ್ರಹ್ಮನಲ್ಲಿಯೂ ಬರಬಹುದೆಂದು ಮತ್ತೊಂದು ಬಗೆಯ ಪೂರ್ವಪಕ್ಷವನ್ನು ತೋರಿಸುತ್ತಿದ್ದಾರೆ.

ಬ್ರಹ್ಮಶಬ್ದಾತ್ = ಬ್ರಹ್ಮಪದದ ಪ್ರಯೋಗವು ಕಾಣಸುತ್ತಿರುವುದರಿಂದ, ತತ್ ಪರತಃ = ಶ್ರೀತತ್ವಕ್ಕಿಂತ, ಚ = ಮತ್ತು, ಪರಾಭಿಧಾನಾದೇವ = ವಿಷ್ಣುವನ್ನು ಸರ್ವೋತ್ತಮನೆಂದು ಹೇಳಿರುವುದರಿಂದ, ಹಿರಣ್ಯಗರ್ಭಸ್ಯ = ಚತುರ್ಮುಖಬ್ರಹ್ಮದೇವರಿಗೂ, ತತ್ಪ್ರಾಪ್ತಿಃ = ಅದೃಶ್ಯತ್ವವು ಪ್ರಾಪ್ತವಾಗುತ್ತದೆ. ಹೀಗೆ ಲಕ್ಷ್ಮೀದೇವಿ, ಅಥವಾ ಚತುರ್ಮುಖ

ಬ್ರಹ್ಮದೇವರಲ್ಲಿ ವಿಷ್ಣುವಿನ ಅದೃಶ್ಯತ್ವಧರ್ಮವು ಬರುತ್ತದೆಂದು ಪೂರ್ವಪಕ್ಷ.

ಅದೃಶ್ಯತ್ವವಿರುವುದು ಮಹಾವಿಷ್ಣುವಿನಲ್ಲಿ ಮಾತ್ರವೆಂದು ಸಿದ್ಧಾಂತ

ब्रह्मसूत्रभाष्यम् –

'तमेवं विद्वानमृत इह भवति' (तै.आ. ३-१२-७.) 'तत्कर्म हरितोषं यत् सा विद्या तन्मतिर्यया ।' 'अथ द्वे वाव विद्ये वेदितव्ये (१)परा (चैवापरा) च अपरा च । तत्र ये वेदा यान्यङ्गानि यान्युपाङ्गानि यानि प्रत्यङ्गानि साऽपरा । अथ परा यया स हरिर्वेदितव्यो योऽसावदृश्यो निर्गुणः परः परमात्मा' इत्यादिना तद्धर्मत्वेनावगतपरविद्या-विषयत्वोक्तेर्विष्णुरेवादृश्यत्वादिगुणकः ।। २१ ।।

ಅನುವಾದ - ಸಿದ್ಧಾಂತ ಹೀಗಿದೆ– 'ಹೀಗೆ ಭಗವಂತನನ್ನು ತಿಳಿದರೆ ಮಾತ್ರ ಮೋಕ್ಷ' ಎಂದು ಮತ್ತು 'ಯಾವುದು ಭಗವಂತನಿಗೆ ಸಂತೋಷಕರವಾಗುತ್ತದೋ ಅಂತಹದ್ದೇ ಸತ್ಕರ್ಮ ಎನಿಸುತ್ತದೆ; ಯಾವ ವಿದ್ಯೆಯಿಂದ ಭಗವದ್ವಿಷಯಕವಾದ ಬುದ್ಧಿಯು ಹುಟ್ಟುತ್ತದೋ ಅದೇ ಪರವಿದ್ಯೆ ಎನಿಸುತ್ತದೆ.

ಅಧಿಕಾರವನ್ನು ಹೊಂದಿದ ಮೇಲೆ ತಿಳಿಯಬೇಕಾದ ವಿದ್ಯೆಗಳು ಎರಡು. ಪರ-ಅಪರ ಎಂದು. ಈ ಎರಡು ವಿದ್ಯೆಗಳಲ್ಲಿ ಋಗ್ವೇದ ಮೊದಲಾದ ನಾಲ್ಕುವೇದಗಳು ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ ಮತ್ತು ಕಲ್ಪ ಎಂಬ ಆರು ವೇದಾಂಗಗಳು ವೈದ್ಯಶಾಸ್ತ್ರ, ಧರ್ಮಶಾಸ್ತ್ರ, ಗಾಂಧರ್ವಶಾಸ್ತ್ರ, ಸ್ಥಾಪತ್ಯಗಳೆಂಬ ಉಪಾಂಗಗಳು, ಮತ್ತು ಕಲೆ ಮೊದಲಾದವುಗಳು ಇವೆಲ್ಲವೂ ಸಹ ಅಪರವಿದ್ಯೆಗಳು. ಇನ್ನು ಪರವಿದ್ಯೆಯೆಂದರೆ ಶ್ರುತಿಪ್ರಸಿದ್ಧನಾದ, ಸಾಕಲ್ಯದಿಂದ ತಿಳಿಯಲು ಅಸಾಧ್ಯನಾದ, ಪ್ರಾಕೃತಗುಣಗಳಿಂದ ರಹಿತನಾದ, ಉತ್ತಮೋತ್ತಮನಾದ, ಸಕಲ ಪ್ರೇರಕನಾದ, ಪಾಪಪರಿಹಾರಕನೂ ಆದ

(೧) 'ಪರಾ ಚ ಅಪರಾ ಚ' ಎಂಬುದು ಪ್ರಾಚೀನಪಾಠ

ಪರಮಾತ್ಮನು ಯಾವ ವಿದ್ಯೆಯಿಂದ ತಿಳಿಯಲು ಅರ್ಹನಾಗಿದ್ದಾನೋ ಅಂತಹ ವಿದ್ಯೆಯೇ ಪರ ಎಂಬ ಶಬ್ದದಿಂದ ವಾಚ್ಯವಾಗಿದೆ.

ಇವೇ ಮೊದಲಾದ ವಾಕ್ಯಗಳಿಂದ ಪರವಿದ್ಯಾವಿಷಯತ್ವವನ್ನು ವಿಷ್ಣುವಿಗೆ ಹೇಳಿರುವುದರಿಂದ ಅದೃಶ್ಯತ್ವಾದಿಗಳು ವಿಷ್ಣುವಿನ ಅಸಾಧಾರಣವಾದ ಧರ್ಮಗಳೇ ಆಗಿವೆಯೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಹೀಗೆ ಪೂರ್ವಪಕ್ಷವು ಪ್ರಾಪ್ತವಾದರೆ ಅದನ್ನು ನಿರಾಕರಿಸುವುದಕ್ಕಾಗಿ ಸೂತ್ರವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ತಮ್ = ಪರಮಾತ್ಮನನ್ನು, ಏವಂ = ಹಿಂದೆ ಹೇಳಿದ ಪ್ರಕಾರದಲ್ಲಿ ಅನಂತ ಗುಣಗಳುಳ್ಳವನನ್ನಾಗಿ, ವಿದ್ವಾನ್ = ತಿಳಿದರೆ, ಇಹ = ಈ ಲೋಕದಲ್ಲಿ, ಅಮೃತಃ = ಮುಕ್ತನಾಗುತ್ತಾನೆ. ಹೀಗೆ ತೈತ್ತಿರೀಯೋಪನಿಷತ್ತು ಹೇಳಿದೆ.

ಮತ್ತು ಯತ್ = ಯಾವುದು, ಹರಿತೋಷಂ = ಪರಮಾತ್ಮನಿಗೆ, ಸಂತೋಷಕರವಾಗಿದೆಯೋ, ತತ್ಕರ್ಮ = ಅದೇ ಸತ್ಕರ್ಮವು, ಯಯಾ = ಯಾವ ವಿದ್ಯೆಯಿಂದ, ತನ್ಮತಿಃ = ಪರಮಾತ್ಮನ ತಿಳಿವಳಿಕೆಯು ಪ್ರಾಪ್ತವಾಗುತ್ತದೋ, ಸಾ = ಅದೇ, ವಿದ್ಯಾ = ಪ್ರವಿದ್ಯೆಯು ಹೀಗೆ ಹೇಳಿರುವುದರಿಂದ ಶ್ರುತಿಪ್ರತಿಪಾದ್ಯನು ಪರಮಾತ್ಮನೇ ಆಗುತ್ತಾನೆ.

ಅಥ = ಅಧಿಕಾರಸಂಪತ್ತಿಯ ಅನಂತರ, ವೇದಿತವ್ಯೇ = ತಿಳಿಯಲು ಯೋಗ್ಯವಾದವುಗಳು, ದ್ವೇ ವಾವ ವಿದ್ಯೇ = ಎರಡೇ ವಿದ್ಯೆಗಳು, ಪರಾ = ಪರವಿದ್ಯೆ, ಚ = ಮತ್ತು, ಅಪರಾ ಚ = ಅಪರವಿದ್ಯೆ ಎಂದು.

ತತ್ರ = ಈ ಎರಡು ವಿದ್ಯೆಗಳಲ್ಲಿ, ಯೇ = ಯಾವುದು, ವೇದಾಃ = ಋಗ್ವೇದ ಮೊದಲಾದ ನಾಲ್ಕುವೇದಗಳು, ಯಾನಿ ಅಂಗಾನಿ = ವೇದಾರ್ಥಗಳನ್ನು ತಿಳಿಯಲು ಅನುಕೂಲಕರವಾದ, ಶಿಕ್ಷಾದಿ ಶಾಸ್ತ್ರಗಳು, ಯಾನಿ ಉಪಾಂಗಾನಿ = ವೈದ್ಯಶಾಸ್ತ್ರ ಧರ್ಮಶಾಸ್ತ್ರ ಮೊದಲಾದ ಉಪಾಂಗಗಳು, ಯಾನಿ ಪ್ರತ್ಯಂಗಾನಿ = ಉಳಿದ ಕಲೆ ಮೊದಲಾದವುಗಳು, ಸಾ = ಇವೆಲ್ಲವೂ ಸಹ, ಅಪರಾ = ಅಪರವಿದ್ಯಾ ಎಂಬ ಶಬ್ದದಿಂದ

ಪ್ರತಿಪಾದ್ಯವಾಗಿವೆ. ಅಥ = ಅನಂತರ, ಪರಾ = ಪರವಿದ್ಯೆಯೆಂದರೆ, ಯಃ = ಯಾವ ಶ್ರುತಿಪ್ರಸಿದ್ಧನಾದ, ಅದೃಶ್ಯಃ = ಸಂಪೂರ್ಣವಾಗಿ ತಿಳಿಯಲು ಅನರ್ಹನಾದ, ನಿರ್ಗುಣಃ = ಪ್ರಾಕೃತಗುಣಗಳಿಂದ ರಹಿತನಾದ, ಪರಃ = ಸರ್ವೋತ್ತಮನಾದ, ಪರಮಾತ್ಮಾ = ಸಕಲನಿಯಾಮಕನಾದ, ಅಸೌ = ಅಂತಹ, ಹರಿಃ = ಪಾಪಪರಿಹಾರಕನಾದ ಪರಮಾತ್ಮನು, ಯಯಾ = ಯಾವ ವಿದ್ಯೆಯಿಂದ, ವೇದಿತವ್ಯಃ = ತಿಳಿಯಲು ಯೋಗ್ಯನೋ, ಸಾ = ಅಂತಹ ವಿದ್ಯೆಯು, ಪರಾ = ಪರಶಬ್ದವಾಚ್ಯವಾಗುತ್ತದೆ.

ಇತ್ಯಾದಿನಾ = ಇವೇ ಮೊದಲಾದವಾಕ್ಯಗಳಿಂದ, ತದ್ಧರ್ಮತ್ವೇನ = ಭಗವಂತನ ಧರ್ಮ ಎಂಬುದಾಗಿ, ಅವಗತ = ತಿಳಿಯಲ್ಪಟ್ಟ, ಪರವಿದ್ಯಾವಿಷಯತ್ವೋಕ್ತೇಃ = ಪರವಿದ್ಯಾ ವಿಷಯತ್ವವನ್ನು ಹೇಳಿರುವುದರಿಂದ, ವಿಷ್ಣುರೇವ = ಮಹಾವಿಷ್ಣುವೇ, ಅದೃಶ್ಯತ್ವಾದಿಗುಣಕಃ = ಅದೃಶ್ಯತ್ವಮೊದಲಾದ ಧರ್ಮಗಳುಳ್ಳವನಾಗುತ್ತಾನೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

'ಅಕ್ಷರಾತ್ಪರತಃ ಪರಃ' ಎಂಬ ಶ್ರುತಿಯೇ ಪೂರ್ವಪಕ್ಷಕ್ಕೆ ಕಾರಣ

सत्तर्कदीपावलिः – अदृश्यत्वादिगुणको धर्मोक्तेः ।। १-२-२१ ।।

'अदृश्येऽनात्म्ये' इत्यादिना अदृश्यत्वादिगुणा विष्णोरुक्तास्ते चाथर्वणे अक्षरस्योच्यन्ते ।। यत्तदद्रेश्यमग्राह्यमिति ।। नचैतदक्षरं विष्णुः । तस्य तस्मात्परत्वेन श्रूयमाणत्वात् । 'अक्षरात्परतः परः' इति एवम्प्राप्ते । सूत्रमवतारयति – अदृश्यत्वेति ।। अदृश्यत्वादिगुणकमक्षरं विष्णुरेव न

प्रकृतिहिरण्यगर्भाविति प्रतिपिपादयिषया प्रसक्तिं दर्शयति – पृथिव्यादीत्यादिना।। अस्यार्थः । पृथिवीदृष्टान्तेन ह्यक्षरमुच्यमानं प्रकृतिर्भवेत् । कूटस्थोऽक्षर उच्यते । 'उत्तमः पुरुषस्त्वन्यः' इति स्मृत्या प्रकृतेरक्षरत्वेनोच्यमानत्वात् ।

''ಅದೃಶ್ಯೇಽನಾತ್ಮ್ಯೇ'' ಇತ್ಯಾದಿ ಶ್ರುತಿಯಿಂದ ಅದೃಶ್ಯತ್ವಾದಿಗುಣಗಳು ವಿಷ್ಣುವಿನ ಧರ್ಮವೆಂದು ಹಿಂದಿನ ಅಧಿಕರಣದಲ್ಲಿ ಹೇಳಲಾಯಿತು. ಆದರೆ ಇದೇ ಧರ್ಮಗಳು ಆಥರ್ವಣೋಪನಿಷತ್ತಿನಲ್ಲಿ ಅಕ್ಷರನಾಮಕನಾದ ವ್ಯಕ್ತಿಯಲ್ಲಿ ಕೇಳಿಸುತ್ತಿದೆ 'ಯತ್ತದದ್ರೇಶ್ಯ-ಮಗ್ರಾಹ್ಯಂ' ಇತ್ಯಾದಿಯಾಗಿ. ವಿಷ್ಣುವೇ ಅಕ್ಷರನೆಂದು ಹೇಳಲಾಗದು. ಅಕ್ಷರವೆನಿಸಿದ ವಸ್ತುವಿಗಿಂತ ವಿಷ್ಣು ಪರಮೋತ್ಕೃಷ್ಟನಾಗಿದ್ದಾನೆಂದು 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯು ಹೇಳುತ್ತಿದೆ. ಇಷ್ಟು ಪೂರ್ವಪಕ್ಷ.

ಇದನ್ನು ಪರಿಹರಿಸುವುದಕ್ಕಾಗಿ ಸೂತ್ರವು ಹೊರಟಿದೆ. ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನು ವಿಷ್ಣುವೇ ಆಗಿದ್ದಾನೆ; ಹೊರತು ಪ್ರಕೃತಿಯಾಗಲೀ ಹಿರಣ್ಯಗರ್ಭನಾಗಲೀ ಅಲ್ಲ. ಹೀಗೆ ಪ್ರತಿಪಾದಿಸುವುದಕ್ಕಾಗಿ ಪ್ರಸಕ್ತಿಯನ್ನು ಹೇಳುತ್ತಿದ್ದಾರೆ ''ಪೃಥಿವ್ಯಾದಿ'' ಇತ್ಯಾದಿ ಭಾಷ್ಯದಿಂದ. ಇದರ ಅರ್ಥ ಹೀಗಿದೆ. ಪೃಥಿವೀ ದೃಷ್ಟಾಂತದಿಂದ ಅಕ್ಷರನನ್ನು ಹೇಳಿದ್ದರಿಂದ ಪ್ರಕೃತಿಯೇ ಅಕ್ಷರಶಬ್ದವಾಚ್ಯವಾಗಬೇಕು. ''ಕೂಟಸ್ಥೋ ಅಕ್ಷರ ಉಚ್ಯತೇ'' ಎಂದು, ''ಉತ್ತಮ-ಪುರುಷಸ್ತ್ವನ್ಯಃ'' ಎಂದು ಹೇಳಿದ್ದರಿಂದ ಪ್ರಕೃತಿಯೇ ಅಕ್ಷರಶಬ್ದವಾಚ್ಯವಾಗುತ್ತದೆ.

ಚತುರ್ಮುಖನು ಅದೃಶ್ಯನೆನ್ನಲು ಕಾರಣ

सत्तर्कदीपावलिः –

'ब्रह्मा देवानां प्रथमः सम्बभूव विश्वस्य कर्ता भुवनस्य गोप्ता ।
स ब्रह्मविद्यां सर्वविद्याप्रतिष्ठामथर्वाय ज्येष्ठपुत्राय प्राह ।।'

इत्युपक्रम्य श्रूयमाणमदृश्यत्वादिगुणकमक्षरं हिरण्यगर्भो वा भवेत् । तस्मिन्नपि ब्रह्मशब्दसम्भवात्

ಅಥವಾ ಚತುರ್ಮುಖಬ್ರಹ್ಮನೂ ಸಹ ಅಕ್ಷರಶಬ್ದವಾಚ್ಯನಾಗಬಹುದು.

'ಬ್ರಹ್ಮಾದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ।
ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ'

ಎಂದು ಪ್ರಾರಂಭವಾಗಿ ಕೇಳಿಸುತ್ತಿರುವ ಶ್ರುತಿಯಲ್ಲಿ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನು ಹಿರಣ್ಯಗರ್ಭನೇ ಎಂದು ತಿಳಿದು ಬರುತ್ತಿದೆ. ಏಕೆಂದರೆ ಬ್ರಹ್ಮಶಬ್ದವು ಅವನಲ್ಲೇ ಲೋಕಪ್ರಸಿದ್ಧವಾಗಿದೆ.

ಮಹಾವಿಷ್ಣುವೇಕೆ ಅದೃಶ್ಯನಲ್ಲ

ಸತ್ತರ್ಕದೀಪಾವಲಿಃ – ಪುರುಷೋತ್ತಮಸ್ತ್ವೇತದಕ್ಷರಂ ನ ಭವತ್ಯೇವ । ತಸ್ಮಾತ್ಪರತ್ವೇನೋಪರಿ ಶ್ರೂಯಮಾಣತ್ವಾದಿತ್ಯೇತನ್ನಿಷೇಧತಿ – ತಮೇವೇತ್ಯಾದಿನಾ ।।

ಅಕ್ಷರಕ್ಕಿಂತ ಪರಮೋತ್ಕೃಷ್ಟನಾದ ಪುರುಷೋತ್ತಮನಾದ ವಿಷ್ಣುವು ಈ ಅಕ್ಷರಶಬ್ದವಾಚ್ಯನಾಗಲು ಸಾಧ್ಯವಿಲ್ಲ. ಏಕೆಂದರೆ, ಅಕ್ಷರಕ್ಕಿಂತ ಉತ್ತಮತ್ವವನ್ನು ಹೇಳಿರುವುದರಿಂದ ಎಂಬ ಆಕ್ಷೇಪವನ್ನು ನಿರಾಕರಿಸುತ್ತಿದ್ದಾರೆ ''ತಮೇವ'' ಇತ್ಯಾದಿ ಭಾಷ್ಯದಿಂದ.

'ಅಥ ಪರಾ ಯಯಾ' ಎಂಬ ಶ್ರುತ್ಯರ್ಥ

ಸತ್ತರ್ಕದೀಪಾವಲಿಃ – ಅಸ್ಯಾರ್ಥಃ । 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' 'ಯತ್ತದದ್ರೇಶ್ಯಮ್' ಇತಿ ಪರವಿದ್ಯಾವಿಷಯತ್ವವಚನಾದ್ ವಿಷ್ಣುರೇವಾದೃಶ್ಯತ್ವಾದಿಗುಣಕೋऽಕ್ಷರಃ । ಪರವಿದ್ಯಾವಿಷಯತ್ವಸ್ಯ 'ತಮೇವಂ ವಿದ್ವಾನಮೃತ ಇಹ ಭವತಿ' ಇತ್ಯಾದಿವಾಕ್ಯಾನ್ತರೇಷು ವಿಷ್ಣ್ವೇಕನಿಷ್ಠತ್ವೇನ ತದ್ಧರ್ಮತ್ವೇನೋಕ್ತತ್ವಾತ್ ।

ಇದರ ಅರ್ಥ ಹೀಗಿದೆ; 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' 'ಯತತ್ತದ್ರೇಶ್ಯಮ್' ಇತ್ಯಾದಿಯಾಗಿ ಯಾವಾತನು ಅಕ್ಷರಶಬ್ದವಾಚ್ಯನಾಗಿದ್ದಾನೋ ಅವನು ಪರವಿದ್ಯೆಗೂ ಸಹ ವಿಷಯನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಮೋಕ್ಷವನ್ನು ದಯಪಾಲಿಸುವ ಮಹಾವಿಷ್ಣುವೇ

ಪರವಿದ್ಯೆಗೆ ವಿಷಯನಾಗಿದ್ದಾನೆಂಬುದು ಪ್ರಸಿದ್ಧವಾಗಿದೆ. ಅಂತಹ ವಿಷ್ಣುವೇ ಅದೃಶ್ಯತ್ವಾದಿ-ಗುಣಗಳುಳ್ಳ ಅಕ್ಷರನೂ ಸಹ ಆಗುತ್ತಾನೆ. ಭಗವಂತನು ಪರವಿದ್ಯೆಗೆ ವಿಷಯನಾಗಿದ್ದಾನೆಂಬ ವಿಚಾರವು 'ತಮೇವಂ ವಿದ್ವಾನಮೃತ ಇಹ ಭವತಿ' ಇತ್ಯಾದಿ ಬೇರೆ ಶ್ರುತಿಗಳಿಂದ ಸಿದ್ಧವಾಗಿದೆ. ಇದು ವಿಷ್ಣುವಿನಲ್ಲಿ ಮಾತ್ರವಿರುವುದರಿಂದ ಅವನ ಅಸಾಧಾರಣಧರ್ಮವಾಗಿದೆಯೆಂದು ಆ ಶ್ರುತಿಯಲ್ಲಿ ಹೇಳಿರುತ್ತಾರೆ.

ಪರಾಪರವಿದ್ಯೆಯ ಬಗ್ಗೆ

सत्तर्कदीपावलिः – वेदानामपरविद्याविषयत्वं यज्ञाद्यर्थान्तरविषयत्वविव क्षया तेषामेव परविद्याविषयत्वं विष्णुविषयत्वविवक्षयेत्यवगन्तव्यम् ।

ವೇದಗಳು ಯಾವಾಗ ವಿಷ್ಣುವನ್ನು ಬಿಟ್ಟು ಯಜ್ಞ ಮೊದಲಾದ ಬೇರೆ ವಿಚಾರವನ್ನು ಪ್ರತಿಪಾದಿಸುತ್ತವೋ ಆವಾಗ ಅಪರವಿದ್ಯೆ ಎನಿಸುತ್ತವೆ. ಅದೇ ವೇದಗಳೇ ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆ ಎನಿಸುತ್ತವೆಯೆಂದು ತಿಳಿಯಬೇಕು.

ಪರಮಸಂಹಿತೆಯಲ್ಲಿ ಪರವಿದ್ಯೆಯ ಬಗ್ಗೆ ನಿಖರ ಮಾಹಿತಿ

सत्तर्कदीपावलिः – तदुक्तं परमसंहितायाम्–

'ऋगाद्या अपरा विद्या यदा विष्णोर्न वाचकाः ।
ता एव परमा विद्या यदा विष्णोस्तु वाचकाः ।।'

ಇದನ್ನೇ ಪರಮಸಂಹಿತೆಯಲ್ಲಿ ಹೀಗೆ ಹೇಳಿದ್ದಾರೆ.

ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ ।
ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ।।

ಯಾವಾಗ ಋಗ್ವೇದಾದಿವಿದ್ಯೆಗಳು ವಿಷ್ಣುವನ್ನು ಪ್ರತಿಪಾದಿಸುವುದಿಲ್ಲವೋ ಆವಾಗ ಅವು ಅಪರವಿದ್ಯೆ ಎನಿಸುತ್ತವೆ. ಅದೇ ಋಗ್ವೇದಾದಿಗಳು ವಿಷ್ಣುವನ್ನು ಯಾವಾಗ ಪ್ರತಿಪಾದಿಸುತ್ತವೋ ಅವೇ ಆವಾಗ ಪರವಿದ್ಯೆ ಎನಿಸುತ್ತವೆ.

ಪ್ರಕೃತಿ ಹಿರಣ್ಯಗರ್ಭರು ಅಕ್ಷರರಲ್ಲ

सत्तर्कदीपावलिः – इति विष्णुरेवादृश्यत्वादिगुणकाक्षरं न प्रकृतिहिरण्यगर्भावित्येतद्धेत्वन्तरेण सूत्रमुपन्यस्य साधयति – विशेषणेत्यादिना ।।

ಹೀಗೆ ವಿಷ್ಣುವೇ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನೆನಿಸುತ್ತಾನೆ; ಹೊರತು ಪ್ರಕೃತಿಯಾಗಲೀ ಹಿರಣ್ಯಗರ್ಭನಾಗಲೀ ಅಕ್ಷರಶಬ್ದವಾಚ್ಯರಾಗುವುದಿಲ್ಲ. ಈ ವಿಷಯವನ್ನು ಮತ್ತೊಂದು ಹೇತುವಿನಿಂದ ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸಮಾಡಿ ಸಾಧಿಸುತ್ತಿದ್ದಾರೆ. ವಿಶೇಷಣ ಇತ್ಯಾದಿಯಾಗಿ.

ಅಕ್ಷರನೆಂದರೆ ಮಹಾವಿಷ್ಣುವೆ

सत्तर्कदीपावलिः – 'यः सर्वज्ञः' इत्यादिवत् 'अक्षरात्परतः परः' इति विशेष्यमाणत्वादप्यदृश्यत्वादिगुणकाक्षरं विष्णुः । विश्वयोन्यक्षरस्यावरत्वासम्भवात् । 'अक्षरात्परतः परः' इत्यवधित्वेनोच्यमानं क्षरं तस्मादन्यदेव । तदेतदाह – अपरमिति ।।

'ಯಃ ಸರ್ವಜ್ಞಃ' ಎಂಬ ಶ್ರುತಿಯಲ್ಲಿ ಸರ್ವಜ್ಞತ್ವವನ್ನು ವಿಶೇಷಣವನ್ನಾಗಿ ಹೇಳಿದಂತೆ 'ಅಕ್ಷರಾತ್ ಪರತಃ ಪರಃ' ಎಂಬಲ್ಲಿಯೂ ಪರತಃಪರತ್ವವನ್ನು ವಿಶೇಷಣವನ್ನಾಗಿ ಮುಂದೆ ಹೇಳುವುದರಿಂದ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನು ವಿಷ್ಣುವೇ ಆಗುತ್ತಾನೆ.

ಜಗತ್ತಿಗೆ ಕಾರಣವಾದ ಅಕ್ಷರಕ್ಕೆ ಅವರತ್ವವನ್ನು ಹೇಳುವುದು ತಪ್ಪಾಗುತ್ತದೆ. ಆದ್ದರಿಂದ ಅಕ್ಷರವು ಸರ್ವೋತ್ಕೃಷ್ಟವಾದ ಪದಾರ್ಥವಾದ್ದರಿಂದ ವಿಷ್ಣುವೇ ಆಗಬೇಕು. ಇನ್ನು 'ಅಕ್ಷರಾತ್ ಪರತಃ ಪರಃ' ಎಂಬಲ್ಲಿ ಅವಧಿಯೆಂದು ಕೇಳಿಸಲ್ಪಡುತ್ತಿರುವ ಅಕ್ಷರವೇ ಬೇರೆಯಾಗಿದೆ. ಈ ಅಭಿಪ್ರಾಯದಿಂದ ''ಅಪರಂ'' ಇತ್ಯಾದಿಭಾಷ್ಯವು ಹೊರಟಿದೆ.

ರುದ್ರನು ಅದೃಶ್ಯನಾಗಲಾರ

सत्तर्कदीपावलिः – नच 'कर्तारमीशम्' इति विशेष्यमाणत्वाददृश्यत्वादि

गुणकमक्षरं रुद्र इति वाच्यम् । यदा 'पश्यत्यन्यमीशम्' इत्यज्ञप्रसिद्धेशादन्यस्य विष्णोरेव विवक्षितत्वादित्याह – जुष्टमिति ।।

ಕರ್ತಾರಮೀಶಮ್ ಎಂದು ಮುಂದೆ ವಿಶೇಷಣವನ್ನು ಹೇಳಿದ್ದರಿಂದ ಅದೃಶ್ಯತ್ವಾದಿ ಗುಣವುಳ್ಳವನು ಈಶಶಬ್ದವಾಚ್ಯನಾದ ರುದ್ರನೇ ಏಕಾಗಬಾರದು. 'ಯದಾ ಪಶ್ಯತ್ಯನ್ಯಮೀಶಮ್' ಎಂಬುದಾಗಿ ಅಜ್ಞಾನಿಗಳ ಪ್ರಸಿದ್ಧಿಯನ್ನು ವಿವಕ್ಷಿಸಿ ಈಶಶಬ್ದವಾಚ್ಯನಾದ ರುದ್ರನಿಗಿಂತ ವಿಷ್ಣು ಅನ್ಯನಾಗಿದ್ದಾನೆಂದು ಹೇಳಿರುವುದರಿಂದ ವಿಷ್ಣುವೇ ಅಕ್ಷರನಾಗುತ್ತಾನೆ. ಈ ಅಭಿಪ್ರಾಯದಿಂದ ''ಜುಷ್ಟಮ್'' ಎಂಬ ವಾಕ್ಯವು ಹೊರಟಿದೆ.

ಅಪ್ರಾಕೃತ ಸ್ವರೂಪನಾದ ಮಹಾವಿಷ್ಣುವೊಬ್ಬನೇ ಅಕ್ಷರಶ್ರುತಿ ಪ್ರತಿಪಾದ್ಯ

सत्तर्कदीपावलिः –

विशेषणभेदव्यपदेशाभ्यां च नेतरौ ।। १-२-२२ ।।

रूपोपन्यासाच्च ।। १-२-२३ ।।

विष्णुरेवात्रोच्यत इत्येतद्युक्त्यन्तरेण साधयत्सूत्रमुपन्यस्य व्याचष्टे – रूपेत्यादिना ।। प्राकृताकाररहितत्वेन 'अवर्णमचक्षुःश्रोत्रम्' इत्युक्तोऽप्य-प्राकृत रूपवत्त्वेन मुख्यरूपवान् विष्णुरेवात्रोच्यत इत्यर्थः ।।

।। इति श्रीपद्मनाभतीर्थविरचितसत्तर्कदीपावळ्याम्ः
अदृश्यत्वाधिकरणम् ।।

ವಿಷ್ಣುವೇ ಅಕ್ಷರಶಬ್ದವಾಚ್ಯನಾಗಿದ್ದಾನೆಂದು ಸಾಧಿಸುವುದಕ್ಕಾಗಿ ಮತ್ತೊಂದು ಯುಕ್ತಿಯನ್ನು ಹೇಳುವ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ರೂಪೋಪನ್ಯಾಸಾಚ್ಚ'' ಎಂಬುದಾಗಿ. ಪ್ರಾಕೃತವಾದ ಆಕಾರವಿಲ್ಲದ ಕಾರಣ ಭಗವಂತನು ಅವರ್ಣ, ಅಚಕ್ಷು, ಅಶ್ರೋತ್ರನೆನಿಸಿದ್ದಾನೆ. 'ಅಚಕ್ಷುರಶ್ರೋತ್ರಂ' ಎಂದು ಶ್ರುತಿಯಲ್ಲಿ ಹೇಳಲ್ಪಟ್ಟ ವ್ಯಕ್ತಿಯೂ ಸಹ

ಪ್ರಾಕೃತವಾದ ಚಕ್ಷುರಾದಿ ಇಂದ್ರಿಯಗಳಿಲ್ಲದವನು. ಆದ್ದರಿಂದ ಅಪ್ರಾಕೃತರೂಪವುಳ್ಳ ಪರಮಾತ್ಮನೇ ಶ್ರುತಿಪ್ರತಿಪಾದ್ಯನಾಗಿದ್ದಾನೆ ಎಂದರ್ಥ.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ
ಅದೃಶ್ಯತ್ವಾಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

'ಅದೃಶ್ಯತ್ವಾದಿಗುಣಾ ವಿಷ್ಣೋರುಕ್ತಾಃ' ಎಂಬ ಭಾಷ್ಯಕ್ಕೆ ವ್ಯಾಖ್ಯಾನ

तत्वप्रदीपः – 'अदृश्यत्वादिगुणा' इत्यादेरयमर्थः । 'अदृश्येऽनात्म्ये' 'सहैव सन्तं न विजानन्ति देवाः' 'स योऽतोऽश्रुत' इत्यादिनाऽदृश्यत्वादिगुणा विष्णोरुक्ताः ।

'ಅದೃಶ್ಯತ್ವಾದಿಗುಣಾ ವಿಷ್ಣೋರುಕ್ತಾಃ' ಎಂಬ ಭಾಷ್ಯಕ್ಕೆ ಹೀಗರ್ಥ - 'ಅದೃಶ್ಯೇऽನಾತ್ಮ್ಯೇ' ಎಂಬ ಶ್ರುತಿಯಲ್ಲಿ 'ಸಹೈವ ಸಂತಂ ನ ವಿಜಾನಂತಿ ದೇವಾಃ' ಎಂಬ ಶ್ರುತಿಯಲ್ಲಿ 'ಸ ಯೋऽತೋಶ್ರುತಃ' ಎಂಬ ಇವೇ ಮೊದಲಾದ ಶ್ರುತಿಗಳಲ್ಲಿ ಅದೃಶ್ಯತ್ವ ಮೊದಲಾದ ಗುಣಗಳು ವಿಷ್ಣುವಿನ ಧರ್ಮವೆಂದು ಸಮರ್ಥಿಸಲಾಯಿತು.

ವಿಶೇಷವಿಚಾರ - 'ಅದೃಶ್ಯತ್ವಾದಿಗುಣಾಃ ವಿಷ್ಣೋರುಕ್ತಾಃ' ಎಂಬ ಭಾಷ್ಯದ ಮಾತಿಗೆ 'ಅದೃಶ್ಯೇऽನಾತ್ಮ್ಯೇ' ಎಂಬಲ್ಲಿಂದ 'ವಿಷ್ಣೋರುಕ್ತಾಃ' ಎಂಬಲ್ಲಿಯ ತನಕ ತತ್ತ್ವಪ್ರದೀಪದಲ್ಲಿ ವ್ಯಾಖ್ಯಾನ ಮಾಡಲಾಗಿದೆ.

'ಅದೃಶ್ಯೇऽನಾತ್ಮ್ಯೇ' ಎಂಬ ಶ್ರುತಿಯು ತೈತ್ತಿರೀಯದಲ್ಲಿರುವುದರಿಂದ ಇದನ್ನು ಆನಂದಮಯಾಧಿಕರಣದಲ್ಲಿ ವಿಷ್ಣುಪರವಾಗಿ ಸಮರ್ಥಿಸಲಾಗಿದೆ. 'ಸ ಯೋऽತೋऽಶ್ರುತಃ' ಎಂಬುದು ಅಂತರ್ಯಾಮ್ಯಧಿಕರಣದಲ್ಲಿ ಉದಾಹರಿಸಲ್ಪಟ್ಟ ಐತರೇಯ ಆರಣ್ಯಕದ

ವಾಕ್ಯವಾಗಿದೆ. ಮತ್ತು 'ಸಹೈವ ಸಂತಂ ನ ವಿಜಾನಂತಿ ದೇವಾಃ' ಎಂಬ ಅದೃಶ್ಯತ್ವವನ್ನು ವಿಷ್ಣುವಿನ ಧರ್ಮವೆಂದು ಸಮರ್ಥಿಸಲಾಗಿದೆ.

ಮಹಾವಿಷ್ಣು ಅದೃಶ್ಯನಾದರೆ ಅಕ್ಷರತತ್ವಕ್ಕಿಂತ ಉತ್ತಮೋತ್ತಮನಾಗಲಾರ

तत्वप्रदीपः – श्रुत्यन्तरे तु 'अथ परा यया तदक्षरमधिगम्यते, यत्तदद्रेश्यमग्राह्यमगोत्रम्' इत्याद्युक्त्वा उत्तरत्र 'अक्षरात् परतः परः' इति वचनात् तस्मादद्दृश्यत्वादिगुणकादक्षरात्परतः परः कश्चिदस्तीति प्रतीयत इति ।

ಆದರೆ ಅಥರ್ವಣೋಪನಿಷತ್ತಿನಲ್ಲಿ 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ, ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮ್' ಇತ್ಯಾದಿಯಾಗಿ ಹೇಳಿ 'ಅಕ್ಷರಾತ್ ಪರತಃ ಪರಃ' ಎಂಬ ವಚನವು ಕಾಣಿಸುತ್ತಿದೆ. ಅಕ್ಷರತತ್ವವು ಅದೃಶ್ಯವಾಗಿದೆ ಎಂದು ಹೇಳಿ, ಈ ಅಕ್ಷರತತ್ವಕ್ಕಿಂತ ಉತ್ತಮೋತ್ತಮವಾದದ್ದು ಮತ್ತೊಂದು ತತ್ವವಿದೆಯೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ಅದೃಶ್ಯತ್ವಾದಿ ಗುಣವುಳ್ಳದ್ದು ಅಕ್ಷರತತ್ವವಾಗುತ್ತದೆ ಹೊರತು, ಅಕ್ಷರತತ್ವಕ್ಕಿಂತ ಉತ್ತಮೋತ್ತಮನಾದ ಪರಮಾತ್ಮನು ಆಗುವುದಿಲ್ಲ

'ಅದೃಶ್ಯತ್ವಾದಿ' ಎಂಬ ಭಾಷ್ಯದಿಂದಲೇ ಅಧಿಕರಣಸಂಗತ್ಯಾದಿಗಳು

तत्वप्रदीपः – अनेन भाष्येणाधिकरणसङ्गतिरगादि । विषयवाक्यं चोदाहारि । विषयस्थानञ्च उदस्थायि । पूर्वपक्षबीजं चासूचि ।

ಹೀಗೆ ಭಾಷ್ಯದಿಂದ ಅಧಿಕರಣಸಂಗತಿಯನ್ನು ಹೇಳಿರುತ್ತಾರೆ. ವಿಷಯವಾಕ್ಯವನ್ನು ಉದಾಹರಿಸಿದ್ದಾರೆ. ವಿಷಯಸ್ಥಾನವನ್ನೂ ಕೂಡ ತೋರಿಸಿದ್ದಾರೆ. ಪೂರ್ವಪಕ್ಷಬೀಜವನ್ನೂ ಕೂಡ ಸೂಚನೆ ಮಾಡಿದ್ದಾರೆ.

ವಿಶೇಷವಿಚಾರ - 'ಅದೃಶ್ಯೇನಾತ್ಮ್ಯೇ' ಎಂಬ ಶ್ರುತಿಯು ಆನಂದಮಯಾಧಿಕರಣದಲ್ಲಿ ಇರುವುದರಿಂದ ಮತ್ತು ಅದೃಶ್ಯತ್ವಗುಣವನ್ನು ವಿಷ್ಣುವಿನ ಅಸಾಧಾರಣಧರ್ಮವೆಂದು ಅದೇ

ಆನಂದಮಯಾಧಿಕರಣದಲ್ಲಿ ಹೇಳಿರುವುದರಿಂದ, ಈ ಅಧಿಕರಣಕ್ಕೆ ಆನಂದಮಯಾಧಿಕರಣದಿಂದ ಸಂಗತಿಯನ್ನು ತಿಳಿಯಬೇಕು. 'ಸಹೈವ ಸಂತಂ ನ ವಿಜಾನಂತಿ ದೇವಾಃ' ಎಂಬ ಅಂತಃಸ್ಥತ್ವಾಧಿಕರಣದಲ್ಲಿ ಹೇಳಿದ ವಿಷಯವಾಕ್ಯದಿಂದ, ಮತ್ತು ಶ್ರುತಿಯು ಹಿಂದಿನ ಅಂತರ್ಯಾಮ್ಯಧಿಕರಣದಲ್ಲಿ ಉಲ್ಲೇಖಿತವಾಗಿದ 'ಸ ಯೋಽತೋಽಶ್ರುತಃ' ಎಂಬ ಶ್ರುತಿಯಿಂದಲೂ ಸಂಗತಿಯನ್ನು ತಿಳಿಯಬೇಕು. ಆದ್ದರಿಂದ ಅದೃಶ್ಯತ್ವಾಧಿಕರಣದಿಂದ ಹಾಗೂ ಹಿಂದಿನ ಆನಂದಮಯಾಧಿಕರಣದಿಂದ ಸಂಗತಿ ಇರುತ್ತದೆ. ಅಥರ್ವಣೋಪನಿಷತ್ತಿನಲ್ಲಿರುವ 'ಅಥ ಪರಾಃ' ಎಂಬುದು ವಿಷಯವಾಕ್ಯವಾಗಿದೆ. ಅದೃಶ್ಯತ್ವವೆಂಬ ಗುಣವು ಅಕ್ಷರತತ್ವದಲ್ಲಿ ಕೇಳಿಸುತ್ತಿರುವುದು ಪೂರ್ವಪಕ್ಷಕ್ಕೆ ಬೀಜವಾಗಿದೆ ಎಂದು ತಿಳಿಯಬೆಕು.

ಅಕ್ಷರತತ್ವದಿಂದ ಜಗತ್ತಿನ ಸೃಷ್ಟಿ

तत्वप्रदीपः – ''अदृश्यत्वादिगुणको धर्मोक्तेः'' ।। तमेव पूर्वपक्षं सहेतुकमिह वर्णयति । 'यथोर्णनाभिः सृजते गृह्णते च यथा पृथिव्यामोषधयस्सम्भवन्ति । यथा सतः पुरुषात् केशलोमानि तथाऽक्षरात् सम्भवतीह विश्वम्' इत्यूर्णनाभिपृथिव्यादिदृष्टान्तेनाक्षरस्य जगदुपादानत्वमुक्त्वोपरि तस्माच्चाक्षरात् परतः परस्याभिधानाज्जडप्रकृतिरदृश्यत्वादिगुणकमक्षरमिति पूर्वपक्षः ।।

ವಿಷಯವಾಕ್ಯದಿಂದ ಯಾವ ಪೂರ್ವಪಕ್ಷವನ್ನು ತೋರಿಸಿದ್ದಾರೋ, ಅದನ್ನೇ ಹೇತುಸಹಿತವಾಗಿ ಪೃಥಿವ್ಯಾದಿ ಇತ್ಯಾದಿ ಭಾಷ್ಯದಿಂದ ವರ್ಣಿಸುತ್ತಿದ್ದಾರೆ - 'ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮೋಷಧಯಃ ಸಂಭವತಿ । ಯಥಾ ಸತಃ ಪುರುಷಾತ್ ಕೇಶಲೋಮಾನಿ ತಥಾऽಕ್ಷರಾತ್ ಸಂಭವತೀಹ ವಿಶ್ವಮ್'

'ಜೇಡರಹುಳವು ಹೆಣೆದು ತಾನೇ ಅದನ್ನು ಸ್ವೀಕರಿಸುವಂತೆ ಭೂಮಿಯಿಂದ ಸಸ್ಯಗಳು ಹುಟ್ಟುವಂತೆ ಪುರುಷನಿಂದ ರೋಮಕೂದಲುಗಳು ಹುಟ್ಟುವಂತೆ ಅಕ್ಷರತತ್ವದಿಂದ ಈ ಜಗತ್ತು ಹುಟ್ಟುತ್ತದೆ'.

ಊರ್ಣನಾಭಿ, ಪೃಥಿವೀ ಮೊದಲಾದ ದೃಷ್ಟಾಂತವನ್ನು ನೀಡುವ ಮೂಲಕ ಅಕ್ಷರವು ಜಗತ್ತಿಗೆ ಕಾರಣವಾಗಿದೆ ಎಂದು ಹೇಳಲಾಗಿದೆ. ಹೀಗೆ ಹೇಳಿ ಮುಂದೆ ಇಂಥ ಅಕ್ಷರತತ್ವಕ್ಕಿಂತ ಯಾವುದು ಶ್ರೇಷ್ಠವಾದ ತತ್ವವಿದೆಯೋ, ಅದಕ್ಕಿಂತಲೂ ಶ್ರೇಷ್ಠವಾದದ್ದು ಎಂಬುದಾಗಿ ಶ್ರುತಿ ಹೇಳುತ್ತಿದೆ. ಆದ್ದರಿಂದ ಅಕ್ಷರಶಬ್ದದಿಂದ ವಾಚ್ಯವಾದದ್ದು ಜಡಪ್ರಕೃತಿಯೇ ಆಗುತ್ತದೆ. ಅದೃಶ್ಯತ್ವಾದಿಗುಣವುಳ್ಳದ್ದೂ ಕೂಡ ಇಂಥ ಅಕ್ಷರತತ್ವವೇ ಆಗುತ್ತದೆ ಎಂಬುದು ಈ ಅಧಿಕರಣದ ಪೂರ್ವಪಕ್ಷ.

ವಿಶೇಷವಿಚಾರ - ಪ್ರಶ್ನೆ - ಭಾಷ್ಯದಲ್ಲಿ 'ಯಥೋರ್ಣನಾಭಿಃ' ಎಂಬ ಶ್ರುತಿಗೆ ಅನುಗುಣವಾಗಿ 'ಊರ್ಣನಾಭ್ಯಾದಿ ದೃಷ್ಟಾಂತಂ ಉಕ್ತ್ವಾ' ಎಂದು ಹೇಳಬೇಕಿತ್ತು. ಪ್ರಥಮಪ್ರಾಪ್ತವಾದ ಊರ್ಣನಾಭಿಯನ್ನು ಬಿಟ್ಟು ದ್ವಿತೀಯಪ್ರಾಪ್ತವಾದ ಪೃಥಿವ್ಯಾದಿಗಳನ್ನು ಏಕೆ ಸ್ವೀಕರಿಸಿದ್ದಾರೆ ?

ಉತ್ತರ - ಹೌದು ಆದರೆ ಸೃಜತೇ ಎಂಬ ಪದವಿರುವುದರಿಂದ ಊರ್ಣನಾಭಿಯು ಬಲೆಯನ್ನು ಹುಟ್ಟಿಸಲು ನಿಮಿತ್ತಕಾರಣವಾಗಿದೆ ಎಂದೇ ತಿಳಿಯುತ್ತದೆ ಹೊರತು, ಬಲೆಗೆ ಪೂರ್ಣಚೇತನವು ಉಪಾದಾನಕಾರಣವೆಂದು ತಿಳಿಯಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಪ್ರಥಮಪ್ರಾಪ್ತವಾದ ಊರ್ಣನಾಭಿ ದೃಷ್ಟಾಂತವನ್ನು ಬಿಟ್ಟು, ದ್ವಿತೀಯಪ್ರಾಪ್ತವಾದ ಪೃಥಿವ್ಯಾದಿ ದೃಷ್ಟಾಂತವನ್ನು ಸ್ವೀಕರಿಸಿದ್ದಾರೆ. ಪೃಥಿವ್ಯಾದಿಗಳು ಸಸ್ಯಗಳಿಗೆ ಉಪಾದಾನಕಾರಣವೇ ಆಗಿರುತ್ತದೆ ಹೊರತು, ನಿಮಿತ್ತಕಾರಣವಾಗಿರಲು ಸಾಧ್ಯವಿಲ್ಲ. ಈ ಉದ್ದೇಶಕ್ಕಾಗಿ ಭಾಷ್ಯದಲ್ಲಿ ಊರ್ಣನಾಭಿ ದೃಷ್ಟಾಂತವನ್ನು ಪರಿತ್ಯಾಗ ಮಾಡಿ, ಪೃಥಿವ್ಯಾದಿ ದೃಷ್ಟಾಂತವನ್ನು ಸ್ವೀಕರಿಸಿರುತ್ತಾರೆ. ಇದು ಭಾಷ್ಯದೀಪಿಕಾದಲ್ಲಿ ಹೇಳಿದ ಸ್ವರಸವಾದ ಅರ್ಥ.

ಅಕ್ಷರತತ್ವವು ವಿಷ್ಣುವಾದರೆ ಅವನಿಗಿಂತ ಉತ್ತಮೋತ್ತಮನಾದ ಮತ್ತೊಬ್ಬನನ್ನು ಒಪ್ಪಬೇಕಾಗುತ್ತದೆ. ಆಗ ವಿಷ್ಣುಸರ್ವೋತ್ತಮತ್ವಕ್ಕೆ ಭಂಗ ಬರುತ್ತದೆ. ಹಾಗಾದರೆ ಈ ಅಕ್ಷರ ಎಂದರೆ ಯಾರು ? ಎಂಬ ಪ್ರಶ್ನೆಯು ಪ್ರಾಪ್ತವಾದರೆ ಮೂರು ರೀತಿಯಲ್ಲಿ ಉತ್ತರಿಸಬಹುದು. ಜಡಪ್ರಕೃತಿ, ಚೇತನಪ್ರಕೃತಿ, ಚತುರ್ಮುಖಬ್ರಹ್ಮ ಎಂದು.

ಜಡಪ್ರಕೃತಿಯು ವಿಶ್ವಕ್ಕೆ ಉಪಾದಾನಕಾರಣವಾಗಿರುವುದರಿಂದ 'ಯಥೋರ್ಣನಾಭಿಃ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಜಗತ್ಕಾರಣತ್ವವು ಅದಕ್ಕೆ ಸಂಗತವಾಗುತ್ತದೆ ಎಂಬುದು ಪೂರ್ವಪಕ್ಷದ ಅಭಿಪ್ರಾಯ.

ಚಿತ್‌ಪ್ರಕೃತಿಯು ಅಕ್ಷರವೆಂದು ಪೂರ್ವಪಕ್ಷ

तत्वप्रदीपः – 'कूटस्थोऽक्षर उच्यते' इति स्मृतेश्चित्प्रकृतिर्वा । 'ब्रह्मा देवानां प्रथमः सम्बभूव' 'विश्वस्य कर्ता भुवनस्य गोप्ता' 'स ब्रह्मविद्यां सर्वविद्याप्रतिष्ठाम्' इत्यादि ब्रह्मशब्दात्, तस्मात् परस्याः प्रकृतेः परस्य हरेरभिधानादेव च हिरण्यगर्भो वेति ।

'ಕೂಟಸ್ಥೋऽಕ್ಷರ ಉಚ್ಯತೇ' ಎಂಬ ಸ್ಮೃತಿವಾಕ್ಯದ ಆಧಾರದಿಂದ ಚಿತ್‌ಪ್ರಕೃತಿಯೂ ಕೂಡ ಅಕ್ಷರಶಬ್ದದಿಂದ ಪ್ರತಿಪಾದ್ಯವಾಗಬಹುದು.

ಅಥವಾ ಚತುರ್ಮುಖಬ್ರಹ್ಮನೂ ಕೂಡ ಅಕ್ಷರ ಎಂದು ಕರೆಸಿಕೊಳ್ಳುತ್ತಾನೆ. ಏಕೆಂದರೆ ಅಥರ್ವಣೋಪನಿಷತ್ತಿನ ಈ ಸಂದರ್ಭದಲ್ಲಿ 'ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ' ದೇವತೆಗಳ ಮಧ್ಯದಲ್ಲಿ ಬ್ರಹ್ಮನು ಮೊದಲು ಹುಟ್ಟಿದನು. 'ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ' ವಿಶ್ವವನ್ನು ರಕ್ಷಣೆ ಮಾಡಿದವನು ಚತುರ್ಮುಖ ಬ್ರಹ್ಮನು. 'ಸ ಬ್ರಹ್ಮವಿದ್ಯಾಂ ಸರ್ವವಿದ್ಯಾ ಪ್ರತಿಷ್ಠಾಮ್' ಇದೆಲ್ಲವೂ ಬ್ರಹ್ಮವಿದ್ಯೆ. ಇದೇ ಎಲ್ಲ ವಿದ್ಯೆಗಳಿಗೆ ಆಧಾರವಾಗಿದೆ. ಇತ್ಯಾದಿಯಾಗಿ ಬ್ರಹ್ಮಶಬ್ದವು ಕೇಳಿಸುತ್ತಿರುವುದರಿಂದ ಚತುರ್ಮುಖಬ್ರಹ್ಮನೇ ಪ್ರತಿಪಾದ್ಯನಾಗುತ್ತಾನೆ.

ಅಥವಾ ಪರತತ್ವವೆನಿಸಿದ ಪ್ರಕೃತಿಗಿಂತ, ಪರತತ್ವವೆನಿಸಿದ ಶ್ರೀಹರಿಯನ್ನು ಪ್ರತಿಪಾದನೆ ಮಾಡಿರುವುದರಿಂದ ಹಿರಣ್ಯಗರ್ಭನು ಅಕ್ಷರ ಎಂದು ಕರೆಸಿಕೊಳ್ಳುತ್ತಾನೆ.

ವಿಶೇಷ ವಿಚಾರ - ಗೀತೆಯಲ್ಲಿ ಲಕ್ಷ್ಮೀದೇವಿಯನ್ನು ಅಕ್ಷರಳೆಂದು ಕರೆಯಲಾಗಿದೆ. ಈಗ ಶ್ರುತಿಯೂ ಕೂಡ ಅವಳನ್ನೇ ಅಕ್ಷರವೆಂದು ಕರೆಯುತ್ತಿದೆ. ಹೀಗೆ ಲಕ್ಷ್ಮೀ ಎಂಬರ್ಥವನ್ನು ಸ್ವೀಕರಿಸುವುದು ಪ್ರಸ್ತುತವಾಗುತ್ತದೆ. ಅಥವಾ ಅಕ್ಷರ ಎಂಬುದು ಚತುರ್ಮುಖನ ಹೆಸರೂ ಕೂಡ ಆಗಬಹುದು. ಮತ್ತು ಚತುರ್ಮುಖ ಎಂಬರ್ಥವನ್ನು ಸ್ವೀಕರಿಸಿದಾಗ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಗೆ ಸ್ವರಸವಾದ ಅರ್ಥವನ್ನು ಸ್ವೀಕರಿಸಿದಂತಾಗುತ್ತದೆ. ಅಕ್ಷರಾತ್ = ಚತುರ್ಮುಖ ಬ್ರಹ್ಮನ ದೆಸೆಯಿಂದ, ಪರತಃ = ಶ್ರೇಷ್ಠವಾದ ಪ್ರಕೃತಿತತ್ವಕ್ಕಿಂತ, ಪರಃ = ಉತ್ತಮನು ಶ್ರೀಹರಿ. ಹೀಗೆ ಹೇಳುವುದರಿಂದ ವಿಷ್ಣುಸರ್ವೋತ್ತಮತ್ವವು ಸ್ಥಾಪಿತವಾಗುತ್ತದೆ.

ಆದ್ದರಿಂದ ಅಕ್ಷರಶಬ್ದ ಪ್ರತಿಪಾದ್ಯನಾದವನು ಚತುರ್ಮುಖಬ್ರಹ್ಮನಾಗುತ್ತಾನೆ ಎಂಬುದು ಪೂರ್ವಪಕ್ಷಿಗಳ ಅಭಿಪ್ರಾಯ.

ಅದೃಶ್ಯತ್ವಾದಿ ಗುಣಗಳುಳ್ಳವನು ಮಹಾವಿಷ್ಣುವೆನ್ನಲು ಸಿದ್ಧಾಂತ

तत्वप्रदीपः – 'तमेवं विद्वान्' इत्यादिना परिहरति । विष्णुधर्मत्वेन स्पष्टं श्रुत्यन्तरसिद्धं परविद्याविषयत्वब्रह्मत्वामृतत्वादि, तदत्राप्युच्यते, 'अथ परा' 'तदेतदक्षरं ब्रह्म' 'पुरुष एवेदं विश्वम्' 'कर्म तपो ब्रह्म परामृतम्' इत्यादिना । अतः अदृश्यत्वादिगुणको विष्णुरेव ।

ಪರವಿದ್ಯಾವಿಷಯತ್ವ, ಬ್ರಹ್ಮತ್ವ, ಅಮೃತತ್ವ ಇವೇ ಮೊದಲಾದ ವಿಷ್ಣುವಿನ ಅಸಾಧಾರಣಧರ್ಮಗಳೆಂದು ಸ್ಪಷ್ಟವಾಗಿ ಬೇರೆ ಶ್ರುತಿಗಳಿಂದ ಸಿದ್ಧವಾದವುಗಳು ಈ ಪ್ರಕರಣದಲ್ಲಿಯೂ ಕೂಡ ಹೇಳಲ್ಪಟ್ಟಿವೆ. 'ಅಥ ಪರಾ' ಎಂಬ ಶ್ರುತಿಯಿಂದ ಪರವಿದ್ಯಾ ವಿಷಯತ್ವವು, 'ತದೇತದಕ್ಷರಂ ಬ್ರಹ್ಮ' ಎಂಬುದರಿಂದ ಬ್ರಹ್ಮತ್ವವು, 'ಪುರುಷ ಏವೇದಂ ವಿಶ್ವಮ್' 'ಕರ್ಮ ತಪೋ ಬ್ರಹ್ಮ ಪರಾಮೃತಮ್' ಎಂಬುದರಿಂದ ಅಮೃತತ್ವವು ಶ್ರುತಿಯ ಈ ಪ್ರಕರಣದಲ್ಲಿ ಕೇಳುತ್ತಿಸುತ್ತಿದೆ. ಆದ್ದರಿಂದ ಅದೃಶ್ಯತ್ವಾದಿ ಗುಣಗಳುಳ್ಳವನು ಮಹಾವಿಷ್ಣುವೇ ಆಗುತ್ತಾನೆ.

ವಿಶೇಷ ವಿಚಾರ - ಈ ಪ್ರಕರಣದಲ್ಲಿ ಅಕ್ಷರತತ್ವದ ಜ್ಞಾನವು 'ಪರವಿದ್ಯೆ' ಎಂದು ಕರೆಯಲಾಗಿದೆ. ಪರವಿದ್ಯೆಗೆ ವಿಷಯನಾದವನು ಮಹಾವಿಷ್ಣು ಮಾತ್ರ ಹೊರತು, ಬೇರೆ ಯಾರೂ ಅಲ್ಲ. ಆದ್ದರಿಂದ ಅಕ್ಷರತತ್ವವೂ ಕೂಡ ಮಹಾವಿಷ್ಣುವೇ ಆಗಬೇಕು. 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಪರಾಪರವಿದ್ಯೆಯನ್ನು ಪ್ರಸ್ತಾಪ ಮಾಡಿದ ಶ್ರುತಿಯು 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಅಕ್ಷರತತ್ವವನ್ನು ಪ್ರತಿಪಾದನೆ ಮಾಡುವುದೇ ಪರವಿದ್ಯೆ ಎಂದು ಕರೆಯುತ್ತಿದೆ. ಇದೇ ನಿಜವಾಗಿಯೂ ಕೂಡ ಪರಮಪುರುಷಾರ್ಥಕ್ಕೆ ಕಾರಣವಾದದ್ದು. ಆದ್ದರಿಂದ ಅದೃಶ್ಯತ್ವಾದಿಗುಣ- ಗಳುಳ್ಳವನೂ ಮಹಾವಿಷ್ಣುವೇ ಆಗುತ್ತಾನೆ ಹೊರತು, ಬೇರೆ ತತ್ವವು ಆಗುವುದಿಲ್ಲ.

ಚಿತ್‌ಪ್ರಕೃತಿಯು ಅಕ್ಷರವೆಂದು ಪೂರ್ವಪಕ್ಷ

तत्वप्रदीपः – 'कूटस्थोऽक्षर उच्यते' इति स्मृतेश्चित्प्रकृतिर्वा । 'ब्रह्मा देवानां प्रथमः सम्बभूव' 'विश्वस्य कर्ता भुवनस्य गोप्ता' 'स ब्रह्मविद्यां सर्वविद्याप्रतिष्ठाम्' इत्यादि ब्रह्मशब्दात्, तस्मात् परस्याः प्रकृतेः परस्य हरेरभिधानादेव च हिरण्यगर्भो वेति ।

'ಕೂಟಸ್ಥೋಽಕ್ಷರ ಉಚ್ಯತೇ' ಎಂಬ ಸ್ಮೃತಿವಾಕ್ಯದ ಆಧಾರದಿಂದ ಚಿತ್‌ಪ್ರಕೃತಿಯೂ ಕೂಡ ಅಕ್ಷರಶಬ್ದದಿಂದ ಪ್ರತಿಪಾದ್ಯವಾಗಬಹುದು.

ಅಥವಾ ಚತುರ್ಮುಖಬ್ರಹ್ಮನೂ ಕೂಡ ಅಕ್ಷರ ಎಂದು ಕರೆಸಿಕೊಳ್ಳುತ್ತಾನೆ. ಏಕೆಂದರೆ ಅಥರ್ವಣೋಪನಿಷತ್ತಿನ ಈ ಸಂದರ್ಭದಲ್ಲಿ 'ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ' ದೇವತೆಗಳ ಮಧ್ಯದಲ್ಲಿ ಬ್ರಹ್ಮನು ಮೊದಲು ಹುಟ್ಟಿದನು. 'ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ' ವಿಶ್ವವನ್ನು ರಕ್ಷಣೆ ಮಾಡಿದವನು ಚತುರ್ಮುಖ ಬ್ರಹ್ಮನು. 'ಸ ಬ್ರಹ್ಮವಿದ್ಯಾಂ ಸರ್ವವಿದ್ಯಾ ಪ್ರತಿಷ್ಠಾಮ್' ಇದೆಲ್ಲವೂ ಬ್ರಹ್ಮವಿದ್ಯೆ. ಇದೇ ಎಲ್ಲ ವಿದ್ಯೆಗಳಿಗೆ ಆಧಾರವಾಗಿದೆ. ಇತ್ಯಾದಿಯಾಗಿ ಬ್ರಹ್ಮಶಬ್ದವು ಕೇಳಿಸುತ್ತಿರುವುದರಿಂದ ಚತುರ್ಮುಖಬ್ರಹ್ಮನೇ ಪ್ರತಿಪಾದ್ಯನಾಗುತ್ತಾನೆ.

ಅಥವಾ ಪರತತ್ವವೆನಿಸಿದ ಪ್ರಕೃತಿಗಿಂತ, ಪರತತ್ವವೆನಿಸಿದ ಶ್ರೀಹರಿಯನ್ನು ಪ್ರತಿಪಾದನೆ ಮಾಡಿರುವುದರಿಂದ ಹಿರಣ್ಯಗರ್ಭನು ಅಕ್ಷರ ಎಂದು ಕರೆಸಿಕೊಳ್ಳುತ್ತಾನೆ.

ವಿಶೇಷ ವಿಚಾರ - ಗೀತೆಯಲ್ಲಿ ಲಕ್ಷ್ಮೀದೇವಿಯನ್ನು ಅಕ್ಷರಳೆಂದು ಕರೆಯಲಾಗಿದೆ. ಈಗ ಶ್ರುತಿಯೂ ಕೂಡ ಅವಳನ್ನೇ ಅಕ್ಷರವೆಂದು ಕರೆಯುತ್ತಿದೆ. ಹೀಗೆ ಲಕ್ಷ್ಮೀ ಎಂಬರ್ಥವನ್ನು ಸ್ವೀಕರಿಸುವುದು ಪ್ರಸ್ತುತವಾಗುತ್ತದೆ. ಅಥವಾ ಅಕ್ಷರ ಎಂಬುದು ಚತುರ್ಮುಖನ ಹೆಸರೂ ಕೂಡ ಆಗಬಹುದು. ಮತ್ತು ಚತುರ್ಮುಖ ಎಂಬರ್ಥವನ್ನು ಸ್ವೀಕರಿಸಿದಾಗ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಗೆ ಸ್ವರಸವಾದ ಅರ್ಥವನ್ನು ಸ್ವೀಕರಿಸಿದಂತಾಗುತ್ತದೆ. ಅಕ್ಷರಾತ್ = ಚತುರ್ಮುಖ ಬ್ರಹ್ಮನ ದೆಸೆಯಿಂದ, ಪರತಃ = ಶ್ರೇಷ್ಠವಾದ ಪ್ರಕೃತಿತತ್ವಕ್ಕಿಂತ, ಪರಃ = ಉತ್ತಮನು ಶ್ರೀಹರಿ. ಹೀಗೆ ಹೇಳುವುದರಿಂದ ವಿಷ್ಣುಸರ್ವೋತ್ತಮತ್ವವು ಸ್ಥಾಪಿತವಾಗುತ್ತದೆ.

ಆದ್ದರಿಂದ ಅಕ್ಷರಶಬ್ದ ಪ್ರತಿಪಾದ್ಯನಾದವನು ಚತುರ್ಮುಖಬ್ರಹ್ಮನಾಗುತ್ತಾನೆ ಎಂಬುದು ಪೂರ್ವಪಕ್ಷಿಗಳ ಅಭಿಪ್ರಾಯ.

ಅದೃಶ್ಯತ್ವಾದಿ ಗುಣಗಳುಳ್ಳವನು ಮಹಾವಿಷ್ಣುವೆನ್ನಲು ಸಿದ್ಧಾಂತ

तत्वप्रदीपः – 'तमेवं विद्वान्' इत्यादिना परिहरति । विष्णुधर्मत्वेन स्पष्टं श्रुत्यन्तरसिद्धं परविद्याविषयत्वब्रह्मत्वामृतत्वादि, तदत्राप्युच्यते, 'अथ परा' 'तदेतदक्षरं ब्रह्म' 'पुरुष एवेदं विश्वम्' 'कर्म तपो ब्रह्म परामृतम्' इत्यादिना । अतः अदृश्यत्वादिगुणको विष्णुरेव ।

ಪರವಿದ್ಯಾವಿಷಯತ್ವ, ಬ್ರಹ್ಮತ್ವ, ಅಮೃತತ್ವ ಇವೇ ಮೊದಲಾದ ವಿಷ್ಣುವಿನ ಅಸಾಧಾರಣಧರ್ಮಗಳೆಂದು ಸ್ಪಷ್ಟವಾಗಿ ಬೇರೆ ಶ್ರುತಿಗಳಿಂದ ಸಿದ್ಧವಾದವುಗಳು ಈ ಪ್ರಕರಣದಲ್ಲಿಯೂ ಕೂಡ ಹೇಳಲ್ಪಟ್ಟಿವೆ. 'ಅಥ ಪರಾ' ಎಂಬ ಶ್ರುತಿಯಿಂದ ಪರವಿದ್ಯಾ ವಿಷಯತ್ವವು, 'ತದೇತದಕ್ಷರಂ ಬ್ರಹ್ಮ' ಎಂಬುದರಿಂದ ಬ್ರಹ್ಮತ್ವವು, 'ಪುರುಷ ಏವೇದಂ ವಿಶ್ವಮ್' 'ಕರ್ಮ ತಪೋ ಬ್ರಹ್ಮ ಪರಾಮೃತಮ್' ಎಂಬುದರಿಂದ ಅಮೃತತ್ವವು ಶ್ರುತಿಯ ಈ ಪ್ರಕರಣದಲ್ಲಿ ಕೇಳುತ್ತಿಸುತ್ತಿದೆ. ಆದ್ದರಿಂದ ಅದೃಶ್ಯತ್ವಾದಿ ಗುಣಗಳುಳ್ಳವನು ಮಹಾವಿಷ್ಣುವೇ ಆಗುತ್ತಾನೆ.

ವಿಶೇಷ ವಿಚಾರ - ಈ ಪ್ರಕರಣದಲ್ಲಿ ಅಕ್ಷರತತ್ವದ ಜ್ಞಾನವು 'ಪರವಿದ್ಯೆ' ಎಂದು ಕರೆಯಲಾಗಿದೆ. ಪರವಿದ್ಯೆಗೆ ವಿಷಯನಾದವನು ಮಹಾವಿಷ್ಣು ಮಾತ್ರ ಹೊರತು, ಬೇರೆ ಯಾರೂ ಅಲ್ಲ. ಆದ್ದರಿಂದ ಅಕ್ಷರತತ್ವವೂ ಕೂಡ ಮಹಾವಿಷ್ಣುವೇ ಆಗಬೇಕು. 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಪರಾಪರವಿದ್ಯೆಯನ್ನು ಪ್ರಸ್ತಾಪ ಮಾಡಿದ ಶ್ರುತಿಯು 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಅಕ್ಷರತತ್ವವನ್ನು ಪ್ರತಿಪಾದನೆ ಮಾಡುವುದೇ ಪರವಿದ್ಯೆ ಎಂದು ಕರೆಯುತ್ತಿದೆ. ಇದೇ ನಿಜವಾಗಿಯೂ ಕೂಡ ಪರಮಪುರುಷಾರ್ಥಕ್ಕೆ ಕಾರಣವಾದದ್ದು. ಆದ್ದರಿಂದ ಅದೃಶ್ಯತ್ವಾದಿಗುಣ- ಗಳುಳ್ಳವನೂ ಮಹಾವಿಷ್ಣುವೇ ಆಗುತ್ತಾನೆ ಹೊರತು, ಬೇರೆ ತತ್ವವು ಆಗುವುದಿಲ್ಲ.

ವೇದದ ಉಪಾಂಗಗಳು ಹಾಗೂ ಪ್ರತ್ಯಂಗಗಳು

तत्वप्रदीपः – आयुर्वेदो धनुर्वेदो गान्धर्वं स्थापत्यं चोपाङ्गानि । शिष्टाः कला विद्याः प्रत्यङ्गानि ।।छ।।

ಭಾಷ್ಯದಲ್ಲಿ 'तत्र ये वेदा यान्यंगानि यान्युपांगानि यानि प्रत्यंगानि साऽपरा' ಅವುಗಳಲ್ಲಿ ವೇದಗಳು, ವೇದಾಂಗಗಳು, ಉಪಾಂಗಗಳು, ಪ್ರತ್ಯಂಗಗಳು ಇವೆಲ್ಲವೂ ಅಪರವಿದ್ಯೆ ಎನಿಸುತ್ತವೆಂದು ಹೇಳಿರುತ್ತವೆ. ಇಲ್ಲಿ ಹೇಳಲ್ಪಟ್ಟ ಉಪಾಂಗಗಳೆಂದರೆ ಆಯುರ್ವೇದ, ಧನುರ್ವೇದ, ಗಾಂಧರ್ವವಿದ್ಯೆ, ಶಿಲ್ಪಶಾಸ್ತ್ರಗಳನ್ನು ವಿವಕ್ಷಿಸಬೇಕು. ಪ್ರತ್ಯಂಗಗಳು ಎಂದರೆ ಚಿತ್ರಕಲೆ ಮೊದಲಾದ ಇತರ ಕಲೆಗಳನ್ನು ವಿವಕ್ಷಿಸಬೇಕು.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ಅನ್ಯತ್ರಪ್ರಸಿದ್ಧವಾದ ಅದೃಶ್ಯತ್ವವೆಂಬ ಲಿಂಗದಸಮನ್ವಯ

तत्वप्रकाशिका – अदृश्यत्वादिगुणको धर्मोक्तेः ।। १-२-२१ ।।

अत्राऽक्षरशब्दसाहित्येन अन्यत्रप्रसिद्धादृश्यत्वादिलिङ्गानां ब्रह्मणि समन्वयप्रतिपादनादस्ति शास्त्रादिसङ्गतिः । श्रुत्यादिसङ्गतिं विषयवाक्योदाहरणेन विषयसंशयौ सयुक्तिकं पूर्वपक्षं च सूचयति – अदृश्यत्वादीति ।।

ಈ ಅಧಿಕರಣದಲ್ಲಿ ಅಕ್ಷರಶಬ್ದದ ಸಂಬಂಧವಿರುವ ಪ್ರಯುಕ್ತ ವಿಷ್ಣುವನ್ನು ಬಿಟ್ಟು ಬೇರೆಡೆ ಪ್ರಸಿದ್ಧವಾದ ಅದೃಶ್ಯತ್ವವೇ ಮೊದಲಾದ ಲಿಂಗಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ಆದ್ದರಿಂದಲೇ ಈ ಅಧಿಕರಣಕ್ಕೆ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ. ಶ್ರುತಿಸಂಗತಿ, ಅಧಿಕರಣಸಂಗತಿಗಳನ್ನು ವಿಷಯವಾಕ್ಯವನ್ನು ಉದಾಹರಿಸುವ ಮೂಲಕ

ತೋರಿಸುತ್ತಿದ್ದಾರೆ. ಮತ್ತು ವಿಷಯ, ಸಂಶಯ, ಹಾಗೂ ಯುಕ್ತಿಬದ್ಧವಾದ ಪೂರ್ವಪಕ್ಷಗಳನ್ನೂ ಸಹ ಸೂಚನೆ ಮಾಡುತ್ತಿದ್ದಾರೆ. ''ಅದೃಶ್ಯತ್ವಾದಿ'' ಇತ್ಯಾದಿ ಭಾಷ್ಯದಿಂದ.

ವಿಶೇಷ ವಿಚಾರ - ಈ ಅಧಿಕರಣದಲ್ಲಿ ಅದೃಶ್ಯತ್ವವೆಂಬ ಧರ್ಮವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಹಿಂದಿನ ಅಧಿಕರಣದಲ್ಲಿ ಪರಮಾತ್ಮನೇ ಅಂತರ್ಯಾಮಿಯೆನ್ನಲು 'ಯಂ ಪೃಥಿವೀ ನ ವೇದ' ಇತ್ಯಾದಿ ಸ್ಥಿತಿಗಳಿಂದ ತಿಳಿಯಲ್ಪಡುವ ಅದೃಶ್ಯತ್ವಾದಿಗಳನ್ನು ಹೇತುಗಳನ್ನಾಗಿ ಮಾಡಿದರು. ಆ ಹೇತುವು ಪರಮಾತ್ಮನಲ್ಲಿ ಅಸಿದ್ಧವಾಗಿದೆಯೆಂದು ಆಕ್ಷೇಪ ಮಾಡಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಹಿಂದಿನ ಅಧಿಕರಣದಿಂದ ಆನಂತರ್ಯಸಂಗತಿಯಿರುತ್ತದೆಂದು ತಿಳಿಯಬೇಕು.

ಅಕ್ಷರನನ್ನೇ ಅದೃಶ್ಯನೆನ್ನುತ್ತದೆ ಆಥರ್ವಣ

तत्वप्रकाशिका – 'अदृश्येऽनात्म्ये' इत्यानन्दमयस्य अदृश्यत्वादिगुणा उक्ताः । ते चाथर्वणे कस्यचिदक्षरस्योच्यन्ते –

'ಅದೃಶ್ಯೇऽನಾತ್ಮ್ಯೇ' ಎಂಬ ಶ್ರುತಿಯಲ್ಲಿ ಆನಂದಮಯನಿಗೆ ಅದೃಶ್ಯತ್ವಾದಿಗುಣಗಳು ಹೇಳಲ್ಪಟ್ಟಿವೆ. ಅಂತಹ ಗುಣಗಳನ್ನು ಆಥರ್ವಣೋಪನಿಷತ್ತು ಯಾರೋ ಒಬ್ಬ ಅಕ್ಷರನಿಗೆ ಹೇಳುತ್ತಿದೆ.

ಅಧಿಕರಣದ ಸಂಪೂರ್ಣವಿಷಯವಾಕ್ಯ

तत्वप्रकाशिका – 'अथ परा यया तदक्षरमधिगम्यते',

'यत्तदद्रेश्यमग्राह्यमगोत्रमवर्णमचक्षुः श्रोत्रं तदपाणिपादम् ।
नित्यं विभुं सर्वगतं सुसूक्ष्मं तदव्ययं यद्भूतयोनिं परिपश्यन्ति धीराः।।'
'यथोर्णनाभिः सृजते गृह्णते च यथा पृथिव्यामोषधयः सम्भवन्ति ।
यथा सतः पुरुषात् केशलोमानि तथाऽक्षरात्सम्भवतीह विश्वम्' इति ।

ಈ ಅಧಿಕರಣದ ವಿಷಯವಾಕ್ಯ ಹೀಗಿದೆ ''ಅಥ ಪರಾ ಯಯಾ ತದಕ್ಷರಮಧಿಗಮ್ಯತೇ'

''ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃ ಶ್ರೋತ್ರಂ ತದಪಾಣಿಪಾದಮ್ ।
ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ ಭೂತಯೋನಿಂ ಪರಿಪಶ್ಯಂತಿ
ಧೀರಾಃ ॥'

'ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ ।
ಯಥಾ ಸತಃ ಪುರುಷಾತ್ ಕೇಶಲೋಮಾನಿ ತಥಾऽಕ್ಷರಾತ್ ಸಂಭವತೀಹ ವಿಶ್ವಮ್''

''ಯಾವ ವಿದ್ಯೆಯಿಂದ ಅಕ್ಷರನು ತಿಳಿಯುತ್ತಾನೋ ಅದೇ ಪರವಿದ್ಯೆಯು''.

''ಅಂತಹ ಅಕ್ಷರನು ಸಂಪೂರ್ಣವಾಗಿ ತಿಳಿಯಲಾರನು. ಯಾವುದೇ ಇಂದ್ರಿಯಗಳಿಂದ ಗ್ರಹಿಸಲು ಸಾಧ್ಯವಿಲ್ಲದವನು ವಸಿಷ್ಠ ಮೊದಲಾದ ಗೋತ್ರಗಳಿಲ್ಲದವನು. ಪ್ರಾಕೃತವಾದ ರೂಪವಿಲ್ಲದವನು ಪ್ರಾಕೃತವಾದ ಚಕ್ಷುಸ್ಸು, ಶ್ರೋತ್ರ ಮೊದಲಾದ ಜ್ಞಾನೇಂದ್ರಿಯಗಳಿಂದ ರಹಿತನು. ಹಸ್ತ, ಪಾದ ಮೊದಲಾದ ಕರ್ಮೇಂದ್ರಿಯಗಳಿಂದಲೂ ರಹಿತನು. ಅನಾದಿನಿತ್ಯನು; ಸರ್ವತ್ರವ್ಯಾಪ್ತನು. ಸೂಕ್ಷ್ಮಾತಿಸೂಕ್ಷ್ಮನು. ನಾಶರಹಿತನು. ಬ್ರಹ್ಮಾದಿ ಸಕಲದೇವತೆಗಳಿಗೂ ಕಾರಣಕರ್ತನು. ಹೀಗೆ ಜ್ಞಾನಿಗಳು ಯಾವ ಭಗವಂತನನ್ನು ತಿಳಿಯುತ್ತಾರೋ ಅಂತಹ ಅಕ್ಷರನು ನಾಶರಹಿತನಾಗಿದ್ದಾನೆ'.

'ಯಾವ ರೀತಿಯಾಗಿ ಜೇಡರ ಹುಳು ತನ್ನ ಎಂಜಲಿನಿಂದ ಬಲೆಯನ್ನು ರಚನೆ ಮಾಡಿ ಅನಂತರ ಅದನ್ನೇ ನುಂಗಿಬಿಡುತ್ತದೋ, ಅಥವಾ ಯಾವ ರೀತಿಯಲ್ಲಿ ಪೃಥಿವಿಯಲ್ಲಿ ಸಸ್ಯಗಳು ಹುಟ್ಟುತ್ತವೋ ಯಾವ ರೀತಿಯಾಗಿ ಜೀವಂತನಾದ ಪುರುಷನ ದೇಹದಿಂದ ಕೇಶಲೋಮಾದಿಗಳು ಹುಟ್ಟುತ್ತವೋ ಅದರಂತೆ ಅಕ್ಷರನಿಂದ ಈ ವಿಶ್ವವು ಹುಟ್ಟುತ್ತದೆ' ಎಂಬುದಾಗಿ.

ಅದೃಶ್ಯನು ಬೇರೆಯವನಾದರೆ ಆನಂದಮಯನೂ ಅವನೇ

तत्वप्रकाशिका – तेषां च विष्वन्यनिष्ठत्वे प्रागुक्तानन्दमयत्वं चान्यस्यैव स्यादित्यवश्यं निर्णेतव्यता । तददृश्यत्वादि लिङ्गजातमत्र विषयः । विष्णोरन्यस्य वेति सन्देहः । आनन्दमये श्रुतत्वमक्षरशब्दस्य सन्देहबीजम् ।

ಅಂತಹ ಅದೃಶ್ಯತ್ವಾದಿಗುಣಗಳು ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಬರುವುದಾದರೆ ಹಿಂದೆ ನಿರ್ಣಯಿಸಿದ ಆನಂದಮಯತ್ವವೂ ಸಹ ಬೇರೆಯವರಲ್ಲೇ ಬರಬೇಕಾಗುತ್ತದೆ ಏಕೆಂದರೆ ಆನಂದಮಯನಿಗೆ ಅದೃಶ್ಯತ್ವಾದಿಗುಣಗಳು ಹೇಳಲ್ಪಟ್ಟಿವೆ. ಆದ್ದರಿಂದ ಅದೃಶ್ಯತ್ವಾದಿ ಗುಣಗಳು ಯಾರ ಧರ್ಮವೆಂದು ಅವಶ್ಯವಾಗಿ ನಿರ್ಣಯಿಸಬೇಕು. ಆದ್ದರಿಂದ ಅದೃಶ್ಯತ್ವಾದಿ ಗುಣಗಳ ಸಮೂಹವೇ ಈ ಅಧಿಕರಣದ ವಿಷಯ. ವಿಷ್ಣುವಿನದ್ದೋ ಅಥವಾ ಬೇರೆಯವರದ್ದೋ ಎಂದು ಸಂದೇಹ. ಆನಂದಮಯನಲ್ಲಿ ಈ ಲಿಂಗವು ಶ್ರುತವಾದ್ದರಿಂದ, 'ಇದು ಆನಂದಮಯನದ್ದೇ' ಎಂಬ ಶ್ರುತಿವಾಕ್ಯ ಮತ್ತು ಅಕ್ಷರಶಬ್ದವು ಸಂದೇಹಕ್ಕೆ ಕಾರಣಗಳಾಗಿವೆ.

ಅದೃಶ್ಯತ್ವಾದಿಗಳು ವಿಷ್ಣುವಿನಲ್ಲಿಲ್ಲವೆಂದು ಪೂರ್ವಪಕ್ಷ

तत्वप्रकाशिका – न विष्णोरदृश्यत्वादीति तावत्पूर्वः पक्षः । अदृश्यत्वादिगुणके 'अक्षरात् सम्भवतीह विश्वम्' इत्यक्षरशब्दश्रवणात् । तस्य च विष्णौ निरवकाशत्वात् । यतः अस्मादप्यक्षरादुत्तरवाक्ये परः प्रतीयते ।

ಅದೃಶ್ಯತ್ವಾದಿಗುಣಗಳು ವಿಷ್ಣುವಿನ ಧರ್ಮವಲ್ಲವೆಂದು ಪೂರ್ವಪಕ್ಷ. ಏಕೆಂದರೆ ಈ ಅದೃಶ್ಯತ್ವಾದಿ ಗುಣಗಳುಳ್ಳ ಪದಾರ್ಥದಲ್ಲಿ ''ಅಕ್ಷರಾತ್ ಸಂಭವತೀಹ ವಿಶ್ವಮ್'' ಎಂಬುದಾಗಿ ಅಕ್ಷರಶಬ್ದವು ಕೇಳಿಸುತ್ತಿದೆ. ಈ ಅಕ್ಷರಶಬ್ದವು ವಿಷ್ಣುವಿನಲ್ಲಿ ನಿರವಕಾಶವಾಗಿದೆ. ಏಕೆಂದರೆ ಈ ಅಕ್ಷರಕ್ಕಿಂತ ಶ್ರೇಷ್ಠವಾದದ್ದು ಮತ್ತೊಂದು ಪದಾರ್ಥವಿದೆ ಎಂಬುದಾಗಿ ಮುಂದಿನ ವಾಕ್ಯದಿಂದ ತಿಳಿಯುತ್ತಿದೆ.

ಸರ್ವೋತ್ತಮನು ಅಕ್ಷರತತ್ತ್ವಕ್ಕಿಂತ ಶ್ರೇಷ್ಠನು

तत्वप्रकाशिका –

'दिव्या ह्यमूर्तः पुरुषः स बाह्याभ्यन्तरो ह्यजः ।
अप्राणो ह्यमनाः शुभ्रो ह्यक्षरात्परतः परः' इति ।

''दिव्यो ह्यमूर्तः पुरुषः स बाह्याभ्यंतरो ह्यजः।
अप्राणो ह्यमनाः शुभ्रो ह्यक्षरात् परतः परः॥''

ದಿವ್ಯಸ್ವರೂಪನಾದವನು, ಅಮೂರ್ತನಾದವನು, ಪುರುಷನು, ವಿಶ್ವದ ಒಳಗೂ ಹೊರಗೂ ನೆಲೆಸಿರುವವನು, ಉತ್ಪತ್ತಿನಾಶವಿಲ್ಲದವನು, ಪ್ರಾಣ ಮೊದಲಾದ ಷೋಡಶಕಲೆಗಳಿಂದ ಶೂನ್ಯನಾದವನು, ಪ್ರಾಕೃತಮನಸ್ಸಿಲ್ಲದವನು, ಶುದ್ಧಸ್ವರೂಪಿ ಇಂತಹ ಸರ್ವೋತ್ತಮನು ಅಕ್ಷರ ತತ್ವಕ್ಕಿಂತ ಶ್ರೇಷ್ಠನಾಗಿದ್ದಾನೆ ಎಂದು.

ವಿಷ್ಣುವಿಗಿಂತ ಶ್ರೇಷ್ಠನು ಮತ್ತೊಬ್ಬನಿಲ್ಲ ಎಂಬುದೇ ಪೂರ್ವಪಕ್ಷದ ಬೀಜ

तत्वप्रकाशिका – नहि विष्णोरपि परोऽस्ति इति; अतः 'न विष्णुरदृश्यत्वादिगुणक इति, नानन्दमयोऽपि' इति भावः ।

ವಿಷ್ಣುವಿಗಿಂತ ಶ್ರೇಷ್ಠನಾದವನು ಮತ್ತೊಬ್ಬನಿಲ್ಲ. ಆದ್ದರಿಂದ ಅದೃಶ್ಯತ್ವಾದಿ ಗುಣವುಳ್ಳವನು ವಿಷ್ಣುವೆಂದು ನಿರ್ಣಯಿಸಲಾಗದು. ಆದ್ದರಿಂದಲೇ ಆನಂದಮಯನೂ ಸಹ ವಿಷ್ಣುವಾಗುವುದಿಲ್ಲವೆಂದು ಪೂರ್ವಪಕ್ಷ.

'ಯತ್ತದದ್ರೇಶ್ಯಂ' ಎಂಬ ವಾಕ್ಯವು ಪ್ರಮಾಣವಾಗಬೇಕೆಂದರೆ ವಿಷ್ಣುವೇ ಅದೃಶ್ಯನಾಗಬೇಕು

तत्वप्रकाशिका – सिद्धान्तयत्सूत्रं तावदवतारयति – अत इति ।। अदृश्यत्वादिकं न विष्णोश्चेत्तर्हि वाक्यस्य निर्विषयतयाऽप्रामाण्यं स्यादित्यतः पूर्वपक्षं विशदयति – पृथिव्यादीति ।।

ಸಿದ್ಧಾಂತವನ್ನು ಸ್ಥಾಪನೆಮಾಡುವುದಕ್ಕಾಗಿ ಸೂತ್ರವನ್ನು ಉಲ್ಲೇಖಿಸಲು ಹೊರಟಿದ್ದಾರೆ ''ಅತಃ' ಎಂಬುದಾಗಿ. ಅದೃಶ್ಯತ್ವಾದಿಗಳು ವಿಷ್ಣುವಿನ ಧರ್ಮವಾಗದಿದ್ದರೆ ''ಯತ್ತದದ್ರೇಶ್ಯಂ'' ಎಂಬ ವಾಕ್ಯವು ನಿರ್ವಿಷಯವಾಗುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದಲೇ ಅಪ್ರಮಾಣವೂ ಆಗಬೇಕಾಗುತ್ತದೆ. ಈ ಕಾರಣಕ್ಕಾಗಿ ಪೂರ್ವಪಕ್ಷವನ್ನು ಸ್ಪಷ್ಟವಾಗಿ ತೋರಿಸಲು ''ಪೃಥಿವ್ಯಾದಿ'' ಇತ್ಯಾದಿ ಭಾಷ್ಯದ ಮಾತು ಹೊರಟಿದೆ.

ಪೂರ್ವಪಕ್ಷಿಗಳ ಸಮರ್ಥನೆ

तत्वप्रकाशिका – अदृश्यत्वादिकं जडप्रकृतेर्भवेत् । अस्याः

पृथिव्यादिदृष्टान्तेन उपादानतया जगत्कारणत्वोक्तेः । न चायं कारणत्वमात्रे दृष्टान्त इति वाच्यमित्यतो वाक्यादनन्तरम् 'अक्षरात्परतः परः' इति तस्मात्परतः पराभिधानात् ।

ಸ್ಪಷ್ಟವಾದ ಪೂರ್ವಪಕ್ಷ ಹೀಗಿದೆ -- ಜಡಪ್ರಕೃತಿಯು ಅದೃಶ್ಯತ್ವಾದಿಧರ್ಮಗಳಿಗೆ ಆಧಾರವಾಗಬಹುದು. ಏಕೆಂದರೆ ಪೃಥಿವ್ಯಾದಿಗಳನ್ನು ದೃಷ್ಟಾಂತವನ್ನಾಗಿ ನೀಡಿ ಉಪಾದಾನವೆಂದು ಜಗತ್ಕಾರಣತ್ವವನ್ನು ಶ್ರುತಿಯು ಹೇಳಿದೆ. ಕೇವಲ ಕಾರಣತ್ವವಿಷಯದಲ್ಲಿ ಇದು ದೃಷ್ಟಾಂತವಾಗಲು ಸಾಧ್ಯವಿಲ್ಲ. ಏಕೆಂದರೆ, ಕಾರಣಪ್ರತಿಪಾದಕವಾದ ವಾಕ್ಯದ ಮುಂದೆ 'ಅಕ್ಷರಾತ್ ಪರತಃ ಪರಃ' ಎಂಬ ವಾಕ್ಯವು ಕೇಳಿಸುತ್ತಿದೆ. ಇದು ಅಕ್ಷರತತ್ತ್ವಕ್ಕಿಂತ ಮತ್ತೊಂದು ಪರವಸ್ತು ಇದೆ ಎಂದು ಹೇಳುತ್ತಿದೆ. ಆದ್ದರಿಂದ ಅಕ್ಷರಶಬ್ದದಿಂದ ವಿಷ್ಣುವನ್ನು ವಿವಕ್ಷಿಸಿ, ಇಂತಹ ವಿಷ್ಣುವಿಗೆ ಕಾರಣತ್ವವನ್ನು ಶ್ರುತಿ ಹೇಳುತ್ತಿದೆ ಎಂದು ಅರ್ಥೈಸಲಾಗದು.

ಚೇತನಪ್ರಕೃತಿಯು ಅದೃಶ್ಯವೆಂದು ಪೂರ್ವಪಕ್ಷ

तत्वप्रकाशिका – चेतनप्रकृतेर्वाऽदृश्यत्वादिकम् । तस्यामक्षरशब्दस्य स्मृतिसिद्धत्वात् । न चासौ शब्दः परमात्मन्यपि सम्भवतीति वाच्यम् । तत्परतःपराभिधानात् । तच्च तस्यामक्षरात्परतःपर इति समानाधिकरण्येनोपपन्नम् । विकारित्वेन जगत्कारणत्ववचनं तस्या विकाराभिमानित्वाद्युज्यते ।

ಎರಡನೆಯ ಪೂರ್ವಪಕ್ಷ -- ಅಥವಾ ಚೇತನಪ್ರಕೃತಿಯು ಅದೃಶ್ಯತ್ವಾದಿಗಳಿಗೆ ಆಶ್ರಯವಾಗಬಹುದು. ಇಂತಹ ಚೇತನಪ್ರಕೃತಿಯಲ್ಲಿ ಅಕ್ಷರಶಬ್ದದ ಪ್ರಯೋಗವು ಸ್ಮೃತಿಯಿಂದಲೇ ಸ್ಪಷ್ಟವಾಗಿ ಸಿದ್ಧವಾಗಿದೆ. ಅಕ್ಷರಶಬ್ದವು ಪರಮಾತ್ಮನಲ್ಲಿ ಉಪಪನ್ನವಾಗುತ್ತದೆಂದು ಹೇಳಬಾರದು. ಏಕೆಂದರೆ ಅಕ್ಷರತತ್ತ್ವಕ್ಕಿಂತಲೂ ಒಬ್ಬನು ಶ್ರೇಷ್ಠನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಒಂದು ವೇಳೆ ವಿಷ್ಣುವನ್ನೇ ಅಕ್ಷರನೆಂದು ಹೇಳಿದರೆ ''ಅಕ್ಷರಾತ್ ಪರತಃ ಪರಃ 'ಪರವಾದ ಅಕ್ಷರಕ್ಕಿಂತ ಉತ್ತಮವು' ಎಂದು ಹೇಳಿರುವುದು ಸರಿಯಲ್ಲ. ಆದರೆ ಪ್ರಕೃತಿಯಲ್ಲಿ

ಇದು ಸಾಮಾನಾಧಿಕರಣ್ಯದಿಂದ ಉಪಪನ್ನವಾಗುತ್ತದೆ. ಹಾಗೂ ಅಕ್ಷರವು ವಿಕಾರವನ್ನು ಹೊಂದಿ ಜಗತ್ತಿಗೆ ಕಾರಣವಾಗುತ್ತದೆಂಬ ಮಾತು ಕೇಳಿಸುತ್ತಿರಬಹುದು. ಆದರೂ ಇದನ್ನು ವಿಕಾರಕ್ಕೆ ಅಭಿಮಾನಿಯಾದ್ದರಿಂದ ಲಕ್ಷ್ಮೀದೇವಿಯಲ್ಲಿ ಕೂಡಿಸಬಹುದು -- ಎಂದರೆ;

'ಪರತಃ ಅಕ್ಷರಾತ್' ಎಂಬುದಾಗಿ ಶ್ರೇಷ್ಠವಾದ ಶ್ರೀತತ್ವಕ್ಕಿಂತ ಎಂದು ಸಾಮಾನ್ಯಾಧಿಕರಣ್ಯದಿಂದ ಅನ್ವಯವನ್ನು ಹೇಳಿದರೆ ಮಾತ್ರ ಇದು ಕೂಡುತ್ತದೆ. ಇಲ್ಲಿ ಶ್ರೀತತ್ವವು ವಿಕಾರತ್ವದಿಂದ ಜಗತ್ತಿಗೆ ಕಾರಣವೆಂದು ಹೇಳಬಹುದು. ಅಂದರೆ ಲಕ್ಷ್ಮೀದೇವಿಯು ವಿಕಾರಕ್ಕೆ ಅಭಿಮಾನಿಯಾದ್ದರಿಂದ ಇದು ಉಪಪನ್ನವಾಗುತ್ತದೆ.

ಹಿರಣ್ಯಗರ್ಭನು ಅದೃಶ್ಯನೆಂದು ಪೂರ್ವಪಕ್ಷ

तत्वप्रकाशिका – हिरण्यगर्भस्य वाऽदृश्यत्वादिकम् । स ब्रह्मविद्यामित्यादिब्रह्मशब्दात् । न च ब्रह्मशब्दो विष्णौ मुख्य इति तद्ग्रहण् । तत्परतःपराभिधानात् ।

ಮೂರನೆಯ ಪೂರ್ವಪಕ್ಷ – ಅಥವಾ ಹಿರಣ್ಯಗರ್ಭನು ಅದೃಶ್ಯತ್ವಧರ್ಮಕ್ಕೆ ಆಶ್ರಯನಾಗಬಹುದು. ಏಕೆಂದರೆ ಇದೇ ಪ್ರಕರಣದ ಪ್ರಾರಂಭದಲ್ಲಿ 'ಸಃ ಬ್ರಹ್ಮವಿದ್ಯಾಮ್' ಎಂಬುದಾಗಿ ಬ್ರಹ್ಮಶಬ್ದವು ಕೇಳಿಸುತ್ತಿದೆ. ವಿಷ್ಣುವಿನಲ್ಲಿ ಬ್ರಹ್ಮಶಬ್ದವು ಮುಖ್ಯವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಬ್ರಹ್ಮನಿಗಿಂತಲೂ ವಿಷ್ಣುವಿಗೆ ಉತ್ತಮತ್ವವನ್ನು ಇದೇ ಶ್ರುತಿ ಹೇಳುತ್ತಿದೆ. ಆದ್ದರಿಂದ ಬ್ರಹ್ಮಶಬ್ದದಿಂದ ಚತುರ್ಮುಖನನ್ನೇ ವಿವಕ್ಷಿಸಬೇಕಾಗುತ್ತದೆ.

ರುದ್ರನು ಅದೃಶ್ಯನೆಂದು ಪೂರ್ವಪಕ್ಷ

तत्वप्रकाशिका – रुद्रस्य वैतददृश्यत्वादिलिङ्गजातम् । 'कर्तारमीशम्' इति ईशशब्दश्रवणात् । नच ईशशब्दो विष्णावपि सम्भवतीति तद्ग्रहः । तत्परतःपराभिधानादेवेति भावः ।

ನಾಲ್ಕನೆಯ ಪೂರ್ವಪಕ್ಷ. ಅಥವಾ ರುದ್ರನೂ ಅದೃಶ್ಯತ್ವಾದಿಧರ್ಮಗಳಿಗೆ ಆಶ್ರಯನಾಗಬಹುದು. 'ಕರ್ತಾರಮೀಶಮ್' ಎಂಬುದಾಗಿ ಈಶಶಬ್ದವು ಕೇಳಿಸುತ್ತಿದೆ. ಈಶಶಬ್ದವನ್ನು ವಿಷ್ಣುವಿನಲ್ಲೂ ಸಹ ಕೂಡಿಸಬಹುದಲ್ಲವೇ ಎಂದು ಪ್ರಶ್ನಿಸಬಾರದು. ಇಲ್ಲಿಯೂ

ಸಹ ಈಶನಿಗಿಂತಲೂ ವಿಷ್ಣುವು ಶ್ರೇಷ್ಠನಾಗಿದ್ದಾನೆಂದು ಶ್ರುತಿಯು ಹೇಳಿದೆ. ಆದ್ದರಿಂದ ರುದ್ರನನ್ನೇ ಈಶಶಬ್ದದಿಂದ ವಿವಕ್ಷಿಸಬೇಕಾಗುತ್ತದೆ.

ಎಲ್ಲಾ ಪೂರ್ವಪಕ್ಷಗಳ ನಿರಾಕರಣೆಗಾಗಿ ಸೂತ್ರದ ಪ್ರವೃತ್ತಿ

तत्वप्रकाशिका – एवं प्राप्तं पूर्वपक्षं प्रतिक्षेप्तुं सूत्रं व्याचष्टे – तमेवमिति ।। अदृश्यत्वादिगुणको विष्णुरेव ।

ಹೀಗೆ ನಾಲ್ಕು ಬಗೆಯ ಪೂರ್ವಪಕ್ಷಗಳನ್ನು ನಿರಾಕರಿಸುವುದಕ್ಕಾಗಿ ಸೂತ್ರವನ್ನು ''ತಮೇವಮ್'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಅದೃಶ್ಯತ್ವಾದಿ ಧರ್ಮಗಳಿಗೆಲ್ಲಾ ಆಶ್ರಯನಾಗಿರುವವನು ವಿಷ್ಣುವೇ ಆಗಿದ್ದಾನೆ.

ಪರವಿದ್ಯೆಗೆ ವಿಷಯನಾದವನೇ ಅದೃಶ್ಯನು

तत्वप्रकाशिका – ''अथ परा यया तदक्षरमधिगम्यते'' इत्यदृश्यत्वादिगुणकस्य परविद्याविषयत्वोक्तेः । परविद्याविषयत्वस्य च श्रुतिस्मृतिभिः विष्णुधर्मत्वेनावगतत्वादित्यर्थः ।

'ಅಥ ಪರಾ ಯಯಾ ತಕ್ಷರಮಧಿಗಮ್ಯತೇ' ಎಂಬ ಶ್ರುತಿಯಲ್ಲಿ ಅದೃಶ್ಯತ್ವಾದಿ ಗುಣವುಳ್ಳಂತಹ ವ್ಯಕ್ತಿಯಲ್ಲಿಯೇ ಪರವಿದ್ಯಾವಿಷಯತ್ವವು ಹೇಳಲ್ಪಟ್ಟಿದೆ. ಪರವಿದ್ಯೆಗೆ ವಿಷಯನಾದವನು ವಿಷ್ಣುವೇ ಆಗಿದ್ದಾನೆಂಬ ವಿಚಾರವು ಶ್ರುತಿಸ್ಮೃತಿಗಳಿಂದ ಸ್ಪಷ್ಟವಾಗಿ ತಿಳಿಯುತ್ತಿದೆ ಎಂದರ್ಥ.

ಪರವಿದ್ಯೆಗೆ ವಿಷಯನಾದವನು ಮಹಾವಿಷ್ಣು ಮಾತ್ರ

तत्वप्रकाशिका – 'तमेवम्' इति श्रुतौ मोक्षसाधनविद्याविषयत्वोक्त्या विष्णोः परविद्याविषयत्वमुक्तं भवति । मोक्षसाधनविद्यायाः परविद्यात्वत् ।

'ತಮೇವಂ ವಿದ್ವಾನಮೃತ ಇಹ ಭವತಿ' ಎಂಬ ಶ್ರುತಿಯೂ ಸಹ ಭಗವಂತನ ಜ್ಞಾನವೇ ಮೋಕ್ಷಕ್ಕೆ ಸಾಧನವಾಗಿದೆಯೆಂದು ಹೇಳುತ್ತಿದೆ. ಇದರಿಂದ ವಿಷ್ಣುವೇ ಪರವಿದ್ಯೆಗೆ ವಿಷಯನಾಗಿ-

ದ್ದಾನೆಂದು ಹೇಳಿದಂತಾಗುತ್ತದೆ. ಏಕೆಂದರೆ ಮೋಕ್ಷಕ್ಕೆ ಸಾಧನವಾದ ವಿದ್ಯೆಯೇ ಪರವಿದ್ಯೆ ಎನಿಸುತ್ತದೆ.

ಪರವಿದ್ಯೆಗೆ ವಿಷಯನಾದವನ ಬಗ್ಗೆ ಸ್ಮೃತಿಯ ಆಧಾರ

तत्वप्रकाशिका – 'तत्कर्म' इति स्मृतौ च सैव परविद्या यया हरेर्ज्ञानं भवतीति तस्य परविद्याविषयत्वमुच्यते ।

''ತತ್ಕರ್ಮ ಹರಿತೋಷಂ ಯತ್'' ಎಂಬ ಸ್ಮೃತಿಯೂ ಸಹ ಯಾವುದರಿಂದ ಭಗವಂತನ ಜ್ಞಾನವು ಉಂಟಾಗುತ್ತದೋ ಅದೇ ಪರವಿದ್ಯೆ ಎನಿಸುತ್ತದೆ ಎಂದು ಹೇಳಿದೆ. ಆದ್ದರಿಂದಲೂ ಪರವಿದ್ಯೆಗೆ ವಿಷಯನಾದವನು ಭಗವಂತನೇ ಆಗುತ್ತಾನೆ.

'ದ್ವೇ ವಿದ್ಯೇ ವೇದಿತವ್ಯೇ'

तत्वप्रकाशिका – 'द्वे विद्ये' इत्यत्र च यदा वेदाद्यन्यविषयतया योज्यते तदा तस्याऽपरविद्यात्वम् । यदा पुनरेतैः स हरिर्वेद्यो भवति तदा परविद्यात्वमिति हरेः परविद्याविषयत्वमुच्यते ।

''ದ್ವೇವಿದ್ಯೇ ವೇದಿತವ್ಯೇ'' ಎಂಬಲ್ಲಿ ವೇದವನ್ನು ವಿಷ್ಣುವಿಗಿಂತ ಬೇರೆಯವರಲ್ಲಿ ಸಮನ್ವಯ ಮಾಡಿದರೆ ಅಪರವಿದ್ಯೆ ಎನಿಸುತ್ತದೆ. ಅದೇ ವೇದದ ಮತುಗಳಿಂದ ಭಗವಂತನನ್ನು ತಿಳಿದರೆ ಅದು ಪರವಿದ್ಯೆ ಎನಿಸುತ್ತದೆ. ಹೀಗೆ ಪರವಿದ್ಯೆಗೆ ವಿಷಯನಾದವನು ವಿಷ್ಣುವೆಂದು ಇದರಿಂದಲೂ ನಿರ್ಣಯವಾಗುತ್ತದೆ.

ಋಗಾದ್ಯಾ ಅಪರವಿದ್ಯಾ

तत्वप्रकाशिका – तदुक्तम् –

'ऋगाद्या अपराविद्या यदा विष्णोर्न वाचकाः ।
ता एव परमा विद्या यदा विष्णोस्तु वाचकाः' इति ।।२१।।

ಈ ವಿಚಾರವು ಮುಂದಿನ ಪ್ರಮಾಣದಿಂದ ಸ್ಪಷ್ಟವಾಗುತ್ತದೆ.

''ಋಗಾದ್ಯಾ ಅಪರಾವಿದ್ಯಾ ಯದಾ ವಿಷ್ಣೋರ್ನ ವಾಚಕಾಃ।
ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ॥''

'ಋಗ್ವೇದ ಯಜುರ್ವೇದ ಮೊದಲಾದ ಸಚ್ಛಾಸ್ತ್ರಗಳು ಯಾವಾಗ ವಿಷ್ಣುವನ್ನು ಪ್ರತಿಪಾದಿಸುವುದಿಲ್ಲವೋ ಆವಾಗ ಅಪರವಿದ್ಯೆ ಎನಿಸುತ್ತವೆ. ಆದೇ ಋಗ್ವೇದಾದಿ ಸಚ್ಛಾಸ್ತ್ರಗಳು ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆ ಎನಿಸುತ್ತವೆ' ಎಂದು.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

'ಅದೃಶ್ಯತ್ವಾದಿ' ಎಂಬಲ್ಲಿರುವ ಆದಿಪದದ ವ್ಯಾಖ್ಯಾನ

भावदीपः – अदृश्यत्वादिगुणको धर्मोक्तेः ॥ इत्यन्तभाष्यं सङ्गतिपरत्वेन व्याचष्टे – अदृश्य इति ॥ अदृश्यत्वादीत्यादिपदेननात्म्यपदोक्तजीवगुण-राहित्यं स्वामिराहित्यमित्यादिग्रहः ।

ಭಾಷ್ಯದಲ್ಲಿ ''ಇತಿ'' ಎಂಬಲ್ಲಿಯ ತನಕ ಇರುವ ವಾಕ್ಯಗಳು ಈ ಅಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಇರುವಂತಹ ಸಂಗತಿಯನ್ನು ತೋರಿಸಲು ಹೊರಟಿವೆ ಎಂಬುದಾಗಿ ಟೀಕೆಯಲ್ಲಿ ''ಅದೃಶ್ಯೇ'' ಇತ್ಯಾದಿ ವಾಕ್ಯಗಳಿಂದ ವ್ಯಾಖ್ಯಾನಿಸುತ್ತಿದ್ದಾರೆ. ಭಾಷ್ಯದಲ್ಲಿ ''ಅದೃಶ್ಯತ್ವಾದಿ'' ಎಂದು ಹೇಳಿದ್ದಾರೆ. ''ಆದಿ'' ಪದದಿಂದ ''ಅದೃಶ್ಯೇऽನಾತ್ಮ್ಯೇ'' ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ''ಅನಾತ್ಮ್ಯೇ'' ಎಂಬ ಪದದಿಂದ ತಿಳಿಯುವಂತಹ ಜೀವನಲ್ಲಿರುವ ಗುಣಗಳು ಪರಮಾತ್ಮನಲ್ಲಿ ಇರುವುದಿಲ್ಲವೆಂದು ಮತ್ತು ಜೀವನಿಗೆ ಮತ್ತೊಬ್ಬ ಸ್ವಾಮಿ ಇರುವಂತೆ ಪರಮಾತ್ಮನಿಗೆ ಅಂತಹ ಸ್ವಾಮಿ ಇರುವುದಿಲ್ಲವೆಂದು ತಿಳಿಸಿದ್ದಾರೆ.

ವಿಶೇಷ ವಿಚಾರ - ಭಾಷ್ಯಾನುಸಾರವಾಗಿ ತತ್ವಪ್ರದೀಪದಲ್ಲಿಯೂ ''ಅದೃಶ್ಯೇऽನಾತ್ಮ್ಯೇ'' ಎಂಬ ಆನಂದಮಯಾಧಿಕರಣದ ವಿಷಯವಾಕ್ಯದಿಂದ ''ಸಹೈವ ಸಂತಂ ನ ವಿಜಾನಂತಿ ದೇವಾಃ'' ಎಂಬ ವಿಷಯವಾಕ್ಯದಿಂದ ಮತ್ತು ''ಸ ಯೋऽತೋಶ್ರುತಃ'' ಎಂಬ ಹಿಂದಿನ ಅಂತರ್ಯಾಮ್ಯಧಿಕರಣದ ವಿಷಯವಾಕ್ಯದಿಂದ ಅದೃಶ್ಯತ್ವಾದಿಗುಣಗಳನ್ನು ವಿಷ್ಣುವಿನಲ್ಲಿ ಈ ಅಧಿಕರಣವು ಸಮರ್ಥಿಸುತ್ತಿದೆ ಎಂದು ಹೇಳಿದ್ದಾರೆ. ಆದ್ದರಿಂದ ಇದೂ ಸಹ ಒಂದು ಸಂಗತಿ ಪ್ರತಿಪಾದಕ ಸಂವಾದ.

ಹಾಗೂ ತತ್ವಪ್ರಕಾಶಿಕೆಯಲ್ಲಿ ''ಅದೃಶ್ಯೇऽನಾತ್ಮ್ಯೇ'' ಎಂಬುದಾಗಿ ಆನಂದಮಯಾಧಿಕರಣದ ವಿಷಯವಾಕ್ಯವನ್ನಷ್ಟೇ ವಿಶೇಷವಾಗಿ ಹೇಳಿದ್ದಾರೆ. ಆದರೂ ಸಹ ಸಮಾನ ನ್ಯಾಯದಿಂದ ಹಿಂದಿನ ಅಂತರ್ಯಾಮ್ಯಧಿಕರಣದ 'ಸ ಯೋऽತೋಶ್ರುತಃ' ಎಂಬ ವಾಕ್ಯವನ್ನೂ ಸಹ ಉಪಲಕ್ಷಣಯಾ ಸ್ವೀಕರಿಸಬೇಕು ಎಂದು ಹೇಳಿದ್ದಾರೆ. ಹಾಗೂ ನ್ಯಾಯವಿವರಣೆ ಟೀಕೆಯಲ್ಲಿ ''ಪೂರ್ವವದದೃಶ್ಯತ್ವಾದಿಬಲೇನ ರೂಢಿಂ ಪರಿತ್ಯಜ್ಯ ಯೋಗವೃತ್ತ್ಯಾऽಕ್ಷರಶಬ್ದೋ ವಿಷ್ಣೌ ಸಂಭವತಿ'' ಹಿಂದಿನ ಅಧಿಕರಣದಂತೆ ಅಕ್ಷರಶಬ್ದವು ಅದೃಶ್ಯತ್ವಾದಿ ಹೇತುಗಳಿಂದ ರೂಢಿಯನ್ನು ಬಿಟ್ಟು ಯೋಗವೃತ್ತಿಯಿಂದಲೇ ವಿಷ್ಣುವಿನಲ್ಲಿ ಸಮನ್ವಯವಾಗುತ್ತದೆ ಎಂದು ಹೇಳಿರುತ್ತಾರೆ. ಹೀಗೆ, ಭಾಷ್ಯದಲ್ಲಿ ಹೇಳಿದ ಸಾಮಾನ್ಯವಚನ, ತತ್ವಪ್ರದೀಪದಲ್ಲಿನ ಪ್ರಯೋಗಗಳು, ತತ್ವಪ್ರಕಾಶಿಕಾ ವಾಕ್ಯ ಪರ್ಯಾಲೋಚನೆ ಮತ್ತು ನ್ಯಾಯವಿವರಣ ಟೀಕಾವಾಕ್ಯಗಳಿಂದ ಈ ಅಧಿಕರಣಕ್ಕೆ ಹಿಂದಿನ ಅಂತರ್ಯಾಮ್ಯಧಿಕರಣದಿಂದ ಸಂಗತಿಯಿರುತ್ತದೆಂಬುದು ಎಲ್ಲ ರೀತಿಯಿಂದಲೂ ಸ್ಪಷ್ಟವಾಗುತ್ತದೆ.

ಅಕ್ಷರನ ಬಗ್ಗೆ ಎಲ್ಲಿ ಪ್ರಸ್ತಾಪವಿದೆ ?

भावदीपः – तत्रेत्यस्य तात्पर्यं तेचेति ।।''विश्वमित्युक्त्वा'' इत्यन्तस्य तात्पर्यम् – आथर्वण इत्यादि ।। कुत्रोच्यन्त इत्यतो ''यत्तत्'' इति भाष्यं प्राप्तमित्युपेत्य, तत् पठति – अथेति ।।

ಭಾಷ್ಯದಲ್ಲಿರುವ ''ತತ್ರ'' ಎಂಬ ಪದಕ್ಕೆ ಟೀಕೆಯಲ್ಲಿ ''ತೇ ಚ'' ಇತ್ಯಾದಿಯಾಗಿ ತಾತ್ಪರ್ಯವನ್ನು ಹೇಳಿದ್ದಾರೆ. ''ವಿಶ್ವಂ ಇತ್ಯುಕ್ತ್ವಾ'' ಎಂಬಲ್ಲಿಯ ತನಕ ಈ ಅಧಿಕರಣದ ವಿಷಯವಾಕ್ಯವನ್ನು ತೋರಿಸಿದ್ದಾರೆ. ಆ ಸಮಗ್ರ ವಿಷಯವಾಕ್ಯದ ತಾತ್ಪರ್ಯವನ್ನು ''ಆಥರ್ವಣೇ'' ಎಂದು ಹೇಳಿರುತ್ತಾರೆ.

ಅಕ್ಷರನು ಎಲ್ಲಿ ಶ್ರುತನಾಗಿದ್ದಾನೆ? ಎಂಬ ಪ್ರಶ್ನೆಗೆ ''ಯತ್ತದದ್ರೇಶ್ಯಂ'' ಇತ್ಯಾದಿ ವಾಕ್ಯವನ್ನು ಭಾಷ್ಯದಲ್ಲಿ ಉಲ್ಲೇಖಿಸಿದ್ದಾರೆ ಎಂಬುದಾಗಿ ವಿವರಿಸುತ್ತಾ, ಅದೇ ವಾಕ್ಯವನ್ನು ಸಂಪೂರ್ಣವಾಗಿ ಪಠಿಸುತ್ತಿದ್ದಾರೆ ''ಅಥ'' ಇತ್ಯಾದಿ ಟೀಕೆಯಿಂದ.

ಟೀಕೆಯಲ್ಲಿ ಸಂಪೂರ್ಣ ವಿಷಯವಾಕ್ಯದ ಪ್ರದರ್ಶನಕ್ಕೆ ಕಾರಣ

भावदीपः – गुणानामक्षरनिष्ठताप्रदर्शनाय वा सिद्धान्तहेतुप्रदर्शनार्थं तदुपयोगितया वा पूर्वशेषोक्तिः ।

''ಯತ್ತದದ್ರೇಶ್ಯಂ'' ಎಂಬಲ್ಲಿಂದ ವಿಷಯವಾಕ್ಯವನ್ನು ಭಾಷ್ಯದಲ್ಲಿ ತೋರಿಸಿದ್ದಾರೆ. ಆದರೆ ಟೀಕೆಯಲ್ಲಿ ಅದರ ಹಿಂದಿನ ವಾಕ್ಯವೆನಿಸಿದ ''ಅಥ ಪರಾ'' ಎಂಬುದರಿಂದಲೇ ವಿಷಯವಾಕ್ಯವನ್ನು ಪ್ರದರ್ಶಿಸಿದ್ದಾರೆ. ಕಾರಣವೇನೆಂದರೆ ಅದೃಶ್ಯತ್ವಾದಿ ಗುಣಗಳೆಲ್ಲವೂ ಅಕ್ಷರನಲ್ಲಿಯೇ ಶ್ರುತವಾಗಿದೆ ಎಂದು ತೋರಿಸಬೇಕಾಗಿದೆ. ಮತ್ತು ಸಿದ್ಧಾಂತ ಹೇತುವನ್ನೂ ಸಹ ಪ್ರದರ್ಶನ ಮಾಡಬೇಕಾಗಿದೆ. ಅದಕ್ಕೆ ಉಪಯೋಗಿಯಾಗುವಂತೆ ಹಿಂದಿನ ವಾಕ್ಯವನ್ನೂ ಸಹ ಉಲ್ಲೇಖಿಸಿದ್ದಾರೆಂದು ತಿಳಿಯಬೇಕು.

ವಿಶೇಷವಿಚಾರ - ಒಂದು ವೇಳೆ 'ಅಕ್ಷರಾತ್ಪರತಃ ಪರಃ' ಎಂಬ ವಾಕ್ಯಶೇಷದಲ್ಲಿ ಇರುವ ಅಕ್ಷರವು ಪರತ್ವಕ್ಕೆ ಅವಧಿಯಾದ ವಸ್ತುವಿಗಿಂತ ನಿಕೃಷ್ಟವಾಗಿದೆಯೆಂದು ಹೇಳಿದರೆ. ಈ ವಾಕ್ಯಶೇಷದ ಮೊದಲಿರುವ 'ಅಕ್ಷರಾತ್ಸಂಭವತೀಹ ವಿಶ್ವಮ್'' ಎಂಬಲ್ಲಿರುವ ವಾಕ್ಯಶೇಷದಲ್ಲಿರುವ ಅಕ್ಷರದಿಂದ ಅಭಿನ್ನವಾದ ಪೂರ್ವವಾಕ್ಯಸ್ಥವಾದ ಅಕ್ಷರಶಬ್ದವೂ ಸಹ ಬ್ರಹ್ಮನನ್ನು ಪ್ರತಿಪಾದಿಸುವುದಿಲ್ಲ. ನಿಕೃಷ್ಟವಾದ ವಸ್ತುವನ್ನೇ ಪ್ರತಿಪಾದಿಸುತ್ತದೆ ಎಂದಾಗುತ್ತದೆ. ಹೀಗೆ ಹೇತುಹೇತುಮದ್ಭಾವವು ಸ್ಪಷ್ಟವಾಗಿ ಇರುತ್ತದೆ. ಇಲ್ಲಿದ್ದಂತೆ ಹಿಂದಿನ ಕಾರಣವಾಕ್ಯದಲ್ಲಿರುವ ಬ್ರಹ್ಮ, ಈಶ ಮೊದಲಾದ ಶಬ್ದಗಳಿಗೆ ಬ್ರಹ್ಮಪರತ್ವವಿರುವುದಿಲ್ಲವೆನ್ನಲು ಸ್ಪಷ್ಟವಾಗಿ ಹೇತುಹೇತುಮದ್ಭಾವವು ಪ್ರತೀತವಾಗುತ್ತಿಲ್ಲ. ಆದ್ದರಿಂದ ಅಕ್ಷರವೂ ಬ್ರಹ್ಮವಾಗದಿದ್ದರೆ ಅಕ್ಷರಶಬ್ದದಿಂದ ಕೂಡಿರುವ ಕಾರಣವಾಕ್ಯಕ್ಕೆ ಹಾಗೂ ಅಕ್ಷರಶಬ್ದದ ಸಾಮಾನಾಧಿಕರಣ್ಯವನ್ನು ಹೊಂದಿರುವ ಬ್ರಹ್ಮ, ಈಶ ಶಬ್ದಗಳಿಗೂ ಸಹ ಬ್ರಹ್ಮಪರತ್ವವು ಸಿದ್ಧವಾಗುವುದಿಲ್ಲ. ಆದ್ದರಿಂದ ಅಕ್ಷರವು ಬ್ರಹ್ಮವಲ್ಲದ ಕಾರಣ ಇದರ ಮೂಲಕ ಕಾರಣವಾಕ್ಯವೂ ಸಹ ಬ್ರಹ್ಮಪರವಾಗುವುದಿಲ್ಲವೆಂದು ಒಪ್ಪಬೇಕು. ಇದಕ್ಕಿಂತ ವಾಕ್ಯಶೇಷ-

ದಲ್ಲಿರುವ ಅಕ್ಷರಶಬ್ದವು ಬ್ರಹ್ಮವಾಗದಿದ್ದರೆ ಹಿಂದಿನ ವಾಕ್ಯದಲ್ಲಿರುವ ಅಕ್ಷರಶಬ್ದವೂ ಸಹ ಬ್ರಹ್ಮವಾಗುವುದಿಲ್ಲವೆಂದು ಹೇಳುವುದು ಸುಲಭವಾಗುತ್ತದೆ. ಆದ್ದರಿಂದ ಅಕ್ಷರಶಬ್ದದ ಮೂಲಕವೇ ಸಂಗತಿಯನ್ನು ತೋರಿಸಿದ್ದಾರೆ.

ಟೀಕೆಯಲ್ಲಿ ಸಮಗ್ರವಾಕ್ಯವನ್ನು ಉಲ್ಲೇಖಿಸಿದ್ದರ ಫಲ

भावदीपः – भाष्ये विच्छिद्य पाठात् सङ्गत्याद्युक्त्यर्थम् अक्षरद्वयैक्यसूचनाय समग्रोक्तिः । दृष्टान्तोक्तेरप्युपन्यासस्य कृत्यमग्रे व्यक्तम् ।

ವಿಷಯವಾಕ್ಯವನ್ನು ತೋರಿಸುವಾಗ ಭಾಷ್ಯದಲ್ಲಿ ''ಇತ್ಯುಕ್ತ್ವಾ'' ಎಂದು ಮಧ್ಯದಲ್ಲಿ ವಿಚ್ಛೇದ ಮಾಡಿ ಪುನಃ ಮುಂದಿನ ವಾಕ್ಯವನ್ನು ತೋರಿಸಿದ್ದಾರೆ. ಆದರೆ ಟೀಕೆಯಲ್ಲಿ ಹಾಗೆ ವಿಚ್ಛೇದ ಮಾಡದೇ ಒಟ್ಟಿಗೆ ವಾಕ್ಯವನ್ನು ಪ್ರದರ್ಶನ ಮಾಡಿದ್ದಾರೆ. ಕಾರಣವೇನೆಂದರೆ ಸಂಗತಿ ತೋರಿಸಬೇಕಾಗಿದೆ. ಮತ್ತು ಹಿಂದಿನ ಮುಂದಿನ ವಾಕ್ಯಗಳಲ್ಲಿ ಪ್ರತಿಪಾದ್ಯವಾದ ಅಕ್ಷರತತ್ವವು ಒಂದೇ ಆಗಿದೆ ಎಂದು ತಿಳಿಸಬೇಕಾಗಿದೆ. ಈ ದೃಷ್ಟಿಯಿಂದ ಟೀಕೆಯಲ್ಲಿ ಸಮಗ್ರವಾಕ್ಯವನ್ನು ಒಟ್ಟಿಗೆ ನೀಡಿದ್ದಾರೆ. ''ಯಥೋರ್ಣನಾಭಿಃ'' ಇತ್ಯಾದಿಯಾದ ದೃಷ್ಟಾಂತವಚನವನ್ನು ಭಾಷ್ಯದಲ್ಲಿ ಮತ್ತು ಟೀಕೆಯಲ್ಲಿ ಏಕೆ ಉಲ್ಲೇಖಿಸಿದ್ದಾರೆ? ಎಂಬುದರ ಬಗ್ಗೆ ಮುಂದೆ ಸ್ಪಷ್ಟಪಡಿಸುತ್ತೇವೆ.

'ಯತ್ತದದ್ರೇಶ್ಯಂ' ಎಂಬ ಶ್ರುತ್ಯರ್ಥ

भावदीपः – अद्रेश्यं चक्षुरादिना अदृश्यम् । अग्राह्यं मनसा । अवर्णं ब्राह्मण्यादिवर्णहीनम् । संहर्तृत्वमधिकं वदन् भूतयोनिमित्युक्तकारणत्वं स्पष्टयति – यथोर्णनाभिरिति ।।

ಅದ್ರೇಶ್ಯಂ = ಚಕ್ಷುರಿಂದ್ರಿಯವೇ ಮೊದಲಾದವುಗಳಿಂದ ನೋಡಲು ಸಾಧ್ಯವಿಲ್ಲದವನು. ಅಗ್ರಾಹ್ಯಂ = ಮನಸ್ಸಿನಿಂದಲೂ ಸಹ ತಿಳಿಯಲು ಸಾಧ್ಯವಿಲ್ಲದವನು. ಅವರ್ಣಂ = ಬ್ರಾಹ್ಮಣ್ಯವೇ ಮೊದಲಾದ ವರ್ಣವಿಲ್ಲದವನು.

ಸಂಹರ್ತೃತ್ವವನ್ನು ಅಧಿಕವಾಗಿ ಹೇಳುವವರಾಗಿ ''ಭೂತಯೋನಿಂ'' ಎಂಬುದರಿಂದ ತಿಳಿಯಲ್ಪಟ್ಟ ಕಾರಣತ್ವವನ್ನೇ ಸ್ಪಷ್ಟಪಡಿಸುತ್ತಿದ್ದಾರೆ ''ಯಥೋರ್ಣನಾಭಿಃ'' ಇತ್ಯಾದಿ ವಾಕ್ಯದಿಂದ.

ಮೂರು ದೃಷ್ಟಾಂತಗಳ ಸಾರ್ಥಕ್ಯ

भावदीपः – कारणत्वं कर्तृत्वरूपमिति वक्तुमाद्यः । अङ्कुरजनने पृथिवीबीजमिव विश्वसृष्ट तत्तत्कर्मापेक्षत इति वक्तुं द्वितीयः । अनायासेन तत्सृष्टिरिति वक्तुं तृतीयो दृष्टान्तः ।

''ಯಥೋರ್ಣನಾಭಿಃ'' ಇತ್ಯಾದಿ ವಾಕ್ಯಶೇಷದಿಂದ ಮೂರು ದೃಷ್ಟಾಂತಗಳನ್ನು ಶ್ರುತಿಯು ಹೇಳುತ್ತಿದೆ. ಅಕ್ಷರತತ್ವದಲ್ಲಿ ಶ್ರುತವಾದ ಕಾರಣತ್ವವು ಕರ್ತೃತ್ವರೂಪವಾಗಿದೆ ಎಂದು ತಿಳಿಸುವುದಕ್ಕಾಗಿ ಮೊದಲನೆಯ ಊರ್ಣನಾಭಿಯ ದೃಷ್ಟಾಂತವನ್ನು ನೀಡಲಾಗಿದೆ. ಮೊಳಕೆಯು ಹುಟ್ಟಬೇಕೆಂದರೆ ಭೂಮಿಯು ಹೇಗೆ ಕಾರಣವಾಗುತ್ತದೆಯೋ ಹಾಗೆಯೇ ಸಕಲಜೀವರಾಶಿಗಳು ಹುಟ್ಟಬೇಕಾದರೆ ಅವರವರ ಕರ್ಮಗಳೇ ಕಾರಣವಾಗಿದೆ ಎಂದು ತಿಳಿಸಲು ಎರಡನೆಯ ಪೃಥಿವೀಯಿಂದ ಹುಟ್ಟುವ ಓಷಧಿ ದೃಷ್ಟಾಂತವನ್ನು ನೀಡಲಾಗಿದೆ. ಭಗವಂತನು ಅನಾಯಾಸವಾಗಿ ಸೃಷ್ಟ್ಯಾದಿಗಳನ್ನು ಮಾಡುತ್ತಾನೆಂದು ತಿಳಿಸಲು ಮೂರನೆಯ ಕೇಶಲೋಮ ದೃಷ್ಟಾಂತವನ್ನು ನೀಡಲಾಗಿದೆ.

ಟೀಕೆಯಲ್ಲಿ ಶ್ರುತಿಯ ತಾತ್ಪರ್ಯ

भावदीपः – सतो जीवतः पुरुषाद्देहात् । शिरस्थाः केशाः । अन्यानि लोमानि । सर्वस्य तात्पर्यमाह – तेषामिति ।।

ಸತಃ = ಜೀವಂತವಾದ, ಪುರುಷಾತ್ = ದೇಹದ ದಸೆಯಿಂದ, ಕೇಶಾಃ = ತಲೆಯಲ್ಲಿರುವ ಕೂದಲುಗಳು, ಲೋಮಾನಿ = ದೇಹದಲ್ಲಿರುವ ಕೂದಲುಗಳು ಹುಟ್ಟುತ್ತವೆ. ಎಂದು ಶ್ರುತಿಯ ಪದಗಳಿಗೆ ಅರ್ಥ. ಸಮಗ್ರ ಶ್ರುತಿಯ ತಾತ್ಪರ್ಯವನ್ನು ''ತೇಷಾಂ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಉಪಾದಾನತ್ವ ಯುಕ್ತಿಯ ಬಗ್ಗೆ

भावदीपः – अक्षरश्रुत्या दृष्टान्तपूर्वमुक्तोपादानत्वयुक्त्या 'तस्मादक्षराद्' इति भाष्यशेषोक्तदिशा विष्णावयोगे चान्यनिष्ठत्व इत्यर्थः ।

ಅಕ್ಷರಶ್ರುತಿಯಿಂದ ದೃಷ್ಟಾಂತಪೂರ್ವಕವಾಗಿ ಹೇಳಲ್ಪಟ್ಟ ಉಪಾದಾನತ್ವ ಯುಕ್ತಿಯಿಂದ ''ತಸ್ಮಾದಕ್ಷರಾದ್'' ಎಂಬ ಭಾಷ್ಯಶೇಷದ ಮಾತಿನಿಂದ ವಿಷ್ಣುವಿನಲ್ಲಿ ಅದೃಶ್ಯತ್ವಾದಿ ಗುಣಗಳು

ಯುಕ್ತವಾಗುವುದಿಲ್ಲ ಹೊರತಾಗಿ ಬೇರೆಯವರಲ್ಲಿಯೇ ಯುಕ್ತವಾಗುತ್ತದೆ ಎಂದು ''ತೇಷಾಂ'' ಇತ್ಯಾದಿ ವಾಕ್ಯಗಳ ಅಭಿಪ್ರಾಯ.

ಹಿಂದಿನ ಅಧಿಕರಣದಿಂದ ಆಕ್ಷೇಪಿಕೀ ಸಂಗತಿ

ಭಾವದೀಪಃ – उक्ता इत्यन्तवाक्यस्य तात्पर्यम् – प्रागुक्तेति ।। इतीति ।। पूर्वाक्षेपरूपसङ्गतिसम्भवाद्धेतोरित्यर्थः ।।

''ಪ್ರಾಗುಕ್ತ'' ಎಂಬ ಪದದಿಂದ ಹಿಂದೆ ''ಅದೃಶ್ಯತ್ವಾದಿ ಗುಣಾಃ ಉಕ್ತಾಃ'' ಇತ್ಯಾದಿ ವಾಕ್ಯದಿಂದ ಹೇಳಲ್ಪಟ್ಟ ಅಭಿಪ್ರಾಯವನ್ನು ಪರಾಮರ್ಶಿಸುತ್ತಿದ್ದಾರೆ. ''ಇತಿ ಅವಶ್ಯಂ'' ಎಂಬಲ್ಲಿರುವ ''ಇತಿ'' ಎಂಬ ಪದಕ್ಕೆ ಹಿಂದಿನ ಅಧಿಕರಣದಿಂದ ಆಕ್ಷೇಪರೂಪವಾದ ಸಂಗತಿಯಿರುವ ಕಾರಣ ಎಂದರ್ಥ.

ಪಾದಸಂಗತಿಗಾಗಿ ಲಿಂಗಪದ

ಭಾವದೀಪಃ – निर्णेतव्यतेति ।। तेषामित्यनुकर्षः । भाष्ये गुणा इति बहुवचनोक्तेराह – जातमिति ।। पादसङ्गत्यर्थम् – लिङ्गेति ।।

''ನಿರ್ಣೇತವ್ಯತಾ'' ಎಂಬ ಪದದ ಅನಂತರ ''ತೇಷಾಂ'' ಎಂಬ ಪದವನ್ನು ಅನುಕರ್ಷ ಮಾಡಬೇಕು. ಭಾಷ್ಯದಲ್ಲಿ ''ಅದೃಶ್ಯತ್ವಾದಿಗುಣಾಃ'' ಎಂದು ಬಹುವಚನ ಹೇಳಿದ್ದರಿಂದ ಟೀಕೆಯಲ್ಲಿ ''ಲಿಂಗ ಜಾತಂ'' ಎಂಬುದಾಗಿ ಜಾತ ಪದವನ್ನು ಪ್ರಯೋಗಿಸಿದ್ದಾರೆ. ಪಾದಸಂಗತಿಯನ್ನು ತಿಳಿಸುವುದಕ್ಕಾಗಿ ಲಿಂಗಪದವನ್ನು ಪ್ರಯೋಗಿಸಿದ್ದಾರೆ.

ಸಂಗತಿಪರ ಭಾಷ್ಯವೇ ಪೂರ್ವಪಕ್ಷ ಪರ

ಭಾವದೀಪಃ – तदेव भाष्यं पूर्वपक्षतद्युक्तितत्फलपरत्वेन व्याकर्तुं परः प्रतीयत इत्युक्तिलब्धप्रतिज्ञामाह – न विष्णोरिति ।।

ಸಂಗತಿಪರವಾದ ಭಾಷ್ಯವನ್ನೇ ಪೂರ್ವಪಕ್ಷವನ್ನು, ಪೂರ್ವಪಕ್ಷಯುಕ್ತಿ ಮತ್ತು ಪೂರ್ವಪಕ್ಷಫಲ ಪರವಾಗಿ ವಾಖ್ಯಾನಿಸುವವರಾಗಿ ''ಪರಃ ಪ್ರತೀಯತೇ'' ಎಂಬ ಭಾಷ್ಯದಲ್ಲಿರುವ ಮಾತಿನಿಂದ ದೊರೆಯಲ್ಪಟ್ಟ ಪ್ರತಿಜ್ಞಾಂಶವನ್ನು ''ನ ವಿಷ್ಣೋಃ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ವಿಷ್ಣುವೇಕೆ ಅದೃಶ್ಯನಲ್ಲ?

भावदीपः – विष्णोर्न चेन्निर्विषयं वाक्यमित्यत उक्तम् – तावदिति ।। अन्यस्य तु पश्चाद् विवरिष्याम इत्यर्थः । कुत इत्यतः तत्रेत्यादि ।। 'अक्षरात्सम्भवतीह विश्वम्' इत्युक्त्वेत्यन्तपूर्ववाक्यं प्राप्तमिति मत्वाऽऽह – अदृश्यत्वादिगुणक इति।। भाष्यस्यतत्रेत्यस्यर्थोऽयम् ।

''ನ ವಿಷ್ಣೋಃ'' ಇತ್ಯಾದಿ ವಾಕ್ಯಗಳ ಅಭಿಪ್ರಾಯ ಹೀಗಿದೆ - ವಿಷ್ಣು ಅದೃಶ್ಯತ್ವಾದಿ-ಗುಣಗಳುಳ್ಳವನಾಗದಿದ್ದಲ್ಲಿ ವಾಕ್ಯವು ನಿರ್ವಿಷಯವಾಗಬೇಕಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ''ತಾವತ್'' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಅಂದರೆ ಆ ವಾಕ್ಯಕ್ಕೆ ವಿಷ್ಣು ವಿಷಯನಾಗದಿದ್ದರೂ ಬೇರೆಯವರು ವಿಷಯರಾಗುತ್ತಾರೆ ಎಂಬುದನ್ನು ಮುಂದೆ ತಿಳಿಸುತ್ತೇವೆ ಎಂದು ''ತಾವತ್'' ಎಂಬ ಪದದಿಂದ ಸೂಚನೆ ಮಾಡಿದ್ದಾರೆ.

ವಿಷ್ಣು ಏಕೆ ಅದೃಶ್ಯತ್ವಾದಿ ಗುಣಗಳುಳ್ಳವನಾಗುವುದಿಲ್ಲ ? ಎಂಬ ಪ್ರಶ್ನೆಗೆ ಭಾಷ್ಯದಲ್ಲಿ ''ತತ್ರ'' ಎಂಬಲ್ಲಿಂದ ಪ್ರಾರಂಭಿಸಿ ''ಅಕ್ಷರಾತ್ಸಂಭವತೀಹ ವಿಶ್ವಮ್'' ಎಂಬಲ್ಲಿಯ ತನಕ ಉತ್ತರಿಸಿದ್ದಾರೆ. ಈ ಅಭಿಪ್ರಾಯದಿಂದ ಟೀಕೆಯಲ್ಲಿ ''ಅದೃಶ್ಯತ್ವಾದಿಗುಣಕೇ'' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಭಾಷ್ಯದಲ್ಲಿರುವ ''ತತ್ರ'' ಎಂಬ ಪದದ ಅರ್ಥವನ್ನು ''ಅದೃಶ್ಯತ್ವಾದಿಗುಣಕೇ'' ಎಂದಿದ್ದಾರೆ.

ಅಕ್ಷರಶಬ್ದವು ವಿಷ್ಣುವಿನಲ್ಲಿ ನಿರವಕಾಶ

भावदीपः – तथापि कुतो न विष्णुरित्यतः ''अक्षरात्परतः पर'' इति श्रुतेरपि नाक्षरात्सम्भवतीत्यस्याः निरवकशत्वामिति न्ययविवरणोक्तदिशाऽक्षरशब्दस्य विष्णौ निरवकशत्वं वक्तुं प्रवृत्तं तस्माच्चेत्यादिभाष्यवाक्यशेषं मत्वाऽऽह – तस्य चेति ।।

ಆದರೂ ಸಹ ವಿಷ್ಣು ಏಕೆ ಅದೃಶ್ಯತ್ವಾದಿ ಗುಣಗಳುಳ್ಳವನಾಗುವುದಿಲ್ಲ? ಎಂಬ ಪ್ರಶ್ನೆಗೆ ''ಅಕ್ಷರಾತ್ಪರತಃ ಪರಃ'' ಎಂಬ ಶ್ರುತಿಗಿಂತಲೂ ''ಅಕ್ಷರಾತ್ಸಂಭವತೀಹ ವಿಶ್ವಂ'' ಎಂಬ ವಾಕ್ಯವು ನಿರವಕಾಶವಾಗಿಲ್ಲ ಎಂಬ ನ್ಯಾಯವಿವರಣದಲ್ಲಿ ಹೇಳಿದಂತೆ ಅಕ್ಷರ ಶಬ್ದಕ್ಕೆ ವಿಷ್ಣುವಿನಲ್ಲಿ

ನಿರವಕಾಶತ್ವವನ್ನು ಸಾಧಿಸುವುದಕ್ಕಾಗಿ ''ತಸ್ಮಾಚ್ಚ'' ಇತ್ಯಾದಿ ಭಾಷ್ಯದ ವಾಕ್ಯಶೇಷವು ಹೊರಟಿರುತ್ತದೆ. ಈ ಅಭಿಪ್ರಾಯದಿಂದ ''ತಸ್ಯ ಚ'' ಇತ್ಯಾದಿ ಟೀಕೆಯು ಹೊರಟಿದೆ.

ಭಾಷ್ಯದಲ್ಲಿ 'ವಾಕ್ಯೇ' ಎಂಬುದನ್ನು ಅಧ್ಯಾಹಾರ ಮಾಡಬೇಕು

ಭಾವದೀಪಃ – तत्र हेतुत्वेन भाष्यशेषं व्याचष्टे – यत इति ।। तस्मादित्यस्य व्यवहितयत्किञ्चित्परामर्शित्वभ्रमनिरासायास्मादप्यक्षरादिति व्याख्या । भाष्ये इत्यतः परमित्यग्रेतनभाष्यानुरोधादिहापीति शब्दानन्तरं ''वाक्य'' इति शेषः ।

ಈ ವಿಷಯದಲ್ಲಿ ಕಾರಣವನ್ನು ಭಾಷ್ಯದ ವಾಕ್ಯಶೇಷದಿಂದಲೇ ತೋರಿಸುತ್ತಿದ್ದಾರೆ ''ಯತಃ'' ಇತ್ಯಾದಿ ಟೀಕೆಯಿಂದ. ''ತಸ್ಮಾತ್'' ಎಂಬ ಪದವು ವ್ಯವಹಿತವಾದ ಯಾವುದಾದರೂ ಒಂದನ್ನು ಪರಾಮರ್ಶಿಸಬಹುದೆಂಬ ಭ್ರಮೆಯನ್ನು ನಿರಾಕರಿಸುವುದಕ್ಕಾಗಿ ''ಅಸ್ಮಾದಪ್ಯಕ್ಷರಾತ್'' ಎಂದು ವ್ಯಾಖ್ಯಾನಿಸಿದ್ದಾರೆ. ಮುಂದಿನ ಭಾಷ್ಯದಲ್ಲಿರುವ ''ಇತಿ'' ಶಬ್ದದ ಅನಂತರ 'ವಾಕ್ಯೇ'ವೆಂಬುದನ್ನು ಇಟ್ಟುಕೊಂಡಿದ್ದರಿಂದ ಇಲ್ಲಿಯೂ ಸಹ 'ವಾಕ್ಯೇ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕೆಂದು ತಿಳಿಯುತ್ತದೆ.

ಅಕ್ಷರನಿಗಿಂತ ಉತ್ತಮನಿದ್ದಾನೆಯೇ ?

ಭಾವದೀಪಃ – अस्मादप्यक्षराद् ।। अक्षरात्सम्भवतीति वाक्यादुत्तरवाक्येऽस्मादप्यक्षरात्परः प्रतीयत इत्यर्थः । एतेन भाष्ये तस्मादिति पूर्ववाक्यमक्षरं च परामृश्यत इति दर्शितम् ।

''ಅಸ್ಮಾದಪ್ಯಕ್ಷರಾತ್'' ಎಂದರೆ ''ಅಕ್ಷರಾತ್ಸಂಭವತಿ'' ಎಂಬ ಮುಂದಿನ ವಾಕ್ಯದಲ್ಲಿ ಈ ಅಕ್ಷರನಿಗಿಂತಲೂ ಉತ್ತಮನಿದ್ದಾನೆಂದು ತಿಳಿಯುತ್ತದೆ ಎಂದರ್ಥ. ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿ ''ತಸ್ಮಾತ್'' ಎಂಬ ಪೂರ್ವವಾಕ್ಯವನ್ನು ಮತ್ತು ಅಕ್ಷರನನ್ನು ಪರಾಮರ್ಶ ಮಾಡಿಕೊಳ್ಳಬೇಕೆಂದು ತಿಳಿಸಿದಂತಾಯಿತು.

ವಿಷ್ಣುವೇ ಶ್ರೇಷ್ಠನೆಂಬಲ್ಲಿ ಲಿಂಗ

ಭಾವದೀಪಃ – ''इत्युक्त्वा प्रवृत्ते उत्तरवाक्ये'' इति योजनात्

त्वाश्रुत्युपपत्तिः । तत्किमुत्तरवाक्यम्? इत्यतो 'अक्षरात्परतः परः' इत्येतत् प्रवृत्तमिति मत्वा 'परो विष्णुः' इत्यत्र लिङ्गानि वक्तुं शेषपूर्वकमाह – दिव्यो हीति ।।

ಭಾಷ್ಯದಲ್ಲಿ ''ಇತ್ಯುಕ್ತ್ವಾ ಪ್ರವೃತ್ತೇ ಉತ್ತರವಾಕ್ಯೇ'' ಎಂದು ಯೋಜನೆ ಮಾಡಿಕೊಳ್ಳಬೇಕು. ಇದರಿಂದ 'ಕ್ತ್ವಾ' ಪ್ರತ್ಯಯಾಂತ ಶ್ರುತಿಯು ಉಪಪನ್ನವಾಗುತ್ತದೆ. ಉತ್ತರವಾಕ್ಯ ಯಾವುದು? ಎಂಬ ಪ್ರಶ್ನೆಗೆ ''ಅಕ್ಷರಾತ್ಪರತಃ ಪರಃ'' ಎಂಬ ವಾಕ್ಯವು ಹೊರಟಿದೆ. ಈ ದೃಷ್ಟಿಯಿಂದ ವಿಷ್ಣುವೇ ಶ್ರೇಷ್ಠನಾಗಿದ್ದಾನೆ ಎಂಬ ವಿಷಯದಲ್ಲಿ ಲಿಂಗವನ್ನು ಹೇಳುವುದಕ್ಕಾಗಿ ಉಳಿದ ವಾಕ್ಯಭಾಗವನ್ನು ''ದಿವ್ಯೋ ಹಿ'' ಇತ್ಯಾದಿಯಾಗಿ ವಿವಕ್ಷಿಸುತ್ತಿದ್ದಾರೆ.

ವಿಶೇಷವಿಚಾರ - ವಸ್ತುತಃ ಈ ಅಧಿಕರಣದಲ್ಲಿ ಭಗವಂತನ ಗುಣಗಳನ್ನಷ್ಟೇ ಸಮನ್ವಯ ಮಾಡುತ್ತಿದ್ದಾರೆ. ಏಕೆಂದರೆ ಲಿಂಗಪಾದವಾದ್ದರಿಂದ. ಟೀಕೆಯಲ್ಲಿಯೂ ಸಹ ಅನೇಕ ಲಿಂಗಗಳ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ಹೇಳಿದ್ದಾರೆ. ಹೀಗಿರುವಾಗ ಅದೃಶ್ಯತ್ವಾದಿಗುಣವುಳ್ಳ ಅಕ್ಷರಶಬ್ದವಾಚ್ಯನು ವಿಷ್ಣುವೆಂದು ಏಕೆ ಸಮರ್ಥಿಸುತ್ತಿದ್ದೀರಿ?

ಈ ಪ್ರಶ್ನೆಗೆ ಅವಕಾಶವಿಲ್ಲ. ಅದೃಶ್ಯತ್ವಾದಿಗುಣಗಳುಳ್ಳವನು ಅಕ್ಷರನೇ ಆಗಿದ್ದಾನೆ. ಅನೇಕ ಗುಣಗಳಿಗೆ ಅಕ್ಷರನು ವಿಶೇಷ್ಯನಾದ್ದರಿಂದ ಇಲ್ಲಿ ಅಕ್ಷರಶಬ್ದದ ಸಮನ್ವಯವನ್ನು ಸ್ವೀಕರಿಸಲಾಗಿದೆ. ಅಂತಹ ಅಕ್ಷರವು ಉಪಾದಾನವೆಂದು ಹೇಳಲ್ಪಟ್ಟಿದ್ದರಿಂದ ಬ್ರಹ್ಮನು ಅದೃಶ್ಯನಲ್ಲ ಎಂಬ ಪೂರ್ವಪಕ್ಷಯುಕ್ತಿಯನ್ನು ಸೂಚಿಸುವುದಕ್ಕಾಗಿ ಅಕ್ಷರನನ್ನು ಸ್ವೀಕರಿಸಿದ್ದಾರೆ. ಆದ್ದರಿಂದಲೇ ಟೀಕೆಯಲ್ಲಿ ಅಕ್ಷರಶಬ್ದ ಸಹಿತವಾಗಿಯೇ ಅದೃಶ್ಯತ್ವಾದಿಲಿಂಗಗಳಿಗೆ ಅನ್ಯತ್ರಪ್ರಸಿದ್ಧಿಯನ್ನು ಹೇಳಿದ್ದಾರೆ.

ಶಂಕಾ - ಎಲ್ಲಾ ಗುಣಗಳು ಅಕ್ಷರನಲ್ಲಿ ವಿಶೇಷಣವಾಗಿರುವುದಾದರೆ ಅಕ್ಷರಶಬ್ದವನ್ನೇ ಈ ಅಧಿಕರಣದಲ್ಲಿ ಸಮನ್ವಯ ಮಾಡಬಹುದಲ್ಲವೇ? ಹೀಗೆ ಅಕ್ಷರ ಶಬ್ದವನ್ನು ಸಮನ್ವಯ ಮಾಡಿದಾಗ ಪಾದಸಂಗತಿಯು ಬೆಳೆಯುವುದಿಲ್ಲವೆಂಬ ಆತಂಕಕ್ಕೆ ಅವಕಾಶವಿಲ್ಲ. ಮುಂದಿನ ವೈಶ್ವಾನರಾಧಿಕರಣದಲ್ಲಿ 'ವೈಶ್ವಾನರ' ಎಂಬ ಒಂದು ನಾಮದ ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುವಂತೆ ಇಲ್ಲಿಯೂ ಸಹ ಒಂದು ಅಕ್ಷರ ನಾಮದ

ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವಾಗಿ ಫಲತಃ ಪಾದಸಂಗತಿಯು ಸಿದ್ಧವಾಗುತ್ತವೆ. ಮತ್ತು ಅಕ್ಷರವು ಉಪಾದಾನವಾಗಿರುವುದರಿಂದ ಅಕ್ಷರನು ಬ್ರಹ್ಮನಲ್ಲ ಎಂಬ ಪೂರ್ವಪಕ್ಷ ಮಾಡುವುದೂ ಸಹ ನೇರವಾದ ಮಾರ್ಗ. ಒಂದು ವೇಳೆ ಗುಣಗಳ ಸಮನ್ವಯವೆಂದು ಹೇಳಿದರೆ ವಕ್ರವಾದ ಪೂರ್ವಪಕ್ಷವನ್ನು ತೋರಿಸಿದಂತಾಗುತ್ತದೆ. ಏಕೆಂದರೆ ಉಪಾದಾನವಾಗಿರುವ ಅಕ್ಷರವು ಬೇರೆಯಾಗಿದೆ. ಅದರ ವಿಶೇಷಣವಾಗಿರುವ ಗುಣಗಳೂ ಭಿನ್ನನಾದವನಿಗೇ ಯುಕ್ತ. ಹೀಗಿರುವಾಗ ಅಕ್ಷರವು ಉಪಾದಾನವಾದ ಮಾತ್ರದಿಂದ ಗುಣಗಳು ಬ್ರಹ್ಮನಲ್ಲಿವೆ ಎಂದು ಏಕೆ ಹೇಳಬಾರದು ? ಎಂಬುದಾಗಿ ಗೊಂದಲವಾಗುತ್ತದೆ. ಅದಕ್ಕೋಸ್ಕರ ಅಕ್ಷರಶಬ್ದದ ಸಮನ್ವಯ ಮಾಡುವುದೇ ಎಲ್ಲಾ ರೀತಿಯಿಂದಲೂ ಸೂಕ್ತವಾಗಿದೆಯಲ್ಲವೇ?

ಇದು ತಪ್ಪು. ಏಕೆಂದರೆ ಅಕ್ಷರ ಶಬ್ದದ ಸಮನ್ವಯವನ್ನೂ ಸಹ ಮುಂದೆ ಅಕ್ಷರಾಧಿಕರಣದಲ್ಲಿ ಮಾಡಿಯೇ ಮಾಡುತ್ತಾರೆ. ಆದ್ದರಿಂದ ಪ್ರತ್ಯೇಕವಾಗಿ ಇಲ್ಲಿ ಅಕ್ಷರಶಬ್ದದ ಸಮನ್ವಯದ ಅವಶ್ಯಕತೆ ಇರುವುದಿಲ್ಲ. ಹಾಗಾದರೆ ಮೂರನೇ ಪಾದದಲ್ಲಿರುವ ಅಕ್ಷರಾಧಿಕರಣದಿಂದಲೇ ಈ ಅಧಿಕರಣವು ಗತಾರ್ಥವಾಯಿತಲ್ಲವೇ? ಎಂದು ಪ್ರಶ್ನಿಸಬಾರದು. ಪರತ್ವ, ಅವಧಿತ್ವ ಮೊದಲಾದ ಬಾಧಕಗಳಿರುವುದರಿಂದ ಅದನ್ನು (ಅಕ್ಷರಾಧಿಕರಣವನ್ನು) ಅಪವಾದಿಸಿ ಇಲ್ಲಿ ಪೂರ್ವಪಕ್ಷ ಮಾಡಲಾಗಿದೆ.

ಬೇರೆ ಅಧಿಕರಣಗಳಲ್ಲಿ ಸಮನ್ವಯ ಮಾಡದಿರುವ ಗುಣಗಳ ಸಮೂಹವನ್ನೇ ಇಲ್ಲಿ ಸಮನ್ವಯ ಮಾಡಬೇಕು. ಮತ್ತು ಈ ಪಾದದಲ್ಲಿ ಇರುವ ಪ್ರತಿಯೊಂದು ಅಧಿಕರಣಗಳಲ್ಲಿಯೂ ಮತ್ತೊಂದು ಶಬ್ದದ ಸಾಹಿತ್ಯದಿಂದ ಲಿಂಗಗಳಿಗೆ ಅನ್ಯತ್ರಪ್ರಸಿದ್ಧಿಯನ್ನು ಆಶ್ರಯಿಸಲಾಗಿದೆ. ಅದರಂತೆ ಈ ಅಧಿಕರಣದಲ್ಲಿಯೂ ಅಕ್ಷರಶಬ್ದದ ಸಾಹಿತ್ಯದಿಂದ ಅದೃಶ್ಯತ್ವಧರ್ಮಕ್ಕೆ ಅನ್ಯತ್ರಪ್ರಸಿದ್ಧಿಯನ್ನು ಆಶ್ರಯಿಸಲಾಗಿದೆ. ಆದ್ದರಿಂದ ಪ್ರತಿಯೊಂದು ಅಧಿಕರಣಗಳ ಅನುಪೂರ್ವಿಗಾಗಿ ಅದೃಶ್ಯತ್ವಾದಿಗುಣಗಳ ಸಮನ್ವಯವೇ ಈ ಅಧಿಕರಣದಲ್ಲಿಯುಕ್ತವಾಗುತ್ತವೆ. ಮತ್ತು ಅದೃಶ್ಯತ್ವಾದಿಗುಣಗಳ ಸಮನ್ವಯವನ್ನು ಮಾಡುವುದರಿಂದ ಹಿಂದಿನ ಅಧಿಕರಣದಿಂದ ಸಂಗತಿಯು ನೇರವಾಗಿ ದೊರೆಯುತ್ತದೆ. ಆದ್ದರಿಂದ ಅನೇಕ ಗುಣಗಳ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ತಿಳಿಯಬೇಕು.

ಶ್ರುತಿಯಲ್ಲಿರುವ ಕಠಿಣಪದಾರ್ಥ

भावदीपः – दिव्योऽत्यद्भुतः । अमूर्तो नियतपरिच्छिन्नपरिमाणरहितः ।

किन्तु बाह्यः आभ्यन्तरश्च । 'अप्राणो ह्यमनाः' इति षोडशकलाराहित्यमुच्यते। शुभ्रः शुद्ध इति कर्मनिर्णयटीकोक्तार्थो बोध्यः।

ದಿವ್ಯಃ = ಅತ್ಯದ್ಭುತನಾದವನು, ಅಮೂರ್ತಃ = ನಿಯತವಾದ ಪರಿಚ್ಛಿನ್ನಪರಿಮಾಣ ಇಲ್ಲದವನು, ಹೊರತಾಗಿ ಹೊರಗಡೆ ಒಳಗಡೆ ಎಲ್ಲಾ ಕಡೆಯೂ ತುಂಬಿರುವವನು. ''ಅಪ್ರಾಣೋ ಹ್ಯಮನಾಃ'' ಎಂಬುದರಿಂದ ಷೋಡಶಕಲಾರಹಿತನೆಂದು ತಿಳಿಸಲಾಗಿದೆ. ''ಶುಭ್ರಃ'' ಎಂಬ ಪದಕ್ಕೆ ಕರ್ಮನಿರ್ಣಯ ಟೀಕೆಯಲ್ಲಿ ಹೇಳಿರುವ ರೀತಿಯಾಗಿ ಶುದ್ಧನಾದವನು ಎಂಬರ್ಥವನ್ನು ತಿಳಿಯಬೇಕು.

ವಿಷ್ಣುವೇ ಸರ್ವೋತ್ತಮ

भावदीपः – नहीति ।। 'सैव हि सत्यादयः' इत्यादौ तस्यैकस्यैव परत्वोक्तेः । 'सा काष्ठा सा परा गतिः' इत्यादेरिति भावः । एतेन 'अक्षरात्सम्भवति' इति वाक्यस्थाक्षरशब्दस्य निरवकाशत्वमित्यर्थो दर्शितः ।। अत इति ।। निरवकाशाक्षरशब्दादित्यर्थः । उक्तेत्यन्तवाक्यतात्पर्यम् ''अदृश्यत्वादि'' इति अद्रेश्यवाक्ये अदृश्यवाक्ये च श्रुतेत्यर्थः ।।

ವಿಷ್ಣು ಒಬ್ಬನೇ ಸರ್ವೋತ್ತಮನೆಂದು ಹೇಳಲಾಗಿದೆ. ''ಸಾ ಕಾಷ್ಠಾ ಸಾ ಪರಾ ಗತಿಃ'' ಎಂಬುದೇ ಈ ವಿಷಯದಲ್ಲಿ ಪ್ರಮಾಣವಾಗಿದೆ. ಹೀಗೆ ಹೇಳಿದ್ದರಿಂದ ''ಅಕ್ಷರಾತ್ಸಂಭವತಿ'' ಎಂಬ ವಾಕ್ಯದಲ್ಲಿರುವ ''ಅಕ್ಷರ'' ಶಬ್ದಕ್ಕೆ ನಿರವಕಾಶತ್ವವನ್ನು ಸಮರ್ಥಿಸಿದಂತಾಯಿತು. ''ಅತಃ'' ಎಂಬ ಪದಕ್ಕೆ ನಿರವಕಾಶವಾದ ಅಕ್ಷರ ಶ್ರುತಿಯ ಬಲದಿಂದ ಎಂದರ್ಥ.

''ಉಕ್ತಃ'' ಎಂಬಲ್ಲಿಯ ತನಕದ ವಾಕ್ಯದ ತಾತ್ಪರ್ಯವನ್ನು ''ಅದೃಶ್ಯತ್ವಾದಿಗುಣಕಃ'' ಎಂಬುದರಿಂದ ಹೇಳಿದ್ದಾರೆ. ''ಯತ್ತದದ್ರೇಶ್ಯಂ'' ಎಂಬ ವಾಕ್ಯದಲ್ಲಿ ಮತ್ತು ಅದೃಶ್ಯತ್ವ ವಾಕ್ಯದಲ್ಲಿಯೂ ಶ್ರುತವಾಗಿದೆ ಎಂದರ್ಥ.

ಪ್ರಕೃತಿ ಎಂದರೆ ಜಡಪ್ರಕೃತಿಯೆಂದು ವಿವಕ್ಷಿಸಬೇಕು

भावदीपः – प्रकृतेः प्राप्तिरिति प्रकृतिपदस्य जडपरत्वं तावदुपेत्य भाष्यं व्याचष्टे – जडेति ।। अस्येति ।। अदृश्यत्वादिगुणकाक्षरस्येत्यर्थः ।

''ಪ್ರಕೃತೇಃ ಪ್ರಾಪ್ತಿಃ'' ಪ್ರಕೃತಿಗೂ ಸಹ ಅದೃಶ್ಯತ್ವಾದಿಗಳು ಉಪಪನ್ನವಾಗುತ್ತವೆ ಎಂಬಲ್ಲಿರುವ ಪ್ರಕೃತಿ ಪದಕ್ಕೆ ಜಡಪರತ್ವವನ್ನು ಅಂಗೀಕರಿಸಿ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಜಡ'' ಇತ್ಯಾದಿಯಾಗಿ. ''ಅಸ್ಯ'' ಎಂಬ ಪದಕ್ಕೆ ಅದೃಶ್ಯತ್ವಾದಿ ಗುಣಗಳುಳ್ಳ ಅಕ್ಷರನಿಗೆ ಎಂದರ್ಥ.

ಊರ್ಣನಾಭಿಯ ದೃಷ್ಟಾಂತವೇಕೆ ?

ಭಾವದೀಪಃ – 'यथोर्णनाभिः' इत्यत्र स्फुटमुपादानत्वाप्रतीतेः ''पृथिव्यादि'' इत्युक्तम् । भाष्यटीकयोः 'यथोर्णनाभिः' इत्युक्तिस्तु सिद्धान्ते उपयुज्यत इति भावः ।

''ಯಥೋರ್ಣನಾಭಿಃ'' ಎಂಬ ಶ್ರುತಿಯಲ್ಲಿ ಸ್ಪಷ್ಟವಾಗಿ ಉಪಾದಾನಕಾರಣತ್ವವು ಪ್ರತೀತವಾಗುತ್ತಿಲ್ಲ. ಅದಕ್ಕೋಸ್ಕರ ಪೃಥಿವೀ ದೃಷ್ಟಾಂತವನ್ನು ನೀಡಿರುತ್ತಾರೆ. ಭಾಷ್ಯ ಹಾಗೂ ಟೀಕೆಗಳಲ್ಲಿ ಊರ್ಣನಾಭಿ ದೃಷ್ಟಾಂತವನ್ನು ಏಕೆ ಉಲ್ಲೇಖಿಸಿದ್ದಾರೆ? ಎಂದರೆ ಸಿದ್ಧಾಂತಕ್ಕೆ ಉಪಯೋಗವಾಗುತ್ತದೆ ಎಂಬ ಅಭಿಪ್ರಾಯದಿಂದ.

ಲಿಂಗಕ್ಕೆ ನಿರವಕಾಶತ್ವ ಸಮರ್ಥನೆ

ಭಾವದೀಪಃ – प्रागुक्तन्यायविवरणानुरोधेनाक्षरादित्युत्तरभाष्यं लिङ्गनिरवकाशतोक्त्यर्थं प्रवृत्तमिति मत्वाऽवतारयति – नचेति ।। तथाच विष्णावपि तद्युक्तमिति भावः ।

ಹಿಂದೆ ಉಲ್ಲೇಖಿಸಿದ ನ್ಯಾಯವಿವರಣಾನುಸಾರಿಯಾಗಿ ''ಅಕ್ಷರಾತ್'' ಎಂಬ ಮುಂದಿನ ಭಾಷ್ಯವು ಲಿಂಗಕ್ಕೆ ನಿರವಕಾಶತ್ವವನ್ನು ಸಮರ್ಥಿಸುವುದಕ್ಕಾಗಿ ಹೊರಟಿದೆ ಎಂಬ ಅಭಿಪ್ರಾಯದಿಂದ ''ನಚ'' ಇತ್ಯಾದಿಯಾಗಿ ಅವತಾರಿಕೆ ನೀಡುತ್ತಿದ್ದಾರೆ. ಆದ್ದರಿಂದ ವಿಷ್ಣುವಿನಲ್ಲಿಯೂ ಸಹ ಅಕ್ಷರ ಶ್ರುತಿಯು ಉಪಪನ್ನವಾಗುತ್ತದೆ ಎಂದು ತಿಳಿಯಬೇಕು.

ದೃಷ್ಟಾಂತವೈಯರ್ಥ್ಯದ ಜೊತೆ ಮತ್ತೊಂದು ದೋಷ

ಭಾವದೀಪಃ – दृष्टान्तवैय्यर्थ्ये सत्यपि इत्यतः परमिति भाष्योक्तं

दोषान्तरं व्यनक्ति – इत्यतो वाक्यादिति ।। तच्छब्दार्थः – तस्मादिति ।। कारणत्वेनोक्ताक्षरादित्यर्थः ।

ದೃಷ್ಟಾಂತವೈಯರ್ಥ್ಯದೋಷ ಇರುವಾಗಲೇ ಭಾಷ್ಯದಲ್ಲಿ ''ಪರಂ'' ಎಂಬ ಪದದಿಂದ ಹೇಳಲ್ಪಟ್ಟ ಮತ್ತೊಂದು ದೋಷವನ್ನು ''ಇತ್ಯತೋ ವಾಕ್ಯಾತ್'' ಎಂಬ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ತತ್'' ಶಬ್ದದ ಅರ್ಥವೇ ''ತಸ್ಮಾತ್'' ಎಂದು ತಿಳಿಯಬೇಕು. ಅಂದರೆ ಜಗತ್ಕಾರಣವೆಂದು ಹೇಳಲ್ಪಟ್ಟ ಅಕ್ಷರನದೆಸೆಯಿಂದ ಎಂದರ್ಥ.

ದೃಷ್ಟಾಂತಕ್ಕೆ ವೈಯರ್ಥ್ಯವಿಲ್ಲ

भावदीपः – विष्णोः परत्वोक्तेः तदवध्यक्षरत्वमयुक्तम् । जडत्वे तु ततः परतः श्रीतत्त्वात्परो विष्णुरिति युक्तमिति उपादानत्वं जडप्रकृतेरेव दृष्टान्तवैय्यर्थ्यं च नेति भावः ।

ವಿಷ್ಣುವು ಸರ್ವೋತ್ತಮನಾದ್ದರಿಂದ ಅವನಿಗೆ ಅಕ್ಷರವು ಅವಧಿಯಾಗಿದೆ ಎಂದು ಹೇಳಿದ್ದು ತಪ್ಪು. ಜಡವಾದ ಪ್ರಕೃತಿಯು ಅವಧಿಭೂತವಾದ ಅಕ್ಷರವೆಂದು ಪರಿಗಣಿಸಿದರೆ ಅಂತಹ ಜಡವಾದ ಅಕ್ಷರದ ದಸೆಯಿಂದ ಲಕ್ಷ್ಮೀದೇವಿಯು ಶ್ರೇಷ್ಠಳಾಗಿದ್ದಾಳೆ. ಅವಳಿಗಿಂತಲೂ ವಿಷ್ಣು ಶ್ರೇಷ್ಠನಾಗಿದ್ದಾನೆ ಎಂದು ಹೇಳಬಹುದು. ಮತ್ತು ಜಡಪ್ರಕೃತಿಗೆ ಉಪಾದಾನಕಾರಣತ್ವವೂ ಸಹ ಇರುವುದರಿಂದ ದೃಷ್ಟಾಂತಕ್ಕೆ ವೈಯರ್ಥ್ಯದೋಷವು ಬರುವುದಿಲ್ಲ ಎಂದು ಅಭಿಪ್ರಾಯ.

ಶ್ರುತಿಲಿಂಗಗಳೆರಡೂ ನಿರವಕಾಶ

भावदीपः – एतेन 'अक्षरात्सम्भवति' इत्यस्याः निरवकाशत्वमिति न्यायविवरणोक्तम् इत्यन्तस्योपादानस्य निरवकाशत्वमित्यर्थान्तरं दर्शितम् । कूटस्थेत्यादि व्याचष्टे – चेतनेति ।।

ಹೀಗೆ ಹೇಳಿದ್ದರಿಂದ ''ಅಕ್ಷರಾತ್ಸಂಭವತಿ'' ಎಂಬ ಶ್ರುತಿಗೆ ನಿರವಕಾಶತ್ವವನ್ನು ಉಪಾದಾನತ್ವರೂಪವಾದ ಲಿಂಗಕ್ಕೂ ಸಹ ನಿರವಕಾಶತ್ವವನ್ನು ತಿಳಿಸಿದಂತಾಯಿತೆಂಬ ಮತ್ತೊಂದು ವ್ಯಾಖ್ಯಾನವನ್ನು ತೋರಿಸಿದಂತಾಯಿತು. ''ಕೂಟಸ್ಥ'' ಇತ್ಯಾದಿಯಾಗಿ ಹೇಳಿದ್ದನ್ನೇ ''ಚೇತನ''

ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಶಂಕಾಪೂರ್ವಕವಾಗಿ ಭಾಷ್ಯದ ಯೋಜನೆ

भावदीपः – न्यायविवरणमनुरुध्य पूर्वोक्तदिशा अक्षरशब्द-निरवकाशत्वोक्तिपरतया पूर्वभाष्यमेव शङ्कापूर्वं योजयति – नचेति ।।

ನ್ಯಾಯವಿವರಣಕ್ಕೆ ಅನುಸಾರಿಯಾಗಿ ಹಿಂದೆ ಹೇಳಿದ ಪ್ರಕಾರ ಅಕ್ಷರ ಶಬ್ದವು ನಿರವಕಾಶವಾಗಿದೆ ಎಂಬ ಅರ್ಥದಲ್ಲಿಯೂ ಹಿಂದೆ ಹೇಳಿದ ಭಾಷ್ಯವನ್ನೇ ಶಂಕಾಪೂರ್ವಕವಾಗಿ ಯೋಜನೆ ಮಾಡುತ್ತಿದ್ದಾರೆ ''ನಚ'' ಇತ್ಯಾದಿ ವಾಕ್ಯದಿಂದ.

ವಿಶೇಷವಿಚಾರ - ಪೂರ್ವಪಕ್ಷ ಹೀಗಿದೆ - ಆನಂದಮಯಾಧಿಕರಣದಲ್ಲಿ 'ಅದೃಶ್ಯೇऽನಾತ್ಮ್ಯೇ' ಎಂದು ತೈತ್ತಿರೀಯ ವಾಕ್ಯವನ್ನು ಉಲ್ಲೇಖ ಮಾಡಿ ವಿಷ್ಣುವಿನಲ್ಲಿ ಅದೃಶ್ಯತ್ವಗುಣವನ್ನು ಹೇಳಲಾಗಿದೆ. ಮತ್ತು ಹಿಂದಿನ ಅಂತರ್ಯಾಮ್ಯಧಿಕರಣದಲ್ಲಿ ''ಸ ಯೋऽತೋऽಶ್ರುತೋಮತೋ'' ಇತ್ಯಾದಿ ಐತರೇಯೋಪನಿಷತ್ತಿನ ವಾಕ್ಯದಿಂದ ವಿಷ್ಣುವಿಗೆ ಅದೃಶ್ಯತ್ವ ಗುಣವನ್ನು ನಿರ್ಣಯಿಸಲಾಗಿದೆ. ಆದರೆ ಮಾಂಡೋಕ್ಯೋಪನಿಷತ್ತಿನಲ್ಲಿ ಇದೇ ಅದೃಶ್ಯತ್ವಗುಣವನ್ನು ಅಕ್ಷರತತ್ವಕ್ಕೆ ಹೇಳಲಾಗಿದೆ. ಈ ಅಕ್ಷರತತ್ವವನ್ನು ವಿಷ್ಣುವೆಂದು ನಿರ್ಣಯಿಸಲಾಗದು. ಏಕೆಂದರೆ 'ಅಕ್ಷರಾತ್ಸಂಭವತೀಹ ವಿಶ್ವಮ್' ಅಕ್ಷರತತ್ವದಿಂದ ಜಗತ್ತು ಹುಟ್ಟಿತು ಎಂದು ಹೇಳಿ. 'ಅಕ್ಷರಾತ್ಪರತಃ ಪರಃ' ಎಂಬುದಾಗಿ ಅಕ್ಷರತತ್ತ್ವಕ್ಕಿಂತಲೂ ವಿಷ್ಣು ಉತ್ತಮೋತ್ತಮನಾಗಿದ್ದಾನೆಂದು ಶ್ರುತಿ ಹೇಳುತ್ತಿದೆ. ಒಂದು ವೇಳೆ ವಿಷ್ಣುವೇ ಅಕ್ಷರನಾದರೆ ಅವನಿಗಿಂತ ಉತ್ತಮನಾದವನನ್ನು ಹೇಳಬೇಕಾಗುತ್ತದೆ. ಆವಾಗ ವಿಷ್ಣು ಸರ್ವೋತ್ತಮತ್ವವೇ ಭಗ್ನವಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಅಕ್ಷರತತ್ತ್ವ ವಿಷ್ಣುವಲ್ಲವೆಂಬುದನ್ನು ಒಪ್ಪಬೇಕು.

ಹಾಗಾದರೆ ಅಕ್ಷರತತ್ವ ಎಂದರೆ ಯಾವುದು ? ಜಡಪ್ರಕೃತಿಯಾಗಬಹುದು. ಶ್ರುತಿಯು 'ತಥಾಕ್ಷರಾತ್ಸಂಭವತೀಹ ವಿಶ್ವಮ್' ಎಂದು ಜಗತ್ತಿಗೆ ಉಪಾದಾನ ಕಾರಣವಾಗಿರುವುದನ್ನು ಅಕ್ಷರ ಎಂದು ಹೇಳುತ್ತಿದೆ. ಜಡಪ್ರಕೃತಿಪಕ್ಷದಲ್ಲಿ ಈ ಉಪಾದಾನಕಾರಣತ್ವವು ಸಮಂಜಸವಾಗುತ್ತದೆ. ಶ್ರುತಿಯಲ್ಲಿ ಕಾರಣತ್ವವನ್ನಷ್ಟೇ ಹೇಳಿರುವುದರಿಂದ ನಿಮಿತ್ತಕಾರಣವೆಂದು ವಿವಕ್ಷಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ನಿಮಿತ್ತಕಾರಣಕ್ಕಿಂತ ಉಪಾದಾನಕಾರಣವು ಅಂತರಂಗವಾದ್ದರಿಂದ ಬಹಿರಂಗವಾದ ನಿಮಿತ್ತಕಾರಣಯೆಂಬರ್ಥವನ್ನು ಬಿಡಬೇಕಾಗುತ್ತದೆ.

ಅಥವಾ ಚೇತನಪ್ರಕೃತಿಯನ್ನು ಅಕ್ಷರವೆನ್ನಬಹುದು. ಗೀತೆಯಲ್ಲಿ ಲಕ್ಷ್ಮೀದೇವಿಯನ್ನು ಅಕ್ಷರವೆಂದು ಹೆಸರಿಸಲಾಗಿದೆ. ವಿಶ್ವಕ್ಕೆ ಉಪಾದಾನಕಾರಣವಾದ ಜಡಪ್ರಕೃತಿಗೆ ಇವಳು ಅಭಿಮಾನಿಯಾದ್ದರಿಂದ ಲಕ್ಷ್ಮೀದೇವಿಯನ್ನು ಉಪಾದಾನಕಾರಣವೆಂದು ಹೇಳಬಹುದು.

ಅಥವಾ ಚತುರ್ಮುಖನೂ ಸಹ ಅಕ್ಷರನಾಗಬಹುದು. ಶ್ರುತಿಯಲ್ಲಿ ಬ್ರಹ್ಮ ಎಂಬ ಹೆಸರು ಪ್ರಸ್ತುತವಾಗಿದೆ. ಜಾಯಮಾನತ್ವ ಮೊದಲಾದ ಲಿಂಗಗಳ ಬಲದಿಂದ ಬ್ರಹ್ಮಶಬ್ದವು ಚತುರ್ಮುಖನನ್ನೇ ಪ್ರತಿಪಾದಿಸುತ್ತದೆ ಹೊರತು ವಿಷ್ಣುವನ್ನಲ್ಲ. ಚತುರ್ಮುಖನು ಜಗತ್ತಿಗೆ ಕಾರಣನೂ ಆಗಿದ್ದಾನೆ. ಆದ್ದರಿಂದ ಅವನೂ ಸಹ ಇಲ್ಲಿ ಅಕ್ಷರನೆಂದು ಪ್ರಸ್ತುತನಾಗಿರಬಹುದು.

ಅಥವಾ ರುದ್ರನಲ್ಲಿ ಪ್ರಸಿದ್ಧವಾದ ಈಶ ಶಬ್ದವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ರುದ್ರನು ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಾಗಬಹುದು.

ಹೀಗೆ ನಾಲ್ಕು ಬಗೆಯಲ್ಲಿ ಪೂರ್ವಪಕ್ಷ ಮಾಡಬಹುದು. ವಿಚಾರ ಮಾಡಿದರೆ ವಿಷ್ಣುವನ್ನು ಅಕ್ಷರನೆಂದು ಒಪ್ಪಲು ತೊಂದರೆಯೇ ಇದೆ. ಶ್ರುತಿಯಲ್ಲಿ ಯಾವುದು ಅಕ್ಷರತತ್ತ್ವವಾಗಿದೆಯೋ? ಅದು ಅಧಮವೆಂದು ಹೇಳಿದೆ. ವಿಷ್ಣು ಸರ್ವೋತ್ತಮನಾದ್ದರಿಂದ ಅಧಮನಾಗಲು ಸಾಧ್ಯವಿಲ್ಲ. ಪರವಿದ್ಯಾವಿಷಯತ್ವವನ್ನು ಶ್ರುತಿ ಹೇಳುತ್ತಿರುವುದರಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಒಪ್ಪಬೇಕಲ್ಲವೇ? ಎಂಬ ಪ್ರಶ್ನೆಗೂ ಸಹ ಅವಕಾಶವಿಲ್ಲ. ಶಾಸ್ತ್ರಯೋನಿತ್ವಾಧಿಕರಣದಲ್ಲಿ ಋಗ್ವೇದಾದಿಗಳನ್ನು ಅಪರವಿದ್ಯೆಯೆಂದು ಅಂಗೀಕರಿಸಿ ಅಂತಹ ಶಾಸ್ತ್ರಗಳಿಂದೆಲ್ಲಾ ವಿಷ್ಣು ಪ್ರತಿಪಾದ್ಯನೆಂದು ಸಿದ್ಧಾಂತಿಗಳೇ ಒಪ್ಪಿದ್ದಾರೆ. ಅಪರವಿದ್ಯೆಗೆ ವಿಷಯನಾದ ಮೇಲೆ ಅದಕ್ಕೆ ವಿರುದ್ಧವಾದ ಪರವಿದ್ಯೆಗೆ ವಿಷ್ಣು ವಿಷಯನಾಗಲಾರನು. ಹಾಗಾಗಿ ಬೇರೆ ಜಡಪ್ರಕೃತ್ಯಾದಿಗಳನ್ನೇ ಪರವಿದ್ಯೆಗೆ ವಿಷಯವೆಂದು ಒಪ್ಪಬೇಕಾಗುತ್ತದೆ.

ಅಕ್ಷರಾತ್ ಪರತಃ ಪರನು ಯಾರು ?

भावदीपः – अक्षरन्यायनयेनेति भावः । चित्प्रकृतौ वा कथं युक्तम् अन्तराले कस्यचिदभावेन परत इत्युक्त्ययोगात् । अत आह – तच्चेति ।

ಅಕ್ಷರಾಧಿಕರಣದ ನ್ಯಾಯದಂತೆ ಇಲ್ಲಿಯೂ ಸಹ ತಿಳಿಯಬೇಕು. ಚಿತ್ಪ್ರಕೃತಿಯನ್ನು ಅಕ್ಷರಶಬ್ದ ಪ್ರತಿಪಾದ್ಯವೆಂದು ತಿಳಿದರೆ 'ಅಕ್ಷರಾತ್ ಪರತಃ ಪರತ್ವ'ವನ್ನು ವಿಷ್ಣುವಿಗೆ ಹೇಳಲು ಸಾಧ್ಯವಿಲ್ಲ. ಶ್ರೀತತ್ವಕ್ಕಿಂತ ಶ್ರೇಷ್ಠನಾದ ವಿಷ್ಣುವಿಗಿಂತ ಮತ್ತೊಂದು ಶ್ರೇಷ್ಠವಾದ ಪದಾರ್ಥವು ಇರುವುದಿಲ್ಲವಲ್ಲ? ಎಂಬ ಪ್ರಶ್ನೆಗೆ ''ತಚ್ಚ'' ಇತ್ಯಾದಿಯಾದ ಟೀಕೆಯಿಂದ ಉತ್ತರಿಸುತ್ತಿದ್ದಾರೆ.

ವಿಷ್ಣುವಿನಲ್ಲಿ ಅಕ್ಷರತ್ವವು ಕೂಡುವುದಿಲ್ಲ

ಭಾವದೀಪಃ – युज्यत इति ।। विष्णावविकारित्वादतदभिमानित्वाच्च न युज्यत इति भावः । ब्रह्मेत्यादि व्याचष्टे – हिरण्यगर्भस्य वेति ।। तत्परत इति ।। परावधित्वेनोक्ताक्षरत्वायोगान्न विष्णुग्रहणमित्यर्थः ।

ವಿಷ್ಣುವಿನಲ್ಲಿ ವಿಕಾರವೂ ಇರುವುದಿಲ್ಲ ಅಭಿಮಾನಿತ್ವವೂ ಸಹ ಇರುವುದಿಲ್ಲವಾದ್ದರಿಂದ ಕೂಡುವುದಿಲ್ಲ ಎಂದು ತಿಳಿಯಬೇಕು. ಚತುರ್ಮುಖಬ್ರಹ್ಮಾದಿಗಳೂ ಸಹ ಅದೃಶ್ಯತ್ವಾದಿ ಗುಣಗುಳ್ಳವರಾಗಬಹುದೆಂದು ''ಹಿರಣ್ಯಗರ್ಭಸ್ಯ ವಾ'' ಇತ್ಯಾದಿ ವಾಕ್ಯಗಳಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ತತ್ ಪರತಃ'' ಎಂದರೆ ಪರಕ್ಕೆ ಅವಧಿ ಎಂದು ಹೇಳಲ್ಪಟ್ಟ ವ್ಯಕ್ತಿಗೆ ಅಕ್ಷರತ್ವವು ಕೂಡುವುದಿಲ್ಲವಾದ್ದರಿಂದ ವಿಷ್ಣುವನ್ನು ಸ್ವೀಕರಿಸಲಾಗದು ಎಂದು ಅಭಿಪ್ರಾಯ.

ತತ್ವಪ್ರದೀಪದಲ್ಲಿ ಅಕ್ಷರತತ್ವದ ಬಗ್ಗೆ

ಭಾವದೀಪಃ – विरिञ्चस्याक्षरत्वे तु परतः श्रीतत्त्वात् परो विष्णुरिति भावः । तदुक्तं तत्त्वप्रदीपे – तस्मात् परस्याः प्रकृतेः परस्य हरेरभिधानादिति।

ಒಂದು ವೇಳೆ ಚತುರ್ಮುಖಬ್ರಹ್ಮದೇವರೇ ಅಕ್ಷರರಾದಲ್ಲಿ ಪರಶಬ್ದ ವಾಚ್ಯಳಾದ ಲಕ್ಷ್ಮೀದೇವಿಗಿಂತಲೂ ವಿಷ್ಣು ಪರನಾಗಿದ್ದಾನೆಂದು ತಿಳಿಯಬೇಕು. ಇದನ್ನೇ ತತ್ವಪ್ರದೀಪದಲ್ಲಿ - ''ತಸ್ಮಾತ್ ಪರಸ್ಯಾಃ ಪಕೃತೇಃ ಪರಸ್ಯ ಹರೇರಭಿಧಾನಾತ್'' - ''ಚತುರ್ಮುಖಬ್ರಹ್ಮನಿಗಿಂತಲೂ ಶ್ರೇಷ್ಠಳಾದ ಲಕ್ಷ್ಮೀದೇವಿಗಿಂತಲೂ ಕೂಡ ಶ್ರೀಹರಿಯು ಶ್ರೇಷ್ಠನೆಂದು ಹೇಳಿರುವುದರಿಂದ'' ಎಂದು ವ್ಯಾಖ್ಯಾನಿಸಿದ್ದಾರೆ.

ಈಶ ಪದವು ರುದ್ರಪ್ರತಿಪಾದಕವಲ್ಲ

ಭಾವದೀಪಃ – ईशपदप्राप्तोऽपि न रुद्र इत्यग्रे भाषणान्निरवकाशत्वोक्तिसौकर्याय अत्रैवाह – रुद्रस्येति ।। विष्णावपीति ।। अन्तर्नयन्यायेनेति वा शब्दादेवेत्यत्रेशशब्दपर्यायेशानशब्दस्य समन्वेषमाणत्वाद्धेति भावः ।

ಈಶಪದವೂ ಸಹ ರುದ್ರನನ್ನು ಪ್ರತಿಪಾದಿಸುವುದಿಲ್ಲವೆಂದು ಮುಂದೆ ಸಮರ್ಥಿಸುತ್ತೇವೆ. ಪ್ರಕೃತ ನಿರವಕಾಶತ್ವವನ್ನು ತಿಳಿಸುವುದಕ್ಕಾಗಿ ಮುಂದೆ ಹೇಳುವ ವಿಷಯವನ್ನೇ ಇಲ್ಲಿ ''ರುದ್ರಸ್ಯ'' ಇತ್ಯಾದಿಯಾಗಿ ಹೇಳಿದ್ದಾರೆ. ಅಂತರಾಧಿಕರಣದ ನ್ಯಾಯದಿಂದ ಮತ್ತು ''ಶರ್ವಾದೇವ'' ಎಂಬ ಸೂತ್ರದಿಂದ ಈಶಶಬ್ದಕ್ಕೆ ಪರ್ಯಾಯಶಬ್ದವೆನಿಸಿದ ಈಶಾನಶಬ್ದವನ್ನು ಸಮನ್ವಯ ಮಾಡುತ್ತಾರೆಂದು ತಿಳಿಯಬೇಕು.

ರುದ್ರನನ್ನು ಅಕ್ಷರನೆನ್ನಬಹುದೇ ?

भावदीपः – तत्परत इति ।। रुद्रस्याक्षरत्वे तु परतश्चतुर्मुखात्परो विष्णुरिति युक्तम् । अस्मिन् पक्षे श्रीतत्त्वमीश्वरकोटिनिविष्टमिति भावः । भाष्यं व्युत्क्रमेण व्याचष्टे – अदृश्यत्वेति ।। तत्त्वित्यनुवृत्तस्यार्थः – विष्णुरेवेति ।।

ರುದ್ರನು ಅಕ್ಷರನಾದಲ್ಲಿ ಅವನಿಗಿಂತಲೂ ಶ್ರೇಷ್ಠನಾದ ಚತುರ್ಮುಖಬ್ರಹ್ಮನಿಗಿಂತಲೂ ಶ್ರೇಷ್ಠನಾದವನು ವಿಷ್ಣುವೆಂದು ಹೇಳಬಹುದು. ಆದರೆ ಈ ಪಕ್ಷದಲ್ಲಿ ಈಶ್ವರ ಕೋಟಿಯಲ್ಲಿ ಶ್ರೀತತ್ವವೂ ಸಹ ಸೇರಿರುತ್ತದೆ ಎಂದು ಅಭಿಪ್ರಾಯ. ಭಾಷ್ಯವನ್ನು ವಿಪರೀತಕ್ರಮದಿಂದಲೂ ವ್ಯಾಖ್ಯಾನಿಸುತ್ತಿದ್ದಾರೆ ''ಅದೃಶ್ಯತ್ವ'' ಇತ್ಯಾದಿಯಾಗಿ. ಅನುವೃತ್ತವಾದ ''ತತ್ತು'' ಎಂಬ ಪದದ ಅರ್ಥವನ್ನೇ ''ವಿಷ್ಣುರೇವ'' ಎಂದಿದ್ದಾರೆ.

ಆಕಾಂಕ್ಷೆಗೆ ಅನುಸಾರಿಯಾಗಿ ಭಾಷ್ಯ ವ್ಯಾಖ್ಯಾನ

भावदीपः – हेतूक्तिपरं वाक्यं दर्शयंस्तद्धर्मत्वेनावगतपरविद्येति भाष्यमाकाङ्क्षानुरोधेन विच्छिद्य व्याकुर्वन् सूत्रखण्डार्थमाह – अथ परेति ।।

ಹೇತುವನ್ನು ಸಮರ್ಥಿಸುವ ವಾಕ್ಯವನ್ನು ತೋರಿಸುತ್ತಾ ವಿಷ್ಣುವಿನ ಧರ್ಮವೆಂದು ತಿಳಿಸುತ್ತಿರುವ ''ಪರವಿದ್ಯಾ'' ಇತ್ಯಾದಿ ಭಾಷ್ಯವನ್ನು ಆಕಾಂಕ್ಷೆಗೆ ಅನುಸಾರಿಯಾಗಿ ತುಂಡರಿಸಿ ವ್ಯಾಖ್ಯಾನಿಸುತ್ತಿದ್ದಾರೆ. ಮತ್ತು ಸೂತ್ರದ ಒಂದು ಭಾಗದ ವ್ಯಾಖ್ಯಾನವನ್ನೂ ಸಹ ಮಾಡುತ್ತಿದ್ದಾರೆ ''ಅಥ ಪರಾ'' ಇತ್ಯಾದಿ ಟೀಕೆಯಿಂದ.

'ತನ್ಮತಿಃ' ಎಂಬಲ್ಲಿ ಯಾರನ್ನು ಪರಾಮರ್ಶಿಸಬೇಕು ?

ಭಾವದೀಪಃ – तमेवेत्यादेरर्थः – श्रुतीति ।। श्रुती च स्मृतिश्च ताभिरित्यर्थः।। हरेर्ज्ञानमिति ।। अनेन तन्मतिरिति परामर्शप्रदर्शनाय पूर्वपादोक्तिरिति सूचितम् ।

''ತಮೇವ'' ಇತ್ಯಾದಿ ಶ್ರುತಿಯ ಅರ್ಥವನ್ನೇ ''ಶ್ರುತಿ'' ಎಂದು ಹೇಳಿದ್ದಾರೆ. ಅಂದರೆ ಶ್ರುತಿ ಹಾಗೂ ಸ್ಮೃತಿಗಳಿಂದ ಎಂದರ್ಥ. ಶ್ರೀಹರಿಯ ಜ್ಞಾನವೆಂದು ಅನ್ವಯ. ಹೀಗೆ ಹೇಳಿದ್ದರಿಂದ ''ತನ್ಮತಿಃ'' ಎಂಬಲ್ಲಿರುವ ''ತತ್'' ಪದದಿಂದ ಯಾವುದನ್ನು ಪರಾಮರ್ಶಿಸಬೇಕೆಂಬುದನ್ನು ತಿಳಿಸುವುದಕ್ಕಾಗಿ ಪೂರ್ವಪಾದವನ್ನೂ ಸಹ ಉಲ್ಲೇಖಿಸಿದ್ದಾರೆಂದು ಸೂಚಿಸಿದಂತಾಯಿತು.

ಪರಾಪರವಿದ್ಯೆಗಳು ಭಿನ್ನವಿಷಯಕವೇ ?

ಭಾವದೀಪಃ – परापरविद्ययोर्भेदभ्रान्तिं निरस्यन् परापरविषयत्वरूपोपाधि कृतभेदमाह – यदेति ।। अन्येति ।। कर्मादिविषयतया ।। तदुक्तमिति ।। आथर्वणभाष्य इत्यर्थः ।

ಪರವಿದ್ಯೆ ಮತ್ತು ಅಪರವಿದ್ಯೆಗಳು ಭಿನ್ನವಿಷಯಕವಾಗಿದೆ ಎಂಬ ಭ್ರಾಂತಿಯನ್ನು ನಿರಾಕರಿಸುತ್ತಾ ಪರವಿಷಯತ್ವ ಹಾಗೂ ಅಪರವಿಷಯತ್ವ ಎಂಬ ಉಪಾಧಿಗಳ ಭೇದವಷ್ಟೇ ಇರುತ್ತದೆ ಎಂದು ''ಯದಾ'' ಇತ್ಯಾದಿ ವಾಕ್ಯದಿಂದ ಸಮರ್ಥಿಸಿದ್ದಾರೆ. ''ಅನ್ಯ'' ಎಂದರೆ ಕರ್ಮ ಮೊದಲಾದವುಗಳನ್ನು ವಿಷಯೀಕರಿಸುವುದರಿಂದ ಎಂದರ್ಥ. ''ತದುಕ್ತಂ'' ಎಂದರೆ ಆಥರ್ವಣಭಾಷ್ಯದಲ್ಲಿ ಹೇಳಿದ್ದಾರೆಂದು ಅರ್ಥ.

ವಿಶೇಷವಿಚಾರ - ಪೂರ್ವಪಕ್ಷ ಮಾಡುವಾಗ ಅಪರವಿದ್ಯೆಗೆ ವಿಷ್ಣುವು ವಿಷಯನಾಗಿದ್ದಾನೆ ಹೊರತು, ಪರವಿದ್ಯೆಗೆ ವಿಷಯನಾಗುವುದಿಲ್ಲವೆಂದು ಸಮರ್ಥಿಸಿದ್ದರು. ಇದು ತಪ್ಪು. ಯಾವ ಋಗ್ವೇದಾದಿಗಳು ಅಪರವಿದ್ಯೆಯೆಂದು ಪೂರ್ವಪಕ್ಷಕಾರರು ಹೇಳಿದರೋ ಅದೇ ಋಗ್ವೇದಾದಿಗಳು ಪರವಿದ್ಯೆಯೆಂದೂ ಆಗುತ್ತವೆ. ಉಪಾಧಿಭೇದದಿಂದ

ಒಂದೇ ಶಾಸ್ತ್ರವು ಪರವಿದ್ಯೆಯೂ ಆಗುತ್ತದೆ. ಅಪರವಿದ್ಯೆಯೂ ಆಗುತ್ತದೆ. ಯಾವರೀತಿಯಾಗಿ ಒಂದೇ ಕರ್ಮವು ನಿಷ್ಕಾಮಭಾವನೆಯಿಂದ ಆಚರಿಸಿದಾಗ ನಿವೃತ್ತಕರ್ಮವಾಗುತ್ತದೆ. ಸಕಾಮ ಭಾವನೆಯಿಂದ ಆಚರಿಸಿದಾಗ ಪ್ರವೃತ್ತಕರ್ಮವಾಗುತ್ತದೆ. ಅಥವಾ ನಾವು ತಿನ್ನುವ ಅನ್ನವು ಆರೋಗ್ಯಕ್ಕೆ ಹಿತವಾದ ಪದಾರ್ಥಗಳನ್ನು ಸೇರಿಸಿ ತಿಂದಾಗ ಪಥ್ಯವಾಗುತ್ತದೆ. ಆರೋಗ್ಯಕ್ಕೆ ಅಹಿತವಾದ ಪದಾರ್ಥವನ್ನು ಸೇರಿಸಿ ತಿಂದಾಗ ಅಪಥ್ಯವಾಗುತ್ತದೆ. ಇದರಂತೆ ಒಂದೇ ಋಗ್ವೇದಾದಿ ಶಾಸ್ತ್ರಗಳು ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ ವಿಚಾರಮಾಡಿ ಬ್ರಹ್ಮನನ್ನು ತಿಳಿದಾಗ ಪರವಿದ್ಯೆಯೆನಿಸುತ್ತದೆ, ಇಲ್ಲದಿದ್ದರೆ ಅಪರವಿದ್ಯೆಯೆನಿಸುತ್ತದೆ. ಆದ್ದರಿಂದ ಶ್ರೀಮದಾಚಾರ್ಯರ ಮಾತು 'ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ। ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ॥' 'ಯಾವಾಗ ಋಗ್ವೇದಾದಿಗಳು ವಿಷ್ಣುವನ್ನು ಪ್ರತಿಪಾದಿಸದೆ, ಉಪಾಸನಾ, ಕರ್ಮ ಮೊದಲಾದವನ್ನಷ್ಟೇ ಪ್ರತಿಪಾದಿಸುತ್ತವೋ ಆವಾಗ ಅಪರವಿದ್ಯೆಯೆನಿಸುತ್ತವೆ. ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆಯೆನಿಸುತ್ತಿವೆ' ಎಂದು. ಈ ಮಾತನ್ನು ಎಂದೂ ಮರೆಯಬಾರದು.

ಈ ಸಂದರ್ಭದಲ್ಲಿ ಅದ್ವೈತಿಗಳು ಏನು ಹೇಳುತ್ತಾರೆಂಬುದನ್ನು ತಿಳಿಯಬೇಕು. ವೇದವು ಮಂತ್ರ ಹಾಗೂ ಉಪನಿಷತ್ತು ಎಂದು ಎರಡುವಿಧ. ಉಪನಿಷತ್ ಭಾಗವು ಪರವಿದ್ಯೆಯಾಗುತ್ತದೆ, ಮಂತ್ರ ಭಾಗವು ಅಪರವಿದ್ಯೆಯಾಗುತ್ತದೆ. ಏಕೆಂದರೆ ಉಪನಿಷತ್ ಭಾಗವು ಶುದ್ಧಬ್ರಹ್ಮನನ್ನು ಪ್ರತಿಪಾದಿಸುವ ಮೂಲಕ ಮೋಕ್ಷಕಾರಣವಾಗಿದೆ. ಮಂತ್ರಭಾಗವು ಉಪಾಸನಾ, ಕರ್ಮ ಮೊದಲಾದವುಗಳನ್ನೆಲ್ಲಾ ಪ್ರತಿಪಾದನೆ ಮಾಡುವುದರಿಂದ ಮೋಕ್ಷಸಾಧನವಾಗಿಲ್ಲ ಎಂದು ಅದ್ವೈತಿಗಳ ಅಭಿಪ್ರಾಯ.

ಇದು ಸರಿಯಲ್ಲ. ಏಕೆಂದರೆ ಸಕಲ ಶ್ರುತಿಸ್ಮೃತಿಗಳಿಂದ ಮುಖ್ಯವಾಗಿ ಬ್ರಹ್ಮನೊಬ್ಬನೇ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಕೇವಲ ಉಪನಿಷತ್ ಭಾಗದಿಂದ ಪ್ರತಿಪಾದ್ಯನೆಂಬ ನಿರ್ಣಯ ತಪ್ಪಾಗುತ್ತದೆ. ವಿಚಾರ ಮಾಡಿದರೆ ಮಂತ್ರಭಾಗವು ಉಪಾಸನಾದಿಗಳನ್ನು ವಿವರಿಸುವಂತೆ ಉಪನಿಷತ್ತಿನಲ್ಲಿಯೂ ಅನೇಕ ಕಡೆ ಬ್ರಹ್ಮನವಿಚಾರವು ಇರದೆ ಉಪಾಸನಾದಿಗಳ ವಿಚಾರವೇ ಇರುವುದು ಕಾಣಿಸುತ್ತದೆ. ಇನ್ನು ಮಂತ್ರಭಾಗದಲ್ಲಿಯೂ ಅನೇಕಕಡೆ ಬ್ರಹ್ಮವಿಚಾರವು ಪ್ರಸಕ್ತವಾಗಿದೆ. ಆದ್ದರಿಂದ ಅದ್ವೈತಿಗಳ ಅಭಿಪ್ರಾಯ ಸರಿಯಲ್ಲ.

ಇನ್ನು ರಾಮಾನುಜರು ಪರೋಕ್ಷಜ್ಞಾನವನ್ನು ಅಪರವಿದ್ಯೆಯೆಂದೂ, ಭಕ್ತಿರೂಪವಾದ ಅಪರೋಕ್ಷಜ್ಞಾನವನ್ನು ಪರವಿದ್ಯೆಯೆಂದೂ ಹೇಳುತ್ತಾರೆ. ಇದೂ ಸಹ ತಪ್ಪು. ವಿದ್ಯಾಶಬ್ದಕ್ಕೆ ಜ್ಞಾನಕರಣವೆಂದರ್ಥ. ಏಕೆಂದರೆ 'ಯಯಾ ತದಕ್ಷರಮಧಿಗಮ್ಯತೇ' ಎಂಬ ಶ್ರುತಿಯಿಂದ ಇದು ಸ್ಪಷ್ಟವಾಗುತ್ತದೆ. ಮತ್ತು ವ್ಯಾಕರಣದ ಪ್ರಕಾರ 'ವಿದ್' ಧಾತುವಿಗೆ 'ಕ್ಯಪ್' ಪ್ರತ್ಯಯವು ಬಂದು ವಿದ್ಯಾ ಎಂಬ ರೂಪವು ನಿಷ್ಪನ್ನವಾಗಿದೆ. ಈ 'ಕ್ಯಪ್' ಪ್ರತ್ಯಯವು ಭಾವಾರ್ಥದಲ್ಲಿರುವಂತೆ ಕರಣ, ಅಧಿಕರಣ ಮೊದಲಾದ ಅರ್ಥಗಳಲ್ಲಿಯೂ ಬರುತ್ತದೆ. ಆದ್ದರಿಂದ ಜ್ಞಾನವೆಂಬರ್ಥವನ್ನು ಹೇಳುವಂತೆ ಜ್ಞಾನಕರಣವೆಂಬರ್ಥವನ್ನೂ ಸಹ ವಿದ್ಯಾಶಬ್ದಕ್ಕೆ ಹೇಳಬಹುದು. ಪ್ರಕೃತ ಜ್ಞಾನಕರಣವೆಂಬರ್ಥವನ್ನೇ ವಿವಕ್ಷಿಸಬೇಕು.

ಪೂರ್ವಪಕ್ಷ ಮಾಡುವಾಗ ಊರ್ಣನಾಭಿ ಮೊದಲಾದ ದೃಷ್ಟಾಂತಗಳನ್ನು ನೀಡಿ ಶ್ರುತಿಯಲ್ಲಿ ಉಪಾದಾನಕಾರಣತ್ವವೇ ಪ್ರಸಕ್ತವಾಗಿದೆಯೆಂದು ಹೇಳಿದ್ದರು ಇದೂ ಸಹ ತಪ್ಪು. ಊರ್ಣನಾಭಿ, ಪೃಥಿವೀ ಮೊದಲಾದವುಗಳೆಲ್ಲವೂ ನಿಮಿತ್ತಕಾರಣವೇ ಆಗಿವೆ ಹೊರತು, ಉಪಾದಾನಕಾರಣವಾಗಿರುವುದಿಲ್ಲವೆಂಬ ವಿಚಾರವನ್ನು ಪ್ರಕೃತ್ಯಧಿಕರಣದ ಅನುವ್ಯಾಖ್ಯಾನ ಸುಧಾದಿಗ್ರಂಥಗಳನ್ನು ಓದಿ ತಿಳಿದುಕೊಳ್ಳಬೇಕು. ಆದ್ದರಿಂದ ಶ್ರುತಿಯು ನಿಮಿತ್ತಕಾರಣವನ್ನೇ ಹೇಳುತ್ತಿದೆ. ಇದು ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಇದರ ಜೊತೆಗೆ ಸರ್ವಜ್ಞತ್ವ, ಪರವಿದ್ಯಾವಿಷಯತ್ವ ಮೊದಲಾದ ಲಿಂಗಗಳೆಲ್ಲವೂ ವಿಷ್ಣುವಿನದ್ದೇ ಆಗಿರುತ್ತವೆಂದು ತಿಳಿಯಬೇಕು.

ಪ್ರವೃತ್ತಕರ್ಮ ನಿವೃತ್ತಕರ್ಮದಂತೆ ಪರಾಪರವಿದ್ಯೆಗಳು

भावदीपः – यथैकमेव कर्माभिसन्धिभेदात् प्रवृत्तं निवृत्तमिति चोच्यते, तथेति भावः । एतेन ऋगाद्यपरविद्याविषये शास्त्रयोनौ हरौ न तद्विरुद्धपरविद्याविषयत्वमिति निरस्तम् ।

ಯಾವ ರೀತಿಯಾಗಿ ಒಂದೇ ಕರ್ಮವು ಬೇರೆ ಬೇರೆ ಅನುಸಂಧಾನದಿಂದ ಪ್ರವೃತ್ತಕರ್ಮ ಹಾಗೂ ನಿವೃತ್ತಕರ್ಮವೆಂದು ಪ್ರಭೇದವನ್ನು ತಾಳುತ್ತದೊ, ಅದೇ ರೀತಿಯಾಗಿ ಒಂದೇ ವಿದ್ಯೆ ಬೇರೆ ಬೇರೆ ಉಪಾದಿಗಳಿಂದ ಪ್ರಭೇದವನ್ನು ಹೊಂದಿದೆ ಎಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ಋಗ್ವೇದವೇ ಮೊದಲಾದ ಅಪರವಿದ್ಯೆಗೆ ವಿಷಯನಾದ ಶ್ರೀಹರಿಯಲ್ಲಿ ತದ್ವಿರುದ್ಧವಾದ ಪರವಿದ್ಯಾವಿಷಯತ್ವವು ಬರುವುದಿಲ್ಲವೆಂಬ ಆಕ್ಷೇಪವನ್ನು ನಿರಾಕರಿಸಿದಂತಾಯಿತು.

ಅಂಗಪ್ರತ್ಯಂಗಗಳ ಬಗ್ಗೆ

भावदीपः – भाष्ये यान्यङ्गानीति शिक्षादीनि षडङ्गान्युच्यन्ते । आयुर्वेदो धनुर्वेदो गान्धर्वः स्थापत्यं चोपाङ्गानि शिष्टा कला विद्याः प्रत्यङ्गानीति तत्त्वप्रदीपोक्तार्थः ।। २१ ।।

ಭಾಷ್ಯದಲ್ಲಿ 'ಅಂಗಾನಿ' ಎಂಬ ಪದದಿಂದ ಶಿಕ್ಷಾ, ವ್ಯಾಕರಣ ಮೊದಲಾದ ಷಡಂಗಗಳನ್ನು, ಆರ್ಯುವೇದ, ಧನುರ್ವೇದ, ಗಾಂಧರ್ವ, ಸ್ಥಾಪತ್ಯ ಮೊದಲಾದ ಉಪಾಂಗಗಳನ್ನು, ಉಳಿದ ಕಲೆ, ವಿದ್ಯೆ ಮೊದಲಾದ ಪ್ರತ್ಯಂಗಗಳನ್ನು ಸಂಗ್ರಹಿಸಿದ್ದಾರೆಂದು ತತ್ವಪ್ರದೀಪದಲ್ಲಿ ವ್ಯಾಖ್ಯಾನಿಸಿದ್ದಾರೆ.

ಬ್ರಹ್ಮಸೂತ್ರ

'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। विशेषणभेदव्यपदेशाभ्यां च नेतरौ ।। ।। २२ ।।

ಸೂತ್ರಾರ್ಥ -- ಬ್ರಹ್ಮರುದ್ರಾದಿಗಳಾಗಲೀ ಜಡಪ್ರಕೃತಿಯಾಗಲೀ ಅದೃಶ್ಯತ್ವಾದಿ ಗುಣವುಳ್ಳವರಾಗುವುದಿಲ್ಲ. ಏಕೆಂದರೆ ಸರ್ವಜ್ಞತ್ವ ಮೊದಲಾದ ವಿಶೇಷಣಗಳನ್ನು ಅಕ್ಷರಕ್ಕಿಂತ ಭೇದವನ್ನು ಹೇಳಿರುವುದರಿಂದ.

ಅರ್ಥ - ಚಶಬ್ದವು ಸಮುಚ್ಚಯಾರ್ಥದಲ್ಲಿದೆ. ಇತರೌ = ಬ್ರಹ್ಮ, ರುದ್ರರು ಅಥವಾ ಜಡಪ್ರಕೃತಿಯು, ನ = ಅದೃಶ್ಯತ್ವಾದಿಗುಣಗಳುಳ್ಳವರಲ್ಲ. ಏಕೆಂದರೆ ಚ = ಧರ್ಮಗಳನ್ನು ಹೇಳಿರುವುದರಿಂದ, ಮಾತ್ರವಲ್ಲ, ವಿಶೇಷಣಭೇದವ್ಯಪದೇಶಾಭ್ಯಾಮ್ = ಯಃ ಸರ್ವಜ್ಞಃ ಎಂದು ಸರ್ವಜ್ಞತ್ವ ಮೊದಲಾದ ವಿಶೇಷಣಗಳನ್ನು ಮತ್ತು 'ತಸ್ಮಾದೇತದ್ ಬ್ರಹ್ಮ' ಎಂಬುದಾಗಿ ಬ್ರಹ್ಮ, ರುದ್ರರನ್ನು ಅದೃಶ್ಯತ್ವಾದಿ ಗುಣವುಳ್ಳ ಅಕ್ಷರನಾಮಕ ಪರಮಾತ್ಮನಿಂದ ಭಿನ್ನರೆಂದು ಹೇಳಿರುವುದರಿಂದ.

ಬ್ರಹ್ಮಸೂತ್ರಭಾಷ್ಯ

ಸರ್ವಜ್ಞರಲ್ಲದ ಬ್ರಹ್ಮಾದಿಗಳು ಅದೃಶ್ಯರಲ್ಲ

ब्रह्मसूत्रभाष्यम् –

।। विशेषणभेदव्यपदेशाभ्यां च नेतरौ ।। 'यः सर्वज्ञः सर्ववित् यस्य ज्ञानमयं तपः' (मुं. १-१-९) इति विशेषणान्न प्रकृतिः । 'तस्मादेतद् ब्रह्म नाम रूपमन्नं च जायते'(मुं. १-१-९) इति भेदव्यपदेशान्न विरिञ्चः ।

ಅನುವಾದ - ಮಾಂಡೂಕ್ಯೋಪನಿಷತ್ತಿನಲ್ಲಿ 'ಯಾರು ಎಲ್ಲವನ್ನೂ ತಿಳಿದು ವಿಶೇಷಾಕಾರವಾಗಿಯೂ ತಿಳಿದಿದ್ದಾನೋ, ಯಾರ ಆಲೋಚನೆಯು ವಿಜ್ಞಾನಸ್ವರೂಪವಾಗಿದೆಯೋ' ಹೀಗೆ ಅದೃಶ್ಯಗುಣವುಳ್ಳವನಲ್ಲಿ ವಿಶೇಷಣಗಳನ್ನು ನೀಡಲಾಗಿದೆ. ಆದ್ದರಿಂದ ಲಕ್ಷ್ಮಿಯು ಅದೃಶ್ಯತ್ವಗುಣವನ್ನು ಹೊಂದಿರುವುದಿಲ್ಲ.

ಮತ್ತು 'ಅದೃಶ್ಯನಾದ ಅಕ್ಷರನಿಂದಲೇ ಚತುರ್ಮುಖಬ್ರಹ್ಮ ಮೊದಲಾದ ಹೆಸರುಗಳು ಹಾಗೂ ಚತುರ್ಮುಖ ಮೊದಲಾದ ರೂಪಗಳು, ಅನ್ನ ಮೊದಲಾದವುಗಳು ಮತ್ತು ಇವುಗಳ ಅಭಿಮಾನಿದೇವತೆಗಳು ಹುಟ್ಟುತ್ತಾರೋ' ಹೀಗೆ ಚತುರ್ಮುಖ ಬ್ರಹ್ಮದೇವರಿಂದ ಭೇದವನ್ನು ಹೇಳಿರುವ ಕಾರಣ ಚತುರ್ಮುಖಬ್ರಹ್ಮನು ಅದೃಶ್ಯನಾಗುವುದಿಲ್ಲ.

ಪ್ರತಿಪದಾರ್ಥ -- ಪ್ರಕೃತಿ ಹಾಗೂ ಚತುರ್ಮುಖ ಬ್ರಹ್ಮನು ಅದೃಶ್ಯತ್ವಧರ್ಮವನ್ನು ಹೊಂದಿರುವುದಿಲ್ಲವೆಂಬ ಸಿದ್ಧಾಂತವನ್ನೇ ಉಪೋದ್ಬಲಿಸಲು ಮತ್ತೊಂದು ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ಯಃ = ಯಾವಾತನು, ಸರ್ವಜ್ಞಃ = ಎಲ್ಲವನ್ನೂ ತಿಳಿದಿದ್ದಾನೋ, ಸರ್ವವಿತ್ = ಎಲ್ಲ ಪದಾರ್ಥವನ್ನೂ ವಿಶೇಷಾಕಾರವಾಗಿಯೂ ತಿಳಿದಿದ್ದಾನೋ, ಯಸ್ಯ = ಯಾರ ತಪಃ ಆಲೋಚನೆಯು, ಜ್ಞಾನಮಯಂ = ವಿಜ್ಞಾನಸ್ವರೂಪವಾಗಿದೆಯೋ, ಇತಿ = ಹೀಗೆ ವಿಶೇಷಣಾತ್ = ಅದೃಶ್ಯನಲ್ಲಿ ವಿಶೇಷಣವನ್ನು ಹೇಳಿದ್ದರಿಂದ, ಪ್ರಕೃತಿಃ = ಲಕ್ಷ್ಮಿಯು, ನ = ಅದೃಶ್ಯತ್ವಗುಣವನ್ನು ಹೊಂದಿರುವುದಿಲ್ಲ.

ಮತ್ತು ತಸ್ಮಾತ್ = ಅದೃಶ್ಯನಾದ ಅಕ್ಷರನಿಂದಲೇ, ಏತದ್‌ಬ್ರಹ್ಮ ನಾಮ = ಚತುರ್ಮುಖಬ್ರಹ್ಮನೆಂಬ ಹೆಸರು, ರೂಪಂ = ರೂಪಗಳು, ಅನ್ನಂ ಚ = ಆಹಾರಗಳೂ ಸಹ ಜಾಯತೇ ಹುಟ್ಟುತ್ತವೋ, ಇತಿ = ಹೀಗೆ, ಭೇದವ್ಯಪದೇಶಾತ್ = ಭೇದವನ್ನೇ ಹೇಳಿರುವುದರಿಂದ, ನ ವಿರಿಂಚಃ = ಚತುರ್ಮುಖನೂ ಸಹ ಅದೃಶ್ಯನಾಗುವುದಿಲ್ಲ.

ಅಕ್ಷರತತ್ವಗಳು ಮೂರು

ಬ್ರಹ್ಮಸೂತ್ರಭಾಷ್ಯಮ್ –

'अपरं त्वक्षरं या सा प्रकृतिर्जडरूपिका ।
श्रीः परा प्रकृतिः प्रोक्ता चेतना विष्णुसंश्रया ।।
तामक्षरं परं प्राहुः परतः परमक्षरम् ।
हरिमेवाखिलगुणमक्षरत्रयमीरितम् ।।'

इति स्कान्दे त्र्यक्षराभिधानादक्षरात् परतः पर इत्यपि विशेषणमेव ।

ಅನುವಾದ - ಜಡರೂಪವಾದ ಪ್ರಕೃತಿಯು 'ಅಪರ' ಅಕ್ಷರ ಎಂಬ ಶಬ್ದವಾಚ್ಯವಾಗಿದೆ. ಉತ್ತಮವಾದ ಪ್ರಕೃತಿಯು ಚೇತನರೂಪಿಯಾದ ಲಕ್ಷ್ಮೀದೇವಿಯಾಗಿದ್ದಾಳೆ. ಇವಳು ವಿಷ್ಣುವನ್ನು ಆಶ್ರಯಿಸಿದ್ದಾಳೆ. ಇವಳೇ ಶ್ರೀಶಬ್ದದಿಂದ ವಾಚ್ಯಳಾಗಿದ್ದಾಳೆ. ಇಂತಹ ಲಕ್ಷ್ಮೀದೇವಿಯನ್ನು 'ಪರ ಅಕ್ಷರ' ಎಂದು ಹೇಳುತ್ತಾರೆ. ಸಕಲಗುಣಪರಿಪೂರ್ಣನಾದ ವಿಷ್ಣುವನ್ನು ಅಕ್ಷರಕ್ಕಿಂತ ಉತ್ತಮೋತ್ತಮ ಎನ್ನುತ್ತಾರೆ. ಇವನು ಈ ರೀತಿಯಾಗಿ ಸ್ಕಾಂದಪುರಾಣದಲ್ಲಿ ಮೂರು ಬಗೆಯ ಅಕ್ಷರತತ್ವಗಳನ್ನು ಹೇಳಿರುವ ಕಾರಣ 'ಅಕ್ಷರಾತ್ ಪರತಃ ಪರಃ' 'ಪರತಃ ಪರ ಅಕ್ಷರ' ಎಂಬ ಮಾತು ವಿಷ್ಣುವಿಗೇ ವಿಶೇಷಣವಾಗುತ್ತದೆ.

ಪ್ರತಿಪದಾರ್ಥ -- ಅಥರ್ವಣೋಪನಿಷತ್ತಿನಲ್ಲಿ 'ಯಃ ಸರ್ವಜ್ಞಃ' ಎಂಬ ಹಿಂದಿನ ವಾಕ್ಯದಲ್ಲಿ ತಪಃಶಬ್ದವು ಕೇಳಿಸುತ್ತಿದೆ. ಆಲೋಚನಾರ್ಥದಲ್ಲಿರುವ ಈ ಶಬ್ದದಿಂದ ಅಜ್ಞಾನವೂ ಸಹ ಭಗವಂತನಲ್ಲಿದೆ ಎಂಬ ಭ್ರಾಂತಿಯು ಬರುತ್ತದೆ ಅದನ್ನು ಪರಿಹರಿಸುವುದಕ್ಕಾಗಿ ಮತ್ತೊಂದು ಶ್ರುತಿಯನ್ನು ಉದಾಹರಿಸುತ್ತಿದ್ದಾರೆ.

ಯಾ = ಯಾವ, ಪ್ರಕೃತಿಃ = ಜಡಪ್ರಕೃತಿಯಿದೆಯೋ, ಸಾ = ಅದು, ಅಪರಂ = ಅಪರ ಎಂಬ ಅಕ್ಷರಂ ಅಕ್ಷರಶಬ್ದವಾಚ್ಯವಾಗಿದೆ. ಪರ = ಉತ್ತಮವಾದ, ಪ್ರಕೃತಿಃ = ಪ್ರಕೃತಿಯೆಂದರೆ, ಚೇತನಾ = ಚಿದ್ರೂಪಳಾದವಳು, ವಿಷ್ಣುಸಂಶ್ರಯಾ = ವಿಷ್ಣುವನ್ನೇ ಆಶ್ರಯಿಸಿದವಳು, ಶ್ರೀ = ಶ್ರೀಶಬ್ದದಿಂದ ವಾಚ್ಯಳಾದವಳು ಹೀಗೆ, ಪ್ರೋಕ್ತಾ = ಹೇಳಲ್ಪಟ್ಟಿದೆ.

ಇವಳನ್ನು ಪರಂ ಅಕ್ಷರಂ = ಪರ ಅಕ್ಷರಾ ಎಂದೂ, ಪ್ರಾಹುಃ = ಹೇಳುತ್ತಾರೆ. ಪರತಃ = ಇಂತಹ ಲಕ್ಷ್ಮೀದೇವಿಗಿಂತಲೂ, ಪರಮಕ್ಷರಮ್ = ಉತ್ತಮನಾದ ಅಕ್ಷರನೆಂದು, ಅಖಿಲಗುಣಂ = ಸಕಲಗುಣಪರಿಪೂರ್ಣನಾದ, ಹರಿಮೇವ = ಪಾಪಪರಿಹಾರಕನಾದ ಪರಮಾತ್ಮನನ್ನೇ ಜ್ಞಾನಿಗಳು, ಪ್ರಾಹುಃ = ಹೇಳುತ್ತಾರೆ. ಹೀಗೆ ಅಕ್ಷರತ್ರಯಂ = ಮೂರು ಬಗೆಯ ಅಕ್ಷರಗಳನ್ನು, ಈರಿತಮ್ = ಹೇಳಲಾಗಿದೆ. ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ, ತ್ರ್ಯಕ್ಷರಾಭಿಧಾನಾತ್ = ಮೂರು ಬಗೆಯ ಅಕ್ಷರಗಳನ್ನು ಹೇಳಿರುವ ಕಾರಣ, ಅಕ್ಷರಾತ್ ಪರತಃ ಪರಃ = ಅಕ್ಷರ ಎಂಬ ಶಬ್ದವಾಚ್ಯಳಾದ ಲಕ್ಷ್ಮಿಗಿಂತಲೂ ಉತ್ತಮನು, ಇತ್ಯಪಿ = ಹೀಗೆಂಬ ವಾಕ್ಯದಲ್ಲಿ ಹೇಳಿದ ಅಕ್ಷರಾತ್ ಪರತಃ ಪರತ್ವವೂ ಸಹ, ವಿಶೇಷಣಮೇವ = ವಿಷ್ಣುವಿನಲ್ಲೇ ಇರುವಂತಹ ವಿಶೇಷಣಗಳಾಗಿವೆ.

ಈಶನೆಂದರೆ ರುದ್ರನಲ್ಲ

ಬ್ರಹ್ಮಸೂತ್ರಭಾಷ್ಯಮ್ –

'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ' (ಮುಂ.೩-೧-೨) ಇತಿ ಭೇದವ್ಯಪದೇಶಾದೀಶಪದಪ್ರಾಪ್ತೋऽಪಿ ನ ರುದ್ರಃ ।।೨೨।।

ಅನುವಾದ - 'ತಾನು ಆರಾಧನೆ ಮಾಡುವ, ಪ್ರಸಿದ್ಧನಾದ ರುದ್ರನಿಗಿಂತ ಬೇರೆಯಾದ ಭಗವಂತನನ್ನು ಹಿಂದೆ ಹೇಳಿದ ಅವನ ಮಹಿಮೆಯನ್ನು ಯಾವ ಜೀವನು ಸಾಕ್ಷಾತ್ಕರಿಸಿಕೊಳ್ಳುತ್ತಾನೋ ಅವನು ದುಃಖದಿಂದ ರಹಿತನಾಗುತ್ತಾನೆ'.

ಈ ರೀತಿಯಾಗಿ ಮುಂಡಕ ಉಪನಿಷತ್ತಿನಲ್ಲಿ ರುದ್ರದೇವರಿಂದ ಭೇದವನ್ನು ಅಕ್ಷರನಿಗೆ

ಹೇಳಿರುವ ಕಾರಣ ಈಶಪದದಿಂದ ಪ್ರಸಕ್ತನಾದವನೂ ಸಹ ವಿಷ್ಣುವೇ ಆಗುತ್ತಾನೆ; ರುದ್ರನಲ್ಲ.

ಪ್ರತಿಪದಾರ್ಥ -- 'ಅನ್ಯ' ಎಂಬ ಶಬ್ದವು ಕೇಳಿಸುತ್ತಿರುವುದರಿಂದ ರುದ್ರನೇಕೆ ಅದೃಶ್ಯತ್ವಗುಣವುಳ್ಳವನಾಗಬಾರದು ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಜುಷ್ಟಂ = ತಾನು ಆರಾಧಿಸುವ, ಅನ್ಯಮ್ ಈಶಂ = ರುದ್ರನಿಗಿಂತ ಭಿನ್ನನಾದ, ಅಸ್ಯ = ಹಿಂದೆ ಹೇಳಿದ ವಿಷ್ಣುವಿನ, ಮಹಿಮಾನಂ = ಮಹಿಮೆಯನ್ನು, ಯದಾ = ಯಾವಾಗ, ಪಶ್ಯತಿ = ಜೀವನು ಸಾಕ್ಷಾತ್ಕರಿಸಿಕೊಳ್ಳುತ್ತಾನೋ, ಇತಿ = ಆವಾಗ, ವೀತಶೋಕಃ = ದುಃಖರಹಿತನಾಗುತ್ತಾನೆ. ಇತಿ = ಹೀಗೆ, ಭೇದವ್ಯಪದೇಶಾತ್ = ರುದ್ರದೇವರ ದೆಸೆಯಿಂದ ಭೇದವನ್ನು ಹೇಳಿರುವ ಕಾರಣ, ಈಶಪದಪ್ರಾಪ್ತೋಪಿ = ಈಶಪದದಿಂದ ಪ್ರಸಕ್ತನಾದವನೂ ಸಹ, ನ ರುದ್ರಃ = ರುದ್ರನಾಗುವುದಿಲ್ಲ; ಹೊರತು ವಿಷ್ಣುವೇ ಆಗುತ್ತಾನೆ.

ತತ್ವಪ್ರದೀಪ

'ಯಃ ಸರ್ವಜ್ಞಃ ಸರ್ವವಿತ್' ಎಂಬ ಶ್ರುತಿಯ ವ್ಯಾಖ್ಯಾನ

तत्वप्रदीपः – ''विशेषणभेदव्यपदेशाभ्यां च नेतरौ'' – सर्वत्र विद्यत इति सर्ववित् । 'विद सत्तायाम्' इति धातोः । यस्य ज्ञानमयमालोचनं न संशयात्मकम् ।।छ।।

'ಯಃ ಸರ್ವಜ್ಞಃ ಸರ್ವವಿತ್' ಎಂಬ ಶ್ರುತಿಯಲ್ಲಿರುವ ಸರ್ವಜ್ಞಃ ಎಂಬ ಪದಕ್ಕೆ 'ಸರ್ವವಿತ್' ಎಂಬ ಪದದಿಂದ ಪುನರುಕ್ತಿ ಬರುತ್ತದೆಂದು ತಿಳಿಯಬಾರದು. 'ಸರ್ವಜ್ಞಃ' ಎಂಬ ಪದಕ್ಕೆ ಎಲ್ಲವನ್ನು ತಿಳಿದವನು ಎಂದರ್ಥ. 'ಸರ್ವವಿತ್' ಎಂಬ ಪದಕ್ಕೆ 'ಸರ್ವತ್ರ ಯುಜ್ಯತೇ ಇತಿ ಸರ್ವವಿತ್' ಎಂಬ ನಿಷ್ಪತ್ತಿಯಂತೆ ಎಲ್ಲಾ ಕಡೆ ನೆಲೆಸಿರುವವನು ಎಂದರ್ಥ. 'ವಿದ ಸತ್ತಾಯಾಮ್' ಎಂಬ ಧಾತುವನ್ನು ಇಲ್ಲಿ ವಿವಕ್ಷಿಸಬೇಕು. 'ಯಸ್ಯ ಜ್ಞಾನಮಯಂ' ಎಂಬುದಕ್ಕೆ

ಆಲೋಚನಾ ರೂಪವಾದ ಜ್ಞಾನವನ್ನು ವಿವಕ್ಷಿಸಬೇಕು. ಹೊರತು, ಸಂಶಯಾತ್ಮಕವಾದ ಜ್ಞಾನವನ್ನು ವಿವಕ್ಷಿಸಬಾರದು.

ವಿಶೇಷವಿಚಾರ - ಬ್ರಹ್ಮನ ಆಲೋಚನೆಯೂ ಕೂಡ ಜ್ಞಾನರೂಪವಾದದ್ದು. ಅವನು ಎಲ್ಲವನ್ನು ತಿಳಿದು ಎಲ್ಲೆಡೆ ವ್ಯಾಪ್ತನಾಗಿರುವನು. ಹೀಗೆ ಅಕ್ಷರತತ್ವವನ್ನು ವರ್ಣನೆ ಮಾಡಿರುವುದರಿಂದ ಪ್ರಕೃತಿತತ್ವವು ಅಕ್ಷರ ಎಂದು ಕರೆಸಿಕೊಳ್ಳಲು ಸಾಧ್ಯವಿಲ್ಲ. 'ತಪಸಾ ಚೀಯತೇ ಬ್ರಹ್ಮ' ಎಂಬ ಹಿಂದಿನ ವಾಕ್ಯದಲ್ಲಿ ಇವನ ತಪಸ್ಸು ಸಂಶಯರೂಪವಾದದ್ದಲ್ಲ, ಆಲೋಚನಾರೂಪವಾದದ್ದು. ಆಲೋಚನೆ ಎಂದರೆ ಸಂಶಯರೂಪವಾದದ್ದು ಎಂದು ವಿವಕ್ಷಿಸಬಾರದು. ಇದನ್ನು ತಿಳಿಸುವುದಕ್ಕಾಗಿಯೇ 'ಯಃ ಸರ್ವಜ್ಞಸರ್ವವಿತ್' ಎಂಬುದಾಗಿ ಭಾಷ್ಯಕಾರರು ಉಲ್ಲೇಖಿಸಿದ್ದಾರೆ.

'ಯಃ ಸರ್ವಜ್ಞಸರ್ವವಿತ್' ಎಂಬ ಶ್ರುತಿಯಲ್ಲಿ ಸರ್ವಜ್ಞಎಂಬ ಪದದ ಅರ್ಥವನ್ನೇ 'ಸರ್ವವಿತ್' ಎಂಬ ಪದವೂ ಕೂಡ ಹೇಳುತ್ತಿರುವುದರಿಂದ ಪುನರುಕ್ತಿ ಬರುತ್ತದೆಂಬ ಆಕ್ಷೇಪಕ್ಕೆ ಅನೇಕ ಬಗೆಯಲ್ಲಿ ಉತ್ತರವನ್ನು ತಿಳಿಯಬಹುದು. ಪಂಡಿತಾಚಾರ್ಯರು 'ಸರ್ವವಿತ್' ಎಂಬುದಕ್ಕೆ ಎಲ್ಲೆಡೆಯೂ ವ್ಯಾಪ್ತನಾಗಿರುವವನು ಎಂಬರ್ಥವನ್ನು 'ವಿದ ಸತ್ತಾಯಂ' ಎಂಬ ಧಾತುವಿನ ಆಧಾರದಲ್ಲಿ ಹೇಳಿದ್ದಾರೆ. 'ವಿದ ಜ್ಞಾನೇ' ಎಂಬ ಧಾತುವನ್ನು ವಿವಕ್ಷಿಸಿದಾಗ 'ಸರ್ವಜ್ಞ' ಎಂಬ ಪದಕ್ಕೆ ಸಾಮಾನ್ಯ ಜ್ಞಾನವುಳ್ಳವನು. 'ಸರ್ವವಿತ್' ಎಂಬ ಪದಕ್ಕೆ ವಿಶೇಷ ಜ್ಞಾನವುಳ್ಳವನು ಎಂಬರ್ಥವನ್ನು ತಿಳಿಯಬೇಕು. ವಿದ್ ಲೃಲಾಭೇ ಎಂಬ ಧಾತುವನ್ನು ವಿವಕ್ಷಿಸಿದಾಗ, ಎಲ್ಲವನ್ನೂ ಕೂಡ ಪಡೆದವನಾದ್ದರಿಂದ ಆಪ್ತಕಾಮನಾಗಿದ್ದಾನೆ ಎಂಬರ್ಥವನ್ನು ವಿವಕ್ಷಿಸಬೇಕು. ಹೀಗೆ ಅನೇಕ ಬಗೆಯಲ್ಲಿ ಅರ್ಥವ್ಯತ್ಯಾಸವನ್ನು ತಿಳಿಯಬಹುದು.

ಪರಮಾತ್ಮನು ಅಕ್ಷರಶಬ್ದವಾಚ್ಯನಾದರೆ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯು ಹೇಳುವಂತೆ ಇವನಿಗಿಂತ ಉತ್ತಮವಾದ ಮತ್ತೊಂದು ತತ್ವವನ್ನು ಒಪ್ಪಬೇಕಾಗುತ್ತದಲ್ಲವೇ? ಎಂಬ ಗೊಂದಲಕ್ಕೆ ಈಗ ಅವಕಾಶವಿಲ್ಲ. ಎಂಬುದನ್ನು ಶ್ರೀಮದಾಚಾರ್ಯರು ಸ್ಕಾಂಧ ಪುರಾಣದ ಆಧಾರದಿಂದ ಉತ್ತರಿಸಿದ್ದಾರೆ. ಜಡಪ್ರಕೃತಿ, ಲಕ್ಷ್ಮೀದೇವಿ, ಮಹಾವಿಷ್ಣು ಈ ಮೂರು ತತ್ವಗಳೂ ಕೂಡ ಅಕ್ಷರತತ್ವವೇ ಆಗಿವೆ. ಲಕ್ಷ್ಮೀದೇವಿಯು ಅಕ್ಷರವಾದ ಜಡಪ್ರಕೃತಿಗಿಂತ ಪರ. ಅವಳಿಗಿಂತ ಪರ ಎಂದರೆ ಮಹಾವಿಷ್ಣು. ಆದ್ದರಿಂದ ಅಕ್ಷರಾತ್ ಪರತಃ ಪರಃ ಇದು ಶ್ರುತಿಯ ಮುಖ್ಯವಾದ ಅಭಿಪ್ರಾಯ.

ತತ್ವಪ್ರಕಾಶಿಕಾ

ಪೂರ್ವಪಕ್ಷದ ನಿರಾಕರಣೆಗಾಗಿ ವಿಶೇಷಯುಕ್ತಿ

तत्वप्रकाशिका – ।। विशेषणभेदव्यपदेशाभ्यां च नेतरौ ।।

यदुक्तं प्रकृतिविरिञ्चयोरदृश्यत्वादिगुणकत्वमिति तदर्थान्निराकृतमपि विशेषयुक्त्या पराकुर्वत्सूत्रं पठित्वा, व्याचष्टे – विशेषणेति ।।

ಪ್ರಧಾನ, ಚತುರ್ಮುಖ ಬ್ರಹ್ಮ ಇವರಿಬ್ಬರೂ ಅದೃಶ್ಯತ್ವಾದಿಗುಣಗಳಿಂದ ಯುಕ್ತರಾಗಿದಾರೆಂಬ ಪೂರ್ವಪಕ್ಷವನ್ನು 'ಧರ್ಮೋಕ್ತೇಃ' ಎಂಬ ಯುಕ್ತಿಯಿದ ಈಗಾಗಲೇ ಅರ್ಥಾತ್ ನಿರಾಕರಣೆ ಮಾಡಿದಂತಾಗಿದೆ ಆದರೂ ಸಹ ವಿಶೇಷಯುಕ್ತಿಯಿಂದ, ಆ ಪೂರ್ವ ಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ ವಿಶೇಷಣ ಇತ್ಯಾದಿಯಾಗಿ.

ಬ್ರಹ್ಮನ ತಪಸ್ಸು ಜ್ಞಾನಸ್ವರೂಪವೆನ್ನಲು 'ಯಃ ಸರ್ವಜ್ಞ' ಎಂಬ ಶ್ರುತಿ

तत्वप्रकाशिका – 'तपसा चीयते ब्रह्म' इत्यत्राज्ञानप्रतीतौ तन्निरासाय 'यस्य ज्ञानमयं तपः' इत्युक्तार्थे हेतुतयाऽदृश्यत्वादिगुणकस्य सार्वज्ञ-विशेषणोक्तेर्नाचेतन प्रकृतेरदृश्यत्वादिगुणकत्वम् ।

ತಪಸಾ ಜೀಯತೇ ಬ್ರಹ್ಮ - ಬ್ರಹ್ಮನು ತಪಸ್ಸನ್ನು ಆಚರಿಸುತ್ತಾನೆ ಎಂಬ ವಾಕ್ಯವನ್ನು ಕೇಳಿದಾಗ ಬ್ರಹ್ಮನಲ್ಲಿ ಅಜ್ಞಾನ ಇದೆ ಎಂದು ತಿಳಿಯುತ್ತದೆ. ಆದನ್ನು ನಿರಾಕರಣೆ ಮಾಡುವುದಕ್ಕಾಗಿ 'ಯಸ್ಯ ಜ್ಞಾನಮಯಂ ಮಯಂ ತಪಃ' ಯಾರ ತಪಸ್ಸು ಜ್ಞಾನಸ್ವರೂಪವಾಗಿದೆಯೋ ಎಂಬುದಾಗಿ 'ತಪಃ' ಎಂಬ ಶಬ್ದದ ಅರ್ಥವನ್ನು ಸ್ಪಷ್ಟ ಪಡಿಸಲಾಗಿದೆ. ಅಂದರೆ ಬ್ರಹ್ಮನ ತಪಸ್ಸು ಜ್ಞಾನಸ್ವರೂಪವಾಗಿದೆ ಎಂಬುದನ್ನು ತಿಳಿಸಲು ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಿಗೆ 'ಯಃ ಸರ್ವಜ್ಞಃ ಸರ್ವವಿತ್' ಎಂಬಲ್ಲಿ ಸರ್ವಜ್ಞತ್ವವೆಂಬ ವಿಶೇಷಣವನ್ನು ಹೇಳಲಾಗಿದೆ. ಆದ್ದರಿಂದ ಅಚೇತನ ಪ್ರಕೃತಿಗೆ ಅದೃಶ್ಯತ್ವಾದಿ ಗುಣಗಳನ್ನು ಹೇಳಲು ಸಾಧ್ಯವಿಲ್ಲ.

ಅದೃಶ್ಯತ್ವಾದಿಗುಣಗಳುಳ್ಳವನು ಚತುರ್ಮುಖನಲ್ಲ

तत्वप्रकाशिका – तस्मादक्षरादेतद् ब्रह्म चतुर्मुखाख्यं जायत इति विरिञ्चस्य तज्जन्यतया तस्माद्भेव्यपदेशान्नासावप्यदृश्यत्वादिगुणक इत्यर्थः ।

ಮತ್ತು ಅಕ್ಷರನಿಂದ ಚತುರ್ಮುಖನು ಹುಟ್ಟಿದನು, ಎಂದು ಶ್ರುತಿಯು ಹೇಳುತ್ತಿರುವುದರಿಂದ ಚತುರ್ಮುಖನು ಅಕ್ಷರತತ್ವಕ್ಕಿಂತ ಭಿನ್ನನೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಅದೃಶ್ಯತ್ವಾದಿ-ಗುಣಗಳುಳ್ಳವನು ಚತುರ್ಮುಖಬ್ರಹ್ಮನಾಗುವುದಿಲ್ಲ ಎಂದು ಅಭಿಪ್ರಾಯ.

ಜ್ಞಾನ ಹಾಗೂ ವೇದನ ಪದಗಳ ವ್ಯಾಖ್ಯಾನ

तत्वप्रकाशिका – ज्ञानवेदनयोः सामान्यविशेषतयाऽर्थान्तरत्वम् । 'विद्लृ लाभे' विदोत्पत्तावित्यतो वा ।

ಇಲ್ಲಿರುವ ಜ್ಞಾನ ಎಂಬ ಶಬ್ದಕ್ಕೆ ಸಾಮಾನ್ಯಜ್ಞಾನವೆಂದೂ, ವೇದನ ಎಂದರೆ ವಿಶೇಷಜ್ಞಾನವೆಂದೂ ತಿಳಿಯಬೇಕು. ಅಥವಾ 'ವಿದ್‌ಲೃ ಲಾಭೇ' ಎಂಬ ಧಾತುವಿನಂತೆ 'ಲಾಭ' ಎಂಬ ಅರ್ಥವನ್ನು ವಿದೋತ್ಪತ್ತೌ ಎಂಬ ಧಾತುವಿನಂತೆ ಉತ್ಪತ್ತಿ ಎಂಬ ಅರ್ಥವನ್ನೂ ಸಹ ತಿಳಿಯಬಹುದು. ಅಂದರೆ ಸಕಲ ವಸ್ತುಗಳೂ ಯಾವ ವಿಷ್ಣುವಿಗೆ ಲಾಭವಾಗುತ್ತದೋ ಅಥವಾ ಸಕಲವಸ್ತುಗಳನ್ನೂ ಯಾರು ಸೃಷ್ಟಿ ಮಾಡುತ್ತಾನೋ ಎಂಬ ಎರಡು ಅರ್ಥಗಳನ್ನು ಹೇಳಿದಂತಾಗುತ್ತದೆ.

ಅಕ್ಷರಶಬ್ದವು ಇತರರಲ್ಲಿ ನಿರವಕಾಶವಲ್ಲವೇ ?

तत्वप्रकाशिका – न विष्णोरदृश्यत्वादिगुणकत्वम् । परतःपराभिधानेन अक्षरशब्दस्य विष्णौ निरवकाणत्वादित्यतः सूत्रखण्डस्यार्थान्तरमाह – अपरमिति ।।

ವಿಷ್ಣುವಿಗೆ ಅದೃಶ್ಯತ್ವಾದಿಗುಣಗಳನ್ನು ಹೇಳಲಾಗದು ಏಕೆಂದರೆ ಅಕ್ಷರಕಿಂತ ಶ್ರೇಷ್ಠವಾದ ವಸ್ತು ಬೇರೆ ಇರುತ್ತದೆ ಎಂದು ಶ್ರುತಿಯು ಹೇಳುತ್ತಿದೆ. ಅಕ್ಷರಶಬ್ದವು ನಿರವಕಾಶವಾದ ಪ್ರಯುಕ್ತ ಅದಕ್ಕೆ ವಿಷ್ಣು ಎಂಬ ಅರ್ಥವನ್ನು ಹೇಳಲು ಸಾಧ್ಯವಿಲ್ಲವಲ್ಲಾ ಈ ಆಶಂಕೆಗೆ ಉತ್ತರಿಸಲು 'ಅಪರಮ್' ಇತ್ಯಾದಿಯಾಗಿ ಹೇಳಿದ್ದಾರೆ.

'ಅಕ್ಷರಾತ್ ಪರತಃ ಪರಃ' ಎಂಬಲ್ಲಿ ಅವಧಿಯನ್ನು ಹೇಳಿಲ್ಲ

तत्वप्रकाशिका – भवेदक्षरश्रुतेर्विष्णाववकाशाभावो यदि 'अक्षरात्परतः परः' इत्यत्र प्रकृताक्षरमवधीकृत्य कस्याचित्परत्वमुच्यत । न एतदस्ति ।

'ಅಕ್ಷರಾತ್ ಪರತಃ ಪರಃ' ಎಂಬಲ್ಲಿ ಯಾವ ಅಕ್ಷರವು ಪ್ರಕೃತವಾಗಿದೆಯೋ ಅದನ್ನೇ ಅವಧಿಯನ್ನಾಗಿಸಿ ಮತ್ತೊಬ್ಬರಿಗೆ ಪರತ್ವವನ್ನು ಹೇಳಿದಪಕ್ಷದಲ್ಲಿ ಅಕ್ಷರ ಶ್ರುತಿಗೆ ವಿಷ್ಣುವಿನಲ್ಲಿ ಅವಕಾಶವಿರುತ್ತಿರಲಿಲ್ಲ. ಆದರೆ ಹಾಗೆ ಹೇಳುತ್ತಿಲ್ಲ.

ಅಕ್ಷರಪದದಿಂದ ಪ್ರತಿಪಾದ್ಯವಾದ ತತ್ವಗಳು ಮೂರು

तत्वप्रकाशिका – किन्तु प्रकृताक्षरस्यैव अक्षरात्परतःपरत्वविशेषण-मुच्यते । न चाक्षरस्याक्षरात्परतःपरत्वं विरुद्धमिति वाच्यम् । त्र्यक्षराभिधानादक्षरा-न्तरादस्याक्षरस्य परत्वोपपत्तेरिति भावः ।

ಹೊರತಾಗಿ, ಯಾವ ಜಗತ್ತಿಗೆ ಕಾರಣವಾದ ಅಕ್ಷರವಿದೆಯೋ ಅಂತಹ ವಸ್ತುವಿನಲ್ಲೇ 'ಅಕ್ಷರಾತ್ ಪರತಃ ಪರಃ' ಪರತ್ವವನ್ನು ಹೇಳಲಾಗಿದೆ. ಅಕ್ಷರ ಪದಾರ್ಥವು ಒಂದೇ ಆಗಿರುವಾಗ ಅಕ್ಷರನಿಗಿಂತ ಪರತ್ವವನ್ನು ಅದೇ ವಸ್ತುವಿನಲ್ಲಿ ಹೇಳುವುದು ವಿರುದ್ಧವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಅಕ್ಷರಶಬ್ದದಿಂದ ಪ್ರತಿಪಾದ್ಯವಾದ ಪದಾರ್ಥಗಳು ಒಟ್ಟು ಮೂರು ಇರುತ್ತವೆ ಆದ್ದರಿಂದ ವಿಷ್ಣುವಿಗಿಂತ ಭಿನ್ನವಾದ ಯಾವ ಅಕ್ಷರ ಶಬ್ದ ಪ್ರತಿಪಾದ್ಯ ವಸ್ತುವಿದೆಯೋ ಅದಕ್ಕಿಂತ ಉತ್ತಮತ್ವವನ್ನು ವಿಷ್ಣುವಿಗೆ ಹೇಳಬಹುದು. ಹೀಗೆ ಶ್ರುತಿಯ ಅಭಿಪ್ರಾಯವಿರುವುದರಿಂದ ವಿರೋಧವಿಲ್ಲವೆಂದು ತಿಳಿಯಬೇಕು.

ಈಶನು ರುದ್ರನಲ್ಲದ ಕಾರಣ ಅದೃಶ್ಯನಾಗಲಾರ

तत्वप्रकाशिका – ईशशब्दात् अदृश्यत्वादिगुणको रुद्र इत्यस्योत्तरतयाऽपि सूत्रशेषं व्याचष्टे – जुष्टमिति ।।

'ಕರ್ತಾರಮೀಶಂ' ಎಂಬಲ್ಲಿ ಈಶಶಬ್ದವು ಕೇಳಿಸುತ್ತಿರುವುದರಿಂದ ರುದ್ರನನ್ನು ಸ್ವೀಕರಿಸ-ಬೇಕಲ್ಲವೇ? ಎಂಬ ಪೂರ್ವಪಕ್ಷಕ್ಕೆ ಉತ್ತರಿಸಲು ಭಾಷ್ಯಕಾರರು ಸೂತ್ರದಲ್ಲಿರುವ 'ಭೇದವ್ಯಪದೇಶಾತ್' ಎಂಬ ಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಜುಷ್ಟಮ್'' ಇತ್ಯಾದಿಯಾಗಿ.

ರುದ್ರನು ಪರಮಾತ್ಮನಿಗಿಂತ ಭಿನ್ನನು

तत्वप्रकाशिका – अस्याक्षरस्यान्यमीशमिति प्रसिद्धेशाद्रुद्राद्भेदव्यपदेशान्न रुद्रोऽदृश्यत्वादिगुणक इत्यर्थः ।

ಅಕ್ಷರ ಎಂಬ ಪರಮಾತ್ಮನಿಗೆ ''ಅನ್ಯಮೀಶಂ'' ಎಂಬುದಾಗಿ ಈಶಶಬ್ದವಾಚ್ಯತ್ವವನ್ನು ಹೇಳಲಾಗಿದೆ. ಆದ್ದರಿಂದ ಪರಮಾತ್ಮನೇ ಮುಖ್ಯವಾಗಿ ಈಶಶಬ್ದದಿಂದ ವಾಚ್ಯನಾಗುತ್ತಾನೆ. ಪ್ರಸಿದ್ಧನಾದ ರುದ್ರನಿಗಿಂತ ಪರಮಾತ್ಮನಿಗೆ ಭೇದವನ್ನು ಹೇಳಿರುವುದರಿಂದ ರುದ್ರನು ಅದೃಶ್ಯತ್ವಾದಿ ಗುಣವುಳ್ಳವನಾಗುವುದಿಲ್ಲ.

ಬ್ರಹ್ಮ, ಅಕ್ಷರ ಈಶ ಶಬ್ದಗಳ ಮುಖ್ಯಾರ್ಥ ಮಹಾವಿಷ್ಣುವೇ

तत्वप्रकाशिका – यदपि पृथिव्यादिदृष्टान्तेन जगत्कारणत्ववचनं तत्कारणत्वमात्रतात्पर्यम् । ब्रह्माक्षरेशशब्दास्तु विष्णावेव मुख्याः । बाधकाभावस्योक्तत्वात् ।। २२ ।।

ಇನ್ನು ಪೃಥಿವ್ಯಾದಿ ದೃಷ್ಟಾಂತದಿಂದ ಜಗತ್ಕಾರಣತ್ವದ ಮಾತೂ ಸಹ ಕೇವಲ ಕಾರಣತ್ವದಲ್ಲಷ್ಟೇ ತಾತ್ಪರ್ಯವನ್ನು ಹೊಂದಿದೆ. ಬ್ರಹ್ಮ, ಅಕ್ಷರ, ಈಶಶಬ್ದಗಳು ವಿಷ್ಣುವಿನಲ್ಲೇ ಮುಖ್ಯವಾಗಿವೆ. ಈ ವಿಷಯದಲ್ಲಿ ಯಾವುದೇ ಬಾಧಕವಿಲ್ಲವೆಂಬುದನ್ನು ಮುಂದೆ ಸ್ಪಷ್ಟ ಪಡಿಸುತ್ತೇವೆ.

ಭಾವದೀಪ

'ವಿಶೇಷಣಭೇದವ್ಯಪದೇಶಾಭ್ಯಾಂ ಚ' ಎಂಬಲ್ಲಿರುವ 'ಚ'ಶಬ್ದದ ವ್ಯಾಖ್ಯಾನ

ಭಾವದೀಪಃ – विशेषणभेदव्यपदेशाभ्यां च नेतरौ ।।

ननु पूर्वं कयापि युक्त्या प्रकृत्यादेरनिरासाद् विशेषणभेदव्यपदेशाभ्यां चेति कथं चशब्द इत्यत आह – तदर्थादिति ।।

॥ ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ॥

ಹಿಂದಿನ ಸೂತ್ರದಲ್ಲಿ ಪ್ರಕೃತಿ ಹಾಗೂ ಚತುರ್ಮುಖಬ್ರಹ್ಮದೇವರನ್ನು ಅದೃಶ್ಯತ್ವಾದಿ-ಗುಣಗಳುಳ್ಳವರಲ್ಲವೆಂದು ಯಾವುದೇ ಯುಕ್ತಿಗಳಿಂದಲೂ ಸಹ ನಿರಾಕರಿಸಿಲ್ಲ. ಹೀಗಿರುವಾಗ ''ವಿಶೇಷಣಭೇದವ್ಯಪದೇಶಾಭ್ಯಾಂ ಚ'' ಎಂಬಲ್ಲಿ ''ಚ'' ಎಂಬ ಶಬ್ದವನ್ನು ಏಕೆ ಹೇಳಿದ್ದಾರೆ? ಎಂಬ ಪ್ರಶ್ನೆಗೆ ''ತದರ್ಥಾತ್'' ಎಂಬ ಪದದಿಂದ ಉತ್ತರಿಸಿದ್ದಾರೆ.

ಸ್ವಪಕ್ಷಸಾಧನೆಗೆ ಹೇತು

ಭಾವದೀಪಃ – धर्मोक्तेरिति हेतोः स्वपक्षसाधन इव विष्णुरेवेत्यवधारण-व्यावर्त्य पूर्वपक्षकोटिनिरासेऽपि व्यापारादिति भावः ।

ಮುಂದಿನ ಸೂತ್ರದಲ್ಲಿ ''ಧರ್ಮೋಕ್ತೇಃ'' ಎಂಬ ಹೇತುವಿನಿಂದ ವಿಷ್ಣು ಒಬ್ಬನೇ ಅದೃಶ್ಯತ್ವಾದಿ ಗುಣಗಳುಳ್ಳವನಾಗಿದ್ದಾನೆಂಬ ಸ್ವಪಕ್ಷಸಾಧನೆಯಲ್ಲಿ ಹೇತುವನ್ನು ಹೇಳಿದ್ದಾರೆ. ಈ ಅವಧಾರಣೆಯಿಂದ ಪೂರ್ವಪಕ್ಷಕೋಟಿಯನ್ನೂ ಸಹ ಅರ್ಥಾತ್ ನಿರಾಕರಿಸಿದಂತಾಗುತ್ತದೆ.

ಕರ್ಮನಿರ್ಣಯದಲ್ಲಿ ಶ್ರುತಿಯ ವ್ಯಾಖ್ಯಾನ

ಭಾವದೀಪಃ – तपसेति ।। चीयते सम्बद्ध्यते ब्रह्म परं ब्रह्मेत्यर्थः । ज्ञानमयं ज्ञानात्मकं न त्वालोचनात्मकमित्युक्तार्थ इत्यर्थः । विवृतमेतत् कर्मनिर्णयटीकायाम् । सर्वज्ञत्वात् सर्ववित्छब्दितापकामत्वाद्यस्य तपो

ज्ञानस्वरूपं न त्वालोचनात्मकं सन्तापात्मकं वा । अज्ञो ह्यालोचयति । अनाप्तकामस्तपस्यति । 'स तपस्तप्त्वा । इदं सर्वमसृजत' इत्यस्य व्याख्यानमेतदिति वा ।

''ಚೀಯತೇ'' ಎಂಬ ಶಬ್ದಕ್ಕೆ ಸಂಬಂಧವನ್ನು ಹೊಂದಲಾಗುತ್ತದೆ ಎಂದರ್ಥ. ''ಬ್ರಹ್ಮ'' ಎಂಬ ಶಬ್ದಕ್ಕೆ ಪರಬ್ರಹ್ಮನ ವಿಷಯದಲ್ಲಿ ಎಂದರ್ಥ. ''ಜ್ಞಾನಮಯಂ'' ಎಂಬುದು ಜ್ಞಾನಸ್ವರೂಪವೇ ಹೊರತು ಆಲೋಚನಾತ್ಮಕವಲ್ಲ. ಇದನ್ನು ಕರ್ಮನಿರ್ಣಯ ಟೀಕೆಯಲ್ಲಿ ವಿವರಿಸಿದ್ದಾರೆ. ಸರ್ವಜ್ಞನಾಗಿರುವುದರಿಂದ ''ಸರ್ವವಿತ್'' ಶಬ್ದಪ್ರತಿಪಾದ್ಯವಾದ ಆಪ್ತಕಾಮತ್ವವಿರುವುದರಿಂದ ಯಾರ ತಪಸ್ಸು ಜ್ಞಾನಸ್ವರೂಪವಾಗಿದೆಯೋ ಹೊರತು ಆಲೋಚನಸ್ವರೂಪವಾಗಿಲ್ಲವೋ ಅಥವಾ ಸಂತಾಪಸ್ವರೂಪವೂ ಆಗಿಲ್ಲವೋ ಅಂತಹ ತಪಸ್ಸನ್ನು ವಿವಕ್ಷಿಸಬೇಕು. ಅಜ್ಞಾನಿಯಾದವನಷ್ಟೇ ಆಲೋಚಿಸುತ್ತಾನೆ ಅನಾಪ್ತಕಾಮನೇ ತಪಸ್ಸನ್ನು ಆಚರಿಸುತ್ತಾನೆ. ಇದು ''ಸ ತಪಸ್ತಪ್ತ್ವಾ ಇದಂ ಸರ್ವಮಸೃಜತ್'' ಎಂಬುದರ ವ್ಯಾಖ್ಯಾನವಾಗಿದೆ.

ಚಿತ್‌ಪ್ರಕೃತಿಯನ್ನು ಅಕ್ಷರವೆನ್ನಬಹುದೇ ?

भावदीपः – नाचेतनेति ।। चित्प्रकृतिनिषेधस्तु नानेन सम्भवति । तस्या अत्रोक्ताक्षरत्वे विश्वकर्तृत्वप्राप्त्या सार्वज्ञस्यापि शक्यशङ्कत्वात् । श्रुतेः सङ्कुचितसार्वज्ञपरत्वसम्भवाच्च जडप्रकृतिमात्रनिषेधे हेतुरयमिति भावः ।

ಅಚೇತನಪ್ರಕೃತಿಯನ್ನಷ್ಟೇ ನಿಷೇಧ ಮಾಡಬಹುದು ಹೊರತು ಚಿತ್ಪ್ರಕೃತಿಯನ್ನಲ್ಲ. ಏಕೆಂದರೆ ಚಿತ್ಪ್ರಕೃತಿಯನ್ನು ಅಕ್ಷರವೆಂದು ಪರಿಗಣಿಸಿದರೆ ವಿಶ್ವಕರ್ತೃತ್ವವನ್ನೂ ಸಹ ಹೇಳಿದಂತಾಗುತ್ತದೆ ಅದರಲ್ಲಿ ಸರ್ವಜ್ಞತ್ವವನ್ನು ಶಂಕಿಸಬಹುದು. ಶ್ರುತಿಯು ಹೇಳುವ ಸಾರ್ವಜ್ಞ್ಯವನ್ನು ಸಂಕೋಚ ಮಾಡಬಹುದಾದ್ದರಿಂದ ಜಡಪ್ರಕೃತಿಯನ್ನಷ್ಟೇ ನಿಷೇಧ ಮಾಡಲು ಇದು ಹೇತುವಾಗಿದೆ ಎಂದು ತಿಳಿಯಬೇಕು.

ಚತುರ್ಮುಖನನ್ನು ಅಕ್ಷರನೆನ್ನಬಹುದೇ ?

भावदीपः –'एतद्ब्रह्म चतुर्मुखः' इति तद्भाष्यादिशाऽर्थमाह – **तस्मादिति।।**

चतुर्मुखाख्यमिति नागरूपान्नाभिमानीति योज्यम् । पूर्ववाक्ये 'तपसा चीयते ब्रह्म' इति ब्रह्मपदेन परब्रह्मोक्तावप्यत्र जायत इत्युक्तबाधकादन्योक्तिर्युक्तेति भावः ।

''ಏತದ್ಬ್ರಹ್ಮ'' ಎಂದರೆ ಚತುರ್ಮುಖನೇ ಆಗಿದ್ದಾನೆಂದು ಭಾಷ್ಯದ ಪ್ರಕಾರ ಅರ್ಥವನ್ನು ''ತಸ್ಮಾತ್'' ಇತ್ಯಾದಿಯಾಗಿ ಹೇಳಿದ್ದಾರೆ. ಚತುರ್ಮುಖನೆಂಬ ಬ್ರಹ್ಮನು ನಾಮ, ರೂಪ ಮತ್ತು ಅನ್ನಗಳಿಗೆ ಅಭಿಮಾನಿಯಾಗಿದ್ದಾನೆ. ಇವನು ಅಕ್ಷರನಿಂದ ಹುಟ್ಟಿದಕಾರಣ ಅಕ್ಷರನನ್ನೇ ಚತುರ್ಮುಖಬ್ರಹ್ಮನೆಂದು ವಿವಕ್ಷಿಸಲು ಸಾಧ್ಯವಿಲ್ಲ. ಹಿಂದಿನ ವಾಕ್ಯದಲ್ಲಿ ''ತಪಸಾ ಚೀಯತೇ ಬ್ರಹ್ಮ'' ಎಂಬಲ್ಲಿರುವ ಬ್ರಹ್ಮಪದದಿಂದ ಮಹಾವಿಷ್ಣುವು ಪ್ರತಿಪಾದ್ಯನಾದರೂ ಪ್ರಕೃತ ''ಜಾಯತೇ'' ಎಂಬ ಬಾಧಕದಿಂದ ಮಹಾವಿಷ್ಣುವನ್ನು ಬಿಟ್ಟು ಬೇರೆಯವನು ಪ್ರತಿಪಾದ್ಯನಾಗುತ್ತಾನೆಂದು ಹೇಳುವುದು ತಪ್ಪಲ್ಲವೆಂದು ತಿಳಿಯಬೇಕು.

ಗೀತಾಭಾಷ್ಯದಿಂದ ವಿರೋಧ ಪರಿಹಾರ

भावदीपः – तथाच न ह्येकशब्देन द्विरुक्तेन भेदश्रुतिं विना वस्तुद्वय क्वचिदुच्यत इति तार्तीयगीताभाष्यस्थवाक्याविरोध इति ध्येयम् ।

ಆದ್ದರಿಂದ ಒಂದೇ ಶಬ್ದವನ್ನು ಎರಡುಬಾರಿ ಹೇಳಿದಾಗ ಭೇದಶ್ರುತಿ ಇಲ್ಲದಿದ್ದರೆ ಎರಡು ವಸ್ತುಗಳು ಎಲ್ಲಿಯೂ ಸಹ ಪ್ರತಿಪಾದ್ಯವಾಗುವುದಿಲ್ಲ ಎಂಬ ಮೂರನೇ ಅಧ್ಯಾಯದ ಗೀತಾಭಾಷ್ಯದಲ್ಲಿರುವ ವಾಕ್ಯದಿಂದಲೂ ಸಹ ವಿರೋಧವನ್ನು ಪರಿಹರಿಸಿದಂತಾಯಿತು.

'ಸರ್ವವಿತ್' ಪದದ ವ್ಯಾಖ್ಯಾನ

भावदीपः – विद्लृ लाभ इति ।। सर्वं विन्दत इति वा, सर्वं वेदयति उत्पादयतीति वा सर्ववित् । आप्तकामः सर्वोत्पादको वेत्यर्थः ।

''ಸರ್ವಂ ವಿಂದತೇ'' ಅಥವಾ ''ಸರ್ವಂ ವೇದಯತಿ'' = ಉತ್ಪಾದಯತಿ ಎಲ್ಲವನ್ನು ತಿಳಿದಿದ್ದಾನೆ ಮತ್ತು ಎಲ್ಲವನ್ನೂ ಹುಟ್ಟಿಸುತ್ತಾನೆ ಎಂದು ''ಸರ್ವವಿತ್'' ಶಬ್ದವು ನಿಷ್ಪನ್ನವಾಗಿದೆ ಎಂದು ತಿಳಿಯಬೇಕು. ಅಥವಾ ಆಪ್ತಕಾಮನಾದವನು ಎಲ್ಲದಕ್ಕೂ ಉತ್ಪಾದಕನಾಗಿದ್ದಾನೆಂದೂ ಸಹ ತಿಳಿಯಬಹುದು.

ವಿಶೇಷ ವಿಚಾರ – ಹಿಂದೆ ಪೂರ್ವಪಕ್ಷ ಮಾಡುವಾಗ ಶ್ರುತಿಯಲ್ಲಿರುವ ಸರ್ವಜ್ಞಪದವು ರುದ್ರನೆಂಬ ವಿಶೇಷ್ಯಪದಾರ್ಥವನ್ನು ಹೇಳುತ್ತಿದೆ ಹೊರತು, ವಿಶೇಷಣವಾಚಕವಾಗಿಲ್ಲವೆಂದು ಹೇಳಲಾಗಿತ್ತು. ಇದು ತಪ್ಪು. ಒಂದು ವೇಳೆ ಸರ್ವಜ್ಞಪದವು ರುದ್ರನೆಂಬ ವಿಶೇಷ್ಯನನ್ನು ಹೇಳುವುದಾದರೆ ಮುಂದೆ ಆದೇ ಶ್ರುತಿಯಲ್ಲಿ ಸರ್ವಜ್ಞನಿಂದ ಚತುರ್ಮುಖನು ಹುಟ್ಟಿದನೆಂದು ಹೇಳಲಾಗಿದೆ. ರುದ್ರನು ಚತುರ್ಮುಖನಿಂದ ಹುಟ್ಟಿದ್ದಾನೆ ಹೊರತು, ಚತುರ್ಮುಖನಿಗೆ ಜನಕನಾಗಿಲ್ಲ. ಆದ್ದರಿಂದ ಸರ್ವಜ್ಞಪದವು ರುದ್ರನನ್ನು ಹೇಳುವುದಿಲ್ಲ ಹೊರತಾಗಿ, ಹಿಂದೆ ಪ್ರಕೃತವಾಗಿರುವ ಅಕ್ಷರನಲ್ಲಿ ಸರ್ವಜ್ಞತ್ವವನ್ನು ವಿಶೇಷಣವನ್ನಾಗಿ ಹೇಳುತ್ತಿದೆ.

ಆದ್ದರಿಂದಲೇ 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬ ಸೂತ್ರದಲ್ಲಿ 'ವಿಶೇಷಣ' ಎಂಬ ಪದವನ್ನು ಸೂತ್ರಕಾರರು ಬಳಸಿದ್ದಾರೆ. ಸರ್ವಜ್ಞಪದವು ವಿಶೇಷ್ಯವಾಚಕವಾಗಿಲ್ಲ ಹೊರತು, ವಿಶೇಷಣವಾಚಕವೇ ಆಗಿದೆ ಎಂಬುದು ಇದರ ಆಂತರ್ಯ.

ಮತ್ತು ಹಿಂದೆ ಪೂರ್ವಪಕ್ಷ ಮಾಡುವಾಗ ಸರ್ವಜ್ಞಪದವು ವಿಶೇಷಣವಾಚಕವಾದಲ್ಲಿ 'ಸರ್ವವಿತ್' ಎಂಬ ಮುಂದಿನ ಪದದಿಂದ ಪುನರುಕ್ತಿ ಬರುತ್ತದೆಂದು ಆಕ್ಷೇಪಿಸಿದ್ದರು. ಈ ಪುನರುಕ್ತಿ ದೋಷವನ್ನು ಟೀಕೆಯಲ್ಲಿಯೇ ಮೂರು ಪ್ರಕಾರದಲ್ಲಿ ಪರಿಹರಿಸಿದ್ದಾರೆ. 'ಸರ್ವವಿತ್' ಎಂಬ ಪದವು ಸರ್ವಜ್ಞತ್ವವನ್ನು ಹೇಳುತ್ತಿಲ್ಲ; ಸರ್ವೋತ್ಕಾದಕತ್ವಾದಿಗಳನ್ನು ಹೇಳುತ್ತಿದೆ ಇತ್ಯಾದಿಯಾಗಿ.

ಮತ್ತೇನೆಂದರೆ ಭಾಷ್ಯದಲ್ಲಿ ಜಡಪ್ರಕೃತಿಯನ್ನು ಅಕ್ಷರವಲ್ಲವೆಂದು ನಿಷೇಧ-ಮಾಡುವುದಕ್ಕಾಗಿ ಮಾತ್ರ ಸರ್ವಜ್ಞತ್ವವಿಶೇಷಣವನ್ನು ಹೇಳಿರುತ್ತಾರೆ. ವಾಸ್ತವಿಕವಾಗಿ ಚಿತ್ಪ್ರಕೃತಿ, ಚತುರ್ಮುಖಬ್ರಹ್ಮ, ರುದ್ರ ಮೊದಲಾದವರೂ ಸಹ ಅಕ್ಷರಶಬ್ದವಾಚ್ಯರಲ್ಲ ಎಂದು ನಿಷೇಧ ಮಾಡುವುದಕ್ಕಾಗಿಯೂ ಸರ್ವಜ್ಞತ್ವ ಎಂಬ ವಿಶೇಷಣವನ್ನು ಹೇತುವನ್ನಾಗಿ ಮಾಡಬಹುದು. ಏಕೆಂದರೆ ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಮುಖ್ಯವಾದ ಸರ್ವಜ್ಞತ್ವವು ಇರುವುದಿಲ್ಲವಾದ್ದರಿಂದ.

ಆದರೂ ಸಹ ಚಿತ್ಪ್ರಕೃತಿ, ಚತುರ್ಮುಖಬ್ರಹ್ಮ, ರುದ್ರ ಮೊದಲಾದವರೂ ಅಕ್ಷರಶಬ್ದವಾಚ್ಯರಾಗಿದ್ದರೆ ವಿಶ್ವಕರ್ತೃತ್ವ ಎಂಬ ಹೇತುವಿನಿಂದ ಸರ್ವಜ್ಞತ್ವವನ್ನೂ ಸಹ ಪೂರ್ವಪಕ್ಷಕಾರನು ಅವರಲ್ಲಿ ಆಶಂಕಿಸುತ್ತಾ. ಹೀಗಿರುವಾಗ ವಿವಾದಾಸ್ಪದವಾದ ಸರ್ವಜ್ಞತ್ವವನ್ನು ಹೇತುವನ್ನಾಗಿ ಮಾಡಲು ಸಾಧ್ಯವಿಲ್ಲ. ಮತ್ತು ಶ್ರುತಿಯು ಅಮುಖ್ಯವಾದ

ಸಾರ್ವಜ್ಞ್ಯವನ್ನು ಹೇಳಬಹುದು. ಇಂತಹ ಅಮುಖ್ಯವಾದ ಸಾರ್ವಜ್ಞ್ಯವು ಚಿತ್ಪ್ರಕೃತ್ಯಾದಿಗಳಲ್ಲಿ ಬರುತ್ತದೆ. ಆದ್ದರಿಂದ ಭಾಷ್ಯಕಾರರು ಜಡಪ್ರಕೃತಿಯನ್ನು ಮಾತ್ರ ನಿಷೇಧಮಾಡುವುದಕ್ಕಾಗಿ ಭಾಷ್ಯದಲ್ಲಿ ಸರ್ವಜ್ಞತ್ವವನ್ನು ಹೇತುವನ್ನಾಗಿ ಹೇಳಿರುತ್ತಾರೆ. ಜಡಪ್ರಕೃತಿಯಲ್ಲಿ ಜ್ಞಾನಕ್ಕೆ ಪ್ರಸಕ್ತಿಯೇ ಇಲ್ಲದ ಕಾರಣ ಅಮುಖ್ಯವಾದ ಸರ್ವಜ್ಞತ್ವವನ್ನೂ ಸಹ ಹೇಳಲು ಸಾಧ್ಯವಿಲ್ಲ.

ವಾಸ್ತವಿಕವಾಗಿ ಭಾಷ್ಯಕಾರರು ಭೇದವ್ಯಪದೇಶವೆಂಬ ಹೇತುವನ್ನು ಚತುರ್ಮುಖ ಹಾಗೂ ರುದ್ರರನ್ನು ನಿಷೇಧಮಾಡುವುದಕ್ಕಾಗಿ ಮಾತ್ರ ಬಳಸಿದ್ದಾರೆ. ವಿಚಾರ ಮಾಡಿದರೆ ಚಿತ್ಪ್ರಕೃತಿಯನ್ನು ನಿಷೇಧಮಾಡುವುದಕ್ಕಾಗಿಯೂ ಬಳಸಬಹುದು. ಏಕೆಂದರೆ 'ಅಕ್ಷರಾತ್ಪರತಃ ಪರಃ' ಎಂಬುದಾಗಿ ಶ್ರುತಿಯು ಅಕ್ಷರನಾಮಕಳಾದ ಲಕ್ಷ್ಮೀದೇವಿಗಿಂತ ಉತ್ತಮತ್ವವನ್ನು ಹೇಳುವ ಮೂಲಕ ಚಿತ್‌ಪ್ರಕೃತಿಯಿಂದಲೂ ಭೇದವನ್ನು ಹೇಳುತ್ತಿದೆ.

ಆದರೂ ಸಹ ಅಕ್ಷರನಿಗೆ ಅಕ್ಷರಕ್ಕಿಂತ ಉತ್ತಮತ್ವವು ತಿಳಿಯುವುದಿಲ್ಲ. ತಾನೇ ತನ್ನಿಂದ ಉತ್ತಮನೆಂದು ಹೇಳಿದಂತಾಗಿ ವಿರೋಧ ಬರುತ್ತದೆ. ಇದನ್ನು ಪರಿಹರಿಸಬೇಕೆಂದರೆ ಅಕ್ಷರದಲ್ಲಿಯೇ ಅವಾಂತರ ಪ್ರಭೇದವನ್ನು ಹೇಳಬೇಕು. ಅಂದರೆ ಅಧಮಾಕ್ಷರ, ಮಧ್ಯಮಾಕ್ಷರ, ಉತ್ತಮಾಕ್ಷರವೆಂಬ ಭೇದವನ್ನು ಹೇಳಿ ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಗಿಂತಲೂ ಉತ್ತಮಾಕ್ಷರನೆನಿಸಿದ ಭಗವಂತನು ಶ್ರೇಷ್ಠನಾಗಿದ್ದಾನೆಂಬ ಅರ್ಥವನ್ನು 'ಅಕ್ಷರಾತ್ಪರತಃ ಪರಃ' ಎಂಬ ಶ್ರುತಿಗೆ ಹೇಳಬೇಕು. ಹೀಗೆ ಅಕ್ಷರರಲ್ಲಿ ಭೇದವನ್ನು ಹೇಳದೇ ಸುಲಭವಾಗಿ ಚಿತ್ಪ್ರಕೃತಿಗಿಂತ ಭಗವಂತನಲ್ಲಿ ಭೇದವನ್ನು ತಿಳಿಯಲು ಸಾಧ್ಯವಿಲ್ಲ. ಆದಕ್ಕೋಸ್ಕರ ಭಾಷ್ಯದಲ್ಲಿ ಚತುರ್ಮುಖಬ್ರಹ್ಮ, ರುದ್ರ ಇವರಿಬ್ಬರನ್ನು ಮಾತ್ರ ನಿಷೇಧ ಮಾಡುವುದಕ್ಕಾಗಿ ಭೇದವ್ಯಪದೇಶವೆಂಬ ಹೇತುವನ್ನು ಉಪಯೋಗಿಸಿದ್ದಾರೆ.

ವಾಸ್ತವಿಕವಾಗಿ 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬಲ್ಲಿರುವ ಇತರ ಶಬ್ದವು ಜಡಪ್ರಕೃತಿ, ಚತುರ್ಮುಖ, ರುದ್ರ ಮೂವರನ್ನು ಹೇಳುತ್ತಿದೆ. ಆದ್ದರಿಂದ 'ಇತರೇ' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಬೇಕಿತ್ತು.

ಆದರೂ ಚತುರ್ಮುಖ ಹಾಗೂ ರುದ್ರರನ್ನು ಚೇತನತ್ವವೆಂಬ ಧರ್ಮದಿಂದ ಒಂದೇ ಪದಾರ್ಥವನ್ನಾಗಿ ಸ್ವೀಕರಿಸಿ ದ್ವಿವಚನವನ್ನು ಪ್ರಯೋಗಿಸಿದ್ದಾರೆಂದು ತಿಳಿಯಬೇಕು. ಚತುರ್ಮುಖಬ್ರಹ್ಮ, ರುದ್ರ ಇವರಿಬ್ಬರನ್ನೂ ಒಂದು ವಸ್ತುವನ್ನಾಗಿ ಪರಿಗಣಿಸಿ ಜಡಪ್ರಕೃತಿಯನ್ನು ಮತ್ತೊಂದು ವಸ್ತುವನ್ನಾಗಿ ಪರಿಗಣಿಸಿ 'ಇತರೌ' ಎಂದು ಸೂತ್ರಕಾರರು ಹೇಳಿರುತ್ತಾರೆ.

'ಅಕ್ಷರತ್ರಯಮೀರಿತಮ್' ಎಂದು ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯ ಆಧಾರದಿಂದ ಅಕ್ಷರ ವ್ಯಕ್ತಿಗಳಲ್ಲಿ ಭೇದವಿದೆಯೆಂದು ತಿಳಿಯುತ್ತದೆ. ಅಂದರೆ ಈಗಾಗಲೇ ಹೇಳಿದಂತೆ, ಅಧಮಾಕ್ಷರ, ಮಧ್ಯಮಾಕ್ಷರ, ಉತ್ತಮಾಕ್ಷರವೆಂಬ ಭೇದವಿದೆಯೆಂದು ತಿಳಿಯಬೇಕು.

ಕಾರ್ತವೀರ್ಯಾರ್ಜುನ, ಪಾಂಡವಾರ್ಜುನ ಎಂಬುದಾಗಿ ಇಬ್ಬರು ಅರ್ಜುನರಿದ್ದಾರೆ. ಕಾರ್ತವೀರ್ಯಾರ್ಜುನನಿಗಿಂತ ಪಾಂಡವಾರ್ಜುನನು ಉತ್ತಮನಾಗಿದ್ದಾನೆ. ಈ ವಿವಕ್ಷೆಯಿಂದ ಅರ್ಜುನನಿಗಿಂತ ಅರ್ಜುನನು ಉತ್ತಮನು ಎಂಬ ವಾಕ್ಯವನ್ನು ಪ್ರಯೋಗಿಸಬಹುದು. ಅದರಂತೆ ಅಕ್ಷರವು ಎರಡು ವಿಧ - ಬ್ರಹ್ಮಾಕ್ಷರ, ಅಬ್ರಹ್ಮಾಕ್ಷರ ಎಂದು. ಅಬ್ರಹ್ಮಾಕ್ಷರಕ್ಕಿಂತ ಬ್ರಹ್ಮಾಕ್ಷರವು ಉತ್ತಮವಾದ್ದರಿಂದ ಅಕ್ಷರಕ್ಕಿಂತ ಅಕ್ಷರವು ಉತ್ತಮವಾಗಿದೆ ಎಂಬ ವಾಕ್ಯವನ್ನು ಪ್ರಯೋಗಿಸಬಹುದು.

ಸೂತ್ರಖಂಡಕ್ಕೆ ಮತ್ತೊಂದು ವ್ಯಾಖ್ಯಾನ

ಭಾವದೀಪಃ – ಸೂತ್ರಖಣ್ಡಸ್ಯಾರ್ಥಾನ್ತರಮಿತಿ ।। ಪರತಃ ಪರತ್ವರೂಪವಿಶೇಷಣಾದಕ್ಷರ-ವ್ಯಕ್ತೀನಾಂ ಭೇದವ್ಯಪದೇಶಾದಿತ್ಯರ್ಥಾನ್ತರಮಿತ್ಯರ್ಥಃ । ಆಕಾಙ್ಕ್ಷಾಮನುರುಧ್ಯ ಭಾಷ್ಯಮೇವಕಾರ-ವ್ಯಾವೃತ್ತಿಂ ವದನ್ ವ್ಯಾಚಷ್ಟೇ – ಭವೇದಿತಿ ।।

ಸೂತ್ರಖಂಡಕ್ಕೆ ಮತ್ತೊಂದು ಬಗೆಯ ಅರ್ಥ ಹೀಗಿದೆ - ''ಪರತಃ ಪರತ್ವ'' ಎಂಬ ವಿಶೇಷಣದಿಂದ ಅಕ್ಷರವ್ಯಕ್ತಿಗಳಿಗೆ ಭೇದವನ್ನು ಹೇಳಿರುವುದರಿಂದ ಎಂದು. ಆಕಾಂಕ್ಷೆಗೆ ಅನುಸಾರಿಯಾಗಿ ''ಏವ'' ಕಾರದಿಂದ ವ್ಯಾವೃತ್ತವಾದದ್ದನ್ನು ತಿಳಿಸುತ್ತಾ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಭವೇತ್'' ಇತ್ಯಾದಿಯಾಗಿ.

ಪರತಃ ಪರತ್ವವು ಹೇಗೆ ವಿಶೇಷಣವಾಗುತ್ತದೆ ?

ಭಾವದೀಪಃ – ತ್ರ್ಯಕ್ಷರೋಕ್ತಾವಪಿ ಕಥಂ ವಿಶೇಷಣಮಿತ್ಯತೋ ''ಅಕ್ಷರಾತ್ಪರತಃ ಪರಸ್ಯಾಕ್ಷರಾನ್ತರತ್ವವಚನಾತ್'' ಇತಿ ನ್ಯಾಯವಿವರಣೋಕ್ತಂ ಸಂಯೋಜಯತಿ – ಅಕ್ಷರಾನ್ತರಾದಿತಿ ।। ಅಕ್ಷರದ್ವಯೋಕ್ತಾವಪಿ ಪೂರ್ತೌ ತ್ರ್ಯಕ್ಷರೋಕ್ತಿರಕ್ಷರಾಜ್ಜಡಪ್ರಕೃತೇಃ ಪರತಃ ಶ್ರೀತತ್ತ್ವಾತ್ಪರೋ ವಿಷ್ಣುರಿತಿ ವೈಯ್ಯಧಿಕರಣ್ಯೇನ ಪರತೋऽಕ್ಷರಾತ್ ಶ್ರೀತತ್ತ್ವಾದಿತಿ ಸಾಮಾನಾಧಿಕರಣ್ಯೇನ ಚಾನ್ವಯಾಯೇತ್ಯಾಹುಃ – ಅನ್ಯಮೀಶಮಿತೀತಿ ।।

ಮೂರುಬಗೆಯ ತತ್ವವನ್ನು ಹೇಳಿರುವುದರಿಂದ ಪರತಃ ಪರತ್ವವು ಹೇಗೆ ವಿಶೇಷಣವಾಗುತ್ತದೆ? ಎಂಬ ಪ್ರಶ್ನೆಗೆ ''ಅಕ್ಷರಾತ್ಪರತಃ ಪರಸ್ಯಾಕ್ಷರಾಂತರತ್ವವಚನಾತ್'' ಎಂಬ ನ್ಯಾಯವಿವರಣದ ಮಾತನ್ನು ಯೋಜನೆ ಮಾಡುತ್ತಿದ್ದಾರೆ ''ಅಕ್ಷರಾಂತರಾತ್'' ಇತ್ಯಾದಿಯಾಗಿ. ವಸ್ತುತಃ ಎರಡು ಬಗೆಯ ಅಕ್ಷರಗಳನ್ನು ಹೇಳಿದ್ದರೆ ಸಾಕಾಗುತ್ತಿತ್ತು. ಆದರೂ ಕೂಡ ಮೂರನೆಯ ಅಕ್ಷರವನ್ನು ಹೇಳಿದ್ದರಿಂದ ಅಕ್ಷರ ತತ್ವವೆನಿಸಿದ ಜಡಪ್ರಕೃತಿಗಿಂತಲೂ ಲಕ್ಷ್ಮೀದೇವಿಯು ಶ್ರೇಷ್ಠಳು, ಅವಳಿಗಿಂತಲೂ ಮಹಾವಿಷ್ಣು ಶ್ರೇಷ್ಠನೆಂದು ''ಅಕ್ಷರಾತ್'' ಮತ್ತು ''ಪರತಃ'' ಎಂಬೆರೆಡು ಪದಗಳಿಗೆ ವೈಯ್ಯಧಿಕರಣ್ಯದಿಂದ ಅರ್ಥವನ್ನು ತಿಳಿಯಬೇಕು. ಅಥವಾ ಶ್ರೇಷ್ಠಳಾದ ಅಕ್ಷರಳೆನಿಸಿದ ಲಕ್ಷ್ಮೀದೇವಿಗಿಂತ ವಿಷ್ಣು ಶ್ರೇಷ್ಠನಾಗಿದ್ದಾನೆಂದು 'ಅಕ್ಷರಾತ್' ಮತ್ತು 'ಪರತಃ' ಎಂಬೆರಡು ಪದಗಳಿಗೆ ಸಾಮಾನಾಧಿ-ಕರಣ್ಯದಿಂದಲೂ ಸಹ ಅನ್ವಯವನ್ನು ತಿಳಿಯಬಹುದು ಎಂದು ಕೆಲವರು ವ್ಯಾಖ್ಯಾನಿಸುತ್ತಾರೆ.

ಆಥರ್ವಣಭಾಷ್ಯದಿಂದ ವಿರೋಧವಿಲ್ಲ

भावदीपः – अन्यो मार्गम् इत्युक्ते प्रसिद्धमार्गादन्यत्ववद् अन्यमीशमित्युक्ते प्रसिद्धेश्वराद् रुद्रादन्यत्वप्रतीतेरिति भावः । एतदर्थान्तरमुपेत्योक्तमिति कृत्वा आनन्दमयनयोक्त्या द्युभ्वादिनये वक्ष्यमाणेन जीवादन्यः स्वतन्त्रोऽयमित्याथर्वण-भाष्येण च न विरोधः ।

ಬೇರೆ ಮಾರ್ಗವೆಂದು ಹೇಳಿದರೆ ಪ್ರಸಿದ್ಧ ಮಾರ್ಗಕ್ಕಿಂತ ಬೇರೆಯಾದ ಮಾರ್ಗವೆಂಬ ಅರ್ಥವು ತಿಳಿಯುವಂತೆ ''ಅನ್ಯಮೀಶಂ'' ಎಂದು ಹೇಳಿದಾಗ ಪ್ರಸಿದ್ಧನಾದ ರುದ್ರನೆಂಬ ಈಶ್ವರನಿಗಿಂತ ಭಿನ್ನನಾದವನು ಎಂಬ ಅರ್ಥವು ತಿಳಿಯುತ್ತದೆ ಎಂದು ಅಭಿಪ್ರಾಯ. ಇದು ಮತ್ತೊಂದು ಅರ್ಥವೆಂದು ಅಂಗೀಕರಿಸಿ ವ್ಯಾಖ್ಯಾನಿಸಿದ್ದಾರೆ ಎಂದು ತಿಳಿಯಬೇಕು. ಹಿಂದೆ ಆನಂದಮಯಾಧಿಕರಣದಲ್ಲಿ ಹೇಳಿದಂತೆ ಮತ್ತು ಮುಂದೆ ದ್ಯುಭ್ವಾಧಿಕರಣದಲ್ಲಿ ಹೇಳುವಂತೆ ಜೀವನಿಗಿಂತ ಭಿನ್ನನಾದ ವಿಷ್ಣು ಸ್ವತಂತ್ರನಾಗಿ ಇರುತ್ತಾನೆ ಎಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ಆಥರ್ವಣಭಾಷ್ಯದಿಂದಲೂ ವಿರೋಧ ಬರುವುದಿಲ್ಲ.

ಪದಕ್ಕೆ ಅನೇಕಾರ್ಥ ಹೇಳುವುದು ತಪ್ಪಲ್ಲ

भावदीपः – नचानेकार्थत्वं दोषः, वचनेनैव प्रतीयमानत्वादर्थस्य

कल्पनाभावादित्यादिना कर्मनिर्णये निरासात् ।। **कारणत्वमात्रेति** ।। विवृतमेतत् प्रकृतिनयानुव्याख्याने । नचोर्णनाभिजनितॄणां च विकारितेत्यादिना ।। २२ ।।

ಒಂದು ಪದಕ್ಕೆ ಅನೇಕಾರ್ಥವನ್ನು ಹೇಳುವುದು ದೋಷವಲ್ಲ. ಏಕೆಂದರೆ ಶಬ್ದವನ್ನು ಕೇಳುವುದರಿಂದಲೇ ಎರಡು ಅರ್ಥಗಳು ಉಪಸ್ಥಿತವಾಗುತ್ತಿರುವಾಗ ಕಲ್ಪನೆ ಮಾಡಬೇಕಾಗಿಲ್ಲ ಎಂದು ಕರ್ಮನಿರ್ಣಯದಲ್ಲಿ ಅನೇಕಾರ್ಥವನ್ನು ಹೇಳುವುದು ದೋಷವಾಗುತ್ತದೆ ಎಂಬುದನ್ನು ನಿರಾಕರಿಸಿದ್ದಾರೆ. ''ಕಾರಣತ್ವಮಾತ್ರ'' ಎಂದರೆ ಪ್ರಕೃತ್ಯಧಿಕರಣದ ಅನುವ್ಯಾಖ್ಯಾನದಲ್ಲಿ ವಿವರಿಸಿದಂತೆ ತಿಳಿಯಬೇಕು. ಊರ್ಣನಾಭಿ ಮೊದಲಾದವುಗಳಲ್ಲಿ ವಿಕಾರವಿಕಾರಿಭಾವವು ಇರುವುದಿಲ್ಲವೆಂದು ಹೇಳಿರುತ್ತಾರೆ.

ಬ್ರಹ್ಮಸೂತ್ರ

'ರೂಪೋಪನ್ಯಾಸಾಚ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। रूपोपन्यासाच्च ।। ।। २३ ।।

ಸೂತ್ರಾರ್ಥ -- ಶ್ರುತಿಯಲ್ಲಿ 'ರುಗ್ಮವರ್ಣಂ' ಎಂಬುದಾಗಿ ಅಪ್ರಾಕೃತವಾದ ಪೀತವರ್ಣವನ್ನು ಅಕ್ಷರನಿಗೆ ಹೇಳಲಾಗಿದೆ. ಆದ್ದರಿಂದ ಬ್ರಹ್ಮನೇ ಅದೃಶ್ಯನಾಗುತ್ತಾನೆ.

ಅರ್ಥ - ಚ = ಕೇವಲ ಧರ್ಮವನ್ನು ಹೇಳಿರುವುದರಿಂದ ಮಾತ್ರವಲ್ಲ; ಮತ್ತೇನೆಂದರೆ, ರೂಪೋಪನ್ಯಾಸಾತ್ = 'ಯದಾ ಪಶ್ಯಃ ಪಶ್ಯತೇ' ಎಂಬುದಾಗಿ ವಿಷ್ಣುವಿನಲ್ಲಿ ಅಸಾಧಾರಣವಾದ ಸುವರ್ಣರೂಪವನ್ನು ಪ್ರತಿಪಾದನೆ ಮಾಡಿರುವುದರಿಂದ ಅದೃಶ್ಯತ್ವಾದಿಗುಣವುಳ್ಳವನು ವಿಷ್ಣುವೇ ಆಗುತ್ತಾನೆಂದರ್ಥ.

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು ।।

ಬ್ರಹ್ಮಸೂತ್ರಭಾಷ್ಯ

ಶುದ್ಧವಾದ ಬಂಗಾರದ ವರ್ಣ ಭಗವಂತನಿಗೆ ಮಾತ್ರ

ब्रह्मसूत्रभाष्यम् –

'यदा पश्यः पश्यते रुग्मवर्णं कर्तारमीशं पुरुषं ब्रह्मयोनिम्' (मुं. ३-१-३.) इति ।

ಅನುವಾದ - ಮಾಂಡೂಕ್ಯೋಪನಿಷತ್ತಿನಲ್ಲಿ 'ಜ್ಞಾನಿಯಾದ ಜೀವನು ಯಾವಾಗ ಸುವರ್ಣ ವರ್ಣದಲ್ಲಿರುವ ಜಗತ್ತಿಗೆ ಕರ್ತೃವಾದ, ಎಲ್ಲಕ್ಕೂ ಒಡೆಯನಾದ, ಪುರುಷಶಬ್ದ-ವಾಚ್ಯನಾದ ಚತುರ್ಮುಖಬ್ರಹ್ಮದೇವರಿಗೂ ಕಾರಣನಾಗಿರುವ ಪರಮಾತ್ಮನನ್ನು ನೋಡುತ್ತಾನೋ' ಎಂಬುದಾಗಿ ಅಕ್ಷರನಲ್ಲಿ ಹಳದಿವರ್ಣವನ್ನು ಹೇಳಲಾಗಿದೆ. ಇದರಿಂದಲೂ ಅದೃಶ್ಯತ್ವಧರ್ಮವುಳ್ಳವನು ವಿಷ್ಣುವೇ ಎಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಮತ್ತೊಂದು ಯುಕ್ತಿಯಿಂದ ಅದೃಶ್ಯತ್ವಾದಿ ಗುಣಗಳನ್ನು ಸಾಧಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ಸೂತ್ರದಲ್ಲೇ ಇರುವ ಶ್ರುತಿಯನ್ನು ಉದಾಹರಿಸುತ್ತಿದ್ದಾರೆ.

ಪಶ್ಯಃ = ಜ್ಞಾನಿಯಾದ ಜೀವನು, ಯದಾ = ಯಾವಾಗ, ರುಗ್ಮವರ್ಣಂ = ಸುವರ್ಣಬಣ್ಣದಲ್ಲಿರುವ, ಕರ್ತಾರಂ = ಜಗತ್ತಿಗೆ ಒಡೆಯನಾದ ಜಗತ್ತಿಗೆ ಕರ್ತೃವಾದ, ಈಶಂ = ಎಲ್ಲ ಪದಾರ್ಥಗಳಿಗೂ ಸ್ವಾಮಿಯಾದ, ಪುರುಷಂ = ಪುರುಷಶಬ್ದವಾಚ್ಯನಾದ, ಬ್ರಹ್ಮಯೋನಿಂ = ಚತುರ್ಮುಖ-ಬ್ರಹ್ಮದೇವರಿಗೂ ಕಾರಣನಾದ ಪರಮಾತ್ಮನನ್ನು, ಪಶ್ಯತೇ = ನೋಡುತ್ತಾನೋ, ಇತಿ = ಹೀಗೆ ಅದೃಶ್ಯತ್ವಗುಣವುಳ್ಳ ಪರಮಾತ್ಮನಲ್ಲಿ ಭಂಗಾರವರ್ಣವನ್ನು ವಿಶೇಷಣವನ್ನಾಗಿ ಹೇಳಲಾಗಿದೆ.

'ರೂಪೋಪನ್ಯಾಸ' ಎಂಬ ಹೇತು ವಿಷ್ಣುತ್ವನಿಶ್ಚಾಯಕ ಹೇಗೆ ?

ಬ್ರಹ್ಮಸೂತ್ರಭಾಷ್ಯಮ್ –

'एको नारायण आसीन्न ब्रह्मा न च शङ्करः । स मुनिर्भूत्वा समचिन्तयत् । तत एते व्यजायन्त विश्वो हिरण्यगर्भोऽग्निर्यमो वरुणरुद्रेन्द्रा इति । तस्य हैतस्य परमस्य नारायणस्य चत्वारि रूपाणि शुक्लं रक्तं रौग्मं कृष्णमिति । स एतान्येतेभ्योऽभ्यचीक्लृपत्। विमिश्राणि व्यमिश्रयत् ।

ಅನುವಾದ - ಮುಖ್ಯವಾಗಿ ನಾರಾಯಣನೊಬ್ಬನೇ ಪ್ರಳಯಕಾಲದಲ್ಲಿ ಇದ್ದನು. ಚತುರ್ಮುಖಬ್ರಹ್ಮನು ಅಥವಾ ರುದ್ರನು ಯಾರೂ ಸಹ ಇರಲಿಲ್ಲ. ನಾರಾಯಣನು ಮೌನವನ್ನು ತಾಳಿ ಸೃಷ್ಟಿಯನ್ನು ಮಾಡಲು ಇಚ್ಛಿಸಿದನು. ಅನಂತರ ಆ ಭಗವಂತನಿಂದ ವಾಯು ಮೊದಲಾದ ದೇವತೆಗಳು ಮಹದಾದಿತತ್ವಗಳು ಹುಟ್ಟಿದವು. ಹಾಗೂ ವಾಯುದೇವರು, ಚತುರ್ಮುಖಬ್ರಹ್ಮ, ಅಗ್ನಿ, ಯಮ ವರುಣ ರುದ್ರ, ಇಂದ್ರ ಮೊದಲಾದ ದೇವತೆಗಳು ಹುಟ್ಟಿದರು. ಮಹಾಮಹಿಮೆಯುಳ್ಳ ಸರ್ವೋತ್ತಮನಾದ ಭಗವಂತನ ನಾಲ್ಕುರೂಪಗಳು ಬಿಳಿ, ಕೆಂಪು, ಹಳದಿ, ಕಪ್ಪು ಎಂಬ ನಾಲ್ಕು ಬಣ್ಣದವು. ಭಗವಂತನು ಪ್ರಾಕೃತ ಬಣ್ಣಗಳಿಂದ ಕೂಡಿದ ಮೂಲಭೂತವಾದ ಬಣ್ಣಗಳನ್ನು ಬ್ರಹ್ಮಾದಿ ದೇವತೆಗಳಿಗೆ ಮೀಸಲಾಗಿಟ್ಟನು. ಮೊದಲೇ ಮಿಶ್ರವಾದ ಆ ಬಣ್ಣಗಳನ್ನು ಪುನಃ ಪ್ರಾಕೃತರೂಪಗಳಿಂದ ಮಿಶ್ರವಾದವುಗಳನ್ನಾಗಿ ಮಾಡಿ ಮನುಷ್ಯರಿಗೆ ಮೀಸಲಾಗಿಟ್ಟನು.

ಪ್ರತಿಪದಾರ್ಥ -- ಬ್ರಹ್ಮಾದಿದೇವತೆಗಳಿಗೂ ಸಹ ರೂಪವಿರುವುದರಿಂದ ರೂಪೋಪನ್ಯಾಸ ಎಂಬ ಹೇತು ವಿಷ್ಣುತ್ವನಿಶ್ಚಾಯಕವಲ್ಲ ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ.

ನಾರಾಯಣಃ = ನಾರಾಯಣನೇ, ಏಕಃ = ಪ್ರಧಾನವಾಗಿ, ಆಸೀತ್ = ಪ್ರಳಯಕಾಲದಲ್ಲಿ ಇದ್ದನು, ನ ಬ್ರಹ್ಮ = ಬ್ರಹ್ಮದೇವರು ಇರಲಿಲ್ಲ. ನಚ ಶಂಕರಃ = ರುದ್ರದೇವರೂ ಇರಲಿಲ್ಲ. ಸಃ = ಅಂತಹ ನಾರಾಯಣನು,

ಮುನಿರ್ಭೂತ್ವಾ = ಮೌನವನ್ನು ತಾಳಿ, ಸಮಚಿಂತಯತ್ = ಸೃಷ್ಟಿಯನ್ನು ಮಾಡಲು ಆಲೋಚಿಸಿದನು. ತತಃ = ಅನಂತರ ಏತೇ = ಮಹದಾದಿತತ್ವಗಳು, ವ್ಯಜಾಯಂತ = ಹುಟ್ಟಿದವು. ಮತ್ತು, ವಿಶ್ವಃ = ವಾಯುದೇವರು, ಹಿರಣ್ಯಗರ್ಭಃ = ಚತುರ್ಮುಖಬ್ರಹ್ಮದೇವರು, ಅಗ್ನಿಃ = ಅಗ್ನಿಯು, ಯಮಃ = ಯಮನು, ವರುಣಃ = ವರುಣನು, ರುದ್ರಃ = ರುದ್ರನು, ಇಂದ್ರಃ = ಇಂದ್ರದೇವರು ಇವರೇ ಮೊದಲಾದವರು, ಇತಿ = ಹುಟ್ಟಿದರು.

ತಸ್ಯ = ಸೃಷ್ಟಿಮಾಡಿ ಪ್ರಸಿದ್ಧನಾದ, ಏತಸ್ಯ = ಮಹಾಮಹಿಮೆಯುಳ್ಳ, ಪರಮಸ್ಯ = ಸರ್ವೋತ್ತಮನಾದ, ನಾರಾಯಣಸ್ಯ = ನಾರಾಯಣನ, ರೂಪಾಣಿ = ರೂಪಗಳು, ಚತ್ವಾರಿ = ನಾಲ್ಕು, ಶುಕ್ಲಂ = ಬಿಳಿ, ರಕ್ತಂ = ಕೆಂಪು, ಪೌಗ್ಮಂ = ಹಳದಿ, ಕೃಷ್ಣಮಿತಿ = ಕಪ್ಪು ಎಂಬುದಾಗಿ.

ಸಃ = ಆ ನಾರಾಯಣನು, ಏತಾನಿ = ಈ ನಾಲ್ಕು ಬಣ್ಣಗಳನ್ನು, ಏತೇಭ್ಯಃ = ಬ್ರಹ್ಮಾದಿದೇವತೆಗಳಿಗೆ, ಅಭ್ಯಚೀಕ್ಲೃಪತ್ = ಮೀಸಲಾಗಿಟ್ಟನು. ಏಮಿಶ್ರಾಣಿ = ಮೊದಲೇ ಮಿಶ್ರಿತವಾದ ಆ ಬಣ್ಣಗಳನ್ನು, ಪುನಃ = ಪ್ರಾಕೃತರೂಪದಿಂದ, ವ್ಯಮಿಶ್ರಯತ್ = ವಿಶೇಷವಾಗಿ ಮಿಶ್ರಣಮಾಡಿ ಮನುಷ್ಯರಿಗೆ ಮೀಸಲಾಗಿಟ್ಟನು.

'ರುಗ್ಮವರ್ಣಂ' ಎಂಬುದು ವಿಷ್ಣುವಿನ ವಿಶೇಷಣ

ब्रह्मसूत्रभाष्यम् –

अत एतादृगेव तद्रूपम् इति तस्यैव हि रूपाण्यभिधीयन्ते ।।२३।।

।। इत्यदृश्यत्वाधिकरणम् ।। ६ ।।

ಈ ಶ್ರುತಿಗಳ ಆಧಾರದಿಂದ ಶುಕ್ಲ, ಪೀತ ಮೊದಲಾದವುಗಳು ಭಗವಂತನದ್ದೇ ಬಣ್ಣಗಳೆಂದು ನಿಶ್ಚಯವಾಗುತ್ತದೆ; ಆದ್ದರಿಂದ ಶ್ರುತಿಯಲ್ಲಿ 'ರುಗ್ಮವರ್ಣಂ' ಎಂದು ಹೇಳಿದ್ದು ವಿಷ್ಣುವಿನ ವಿಶೇಷಣವೆಂದು ತಿಳಿಯಬೇಕು.

ಪ್ರತಿಪದಾರ್ಥ -- ಅತಃ = ಮಿಶ್ರಣವನ್ನು ಮಾಡಿರುವ ಕಾರಣ, ತದ್ರೂಪಂ = ಆ ಭಗವಂತನ ರೂಪಗಳು, ಏತಾದೃಕ್ ಏವ = ಶುದ್ಧವಾದ ಶುಕ್ಲ ಪೀತ ಮೊದಲಾದ ಸ್ವರೂಪಗಳು, ಇತಿ = ಹೀಗೆ, ತಸ್ಯೇವ ಹಿ = ವಿಷ್ಣುವಿನದ್ದೇ, ರೂಪಾಣಿ = ರೂಪಗಳು, ಅಭಿಧೀಯಂತೇ = ಹೇಳಲ್ಪಟ್ಟಿವೆ. ಹೀಗೆ ವಿಷ್ಣುವಿನಲ್ಲಿ ರೂಪಗಳನ್ನು ಹೇಳಿದ್ದರಿಂದ ಅದೃಶ್ಯತ್ವವೆಂಬ ಧರ್ಮಕ್ಕೆ ಆಶ್ರಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಯಿತು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಅದೃಶ್ಯಧಿಕರಣವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

'ಯದಾ ಪಶ್ಯಃ' ಇತ್ಯಾದಿ ಟೀಕೆಯ ವ್ಯಾಖ್ಯಾನ

तत्वप्रदीपः – ''रूपोपन्यासाच्च'' ।। पश्यः = जीवः । स मौनी भूत्वा सृजानीति समचिन्तयत् । विश्वो वायुः । एतानि विमिश्राणि कृत्वा तेभ्यो व्यचीक्लृपत् । तानि विमिश्राणि पुनरपि व्यमिश्रयत् ।।

।। इत्यदृश्यत्वाधिकरणम् ।।

ಈ ಶ್ರುತಿಯಲ್ಲಿರುವ 'ಪಶ್ಯಃ' ಎಂಬ ಶಬ್ದಕ್ಕೆ 'ಜೀವ' ಎಂದರ್ಥ. 'ಯದಾ ಪಶ್ಯಃ ಪಶ್ಯತೇ' ಎಂಬ ಶ್ರುತಿಯಲ್ಲಿರುವ 'ಪಶ್ಯಃ' ಎಂಬ ಪದಕ್ಕೆ 'ಪಶ್ಯತೀತಿ ಪಶ್ಯಃ' ಎಂಬ ವ್ಯುತ್ಪತ್ತಿಯಂತೆ 'ಜೀವ' ಎಂದರ್ಥ.

'ಸ ಮುನಿರ್ಭೂತ್ವ ಸಮಚಿಂತಯತ್' ಎಂಬ ಶ್ರುತಿಗೆ 'ಪರಮಾತ್ಮನು ಮೌನಿಯಾಗಿ ಸೃಷ್ಟಿಯನ್ನು ಮಾಡುತ್ತೇನೆಂದು ಆಲೋಚನೆ ಮಾಡಿದನು' ಎಂದರ್ಥ.

'ವಿಶ್ವೋ ಹಿರಣ್ಯಗರ್ಭಃ' ಎಂಬಲ್ಲಿರುವ 'ವಿಶ್ವ' ಶಬ್ದಕ್ಕೆ 'ವಾಯುದೇವರು' ಎಂದರ್ಥ.

'ವಿಮಿಶ್ರಾಣಾ ವ್ಯಮಿಶ್ರಯತ್' ಎಂದರೆ ಬಿಳಿ, ಕೆಂಪು, ಹಳದಿ, ಕಪ್ಪು ಎಂಬು ನಾಕು ಬಣ್ಣಗಳನ್ನು ಪ್ರಾಕೃತ ಬಣ್ಣಗಳೊಂದಿಗೆ ಬೆರೆಸಿ ಬ್ರಹ್ಮಾದಿ ದೇವತೆಗಳಿಗೆ ನೀಡಿದನು. ಮೊದಲೇ ಮಿಶ್ರಿತವಾದ ಈ ಬಣ್ಣಗಳನ್ನು, ಪುನಃ ಪ್ರಾಕೃತ ರೂಪಗಳಿಂದ ಮಿಶ್ರಗೊಳಿಸಿ ನೀಡಿದನು.

ವಿಶೇಷವಿಚಾರ - ಅಥರ್ವಣೋಪನಿಷತ್ತಿನಲ್ಲಿ ಪರಮಾತ್ಮನ ರೂಪ ರುಗ್ಮವರ್ಣ ಎಂದು ಹೇಳಲಾಗಿದೆ. ಉಳಿದ ಕಪ್ಪು, ಬಿಳಿ, ಹಳದಿ, ಕೆಂಪು ಈ ಬಣ್ಣಗಳು ಮಿಶ್ರಣಗೊಂಡಿವೆ. ಆದ್ದರಿಂದ ಮಿಶ್ರಣವಲ್ಲದ ರುಗ್ಮವರ್ಣವು ವಿಷ್ಣುವಿನಲ್ಲಿ ಮಾತ್ರವಿದೆ ಎಂದು ತಿಳಿಯುತ್ತದೆ. ಕಪ್ಪು, ಬಿಳಿ, ಹಳದಿ, ಕೆಂಪು ಎಂಬ ಈ ನಾಕು ಬಣ್ಣಗಳು ದೇವತೆಗಳ ಬಣ್ಣಗಳಾಗಿರುವುದರಿಂದ ಪರಮಾತ್ಮನ ಬಿಂಬರೂಪದ ಬಣ್ಣದ ಜೊತೆ ಮಿಶ್ರಣವನ್ನು ಹೊಂದಿವೆ. ಅದರಂತೆ ಜೀವರ ಸ್ವರೂಪಭೂತವಾದ ಬಣ್ಣವು ಪರಮಾತ್ಮನ ಹಾಗೂ ಇತರ ದೇವತೆಗಳ ಬಣ್ಣಗಳಿಂದ ಮಿಶ್ರಣವನ್ನು ಹೊಂದಿವೆ. ಜಡವಾದ ವಸ್ತುಗಳಲ್ಲಿರುವ ಬಣ್ಣವೂ ಕೂಡ ತದ್ಗತವಾದ ಬಿಂಬರೂಪವಾದ ಮಿಶ್ರಣವನ್ನು ಹೊಂದಿವೆ. ಹೀಗೆ ಉಳಿದೆಲ್ಲಾ ಬಣ್ಣಗಳು ಮಿಶ್ರಣವಾಗಿವೆ ಎಂಬುದನ್ನು ತಿಳಿಯಬೇಕು. ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ 'ರುಗ್ಮವರ್ಣಂ' ಎಂಬುದು ವಿಷ್ಣುವಿನ ಅಸಾಧಾರಣರೂಪವಾಗಿದೆ. ಇದರಿಂದ ಅದೃಶ್ಯತ್ವವೆಂಬ ಗುಣವು ಅಕ್ಷರಶಬ್ದವಾಚ್ಯನಾದ ಮಹಾವಿಷ್ಣುವಿನಲ್ಲಿ ನಿರ್ಣಯವಾಗುತ್ತದೆ.

॥ ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ಅದೃಶ್ಯತ್ವಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ತತ್ವಪ್ರಕಾಶಿಕಾ

ವಿಷ್ಣುವು ಅದೃಶ್ಯನೆನ್ನಲು ಮತ್ತೊಂದು ಹೇತು

तत्वप्रकाशिका – ।। रूपोपन्यासाच्च ।।

युक्त्यन्तरेण विष्णोरेवादृश्यत्वादिगुणकत्वं साधयत्सूत्रमुपन्यस्य, तदुपात्तश्रुतिमेवोदाहरति – रूपेति ।।

ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆಂಬ ವಿಷಯವನ್ನು ಸಮರ್ಥಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ಸೂತ್ರದಿಂದಲೇ ಸೂಚಿತವಾದ ಶ್ರುತಿಯನ್ನು ''ರೂಪ'' ಇತ್ಯಾದಿಯಾಗಿ ಉದಾಹರಿಸುತ್ತಿದ್ದಾರೆ.

ಅದೃಶ್ಯತ್ವಗುಣವಿದೆಯೆನ್ನಲು ರುಗ್ಮವರ್ಣವು ಹೇತು

तत्वप्रकाशिका – 'द्रष्टा = जीवः, यदा रुग्मवर्णं हिरण्यगर्भकारणं जगत्कर्तारं पश्यति तदाऽसौ विद्वान् अनिष्टं पुण्यं पापं च विहाय, निर्लेपः पूर्णानन्दत्वादिसाम्यं प्राप्नोति' इत्यदृश्यत्वादिगुणकस्य रुग्मरूपोपन्यासाच्च, असौ विष्णुरेवेत्यर्थः ।

'पश्यः' ಎಂಬ ಶಬ್ದಕ್ಕೆ ನೋಡುವವನು ಎಂದರ್ಥ. ಜೀವನು ಯಾವಾಗ ಸುವರ್ಣಕಾಂತಿಯಿಂದ ಕೂಡಿರುವ ಚತುರ್ಮುಖಬ್ರಹ್ಮನಿಗೂ ಕಾರಣನಾದ ಜಗತ್ತಿಗೆ ಕರ್ತೃವಾದ ಭಗವಂತನನ್ನು ನೋಡುತ್ತಾನೋ ಆವಾಗ ವಿದ್ವಾಂಸನೆನಿಸಿ ಅನಿಷ್ಟವಾದ ಪುಣ್ಯ ಹಾಗೂ ಪಾಪಗಳನ್ನು ಬಿಟ್ಟು ದೋಷಗಳಿಂದ ನಿರ್ಮುಕ್ತನಾಗುತ್ತಾನೆ. ಮತ್ತು ಪೂರ್ಣವಾದ ಆನಂದವನ್ನು ಹೊಂದುವ ಮೂಲಕ ಭಗವಂತನ ಸಾಮ್ಯವನ್ನು ಪಡೆಯುತ್ತಾನೆ. ಹೀಗೆ ಶ್ರುತಿಯಲ್ಲಿ ಅದೃಶ್ಯತ್ವಾದಿ ಗುಣವುಳ್ಳ ವ್ಯಕ್ತಿಗೆ ಭಂಗಾರವರ್ಣವನ್ನು ಹೇಳಿರುವುದರಿಂದಲೂ ವಿಷ್ಣುವೇ ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆಂದು ನಿರ್ಣಯವಾಗುತ್ತದೆ.

ರೂಪೋಪನ್ಯಾಸವು ಇತರರಲ್ಲಿ ಇಲ್ಲವೇ ?

तत्वप्रकाशिका – ननु ब्रह्मादीनामपि रूपसद्भावात् कुतो रूपोपन्यासेनास्य विष्णुत्वनिश्चय इत्यत आह – एक इति ।।

ಶಂಕೆ - ಬ್ರಹ್ಮಾದಿ ದೇವತೆಗಳಿಗೂ ಸಹ ರೂಪವಿರುವುದರಿಂದ ರೂಪೋಪನ್ಯಾಸವೆಂಬ ಹೇತುವು ಹೇಗೆ ವಿಷ್ಣುತ್ವನಿಶ್ಚಾಯಕವಾಗುತ್ತದೆ? ಎಂಬ ಪ್ರಶ್ನೆಗೆ ''ಏಕಃ'' ಎಂಬುದರಿಂದ ಉತ್ತರಿಸುತ್ತಾರೆ.

'ವಿಮಿಶ್ರಾಣಿ ವ್ಯಮಿಶ್ರಯತ್' ಎಂಬುದರ ವ್ಯಾಖ್ಯಾನ

तत्वप्रकाशिका – विश्वो वायुः, विमिश्राणि = एतेभ्योऽभ्यचीक्लृपत् । व्यमिश्रयदिति मानुषादौ विशेषेण मिश्रीचकारेत्यर्थः । स एतानि व्यामिश्रयत्। विमिश्राणि च, एतेभ्योऽभ्यचीक्लृपदिति वा ।

ವಿಶ್ವಶಬ್ದಕ್ಕೆ ವಾಯು ಎಂದರ್ಥ. ವಿಮಿಶ್ರಾಣಿ = ಮಿಶ್ರವಾದ ವರ್ಣಗಳನ್ನು, ಏತೇಭ್ಯಃ = ಬ್ರಹ್ಮ, ಇಂದ್ರ ಮೊದಲಾದ ದೇವತೆಗಳಿಗೆ ಕೊಡಲ್ಪಟ್ಟವು ಎಂದರ್ಥ. ವ್ಯಮಿಶ್ರಯತ್ ಎಂದರೆ ಮನುಷ್ಯಾದಿಗಳಿಗೆ ವಿಶೇಷವಾಗಿ ಮಿಶ್ರಣ ಮಾಡಿಕೊಡಲ್ಪಟ್ಟ ಎಂದರ್ಥ. ಅಥವಾ ಆ ರೂಪಗಳು ಮಿಶ್ರಮಾಡಲ್ಪಟ್ಟವು; ಮಿಶ್ರಿತವಾದ ರೂಪಗಳು ವಾಯುದೇವಾದಿಗಳಲ್ಲಿ ವ್ಯವಸ್ಥಿತವಾಗಿ ಇಡಲ್ಪಟ್ಟಿವೆ ಎಂದರ್ಥ.

ಅದೃಶ್ಯತ್ವಾದಿಗುಣಗಳುಳ್ಳ ಮಹಾವಿಷ್ಣುವೇ ಆನಂದಮಯನು

तत्वप्रकाशिका – 'तस्य हैतस्येत्यादेरेवात्रोपयुक्तत्वेऽप्येतान्येतेभ्य इत्यस्यार्थप्रतीत्यर्थमन्यांशोदाहरणम् । तस्माद् विष्णोरेव अदृश्यत्वादिगुणकत्वमिति स एवाऽऽनन्दमय इति सिद्धम् ।। २३ ।।

।। इति श्रीमज्जयतीर्थभिक्षुविरचितायां तत्वप्रकाशिकायाम् अदृश्यत्वाधिकरणम् ।।

प्रकृतक्के तस्य हैतस्य ಎಂಬಲ್ಲಿಂದ ಕೃಷ್ಣಮಿತಿ ಎಂಬಲ್ಲಿಯ ತನಕದ ಭಾಗವು ಉಪಯುಕ್ತವಾಗಿರುತ್ತದೆ. ಆದ್ದರಿಂದ ಉಳಿದದ್ದನ್ನು 'ಏಕೋ ನಾರಾಯಣಃ' ಎಂಬುದು 'ಏತಾನ್ಯೇತೇಭ್ಯಃ ವ್ಯಚೀಕ್ಲೃಪತ್' ಎಂಬುದು ಸ್ಪಷ್ಟವಾಗಿರುವುದರಿಂದ ಇದನ್ನು ನೀಡಿದ್ದಾರೆಂದು ತಿಳಿಯಬೇಕು. ಆದ್ದರಿಂದ ಇಲ್ಲಿಯ ತನಕ ನಡೆಸಿದ ವಿಚಾರದಿಂದ ವಿಷ್ಣುವೇ

ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆಂಬ ವಿಷಯವನ್ನು ಸಮರ್ಥಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ಸೂತ್ರದಿಂದಲೇ ಸೂಚಿತವಾದ ಶ್ರುತಿಯನ್ನು ''ರೂಪ'' ಇತ್ಯಾದಿಯಾಗಿ ಉದಾಹರಿಸುತ್ತಿದ್ದಾರೆ.

ಅದೃಶ್ಯತ್ವಗುಣವಿದೆಯೆನ್ನಲು ರುಗ್ಮವರ್ಣವು ಹೇತು

तत्वप्रकाशिका – 'द्रष्टा = जीवः, यदा रुग्मवर्णं हिरण्यगर्भकारणं जगत्कर्तारं पश्यति तदाऽसौ विद्वान् अनिष्टं पुण्यं पापं च विहाय, निर्लेपः पूर्णानन्दत्वादिसाम्यं प्राप्नोति' इत्यदृश्यत्वादिगुणकस्य रुग्मरूपोपन्यासाच्च, असौ विष्णुरेवेत्यर्थः ।

'पश्यः' ಎಂಬ ಶಬ್ದಕ್ಕೆ ನೋಡುವವನು ಎಂದರ್ಥ. ಜೀವನು ಯಾವಾಗ ಸುವರ್ಣಕಾಂತಿಯಿಂದ ಕೂಡಿರುವ ಚತುರ್ಮುಖಬ್ರಹ್ಮನಿಗೂ ಕಾರಣನಾದ ಜಗತ್ತಿಗೆ ಕರ್ತೃವಾದ ಭಗವಂತನನ್ನು ನೋಡುತ್ತಾನೋ ಆವಾಗ ವಿದ್ವಾಂಸನೆನಿಸಿ ಅನಿಷ್ಟವಾದ ಪುಣ್ಯ ಹಾಗೂ ಪಾಪಗಳನ್ನು ಬಿಟ್ಟು ದೋಷಗಳಿಂದ ನಿರ್ಮುಕ್ತನಾಗುತ್ತಾನೆ. ಮತ್ತು ಪೂರ್ಣವಾದ ಆನಂದವನ್ನು ಹೊಂದುವ ಮೂಲಕ ಭಗವಂತನ ಸಾಮ್ಯವನ್ನು ಪಡೆಯುತ್ತಾನೆ. ಹೀಗೆ ಶ್ರುತಿಯಲ್ಲಿ ಅದೃಶ್ಯತ್ವಾದಿ ಗುಣವುಳ್ಳ ವ್ಯಕ್ತಿಗೆ ಭಂಗಾರವರ್ಣವನ್ನು ಹೇಳಿರುವುದರಿಂದಲೂ ವಿಷ್ಣುವೇ ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆಂದು ನಿರ್ಣಯವಾಗುತ್ತದೆ.

ರೂಪೋಪನ್ಯಾಸವು ಇತರರಲ್ಲಿ ಇಲ್ಲವೇ ?

तत्वप्रकाशिका – ननु ब्रह्मादीनामपि रूपसद्भावात् कुतो रूपोपन्यासेनास्य विष्णुत्वनिश्चय इत्यत आह – एक इति ।।

ಶಂಕೆ - ಬ್ರಹ್ಮಾದಿ ದೇವತೆಗಳಿಗೂ ಸಹ ರೂಪವಿರುವುದರಿಂದ ರೂಪೋಪನ್ಯಾಸವೆಂಬ ಹೇತುವು ಹೇಗೆ ವಿಷ್ಣುತ್ವನಿಶ್ಚಾಯಕವಾಗುತ್ತದೆ? ಎಂಬ ಪ್ರಶ್ನೆಗೆ ''ಏಕಃ'' ಎಂಬುದರಿಂದ ಉತ್ತರಿಸುತ್ತಾರೆ.

'ವಿಮಿಶ್ರಾಣಿ ವ್ಯಮಿಶ್ರಯತ್' ಎಂಬುದರ ವ್ಯಾಖ್ಯಾನ

तत्वप्रकाशिका – विश्वो वायुः, विमिश्राणि = एतेभ्योऽभ्यचीक्लृपत् । व्यमिश्रयदिति मानुषादौ विशेषेण मिश्रीचकारेत्यर्थः । स एतानि व्यामिश्रयत्। विमिश्राणि च, एतेभ्योऽभ्यचीक्लृपदिति वा ।

ವಿಶ್ವಶಬ್ದಕ್ಕೆ ವಾಯು ಎಂದರ್ಥ. ವಿಮಿಶ್ರಾಣಿ = ಮಿಶ್ರವಾದ ವರ್ಣಗಳನ್ನು, ಏತೇಭ್ಯಃ = ಬ್ರಹ್ಮ, ಇಂದ್ರ ಮೊದಲಾದ ದೇವತೆಗಳಿಗೆ ಕೊಡಲ್ಪಟ್ಟವು ಎಂದರ್ಥ. ವ್ಯಮಿಶ್ರಯತ್ ಎಂದರೆ ಮನುಷ್ಯಾದಿಗಳಿಗೆ ವಿಶೇಷವಾಗಿ ಮಿಶ್ರಣ ಮಾಡಿಕೊಡಲ್ಪಟ್ಟ ಎಂದರ್ಥ. ಅಥವಾ ಆ ರೂಪಗಳು ಮಿಶ್ರಮಾಡಲ್ಪಟ್ಟವು; ಮಿಶ್ರಿತವಾದ ರೂಪಗಳು ವಾಯುದೇವಾದಿಗಳಲ್ಲಿ ವ್ಯವಸ್ಥಿತವಾಗಿ ಇಡಲ್ಪಟ್ಟಿವೆ ಎಂದರ್ಥ.

ಅದೃಶ್ಯತ್ವಾದಿಗುಣಗಳುಳ್ಳ ಮಹಾವಿಷ್ಣುವೇ ಆನಂದಮಯನು

तत्वप्रकाशिका – 'तस्य हैतस्येत्यादेरेवात्रोपयुक्तत्वेऽप्येतान्येतेभ्य इत्यस्यार्थप्रतीत्यर्थमन्यांशोदाहरणम् । तस्माद् विष्णोरेव अदृश्यत्वादिगुणकत्वमिति स एवाऽऽनन्दमय इति सिद्धम् ।। २३ ।।

।। इति श्रीमज्जयतीर्थभिक्षुविरचितायां तत्वप्रकाशिकायाम् अदृश्यत्वाधिकरणम् ।।

ಪ್ರಕೃತಕ್ಕೆ ತಸ್ಯ ಹೈತಸ್ಯ ಎಂಬಲ್ಲಿಂದ ಕೃಷ್ಣಮಿತಿ ಎಂಬಲ್ಲಿಯ ತನಕದ ಭಾಗವು ಉಪಯುಕ್ತವಾಗಿರುತ್ತದೆ. ಆದ್ದರಿಂದ ಉಳಿದದ್ದನ್ನು 'ಏಕೋ ನಾರಾಯಣಃ' ಎಂಬುದು 'ಏತಾನ್ಯೇತೇಭ್ಯಃ ವ್ಯಚೀಕ್ಲೃಪತ್' ಎಂಬುದು ಸ್ಪಷ್ಟವಾಗಿರುವುದರಿಂದ ಇದನ್ನು ನೀಡಿದ್ದಾರೆಂದು ತಿಳಿಯಬೇಕು. ಆದ್ದರಿಂದ ಇಲ್ಲಿಯ ತನಕ ನಡೆಸಿದ ವಿಚಾರದಿಂದ ವಿಷ್ಣುವೇ

ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆ; ಅವನೇ ಆನಂದಮಯನಾಗಿದ್ದಾನೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ಅದೃಶ್ಯತ್ವಾಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

ಭಾವದೀಪ

'ವಿಷ್ಣುರೇವ' ಎಂಬ ಅವಧಾರಣದ ಕಾರಣ

ಭಾವದೀಪಃ – रूपोपन्यासाच्च ।। सूत्रे चशब्दादाह – युक्त्यन्तरेणेति ।। सिद्धान्तहेतोः परपक्षनिरासेऽपि व्यापारोऽस्तीति वा लिङ्गस्य निरवकाशत्वꣳ यक्त्यर्थं वा विष्णोरेवेत्युक्तम् ।

॥ ರೂಪೋಪನ್ಯಾಸಾಚ್ಚ ॥

ಸೂತ್ರದಲ್ಲಿರುವ ''ಚ'' ಶಬ್ದಕ್ಕೆ ''ಯುಕ್ತ್ಯಂತರೇಣ'' ಎಂದು ವ್ಯಾಖ್ಯಾನಿಸಿದ್ದಾರೆ. ಸಿದ್ಧಾಂತ ಹೇತುವು ಪೂರ್ವಪಕ್ಷವನ್ನೂ ಸಹ ನಿರಾಕರಿಸುತ್ತದೆ ಎಂದು ಅಥವಾ ಸಿದ್ಧಾಂತ ಹೇತು ನಿರವಕಾಶವಾಗಿದೆ ಎಂದು ತಿಳಿಸುವುದಕ್ಕಾಗಿ ''ವಿಷ್ಣುರೇವ'' ಎಂದು ಅವಧಾರಣೆಯನ್ನು ಮಾಡಿರುತ್ತಾರೆ.

ಭಾಷ್ಯಕ್ಕೆ ಸೂತ್ರದ ಜೊತೆ ಅನ್ವಯ

ಭಾವದೀಪಃ – भाष्यस्य सूत्रेणान्वयं मत्वाऽर्थमाह – द्रष्टेति ।। पश्यतीति पश्यो द्रष्टा । 'प्राघ्राध्माधेट्दृशः शः' इति शप्रत्यये पश्यादेशः । ब्रह्मयोनिं हिरण्यगर्भकारणम् । 'अत एव कर्तारम्' 'तदा विद्वान् पुण्यपापे विधूय निरञ्जनः परमं साम्यमुपैति' इति शेषार्थोक्त्याऽकाङ्क्षां पूरयति – तदेति ।।

ಭಾಷ್ಯಕ್ಕೆ ಸೂತ್ರದ ಜೊತೆಗೆ ಅನ್ವಯವನ್ನು ತಿಳಿಸುತ್ತಾ ವ್ಯಾಖ್ಯಾನ ಮಾಡುತ್ತಿದ್ದಾರೆ ''ದ್ರಷ್ಟಾ'' ಇತ್ಯಾದಿಯಾಗಿ. ಶ್ರುತಿಯಲ್ಲಿರುವ ''ಪಶ್ಯಃ'' ಎಂಬ ಪದದ ಅರ್ಥವನ್ನೇ ''ದ್ರಷ್ಟಾ'' ಎಂದು

ಹೇಳಿರುತ್ತಾರೆ. ''ಪ್ರಾಘ್ರಾಧ್ಮಾಧೇಟ್‌ದೃಶಃ ಶಃ'' ಎಂಬ ಸೂತ್ರಾನುಸಾರಿಯಾಗಿ ''ಶ'' ಪ್ರತ್ಯಯವು ಪರದಲ್ಲಿ ಇದ್ದಾಗ 'ದೃಶ್' ಧಾತುವಿಗೆ 'ಪಶ್ಯ' ಎಂಬ ಆದೇಶವು ಬರುತ್ತದೆ. ''ಬ್ರಹ್ಮಯೋನಿಂ'' ಎಂದರೆ ಚತುರ್ಮುಖಬ್ರಹ್ಮನಿಗೂ ಕಾರಣನಾದವನು ಎಂದರ್ಥ. ಆದ್ದರಿಂದಲೇ ಜಗತ್ಕರ್ತಾ ಆಗಿದ್ದಾನೆಂದು ತಿಳಿಯಬೇಕು. ''ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ'' ಎಂಬ ಉಳಿದ ಶ್ರುತಿಯ ಭಾಗದ ಅರ್ಥವನ್ನು ಹೇಳುತ್ತಾ ಆಕಾಂಕ್ಷೆಯನ್ನು ಪೂರ್ಣ ಮಾಡುತ್ತಿದ್ದಾರೆ ''ತದಾ'' ಇತ್ಯಾದಿ ವಾಕ್ಯಗಳಿಂದ.

ಪುಣ್ಯ-ಪಾಪಗಳೆರಡು ಅನಿಷ್ಟ

भावदीपः – अप्रकृतत्वभ्रान्तिं निराह – असौ विद्वानिति ।। पुण्यपापमनिष्टमिति तद्भाष्योक्तेराह – अनिष्टमनपेक्षमिति ।। सञ्चितपुण्यपापे इत्यर्थः । अपौनरुक्त्या निरञ्जनपदार्थमाह – निर्लेप इति ।।

ಪ್ರಕೃತವಾಗಿಲ್ಲವೆಂಬ ಭ್ರಾಂತಿಯನ್ನು ''ಅಸೌ ವಿದ್ವಾನ್'' ಎಂಬುದರಿಂದ ನಿರಾಕರಿಸಿದ್ದಾರೆ. ಪುಣ್ಯ ಹಾಗೂ ಪಾಪಗಳೆರಡೂ ಅನಿಷ್ಟವೆಂದು ಉಪನಿಷದ್‌ಭಾಷ್ಯದಲ್ಲಿಯೇ ಹೇಳಿದ್ದಾರೆ. 'ಅನಿಷ್ಟಂ' ಎಂದರೆ ಅನಪೇಕ್ಷಿತವಾದದ್ದು ಎಂದರ್ಥ. ಸಂಚಿತವಾದ ಪುಣ್ಯ ಹಾಗೂ ಪಾಪಗಳೆರಡನ್ನು ಎಂದರ್ಥ. ಪುನರುಕ್ತಿ ಬಾರದಂತೆ 'ನಿರಂಜನಂ' ಪದದ ಅರ್ಥವನ್ನು 'ನಿರ್ಲೇಪಃ' ಇತ್ಯಾದಿಯಾಗಿ ಹೇಳಿದ್ದಾರೆ.

ಈಶನೆಂದರೆ ರುದ್ರನಲ್ಲ

भावदीपः – 'तदधिगम उत्तरपूर्वाघयोरश्लेषविनाशौ' इति वक्ष्यमाणदिशा ज्ञानानन्तरभाविपापकृताशुचित्वादिलेपरहित इत्यर्थः । परमशब्दार्थः – पूर्णेति ।। ईशशब्दस्य रुद्रपरत्वशङ्कनात्तस्य वैष्णवत्वाय तत्रैव वाक्येऽनेकवि ष्णुलिङ्गप्रदर्शनाय समग्रवाक्यार्थोक्तिरित्याहुः ।

''ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ'' ಎಂಬ ಸೂತ್ರದಲ್ಲಿ ಹೇಳುವಂತೆ ಅಪರೋಕ್ಷ ಜ್ಞಾನದ ಆನಂತರ ಪುಣ್ಯ ಪಾಪಗಳು ಅಂಟುವುದಿಲ್ಲವೆಂದು ತಿಳಿಯಬೇಕು. 'ಪರಮ' ಶಬ್ದದ ಅರ್ಥವನ್ನೇ 'ಪೂರ್ಣ' ಎಂದು ಹೇಳಿದ್ದಾರೆ. 'ಈಶ' ಶಬ್ದಕ್ಕೆ ರುದ್ರನೆಂಬ ಅರ್ಥವನ್ನು

ಹೇಳಬಹುದಲ್ಲವೆ? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ಈಶ ಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಏಕೆಂದರೆ ಆದೇ ವಾಕ್ಯದಲ್ಲಿ ವಿಷ್ಣುವಿನ ಅನೇಕ ಲಿಂಗಗಳು ಇರುತ್ತವೆ ಎಂದು ತಿಳಿಸುವುದಕ್ಕಾಗಿ ಸಮಗ್ರ ವಾಕ್ಯದ ಅರ್ಥವನ್ನು ಹೇಳಿದ್ದಾರೆಂದು ಕೆಲವರು ವ್ಯಾಖ್ಯಾನಿಸುತ್ತಾರೆ.

ಬ್ರಹ್ಮದೇವರಿಗೆ ರುದ್ರನು ಜನಕನಲ್ಲ

ಭಾವದೀಪಃ – 'धिया निगृह्यमाणोऽपि भ्रुवोर्मध्यात्प्रजापतेः । सद्योऽजायत तन्मन्युः कुमारो नीललोहितः ।।' इति तृतीयस्कन्धाद्युक्त्या रुद्रस्य ब्रह्मजातत्वेन ब्रह्मयोनित्वाद्ययोगादिति ।

''ಧಿಯಾ ನಿಗೃಹ್ಯಮಾಣೋಽಪಿ ಭ್ರುವೋರ್ಮಧ್ಯಾತ್ಪ್ರಜಾಪತೇಃ । ಸದ್ಯೋಽಜಾಯತ ತನ್ಮನ್ಯುಃ ಕುಮಾರೋ ನೀಲಲೋಹಿತಃ ॥'' ಎಂದು ತೃತೀಯ ಸ್ಕಂಧದಲ್ಲಿ ಹೇಳಿದಂತೆ ಬ್ರಹ್ಮದೇವರ ಭ್ರೂ ಮಧ್ಯಪ್ರದೇಶದಿಂದ ರುದ್ರದೇವರು ಹುಟ್ಟಿದರೆಂದು ತಿಳಿಯುತ್ತದೆ. ಇಂತಹ ರುದ್ರದೇವರು ಬ್ರಹ್ಮದೇವರಿಗೆ ಜನಕರಾಗಲು ಸಾಧ್ಯವಿಲ್ಲವೆಂದು ಅಭಿಪ್ರಾಯ.

'ಯದಾ ಪಶ್ಯಃ' ಇತ್ಯಾದಿ ಶ್ರುತಿಯ ವ್ಯಾಖ್ಯಾನ

ಭಾವದೀಪಃ – यद्वा पश्यतीति पश्यो जीवः । संसारेऽपि साम्यसत्वात् परममिति । अभिव्यक्तमिति यावत् । अत्र 'पुण्यपापे विधूय निरञ्जनः' इति मुक्तलिङ्गमिति तत्त्वोद्योतटीकायां मुक्तभेदपरतया व्याख्यानेऽपि इह 'जुष्टं यदा' इति 'प्राणो ह्येष सर्वभूतैः' इति पूर्वोत्तरवाक्यमनुरुध्य जीवन्मुक्तपरतया व्याख्यानाय समग्रवाक्यार्थोक्तिः ।

ಅಥವಾ 'ಪಶ್ಯತಿ ಇತಿ ಪಶ್ಯಃ' ಎಂಬ ವ್ಯುತ್ಪತ್ತಿಯಿಂದ ಜೀವನೆಂಬ ಅರ್ಥವನ್ನು ತಿಳಿಯಬೇಕು. ಸಂಸಾರದಲ್ಲಿಯೂ ಸಹ ಸಾಮ್ಯವಿರುವುದರಿಂದ ''ಪರಮಂ'' ಎಂಬ ಅರ್ಥವನ್ನು ತಿಳಿಯಬೇಕು.

''ಪುಣ್ಯಪಾಪೇ ವಿಧೂಯ ನಿರಂಜನಃ'' ಎಂಬುದು ಮುಕ್ತರ ಲಿಂಗವಾಗಿದೆ ಎಂಬುದಾಗಿ ತತ್ತ್ವೋದ್ಯೋತ ಟೀಕೆಯಲ್ಲಿ ಮುಕ್ತರಿಂದ ಭೇದವನ್ನು ತಿಳಿಸುವುದಕ್ಕಾಗಿ ಈ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. ಆದರೂ ಸಹ ಪ್ರಕೃತ ''ಜುಷ್ಟಂ ಯದಾ'' ಮತ್ತು ''ಪ್ರಾಣೋ ಹ್ಯೇಷ

ಸರ್ವಭೂತೈಃ'' ಎಂಬ ಹಿಂದಿನ ಮುಂದಿನ ವಾಕ್ಯಗಳಿಗೆ ಅನುಸಾರಿಯಾಗಿ ಜೀವಭೇದಪರವಾಗಿ ಇಲ್ಲಿ ವ್ಯಾಖ್ಯಾನಿಸಿದ್ದಾರೆ. ಅದಕ್ಕೋಸ್ಕರವಾಗಿಯೇ ಸಮಗ್ರವಾದ ಅರ್ಥವನ್ನು ಹೇಳಿದ್ದಾರೆ ಎಂದು ತಿಳಿಯಬೇಕು.

ವಾಕ್ಯಶೇಷದ ಅಧ್ಯಾಹಾರಕ್ಕೆ ಕಾರಣ

ಭಾವದೀಪಃ – एतेभ्य इति चतुर्थी वायुप्रभूत्युक्तदेवतानामर्थ इत्यर्थः ।। अन्यांशेति ।। तर्हि 'तत एते व्यजायन्त' इत्यादिनैव पूर्येत, मैवम् । पूर्वशेषोक्तेरपि तत इत्यस्यार्थप्रतीत्यर्थत्वादिति भावः । फलोक्त्योपसंहरति – तस्मादिति ।।

''ಏತೇಭ್ಯಃ''ಎಂಬುದು ಚತುರ್ಥೀವಿಭಕ್ತಿಯಾಗಿದೆ. ''ವಾಯುದೇವರಿಂದ ಹುಟ್ಟಿದ ಸಕಲ ದೇವತೆಗಳಿಗೂ'' ಎಂದು ಇದರ ಅರ್ಥ. ''ಅನ್ಯಾಂಶೋದಾಹರಣಮ್'' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಹಾಗಾದರೆ ''ತತಃ ಏತೇ ವ್ಯಜಾಯಂತ'' ಎಂದಷ್ಟೇ ಹೇಳಿದ್ದರೆ ಸಾಕಾಗಿತ್ತಲ್ಲವೆ? ಎಂದು ಪ್ರಶ್ನಿಸಬಾರದು. ''ತತಃ'' ಎಂಬ ಪದದ ಅರ್ಥವನ್ನು ತಿಳಿಸುವುದಕ್ಕಾಗಿ ಹಿಂದಿನ ವಾಕ್ಯಶೇಷವನ್ನು ಉಲ್ಲೇಖಿಸಿದ್ದಾರೆಂದು ಅಭಿಪ್ರಾಯ. ಫಲವನ್ನು ಹೇಳುವ ಮುಖಾಂತರ ಉಪಸಂಹಾರ ಮಾಡುತ್ತಿದ್ದಾರೆ ''ತಸ್ಮಾತ್'' ಇತ್ಯಾದಿಯಾಗಿ.

ಮೂರು ಸೂತ್ರಗಳ ಹೇತ್ವರ್ಥ

ಭಾವದೀಪಃ – निरवकाशानेकलिङ्गसत्वात् परपक्षे बाधकभावाच्चेति सूत्रत्रयहेत्वंशार्थः । ''अदृश्यत्वादिगुणकः तत्तु'' इति प्रतिज्ञार्थः विष्णोरेवेत्यादि । नेतराविति युक्तप्रधानादयो नेत्यस्यार्थः एवेति । अद्रेश्यवाक्योक्तम् अदृश्यवाक्योक्तं चादृश्यत्वादिकमित्यर्थः ।

ನಿರವಕಾಶವಾದ ವಿಷ್ಣುವಿನ ಅನೇಕ ಲಿಂಗಗಳಿರುವುದರಿಂದ ಮತ್ತು ಪರಪಕ್ಷದಲ್ಲಿ ಬಾಧಕಗಳಿರುವುದರಿಂದ ಎಂದು ಮೂರೂ ಸೂತ್ರಗಳಲ್ಲಿರುವ ಹೇತುವಿನ ಅರ್ಥ. ''ಅದೃಶ್ಯತ್ವಾದಿಗುಣಕಃ ತತ್ತು'' ಎಂಬ ಪ್ರತಿಜ್ಞೆಯ ಅರ್ಥವನ್ನೇ ಟೀಕೆಯಲ್ಲಿ ''ವಿಷ್ಣುರೇವ'' ಎಂದು ಹೇಳಿದ್ದಾರೆ. ''ನೇತರೌ'' ಎಂಬುದರಿಂದ ತಿಳಿಯಲ್ಪಟ್ಟ ಪ್ರಧಾನಾದಿಗಳು ಅದೃಶ್ಯತ್ವಾದಿ ಗುಣಗಳುಳ್ಳವಲ್ಲ

ಎಂಬ ಅರ್ಥವನ್ನು ''ಏವ'' ಎಂಬುದರಿಂದ ಸೂಚಿಸಿದ್ದಾರೆ. ಅದ್ರೇಶ್ಯವಾಕ್ಯದಿಂದ ಹಾಗೂ ಅದೃಶ್ಯತ್ವವಾಕ್ಯದಿಂದ ತಿಳಿಯಲ್ಪಟ್ಟ ಅದೃಶ್ಯತ್ವಾದಿಗಳು ವಿಷ್ಣುವಿನಲ್ಲಿಯೇ ಬರುತ್ತವೆ ಎಂದು ಅರ್ಥ.

ಐದು ಬಗೆಯ ಸಂಶಯಗಳನ್ನು ಪರಿಹರಿಸಬಹುದೇ ?

भावदीपः – यत्त्वत्र केनचिदुक्तं पञ्चकोटिकसंशयो नेतराविति सूत्रोक्तकोटिद्वयविरुद्ध इति, तन्न । चन्द्रिकायामेव समाधानात् ।

ಕೆಲವರು ಐದು ಬಗೆಯ ಸಂಶಯಗಳನ್ನು ಕೋಟಿದ್ವಯವನ್ನಷ್ಟೇ ನಿರಾಕರಿಸುವ ''ನೇತರೌ'' ಎಂಬ ಸೂತ್ರದಿಂದ ಪರಿಹರಿಸಲು ಸಾಧ್ಯವಿಲ್ಲವೆಂದು ಆಕ್ಷೇಪಿಸಿದ್ದಾರೆ. ಇದು ತಪ್ಪು. ತಾತ್ಪರ್ಯಚಂದ್ರಿಕೆಯಲ್ಲಿ ಈ ಪ್ರಶ್ನೆಗೆ ಸಮಾಧಾನವನ್ನು ನೀಡಿದ್ದಾರೆ.

ಮೊದಲನೆಯ ದೃಷ್ಟಾಂತವನ್ನೇಕೆ ಬಿಟ್ಟರು ?

भावदीपः – यदपि प्रथमदृष्टान्तमुल्लङ्घ्य च द्वितीयदृष्टान्तानुरोधेन प्रधानपूर्वपक्षोक्तिरयुक्तेति, तदपि न । प्रथमदृष्टान्तस्यापि मायावादिरीत्या उपादानत्व एव सम्भवात् । स्पष्टत्वार्थं टीकादौ द्वितीयोक्तेः ।

ಶ್ರುತಿಯಲ್ಲಿರುವ ಮೊದಲನೆಯ ದೃಷ್ಟಾಂತವನ್ನು ಬಿಟ್ಟು ಎರಡನೆಯ ದೃಷ್ಟಾಂತಕ್ಕೆ ಅನುಸರಿಸಿ ಪ್ರಕೃತಿಪರವಾಗಿ ಪೂರ್ವಪಕ್ಷವನ್ನು ಹೇಳಿದ್ದು ತಪ್ಪಲ್ಲವೆ? ಎಂದೂ ಸಹ ಪ್ರಶ್ನಿಸಬಾರದು. ಮೊದಲನೆಯ ದೃಷ್ಟಾಂತವೂ ಸಹ ಮಾಯಾವಾದಿಗಳ ಪ್ರಕಾರ ಉಪಾದಾನವೆಂಬ ಅರ್ಥದಲ್ಲಿಯೇ ಪರ್ಯವಸಾನವಾಗುತ್ತದೆ. ಸ್ಪಷ್ಟವಾಗಿ ಅರ್ಥವಾಗುವ ಕಾರಣ ಟೀಕೆಯಲ್ಲಿ ಎರಡನೆಯ ದೃಷ್ಟಾಂತವನ್ನೇ ಸ್ವೀಕರಿಸಿದ್ದಾರೆ.

ರುದ್ರವಿಷಯಕ ಪೂರ್ವಪಕ್ಷದ ಬಗ್ಗೆ ತಾತ್ಪರ್ಯಚಂದ್ರಿಕಾ

भावदीपः – ईशश्रुत्या रुद्रप्राप्तिरप्ययुक्ता । ब्रह्मयोनित्वादिलिङ्ग-विरोधित्वादित्यपि न । ब्रह्मयोनित्वादेर्बहुव्रीह्याश्रयणेन सावकाशत्वोपपत्तेः। रुद्रप्राप्तेश्चन्द्रिकायामुपपादनाच्च । एवमन्यदपि तदीयं दुर्वचनं निरस्यम् ।।२३।।

।। इति श्रीराघवेन्द्रयतिकृते भावदीपे अदृश्यत्वाधिकरणम् ।।

ಈಶಶ್ರುತಿ ಇರುವುದರಿಂದ ರುದ್ರನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗುತ್ತಾನೆ ಎಂದು ಹೇಳಿದ್ದೇ ತಪ್ಪು? ಹಾಗಾದಲ್ಲಿ ಬ್ರಹ್ಮಯೋನಿತ್ವವೇ ಮೊದಲಾದ ಲಿಂಗಗಳಿಗೆ ವಿರೋಧ ಬರುತ್ತದೆ ಎಂದು ಕೆಲವರು ಆಕ್ಷೇಪಿಸುತ್ತಾರೆ. ಇದನ್ನೂ ಸಹ ನಿರಾಕರಿಸಿದಂತಾಯಿತು. ಏಕೆಂದರೆ 'ಬ್ರಹ್ಮಯೋನಿತ್ವ' ಎಂಬುದು ಬಹುವ್ರೀಹಿ ಸಮಾಸವನ್ನು ಆಶ್ರಯಿಸಿದ ಕಾರಣ ಸಾವಕಾಶವಾಗುತ್ತದೆ. ಮತ್ತು ರುದ್ರನೂ ಸಹ ಹೇಗೆ ಪೂರ್ವಪಕ್ಷಕ್ಕೆ ವಿಷಯನಾಗುತ್ತಾನೆ ಎಂಬ ವಿಷಯವನ್ನು ತಾತ್ಪರ್ಯಚಂದ್ರಿಕೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಉಳಿದ ಪೂರ್ವಪಕ್ಷಗಳ ವಿಷಯದಲ್ಲಿಯೂ ಸಹ ಬೇರೆಯವರ ದುರಭಿಪ್ರಾಯಗಳನ್ನು ನಿರಾಕರಿಸಬೇಕು.

॥ ಇಲ್ಲಿ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ಅದೃಶ್ಯತ್ವಾಧಿಕರಣದಲ್ಲಿ ಕನ್ನಡ ಅನುವಾದವು ಮುಗಿಯಿತು ॥

ತಂತ್ರದೀಪಿಕೆಯಲ್ಲಿ ಅದೃಶ್ಯತ್ವಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

अदृश्यत्वाधिकरणम् (१।२।६)

।। अदृश्यत्वादिगुणको धर्मोक्तेः ।। १-२-२१ ।।

अत्र नये अभावात्मकलिङ्गं समन्वीयते । अदृश्यत्वादयो गुणा यस्य ''अक्षरात्परतः परः'' इत्युक्तपरस्य स तथा । ''शेषाद्विभाषा'' इति कः ।

ಈ ಅಧಿಕರಣದಲ್ಲಿ 'यत्तदद्रेश्यम्' ಇತ್ಯಾದಿ ಶ್ರುತಿಯಲ್ಲಿರುವ ಅಭಾವರೂಪವಾದ ಲಿಂಗಗಳನ್ನು ವಿಷ್ಣುವಿನಲ್ಲಿ ಸಮನ್ವಯಮಾಡುತ್ತಿದ್ದಾರೆ. ಅದೃಶ್ಯತ್ವವೇ ಮೊದಲಾದ ಗುಣಗಳು

ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಪ್ರತಿಪಾದ್ಯನಾದ ವ್ಯಕ್ತಿಯಲ್ಲಿ ಹೇಳಲ್ಪಟ್ಟಿವೆ. ಅವನೇ ಅಕ್ಷರಕ್ಕಿಂತ ಪರಮೋತ್ಕೃಷ್ಟವಾದ ವ್ಯಕ್ತಿಯೇ ಅದೃಶ್ಯತ್ವಾದಿಗುಣಕಃ = ಅದೃಶ್ಯತ್ವಾದಿ-ಗುಣಗಳುಳ್ಳವನು. ಇಲ್ಲಿ ಗುಣಶಬ್ದದ ಮುಂದೆ 'ಶೇಷಾದ್ವಿಭಾಷಾ' ಎಂಬ ಪಾಣಿನಿಯ ಸೂತ್ರದ ಪ್ರಕಾರ ಕಪ್ರತ್ಯಯವು ಬಂದಿದೆ.

''यत्तददेद्रश्यमग्राह्यम्'' इत्युक्तदृश्यत्वादिगुणकमक्षरं ब्रह्मैव । न तु चिदचित्प्रकृतिविरिञ्चरुद्राः । ''अथ परा यया तदक्षरमधिगम्यते'' इति ऋ गादिपरविद्याविषयत्वरूपधर्मोक्तेरित्यर्थः ।

ಸೂತ್ರಾರ್ಥ ಹೀಗಿದೆ - 'ಯತ್ತದದ್ರೇಶ್ಯಮಗ್ರಾಹ್ಯಮ್' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟಿರುವ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನು ಬ್ರಹ್ಮನೇ ಆಗಿದ್ದಾನೆ. ಚಿತ್‌ಪ್ರಕೃತಿಯಾಗಲೀ, ಅಚಿತ್ ಪ್ರಕೃತಿಯಾಗಲೀ ಚತುರ್ಮುಖಬ್ರಹ್ಮರುದ್ರಾದಿಗಳಾಗಲೀ ಪ್ರತಿಪಾದ್ಯರಲ್ಲ. ಏಕೆಂದರೆ 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಋಗ್ವೇದಾದಿ ಪರವಿದ್ಯಾವಿಷಯತ್ವವೆಂಬ ಧರ್ಮವನ್ನು ಹೇಳಿರುವುದರಿಂದ ಎಂದು.

''परतः परः'' इति श्रुत्यनुसारात्पुंनिर्देशः । तेनादृश्यत्वादिगुणकमक्षरं परतः पर इत्युक्तपरवस्तु चैकमित्युक्त्या परत्वावध्यक्षरमन्यदिति प्राप्तेर्न सिद्धान्तेऽक्षरात् परत्वं बाधकमिति ज्ञापितम् ।

'ಪರತಃ ಪರಃ' ಎಂಬ ಶ್ರುತಿಯಲ್ಲಿ ಪುಲ್ಲಿಂಗನಿರ್ದೇಶವಿದೆ. ಇದಕ್ಕನುಸಾರಿಯಾಗಿ ಸೂತ್ರದಲ್ಲಿಯೂ 'ಅದೃಶ್ಯತ್ವಾದಿಗುಣಕಃ' ಎಂದು ಪುಲ್ಲಿಂಗಪ್ರಯೋಗವನ್ನು ಮಾಡಿರುತ್ತಾರೆ. ಇದರಿಂದ ಅದೃಶ್ಯತ್ವಾದಿ ಗುಣಗಳುಳ್ಳ ಅಕ್ಷರವು ಹಾಗೂ 'ಪರತಃ ಪರಃ' ಎಂದು ಹೇಳಲ್ಪಟ್ಟ ಸರ್ವೋತ್ಕೃಷ್ಟವಸ್ತುವು ಒಂದೇ ಆಗಿದೆ ಎಂದು ಹೇಳಿದಂತಾಯಿತು. ಪರತ್ವಕ್ಕೆ ಅವಧಿಯಾದ ಅಕ್ಷರವೇ ಬೇರೆ ಎಂದು ಹೇಳಿದಂತಾಯಿತು. ಆದ್ದರಿಂದ ಅಕ್ಷರದಿಂದ ಸರ್ವೋತ್ಕೃಷ್ಟ-ವಾಗಿರುವಿಕೆಯು ಸಿದ್ಧಾಂತದಲ್ಲಿ ಬಾಧಕವಾಗುವುದಿಲ್ಲವೆಂದು ಸೂಚಿಸಿದ್ದಾರೆ.

अदृश्यत्वादिरिति वाच्ये गुणेत्युक्तिः दृश्यादन्यददृश्यमिति विग्रहेण दृश्याद्यन्योन्याभावश्च गुण इति विधिरूपत्वादीशाख्यधर्मिस्वरूपत्वं न

विरुद्धमिति द्योतयितुम् । तथापि विशेषाद्धर्मधर्मित्वमिति सूचयितुं बहुव्रीह्यर्थः कः ।

ಅದೃಶ್ಯತ್ವಾದಿ ಎಂದು ಹೇಳಬಹುದಿತ್ತು; ಆದರೂ ಸಹ 'ಗುಣ'ವೆಂದು ಏಕೆ ಹೇಳಿದ್ದಾರೆಂದರೆ 'ದೃಶ್ಯಾತ್ ಅನ್ಯತ್ ಅದೃಶ್ಯಮ್' ಎಂಬ ವಿಗ್ರಹದಿಂದ ದೃಶ್ಯಾದಿಗಳ ಭೇದವು ಗುಣವಾದ್ದರಿಂದ ವಿಧಿರೂಪವಾಗಿದೆ. ಹಾಗಾಗಿ ಈಶ ಎಂಬ ಧರ್ಮಿತ್ವರೂಪತ್ವವು ವಿರುದ್ಧವಾಗುವುದಿಲ್ಲವೆಂದು ಸೂಚಿಸುವುದಕ್ಕೋಸ್ಕರ. ಹೀಗೆ ಈಶನಿಗಿಂತ ಅಭಿನ್ನವಾಗಿದ್ದರೂ ವಿಶೇಷಬಲದಿಂದ ಅದೃಶ್ಯತ್ವಾದಿಗಳಿಗೂ ಧರ್ಮಿಗೂ ಧರ್ಮಧರ್ಮಿಭಾವವು ಯುಕ್ತವಾಗುತ್ತದೆಂದು ಸೂಚಿಸಲು ಬಹುವ್ರೀಹಿಸಮಾಸವನ್ನು ತಿಳಿಸುವ ಕಪ್ರತ್ಯಯವನ್ನು ಸೇರಿಸಿದ್ದಾರೆ.

अवधारणव्यावर्त्यं विशेषयुक्त्या निरस्यति –

।। विशेषणभेदव्यपदेशाभ्यां च नेतरौ ।। १-२-२२ ।।

ವಿಶೇಷಯುಕ್ತಿಯಿಂದ ಅವಧಾರಣದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. ''ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ''

विरिञ्चरुद्रयोः चेतनत्वेनैकीकारेण जडप्रकृतिविरिञ्चरुद्राणामितराविति द्विवचनेनात्र ग्रहणम् ।

ಇತರೌ ಎಂಬಲ್ಲಿರುವ ದ್ವಿವಚನವು ತಪ್ಪಲ್ಲ. ಏಕೆಂದರೆ, ಚತುರ್ಮುಖಬ್ರಹ್ಮ ಹಾಗೂ ರುದ್ರ ಇಬ್ಬರನ್ನೂ ಚೇತನತ್ವಧರ್ಮದಿಂದ ಸಂಗ್ರಹಿಸಿದ್ದರಿಂದ. ಹೀಗೆ ಜಡಪ್ರಕೃತಿ, ಚತುರ್ಮುಖಬ್ರಹ್ಮ, ರುದ್ರ ಮೂವರನ್ನೂ 'ಇತರೌ' ಎಂಬ ದ್ವಿವಚನಪ್ರತ್ಯಯದಿಂದಲೇ ಸಂಗ್ರಹಿಸಿದ್ದಾರೆ.

इतरौ नादृश्यत्वादिगुणकौ । कुतः? ''यः सर्वज्ञः'' इति सार्वज्ञविशेषणात् । परतः परत्वविशेणाच्च जडप्रकृतिर्न । ''तस्मादेतद् ब्रह्म'' इति च विरिञ्चरुद्रयोरदृश्यत्वादिगुणकाक्षराद् भेदव्ययदेशाच्च न विरिञ्चरुद्राविति यथाक्रमं हेतू । चशब्दस्य न केवलं धर्मोक्तेः किन्त्वाभ्यां

हेतुभ्यां चेत्यर्थः । तेनान्यत्रापि सिद्धान्तहेतोः परपक्षनिरासेऽपि व्यापार इति सूचितम् ।

ಸೂತ್ರಾರ್ಥ ಹೀಗಿದೆ -- ಇತರೌ = ಪ್ರಕೃತ್ಯಾದಿಗಳು, ನ = ಅದೃಶ್ಯತ್ವಾದಿಗುಣಗಳುಳ್ಳವರಲ್ಲ. ಏಕೆಂದರೆ ವಿಶೇಷಣಭೇದವ್ಯಪದೇಶಾಭ್ಯಾಮ್ = ಯಃ ಸರ್ವಜ್ಞಃ ಎಂಬುದಾಗಿ ಸರ್ವಜ್ಞತ್ವವು ವಿಶೇಷಣವಾಗಿದೆ. ಅಕ್ಷರಾತ್ ಪರತಃ ಪರಃ' ಎಂಬುದಾಗಿ ಪರತಃಪರತ್ವವು ವಿಶೇಷಣವಾಗಿದೆ. ಈ ಎರಡು ಹೇತುಗಳಿಂದ ಜಡಪ್ರಕೃತಿಯು ಅದೃಶ್ಯತ್ವಧರ್ಮವುಳ್ಳದ್ದಲ್ಲ. 'ತಸ್ಮಾದೇತದ್‌ಬ್ರಹ್ಮ' ಎಂಬುದಾಗಿ 'ಅನ್ಯಮೀಶಮ್' ಎಂಬುದಾಗಿಯೂ ವಿರಿಂಚ ಹಾಗೂ ರುದ್ರರನ್ನು ಅದೃಶ್ಯತ್ವಾದಿಗುಣವುಳ್ಳ ಅಕ್ಷರನಿಂದ ಭಿನ್ನವೆಂದು ಶ್ರುತಿ ಹೇಳಿದೆ. ಆದ್ದರಿಂದ ಚತುರ್ಮುಖಬ್ರಹ್ಮ, ಹಾಗೂ ರುದ್ರದೇವರು ಅದೃಶ್ಯತ್ವಾದಿಗುಣಗಳುಳ್ಳವರಲ್ಲ. ಹೀಗೆ ಇಲ್ಲಿ ವಿಶೇಷಣ ಹಾಗೂ ಭೇದವ್ಯಪದೇಶಗಳು ಕ್ರಮವಾಗಿ ಹೇತುವಾಗಿವೆಯೆಂದು ತಿಳಿಯಬೇಕು. ಸೂತ್ರದಲ್ಲಿರುವ ಚಶಬ್ದವು ಧರ್ಮೋಕ್ತಿಯಿಂದ ಮಾತ್ರವಲ್ಲದೇ ಹಿಂದೆ ಹೇಳಿದ ಎರಡು ಯುಕ್ತಿಗಳಿಂದಲೂ ಸಹ ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಇದರಿಂದ ಬೇರೆ ಸ್ಥಳದಲ್ಲಿಯೂ ಸಿದ್ಧಾಂತಸ್ಥಾಪಕವಾದ ಹೇತು ಪರಪಕ್ಷನಿರಾಕರಣೆಗೂ ಸಹ ಸಾಧನವಾಗುತ್ತದೆಂದು ಸೂಚಿಸಿದಂತಾಯಿತು.

चिदचितोः प्रकृतित्वेनैक्यं जीवत्वेन च ब्रह्मरुद्रयोरिति इतराविति चत्वारोऽपि गृह्यन्त इत्यप्याहुः ।।

ಚಿತ್‌ಪ್ರಕೃತಿ ಹಾಗೂ ಅಚಿತ್‌ಪ್ರಕೃತಿಗಳನ್ನು ಪ್ರಕೃತಿತ್ವಧರ್ಮದಿಂದ ಏಕೀಕರಿಸಿ ಮತ್ತು ಚತುರ್ಮುಖಬ್ರಹ್ಮ ರುದ್ರರನ್ನು ಜೀವತ್ವೇನ ಏಕೀಕರಿಸಿ, ಇತರೌ ಎಂಬ ಪದದಿಂದ ನಾಲ್ವರನ್ನು ಸಂಗ್ರಹಿಸಿದ್ದಾರೆಂದೂ ಸಹ ಹೇಳುತ್ತಾರೆ.

इतश्चैवमित्याह -

।। रूपोपन्यासाच्च ।। १-२-२३ ।।

ಮತ್ತೊಂದು ಕಾರಣದಿಂದಲೂ ಅದೃಶ್ಯತ್ವಾದಿಗುಣಗಳುಳ್ಳವನು ಮಹಾವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. 'ಓಂ ರೂಪೋಪನ್ಯಾಸಾಚ್ಚ ಓಂ''.

''यदा पश्यः पश्यते रुग्मवर्णम्'' इति रुग्मवर्णोपन्यासाच्च अदृश्यत्वादिगुणको ब्रह्मैवेत्यर्थः ! अन्येषां मिश्ररूपत्वेन विष्णोरेव शुद्धरूपतया तस्यैवात्र ग्रहणादिति भावः ।।६।।

ಸೂತ್ರಾರ್ಥಹೀಗಿದೆ - 'यदा पश्यः पश्यते रुग्मवर्णम्' ಎಂಬುದಾಗಿ ಶುದ್ಧವಾದ ಭಂಗಾರವರ್ಣವನ್ನು ಶ್ರುತಿ ಹೇಳಿದೆ. ಆದ್ದರಿಂದ ಅದೃಶ್ಯತ್ವಾದಿಗುಣಗಳುಳ್ಳವನು ಅಂತಹ ಬ್ರಹ್ಮನೇ ಆಗಬೇಕೆಂದರ್ಥ. ಬೇರೆಯವರಿಗೆ ಮಿಶ್ರರೂಪವಿರುವುದರಿಂದ ವಿಷ್ಣುವಿಗೆ ಮಾತ್ರ ಶುದ್ಧವಾದ ಭಂಗಾರದ ರೂಪವಿರುವುದರಿಂದ ವಿಷ್ಣುವನ್ನೇ ಸ್ವೀಕರಿಸಬೇಕೆಂದು ಅಭಿಪ್ರಾಯ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಮುಗಿಯಿತು ॥

* * * * *

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ಅದೃಶ್ಯತ್ವಾಧಿಕರಣ
ಮತ್ತು
ವಿಮರ್ಶೆ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - ಜಡಭೂತವಾದ ಜಗತ್ತು ಜಡವೇ ಆಗಿರುವ ಪ್ರಧಾನದ ವಿಕಾರವಾಗಿರುತ್ತದೋ ಹೊರತು, ಚೇತನನಾದ ಬ್ರಹ್ಮನ ವಿಕಾರವಾಗುವುದಿಲ್ಲ. ಏಕೆಂದರೆ ವೈರೂಪ್ಯವಿದೆ. ಆದ್ದರಿಂದ ಅಚೇತನವೇ ಹುಟ್ಟುತ್ತದೆಂದು ಹೇಳಬೇಕು.

ಆದ್ದರಿಂದ 'ತಥಾऽಕ್ಷರಾತ್ಸಂಭವತೀಹ ವಿಶ್ವಮ್' ಎಂಬ ಶ್ರುತಿಯಲ್ಲಿ ಪ್ರಧಾನಕ್ಕೇ ಜಗತ್ಕಾರಣತ್ವವನ್ನು ಹೇಳಲಾಗಿದೆ ಎಂದು ಪೂರ್ವಪಕ್ಷ.

ಅದ್ವೈತಮತದಂತೆ ಸಿದ್ಧಾಂತ ಹೀಗಿದೆ - ಜಗತ್ತು ಬ್ರಹ್ಮನ ವಿಕಾರವಲ್ಲ ಹೊರತು, ಬ್ರಹ್ಮನ ವಿವರ್ತವಾಗಿದೆ. ಯಾವರೀತಿಯಾಗಿ ಸರ್ಪವು ರಜ್ಜುವಿನಿಂದ ವಿವರ್ತವಾಗಿದೆ ಹೊರತು, ವಿಕಾರವಾಗಿಲ್ಲವೋ ಅದರಂತೆ. ಆದ್ದರಿಂದ ಜಗತ್ತಿಗೆ ಬ್ರಹ್ಮನು ಅಧಿಷ್ಠಾನನಾಗಿದ್ದಾನೆ ಹಾಗೂ ಜಗತ್ತು ಅಧ್ಯಾಸವಾಗಿದೆ. ಅಧ್ಯಾಸಮಾಡುವ ವಸ್ತುವಿಗೂ ಅಧಿಷ್ಠಾನಮಾಡುವ ವಸ್ತುವಿಗೂ ಸಾರೂಪ್ಯ-ವಿರಬೇಕೆಂಬ ನಿಯಮವಿಲ್ಲ.

ಇದನ್ನೇ ಭಾಮತಿಯಲ್ಲಿ ಹೀಗೆ ಹೇಳಲಾಗಿದೆ -

ವಿವರ್ತಸ್ತು ಪ್ರಪಂಚೋऽಯಂ ಬ್ರಹ್ಮಣೋऽಪರಿಣಾಮಿನಃ।
ಅನಾದಿವಾಸನೋದ್ಭೂತೋ ನ ಸಾರೂಪ್ಯಮಪೇಕ್ಷತೇ॥

ಎಂದರೆ ಈ ಪ್ರಂಪಚವು ಪರಿಣಾಮವಿಲ್ಲದ ಬ್ರಹ್ಮನ ಪರಿಣಾಮಭೂತವಾದದ್ದಲ್ಲ ಹೊರತು, ವಿವರ್ತವಾಗಿದೆ. ಅನಾದಿಯಾದ ಸಂಸ್ಕಾರದಿಂದ ಪ್ರಪಂಚವು ಆರೋಪಿತವಾಗಿದೆಯೆಂದು ತಿಳಿಯುವುದರಿಂದ ಸಾರೂಪ್ಯದ ಅಪೇಕ್ಷೆಯಿರುವುದಿಲ್ಲ ಎಂದು ಅಭಿಪ್ರಾಯ.

ಆದ್ದರಿಂದ ಅದೃಶ್ಯತ್ವಾದಿಗುಣಗಳುಳ್ಳವನು ಜ್ಞೇಯನಾಗಿರುವ ಶುದ್ಧಬ್ರಹ್ಮನೇ ಆಗಿದ್ದಾನೆಂದು ಸಿದ್ಧಾಂತ. ಇಷ್ಟು ಅದ್ವೈತಿಗಳ ಅಭಿಪ್ರಾಯ.

ದ್ವೈತ ಸಿದ್ಧಾಂತದಂತೆ ಅದ್ವೈತಮತ ವಿಮರ್ಶೆಯು ಹೀಗಿದೆ - ಹಿಂದೆ ಹೇಳಿದ ಅವರ ಅಭಿಪ್ರಾಯ ಸರಿಯಲ್ಲ. ನಿರ್ವಿಶೇಷಬ್ರಹ್ಮನನ್ನು ಈ ಅಧಿಕರಣವು ಪ್ರತಿಪಾದಿಸುವುದಾದರೆ ಪಾದಸಂಗತಿಯು ಕೂಡುವುದಿಲ್ಲ. ಏಕೆಂದರೆ ಎರಡನೆಯ ಪಾದವು ಸಗುಣಬ್ರಹ್ಮನಲ್ಲಿ ಅಸ್ಪಷ್ಟಬ್ರಹ್ಮ-ಲಿಂಗಗಳ ಸಮನ್ವಯವನ್ನು ಮಾಡುತ್ತಿದೆಯೆಂದು ಅದ್ವೈತಿಗಳು ಹೇಳುತ್ತಾರೆ. ಆದ್ದರಿಂದ ಸಗುಣಬ್ರಹ್ಮನೇ ಪ್ರತಿಪಾದ್ಯನಾಗಬೇಕು ಹೊರತು, ನಿರ್ವಿಶೇಷಬ್ರಹ್ಮನಲ್ಲ. ಹಾಗೇ ನಿರ್ವಿಶೇಷಬ್ರಹ್ಮನಲ್ಲಿ ಸಮನ್ವಯ ಮಾಡಿದರೆ ಪಾದಾಸಂಗತಿ ರೂಪ ದೋಷ ಬರುತ್ತದೆ.

ಮತ್ತು ನಿಮ್ಮ ಮತದಲ್ಲಿ ಬ್ರಹ್ಮನು ವಿವರ್ತಕಾರಣನಾಗಿದ್ದಾನೆಂಬ ವಿಚಾರವನ್ನು ಆರಂಭಣಾದ್ಯಧಿಕರಣಗಳಲ್ಲಿ ನಿರ್ಣಯಿಸಲಾಗಿದೆ. ಹೀಗಿರುವಾಗ ಈ ಅಧಿಕರಣದಲ್ಲಿ ವಿಕಾರ-ವಾಗಿದೆಯೆಂಬ ಅಂಶವನ್ನು ಆಧರಿಸಿ ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲ.

ಮತ್ತು ಶ್ರುತಿಯು ವಿವರ್ತಕಾರಣವನ್ನು ಹೇಳುವುದಾದರೆ ರಜ್ಜುಸರ್ಪಾದಿದೃಷ್ಟಾಂತವನ್ನೇ ನೀಡಬೇಕಿತ್ತು. ಹೊರತು, ಊರ್ಣನಾಭಿ, ಪೃಥಿವೀ, ಕೇಶಲೋಮಾದಿದೃಷ್ಟಾಂತಗಳನ್ನು ನೀಡಿದ್ದು ತಪ್ಪಾಗುತ್ತದೆ. ಏಕೆಂದರೆ ಸರ್ಪವು ರಜ್ಜುವಿನಲ್ಲಿ ಆರೋಪಿತವಾದಂತೆ ಓಷಧಿ ಮೊದಲಾದವುಗಳು ಪೃಥಿವ್ಯಾದಿಗಳಲ್ಲಿ ಆರೋಪಿತವಾಗಿಲ್ಲ.

ಶ್ರುತಿಯು ವಿವರ್ತಕಾರಣವನ್ನು ಹೇಳುವುದಾದರೆ ಅಪ್ರಾಮಾಣ್ಯದೋಷ ಬರುತ್ತದೆಂಬ ವಿಚಾರವನ್ನು ನ್ಯಾಯಾಮೃತಾದಿ ಬೇರೆ ಗ್ರಂಥಗಳಲ್ಲಿ ಸಮರ್ಥಿಸಿದ್ದೇವೆ.

ಮತ್ತು 'ಯದ್ಭೂತಯೋನಿಮ್' ಎಂಬಲ್ಲಿ ಯೋನಿಪದವೂ ಸಹ ಅಯುಕ್ತವಾಗುತ್ತದೆ. ಏಕೆಂದರೆ ಸರ್ಪಕ್ಕೆ ರಜ್ಜು ಎಂಬುದು ಕಾರಣವಾಗಿದೆ (ಯೋನಿಯಾಗಿದೆ) ಎಂದು ಯಾರೂ ಸಹ ಹೇಳುವುದಿಲ್ಲ. ಅಥವಾ ಸರ್ಪವು ರಜ್ಜುವಿನಿಂದ ಹುಟ್ಟುತ್ತದೆಂದೂ ಸಹ ಯಾರೂ ಹೇಳುವುದಿಲ್ಲ.

ಮತ್ತು ನಿಮ್ಮ ಮತದಲ್ಲಿ 'ಧರ್ಮೋಕ್ತೇಃ' ಎಂಬ ಸೂತ್ರದಲ್ಲಿರುವ ಪದಗಳಿಂದ ಸಾರ್ವಜ್ಞ ಮೊದಲಾದ ಗುಣಗಳನ್ನು ಹಾಗೂ 'ಸೂರ್ಯದ್ವಾರೇಣ ಗಮ್ಯತ್ವ' ಮೊದಲಾದ ಗುಣಗಳನ್ನೂ

ಹೇಳಲಾಗುತ್ತದೆ. ಇಲ್ಲಿ ಸಾರ್ವಜ್ಞಗುಣವು 'ಯಸ್ಸರ್ವಜ್ಞಃ' ಎಂಬ ವಾಕ್ಯಶೇಷದಿಂದ ಹೇಳಲ್ಪಟ್ಟಿದೆ. 'ಸೂರ್ಯದ್ವಾರೇಣ ಗಮ್ಯತ್ವ' ಎಂಬ ಧರ್ಮವು 'ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ'' ಎಂಬ ಸ್ಮೃತಿಯಿಂದ ತಿಳಿಯಲ್ಪಟ್ಟಿದೆ. ಹೀಗೆ ನೀವೇ ವ್ಯಾಖ್ಯಾನಿಸುವ ಸಾರ್ವಜ್ಞ, ಸೂರ್ಯದ್ವಾರೇಣ ಗಮ್ಯತ್ವ ಮೊದಲಾದ ಧರ್ಮಗಳಿಂದ ವಿಶಿಷ್ಟನಾದವನು ವಿಶ್ವ(ಪ್ರಪಂಚ)ವಿವರ್ತಕ್ಕೆ ಅಧಿಷ್ಠಾನನಾಗಿದ್ದಾನೆ. ಮುಮುಕ್ಷುಗಳಿಂದ ಜ್ಞೇಯನಾಗಿದ್ದಾನೆ, ಆದರೆ ಶುದ್ಧನು ಸಕಲ ಧರ್ಮಗಳಿಂದ ರಹಿತನಾಗಿದ್ದಾನೆ. ಇಂತಹವನಲ್ಲಿ ಈ ಯಾವ ಧರ್ಮಗಳನ್ನೂ ಸಹ ಹೇಳಲು ಶುದ್ಧಬ್ರಹ್ಮನಲ್ಲಿ ಸಾಧ್ಯವಿಲ್ಲ. ಆದ್ದರಿಂದ ಅದೃಶ್ಯತ್ವಾದಿ ಗುಣವುಳ್ಳವನು ಶುದ್ಧಬ್ರಹ್ಮನಾಗಲು ಸಾಧ್ಯವಿಲ್ಲ. ಆದ್ದರಿಂದ ಅದ್ವೈತಿಗಳ ಅಧಿಕರಣ ಶರೀರವು ಅಯುಕ್ತವಾಗಿದೆ.

ಅದ್ವೈತಿಗಳು 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬ ಎರಡನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸಿದ್ದಾರೆ - ಯಾವುದು ಅಕ್ಷರತತ್ತ್ವವಾಗಿದೆಯೋ ಅದು 'ದಿವ್ಯೋ ಹ್ಯಮೂರ್ತಃ' ಎಂಬಲ್ಲಿ ಹೇಳಿದಂತೆ ದಿವ್ಯತ್ವಾದಿಧರ್ಮಗಳಿಂದ ಯುಕ್ತವಾಗಿದೆ. ಇಲ್ಲಿರುವ ದಿವ್ಯತ್ವಾದಿಧರ್ಮಗಳು ಜೀವಾದಿಗಳು ಅಕ್ಷರತತ್ತ್ವವಲ್ಲವೆಂದು ವ್ಯಾವೃತ್ತಿ(ಭೇದ)ಯನ್ನು ಉಂಟುಮಾಡುತ್ತವೆ ಎಂದು.

ಇದೂ ಸಹ ತಪ್ಪು - ಈ ಅಧಿಕರಣಕ್ಕೆ ವಿಷಯನಾದ ಅದೃಶ್ಯನಾದ ಆತ್ಮನು ವಾಸ್ತವಿಕವಾಗಿ ನಿರ್ವಿಶೇಷನಾಗಿದ್ದಾನೆ. ಆದ್ದರಿಂದ ಅವನಲ್ಲಿ ಆರೋಪಿತವಾದ ವಿಶೇಷಣವನ್ನು ಅಥವಾ ತತ್ಸಾಧ್ಯವಾದ ಭೇದವನ್ನು ವಿರೋಧವಿಲ್ಲದಂತೆ ಕೂಡಿಸಬಹುದು. ಆದರೆ ಮುಮುಕ್ಷುವನ್ನು ಕುರಿತು ಭೇದಭ್ರಮವನ್ನು ನಿರಾಸ ಮಾಡಬೇಕು. ಅದಕ್ಕಾಗಿ ಅಭೇದವನ್ನೇ ಅದ್ವೈತಿಗಳು ಸಮರ್ಥಿಸಬೇಕು ಹೊರತು, ಅಕ್ಷರಜೀವರಿಗೆ ಭೇದವನ್ನಾಗಲೀ, ಅಥವಾ ಅವರಿಗೆ ಭೇದಕವಾದ ವಿಶೇಷಣವನ್ನಾಗಲೀ ಹೇಳುವುದರಿಂದ ಏನೂ ಪ್ರಯೋಜನವಿಲ್ಲ.

ವಿಶಿಷ್ಟಸ್ವರೂಪನಾದ ಜೀವನು ಶುದ್ಧಬ್ರಹ್ಮನಿಂದ ಭಿನ್ನನೇ ಆಗಿದ್ದಾನೆ. ಶುದ್ಧನಾದ ಜೀವನಿಗೂ ಶುದ್ಧಬ್ರಹ್ಮನಿಗಷ್ಟೇ ನಾವು ಅಭೇದವನ್ನು ಹೇಳುತ್ತೇವೆ. ವಿಶಿಷ್ಟರೂಪನಾದ ಜೀವನಿಗೆ ಶುದ್ಧಬ್ರಹ್ಮನಿಂದ ಅಭೇದಭ್ರಮವು ಬಂದರೆ ಅದನ್ನು ನಿರಾಸಮಾಡುವುದಕ್ಕಾಗಿ ದಿವ್ಯತ್ವಾದಿವಿಶೇಷಣಗಳನ್ನು ಹೇಳಲಾಗಿದೆಯೆಂದು ಎಂದು ಅದ್ವೈತಿಗಳು ಆಕ್ಷೇಪಿಸಬಹುದು. ಇದು ತಪ್ಪು. ವಿಶಿಷ್ಟಸ್ವರೂಪನಾದ ಜೀವನಿಗೆ ಶುದ್ಧನಿಂದ ಇರುವ ಅಭೇದಭ್ರಮವನ್ನು ನಿರಾಸಮಾಡುವುದಕ್ಕಾಗಿ ಭೇದವನ್ನು ಹಾಗೂ

ಭೇದಕಧರ್ಮವನ್ನು ನೀವು ಹೇಳುತ್ತಿದ್ದೀರಿ. ಈ ಎರಡರ ಜ್ಞಾನವೂ ಸಹ ಭ್ರಮಾತ್ಮಕವೆಂದೇ ನಿಮ್ಮ ಅಭಿಪ್ರಾಯ. ಹಾಗಾಗಿ ಒಂದು ಭ್ರಮೆಯನ್ನು ಪರಿಹರಿಸುವುದಕ್ಕಾಗಿ ಎರಡು ಭ್ರಮೆಯನ್ನು ಒಪ್ಪಿದಂತಾಗುವುದು. ಇದು ಯುಕ್ತವಲ್ಲ.

ಇನ್ನು ಶುದ್ಧಬ್ರಹ್ಮನನ್ನು ತಿಳಿಸುವ ಮೂಲಕ ಎರಡೂ ಭ್ರಮೆಗಳನ್ನು ಮುಂದೆ ಪರಿಹರಿಸುತ್ತೇವೆ ಎಂದು ಅದ್ವೈತಿಗಳು ಹೇಳಿದರೆ, ವಿಶಿಷ್ಟರಿಗಿರುವ ಭೇದಧರ್ಮ(ಭ್ರಮ)ವನ್ನೂ ಸಹ 'ಅದೃಶ್ಯತ್ವಾದಿಗುಣಕಃ' ಎಂಬ ಪ್ರತಿಜ್ಞೆಯಿಂದಲೇ ನಿರಾಕರಿಸಬಹುದು. ಹೇಗೆಂದರೆ ಈ ಪ್ರತಿಜ್ಞಾವಾಕ್ಯವು ಲಕ್ಷಣಾವೃತ್ತಿಯಿಂದ ಶುದ್ಧಬ್ರಹ್ಮನನ್ನು ಪ್ರತಿಪಾದಿಸುತ್ತಿದೆ. ಹೀಗೆ ಶುದ್ಧಬ್ರಹ್ಮನ ಜ್ಞಾನವು ಪ್ರತಿಜ್ಞೆಯಿಂದಲೇ ಬರುತ್ತಿರುವಾಗ ಅದರಿಂದಲೇ ಎರಡನೆಯ ಸೂತ್ರದ ಸಾರ್ಥಕ್ಯವು ಸಿದ್ಧವಾಯಿತು. ಆದ್ದರಿಂದ ಮುಂದಿನ ಸೂತ್ರಗಳೆಲ್ಲವೂ ವ್ಯರ್ಥವಾಗುತ್ತದೆ.

ಅದ್ವೈತಿಗಳು 'ರೂಪೋಪನ್ಯಾಸಾಚ್ಚ ' ಎಂಬ ಮೂರನೆಯ ಸೂತ್ರಕ್ಕೆ ವ್ಯಾಖ್ಯಾನಿಸುತ್ತಾ 'ಪುರುಷ ಏವೇದಂ ವಿಶ್ವಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಾತ್ಮಕತ್ವವೇ ರೂಪಶಬ್ದದ ಅರ್ಥವೆಂದು ಹೇಳಿದ್ದಾರೆ.

ಇದು ತಪ್ಪು. ನಾವು ಹೇಳುವ ಪ್ರಕಾರ ರೂಪಶಬ್ದಕ್ಕೆ 'ರುಗ್ವರ್ಣ' ಎಂಬರ್ಥವೇ ಪ್ರಸಿದ್ಧವಾಗಿದೆ. ಇದನ್ನು ಬಿಟ್ಟು ಸರ್ವಾತ್ಮಕತ್ವವೆಂಬ ಅರ್ಥದಲ್ಲಿ ರೂಪಶಬ್ದವನ್ನು ಪ್ರಯೋಗಿಸುವುದು ಕಂಡುಬಂದಿಲ್ಲ.

ಈ ಅಧಿಕರಣದಲ್ಲಿಯೂ ಸಹ ಅದ್ವೈತಿಗಳಿಗೆ ಅನುಕೂಲವಾದ ವಿಚಾರ ಇರುವುದಿಲ್ಲ. ಹೇಗೆಂದರೆ 'ಅದೃಶ್ಯತ್ವಾದಿಗುಣಕಃ' ಎಂಬ ಸೂತ್ರವು ಗುಣವನ್ನು ಹೇಳುತ್ತಿದೆ. 'ವಿಶೇಷಣಭೇದವ್ಯಪದೇಶಾಭ್ಯಾಂ' ಎಂಬ ಸೂತ್ರವು ಜೀವಾದಿಗಳಿಗಿಂತ ಬ್ರಹ್ಮನಿಗೆ ಭೇದವನ್ನು ಹೇಳುತ್ತಿದೆ. ಗುಣವಚನವು ನಿರ್ಗುಣತ್ವಕ್ಕೆ ಪ್ರತಿಕೂಲವಾಗಿದೆ. ಭೇದವಚನವು ಅದ್ವೈತಕ್ಕೆ ಪ್ರತಿಕೂಲವಾಗಿದೆಯೆಂಬ ವಿಚಾರವನ್ನು ಸ್ಪಷ್ಟವಾಗಿ ತಿಳಿಯಬೇಕು.

ರಾಮಾನುಜರು ಹೀಗೆ ಹೇಳುತ್ತಾರೆ - ಅದೃಶ್ಯತ್ವಾದಿಗುಣಕತ್ವವು ಪ್ರಕೃತಿಯ ಧರ್ಮವಾಗಿದೆ. ಮತ್ತು ಅಕ್ಷರಾತ್ಪರತಃ ಪರತ್ವವೆಂಬುದು ಜೀವನ ಧರ್ಮವಾಗಿದೆಯೆಂಬುದು ಪೂರ್ವಪಕ್ಷ. ಎರಡೂ ಸಹ ಪರಮಾತ್ಮನ ಧರ್ಮಗಳೇ ಆಗಿವೆಯೆಂದು ಸಿದ್ಧಾಂತ.

ರಾಮಾನುಜರ ಈ ಅಭಿಪ್ರಾಯವು ಅಸಾಧುವಾಗಿದೆ.

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ ।ಅಪ್ರಾಣೋ ಹ್ಯಮನಾಶ್ಶುಭ್ರೋ ಅಕ್ಷರಾತ್ಪರತಃ ಪರಃ' ಎಂಬುದಾಗಿ ದಿವ್ಯತ್ವ, ಅಮೂರ್ತತ್ವ ವ್ಯಾಪ್ತತ್ವ, ಪ್ರಾಣತ್ವ ಮೊದಲಾದ ಧರ್ಮಗಳಿಂದ ಅಕ್ಷರಾತ್ಪರತಃ ಪರವು ವಿಶಿಷ್ಟವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಆದರೆ ಜೀವನಲ್ಲಿ ಅಮೂರ್ತತ್ವ ಮೊದಲಾದ ಯಾವುದೇ ಧರ್ಮಗಳು ಇರುವುದಿಲ್ಲ. ಆದ್ದರಿಂದ ಜೀವನು ಅಕ್ಷರಾತ್ಪರತಃ ಪರನಾಗುತ್ತಾನೆಂದು ಶಂಕೆಯೇ ಹುಟ್ಟುವುದಿಲ್ಲ.

ಇಲ್ಲಿಗೆ ಅದೃಶ್ಯತ್ವಾದ್ಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

॥ ಶ್ರೀಲಕ್ಷ್ಮೀಹಯಗ್ರೀವೋ ಜಯತೇತಮಾಮ್ ॥

ವೈಶ್ವಾನರಾಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ,
ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷ ವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್‌ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ವೈಶ್ವಾನರಾಧಿಕರಣ

ಬ್ರಹ್ಮಸೂತ್ರ

'ವೈಶ್ವಾನರಃ ಸಾಧಾರಣಶಬ್ದವಿಶೇಷಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। वैश्वानरः साधारणशब्दविशेषात् ।। २४ ।।

ಸೂತ್ರಾರ್ಥ - 'ಅಯಮಗ್ನಿಃ ವೈಶ್ವಾನರಃ' ಇತ್ಯಾದಿ ವಾಕ್ಯಗಳಲ್ಲಿ ಉಲ್ಲೇಖಿಸಲ್ಪಟ್ಟ ವೈಶ್ವಾನರನು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಅಗ್ನಿ ಮತ್ತು ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ ವೈಶ್ವಾನರ ಎಂಬ ಶಬ್ದದಲ್ಲಿ 'ಆತ್ಮ' ಎಂಬ ವಿಶೇಷಣವನ್ನು ನೀಡಿದ್ದರಿಂದ.

ಅರ್ಥ - ವೈಶ್ವಾನರಃ = 'ಯಸ್ತ್ವೇತಮ್' ಇತ್ಯಾದಿಯಾಗಿ ಛಾಂದೋಗ್ಯದಲ್ಲಿರುವ ವೈಶ್ವಾನರಶಬ್ದದಿಂದ ವಾಚ್ಯನಾದವನು ವಿಷ್ಣುವೇ; ಹೊರತು ಅಗ್ನಿಯಲ್ಲ. ಏಕೆಂದರೆ, ಸಾಧಾರಣಶಬ್ದವಿಶೇಷಾತ್ = ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ ವೈಶ್ವಾನರಶಬ್ದಕ್ಕೆ 'ಆತ್ಮಾನಂ ವೈಶ್ವಾನರಮ್' ಎಂಬ ಶ್ರುತಿಯಲ್ಲಿ ಆತ್ಮಶಬ್ದವನ್ನು ವಿಶೇಷಣವನ್ನಾಗಿ ಹೇಳಲಾಗಿದೆ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಸರ್ವಗತನಾದ ವೈಶ್ವಾನರನು ಯಾರು ?

ब्रह्मसूत्रभाष्यम् — अदृश्यत्वादिगुणेषु सर्वगतत्वं 'यस्त्वेतमेवं प्रादेशमात्रमभिविमानमात्मानं वैश्वानरमुपास्ते' (छां. ५-१८-१.)इति वैश्वानरस्योक्तमिति ।।

ಅನುವಾದ - ಹಿಂದಿನ ಅಧಿಕರಣದಲ್ಲಿ ಅದೃಶ್ಯತ್ವವೆಂಬ ಗುಣದ ಸಮನ್ವಯವನ್ನು ಮಾಡುವಾಗ ಸರ್ವಗತತ್ವವನ್ನು ವಿಷ್ಣುವಿನಲ್ಲಿ ಹೇಳಲಾಯಿತು. ಆದರೆ ಛಾಂದೋಗ್ಯಶ್ರುತಿಯು ಅದೇ ಸರ್ವಗತತ್ವಗುಣವನ್ನು ವೈಶ್ವಾನರನಲ್ಲಿ ಹೇಳುತ್ತಿದೆ. 'ಯಾವ ಅಧಿಕಾರಿಯು ಒಂಭತ್ತುಅಂಗುಲದಷ್ಟು ಪರಿಮಾಣವುಳ್ಳ, ಎಲ್ಲ ದಿಕ್ಕು ಗಳಲ್ಲಿ ಸಂಚಾರಮಾಡುತ್ತಿರುವ ಎಲ್ಲರ ಹೃದಯದಲ್ಲಿ ನೆಲೆಸಿರುವ ವೈಶ್ವಾನರ ಎಂಬ ಶಬ್ದದಿಂದ ಪ್ರತಿಪಾದ್ಯನಾದವನನ್ನು ಉಪಾಸನೆ ಮಾಡುತ್ತಾನೋ' ಹೀಗೆ ವೈಶ್ವಾನರನಿಗೆ ಸರ್ವಗತತ್ವವು ಹೇಳಲ್ಪಟ್ಟಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳನ್ನು ಸಮನ್ವಯ ಮಾಡುವುದಕ್ಕಾಗಿ ಬ್ರಹ್ಮನಲ್ಲಿ ವೈಶ್ವಾನರ ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆ. ಹಿಂದಿನ ಅಧಿಕರಣದಿಂದ ಸಂಗತಿಯನ್ನು ತೋರಿಸುತ್ತಾ ವಿಷಯ-ವಾಕ್ಯವನ್ನು ಉದಾಹರಿಸುವ ಮೂಲಕ ವಿಷಯಾದಿಗಳನ್ನು ಸೂಚನೆ ಮಾಡುತ್ತಿದ್ದಾರೆ.

ಅದೃಶ್ಯತ್ವಾದಿಗುಣೇಷು = ವಿಷ್ಣುವಿನಲ್ಲಿ ಸಮನ್ವಯಿಸಿದ ಅದೃಶ್ಯತ್ವ ಮೊದಲಾದ ಗುಣಗಳ ಮಧ್ಯದಲ್ಲಿ, ಸರ್ವಗತತ್ವಂ = ಸರ್ವಗತತ್ವ ಎಂಬ ಧರ್ಮವನ್ನೂ, ಸಮನ್ವಯ ಮಾಡಲಾಯಿತು. ಆದರೆ ಈ ಗುಣವನ್ನು ಛಾಂದೋಗ್ಯದಲ್ಲಿ ಯಃ = ಯಾವ ಅಧಿಕಾರಿಯು, ಪ್ರಾದೇಶಮಾತ್ರಂ = ಒಂಭತ್ತು ಅಂಗುಲದಷ್ಟು ಪರಿಮಾಣವುಳ್ಳ, ಅಭಿವಿಮಾನಂ = ಎಲ್ಲ ದಿಕ್ಕುಗಳಲ್ಲಿ ಸಂಚರಿಸುತ್ತಿರುವ, ಆತ್ಮಾನಂ =

ಎಲ್ಲರ ಸ್ವಾಮಿಯಾದ, ವೈಶ್ವಾನರಂ = ವೈಶ್ವಾನರ ಎಂಬ ಶಬ್ದದಿಂದ ವಾಚ್ಯನಾದವನನ್ನು, ಉಪಾಸ್ತೇ = ಉಪಾಸನೆ ಮಾಡುತ್ತಾನೋ, ಇತಿ = ಹೀಗೆ, ವೈಶ್ವಾನರಸ್ಯ = ವೈಶ್ವಾನರನಿಗೆ, ಉಕ್ತಮ್ = (ಸರ್ವಗತತ್ವವನ್ನು) ಹೇಳಲಾಗಿದೆ.

'ವೈಶ್ವಾನರ' ಎಂಬ ಹೆಸರು ಮಹಾವಿಷ್ಣುವಿಗೆ ಮಾತ್ರ

ಬ್ರಹ್ಮಸೂತ್ರಭಾಷ್ಯಮ್ – अत आह –

।। वैश्वानरः साधारणशब्दविशेषात् ।। अग्नाविष्ण्वोः साधारणस्य वैश्वानरशब्दस्य विष्णावेव प्रसिद्धात्मशब्देन विशेषणाद् वैश्वानरो विष्णुरेव ।। २४ ।।

ವೈಶ್ವಾನರ ಯಾರು? ಎಂಬುದನ್ನು ನಿರ್ಧರಿಸುವುದಕ್ಕಾಗಿ ಸೂತ್ರಕಾರರು ವೈಶ್ವಾನರಃ ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಅಗ್ನಿ ಮತ್ತು ವಿಷ್ಣು ಇಬ್ಬರನ್ನೂ ಪ್ರತಿಪಾದನೆ ಮಾಡುವ ವೈಶ್ವಾನರ ಎಂಬ ಪದಕ್ಕೆ ವಿಷ್ಣುವಿನಲ್ಲೇ ಮುಖ್ಯಪ್ರತಿಪಾದ್ಯತ್ವವನ್ನು ಹೇಳಬೇಕು. ಏಕೆಂದರೆ ವಿಷ್ಣುವಿನಲ್ಲೇ ಪ್ರಸಿದ್ಧವಾದ ಆತ್ಮಶಬ್ದದಿಂದ ಗುಣವನ್ನು ಹೇಳಿರುವುದರಿಂದ ವಿಷ್ಣುವೇ ವೈಶ್ವಾನರನಾಗುತ್ತಾನೆ.

ಪ್ರತಿಪದಾರ್ಥ -- ಸಿದ್ಧಾಂತವನ್ನು ತೋರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. ಅತಃ = ಈ ಪೂರ್ವಪಕ್ಷವನ್ನು ಪರಿಹರಿಸಲು, ಆಹ = ಸೂತ್ರಕಾರರು ಈ ಸೂತ್ರವನ್ನು ಹೇಳುತ್ತಿದ್ದಾರೆ. ಅಗ್ನಾವಿಷ್ಣ್ವೋಃ = ಅಗ್ನಿ ಹಾಗೂ ವಿಷ್ಣು ಇವರಿಬ್ಬರಲ್ಲಿ, ಸಾಧಾರಣಸ್ಯ = ಸಮಾನವಾದ ವಾಚಕತ್ವವು ತೋರಿದರೂ, ವೈಶ್ವಾನರಶಬ್ದಸ್ಯ = ವೈಶ್ವಾನರ ಎಂಬ ಪದಕ್ಕೆ, ವಿಷ್ಣಾವೇವ = ವಿಷ್ಣುವಿನಲ್ಲೇ ಮುಖ್ಯಪ್ರತಿಪಾದ್ಯತ್ವವನ್ನು ಹೇಳಬೇಕು. ಏಕೆಂದರೆ ಪ್ರಸಿದ್ಧಆತ್ಮಶಬ್ದೇನ = ಶ್ರೀಹರಿಯಲ್ಲಿಯೇ ಪ್ರಸಿದ್ಧವಾದ ಆತ್ಮಶಬ್ದದಿಂದ, ವಿಶೇಷಣಾತ್ = ವಿಶೇಷಣವನ್ನಾಗಿಸಿರುವುದರಿಂದ,

ವೈಶ್ವಾನರಃ = ವೈಶ್ವಾನರಶಬ್ದದಿಂದ, ಮುಖ್ಯವಾಚ್ಯನಾದವನು, ವಿಷ್ಣುರೇವ = ವಿಷ್ಣುವೇ ಆಗುತ್ತಾನೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಹಿಂದಿನ ಅಧಿಕರಣದಿಂದ ಆಕ್ಷೇಪಿಕೀ ಸಂಗತಿ

सत्तर्कदीपावलिः – वैश्वानरः साधारणशब्दविशेषात् ।। १-२-२४ ।।

गताधिकरणेनोत्तराधिकरणस्याक्षेपिकीं सङ्गतिं दर्शयति – अदृश्यत्वेति ।। 'नित्यं विभुं सर्वगतम्' इति यत् सर्वगतत्वमुक्तं तन्न विष्णोरेव । श्रुत्यन्तरे वैश्वानरस्योच्यमानत्वात् ।

अभितो विगतमानत्वेनाभिविमानमात्मानं वैश्वानरमिति वैश्वानराग्नाविव विष्णावपि । 'स एष वैश्वानरो विश्वरूपः' इत्यादिना प्रयुक्तत्वात्साधारणो न विष्णोरेवावगमक इति प्राप्ते सूत्रं पठित्वा व्याचष्टे – वैश्वानर इत्यादिना।।

ಹಿಂದಿ ಅಧಿಕರಣದಿಂದ ಈ ಅಧಿಕರಣಕ್ಕೆ ಆಕ್ಷೇಪಿಕೀಸಂಗತಿಯನ್ನು ತೋರಿಸುತ್ತಿದ್ದಾರೆ. 'ಅದೃಶ್ಯತ್ವ' ಇತ್ಯಾದಿ ಭಾಷ್ಯದಿಂದ. 'ನಿತ್ಯಂ ವಿಭುಂ ಸರ್ವಗತಮ್' ಎಂಬ ಶ್ರುತಿಯಿಂದ ಹೇಳಲ್ಪಟ್ಟ ಸರ್ವಗತತ್ವವು ವಿಷ್ಣುವಿನಲ್ಲಿ ಯುಕ್ತವಾಗುವುದಿಲ್ಲ. ಏಕೆಂದರೆ ಮತ್ತೊಂದು ಶ್ರುತಿಯು ವೈಶ್ವಾನರನನ್ನು ಸರ್ವಗತನೆಂದು ಹೇಳುತ್ತಿದೆ.

ಶ್ರುತಿಯಲ್ಲಿರುವ ಅಭಿವಿಮಾನಂ ಎಂಬ ಪದದಿಂದ 'ಅಭಿತಃ ವಿಗತಂ ಮಾನಂ' ಎಂಬ ನಿಷ್ಪತ್ತಿಯನ್ನು ವಿವಕ್ಷಿಸಿದಾಗ ಸರ್ವಗತನೆಂಬ ಅರ್ಥವು ದೊರೆಯುತ್ತದೆ. 'ಅಭಿವಿಮಾನಂ ಆತ್ಮಾನಂ ವೈಶ್ವಾನರಂ' ಎಂದು ವೈಶ್ವಾನರಶಬ್ದವು ಅಗ್ನಿಯಲ್ಲಿ ಪ್ರಸಿದ್ಧವಾಗಿರುವಂತೆ ವಿಷ್ಣುವಿನಲ್ಲಿಯೂ ಪ್ರಸಿದ್ಧವಾಗಿದೆ. ಆದ್ದರಿಂದ ಉಭಯತ್ರ ಸಾಧಾರಣವಾದ ಈ ಶಬ್ದವು ವಿಷ್ಣು ಒಬ್ಬನನ್ನೇ ಪ್ರತಿಪಾದಿಸುತ್ತದೆಂದು ನಿರ್ಣಯಿಸಲಾಗದು. ಇದನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ವೈಶ್ವಾನರಃ'' ಇತ್ಯಾದಿ ಭಾಷ್ಯದಿಂದ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಅಧಿಕರಣಗಳ ರಾಜ ವೈಶ್ವಾನರಾಧಿಕರಣ

तत्वप्रदीपः – एवं तावच्छ्रुतिलिङ्गानामन्यत्रप्रसिद्धानां ब्रह्मणि समन्वयं प्रदर्शयता पादद्वयार्थनिगमनाय सर्वनाम्नां सर्वलिङ्गानां च समन्वय-दृढीकरणात्मकोऽखिलगुणोदीरणपरतया गुणविरहवादनिराकरणाकृतिः (गुणविर हवादिनिराकरणाकाराकृतिः-पा) परमकारुणिकेनामरगणगुरुणाऽयमधिकरणराज आरभ्यते ।

ಸೂತ್ರಕಾರರು ಈ ಎರಡು ಪಾದಗಳಿಂದ ಅನ್ಯತ್ರಪ್ರಸಿದ್ಧವಾದ ಶ್ರುತಿ ಹಾಗೂ ಲಿಂಗಗಳ ಸಮನ್ವಯವನ್ನು ಬ್ರಹ್ಮನಲ್ಲಿ ಪ್ರದರ್ಶನ ಮಾಡಿದ್ದಾರೆ. ಈ ಎರಡು ಪಾದಗಳ ಅರ್ಥವನ್ನು ಉಪಸಂಹಾರ ಮಾಡುವುದಕ್ಕಾಗಿ ಎಲ್ಲಾ ಬಗೆಯ ನಾಮಾತ್ಮಕಶಬ್ದಗಳನ್ನು ಹಾಗೂ ಎಲ್ಲಾ ಬಗೆಯ ಲಿಂಗಾತ್ಮಕಶಬ್ದಗಳನ್ನು ದೃಢವಾಗಿ ಸಮನ್ವಯ ಮಾಡುವುದಕ್ಕಾಗಿ ಈ ಅಧಿಕರಣ ಹೊರಟಿದೆ. ಸಕಲ ಶ್ರುತಿ-ಲಿಂಗಗಳ ಮುಖ್ಯಉದ್ದೇಶ ಗುಣಪರಿಪೂರ್ಣತ್ವವನ್ನು ಸಮರ್ಥನೆ ಮಾಡುವುದೇ ಆಗಿದೆ. ಇದರಿಂದ 'ಯಾವುದೇ ಗುಣಗಳಿಲ್ಲ' ಎಂಬ ವಾದವನ್ನು ನಿರಾಕರಣೆ ಮಾಡಿದಂತಾಗುತ್ತದೆ. ಹೀಗೆ ಸಕಲ ಶ್ರುತಿಲಿಂಗಗಳ ಸಮನ್ವಯದ ಮೂಲಕ ಸಕಲಗುಣ-ಪರಿಪೂರ್ಣತ್ವವನ್ನು ಸಮರ್ಥನೆ ಮಾಡಲು ಹೊರಟಿರುವ ಈ ಅಧಿಕರಣ ಎಂಬ ರಾಜನು ಪರಮಕಾರುಣಿಕನಾದ ದೇವಗಣಕ್ಕೆ ಗುರುವಾದ ವೇದವ್ಯಾಸರಿಂದ ವಿರಾಜಿಸುತ್ತಿದೆ.

ವಿಶೇಷವಿಚಾರ – ಪಂಡಿತಾಚಾರ್ಯರು ಲಿಂಗಪಾದದ ಕೊನೆಯ ಈ ಅಧಿಕರಣವನ್ನು ಅಧಿಕರಣರಾಜ ಎಂದು ಕರೆಯುತ್ತಿದ್ದಾರೆ. ಆಸ್ಥಾನಗುರುವಿನಿಂದ ರಾಜನು ಶೋಭಿಸುವಂತೆ ಈ ಅಧಿಕರಣರಾಜನು ಪರಮಕರುಣಾಶಾಲಿಗಳಾದ ಸಕಲದೇವತೆಗಳ ಗಣಕ್ಕೂ ಗುರುವಾದ

ವೇದವ್ಯಾಸದೇವರೆಂಬ ಗುರುಗಳಿಂದ ವಿರಾಜಿಸುತ್ತಿದೆ ಎಂದಿದ್ದಾರೆ. ಸೂತ್ರಕಾರರಾದ ಶ್ರೀವೇದವ್ಯಾಸದೇವರು ಈ ಅಧಿಕರಣದಲ್ಲಿ ಕೇವಲ ಒಂದು ಶಬ್ದವನ್ನು ಸಮನ್ವಯ ಮಾಡದೇ ಎಲ್ಲಾ ಬಗೆಯ ನಾಮಾತ್ಮಕವಾದ ಶಬ್ದಗಳ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನು ದೃಢವಾಗಿ ಸಮನ್ವಯ ಮಾಡುತ್ತಿದ್ದಾರೆ.

ತತ್ತ್ವಪ್ರಕಾಶಿಕೆಯಲ್ಲಿ 'ವೈಶ್ವಾನರ' ಎಂಬ ಒಂದು ನಾಮಾತ್ಮಕಶಬ್ದವನ್ನು ಮಾಡುವ ಮೂಲಕ ಅನೇಕ ಲಿಂಗಾತ್ಮಕಶಬ್ದಗಳ ಸಮನ್ವಯವು ಈ ಅಧಿಕರಣದಿಂದ ಸಿದ್ಧವಾಗುತ್ತದೆ ಎಂದು ತಿಳಿಸಿದ್ದಾರೆ. ಪ್ರಕೃತ ಪಂಡಿತಾಚಾರ್ಯರು 'ವೈಶ್ವಾನರ' ಎಂಬ ಒಂದು ನಾಮಾತ್ಮಕಶಬ್ದವನ್ನು ಸಮನ್ವಯ ಮಾಡುವ ಮೂಲಕ ಕೇವಲ ಅನೇಕ ಬಗೆಯ ಲಿಂಗಾತ್ಮಕಶಬ್ದಗಳ ಸಮನ್ವಯವು ಸಿದ್ಧವಾಗುವುದಷ್ಟೇ ಅಲ್ಲದೇ ಎರಡು ಪಾದಗಳಲ್ಲಿ ಹೇಳಿದ ಎಲ್ಲಾ ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವೂ ಕೂಡ ದೃಢವಾಗುತ್ತದೆಂಬ ಅಧಿಕ ವಿಚಾರವನ್ನು ತಿಳಿಸಿರುತ್ತಾರೆ. 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಇತ್ಯಾದಿ ಕೊನೆಯ ಐದು ಸೂತ್ರಗಳಲ್ಲಿ ಅನ್ಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳ ಹಾಗೂ ಲಿಂಗಾತ್ಮಕಶಬ್ದಗಳ ಗತಿಯನ್ನು ತಿಳಿಸಿರುತ್ತಾರೆ. ಆದ್ದರಿಂದ ಈ ಅಧಿಕರಣದಿಂದ ಎರಡು ಪಾದಗಳಲ್ಲಿ ಸಮನ್ವಯ ಮಾಡಿದ ಸಕಲ ಶಬ್ದಗಳ ಸಮನ್ವಯವು ದೃಢವಾಗಿ ಸಿದ್ಧವಾಗಲು ಸಾಧ್ಯವಾಗುತ್ತದೆ. ಈ ಅಧಿಕರಣವೇ ಇಲ್ಲದ್ದಿದರೆ, ಎರಡು ಪಾದಗಳಲ್ಲಿ ಮಾಡಿದ ಸಮನ್ವಯದಲ್ಲಿ ದಾರ್ಢ್ಯವೇ ಬರುವುದಿಲ್ಲ. ಆದ್ದರಿಂದ ಪಂಡಿತಾಚಾರ್ಯರು ಇದನ್ನು 'ಅಧಿಕರಣರಾಜ' ಎಂದು ಕರೆದಿದ್ದಾರೆ.

ಸರ್ವಗತನು ಅಭಿವಿಮಾನ ಎನಿಸುತ್ತಾನೆ

तत्वप्रदीपः – 'यत्तदद्रेश्यमग्राह्यमगोत्रमवर्णमचक्षुःश्रोत्रं तदपाणिपादं नित्यं विभुं सर्वगतं सुसूक्ष्मम्' इति मुण्डकश्रुतावदृश्यत्वादिगुणेषु सर्वगतत्वमुक्तम् । तदत्र च्छन्दोगश्रुतावभिविमानशब्देनोच्यते । अभितो विगतं मानमस्येति अभिविमानः ।

'ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದಂ ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಮ್' ಎಂಬುದಾಗಿ ಅಥರ್ವಣಶ್ರುತಿಯಲ್ಲಿ ಅದೃಶ್ಯತ್ವಾದಿ-ಗುಣವುಳ್ಳವನಲ್ಲಿ ಸರ್ವಗತತ್ವವನ್ನು ಹೇಳಲಾಗಿದೆ. ಅದೇ ಸರ್ವಗತತ್ವವನ್ನು ಪ್ರಕೃತ ಛಾಂದೋಗ್ಯದಲ್ಲಿ ಅಭಿವಿಮಾನಶಬ್ದದಿಂದ ಪ್ರತಿಪಾದನೆ ಮಾಡಲಾಗಿದೆ. 'ಅಭಿತಃ ವಿಗತಂ

ಮಾನಮ್ ಅಸ್ಯ' ಎಂಬ ನಿಷ್ಪತ್ತಿಯಂತೆ ಅಭಿವಿಮಾನಶಬ್ದಕ್ಕೆ ಯಾವ ಕಡೆಯಿಂದಲೂ ಪರಿಮಿತಿಯಿಲ್ಲದವನು ಎಂದರ್ಥ.

ಮುಂದಿನ ಪಾದಕ್ಕೆ ಈ ಅಧಿಕರಣ ಪೀಠಿಕೆ

तत्वप्रदीपः – ''वैश्वानरः साधारणशब्दविशेषात्'' ।। पूर्वत्रान्यत्रप्रसिद्धि मात्रप्रतिषेधाज्ज्वलनजनार्दनयोः साधारणस्य वैश्वानरशब्दस्य विष्णावेव प्रवृत्तिदर्शनेनोभयत्रप्रसिद्धोभयविधपदकदम्बसमन्वयोपन्यासावसरसूचनामाचरति – अग्नाविष्ण्वोरित्यादिना ।। प्रादेशमात्रत्वमधिकार्यपेक्षया । 'प्रादेशमात्रं पुरुषं वसन्तम्' इति च भागवते ।

ಇದುವರೆಗಿನ ಎರಡು ಪಾದಗಳಲ್ಲಿ ಕೇವಲ ಅನ್ಯತ್ರಪ್ರಸಿದ್ಧವಾದ ಶಬ್ದಗಳನ್ನು ನಿರಾಕರಣೆ ಮಾಡಿ ವಿಷ್ಣುವಿನಲ್ಲಿ ಸಮನ್ವಯ ಮಾಡಲಾಯಿತು. ವೈಶ್ವಾನರಶಬ್ದವು ಅಗ್ನಿ ಹಾಗೂ ಜನಾರ್ದನರಲ್ಲಿ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧ ಎಂದು ಕರೆಸಿಕೊಳ್ಳುತ್ತದೆ. ಇದು ಮುಂದಿನ ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯ ಮಾಡಲು ಹೊರಟಿರುವ ಮೂರನೆಯ ಪಾದದಲ್ಲಿ ಮಾಡುವ ಪದಸಮೂಹಗಳ ಸಮನ್ವಯದ ಉಪನ್ಯಾಸಕ್ಕೆ ಅವಸರ ಸಂಗತಿಯನ್ನು ಸೂಚನೆ ಮಾಡುತ್ತಿದೆ. ಇದನ್ನು ಶ್ರೀಮದಾಚಾರ್ಯರು 'ಅಗ್ನಾವಿಷ್ಣೋಃ' ಇತ್ಯಾದಿ ಭಾಷ್ಯದಿಂದ ತಿಳಿಸಿದ್ದಾರೆ. ಪರಮಾತ್ಮನಿಗೆ ಪ್ರಾದೇಶಪರಿಮಾಣವನ್ನು ಹೇಳಿರುವುದು ಬೇರೆ ಬೇರೆ ಅಧಿಕಾರಿಯ ವಿವಕ್ಷೆಯಿಂದ. 'ಪ್ರಾದೇಶಮಾತ್ರಂ ಪುರುಷಂ ವಸಂತಮ್' ಎಂಬ ಭಾಗವತದ ಮಾತಿನಲ್ಲಿ ಹೃದಯಪರಿಮಾಣದಲ್ಲಿ ಪರಮಾತ್ಮನು ಪುರುಷನ ಹೃದಯದಲ್ಲಿ ವಾಸಿಸುತ್ತಿದ್ದಾನೆಂದು ಹೇಳಲಾಗಿದೆ.

ವಿಶೇಷವಿಚಾರ -

ತತ್ವಪ್ರದೀಪಕ್ಕೂ, ತತ್ವಪ್ರಕಾಶಿಕೆಗೂ ಪರಸ್ಪರ ವಿರೋಧವಿದೆಯೇ ?

ಒಂದು ವಿಮರ್ಶೆ

ಪ್ರಶ್ನೆ - 'ಅನ್ಯತ್ರಪ್ರಸಿದ್ಧವೈಶ್ವಾನರನಾಮ್ನಃ' ಎಂಬುದಾಗಿ ತತ್ವಪ್ರಕಾಶಿಕೆಯಲ್ಲಿ ವೈಶ್ವಾನರ ಎಂಬ ನಾಮಾತ್ಮಕಶಬ್ದವು ಅನ್ಯತ್ರಪ್ರಸಿದ್ಧವಾದದ್ದೆಂದು ಹೇಳಿದ್ದಾರೆ. ಆದರೆ ತತ್ವಪ್ರದೀಪದಲ್ಲಿ

ಪಂಡಿತಾಚಾರ್ಯರು ಉಭಯತ್ರಪ್ರಸಿದ್ಧವೆಂದು ಹೇಳುತ್ತಿದ್ದಾರೆ. ಆದ್ದರಿಂದ ಎರಡೂ ಟೀಕೆಗಳಿಗೆ ಪರಸ್ಪರ ವಿರೋಧ ಬರುತ್ತದಲ್ಲವೇ?

ಉತ್ತರ - ತತ್ವಪ್ರದೀಪವನ್ನು ತತ್ವಪ್ರಕಾಶಿಕೆಗೆ ಅನುಗುಣವಾಗಿಯೇ ವ್ಯಾಖ್ಯಾನ ಮಾಡಬೇಕಾಗುತ್ತದೆ.

ಪ್ರಶ್ನೆ - ಇದು ಹೇಗೆ ಸಾಧ್ಯ ?

ಉತ್ತರ - ಪಂಡಿತಾಚಾರ್ಯರು ಶ್ರೀಮದಾಚಾರ್ಯರಿಂದ ನೇರವಾಗಿ ಪಾಠ ಕೇಳಿದವರು. ಇವರು ಮಾಡಿದ ವ್ಯಾಖ್ಯಾನವನ್ನು ತತ್ವಪ್ರಕಾಶಿಕೆಗೆ ಅನುಗುಣವಾಗಿ ವ್ಯಾಖ್ಯಾನಿಸುವುದು ಹೇಗೆ ಸಾಧ್ಯ ?

ಉತ್ತರ - ಪ್ರಕಾಶ ಟಿಪ್ಪಣಿಯಲ್ಲಿ ಶ್ರೀರಾಘವೇಂದ್ರಸ್ವಾಮಿಗಳು 'ಸಾऽಪಿ ಟೀಕಾನುಸಾರಾತ್ ಯೋಜ್ಯಾ' ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ತತ್ವಪ್ರದೀಪದ ವ್ಯಾಖ್ಯಾನವನ್ನು ಟೀಕೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು ಎಂಬುದು ಅಭಿಪ್ರಾಯ ಹೊರತು, ಬೇರೆ ಅರ್ಥವಲ್ಲ.

ತಾತ್ಪರ್ಯಚಂದ್ರಿಕೆಯಲ್ಲಿ 'ಇತರೇ ತು - ಅನ್ಯತ್ರಪ್ರಸಿದ್ಧಲಿಂಗಾಂಶೇನ ದ್ವಿತೀಯಪಾದ-ಸಂಬಂಧಾತ್, ಉಭಯತ್ರಪ್ರಸಿದ್ಧನಾಮಾಂಶೇನ ಚ ತೃತೀಯಪಾದಸಂಬಂಧಾತ್ ಉಭಯಾನುಗ್ರಹಾಯ ಪಾದದ್ವಯಮಧ್ಯೇऽಸ್ಯ ನಿವೇಶ ಇತ್ಯಾಹುಃ।' 'ಅನ್ಯತ್ರಪ್ರಸಿದ್ಧವಾದ ಲಿಂಗವನ್ನು ಸಮನ್ವಯ ಮಾಡುತ್ತಿರುವುದರಿಂದ ಈ ಅಧಿಕರಣಕ್ಕೆ ಎರಡನೆಯ ಪಾದದಿಂದಲೂ ಸಂಗತಿಯಿರುತ್ತದೆ. ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದದ ಸಮನ್ವಯವೂ ಇರುವುದರಿಂದ ಮೂರನೆಯ ಪಾದದಿಂದಲೂ ಸಂಗತವಾಗುತ್ತದೆ. ಹೀಗಿರುವಾಗ ಯಾವ ಪಾದದಲ್ಲಿ ಸೇರಿಸಬೇಕೆಂಬ ಗೊಂದಲವನ್ನು ಪರಿಹರಿಸುವುದಕ್ಕಾಗಿ ಸೂತ್ರಕಾರರು ಎರಡು ಪಾದಗಳ ಮಧ್ಯದಲ್ಲಿ ಈ ಅಧಿಕರಣವನ್ನು ನಿವೇಶ ಮಾಡಿದ್ದಾರೆ' ಎಂದು ಹೇಳಿದ್ದಾರೆ.

ತಾತ್ಪರ್ಯವನ್ನು ಗಮನಿಸಿದಾಗ 'ಇತರೇ ತು' ಎಂಬುದಾಗಿ ಚಂದ್ರಿಕಾಚಾರ್ಯರು ನೇರವಾಗಿ ತತ್ವಪ್ರದೀಪಕಾರರ ಪಕ್ಷವನ್ನು ಅನುವಾದ ಮಾಡಿ, ಮುಂದೆ ನಿರಾಕರಣೆ ಮಾಡುವಂತಿದೆ.

'ತನ್ನ', 'ಅನ್ಯತ್ರಪ್ರಸಿದ್ಧವೈಶ್ವಾನರನಾಮ್ನಃ' ಇತಿ ಟೀಕಾವಿರೋಧಾತ್'

ಈ ಅಭಿಪ್ರಾಯವು ಕೇವಲ ಆಪಾತರಮಣೀಯವಾಗಿದೆ. ಏಕೆಂದರೆ ''ಅನ್ಯತ್ರಪ್ರಸಿದ್ಧ-ವೈಶ್ವಾನರನಾಮ್ನಃ'' ಅನ್ಯತ್ರಪ್ರಸಿದ್ಧವಾದ ವೈಶ್ವಾನರ ಎಂಬ ನಾಮಾತ್ಮಕಶಬ್ದದ ಸಮನ್ವಯವೆಂದು ಟೀಕೆಯಲ್ಲಿ ಹೇಳಿರುವಾಗ ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದ ಸಮನ್ವಯವೆಂಬ ಅಭಿಪ್ರಾಯವು ಟೀಕಾ ವಿರುದ್ಧವಾದ್ದರಿಂದ ಅಸಾಧುವಾಗುತ್ತದೆ.

ಚಂದ್ರಿಕೆಯ ವಾಕ್ಯಗಳನ್ನೆಲ್ಲಾ ಗಮನಿಸಿದಾಗ ಪಂಡಿತಾಚಾರ್ಯರನ್ನೇ ನೇರವಾಗಿ ಖಂಡನೆ ಮಾಡಿದಂತೆ ಕಾಣಿಸುತ್ತದೆ. ಆದರೆ ಚಂದ್ರಿಕಾಚಾರ್ಯರು ಎಲ್ಲಿಯೂ ಕೂಡ ಹೀಗೆ ಪಂಡಿತಾಚಾರ್ಯರನ್ನು ಖಂಡನೆ ಮಾಡುವುದಿಲ್ಲ. ಇಲ್ಲಿ ಏಕೆ ಹೀಗೆ ವಾಕ್ಯಗಳಿವೆ ?

ಉತ್ತರ - 'ಇತರೇ ತು' ಎಂಬ ಪಕ್ಷದಿಂದ ಪಂಡಿತಾಚಾರ್ಯರ ಪಕ್ಷವನ್ನು ಅನುವಾದ ಮಾಡಿರುವುದೇ ಇಲ್ಲ. ಪಂಡಿತಾಚಾರ್ಯರು ಈ ಅಧಿಕರಣವು ದ್ವಿತೀಯಪಾದ ಹಾಗೂ ತೃತೀಯಪಾದಕ್ಕೆ ಸಂಬಂಧಪಟ್ಟದೆಯೆಂದು ಹೇಳುತ್ತಲೇ ಇಲ್ಲ. ಆದ್ದರಿಂದ ಪಂಡಿತಾಚಾರ್ಯರನ್ನು ನಿರಾಕರಣೆ ಮಾಡಿರಬಹುದಲ್ಲವೇ? ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಹಾಗಾದರೆ ಇದೇ ಸಂದರ್ಭದ ಪ್ರಕಾಶಟಿಪ್ಪಣಿಯಲ್ಲಿ ''ಪೂರ್ವತ್ರಾನ್ಯತ್ರಪ್ರಸಿದ್ಧಿಮಾತ್ರಪ್ರತಿಷೇಧಾತ್ ಜ್ವಲನಜನಾರ್ದನಯೋಃ ಸಾಧಾರಣಸ್ಯ ವೈಶ್ವಾನರಶಬ್ದಸ್ಯ ವಿಷ್ಣಾವೇವ ಪ್ರವೃತ್ತಿಪ್ರದರ್ಶನೇನ ಉಭಯಪ್ರಸಿದ್ಧೋಭಯವಿಧ-ಪದಕದಂಬಕಸಮನ್ವಯಾವಸರಸೂಚನಮಾಚರತಿ ಅಗ್ನಾವಿಷ್ಣ್ವೋರಿತ್ಯಾದಿನಾ'' ''ಮೊದಲನೆಯ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಶಬ್ದಗಳನ್ನು ಮಾತ್ರ ನಿಷೇಧ ಮಾಡಲಾಗಿದೆ. ಅಗ್ನಿ ಹಾಗೂ ಜನಾರ್ದನರಲ್ಲಿ ವೈಶ್ವಾನರ ಶಬ್ದವು ಸಾಧಾರಣವಾಗಿದೆ. ಇಂತಹ ವೈಶ್ವಾನರಶಬ್ದವನ್ನು ಕೇವಲ ವಿಷ್ಣುವಿನಲ್ಲಿ ಸಮನ್ವಯಗೊಳಿಸುವುದಕ್ಕಾಗಿ ಈ ಅಧಿಕರಣ ಹೊರಟಿದೆ. ಮುಂದಿನ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ಶಬ್ದಗಳನ್ನು ಸಮನ್ವಯ ಮಾಡುತ್ತಾರೆ. ಅದಕ್ಕೆ ಉಪೋದ್ಘಾತರೂಪದಲ್ಲಿ ಈ ಅಧಿಕರಣದಲ್ಲಿ ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ 'ವೈಶ್ವಾನರ' ಎಂಬ ಶಬ್ದವನ್ನು ಸಮನ್ವಯ ಮಾಡಲಾಗಿದೆಯೆಂದು 'ಅಗ್ನಾವಿಷ್ಣ್ವೋಃ' ಇತ್ಯಾದಿ ಭಾಷ್ಯದಿಂದ ಸಮರ್ಥಿಸುತ್ತಿದ್ದಾರೆ ಎಂದು. ತತ್ವಪ್ರದೀಪದ ಈ ವಾಕ್ಯವನ್ನೂ ಸಹ ಟೀಕೆಗೆ ಅನುಸಾರಿಯಾಗಿ ವ್ಯಾಖ್ಯಾನಿಸಬೇಕು. ಅಂದರೆ ಸಾಮಾನ್ಯತಃ ವೈಶ್ವಾನರಶಬ್ದವು ಉಭಯಸಾಧಾರಣವಾಗಿದೆ. ಆದರೂ ಲೋಕತಃ ಅನ್ಯತ್ರಪ್ರಸಿದ್ಧವಾಗಿರುವುದರಿಂದ ಲಿಂಗಪಾದದಲ್ಲಿ ಇದರ ನಿವೇಶನವು ಅತ್ಯಂತ

ಸಮಂಜಸವಾಗಿದೆ. ಇತ್ಯಾದಿಯಾಗಿ ಚಂದ್ರಿಕೆಗೆ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಹೇಳಿದ್ದಾರೆ. ಇದರ ಅಭಿಪ್ರಾಯವೇನು ?

ಉತ್ತರ - 'ವೈಶ್ವಾನರ' ಎಂಬ ಶಬ್ದವು ಅಗ್ನಿ ಮತ್ತು ಜನಾರ್ದನ ಇಬ್ಬರಲ್ಲಿಯೂ ಕೂಡ ಸಾಧಾರಣವಾಗಿದೆ ಎಂದು ಸೂತ್ರದಲ್ಲಿಯೇ ಹೇಳಿದ್ದಾರೆ. ಇದನ್ನು ವ್ಯಾಖ್ಯಾನ ಮಾಡುವಾಗ ಪಂಡಿತಾಚಾರ್ಯರೂ ಕೂಡ 'ಜ್ವಲನಜನಾರ್ದನಯೋಃ ಸಾಧಾರಣಸ್ಯ' ಎಂಬ ಶಬ್ದವನ್ನು ಪ್ರಯೋಗಿಸಿ, ಮುಂದಿನ ಪಾದದ ಉಪಕ್ರಮಕ್ಕೆ ಅವಸರಸಂಗತಿಯನ್ನು ಸೂಚಿಸಿದ್ದಾರೆ. ಇದರಲ್ಲಿ ಏನು ತಪ್ಪಿದೆ ?

ಪ್ರಶ್ನೆ - ಉಭಯಸಾಧಾರಣವೆಂದು ಹೇಳಿರುವುದರಿಂದ ಮೂರನೆಯ ಪಾದದಲ್ಲಿ ಎಲ್ಲಾ ಶಬ್ದಗಳನ್ನು ಉಭಯತ್ರಪ್ರಸಿದ್ಧ ಎಂದು ಹೇಳಿದಂತೆ ಎರಡನೆಯ ಈ ಪಾದದಲ್ಲಿಯೂ ವೈಶ್ವಾನರ ಶಬ್ದವು ಉಭಯತ್ರಪ್ರಸಿದ್ಧವೆಂದು ಹೇಳಿದಂತಾಯಿತು. ಆದ್ದರಿಂದ ಮುಂದಿನ ಪಾದದಲ್ಲಿರುವ ಅಧಿಕರಣಕ್ಕೂ ಈ ವೈಶ್ವಾನರ ಅಧಿಕರಣಕ್ಕೂ ಯಾವುದೇ ವ್ಯತ್ಯಾಸವನ್ನು ತೋರಿಸಿರುವುದಿಲ್ಲ ಅಲ್ಲವೇ ?

ಪ್ರಶ್ನೆ - ಸ್ಪಷ್ಟವಾದ ವ್ಯತ್ಯಾಸವಿದೆ. ಶ್ರುತಿ ಹಾಗೂ ಲಿಂಗಗಳಿಂದ ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯಕ್ಕಾಗಿ ಮೂರನೆಯ ಪಾದ ಹೊರಟಿದೆ. ಆದರೆ ಪ್ರಕೃತ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ವೈಶ್ವಾನರ ಎಂಬ ಶಬ್ದವು ಹಾಗೆಯೇ ಶ್ರುತಿ ಹಾಗೂ ಲಿಂಗಗಳಿಂದ ಉಭಯತ್ರಪ್ರಸಿದ್ಧವಾಗಿರುವುದಿಲ್ಲ. ಹೊರತಾಗಿ ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿದೆ. ಶ್ರುತಿಯ ಆಧಾರದಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ. ಆದ್ದರಿಂದ ಮೂರನೆಯ ಪಾದದಲ್ಲಿರುವ ಅಧಿಕರಣಗಳಿಗೂ ಈ ಅಧಿಕರಣಕ್ಕೂ ಸರ್ವಥಾ ಸಾಮ್ಯ ಇರುವುದಿಲ್ಲ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ತ್ವಪ್ರಕಾಶಿಕಾ

ಲಿಂಗಪಾದದಲ್ಲಿ ನಾಮಸಮನ್ವಯ

तत्वप्रकाशिका – ।। वैश्वानरः साधारणशब्दविशेषात् ।।

अत्र लोकतोऽन्यत्रप्रसिद्धवैश्वानरनाम्नः पाचकत्वाद्यनेकलिङ्गसमन्वय-सिद्धये ब्रह्मणि समन्वयप्रतिपादनादस्ति शास्त्रादिसङ्गतिः ।

ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ವೈಶ್ವಾನರ ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಹೀಗೆ ಒಂದು ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುವುದರಿಂದ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯವು ಬ್ರಹ್ಮನಲ್ಲಿ ಸಿದ್ಧವಾಗುತ್ತದೆ. ಅನೇಕ ಲಿಂಗಗಳ ಸಮನ್ವಯವನ್ನು ಮಾಡುವುದರ ದೊಡ್ಡ ಲಾಭವನ್ನು ಉದ್ದೇಶಿಸಿ ''ವೈಶ್ವಾನರ'' ಎಂಬ ನಾಮದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡುತ್ತಿರುವುದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆಂದು ತಿಳಿಯಬೇಕು.

ನಾಮಸಮನ್ವಯ ಮಾಡಿದರೂ ಸಂಗತಿ ಇದೆ

तत्वप्रकाशिका – श्रुत्यादिसङ्गतिं विषयवाक्योदाहरणपूर्वकं विषयादिकं च सूचयति – अदृश्यत्वादीति ।।

ಇನ್ನು ಶ್ರುತಿಸಂಗತಿ ಹಾಗೂ ಅಧಿಕರಣ ಸಂಗತಿಗಳನ್ನು ವಿಷಯವಾಕ್ಯವನ್ನು ಉದಾಹರಿಸುವ ಮೂಲಕ ''ಅದೃಶ್ಯತ್ವಾದಿ'' ಎಂಬ ಭಾಷ್ಯದ ವಾಕ್ಯ ತೋರಿಸುತ್ತಿದೆ. ಈ ವಾಕ್ಯದಿಂದ ಈ ಅಧಿಕರಣದ ವಿಷಯವೂ ಸಹ ತಿಳಿಯುತ್ತದೆ.

ಅದೃಶ್ಯತ್ವಾದಿಗುಣವುಳ್ಳವನು ಸರ್ವಗತ

तत्वप्रकाशिका – गताधिकरणेऽदृश्यत्वादिगुणा विष्णोरुक्ताः । तेषु सर्वगतत्वं चोक्तं 'नित्यं विभुं सर्वगतम्' इति ।

ಹಿಂದಿನ ಅಧಿಕರಣದಲ್ಲಿ ಅದೃಶ್ಯತ್ವಾದಿ ಗುಣಗಳಿಗೆ ಆಶ್ರಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಿದ್ದಾಯಿತು. ಆದರೆ ಯಾವ ವಾಕ್ಯದಲ್ಲಿ ಅದೃಶ್ಯತ್ವಾದಿಗುಣಗಳು ಹೇಳಲ್ಪಟ್ಟಿವೆಯೋ ಅದೇ ವಾಕ್ಯದಲ್ಲಿ ಸರ್ವಗತತ್ವವೂ ಸಹ ಹೇಳಲಾಗಿದೆ ''ನಿತ್ಯಂ ವಿಭುಂ ಸರ್ವಗತಮ್'' ಎಂಬುದಾಗಿ.

ವೈಶ್ವಾನರನೇ ಸರ್ವಗತ

तत्वप्रकाशिका – तददृश्यत्वादिगुणेषूक्तं सर्वगतत्वं च छन्दोगश्रुतौ 'अभिविमान'पदेन वैश्वानरस्योक्तम् ।

ಈ ಅದೃಶ್ಯತ್ವಾದಿಗುಣಗಳ ಮಧ್ಯದಲ್ಲಿ ಸರ್ವಗತತ್ವವೆಂಬುದೂ ಸಹ ಒಂದುಗುಣವಾಗಿದೆ. ಇದನ್ನು ಪಂಚಮಾಧ್ಯಾಯದ ಛಾಂದೋಗ್ಯಶ್ರುತಿಯಲ್ಲಿ 'ಅಭಿವಿಮಾನ' ಎಂಬ ಪದದಿಂದ ವೈಶ್ವಾನರನೇ ಸರ್ವಗತನಾಗಿದ್ದಾನೆಂದು ಹೇಳಲಾಗಿದೆ.

ಛಾಂದೋಗ್ಯದಲ್ಲಿ ಸರ್ವಗತನಾದ ವೈಶ್ವಾನರನ ಬಗ್ಗೆ

तत्वप्रकाशिका – अभितो विगतं मानं मर्यादा यस्येति । 'मानं ज्ञानं लयश्चैव मर्यादा चैव (चापि) कथ्यते' इत्यभिधानात् ।

ಅಭಿವಿಮಾನಶಬ್ದಕ್ಕೆ ಯಾವ ರೀತಿಯಿಂದಲೂ ಪರಿಮಾಣ ಇಲ್ಲದವನೆಂದು ಅರ್ಥ. ''ಮಾನಂ ಜ್ಞಾನಂ ಲಯಶ್ಚೈವ ಮರ್ಯಾದಾ ಚೈವ ಕಥ್ಯತೇ'' ಎಂಬ ಕೋಶದ ಆಧಾರದಿಂದ ಮಾನಶಬ್ದಕ್ಕೆ ಮರ್ಯಾದಾ = ಪರಿಮಿತಿ ಎಂಬರ್ಥವು ಸ್ಪಷ್ಟವಾಗುತ್ತದೆ. ಹೀಗೆ ಅಭಿವಿಮಾನ ಪದದಿಂದ ಸರ್ವಗತತ್ವವು ತಿಳಿಯುತ್ತದೆ. ಇದು ವೈಶ್ವಾನರನಲ್ಲಿ ಇದೆಯೆಂದು ಛಾಂದೋಗ್ಯವು ಹೇಳುತ್ತಿದೆ.

ವೈಶ್ವಾನರನು ಯಾರೆಂದು ವಿಚಾರ

तत्वप्रकाशिका – तस्य च वैश्वनरस्य विष्णोरितरत्वे सर्वगतत्वमप्यन्यस्य प्रसज्येत इत्यवश्यनिर्णेयत्वम् ।

ಹೀಗೆ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನು ವಿಷ್ಣುವಿಗಿಂತ ಬೇರೆಯವನಾದರೆ ಸರ್ವಗತನೂ ಅವನೇ ಆಗಬೇಕು; ಆದ್ದರಿಂದ ವೈಶ್ವಾನರಶಬ್ದದಿಂದ ವಾಚ್ಯನಾದವನು ಯಾರೆಂದು ಅವಶ್ಯವಾಗಿ ನಿರ್ಣಯಿಸಬೇಕು.

ಅಧಿಕರಣದ ವಿಷಯ, ಸಂಶಯ, ಸಂಶಯಕಾರಣ

तत्वप्रकाशिका – स वैश्वानरो विषयः । किं विष्णुरन्यो वा? इति संशयः । सर्वगतत्वमन्यत्र प्रसिद्धिश्च सन्देहबीजम् ।

ಆದ್ದರಿಂದ ಈ ಅಧಿಕರಣಕ್ಕೆ ವೈಶ್ವಾನರನೇ ವಿಷಯನಾಗಿದ್ದಾನೆ. ಇವನು ವಿಷ್ಣುವೇ ಆಗಿದ್ದಾನೋ ಅಥವಾ ಬೇರೆಯವನೇ ಆಗಿದ್ದಾನೋ ಎಂದು ಸಂಶಯ. ಸರ್ವಗತತ್ವವು ಬೇರೆಯವನಲ್ಲಿ ಹಾಗೂ ವಿಷ್ಣುವಿನಲ್ಲಿ ಪ್ರಸಿದ್ಧವಾಗಿರುವಿಕೆಯೇ ಸಂದೇಹಕ್ಕೆ ಕಾರಣವಾಗಿದೆ.

ಅಗ್ನಿದೇವತೆಯೇ ವೈಶ್ವಾನರ ಎಂದು ಪೂರ್ವಪಕ್ಷ

तत्वप्रकाशिका – नायं वैश्वानरो विष्णुः किन्त्वग्निदेवता तेजोभूतं वा स्यादिति पूर्वः पक्षः । वैश्वानरश्रुतेः ।

ಇಂತಹ ವೈಶ್ವಾನರನು ವಿಷ್ಣುವಾಗಲು ಸಾಧ್ಯವಿಲ್ಲ. ಹೊರತಾಗಿ ಅಗ್ನಿದೇವತೆ ಅಥವಾ ಭೌತಿಕವಾದ ತೇಜಸ್ಸು ವೈಶ್ವಾನರ ಎನಿಸಿದೆಯೆಂದು ಪೂರ್ವಪಕ್ಷ. ಈ ವಿಷಯದಲ್ಲಿ ವೈಶ್ವಾನರ ಶ್ರುತಿಯೇ ಆಧಾರವಾಗಿದೆ.

ವಿಷ್ಣುಲಿಂಗವು ಅಗ್ನಿ ಶ್ರುತಿಗಿಂತ ದುರ್ಬಲ

तत्वप्रकाशिका – नच वाच्यं सर्वगतत्वलिङ्गाद्वैश्वानरो विष्णुरिति । लिङ्गस्य श्रुतितो दुर्बलत्वात् ।

ಸರ್ವಗತತ್ವವೆಂಬ ಲಿಂಗದ ಆಧಾರದಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಏಕೆನಿರ್ಣಯಿಸಬಾರದು ಎಂದು ಪ್ರಶ್ನಿಸಬಾರದು. ಲಿಂಗವು ಶ್ರುತಿಗಿಂತ ದುರ್ಬಲವಾಗಿದೆ. ಅಗ್ನಿದೇವತೆಯಲ್ಲಿ ಶ್ರುತಿಯು ಪ್ರಮಾಣವಾಗಿರುವುದರಿಂದ ಅವನನ್ನೇ ವೈಶ್ವಾನರನೆಂದು ಹೇಳಬೇಕು.

ಲಿಂಗವು ನಿರವಕಾಶವಾಗಿದ್ದರೂ ಬಲಿಷ್ಠವಲ್ಲ

तत्वप्रकाशिका – नच लिङ्गस्य निरवकाशत्वेन प्राबल्याच्छ्रुति-बाधकत्वमिति मन्तव्यम् । श्रुतेरपि प्रसिद्धितो निरवकाशत्वात् ।

ಲಿಂಗವು ನಿರವಕಾಶವಾಗಿರುವುದರಿಂದ ಬಲಿಷ್ಠವಾಗಿದೆ. ಇದು ಶ್ರುತಿಯನ್ನು ಬಾಧಿಸಬಹುದಲ್ಲವೇ ಎಂದು ಪ್ರಶ್ನಿಸಬಾರದು. ಶ್ರುತಿಗಿಂತಲೂ ಲಿಂಗವು ಲೋಕಪ್ರಸಿದ್ಧಿಯಿಂದ ನಿರವಕಾಶವಾಗಿದೆ. ಆದ್ದರಿಂದ ಅತ್ಯಂತಬಲಿಷ್ಠವಾದ ಶ್ರುತಿಯನ್ನು ಲಿಂಗವು ಬಾಧಿಸಲು ಸಾಧ್ಯವಿಲ್ಲ.

ವಿಷ್ಣು ಪ್ರತಿಪಾದಕವಾದರೆ ಶ್ರುತಿಗಳಲ್ಲಿ ಭೇದವ್ಯವಹಾರದ ವಿರೋಧ

तत्वप्रकाशिका – श्रुतेः विष्णुविषयत्वेऽग्न्यादिविषयतया लोकप्रसिद्धिबाधाद् वैदिकविद्याभेदव्यवहारविरोधाच्च ।

ವೈಶ್ವಾನರಶ್ರುತಿಯು ವಿಷ್ಣುವನ್ನು ಪ್ರತಿಪಾದಿಸುವುದಾದರೆ ಲೋಕದಲ್ಲಿ ಅಗ್ನಿವಿಷಯಕವಾಗಿ ಮಾಡುವ ಪ್ರಯೋಗಕ್ಕೆ ಬಾಧವು ಬರುತ್ತದೆ. ಅಷ್ಟೇ ಅಲ್ಲದೆ ಇದು ಅಗ್ನಿವಿದ್ಯೆ ಇದು ಆತ್ಮವಿದ್ಯೆ ಎಂಬ ಭೇದವ್ಯವಹಾರದ ವಿರೋಧವೂ ಸಹ ಬರುತ್ತದೆ.

ವೈಶ್ವಾನರ ಶ್ರುತಿಯು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಮಾನ

तत्वप्रकाशिका – नहि वैश्वानरश्रुतेरग्न्यादिविषयत्वाभावे व्यवहारस्य गत्यन्तरमस्ति । अतः प्रसिद्धिलिङ्गयोरुभयोरपि निरवकाशत्वेन

वैश्वानरश्रुतेरग्राविष्ण्वोः साधारण्यमेव स्यान्न तु लिङ्गेन विष्णुपरतानिश्चयः । अतो न वैश्वानरो विष्णुरिति न सर्वगतत्वं तस्येति भावः ।

ವೈಶ್ವಾನರ ಶ್ರುತಿಯು ಅಗ್ನಿಮೊದಲಾದವರನ್ನು ವಿಷಯೀಕರಿಸದೇ ಇದ್ದಲ್ಲಿ ಲೋಕವ್ಯವಹಾರಕ್ಕೆ ಬೇರೆ ಗತಿಯಿಲ್ಲ. ಆದ್ದರಿಂದ ಲೋಕಪ್ರಸಿದ್ಧಿ ಹಾಗೂ ಲಿಂಗ ಎರಡೂ ಸಹ ನಿರವಕಾಶವಾಗಿವೆ. ಆದ್ದರಿಂದ ವೈಶ್ವಾನರಶ್ರುತಿಯು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆಯೆಂದು ಹೇಳಿದಂತಾಯಿತು. ಹೀಗಿರುವಾಗ ಕೇವಲ ಸರ್ವಗತತ್ವವೆಂಬ ಲಿಂಗದ ಬಲದಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿಶ್ಚಯಿಸಲು ಸಾಧ್ಯವಿಲ್ಲ. ಆದ್ದರಿಂದ ವೈಶ್ವಾನರನು ವಿಷ್ಣುವಲ್ಲ. ಆದ್ದರಿಂದ ಸರ್ವಗತನೂ ಸಹ ವಿಷ್ಣುವಾಗುವುದಿಲ್ಲವೆಂದು ಅಭಿಪ್ರಾಯ.

ವೈಶ್ವಾನರನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತ

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। अयं वैश्वानरो विष्णुरेव ।

ಈ ಪೂರ್ವಪಕ್ಷವನ್ನು ನಿರಾಕರಿಸುತ್ತಾ ಸಿದ್ಧಾಂತವನ್ನು ಸ್ಥಾಪನೆ ಮಾಡುವುದಕ್ಕಾಗಿ ಸೂತ್ರಕ್ಕೆ ಅವತಾರಿಕೆಯನ್ನು ಕೊಡುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ ''ಅತಃ'' ಇತ್ಯಾದಿಯಾಗಿ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ವೈಶ್ವಾನರನು ವಿಷ್ಣುವೇ ಆಗಿದ್ದಾನೆ.

ನಿರವಕಾಶವಾದ ಆತ್ಮಶ್ರುತಿಯ ಬಲದಿಂದ ಮಹಾವಿಷ್ಣುವೇ ವೈಶ್ವಾನರ

तत्वप्रकाशिका – 'आत्मानं वैश्वानरम्' इत्यात्मशब्दात् । न चोक्तरीत्या साधारणवैश्वानरश्रुतिसद्भावादनिर्णय इति वाच्यम् ।

'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ಆತ್ಮಶಬ್ದವು ಪ್ರಯುಕ್ತವಾಗಿದೆ. ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾದ ಈ ಆತ್ಮಶಬ್ದದ ಬಲದಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬೇಕು. ಹಿಂದೆ ಹೇಳಿದ ಪ್ರಕಾರ ವೈಶ್ವಾನರ ಶಬ್ದವು ಅಗ್ನಿ ಹಾಗೂ ವಿಷ್ಣುವಿನಲ್ಲಿ ಸಾಧಾರಣವಾಗಿರುವುದರಿಂದ ನಿರ್ಣಯಿಸಲು ಸಾಧ್ಯವಿಲ್ಲವಲ್ಲವೇ ಎಂದು ಪ್ರಶ್ನಿಸಬಾರದು.

ಆತ್ಮಶಬ್ದವು ಇತರರಲ್ಲಿ ಸರ್ವಥಾ ಅಪ್ರಸಿದ್ಧ

तत्वप्रकाशिका – साधारणस्यापि वैश्वानरशब्दस्य 'आत्मशब्दः परे विष्णौ नान्यत्र क्वचिदिष्यते' इत्यादौ विष्णावेव प्रसिद्धत्वेनान्यत्रानवकाशात्मा-शब्दसामानाधिकरण्येन विष्णुपरत्वस्य सम्भवात् ।

ಹೌದು; ಇಬ್ಬರಲ್ಲಿಯೂ ಸಾಧಾರಣವಾಗಿರಬಹುದು. ಆದರೂ "ಆತ್ಮಶಬ್ದಃ ಪರೇ ವಿಷ್ಣೌ ನಾನ್ಯತ್ರ ಕ್ವಚಿದಿಷ್ಯತೇ" ಇತ್ಯಾದಿಯಾಗಿ ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾಗಿದ್ದು, ಬೇರೆಯವರಲ್ಲಿ ಕಥಂಚಿದಪಿ ಪ್ರಯೋಗಿಸಲು ಸಾಧ್ಯವಿಲ್ಲದ ಆತ್ಮಶಬ್ದದ ಸಾಮಾನಾಧಿಕರಣ್ಯದ ಬೆಂಬಲದಿಂದ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬಹುದು.

ಲೋಕಪ್ರಸಿದ್ಧಿಯು ಸಾವಕಾಶ

तत्वप्रकाशिका – प्रसिद्ध्यादेरन्यथाऽपि सिद्ध्या सावकाशत्वस्य वक्ष्यमाणत्वादिति भावः ।।२४।।

ಇನ್ನು ಲೋಕಪ್ರಸಿದ್ಧಿ ಮೊದಲಾದವುಗಳನ್ನು ಬೇರೆ ರೀತಿಯಲ್ಲಿಯೂ ಉಪಪಾದಿಸಬಹುದು. ಆ ಪ್ರಸಿದ್ಧಿಯು ಸಾವಕಾಶವಾಗಿದೆಯೆಂಬ ವಿಚಾರವನ್ನು ಮುಂದೆ ಸ್ಪಷ್ಟಪಡಿಸುತ್ತೇವೆ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ
ಭಾವದೀಪ

ನಾಮಸಮನ್ವಯಕ್ಕೆ ಅನುವ್ಯಾಖ್ಯಾನದ ಆಧಾರ

भावदीपः – वैश्वानरः साधारणशब्दविशेषात् ।। नाम्न इति ।। 'श्रुतिर्लिङ्गाधिका परा' इत्यनुभाष्योक्तेः । आपाततोऽन्यत्र रूढत्वात् ।

॥ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ॥

ವೈಶ್ವಾನರಾಧಿಕರಣದಲ್ಲಿ ವೈಶ್ವಾನರವೆಂಬ ನಾಮಾತ್ಮಕಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ತೋರಿಸುತ್ತಿದ್ದಾರೆ. ''ಶ್ರುತ್ಯರ್ಲಿಂಗಾಧಿಕಾ ಪರಾಃ'' ಎಂದು ಒಂದು ವೈಶ್ವಾನರ ಶಬ್ದದ ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುತ್ತದೆಂಬ ಅನುವ್ಯಾಖ್ಯಾನದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ''ವೈಶ್ವಾನರ'' ಎಂಬ ಶಬ್ದವು ಲೋಕದಲ್ಲಿ ಆಪಾತತಃ ಅನ್ಯತ್ರಪ್ರಸಿದ್ಧವಾಗಿದೆ.

ವಿಶೇಷವಿಚಾರ - ವೈಶ್ವಾನರಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದ ಸಂಗತಿಯನ್ನು ಕೆಲವರು ಹೀಗೆ ಉಪಪಾದನೆ ಮಾಡುತ್ತಾರೆ - ಈ ಅಧಿಕರಣದಲ್ಲಿ ಉಭಯತ್ರಪ್ರಸಿದ್ಧವಾದ 'ವೈಶ್ವಾನರ' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆ. ಆದ್ದರಿಂದಲೇ ಸೂತ್ರಕಾರರು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ 'ವೈಶ್ವಾನರ' ಶಬ್ದವು ಸಾಧಾರಣವಾಗಿದೆಯೆಂದು ಹೇಳಿದ್ದಾರೆ. ವಾಸ್ತವಿಕವಾಗಿ ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕಶಬ್ದಗಳನ್ನಷ್ಟೇ ಈ ಅಧಿಕರಣದಲ್ಲಿ ಸಮನ್ವಯ ಮಾಡಬೇಕು. ಹೀಗಿರುವಾಗ ನಾಮಾತ್ಮಕವೂ ಮತ್ತು ಉಭಯತ್ರಪ್ರಸಿದ್ಧವೂ ಆಗಿರುವಂತಹ 'ವೈಶ್ವಾನರ' ಎಂಬ ಶಬ್ದವನ್ನು ಸಮನ್ವಯ ಮಾಡುವುದು ಅಸಂಗತವಲ್ಲವೇ?

ಈ ಪ್ರಶ್ನೆಗೆ ಉತ್ತರ ಹೀಗಿದೆ - ಅನ್ಯತ್ರಪ್ರಸಿದ್ಧವಾದ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯವೂ ಸಹ ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. ಮತ್ತು ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳ ಸಮನ್ವಯವನ್ನೂ ಸಹ ಮಾಡುತ್ತಿದ್ದಾರೆ. ಒಂದು ನಾಮಾತ್ಮಕಶಬ್ದದ ಸಮನ್ವಯವು ಅನೇಕೈತಾದೃಶ ಶಬ್ದಸಮನ್ವಯಕ್ಕೆ ಅನುಗ್ರಾಹಕವಾದ್ದರಿಂದ ಈ ಪಾದದಲ್ಲಿ ಇದರ ಸಮನ್ವಯ ಸಂಗತ ಎಂದು ಒಂದು ಕಾರಣ. ಮತ್ತೊಂದು ಕಾರಣ - ಇಲ್ಲಿ ನಾಮಾತ್ಮಕವಾದ ಉಭಯತ್ರಪ್ರಸಿದ್ಧಶಬ್ದದ ಸಮನ್ವಯವನ್ನು ಮಾಡುತ್ತಿರುವುದರಿಂದ ಈ ಅಧಿಕರಣ ತೃತೀಯಪಾದದಲ್ಲಿ ಸೇರಬೇಕೋ? ಅಥವಾ ಲಿಂಗಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿರುವುದರಿಂದ ಎರಡನೆಯ ಪಾದದಲ್ಲಿ ಸೇರಬೇಕೋ? ಎಂಬ ಪ್ರಶ್ನೆಯು ಪ್ರಾಪ್ತವಾದಾಗ 'ಪ್ರಥಮಾತಿಕ್ರಮೇ ಕಾರಣಾಭಾವಾತ್' 'ಮೊದಲು ಪ್ರಸಕ್ತವಾದದ್ದನ್ನು ಬಿಡಲು ಕಾರಣವಿಲ್ಲ' ಎಂಬ ನ್ಯಾಯವನ್ನು ಅನುಸರಿಸಿ ಉತ್ತರಿಸಬೇಕು. ಅಂದರೆ ಎರಡನೆಯ ಪಾದ ಹಾಗೂ ಮೂರನೆಯ ಪಾದ ಎರಡರಲ್ಲೂ ಸಂಬಂಧವಿದ್ದರೂ ಸಹ ಮೊದಲು ಪ್ರಸಕ್ತವಾದ ಎರಡನೆಯ ಲಿಂಗಪಾದದಲ್ಲಿ ಇದನ್ನು ನಿವೇಶಮಾಡದೇ ಇರುವುದಕ್ಕೆ ಕಾರಣವಿರುವುದಿಲ್ಲ. ಆದ್ದರಿಂದಲೇ ಎರಡನೆಯ ಪಾದದಲ್ಲಿ ಸೇರಿಸಿದ್ದಾರೆ.

ಮತ್ತೆ ಕೆಲವರ ಸಮಾಧಾನ ಹೀಗಿದೆ - ಅನ್ಯತ್ರಪ್ರಸಿದ್ಧವಾದ ಲಿಂಗವನ್ನು ಸಮನ್ವಯ ಮಾಡುತ್ತಿರುವುದರಿಂದ ಈ ಅಧಿಕರಣಕ್ಕೆ ಎರಡನೆಯ ಪಾದದಿಂದಲೂ ಸಂಗತಿಯಿರುತ್ತದೆ. ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದದ ಸಮನ್ವಯವೂ ಇರುವುದರಿಂದ ಮೂರನೆಯ ಪಾದದಿಂದಲೂ ಸಂಗತವಾಗುತ್ತದೆ. ಹೀಗಿರುವಾಗ ಯಾವ ಪಾದದಲ್ಲಿ ಸೇರಿಸಬೇಕೆಂಬ ಗೊಂದಲವನ್ನು ಪರಿಹರಿಸುವುದಕ್ಕಾಗಿ ಸೂತ್ರಕಾರರು ಎರಡು ಪಾದಗಳ ಮಧ್ಯದಲ್ಲಿ ಈ ಅಧಿಕರಣವನ್ನು ನಿವೇಶ ಮಾಡಿದ್ದಾರೆ.

ಇವರಿಬ್ಬರ ಅಭಿಪ್ರಾಯವು ಕೇವಲ ಆಪಾತರಮಣೀಯವಾಗಿದೆ. ಏಕೆಂದರೆ ''ಅನ್ಯತ್ರಪ್ರಸಿದ್ಧ- ವೈಶ್ವಾನರನಾಮ್ನಃ'' ಅನ್ಯತ್ರಪ್ರಸಿದ್ಧವಾದ ವೈಶ್ವಾನರ ಎಂಬ ನಾಮಾತ್ಮಕಶಬ್ದದ ಸಮನ್ವಯವೆಂದು ಟೀಕೆಯಲ್ಲಿ ಹೇಳಿರುವಾಗ ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದ ಸಮನ್ವಯವೆಂಬ ಅಭಿಪ್ರಾಯವು ಟೀಕಾ ವಿರುದ್ಧವಾದ್ದರಿಂದ ಅಸಾಧುವಾಗುತ್ತದೆ. ಮತ್ತು ಸೂತ್ರದಲ್ಲಿ 'ವೈಶ್ವಾನರ' ಎಂಬ ಶಬ್ದದ ಉಲ್ಲೇಖದಿಂದಲೇ ಅನ್ಯತ್ರಪ್ರಸಿದ್ಧವಾಗಿದೆಯೆಂದು ತಿಳಿಯುತ್ತಿರುವಾಗ ಎರಡು ಬಗೆಯ ಕಲ್ಪನೆಗಳು ಅಯುಕ್ತವಾಗುತ್ತವೆ.

ಆದ್ದರಿಂದ ವೈಶ್ವಾನರಾಧಿಕರಣಕ್ಕೆ ಪಾದಾಂತರ್ಭಾವಸಂಗತಿಯನ್ನು ಹೀಗೆ ಹೇಳಬೇಕು- ಒಂದು ವೇಳೆ ವೈಶ್ವಾನರ ಶಬ್ದಕ್ಕೆ ನ್ಯಾಯತೌಲ್ಯದಿಂದ ಅಥವಾ ಪ್ರಮಾಣತೌಲ್ಯದಿಂದ ಅನ್ಯತ್ರಪ್ರಸಿದ್ಧಿಯನ್ನು ಹೇಳಿದ್ದರೆ ಉಭಯತ್ರಪ್ರಸಿದ್ಧಿಯನ್ನು ಹೇಳಬಹುದಿತ್ತು. ಆದರೆ ಶ್ರುತ್ಯಂತರದಲ್ಲಿ ಅಗ್ನಿಯಲ್ಲಿ ವೈಶ್ವಾನರಶಬ್ದದ ಪ್ರಯೋಗವಿದೆಯೆಂದಾಗಲೀ, ಅಥವಾ ವಿಷಯವಾಕ್ಯದಲ್ಲಿ ಅಗ್ನಿಶಬ್ದದ ಸಾಮಾನಾಧಿಕರಣ್ಯವಿದೆಯೆಂದಾಗಲೀ ಅನ್ಯತ್ರಪ್ರಸಿದ್ಧಿಯನ್ನು ಹೇಳಿರುವುದಿಲ್ಲ.

ಒಂದು ವೇಳೆ ಹಾಗೇ ಹೇಳಿದ್ದರೆ 'ಸ್ಥೂಲಭುಗ್ವೈಶ್ವಾನರಃ ಪ್ರಥಮಃ ಪಾದಃ' ಎಂಬುದಾಗಿ ವಿಷ್ಣುವಿನಲ್ಲಿಯೂ ಶ್ರುತ್ಯಂತರದಲ್ಲಿ ವೈಶ್ವಾನರಶಬ್ದದ ಪ್ರಯೋಗವಿರುವುದರಿಂದ ಪ್ರಮಾಣತೌಲ್ಯ ಪ್ರಯುಕ್ತವಾಗಿ ಉಭಯತ್ರಪ್ರಸಿದ್ಧಿಯನ್ನು ಹೇಳಬಹುದಿತ್ತು. ಅಥವಾ ''ಆತ್ಮಾನಂ ವೈಶ್ವಾನರಮ್'' ಎಂಬುದಾಗಿ ವಿಷಯವಾಕ್ಯದಲ್ಲಿ ''ಗೌಣಶ್ಚೇನ್ನಾತ್ಮಶಬ್ದಾತ್'' ಎಂಬ ಸೂತ್ರದಲ್ಲಿ ವಿಷ್ಣುವಿನಲ್ಲಿ ಅಸಾಧಾರಣವಾಗಿ ಪ್ರಯುಕ್ತವಾದ ಆತ್ಮಶಬ್ದದ ಸಾಮಾನಾಧಿಕರಣ್ಯದಿಂದ ಅಂದರೆ ನ್ಯಾಯಸಾಮ್ಯದಿಂದ ಉಭಯತ್ರಪ್ರಸಿದ್ಧಿಯನ್ನು ವೈಶ್ವಾನರಶಬ್ದಕ್ಕೆ ಹೇಳಬಹುದಿತ್ತು. ಆದರೆ ಹಾಗೆ ನಾವು ಹೇಳಿರುವುದಿಲ್ಲ. (ನ್ಯಾಯತೌಲ್ಯದಿಂದ ಅಥವಾ ಪ್ರಮಾಣತೌಲ್ಯದಿಂದ ಅನ್ಯತ್ರಪ್ರಸಿದ್ಧಿಯನ್ನು ಹೇಳಿದರೆ ಮಾತ್ರ ಉಭಯತ್ರಪ್ರಸಿದ್ಧವಾದ ಶಬ್ದಗಳ ಗುಂಪಿನಲ್ಲಿ ಸೇರಿಸಲು ಸಾಧ್ಯವೆಂಬುದನ್ನು ಗಮನಿಸಬೇಕು.) ಮತ್ತೇನೆಂದರೆ

ಪ್ರಕೃತ ವೈಶ್ವಾನರ ಶಬ್ದವನ್ನು ಅಗ್ನಿಯಲ್ಲಿ ಲೋಕರೂಢಿಯಿಂದಷ್ಟೇ ಪ್ರಸಿದ್ಧವಾಗಿದೆಯೆಂದು ಹೇಳಲಾಗಿದೆ. ಆದ್ದರಿಂದ ಉಭಯತ್ರಪ್ರಸಿದ್ಧ- ಶಬ್ದಗಳ ಗುಂಪಿನಲ್ಲಿ ಇದು ಸೇರುವುದಿಲ್ಲ.

ಆದ್ದರಿಂದಲೇ ಟೀಕೆಯಲ್ಲಿ ''ಲೋಕತಃ ಅನ್ಯತ್ರಪ್ರಸಿದ್ಧ'' ಎಂದು ಹೇಳಿರುತ್ತಾರೆ. ಹಾಗಾದರೆ ಸೂತ್ರಕಾರರು ಉಭಯಸಾಧಾರಣ ಎಂಬರ್ಥದಲ್ಲಿ ಸಾಧಾರಣ ಎಂಬ ಶಬ್ದವನ್ನು ಏಕೆ ಪ್ರಯೋಗಿಸಿದರು ? ಎಂದರೆ ವೈಶ್ವಾನರಶಬ್ದವು ಅಗ್ನಿಯಲ್ಲಿ ಲೋಕರೂಢಿಯಿಂದ ಪ್ರಸಿದ್ಧವಾದ್ದರಿಂದ ರೂಢಿಪ್ರಯುಕ್ತವಾಗಿ ಬಲಿಷ್ಠವಾಗಿದೆ. ವಿಷ್ಣುಲಿಂಗಗಳು ನಿರವಕಾಶ-ಪ್ರಯುಕ್ತವಾಗಿ ಬಲಿಷ್ಠವಾಗಿವೆ. ಹೀಗೆ ಒಂದೊಂದು ಮುಖದಲ್ಲಿ ಎರಡೂ ಕಡೆಯೂ ವೈಶ್ವಾನರಶಬ್ದವು ಸಮಾನಬಲವನ್ನು ಹೊಂದಿರುವ ಪ್ರಯುಕ್ತ ಸೂತ್ರಕಾರರು ಉಭಯಸಾಧಾರಣವಾಗಿದೆಯೆಂದು ಹೇಳಿರುತ್ತಾರೆ; ಹೊರತು, ವೈಶ್ವಾನರಶಬ್ದವು ಉಭಯತ್ರಪ್ರಸಿದ್ಧವಾಗಿದೆಯೆಂಬ ದೃಷ್ಟಿಯಿಂದ ಸಾಧಾರಣಶಬ್ದವನ್ನು ಪ್ರಯೋಗಿಸಿಲ್ಲ. ಹೀಗೆ ಅನ್ಯತ್ರಪ್ರಸಿದ್ಧವಾಗಲು ತೊಂದರೆ ಬಾರದಂತೆ ಟೀಕೆಯಲ್ಲಿ ಸಾಧಾರಣಶಬ್ದವನ್ನು ವ್ಯಾಖ್ಯಾನಿಸಿರುತ್ತಾರೆ.

ಅಣುಭಾಷ್ಯದ ಪ್ರಕಾರ ವೈಶ್ವಾನರಶಬ್ದವು ಲಿಂಗಾತ್ಮಕ

भावदीपः – 'विश्वजीवान्तरत्वाद्यैः' इत्यणुभाष्योक्तिस्तु सिद्धान्तदिशा ब्रह्मणि यौगिकत्वाभिप्रायेणेति भावः ।

ವಸ್ತುತಃ ಅಣುಭಾಷ್ಯದಲ್ಲಿ ''ವಿಶ್ವಜೀವಾಂತರತ್ವಾದ್ಯೈಃ'' ಎಂದು ವೈಶ್ವಾನರ ಶಬ್ದವನ್ನು ಲಿಂಗಾತ್ಮಕವೆಂದು ಹೇಳಿದ್ದಾರೆ. ಅದರ ವಿರೋಧವು ಬರುತ್ತದಲ್ಲವೇ? ಎಂದು ಸಹಜವಾಗಿ ಪ್ರಶ್ನೆ ಬರುತ್ತದೆ. ಆದರೆ ಅಣುಭಾಷ್ಯದಲ್ಲಿ ಸಿದ್ಧಾಂತದ ಪ್ರಕಾರ ವೈಶ್ವಾನರ ಶಬ್ದವು ಯೌಗಿಕವಾಗಿದೆ ಎಂದು ತಿಳಿಸಿದ್ದಾರೆ. ಇಲ್ಲದಿದ್ದರೆ ''ವೈಶ್ವಾನರತ್ವಾದ್ಯೈಃ'' ಎಂದೇ ಹೇಳುತ್ತಿದ್ದರು. ಹೀಗೆ ಹೇಳದ ಕಾರಣ ಲಿಂಗಾತ್ಮಕಶಬ್ದದ ಸಮನ್ವಯವು ಇಲ್ಲಿ ವಿವಕ್ಷಿತವಾಗಿಲ್ಲವೆಂದು ತಿಳಿಯುತ್ತದೆ.

ಲಿಂಗಪಾದದಲ್ಲಿ ವೈಶ್ವಾನರ ಎಂಬ ನಾಮಸಮನ್ವಯವು ಅಪ್ರಸ್ತುತವಲ್ಲ

भावदीपः – कथं तर्ह्यत्र पादे निवेश? इत्यतः, फलतः पादसङ्गतिरन्तर्नय इवेत्याह – पाचकत्वेति ।।

ಹಾಗಾದರೆ ವೈಶ್ವಾನರ ಶಬ್ದವು ನಾಮಾತ್ಮಕವಾದಲ್ಲಿ ಇದನ್ನು ಪ್ರಥಮಪಾದದಲ್ಲಿ ಸೇರಿಸಬೇಕಿತ್ತಲ್ಲವೆ? ಲಿಂಗ ಪಾದದಲ್ಲಿ ಇದರ ಸಮನ್ವಯವು ಅಪ್ರಸ್ತುತವಲ್ಲವೆ? ಎಂಬ ಪ್ರಶ್ನೆ ಬರುತ್ತದೆ. ಆದರೆ ನೇರವಾಗಿ ಲಿಂಗದ ಸಮನ್ವಯವನ್ನು ಈ ಪಾದದಲ್ಲಿ ಮಾಡದಿದ್ದರೂ ಫಲತಃ ಲಿಂಗದ ಸಮನ್ವಯವು ಸಿದ್ಧವಾಗುತ್ತಿರುವುದರಿಂದ ಪಾದಸಂಗತಿಯು ಯುಕ್ತವಾಗುತ್ತದೆಂದು ತಿಳಿಯಬೇಕು. ಯಾವ ರೀತಿಯಾಗಿ ನಾಮಪಾದದಲ್ಲಿ ಅಂತರಾಧಿಕರಣವು ಲಿಂಗಸಮನ್ವಯವನ್ನು ಮಾಡುತ್ತಿದ್ದರೂ ಫಲತಃ ನಾಮಸಮನ್ವಯದಲ್ಲಿ ಪರ್ಯವಸನವಾಗುವುದರಿಂದ ಪಾದಸಂಗತಿಯನ್ನು ಹೊಂದಿದೆಯೋ ಅದರಂತೆ ಇಲ್ಲಿಯೂ ತಿಳಿಯಬೇಕು. ಈ ಅಭಿಪ್ರಾಯದಿಂದ ಟೀಕೆಯಲ್ಲಿ ''ಪಾಚಕತ್ವಾದಿ'' ಎಂಬ ಮಾತು ಹೊರಟಿದೆ.

ಪಾಚಕತ್ವ, ಹೋಮಾಧಾರತ್ವ ಗಾರ್ಹಪತ್ಯಾದ್ಯಂಗತ್ವ ಮೊದಲಾದ ಅನೇಕ ಲಿಂಗಗಳ ಸಮನ್ವಯ

ಭಾವದೀಪಃ – ‘तद् यद् भक्तं प्रथममागच्छेत् तद्धोमीयम्’ इति ‘वैश्वानरे तद् हुतं भवति’ इत्यादिना पाचकत्वहोमाधारत्वगार्हपत्याद्यङ्गकत्वादिश्रवणादिति भावः ।

''ತದ್ಯದ್ ಭಕ್ತಂ ಪ್ರಥಮಮಾಗಚ್ಛೇತ್ ತದ್ಹೋಮೀಯಂ'' ಎಂಬುದಾಗಿ ಮತ್ತು ''ವೈಶ್ವಾನರೇ ತದ್ ಹುತಂ ಭವತಿ'' ಎಂದು ಪಾಚಕತ್ವ ಹೋಮಾಧಾರತ್ವ ಗಾರ್ಹಪತ್ಯಾದ್ಯಂಗತ್ವ ಮೊದಲಾದ ಅನೇಕ ಲಿಂಗಗಳು ವೈಶ್ವಾನರ ಪ್ರಕರಣದಲ್ಲಿ ಹೇಳಲ್ಪಟ್ಟಿವೆ. ಆದ್ದರಿಂದ ವೈಶ್ವಾನರವೆಂಬ ಒಂದು ನಾಮಾತ್ಮಕ ಶಬ್ದವನ್ನು ಸಮನ್ವಯ ಮಾಡುವುದರಿಂದ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯವು ಸುಲಭವಾಗಿ ಸಿದ್ಧವಾಗುತ್ತದೆಂದು ತಿಳಿಯಬೇಕು.

ಪಾಚಕತ್ವವೂ ಕೂಡ ಲಿಂಗವೇ ಆಗಿದೆ

ಭಾವದೀಪಃ – यद्यपि पाचकत्वं कर्मेति वक्ष्यति । तथापि लिङ्गत्वमप्यस्तीति वा तदन्यलिङ्गापेक्षया वा एवमुक्तिः । अधिकं चन्द्रिकायाम् ।

ವಸ್ತುತಃ ಪಾಚಕತ್ವವು ''ಕರ್ಮವಾಗಿದೆ'' ಎಂದು ಮುಂದೆ ಹೇಳುತ್ತಾರೆ. ಆದರೂ ಲಿಂಗವೂ ಸಹ ಆಗಿದೆ ಎಂಬ ಅಂಶವನ್ನು ಗಮನಿಸಬೇಕು. ಅಥವಾ ಪಾಚಕತ್ವವು ಕರ್ಮವಷ್ಟೇ ಆಗಿದೆ ಎಂದು ವಿವಕ್ಷಿಸುವುದಾದರೆ ಪಾಚಕತ್ವವನ್ನು ಬಿಟ್ಟು ಉಳಿದ ಲಿಂಗಗಳ ಸಮನ್ವಯಕ್ಕಾಗಿ ಈ ಅಧಿಕರಣವು ಹೊರಟಿದೆ ಎಂದೂ ಸಹ ತಿಳಿಯಬಹುದು. ಹೆಚ್ಚಿನ ವಿಷಯವನ್ನು ಚಂದ್ರಿಕೆಯಲ್ಲಿ ತಿಳಿಯಬಹುದು.

ವಿಶೇಷವಿಚಾರ - ಈ ಅಧಿಕರಣದಲ್ಲಿ ನೇರವಾಗಿ ಲಿಂಗವನ್ನು ಸಮನ್ವಯ ಮಾಡುತ್ತಿಲ್ಲ. 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುತ್ತಿದ್ದಾರೆ. ಹಾಗಾದರೆ ಲಿಂಗಸಮನ್ವಯ ಮಾಡುವ ಈ ಪಾದದಲ್ಲಿ ವೈಶ್ವಾನರಾಧಿಕರಣವು ಅಸಂಗತವಾಗುತ್ತದೆಂಬುದು ಮೊದಲನೆಯ ಪ್ರಶ್ನೆ. ಇಂತಹ 'ವೈಶ್ವಾನರ' ಎಂಬ ನಾಮವು ವಿಷ್ಣುವಿನಲ್ಲಿ ಹಾಗೂ ಅಗ್ನಿಯಲ್ಲಿ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವಾಗಿದೆ. ಈ ಪಾದದಲ್ಲಿ ಅನ್ಯತ್ರಪ್ರಸಿದ್ಧಶಬ್ದವನ್ನು ಸಮನ್ವಯ ಮಾಡುತ್ತಿರುವುದರಿಂದಲೂ ಈ ಅಧಿಕರಣಕ್ಕೆ ಇಲ್ಲಿ ಸಂಗತಿ ಇರುವುದಿಲ್ಲವೆಂಬುದು ಎರಡನೆಯ ಪ್ರಶ್ನೆ.

ಒಂದು 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುವುದರಿಂದ ವೈಶ್ವಾನರನೆನಿಸಿದ ವಿಷ್ಣುವಿಗೆ ಸಂಬಂಧಪಟ್ಟ ಎಲ್ಲ ಲಿಂಗಗಳನ್ನು ಸಮನ್ವಯ ಮಾಡಿದಂತಾಗುವುದರಿಂದ ಈ ಅಧಿಕರಣವು ಇಲ್ಲಿ ಸಂಗತವಾಗುತ್ತದೆ. ಮತ್ತು ಉಭಯತ್ರಪ್ರಸಿದ್ಧವೂ ಆಗುವುದಿಲ್ಲ. ಪ್ರಮಾಣತೌಲ್ಯ ಹಾಗೂ ನ್ಯಾಯತೌಲ್ಯಗಳಿದ್ದರೆ ಮಾತ್ರ ಉಭಯತ್ರಪ್ರಸಿದ್ಧವಾಗುತ್ತದೆ. ಅಂದರೆ ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧಿಯನ್ನು ಹೇಳಿದರೆ ಅಂತಹ ಶ್ರುತಿಯಿಂದಲೇ ಅಗ್ನಿಯಲ್ಲಿಯೂ ಪ್ರಸಿದ್ಧಿಯನ್ನು ಹೇಳಬೇಕು. ಅಥವಾ ಲೋಕರೂಢಿಯನ್ನು ಅಗ್ನಿಯಲ್ಲಿ ಹೇಳಿದರೆ ಅಂತಹ ಲೋಕರೂಢಿಯನ್ನೇ ವಿಷ್ಣುವಿನಲ್ಲಿ ಹೇಳಬೇಕು. ಹೀಗಿದ್ದರೆ ಮಾತ್ರ ಉಭಯತ್ರಪ್ರಸಿದ್ಧವೆನಿಸುತ್ತದೆ. ಆದರೆ ಪ್ರಕೃತ ವೈಶ್ವಾನರ ಶಬ್ದವು ಲೋಕರೂಢಿಯಿಂದ ಅಗ್ನಿಯಲ್ಲಿ ಪ್ರಸಿದ್ಧವಾಗಿದೆ. ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ. ಹೀಗಿರುವಾಗ ಉಭಯತ್ರಪ್ರಸಿದ್ಧವೆನ್ನಲು ಸಾಧ್ಯವಿಲ್ಲ ಹೊರತಾಗಿ, ಲೋಕರೂಢಿಯನ್ನು ವಿವಕ್ಷಿಸಿ ಅನ್ಯತ್ರಪ್ರಸಿದ್ಧವೇ ಆಗುತ್ತದೆ.

'ವೈಶ್ವಾನರ' ಶಬ್ದವು ಲಿಂಗಾತ್ಮಕವೆಂದು 'ವಿಶ್ವಜೀವಾಂತರತ್ವಾದ್ಯೈರ್ಲಿಂಗೈಃ' ಎಂಬ ಅಣುಭಾಷ್ಯದಲ್ಲಿ ಹೇಳಿದಂತೆ ಕಾಣಿಸುತ್ತದೆ. ಇದು ಸಿದ್ಧಾಂತದಲ್ಲಿ 'ವೈಶ್ವಾನರ' ಶಬ್ದವನ್ನು

ಯೌಗಿಕವೆಂದು ಹೇಳಿದ್ದಾರೆ ಎಂಬ ಅಭಿಪ್ರಾಯದಿಂದ; ಹೊರತು, ಉಳಿದ ಶಬ್ದಗಳಂತೆ ಪೂರ್ವಪಕ್ಷ ಸಂದರ್ಭದಲ್ಲಿ ಲಿಂಗಾತ್ಮಕವಾಗಿರುವುದಿಲ್ಲ; ನಾಮಾತ್ಮಕವೇ ಆಗಿರುತ್ತದೆ.

ಈ ಅಧಿಕರಣಕ್ಕೆ ಹಿಂದಿನ ಅದೃಶ್ಯತ್ವಾಧಿಕರಣದ ಜೊತೆಗೆ ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು. ಅದೃಶ್ಯತ್ವಾದಿಗುಣಗಳು ವಿಷ್ಣುವಿನ ಧರ್ಮವೆಂದು ಅಲ್ಲಿ ಹೇಳಲಾಗಿದೆ. ಅಂತಹ ಅದೃಶ್ಯತ್ವಾದಿಗುಣಗಳನ್ನು ಹೇಳುವ ಉಪನಿಷತ್ತಿನಲ್ಲಿ ಸರ್ವಗತತ್ವವನ್ನೂ ಸಹ ಹೇಳಲಾಗಿದೆ. ಅದೇ ಸರ್ವಗತತ್ವಧರ್ಮವನ್ನು ಛಾಂದೋಗ್ಯೋಪನಿಷತ್ತು ವೈಶ್ವಾನರನಲ್ಲಿ ಹೇಳುತ್ತಿದೆ. ವೈಶ್ವಾನರನು ವಿಷ್ಣುವಲ್ಲದಿದ್ದರೆ ಅದೃಶ್ಯತ್ವಾದಿಗುಣಗಳೂ ಸಹ ವಿಷ್ಣುವಿನ ಧರ್ಮವಾಗುವುದಿಲ್ಲ. ಹೀಗೆ ಹಿಂದಿನ ಅಧಿಕರಣದ ಸಿದ್ಧಾಂತವು ಅಯುಕ್ತವಾಗುತ್ತದೆ. ಈ ಉದ್ದೇಶಕ್ಕೋಸ್ಕರ ಸೂತ್ರಕಾರರು 'ವೈಶ್ವಾನರ' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸಲು ಹೊರಟಿದ್ದಾರೆ.

ಸಂಗತಿಪರ ಭಾಷ್ಯಕ್ಕೆ ವ್ಯಾಖ್ಯಾನ

भावदीपः – इत्यन्तं भाष्यं सङ्गतिपरत्वेन तावद् व्याकर्तुं परिष्करोति – गतेति ।। भाष्यं व्याचष्टे – अदृश्यत्वादिगुणेष्वुक्तमिति ।।

''ಇತಿ'' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನಿಸುವುದಕ್ಕಾಗಿ ''ಗತಾಧಿಕರಣೇ'' ಎಂಬ ಟೀಕೆಯು ಹೊರಟಿದೆ. ''ಅದೃಶ್ಯತ್ವಾದಿಗುಣೇಷೂಕ್ತಂ'' ಎಂಬ ಟೀಕೆಯು ಭಾಷ್ಯವನ್ನು ವ್ಯಾಖ್ಯಾನಿಸುತ್ತಿದೆ.

ಛಾಂದೋಗ್ಯ ಹಾಗೂ ಬೃಹದಾರಣ್ಯಕಗಳಲ್ಲಿ ವಿಷಯವಾಕ್ಯ

भावदीपः – 'यस्त्वेतम्' इत्यादेरर्थः – छन्दोगेति ।। पञ्चमे वैश्वानरविद्यायामित्यर्थः । प्रथमबृहद्भाष्योक्तमाह – मानमिति ।।

''ಯಸ್ತ್ವೇತಮೇವಂ'' ಎಂದು ಭಾಷ್ಯದಲ್ಲಿ ಉದಾಹರಿಸಿದ ಛಾಂದೋಗ್ಯಶ್ರುತಿಯನ್ನು ಟೀಕೆಯಲ್ಲಿ ''ಛಂದೋಗಶ್ರುತೌ'' ಎಂಬುದಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಈ ಛಾಂದೋಗ್ಯದ ಮಾತು ಐದನೆಯ ಅಧ್ಯಾಯದ ವೈಶ್ವಾನರವಿದ್ಯೆಯಲ್ಲಿ ಪ್ರಸಕ್ತವಾಗಿದೆ. ಬೃಹದಾರಣ್ಯಕಭಾಷ್ಯದ ಪ್ರಥಮಾಧ್ಯಾಯದಲ್ಲಿ ಹೇಳಿದ ಮಾತನ್ನು ''ಮಾನಂ ಜ್ಞಾನಂ'' ಎಂಬುದರಿಂದ ತೋರಿಸುತ್ತಿದ್ದಾರೆ.

ವೈಶ್ವಾನರನು ವಿಷ್ಣುವಾಗದಿದ್ದರೆ ?

भावदीपः – भावमाह – तस्येति ।। वक्ष्यमाणन्यायेनेतरत्व इत्यर्थः । इति सङ्गतिसम्भवादिति हेत्वर्थोऽत्रेति शब्दः

ಒಟ್ಟು ಅಭಿಪ್ರಾಯವನ್ನು ''ತಸ್ಯ ಚ'' ಎಂಬ ವಾಕ್ಯದಿಂದ ತೋರಿಸಿದ್ದಾರೆ. ಮುಂದೆ ಹೇಳುವ ನ್ಯಾಯದಿಂದ ವೈಶ್ವಾನರನು ವಿಷ್ಣುವಾಗದಿದ್ದಲ್ಲಿ ಎಂದು ''ತಸ್ಯಚ'' ಎಂಬ ವಾಕ್ಯದ ಅಭಿಪ್ರಾಯ. ''ಪ್ರಸಜ್ಯೇತೇತ್ಯವಶ್ಯನಿರ್ಣಯತ್ವಂ'' ಎಂಬಲ್ಲಿ ''ಇತಿ'' ಶಬ್ದವು ಹೀಗೆ ಸಂಗತಿಯು ಕೂಡುವುದರಿಂದ ಎಂಬುದಾಗಿ ಹೇತ್ವರ್ಥದಲ್ಲಿದೆ ಎಂದು ತಿಳಿಯಬೇಕು.

ವಿಷ್ಣುವೊಬ್ಬನೇ ವೈಶ್ವಾನರ

भावदीपः – किं विष्णुरिति ।। किं विष्णुरेव वाऽन्योऽपि वा इत्यर्थः । विष्णुरेव वेति सिद्धान्तकोटेः शेषो वा

ಟೀಕೆಯಲ್ಲಿ ''ಕಂ ವಿಷ್ಣುಃ'' ಎಂದು ಹೇಳಿದ್ದಾರೆ. ಅಂದರೆ ವಿಷ್ಣುವೊಬ್ಬನೇ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನೊ? ಅಥವಾ ವಿಷ್ಣುವಿನ ಜೊತೆಗೆ ಬೇರೆಯವರೂ ಸಹ ಪ್ರತಿಪಾದ್ಯರಾಗಿದ್ದಾರೊ? ಎಂದರ್ಥ. ವಿಷ್ಣುವೊಬ್ಬನೇ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ ಎಂಬುದು ಸಿದ್ಧಾಂತ ಕೋಟಿಯ ಅಂಶವಾಗಿದೆ.

ವಿಶೇಷವಿಚಾರ - ವೈಶ್ವಾನರ ಶಬ್ದದಿಂದ ಪ್ರತಿಪಾದ್ಯರಾದವರು ಅಗ್ನ್ಯಾದಿಗಳೋ, ಅಥವಾ ಬ್ರಹ್ಮನೋ? ಒಂದುವೇಳೆ ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿ ಇರುವುದಾದರೆ ಪ್ರಸಿದ್ಧವಾದ ಅಗ್ನಿ ಮೊದಲಾದವರಲ್ಲಿ ಮಾಡಲ್ಪಡುವ ಲೌಕಿಕವ್ಯವಹಾರವು ಯುಕ್ತವೋ? ಅಯುಕ್ತವೋ? ಬ್ರಹ್ಮನಲ್ಲಿಯೇ ವೈಶ್ವಾನರಾದಿ ಶಬ್ದಗಳು ಮುಖ್ಯವಾಗಿ ಇರುವುದಾದರೆ ಎಲ್ಲಾ ಸೂಕ್ತಗಳು ಹಾಗೂ ವಿದ್ಯೆಗಳೆಲ್ಲವೂ ಬ್ರಹ್ಮಪರವಾದವು, ಆವಾಗ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಎಂಬ ವ್ಯವಸ್ಥೆಯು ಅಯುಕ್ತವಾಗುತ್ತದೋ? ಅಥವಾ ಯುಕ್ತವಾಗುತ್ತದೋ? ಇದರಂತೆ ಎಲ್ಲ ವಿದ್ಯೆಗಳೂ ಬ್ರಹ್ಮಪರವಾದರೆ ಇದು ವೈಶ್ವಾನರವಿದ್ಯೆ, ಇದು ಅಗ್ನಿವಿದ್ಯೆ ಎಂಬ ವ್ಯವಸ್ಥೆಯೂ ಸಹ ಅಯುಕ್ತವಾಗುತ್ತದೋ? ಯುಕ್ತವಾಗುತ್ತದೋ? ಎಂದು ಸಂಶಯ ಬರುತ್ತದೆ.

ಪೂರ್ವಪಕ್ಷ ಹೀಗಿದೆ- ''ಆತ್ಮಾನಂ ವೈಶ್ವಾನರಮುಪಾಸ್ತೇ'' ''ಅಯಮಗ್ನಿರ್ವೈಶ್ವಾನರಃ'' ಎಂಬ ವಿಷಯವಾಕ್ಯದಲ್ಲಿ ಕೇಳಿಸುತ್ತಿರುವ ವೈಶ್ವಾನರನು ಅಗ್ನಿದೇವತೆ ಅಥವಾ ಜಡವಾದ ಅಗ್ನಿಯೆಂದು ಹೇಳಬೇಕು. ಏಕೆಂದರೆ ಲೋಕದಲ್ಲಿ ಈ ಎರಡು ಪದಾರ್ಥಗಳಲ್ಲೇ ವೈಶ್ವಾನರಶಬ್ದವನ್ನು ಎಲ್ಲರೂ ಪ್ರಯೋಗಿಸುತ್ತಾರೆ.

ಸಂಗತಿಪರ ಭಾಷ್ಯವೇ ಪೂರ್ವಪಕ್ಷ ಪರ

ಭಾವದೀಪಃ – तदेव भाष्यं पूर्वपक्षतद्युक्तितत्फलोक्तिपरत्वेन व्याचष्टे – नायमिति ।। विष्णुरित्यस्य विष्णुरेवेत्यर्थः । देवताभऊतं चेति सूत्रमनुरुद्ध्याऽह – किन्त्विति ।।

ಸಂಗತಿ ಪರವಾಗಿ ವ್ಯಾಖ್ಯಾನಿಸಿದ ಭಾಷ್ಯವನ್ನೇ ಪೂರ್ವಪಕ್ಷ, ಪೂರ್ವಪಕ್ಷಯುಕ್ತಿ, ಪೂರ್ವಪಕ್ಷಫಲ ಇವುಗಳ ಪರವಾಗಿಯೂ ವ್ಯಾಖ್ಯಾನಿಸುತ್ತಿದ್ದಾರೆ ''ನಾಯಂ'' ಇತ್ಯಾದಿ ವಾಕ್ಯದಿಂದ. ''ವಿಷ್ಣುರಿತ್ಯಸ್ಯ'' ಎಂಬ ಶಬ್ದಕ್ಕೆ ವಿಷ್ಣುವೊಬ್ಬನೇ ಎಂದು ಅರ್ಥೈಸಬೇಕು. ''ನ ದೇವತಾ ಭೂತಂ ಚ'' ಎಂಬ ಸೂತ್ರದಲ್ಲಿರುವ ದೇವತಾ ಹಾಗೂ ಭೂತಪದಗಳನ್ನು ಅನುಸರಿಸಿ ಅದರಿಂದ ನಿರಾಸವಾಗುವ ಪೂರ್ವಪಕ್ಷವನ್ನು ''ಕಿಂತು'' ಎಂಬ ಮಾತಿನಿಂದ ತೋರಿಸುತ್ತಿದ್ದಾರೆ.

'ವೈಶ್ವಾನರಸ್ಯ' ಎಂಬ ಪದಸೂಚಿತವಾದ ಪ್ರಮೇಯ

ಭಾವದೀಪಃ – विष्णुरित्यप्यनुकर्षः । 'वैश्वानरस्य' इति भाष्यसूचितं तावदाह – वैश्वानरेति ।।

''ಕಿಂತು'' ಎಂಬ ವಾಕ್ಯದಲ್ಲಿ ''ವಿಷ್ಣುಃ'' ಎಂಬುದನ್ನೂ ಸಹ ಅನುಕರ್ಷ ಮಾಡಬೇಕು. ''ವೈಶ್ವಾನರಸ್ಯ'' ಎಂಬ ಭಾಷ್ಯದಲ್ಲಿರುವ ಪದದಿಂದ ಸೂಚಿತವಾದ ಪ್ರಮೇಯವನ್ನು ''ವೈಶ್ವಾನರಶ್ರುತೇಃ'' ಎಂಬುದರಿಂದ ಹೇಳಿದ್ದಾರೆ.

ಪೂರ್ವಪಕ್ಷ ಹಾಗೂ ಸಿದ್ಧಾಂತದಲ್ಲಿ ಸಮಾನ ಬಲವಿದೆಯೇ ?

ಭಾವದೀಪಃ – अग्नाविष्ण्वोः साधारणस्येति भाष्योक्तं साधारण्यमग्नाविष्ण्वोः विवरिष्यन् श्रुतिलिङ्गयोस्तुल्यबलत्वं वक्तुमाह – नचेति ।। प्राबल्यादिति ।। अन्तरादिनयन्यायेनेति भावः ।

''ಅಗ್ನಾವಿಷ್ಣೋ: ಸಾಧಾರಣಸ್ಯೇತಿ'' ಎಂಬುದಾಗಿ ಭಾಷ್ಯದಲ್ಲಿ ಹೇಳಿರುವ ಸಾಧಾರಣ್ಯವನ್ನು ಅಗ್ನಿ ಮತ್ತು ವಿಷ್ಣುವಿನಲ್ಲಿ ವಿವರಿಸುತ್ತಿದ್ದಾರೆ. ಮತ್ತು ಅಗ್ನಿಶ್ರುತಿ ಹಾಗೂ ಲಿಂಗಗಳು, ವಿಷ್ಣುಶ್ರುತಿ ಹಾಗೂ ಲಿಂಗಗಳು ಎರಡೂ ಕಡೆ ಸಮಾನವಾದ ಬಲವನ್ನು ಹೊಂದಿವೆ ಎಂದು ತಿಳಿಸುವುದಕ್ಕಾಗಿ ''ನ ಚ ವಾಚ್ಯಂ'' ಎಂಬ ಟೀಕಾಪಂಕ್ತಿಯು ಹೊರಟಿದೆ. ''ಪ್ರಾಬಲ್ಯಾತ್'' ಎಂದರೆ ಅಂತರಾಧಿಕರಣದ ನ್ಯಾಯದಿಂದ ಪ್ರಬಲವಾಗಿದೆ ಎಂದು ತಿಳಿಯಬೇಕು.

ಶಬ್ದಗಳೇ ಇಲ್ಲವಾದರೆ ಲೋಕವ್ಯವಹಾರಗಳು ಹೇಗೆ ?

ಭಾವದೀಪಃ – ಶ್ರುತೇರಪೀತ್ಯುಕ್ತಮೇವ ಸಾಕ್ಷಾದಪೀತಿ ಸೂತ್ರವ್ಯಾವರ್ತ್ಯಂ ವ್ಯನಕ್ತಿ – ಶ್ರುತೇರಿತಿ ।। ಲೋಕಪ್ರಸಿದ್ಧೀತಿ ।। ಲೋಕವ್ಯವಹಾರಾಭಾವಾಪಾತಾದಿತ್ಯರ್ಥಃ । ನೈಷ್ಫಲ್ಯಂ ಸ್ಯಾದಿತಿ ಭಾವಃ ।

''ಶ್ರುತೇರಪಿ'' ಎಂಬ ವಾಕ್ಯದಿಂದ ಹೇಳಲ್ಪಟ್ಟ ವಿಷಯವನ್ನೇ ''ಸಾಕ್ಷಾದಪ್ಯವಿರೋಧಂ'' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ''ಶ್ರುತೇಃ ವಿಷ್ಣುವಿಷಯತ್ವೇ'' ಎಂಬ ವಾಕ್ಯದಿಂದ ಸ್ಪಷ್ಟವಾಗಿ ತೋರಿಸುತ್ತಿದ್ದಾರೆ. ''ಲೋಕಪ್ರಸಿದ್ಧಿಬಾಧಾತ್'' ಎಂದರೆ ಲೋಕವ್ಯವಹಾರವೇ ಇಲ್ಲದಂತಾಗಬೇಕಾಗುತ್ತದೆ ಎಂದು ಅಭಿಪ್ರಾಯ. ಅಂದರೆ ವೈಶ್ವಾನರಶಬ್ದವು ವಿಷ್ಣುವನ್ನು ಪ್ರತಿಪಾದಿಸಿದರೆ ಲೋಕದಲ್ಲಿ ಅಗ್ನಿಯಲ್ಲಿ ಮಾಡುವ ಪ್ರಯೋಗವು ನಿಷ್ಫಲವಾಗಬೇಕಾಗುತ್ತದೆ ಎಂದು ಅಭಿಪ್ರಾಯ.

ಹಿಂದಿನ ಅಧಿಕರಣಗಳ ಪ್ರಮೇಯವೂ ಕೂಡ ಆಕ್ಷೇಪಾರ್ಹ

ಭಾವದೀಪಃ – ಏತೇನಾನ್ತರಾದಿನಯೇಷ್ವಪಿ ನಿರವಕಾಶಲಿಙ್ಗೇನೋಕ್ತಃ ಶ್ರುತಿಬಾಧೋ ನ ಸಮ್ಮತ ಇತಿ ಪೂರ್ವೋಕ್ತಸರ್ವಾಕ್ಷೇಪೋ ದರ್ಶಿತಃ । 'ಅಭಿವ್ಯಕ್ತೇಃ' ಇತ್ಯಾದಿಸೂತ್ರಾಣಾಂ ವ್ಯಾವರ್ತ್ಯಚೋದ್ಯಮಾಹ – ವೈದಿಕೇತಿ ।।

ಹೀಗೆ ಹೇಳಿದ್ದರಿಂದ ಅಂತರಾದ್ಯಧಿಕರಣಗಳಲ್ಲಿ ನಿರವಕಾಶಲಿಂಗದಿಂದ ಹೇಳಲ್ಪಟ್ಟ ಶ್ರುತಿಬಾಧವು ಸಮ್ಮತವಲ್ಲ ಎಂದು ಪೂರ್ವಪಕ್ಷಿಗಳು ಅಭಿಪ್ರಾಯ ಪಡುತ್ತಾರೆಂದು ತಿಳಿಯುತ್ತದೆ. ಆದ್ದರಿಂದ ಈ ಅಧಿಕರಣದಲ್ಲಿ ಮಾಡುತ್ತಿರುವ ಆಕ್ಷೇಪದಿಂದ ಹಿಂದಿನ ಅಧಿಕರಣಗಳ ಪ್ರಮೇಯವನ್ನೂ ಸಹ

ಆಕ್ಷೇಪಿಸುತ್ತಿದ್ದಾರೆಂದು ತಿಳಿಸಿದಂತಾಯಿತು. ''ಅಭಿವ್ಯಕ್ತೇರಿತ್ಯಾಶ್ಮರಥ್ಯಃ'' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ''ವೈದಿಕವಿದ್ಯಾಭೇದ'' ಎಂಬ ಮಾತಿನಿಂದ ತೋರಿಸುತ್ತಿದ್ದಾರೆ.

ಎಲ್ಲವೂ ವಿಷ್ಣುವಿದ್ಯೆಯಾದರೆ ಬರುವ ಆಕ್ಷೇಪ

भावदीपः – अग्न्यादिसर्वशब्दानां विष्णौ मुख्यत्वे सर्वस्य विष्णुविद्यात्वेनेयमग्निविद्या इयमात्मविद्येति भेदव्यवहारो न स्यात् । अस्ति च व्यवहारः । तेन तेषामग्न्यादिवाचित्वं सिद्धमिति तद्विरोधान्न वैश्वानरादिशब्दानां विष्णुविषयत्वमित्यर्थः ।

ಅಗ್ನಿ ಮೊದಲಾದ ಸಕಲ ಶಬ್ದಗಳು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುವುದಾದರೆ ಎಲ್ಲವೂ ಸಹ ವಿಷ್ಣುವಿದ್ಯೆ ಎಂದು ಹೇಳಿದಂತಾಯಿತು. ಆವಾಗ ''ಇದು ಅಗ್ನಿವಿದ್ಯೆ'', ''ಇದು ಆತ್ಮವಿದ್ಯೆ'' ಎಂಬ ಭೇದವ್ಯವಹಾರವೇ ತಪ್ಪಾದೀತು. ಆದರೆ ವಿದ್ಯಾಭೇದದ ವ್ಯವಹಾರವು ಲೋಕದಲ್ಲಿ ಪ್ರಸಿದ್ಧವಾಗಿದೆ. ಇದರಿಂದ ಅಗ್ನಿ ಮೊದಲಾದ ಶಬ್ದಗಳಿಗೆ ಅಗ್ನಿಪ್ರತಿಪಾದಕತ್ವವನ್ನು ಒಪ್ಪಲೇಬೇಕಾಗುತ್ತದೆ. ಇದರ ವಿರೋಧವು ಬರುವುದರಿಂದ ವೈಶ್ವಾನರಾದಿಶಬ್ದಗಳಿಗೆ ವಿಷ್ಣುವಿಷಯತ್ವವನ್ನು ಹೇಳಲು ಬರುವುದಿಲ್ಲ ಎಂದು ನಿರ್ಣಯವಾಯಿತು.

ವಿಶೇಷವಿಚಾರ - ಪ್ರಶ್ನೆ - ಕೇವಲ ಲೋಕರೂಢಿಯಿಂದ ಅಗ್ನಿದೇವತೆಯನ್ನು ಅಥವಾ ಜಡವಾದ ಅಗ್ನಿಯನ್ನು ವೈಶ್ವಾನರವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ 'ಅಹಂ ವೈಶ್ವಾನರಃ' ಎಂಬ ಗೀತಾಸ್ಮೃತಿಯ ಸಮಾಖ್ಯಾಪ್ರಮಾಣವು ವಿಷ್ಣುವಿನ ವಿಷಯದಲ್ಲಿದೆ. ಮತ್ತು ಪುರುಷಸೂಕ್ತದಲ್ಲಿ ಯಾವ ಪುರುಷನು ವರ್ಣಸಲ್ಪಟ್ಟಿದ್ದಾನೋ? ಅವನೇ ವೈಶ್ವಾನರ ಪ್ರಕರಣದಲ್ಲಿ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತಿದೆ. ಹೀಗೆ ಪುರುಷಸೂಕ್ತ ಸಮಾಖ್ಯಾಪ್ರಮಾಣವು ವಿಷ್ಣುವಿನ ವಿಷಯದಲ್ಲಿ ಆಧಾರವಾಗಿದೆ. ಮತ್ತು ''ಕೋ ನ ಆತ್ಮಾ ಕಿಂ ಬ್ರಹ್ಮ'' ಎಂಬುದಾಗಿ ವೈಶ್ವಾನರ ಪ್ರಕರಣವು ವಿಷ್ಣುವಿನಲ್ಲಿ ಪ್ರಸಿದ್ಧವಾದ ಆತ್ಮ ಹಾಗೂ ಬ್ರಹ್ಮಶಬ್ದಗಳಿಂದ ಪ್ರಾರಂಭವಾಗುತ್ತಿದೆ. ಮತ್ತು ''ಸರ್ವೇ ಪಾಪ್ಮಾನಃ ಪ್ರದೂಯಂತೇ'' ಎಂಬುದಾಗಿ ಅವನ ವೈಶ್ವಾನರನ ಜ್ಞಾನದಿಂದ ಸಕಲ ಪಾಪಗಳು ಪರಿಹಾರವಾಗುತ್ತವೆಂದು ಹೇಳಲಾಗಿದೆ. ಮತ್ತು ಸರ್ವಗತತ್ವಾದಿಲಿಂಗಗಳೂ ಸಹ ವೈಶ್ವಾನರನ ಪ್ರಕರಣದಲ್ಲಿ ಕೇಳಿಬರುತ್ತಿವೆ. ಇವುಗಳ ಆಧಾರದಿಂದ ವೈಶ್ವಾರನು ವಿಷ್ಣುವೇ ಆಗಬೇಕಲ್ಲವೇ?

ಉತ್ತರ - ಇದು ತಪ್ಪು. ವಿಷ್ಣುವಿನ ವಿಷಯದಲ್ಲಿ ನೀವು ಹೇಳಿದ ಸಮಾಖ್ಯಾ, ಪ್ರಕರಣ, ಲಿಂಗಗಳೆಲ್ಲವೂ ಶ್ರುತಿಗಿಂತ ದುರ್ಬಲವಾಗಿದೆ. ಬಹುತ್ವಪ್ರಯುಕ್ತವಾಗಿ ಅವುಗಳೆಲ್ಲವೂ ಪ್ರಬಲವಾಗಿವೆಯಲ್ಲವೇ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. ಏಕೆಂದರೆ ಬಹುತ್ವಪ್ರಯುಕ್ತವಾದ ಪ್ರಾಬಲ್ಯಕ್ಕಿಂತ ಸ್ವಭಾವಪ್ರಯುಕ್ತವಾದ ಪ್ರಾಬಲ್ಯವೇ ಶ್ರೇಷ್ಠವಾಗಿದೆ. ಇದನ್ನು ವಿಷ್ಣುತತ್ವನಿರ್ಣಯದಲ್ಲಿ ಉದಾಹರಿಸಲ್ಪಟ್ಟ ಬ್ರಹ್ಮತರ್ಕವಾಕ್ಯದಲ್ಲಿ ಹೀಗೆ ಹೇಳಿದ್ದಾರೆ-

'ದ್ವಿವಿಧಂ ಬಲವತ್ತ್ವಂ ಚ ಬಹುತ್ವಾಚ್ಚ ಸ್ವಭಾವತಃ।
ತಯೋಸ್ಸ್ವಭಾವೋ ಬಲವಾನ್ ಉಪಜೀವ್ಯಾದಿಕಶ್ಚ ಸಃ॥'

ಎಂದರೆ ಪ್ರಾಬಲ್ಯವು ಸ್ವಭಾವಪ್ರಯುಕ್ತವಾಗಿ ಮತ್ತು ಬಹುತ್ವಪ್ರಯುಕ್ತವಾಗಿ ಎರಡು ವಿಧ. ಇವುಗಳ ಮಧ್ಯೆ ಸ್ವಭಾವಪ್ರಯುಕ್ತವಾದ ಪ್ರಾಬಲ್ಯವೇ ಉಪಜೀವ್ಯವಾದ್ದರಿಂದ ಶ್ರೇಷ್ಠವಾಗಿರುತ್ತದೆಂದು.

ಲೋಕವ್ಯವಹಾರವು ನಿರವಕಾಶವೆಂದು ಆಕ್ಷೇಪ

भावदीपः – व्यवहारस्य निरवकाशत्वं व्यनक्ति – नहीति ।। एवं च सिद्धं साधारण्यमित्याह – अत इति ।। व्यवहारस्याग्न्यादिविषयत्वं विना गत्यन्तराभावादित्यर्थः ।

ಲೋಕವ್ಯವಹಾರವು ನಿರವಕಾಶವಾಗಿದೆಯೆಂದು ''ನಹಿ'' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಹೀಗೆ ಸಿದ್ಧವಾದ ಪ್ರಮೇಯವು ಎರಡೂ ಕಡೆ ಸಮಾನವಾಗಿದೆ ಎಂಬ ವಿಷಯವನ್ನು ''ಅತಃ'' ಎಂಬ ವಾಕ್ಯವು ಪ್ರತಿಪಾದಿಸುತ್ತಿದೆ. ವ್ಯವಹಾರಕ್ಕೆ ಅಗ್ನಿ ಮೊದಲಾದ ದೇವತೆಗಳೇ ವಿಷಯವೆಂದು ಒಪ್ಪದಿದ್ದರೆ ಬೇರೆ ಗತಿ ಇಲ್ಲವೆಂದು ತಿಳಿಯಬೇಕು.

'ಅಗ್ನಾವಿಷ್ಣ್ವೋಃ' ಎಂಬ ಪ್ರಯೋಗವು ವ್ಯಾಕರಣ ಸಮ್ಮತ

भावदीपः – अग्नाविष्ण्वोरिति 'देवताद्वन्द्वे च' इत्यनङादेशः । अन्तर्नय इवोभयबाधेनैक्यं तु नाऽशङ्क्यम् ।

ಭಾಷ್ಯದಲ್ಲಿರುವ ''ಅಗ್ನಾವಿಷ್ಣ್ವೋಃ'' ಎಂಬ ಪ್ರಯೋಗವು ತಪ್ಪಲ್ಲ. ಏಕೆಂದರೆ ''ದೇವತಾದ್ವಂದ್ವೇ ಚ'' ಎಂಬ ಸೂತ್ರದಿಂದ ಅನಆದೇಶವು ಬರುವುದರಿಂದ ''ಅಗ್ನಾವಿಷ್ಣ್ವೋಃ'' ಎಂಬ ರೂಪವು ಸಿದ್ಧವಾಗಿದೆ.

ಜಡವಾದ ಅಗ್ನಿಯ ಜೊತೆ ಐಕ್ಯವು ಕೂಡದು

भावदीपः – भूतसाधारणश्रुत्या प्राप्तं जडेनाभेदायोगात् ।

ಅಂತರಾಧಿಕರಣದ ನ್ಯಾಯದಂತೆ ಎರಡಕ್ಕೂ ಬಾಧ ಬರುವುದರಿಂದ ಐಕ್ಯವನ್ನು ಒಪ್ಪುವುದು ಸುಲಭವಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ಅಗ್ನಿದೇವತೆಯಲ್ಲಷ್ಟೇಲ್ಲದೆ ಜಡವಾದ ಅಗ್ನಿಯಲ್ಲೂ ಪ್ರಯೋಗವಿರುವುದರಿಂದ ಜಡಭೂತವಾದ ಅಗ್ನಿಯ ಜೊತೆಗೆ ಐಕ್ಯವನ್ನು ಹೇಳುವುದು ಅಯುಕ್ತವಾಗುತ್ತದೆ.

ಶ್ರುತಿಯು ಉಭಯಸಾಧಾರಣ

भावदीपः – कथं तर्हि वैश्वानरस्योक्तमिति भाष्यमित्यतो भावमाह – अत इति ।। श्रुतेः साधारण्यादित्यर्थः ।

ಹಾಗಾದರೆ ''ವೈಶ್ವಾನರಸ್ಯೋಕ್ತಂ ಇತಿ''ಎಂಬುದಾಗಿ ಭಾಷ್ಯದಲ್ಲಿ ಹೇಗೆ ಹೇಳಿದರು? ಎಂಬ ಪ್ರಶ್ನೆಗೆ ''ಅತಃ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಶ್ರುತಿಯು ಎರಡೂ ಕಡೆ ಸಾಧಾರಣವಾಗಿರುವುದರಿಂದ ಎಂದು ಇದರ ಅರ್ಥ.

'ಸರ್ವಗತತ್ವಮ್' ಇತ್ಯಾದಿ ಭಾಷ್ಯದ ತಾತ್ಪರ್ಯ

भावदीपः – सर्वगतत्वमित्यन्तवाक्यस्य तात्पर्यम् – न सर्वेति ।। विष्णुरितीत्यनन्तरं तस्येतीत्यनन्तरं च निश्चय इत्यनुषङ्गः ।

''ಸರ್ವಗತತ್ವಂ'' ಎಂಬಲ್ಲಿಯತನಕದ ವಾಕ್ಯದ ತಾತ್ಪರ್ಯವನ್ನು ''ನ ಸರ್ವ'' ಎಂಬುದರಿಂದ ಸ್ಪಷ್ಟಪಡಿಸುತ್ತಿದ್ದಾರೆ. ವಿಷ್ಣುಃ ಎಂಬುದರ ಅನಂತರ ಮತ್ತು ''ತಸ್ಯ'' ಎಂಬುದರ ಅನಂತರ ''ನಿಶ್ಚಯಃ'' ಎಂಬ ಪದವನ್ನು ಅನುಷಂಗ ಮಾಡಿಕೊಳ್ಳಬೇಕು.

ನ್ಯಾಯವಿವರಣದ ಪ್ರಕಾರ ಹೇತ್ವಂಶದ ವ್ಯಾಖ್ಯಾನ

भावदीपः – व्युत्क्रमेण भाष्यं व्याचष्टे – अयमिति ।। श्रुतिसाधारण्ये

विशेषश्रुत्यादेः निश्चय इति न्यायविवरणादिना हेत्वंशं व्याचष्टे – आत्मानमिति ।।

ಭಾಷ್ಯವನ್ನು ವ್ಯುತ್ಕ್ರಮವಾಗಿ ವ್ಯಾಖ್ಯಾನಿಸುತ್ತಿದ್ದಾರೆ ''ಅಯಂ ವೈಶ್ವಾನರಃ'' ಇತ್ಯಾದಿಯಾಗಿ. ಶ್ರುತಿಯು ಉಭಯ ಸಾಧಾರಣವಾದಾಗ ವಿಶೇಷ ಶ್ರುತಿಯು ನಿಶ್ಚಾಯಕವಾಗುತ್ತದೆ ಎಂಬ ನ್ಯಾಯವಿವರಣದ ಪ್ರಕಾರ ಹೇತ್ವಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಆತ್ಮಾನಂ'' ಇತ್ಯಾದಿಯಾಗಿ.

ವಿಶೇಷಣಪದದಿಂದ ವ್ಯಾವರ್ತ್ಯವಾದ ಪೂರ್ವಪಕ್ಷ

भावदीपः – विशेषणपदकृत्यं व्यावर्त्य पूर्वमाह – नचेति ।। वक्ष्यमाणत्वात् साक्षादपीत्यादि सूत्रेष्विति भावः ।।

ಸೂತ್ರದಲ್ಲಿರುವ 'ವಿಶೇಷಣ' ಪದದ ಸಾರ್ಥಕ್ಯವನ್ನು ಹೇಳುವ ಮೂಲಕ ವ್ಯಾವರ್ತವಾದ ಪೂರ್ವಪಕ್ಷವನ್ನು ''ನ ಚ'' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ''ವಕ್ಷ್ಯಮಾಣತ್ವಾತ್'' ಎಂದರೆ ''ಸಾಕ್ಷಾದಪ್ಯವಿರೋಧಂ ಜೈಮಿನಿಃ'' ಎಂಬ ಸೂತ್ರದಲ್ಲಿ ಹೇಳುತ್ತಾರೆಂದು ತಿಳಿಯಬೇಕು.

ಬ್ರಹ್ಮಸೂತ್ರ

'ಸ್ಮರ್ಯಮಾಣಮನುಮಾನಂ ಸ್ಯಾದಿತಿ' ಎಂಬ ಸೂತ್ರವ್ಯಾಖ್ಯಾನ

ब्रह्मसूत्रम् – ।। स्मर्यमाणमनुमानं स्यादिति ।।२५।।

ಸೂತ್ರಾರ್ಥ -- 'ಅಹಂ ವೈಶ್ವಾನರೋ ಭೂತ್ವಾ' ಎಂಬುದಾಗಿ ಭಗವದ್ಗೀತೆಯಲ್ಲಿ ವಿಷ್ಣುವನ್ನೇ ವೈಶ್ವಾನರನೆಂದು ಹೇಳಿರುವುದರಿಂದ ಈ ಸ್ಮೃತಿಯು ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನೂ ಸಹ ಬ್ರಹ್ಮನೇ ಆಗಿದ್ದಾನೆಂಬುದಕ್ಕೆ ಜ್ಞಾಪಕವಾಗಿದೆ.

ಅರ್ಥ - ಇತಿ ಸ್ಮರ್ಯಮಾಣಂ = 'ಅಹಂ ವೈಶ್ವಾನರೋ ಭೂತ್ವಾ' ಎಂಬುದಾಗಿ ಭಗವದ್ಗೀತೆಯಲ್ಲಿ ವಿಷ್ಣುವಿಗೆ ಹೇಳಲ್ಪಟ್ಟ ವೈಶ್ವಾನರತ್ವವು, ಅನುಮಾನಂ = ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನೂ ಸಹ ಬ್ರಹ್ಮನೇ ಆಗಿದ್ದಾನೆಂಬುದಕ್ಕೆ ಜ್ಞಾಪಕವು, ಸ್ಯಾತ್ = ಆಗುತ್ತದೆ.

ಬ್ರಹ್ಮಸೂತ್ರಭಾಷ್ಯ

ಭಗವದ್ಗೀತೆಯ ಆಧಾರದಿಂದ ವೈಶ್ವಾರನನ್ನು ತಿಳಿಯಬೇಕು

ब्रह्मसूत्रभाष्यम् –

'अहं वैश्वानरो भूत्वा प्राणिनां देहमाश्रितः ।'(भ.गी.१५-१४) इति स्मर्यमाणमत्रापि स एवोच्यत इत्यस्यानुमापकम् । समाख्यानात् । इतिशब्दः समाख्याप्रदर्शकः ।। २५ ।।

''ನಾನು ವೈಶ್ವಾನರನಾಗಿ ಎಲ್ಲಪ್ರಾಣಿಗಳ ದೇಹದಲ್ಲಿನೆಲೆಸಿದ್ದೇನೆ' ಹೀಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಇದರಿಂದ ಪ್ರಕೃತದಲ್ಲಿಯೂ ವಿಷ್ಣುವೇ ವೈಶ್ವಾನರನೆಂದು ಊಹಿಸಬೇಕು. ಗೀತೆಯು ಛಾಂದೋಗ್ಯದ ಈ ಮಾತಿಗೆ ಸಮಾಖ್ಯಾಪ್ರಮಾಣವಾಗಿದೆ ಎಂಬುದನ್ನು ಸೂಚಿಸುವುದಕ್ಕಾಗಿ ಸೂತ್ರದಲ್ಲಿ ''ಇತಿ'' ಎಂಬ ಶಬ್ದವನ್ನು ಹೇಳಿದ್ದಾರೆ.

ಪ್ರತಿಪದಾರ್ಥ -- ವೈಶ್ವಾನರ ಎಂಬ ಶಬ್ದವು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆಯಲ್ಲವೇ ಎಂಬ ಆಶಂಕೆಗೆ ಮತ್ತೊಂದು ಹೇತುವನ್ನು ಹೇಳುವ ಮೂಲಕ ವಿಷ್ಣುವೇ ವೈಶ್ವಾನರನೆಂದು ಸಾಧಿಸುವುದಕ್ಕಾಗಿ ಸೂತ್ರವನ್ನು ಪಠಿಸುತ್ತಿದ್ದಾರೆ.

ಅಹಂ = ನಾನು, ವೈಶ್ವಾನರಃ = ವೈಶ್ವಾನರನೆಂಬ, ಭೂತ್ವಾ = ರೂಪವನ್ನು ತಾಳಿ, ಪ್ರಾಣಿನಾಂ = ಸಕಲ ಪ್ರಾಣಿಗಳ, ದೇಹಂ = ದೇಹವನ್ನು, ಆಶ್ರಿತಃ = ಪ್ರವೇಶಿಸಿದ್ದೇನೆ. ಇತಿ = ಹೀಗೆ, ಸ್ಮರ್ಯಮಾಣಂ = ಗೀತೆಯೆಂಬ ಸ್ಮೃತಿಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಅತ್ರಾಪಿ = ವೈಶ್ವಾನರ ಸೂತ್ರದಲ್ಲಿಯೂ, ಸ ಏವ = ಆ ಶ್ರೀಕೃಷ್ಣನೇ, ಉಚ್ಯತೇಜ = ವೈಶ್ವಾನರನೆಂದು ಪ್ರತಿಪಾದ್ಯನಾಗುತ್ತಾನೆ. ಇತ್ಯಸ್ಯ = ಈ ವಿಷಯದಲ್ಲಿ, ಅನುಮಾಪಕಂ = ಜ್ಞಾಪಕವಾದ ಯುಕ್ತಿಯಾಗಿದೆ, ಸಮಾಖ್ಯಾನಾತ್ = ವೈಶ್ವಾನರವಿದ್ಯೆ ಮತ್ತು ಭಗವದ್ಗೀತೆ ಎರಡರಲ್ಲಿಯೂ ಒಂದೇ ವೈಶ್ವಾನರಶಬ್ದವು ಕೇಳಿಸುತ್ತಿರುವುದರಿಂದ. ಇತಿ ಶಬ್ದಃ = ಸೂತ್ರದಲ್ಲಿರುವ ಇತಿಶಬ್ದವು, ಸಮಾಖ್ಯಾಪ್ರದರ್ಶಕಃ = ಸಮಾಖ್ಯಾ ಎಂಬ ಪ್ರಮಾಣವನ್ನು ತೋರಿಸುತ್ತಿದೆ.

ಸತ್ತರ್ಕದೀಪಾವಳಿ

ವೈಶ್ವಾನರನು ವಿಷ್ಣುವೆನ್ನಲು ಭಗವದ್ವಾಕ್ಯ ಸಂವಾದ

सत्तर्कदीपावलिः – स्मर्यमाणमनुमानं स्यादिति ।। १-२-२५ ।।

वैश्वानरशब्दप्रतिपाद्यो विष्णुरेवेत्येतद् भगवद्वाक्यसंवादेन दर्शयत्सूत्रं पठित्वा व्याचष्टे – स्मर्यमाणमित्यादिना ।। समाख्यानं व्याख्यानम् ।।

ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ. ಈ ವಿಷಯದಲ್ಲಿ ಭಗವದ್ವಾಕ್ಯವು ಸಂವಾದವಾಗಿದೆಯೆಂದು ತೋರಿಸುತ್ತಾ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ 'ಸ್ಮರ್ಯಮಾಣಮಿತಿ' ಇತ್ಯಾದಿಯಾಗಿ. ಸಮಾಖ್ಯಾನ ಶಬ್ದಕ್ಕೆ ವ್ಯಾಖ್ಯಾನ ಎಂದರ್ಥ.

ತತ್ತ್ವಪ್ರದೀಪ

ವೈಶ್ವಾನರನು ವಿಷ್ಣುವೆನ್ನಲು ಗೀತೆಯ ಸಮಾಖ್ಯಾನ

तत्वप्रदीपः – ''स्मर्यमाणमनुमानं स्यादिति'' ।। 'अहं वैश्वानरो भूत्वा' इत्यत्र वैश्वानर इति विष्णुविषयतयैव निर्णीतं स्मर्यमाणमनेन सन्दिह्यमानेन वैश्वानरशब्देन सममाख्यानमत्रापि स एवोच्यत इत्यस्यार्थस्यानुमापकम् ।।ಠ।।

'ಅಹಂ ವೈಶ್ವಾನರೋ ಭೂತ್ವಾ' ಎಂಬ ವಾಕ್ಯದಲ್ಲಿ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಲಾಗಿದೆ. ಈ ಗೀತೆಯ ಸ್ಮೃತಿವಾಕ್ಯವು ಸಂದೇಹಕ್ಕೆ ವಿಷಯವಾದ ಛಾಂದೋಗ್ಯ-ಶ್ರುತಿಯ ವೈಶ್ವಾನರ ಶಬ್ದದಿಂದ ಸಮಾನವಾಗಿ ಹೇಳಲ್ಪಟ್ಟಿದೆ. ಆದ್ದರಿಂದ ಸಮಾಖ್ಯಾಪ್ರಮಾಣದ ಬಲದಿಂದ ಛಾಂದೋಗ್ಯದಲ್ಲಿಯೂ ಕೂಡ ವಿಷ್ಣುವೇ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯ-ನಾಗಿದ್ದಾನೆನ್ನಲು ಅನುಮಾಪಕವಾಗಿದೆ.

ವಿಶೇಷವಿಚಾರ - 'ಯಸ್ತು ಏತಮೇವಂ ಪ್ರಾದೇಶಮಾತ್ರಂ ಅಭಿವಿಮಾನಂ ಆತ್ಮಾನಂ ವೈಶ್ವಾನರಮುಪಾಸ್ತೇ' ಎಂಬುದಾಗಿ ಛಾಂದೋಗ್ಯೋಪನಿಷತ್ತಿನಲ್ಲಿ ಎಲ್ಲರ ಹೃದಯದಲ್ಲಿ

ಅಂಗುಷ್ಠಪರಿಮಾಣದಷ್ಟು ನೆಲಸಿರುವವನು ವೈಶ್ವಾನರನಾಗಿದ್ದಾನೆ ಎಂದು ಹೇಳಲಾಗಿದೆ. ಇದೇ ಅರ್ಥದ ವಾಕ್ಯ ಭಗವದ್ಗೀತೆಯಲ್ಲಿಯೂ ಕೂಡ ಇರುತ್ತದೆ - 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ' 'ಸಕಲ ಪ್ರಾಣಿಗಳ ದೇಹದಲ್ಲಿ ನಾನು ವೈಶ್ವಾನರನಾಗಿ ನೆಲೆಸಿದ್ದೇನೆ' ಎಂಬುದಾಗಿ ಶ್ರೀಕೃಷ್ಣನು ಹೇಳಿರುತ್ತಾನೆ. ಗೀತೆಯ ಈ ವಾಕ್ಯವನ್ನು ಸ್ವತಃ ವಿಷ್ಣುವೇ ಹೇಳಿರುವುದರಿಂದ ವಿಷ್ಣುವಿಷಯಕವಾಗಿದೆ ಎಂಬುದು ನಿರ್ಣಯವಾಗಿದೆ. ಈ ವಾಕ್ಯಕ್ಕೆ ಸಮಾನವಾದ ವಾಕ್ಯವನ್ನೇ ಛಾಂದೋಗ್ಯವು ಹೇಳುತ್ತಿರುವುದರಿಂದ ಅಲ್ಲಿರುವ ವೈಶ್ವಾನರ ಶಬ್ದದಿಂದಲೂ ಕೂಡ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

'ಸಮಾನೋಕ್ತಿಃ ಸಮಾಖ್ಯಾ' ಸಮಾನವಾದ ಎರಡು ಸಮಾಖ್ಯಾ ಎನಿಸುತ್ತವೆ. ಆದ್ದರಿಂದ ಗೀತೆಯಲ್ಲಿ ವೈಶ್ವಾನರನು ಸಕಲ ಪ್ರಾಣಿಗಳಲ್ಲಿ ನೆಲಸಿ ಆಹಾರವನ್ನು ಜೀರ್ಣ ಮಾಡುತ್ತಾನೆ ಎಂದು ಹೇಳಲಾಗಿದೆ. ಇದೇ ಅರ್ಥದಲ್ಲಿಯೇ ಛಾಂದೋಗ್ಯವು ಸಕಲ ಪ್ರಾಣಿಗಳ ಹೃದಯದಲ್ಲಿ ವೈಶ್ವಾನರನು ಪ್ರಾದೇಶ ಪರಿಮಾಣದಲ್ಲಿ ನೆಲೆಸಿದ್ದಾನೆಂದು ಹೇಳಲಾಗಿದೆ. ಹೀಗೆ ಭಗವದ್ಗೀತೆಯು ಛಾಂದೋಗ್ಯಶ್ರುತಿಗೆ ಸಮಾಖ್ಯಾಪ್ರಮಾಣವಾಗಿದೆ. ಆದ್ದರಿಂದ ಛಾಂದೋಗ್ಯದ ವೈಶ್ವಾನರ ಶಬ್ದದಿಂದ ಮಹಾವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ ಎಂದು ಸಿದ್ಧವಾಗುತ್ತದೆ.

ತತ್ವಪ್ರಕಾಶಿಕಾ

ಹಿಂದಿನ ಸೂತ್ರದ ಮೇಲೆ ಅಧಿಕಾಶಂಕೆ

तत्वप्रकाशिका – स्मर्यमाणमनुमानं स्यादिति ।। १-२-२५ ।।

नन्वात्मशब्दस्यामुख्यवृत्तिमभ्युपेत्याग्न्यादीनामेव वैश्वानरत्वं किं न स्यादित्याशङ्कां परिहर्तुं हेत्वन्तरेण वैश्वानरस्य विष्णुत्वं निश्चाययत्सूत्रमुपन्यस्य व्याचष्टे – स्मर्यमाणमिति ।।

ಆತ್ಮಶಬ್ದದ ಆಧಾರದಿಂದ ವಿಷ್ಣುವೇ ವೈಶ್ವಾನರನೆನ್ನಬೇಕೆಂದು ಹಿಂದಿನ ಸೂತ್ರದಲ್ಲಿ ಸಮರ್ಥಿಸಿದ್ದಾಯಿತು. ಆದರೆ ಆತ್ಮಶಬ್ದಕ್ಕೆ ಅಮುಖ್ಯವೃತ್ತಿಯನ್ನು ಸ್ವೀಕರಿಸಿ ಅಗ್ನಿದೇವತೆ, ಭೌತಿಕವಾದ ಅಗ್ನಿ ಮೊದಲಾದ ಅರ್ಥದಲ್ಲಿ ವೈಶ್ವಾನರಶಬ್ದವನ್ನು ಏಕೆ ಪ್ರಯೋಗಿಸಬಾರದು? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ಮುಂದಿನ ಸೂತ್ರವು ಹೊರಟಿದೆ. ಈ

ವಿಷಯದಲ್ಲಿಮತ್ತೊಂದು ಹೇತುವನ್ನು ಹೇಳುವ ಮೂಲಕ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಈ ಸೂತ್ರದಿಂದ ಸಾಧಿಸುತ್ತಿದ್ದಾರೆ. ಅದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ''ಸ್ಮರ್ಯಮಾಣಮ್'' ಇತ್ಯಾದಿಯಾಗಿ ಭಾಷ್ಯಕಾರರು ವ್ಯಾಖ್ಯಾನಿಸುತ್ತಿದ್ದಾರೆ.

ಬೇರೆ ಹೇತುವಿನಿಂದ ವೈಶ್ವಾನರತ್ವ ಪ್ರತಿಪಾದನೆ

तत्वप्रकाशिका – 'अहं वैश्वानरो भूत्वा' इति स्मृत्युक्तं विष्णोः वैश्वानरत्वमत्र वैश्वानरविद्यायामपि स गीतोक्तो भगवानेव वैश्वानरपदेनोच्यत इत्यस्यार्थस्यानुमापकं भवति ।

'ಅಹಂ ವೈಶ್ವಾನರೋ ಭೂತ್ವಾ' ಎಂಬುದಾಗಿ ಭಗವದ್ಗೀತೆಯಲ್ಲಿ ವಿಷ್ಣುವೇ ವೈಶ್ವಾನರನಾಗಿದ್ದಾನೆ ಎಂದು ಹೇಳಲಾಗಿದೆ. ಇದರಿಂದ ಗೀತೋಕ್ತನಾದ ವಿಷ್ಣುವೇ ಪ್ರಕೃತ ವೈಶ್ವಾನರವಿದ್ಯೆಯಲ್ಲಿಯೂ ಪ್ರತಿಪಾದ್ಯನಾಗಿದ್ದಾನೆಂದು ಅನುಮಾನದಿಂದ ಸಾಧಿಸಿದಂತಾಗುತ್ತದೆ.

ಭಗವದ್ಗೀತೆಯಲ್ಲಿ ಹೇಳಿದ ವೈಶ್ವಾನರನೇ ವೈಶ್ವಾನರವಿದ್ಯೆಯಲ್ಲಿ ಪ್ರತಿಪಾದ್ಯನೇ ?

तत्वप्रकाशिका – स्मृतौ विष्णोर्वैश्वानरत्वोक्तेर्वैश्वानरविद्यायामप्यसावुच्यत इति भावः । स्मृत्युक्तवैश्वानरस्य विष्णुत्वेऽप्यत्रोक्तस्य कुतो विष्णुत्वम्? इत्यत आह – समाख्यानादिति ।। समाख्यानयुक्तिर्न सूत्रितेत्यत आह – इतीति ।। अनेन 'इति स्मर्यमाणम्' इत्यन्वयः सूचितो भवति ।।२५।।

ಭಗವದ್ಗೀತೆಯಲ್ಲಿ ವಿಷ್ಣುವನ್ನು ವೈಶ್ವಾನರನೆಂದು ಹೇಳಲಾಗಿದೆ. ಆದ್ದರಿಂದ ಅವನೇ ವೈಶ್ವಾನರವಿದ್ಯೆಯಲ್ಲಿಯೂ ಪ್ರತಿಪಾದ್ಯನಾಗಿದ್ದಾನೆಂದು ಸೂತ್ರದ ಅಭಿಪ್ರಾಯ. ಗೀತೆಯಲ್ಲಿ ಹೇಳಲ್ಪಟ್ಟ ವೈಶ್ವಾನರನು ವಿಷ್ಣುವೆಂದು ನಿಶ್ಚಯವಾದರೂ ವೈಶ್ವಾನರವಿದ್ಯೆಯಲ್ಲಿ ಹೇಳಲ್ಪಟ್ಟವನು ವಿಷ್ಣುವೇ ಆಗಿದ್ದಾನೆಂದು ಏಕೆ ನಿಶ್ಚಯವಾಗಬೇಕು? ಎಂಬ ಪ್ರಶ್ನೆಗೆ ''ಸಮಾಖ್ಯಾನಾತ್'' ಎಂಬುದರಿಂದ ಉತ್ತರಿಸಿದ್ದಾರೆ. ಆ ಸಮಾಖ್ಯಾಪ್ರಮಾಣವನ್ನು ಸೂತ್ರಕಾರರು ಹೇಳಿಲ್ಲವಲ್ಲವೇ? ಎಂಬ ಪ್ರಶ್ನೆಗೆ ''ಇತಿ'' ಎಂಬುದರಿಂದ ಉತ್ತರಿಸಿದ್ದಾರೆ. ಹೀಗೆ ಈ ಭಾಷ್ಯದಿಂದ 'ಇತಿ

ಸ್ಮರ್ಯಮಾಣಂ' ಎಂಬುದಾಗಿ ಸೂತ್ರದಲ್ಲಿ ಅನ್ವಯವನ್ನು ವಿವಕ್ಷಿಸಿ ಸೂತ್ರಾರ್ಥವನ್ನು ಭಾಷ್ಯಕಾರರು ಸ್ಪಷ್ಟಪಡಿಸಿದ್ದಾರೆ.

ಭಾವದೀಪ

ಸೂತ್ರದಲ್ಲಿ ಚಶಬ್ದವಿಲ್ಲದ್ದರಿಂದ ಅವತಾರಿಕೆ

भावदीपः – स्मर्यमाणमनुमानं स्यादिति ।। सूत्रे चशब्दाभावाच्छङ्का-निवर्तकत्वेन सूत्रमवतारयति – नन्विति ।।

।। स्मर्यमाणमनुमानं स्यादिति ।।

ಸೂತ್ರದಲ್ಲಿ ''ಚ'' ಶಬ್ದವು ಇರುವುದಿಲ್ಲ ಆದ್ದರಿಂದ ಶಂಕಾಪರಿಹಾರಕವಾಗಿ ಸೂತ್ರಕ್ಕೆ ಅವತಾರಿಕೆ ನೀಡುತ್ತಿದ್ದಾರೆ ''ನನು'' ಇತ್ಯಾದಿಯಾಗಿ.

ಅಗ್ನಿದೇವತೆ, ಭೂತಾಗ್ನಿ, ವಿಷ್ಣು ಈ ಮೂರೂ ಕೂಡ ವೈಶ್ವಾನರರೇ ?

भावदीपः – अग्न्यादीनामेवेति ।। अग्निदेवतातेजोभूतविष्णूनां त्रयाणामेवेत्यर्थः । यद्वोपलक्षितविद्यान्तराभिप्रायेण बहुवचनोक्तिः ।

''ಅಗ್ನ್ಯಾದೀನಾಮೇವ'' ಎಂಬ ಶಬ್ದಕ್ಕೆ ಅಗ್ನಿದೇವತೆ, ಭೌತಿಕವಾದ ತೇಜಸ್ಸು, ವಿಷ್ಣು ಮೂರರಲ್ಲಿಯೂ ಸಹ ಎಂದರ್ಥ. ಅಥವಾ ಉಪಲಕ್ಷಿತವಾದ ಮತ್ತೊಂದು ವಿದ್ಯೆಯನ್ನು ವಿವಕ್ಷಿಸಿ ''ಅಗ್ನ್ಯಾದೀನಾಂ'' ಎಂದು ಬಹುವಚನವನ್ನು ಪ್ರಯೋಗಿಸಿದ್ದಾರೆ.

ಇಂದ್ರ, ಆಕಾಶ ಮೊದಲಾದ ಶಬ್ದಗಳೂ ಕೂಡ ಇಲ್ಲಿ ಆಕ್ಷೇಪಾರ್ಹ

भावदीपः – वैश्वानरत्वमित्युपलक्षणम् । इन्द्राकाशप्राणगायत्रीत्यादिक-मित्यर्थः । स्मृतिसमाख्याप्युपलक्षणं 'यो देवानां नामधा एक एव' 'नामानि सर्वाणि' इत्यादेरिति भावः ।

''ವೈಶ್ವಾನರತ್ವಂ'' ಎಂಬುದು ಉಪಲಕ್ಷಣವಾಗಿದೆ. ಇಂದ್ರ, ಆಕಾಶ, ಪ್ರಾಣ, ಗಾಯತ್ರೀ ಇವುಗಳನ್ನು ಇಲ್ಲಿ ವಿವಕ್ಷಿಸಬೇಕು. ಸ್ಮೃತಿಸಮಾಖ್ಯಾವೂ ಸಹ ಇಲ್ಲಿ ಉಪಲಕ್ಷಣವಾಗಿದೆ. ''ಯೋ ದೇವಾನಾಂ ನಾಮಾಧಾ ಏಕ ಏವ'' ಎಂಬುದನ್ನು ಮತ್ತು ''ನಾಮಾನಿ ಸರ್ವಾಣಿ'' ಇತ್ಯಾದಿಗಳನ್ನು ಇಲ್ಲಿ ವಿವಕ್ಷಿಸಬೇಕೆಂದು ಅಭಿಪ್ರಾಯ.

'ಅಹಂ ವೈಶ್ವಾನರೋ ಭೂತ್ವಾ' ಎಂಬ ಗೀತೆಯ ವಾಕ್ಯ

ಭಾವದೀಪಃ – ಕ್ರಮೇಣ ಭಾಷ್ಯಪದಾನಾಮರ್ಥಮಾಹ – ಅಹಮಿತಿ ।। ಇತ್ಯನ್ವಯ ಇತಿ ಸೂತ್ರ ಇತಿ ಯೋಜ್ಯಮ್ । ಭಾಷ್ಯೇ 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ' ಇತಿ ಸ್ಮರ್ಯಮಾಣಮಿತ್ಯುಕ್ತೇರಿತಿ ಭಾವಃ ।

ಕ್ರಮವಾಗಿ ಭಾಷ್ಯದಲ್ಲಿರುವ ಪದಗಳ ಅರ್ಥವನ್ನು ''ಅಹಂ'' ಇತ್ಯಾದಿ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. ''ಇತಿ ಅನ್ವಯಃ'' ಎಂದು ಸೂತ್ರದಲ್ಲಿ ಅನ್ವಯ ಮಾಡಿಕೊಳ್ಳಬೇಕು. ಭಾಷ್ಯದಲ್ಲಿ ''ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ'' ಎಂದು ''ಸ್ಮರ್ಯಮಾಣಂ'' ಎಂದು ಹೇಳಿರುವುದರಿಂದ ಎಂದು ವಿವಕ್ಷಿಸಬೇಕು.

'ವಿಶೇಷಶ್ರುತ್ಯಾದೇಃ' ಎಂಬ ನ್ಯಾಯವಿವರಣದಲ್ಲಿರುವ ಆದಿಪದಾರ್ಥ

ಭಾವದೀಪಃ – ತಥಾಚ ವೈಶ್ವಾನರೋ ವಿಷ್ಣುರೇವ । 'ಅಹಂ ವೈಶ್ವಾನರಃ' ಇತಿ ಗೀತಾಯಾಂ ಸ್ಮರ್ಯಮಾಣತ್ವಾದಿತಿ ಭಾವಃ । ಏತೇನ ನ್ಯಾಯವಿವರಣೋಕ್ತಸ್ಯ ವಿಶೇಷಶ್ರುತ್ಯಾದೇರಿತ್ಯಾದಿಪದಸ್ಯ ಸಮಾಖ್ಯಾನಾಮಿತ್ಯರ್ಥಃ । ತತ್ಕೃತ್ಯಂ ಚ ದರ್ಶಿತಂ ಭವತಿ ।।

ಅದ್ದರಿಂದ ವಿಷ್ಣುವೆ ವೈಶ್ವಾನರನಾಗಿದ್ದಾನೆ. ಏಕೆಂದರೆ ''ಅಹಂ ವೈಶ್ವಾನರಃ'' ಎಂಬುದಾಗಿ ಗೀತೆಯ ಆಧಾರವಿರುವುದರಿಂದ. ಹೀಗೆ ಹೇಳಿದ್ದರಿಂದ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ''ವಿಶೇಷಶ್ರುತ್ಯಾದೇಃ'' ಎಂಬಲ್ಲಿರುವ ''ಆದಿ'' ಪದದದಿಂದ ಸಮಾಖ್ಯಾ ಪ್ರಮಾಣವನ್ನು ವಿವಕ್ಷಿಸಬೇಕೆಂದು ತಿಳಿಯುತ್ತದೆ. ಇದರ ಕೃತ್ಯವನ್ನು ಈಗ ತೋರಿಸಿದಂತಾಯಿತು.

ಬ್ರಹ್ಮಸೂತ್ರ

'ಶಬ್ದಾದಿಭ್ಯಃ' ಇತ್ಯಾದಿ ಸೂತ್ರ ವ್ಯಾಖ್ಯಾನ

ब्रह्मसूत्रम् – ।। शब्दादिभ्योऽन्तःप्रतिष्ठानान्नेति चेन्नतथा दृष्ट्युपदेशादसम्भवात् पुरुषविधमपि चैनमधीयते ।। २६ ।।

ಸೂತ್ರಾರ್ಥ - 'ಅಯಮಗ್ನಿಃ' ಎಂಬಲ್ಲಿ ವೈಶ್ವಾನರನಿಗೆ ಅಗ್ನಿಶಬ್ದವನ್ನು ಪ್ರಯೋಗಿಸಿರುವುದರಿಂದ ಮತ್ತು 'ವೈಶ್ವಾನರೇ ತದ್ಧುತಮ್' ಎಂಬಲ್ಲಿ ಹೋಮಾಧಾರತ್ವ ಗಾರ್ಹಪತ್ಯ ಮೊದಲಾದ ಪ್ರಭೇದಗಳನ್ನು ಹೇಳಿರುವುದರಿಂದ, 'ಯೋ ಯಮ್ ಅಂತಃಪುರುಷೇ' ಎಂಬುದಾಗಿ ದೇಹದಲ್ಲಿ ಕುಳಿತು ಆಹಾರವನ್ನು ಜೀರ್ಣಮಾಡುವಂತಹ ಕ್ರಿಯೆಯನ್ನು ಹೇಳಿರುವುದರಿಂದ ವೈಶ್ವಾನರನು ವಿಷ್ಣುವಲ್ಲ ಎಂದು ಆಕ್ಷೇಪ.

ಇದು ತಪ್ಪು. ಏಕೆಂದರೆ ಅಗ್ನಿ ಮೊದಲಾದ ಹೆಸರುಗಳಿಂದ ಮತ್ತು ಆಯಾ ಕ್ರಿಯೆಗಳಿಂದ ಭಗವಂತನನ್ನು ಉಪಾಸನೆ ಮಾಡುವುದಕ್ಕಾಗಿ ಶ್ರುತಿಗಳಲ್ಲಿ ಹಾಗೆ ಹೇಳಲಾಗಿದೆ. ಲಿಂಗಗಳು ಆದ್ದರಿಂದ ಅಗ್ನಿಶ್ರುತಿ ಹಾಗೂ ಅಗ್ನಿಯ ಲಿಂಗಗಳು ಸಾವಕಾಶಗಳಾಗಿವೆ. ಮತ್ತು ಈ ಪ್ರಕರಣದ ಪ್ರಾರಂಭದಲ್ಲಿ ಹೇಳಲ್ಪಟ್ಟ 'ಕೋ ನ ಆತ್ಮಾ' ಇತ್ಯಾದಿಯಾಗಿ ಆತ್ಮಾದಿ ಶಬ್ದಗಳು ಅಗ್ನಿಯಲ್ಲಿ ಅಸಂಭಾವಿತಗಳಾದ್ದರಿಂದಲೂ ಅಗ್ನಿಯು ವೈಶ್ವಾನರನಲ್ಲ. ಅಷ್ಟೇ ಅಲ್ಲದೆ ಈ ವೈಶ್ವಾನರನಿಗೆ ಪುರುಷಸೂಕ್ತದಲ್ಲಿ ಪ್ರತಿಪಾದ್ಯನಾದ ನಾರಾಯಣನ ಗುಣಗಳನ್ನು ಹೇಳಿರುವುದರಿಂದಲೂ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಅರ್ಥ -- ಚಶಬ್ದವು ಯುಕ್ತಿಸಮುಚ್ಚಯವನ್ನು ಮಾಡುತ್ತಿದೆ. ಶಬ್ದಾದಿಭ್ಯಃ = ಅಗ್ನಿಶಬ್ದ ಹೋಮಾಧಿಕರಣತ್ವ ಮೊದಲಾದ ಲಿಂಗಗಳಿರುವುದರಿಂದ, ಅಂತಃಪ್ರತಿಷ್ಠಾನಾತ್ = ಪಾಚಕತ್ವದಿಂದ ಶರೀರದ ಒಳಗಡೆ ಇದ್ದಾನೆಂದು ಹೇಳಿರುವುದರಿಂದ ವೈಶ್ವಾನರನು ನಃ ವಿಷ್ಣುವಾಗುವುದಿಲ್ಲ. ಹೊರತಾಗಿ ಅಗ್ನಿಯೇ ಆಗುತ್ತಾನೆ. ಇತಿ ಚೇನ್ನ = ಹೀಗೆ ಹೇಳಿದರೆ, ಇದು ತಪ್ಪು. ಏಕೆಂದರೆ ತಥಾ = ಹಾಗೆ ಅಗ್ನಿ ಮೊದಲಾದ ಶಬ್ದಗಳು, ಲಿಂಗಗಳು, ದೃಷ್ಟ್ಯುಪದೇಶಾತ್ = ಉಪಾಸನೆಗೋಸ್ಕರ ಹೇಳಲ್ಪಟ್ಟವೆ. ಆದ್ದರಿಂದ ಅಗ್ನಿ ಮೊದಲಾದ ಶ್ರುತಿಗಳು ಹಾಗೂ ಅಗ್ನಿಯ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗುವುದರಿಂದ ಅದರ ವಿರೋಧವು ಬರುವುದಿಲ್ಲವೆಂದು ಅಭಿಪ್ರಾಯ. ಮತ್ತು ಇಲ್ಲಿ ಹೇಳಲ್ಪಟ್ಟ ಆತ್ಮತ್ವ , ಬ್ರಹ್ಮತ್ವ ಮೊದಲಾದವುಗಳು ಅಗ್ನಿಯಲ್ಲಿ ಅಸಂಭಾವಿತವಾದ್ದರಿಂದ ವೈಶ್ವಾನರನು ವಿಷ್ಣುವೇ ಆಗುತ್ತಾನೆ ಮತ್ತು ಯಾವ ಕಾರಣದಿಂದ ಛಂದೋಗರು, ಏನಮ್ = ಈ ವೈಶ್ವಾನರನನ್ನು

ಪುರುಷವಿಧಂ = ಪುರುಷಸೂಕ್ತ ಪ್ರತಿಪಾದ್ಯನಾದ ನಾರಾಯಣನಿಗೆ ಸಮಾನವಾದ ಗುಣಗಳುಳ್ಳವನೆಂದು ಅಧೀಯತೇ = ಅಧ್ಯಯನ ಮಾಡುತ್ತಾರೆ. ಆ ಕಾರಣದಿಂದಲೂ ವಿಷ್ಣುವೇ ವೈಶ್ವಾನರನಾಗುತ್ತಾನೆ. ಚಶಬ್ದದಿಂದ ಪುರುಷಸೂಕ್ತಕ್ಕೆ ಹೇಳಲ್ಪಟ್ಟ ವಿಷ್ಣುಪರತ್ವವು ಬಹುಪ್ರಮಾಣಗಳಿಂದ ಸಿದ್ಧವಾಗಿದೆಯೆಂದು ಸೂಚಿಸಿದ್ದಾರೆ.

ಬ್ರಹ್ಮಸೂತ್ರಭಾಷ್ಯ

'ವೈಶ್ವಾನರ' ಎಂಬ ಉಪಾಸನೆ ಅತ್ಯವಶ್ಯ

ब्रह्मसूत्रभाष्यम् — 'अयमग्निर्वैश्वानरः (बृ.७ -९-१.)

'वैश्वानरमृत आजातमग्निम्' (ऋ.६-७-१)इत्यादिशब्दः ।

'वैश्वानरे तद्धुतं भवति'(छां.५- २४-४)

'हृदयं गार्हपत्यो मनोऽन्वाहार्यपचन आस्यमाहवनीयः' (छां. ५-१८-२.) इत्याद्यग्निलिङ्गमादिशब्दोक्तम् ।

'येनेदमन्नं पच्यते' (बृ.७-९-१.)

'तद्यद् भक्तं प्रथममागच्छेत् तद्धोमीयम्' (छां. ५-१९-१.)इत्यादिना पाचकत्वेनान्तःप्रतिष्ठानं च प्रतीयते । तस्मान्न विष्णुरिति चेत् —

ಅನುವಾದ - 'ಅಂತಃಸ್ಥನಾದ ಅಗ್ನಿಯು ವೈಶ್ವಾನರನಾಗಿದ್ದಾನೆ' ಎಂದು ಬೃಹದಾರಣ್ಯಕದಲ್ಲಿ ಹೇಳಲಾಗಿದೆ. 'ಅಕಾರವಾಚ್ಯನಾದ ತನ್ನ ಜ್ಞಾನವು ದೇವತೆಗಳಿಗೆ ಬರುವುದಕ್ಕೋಸ್ಕರ ವೈಶ್ವಾನರನ್ನು ಅಗ್ನಿಯೆಂದು ತಿಳಿ' ಇವೇ ಮೊದಲಾದ ಆಧಾರಗಳಿಂದ ಸೂತ್ರದಲ್ಲಿ ಹೇಳಿರುವ ಶಬ್ದ ಎಂಬ ಪದದಿಂದ ಈ ಅರ್ಥವು ದೊರೆಯುತ್ತದೆ.

ಮತ್ತು ಛಾಂದೋಗ್ಯದಲ್ಲಿ 'ವೈಶ್ವಾನರೇ ತದ್ಹುತಮ್' ಎಂಬ ಹೋಮಾಧಾರತ್ವವು, 'ಹೃದಯಂ ಗಾರ್ಹಪತ್ಯಃ' ಎಂಬ ಗಾರ್ಹಪತ್ಯಾದಿ ಪ್ರಭೇದಗಳು ಸೂತ್ರದ ಆದಿಶಬ್ದದಿಂದ ಹೇಳಲ್ಪಟ್ಟ ಅಗ್ನಿಯ ಧರ್ಮಗಳು.

ಇದರಂತೆ ಬೃಹದಾರಣ್ಯಕದಲ್ಲಿ 'ಯಾರಿಂದ ಅನ್ನವು ಪಚನವಾಗುತ್ತಿದೆಯೋ' ಎಂದು ಹೇಳಲಾಗಿದೆ ಮತ್ತು ಛಾಂದೋಗ್ಯದಲ್ಲಿ 'ಏನೇನು ತಿನ್ನುತ್ತೇವೋ ಮೊದಲು ಅದು ಹೊರಬರುತ್ತದೆ. ಅದೇ ಹೋಮದ್ರವ್ಯವೆನಿಸಿಕೊಳ್ಳುತ್ತದೆ' ಎನ್ನಲಾಗಿದೆ. ಇವೇ ಮೊದಲಾದ ಪ್ರಮಾಣಗಳಿಂದ ಅಗ್ನಿಗೆ ಸಕಲ ಪಾಚಕರೂಪನಾಗಿ ಶರೀರದಲ್ಲಿ ಇರುವಿಕೆಯು ಶ್ರುತಿಗಳಿಂದ ತಿಳಿಯುತ್ತದೆ. ಆದ್ದರಿಂದ ವಿಷ್ಣುವು ವೈಶ್ವಾನರನಲ್ಲ. ಇಷ್ಟು ಆಕ್ಷೇಪ.

ಪ್ರತಿಪದಾರ್ಥ -- ವೈಶ್ವಾನರನು ವಿಷ್ಣುವೇ ಅಲ್ಲ ಎಂದು ಆಕ್ಷೇಪಿಸಿ ಸಮಾಧಾನವನ್ನು ಹೇಳುವುದಕ್ಕಾಗಿ ಸೂತ್ರದಲ್ಲಿರುವ ಆಕ್ಷೇಪಾಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಅಯಮಗ್ನಿಃ = ಈ ಅಗ್ನಿಶಬ್ದವು, ವೈಶ್ವಾನರಃ = ವೈಶ್ವಾನರನನ್ನು ಪ್ರತಿಪಾದಿಸುತ್ತಿದೆ. ಹೀಗೆ ಬೃಹದಾರಣ್ಯಕದಲ್ಲಿ ಹೇಳಲಾಗಿದೆ. ಮತ್ತು ಆ ಋತೇ = ಅಕಾರವಾಚ್ಯನಾದ ತನ್ನ ಜ್ಞಾನವು ದೇವತೆಗಳಿಗೆ ಉಂಟಾಗಲಿ ಎಂದು, ಜಾತಂ = ಹುಟ್ಟಿದ, ವೈಶ್ವಾನರಂ = ವೈಶ್ವಾನರನನ್ನು, ಅಗ್ನಿಂ = ಅಗ್ನಿಯೆಂದು ತಿಳಿ ಇತ್ಯಾದಿಯಾಗಿ ಋಗ್ವೇದವು ಹೇಳಿದೆ. ಶಬ್ದಃ = ಸೂತ್ರದಲ್ಲಿರುವ ಶಬ್ದ ಎಂಬುದರಿಂದ ಈ ಪ್ರಮಾಣಗಳು ಸೂಚಿತವಾಗಿವೆ.

ವೈಶ್ವಾನರೇ = ವೈಶ್ವಾನರನಲ್ಲಿ, ತದ್ಭುತಮ್ ಭವತಿ = ಅನ್ನವೆಲ್ಲವೂ ಭಸ್ಮವಾಗುತ್ತದೆ. ಹೃದಯಂ = ವೈಶ್ವಾನರನ ಹೃದಯವೇ, ಗಾರ್ಹಪತ್ಯಂ = ಗಾರ್ಹಪತ್ಯ ಎನಿಸಿದೆ. ಮನಃ = ಮನಸ್ಸು, ಅನ್ವಾಹಾರ್ಯಪಚನಃ = ಅನ್ವಾಹಾರ್ಯಪಚನ ಎನಿಸಿದೆ. ಆಸ್ಯಂ = ಮುಖವು, ಆಹವನೀಯಃ = ಆಹವನೀಯ ಎನಿಸಿದೆ. ಹೀಗೆ ಛಾಂದೋಗ್ಯದಲ್ಲಿ ಹೇಳಲಾಗಿದೆ. ಇತ್ಯಾದಿ = ಇವೇ ಮೊದಲಾದವು, ಅಗ್ನಿಲಿಂಗಂ = ಅಗ್ನಿಯ ಧರ್ಮಗಳು.

ಇವುಗಳೆಲ್ಲವೂ ಸೂತ್ರದಲ್ಲಿರುವ ಆದಿಶಬ್ದೋಕ್ತಂ = ಆದಿಶಬ್ದದಿಂದ ಹೇಳಲ್ಪಟ್ಟಿವೆ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಯೇನ = ಯಾರಿಂದ, ಇದಂ = ಎಲ್ಲರಿಂದ ತಿನ್ನಲ್ಪಟ್ಟ, ಅನ್ನಂ = ಅನ್ನವು, ಪಚ್ಯತೇ = ಪಚನವಾಗುತ್ತದೋ,

ಮತ್ತು ಛಾಂದೋಗ್ಯದಲ್ಲಿ ತದ್ಯದ್‌ಭಕ್ತಂ = ನಾವೆಲ್ಲ ತಿನ್ನಲ್ಪಟ್ಟ ಆಹಾರವು, ಪ್ರಥಮಮಾಗಚ್ಛೇತ್ = ಜೀರ್ಣವಾಗುತ್ತದೋ, ತದ್ಧೋಮೀಯಮ್ = ಅದು ಹೋಮದ್ರವ್ಯ ಎನಿಸಿಕೊಳ್ಳುತ್ತದೆ, ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಪಾಚಕತ್ವೇನ = ಸಕಲ ಪಾಚಕರೂಪನಾಗಿ, ಅಂತಃ = ಶರೀರದಲ್ಲಿ, ಪ್ರತಿಷ್ಠಾನಂ ಚ = ಇರುವಿಕೆಯೂ ಸಹ, ಪ್ರತೀಯತೇ = ಶ್ರುತಿಗಳಿಂದ ತಿಳಿಯುತ್ತದೆ. ತಸ್ಮಾತ್ = ಈ ಎಲ್ಲ ಕಾರಣಗಳಿಂದ, ನ ವಿಷ್ಣುಃ = ವೈಶ್ವಾನರನು ವಿಷ್ಣುವಲ್ಲ. ಇತಿ ಚೇತ್ = ಹೀಗೆ ಆಕ್ಷೇಪಿಸಿದರೆ, ನ = ಯುಕ್ತವಲ್ಲ.

ಸಕಲವೂ ಶ್ರೀಹರಿಯಲ್ಲಿಯೇ ಮುಖ್ಯ

ಬ್ರಹ್ಮಸೂತ್ರಭಾಷ್ಯಮ್ –

न, 'अथ हेममात्मानमणोरणीयांसं परतः परं विश्वं हरिमुपासीतेति । सर्वनामा सर्वकर्मा सर्वलिङ्गः सर्वगुणः सर्वकामः सर्वधर्मः सर्वरूप इति ।' 'स य एतमेवमात्मानं विश्वं हरिमारादरमुपास्ते तस्य सर्वेषु लोकेषु सर्वेषु भूतेषु सर्वेषु देवेषु सर्वेषु वेदेषु कामचारो भवति' इति तत्तन्नामलिङ्गादिना तस्यैव दृष्ट्युपदेशान्महोपनिषदि ।।

ಅನುವಾದ - ಈ ಆಕ್ಷೇಪವು ತಪ್ಪು. ಏಕೆಂದರೆ ಮಹೋಪನಿಷತ್ತಿನಲ್ಲಿ –

'ವೈಶ್ವಾನರಪ್ರಕರಣದಲ್ಲಿಯೇ ಪ್ರಸಿದ್ಧವಾಗಿ ಸರ್ವಾಂತಸ್ಥನಾದ ಪುರುಷನನ್ನು ಅಣುವಿಗಿಂತಲೂ ಅಣುವೆಂದು, ಮಹತ್‌ಪದಾರ್ಥಕ್ಕಿಂತಲೂ ದೊಡ್ಡವನೆಂದು, ಸಕಲಗುಣಗಳಿಂದ ಪೂರ್ಣನಾದ ಪಾಪಪರಿಹಾರಕನಾದ ಪರಮಾತ್ಮನನ್ನು ಉಪಾಸನೆ ಮಾಡಿರಿ' ಎಂದು ಹೇಳಲಾಗಿದೆ. ಅವನೇ ಸಕಲಶಬ್ದಗಳಿಂದ ವಾಚ್ಯನಾಗಿದ್ದಾನೆ. ಸಕಲ ಕೆಲಸಗಳನ್ನು ಮಾಡಿಸುವವನಾಗಿದ್ದಾನೆ. ಎಲ್ಲ ಧರ್ಮಗಳಿಂದ ಯುಕ್ತನಾಗಿದ್ದಾನೆ. ಅನಂತಗುಣಗಳಿಂದ ಪರಿಪೂರ್ಣನಾಗಿದ್ದಾನೆ. ಪೂರ್ಣಕಾಮನೂ, ಸರ್ವಧಾರಕನೂ, ಚೇತನಾಚೇತನಾತ್ಮಕವಾದ ಸಕಲವಸ್ತುಗಳೇ ಪ್ರತಿಮೆಯಾಗಿ ಉಳ್ಳವನೂ ಆಗಿದ್ದಾನೆ. ಹೀಗೆ ಯಾವ ಅಧಿಕಾರಿಯು ಪರಮಾತ್ಮನನ್ನು ಸರ್ವನಿಯಾಮಕನೆಂದೂ, ಎಲ್ಲೆಡೆ

ವ್ಯಾಪಿಸಿದ್ದಾನೆಂದೂ ತನ್ನ ಹೃದಯದಲ್ಲಿ ಸರಿಯಾಗಿ ಉಪಾಸನೆ ಮಾಡುತ್ತಾನೋ ಅಂತಹ ಅಧಿಕಾರಿಗೆ ಎಲ್ಲ ಲೋಕಗಳಲ್ಲಿ ಎಲ್ಲ ಭೂತಗಳಲ್ಲಿ, ಸಕಲ ವೇದಗಳಲ್ಲಿ, ಸಕಲ ದೇವತೆಗಳಲ್ಲಿ ಮನಬಂದಂತೆ ಪ್ರವೃತ್ತಿಯು ಉಂಟಾಗುತ್ತದೆ. ಹೀಗೆ ಆಯಾ ಹೆಸರು, ಗುಣ, ಧರ್ಮ ಇವುಗಳನ್ನು ವಿಷ್ಣುವಿನ ಧ್ಯಾನಕ್ಕೋಸ್ಕರ ಹೇಳಿರುವುದರಿಂದ ವೈಶ್ವಾನರ ಮೊದಲಾದ ನಾಮಗಳು ಹಾಗೂ ಪಾಚಕತ್ವ ಮೊದಲಾದ ಧರ್ಮಗಳು ವಿಷ್ಣುವಿನಲ್ಲೇ ಸಮನ್ವಯವಾಗುತ್ತವೆ.

ಪ್ರತಿಪದಾರ್ಥ -- ಪರಿಹಾರವನ್ನು ನೀಡುವ ಸೂತ್ರದ ಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ನ = ಪೂರ್ವಪಕ್ಷವು ಸರಿಯಲ್ಲ. ಏಕೆಂದರೆ, ಅಥ = ಅನಂತರ, ಹ = ಪ್ರಸಿದ್ಧನಾದ, ಇಮಂ = ಪುರುಷನನ್ನು, ಆತ್ಮಾನಂ = ಸರ್ವಾಂತರ್ಯಾಮಿಯಾದವನನ್ನು, ಅಣೋರಣೀಯಾಂಸಂ = ಅಣುವಿಗಿಂತಲೂ ಅಣುತಮನಾದವನೆಂದು, ಪರತಃ = ಮಹತ್ತದಾರ್ಥ-ಕ್ಕಿಂತಲೂ, ಪರಂ = ದೊಡ್ಡವನೆಂದು, ವಿಶ್ವಂ = ಸಕಲ ದೇಶಕಾಲಗುಣಗಳಿಂದ ಪರಿಪೂರ್ಣನಾದವನೆಂದು, ಹರಿಂ = ಪಾಪಪರಿಹಾರಕನೆಂದು, ಉಪಾಸೀತ = ಉಪಾಸನೆಮಾಡಬೇಕು. ಇತಿ = ಹೀಗೆ ಹೇಳಲಾಗಿದೆ.

ಮತ್ತು ಸಃ = ಅವನೇ, ಸರ್ವನಾಮ = ಸಕಲಶಬ್ದಪ್ರತಿಪಾದ್ಯನು, ಸರ್ವಕರ್ಮಾ = ಸಕಲ ಕ್ರಿಯೆಗಳನ್ನು ಮಾಡಿಸುವವನು, ಸರ್ವಲಿಂಗಃ = ಸಕಲ ಧರ್ಮಗಳುಳ್ಳವನು, ಸರ್ವಗುಣಃ = ಅನಂತಗುಣಪರಿಪೂರ್ಣನು, ಸರ್ವಕಾಮಃ = ಪೂರ್ಣವಾದ ಕಾಮನೆಯುಳ್ಳವನು, ಸರ್ವಧರ್ಮಃ = ಸಕಲಧಾರಕನು, ಸರ್ವರೂಪಃ = ಚೇತನಾಚೇತನವೆಂಬ ಸಕಲ-ಪದಾರ್ಥಗಳೇ ಪ್ರತಿಮೆಯಾಗಿ ಉಳ್ಳವನು, ಇತಿ = ಹೀಗೆಯೂ ಹೇಳಲಾಗಿದೆ.

ಮತ್ತು ಸಃ = ಯಾವ ಪ್ರಸಿದ್ಧವಾದ ಅಧಿಕಾರಿಯು, ಏತಂ = ಇಂತಹ ಪರಮಾತ್ಮನನ್ನು, ಏವಂ = ಹೀಗೆ, ಆತ್ಮಾನಂ = ಸರ್ವನಿಯಾಮಕನೆಂದು, ವಿಶ್ವಂ = ಎಲ್ಲಡೆ ವ್ಯಾಪಿಸಿದ್ದಾನೆಂದು, ಹರಿಂ = ಶ್ರೀಹರಿಯನ್ನು, ಆರಾತ್

= ಹೃದಯದಲ್ಲಿ, ಅರಂ = ಚೆನ್ನಾಗಿ, ಉಪಾಸ್ತೇ = ಉಪಾಸನೆ ಮಾಡುತ್ತಾನೋ, ತಸ್ಯ = ಅಂತಹ ಅಧಿಕಾರಿಗೆ, ಸರ್ವೇಷು ಲೋಕೇಷು = ಎಲ್ಲಾ ಲೋಕಗಳಲ್ಲಿ, ಸರ್ವೇಷು ಭೂತೇಷು = ಸಕಲ ಪ್ರಾಣಿಗಳಲ್ಲಿ, ಸರ್ವೇಷು ದೇವೇಷು = ಸಕಲ ದೇವತೆಗಳಲ್ಲಿ, ಸರ್ವೇಷು ವೇದೇಷು = ಸಕಲ ವೇದಗಳಲ್ಲಿ, ಕಾಮಚಾರಃ = ಮನಬಂದಂತೆ ಪ್ರವೃತ್ತಿಯು, ಭವತಿ = ಆಗುತ್ತದೆ.

ಇತಿ = ಹೀಗೆ, ತತ್ತನ್ನಾಮಲಿಂಗಾದಿನಾ = ಆಯಾ ಹೆಸರು ಗುಣಧರ್ಮ ಇವುಗಳಿಂದ, ತಸ್ಯೈವ = ಆ ವಿಷ್ಣುವಿಗೇ, ಮಹೋಪನಿಷದಿ = ಮಹೋಪನಿಷತ್ತಿನಲ್ಲಿ,

ದೃಷ್ಟಿ = ತಿಳಿವಳಿಕೆಗಾಗಿ, ಉಪದೇಶಾತ್ = ಹೇಳಿರುವುದರಿಂದ ವೈಶ್ವಾನರನು ವಿಷ್ಣುವೇ ಆಗುತ್ತಾನೆ.

ಬ್ರಹ್ಮಪದವಾಚ್ಯನಾದವನೇ ವೈಶ್ವಾನರ

ब्रह्मसूत्रभाष्यम् –

'अनात्तत्वादनात्मान ऊनत्वाद् गुणराशितः । अब्रह्माणः परे सर्वे ब्रह्माऽत्मा विष्णुरेव हि ।' इत्यादिना, 'को न आत्मा किं ब्रह्म' (छां.५-११-१.) इत्यारम्भाच्चान्येषामसम्भवाद् विष्णुरेव वैश्वानरः ।

ಅನುವಾದ - ''ಬೇರೆ ದೇವತೆಗಳನ್ನು ಸರ್ವೋತ್ತಮರೆಂದು ಜ್ಞಾನಿಗಳು ಒಪ್ಪಿಲ್ಲ. ಆದ್ದರಿಂದ ಅವರು ಆತ್ಮಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯರಾಗುವುದಿಲ್ಲ. ಅಷ್ಟೇ ಅಲ್ಲದೆ ಕಲ್ಯಾಣಗುಣಗಳ ರಾಶಿಯಿಂದ ಊನರಾ(ಕಡಿಮೆಯಾ)ಗಿರುತ್ತಾರೆ. ವಿಷ್ಣುವಿನಿಂದ ಭಿನ್ನರಾದ ಆ ದೇವತೆಗಳು ಬ್ರಹ್ಮಪದವಾಚ್ಯರೂ ಆಗುವುದಿಲ್ಲ. ಆದ್ದರಿಂದ ಗುಣಸ್ವರೂಪನಾದ ಪರಮಾತ್ಮನೇ ಸರ್ವಸ್ವಾಮಿಯಾಗಿದ್ದಾನೆ'' ಇವೇ ಮೊದಲಾದ ಪ್ರಮಾಣಗಳ ಆಧಾರದಿಂದ; ಮತ್ತು ಛಾಂದೋಗ್ಯದಲ್ಲಿ ''ನಮಗೆ ಯಾರು ನಿಯಾಮಕನಾಗಿದ್ದಾನೋ'' ಎಂಬುದಾಗಿ ವೈಶ್ವಾನರಪ್ರಕರಣವು ಪ್ರಾರಂಭವಾಗಿರುವುದರಿಂದಲೂ ಈ ಪ್ರಕರಣದಲ್ಲಿ ಪ್ರಸ್ತುತನಾದ ವೈಶ್ವಾನರನು ವಿಷ್ಣುವೇ ಆಗುತ್ತಾನೆ.

ಪ್ರತಿಪದಾರ್ಥ -- ಬೇರೆಯವರಲ್ಲಿ ಪ್ರಸಿದ್ಧವಾದ ಶ್ರುತಿ, ಲಿಂಗಾದಿಗಳನ್ನು ವಿಷ್ಣುವಿನಲ್ಲಿ ಸಾವಕಾಶವೆಂದು ಸಮರ್ಥಿಸಿದ್ದಾಯಿತು. ಪ್ರಕೃತ ಆತ್ಮಶಬ್ದಾದಿಗಳು ಬೇರೆ ಕಡ ನಿರವಕಾಶವಾಗಿವೆ ಎಂಬುದನ್ನು ನಿರಾಕರಿಸುತ್ತಿದ್ದಾರೆ.

ಅನಾಪ್ತತ್ವಾತ್ = ವ್ಯಾಪಕತ್ವವು ಇಲ್ಲದ ಕಾರಣ, ಅನಾತ್ಮನಃ = ವಿಷ್ಣುವಿಗಿಂತ ಅತಿರಿಕ್ತರಾದ ದೇವತೆಗಳು ಆತ್ಮಶಬ್ದವಾಚ್ಯರಲ್ಲ. ಗುಣರಾಶಿತಃ = ಕಲ್ಯಾಣಗುಣಗಳ ರಾಶಿಯಿಂದ, ಊನತ್ವಾತ್ = ನ್ಯೂನರಾಗಿರುವುದರಿಂದ, ಹರೇಃ = ವಿಷ್ಣುವಿನಿಂದ ಭಿನ್ನರಾದ, ಸರ್ವೇ = ಸಕಲ ಚೇತನರು, ಅಬ್ರಹ್ಮಾಣಃ = ಬ್ರಹ್ಮಪದವಾಚ್ಯರಾಗಿಲ್ಲ. ಬ್ರಹ್ಮಾತ್ಮಾ = ಗುಣಪರಿಪೂರ್ಣನು, ವಿಷ್ಣುರೇವ = ಪರಮಾತ್ಮನೇ ಆಗಿದ್ದಾನೆ. ಚ = ಮತ್ತು, ಆತ್ಮಾ = ಸರ್ವಸ್ವಾಮಿಯಾಗಿದ್ದಾನೆ, ಹಿ = ಇದು ಪ್ರಸಿದ್ಧವಷ್ಟೇ.

ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಮತ್ತು ನಃ = ನಮ್ಮನ್ನು, ಕಃ = ಯಾರು, ಆತ್ಮಾ = ಅಂತರ್ನಿಯಾಮಕನಾಗಿದ್ದಾನೋ, ಕಂ ಬ್ರಹ್ಮ = ಗುಣಪೂರ್ಣವಾದ ಅಂತಹ ವಸ್ತು ಯಾವುದು?, ಇತಿ = ಹೀಗೆ, ಆರಂಭಾಚ್ಚ = ವೈಶ್ವಾನರ ಪ್ರಕರಣವು ಛಾಂದೋಗ್ಯದಲ್ಲಿ ಪ್ರಾರಂಭವಾಗಿರುವುದರಿಂದ, ಅನ್ಯೇಷಾಂ = ಅಗ್ನ್ಯಾದಿಗಳಿಗೆ, ಅಸಂಭವಾತ್ = ವೈಶ್ವಾನರನಲ್ಲಿ ಹೇಳಿದ ಗುಣಗಳು ಅಸಂಭಾವಿತವಾಗಿರುವುದರಿಂದ, ವಿಷ್ಣುರೇವ = ವಿಷ್ಣುವೇ, ವೈಶ್ವಾನರಃ = ವೈಶ್ವಾನರನೆನಿಸಿದ್ದಾನೆ.

ಪುರುಷಸೂಕ್ತ ಪ್ರತಿಪಾದ್ಯನೇ ವೈಶ್ವಾನರ

ಬ್ರಹ್ಮಸೂತ್ರಭಾಷ್ಯಮ್ –

'ಚನ್ದ್ರಮಾ ಮನಸೋ ಜಾತಃ । ಚಕ್ಷೋಃ ಸೂರ್ಯೋ ಅಜಾಯತ' (ತೈ.ಆ. ೩-೧೨) ಇತ್ಯಾದಿನಾ ಯಃ ಪುರುಷಾಖ್ಯೋ ವಿಷ್ಣುರಭಿಹಿತಸ್ತದ್ವಿಧಮೇವಾತ್ರ 'ಮೂರ್ಧೈವ

सुतेजाश्चक्षुर्विश्वरूपः प्राणः पृथग्वर्त्मा' (छां. ५-१८-२.) इत्यादिनैनं वैश्वानरमधीयते ।।

ಅನುವಾದ - ಅಷ್ಟೇ ಅಲ್ಲದೆ 'ಮನಸ್ಸಿನಿಂದ ಚಂದ್ರನು ಜನಿಸಿದನು ಚಕ್ಷುರಿಂದ್ರಿಯದಿಂದ ಆದಿತ್ಯನು ಹುಟ್ಟಿದನು' ಎಂದು ಪುರುಷಸೂಕ್ತವು ಹೇಳುತ್ತಿದೆ. ಈ ಪುರುಷಸೂಕ್ತ ಹೇಳುವ ಕ್ರಮದಲ್ಲಿಯೇ ವೈಶ್ವಾನರಪ್ರಕರಣವು ಭಗವಂತನನ್ನು ವರ್ಣಿಸಿದೆ. ಜಾಜ್ವಲ್ಯಮಾನವಾದ ಸ್ವರ್ಗಲೋಕವು ವೈಶ್ವಾನರನ ಶಿರೋಭಾಗವಾಗಿದೆ. ಪ್ರಕಾಶಮಾನನಾದ ಸೂರ್ಯನು ಅವನ ಕಣ್ಣು ; ವಾಯು ಅವನ ಪ್ರಾಣ ಹೀಗೆ ವೈಶ್ವಾನರನನ್ನು ವರ್ಣಿಸಲಾಗಿದೆ.

ಪ್ರತಿಪದಾರ್ಥ -- ಶ್ರುತಿಯ ಸಮಾಖ್ಯಾದಿಂದ ವೈಶ್ವಾನರ ಎಂಬ ಶಬ್ದದಿಂದ ವಿಷ್ಣುವನ್ನೇ ಪ್ರತಿಪಾದಿಸುವುದಕ್ಕಾಗಿ 'ಪುರುಷವಿಧಮಪ್ಯೇನ-ಮಧೀಯತೇ' ಎಂಬ ಸೂತ್ರದ ಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಪುರುಷಸೂಕ್ತದಲ್ಲಿ ಚಂದ್ರಮಾಃ = ಚಂದ್ರನು, ಮನಸಃ ಜಾತಃ = ಮನಸ್ಸಿನ ದೆಸೆಯಿಂದ ಹುಟ್ಟಿದನು. ಚಕ್ಷೋಃ = ಚಕ್ಷುರಿಂದ್ರಿಯದಿಂದ, ಸೂರ್ಯಃ = ಆದಿತ್ಯನು, ಅಜಾಯತ = ಜನಿಸಿದನು. ಇತ್ಯಾದಿನಾ = ಪುರುಷಸೂಕ್ತವು ವರ್ಣಿಸಿದ ಇದೇ ಕ್ರಮದಿಂದ, ಯಃ = ಯಾವ, ಪುರುಷಾಖ್ಯಃ = ಪುರುಷಶಬ್ದವಾಚ್ಯನಾದ ಪರಮಾತ್ಮನು, ಅಭಿಹಿತಃ = ಪ್ರತಿಪಾದ್ಯನಾಗಿದ್ದಾನೋ, ತದ್ವಿಧಮೇವ = ತಾದೃಶಗುಣವಿಶಿಷ್ಟ-ನಾದವನನ್ನೇ ಅದೇ ಕ್ರಮದಲ್ಲಿಯೇ, ಅತ್ರ = ವೈಶ್ವಾನರ ಪ್ರಕರಣದಲ್ಲಿ, ಮೂರ್ಧೈವ ಸುತೇಜಾಃ = ಸ್ವರ್ಗಲೋಕವೇ ವೈಶ್ವಾನರ ಶಿರೋಭಾಗವು, ವಿಶ್ವರೂಪಃ = ಎಲ್ಲೆಡೆ ಪ್ರಕಾಶರೂಪನಾದ ಸೂರ್ಯನು, ಚಕ್ಷುಃ = ಕಣ್ಣು, ಪ್ರಾಣಃ = ಪ್ರಾಣವು, ಪೃಥಗ್ವರ್ತ್ಮಾ = ಪ್ರತ್ಯೇಕಮಾರ್ಗವುಳ್ಳ ವಾಯು, ಇತ್ಯಾದಿನಾ = ಇವೇ ಮೊದಲಾದ ವಾಕ್ಯಗಳಿಂದ, ಏನಮ್ = ಇಂತಹ ವೈಶ್ವಾನರಂ ವೈಶ್ವಾನರನನ್ನು,

ಅಧೀಯತೇ = ಛಂದೋಗರು ಅಧ್ಯಯನ ಮಾಡುತ್ತಾರೆ. ಹೀಗೆ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ಸಿದ್ಧವಾಗುತ್ತದೆ.

ಸೂತ್ರದಲ್ಲಿರುವ ಚಶಬ್ದವ್ಯಾಖ್ಯಾನ

ಬ್ರಹ್ಮಸೂತ್ರಭಾಷ್ಯಮ್ – चशब्देन सकलवेदतन्त्रपुराणादिषु विष्णुपरत्वं पुरुषसूक्तस्य दर्शयति ।

ಅನುವಾದ - 'पुरुषमिदमपि च' ಎಂಬ ಸೂತ್ರದಲ್ಲಿರುವ ಚ ಶಬ್ದದಿಂದ ಸಕಲವೇದ, ತಂತ್ರ, ಪುರಾಣಗಳಲ್ಲಿ ಪುರುಷಸೂಕ್ತವು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂಬುದು ಪ್ರಸಿದ್ಧವಾಗಿದೆ ಎಂದು ಸೂಚಿಸಿದ್ದಾರೆ.

ಪ್ರತಿಪದಾರ್ಥ -- ಪುರುಷಸೂಕ್ತವು ವಿಷ್ಣುಪರವಾದಲ್ಲಿ ಅದರ ಸಮಾಖ್ಯಾದಿಂದ ವೈಶ್ವಾನರ ವಿದ್ಯೆಯು ವಿಷ್ಣುಪರವೆಂದು ನಿರ್ಣಯವಾಗುತ್ತಿತ್ತು. ಆದರೆ ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎಂಬುದನ್ನು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. -

ಚ ಶಬ್ದೇನ = ಪುರುಷವಿಧಮಪಿ ಚ ಎಂಬ ಸೂತ್ರದಲ್ಲಿರುವ ಚ ಶಬ್ದದಿಂದ ಋಗಾದಿ ಸಕಲವೇದಗಳು, ತಂತ್ರ, ಪಂಚರಾತ್ರ ಮಹಾಭಾರತಗಳು, ಪುರಾಣದಿಷು = ಸಕಲಪುರಾಣಗಳು ಇವುಗಳಲ್ಲಿ, ಪುರುಷಸೂಕ್ತಸ್ಯ = ಪುರುಷಸೂಕ್ತಕ್ಕೆ, ವಿಷ್ಣುಪರತ್ವಂ = ಮುಖ್ಯವಾದ ವಿಷ್ಣುಪರತ್ವವನ್ನು, ದರ್ಶಯತಿ = ಸೂಚಿಸಿದ್ದಾರೆ.

ಪುರುಷಸೂಕ್ತವು ವಿಷ್ಣುಪರವೆನ್ನಲು ಪುರಾಣದ ಆಧಾರ

ಬ್ರಹ್ಮಸೂತ್ರಭಾಷ್ಯಮ್ – तथा च ब्राह्मे –

'यथैव पौरुषं सूक्तं नित्यं विष्णुपरायणम् ।
तथैव मे मनो नित्यं भूयाद् विष्णुपरायणम् ।।' इति ।

ಅನುವಾದ - ಇದೇ ವಿಷಯದಲ್ಲಿ ಬ್ರಾಹ್ಮಪುರಾಣದ ಆಧಾರ ಹೀಗಿದೆ. ಪುರುಷಸೂಕ್ತವು ಕೇವಲ ವಿಷ್ಣುವನ್ನು ಹೇಗೆ ಪ್ರತಿಪಾದಿಸುತ್ತದೋ ಅದರಂತೆ ನನ್ನ ಮನಸ್ಸು ನಿರಂತರವಾಗಿ ವಿಷ್ಣುವಿನಲ್ಲೇ ಆಸಕ್ತವಾಗಲಿ.

ಪ್ರತಿಪದಾರ್ಥ -- ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎನ್ನಲು ಪುರಾಣದ ಆಧಾರವನ್ನು ನೀಡುತ್ತಿದ್ದಾರೆ. ತಥಾ ಚ = ಇದೇ ವಿಷಯದಲ್ಲಿ, ಬ್ರಾಹ್ಮೇ = ಬ್ರಹ್ಮ ಪುರಾಣವು ಹೀಗೆ ಹೇಳಿದೆ - ಯಥೈವ = ಯಾವ ರೀತಿಯಾಗಿ, ಪೌರುಷಂ = ಪುರುಷಸಂಬಧಿಯಾದ, ಸೂಕ್ತಮು = ಸೂಕ್ತವು, ನಿತ್ಯಮ್ = ಯಾವಾಗಲು, ವಿಷ್ಣುಪರಾಯಣಂ = ವಿಷ್ಣುವನ್ನೇ ಪ್ರತಿಪಾದಿಸುತ್ತದೋ, ತಥೈವಾ = ಹಾಗೆಯೇ, ಮೇ = ನನ್ನ, ಮನಃ = ಮನಸ್ಸು, ನಿತ್ಯಮ್ = ನಿರಂತರವಾಗಿ, ವಿಷ್ಣುಪರಾಯಣಮ್ = ವಿಷ್ಣುವಿನಲ್ಲೇ ಆಸಕ್ತವಾಗಿ, ಭೂಯಾತ್ = ಆಗಲಿ, ಇತಿ = ಎಂದು.

ಪುರುಷಸೂಕ್ತವು ವಿಷ್ಣುಪರವೆನ್ನಲು ವೇದದ ಆಧಾರ

ब्रह्मसूत्रभाष्यम् — चतुर्वेदशिखायां च —

'सहस्रशीर्षा पुरुषः सहस्राक्षः सहस्रपात्' इति । 'एष ह्येवाचिन्त्यः परः परमो हरिरादिरनादिरनन्तोऽनन्तशीर्षोऽनन्ताक्षोऽनन्तबाहुरनन्तगुणोऽनन्तरूपः'इति ।

ಅನುವಾದ - 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' ಎಂಬುದಾಗಿ ಪುರುಷಸೂಕ್ತದಲ್ಲಿ ಪ್ರತಿಪಾದ್ಯನಾದ ಆ ಚಿಂತ್ಯನಾದ ಲೊಕವಿಲಕ್ಷಣನೂ, ಸರ್ವೋತ್ತಮನೂ, ಅನಾದಿಯೂ, ಅನಂತನೂ ಆದ ಶ್ರೀಹರಿಯು ಅನಂತ ಮುಖವುಳ್ಳವನು, ಅನಂತವಾದ ಕಣ್ಣುಗಳುಳ್ಳವನು, ಅನಂತವಾದ ತೋಳುಗಳುಳ್ಳವನು, ಅಸಂಖ್ಯವಾದ ರೂಪಗಳೂ, ಗುಣಗಳೂ ಉಳ್ಳವನು. ಎಂಬುದಾಗಿ ಚತುರ್ವೇದಶಿಖೆಯು ಹೇಳಿದೆ.

ಪ್ರತಿಪದಾರ್ಥ -- ಪುರುಷಸೂಕ್ತವು ವಿಷ್ಣುವನ್ನೇ ಪ್ರತಿಪಾದಿಸುತ್ತದೆನ್ನಲು ಶ್ರುತಿಯನ್ನು ಪ್ರಮಾಣವಾಗಿ ಹೇಳುತ್ತಿದ್ದಾರೆ -

ಚತುರ್ವೇದ ಶಿಖಾಯಾಂ ಚ = ಚತುರ್ವೇದ ಶಿಖಾ ಎಂಬ ಗ್ರಂಥದಲ್ಲೂ ಹೀಗೆ ಹೇಳಲಾಗಿದೆ, ಸಹಸ್ರಶೀರ್ಷಾ ಪುರುಷಃ = ಅನಂತವಾದ ಶಿರಸ್ಸುಗಳುಳ್ಳ, ಪುರುಷ ಶ್ರೇಷ್ಠನಾದ ನಾರಾಯಣನು, ಸಹಸ್ರಾಕ್ಷಃ = ಅನಂತವಾದ ಕಣ್ಣುಗಳುಳ್ಳವನು, ಸಹಸ್ರಪಾತ್ = ಅನಂತವಾದ ಕಾಲುಗಳುಳ್ಳವನು, ಇತಿ = ಹೀಗೆ, ಏಷ ಹ್ಯೇವ = ಇಂತಹ ವ್ಯಕ್ತಿಯೇ, ಅಚಿಂತ್ಯಃ = ಅಪ್ರಮೇಯನು, ಪರಃ = ವಿಲಕ್ಷಣನೂ, ಪರಮಃ = ಉತ್ತಮನೂ, ಹರಿಃ = ಪಾಪ ನಾಶಕನು, ಆದಿಃ = ಜಗತ್ ಕಾರಣನು, ಅನಾದಿಯು, ಅನಂತಃ = ನಾಶವಿಲ್ಲದವನೂ, ಅನಂತಶೀರ್ಷಃ = ಅನಂತವಾದ ತಲೆಗಳುಳ್ಳವನೂ, ಅನಂತಾಕ್ಷಃ = ಅನಂತವಾದ ಕಣ್ಣುಗಳುಳ್ಳವನೂ, ಅನಂತಬಾಹುಃ = ಅನಂತವಾದ ಬಾಹುಗಳುಳ್ಳವನೂ, ಅನಂತಗುಣಃ = ಅನಂತವಾದ ಗುಣಗಳುಳ್ಳವನೂ, ಅನಂತರೂಪಃ = ಅನಂತವಾದ ರೂಪಗಳುಳ್ಳವನು, ಇತಿ = ಹೀಗೆ.

ಪುರುಷಸೂಕ್ತವು ವಿಷ್ಣುಪರವೆನ್ನಲು ತಂತ್ರದ ಆಧಾರ

ಬ್ರಹ್ಮಸೂತ್ರಭಾಷ್ಯಮ್ – ಬೃಹತ್ಸಂಹಿತಾಯಾಂ ಚ -

'ಯಥಾ ಹಿ ಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ ।
ನ ತಥಾ ಸರ್ವವೇದಾಶ್ಚ ವೇದಾಙ್ಗಾನಿ ಚ ನಾರದ ।।' ಇತ್ಯಾದಿ ।

ಅನುವಾದ - ಬೃಹತ್ ಸಂಹಿತೆಯಲ್ಲೂ ಸಹ ಹೀಗೆ ಹೇಳಲಾಗಿದೆ ಎಲೈ ನಾರದರೆ ! ಪುರುಷಸೂಕ್ತವು ಹೇಗೆ ವಿಷ್ಣುವನ್ನೇ ಪ್ರತಿಪಾದಿಸುತ್ತದೋ ಅದರಂತೆ ವೇದ ವೇದಾಂಗಗಳೂ ಸಹ ಭಗವಂತನನ್ನು ಪ್ರತಿಪಾದಿಸುವುದಿಲ್ಲ.

ಪ್ರತಿಪದಾರ್ಥ -- ಬೃಹತ್ ಸಂಹಿತಾಯಾಂ ಚ = ಬೃಹತ್ ಸಂಹಿತೆಯಲ್ಲಿಯೂ ಸಹ, ಯಥಾ ಹಿ = ಹೀಗೆ, ಪೌರುಷಂ ಸೂಕ್ತಂ = ಪುರುಷಸೂಕ್ತವು, ವಿಷ್ಣೋರೇವಾ = ವಿಷ್ಣುವನ್ನೇ, ಅಭಿಧಾಯಕಮ್ = ಹೇಳುತ್ತದೋ, ತಥಾ = ಹಾಗೆ, ಸರ್ವೇ ವೇದಾಶ್ಚ = ಋಗಾದಿ ಸಕಲವೇದಗಳು, ವೇದಾಂಗಾನಿ = ಶಿಕ್ಷಾದಿ ಷಡಂಗಗಳೂ, ನ ತಥಾ = ಪುರುಷಸೂಕ್ತದಂತೆ ಸಷ್ಟವಾಗಿ ಭಗವಂತನನ್ನು ಪ್ರತಿಪಾದಿಸುವುದಿಲ್ಲ.

ನಾರದಾ = ಎಲೈ ನಾರದರೆ ಈ ವಿಷಯವನ್ನು ತಿಳಿಯಿರಿ, ಇತ್ಯಾದಿ = ಇವೇ ಮೊದಲಾದ ಬ್ರಹ್ಮದೇವರ ಮಾತುಗಳಿಂದ ಈ ವಿಷಯವನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ಜನ್ಯಜನಕಗಳಿಗೆ ಪುರಾಣಗಳಲ್ಲಿ ಅಭೇದವ್ಯವಹಾರ

ब्रह्मसूत्रभाष्यम् —

'यस्माद्यज्जायते चाङ्गाल्लोकवेदादिकं हरेः ।
तन्नामवाच्यमङ्गं तद् यथा ब्रह्मादिकं मुखम् ।।'

इति नारदीयवचनान्नाभेदोक्तिविरोधः ।। २६ ।।

ಅನುವಾದ - ಸಕಲ ಪದಾರ್ಥಗಳೂ, ಲೋಕಗಳೂ,ಯಾವ ಶ್ರೀಹರಿಯ ಅಂಗದಿಂದ ಹುಟ್ಟಿ ಅವನನ್ನೇ ಆಶ್ರಯಿಸಿ, ಅವನಲ್ಲೇ ಲೀನವಾಗುತ್ತದೋ, ಅಂತಹ ಅಂಗಗಳನ್ನು , ಬ್ರಾಹ್ಮಣನೇ ವಿಷ್ಣುವಿನ ಮುಖ ಎಂಬಂತೆ ಆಯಾ ಲೋಕ ವೇದಗಳ ಹೆಸರಿನಿಂದಲೇ ಕರೆಯಬೇಕು. ಹೀಗೆ ನಾರದ ಪುರಾಣದ ವಚನವಿರುವುದರಿಂದ ವೈಶ್ವಾನರ ವಿದ್ಯೆಯಲ್ಲಿ ಪರಮಾತ್ಮನ ಶಿರಸ್ಸಿಗೂ ಸ್ವರ್ಗಲೋಕಕ್ಕೂ ಅಭೇದವನ್ನು ಹೇಳಿರುವುದಕ್ಕೆ ವಿರೋಧವು ಬರುವುದಿಲ್ಲ.

ಪ್ರತಿಪದಾರ್ಥ -- ಯಸ್ಮಾತ್ = ಯಾವ, ಹರೇಃ = ಶ್ರೀಹರಿಯ, ಅಂಗಾತು = ಅವಯವದಿಂದ, ಲೋಕವೇದಾದಿಕಮ್ = ಲೋಕ ಹಾಗೂ ವೇದಗಳು, ಜಾಯತೇ = ಹುಟ್ಟುತ್ತವೋ, ತತಃ = ಅವುಗಳು, ತನ್ನಾಮ ವಾಚ್ಯಮ್ = ಅವೇ ಹೆಸರುಗಳಿಂದ ಕರೆಸಿಕೊಳ್ಳುತ್ತವೆ, ಅಂಗಂಚ = ಅವನ ಅವಯವವು, ತನ್ನಾಮವಾಚ್ಯಮ್ = ಆ ವಸ್ತು ಶಬ್ದ ವಾಚ್ಯವೇ ಆಗುತ್ತದೆ, ಯಥಾ = ಹೇಗೆಂದರೆ, ಬ್ರಹ್ಮಾದಿಕಮ್ = ಬ್ರಾಹ್ಮಣಾದಿವರ್ಣಗಳು, ಮುಖಮ್ = ಮುಖವೆಂದು, ಕರೆಯುತ್ತಾರೋ, ಇತಿ = ಹೀಗೆ, ನಾರದೀಯ ವಿರೋಧಮ್ = ಪರಮಾತ್ಮನ ಅವಯವಗಳಿಂದ ಅಭಿನ್ನವೆಂಬ ವ್ಯವಹಾರವು ವಿರುದ್ಧವಾಗುವುದಿಲ್ಲ.

ಸತ್ತರ್ಕದೀಪಾವಳಿ

'ಶಬ್ದಾದಿಭ್ಯಃ' ಎಂಬ ಸೂತ್ರಕ್ಕೆ ಸಂಗತಿ

सत्तर्कदीपावलिः – शब्दादिभ्योऽन्तःप्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते ।। १-२-२६ ।।

उक्तार्थमाक्षिप्य समर्थयत्सूत्रं पठित्वा व्याचष्टे – शब्देत्यादिना ।।

ಹಿಂದೆ ಹೇಳಿದ ಪ್ರಮೇಯವನ್ನು ಆಕ್ಷೇಪಿಸಿ ಉತ್ತರಿಸುವುದಕ್ಕಾಗಿ ಸೂತ್ರವನ್ನು ಪಠನ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಶಬ್ದಾದಿಭ್ಯಃ'' ಇತ್ಯಾದಿಯಾಗಿ.

'ಶಬ್ದಾದಿಭ್ಯ' ಎಂಬ ಸೂತ್ರಾರ್ಥ

सत्तर्कदीपावलिः – अस्यार्थः – 'आत्मानं विश्वानरम्' इत्यात्मशब्देन विशेषितोऽप्ययं वैश्वानरविद्याप्रतिपाद्यो न विष्णुः, 'अयमग्निर्वैश्वानरः' 'वैश्वानरमृत आजातमग्निम्' इत्यादिनाग्निशब्देन विशेष्यमाणत्वात् ।

ಇದರ ಅರ್ಥ ಹೀಗಿದೆ -- 'ಆತ್ಮಾನಂ ವೈಶ್ವಾನರಂ' ಎಂಬಲ್ಲಿ ಆತ್ಮಶಬ್ದವನ್ನು ವಿಶೇಷಣವನ್ನಾಗಿ ಹೇಳಿದ ಮಾತ್ರದಿಂದ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ಅಥವಾ ವೈಶ್ವಾನರವಿದ್ಯೆಯಿಂದ ನಿರ್ಣಯಿಸಲಾಗದು. ಏಕೆಂದರೆ 'ಅಯಮಗ್ನಿರ್ವೈಶ್ವಾನರಃ' 'ವೈಶ್ವಾನರಮೃತ ಆಜಾತಮಗ್ನಿಮ್' ಇತ್ಯಾದಿಯಾಗಿ ಅಗ್ನಿಶಬ್ದವನ್ನು ವೈಶ್ವಾನರನಲ್ಲಿ ವಿಶೇಷಣವನ್ನಾಗಿ ಹೇಳಲಾಗಿದೆ.

ಲಿಂಗದ ಆಧಾರದಿಂದ ಅಗ್ನಿಯು ವೈಶ್ವಾನರನೆಂದು ಆಕ್ಷೇಪ

सत्तर्कदीपावलिः – लिङ्गवशादप्यग्निरेवात्र वैश्वानरः । तथाहि 'वैश्वानरे तद्धुतं भवति' इति हविराधारत्वमात्मनो वैश्वानरस्येत्यारभ्य हृदयं गार्हपत्ये इत्युच्यमानमप्यग्निलिङ्गम् 'अयमग्निर्वैश्वानरो येनेदमन्नं पच्यते तद् यद्धुक्तं

प्रथममागच्छेत् तद्धोमीयं प्रथमामाहुतिं जुहुयात्तां जुहुयात् प्राणाय स्वाहा' इत्यादि शरीरान्तःस्थिताग्निधानान्येते युज्यन्ते ।

ಲಿಂಗದ ಆಧಾರದಿಂದಲೂ ಸಹ ಅಗ್ನಿಯೇ ಇಲ್ಲಿ ವೈಶ್ವಾನರನಾಗಿದ್ದಾನೆ. ಅದು ಹೀಗೆ -- 'ವೈಶ್ವಾನರೇ ತದ್ಭುತಂ ಭವತಿ' ಎಂಬುದಾಗಿ ಹವಿರಾಧಾರತ್ವ ಎಂಬ ಲಿಂಗವು, ಹಾಗೂ 'ಆತ್ಮನಃ ವೈಶ್ವಾನರಸ್ಯ' ಎಂದು ಪ್ರಾರಂಭವಾಗಿ 'ಹೃದಯಂ ಗಾರ್ಹಪತ್ಯೇ' ಎಂದು ಹೇಳಿರುವುದರಿಂದ ಗಾರ್ಹಪತ್ಯತ್ವವೆಂಬ ಲಿಂಗವು ಹಾಗೂ 'ಅಯಮಗ್ನಿರ್ವೈಶ್ವಾನರೋ ಯೇನೇದಮನ್ನಂ ಪಚ್ಯತೇ ತದ್ ಯದುಕ್ತಂ ಪ್ರಥಮಮಾಗಚ್ಛೇತ್ ತದ್ಧೋಮೀಯಂ ಪ್ರಥಮಮಾಹುತಿಂ ಜುಹುಯಾತ್ ತಾಂ ಜುಹುಯಾತ್ ಪ್ರಾಣಾಯ ಸ್ವಾಹಾ' ಎಂಬುದಾಗಿ ಶರೀರಾಂತಃಸ್ಥಿತನಾದ ಅಗ್ನಿಗೆ ಆಹುತಿದಾನ, ಹೀಗೆ ಶರೀರಾಂತಃಸ್ಥಿತತ್ವ ಮೊದಲಾದ ಲಿಂಗಗಳೆಲ್ಲವೂ ಅಗ್ನಿಯಲ್ಲಿಯೇ ಯುಕ್ತವಾಗುತ್ತವೆ.

ಪಾಚಕತ್ವಧರ್ಮದಿಂದ ವಿಷ್ಣುವಿನ ಉಪಾಸನೆ

सत्तर्कदीपावलिः – 'अथ हेममात्मानम्' इत्यादिमहोपनिषद्वाक्ये अग्न्यादिनामभिः पाचकत्वादिधर्मैर्विष्णूपास्तेरुपदिष्टत्वेनात्र वह्न्यादिप्रापकशब्द लिङ्गाभावात् । अरमत्यन्नमित्यर्थः ।

'ಅಥ ಹೇಮಮಾತ್ಮಾನಮ್' ಇತ್ಯಾದಿಯಾದ ಮಹೋಪನಿಷದ್ವಾಕ್ಯದಲ್ಲಿ ಅಗ್ನಿ ಮೊದಲಾದ ನಾಮಾತ್ಮಕಶಬ್ದಗಳಿಂದ ಮತ್ತು ಪಾಚಕತ್ವವೇ ಮೊದಲಾದ ಧರ್ಮಗಳಿಂದ ವಿಷ್ಣುವನ್ನು ಉಪಾಸನೆ ಮಾಡಬೇಕೆಂದು ಉಪದೇಶಿಸಲಾಗಿದೆ. ಆದ್ದರಿಂದ ವಹ್ನ್ಯಾದಿಪ್ರಾಪಕವಾದ ಯಾವುದೇ ಶಬ್ದಗಳಾಗಲೀ ಲಿಂಗಗಳಾಗಲೀ ಇರುವುದಿಲ್ಲವೆಂದು ತಿಳಿಯಬೇಕು. 'ಅರಮ್' ಎಂಬುದಕ್ಕೆ ಅನ್ನ ಎಂದರ್ಥ.

ವೈಶ್ವಾನರನು ವಿಷ್ಣುವೆನ್ನಲು ಬ್ರಹ್ಮಶಬ್ದ ಹಾಗೂ ಪುರುಷಸೂಕ್ತಗಳ ಆಧಾರ

सत्तर्कदीपावलिः – 'को न आत्मा किं ब्रह्म' इत्युपक्रम्य निरूप्यमाणत्वादयं वैश्वानरो विष्णुरेव नाग्निः । अनात्तत्वादिवाक्येन

आत्मब्रह्मशब्दयोः विष्ण्वन्यत्रासम्भावितत्वस्य कथनात् पुरुषसूक्तसंवादादप्यत्र वैश्वानरशब्देन विष्णुरेवोच्यते ।

'ಕೋ ನ ಆತ್ಮಾ ಕಿಂ ಬ್ರಹ್ಮ' ಎಂದು ಪ್ರಾರಂಭವಾಗಿ ನಿರೂಪಣೆ ಮಾಡುತ್ತಿರುವುದರಿಂದ ಈ ವೈಶ್ವಾನರನು ವಿಷ್ಣುವೇ ಆಗಿದ್ದಾನೆ ಹೊರತು ಅಗ್ನಿಯಲ್ಲ. 'ಅನಾತ್ತತ್ವಾತ್' ಇತ್ಯಾದಿ ವಾಕ್ಯದಿಂದ ಆತ್ಮಾ ಹಾಗೂ ಬ್ರಹ್ಮಶಬ್ದಗಳು ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಉಪಪನ್ನವಾಗುವುದಿಲ್ಲ ಎಂದು ಹೇಳಲಾಗಿದೆ. ಅಷ್ಟೇ ಅಲ್ಲದೆ ಪುರುಷಸೂಕ್ತದ ಸಂವಾದವಿರುವುದರಿಂದಲೂ ವೈಶ್ವಾನರಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ.

ಪುರುಷಸೂಕ್ತ ಪ್ರತಿಪಾದ್ಯನೇ ಇಲ್ಲಿ ವಿವಕ್ಷಿತ

सत्तर्कदीपावलिः – तथाहि 'चन्द्रमा मनसो जातः चक्षोस्सूर्यो अजायत' इत्यादि पुरुषसूक्तवाक्येन यः सहस्रशीर्षा पुरुष उक्तः स एवात्र प्रत्यभिज्ञायते आत्मनो वैश्वानरस्य 'मूर्धैव सुतेजाः चक्षुः विश्वरूपः' इत्यादिना ।

'ಚಂದ್ರಮಾ ಮನಸೋ ಜಾತಃ ಚಕ್ಷೋಃ ಸೂರ್ಯೋ ಅಜಾಯತ' ಇತ್ಯಾದಿಯಾದ ಪುರುಷಸೂಕ್ತದ ವಾಕ್ಯದಿಂದ ಯಾವ ಸಾವಿರಾರು ತಲೆಗಳುಳ್ಳ ಪುರುಷನು ಪ್ರತಿಪಾದ್ಯ-ನಾಗಿದ್ದಾನೋ ಅವನೇ ಇಲ್ಲಿಯೂ ಸಹ ಪ್ರತಿಪಾದ್ಯನಾಗಿದ್ದಾನೆ. ಆತ್ಮಶಬ್ದದಿಂದ ಮತ್ತು ವೈಶ್ವಾನರಶಬ್ದದಿಂದ 'ಮೂರ್ಧ್ನೈವ ಸುತೇಜಾಃ ಚಕ್ಷುಃ ವಿಶ್ವರೂಪಃ' ಇತ್ಯಾದಿ ವಾಕ್ಯದಿಂದ ಪ್ರತಿಪಾದ್ಯನಾಗಿದ್ದಾನೆ.

'ಯಥೈವ ಪೌರುಷಂ ಸೂಕ್ತಮ್' ಎಂಬ ಪುರಾಣದ ವ್ಯಾಖ್ಯಾನ

सत्तर्कदीपावलिः – पुरुषसूक्तस्य विष्ण्वेकपरत्वं सकलवेदेतिहासादिषु अविगानसिद्धं तथाह्युक्तम् । 'यथैव पौरुषम्' इत्यादिभिः पुराणवाक्यैः

ಪುರುಷಸೂಕ್ತವು ಕೇವಲ ವಿಷ್ಣುಪರವಾಗಿದೆ ಎಂದು ಸಕಲವೇದ ಇತಿಹಾಸಾದಿಗಳಲ್ಲಿ ವಿವಾದವಿಲ್ಲದೇ ಸಿದ್ಧವಾಗಿದೆಯೆಂದು 'ಯಥೈವ ಪೌರುಷಂ ಸೂಕ್ತಮ್' ಇತ್ಯಾದಿ ಪುರಾಣವಾಕ್ಯಗಳಿಂದ ಹೇಳಿರುತ್ತಾರೆ.

ದ್ಯುಲೋಕಾದಿಗಳಿಗೂ ಭಗವಂತನ ಅವಯವಗಳಿಗೂ ಅಭೇದವಿಲ್ಲ

सत्तर्कदीपावलिः – पुरुषावयवेभ्यो भेदेन निर्दिष्टानां द्युलोकादीनां वैश्वानरमूर्धादिभिरभेदेन व्यपदेशस्य गतिरुच्यते यस्मादित्यनेन ।

ಪುರುಷನ ಅವಯವಗಳಿಂದ ದ್ಯುಲೋಕಾದಿಗಳಿಗೆ ಭೇದವು ನಿರ್ದಿಷ್ಟವಾಗಿದೆ. ಆದರೂ ವೈಶ್ವಾನರನ ತಲೆ (ಮೂರ್ಧಾ) ಮೊದಲಾದ ಅವಯವಗಳಿಂದ ಅಭೇದವು ಹೇಳಲ್ಪಟ್ಟಿದೆ. ಹೀಗೆ ಅಭೇದವನ್ನು ಹೇಳಲು ಏನು ಕಾರಣವೆಂಬುದನ್ನು ''ಯಸ್ಮಾತ್ ಎಂಬ ಭಾಷ್ಯದಿಂದ ಸಮರ್ಥಿಸುತ್ತಿದ್ದಾರೆ.

ಅವಯವಗಳಿಗೇಕೆ ಲೋಕಗಳ ಹೆಸರು ?

सत्तर्कदीपावलिः – यस्माद् यस्माद् विष्ण्वङ्गाद् यद् यल्लोकादिकं जायते तत्तन्नाम्ना तज्जनकमङ्गमुच्यते । अतो 'मूर्धैव सुतेजाः' इत्यादिव्यपदेशो घटते।

ಯಾವ ಯಾವ ವಿಷ್ಣುವಿನ ಅವಯವಗಳಿಂದ ಯಾವ ಯಾವ ಲೋಕಾದಿಗಳು ಹುಟ್ಟುತ್ತವೋ ಆ ಭಗವಂತನ ಅವಯವಗಳಿಗೆ ಆಯಾಯಾ ಲೋಕಗಳ ಹೆಸರುಗಳು ಬಂದಿರುತ್ತವೆಂದು ತಿಳಿಯಬೇಕು. ಆದ್ದರಿಂದಲೇ 'ಮೂರ್ಧ್ನೈವ ಸುತೇಜಾಃ' ಇತ್ಯಾದಿಯಾಗಿ ಮಾತುಗಳು ಉಪಪನ್ನವಾಗತ್ತವೆ.

'ಬ್ರಾಹ್ಮಣೋऽಸ್ಯ ಮುಖಮಾಸೀತ್' ಎಂಬ ಅಭೇದವ್ಯವಹಾರದ ಉದಾಹರಣೆ

सत्तर्कदीपावलिः – यथा 'ब्राह्मणोऽस्य मुखमासीद् बाहू राजन्यः कृतः' इत्यादौ ब्राह्मणादिजनकेषु मुखादिषु ब्राह्मणादिपदव्यपदेशः । नात्रात्र पुरुषोत्तममुखादिभिरभेदो ब्राह्मणादीनामुच्यते । 'पद्भ्यां शूद्रो अजायत' इत्यादिवाक्यशेषविरोधात् । अर्थान्तरशब्दानां भगवदवयवेषु वृत्तिः विद्वद्रूढ्या योगवृत्त्या वा अवगन्तव्येत्यर्थः ।।

ಉದಾಹರಣೆ -- 'ಬ್ರಾಹ್ಮಣೋऽಸ್ಯ ಮುಖಮಾಸೀದ್ ಬಾಹೂ ರಾಜನ್ಯಃ ಕೃತಃ' ಇತ್ಯಾದಿ ಸ್ಥಳಗಳಲ್ಲಿ ಬ್ರಾಹ್ಮಣರಿಗೆ ಜನಕವಾದ ಪುರುಷನ ಮುಖಾದಿ ಅವಯವಗಳಲ್ಲಿ ಬ್ರಾಹ್ಮಣ

ಮೊದಲಾದ ಪದಗಳ ವ್ಯಪದೇಶವು ಇರುತ್ತದೆ. ಇಲ್ಲಿ ಪುರುಷನ ಮುಖದಿಂದ ಬ್ರಾಹ್ಮಣರಿಗೆ ಅಭೇದವನ್ನು ತಿಳಿಯಬಾರದು. ಏಕೆಂದರೆ ''ಪದ್ಭ್ಯಾಂ ಶೂದ್ರೋ ಅಜಾಯತ'' ಇತ್ಯಾದಿ ವಾಕ್ಯಶೇಷದ ವಿರೋಧವು ಬರುತ್ತದೆ. ಅಂದರೆ ಶೂದ್ರರಿಗೂ ಸಹ ಅಭೇದವನ್ನು ಹೇಳಬೇಕಾಗುತ್ತದೆ. ಬ್ರಾಹ್ಮಣರಿಂದ ಅಭಿನ್ನನಾದವನು ಶೂದ್ರನಿಂದ ಅಭಿನ್ನನಾಗಲು ಹೇಗೆ ಸಾಧ್ಯ ? ಬೇರೆ ಶಬ್ದಗಳನ್ನು ಭಗವಂತನ ಅವಯವಗಳಲ್ಲಿ ವಿದ್ವದ್ರೂಢಿಯಿಂದ ಅಥವಾ ಯೋಗವೃತ್ತಿಯಿಂದ ಕೂಡಿಸಬೇಕು.

ತತ್ವಪ್ರದೀಪ

ವೈಶ್ವಾನರನ ಬಗ್ಗೆ ಬೃಹದಾರಣ್ಯಕ ಏನು ಹೇಳುತ್ತದೆ ?

तत्वप्रदीपः – ''शब्दादिभ्योऽन्तःप्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते'' ।। 'अयमग्निर्वैश्वानरो योऽयमन्तः पुरुषे' इति वाजसनेयके । वैश्वानरस्याग्नित्वे श्रुतिः प्रमाणम् ।

'ಅಯಮಗ್ನಿರ್ವೈಶ್ವಾನರೋ ಯೋಽಯಮಂತಃ ಪುರುಷೇ' 'ಸಕಲ ಪುರುಷರ ಅಂತರ್ಯಾಮಿಯಾದ ಅಗ್ನಿಯು 'ವೈಶ್ವಾನರ' ಎನಿಸಿದ್ದಾನೆ' ಎಂಬುದಾಗಿ ಬೃಹದಾರಣ್ಯಕವಾಕ್ಯವು ಹೇಳುತ್ತಿದೆ. ಇದರಿಂದ ಅಗ್ನಿಯೇ 'ವೈಶ್ವಾನರ' ಎನಿಸಿದ್ದಾನೆ ಎಂಬ ವಿಷಯದಲ್ಲಿ ಶ್ರುತಿಯು ಪ್ರಮಾಣವಾಗಿದೆ ಎಂದು ತಿಳಿಯುತ್ತದೆ.

ವಿಶೇಷವಿಚಾರ - ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುವ ವೈಶ್ವಾನರ ಪ್ರಕರಣ ಹೀಗಿದೆ - ಅಯಮಗ್ನಿರ್ವೈಶ್ವಾನರೋ ಯೋಽಯಮಂತಃ ಪುರುಷೋ । ಯೇನೇದಮನ್ನಂ ಪಚ್ಯತೇ, ಯದಿದಮದ್ಯತೇ । ತಸ್ಯೈಷ ಘೋಷೋ ಭವತಿ ಯಮೇತತ್ ಕರ್ಣಾವಪಿಧಾಯ ಶೃಣೋತಿ । ಸ ಯದಾ ಉತ್ಕ್ರಮಿಷ್ಯನ್ ಭವತಿ ನೈನಂ ಘೋಷಂ ಶೃಣೋತಿ । - ಇತಿ ಏಕಾದಶಂ ಬ್ರಾಹ್ಮಣಮ್ ॥

ಜೀವನ ಶರೀರದಲ್ಲಿ ಜಾಠರಾಗ್ನಿಯಲ್ಲಿರುವ ಅಗ್ನಿನಾಮಕ ಪರಮಾತ್ಮನಿಗೆ ವೈಶ್ವಾನರ ಎಂದು ಹೆಸರು. ಈ ವೈಶ್ವಾನರನೇ ಪ್ರಾಣಿಗಳು ತಿನ್ನುವ ಆಹಾರವನ್ನು ಜೀರ್ಣವಾಗಿಸುತ್ತಾನೆ. ಕಿವಿಯನ್ನು ಮುಚ್ಚಿಕೊಂಡಾಗ ಕೇಳುವ ಶಬ್ದ ವಾಯುದೇವನು ಮಾಡುವ ಘೋಷ. ಇದು ಈ ವೈಶ್ವಾನರನ ಸ್ತುತಿರೂಪವಾಗಿದೆ. ಈ ವೈಶ್ವಾನರನು ಜೀವನ ಶರೀರದಿಂದ ಹೊರ ಹೋಗುವ ಕಾಲ ಸನ್ನಿಹಿತವಾದಾಗ ಈ ಘೋಷ ಕೇಳಿಸುವುದಿಲ್ಲ. ಇದು ಮರಣಸೂಚಕವಾಗಿರುತ್ತದೆ.

ಅಗ್ನಿನಾಮಾ ತು ಭಗವಾನೌದರ್ಯಾಗ್ನೌ ಪ್ರತಿಷ್ಠಿತಃ।
ವಿಶ್ವೈರ್ಗುಣೈಃ ಸಮೇತತ್ವಾದನಂತತ್ವಾಚ್ಚ ಸ ಪ್ರಭುಃ।
ವೈಶ್ವಾನರ ಇತಿ ಪ್ರೋಕ್ತಃ ಸೋಽಗ್ನಿರಂಗ ಪ್ರಣೇತೃತಃ।
ತಸ್ಯ ವಿಷ್ಣೋಃ ಸ್ತುತಿರಿಯಂ ಕ್ರಿಯತೇ ವಾಯುನಾ ಸದಾ।
ಕರ್ಣೌ ಪಿಧಾಯ ಯಾ ನಿತ್ಯಂ ಶ್ರೋತುಂ ಶಕ್ಯಾಽಖಿಲೈಃ ಸದಾ।
- ಇತಿ ತಂತ್ರಮಾಲಾಯಾಂ।

ಅಗ್ನಿ ಎಂಬ ಹೆಸರಿನ ಭಗವಂತನು ಜಾಠರಾಗ್ನಿಯಲ್ಲಿದ್ದಾನೆ. ಆ ಪ್ರಭು ವೈಶ್ವ ಎಂದರೆ ಸಕಲಗುಣಗಳಿಂದ ಕೂಡಿರುವುದರಿಂದ ಮತ್ತು ಅದರ ಅಂದರೆ ನಾಶರಹಿತನಾದ್ದರಿಂದ ವೈಶ್ವಾನರ ಎಂದು ಪ್ರಸಿದ್ಧನಾಗಿದ್ದಾನೆ. ಶರೀರದ ಎಲ್ಲ ಅಂಗಗಳನ್ನೂ ಆಯಾ ಕಾರ್ಯಗಳಲ್ಲಿ ನಡೆಸುವುದರಿಂದ ಅವನಿಗೆ ಅಗ್ನಿ ಎಂದು ಹೆಸರು. ಈ ವಿಷ್ಣುವಿನ ಸ್ತುತಿಯನ್ನು ವಾಯುದೇವರು ಸದಾ ಮಾಡುತ್ತಾರೆ. ಎಲ್ಲರೂ ಕಿವಿಮುಚ್ಚಿಕೊಂಡಾಗ ಈ ಸ್ತೋತ್ರವನ್ನು ಕೇಳಬಹುದು.

'ಮೂರ್ಧಾನಂ ದಿವಃ' ಎಂಬ ಶ್ರುತ್ಯರ್ಥ

तत्वप्रदीपः – 'मूर्धानं दिवो अरतिं पृथिव्या वैश्वानरम्' इत्यादेरयमर्थः। 'दिवो मूर्धानम्' मूर्धन्वन्तं विष्णोरङ्गाङ्गित्वभेदात् । 'पृथिव्या' अरतिमन्तं, अरं ततिर्येन; सोऽरतिः पाद इत्यर्थः । विश्वनरस्थम् ।

'ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮ್' ಇತ್ಯಾದಿ ಶ್ರುತಿಗೆ ಹೀಗರ್ಥ - 'ದಿವೋ ಮೂರ್ಧಾನಮ್' ಎಂಬುದಾಗಿ ಶ್ರುತಿಯು ಸ್ವರ್ಗಲೋಕಕ್ಕೆ ಕಾರಣವಾದದ್ದು ವಿಷ್ಣುವಿನ ಶಿರೋಭಾಗ ಎಂದು ಹೇಳಿದೆ. ಇಲ್ಲಿರುವ 'ಮೂರ್ಧಾನಮ್' ಎಂಬ ಪದಕ್ಕೆ 'ಮೂರ್ಧನ್ವಂತಂ' ಶಿರೋಭಾಗವುಳ್ಳವನು ಎಂದರ್ಥ. ವಿಷ್ಣುವಿನ ಅಂಗ ಹಾಗೂ ಅಂಗಿಗಳಿಗೆ ಅಭೇದವಿರುವುದರಿಂದ 'ಮೂರ್ಧಾನಮ್' ಎಂದು ಪ್ರಯೋಗಿಸಲಾಗಿದೆ.

ಪೃಥಿವ್ಯಾ = ಪೃಥಿವಿ ಲೋಕಕ್ಕೆ, ಅರತಿಂ = ಪಾದಗಳುಳ್ಳ ಎಂದರ್ಥ. ಇಲ್ಲಿಯೂ ಕೂಡ ಅರತಿ ಶಬ್ದಕ್ಕೆ ಅರತಿಮಂತಂ' ಅಂಗಾಂಗಗಳ ಅಭೇದವಿವಕ್ಷೆಯಿಂದ ಅರ್ಥವನ್ನು ತಿಳಿಯಬೇಕು. 'ಅರತಿಂ' ಎಂಬ ಪದಕ್ಕೆ 'ಅರಂ ತರತಿ ಯೇನ ಅರತಿಃ' ಎಂಬ ನಿಷ್ಪತ್ತಿಯಂತೆ ಪಾದಗಳು ಎಂದರ್ಥ. ಯಾವುದರಿಂದ ಚೆನ್ನಾಗಿ ವ್ಯಾಪಿಸಲ್ಪಟ್ಟಿದೆಯೋ ಅದು ಎಂದರೆ 'ಪಾದಗಳು' ಎಂದರ್ಥ. ಸಕಲರಲ್ಲಿಯೂ ವಿಷ್ಣು ನೆಲೆಸಿದ್ದಾನೆ ಎಂಬುದು ಅಭಿಪ್ರಾಯ.

ವೈಶ್ವಾನರನಿಗೆ ಆಹುತಿ ನೀಡುವರು

तत्वप्रदीपः – ऋते वेदे आ समन्ताद्व्यक्तमङ्गनेतारं (०मगनेतारं – पा) सम्यग्राजन्तं सर्वानतिशय्य स्थितं पातारं जनानामास्य 'आ' समन्ताद्-व्यञ्जयाञ्चक्रुरग्न्यादिदेवाः ।

ಅಥವಾ 'ಅರತಿ' ಶಬ್ದಕ್ಕೆ ಮತ್ತೊಂದು ಅರ್ಥ ಹೀಗಿದೆ - 'ಋತೇ' = ವೇದದಲ್ಲಿ, ಆ = ಚೆನ್ನಾಗಿ, ತಿ = ಅಭಿವ್ಯಕ್ತನಾದ, ಸಂಮ್ರಾಜಂ = ಚೆನ್ನಾಗಿ ಪ್ರಕಾಶಿಸುವ, ಎಲ್ಲರನ್ನು ದಾಟಿ ನೆಲೆಸಿರುವ ಸಕಲರನ್ನು ರಕ್ಷಣೆ ಮಾಡುವ ವೈಶ್ವಾನರನನ್ನು ದೇವತೆಗಳು ತಮ್ಮ ಮುಖವನ್ನಾಗಿ ಮಾಡಿಕೊಂಡರು. (ವೇದದಲ್ಲಿ ಚೆನ್ನಾಗಿ ಅಭಿವ್ಯಕ್ತನಾದ, ಚೆನ್ನಾಗಿ ಪ್ರಕಾಶಿಸುವ ಎಲ್ಲರನ್ನೂ ದಾಟಿ ನೆಲಸಿರುವ ಸಕಲರನ್ನು ರಕ್ಷಣೆ ಮಾಡುವ ವಿಷ್ಣುವನ್ನು ಅಗ್ನ್ಯಾದಿ ದೇವತೆಗಳು ಮನುಷ್ಯರ ಮುಖದಲ್ಲಿ ಹೋಮಿಸಿದರು.)

ವಿಶೇಷವಿಚಾರ - ಋಗ್ವೇದದ ಪೂರ್ಣ ಮಂತ್ರ ಹೀಗಿದೆ -

ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ
ವೈಶ್ವಾರನಮೃತಃ ಅಜಾತಮಗ್ನಿಂ ॥
ಕವಿಂ ಸಂರಾಜಮತಿಥಿಂ ಜನಾನಾಂ ।
ಆಸನ್ನಾಪಾತ್ರಂ ಜನಯಂತ ದೇವಾಃ ॥

ದಿವಃ = ಸ್ವರ್ಗಲೋಕಕ್ಕೆ ಕಾರಣವಾದ, ಮೂರ್ಧಾನಂ = ಶಿರೋಭಾಗವುಳ್ಳ, ಪೃಥಿವ್ಯಾಃ = ಪೃಥಿವಿ ಲೋಕಕ್ಕೆ ಕಾರಣವಾದ, ಅರತಿಂ = ಪಾದಗಳುಳ್ಳ , ಋತೇ = ವೇದದಲ್ಲಿ, ಆ = ಚೆನ್ನಾಗಿ, ಜಾತಂ = ಅಭಿವ್ಯಕ್ತನಾದ, ಅಗ್ನಿಂ = ಪ್ರತಿಯೊಂದು ಅಂಗಗಳಿಗೆ ಪ್ರವರ್ತಕನಾದ, ಸಂರಾಜಂ = ಚೆನ್ನಾಗಿ ಪ್ರಕಾಶಿಸುವ, ಕವಿಂ = ಜ್ಞಾನಿಯಾದ, ಅತಿಥಿಂ = ಎಲ್ಲವನ್ನೂ ದಾಟಿ ನಿಂತಿರುವ,

ಪಾತ್ರಂ = ರಕ್ಷಕನಾದ, ವೈಶಾನರಂ = ವೈಶ್ವಾನರನನ್ನು, ಜನಾನಾಂ = ಪ್ರಜೆಗಳ, ಆಸನ್ = ಮುಖದಲ್ಲಿ, ಆ = ಚೆನ್ನಾಗಿ, ದೇವಾಃ = ದೇವತೆಗಳು, ಜನಯಂತ = ಮಾಡಿಕೊಂಡರು.

ಸೂತ್ರದ ಆದಿಪದದಿಂದ ಹೇಳಲ್ಪಟ್ಟ ಅಗ್ನಿಯ ಗಮಕಗಳು

तत्वप्रदीपः – ''वैश्वानरे तद्धुतं भवति' इत्यादि च श्रुत्यन्तरे हुतस्थानत्वमग्निलिङ्गम् । 'हृदयं गार्हपत्यः' इत्यादौ हृदयस्थो गार्हपत्यपदवाच्य इत्याद्यवगन्तव्यम् । 'येनेदमन्नं पच्यते यदिदमद्यते' इति वाजसनेयके । पाचकत्वेनान्तःप्रतिष्ठानं प्रधानलिङ्गत्वेनाभिमतत्वात् पृथगुक्तम् ।

'ವೈಶ್ವಾನರೇ ತದ್ಧುತಂ ಭವತಿ' 'ವೈಶ್ವಾನರನಲ್ಲಿ ಅದನ್ನು ಹೋಮಿಸಿದಂತಾಗುತ್ತದೆ' ಇತ್ಯಾದಿಯಾಗಿ ಮತ್ತೊಂದು ಶ್ರುತಿಯಲ್ಲಿ ಹುತಸ್ಥಾನತ್ವವನ್ನು ಅಗ್ನಿಲಿಂಗವೆಂದು ಹೇಳಲಾಗಿದೆ. 'ಹೃದಯಂ ಗಾರ್ಹಪತ್ಯಃ' ಇತ್ಯಾದಿ ಶ್ರುತಿಯಲ್ಲಿ ಹೃದಯದಲ್ಲಿರುವವನು ಗಾರ್ಹಪತ್ಯಪದ-ವಾಚ್ಯನಾದವನೆಂದು ತಿಳಿಯಬೇಕು. 'ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ' ಎಂಬುದು ಬೃಹದಾರಣ್ಯಕದಲ್ಲಿರುವ ವಾಕ್ಯವಾಗಿದೆ. ಪಾಚಕತ್ವಧರ್ಮಮೂಲಕವಾಗಿ ಅಂತಃಪ್ರತಿಷ್ಠಾನತ್ವವು ಪ್ರಧಾನಲಿಂಗವಾಗಿದೆ. ಆದ್ದರಿಂದ ಸೂತ್ರದಲ್ಲಿ ಇದನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದಾರೆ.

ವಿವರಣೆ - ಅಥ ಸ ಯ ಇದಮವಿದ್ವಾನಗ್ನಿಹೋತ್ರಂ ಜುಹೋತಿ ಯಥಾ ಅಂಗಾರಾನಪೋಹ್ಯ ಭಸ್ಮನಿ ಜುಹುಯಾತ್ ತಾದೃಕ್ ತತ್ ಸ್ಯಾತ್ ॥ ಅಥ ಯ ಏತದೇವಂ ವಿದ್ವಾನಗ್ನಿಹೋತ್ರಂ ಜುಹೋತಿ ತಸ್ಯ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷ್ವಾತ್ಮಸು ಹುತಂ ಭವತಿ ।

ಉಣ್ಣುವ ಯಾವ ವ್ಯಕ್ತಿಯು ಇಲ್ಲಿ ನಿರೂಪಿಸಿರುವಂತೆ ವೈಶ್ವಾನರಸ್ವರೂಪ, ಪ್ರಾಣಾಹುತಿಯಿಂದ ತೃಪ್ತರಾಗುವ ದೇವತೆಗಳು ಇವೇ ಮೊದಲಾದವರನ್ನರಿಯದೆ ಪ್ರಾಣಾಗ್ನಿ-ಹೋತ್ರವನ್ನು ನಡೆಸುತ್ತಾನೋ ಅಂತಹ ವ್ಯಕ್ತಿಯು ಅರ್ಪಿಸುವ ಪ್ರಾಣಾಹುತಿಯು ಜ್ವಲಿಸುವ ಅಗ್ನಿಯನ್ನು ಬಿಟ್ಟು ಕೇವಲ ಬೂದಿಯಲ್ಲಿ ಹೋಮ ಮಾಡಿದಂತೆ ವ್ಯರ್ಥವೆನಿಸುವುದು.

ವೈಶ್ವಾನರ ಸ್ವರೂಪಾದಿಗಳನ್ನು ಚೆನ್ನಾಗಿ ತಿಳಿದುಕೊಂಡು ಯಾರು ಪ್ರಾಣಾಗ್ನಿಹೋತ್ರವನ್ನು ಮಾಡುತ್ತಾನೋ ಅವನಿಗೆ ಎಲ್ಲಾ ಲೋಕಗಳಲ್ಲಿರುವ, ಎಲ್ಲಾ ಪ್ರಾಣಿಗಳ ಅಂತರ್ಗತರಾದ ಆತ್ಮರಲ್ಲಿ ಹೋಮ ಮಾಡಿದ ಫಲ ದೊರಕುತ್ತದೆ.

ತದ್ಯಥೈಷೀಕಾತೂಲಮಗ್ನೌ ಪ್ರೋತಂ ಪ್ರದೂಯೇತ ಏವಂ ಹೈವಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ ಯ ಏತದೇವಂ ವಿದ್ವಾನಗ್ನಿಹೋತ್ರಂ ಜುಹೋತಿ ॥ ತಸ್ಮಾದು ಹೈವಂವಿತ್ ಯದ್ಯಪಿ ಚಂಡಾಲಾಯೋಚ್ಛಿಷ್ಟಂ ಪ್ರಯಚ್ಛೇತ್ ಆತ್ಮನಿ ಹೈವಾಸ್ಯ ತತ್ ವೈಶ್ವಾನರೇ ಹುತಂ ಸ್ಯಾದಿತಿ ॥

ಯಾರು ಹಿಂದೆ ಹೇಳಿರುವಂತೆ ವೈಶ್ವಾನರಸ್ವರೂಪಾದಿಗಳನ್ನರಿತುಕೊಂಡು, ಪ್ರಾಣಾಗ್ನಿಹೋತ್ರವನ್ನು ಮಾಡುತ್ತಾನೋ ಅವನ ಪಾಪವೆಲ್ಲಾ ಬೆಂಕಿಯಲ್ಲಿ ಹಾಕಲ್ಪಟ್ಟ ಹುಲ್ಲು ಮತ್ತು ಹತ್ತಿ ಸುಟ್ಟು ಬೂದಿಯಾಗುವಂತೆ ನಿಶ್ಶೇಷವಾಗಿ ನಾಶವಾಗುವುದು.

ವೈಶ್ವಾನರನ ಜ್ಞಾನವು ಸಕಲಪಾಪಕ್ಷಯಕ್ಕೆ ಕಾರಣವಾದುದರಿಂದಲೇ, ಯಾವ ಚಂಡಾಲನ ಸ್ಪರ್ಶನೆಯು ಪಾಪಕ್ಕೆ ಕಾರಣವೋ ಅಂತಹ ಚಂಡಾಲನಿಗೆ ವೈಶ್ವಾನರೋಪಾಸಕನು ತನ್ನ ಉಚ್ಛಿಷ್ಟವನ್ನು ಕೊಟ್ಟರೂ ಅವನಿಗೆ ಅದರಿಂದ ಪಾಪಲೇಪವಾಗುವುದಿಲ್ಲ. ಇಷ್ಟೇ ಅಲ್ಲ, ಅದರಿಂದ ಚಂಡಾಲನ ಅಂತರ್ಯಾಮಿಯಾದ ವೈಶ್ವಾನರನಲ್ಲಿ ಹೋಮಿಸಿದಂತಾಗಿ ಮಹಾಪುಣ್ಯವೇ ಲಭಿಸುವುದು.

ತದೇಷ ಶ್ಲೋಕಃ -

ಯಥೇಹ ಕ್ಷುಧಿತಾ ಬಾಲಾಃ ಮಾತರಂ ಪರ್ಯುಪಾಸತೇ ।
ಏವಂ ಸರ್ವಾಣಿ ಭೂತಾನ್ಯಗ್ನಿಹೋತ್ರಮುಪಾಸತೇ ಇತಿ ಅಗ್ನಿಹೋತ್ರಮುಪಾಸತ ಇತಿ ।

ವೈಶ್ವಾನರೋಪಾಸನೆಯು ಸರ್ವಾಭೀಷ್ಟಪ್ರದಾಯಕ ಎಂಬ ವಿಷಯದಲ್ಲಿ ಈ ಶ್ಲೋಕ ಸಮ್ಮತಿಸುತ್ತಿದೆ -

ಹಸಿದ ಮಕ್ಕಳು ಹಸಿವೆಯನ್ನು ತಣಿಸಿಕೊಳ್ಳಲು ಹೇಗೆ ತಾಯಿಯ ಮೊರೆ ಹೊಕ್ಕುವರೋ ಹಾಗೆಯೇ, ತಮ್ಮ ತಮ್ಮ ಅಭೀಷ್ಟವನ್ನು ಸಾಧಿಸಲು ಬಯಸುವ ಎಲ್ಲರೂ ಪ್ರಾಣಾಗ್ನಿಹೋತ್ರದಿಂದ ವೈಶ್ವಾನರನ ಉಪಾಸನೆಗೈಯುತ್ತಾರೆ.

ತಾನ್ ಹೋವಾಚ 'ಏತೇ ವೈ ಖಲು ಯೂಯಂ ಪೃಥಗಿವೇಮಾತ್ಮಾನಂ ವೈಶ್ವಾನರಂ ವಿದ್ವಾಂಸೋऽಯನ್ನಮತ್ಥ । ಯಸ್ತ್ವೇತಮೇವಂ ಪ್ರಾದೇಶಮಾತ್ರಮಭಿವಿಮಾನಮಾತ್ಮಾನಂ ವೈಶ್ವಾನರಮುಪಾಸ್ತೇ ಸ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷ್ವಾತ್ಮಸ್ವನ್ನಮತ್ತಿ'॥

ನೀವೆಲ್ಲರೂ ವೈಶ್ವಾನರನಾಮಕ ಪರಮಾತ್ಮನ ಬೇರೆ ಬೇರೆ ಅವಯವಗಳನ್ನು ಮಾತ್ರ ತಿಳಿದು ಅದರ ಫಲವಾಗಿ ಯಥೇಷ್ಟ ಅನ್ನವನ್ನು ತಿನ್ನುತ್ತಿರುವಿರಿ. ಯಾರು ಪ್ರಾದೇಶದಷ್ಟಿರುವ ಹೃದಯಕಮಲದಲ್ಲಿ ಪ್ರಾದೇಶಪರಿಮಾಣದಿಂದ ಇದ್ದು, ಪ್ರಾದೇಶಮಾತ್ರನೆಂದೆನಿಸಿ ಕೊಂಡಿರುವ, ಸರ್ವತ್ರವ್ಯಾಪ್ತನಾದ ವೈಶ್ವಾನರನನ್ನು ಮುಂದೆ ಹೇಳಿರುವಂತೆ ಸುತೇಜ ಎಂದು ಮುಂತಾದ ಎಲ್ಲ ಅವಯವಗಳಿಂದ ಕೂಡಿ ಆರಾಧಿಸುವನೋ, ಅವನು ದೇವತಾ ಪುರುಷನಾಗಿದ್ದರೆ ಎಲ್ಲ ಲೋಕಗಳಲ್ಲಿ, ಎಲ್ಲ ಜಡ ಹಾಗೂ ಚೇತನರಲ್ಲಿ ಸನ್ನಿಹಿತನಾಗಿ ಎಲ್ಲ ಅನ್ನವನ್ನೂ ತಿನ್ನುವನು.

ತಸ್ಯ ಹ ವಾ ಏತಸ್ಯಾತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಃ । ಚಕ್ಷುರ್ವಿಶ್ವರೂಪಃ । ಪ್ರಾಣಃ ಪೃಥಗ್ವರ್ತ್ಮಾ । ಸಂದೇಹೋ ಬಹುಲಃ । ವಸ್ತಿರೇವ ರಯಿಃ । ಪೃಥಿವ್ಯೇವ ಪಾದೌ । ಉರ ಏವ ವೇದಿಃ । ಲೋಮಾನಿ ಬರ್ಹಿಃ । ಹೃದಯಂ ಗಾರ್ಹಪತ್ಯಃ । ಮನೋಽನ್ವಾಹಾರ್ಯಪಚನಃ । ಆಸ್ಯಮಾಹವನೀಯಃ ॥

ವೈಶ್ವಾನರನ ಶಿರಸ್ಸು ಸುತೇಜ, ಕಣ್ಣು ವಿಶ್ವರೂಪ, ಪ್ರಾಣವಾಯುವು ಪೃಥಗ್ವರ್ತ್ಮ, ಮಧ್ಯದೇಹವು ಬಹುಲ, ಕಟಿಪ್ರದೇಶವು ರಯಿ, ಪಾದಗಳು ಪೃಥಿವೀ ಎದೆಯು ಯಜ್ಞವೇದಿಯ ಅಭಿಮಾನಿದೇವತೆಗೆ ಯಜ್ಞಕುಂಡಕ್ಕೆ ಆಶ್ರಯವಾಗಿದ್ದು ಯಜ್ಞವೇದಿಕೆಯಲ್ಲಿರುತ್ತದೆ. ಹಾಗೆಯೇ ರೋಮಗಳು ಬರ್ಹಿಯಲ್ಲಿಯೂ, ಹೃದಯವು ಗಾರ್ಹಪತ್ಯಾಗ್ನಿಯಲ್ಲಿಯೂ, ಮನಸ್ಸು ಅನ್ವಾಹಾರ್ಯಪಚನದಲ್ಲಿಯೂ, ಮುಖವು ಆಹವನೀಯಾಗ್ನಿಯಲ್ಲಿಯೂ ಇರುತ್ತದೆ.

ವಿಶೇಷವಿಚಾರ - ಹಿಂದಿನ 'ಸ್ಮರ್ಯಮಾಣಂ ಅನುಮಾನಂ ಸ್ಯಾದಿತಿ' ಎಂಬ ಸೂತ್ರದಲ್ಲಿ ಗೀತೆಯ ಸಮಾಖ್ಯಾನದಿಂದ ವೈಶ್ವಾನರ ಶಬ್ದಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಸಮರ್ಥಿಸಲಾಯಿತು. ಆದರೆ ಇದು ಅಯುಕ್ತವಾಗಿದೆ. ಆದರೆ 'ಅಹಂ ವೈಶ್ವಾನರೋ ಭೂತ್ವಾ' ಎಂಬ ವಾಕ್ಯವು ಪ್ರಕೃತ ಛಾಂದೋಗ್ಯದ 'ವೈಶ್ವಾನರಮುಪಾಸ್ತೇ' ಎಂಬ ಮಾತಿಗೆ ಸಂವಾದವೇ ಅಲ್ಲ. ಆದ್ದರಿಂದ ಗೀತೆಯ ಆಧಾರದಿಂದ ಛಾಂದೋಗ್ಯದಿಂದ ವೈಶ್ವಾನರ ಶಬ್ದಪ್ರತಿಪಾದ್ಯನಾದವನು ವಿಷ್ಣುವೆಂದು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಆತ್ಮಶಬ್ದದ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ಸಮರ್ಥಿಸಲಾಯಿತು. ಇದೂ ಕೂಡ ಅಯುಕ್ತ. ಏಕೆಂದರೆ ಆತ್ಮಶಬ್ದಕ್ಕೆ ಒಳಗಿರುವವನು ಎಂದಷ್ಟೇ ಅರ್ಥ. ಅಗ್ನಿಯೂ ಕೂಡ ಅಂತರ್ಯಾಮಿಯಾಗಿರುವುದರಿಂದ ಆತ್ಮಶಬ್ದವು ಅಗ್ನಿಯಲ್ಲಿ ಸಾವಕಾಶವಾಗಿದೆ. ಮತ್ತು 'ಅಯಮಗ್ನಿರ್ವೈಶ್ವಾನರಃ ಇವೇ ಮೊದಲಾದ ಶ್ರುತಿಗಳೆಲ್ಲವೂ ಅಗ್ನಿಯನ್ನೇ ವೈಶ್ವಾನರ

ಎಂದು ಕರೆಯುತ್ತಿವೆ. ಅಂತಃಪ್ರತಿಷ್ಠಾನತ್ವ ಗಾರ್ಹಪತ್ಯತ್ವ ಮೊದಲಾದ ಲಿಂಗಗಳೂ ಕೂಡ ಅಗ್ನಿಯಲ್ಲೇ ಪ್ರಸಿದ್ಧವಾಗಿವೆ. ಹೀಗೆ ಅನೇಕ ಶ್ರುತಿಗಳು, ಅನೇಕ ಲಿಂಗಗಳು ಅಗ್ನಿಯಲ್ಲೇ ಇರುವುದರಿಂದ ವೈಶ್ವಾನರ ಶಬ್ದಪ್ರತಿಪಾದ್ಯನಾದವನು ಅಗ್ನಿಯಾಗುತ್ತಾನೆ. ವಿಷ್ಣುವಿನಲ್ಲಿ ಇರುವ ಆತ್ಮ ಶಬ್ದ ಹಾಗೂ ಭಗವದ್ಗೀತೆಯ ಸಂವಾದ ಇವೆರಡೂ ಕೂಡ ಸಾವಕಾಶವಾಗಿವೆ. ಆದ್ದರಿಂದ ವೈಶ್ವಾನರ ಶಬ್ದ ಪ್ರತಿಪಾದ್ಯನಾದವನು ಮಹಾವಿಷ್ಣು ಆಗುವುದಿಲ್ಲ, ಅಗ್ನಿಯೇ ಆಗುತ್ತಾನೆ ಎಂಬುದಾಗಿ 'ಶಬ್ದಾದಿಭ್ಯೋ ಅಂತಃಪ್ರತಿಷ್ಠಾನಾತ್' ಎಂಬ ಸೂತ್ರಭಾಗದಿಂದ ಪೂರ್ವಪಕ್ಷವನ್ನು ಮಾಡಿರುತ್ತಾರೆ.

ಸಕಲವೂ ಮಹಾವಿಷ್ಣುವಿನದ್ದೇ

तत्वप्रदीपः – सर्वकर्मा 'न ऋते त्वत्क्रियते' इत्यादेः । वज्रधरत्वादीनि सर्वाणि लिङ्गानि चास्यैवेति सर्वलिङ्ग एषः । तदिच्छयैव सर्वमिति सर्वकामः । गुणा ज्ञानानन्दादयः । धर्माः सर्वज्ञत्वादयः । भेदसंयोगविभागादिधर्मास्तदधीना इति वा 'सर्वधर्मा' । सर्वत्ररूपमस्येति सर्वरूपः । सर्वमस्य रूपं प्रतिमेति वा (सर्वरूपः - पा) । विश्वं पूर्णम्, आरादन्तिके, अरं सम्यक् ।।

ಸರ್ವನಾಮಾ, ಸರ್ವಕರ್ಮಾ ಎಂಬ ಮಹೋಪನಿಷತ್ತಿನ ಶ್ರುತಿವಾಕ್ಯಕ್ಕೆ ಹೀಗರ್ಥ - 'ನ ಋತೇ ತ್ವತ್ಕ್ರಿಯತೇ' 'ನಿನ್ನ ಹೊರತಾಗಿ ಯಾವ ಕ್ರಿಯೆಗಳೂ ಕೂಡ ನಡೆಯುವುದಿಲ್ಲ' ಎಂಬ ಆಧಾರದಿಂದ ಸಕಲ ಕರ್ಮಗಳೂ ಕೂಡ ಮಹಾವಿಷ್ಣುವಿನದ್ದೇ ಆಗಿವೆ.

'ಸರ್ವಲಿಂಗಃ' - ವಜ್ರಧರತ್ವ ಮೊದಲಾದ ಸಕಲಲಿಂಗಗಳು ಮಹಾವಿಷ್ಣುವಿನಲ್ಲಿಯೇ ಇರುತ್ತವೆ.

'ಸರ್ವಕಾಮಃ' - ವಿಷ್ಣುವಿನ ಇಚ್ಛೆಯಿಂದಲೇ ಎಲ್ಲವೂ ನಡೆಯುವುದರಿಂದ ಅವನು ಸರ್ವಕಾಮನೆಂದು ಕರೆಸಿಕೊಳ್ಳುತ್ತಾನೆ.

'ಸರ್ವಗುಣಃ' - ಜ್ಞಾನ, ಆನಂದ ಮೊದಲಾದ ಗುಣಗಳುಳ್ಳವನು ಮಹಾವಿಷ್ಣು ಆಗಿದ್ದಾನೆ.

'ಸರ್ವಧರ್ಮಃ' - ಸರ್ವಜ್ಞತ್ವ, ಸರ್ವಕರ್ತೃತ್ವ ಮೊದಲಾದ ಧರ್ಮಗಳುಳ್ಳವನು. ಭೇದ, ಸಂಯೋಗ, ವಿಭಾಗ ಮೊದಲಾದ ಧರ್ಮಗಳು ಸರ್ವಜ್ಞತ್ವಾದಿಗಳಂತೆ ಮಹಾವಿಷ್ಣುವಿನಲ್ಲಿ

ಇರುವುದಿಲ್ಲ. ಆದರೆ ಈ ಭೇದಾದಿಗುಣಗಳಿಗೆ ಮಹಾವಿಷ್ಣುವು ಸ್ವತಂತ್ರನಾಗಿರುವುದರಿಂದ ಅವನ ಅಧೀನವಾದ ಕಾರಣ, ಭೇದ, ಸಂಯೋಗ, ವಿಭಾಗ ಮೊದಲಾದ ಧರ್ಮಗಳುಳ್ಳವನು ಮಹಾವಿಷ್ಣುವೇ ಆಗಿದ್ದಾನೆಂದು ಹೇಳಬಹುದು.

'ಸರ್ವರೂಪಃ' - ಎಲ್ಲೆಡೆ ತುಂಬಿರುವನಾದ್ದರಿಂದ ಸರ್ವರೂಪನೆನಿಸಿದ್ದಾನೆ. ಅಥವಾ ಸಕಲ ಪದಾರ್ಥಗಳು ಇವನ ಪ್ರತಿಮೆಯಾಗಿರುವುದರಿಂದಲೂ ಇವನು ಸರ್ವರೂಪ ಎನಿಸಿದ್ದಾನೆ.

'ವಿಶ್ವಂ' - ಪೂರ್ಣನಾದವನು, ಆರಾತ್ = ಹೃದಯದಲ್ಲಿಯೇ, ಅರಮ್ = ಚೆನ್ನಾಗಿ ಉಪಾಸನೆಗೆ ಅರ್ಹನು.

ಉದ್ದಾಲಕರಿಗೆ ಅಶ್ವಪತಿರಾಜನಿಂದ ವೈಶ್ವಾನರನ ಉಪದೇಶ

तत्वप्रदीपः – अनात्तत्वादनात्मान इत्यादिना 'असम्भवात्' इति सूत्रावयवं व्याचष्टे । को न आत्मा किं ब्रह्मेति मीमांसमानैर्महाशालैर्महामुनिभिरुद्दालकोद्दिष्टैस्तद्युक्तैः परिपृष्टो राजाऽश्वपतिर्वैश्वानरम् उपदिदेश ।

'ಅನಾತ್ತತ್ವಾತ್ ಅನಾತ್ಮನಃ' ಇತ್ಯಾದಿ ಭಾಷ್ಯದ ಮಾತಿನಂತೆ 'ಅಸಂಭವಾತ್' ಇತ್ಯಾದಿ ಸೂತ್ರದ ಅವಯವವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. 'ಕೋ ನ ಆತ್ಮಾ ಕಿಂ ಬ್ರಹ್ಮ' ಎಂಬುದಾಗಿ ಮಹಾಮುನಿಗಳಾದ ಉದ್ದಾಲಕರು ಜಿಜ್ಞಾಸೆ ಮಾಡುತ್ತಿರುವಾಗ ರಾಜನಾದ ಅಶ್ವಪತಿಯು ವೈಶ್ವಾನರನನ್ನು ಉಪದೇಶ ಮಾಡಿದನು.

ವಿಶೇಷವಿಚಾರ- ಯಾವಯಾವದೇವತೆಗಳಲ್ಲಿಯಾವಗುಣ, ಧರ್ಮ, ರೂಪಗಳೆಲ್ಲವೂ ಇವೆಯೋ, ಅವೆಲ್ಲವೂ ಪರಮಾತ್ಮನಲ್ಲಿಯೇ ಪರಮಮುಖ್ಯವೃತ್ತಿಯಲ್ಲಿರುತ್ತವೆ. ಆದ್ದರಿಂದ ಅಗ್ನಿಪರವಾದ ಶ್ರುತಿಯ ವಿರೋಧಕ್ಕೆ ಅವಕಾಶವಿಲ್ಲ. ಹಾಗಾದರೆ ಅಗ್ನಿಯಲ್ಲೇಕೆ ಅಷ್ಟೊಂದು ಲಿಂಗಗಳನ್ನು ಹೇಳಿದ್ದಾರೆಂದರೆ ಆ ಲಿಂಗಗಳೂ ಕೂಡ ವಿಷ್ಣುವಿನ ಅಧೀನವಾದ್ದರಿಂದ ಮತ್ತು ಆ ಲಿಂಗಗಳಿಂದ ಕೂಡಿರುವ ವಿಷ್ಣುವನ್ನೇ ಉಪಾಸನೆ ಮಾಡಬೇಕೆಂಬ ಉದ್ದೇಶದಿಂದ ಶ್ರುತಿಯಲ್ಲಿ ಲಿಂಗಗಳನ್ನು ಹೇಳಿರುತ್ತಾರೆ.

'ಅಥ ಹೇಮಮಾತ್ಮಾನಂ' ಎಂಬ ಶ್ರುತಿಗೆ ಹೀಗರ್ಥ - ಅಥ = ಅನಂತರ, ಹೇಮಂ = ಬಂಗಾರದ ವರ್ಣದಲ್ಲಿರುವ, ಇಮಂ = ಈ, ಆತ್ಮಾನಂ = ಸಕಲ ಸ್ವಾಮಿಯಾದ,

ಅಣೋರಣೀಯಾಸಂ = ಸೂಕ್ಷ್ಮವಸ್ತುಗಳಿಗಿಂತಲೂ ಸೂಕ್ಷ್ಮನಾದ, ಪರತಃಪರಮ್ = ಶ್ರೇಷ್ಠರಿಗೂ ಶ್ರೇಷ್ಠನಾದ, ವಿಶ್ವಂ = ಪೂರ್ಣನಾದ, ಹರಿಂ = ವಿಷ್ಣುವನ್ನು, ಇತಿ = ಹೀಗೆ, ಉಪಾಸೀತ = ಧ್ಯಾನಮಾಡಬೇಕು. ಸರ್ವಕರ್ಮಾ = 'ನ ಋತೇತ್ವತ್ಕ್ರಿಯತೇ' ಎಂಬ ಶ್ರುತಿಯಂತೆ ಎಲ್ಲಾ ಕ್ರಿಯೆಗಳನ್ನು ತಾನೇ ನಡೆಸುವವನು. ಸರ್ವನಾಮಾ = ರುದ್ರ, ಇಂದ್ರ ಮೊದಲಾದ ಸಕಲ ನಾಮಗಳುಳ್ಳವನು. ಸರ್ವಲಿಂಗಃ = ವಜ್ರಧರತ್ವ ಮೊದಲಾದ ಸಕಲಧರ್ಮಗಳುಳ್ಳವನು. ಸರ್ವಕಾಮಃ = ತನ್ನ ಇಚ್ಛೆಯಿಂದಲೇ ಸಕಲ ಕ್ರಿಯೆಗಳನ್ನು ನಡೆಸುವವನು, ಸರ್ವರೂಪಃ = ಎಲ್ಲೆಡೆ ತುಂಬಿರುವವನು ಹಾಗೂ ಎಲ್ಲಾ ವಸ್ತುಗಳನ್ನು ಪ್ರತೀಕವಾಗಳುಳ್ಳವನು. ಸಃ = ಅಂಥ, ಏತಂ = ಈ ವಿಷ್ಣುವುನ್ನು, ಯಃ = ಅರ್ಹನಾದ ವ್ಯಕ್ತಿಯು, ವಿಶ್ವಂ = ವ್ಯಾಪ್ತನಾದ, ಆತ್ಮಾನಂ = ಆತ್ಮನೆನಿಸಿದ, ಏತಂ = ಈ, ಹರಿಂ = ಶ್ರೀಹರಿಯನ್ನು, ಅರಂ = ಚೆನ್ನಾಗಿ, ಅರಾತ್ = ತನ್ನ ಹೃದಯದಲ್ಲಿಯೇ, ಉಪಾಸ್ತೇ = ಧ್ಯಾನ ಮಾಡುತ್ತಾನೋ, ತಸ್ಯ = ಅಂಥ ಸಾಧಕನಿಗೆ, ಸರ್ವೇಷು ಲೋಕೇಷು = ಎಲ್ಲಾ ಲೋಕಗಳಲ್ಲಿ ಪ್ರವೇಶವು, ಸರ್ವೇಷು ಭೂತೇಷು = ಎಲ್ಲಾ ಭೂತಗಳಲ್ಲಿ ಪ್ರೀತಿಯನ್ನು ಗಳಿಸುತ್ತಾನೆ, ಸರ್ವೇಷು ದೇವೇಷು = ಸಕಲ ದೇವತೆಗಳ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಸರ್ವೇಷು ವೇದೇಷು = ಸಕಲ ವೇದಗಳ ಮುಖ್ಯಾರ್ಥವನ್ನು ಬಲ್ಲವನಾಗುತ್ತಾನೆ. ಹೀಗೆ ಕಾಮಚಾರೋ ಭವತಿ = ಸ್ವೇಚ್ಛಾವೃತ್ತಿಯನ್ನು ಪಡೆಯುತ್ತಾನೆ.

ಆತ್ಮ ಹಾಗೂ ಬ್ರಹ್ಮ ಯಾರೋ, ಅವನೇ ವೈಶ್ವಾನರ

तत्वप्रदीपः – नच विष्णोरन्येषामात्मत्वं ब्रह्मत्वं च सम्भवति । अनात्तत्वादित्यादिवचनात् । तस्माद्विष्णोरेव वैश्वानरः ।

ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಆತ್ಮತ್ವವಾಗಲೀ, ಬ್ರಹ್ಮತ್ವವಾಗಲೀ ಇರಲು ಸಾಧ್ಯವೇ ಇಲ್ಲ. 'ಅನಾತ್ತತ್ವಾತ್' ಇತ್ಯಾದಿ ಪ್ರಮಾಣಶ್ಲೋಕವೇ ಈ ವಿಷಯದಲ್ಲಿ ಆಧಾರವಾಗಿದೆ. ಆದ್ದರಿಂದ ಮಹಾವಿಷ್ಣುವೇ 'ವೈಶ್ವಾನರ' ಎಂದು ಕರೆಸಿಕೊಳ್ಳುತ್ತಾನೆ.

ವಿಶೇಷವಿಚಾರ – 'ದೃಷ್ಟ್ಯುಪದೇಶಾತ್' ಎಂಬ ಹೇತುವಿನಿಂದ ಸೂತ್ರಕಾರರು ಅಗ್ನಿಶಬ್ದ ಮೊದಲಾದ ನಾಮಗಳೆಲ್ಲವೂ ವಿಷ್ಣುಪರವಾಗಿವೆ ಎಂದು ಪಾಚಕತ್ವ ಮೊದಲಾದ ಧರ್ಮಗಳೂ ಕೂಡ ವಿಷ್ಣುಪರವಾಗಿವೆ ಎಂದು ಸಮರ್ಥಿಸಿದರು. ಮತ್ತು ಪೂರ್ವಪಕ್ಷದಲ್ಲಿ ಹೇಳಿದ ಶ್ರುತಿ-ಲಿಂಗಗಳೆಲ್ಲವೂ ಸಾವಕಾಶವಾಗಿವೆ ಎಂಬುದನ್ನೂ ಕೂಡ ಪ್ರತಿಪಾದನೆ ಮಾಡಿದರು. ಪ್ರಕೃತ 'ಅಸಂಭವಾತ್' ಎಂಬುದರಿಂದ ಅಗ್ನಿಯು ವೈಶ್ವಾನರನಾದಲ್ಲಿ ಬಾಧಕವನ್ನು ಹೇಳುತ್ತಿದ್ದಾರೆ. ಈ 'ಅಸಂಭವಾತ್' ಎಂಬುದಕ್ಕೆ ಎರಡು ಅಭಿಪ್ರಾಯವನ್ನು

ಭಾಷ್ಯದಲ್ಲಿ ವಿವರಿಸಿದ್ದಾರೆ.

೧. ವೈಶ್ವಾನರನು ವಿಷ್ಣು ಎಂದು ನಿರ್ಧಾರ ಮಾಡಲು ಆತ್ಮಶಬ್ದವು ಆಧಾರವಾಗಿದೆ. ಈ ಆತ್ಮಶಬ್ದವು ಅಗ್ನಿಯಲ್ಲಿ ಅತ್ಯಂತ ಅಸಂಭಾವಿತವಾಗಿರುವುದರಿಂದ ಅಗ್ನಿಯು ವೈಶ್ವಾನರನಾಗುವುದಿಲ್ಲ.

೨. ಈ ಪ್ರಕರಣದ ಪ್ರಾರಂಭದಲ್ಲಿ ಆತ್ಮ ಹಾಗೂ ಬ್ರಹ್ಮರ ಬಗ್ಗೆ ಪ್ರಶ್ನೆ ಇದೆ. ಅದರ ಬಗ್ಗೆ ಉತ್ತರವೂ ಕೂಡ ಇರುತ್ತದೆ. ಈ ಕಾರಣದಿಂದ ಸಮಗ್ರ ಪ್ರಕರಣವು ವಿಷ್ಣುಪರವಾಗುತ್ತದೆ ಎಂದು ತಿಳಿಯುತ್ತದೆ. ಆದ್ದರಿಂದ ಅಗ್ನಿಯು ವೈಶ್ವಾನರನೆಂದು ಎಂದು ತಿಳಿಯುವುದು ಅತ್ಯಂತ ಅಸಂಭಾವಿತವಾಗಿದೆ.

ಬೇರೆಯವರು ಸ್ವತಂತ್ರರಲ್ಲದ ಕಾರಣ ಆತ್ಮರಾಗಲು ಸಾಧ್ಯವಿಲ್ಲ. ಗುಣಗಳಲ್ಲಿ ಅಲ್ಪರಾದುದರಿಂದ ಬ್ರಹ್ಮರೂ ಕೂಡ ಆಗಲು ಸಾಧ್ಯವಿಲ್ಲ. ಆದ್ದರಿಂದ ಆತ್ಮ ಹಾಗೂ ಬ್ರಹ್ಮ ಎರಡೂ ಶಬ್ದಗಳು ಮಹಾವಿಷ್ಣುವಿನಲ್ಲಿ ನಿರವಕಾಶವಾಗಿವೆ ಎಂಬುದನ್ನು 'ಅನಾತ್ತತ್ವಾತ್' ಎಂಬ ಪ್ರಮಾಣವಾಕ್ಯವು ನಿರ್ಧರಿಸುತ್ತಿದೆ.

'ತಸ್ಯ ಹ ವಾ' ಇತ್ಯಾದಿ ಶ್ರುತ್ಯರ್ಥ

तत्वप्रदीपः – 'तस्य ह वा एतस्य आत्मनो वैश्वानरस्य मूर्धैव सुतेजाश्चक्षुर्विश्वरूपः प्राणः पृथग्वर्त्मा सन्दोहो(सन्देहो –पा) बहुलो वस्तिरेव रैः पृथिव्येव पादौ' इत्यादेरर्थस्तु –

क्रीडात्मकत्वाद् द्वयाख्यं च सुतेजाश्चातितेजसा(सः-पा) ।
स्वर्गाधारं शिरो विष्णोः सर्वरूपातिदर्शनात् ।।

'ತಸ್ಯ ಹ ವಾ ಏತಸ್ಯ ಆತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾ ಸಂದೋಹೋ ಬಹುಲೋ ವಸ್ತಿರೇವ ರೈಃ ಪೃಥಿವ್ಯೇವ ಪಾದೌ' 'ಆ ವೈಶ್ವಾನರನ ಶಿರಸ್ಸು ಸುತೇಜ, ಕಣ್ಣು ವಿಶ್ವರೂಪ, ಪ್ರಾಣವಾಯು ಪೃಥಗ್ವರ್ತ್ಮಾ, ಮಧ್ಯದೇಹವು ಬಹುಲ, ಕಟಿಪ್ರದೇಶವು, ಪಾದಗಳು ಪೃಥಿವಿ, ಎದೆಯು ಯಜ್ಞವೇದಿಯ ಅಭಿಮಾನಿದೇವತೆಗೆ ಯಜ್ಞಕುಂಡಕ್ಕೆ ಆಶ್ರಯವಾಗಿದ್ದು, ಯಜ್ಞವೇದಿಕೆಯಲ್ಲಿರುತ್ತದೆ.' ಇತ್ಯಾದಿ ಶ್ರುತಿಯ ಅರ್ಥ ಹೀಗಿದೆ -

'ಕ್ರೀಡಾತ್ಮಕತ್ವಾದ್ ದ್ಯ್ವಾಖ್ಯಂ ಚ ಸುತೇಜಾಶ್ಚಾತಿತೇಜಸಾ ।
ಸ್ವರ್ಗಾಧಾರಂ ಶಿರೋ ವಿಷ್ಣೋಃ ಸರ್ವರೂಪಾತಿದರ್ಶನಾತ್ ॥'

ಪರಮಾತ್ಮನ ಶಿರಸ್ಸು ಕ್ರೀಡಾಸ್ವರೂಪಿಯಾದುದರಿಂದಲೂ, ಸ್ವರ್ಗಕ್ಕೆ ಆಧಾರವಾಗಿರುವುದರಿಂದಲೂ ದಿವ್ ಎಂಬ ಹೆಸರುಳ್ಳದ್ದು, ಅತಿಶಯವಾದ ತೇಜಸ್ಸಿರುವ ಕಾರಣ ಇದಕ್ಕೆ 'ಸುತೇಜ' ಎಂಬ ಹೆಸರೂ ಇದೆ.

ವಿಶೇಷವಿಚಾರ - 'ಔಪಮನ್ಯೋ ಕಂ ತ್ವಮಾತ್ಮಾನಮುಪಾಸ್ಸ' ಇತಿ । 'ದಿವಮೇವ ಭಗವೋ ರಾಜನ್' ಇತಿ ಹೋವಾಚ । ಏಷ ವೈ ಸುತೇಜಾ ಆತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ । ತಸ್ಮಾತ್ ತವ ಸುತಂ ಪ್ರಸುತಮಾಸುತಂ ಕುಲೇ ದೃಶ್ಯತೇ । ಅತ್ಸ್ಯನ್ನಂ ಪಶ್ಯಸಿ ಪ್ರಿಯಮ್ । ಅತ್ತ್ಯನ್ನಂ, ಪಶ್ಯತಿ ಪ್ರಿಯಂ, ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ, ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ । ಮೂರ್ಧಾ ತ್ವೇಷ ಆತ್ಮನ' ಇತಿ ಹೋವಾಚ । ಮೂರ್ಧಾ ತೇ ವ್ಯಪತಿಷ್ಯತ್ ಯನ್ಮಾಂ ನಾಗಮಿಷ್ಯ' ಇತಿ ।

'ಉಪಮನ್ಯುವಿನ ಮಗನಾದ ಪ್ರಾಚೀನಶಾಲನೇ ! ನೀನು ವೈಶ್ವಾನರನಾಮಕ ಪರಮಾತ್ಮನನ್ನು ಯಾವ ಹೆಸರಿನಿಂದ ಉಪಾಸನೆ ಮಾಡುತ್ತಿರುವಿ ?' ಎಂದು ರಾಜನು ಕೇಳಿದನು. ಆಗ ಪ್ರಾಚೀನಶಾಲನು 'ಪೂಜ್ಯನಾದ ರಾಜನೇ ! ಕ್ರೀಡಾರೂಪಿಯಾದುದರಿಂದ ದಿವ್ ಎಂದು ಕರೆಯಲ್ಪಡುವವನು ಮತ್ತು ಸ್ವರ್ಗಲೋಕಕ್ಕೆ ಆಧಾರನು ಎಂದು ವೈಶ್ವಾನರನನ್ನು ನಾನು ಉಪಾಸಿಸುತ್ತಿರುವೆನು' ಎಂದುತ್ತರಿಸಿದನು. ಆಗ ರಾಜನೆಂದನು 'ನೀನು ಉಪಾಸನೆ ಮಾಡುತ್ತಿರುವ ಈ ವೈಶ್ವಾನರನಾಮಕ ಪರಮಾತ್ಮನು ಸ್ವರ್ಗಲೋಕಾಧಾರನಾಗಿದ್ದನು ಅತಿ ತೇಜಸ್ವಿ ಆಗಿರುವುದರಿಂದ 'ಸುತೇಜ' ಎನಿಸಿದ್ದಾನೆ. ಆದ್ದರಿಂದಲೇ ನಿನ್ನ ಮನೆತನದಲ್ಲಿ ಸ್ವರ್ಗಸಾಧನವಾದ ಪ್ರಾತಃಸವನ, ಮಾಧ್ಯಂದಿನಸವನ, ತೃತೀಯ ಸವನಗಳು ನಿರಂತರ ಕಂಡು ಬರುತ್ತವೆ ಮತ್ತು ನಿನ್ನ ಕುಲದಲ್ಲಿ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳುಗಳ ಸಮೃದ್ಧಿಯು ಕಾಣಿಸಿಕೊಳ್ಳುವುದು. 'ನೀನೂ ಒಳ್ಳೆಯ ಜೀರ್ಣಶಕ್ತಿವುಳ್ಳವನಾಗಿ ಯಥೇಷ್ಟ ಅನ್ನವನ್ನು ಉಣ್ಣುವಿ, ಪ್ರಿಯವಾದುದನ್ನೇ ನೋಡುವಿ, ನಿನ್ನಂತೆ ಯಾರು ಈ ವೈಶ್ವಾನರನನ್ನು ಉಪಾಸಿಸುವನೋ ಅವನೂ ಯಥೇಷ್ಟ ಅನ್ನವನ್ನುಣ್ಣುತ್ತಾನೆ. ಪ್ರಿಯವಾದುದನ್ನೇ ನೋಡುತ್ತಾನೆ. ಅವನ ಕುಲದಲ್ಲಿ ಬ್ರಹ್ಮವರ್ಚಸ್ಸು ವೃದ್ಧಿಸುತ್ತದೆ. ನೀನು ಉಪಾಸಿಸುತ್ತಿರುವ ದ್ಯುಲೋಕದಲ್ಲಿದ್ದು ದ್ಯುನಾಮಕವೂ, ಸುತೇಜನಾಮಕವೂ ಆದ ಭಗವದ್ರೂಪವು ವೈಶ್ವಾನರನ ಶಿರಸ್ಸು ಮಾತ್ರ, ಸರ್ವಾವಯವವಲ್ಲ. ಇದನ್ನು ಅರಿಯಲು ನೀನು ನನ್ನಲ್ಲಿಗೆ ಬರದೇ ಇರುತ್ತಿದ್ದರೆ, ವೈಶ್ವಾನರನ ಶಿರಸ್ಸನ್ನು ಅರಿಯದಿದ್ದ ಅಪರಾಧದಿಂದ ನಿನ್ನ ಶಿರಸ್ಸು ಕೆಳಗೆ ಬೀಳುತ್ತಿತ್ತು ಎಂದು.

ಭಾಷ್ಯದಲ್ಲಿ 'ಇತ್ಯಾದಿನಾ ಯಃ ಪುರುಷಾಖ್ಯಃ' ಎಂದು ಹೇಳಿದ್ದಾರೆ. ಇಲ್ಲಿರುವ ಆದಿಪದದಿಂದ ಪುರುಷಸೂಕ್ತದಲ್ಲಿರುವ 'ತಥಾ ಲೋಕಾನ್ ಅಕಲ್ಪಯತ್' ಎಂಬ ಶ್ರುತಿಯ ತನಕ ವಾಕ್ಯಗಳನ್ನು ವಿವಕ್ಷಿಸಬೇಕು.

ಪುರುಷಸೂಕ್ತದಲ್ಲಿ ವಿಷ್ಣುವು ಹೇಗೆ ಪ್ರತಿಪಾದ್ಯನಾಗಿದ್ದಾನೋ, ಅದೇ ಕ್ರಮದಲ್ಲಿ ವೈಶ್ವಾನರ ವಿದ್ಯೆಯೂ ಕೂಡ ವಿಷ್ಣುವನ್ನು ಪ್ರತಿಪಾದನೆ ಮಾಡುತ್ತಿದೆ. ಅದು ಹೀಗೆ -

'ಮುಖಾದಿಂದ್ರಶ್ಚಾಗ್ನಿಶ್ಚ' ಎಂಬ ಪುರುಷಸೂಕ್ತವು ಮುಖಸ್ಥಾನದಲ್ಲಿರುವ ಶಿರಸ್ಸಿನಿಂದ ಅಗ್ನಿಯು ಹುಟ್ಟಿದನೆಂದು ಹೇಳುತ್ತಿದೆ. ಇದೇ ವಿಷಯವನ್ನು ವೈಶ್ವಾನರ ಪ್ರಕರಣವು 'ಮೂರ್ಧ್ನೈವ ಸುತೇಜಾಃ' ಎಂಬುದಾಗಿ ಶಿರಸ್ಸಿನಿಂದ ಅಗ್ನಿಯು ಜನನವನ್ನು ಪ್ರತಿಪಾದನೆ ಮಾಡುತ್ತಿದೆ. ಮತ್ತು 'ಸುತೇಜಾಃ' ಶಬ್ದದಿಂದ ಪ್ರಕಾಶರೂಪದಿಂದ ಅಗ್ನಿಯ ಜೊತೆ ದ್ಯುಲೋಕವನ್ನೂ ಕೂಡ ವಿವಕ್ಷಿಸಬೇಕು. ಆಗ 'ಶೀರ್ಷ್ಣೋದ್ಯೌಸ್ಸಮವರ್ತತ' ಎಂಬುದಾಗಿ ಪುರುಷಸೂಕ್ತವು ದ್ಯುಲೋಕವು ಶಿರಸ್ಸಿನಿಂದ ಹುಟ್ಟಿತು ಎಂದು ಹೇಳುತ್ತಿದೆ. ಇದನ್ನೇ 'ಮೂರ್ಧ್ನೈವ ಸುತೇಜಾಃ' ಎಂಬ ವಾಕ್ಯವು ಹೇಳುತ್ತಿದೆ. 'ಚಕ್ಷುರ್ವಿಶ್ವರೂಪಃ' ಎಂಬುದಾಗಿ ವೈಶ್ವಾನರ ಪ್ರಕರಣವು ಸೂರ್ಯನ ಜನನಕ್ಕೆ ಚಕ್ಷುರಿಂದ್ರಿಯವು ಕಾರಣವೆಂದು ಹೇಳುತ್ತಿದೆ. 'ವಿಶ್ವರೂಪ' ಶಬ್ದಕ್ಕೆ 'ಭಗವಂತನ ಕಣ್ಣು' ಎಂದರ್ಥ. ಅಥವಾ 'ವಿಶ್ವಂ ರೂಪಯತಿ' ಎಂಬ ನಿಷ್ಪತ್ತಿಯನ್ನು ಮಾಡಿದಾಗ ಸೂರ್ಯ ಎಂಬರ್ಥವು ತಿಳಿಯುತ್ತದೆ. ಸೂರ್ಯನು ಭಗವಂತನ ಕಣ್ಣಿನಿಂದ ಹುಟ್ಟಿದನಾದ್ದರಿಂದ ವಿಶ್ವರೂಪ ಎಂಬ ಹೆಸರು ಕಣ್ಣಿಗೆ ಬಂದಿತು. ಇದು 'ಚಕ್ಷೋಃ ಸೂರ್ಯೋ ಅಜಾಯತ' ಎಂಬ ಪುರುಷಸೂಕ್ತದ ಅರ್ಥವನ್ನೇ ಹೇಳುತ್ತಿದೆ.

'ಪ್ರಾಣಃ ಪೃಥಗ್ವರ್ತ್ಮಾ' ಎಂಬುದಾಗಿ ವೈಶ್ವಾನರ ಶ್ರುತಿಯು ಸರ್ವೇಂದ್ರಿಯಾಭಿಮಾನಿ ದೇವತೆಗಳಿಗಿಂತ ವೈಲಕ್ಷಣ್ಯವಾದ ದಾರಿಯುಳ್ಳವನು ಮುಖ್ಯಪ್ರಾಣನೆಂದು ಹೇಳುತ್ತಿದೆ. ನಿದ್ರಾಕಾಲದಲ್ಲಿ ಬೇರೆ ಇಂದ್ರಿಯಾಭಿಮಾನಿದೇವತೆಗಳು ನಿಷ್ಕ್ರಿಯವಾಗಿದ್ದರೂ ವಾಯುದೇವನು ಪ್ರಾಣವಾಯುವಿನ ಮೂಲಕ ಸಕ್ರಿಯನಾಗಿರುವುದರಿಂದ 'ಪೃಥಗ್ವರ್ತ್ಮಾ' ಎಂದು ಕರೆಸಿಕೊಳ್ಳುವನು. 'ಪ್ರಾಣದ್ವಾಯುರಜಾಯತ' ಪುರುಷಸೂಕ್ತವೂ ಕೂಡ ಇದನ್ನೇ ಪ್ರತಿಪಾದನೆ ಮಾಡುತ್ತಿದೆ.

ಹೀಗೆ ವೈಶ್ವಾನರ ಪ್ರಕರಣವು ಪುರುಷಸೂಕ್ತದಲ್ಲಿರುವ ವಿಷಯವನ್ನೇ ಪ್ರತಿಪಾದನೆ ಮಾಡುತ್ತಿರುವುದರಿಂದ, ಪುರುಷಸೂಕ್ತ ಪ್ರತಿಪಾದ್ಯನಾದ ನಾರಾಯಣನೇ ವೈಶ್ವಾನರ ಪ್ರಕರಣದಿಂದಲೂ ಕೂಡ ಪ್ರತಿಪಾದ್ಯನಾಗುತ್ತಾನೆ.

ಭಾಷ್ಯದಲ್ಲಿ ಶ್ರೀಮದಾಚಾರ್ಯರು 'ತದ್ವಿಧಮಪಿ' ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ 'ತದ್ವಿಧಮೇವ' ಎಂದು ಹೇಳುತ್ತಾರೆ. ಅಪಿ ಶಬ್ದಕ್ಕೆ ಅವಧಾರಣಾರ್ಥವನ್ನು ತಿಳಿಯಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಥವಾ 'ಅಪಿ' ಶಬ್ದಕ್ಕೆ ಸಮುಚ್ಚಾಯಕ ಎಂಬರ್ಥವನ್ನು ವಿವಕ್ಷಿಸಿದರೂ ಹಿಂದೆ ಹೇಳಿದ 'ಅಸಂಭವಾತ್' ಮತ್ತು 'ಅಂತಪ್ರತಿಷ್ಠಾನಾತ್' ಮೊದಲಾದ ಹೇತುಗಳನ್ನು ಸಮುಚ್ಚಯ ಮಾಡಬೇಕು.

ಸೂತ್ರದಲ್ಲಿರುವ 'ಚ' ಶಬ್ದಕ್ಕೆ ಶ್ರೀಮದಾಚಾರ್ಯರು 'ಸಕಲವೇದತಂತ್ರಪುರಾಣಾದಿಷು ವಿಷ್ಣುಪರತ್ವಮ್ ಪುರುಷಸೂಕ್ತಸ್ಯ ದರ್ಶಯತಿ' ಎಂದು ವ್ಯಾಖ್ಯಾನ ಮಾಡಿದ್ದಾರೆ. ಸಕಲವೇದ ಎಂದು ಹೇಳಿರುವುದರಿಂದ ಎಲ್ಲಾ ಬಗೆಯ ವೇದಗಳನ್ನು ವಿವಕ್ಷಿಸಬೇಕು. ಸಕಲತಂತ್ರ ಎಂಬುದರಿಂದ ಪಂಚರಾತ್ರಸಂಹಿತೆ, ಬೃಹತ್‌ಸಂಹಿತೆ ಮೊದಲಾದ ತಾತ್ವಿಕಾರ್ಥವನ್ನು ನೀಡುವ ಮೊದಲಾದ ತಾಮಸ ಪರವಾದ ತಂತ್ರಗಳನ್ನು ಹಾಗೂ ಸಕಲಪುರಾಣಾನಾಂ ಎಂಬ ಪದದಿಂದ ಸಾತ್ವಿಕಪುರಾಣವಷ್ಟೇ ಅಲ್ಲದೇ ರಾಜಸಪುರಾಣ ಹಾಗೂ ತಾಮಸಪುರಾಣಗಳನ್ನೂ ಕೂಡ ಸಂಗ್ರಹಿಸಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲದರಲ್ಲಿಯೂ ಪುರುಷಸೂಕ್ತವು ವಿಷ್ಣುಪರವೆಂದೇ ಸಮರ್ಥಿಸಲಾಗಿದೆ.

ವೇದವನ್ನು ಬಿಟ್ಟು, ಪುರಾಣವನ್ನು ಮೊದಲು ಉಲ್ಲೇಖ ಮಾಡಿರುವುದರಿಂದ ಪುರಾಣಗಳ ಆಧಾರದಿಂದ ವೇದಗಳನ್ನು ವ್ಯಾಖ್ಯಾನಮಾಡಬೇಕೆಂಬ ಪ್ರಮೇಯವನ್ನೂ ಕೂಡ ಶ್ರೀಮದಾಚಾರ್ಯರು ತಿಳಿಸಿರುತ್ತಾರೆ. ಬ್ರಾಹ್ಮಪುರಾಣವು ರಾಜಸ ಅರ್ಥವನ್ನು ಅಥವಾ ತಾಮಸ ಅರ್ಥವನ್ನು ಹೆಚ್ಚಾಗಿ ಹೇಳುವುದರಿಂದ ಅದನ್ನೇ ಶ್ರೀಮದಾಚಾರ್ಯರು ಇಲ್ಲಿ ಉಲ್ಲೇಖ ಮಾಡಿರುತ್ತಾರೆ.

ಪ್ರಚಲಿತ ಪಾಠದಲ್ಲಿ 'ಅಂತಃ' ಎಂಬ ಶಬ್ದವು ಕೇಳಿಸುತ್ತಿಲ್ಲ. 'ಆದಿಃ' 'ಅನಾದಿಃ' ಎಂದು ಹೇಳಿದಂತೆ, 'ಅನಂತ', 'ಅಂತಃ' ಎಂಬೆರಡು ಪದಗಳನ್ನೂ ಕೂಡ ಸ್ಪಷ್ಟವಾಗಿ ತಿಳಿಯಬೇಕು.

ವೈಶ್ವಾನರನ ಕಣ್ಣಿನ ಉಪಾಸನೆ

तत्वप्रदीपः –

चक्षुस्तु विश्वरूपाख्यमादानादायुषामपि ।
आदित्याख्यं च सूर्यस्याप्याश्रयं सर्वदा स्मृतम् ।।

ಅನುವಾದ -

..... ಸರ್ವರೂಪಾತಿ ದರ್ಶನಾತ್ ।
ಚಕ್ಷುಸ್ತು ವಿಶ್ವರೂಪಾಖ್ಯಮಾದಾನಾತ್ ಆಯುಷಾಮಪಿ ।
ಆದಿತ್ಯಾಖ್ಯಂ ಚ ಸೂರ್ಯಸ್ಯಾಪ್ಯಾಶ್ರಯಂ ಸರ್ವದಾ ಸ್ಮೃತಮ್ ॥

ಪರಮಾತ್ಮನ ಕಣ್ಣು ಎಲ್ಲಾ ವಸ್ತುಗಳನ್ನೂ ವಿಶೇಷವಾಗಿ ನೋಡುತ್ತಿರುವುದರಿಂದಾಗಿ ವಿಶ್ವರೂಪ ಎಂದು ಹೆಸರುಳ್ಳದ್ದು. ಜನರ ಆಯುಷ್ಯವನ್ನು ತೆಗೆದುಕೊಳ್ಳುವುದರಿಂದಾಗಿ ಹಾಗೂ ಸೂರ್ಯನಿಗೆ ಆಶ್ರಯವಾಗಿರುವುದರಿಂದಾಗಿಯೂ ಆದಿತ್ಯನೆಂದೂ ಅದು ಕರೆಯಲ್ಪಡುತ್ತದೆ

ವಿಶೇಷವಿಚಾರ - ಅಥ ಹೋವಾಚ ಸತ್ಯಯಜ್ಞಂ ಪೌಲುಷಿಂ 'ಪ್ರಾಚೀನ ಯೋಗ್ಯ ! 'ಕಂ ತ್ವಮಾತ್ಮಾನಂ ಉಪಾಸ್ಸ' ಇತಿ । 'ಆದಿತ್ಯಮೇವ ಭಗವೋ ರಾಜನ್' ಇತಿ ಹೋವಾಚ । 'ಏಷ ವೈ ವಿಶ್ವರೂಪ ಆತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ । ತಸ್ಮಾತ್ ತವ ಬಹು ವಿಶ್ವರೂಪಂ ಕುಲೇ ದೃಶ್ಯತೇ । ಪ್ರವೃತ್ತೋ೭ಶ್ವತರೀರಥೋ ದಾಸೀ ನಿಷ್ಕಃ । ಅತ್ಸ್ಯನ್ನಂ । ಪಶ್ಯಸಿ ಪ್ರಿಯಂ । ಅತ್ಯನ್ನಂ, ಪಶ್ಯತಿ ಪ್ರಿಯಂ ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ, ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ । ಚಕ್ಷುಷ್ಟ್ವೇತದಾತ್ಮನ ಇತಿ ಹೋವಾ । 'ಅಂಧೋಭವಿಷ್ಯೋ ನನ್ಮಾಂ ನಾಗಮಿಷ್ಯ' ಇತಿ ॥

ರಾಜನು ಅನಂತರ ಪುಲುಷನ ಮಗನಾದ ಸತ್ಯಯಜ್ಞನನ್ನು 'ಅನಾದಿಯೋಗ್ಯತೆಯುಳ್ಳ ನೀನು ವೈಶ್ವಾನರನಾಮಕ ಪರಮಾತ್ಮನನ್ನು ಯಾವ ಹೆಸರಿನಿಂದ ಉಪಾಸನೆ ಗೈಯುತ್ತಿರುವಿ ?' ಎಂದು ಪ್ರಶ್ನಿಸಿದನು.

'ಪೂಜ್ಯನಾದ ರಾಜನೇ ! ಆದಿತ್ಯನಲ್ಲಿದ್ದು ಜನರ ಆಯುಷ್ಯವನ್ನು ತೆಗೆದುಕೊಳ್ಳುವ ಕಾರಣ ಆದಿತ್ಯ ಎಂಬ ಹೆಸರುಳ್ಳವನೆಂದು ವೈಶ್ವಾನರನನ್ನು ನಾನು ಆರಾಧಿಸುತ್ತಿರುವೆನು' ಎಂದು ಸತ್ಯಯಜ್ಞನು ಉತ್ತರಿಸಿದನು. ಆಗ ರಾಜನು 'ನೀನು ಆರಾಧಿಸುತ್ತಿರುವ ಆದಿತ್ಯನಾಮಕವಾದ ಈ ವೈಶ್ವಾನರನ ರೂಪವು ಎಲ್ಲವನ್ನೂ ನೋಡುತ್ತಿರುವುದರಿಂದಾಗಿ ವಿಶ್ವರೂಪ ಎಂಬ ಹೆಸರುಳ್ಳದ್ದು ಆಗಿದೆ. ಹೀಗೆ ವಿಶ್ವರೂಪನೆಂದು ಹೆಸರು ಇರುವ ವೈಶ್ವಾನರನ ಸ್ವರೂಪವನ್ನು ಉಪಾಸಿಸುತ್ತಿರುವ ಕಾರಣ ನಿನ್ನ ಮನೆಯಲ್ಲಿ ನಾನಾವಸ್ತುಗಳ ಅತಿ ದೊಡ್ಡ ಸಂಗ್ರಹವು ಕಂಡುಬರುತ್ತಿದೆ. 'ನಿನ್ನ ಮನೆಯಲ್ಲಿ ಅಶ್ವತರೀ ಎಂಬ ವಿಶಿಷ್ಟಜಾತಿಯ ಕುದುರೆಯಿಂದ ಯುಕ್ತವಾದ ರಥವು ಪ್ರಾಪ್ತವಾಗಿದೆ. ದಾಸೀ ಸಮೂಹ ಹಾಗೂ ಬಹಳ ಸಂಪತ್ತು ಒದಗಿ ಬಂದಿದೆ. ಯಥೇಷ್ಟ ಅನ್ನವನ್ನು ನೀನು ಭಕ್ಷಿಸುತ್ತಿರುವಿ, ಪ್ರಿಯವಾದುದನ್ನೇ ನೋಡುತ್ತಿರುವಿ.

ವೈಶ್ವಾನರನನ್ನು ಇದೇ ರೀತಿಯಾಗಿ ವಿಶ್ವರೂಪನೆಂದು ಯಾರು ಪೂಜಿಸುವನೋ ಅವನೂ ಯಥೇಷ್ಟ ಅನ್ನವನ್ನು ಭಕ್ಷಿಸುವನು. ಪ್ರಿಯವಾದುದನ್ನೇ ನೋಡುವನು. ಅವನ ಕುಲದಲ್ಲಿ ಬ್ರಹ್ಮವರ್ಚಸ್ಸು ಸಿದ್ಧಿಸುವುದು. ಆದರೆ ನೀನು ಆರಾಧಿಸುತ್ತಿರುವ ಈ ರೂಪವು ವೈಶ್ವಾನರನಾಮಕ ಪರಮಾತ್ಮನ ಕಣ್ಣುಮಾತ್ರವಾಗಿದೆ. ಇದನ್ನು ತಿಳಿಯಲು ನೀನು ನನ್ನ ಬಳಿಗೆ ಬರದಿರುತ್ತಿದ್ದರೆ, ವೈಶ್ವಾನರನ ಕಣ್ಣನ್ನು ಅರಿಯದಿದ್ದ ಅಪರಾಧದಿಂದ ನೀನು ಕುರುಡನಾಗುತ್ತಿದ್ದಿ' ಎಂದನು.

ವೈಶ್ವಾನರನ ಪ್ರಾಣವಾಯುವಿನ ಉಪಾಸನೆ

तत्त्वप्रदीपः –

वाय्वादिप्राणशक्यं न यत्तत्कर्ता हरेर्यतः ।
प्राणस्तेन पृथग्वर्त्मा वायुर्ज्ञानायुरूपतः ।।

ಅನುವಾದ -

ವಾಯ್ವಾದಿಪ್ರಾಣಶಕ್ಯಂ ನ ಯತ್ ತತ್‌ಕರ್ತಾ ಹರೇರ್ಯತಃ।
ಪ್ರಾಣಸ್ತೇನ ಪೃಥಗ್ವರ್ತ್ಮಾ ವಾಯುರ್ಜ್ಞಾನಾಯುರೂಪತಃ।

ವಾಯು ಮೊದಲಾದ ಪ್ರಾಣರಿಂದ ಯಾವುದು ಅಸಾಧ್ಯವೋ ಅಂತಹ ಕಾರ್ಯವನ್ನು ಸಾಧಿಸುವುದರಿಂದ ಹರಿಯ ಪ್ರಾಣವು ಪೃಥಗ್ವರ್ತ್ಮಾ ಎಂಬ ಹೆಸರುಳ್ಳದ್ದಾಗಿದೆ. ಜ್ಞಾನರೂಪಿಯಾಗಿದ್ದು ಆಯುಸ್ಸನ್ನು ಅನುಗ್ರಹಿಸುವುದರಿಂದ ಹಾಗೂ ವಾಯುವಿಗೆ ಆಶ್ರಯವಾಗಿರುವುದರಿಂದ ಅದಕ್ಕೆ ವಾಯು ಎಂಬ ಹೆಸರೂ ಇದೆ.

ವಿಶೇಷವಿಚಾರ - ಅಥ ಹೋವಾಚೇಂದ್ರದ್ಯುಮ್ನಂ ಭಾಲ್ಲವೇಯಂ 'ವೈಯಾಘ್ರ ಪದ್ಯ ಕಂ ತ್ವಮಾತ್ಮಾನಮುಪಾಸ್ಸ' ಇತಿ। 'ವಾಯುದೇವ ಭಗವೋ ರಾಜನ್' ಇತಿ ಹೋವಾಚ। 'ಏಷ ವೈ ಪೃಥಗ್ವರ್ತ್ಮಾತ್ಮಾ ವೈಶ್ವಾನರೋ ಯಂ ತ್ವಮಾತ್ಮನಮುಪಾಸ್ಸೇ। ತಸ್ಮಾತ್ ತ್ವಾ ಪೃಥಗ್ವಲಯ ಆಯಂತಿ ಪೃಥಗ್ ರಥಶ್ರೇಣಯೋಽನುಯಂತಿ । ಅತ್ಸ್ಯನ್ನಂ । ಪಶ್ಯಸಿ ಪ್ರಿಯಮ್ । ಅತ್ತ್ಯನ್ನಂ, ಪಶ್ಯತಿ ಪ್ರಿಯಂ, ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ, ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ। ಪ್ರಾಣಸ್ತ್ವೇಷ ಆತ್ಮನ' ಇತಿ ಹೋವಾಚ। 'ಪ್ರಾಣಸ್ತ ಉದಕ್ರಮಿಷ್ಯತ್ ಯನ್ಮಾಂ ನಾಗಮಿಷ್ಯ' ಇತಿ ॥

ಭಲ್ಲವಿ ಎಂಬುವನ ಮಗನಾದ ಇಂದ್ರದ್ಯುಮ್ನನನ್ನು ರಾಜನು 'ವ್ಯಾಘ್ರಪಾದನ ಗೋತ್ರದವನೇ, ನೀನು ಸ್ವಾಮಿಯಾದ ವೈಶ್ವಾನರನನ್ನು ಯಾವ ಹೆಸರಿನಿಂದ ಆರಾಧಿಸುತ್ತಿರುವಿ?' ಎಂದು ಕೇಳಿದನು, ಇದಕ್ಕೆ ಉತ್ತರವಾಗಿ ಇಂದ್ರದ್ಯುಮ್ನನು 'ಪೂಜ್ಯನಾದ ರಾಜನೇ ! ವಾಯುವಿಗೆ ಆಶ್ರಯನಾಗಿದ್ದು, ಜ್ಞಾನರೂಪಿಯೂ, ಆಯುಸ್ಸನ್ನು ಅನುಗ್ರಹಿಸುವವನೂ ಆಗಿರುವುದರಿಂದ ವಾಯು ಎಂಬ ಹೆಸರುಳ್ಳವನೆಂದು ವೈಶ್ವಾನರನನ್ನು ನಾನು ಉಪಾಸಿಸುತ್ತಿರುವೆನು' ಎಂದನು. ಆಗ ರಾಜನು 'ನೀನು ಆರಾಧಿಸುತ್ತಿರುವ ರೂಪವು ಪ್ರಾಣಾದಿಗಳಿಂದ ಸಾಧಿಸಲು ಅಶಕ್ಯವಾದ ಕಾರ್ಯವನ್ನು ನಿರ್ವಹಿಸುವುದರಿಂದ ಪೃಥಗ್ವರ್ತ್ಮಾ ಎಂಬ ಹೆಸರುಳ್ಳದ್ದೂ ಆಗಿದೆ. ಹೀಗೆ ನೀನು ಪೃಥಗ್ವರ್ತ್ಮ ಎಂಬ ಹೆಸರುಳ್ಳ ವೈಶ್ವಾನರ ರೂಪವನ್ನು ಆರಾಧಿಸುತ್ತಿರುವ ಕಾರಣ ನಿನಗೆ ವಿಲಕ್ಷಣವಾದ ಪೂಜಾ ಸಾಧನ ಸಾಮಗ್ರಿಗಳು ಲಭಿಸುತ್ತಿವೆ. ವಿಲಕ್ಷಣಗಳಾದ ರಥಗಳ ಶ್ರೇಣಿಯೇ ನಿನ್ನನ್ನು ಅನುಸರಿಸುತ್ತಿದೆ. ಇಂತಹ ಸೌಭಾಗ್ಯಶಾಲಿ ನೀನಾಗಿರುವಿ. 'ಯಥೇಷ್ಟ ಅನ್ನವನ್ನು ನೀನು ಸೇವಿಸುತ್ತಿರುವಿ. ಪ್ರಿಯವಾದುದನ್ನೇ ನೋಡುತ್ತಿರುವಿ. ನಿನ್ನಂತೆ ಯಾರು ಈ ರೂಪವನ್ನು ಆರಾಧಿಸುವನೋ ಅವನೂ ಯಥೇಷ್ಟ ಅನ್ನವನ್ನು ಉಣ್ಣುತ್ತಾನೆ. ಪ್ರಿಯವಾದುದನ್ನೇ ನೋಡುತ್ತಾನೆ. ಅವನ ವಂಶದಲ್ಲಿ ಬ್ರಹ್ಮವರ್ಚಸ್ಸು ಫಲಿಸುವುದು. ಆದರೆ ನೀನು ಆರಾಧಿಸುತ್ತಿರುವ ಈ ರೂಪವು ವೈಶ್ವಾನರನಾಮಕ ಪರಮಾತ್ಮನ ಪ್ರಾಣವಾಯು ಮಾತ್ರವಾಗಿದೆ. ಇದನ್ನು ಅರಿಯಲು ನೀನು ನನ್ನಲ್ಲಿಗೆ ಬರದೇ ಇರುತ್ತಿದ್ದರೆ, ವೈಶ್ವಾನರನ ಪ್ರಾಣವಾಯುವಿನ ಪರಿಜ್ಞಾನವಿಲ್ಲದೆ ಉಪಾಸನೆಗೈಯುತ್ತಿರುವ ಕಾರಣದಿಂದ, ನಿನ್ನ ಪ್ರಾಣವು ನಿನ್ನಿಂದ ದೂರವಾಗುತ್ತಿತ್ತು ಎಂದು ಹೇಳಿದನು.

ವೈಶ್ವಾನರ ಮಧ್ಯದೇಹದ ಉಪಾಸನೆ

तत्वप्रदीपः –

वायोरप्याश्रयो नित्यं बहुत्वाद् बहुलः स्मृतः ।
आकाशनामा चाऽदीप्ते(त्वाऽदीप्ते – पा) र्मध्यदेहो रमापतेः ।।

ಅನುವಾದ -

ವಾಯೋರಪ್ಯಾಶ್ರಯೋ ನಿತ್ಯಂ ಬಹುತ್ವಾತ್ ಬಹುಲಃ ಸ್ಮೃತಃ ।
ಆಕಾಶನಾಮಾ ಚಾದೀಪ್ತೇರ್ಮಧ್ಯದೇಹೋ ರಮಾಪತೇಃ ।

ರಮಾಪತಿಯಾದ ಪರಮಾತ್ಮನ ಮಧ್ಯದೇಹವು ಅತಿ ವಿಸ್ತಾರವಾಗಿರುವ ಕಾರಣ ಬಹುಲ ಎಂದೂ ಚೆನ್ನಾಗಿ ಪ್ರಕಾಶಿಸುವ ಕಾರಣ ಆಕಾಶ ಎಂದೂ ಪ್ರಸಿದ್ಧವಾಗಿದೆ ॥

ವಿಶೇಷ ವಿಚಾರ - ಅಥ ಹೋವಾಚ ಜನಂ ಶಾರ್ಕರಾಕ್ಷ್ಯಂ 'ಶಾರ್ಕರಾಕ್ಷ್ಯ, ಕಂ ತ್ವಮಾತ್ಮಾನಮುಪಾಸ್ಸ' ಇತಿ । 'ಆಕಾಶಮೇವ ಭಗವೋ ರಾಜನ್' ಇತಿ ಹೋವಾಚ । 'ಏಷ ವೈ ಬಹುಲ ಆತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ। ತಸ್ಮಾತ್ ತ್ವಂ ಬಹುಲೋಽಸಿ ಪ್ರಜಯಾ ಚ ಧನೇನ ಚ । ಅತ್ಸ್ಯನ್ನಂ । ಪಶ್ಯಸಿ ಪ್ರಿಯಮ್ । ಅತ್ತ್ಯನ್ನಂ, ಪಶ್ಯತಿ ಪ್ರಿಯಂ, ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ, ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ । ಸಂದೋಹಸ್ತ್ವೇಷ ಆತ್ಮನ' ಇತಿ ಹೋವಾಚ। 'ಸಂದೋಹಸ್ತೇ ವ್ಯಶೀರ್ಯತ್ ಯನ್ಮಾಂ ನಾಗಮಿಷ್ಯ' ಇತಿ ॥

ಆ ಮೇಲೆ ರಾಜನು ಶರ್ಕರಾಕ್ಷನ ಮಗನಾದ ಜನ ಎಂಬುವನನ್ನು 'ಶಾರ್ಕರಾಕ್ಷ್ಯನೇ, ನೀನು ವೈಶ್ವಾನರನನ್ನು ಯಾವ ಹೆಸರಿನಿಂದ ಆರಾಧಿಸುತ್ತಿರುವಿ ?' ಎಂದು ಪ್ರಶ್ನಿಸಿದನು. ಆಗ ಜನನು 'ಪೂಜ್ಯನಾದ ರಾಜನೇ ! ಆಕಾಶಕ್ಕೆ ಆಶ್ರಯನಾಗಿದ್ದು, ಸರ್ವತ್ರ ಚೆನ್ನಾಗಿ ಪ್ರಕಾಶಿಸುತ್ತಿರುವುದರಿಂದ, ಆಕಾಶ ಎಂಬ ಹೆಸರುಳ್ಳವನೆಂದು ವೈಶ್ವಾನರನನ್ನು ನಾನು ಆರಾಧಿಸುತ್ತಿರುವೆನು' ಎಂದುತ್ತರಿಸಿದನು. ಆಗ ರಾಜನು 'ನಿನ್ನಿಂದ ಆರಾಧಿಸಲ್ಪಡುತ್ತಿರುವ ಆಕಾಶನಾಮಕವಾದ ಈ ವೈಶ್ವಾನರ ರೂಪವು ಅತಿವಿಸ್ತಾರವಾಗಿರುವುದರಿಂದ ಬಹುಲ ಎಂಬ ಹೆಸರುಳ್ಳದ್ದೂ ಆಗಿದೆ. ಹೀಗೆ ಪರಮಾತ್ಮನ ಬಹುಲನಾಮಕ ರೂಪವನ್ನು ಆರಾಧಿಸುತ್ತಿರುವ ಕಾರಣ ನೀನು ಸಂತತಿ ಹಾಗೂ ಸಂಪತ್ತು ಇವುಗಳಿಂದ ಸಮೃದ್ಧನಾಗಿರುವಿ. ಯಥೇಷ್ಟ ಅನ್ನವನ್ನು ಭಕ್ಷಿಸುತ್ತಿರುವಿ. ಪ್ರಿಯವಾದುದನ್ನೇ ನೋಡುತ್ತಿರುವಿ. ಯಾರು ನಿನ್ನಂತೆ ವೈಶ್ವಾನರರೂಪವನ್ನು ಪೂಜಿಸುವನೋ ಅವನೂ ಕೂಡ ಯಥೇಷ್ಟ ಅನ್ನವನ್ನು ಭಕ್ಷಿಸುವನು. ಪ್ರಿಯವಾದುದನ್ನೇ ನೋಡುವನು. ಅವನ ಕುಲದಲ್ಲಿ ಬ್ರಹ್ಮವರ್ಚಸ್ಸು ಫಲಿಸುವುದು. ಆದರೆ ನೀನು ಆರಾಧಿಸುತ್ತಿರುವ ರೂಪವು ವೈಶ್ವಾನರನಾಮಕ ಪರಮಾತ್ಮನ ಮಧ್ಯದೇಹವಷ್ಟೇ ಆಗಿದೆ. ಇದನ್ನರಿಯಲು ನೀನು ನನ್ನಲ್ಲಿಗೆ ಬರದೇ ಇರುತ್ತಿದ್ದರೆ, ವೈಶ್ವಾನರನ ಮಧ್ಯದೇಹವನ್ನರಿಯದೆ ಉಪಾಸನೆಗೈದುದರ ಅಪರಾಧದಿಂದ ನಿನ್ನ ಮಧ್ಯದೇಹವು ಚೂರು ಚೂರಾಗುತ್ತಿತ್ತು' ಎಂದನು.

ವೈಶ್ವಾನರನ ಕಟಿಪ್ರದೇಶದ ಉಪಾಸನೆ

तत्वप्रदीपः –

व्याप्तत्वादाप इत्युक्तो रै रतिकरत्वतः ।
वस्तिराकाशवाय्वोश्च तावाधारौ प्रकीर्तितौ ।।

ಅನುವಾದ -

ವಾಪ್ತತ್ವಾತ್ ಆಪ ಇತ್ಯುಕ್ತೋ ರಯೀ ರತಿಕರತ್ವತಃ ।
ವಸ್ತಿರಾಕಾಶವಾಯ್ವೋಶ್ಚ ತಾವಾಧಾರೌ ಪ್ರಕೀರ್ತಿತೌ ।।

ಪರಮಾತ್ಮನ ಕಟಿಪ್ರದೇಶವು ವ್ಯಾಪ್ತವಾಗಿರುವುದರಿಂದಾಗಿ 'ಆಪ್' ಎಂದು ಪ್ರಸಿದ್ಧವಾಗಿದೆ. ಸಂತೋಷಜನಕವಾದುದರಿಂದ ಅದಕ್ಕೆ 'ರಯಿ' ಎಂಬ ಹೆಸರೂ ಇದೆ. ಪರಮಾತ್ಮನ ಮಧ್ಯದೇಹವು ಆಕಾಶವೆನಿಸಲು, ಆಕಾಶಕ್ಕೆ ಅದು ಆಶ್ರಯವಾಗಿರುವುದೂ ಕಾರಣವಾಗಿದೆ. ಹಾಗೆಯೇ ಕಟಿ ಪ್ರದೇಶವು ಆಪ್ ಎನಿಸಲು ಅದು ನೀರಿಗೆ ಆಶ್ರಯವಾಗಿರುವುದೂ ಕಾರಣವಾಗಿದೆ.

ವಿಶೇಷವಿಚಾರ - ಅಥ ಹೋವಾಚ ಬುಡಿಲಮಾಶ್ವತರಾಶ್ವಿಂ 'ವೈಯಾಘ್ರಪದ್ಯ, ಕಂ ತ್ವಮಾತ್ಮಾನಮುಪಾಸ್ಸ' ಇತಿ । 'ಆಪ ಏವ ಭಗವೋ ರಾಜನ್' ಇತಿ ಹೋವಾಚ । 'ಏಷ ವೈ ರಯಿರಾತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ । ತಸ್ಮಾತ್ ತ್ವಂ ರಯಿಮಾನ್ ಪುಷ್ಟಿ ಮಾನಸಿ । ಅತ್ಸ್ಯನ್ನಂ । ಪಶ್ಯಸಿ ಪ್ರಿಯಮ್ । ಅತ್ತ್ಯನ್ನಂ, ಪಶ್ಯತಿ ಪ್ರಿಯಂ, ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ, ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ । ವಸ್ತಿಸ್ತ್ವೇಷ ಆತ್ಮನ' ಇತಿ ಹೋವಾಚ । 'ವಸ್ತಿಸ್ತೇವ್ಯಭೇತ್ಸ್ಯತ್ ಯನ್ಮಾಂ ನಾಗಮಿಷ್ಯ' ಇತಿ ॥

ಅನಂತರ ರಾಜನು ಅಶ್ವತರಾಶ್ವನ ಮಗನಾದ ಬುಡಿಲನನ್ನು 'ವ್ಯಾಘ್ರಪಾದನ ಗೋತ್ರದವನೇ, ವೈಶ್ವಾನರ ನಾಮಕನಾದ ಪರಮಾತ್ಮನನ್ನು ಯಾವ ಹೆಸರಿನಿಂದ ನೀನು ಪೂಜಿಸುತ್ತಿರುವೆ ?' ಎಂದು ಕೇಳಿದನು. ಆಗ ಬುಡಿಲು 'ಪೂಜ್ಯನಾದ ರಾಜನೆ ! ನೀರಿನಲ್ಲಿರುವುದರಿಂದಾಗಿಯೂ, ಎಲ್ಲ ಕಡೆ ವ್ಯಾಪಿಸಿರುವುದರಿಂದಾಗಿಯೂ, ಆಪ್ ಎಂದು ಕರೆಸಿಕೊಳ್ಳುತ್ತಿರುವವನೆಂದು ವೈಶ್ವಾನರನನ್ನು ನಾನು ಪೂಜಿಸುತ್ತಿರುವೆನು' ಎಂದುತ್ತರಿಸಿದನು.

ಆಗ ರಾಜನು 'ನೀನು ಪೂಜಿಸುತ್ತಿರುವ ಈ ರೂಪವು ಸಂತೋಷವನ್ನುಂಟುಮಾಡುವ ಕಾರಣ 'ರಯಿ' ಎಂಬ ಹೆಸರುಳ್ಳದ್ದೂ ಆಗಿದೆ. ಹೀಗೆ 'ರಯಿ' ಎಂದು ಕರೆಸಿಕೊಳ್ಳುತ್ತಿರುವ ಪರಮಾತ್ಮನ ರೂಪವನ್ನು ಪೂಜಿಸುತ್ತಿರುವುದರಿಂದ ನೀನು ಸಂಪತ್ತುಳ್ಳವನೂ, ದಷ್ಟಪುಷ್ಟನೂ ಆಗಿರುವಿ. ಯಥೇಷ್ಟ ಅನ್ನವನ್ನು ಸೇವಿಸುತ್ತಿರುವಿ. ಪ್ರಿಯವಾದುದನ್ನೇ ನೋಡುತ್ತಿರುವಿ. ನಿನ್ನಂತೆ ಯಾರು ಅಪ್ ಹಾಗೂ ರಯಿ ಎಂಬ ಹೆಸರಿರುವ ವೈಶ್ವಾನರನ ಸ್ವರೂಪವನ್ನು ಪೂಜಿಸುವನೋ ಅವನೂ ಯಥೇಷ್ಟ ಅನ್ನವನ್ನು ಸೇವಿಸುವನು, ಪ್ರಿಯವಾದುದನ್ನೇ ನೋಡುವನು. ಅವನ ಕುಲದಲ್ಲಿ ಬ್ರಹ್ಮವರ್ಚಸ್ಸು ಫಲಿಸುವುದು. ಆದರೆ ನೀನು ಉಪಾಸಿಸುತ್ತಿರುವ ರೂಪವೈ ವೈಶ್ವಾನರನಾಮಕ ಪರಮಾತ್ಮನ ಕಟಿ ಪ್ರದೇಶವಷ್ಟೇ ಆಗಿದೆ. ಇದನ್ನರಿಯಲು ನೀನು ನನ್ನಲ್ಲಿಗೆ ಬರದೇ ಇರುತ್ತಿದ್ದರೆ, ವೈಶ್ವಾನರನಾಮಕ ಪರಮಾತ್ಮನ ಕಟಿಪ್ರದೇಶನ್ನರಿಯದೆ ಉಪಾಸನೆ ಗೈದುದರ ತಪ್ಪಿಗಾಗಿ ನಿನ್ನ ಕಟಿಪ್ರದೇಶವು ಮುರಿದು ಹೋಗುತ್ತಿತ್ತು' ಎಂದನು.

ವೈಶ್ವಾನರನ ಪಾದಗಳ ಉಪಾಸನೆ

तत्वप्रदीपः –

प्रथनात् पृथिवीनामा प्रतिष्ठा च प्रतिष्ठितेः ।
पादौ भगवतो विष्णोः पृथिव्याश्रय एव च ।।

इत्याद्यायां वैश्वानरविद्यायां विभिद्य निवेद्यते ।

ಪ್ರಥನಾತ್ ಪೃಥಿವೀನಾಮಾ ಪ್ರತಿಷ್ಠಾ ಚ ಪ್ರತಿಷ್ಠಿತೇಃ ।
ಪಾದೌ ಭಗವತೋ ವಿಷ್ಣೋಃ ಪೃಥಿವ್ಯಾಶ್ರಯ ಏವ ಚ ॥

ಪರಿಪೂರ್ಣ ಅನಂತಗುಣಗಳಿರುವುದರಿಂದಾಗಿಯೂ, ಪೃಥಿವಿಗೆ ಆಶ್ರಯವಾಗಿರುವುದರಿಂದಾಗಿಯೂ ಪರಮಾತ್ಮನ ಪಾದಗಳು ಪೃಥಿವೀ ಎಂದು ಕರೆಸಿಕೊಳ್ಳುತ್ತಿವೆ. ಎಲ್ಲರ ಸುಸ್ಥಿತಿಗೆ ಕಾರಣವಾಗಿರುವುದರಿಂದಾಗಿ ಪ್ರತಿಷ್ಠಾ ಎಂದೂ ಅವುಗಳಿಗೆ ಹೆಸರಿದೆ.

ವಿಶೇಷವಿಚಾರ - ಅಥ ಹೋವಾಚೋದ್ದಾಲಕಮಾರುಣಂ 'ಗೌತಮ ! ಕಂ ತ್ವಮಾತ್ಮಾನಮುಪಾಸ್ಸ' ಇತಿ । 'ಪೃಥಿವೀಮೇವ ಭಗವೋ ರಾಜನ್' ಇತಿ ಹೋವಾಚ । 'ಏಷ ವೈ ಪ್ರತಿಷ್ಠಾತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ । ತಸ್ಮಾತ್ ತ್ವಂ ಪ್ರತಿಷ್ಠಿತೋಽಸಿ

ಪ್ರಜಯಾ ಚ ಪಶುಭಿಶ್ಚ। ಅತ್ಸ್ಯನ್ನಮ್ । ಪಶ್ಯಸಿ ಪ್ರಿಯಮ್ । ಅತ್ತ್ಯನ್ನಂ, ಪಶ್ಯತಿ ಪ್ರಿಯಂ, ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ, ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ। ಪಾದೌ ಶ್ವೇತಾವಾತ್ಮನ' ಇತಿ ಹೋವಾಚ । 'ಪಾದೌ ತೇ ವ್ಯಮ್ಲಾ ಸ್ಯೇತಾಂ ಯನ್ಮಾಂ ನಾಗಮಿಷ್ಯ' ಇತಿ ॥

ಆಮೇಲೆ ರಾಜನು ಅರುಣನ ಮಗನಾದ ಉದ್ದಾಲಕನನ್ನು 'ಗೌತಮನೇ ! ವೈಶ್ವಾನರ ನಾಮಕ ಪರಮಾತ್ಮನನ್ನು ನೀನು ಯಾವ ಹೆಸರಿನಿಂದ ಆರಾಧಿಸುತ್ತಿರುವಿ ?' ಎಂದು ಪ್ರಶ್ನಿಸಿದನು. ಆಗ ಉದ್ದಾಲಕನು 'ಪೂಜ್ಯನಾದ ರಾಜನೇ ! ಪೃಥಿವಿಗೆ ಆಧಾರನಾಗಿದ್ದು ಪರಿಪೂರ್ಣವಾದ ಅನಂತಗುಣಗಳಿರುವುದರಿಂದ ಪೃಥಿವೀ ಎಂದು ಕರೆಸಿಕೊಳ್ಳುತ್ತಿರುವವನೆಂದು ವೈಶ್ವಾನರನನ್ನು ನಾನು ಆರಾಧಿಸುತ್ತಿರುವೆನು' ಎಂದುತ್ತರಿಸಿದನು. ಆಗ ರಾಜನು 'ನೀನು ಆರಾಧಿಸುತ್ತಿರುವ ಪೃಥಿವೀನಾಮಕವಾದ ವೈಶ್ವಾನರ ರೂಪವು ಎಲ್ಲರ ಸ್ಥಿತಿಗೂ ಕಾರಣವಾಗಿರುವುದರಿಂದ ಪ್ರತಿಷ್ಠಾ ಎಂಬ ಹೆಸರುಳ್ಳದ್ದೂ ಆಗಿದೆ. ಹೀಗೆ ಪ್ರತಿಷ್ಠಾನಾಮಕವಾದ ರೂಪವನ್ನು ಆರಾಧಿಸುತ್ತಿರುವುದರಿಂದ ನೀನು ಸಂತತಿ ಹಾಗೂ ಪಶುಗಳಿಂದ ಸುಸ್ಥಿತನಾಗಿರುವಿ. ಯಥೇಷ್ಟ ಅನ್ನವನ್ನು ಭಕ್ಷಿಸುತ್ತಿರುವಿ, ಪ್ರಿಯವಾದುದನ್ನೇ ನೋಡುತ್ತಿರುವಿ. ನಿನ್ನಂತೆ ಯಾರು ಪ್ರತಿಷ್ಠಾನಾಮಕ ವೈಶ್ವಾನರ ರೂಪವನ್ನು ಆರಾಧಿಸುತ್ತಾನೋ ಅವನೂ ಯಥೇಷ್ಟ ಅನ್ನವನ್ನು ಭಕ್ಷಿಸುವನು, ಪ್ರಿಯವಾದುದನ್ನೇ ನೋಡುವನು. ಅವನ ಕುಲವು ಬ್ರಹ್ಮವರ್ಚಸ್ಸುಳ್ಳದ್ದಾಗುತ್ತದೆ. ಆದರೆ ನೀನು ಆರಾಧಿಸುತ್ತಿರುವ ಈ ರೂಪವು ವೈಶ್ವಾನರ ನಾಮಕ ಪರಮಾತ್ಮನ ಪಾದಗಳಷ್ಟೇ ಆಗಿದೆ. ಇದನ್ನರಿಯಲು ನೀನು ನನ್ನಲ್ಲಿಗೆ ಬರದೇ ಇರುತ್ತಿದ್ದರೆ, ವೈಶ್ವಾನರನ ಪಾದಗಳನ್ನು ತಿಳಿಯದೆ ಇದ್ದ ಅಪರಾಧದಿಂದ ನಿನ್ನ ಪಾದಗಳು ಮುರಿದು ಹೋಗುತ್ತಿದ್ದವು' ಎಂದನು.

'ಯಸ್ಮಾದಂಗಾತ್' ಇತ್ಯಾದಿ ಭಾಷ್ಯವ್ಯಾಖ್ಯಾನ

तत्वप्रदीपः – यस्मादङ्गाद्यज्जायते यदाश्रित्य तिष्ठति च यत्र लीयते च तद्धरेरङ्गं तन्नामवाच्यम् । यथा 'ब्राह्मणोऽस्य मुखमासीत्' इत्यादौ ब्राह्मणादिजनकानि (जातिजनकानि–पा) हरेर्मुखादीनि ब्राह्मणादिनामान्युच्यन्त एवमितरत्रापीति । अतो न भगवदङ्गेभ्यस्त्रिदिवदिनकरादीनां भिन्नानां तदभेदोक्तिनिमित्तो विरोध आशङ्कनीयः । उक्तभङ्ग्या तदभावात् ।।छ।।

'ಯಸ್ಮಾದಂಗಾದ್ಯಜ್ಜಾಯತೇ' ಎಂಬ ಭಾಷ್ಯದಲ್ಲಿ ಉದಾಹರಿಸಿದ ನಾರದೀಯ ವಚನದ ವ್ಯಾಖ್ಯಾನ ಹೀಗಿದೆ - ಯಸ್ಮಾತ್ = ಯಾವ ಪರಮಾತ್ಮನ, ಅಂಗಾತ್ = ಅಂಗದಿಂದ, ಯತ್ = ಯಾವ ದೇವತೆಯು ಅಥವಾ ಯಾವ ಲೋಕವು, ಜಾಯತೇ = ಹುಟ್ಟುತ್ತದೋ, ಚ = ಯಾರನ್ನು ಆಶ್ರಯಿಸಿ ಸ್ಥಿತಿಯನ್ನು ಹೊಂದುತ್ತದೋ, ಮತ್ತು ಯಾರಲ್ಲಿ ಲಯವನ್ನು ಹೊಂದುತ್ತದೋ, ತತ್ = ಆ, ಹರೇಃ = ಶ್ರೀಹರಿಯ, ಅಂಗಮ್ = ಅಂಗವು, ತತ್ = ಆ ಲೋಕದ ಅಥವಾ ಆ ದೇವತೆಯ, ನಾಮ = ಹೆಸರಿನಿಂದ, ವಾಚ್ಯಮ್= ಪ್ರತಿಪಾದ್ಯವಾಗುತ್ತದೆ. ಯಥಾ = ಯಾವರೀತಿಯಾಗಿ, ಬ್ರಹ್ಮಾದಿಕಂ = 'ಬ್ರಾಹ್ಮಣೋಽಸ್ಯ ಮುಖಮಾಸೀತ್' ಬ್ರಾಹ್ಮಣನು ವಿಷ್ಣುವಿನ ಮುಖ ಇತ್ಯಾದಿಯಾಗಿ ಬ್ರಾಹ್ಮಣಜಾತಿಗೆ ಜನಕವಾದ ಶ್ರೀಹರಿಯ ಹೆಸರಿನಿಂದ ಕರೆಸಿಕೊಳ್ಳುತ್ತದೋ, ಅದರಂತೆ ಬೇರೆಡೆಯೂ ತಿಳಿಯಬೇಕು. ಆದ್ದರಿಂದ ಭಗವಂತನ ಅಂಗಗಳಿಗಿಂತ ಸ್ವರ್ಗ ಮೊದಲಾದ ಲೋಕಗಳು ದಿನಕರ ಮೊದಲಾದ ದೇವತೆಗಳು ಭಿನ್ನರೇ ಆಗಿದ್ದಾರೆ. ಆದರೂ ಭಗವಂತನ ಅಂಗಗಳ ದೆಸೆಯಿಂದ ಅಭೇದವನ್ನು ಹೇಳಿದ್ದಕ್ಕೆ ವಿರೋಧವನ್ನು ಆಶಂಕಿಸಬಾರದು. ಪರಮಾತ್ಮನ ಅಂಗವನ್ನು ಆಶ್ರಯಿಸಿ ಸೃಷ್ಟ್ಯಾದಿಗಳನ್ನು ಹೊಂದಿರುವ ಕಾರಣದಿಂದ ಹಾಗೇ ಅಭೇದವನ್ನು ಶಾಸ್ತ್ರದಲ್ಲಿ ಹೇಳಲಾಗುತ್ತದೆ.

ಪಾಠಾಂತರದ ಬಗ್ಗೆ - 'ನ ತಥಾ ಸರ್ವವೇದಾಶ್ಚ ವೇದಾಂಗಾನಿ ಚ ನಾರದ ಇತ್ಯಾದಿ' ಎಂಬುದಾಗಿ ಪ್ರಚಲಿತ ಪಾಠ. 'ಇತ್ಯಾದಿ' ಎಂಬ ಪದದ ಬದಲು 'ಇತಿ' ಎಂದಷ್ಟೇ ಸಾಕು. ಪ್ರಾಚೀನ ಕೋಶಗಳಲ್ಲಿ 'ಇತಿ' ಎಂದಷ್ಟೇ ಕಾಣಿಸುತ್ತದೆ. 'ಇತ್ಯಾದಿ' ಎಂಬ ಪ್ರಚಲಿತಪಾಠವು ಕಾಣಿಸುವುದಿಲ್ಲ.

'ಯಸ್ಮಾದ್ ಯಜ್ಜಾಯತೇ ಚಾಂಗಾತ್ ಲೋಕವೇದಾಧಿಕಂ ಹರೇಃ' ಎಂಬುದು ಪ್ರಚಲಿತ ಪಾಠ. 'ಯಸ್ಮಾದ್ ಯಜ್ಜಾಯತೇ ಚಾಂಗಾತ್ ಲೋಕದೇವಾದಿಕಂ ಹರೇಃ' ಎಂಬುದು ಪ್ರಾಚೀನ ಪಾಠ. 'ಲೋಕವೇದಾದಿಕಂ ಹರೇಃ' ಎಂಬ ಪ್ರಚಲಿತಪಾಠವು ಕೇವಲ ಮುದ್ರಣದೋಷದಿಂದ ಪ್ರಸಿದ್ಧವಾಗಿದೆ. ಇದು ಸರಿಯಾದ ಪಾಠವಲ್ಲ. ಏಕೆಂದರೆ ತತ್ವಪ್ರದೀಪದಲ್ಲಿ ಸ್ಪಷ್ಟವಾಗಿ ಪಂಡಿತಾಚಾರ್ಯರು 'ಭಗವದಂಗೇಭ್ಯಸ್ತ್ರಿದಿವ-ದಿನಕರಾದೀನಾಂ ಭಿನ್ನಾನಾಂ' ಎಂಬುದಾಗಿ ಲೋಕಪದಕ್ಕೆ 'ತ್ರಿದಿವ' ಎಂಬುದಾಗಿ, 'ದೇವ' ಎಂಬ ಪದಕ್ಕೆ 'ದಿನಕರ' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಮತ್ತು ಅಪೌರುಷೇಯವಾದ ವೇದಗಳು ಭಗವಂತನ ಅಂಗದಿಂದ ಹುಟ್ಟಲು ಸಾಧ್ಯವೇ ಇಲ್ಲ. ಆದ್ದರಿಂದ 'ಲೋಕದೇವಾದಿಕಂ ಹರೇಃ' ಎಂಬ ಪ್ರಾಚೀನಪಾಠವೇ ಸಮಂಜಸವಾದದ್ದು.

ತತ್ವಪ್ರಕಾಶಿಕಾ

'ಶಬ್ದಾದಿಭ್ಯೋ೭ಂತಃಪ್ರತಿಷ್ಠಾನಾತ್' ಎಂಬ ಆಕ್ಷೇಪ ಭಾಗದ ವ್ಯಾಖ್ಯಾನ

तत्वप्रकाशिका – शब्दादिभ्योऽन्तःप्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते ।। १-२-२६ ।।

वैश्वानरस्य विष्णुत्वमाक्षिप्य समादधत्सूत्रमुपन्यस्याऽक्षेपांशं तावद् व्याचष्टे – शब्दादिभ्य इति ।।

ವೈಶ್ವಾನರನು ವಿಷ್ಣುವೇ ಆಗಿದ್ದಾನೆಂಬ ವಿಷಯವನ್ನು ಆಕ್ಷೇಪಿಸಿ ಸಮಾಧಾನವನ್ನು ಮಾಡುವ ಸೂತ್ರವನ್ನು ಪಠಿಸಿ ಸೂತ್ರದಲ್ಲಿರುವ ಆಕ್ಷೇಪಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಶಬ್ದಾದಿಭ್ಯಃ'' ಇತ್ಯಾದಿಯಾಗಿ.

ಅಗ್ನಿಯು ಏಕೆ ವೈಶ್ವಾನರನಲ್ಲ?

तत्वप्रकाशिका – यदुक्तमात्मशब्दविशेषणात् समाख्यानाच्च वैश्वानरस्य विष्णुत्वनिश्चय इति तदयुक्तम् । यथा खलु वैश्वानरस्य विष्णुत्वनिश्चायका ऽत्मशब्दादि विद्यते तथाऽग्नित्वनिश्चायकस्यापि विद्यमानत्वात् ।

ಹಿಂದೆ ಆತ್ಮಶಬ್ದವು ವಿಶೇಷಣವಾಗಿರುವುದರಿಂದ ಮತ್ತು 'ಅಹಂ ವೈಶ್ವಾನರೋ ಭೂತ್ವಾ' ಎಂಬ ಸಮಾಖ್ಯಾಪ್ರಮಾಣವಿರುವುದರಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಲಾಯಿತು. ಆದರೆ ಇದು ತಪ್ಪು. ಏಕೆಂದರೆ ಯಾವರೀತಿಯಾಗಿ ಆತ್ಮಶಬ್ದದ ವಿಶೇಷಣದಿಂದ ವಿಷ್ಣುವೇ ವೈಶ್ವಾನರನೆಂದು ನಿಶ್ಚಯಿಸುತ್ತೀರೋ, ಅದೇ ರೀತಿಯಾಗಿ ಅಗ್ನಿಯೂ ಸಹ ವೈಶ್ವಾನರನಾಗಿದ್ದಾನೆ ಎಂಬ ವಿಷಯದಲ್ಲಿ ಅನೇಕ ಪ್ರಮಾಣಗಳಿವೆ.

ವೈಶ್ವಾನರ ಶ್ರುತಿಯಲ್ಲಿ ಅಗ್ನಿಶಬ್ದದ ಸಮಾನಾಧಿಕರಣ್ಯವಿದೆ

तत्वप्रकाशिका – तथाहि । वैश्वानरशब्दस्याऽत्मशब्दसमानाधिकृतत्ववदग्नि-शब्दसामानाधिकृतत्वं च श्रूयते 'अयमग्निः' इति बृहदारण्यके 'वैश्वानरम्' इत्यास्यामृचि च ।

ಅದು ಹೀಗೆ -- ವೈಶ್ವಾನರಶಬ್ದಕ್ಕೆ ಆತ್ಮಶಬ್ದದ ಸಾಮಾನಾಧಿಕರಣ್ಯವಿರುವಂತೆ ಅಗ್ನಿಶಬ್ದದ ಸಾಮಾನಾಧಿಕರಣ್ಯವೂ ಸಹ 'ಅಯಮಗ್ನಿರ್ವೈಶ್ವಾನರಃ' ಎಂಬ ಬೃಹದಾರಣ್ಯಕದಲ್ಲಿ ಕೇಳಿಸುತ್ತಿದೆ. 'ವೈಶ್ವಾನರಮೃತ ಆಜಾತಮಗ್ನಿಂ' ಎಂಬ ಶ್ರುತಿಯಲ್ಲಿಯೂ ಅಗ್ನಿಶಬ್ದದ ಸಾಮಾನಾಧಿಕರಣ್ಯವಿರುವುದು ಕಾಣಿಸುತ್ತಿದೆ.

ಅಗ್ನಿಯೇ ವೈಶ್ವಾನರನೆನ್ನಲು ಅನೇಕ ಲಿಂಗಗಳು

तत्वप्रकाशिका – तथाऽग्निलिङ्गं च वैश्वानरे होमाधिकरणत्वं गार्हपत्याद्यङ्गत्वं च श्रूयते 'वैश्वानरे तद्धुतम्' इत्यादौ । तथा वैश्वानरे पाचकत्वाख्यमग्निकर्म च श्रूयते ।

ಇದರಂತೆ ಅಗ್ನಿಜ್ಞಾಪಕವಾದ ಲಿಂಗಗಳೂ ಸಹ ಇರುತ್ತವೆ. ಹೋಮಾಧಿಕರಣತ್ವ, ಗಾರ್ಹಪತ್ಯಾದಿಅಂಗತ್ವ ಮೊದಲಾದವು 'ವೈಶ್ವಾನರೇ ತದ್ಧುತಮ್' 'ವೈಶ್ವಾನರನಲ್ಲಿ ಹೋಮ ಮಾಡಿದಂತಾಗುತ್ತದೆ' ಇತ್ಯಾದಿ ಶ್ರುತಿಗಳಲ್ಲಿ ಕಾಣಿಸುತ್ತಿದೆ. ಅದೇ ರೀತಿಯಾಗಿ ಪಾಚಕತ್ವವೆಂಬ ಅಗ್ನಿಯ ಕರ್ಮವೂ ಸಹ ವೈಶ್ವಾನರನಲ್ಲಿ ಕೇಳಿಸುತ್ತಿದೆ.

'ಅಯಮಗ್ನಿರ್ವೈಶ್ವಾನರಃ' ಎಂಬ ಶ್ರುತಿಯ ಆಧಾರ

तत्वप्रकाशिका – 'अयमग्निर्वैश्वानरो योऽयमन्तःपुरुषे येनेदमन्नं पच्यते यदिदमद्यते' इति बृहदारण्यके ।

ಆ ಶ್ರುತಿ ಹೀಗಿದೆ -- ''ಅಯಮಗ್ನಿರ್ವೈಶ್ವಾನರೋ ಯೋऽಯಮಂತಃಪುರುಷೇ ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ' 'ಪುರುಷನಾದವನು ಯಾವ ಅನ್ನವನ್ನು

ಭಕ್ಷಿಸುತ್ತಾನೋ ಆ ಅನ್ನವು ಅಗ್ನಿಯಿಂದ ಪಾಕ ಮಾಡಲ್ಪಟ್ಟಿರುತ್ತದೆ' ಎಂಬುದಾಗಿ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ.

ಛಾಂದೋಗ್ಯೋಪನಿಷತ್ತಿನಲ್ಲಿ ಅಗ್ನಿಲಿಂಗಗಳು

तत्वप्रकाशिका – 'तद्यदक्तम्' इति छान्दोग्ये च । तस्माद्वैश्वानरस्य विष्णुत्वज्ञापकवदग्नित्वज्ञपकस्यापि सत्वान्न विष्णुरेवायमिति निश्चयो युज्यत इत्यर्थः ।

ಮತ್ತು ಛಾಂದೋಗ್ಯೋಪನಿಷತ್ತಿನಲ್ಲಿಯೂ 'ತದ್ಯದ್ಭಕ್ತಮ್' 'ಭೋಜನಕಾಲದಲ್ಲಿ ಯಾವ ಅನ್ನವು ಮೊದಲು ಪ್ರಾಣಾಹುತಿರೂಪದಿಂದ ಸ್ವೀಕರಿಸಲಾಗುತ್ತದೋ ಅದು ಜಾಠರದಲ್ಲಿರುವ ವೈಶ್ವಾನರನಿಗೆ ಹೋಮದ್ರವ್ಯವಾಗಿದೆ' ಎಂದು ಹೇಳಲಾಗಿದೆ. ಈ ಕಾರಣದಿಂದಲೂ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂಬ ವಿಷಯದಲ್ಲಿ ಆತ್ಮಶಬ್ದದ ಸಾಮಾನಾಧಿಕರಣ್ಯವು ಜ್ಞಾಪಕವಾಗಿರುವಂತೆ ವೈಶ್ವಾನರನು ಅಗ್ನಿಯಾಗಿದ್ದಾನೆಂಬ ವಿಷಯದಲ್ಲೂ ಅನೇಕ ಲಿಂಗಗಳಿರುತ್ತವೆಂದು ತಿಳಿಯುತ್ತದೆ. ಆದ್ದರಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿಶ್ಚಯಿಸಲು ಬರುವುದಿಲ್ಲವೆಂದು ಅಭಿಪ್ರಾಯ. ಇಷ್ಟು ಪೂರ್ವಪಕ್ಷ.

ವೈಶ್ವಾನರ ಶಬ್ದವಿರುವ ವಾಕ್ಯಗಳೆಲ್ಲವೂ ಈ ಅಧಿಕರಣಕ್ಕೆ ವಿಷಯ

तत्वप्रकाशिका – अत्र सर्ववैश्वानरविद्यानां विचार्यत्वात् तत्तद्वाक्योद्धारो युक्त एव समाख्यारूपेण वा ।

ಈ ಅಧಿಕರಣದಲ್ಲಿ ಸಕಲಶ್ರುತಿಯಲ್ಲಿ ಇರುವ ವೈಶ್ವಾನರ ಶಬ್ದಗಳು ವಿಚಾರಮಾಡಲು ಅರ್ಹವಾಗಿವೆ. ಆದ್ದರಿಂದ ವೈಶ್ವಾನರ ಶಬ್ದವಿರುವ ಎಲ್ಲ ವಾಕ್ಯಗಳನ್ನು ವಿಷಯವಾಕ್ಯವನ್ನಾಗಿ ಪರಿಗಣಿಸುವುದು ಯುಕ್ತವೇ ಆಗಿದೆ. ಅಥವಾ ಸಮಾಖ್ಯಾಪ್ರಮಾಣಕ್ಕಾಗಿ ಭಿನ್ನ ಭಿನ್ನ ವಾಕ್ಯಗಳನ್ನು ಉಲ್ಲೇಖಿಸಿರುವುದು ಯುಕ್ತವಾಗಿದೆಯೆಂದು ತಿಳಿಯಬೇಕು.

'ಮೂರ್ಧಾನಂ ದಿವಃ' ಇತ್ಯಾದಿ ಶ್ರುತ್ಯರ್ಥ

तत्वप्रकाशिका – 'मूर्धानं दिवः' इति मन्त्रार्थः – दिवः कारणभूतं मूर्धानं पृथिव्याः कारणभूतं पादं जनानां सम्यज्ज्ञानायाभिव्यक्तं सर्वज्ञमखण्डेशमत्यन्नं जनानां पातारं वैश्वानरमग्निं देवाः स्वास्यतयाऽकुर्वन् – इति ।

''ಮೂರ್ಧಾನಂ ದಿವಃ'' ಎಂಬ ಶ್ರುತ್ಯರ್ಥ ಹೀಗಿದೆ. ಯಾರ ತಲೆಯು ದ್ಯುಲೋಕಕ್ಕೆ ಕಾರಣವಾಗಿದೆಯೋ, ಯಾರ ಕಾಲುಗಳು ಪೃಥಿವಿಗೆ ಕಾರಣವಾಗಿದೆಯೋ, ಯಾರು ಸಾತ್ವಿಕಜನರಿಗೆ ಸಮ್ಯಗ್‌ಜ್ಞಾನವನ್ನು ಪ್ರಕಟಪಡಿಸುತ್ತಾನೋ ಅಂತಹ ವ್ಯಕ್ತಿಯೇ ಸರ್ವಜ್ಞನಾಗಿದ್ದಾನೆ. ಸಕಲಕ್ಕೂ ಒಡೆಯನಾಗಿದ್ದಾನೆ. ಅವನೇ ವಿಪುಲವಾದ ಅನ್ನನು. ಸಕಲ ಜನರಿಗೆ ರಕ್ಷಕನು. ಇಂತಹ ವೈಶ್ವಾನರಾಗ್ನಿಯನ್ನು ದೇವತೆಗಳು ತಮ್ಮ ಮುಖವನ್ನಾಗಿ ಮಾಡಿಕೊಂಡರು'' ಎಂದು.

'ಅಗ್ನಿರ್ದೇವಾನಾಂ ಮುಖಮ್' ಇತ್ಯಾದಿ ಶ್ರುತಿಗಳ ಅರ್ಥ

तत्वप्रकाशिका – गतिसाधनत्वादरतिः पादः । 'ऋताय जातम्' इति समाख्यानात्सप्तमी तादर्थ्ये । 'अन्नं थम्' इति हि श्रुतिः । 'अग्निर्देवानां मुखम्' इति च । 'वैश्वानरे तद्धुतं भवति' इति वाक्यार्थः । एवंवित् यद्यपि चाण्डालायोच्छिष्टं प्रयच्छेत् आत्मनि हैवास्य तद्वैश्वानरे हुतं स्यादिति वाक्यादवगन्तव्यः ।

ಗಮನಕ್ಕೆ ಸಾಧನವಾಗಿದ್ದರಿಂದ ಅರತಿಪದಕ್ಕೆ ಪಾದವೆಂದರ್ಥ. 'ಋತಾಯ ಜಾತಮ್' ಎಂಬ ಸಮಾಖ್ಯಾಶ್ರುತಿಯು ಪ್ರಮಾಣವಾಗಿರುವುದರಿಂದ ಪ್ರಕೃತ ಸಪ್ತಮೀವಿಭಕ್ತಿಯು ತಾದರ್ಥ್ಯದಲ್ಲಿ (ಅದಕ್ಕೋಸ್ಕರ ಎಂಬರ್ಥದಲ್ಲಿ) ಪ್ರಯುಕ್ತವಾಗಿದೆ. 'ಅನ್ನಂ ಥಮ್' ಅತ್ಯಂತವಾದ ಅನ್ನವಿದ್ದವನು ಎಂದು ಶ್ರುತಿಯಿರುತ್ತದೆ. 'ಅಗ್ನಿರ್ದೇವಾನಾಂ ಮುಖಮ್' ಅಗ್ನಿಯು ದೇವತೆಗಳಿಗೆ ಮುಖನಾಗಿದ್ದಾನೆ ಎಂದೂ ಶ್ರುತಿಯಿರುತ್ತದೆ. ''ವೈಶ್ವಾನರೇ ತದ್ಧುತಮ್ ಭವತಿ'' ಎಂಬುದರ ಅರ್ಥವನ್ನು 'ಏವಂವಿತ್' ಎಂಬ ವಾಕ್ಯದಿಂದ ತಿಳಿಯಬೇಕು. ಈ ರೀತಿಯಾಗಿ ವೈಶ್ವಾನರನನ್ನು ತಿಳಿದವನು ವಸ್ತುತಃ ಚಾಂಡಾಲನಿಗೆ ತನ್ನ ಉಚ್ಛಿಷ್ಟವನ್ನು

ನೀಡಿದರೂ ಸಹ ಆ ಚಾಂಡಾಲನಲ್ಲಿರುವ ವೈಶ್ವಾನರನಲ್ಲಿ ಹೋಮಮಾಡಿದಂತಾಗುತ್ತದೆ ಎಂದಿದರರ್ಥ.

ಪೂರ್ವಪಕ್ಷದ ನಿರಾಕರಣೆ

तत्वप्रकाशिका – भक्तम् = अन्नम् । परिहारसूत्रांशं व्याचष्टे – नेति ।।

'ಭಕ್ತಮ್' ಎಂಬ ಶಬ್ದಕ್ಕೆ ಅನ್ನವು ಎಂದರ್ಥ. ಈ ರೀತಿಯಾದ ಪೂರ್ವಪಕ್ಷವನ್ನು ಪರಿಹಾರಮಾಡುವ ಸೂತ್ರದ ಭಾಗವನ್ನು ''ನ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಅಗ್ನಿದೇವತೆ ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಮಾಣಗಳು ಸಮಾನವಲ್ಲ

तत्वप्रकाशिका – उभयत्र श्रुत्यादिसाम्याद्वैश्वानरस्य विष्णुत्वनिश्चयोपपत्तेः।

ಅಗ್ನಿದೇವತೆ ಹಾಗೂ ವಿಷ್ಣುವಿನಲ್ಲಿ ಶ್ರುತಿ ಹಾಗೂ ಲಿಂಗಾದಿಗಳು ಸಮಾನವಾಗಿರುವುದರಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿಶ್ಚಯಿಸಲಾಗದು ಎಂಬ ಪೂರ್ವಪಕ್ಷವು ಅಯುಕ್ತವಾಗಿದೆ. ಏಕೆಂದರೆ ಇಬ್ಬರಲ್ಲಿಯೂ ಶ್ರುತಿಲಿಂಗಾದಿಗಳು ಸಮಾನವಾಗಿದ್ದರೂ ಸಾವಕಾಶತ್ವ ನಿರವಕಾಶತ್ವಗಳ ಬಲದಿಂದ ನಿರ್ಣಯಿಸಬಹುದು.

ಅಗ್ನಿಲಿಂಗಗಳೆಲ್ಲವೂ ಸಾವಕಾಶ

तत्वप्रकाशिका – तत्र यदग्निनाम लिङ्गं कर्म च वैश्वानरे श्रूयते तद्विष्णौ सावकाशम् । 'अथ हेममात्मानम्' इत्यग्न्यादिनामलिङ्गकर्मत्वेन विष्णोरुपासनोपदेशात् ।

ಈ ವಿಷಯದಲ್ಲಿ ಅಗ್ನಿ ಎಂಬ ನಾಮ, ಅಗ್ನಿಯ ಲಿಂಗ ಪಾಚಕತ್ವವೆಂಬ ಕರ್ಮ ಇವೆಲ್ಲವೂ ವೈಶ್ವಾನರನಲ್ಲಿ ಏನು ಕೇಳಿಸುತ್ತಿವೆಯೋ ಅವೆಲ್ಲವೂ ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಹೇಗೆಂದರೆ 'ಅಥ ಹೇಮಮಾತ್ಮಾನಮ್' ಎಂಬುದಾಗಿ ಶ್ರುತಿಯಲ್ಲಿ ನಾನಾ ಲಿಂಗ, ಕರ್ಮಗಳಿಂದ ವಿಷ್ಣುವನ್ನು ಉಪಾಸನೆ ಮಾಡಬೇಕೆಂದು ಉಪದೇಶಿಸಲಾಗಿದೆ.

ಆತ್ಮಶಬ್ದಾದಿಗಳೇ ವಿಷ್ಣುತ್ವ ನಿರ್ಣಾಯಕ

तत्वप्रकाशिका – न चात्मशब्दादेरन्यस्त्यवकाशः । अतो निरवकाशेन सावकाशबाधोपपत्तेः युज्यते वैश्वानरस्य विष्णुत्वनिश्चय इति भावः ।

ವಿಷ್ಣುವಿನಲ್ಲಿ ಪ್ರಸಿದ್ಧವಾದ ಆತ್ಮಶಬ್ದಾದಿಗಳಿಗೆ ಬೇರೆ ಕಡೆ ಅವಕಾಶವಿರುವುದಿಲ್ಲ. ಆದ್ದರಿಂದ ನಿರವಕಾಶವಾದ ಆತ್ಮಶಬ್ದದ ಬಲದಿಂದ ಸಾವಕಾಶವಾದ ಅಗ್ನಿಶಬ್ದ ಮೊದಲಾದವುಗಳಿಗೆ ಬಾಧವು ಬರುತ್ತದೆ. ಆದ್ದರಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿಶ್ಚಯಿಸಬಹುದು.

ಉಪಾಸನೆಗೆ ಹೇಳಿದ್ದು ಅಸತ್ತಲ್ಲ

तत्वप्रकाशिका – नच वाच्यमुपासनार्थमुक्तत्वादेव 'योषितमग्निं ध्यायीत' इत्यादाविवाऽसत्वम् । 'नाविद्यमानं ब्रुवते वेदा ध्यातुं न वैदिकाः' इत्यादिवचनात् । वाक्यान्तरस्याविरोधेन योऽर्थः स्याप्यते तदर्थत्वाच्च ।

ಇನ್ನು ಉಪಾಸನೆಗೋಸ್ಕರ ಹೇಳಿದ್ದರಿಂದಲೇ ಅದು ಅಸತ್ತಾಗಿದೆ ಎಂದು ಹೇಳುತ್ತೇವೆ. ಯಾವ ರೀತಿಯಲ್ಲಿ 'ಯೋಷಿತಮಗ್ನಿಂ ಧ್ಯಾಯೀತ' ಎಂಬಲ್ಲಿ 'ಸ್ತ್ರೀಯನ್ನು ಅಗ್ನಿಯನ್ನಾಗಿ ತಿಳಿಯಬೇಕು' ಎಂದು ಹೇಳಿದಾಗ ಸ್ತ್ರೀಯಲ್ಲಿ ಅಗ್ನಿಯು ಅಸತ್ತಾಗಿದೆಯೋ ಅದೇ ರೀತಿಯಾಗಿ ವಿಷ್ಣುವಿನಲ್ಲಿ ಉಪಾಸನೆಗೋಸ್ಕರ ಹೇಳಿರುವ ನಾಮಲಿಂಗಾದಿಗಳೆಲ್ಲವೂ ಅಸತ್ತಾಗಿರುತ್ತವೆ ಎಂದರೆ ಹೀಗೆ ಹೇಳಬಾರದು. ಏಕೆಂದರೆ 'ನಾವಿದ್ಯಮಾನಂ ಬ್ರುವತೇ ವೇದಾ ಧ್ಯಾತುಂ ನ ವೈದಿಕಾಃ' 'ಇಲ್ಲದೇ ಇರುವುದನ್ನು ಉಪಾಸನೆಗೋಸ್ಕರ ವೇದಗಳು ಹಾಗೂ ತದನುಸಾರಿಯಾದ ಸ್ಮೃತಿಗಳು ಹೇಳುವುದಿಲ್ಲ' ಎಂಬ ಪ್ರಮಾಣವು ಆಧಾರವಾಗಿದೆ. ಅದಲ್ಲದೇ 'ಅಹಂ ವೈಶ್ವಾನರೋ ಭೂತ್ವಾ' ಎಂಬ ಗೀತಾವಾಕ್ಯಕ್ಕೆ ಅವಿರುದ್ಧವಾದ ಅರ್ಥವನ್ನೇ 'ವೈಶ್ವಾನರಮುಪಾಸ್ತೇ' ಎಂಬ ವಾಕ್ಯಕ್ಕೆ ಹೇಳಬೇಕು. ಆದ್ದರಿಂದಲೂ ಅಸದರ್ಥವನ್ನು ಈ ವಾಕ್ಯವು ಹೇಳುವುದಿಲ್ಲ.

ವೈಶ್ವಾನರನೆಂದು ಉಪಾಸನೆ ಮಾಡಿರಿ

तत्वप्रकाशिका – विश्वं = पूर्णम् । आरात् = समीपे स्वहृदये । प्रथम 'इति'शब्दो विधिसमाप्तौ । द्वितीयस्य इत्युपासीतेत्यन्वयः । प्रकरणबलाच्च वैश्वानरस्य विष्णुत्वनिश्चयो भवतीत्याह – अनात्तत्वादिति ।।

ವಿಶ್ವ = ಪೂರ್ಣ, ಆರಾತ್ = ಸಮೀಪದಲ್ಲಿ ಎಂದರೆ ತನ್ನ ಹೃದಯದಲ್ಲೇ. ಇಲ್ಲಿ ಮೊದಲಿರುವ ಇತಿಶಬ್ದವು ವಿಧಿವಾಕ್ಯದ ಸಮಾಪ್ತ್ಯರ್ಥದಲ್ಲಿದೆ. ಎರಡನೆಯ ಇತಿಶಬ್ದವು 'ಇತ್ಯುಪಾಸೀತ' ಎಂಬಲ್ಲಿ ಅನ್ವಯವನ್ನು ಹೊಂದುತ್ತದೆ. ಪ್ರಕರಣದ ಬಲದಿಂದಲೂ ಸಹ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಸಿದ್ಧವಾಗುತ್ತದೆ ಎಂದು ''ಅನಾತ್ತತ್ವಾತ್'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಇದು ವಿಷ್ಣುಪ್ರಕರಣ ಎನ್ನಲು ಆತ್ಮ ಹಾಗೂ ಬ್ರಹ್ಮಶಬ್ದಗಳೇ ಆಧಾರ

तत्वप्रकाशिका – 'को न आत्मा किं ब्रह्म' इति विचारपूर्वकं वैश्वानरविद्याया आरभ्याधीतत्वेन विष्णुप्रकरणत्वाच्च वैश्वानरो विष्णुरेवेति निश्चयो भवति । 'अनात्तत्वात्' इति वचनेन विष्णोरन्येषां आत्मत्वाद्यसम्भवादित्यर्थः ।

'ಕೋ ನ ಆತ್ಮಾ ಕಿಂ ಬ್ರಹ್ಮ' ಉಪಾಸ್ಯನಾದ ಆತ್ಮನು ಯಾರು ಅವನು ಯಾವ ಪ್ರಕಾರದಲ್ಲಿದ್ದಾನೆ. ಈ ರೀತಿಯಾಗಿ ವಿಚಾರಪೂರ್ವಕವಾಗಿ ವೈಶ್ವಾನರವಿದ್ಯೆಯು ಪ್ರಾರಂಭವಾಗಿದೆ. ಆದ್ದರಿಂದ ಇದು ವಿಷ್ಣುಪ್ರಕರಣವೇ ಆಗಿದೆ ಎಂದು ನಿಶ್ಚಯವಾಗುತ್ತದೆ. ಏಕೆಂದರೆ ಆತ್ಮ ಹಾಗೂ ಬ್ರಹ್ಮಶಬ್ದಗಳು ಮುಖ್ಯವಾಗಿ ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಹಾಗೂ ''ಅನಾತ್ತತ್ವಾತ್'' ಎಂಬ ಮಾತಿನಿಂದ ವಿಷ್ಣುವಿಗಿಂತ ಭಿನ್ನರಾದವರು ಆತ್ಮಶಬ್ದಾದಿಗಳಿಂದ ಪ್ರತಿಪಾದ್ಯರಾಗುವುದಿಲ್ಲವೆಂದು ಸ್ಪಷ್ಟವಾಗುತ್ತದೆ.

ಸಮಾಖ್ಯಾಪ್ರಮಾಣದಿಂದ ವೈಶ್ವಾನರನಿಗೆ ವಿಷ್ಣುತ್ವ ಸಮರ್ಥನೆ

तत्वप्रकाशिका – श्रुतिसमाख्यया च वैश्वानरस्य विष्णुत्वमुपपादयति।। चन्द्रमा इति ।। यः पुरुषाख्यो विष्णुः पुरुषसूक्ते ''शीर्ष्णो द्यौः समवर्तत' 'चक्षोः सूर्यो अजायत' 'प्राणाद्वायुरजायत' 'पद्भ्यां भूमिरजायत' इत्यादिना वाक्येन द्युम्वादिजनकशीर्षादिमानभिहितस्तद्विधमेवात्र वैश्वानरं चाधीयते छन्दोगाः 'मूर्धैव सुतेजाश्चक्षुर्विश्वरूपः प्राणः पृथग्वर्त्मा पृथिव्येव पादौ' इत्यादिना वाक्येन । अतः पुरुषसूक्तसमाख्ययाऽपि विष्णुरेव वैश्वानर इत्यर्थः ।

ಸಮಾಖ್ಯಾಶ್ರುತಿಯನ್ನು ಪ್ರಮಾಣವನ್ನಾಗಿ ನೀಡಿ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. ''ಚಂದ್ರಮಾ'' ಇತ್ಯಾದಿಯಾಗಿ. ಪುರುಷನೆಂಬ ವಿಷ್ಣುವು ಪುರುಷಸೂಕ್ತದಲ್ಲಿ 'ಶೀರ್ಷ್ಣೋ ದ್ಯೌಃ ಸಮವರ್ತತ' ತಲೆಯಿಂದ ದ್ಯುಲೋಕವು ಹುಟ್ಟಿತು. 'ಚಕ್ಷೋಃ ಸೂರ್ಯೋ ಅಜಾಯತ' ಕಣ್ಣಿನಿಂದ ಸೂರ್ಯನು ಹುಟ್ಟಿದನು. 'ಪ್ರಾಣಾದ್ ವಾಯುರಜಾಯತ' = ಪ್ರಾಣದಿಂದ ವಾಯುವು ಹುಟ್ಟಿದನು. 'ಪದ್ಭ್ಯಾಂ ಭೂಮಿರಜಾಯತ' ಕಾಲುಗಳಿಂದ ಭೂಮಿಯು ಹುಟ್ಟಿತು ಇತ್ಯಾದಿ ವಾಕ್ಯದಿಂದ ದ್ಯುಲೋಕ, ಸೂರ್ಯ ಮೊದಲಾದವುಗಳಿಗೆ ಜನಕವಾದ ತಲೆ ಮೊದಲಾದ ಅವಯವಗಳುಳ್ಳವನೆಂದು ಹೇಳಲ್ಪಟ್ಟಿದ್ದಾನೆ. ಅದರಂತೆ ಛಾಂದೋಗ್ಯಶ್ರುತಿಯಲ್ಲಿಯೂ ಸಹ 'ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾ ಪೃಥಿವ್ಯೇವ ಪಾದೌ' ಎಂಬುದಾಗಿ ಪುರುಷಸೂಕ್ತದಲ್ಲಿ ವರ್ಣನೆ ಮಾಡಿದಂತೆ ಭಗವಂತನ ಅವಯವಗಳನ್ನು ವರ್ಣನೆ ಮಾಡಲಾಗಿದೆ. ಹೀಗೆ ಪುರುಷಸೂಕ್ತರೂಪಸಮಾಖ್ಯಾ ಪ್ರಮಾಣದಿಂದಲೂ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿರ್ಣಯವಾಗುತ್ತದೆ.

ಪುರುಷಸೂಕ್ತವು ವಿಷ್ಣುಪರ

तत्वप्रकाशिका – ननु पुरुषसूक्तस्य विष्णुपरत्वे भवेत्तत्समाख्ययैतद्विद्याया विष्णुपरत्वं तदेव कुत इत्यत आह – चशब्देनेति ।। विष्णुपरत्वं पुरुषसूक्तस्य

(प्र)सिद्धमिति सूचयतीत्यर्थः । अपिपदेनैवोभयसमुच्चयसिद्धेर्नान्यत्रोपक्षीणश्च शब्दः । किं तद्वेदादि? इत्यतस्तद्दुदाहरति – तथा चेति ।।

ಪುರುಷಸೂಕ್ತವು ವಿಷ್ಣುಪರವಾದರೆ ಆಗ ಇಂತಹ ಸಮಾಖ್ಯಾಪ್ರಮಾಣದಿಂದ ವೈಶ್ವಾನರವಿದ್ಯೆಯು ವಿಷ್ಣುಪರವೆಂದು ನಿಶ್ಚಯಿಸಬಹುದು. ಆದರೆ ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎಂಬುದನ್ನು ಹೇಗೆ ನಿರ್ಣಯಿಸುತ್ತೀರಿ ಎಂಬ ಪ್ರಶ್ನೆಗೆ ''चशब्देन'' ಎಂದು ಉತ್ತರಿಸಿದ್ದಾರೆ. ಚ ಶಬ್ದವು ಪುರುಷಸೂಕ್ತವು ವಿಷ್ಣುಪರವಾಗಿದೆ ಎಂಬ ವಿಷಯವನ್ನು ಸೂಚಿಸುತ್ತಿದೆ. ಅಪಿ ಪದದಿಂದಲೇ ಪ್ರಕರಣ ಹಾಗೂ ಸಮಾಖ್ಯಾಪ್ರಮಾಣಗಳ ಸಮುಚ್ಚಯವು ಸಿದ್ಧವಾಗುತ್ತಿರಬೇಕಾದರೆ ಚಶಬ್ದದ ಅರ್ಥವು ಕ್ಷೀಣವಾಯಿತೆಂದು ಶಂಕಿಸಬಾರದು. ಏಕೆಂದರೆ ಚಶಬ್ದದ ಅರ್ಥವು ಹಾಗೂ ಅಪಿಶಬ್ದದ ಅರ್ಥವೇ ಬೇರೆಯಾಗಿರುವುದರಿಂದ. ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎನ್ನುವುದಕ್ಕೆ ಏನು ಪ್ರಮಾಣ ಎಂಬ ಪ್ರಶ್ನೆಗೆ ''तथा च'' ಎಂಬುದರಿಂದ ಪ್ರಮಾಣವನ್ನು ಉದಾಹರಿಸುತ್ತಿದ್ದಾರೆ.

ಭಾಷ್ಯದಲ್ಲಿ ಶ್ರುತಿಗಿಂತ ಮೊದಲು ಪುರಾಣ ಉಲ್ಲೇಖಿಸಲು ಏನು ಕಾರಣ ?

तत्वप्रकाशिका – श्रुतेः प्रथमप्रतिज्ञानेऽपि तस्याः पुरुषसूक्तमुपन्यस्य विष्णुपरतया व्याख्यात्र्याः साक्षात्प्रतिज्ञातार्थासाधकत्वान्न प्रथममुदाहरणम् । प्रतिज्ञा त्वाधिक्यक्रमाभिप्राया । परो विलक्षणः । आदिपदेन 'सर्वतः पौरुषे सूक्ते गुणा विष्णोरुदीरिताः' इति ब्रह्मतर्कादिग्रहणम् ।

ಪ್ರಮಾಣಪ್ರಶ್ನೆಯಲ್ಲಿ ವಸ್ತುತಃ ಶ್ರುತಿಯನ್ನು ಮೊದಲು ಪ್ರಮಾಣವಾಗಿ ಪ್ರತಿಜ್ಞೆ ಮಾಡಬೇಕು, ಆದರೆ ಪುರಾಣವಾಕ್ಯವನ್ನೇಕೆ ಪ್ರಮಾಣವನ್ನಾಗಿ ನೀಡಿದರೆಂದರೆ ಪೂರ್ವವಾಕ್ಯದಲ್ಲಿ ಶ್ರುತಿಪ್ರಮಾಣವಿಷಯದಲ್ಲಿ ಪ್ರತಿಜ್ಞೆಯನ್ನು ಮಾಡಿದ್ದರು. ಪ್ರಕೃತ ಪ್ರಮಾಣವನ್ನಾಗಿ ನೀಡಲ್ಪಟ್ಟ ಶ್ರುತಿಯಲ್ಲಿ ಮೊದಲು ಪುರುಷಸೂಕ್ತವನ್ನು ಹೇಳಿ, ಅನಂತರ ಅದನ್ನು ವಿಷ್ಣುಪರವಾಗಿ ಯೋಜನೆ ಮಾಡಿದ್ದಾರೆ. ಇದನ್ನು ವ್ಯಾಖ್ಯಾನಿಸುವ ಈ ಪುರುಷಸೂಕ್ತದ ಮಂತ್ರವು ನೇರವಾಗಿ ಪ್ರತಿಜ್ಞೆಮಾಡಲ್ಪಟ್ಟ ಅರ್ಥವನ್ನು ಸಾಧಿಸದ ಕಾರಣ ಇದನ್ನು ಮೊದಲು ಉದಾಹರಿಸಿಲ್ಲ. ಹಾಗಾದರೆ ಪ್ರತಿಜ್ಞೆಯನ್ನೇಕೆ ಮಾಡಿದರೆಂದರೆ ವಿಷ್ಣುವಿಷಯದಲ್ಲಿ ಅನೇಕ ಪ್ರಮಾಣಗಳಿವೆ ಎಂಬ

ವಿವಕ್ಷೆಯಿಂದಷ್ಟೇ ಮೊದಲು ಶ್ರುತಿಯನ್ನು ಪ್ರತಿಜ್ಞೆಮಾಡಿದ್ದಾರೆ. ''ಪರಃ'' ಎಂಬ ಶಬ್ದಕ್ಕೆ ವಿಲಕ್ಷಣವಾದವನು ಎಂದರ್ಥ. ಆದಿಪದದಿಂದ 'ಪುರುಷಸೂಕ್ತದಲ್ಲಿ ಎಲ್ಲ ಮಂತ್ರಗಳಲ್ಲಿಯೂ ವಿಷ್ಣುವಿನ ಗುಣವೇ ಹೇಳಲ್ಪಟ್ಟಿದೆ' ಎಂಬ ಬ್ರಹ್ಮತರ್ಕದ ಮಾತನ್ನು ವಿವಕ್ಷಿಸಬೇಕು.

'ದ್ಯುಲೋಕವು ವೈಶ್ವಾನರನ ತಲೆ' ಎಂಬುದರ ಅಭಿಪ್ರಾಯ

तत्वप्रकाशिका – ननु पुरुषसूक्ते द्युभ्वादिजनकशीर्षादिमत्वं पुरुषस्योच्यते वैश्वानरविद्यायां पुनर्वैश्वानरस्य तदभेदोऽतो विरुद्धार्थत्वान्नेयं समाख्येत्यत आह – यस्मादिति ।।

ಪುರುಷಸೂಕ್ತದಲ್ಲಿ ದ್ಯುಲೋಕ ಮೊದಲಾದವುಗಳಿಗೆ ಭಗವಂತನ ತಲೆಯು ಜನಕವಾಗಿದೆಯೆಂದು ಹೇಳಿದ್ದಾರೆ. ಆದರೆ ವೈಶ್ವಾನರವಿದ್ಯೆಯಲ್ಲಿ ವೈಶ್ವಾನರನ ತಲೆಯೇ ದ್ಯುಲೋಕವಾಗಿದೆ ಎಂಬುದಾಗಿ ಅಭೇದವನ್ನು ಹೇಳಿದ್ದಾರೆ. ಹೀಗೆ ಎರಡಕ್ಕೂ ವಿರುದ್ಧಾರ್ಥತ್ವವಿರುವುದರಿಂದ ಪುರುಷಸೂಕ್ತವು ಸಮಾಖ್ಯಾಪ್ರಮಾಣವೆಂದು ಹೇಗೆ ಪರಿಗಣಿಸಲು ಸಾಧ್ಯ? ಎಂಬ ಪ್ರಶ್ನೆಗೆ ''ಯಸ್ಮಾತ್'' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಜನ್ಯಜನಕಗಳಲ್ಲಿ ಅಭೇದವ್ಯವಹಾರವಿದೆ

तत्वप्रकाशिका – वैश्वानराङ्गानां सूर्याद्यभेदोक्तावपि न पुरुषसूक्तवैश्वानरविद्ययोः विरोधः, अभेदोक्तेरपि तज्जन्यजनकभावविवक्षावत्त्वादिति भावः ।। २६ ।।

ವೈಶ್ವಾನರನ ತಲೆ ಮೊದಲಾದ ಅಂಗಗಳಿಗೆ ಸೂರ್ಯಾದಿಗಳಿಂದ ಅಭೇದವನ್ನು ಹೇಳಿರಬಹುದು. ಆದರೂ ಪುರುಷಸೂಕ್ತಕ್ಕೂ ವೈಶ್ವಾನರವಿದ್ಯೆಗೂ ವಿರೋಧವು ಬರುವುದಿಲ್ಲ. ಏಕೆಂದರೆ ಜನ್ಯಜನಕಭಾವವಿವಕ್ಷೆಯಿಂದ ಅಥವಾ ಆಧಾರಾಧೇಯಭಾವವಿವಕ್ಷೆಯಿಂದ ಹಾಗೆ ಅಭೇದವನ್ನು ವೈಶ್ವಾನರವಿದ್ಯೆಯಲ್ಲಿ ಹೇಳಿರುತ್ತಾರೆಂದು ತಿಳಿಯಬೇಕು.

ಭಾವದೀಪ

ಆತ್ಮಶಬ್ದವು ಸಾವಕಾಶವಲ್ಲವೇ ? ಎಂದು ಆಕ್ಷೇಪ

भावदीपः – शब्दादिभ्योऽन्तःप्रतिष्ठानात् ।।

उभयत्र विशेषश्रुत्यादौ पुनः सावकाशत्वनिरवकाशत्वप्राबल्यान्निश्चय इति न्यायविवरणोक्तमुभयत्र विशेषश्रुत्यादिकं व्यञ्जयन् तदनुरोधेन भाष्यं व्याचष्टे – यदुक्तमित्यादिना ।।

॥ शब्दादिभ्योऽन्तःप्रतिष्ठानात् ॥

''ಉಭಯತ್ರ ವಿಶೇಷಶ್ರುತ್ಯಾದೌ ಪುನಃ ಸಾವಕಾಶತ್ವನಿರವಕಾಶತ್ವಪ್ರಾಬಲ್ಯಾನ್ನಿಶ್ಚಯಃ'' ಎಂಬುದಾಗಿ ನ್ಯಾಯವಿವರಣದಲ್ಲಿ ಹೇಳಿರುತ್ತಾರೆ. ಈ ವಾಕ್ಯದಲ್ಲಿರುವ ''ಉಭಯತ್ರ ವಿಶೇಷಶ್ರುತ್ಯಾದಿಕಂ'' ಎಂಬ ಪದದ ಅರ್ಥವನ್ನು ಅನುಸರಿಸಿ ಭಾಷ್ಯವನ್ನು ವ್ಯಾಖ್ಯಾನಿಸಲು ಹೊರಟಿದ್ದಾರೆ ''ಯದುಕ್ತಂ'' ಇತ್ಯಾದಿಯಾಗಿ.

ಅಧಿಕರಣದ ವಿಷಯವಾಕ್ಯ ಯಾವುದು ?

भावदीपः – समाख्यानाच्चेति ।। विशेषश्रुत्यादावित्यत्रादिपदार्थोक्तिः । छान्दोग्ये अग्निपदाभावादाह – बृहदारण्यक इति ।। सप्तमाध्याय इत्यर्थः । तस्याप्यत्र विषयत्वमित्यग्रे व्यक्तं भाष्ये ।

ಟೀಕೆಯಲ್ಲಿರುವ ''ಸಮಾಖ್ಯಾನಾಚ್ಚ'' ಎಂಬುದು ನ್ಯಾಯವಿವರಣದಲ್ಲಿರುವ ವಿಶೇಷಶ್ರುತ್ಯಾದೌ'' ಎಂಬಲ್ಲಿರುವ ಆದಿಪದದ ವ್ಯಾಖ್ಯಾನವಾಗಿದೆಯೆಂದು ತಿಳಿಯಬೇಕು. ಛಾಂದೋಗ್ಯಶ್ರುತಿಯಲ್ಲಿ ಅಗ್ನಿಪದವು ಕೇಳಿಸದ ಕಾರಣ ಬೃಹದಾರಣ್ಯಕ ಶ್ರುತಿಯನ್ನು ಅನುಸರಿಸಿದ್ದಾರೆಂದು ''ಬೃಹದಾರಣ್ಯಕೇ'' ಎಂದು ಹೇಳಿದ್ದಾರೆ. ಏಳನೇ ಅಧ್ಯಾಯದ ಬೃಹದಾರಣ್ಯಕೋಪನಿಷತ್ತಿನಲ್ಲಿ ''ವೈಶ್ವಾನರಂ'' ಎಂಬ ಶ್ರುತಿಯು ಕೇಳಿಸುತ್ತಿದೆ ಎಂದು ತಿಳಿಯಬೇಕು. ಅದೂ ಸಹ ಈ ಅಧಿಕರಣಕ್ಕೆ ವಿಷಯವಾಗಿದೆಯೆಂಬ ವಿಚಾರವು ಮುಂದಿನ ಭಾಷ್ಯದಿಂದ ಸ್ಪಷ್ಟವಾಗುತ್ತದೆ.

ಸೂತ್ರದಲ್ಲಿರುವ ಆದಿಪದಾರ್ಥವೇನು ?

भावदीपः – नामलिङ्गादिनेत्यादिपदात् सर्वकर्मेत्यग्रेतनस्मृत्यनुरोधादाह –कर्मेति ।। तथाचास्य क्रियारूपत्वाल्लिङ्गसङ्ग्राहकादिपदेनैवानुक्त्वाऽन्तःप्रतिष्ठानादिति सूत्रे पृथगुक्तिर्युक्तेति भावः ।

''ನಾಮಲಿಂಗಾದಿನಾ'' ಎಂಬಲ್ಲಿರುವ ಆದಿ ಪದದಿಂದ ''ಸರ್ವಕರ್ಮ'' ಎಂದು ಮುಂದೆ ಉದಾಹರಿಸುವ ಶ್ರುತಿಯನ್ನು ವಿವಕ್ಷಿಸಬೇಕು. ಅದಕ್ಕೆ ಅನುಸಾರಿಯಾಗಿ ''ಕರ್ಮ'' ಇತ್ಯಾದಿ ಟೀಕೆಯು ಹೊರಟಿದೆ. ಪಾಚಕತ್ವ ಕ್ರಿಯಾವಿಶೇಷವಾಗಿದೆ. ಆದ್ದರಿಂದ ಸೂತ್ರದಲ್ಲಿರುವ ಆದಿ ಪದದಿಂದ ಲಿಂಗಗಳಷ್ಟೇ ಸಂಗ್ರಹವಾಗುತ್ತವೆ. ಕ್ರಿಯಾ ರೂಪವಾದ ಪಾಚಕತ್ವವು ಸಂಗ್ರಹವಾಗುವುದಿಲ್ಲವೆಂಬ ಉದ್ದೇಶದಿಂದ ''ಅಂತಃ ಪ್ರತಿಷ್ಠಾನಾತ್'' ಎಂದು ಸೂತ್ರದಲ್ಲಿ ಪ್ರತ್ಯೇಕವಾಗಿ ಇದನ್ನು ಉಲ್ಲೇಖಿಸಿದ್ದಾರೆಂಬ ಅಂಶವನ್ನು ಗಮನಿಸಬೇಕು.

ಪಾಚಕತ್ವಧರ್ಮವನ್ನು ಪ್ರತ್ಯೇಕ ವಿವಕ್ಷಿಸಲು ತತ್ತ್ವಪ್ರದೀಪಕಾರರ ಅಭಿಪ್ರಾಯ

भावदीपः – तत्त्वप्रदीपे तु प्रधानलिङ्गत्वात् पृथगुक्तिरित्युक्तम् । अन्तःप्रतिष्ठानव्यक्त्यर्थं पूर्वशेषमाह – अयमिति ।।

ತತ್ತ್ವಪ್ರದೀಪದಲ್ಲಿ ''ಅಂತಃ ಪ್ರತಿಷ್ಠಾನಾತ್'' ಎಂಬುದಾಗಿ ಪಾಚಕತ್ವ ಧರ್ಮವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಬೇರೆ ಕಾರಣವನ್ನೇ ಹೇಳಿದ್ದಾರೆ. ಪಾಚಕತ್ವವು ಪ್ರಧಾನವಾದ ಲಿಂಗವಾಗಿರುವುದರಿಂದ ಸೂತ್ರಕಾರರು ಪ್ರತ್ಯೇಕವಾಗಿ ವಿವಕ್ಷಿಸಿದ್ದಾರೆಂದು ಹೇಳಿದ್ದಾರೆ. ಅಂತಃ ಪ್ರತಿಷ್ಠಾನತ್ವವು ಸ್ಪಷ್ಟವಾಗಿ ತಿಳಿಯಬೇಕೆಂಬ ಉದ್ದೇಶದಿಂದ ಶ್ರುತಿಯ ಹಿಂದಿನ ವಾಕ್ಯವನ್ನು ''ಅಯಮಗ್ನಿಃ'' ಎಂಬುದರಿಂದ ಉಲ್ಲೇಖಿಸಿದ್ದಾರೆ.

ಭೋಜನವು ಮಹಾವಿಷ್ಣುವಿಗೆ ಮಾತ್ರ ನೀಡುವ ಆಹುತಿ

भावदीपः – आगच्छेदास्यं छान्दोग्ये च पचनरूपाग्निकर्म श्रूयत इत्यर्थः । तस्मादिति भाष्यपदमनूद्यार्थमाह – तस्मादिति ।। उक्तहेत्वन्वयाय न विष्णुरित्येतत् सावधारणं व्याचष्टे – न विष्णुरेवेति ।।

ಛಾಂದೋಗ್ಯದಲ್ಲಿಯೂ ಪಚನರೂಪವಾದ ಅಗ್ನಿ ಕ್ರಿಯೆಯು ಕೇಳಿಸುತ್ತಿದೆ ಎಂದು ತಿಳಿಯಬೇಕು. ''ತಸ್ಮಾತ್'' ಎಂಬ ಭಾಷ್ಯದ ಪದವನ್ನು ಅನುವಾದ ಮಾಡಿ ''ತಸ್ಮಾತ್'' ಎಂಬ ವಾಕ್ಯದಿಂದಲೇ ಅರ್ಥವನ್ನು ಹೇಳುತ್ತಿದ್ದಾರೆ. ಹಿಂದೆ ಹೇಳಿದ ಹೇತುವಿಗೆ ಅನ್ವಯವನ್ನು ತಿಳಿಸುವುದಕ್ಕಾಗಿ ''ನ ವಿಷ್ಣುಃ'' ಎಂಬುದನ್ನು ಸಾವಧಾರಣವಾಗಿ ವ್ಯಾಖ್ಯಾನಿಸುತ್ತಿದ್ದಾರೆ ''ನ ವಿಷ್ಣುರೇವ'' ಎಂಬುದಾಗಿ.

ಭಿನ್ನಭಿನ್ನವಾಕ್ಯಗಳ ಉಲ್ಲೇಖವೇಕೆ ?

ಭಾವದೀಪಃ – ಸಮಾಖ್ಯೇತಿ ।। ತತ್ತದ್ವಾಕ್ಯೋದ್ಧಾರ ಇತ್ಯನುಷಙ್ಗಃ । ಸಿದ್ಧಾನ್ತೇ 'ಅಹಂ ವೈಶ್ವಾನರೋ ಭೂತ್ವಾ' ಇತಿ ಯಥಾ ಸಮಾಖ್ಯಾ ತಥಾ ವೈಶ್ವಾನರೋऽಗ್ನಿರಿತ್ಯಪ್ಯಸ್ತಿ । 'ಅಯಮಗ್ನಿಃ' ಇತಿ ಸಮಾಖ್ಯೇತಿ ವಕ್ತುಮಿತ್ಯರ್ಥಃ ।

ಟೀಕೆಯಲ್ಲಿರುವ ''ಸಮಾಖ್ಯಾರೂಪೇಣ'' ಎಂಬುದರಿಂದ ಆಯಾ ವಾಕ್ಯಗಳನ್ನು ವಿವಕ್ಷಿಸಬೇಕೆಂದು ತಿಳಿಯಬೇಕು. ಅಂದರೆ ಸಿದ್ಧಾಂತದಲ್ಲಿ ಯಾವರೀತಿಯಾಗಿ ''ಅಯಂ ವೈಶ್ವಾನರೋ ಭೂತ್ವಾ'' ಎಂದು ಸಮಾಖ್ಯಾಪ್ರಮಾಣವು ಕೇಳಿಸುತ್ತಿದೆಯೋ, ಅದೇ ರೀತಿಯಾಗಿ ಪೂರ್ವಪಕ್ಷದಲ್ಲಿಯೂ ಅಗ್ನಿಯು ವೈಶ್ವಾನರನಾಗಿದ್ದಾನೆನ್ನಲು ''ಅಯಂ ಅಗ್ನಿಃ'' ಎಂಬುದಾಗಿ ಸಮಾಖ್ಯಾಪ್ರಮಾಣವು ಇರುತ್ತದೆ ಎಂದು ತಿಳಿಯಬೇಕು.

ಟೀಕೆಯಲ್ಲಿ ವ್ಯಾಖ್ಯೇಯವಾದ ಮಂತ್ರ

ಭಾವದೀಪಃ – ಇತಿ ಮನ್ತ್ರೇತಿ ।। 'ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆಜಾತಮಗ್ನಿಮ್ । ಕವಿಂ ಸಮ್ರಾಜಮತಿಥಿಂ ಜನಾನಾಮಾಸನ್ನಾಪಾತ್ರಂ ಜನಯನ್ತ ದೇವಾಃ ।।' ಇತಿ ಮನ್ತ್ರಸ್ಯಾರ್ಥ ಉಚ್ಯತ ಇತ್ಯರ್ಥಃ ।

ಟೀಕೆಯಲ್ಲಿ ''ಇತಿ ಮಂತ್ರಾರ್ಥಃ'' ಎಂದು ಹೇಳಿದ್ದಾರೆ - ''ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆಜಾತಮಗ್ನಿಮ್ । ಕವಿಂ ಸಮ್ರಾಜಮತಿಥಿಂ ಜನಾನಾಮಾಸನ್ನಾ ಪಾತ್ರಂ ಜನಯಂತ ದೇವಾಃ'' ಎಂದು ಮಂತ್ರದ ಅರ್ಥವನ್ನು ಹೇಳುತ್ತಾರೆಂದು ತಿಳಿಯಬೇಕು.

'ಮೂರ್ಧಾನಂ ದಿವಃ' ಎಂಬ ಶ್ರುತಿಯು ಪುರುಷಸೂಕ್ತದ ಅರ್ಥವನ್ನೇ ಹೇಳುತ್ತಿದೆ

ಭಾವದೀಪಃ – ಪುರುಷಸೂಕ್ತೇನೈಕಾರ್ಥತ್ವಾಯಾರ್ಥೋಕ್ತಿಃ । ಋತೇ ಸಮ್ಯಗ್ ಜ್ಞಾನಾಯ, ಸಮ್ಯಗಿತ್ಯಾಙೋऽರ್ಥಃ । ಜನಾನಾಮಿತ್ಯತ್ರಾಪ್ಯಾಕರ್ಷಃ । ಜಾತಂ 'ಜನೀ ಪ್ರಾದುರ್ಭಾವೇ'

अभिव्यक्तमित्यर्थः । कविमित्यादेरर्थः सर्वज्ञमित्यादि । पात्रं पातारम् । आसन् आस्ये । आस्यतयेति यावत् । आजनयन्त आकुर्वन् ।

ಪುರುಷಸೂಕ್ತದ ಜೊತೆಗೆ ಶ್ರುತಿಗೆ ಒಂದೇ ಅರ್ಥವನ್ನು ತಿಳಿಸುವುದಕ್ಕಾಗಿ ''ದಿವಃ'' ಇತ್ಯಾದಿಯಾಗಿ ಶ್ರುತ್ಯರ್ಥವನ್ನು ಹೇಳುತ್ತಿದ್ದಾರೆ. ಋತೇ = ಸಮಿಚೀನವಾದ ಜ್ಞಾನಕ್ಕೋಸ್ಕರ. ''ಆಜ್'' ಎಂಬ ಉಪಸರ್ಗದ ಅರ್ಥವನ್ನು ''ಸಮ್ಯಗ್'' ಎಂದು ಹೇಳಿದ್ದಾರೆ. ''ಜನಾನಾಂ'' ಎಂಬುದನ್ನು ಇಲ್ಲೂ ಸಹ ಇಟ್ಟುಕೊಳ್ಳಬೇಕು. ''ಜಾತಂ'' ಎಂಬ ಪದವು ''ಜನೀ ಪಾದುರ್ಭಾವೇ'' ಎಂಬ ಧಾತುವಿನಿಂದ ನಿಷ್ಪನ್ನವಾದ್ದರಿಂದ ''ಅಭಿವ್ಯಕ್ತವಾಗಿದೆ'' ಎಂಬರ್ಥದಲ್ಲಿ ಇದೆ. ''ಕವಿಂ'' ಎಂಬುದರ ಅರ್ಥ ''ಸರ್ವಜ್ಞಂ'' ಎಂದು ಹೇಳಿದ್ದಾರೆ. ಪಾತ್ರಂ = ರಕ್ಷಿಸುವನನ್ನು, ಆಸನ್ = ಮುಖದಲ್ಲಿ. ಅಂದರೆ ತಮ್ಮ ಮುಖವನ್ನಾಗಿ ಮಾಡಿಕೊಂಡರು ಎಂದರ್ಥ. ''ಅಜನಯಂತ'' ಎಂದರೆ 'ಮಾಡಿದರು' ಎಂದರ್ಥ.

'ಅರತಿ' ಪದದ ಅರ್ಥ

भावदीपः – गतीति ।। लोके गमनेनारतिदर्शनाद् रतिविरुद्धगतिसाधनत्वात् पादोऽरतिशब्दार्थ इत्यर्थः ।। तादर्थ्य इति ।। 'चर्मणि द्वीपिनं हन्ति दन्तयोर्हन्ति कुञ्जरम्' इत्यादाविवेति भावः

ಲೋಕದಲ್ಲಿ ಗಮನದಿಂದ ಅರತಿಯು ಕಾಣಸುತ್ತಿದೆ. ರತಿಗೆ ವಿರುದ್ಧವಾದ್ದರಿಂದ ಅಂದರೆ ಗಮನಕ್ಕೆ ಸಾಧನವಾದ್ದರಿಂದ ಅರತಿ ಶಬ್ದಕ್ಕೆ ಪಾದವೆಂಬ ಅರ್ಥವು ಲಭಿಸುತ್ತದೆ. ''ಋತಾಯ ಜಾತಂ'' ಎಂಬಲ್ಲಿ ತಾದರ್ಥ್ಯದಲ್ಲಿ ಸಪ್ತಮೀವಿಭಕ್ತಿಯು ಬಂದಿದೆ. ''ಚರ್ಮಣಿ ದ್ವೀಪಿನಂ ಹಂತಿ ದಂತಯೋರ್ಹಂತಿ ಕುಂಜರಂ'' ಎಂಬ ದೃಷ್ಟಾಂತದಂತೆ ತಿಳಿಯಬೇಕು.

ಚಂಡಾಲನಿಗೆ ಕೊಡುವ ಉಚ್ಛಿಷ್ಟವೂ ಕೂಡ ಹೋಮವಾಗುತ್ತದೆ

भावदीपः – एवंविदिति ।। वैश्वानरज्ञानी । यद्यपि यदि, तस्मान्न विष्णुरितीत्यन्तभाष्यमनुवर्त्य तेन नञोऽन्वयमुपेत्यर्थमाह – उभयत्रेति ।

कुत इत्याकाङ्क्षायां 'तस्यैव दृष्ट्युपदेशाद्' इति भाष्यस्य साक्षादनन्वयान्न्यायविवरणोक्तं हेतुं संयोज्य तदुपपादकत्वेन भाष्यं योजयति – उभयत्रेति।।

''ಏವಂ ವಿತ್'' ಎಂಬ ಪದಕ್ಕೆ ವೈಶ್ವಾನರನನ್ನು ತಿಳಿದವನು ಎಂದರ್ಥ. ''ಯದ್ಯಪಿ'' = ಒಂದು ವೇಳೆ. ''ತಸ್ಮಾನ್ನವಿಷ್ಣು'' ಎಂಬಲ್ಲಿಯ ತನಕದ ಭಾಷ್ಯವನ್ನು ಅನುವೃತ್ತಿ ಮಾಡಿಕೊಂಡು ''ನಞ್'' ಗೆ ಅನ್ವಯವನ್ನು ಅಂಗೀಕರಿಸಿ ಅರ್ಥವನ್ನು ''ಉಭಯತ್ರ'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಏನು ಕಾರಣ? ಎಂಬ ಆಶಂಕೆಗೆ ''ತಸೈವ ದೃಷ್ಟ್ಯುಪದೇಶಾತ್'' ಎಂಬ ಭಾಷ್ಯಕ್ಕೆ ನೇರವಾಗಿ ಅನ್ವಯವಿಲ್ಲದ ಕಾರಣ ನ್ಯಾಯವಿವರಣದಲ್ಲಿ ಹೇಳಿದ ಹೇತುವನ್ನು ಸಂಯೋಜನೆ ಮಾಡಿ ಅದಕ್ಕೆ ಉಪಪಾದಕವಾಗಿ ಭಾಷ್ಯವನ್ನು ಯೋಜನೆ ಮಾಡುತ್ತಿದ್ದಾರೆ ''ಉಭಯತ್ರ'' ಇತ್ಯಾದಿ ವಾಕ್ಯದಿಂದ.

ವಿಶೇಷವಿಚಾರ – ಅಜ್ಞಾನಿಗಳು ಅಜ್ಞಾನ ಪ್ರಯುಕ್ತವಾಗಿ ವಿಷ್ಣುಪರವಾದ ಶಬ್ದಗಳನ್ನು ಲೋಕದಲ್ಲಿ ಪ್ರಯೋಗಿಸುತ್ತಾರೆ. ಅದರಂತೆ ಜ್ಞಾನಿಗಳೂ ಸಹ ಹಾನ, ಉಪಾದಾನ ಮೊದಲಾದ ವ್ಯವಹಾರಕ್ಕೋಸ್ಕರ ಮಾತ್ರ ಲೋಕದಲ್ಲಿ ಪ್ರಯೋಗಿಸುತ್ತಾರೆ.

ಅಜ್ಞಾನಿಗಳಂತೆ ಜ್ಞಾನಿಗಳೂ ಸಹ ಹಾನ, ಉಪಾದಾನ ಮೊದಲಾದ ವ್ಯವಹಾರಕ್ಕೋಸ್ಕರ ಶಬ್ದಪ್ರಯೋಗವನ್ನು ಅಪೇಕ್ಷೆ ಪಡುತ್ತಾರೆ. ಈ ವ್ಯವಹಾರಗಳು ಶಬ್ದಪ್ರಯೋಗವಿಲ್ಲದೇ ನಡೆಯಲು ಸಾಧ್ಯವಿಲ್ಲ. ಮತ್ತು ಬ್ರಹ್ಮನಲ್ಲಿ ಅಮುಖ್ಯವಾಗಿದ್ದು ಲೋಕದಲ್ಲಿ ಮುಖ್ಯವಾದ ಬೇರೆ ಶಬ್ದಗಳೂ ಸಹ ಇರುವುದಿಲ್ಲ. ಆದ್ದರಿಂದ ಬೇರೆ ಗತಿ ಇಲ್ಲದೆ ಜ್ಞಾನಿ ಜನರು ಭಗವಂತನ ವಾಚಕವಾದ ಶಬ್ದಗಳನ್ನೇ ಲೋಕದಲ್ಲಿಯೂ ಪ್ರಯೋಗಿಸುತ್ತಾರೆ.

ಭಾಟ್ಟರು ಸಕಲಶಬ್ದಗಳು ಜಾತಿಯನ್ನೇ ಪ್ರತಿಪಾದಿಸುತ್ತವೆಂದು ಅಂಗೀಕರಿಸಿದ್ದಾರೆ. ಅವರೂ ಸಹ ಎಲ್ಲ ಶಬ್ದಗಳಿಗೆ ಜಾತಿಯಲ್ಲಿಯೇ ಮುಖ್ಯವಾಚ್ಯತ್ವವನ್ನು ಒಪ್ಪಿದ್ದರೂ ಸಹ ಹಾನ, ಉಪಾದಾನ ಮೊದಲಾದ ವ್ಯವಹಾರಕ್ಕೋಸ್ಕರ ವ್ಯಕ್ತಿಯಲ್ಲಿಯೂ ಆ ಶಬ್ದಗಳನ್ನು ಪ್ರಯೋಗಿಸುತ್ತಾರೆ. ಅದರಂತೆ ವಿಷ್ಣುವಿನಲ್ಲಿ ಮುಖ್ಯವಾದ ಶಬ್ದಗಳನ್ನು ವ್ಯವಹಾರಕ್ಕೋಸ್ಕರ ಅಮುಖ್ಯವಾಗಿ ಉಪಯೋಗಿಸಬಹುದು.

ಸಕಲ ಶಬ್ದಗಳು ವಿಷ್ಣುವಿನ ಪರ್ಯಾಯಶಬ್ದಗಳಾದ್ದರಿಂದ ಅಗ್ನಿಶಬ್ದವನ್ನು ಮಾತ್ರ ಅಗ್ನಿದೇವತೆಯಲ್ಲೇಕೆ ಪ್ರಯೋಗಿಸಬೇಕು. ಇಂದ್ರಶಬ್ದವನ್ನೇಕೆ ಪ್ರಯೋಗಿಸಬಾರದು? ಎಂಬ ಪೂರ್ವಪಕ್ಷವೂ ತಪ್ಪು. ಒಂದು ವೇಳೆ ಅಗ್ನಿ ಮೊದಲಾದವರಲ್ಲಿ ಇಂದ್ರ ಮೊದಲಾದ ಶಬ್ದಗಳನ್ನು

ಪ್ರಯೋಗಿಸಿದರೆ ವ್ಯವಹಾರ ವ್ಯವಸ್ಥೆಯು ಹಾಳಾಗುತ್ತದೆ. ಅದಕ್ಕೋಸ್ಕರ ವ್ಯವಸ್ಥಿತವಾಗಿ ಒಬ್ಬೊಬ್ಬ ದೇವತೆಗಳಲ್ಲಿ ಒಂದೊಂದೇ ಹೆಸರುಗಳನ್ನು ಪ್ರಯೋಗಿಸಬೇಕು.

ಇಂದ್ರ ಶಬ್ದವನ್ನು ಅಗ್ನಿಯಲ್ಲಿ ಪ್ರಯೋಗ ಮಾಡದಿದ್ದರೆ ವಹ್ನಿ ಶಬ್ದವನ್ನೂ ಸಹ ಅಗ್ನಿಯಲ್ಲಿ ಪ್ರಯೋಗ ಮಾಡದಿರಬೇಕಾದೀತೆಂಬ ಆಕ್ಷೇಪವೂ ಸಹ ತಪ್ಪು. ಏಕೆಂದರೆ ಅಗ್ನಿಯಲ್ಲಿ ವಹ್ನಿ ಶಬ್ದದ ಪ್ರಯೋಗವು ಅಭಿಧಾನಾದಿಗಳಿಂದ ಸಿದ್ಧವಾಗಿದೆ. ಆದರೆ ಅದೇ ಅಗ್ನಿಯಲ್ಲಿ ಇಂದ್ರ ಮೊದಲಾದ ಶಬ್ದಗಳು ಅಭಿಧಾನದಿಂದ ಸಿದ್ಧವಾಗಿಲ್ಲ. ಹೀಗೆ ಕೋಶಾದಿಗಳಿಂದ ಸಿದ್ಧವಾಗಿದ್ದರಿಂದ ಆಯಾ ಶಬ್ದಗಳನ್ನು ಆಯಾ ಪದಾರ್ಥಗಳಲ್ಲಿಯೇ ಪ್ರಯೋಗಿಸಬೇಕು.

'ಭೃತ್ಯಃ ಜಯೀ' ಎಂಬಲ್ಲಿ ಭೃತ್ಯಶಬ್ದವು ಮುಖ್ಯವಾದ ಅರ್ಥವುಳ್ಳದ್ದರಿಂದ 'ಜಯೀ' ಎಂಬ ಶಬ್ದಕ್ಕೆ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಅನಿವಾರ್ಯವೆಂದು ಪೂರ್ವಪಕ್ಷಕಾರನು ಹೇಳಿದ್ದನು. ಹಾಗಾದರೆ 'ಅಗ್ನಿರ್ದುಃಖೀ' 'ಅಗ್ನಿರ್ವೈ ದೇವಾನಾಮವಮಃ' ಇತ್ಯಾದಿಯಾಗಿ ಶ್ರುತಿಯು ಹೇಳುತ್ತಿರುವುದರಿಂದ ವಿವಕ್ಷಿತವಾದ ದುಃಖಿತ್ವಾದಿಗಳನ್ನು ಪರಮಾತ್ಮನಲ್ಲಿ ಒಪ್ಪಲು ಸಾಧ್ಯವಿಲ್ಲ. ತದ್ಗತತ್ವವನ್ನು ಪ್ರವೃತ್ತಿನಿಮಿತ್ತವೆಂದು ಒಪ್ಪಿದಾಗ ದುಃಖಾದಿಗಳು ಪರಮಾತ್ಮನಲ್ಲಿ ಬರಬೇಕಾಗುತ್ತದೆ. ಆದ್ದರಿಂದ ದುಃಖವುಳ್ಳ ಅಗ್ನಿದೇವತೆಯನ್ನೇ 'ದುಃಖೀ' ಎಂಬ ಶಬ್ದವು ಮುಖ್ಯವಾಗಿ ಪ್ರತಿಪಾದಿಸಬೇಕು. ಅದಕ್ಕನುಗುಣವಾಗಿ ಜಯಿಶಬ್ದಕ್ಕೆ ಹೇಗೆ ಅಮುಖ್ಯಾರ್ಥವನ್ನು ನೀವು ಒಪ್ಪಿದಿರೋ ಅದರಂತೆ ಅಗ್ನಿಶಬ್ದಕ್ಕೂ ಸಹ ಅಮುಖ್ಯವಾದ ಅರ್ಥವನ್ನು ಒಪ್ಪುತ್ತೇವೆ.

ಅಮುಖ್ಯವಾಗಿಯೂ ಸಹ ಅಗ್ನ್ಯಾದಿ ದೇವತೆಗಳಲ್ಲಿ ಅಗ್ನಿಶಬ್ದದ ಪ್ರಯೋಗವನ್ನು ಒಪ್ಪದಿದ್ದರೆ ಅಲೌಕಿಕವಾದ ಅಗ್ನಿದೇವತೆ ಮೊದಲಾದವರ ಸ್ವರೂಪವೇ ಸಿದ್ಧವಾಗದೇ ಇರಬೇಕಾದೀತು. ಅಲೌಕಿಕವಾದ್ದರಿಂದ ಪ್ರತ್ಯಕ್ಷಾದಿಗಳಿಂದಂತೂ ಅವರ ಸ್ವರೂಪವು ನಿರ್ಣಯವಾಗುವುದಿಲ್ಲ. ಹೀಗಿರುವಾಗ ಅಗ್ನ್ಯಾದಿ ಶಬ್ದಗಳ ಪ್ರಯೋಗವೇ ತಪ್ಪಾಗುತ್ತದೆಂಬ ನಿಮ್ಮ ಆಪಾದನೆಯಾದರೂ ಹೇಗೆ ಕೂಡುತ್ತದೆ ?

ಸಕಲ ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾದರೂ ಸಹ ಸೂಕ್ತಾದಿ ವ್ಯವಸ್ಥೆಗಳು ಉಪಪನ್ನವಾಗುತ್ತವೆ. ಈ ವ್ಯವಸ್ಥೆಯಲ್ಲಿ ಅಗ್ನಿಸೂಕ್ತದಿಂದ ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನಿದೇವತೆಯಲ್ಲಿ ಬ್ರಹ್ಮನು ಅಭಿವ್ಯಕ್ತನಾಗುತ್ತಾನೆ. ಅಥವಾ ಅಗ್ನ್ಯಾದಿ ಸೂಕ್ತಗಳ ಉಪಾಸಕನಿಗೆ ಅಗ್ನ್ಯಾದಿಗಳಲ್ಲಿಯೇ ಬ್ರಹ್ಮನು ಧ್ಯಾನಕ್ಕೆ ವಿಷಯನಾಗುತ್ತಾನೆ. ಅಥವಾ ಅಗ್ನ್ಯಾದಿ ಸೂಕ್ತಗಳನ್ನು ಉಪಾಸನೆ ಮಾಡುವನಿಗೆ ಅಗ್ನ್ಯಾದಿಗಳಲ್ಲಿರುವ ಬ್ರಹ್ಮನೇ ಪ್ರಾಪ್ಯನಾಗುತ್ತಾನೆ. ಈ ಮೂರು ಕಾರಣಗಳಿಗೋಸ್ಕರ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ವ್ಯವಸ್ಥೆಯು ಶ್ರುತಿಯಲ್ಲಿರುತ್ತದೆ.

ಮತ್ತೇನೆಂದರೆ - ಸೂಕ್ತಾದಿವ್ಯವಸ್ಥೆಗೆ ಋಗ್ಭಾಷ್ಯದಲ್ಲಿ ದೇರೆ ಕಾರಣವನ್ನೇ ಹೇಳಿದ್ದಾರೆ -

'ಪೃಥಗ್ರೂಪಾಣಿ ವಿಷ್ಣೋಸ್ತು ದೇವತಾಂತರಗಾನಿ ಚ।
ಅಗ್ನ್ಯಾದಿಸೂಕ್ತವಾಚ್ಯಾನಿ ನಾಮ್ನಾ ಸೂಕ್ತಭಿದಾ ಭವೇತ್ ॥'

ಭಗವಂತನು ದೇವತಾಂತರ್ಗತನಾಗಿ ಹಾಗೂ ದೇವತೆಗಳಲ್ಲಿ ಅಂತರ್ಗತನಾಗದೇ ಇರುವವನಾಗಿ ಹೀಗೆ ಎರಡು ರೂಪಗಳಿಂದ ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಈ ಎರಡು ರೂಪಗಳ ಪ್ರಯೋಗ ಮಾಡುವ ಅಗ್ನ್ಯಾದಿ ಶಬ್ದಗಳನ್ನು ವಿವಕ್ಷಿಸಿ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ವ್ಯವಸ್ಥೆಯು ಇರುತ್ತದೆ.

ಹೀಗೆ ಅಗ್ನಿ ಮೊದಲಾದ ಶಬ್ದಗಳ ಪ್ರಯೋಗವೇ ಸೂಕ್ತಾದಿಗಳಿಗೆ ವ್ಯವಸ್ಥಾಪಕವೆಂದು ತಿಳಿದ್ದಾರೆ.

ಗಾಯತ್ರ್ಯಧಿಕರಣದಿಂದ ಪುನರುಕ್ತವಾಗುವುದಿಲ್ಲ

भावदीपः – एवञ्च गायत्रीनये 'तथा चेतोऽर्पण' इत्यनेन गायत्र्याद्यप्रसिद्धशब्दस्य विष्णौ प्रयोगे प्रयोजनोक्तिरिह तु वैश्वानरनामादेः सावकाशत्वोक्तिरित्यपौनरुक्त्यमिति भावः ।।

ಟೀಕೆಯಲ್ಲಿ "ಉಭಯತ್ರ ಶ್ರುತ್ಯಾದಿ" ಎಂಬ ವಾಕ್ಯದಿಂದ ಗಾಯತ್ರ್ಯಧಿಕರಣದಿಂದ ಪುನರುಕ್ತಿದೋಷವನ್ನು ಪರಿಹರಿಸಿದ್ದಾರೆ. ಗಾಯತ್ರ್ಯಧಿಕರಣದಲ್ಲಿ "ತಥಾ ಚೇತೋऽರ್ಪಣಾತ್" ಎಂಬ ಸೂತ್ರದಿಂದ ಗಾಯತ್ರೀ ಮೊದಲಾದ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುವುದರ ಪ್ರಯೋಜನವನ್ನು ಸಾಧಿಸಿದ್ದಾರೆ. ಆದರೆ ಈ ಅಧಿಕರಣದಲ್ಲಿ ವೈಶ್ವಾನರ ಮೊದಲಾದ ಶಬ್ದಗಳಿಗೆ ಸಾವಕಾಶತ್ವವನ್ನು ಸಮರ್ಥಿಸುತ್ತಿದ್ದಾರೆ. ಹೀಗೆ ಎರಡು ಅಧಿಕರಣಗಳು ಭಿನ್ನವಿಷಯಕವಾಗಿರುವುದರಿಂದ ಪುನರುಕ್ತಿಯು ಬರುವುದಿಲ್ಲವೆಂದು ತಿಳಿಯಬೇಕು.

ವಿಷ್ಣುವಿನಲ್ಲಿ ಪ್ರಸಿದ್ಧವಾದ ಆತ್ಮಶಬ್ದವು ನಿರವಕಾಶವಾಗಿದೆ

भावदीपः – नचेति ।। 'अनात्तत्वादनात्मानः' इत्यादेरिति भावः । बलादित्युक्तिलब्धमाह – अत इति ।। उपासना हि ज्ञानादन्या अर्थहीनाऽपि

स्यादित्याशङ्कापनुत्तये सूत्रभाष्ययोः दृष्टीत्युक्तं तद् व्यनक्ति – नच वाच्यमिति ।।

ಆತ್ಮಶಬ್ದಕ್ಕೆ "ಅನಾತ್ತತ್ವಾದನಾತ್ಮಾನಃ" ಎಂಬ ನಿರ್ವಚನವನ್ನು ಅಪೇಕ್ಷಿಸಿ ಬೇರೆ ಕಡೆ ಪ್ರಯೋಗಿಸಬಹುದಲ್ಲವೆ? ಎಂಬುದನ್ನು "ನಚ" ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. "ಬಲಾತ್" ಎಂಬುದರಿಂದ ಲಭ್ಯವಾದ ಅರ್ಥವನ್ನು "ಅತಃ" ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಉಪಾಸನೆಯು ಜ್ಞಾನಕ್ಕಿಂತ ಭಿನ್ನವಾಗಿದೆ ಮತ್ತು ಅರ್ಥಹೀನವಾಗಿದೆ ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರ ಹಾಗೂ ಭಾಷ್ಯದಲ್ಲಿ "ದೃಷ್ಟಿ" ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಅದನ್ನು "ನಚ ವಾಚ್ಯಂ" ಎಂದು ಟೀಕೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ.

ಗೀತೆಯ ಜೊತೆ ಬೇರೆ ಶ್ರುತಿವಾಕ್ಯವನ್ನು ಏಕವಾಕ್ಯಪಡಿಸಬೇಕು

भावदीपः – नाविद्यमानमिति तैत्तिरीयभाष्योक्तस्मृतिः । आदिपदेन 'नच रमन्त्यहो असदुपासनया' इत्यादि गृह्यते ।। वाक्यान्तरस्येति ।। 'अहं वैश्वानरो भूत्वा' इति समाख्यात्वेनोक्तवाक्यान्तरस्याविरोधेन योऽर्थः स्याप्यते तदर्थत्वाच्चास्य वाक्यस्य नासदर्थकत्वमित्यर्थः ।

"ನಾವಿದ್ಯಮಾನಂ" ಎಂಬುದು ತೈತ್ತಿರೀಯಭಾಷ್ಯದಲ್ಲಿ ಹೇಳಿದ ಸ್ಮೃತಿವಾಕ್ಯವೆಂದು ತಿಳಿಯಬೇಕು. ಆದಿ ಪದದಿಂದ "ನಚ ರಮಂತ್ಯಹೋ ಅಸದುಪಾಸನಯಾ" ಇವೇ ಮೊದಲಾದ ಪ್ರಮಾಣಗಳನ್ನು ಏಕವಾಕ್ಯಪಡಿಸಬೇಕು. "ವಾಕ್ಯಾಂತರಸ್ಯ" ಎಂದರೆ "ಅಹಂ ವೈಶ್ವಾನರೋ ಭೂತ್ವಾ" ಎಂಬ ಸಮಾಖ್ಯಾಪ್ರಮಾಣದಿಂದ ಹೇಳಲ್ಪಟ್ಟ ವಾಕ್ಯಾಂತರದಿಂದ ವಿರೋಧವಿಲ್ಲವೆಂದು ಅರ್ಥ. ಈ ವಾಕ್ಯಕ್ಕೆ ಅದೇ ಅರ್ಥವನ್ನು ಸ್ಥಾಪನೆ ಮಾಡುವುದರಿಂದ ಅಸದರ್ಥಕತ್ವವನ್ನು ಒಪ್ಪಬಾರದು.

'ಮೂರ್ಧೈವ ಸುತೇಜಾಃ' ಎಂಬ ಶ್ರುತಿಯು ಅಸದರ್ಥವನ್ನು ಪ್ರತಿಪಾದಿಸುತ್ತಿಲ್ಲ

भावदीपः – यद्वा ननु 'मूर्धैव सुतेजाः' इत्यादिना द्रव्यादितादात्म्यमविद्यमानमुच्यत इत्यत आह – वाक्यान्तरस्येति ।। 'शीर्ष्णो द्यौः समवर्तत' इत्यस्य विवरिष्यते चैतदग्रे । यद्वा 'हृदयं गार्हपत्यो मनोऽनव्वाहार्यपचन'

इत्यादिना वैश्वानराङ्गानां गार्हपत्याद्यैक्यमविद्यमानमेवोच्यत इत्यत आह – वाक्यान्तरस्येति ।।

ಅಥವಾ "ಮೂರ್ಧ್ನೈವ ಸುತೇಜಾಃ" ಎಂಬುದಾಗಿ ದ್ರವ್ಯಾದಿತಾದಾತ್ಮ್ಯವನ್ನು ಹೇಳಲಾಗಿದೆ. ಇದು ಅವಿದ್ಯಮಾನವಾಗಿದೆಯಲ್ಲವೆ? ಎಂಬ ಪ್ರಶ್ನೆಗೆ "ವಾಕ್ಯಾಂತರಸ್ಯ" ಎಂಬುದರಿಂದ ಉತ್ತರಿಸಿದ್ದಾರೆ. ವಾಕ್ಯಾಂತರಸ್ಯ ಎಂದರೆ " ಶೀರ್ಷ್ಣೋ ದ್ಯೌಃ ಸಮವರ್ತತ" ಎಂದು ಪುರುಷಸೂಕ್ತದಲ್ಲಿ ಭಗವಂತನಿಗೆ ದ್ಯು ಲೋಕವೇ ತಲೆಯೆಂದು ಹೇಳಲಾಗಿದೆ. ಈ ವಿಷಯವನ್ನು ಮುಂದೆ ಸ್ಪಷ್ಟಪಡಿಸುತ್ತಾರೆ. ಅಥವಾ "ಹೃದಯಂ ಗಾರ್ಹಪತ್ಯೋ ಮನೋಽನ್ವಾಹಾರ್ಯಪಚನಃ" ಇತ್ಯಾದಿಯಾಗಿ ವೈಶ್ವಾನರನಿಗೆ ಅಂಗವಾದ ಗಾರ್ಹಪತ್ಯಾದಿಗಳಿಂದ ಐಕ್ಯವನ್ನು ಹೇಳುತ್ತಿದ್ದೀರಿ ಇದು ಅವಿದ್ಯಮಾನವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ "ವಾಕ್ಯಾಂತರಸ್ಯ" ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆಂದು ತಿಳಿಯಬೇಕು.

ತಾದಾತ್ಮ್ಯಾರ್ಥಕ್ಕಿಂತ ಅನ್ಯಾರ್ಥವನ್ನೇ ವಿವಕ್ಷಿಸಬೇಕು

भावदीपः – 'मूर्ध्नैव सुतेजाः' इत्यादेरविरोधेन यस्तादात्म्यादन्योऽर्थः 'यस्माद् यद् जायते चाङ्गाद्' इत्यादिना स्थाप्यते, तदर्थत्वाच्च हृदयमित्यादेरिति नासदर्थकत्वमित्यर्थः । कोऽर्थस्तर्हि योषिततमग्नि-मित्यस्येत्यतोऽपि ।। **वाक्यान्तरस्येति ।।**

"ಮೂರ್ಧ್ನೈವ ಸುತೇಜಾಃ" ಎಂಬ ವಚನಗಳಿಗೆ ವಿರೋಧವಿಲ್ಲದಂತೆ ತಾದಾತ್ಮ್ಯಕ್ಕಿಂತ ಬೇರೆ ಅರ್ಥವನ್ನು ಹೇಳಬಹುದು. ದ್ಯುಲೋಕಾದಿಗಳು ಭಗವಂತನ ಯಾವ ಅಂಗಗಳಿಂದ ಹುಟ್ಟುತ್ತವೋ ಆ ಪದಾರ್ಥಗಳಿಗೆ ಭಗವಂತನ ಆ ಅಂಗಗಳಿಂದ ಐಕ್ಯವನ್ನು ಹೇಳಲಾಗಿದೆ. ಆದರೂ ಸಹ ಅಸದರ್ಥಕತ್ವವನ್ನು ಹೇಳಿದಂತಾಗುವುದಿಲ್ಲವೆಂದು ತಿಳಿಯಬೇಕು. ಹಾಗಾದರೆ "ಯೋಷಿತಮಗ್ನಿಂ" ಎಂಬಲ್ಲಿ ಹೇಗೆ ಅರ್ಥೈಸಬೇಕೆಂಬುದಕ್ಕೆ "ವಾಕ್ಯಾಂತರಸ್ಯ" ಎಂಬುದರಿಂದಲೇ ಉತ್ತರಿಸುತ್ತಿದ್ದಾರೆ.

'ಯೋಷಿತಮಗ್ನಿಂ' ಎಂಬುದರ ಅರ್ಥ

भावदीपः – 'तस्मिन्नेतस्मिन्नग्नौ देवा रेतो जुह्वति' इति वाक्यान्तरस्य

योऽर्थः रेतोरूपाहुत्याधारत्वं तदर्थत्वाच्च योषितमिति वाक्यस्येति । प्रकृतश्रुत्यैक्यार्थाय स्वहृदय इत्युक्तिः ।

ಯೋಷಿತವೆಂಬ ಅಗ್ನಿಯಲ್ಲಿ ದೇವತೆಗಳು ರೇತಸ್ಸಿನಿಂದ ಹೋಮಿಸುತ್ತಾರೆ. ಹೀಗೆ ವಾಕ್ಯಾಂತರವೆನಿಸಿದ "ಯೋಷಿತಮಗ್ನಿಂ" ಎಂಬುದಕ್ಕೆ ಅರ್ಥವನ್ನು ಹೇಗೆ ಮಾಡುತ್ತೇವೋ ಅಂದರೆ "ರೇತಸ್" ಎಂಬ ಆಹುತಿಗೆ ಆಧಾರವಾಗಿದೆ. ಆದ್ದರಿಂದ "ಯೋಷಿತಂ" ಎಂಬ ವಾಕ್ಯವು ಉಪಪನ್ನವಾಗುತ್ತದೆ ಎಂದು ತಿಳಿಯಬೇಕು. ಪ್ರಕೃತ ಶ್ರುತಿಯಿಂದ ಏಕಾರ್ಥ್ಯವನ್ನು ಹೇಳುವುದಕ್ಕೋಸ್ಕರ "ಸ್ವಹೃದಯ" ಎಂದು ಹೇಳಿದ್ದಾರೆ.

ಸಕಲ ಕರ್ಮ, ಸಕಲ ಲಿಂಗ, ಸಕಲ ಇಚ್ಛೆ, ಸಕಲ ಕ್ರಿಯೆ ಎಲ್ಲವೂ ವಿಷ್ಣುವದ್ದೇ

भावदीपः – श्रुतौ सर्वकर्मा 'न ऋते त्वत् क्रियते' इत्यादेः । वज्रधरत्वादीनि सर्वाणि लिङ्गानि चास्यैवेति सर्वलिङ्गः । तदिच्छयैव सर्वमिति सर्वकामः ।

ಶ್ರುತಿಯಲ್ಲಿರುವ "ಸರ್ವಕರ್ಮಾ", "ನ ಋತೇ ತ್ವತ್ ಕ್ರಿಯತೇ" ಇತ್ಯಾದಿಗಳನ್ನು ವಿವಕ್ಷಿಸಬೇಕು. ಈ ಎಲ್ಲಾ ಶ್ರುತಿಗಳು ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ವಜ್ರಧರತ್ವವೇ ಮೊದಲಾದ ಸಕಲ ಲಿಂಗಗಳೆಲ್ಲವೂ ವಿಷ್ಣುವಿನದ್ದೇ ಆಗಿವೆ. "ಸರ್ವಕಾಮಃ" ಎಂದರೆ ಭಗವಂತನ ಇಚ್ಛೆಯಿಂದಲೇ ಎಲ್ಲವೂ ಎಂದರ್ಥ.

ಸಕಲ ಗುಣಗಳು, ಸಕಲ ಧರ್ಮಗಳು ಭಗವಂತನದ್ದೇ

भावदीपः – गुणाः ज्ञानादयः । धर्माः सर्वज्ञादयः । संयोगवियोगादिधर्माः तदधीना इति वा सर्वधमः । सर्वत्र रूपमस्येति वा सर्वमस्य रूपं प्रतिमेति वा सर्वरूपः ।

"ಗುಣಾಃ" = ಜ್ಞಾನಾದಿ ಗುಣಗಳು. ಧರ್ಮಾಃ = ಸರ್ವಜ್ಞತ್ವಾದಿಗಳು. ಸಂಯೋಗ ಹಾಗೂ ವಿಯೋಗ ಮೊದಲಾದ ಧರ್ಮಗಳು ಭಗವದಧೀನವಾಗಿವೆ ಎಂಬರ್ಥದಲ್ಲಿಯೂ "ಸರ್ವಧರ್ಮಃ" ಎಂಬ ಪದವನ್ನು ಪ್ರಯೋಗಿಸಿದ್ದಾರೆ. "ಸರ್ವರೂಪಃ" ಎಂಬ ಪದಕ್ಕೆ ಎಲ್ಲಾಕಡೆ ಭಗವಂತನ ರೂಪವಿದೆ ಎಂದರ್ಥ. ಅಥವಾ ಎಲ್ಲವೂ ಭಗವಂತನ ಪ್ರತಿಮೆಯಾಗಿದೆ ಎಂದರ್ಥ.

ತತ್ವಪ್ರದೀಪದಲ್ಲಿ ಸಂಪೂರ್ಣ ಶ್ರುತ್ಯರ್ಥ

ಭಾವದೀಪಃ – ಅಲಂ ಸಮ್ಯಗಿತಿ ಅವಶಿಷ್ಟಪದಾರ್ಥಸ್ತತ್ತ್ವಪ್ರದೀಪೋಕ್ತಃ । ಶಬ್ದಾದೇವೇತ್ಯತ್ರ ಶ್ರುತ್ಯಾದೇರುಪಕ್ರಮೋಪಸಂಹಾರಯೋಃ ಶ್ರುತತ್ವೇ ತಸ್ಮಿಂಶ್ಚಾಯಕತಯಾ ಲಿಙ್ಗತ್ವಮಿತಿ ವಕ್ಷ್ಯಮಾಣದಿಶಾ ಅನ್ತರನಯ ಇವಾತ್ಮಬ್ರಹ್ಮಶಬ್ದಯೋರುಪಕ್ರಮೇ ಶ್ರುತತ್ವೇನ ತಸ್ಯ ವೈಶ್ವಾನರತ್ವಂ ನಿಶ್ಚಾಯಯದಾತ್ಮಾದಿಶಬ್ದದ್ವಯಂ ಪ್ರಕರಣಸ್ಯ ವೈಶ್ವಾನರತ್ವಂ ನಿರ್ಧಾರ್ಯ ತತ್ರಸ್ಥವೈಶ್ವಾನರನಾಮ್ನೋ ವಿಶ್ವಾರ್ಥತ್ವಮವಧಾರಯತೀತಿ ಭಾವೇನಾಸಮ್ಭವಾದಿತಿ ಸೂತ್ರಖಣ್ಡಭಾಷ್ಯಂ ವ್ಯನಕ್ತಿ – ಪ್ರಕರಣಬಲಾಚ್ಚೇತಿ ।।

"ಅಲಂ" ಎಂಬ ಪದಕ್ಕೆ ಚೆನ್ನಾಗಿ ಎಂದರ್ಥ. ಉಳಿದ ಪದಗಳ ಅರ್ಥವು ತತ್ವಪ್ರದೀಪದಲ್ಲಿ ಸ್ಪಷ್ಟವಾಗಿದೆ. "ಶಬ್ದಾದೇವ" ಎಂಬ ಸೂತ್ರದಲ್ಲಿ ಶ್ರುತಿಗಳ ಉಪಕ್ರಮ ಹಾಗೂ ಉಪಸಂಹಾರಗಳಲ್ಲಿ ಭಗವಂತನ ಲಿಂಗಗಳೇ ಕೇಳಿಸುತ್ತಿರುವುದರಿಂದ ಲಿಂಗಗಳೆಲ್ಲವೂ ಭಗವತ್ಪರವಾಗಿವೆ ಎಂದು ತಿಳಿಯಬೇಕು. ಯಾವರೀತಿಯಾಗಿ ಅಂತರಾಧಿಕರಣದಲ್ಲಿ ಉಪಕ್ರಮ ಹಾಗೂ ಉಪಸಂಹಾರದ ಬಲದಿಂದ ವಿಷ್ಣುಪರವೆಂದು ನಿರ್ಣಯಿಸಿದರೋ, ಅದೇರೀತಿಯಾಗಿ ಆತ್ಮ, ಬ್ರಹ್ಮ ಮೊದಲಾದ ಶಬ್ದಗಳು ಉಪಕ್ರಮದಲ್ಲಿ ಕೇಳಿಸುತ್ತಿರುವುದರಿಂದ ಸಮಗ್ರ ವೈಶ್ವಾನರಪ್ರಕರಣವು ಭಗವಂತನನ್ನೇ ಪ್ರತಿಪಾದಿಸುತ್ತದೆ ಎಂದು ಸ್ಪಷ್ಟವಾಗುತ್ತದೆ. ಈ ಅಭಿಪ್ರಾಯದಿಂದ "ಅಸಂಭವಾತ್" ಎಂಬ ಸೂತ್ರಭಾಗವನ್ನು ಮತ್ತು ಭಾಷ್ಯವನ್ನು "ಪ್ರಕರಣಬಲಾಚ್ಚ" ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಆತ್ಮಶಬ್ದವು ಬೇರೆಯವರಲ್ಲಿ ಅತ್ಯಂತ ಅಸಂಭಾವಿತ

ಭಾವದೀಪಃ – ನ ಕೇವಲಮಾತ್ಮಶಬ್ದಸ್ಮೃತಿಸಮಾಖ್ಯಾಭ್ಯಾಮಿತಿ ಚಾರ್ಥಃ । ಭಾಷ್ಯೇ ಇತ್ಯಾದಿನೇತ್ಯಸ್ಯಾನ್ಯೇಷಾಮಸಮ್ಭವಾದಿತ್ಯನೇನಾನ್ವಯಃ ಆರಮ್ಭಾಚ್ಚೇತ್ಯಸ್ಯ ವಿಷ್ಣುರಿತ್ಯಾದಿನಾऽನ್ವಯಮುಪೇತ್ಯ ವ್ಯಾಚಷ್ಟೇ – ಕೋ ನ ಇತಿ ।। ಆರಮ್ಭಾಚ್ಚೇತ್ಯಸ್ಯಾರ್ಥಃ ಆರಭ್ಯ ಉಪಕ್ರಮ್ಯಾಧೀತತ್ವೇನ ।

ಕೇವಲ ಆತ್ಮಶಬ್ದ ಮತ್ತು ಸ್ಮೃತಿಸಮಾಖ್ಯಾಗಳಿಂದಷ್ಟೇ ಭಗವಂತನೇ ವೈಶ್ವಾನರನೆಂದು ಸಿದ್ಧವಾಗುವುದಿಲ್ಲ ಹೊರತಾಗಿ ಬೇರೆಯವರಲ್ಲಿ ಈ ಆತ್ಮಶಬ್ದ ಹಾಗೂ ಸ್ಮೃತಿಸಮಾಖ್ಯಾಗಳು ಅಸಂಭಾವಿತವಾಗಿರುವುದರಿಂದಲೂ ಭಗವಂತನೇ ವೈಶ್ವಾನರನಾಗಿದ್ದಾನೆಂದು ತಿಳಿಯಬೇಕು. ಈ

ಅಭಿಪ್ರಾಯದಿಂದಲೇ "ಅನ್ಯೇಷಾಮಸಂಭವಾತ್" ಎಂಬುದರ ಜೊತೆಗೆ ಭಾಷ್ಯದಲ್ಲಿರುವ "ಇತ್ಯಾದಿನಾ" ಎಂಬುದಕ್ಕೆ ಅನ್ವಯವನ್ನು ಮಾಡಬೇಕು. "ಆರಂಭಾಚ್ಚ" ಎಂಬುದಕ್ಕೆ "ವಿಷ್ಣುಃ" ಮೊದಲಾದವುಗಳ ಜೊತೆಗೆ ಅನ್ವಯವನ್ನು ಅಂಗೀಕರಿಸಿ "ಕೋ ನ" ಎಂಬುದಾಗಿ ವ್ಯಾಖ್ಯಾನಿಸುತ್ತಿದ್ದಾರೆ. "ಆರಂಭಾಚ್ಚ "ಎಂಬುದಕ್ಕೆ 'ಆರಂಭಿಸಿ' ಎಂದರ್ಥ. ಅಂದರೆ ಉಪಕ್ರಮದಲ್ಲಿ ಅಧ್ಯಯನ ಮಾಡಿರುವುದರಿಂದ ಎಂದರ್ಥ.

'ಪ್ರಕರಣತ್ವಾಚ್ಚ' ಎಂಬ ಟೀಕಾಪಂಕ್ತಿಯಲ್ಲಿರುವ ಸ್ವಾರಸ್ಯ

ಭಾವದೀಪಃ – प्रकरणत्वाच्चेति ।। तेन सूत्रे अग्रेतनापिपदमसम्भवीत्यत्राऽयाकृष्यत इति सूचितम् । वचनेनेत्यनेनेत्यादिना वचनेनेत्यस्य भाष्यस्यार्थः सूचितः

"ಪ್ರಕರಣತ್ವಾಚ್ಚ" ಎಂಬುದರಿಂದ ಸೂತ್ರದಲ್ಲಿ ಮುಂದಿರುವ "ಅಪಿ" ಪದವು "ಅಸಂಭವಾಚ್ಚ" ಎಂಬಲ್ಲಿಯೂ ಸಹ ಅನ್ವಯವನ್ನು ಹೊಂದುತ್ತದೆ ಎಂದು ಸೂಚಿಸಿದ್ದಾರೆ. "ವಚನೇನ" ಎಂದು ಹೇಳಿದ್ದರಿಂದ "ಇತ್ಯಾದಿನಾ ವಚನೇನ" ಎಂಬ ಭಾಷ್ಯದ ಅರ್ಥವನ್ನು ಸೂಚಿಸಿದ್ದಾರೆ.

ಟೀಕೆಯಲ್ಲಿ ಪುನರುಕ್ತಿಯನ್ನು ಪರಿಹರಿಸಿದರು

ಭಾವದೀಪಃ – श्रुतीति ।। तथाच न 'स्मर्यमाणम्' इत्यनेन पौनरुक्त्यमिति भावः । समाख्या चात्रार्थतः । नतु जिज्ञासानयोक्तपरो दिवेति समाख्यावच्छब्दत इति ज्ञेयम् ।

ಟೀಕೆಯಲ್ಲಿ "ಶ್ರುತಿ" ಎಂದು ಹೇಳಿದ್ದರಿಂದ "ಸ್ಮರ್ಯಮಾಣಂ" ಎಂಬ ಸೂತ್ರದಿಂದ ಪುನರುಕ್ತಿಯು ಬರುವುದಿಲ್ಲವೆಂದು ತಿಳಿಯಬೇಕು. ಸಮಾಖ್ಯಾಪ್ರಮಾಣವು ಇಲ್ಲಿ ಆರ್ಥಿಕವಾಗಿ ಬರುತ್ತದೆ ಹೊರತು ಜಿಜ್ಞಾಸಾಧಿಕರಣದಲ್ಲಿ ಹೇಳಿರುವ "ಪರೋ ದಿವಾ"ಎಂಬ ಸಮಾಖ್ಯಾದಂತೆ ನೇರವಾಗಿ ಶಬ್ದದಿಂದ ತಿಳಿಯುವುದಿಲ್ಲ.

ಪುರುಷಸೂಕ್ತದಲ್ಲಿರುವ ಅನುರೂಪವಾಕ್ಯಗಳ ಉಲ್ಲೇಖ

ಭಾವದೀಪಃ – चन्द्रमा इति भाष्यं वाक्यप्रतीकमिति मत्वाऽनुरूपवाक्यानि

पठति – शीर्ष्ण इति ।। सुतेजा इत्यादेर्द्रव्यादिरर्थो बोध्यः । भावार्थमाह – अत इति ।।

"ಚಂದ್ರಮಾ ಮನಸೋ ಜಾತಃ" ಎಂಬ ಭಾಷ್ಯದ ಮಾತನ್ನು ಶ್ರುತಿವಾಕ್ಯಕ್ಕೆ ಪ್ರತೀಕವೆಂದು ತಿಳಿದು ಅನುರೂಪವಾದ ವಾಕ್ಯಗಳೆಲ್ಲವನ್ನು "ಶೀರ್ಷ್ಣಃ" ಎಂಬುದರಿಂದ ಪಠಿಸುತ್ತಿದ್ದಾರೆ. "ಸುತೇಜಾಃ" ಮೊದಲಾದವುಗಳಿಂದ ದ್ರವ್ಯಾದಿಗಳು ಎಂಬ ಅರ್ಥವು ತಿಳಿಯುತ್ತದೆ. ಒಟ್ಟು ಅಭಿಪ್ರಾಯವನ್ನು "ಅತಃ" ಎಂಬುದರಿಂದ ಹೇಳಿದ್ದಾರೆ.

ಸೂತ್ರದಲ್ಲಿರುವ 'ಅಪಿ'ಶಬ್ದದ ವ್ಯಾಖ್ಯಾನ

भावदीपः – समाख्ययाऽपीत्यनेन सूत्रे पुरुषविधमपीत्यपिशब्दः असम्भवादित्युक्तप्रकरणसमुच्चय इति दर्शितम् । अनन्वयादाह – प्रसिद्धमितीति ।। उक्तसमुच्चयार्थोऽयमेतमर्थं कथं सूचयेदित्यत आह – अपीति ।।

"ಸಮಾಖ್ಯಯಾಪಿ" ಎಂಬುದರಿಂದ ಸೂತ್ರದಲ್ಲಿರುವ "ಪುರುಷವಿಧಮಪಿ" ಎಂಬಲ್ಲಿರುವ 'ಅಪಿ' ಶಬ್ದವು "ಅಸಂಭವಾಚ್ಚ" ಎಂಬ ಪ್ರಕರಣಕ್ಕೆ ಸಮುಚ್ಚಯವಾಗಿದೆಂದು ತಿಳಿಸಿದ್ದಾರೆ. ಅನ್ವಯವು ಸ್ಪಷ್ಟವಾಗಿ ತಿಳಿಯದ ಕಾರಣ "ಪ್ರಸಿದ್ಧಮಿತಿ" ಎಂದು ಹೇಳಿದ್ದಾರೆ. ಹಿಂದೆ ಹೇಳಿರುವುದನ್ನು ಸಮುಚ್ಚಯ ಮಾಡುವುದಕ್ಕಾಗಿ ಇರುವ ಈ ಪದವು ನೀವು ಹೇಳಿದ ಅರ್ಥವನ್ನು ಹೇಗೆ ಸೂಚಿಸುತ್ತದೆ? ಎಂಬ ಪ್ರಶ್ನೆಗೆ "ಅಪಿ" ಎಂಬುದರಿಂದ ಉತ್ತರಿಸಿದ್ದಾರೆ.

ಪ್ರಕರಣ ಹಾಗೂ ಸಮಾಖ್ಯಾ ಎರಡೂ ಕೂಡ ಆಧಾರವಾಗಿದೆ.

भावदीपः – प्रकरणसमाख्यारूपोभयेत्यर्थः । दृष्ट्युपदेशादित्यस्य तु श्रुत्यादिसावकाशत्वरूपहेतुसाधकत्वेन साक्षात्प्रकृतसाध्ये हेतुत्वाभावादुभये-त्युक्तम् । परः परम इत्यनयोरपौनरुक्त्यायाऽह – पर इति

ಪ್ರಕರಣ ಹಾಗೂ ಸಮಾಖ್ಯಾ ಎರಡನ್ನೂ ಸಹ ಸೂಚಿಸುತ್ತಿದೆ ಎಂದು ಅಭಿಪ್ರಾಯ. ಸೂತ್ರದಲ್ಲಿರುವ "ದೃಷ್ಟ್ಯುಪದೇಶಾತ್" ಎಂಬುದಕ್ಕೆ ಅಗ್ನಿಶ್ರುತ್ಯಾದಿಗಳು ಸಾವಕಾಶವಾಗಿವೆ ಎಂಬ

ಹೇತುವನ್ನು ಸಾಧಿಸುವುದಕ್ಕಾಗಿ ಹೇಳಿದ್ದಾರೆಂದು ತಿಳಿಯಬೇಕು. ಹೊರತು ಸಾಕ್ಷಾತ್ತಾಗಿ ಪ್ರಕೃತವಾದ ಸಾಧ್ಯಕ್ಕೆ ಹೇತುವಾಗಿಲ್ಲವೆಂದು ''ಉಭಯ'' ಎಂದು ತಿಳಿಸಿದ್ದಾರೆ. 'ಪರಃ' ಮತ್ತು 'ಪರಮ' ಎಂಬ ಎರಡು ಪದಗಳಿಗೆ ಪುನರುಕ್ತಿ ಬರಬಾರದೆಂಬ ಉದ್ದೇಶದಿಂದ ''ಪರಃ'' ಎಂದು ಹೇಳಿದ್ದಾರೆ.

'पुराणादिषु' ಎಂಬ ಭಾಷ್ಯದಲ್ಲಿರುವ ಆದಿಪದಾರ್ಥ

भावदीपः – पुराणादिष्विति भाष्यस्थादिपदार्थमाह – **आदिपदेनेति** ।। **ब्रह्मतर्केति** ।। तृतीये पुरुषविद्यायामित्यत्र भाष्योक्तमेतद्वाक्यं स्मृतौ तत्तज्जनकत्वेनतत्तन्नामवत्त्वोक्तावपि श्रुतावभेदोक्तेः कस्समाधिरुक्त इत्यतोऽभिप्रायमाह – **वैश्वानराङ्गानामिति** ।

''पुराणादिषु'' ಎಂದು ಭಾಷ್ಯದಲ್ಲಿರುವ 'ಆದಿ' ಪದದ ಅರ್ಥವನ್ನು ''ಆದಿಪದೇನ'' ಇತ್ಯಾದಿಯಾಗಿ ಹೇಳಿದ್ದಾರೆ. ಬ್ರಹ್ಮತರ್ಕ ಎಂದರೆ ಮೂರನೆಯ ಪಾದದ ''ಪುರುಷವಿದ್ಯಾಯಾಂ'' ಎಂಬ ಸೂತ್ರದ ಭಾಷ್ಯದಲ್ಲಿ ಈ ವಾಕ್ಯವನ್ನು ಹೇಳಿದ್ದಾರೆಂದು ತಿಳಿಯಬೇಕು. ಸ್ಮೃತಿಯಲ್ಲಿ ಆಯಾ ಪದಾರ್ಥಗಳಿಗೆ ಭಗವಂತನು ಜನಕನಾದ್ದರಿಂದ ಆಯಾ ಹೆಸರುಗಳನ್ನು ಪಡೆದಿದ್ದಾನೆಂಬ ಅರ್ಥವನ್ನು ಹೇಳಿದ್ದಾರೆ. ಆದರೆ ಅಭೇದದ ವಿವಕ್ಷೆಯಿಂದ ಇರುವ ಶ್ರುತಿಗಳಿಗೆ ಏನು ಅರ್ಥವನ್ನು ಹೇಳಿದಂತಾಯಿತು? ಎಂಬ ಪ್ರಶ್ನೆಗೆ ''ವೈಶ್ವಾನರಾಂಗಾನಾಂ'' ಎಂಬುದರಿಂದ ಉತ್ತರಿಸಿದ್ದಾರೆ.

ಶ್ರುತಿಯಲ್ಲಿ ಏಕೆ ಅಭೇದವ್ಯವಹಾರ ?

भावदीपः – **तज्जन्येति** ।। सुतेजःप्रभृतिशब्दोक्तद्युप्रभृतिजनकत्वं वक्तुं तदभेदः श्रुतावुच्यते । तथाचैकार्थ्यं श्रुत्योरित्यर्थः ।

'ಸುತೇಜಃ' ಮೊದಲಾದ ಶಬ್ದಗಳಿಂದ ದ್ಯುಲೋಕವೇ ಮೊದಲಾದವುಗಳಿಗೆ ಭಗವಂತನು ಜನಕನಾದ್ದರಿಂದ ಅವುಗಳಿಂದ ಅಭೇದವು ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ಎಲ್ಲಾ ಶ್ರುತಿಗೂ ಒಂದೇ ಅರ್ಥದ ವಿವಕ್ಷೆ ಇದೆ ಎಂದು ತಿಳಿಯಬೇಕು.

ಛಾಂದೋಗ್ಯಭಾಷ್ಯದಲ್ಲಿರುವ ವಿಷಯವಾಕ್ಯದ ಉಲ್ಲೇಖ

भावदीपः – छान्दोग्यभाष्ये तु 'क्रीडात्मकत्वाद् द्व्याख्यं च सुतेजाश्चातितेजसा । स्वर्गाधारं शिरो विष्णोः सर्वरूपातिदर्शनात् ।।

चक्षुस्तु विश्वरूपाख्यम्' इत्यादिना स्वर्गाद्याधाराङ्गविशेषस्यातितेजस्त्वादि-निमित्तेन सुतेजःप्रभृतिशब्दवाच्यत्वमुक्तम् ।

ಛಾಂದೋಗ್ಯ ಭಾಷ್ಯದಲ್ಲಿಯಾದರೂ "ಕ್ರೀಡಾತ್ಮಕತ್ವಾದ್ ದ್ಯ್ವಾಖ್ಯಂ ಚ ಸುತೇಜಾಶ್ಚಾತಿತೇಜಸಾ । ಸ್ವರ್ಗಾಧಾರಂ ಶಿರೋ ವಿಷ್ಣೋಃ ಸರ್ವರೂಪಾತಿದರ್ಶನಾತ್ । ಚಕ್ಷುಸ್ತು ವಿಶ್ವರೂಪಾಖ್ಯಂ" ಇತ್ಯಾದಿಯಾಗಿ ಸ್ವರ್ಗಾದ್ಯಾಧಾರಾಂಗವಿಶೇಷವು ಅತಿತೇಜಸ್ಸ್ವಾದಿ ನಿಮಿತ್ತದಿಂದ 'ಸುತೇಜಃ' ಮೊದಲಾದ ಶಬ್ದವಾಚ್ಯವಾಗಿದೆಯೆಂದು ಹೇಳಿದ್ದಾರೆ.

ಆಧಾರಾಧೇಯಭಾವವೂ ಕೂಡ ಅಭೇದವ್ಯವಹಾರದಲ್ಲಿ ವಿವಕ್ಷಿತ

भावदीपः – तत्राधाराधेयभावविवक्षा जन्यजनकभावविवक्षाया अप्युपलक्षणम् । यतो जनिस्तत्रैव स्थितिलयाविति प्रसिद्धेः । अत एवात्र तत्त्वप्रदीपे यस्माद् यद् जायते तदाश्रित्य तिष्ठति लीयते चेत्यादिनाऽप्याधाराधेयभावादिविवक्षाऽप्युपलक्षिता ।।

ಭಗವಂತನಿಗೂ ದ್ಯುಲೋಕಕ್ಕೂ ಆಧಾರಾಧೇಯಭಾವದ ವಿವಕ್ಷೆಯು ಜನ್ಯಜನಕಭಾವದ ವಿವಕ್ಷೆಗೆ ಉಪಲಕ್ಷಣವಾಗಿದೆ ಎಂದು ತಿಳಿಯಬೇಕು. ಏಕೆಂದರೆ ಯಾರಿಂದ ಜನ್ಮವಾಗುತ್ತದೋ ಅವನಿಂದಲೇ ಸ್ಥಿತಿ ಹಾಗೂ ಲಯಗಳಾಗುತ್ತವೆ ಎಂಬುದು ಪ್ರಸಿದ್ಧವಾಗಿದೆ. ಆದ್ದರಿಂದಲೇ ತತ್ವಪ್ರದೀಪದಲ್ಲಿ ಯಾವ ಅಂಗದಿಂದ ಹುಟ್ಟುತ್ತದೆಯೋ ಆ ಅಂಗವನ್ನೇ ಆಶ್ರಯಿಸಿರುತ್ತದೆ ಮತ್ತು ಅದರಲ್ಲಿ ಲಯ ಹೊಂದುತ್ತದೆ ಎಂದು ಆಧಾರಾಧೇಯಭಾವಾದಿ ವಿವಕ್ಷೆಯನ್ನು ಉಪಲಕ್ಷಣವನ್ನಾಗಿ ವಿವಕ್ಷಿಸಿದ್ದಾರೆ.

ಬ್ರಹ್ಮಸೂತ್ರ

'ಅತ ಏವ ನ ದೇವತಾ ಭೂತಂ ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। अत एव न देवता भूतं च ।।२७।।

ನಿರವಕಾಶವಾದ ಆತ್ಮಶಬ್ದ ಮೊದಲಾದ ಕಾರಣಗಳಿರುವುದರಿಂದ ಅಗ್ನಿದೇವತೆಯಾಗಲೀ ಜಡವಾದ ಅಗ್ನಿಯಾಗಲೀ ವೈಶ್ವಾನರಶಬ್ದದಿಂದ ಪ್ರತಿಪಾದ್ಯರಾಗುವುದಿಲ್ಲ.

ಅರ್ಥ - ದೇವತಾ = ಅಗ್ನಿ ಮೊದಲಾದ ದೇವತೆಯು, ಚ = ಮತ್ತು, ಭೂತಂ = ಜಡವಾದ ಅಗ್ನಿಯು, ನ = ವೈಶ್ವಾನರಶಬ್ದದಿಂದ ವಾಚ್ಯರಲ್ಲ, ಏಕೆಂದರೆ ಅತ ಏವ = ನಿರವಕಾಶವಾದ ಆತ್ಮಶಬ್ದ ಮೊದಲಾದ ಹೇತುಗಳಿರುವುದರಿಂದಲೇ.

ಬ್ರಹ್ಮಸೂತ್ರಭಾಷ್ಯ

ಅಗ್ನಿ, ವೈಶ್ವಾನರ, ಜಾತವೇದ ಮೊದಲಾದ ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯ

ब्रह्मसूत्रभाष्यम् –

अग्निर्वैश्वानरादिशब्दस्तेजसि भूतेऽग्निदेवतायां च प्रसिद्धोऽप्यतः पूर्वोक्तहेतुत एवात्र न सा तत्राभिधीयते ।। २७ ।।

ಅನುವಾದ - ಅಗ್ನಿ, ವೈಶ್ವಾನರ, ಜಾತವೇದ ಮೊದಲಾದ ಶಬ್ದಗಳು ಭೌತಿಕತೇಜಸ್ಸುಳ್ಳ ಅಗ್ನಿದೇವತೆಯನ್ನು ಪ್ರತಿಪಾದಿಸುತ್ತದೆಂದು ಲೋಕದಲ್ಲಿ ಪ್ರಸಿದ್ಧವಾಗಿರಬಹುದು. ಆದರೆ, ಹಿಂದೆ ಹೇಳಿದ ಆತ್ಮಶಬ್ದಪ್ರಯೋಗವೆಂಬ ಕಾರಣದಿಂದ ವೈಶ್ವಾನರಪ್ರಕರಣದಲ್ಲಿ ಅಗ್ನಿದೇವತೆಯು ಅಥವಾ ಭೌತಿಕವಾದ ಅಗ್ನಿಯು ಪ್ರತಿಪಾದ್ಯವಾಗುವುದಿಲ್ಲ.

ಪ್ರತಿಪದಾರ್ಥ -- ವೈಶ್ವಾನರಶಬ್ದವು ಅಗ್ನಿದೇವತೆಯಲ್ಲಿ ಹಾಗೂ ಜಡವಾದ ಅಗ್ನಿಯಲ್ಲಿ ಲೋಕತಃ ಪ್ರಸಿದ್ಧವಾಗಿರುವುದರಿಂದ ವೈಶ್ವಾನರಪ್ರಕರಣವು ಅಗ್ನಿದೇವತೆಯನ್ನು, ಅಥವಾ ಜಡವಾದ

ಬೆಂಕಿಯನ್ನು ಪ್ರತಿಪಾದಿಸಬಹುದಲ್ಲವೇ? ಎಂದು ಆಶಂಕಿಸಿ ಪರಿಹಾರ ನೀಡುತ್ತಿದ್ದಾರೆ.

ಅಗ್ನಿವೈಶ್ವಾನರಾದಿಶಬ್ದಃ = ಅಗ್ನಿ, ವೈಶ್ವಾನರ, ಜಾತವೇದ ಮೊದಲಾದ ಶಬ್ದಗಳು ತೇಜಸಿ ಭೂತೇ = ತೇಜಸ್ಸೆಂಬ ಜಡವಾದ ಅಗ್ನಿಯಲ್ಲಿ ಅಗ್ನಿದೇವತೆಯಲ್ಲಿ, ಪ್ರಸಿದ್ಧೇऽಪಿ = ಲೌಕಿಕವಾಗಿ ಪ್ರಸಿದ್ಧವಾಗಿದ್ದರೂ, ಅತಃ ಪೂರ್ವೋಕ್ತಹೇತುತಃ ಏವ = ಹಿಂದ ಹೇಳಿದ ಆತ್ಮಶಬ್ದ ಮೊದಲಾದ ಕಾರಣಗಳಿಂದಲೇ, ಅತ್ರ = ಈ ಶ್ರುತಿಯಲ್ಲಿ, ತಾ = ಆ ಅಗ್ನಿದೇವತೆಯು, ತಚ್ಚ = ಭೌತಿಕವಾದ ಅಗ್ನಿಯು, ನ ಅಭಿಧೀಯತೇ = ಪ್ರತಿಪಾದ್ಯವಾಗುವುದಿಲ್ಲ.

ಸತ್ತರ್ಕದೀಪಾವಳಿ

ಅರ್ಥಾಂತರಗಳು ಬಾಧಿತವಾಗಿದೆ

सत्तर्कदीपावलिः – अत एव न देवता भूतं च ।। १-२-२७ ।।

अग्निवैश्वानरादिशब्दानां याऽर्थान्तरे प्रसिद्धिः सा सूत्रोक्तहेतुना बाध्यते इत्येतत्प्रतिपादकं सूत्रं पठित्वा व्याचष्टे – अत एवेत्यादिना ।। इतोऽप्यग्न्यादिशब्दैरभिधेयो विष्णुः मुख्यार्थत्वात् । अगं नेता ह्यग्निः । विश्वनरनेतृत्वाद् वैश्वानरः । स च मुख्यतो विष्णुरेव ।।

ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳಿಗೆ ಅರ್ಥಾಂತರದಲ್ಲಿ ಪ್ರಸಿದ್ಧಿ ಇದೆ. ಅವುಗಳು ಸೂತ್ರದಲ್ಲಿ ಹೇಳಲ್ಪಟ್ಟ ಹೇತುವಿನಿಂದ ಬಾಧ್ಯವಾಗಿದೆ ಎಂಬುದನ್ನು ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಅತ ಏವ'' ಇತ್ಯಾದಿಯಾಗಿ. ಮತ್ತೊಂದು ಕಾರಣದಿಂದಲೂ ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ ಮುಖ್ಯಾರ್ಥನಾದ್ದರಿಂದ. ಅಗ್ನಿಯೆಂದರೆ ಅಗಂ ನೇತಾ ಎಂಬ ವ್ಯುತ್ಪತ್ತಿಯಿಂದ

ಗಮನವಿಲ್ಲದವನೆಂದು ನಿಯಂತ್ರಿಸುವ ಪರಮಾತ್ಮನೆಂದರ್ಥ. ವೈಶ್ವಾನರಶಬ್ದಕ್ಕೆ ಜಗತ್ತಿನಲ್ಲಿರುವ ಎಲ್ಲ ನರರನ್ನೂ ನಿಯಮಮಾಡುತ್ತಾನೆ ಎಂದರ್ಥ. ಅಂತಹವನು ಮುಖ್ಯವಾಗಿ ವಿಷ್ಣುವೇ ಆಗಿದ್ದಾನೆ.

ತತ್ತ್ವಪ್ರದೀಪ

ವೈಶ್ವಾನರ ಪ್ರಕರಣದಿಂದ ಪ್ರತಿಪಾದ್ಯನಾದವನು ಮಹಾವಿಷ್ಣು ಮಾತ್ರ

तत्त्वप्रदीपः – ''अत एव न देवता भूतं च'' ।। प्रसिद्धोऽपि यद्यपि प्रसिद्धस्तथाऽपीत्यर्थः ।।७।।

ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಭೌತಿಕವಾದ ತೇಜಸ್ಸಿನಲ್ಲಿ ಅಗ್ನಿದೇವತೆಯಲ್ಲಿ ಪ್ರಸಿದ್ಧವಾಗಿವೆ. ಆದರೂ ಕೂಡ ಹಿಂದೆ ಹೇಳಿದ ಆತ್ಮಶಬ್ದ ಪ್ರಯೋಗ, ಭಗವದ್ಗೀತೆಯ ಸಂವಾದ ಮೊದಲಾದ ಕಾರಣಗಳಿಂದ ಈ ವೈಶ್ವಾನರ ಪ್ರಕರಣದಲ್ಲಿ ದೇವತೆಯಾಗಲಿ, ಜಡವಾದ ಅಗ್ನಿಯಾಗಲಿ ಪ್ರತಿಪಾದ್ಯವಾಗುವುದಿಲ್ಲ.

ವಿಶೇಷವಿಚಾರ- 'ವೈಶ್ವಾನರ' ಎಂಬಶಬ್ದದಿಂದಮಹಾವಿಷ್ಣುಪ್ರತಿಪಾದ್ಯನಾಗುತ್ತಾನೆಂದು ಹೇಳಿದಿರಿ. ಇದನ್ನು ಒಪ್ಪೋಣ. ಮಹಾವಿಷ್ಣುವಿನ ಜೊತೆ ಭೌತಿಕವಾದ ತೇಜಸ್ಸು ಹಾಗೂ ಅಗ್ನಿದೇವತೆ ಇವುಗಳೂ ಕೂಡ ಪ್ರತಿಪಾದ್ಯವಾಗಲಿ ?

ಈ ಆಕ್ಷೇಪ ತಪ್ಪು. ಪ್ರಕೃತ ವೈಶ್ವಾನರಾಧಿಕರಣದಲ್ಲಿ ಮಹಾವಿಷ್ಣು ಒಬ್ಬನೇ ಪ್ರತಿಪಾದ್ಯನಾಗುತ್ತಾನೆ. ಅಗ್ನಿದೇವತೆಯು ಸರ್ವಥಾ ಪ್ರತಿಪಾದ್ಯವಾಗುವುದಿಲ್ಲ. ಅಗ್ನಿದೇವತೆಯೇ ಪ್ರತಿಪಾದ್ಯವಾಗದಿದ್ದಾಗ ಭೌತಿಕವಾದ ಅಗ್ನಿ ಪ್ರತಿಪಾದ್ಯವಾಗುವುದಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕೇನು ?

ಈ ವೈಶ್ವಾನರ ಪ್ರಕರಣದಲ್ಲಿ ಮಹಾವಿಷ್ಣುವಿನ ಜೊತೆ ಅಗ್ನಿದೇವತೆ ಹಾಗೂ ಭೌತಿಕವಾದ ಅಗ್ನಿ ಏಕೆ ಪ್ರತಿಪಾದ್ಯವಾಗುವುದಿಲ್ಲ ಎಂದರೆ ಈ ಹಿಂದೆ ಹೇಳಿದಂತೆ ಭಗವದ್ಗೀತೆಯ ಸಂವಾದ ಹಾಗೂ ಆತ್ಮಶಬ್ದದ ಪ್ರಯೋಗ ಇವುಗಳಿರುವುದರಿಂದ ಮಹಾವಿಷ್ಣುವೇ ವೈಶ್ವಾನರನಾಗುತ್ತಾನೆ.

ಪ್ರಶ್ನೆ - ಸೂತ್ರಕಾರರು 'अत एव न देवता भूतं च' ಎಂಬುದಾಗಿ ಹಿಂದೆ ಹೇಳಿದ ಹೇತುಗಳಿಂದಲೇ ಅಗ್ನಿ ದೇವತೆಯು ಪ್ರತಿಪಾದ್ಯವಾಗುವುದಿಲ್ಲ. ಭೌತಿಕವಾದ ಅಗ್ನಿಯೂ ಕೂಡ

ಬೆಂಕಿಯನ್ನು ಪ್ರತಿಪಾದಿಸಬಹುದಲ್ಲವೇ? ಎಂದು ಆಶಂಕಿಸಿ ಪರಿಹಾರ ನೀಡುತ್ತಿದ್ದಾರೆ.

ಅಗ್ನಿವೈಶ್ವಾನರಾದಿಶಬ್ದಃ = ಅಗ್ನಿ, ವೈಶ್ವಾನರ, ಜಾತವೇದ ಮೊದಲಾದ ಶಬ್ದಗಳು ತೇಜಸಿ ಭೂತೇ = ತೇಜಸ್ಸೆಂಬ ಜಡವಾದ ಅಗ್ನಿಯಲ್ಲಿ ಅಗ್ನಿದೇವತೆಯಲ್ಲಿ, ಪ್ರಸಿದ್ಧೇऽಪಿ = ಲೌಕಿಕವಾಗಿ ಪ್ರಸಿದ್ಧವಾಗಿದ್ದರೂ, ಅತಃ ಪೂರ್ವೋಕ್ತಹೇತುತಃ ಏವ = ಹಿಂದ ಹೇಳಿದ ಆತ್ಮಶಬ್ದ ಮೊದಲಾದ ಕಾರಣಗಳಿಂದಲೇ, ಅತ್ರ = ಈ ಶ್ರುತಿಯಲ್ಲಿ, ತಾ = ಆ ಅಗ್ನಿದೇವತೆಯು, ತಚ್ಚ = ಭೌತಿಕವಾದ ಅಗ್ನಿಯು, ನ ಅಭಧೀಯತೇ = ಪ್ರತಿಪಾದ್ಯವಾಗುವುದಿಲ್ಲ.

ಸತ್ತರ್ಕದೀಪಾವಳಿ

ಅರ್ಥಾಂತರಗಳು ಬಾಧಿತವಾಗಿದೆ

सत्तर्कदीपावलिः – अत एव न देवता भूतं च ।। १-२-२७ ।।

अग्निवैश्वानरादिशब्दानां याऽर्थान्तरे प्रसिद्धिः सा सूत्रोक्तहेतुना बाध्यते इत्येतत्प्रतिपादकं सूत्रं पठित्वा व्याचष्टे – अत एवेत्यादिना ।। इतोऽप्यग्न्यादिशब्दैरभिधेयो विष्णुः मुख्यार्थत्वात् । अगं नेता ह्यग्निः । विश्वनरनेतृत्वाद् वैश्वानरः । स च मुख्यतो विष्णुरेव ।।

ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳಿಗೆ ಅರ್ಥಾಂತರದಲ್ಲಿ ಪ್ರಸಿದ್ಧಿ ಇದೆ. ಅವುಗಳು ಸೂತ್ರದಲ್ಲಿ ಹೇಳಲ್ಪಟ್ಟ ಹೇತುವಿನಿಂದ ಬಾಧ್ಯವಾಗಿದೆ ಎಂಬುದನ್ನು ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಅತ ಏವ'' ಇತ್ಯಾದಿಯಾಗಿ. ಮತ್ತೊಂದು ಕಾರಣದಿಂದಲೂ ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ ಮುಖ್ಯಾರ್ಥನಾದ್ದರಿಂದ. ಅಗ್ನಿಯೆಂದರೆ ಅಗಂ ನೇತಾ ಎಂಬ ವ್ಯುತ್ಪತ್ತಿಯಿಂದ

ಗಮನವಿಲ್ಲದವನೆಂದು ನಿಯಂತ್ರಿಸುವ ಪರಮಾತ್ಮನೆಂದರ್ಥ. ವೈಶ್ವಾನರಶಬ್ದಕ್ಕೆ ಜಗತ್ತಿನಲ್ಲಿರುವ ಎಲ್ಲ ನರರನ್ನೂ ನಿಯಮಮಾಡುತ್ತಾನೆ ಎಂದರ್ಥ. ಅಂತಹವನು ಮುಖ್ಯವಾಗಿ ವಿಷ್ಣುವೇ ಆಗಿದ್ದಾನೆ.

ತತ್ವಪ್ರದೀಪ

ವೈಶ್ವಾನರ ಪ್ರಕರಣದಿಂದ ಪ್ರತಿಪಾದ್ಯನಾದವನು ಮಹಾವಿಷ್ಣು ಮಾತ್ರ

तत्वप्रदीपः – ''अत एव न देवता भूतं च'' ।। प्रसिद्धोऽपि यद्यपि प्रसिद्धस्तथाऽपीत्यर्थः ।।७।।

ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಭೌತಿಕವಾದ ತೇಜಸ್ಸಿನಲ್ಲಿ ಅಗ್ನಿದೇವತೆಯಲ್ಲಿ ಪ್ರಸಿದ್ಧವಾಗಿವೆ. ಆದರೂ ಕೂಡ ಹಿಂದೆ ಹೇಳಿದ ಆತ್ಮಶಬ್ದ ಪ್ರಯೋಗ, ಭಗವದ್ಗೀತೆಯ ಸಂವಾದ ಮೊದಲಾದ ಕಾರಣಗಳಿಂದ ಈ ವೈಶ್ವಾನರ ಪ್ರಕರಣದಲ್ಲಿ ದೇವತೆಯಾಗಲಿ, ಜಡವಾದ ಅಗ್ನಿಯಾಗಲಿ ಪ್ರತಿಪಾದ್ಯವಾಗುವುದಿಲ್ಲ.

ವಿಶೇಷವಿಚಾರ- 'ವೈಶ್ವಾನರ' ಎಂಬಶಬ್ದದಿಂದಮಹಾವಿಷ್ಣುಪ್ರತಿಪಾದ್ಯನಾಗುತ್ತಾನೆಂದು ಹೇಳಿದಿರಿ. ಇದನ್ನು ಒಪ್ಪೋಣ. ಮಹಾವಿಷ್ಣುವಿನ ಜೊತೆ ಭೌತಿಕವಾದ ತೇಜಸ್ಸು ಹಾಗೂ ಅಗ್ನಿದೇವತೆ ಇವುಗಳೂ ಕೂಡ ಪ್ರತಿಪಾದ್ಯವಾಗಲಿ ?

ಈ ಆಕ್ಷೇಪ ತಪ್ಪು. ಪ್ರಕೃತ ವೈಶ್ವಾನರಾಧಿಕರಣದಲ್ಲಿ ಮಹಾವಿಷ್ಣು ಒಬ್ಬನೇ ಪ್ರತಿಪಾದ್ಯನಾಗುತ್ತಾನೆ. ಅಗ್ನಿದೇವತೆಯು ಸರ್ವಥಾ ಪ್ರತಿಪಾದ್ಯವಾಗುವುದಿಲ್ಲ. ಅಗ್ನಿದೇವತೆಯೇ ಪ್ರತಿಪಾದ್ಯವಾಗದಿದ್ದಾಗ ಭೌತಿಕವಾದ ಅಗ್ನಿ ಪ್ರತಿಪಾದ್ಯವಾಗುವುದಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕೇನು ?

ಈ ವೈಶ್ವಾನರ ಪ್ರಕರಣದಲ್ಲಿ ಮಹಾವಿಷ್ಣುವಿನ ಜೊತೆ ಅಗ್ನಿದೇವತೆ ಹಾಗೂ ಭೌತಿಕವಾದ ಅಗ್ನಿ ಏಕೆ ಪ್ರತಿಪಾದ್ಯವಾಗುವುದಿಲ್ಲ ಎಂದರೆ ಈ ಹಿಂದೆ ಹೇಳಿದಂತೆ ಭಗವದ್ಗೀತೆಯ ಸಂವಾದ ಹಾಗೂ ಆತ್ಮಶಬ್ದದ ಪ್ರಯೋಗ ಇವುಗಳಿರುವುದರಿಂದ ಮಹಾವಿಷ್ಣುವೇ ವೈಶ್ವಾನರನಾಗುತ್ತಾನೆ.

ಪ್ರಶ್ನೆ - ಸೂತ್ರಕಾರರು 'ಅತ ಏವ ನ ದೇವತಾ ಭೂತಂ ಚ' ಎಂಬುದಾಗಿ ಹಿಂದೆ ಹೇಳಿದ ಹೇತುಗಳಿಂದಲೇ ಅಗ್ನಿ ದೇವತೆಯು ಪ್ರತಿಪಾದ್ಯವಾಗುವುದಿಲ್ಲ. ಭೌತಿಕವಾದ ಅಗ್ನಿಯೂ ಕೂಡ

ಪ್ರತಿಪಾದ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಸೂತ್ರದಲ್ಲಿ ಹೇಳಿದ್ದಕ್ಕೆ ಭೌತಿಕವಾದ ತೇಜಸ್ಸು ಪ್ರತಿಪಾದ್ಯವಾಗುವುದಿಲ್ಲ. ಅಗ್ನಿದೇವತೆಯೂ ಪ್ರತಿಪಾದ್ಯವಾಗುವುದಿಲ್ಲ ಎಂದು ವ್ಯತ್ಯಾಸ ಮಾಡಿದ್ದಾರೆ. ಸೂತ್ರದಲ್ಲಿ ಹೇಳಿದ್ದನ್ನು ಹೀಗೇಕೆ ಭಾಷ್ಯದಲ್ಲಿ ವ್ಯತ್ಯಾಸ ಮಾಡಿದರು ?

ಉತ್ತರ - ಬಹಳ ಸ್ವಾರಸ್ಯವಿದೆ. ಸೂತ್ರಕಾರರು ಸಿದ್ಧಾಂತವನ್ನು ನೇರವಾಗಿ ಹೇಳುತ್ತಿದ್ದಾರೆ. ಭಾಷ್ಯಕಾರರು 'ಅಗ್ನಿವೈಶ್ವಾನರ' ಎಂಬ ವಾಕ್ಯದಿಂದ ಪೂರ್ವಪಕ್ಷವನ್ನು ಹೇಳಿ ಸಿದ್ಧಾಂತವನ್ನು ಹೇಳುತ್ತಿದ್ದಾರೆ. ಪೂರ್ವಪಕ್ಷ ಮಾಡುವಾಗ ಮೊದಲು ಭೌತಿಕವಾದ ತೇಜಸ್ಸು ವೈಶ್ವಾನರ ಎಂದು ಕರೆಸಿಕೊಳ್ಳಬಹುದು. ಇದರಲ್ಲಿ ಅಸ್ವಾರಸ್ಯವಿದ್ದರೆ ತದಭಿಮಾನಿಯಾದ ಅಗ್ನಿದೇವತೆಯು ಪ್ರತಿಪಾದ್ಯವಾಗಬಹುದೆಂಬ ಎರಡು ಮಜಲುಗಳಲ್ಲಿ ಪೂರ್ವಪಕ್ಷವನ್ನು ಸ್ಥಾಪನೆ ಮಾಡಿದ್ದಾರೆ. ಸಿದ್ಧಾಂತ ಮಾಡುವ ಸಂದರ್ಭದಲ್ಲಿ ಸೂತ್ರಕಾರರು ಹೇಳಿದಂತೆ ಅಗ್ನಿದೇವತೆಯೇ ಪ್ರತಿಪಾದ್ಯವಾಗದಿದ್ದಾಗ ಭೌತಿಕವಾದ ಅಗ್ನಿ ಪ್ರತಿಪಾದ್ಯವಾಗಲು ಹೇಗೆ ಸಾಧ್ಯ ? ಎಂಬ ಕೈಮುತ್ಯವನ್ನು ತಿಳಿಸಿದ್ದಾರೆ. ಆದ್ದರಿಂದ ಭಾಷ್ಯದಲ್ಲಿ ಭೌತಿಕವಾದ ಅಗ್ನಿಯನ್ನು ಮೊದಲು ಗ್ರಹಣ ಮಾಡಿದ್ದರಿಂದ ಪೂರ್ವಪಕ್ಷದ ಸ್ಥಾಪನೆ ಸ್ಪಷ್ಟವಾಗುತ್ತದೆ. ಸೂತ್ರದಲ್ಲಿ ದೇವತಾಪದವನ್ನು ಮೊದಲು ನಿವೇಶ ಮಾಡಿದ್ದರಿಂದ ಸಿದ್ಧಾಂತ ಸ್ಥಾಪನೆಯು ಸುಸ್ಥಿರವಾಗುತ್ತದೆ. ಈ ಸೂಕ್ಷ್ಮವನ್ನು ಗಮನಿಸಬೇಕು.

ತತ್ತ್ವಪ್ರಕಾಶಿಕಾ

ವೈಶ್ವಾನರ ಪ್ರಕರಣವು ಮಹಾವಿಷ್ಣು ಪ್ರತಿಪಾದಕವೆನ್ನಲು ಕಾರಣ

तत्वप्रकाशिका – अत एव न देवता भूतं च ।। १-२-२७ ।।

यद्यपि वैश्वानरशब्दोऽन्यत्र प्रसिद्धस्तथापि नात्र तेनान्यदभिधीयते । आत्मशब्दादिहेतोरेव । तस्य चान्यत्र निरवकाशत्वादिति भावः । अत्राग्न्यादिग्रहणं विद्यान्तरोपलक्षणार्थम् ।। २७ ।।

ಸಾಮಾನ್ಯತಃ ವೈಶ್ವಾನರಶಬ್ದವು ಅಗ್ನಿದೇವತೆಯಲ್ಲಿ ಹಾಗೂ ಭೌತಿಕವಾದ ಅಗ್ನಿಯಲ್ಲಿ ಪ್ರಸಿದ್ಧವಾಗಿರಬಹುದು. ಆದರೂ ಸಹ ವೈಶ್ವಾನರಪ್ರಕರಣದಲ್ಲಿ ಅಗ್ನಿದೇವತೆಯಾಗಲೀ ಭೌತಿಕವಾದ ಅಗ್ನಿಯಾಗಲೀ ಪ್ರತಿಪಾದ್ಯವಾಗುವುದಿಲ್ಲ. ಏಕೆಂದರೆ ಆತ್ಮಶಬ್ದವಿರುವ ಪ್ರಬಲವಾದ ಶ್ರುತಿಯು ಆಧಾರವಾಗಿರುವುದರಿಂದ ಹಾಗೂ ಈ ಆತ್ಮಶಬ್ದವನ್ನು ವಿಷ್ಣುವನ್ನು ಬಿಟ್ಟು ಬೇರೆಕಡೆ ಕಥಂಚಿದಪಿ ಕೂಡಿಸಲು ಬರುವುದಿಲ್ಲ. ಅಂದರೆ ಆತ್ಮಶಬ್ದವು ಬೇರೆ ಕಡೆ ನಿರವಕಾಶವಾಗಿದೆಯೆಂದು ಅಭಿಪ್ರಾಯ. ಇಲ್ಲಿಯೂ ಸಹ ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳಿಂದ ಅಗ್ನಿ, ಆದಿತ್ಯ, ಆಕಾಶ ಮೊದಲಾದ ಬೇರೆ ವಿದ್ಯೆಗಳನ್ನು ಉಪಲಕ್ಷಣಯಾ ಸ್ವೀಕರಿಸಬೇಕು; ಆ ಆದಿತ್ಯ ಮೊದಲಾದ ಶಬ್ದಗಳಿಂದಲೂ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂಬುದನ್ನು ಹೇಳಲು ವೈಶ್ವಾನರಶಬ್ದವು ಉಪಲಕ್ಷಣವಾಗಿದೆಯೆಂದು ಭಾಷ್ಯಕಾರರು ಅಭಿಪ್ರಾಯ ಪಟ್ಟಿದ್ದಾರೆ.

ಭಾವದೀಪ

ಅಗ್ನಿ ವೈಶ್ವಾನರಾದಿ ಇತ್ಯಾದಿ ವಾಕ್ಯಗಳ ಟೀಕೆಗೆ ಪರಿಪೂರ್ಣ ವ್ಯಾಖ್ಯಾನ

भावदीपः – अत एव न देवता भूतं च ।। प्रसिद्धोऽपीति भाष्यस्थापिपदार्थं व्यनक्ति – यद्यपीति ।। तेजसीत्यादेरर्थः – अन्यत्रेति ।। अत्र न सा इत्यादेरर्थः – नात्रेति ।। तेनेति शेषोक्तिः । अत इत्यादेरर्थः – आत्मेति ।।

॥ अत एव न देवता भूतं च ॥

''प्रसिद्धोऽपि'' ಎಂಬ ಭಾಷ್ಯದಲ್ಲಿರುವ 'ಅಪಿ' ಪದದ ಅರ್ಥವನ್ನು ''ಯದ್ಯಪಿ'' ಎಂಬುದರಿಂದ ವ್ಯಾಖ್ಯಾನಿಸುತ್ತಿದ್ದಾರೆ. ಭಾಷ್ಯದಲ್ಲಿರುವ ''ತೇಜಸಿ'' ಇತ್ಯಾದಿ ಪದಗಳ ಅರ್ಥವನ್ನು ''ಅನ್ಯತ್ರ'' ಇತ್ಯಾದಿಯಾಗಿ ಹೇಳಿದ್ದಾರೆ. ''ಅತ್ರ ನ ಸಾ'' ಇತ್ಯಾದಿಗಳ ಭಾಷ್ಯದ ಪದಗಳಿಗೆ ಟೀಕೆಯಲ್ಲಿ ಅರ್ಥವನ್ನು ''ನ ಅತ್ರ'' ಇತ್ಯಾದಿ ಪದಗಳಿಂದ ಹೇಳಿದ್ದಾರೆ. ತೇನ ಎಂಬ ಪದವನ್ನು ಶೇಷಪೂರಣ ಮಾಡಿಕೊಂಡು ಅರ್ಥವನ್ನು ಹೇಳಿದ್ದಾರೆ. 'ಅತಃ' ಇತ್ಯಾದಿ ಪದಗಳ ಅರ್ಥವನ್ನು ''ಆತ್ಮಶಬ್ದಾದಿ'' ಇತ್ಯಾದಿಯಾಗಿ ಹೇಳಿದ್ದಾರೆ.

ಏವಕಾರವು ನಿರವಕಾಶತ್ವವಾಚಕವಾಗಿದೆ

भावदीपः – 'अत एव प्राणः' इत्यत्रेव 'शब्दादेव' इत्यत्रेव चैवकारो निरवकाशत्ववाचीत्युपेत्याह – तस्य चेति ।।

ಯಾವರೀತಿಯಾಗಿ ''ಅತ ಏವ'' ಎಂಬ ಸೂತ್ರದಲ್ಲಿ ಮತ್ತು '' ಶಬ್ದಾದೇವ'' ಎಂಬ ಸೂತ್ರದಲ್ಲಿ ಏವಕಾರವು ನಿರವಕಾಶತ್ವವನ್ನು ಹೇಳುತ್ತಿದೆಯೋ ಅದೇರೀತಿಯಾಗಿ ಇಲ್ಲಿಯೂ ಸಹ ನಿರವಕಾಶವಾಗಿದೆ ಎಂಬ ಅರ್ಥವನ್ನು ಅಂಗೀಕರಿಸಿ ''ತಸ್ಯಚ'' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

'ವಿ ಮೇ ಕರ್ಣಾ ಪತಯತಃ' ಇತ್ಯಾದಿ ಶ್ರುತಿಗಳಿಂದ ಯಾರು ಪ್ರತಿಪಾದ್ಯರು ?

भावदीपः – अत्राग्न्यादीति ।। अग्निवैश्वानरादीति भाष्यस्थाग्निशब्दादि-शब्दयोर्ग्रहणं 'वि मे कर्णा पतयतो विचक्षुः' इति अग्निसावित्रबाहस्पत्येन्द्र-वरुणगायत्री प्राणाकाशाक्षरादिविद्यास्वप्यग्न्यादिशब्दानामप्यन्यत्र सिद्धि-विद्याभेदव्यवहारविरोधमाशङ्क्य तत्र तत्र स्थितनिरवकाशविष्णुश्रुत्यादिना देवताभूतादिपरत्वं निरसनीयं वक्ष्यमाणन्यायैश्च सूक्तभेदो विद्याभेदश्च समर्थनीय इति सूचनार्थमित्यर्थः ।।

ಟೀಕೆಯಲ್ಲಿ ''ಅತ್ಯಾಗ್ನ್ಯಾದಿ'' ಎಂದು ಹೇಳಿದ್ದಾರೆ. ಅಂದರೆ ''ಅಗ್ನಿ ವೈಶ್ವಾನರಾದಿ'' ಎಂಬುದಾಗಿ ಭಾಷ್ಯದಲ್ಲಿರುವ ಅಗ್ನಿ ಶಬ್ದ ಹಾಗೂ ಆದಿ ಶಬ್ದವನ್ನು ಗ್ರಹಣ ಮಾಡಿದ್ದರ ಪ್ರಯೋಜನ ಹೀಗಿದೆ - ''ವಿಮೇ ಕರ್ಣಾ ಪತಯತೋ ವಿಚಕ್ಷುಃ'' ಎಂಬುದಾಗಿ ಅಗ್ನಿ, ಸೂರ್ಯ, ಬೃಹಸ್ಪತಿ,ಇಂದ್ರ, ವರುಣ, ಗಾಯತ್ರೀ, ಪ್ರಾಣ, ಆಕಾಶ ಅಕ್ಷರ ಮೊದಲಾದ ವಿದ್ಯೆಗಳಲ್ಲಿಯೂಜ ಅಗ್ನಿ ಮೊದಲಾದ ಶಬ್ದಗಳು ಹಾಗೂ ಅನ್ಯತ್ರಪ್ರಸಿದ್ಧವಾದ ವಿದ್ಯಾಭೇದದ ವಿರೋಧವು ಬರುತ್ತದೆ ಎಂದು ಆಶಂಕೆ ಬರುತ್ತದೆ. ಆದರೆ ಅಂತಹ ದೇವತೆಗಳನ್ನು ಪ್ರತಿಪಾದಿಸುವ ವಿದ್ಯೆಯಲ್ಲಿ ನಿರವಕಾಶವಾದ ವಿಷ್ಣುಸ್ತುತಿಯ ಬಲದಿಂದ ದೇವತೆಗಳಾಗಲಿ ಭೌತಿಕವಾದ ಪದಾರ್ಥಗಳಾಗಲಿ ಪ್ರತಿಪಾದ್ಯವಾಗುವುದಿಲ್ಲವೆಂದು ನಿರಾಕರಿಸಬೇಕು. ಮತ್ತು ಮುಂದೆ ಹೇಳುವ ನ್ಯಾಯದಿಂದ ಸೂಕ್ತಭೇದದ ವ್ಯವಸ್ಥೆಯನ್ನಾಗಲಿ, ವಿದ್ಯಾ ಭೇದದ ವ್ಯವಸ್ಥೆಯನ್ನಾಗಲಿ ಸಮರ್ಥನೆ ಮಾಡಬೇಕು. ಇದನ್ನು ''ಆದಿ'' ಶಬ್ದದಿಂದ ಸೂಚನೆ ಮಾಡಿದ್ದಾರೆಂದು ತಿಳಿಯಬೇಕು.

ಬ್ರಹ್ಮಸೂತ್ರ

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् –।। साक्षादप्यविरोधं जैमिनिः ।।२८।।

ಮುಖ್ಯವೃತ್ತಿಯಿಂದ ವಿಷ್ಣುವು ಅಗ್ನ್ಯಾದಿ ಶಬ್ದಗಳಿಂದ ಪ್ರತಿಪಾದ್ಯನಾದರೂ ಲೌಕಿಕವ್ಯವಹಾರದ ವಿರೋಧವು ಬರುವುದಿಲ್ಲವೆಂದು ಜೈಮಿನಿ ಋಷಿಗಳು ಹೇಳುತ್ತಾರೆ.

ಸಾಕ್ಷಾತ್ = ಮುಖ್ಯವೃತ್ತಿಯಿಂದ, ಅಪಿ = ಬ್ರಹ್ಮನಿಗೆ ಅಗ್ನ್ಯಾದಿಶಬ್ದವಾಚ್ಯತ್ವವನ್ನು ಹೇಳಿದರೂ ಸಹ, ಅವಿರೋಧಂ = ಅಜ್ಞಾನ ಮೊದಲಾದ ಬೇರೆ ಕಾರಣಗಳಿಂದ ಅಗ್ನಿ ಮೊದಲಾದವರಲ್ಲಿ ಆಯಾಶಬ್ದಗಳ ವಿರೋಧವಿಲ್ಲವೆಂದು, ಜೈಮಿನಿಃ = ಜೈಮಿನಿ ಋಷಿಗಳು ಹೇಳುತ್ತಾರೆ.

ಬ್ರಹ್ಮಸೂತ್ರಭಾಷ್ಯ

ಲೌಕಿಕ ವ್ಯವಹಾರಕ್ಕಾಗಿ ಸೂಕ್ತ ನಿಯಮವೆಂದು ಜೈಮಿನಿಗಳ ಅಭಿಪ್ರಾಯ

ब्रह्मसूत्रभाष्यम् –

नाग्न्यादयः शब्दा अग्न्यादिवाचकाः । तथाऽपि साक्षादेवानन्ययोगेन ब्रह्मवाचकैः शब्दैः व्यवहारार्थमनभिज्ञानाच्चान्यत्र व्यवहरन्तीत्यभ्युपगमेऽविरोधं जैमिनिर्वक्ति ।

ಅಗ್ನಿ ಮೊದಲಾದ ಶಬ್ದಗಳು ಜಡವಾದ ಅಗ್ನಿಯನ್ನಾಗಲೀ ಅಗ್ನಿದೇವತೆಯನ್ನಾಗಲೀ ಪ್ರತಿಪಾದಿಸುವುದಿಲ್ಲ. ಮಹಾಯೋಗರೂಢಿವೃತ್ತಿಯಿಂದ ವಿಷ್ಣುವಿಂದ ಬೇರೆಯಾದವರಲ್ಲಿ ಈ ಅರ್ಥವು ಅಸಂಭಾವಿತವಾಗಿದೆ. ಆದ್ದರಿಂದ ಪರಬ್ರಹ್ಮನನ್ನೇ ಪ್ರತಿಪಾದಿಸುವ ಇಂತಹ ಶಬ್ದಗಳಿಂದ ಲೋಕವ್ಯವಹಾರದ ಸಿದ್ಧಿಗಾಗಿ ತಿಳಿವಳಿಕೆ ಇಲ್ಲದೆ ಜನರು ಇಂತಹ ವಸ್ತುಗಳನ್ನು ವ್ಯವಹರಿಸುತ್ತಾರೆ. ಹೀಗೆ ಅಂಗೀಕರಿಸಿದರೆ ಬೇರೆ ವಸ್ತುಗಳಲ್ಲಿ ಆ ಶಬ್ದವನ್ನು ಪ್ರಯೋಗಿಸುವುದು ತಪ್ಪಾಗುವುದಿಲ್ಲವೆಂದು ಜೈಮಿನಿಋಷಿಗಳು ಹೇಳುತ್ತಾರೆ.

ಪ್ರತಿಪದಾರ್ಥ -- ಹಾಗಾದರೆ ಲೋಕದಲ್ಲಿ ಬೇರೆಡೆ ಅಗ್ನಿ ಮೊದಲಾದ ಶಬ್ದಗಳ ಪ್ರಯೋಗಕ್ಕೆ ಏನು ಗತಿ? ಎಂಬ ಪ್ರಶ್ನೆಗೆ ಮುಂದಿನ ಸೂತ್ರದಿಂದ ಉತ್ತರಿಸುತ್ತಿದ್ದಾರೆ.

ಅಗ್ನ್ಯಾದಯಃ ಶಬ್ದಾಃ = ಅಗ್ನಿಮೊದಲಾದ ಶಬ್ದಗಳು, ನ ಅಗ್ನ್ಯಾದಿವಾಚಕಾಃ = ಅಗ್ನಿ ಮೊದಲಾದವರನ್ನು ಪ್ರತಿಪಾದಿಸುವದಿಲ್ಲ. ತಥಾಪಿ = ಆದರೂ ಸಹ, ಸಾಕ್ಷಾತ್ = ಮಹಾಯೋಗವೃತ್ತಿಯಿಂದ, ಅನನ್ಯಯೋಗೇನ = ಬೇರೆಯವರಲ್ಲಿ ಆ ಅರ್ಥವು ಅಸಂಭಾವಿತವಾಗಿರುವುದರಿಂದ, ಬ್ರಹ್ಮವಾಚಕೈಃ = ಪರಬ್ರಹ್ಮನನ್ನೇ ಪ್ರತಿಪಾದಿಸುವ ಶಬ್ದೈಃ = ಶಬ್ದಗಳಿಂದ, ವ್ಯವಹಾರಾರ್ಥಂ = ವ್ಯವಹಾರಕ್ಕಾಗಿ, ಅನಭಿಜ್ಞಾನಾಚ್ಚ = ತಿಳಿವಳಿಕೆ ಇಲ್ಲದಿರುವುದರಿಂದ, ಅನ್ಯತ್ರ = ಭಗವಂತನನ್ನು ಬಿಟ್ಟು ಜಗತ್ತಿನ ವಿಷಯದಲ್ಲಿ, ವ್ಯವಹರಂತಿ = ವ್ಯವಹಾರಮಾಡುತ್ತಾರೆ.

ಇತಿ ಅಭ್ಯುಪಗಮೇ = ಹೀಗೆ ಅಂಗೀಕಾರ ಮಾಡಿದರೆ, ಅವಿರೋಧಂ = ವಿರೋಧವಿಲ್ಲ ಎಂಬುದನ್ನು, ಜೈಮಿನಿಃ = ಜೈಮಿನಿ ಋಷಿಗಳು, ಪಕ್ತಿ = ಪ್ರಮಾಣಪುರಸ್ಸರ ಹೇಳುತ್ತಾರೆ.

ವೇದವ್ಯಾಸರ ಮನಸ್ಸು ಆಕಾಶದಂತೆ ವಿಶಾಲ

ಬ್ರಹ್ಮಸೂತ್ರಭಾಷ್ಯಮ್ –

'व्यासचित्तस्थिताकाशादवच्छिन्नानि कानिचित् ।
अन्ये व्यवहरन्त्येतान्यूरीकृत्य गृहादिवत् ।।'

इति स्कान्दवचनान्न मतानां परस्परविरोधः ।। २८ ।।

ಆಕಾಶವು ವಿಶಾಲವಾಗಿದೆ ಆದರೂ ನಮ್ಮ ಮನೆಯಲ್ಲಿರುವ ಆಕಾಶವು ನಮ್ಮದು ಎಂದು ಹೇಗೆ ಹೇಳುತ್ತೇವೋ ಅದರಂತೆ ವೇದವ್ಯಾಸರ ಮನಸ್ಸು ಬಹಳ ವಿಶಾಲವಾಗಿದೆ. ಆ ಮನಸ್ಸಿನಲ್ಲಿರುವ ಒಂದೊಂದು ಅಭಿಪ್ರಾಯವನ್ನೂ ಒಬ್ಬೊಬ್ಬ ಶಿಷ್ಯರು ಗ್ರಹಣ ಮಾಡಿರುವುದರಿಂದ ತಮ್ಮ ತಮ್ಮ ಮತವೆಂದು ಹೇಳುತ್ತಾರೆ. ಹೀಗೆ ಸ್ಕಾಂದಪುರಾಣದ

ವಚನದ ಆಧಾರದಿಂದ ಜೈಮಿನಿಋಷಿಗಳ ಅಭಿಪ್ರಾಯಕ್ಕೂ ವೇದವ್ಯಾಸರ ಅಭಿಪ್ರಾಯಕ್ಕೂ ಪರಸ್ಪರ ವಿರೋಧವಿಲ್ಲವೆಂದು ಸ್ಪಷ್ಟವಾಗುತ್ತದೆ.

ಪ್ರತಿಪದಾರ್ಥ -- ವ್ಯಾಸಚಿತ್ತಸ್ಥಿತಾಕಾಶಾತ್ = ವೇದವ್ಯಾಸದೇವರ ಮನಸ್ಸೆಂಬ ವಿಶಾಲವಾದ ಆಕಾಶದಲ್ಲಿ , ಅವಚ್ಛನ್ನಾನಿ = ಪರಿಮಿತವಾದ, ಕಾನಿಚಿತ್ = ಕೆಲವೇ ವಿಷಯಗಳನ್ನು, ಅನ್ಯೇ = ಜೈಮಿನಿ, ಕಾಶಕೃತ್ಸ್ನ ಮೊದಲಾದ ಋಷಿಗಳು, ಏತಾನಿ = ವೇದವ್ಯಾಸರ ಹೃದಯದಲ್ಲಿರುವ ವಿಷಯವನ್ನೇ ಪ್ರತ್ಯೇಕಮಾಡಿ, ವ್ಯವಹರಂತಿ = ತಮ್ಮ ಅಭಿಪ್ರಾಯವೆಂದು ವ್ಯವಹಾರ ಮಾಡುತ್ತಾರೆ. ಯಾವ ರೀತಿಯಾಗಿ, ಗೃಹಾದಿವತ್ = ವಿಶಾಲವಾದ ಮನೆ ಒಂದೇ ಆಗಿದ್ದರೂ ದೇವರ ಮನೆ ಅಡಿಗೆ ಮನೆ ಎಂದು ವ್ಯವಹರಿಸುವಂತೆ, ಸ್ಕಾಂದವಚನಾತ್ = ಸ್ಕಾಂದಪುರಾಣದ ಮಾತಿನಿಂದ, ಮತಾನಾಂ = ವೇದವ್ಯಾಸರ ಹಾಗೂ ಜೈಮಿನಿಗಳ ಅಭಿಪ್ರಾಯಕ್ಕೆ, ನ ವಿರೋಧಃ = ಪರಸ್ಪರವಿರೋಧವು ಬರುವುದಿಲ್ಲವೆಂದು ತಿಳಿಯಬೇಕು.

ಸತ್ತರ್ಕದೀಪಾವಳಿ

ಬಾಧಕವಿಲ್ಲದಿದ್ದಾಗ ಮಾತ್ರ ಮುಖ್ಯಾರ್ಥ ಬಿಡಬೇಕು

सत्तर्कदीपावलिः – साक्षादप्यविरोधं जैमिनिः ।। १-२-२८ ।।

नहि असति बाधके मुख्यार्थः परित्यज्यते इत्येतत्प्रतिपादकं सूत्रमनूद्य व्याचष्टे – साक्षादित्यादिना ।। अर्थान्तराव्यवधानेन विष्णुवाचिनामग्न्यादि-शब्दानां ज्वलनादिष्वेव प्रयोगस्तु मुख्यार्थविष्ण्वपरिज्ञानात् । मुख्यार्थज्ञानिनस्तु अजामिलश्चरमसुते नारायणशब्दवद् अग्न्यादिशब्दान् ज्वलनादिषु व्यवहारार्थं प्रयुञ्जत इत्यर्थः ।

ಬಾಧಕವಿಲ್ಲದಿದ್ದಾಗ ಮುಖ್ಯಾರ್ಥವನ್ನು ಪರಿತ್ಯಾಗಮಾಡಬಾರದು ಎಂಬುದನ್ನು ಪ್ರತಿಪಾದಿಸುವ ಸೂತ್ರವನ್ನು ಅನುವಾದ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಸಾಕ್ಷಾತ್'' ಇತ್ಯಾದಿಯಾಗಿ. ಅಗ್ನ್ಯಾದಿ ಶಬ್ದಗಳೆಲ್ಲವೂ ಮತ್ತೊಂದು ಅರ್ಥದ ವ್ಯವಧಾನವಿಲ್ಲದೆ ನೇರವಾಗಿ ವಿಷ್ಣುವಾಚಿಯಾಗಿವೆ. ಆದರೂ ಸಹ ಬೆಂಕಿ ಮೊದಲಾದವುಗಳಲ್ಲಿ ಏಕೆ ಪ್ರಯೋಗಿಸುತ್ತಾರೆಂದರೆ ವಿಷ್ಣುವೇ ಮುಖ್ಯಾರ್ಥ ಎಂಬ ಪರಿಜ್ಞಾನವಿಲ್ಲದ್ದರಿಂದ. ಯಾರಿಗೆ ಮುಖ್ಯಾರ್ಥಜ್ಞಾನವು ಇರುತ್ತದೋ ಅಂತಹವರಿಗೆ ಅಜಾಮಿಳನು ಕೊನೆಯ ಮಗನಲ್ಲಿ ನಾರಾಯಣ ಎಂಬ ಶಬ್ದವನ್ನು ವ್ಯವಹರಿಸಿದಂತೆ ಅಗ್ನ್ಯಾದಿಶಬ್ದಗಳನ್ನು ಬೆಂಕಿ ಮೊದಲಾದವುಗಳಲ್ಲಿ ಕೇವಲ ವ್ಯವಹಾರಕ್ಕೋಸ್ಕರ ಪ್ರಯೋಗಿಸುತ್ತಾರೆಂದರ್ಥ.

ಜೈಮಿನಿ, ಆಶ್ಮರಥ್ಯ ಮೊದಲಾದ ಋಷಿಗಳ ಅಭಿಪ್ರಾಯ

सत्तर्कदीपावलिः – 'साक्षादप्यविरोधं जैमिनिः' इत्यादिमतानुवादः स्वमतैकदेशत्वेन क्रियते न पूर्वपक्षत्वेन । अनिराकृतत्वात् । तथाहि पुराणवचनम् – व्यासेति ।। आकाशवद् व्याप्तस्य प्रकाशमानस्य वेदव्यासस्य मतस्यैकदेशान् स्वस्वमत्या व्यवच्छेद्येदं मदीयमिदं मदीयमित्यन्ये जैमिन्यादयो व्यवहरन्ति । यथा गृहमठाद्याकाशप्रदेशानवच्छिद्य अयं मदीयप्रदेशोऽयं मदीयप्रदेश इति जना व्यवहरन्ति इत्यर्थः ।।

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬುದಾಗಿ ಜೈಮಿನಿ ಋಷಿಗಳ ಮತವನ್ನು ಅನುವಾದ ಮಾಡಿದ್ದಾರೆ. ಹಾಗೂ ಆತ್ರೇಯ ಮೊದಲಾದವರ ಮತವನ್ನೂ ಸಹ. ಈ ಮತಗಳೆಲ್ಲ ಸಹ ತಮಗೆ ಸಮ್ಮತವಾಗಿದೆ; ಹೊರತು ಪೂರ್ವಪಕ್ಷವನ್ನಾಗಿ ವಿವಕ್ಷಿಸಬಾರದು. ಈ ವಿಷಯದಲ್ಲಿ ಪುರಾಣವಾಕ್ಯದ ಆಧಾರವನ್ನು ''ವ್ಯಾಸಚಿತ್ತ'' ಇತ್ಯಾದಿ ಶ್ಲೋಕದಿಂದ ಹೇಳಿರುತ್ತಾರೆ. ವ್ಯಾಪ್ತವಾದ ಆಕಾಶವು ಘಟ, ಮಠಗಳ ಉಪಾಧಿಯಿಂದ ಪ್ರತ್ಯೇಕ ಆಕಾಶವೆಂದು ಪರಿಗಣಿಸುವಂತೆ ವೇದವ್ಯಾಸರ ಮನಸ್ಸಿನಲ್ಲಿರುವ ಅಭಿಪ್ರಾಯಗಳನ್ನು ಜೈಮಿನಿ ಆಶ್ಮರಥ್ಯ ಮೊದಲಾದ ಋಷಿಗಳು ಅಭಿಪ್ರಾಯಭೇದದಿಂದ ತಿಳಿದಿರುತ್ತಾರೆ. ವೇದವ್ಯಾಸರ ಮನಸ್ಸಿನಲ್ಲಿರುವ ಏಕದೇಶಾಭಿಪ್ರಾಯವನ್ನೇ ಜೈಮಿನ್ಯಾದಿಗಳು ತಮ್ಮ ತಮ್ಮ ಅಭಿಪ್ರಾಯವೆಂದು ಪರಿಗಣಿಸಿದ್ದಾರೆ.

ತತ್ತ್ವಪ್ರದೀಪ

ವ್ಯವಹಾರಕ್ಕೋಸ್ಕರ ಇತರರಲ್ಲಿ ಪ್ರಯೋಗ

तत्वप्रदीपः – सर्वशब्दानां ब्रह्मवाचकत्वे किमर्थमन्यत्र व्यवहरन्तीत्यत आह – ''साक्षादप्यविरोधं जैमिनिः'' ।। नाग्निरिन्द्र इत्यादिशब्दा अग्न्यादिमुख्यवाचकाः । किन्तु ब्रह्मण एव । तथाऽपि साक्षादेवान्यत्रयोगाभावेन ब्रह्मणि सम्यग्योगेन ब्रह्मवाचकैरपि तैर्विद्वांसो हानादिव्यवहारार्थमन्यत्राग्न्यादौ व्यवहरन्ति, अविद्वांसस्तु अनभिज्ञानाद्व्यवहारार्थं चेत्यभ्युपगमे विरोधाभावं जैमिनिर्वक्ति ।।७।।

ಸಕಲ ಶಬ್ದಗಳು ವಿಷ್ಣುವನ್ನೇ ಪ್ರತಿಪಾದನೆ ಮಾಡುವುದಾದರೆ ಬೇರೆಡೆ ವ್ಯವಹಾರವು ಹೇಗೆ ಯುಕ್ತವಾಗುತ್ತದೆ ? ಎಂಬ ಪ್ರಶ್ನೆಗೆ 'ಸಾಕ್ಷಾದಪಿ ಅವಿರೋಧಂ ಜೈಮಿನಿಃ' ಎಂಬ ಸೂತ್ರದಿಂದ ಉತ್ತರಿಸುತ್ತಿದ್ದಾರೆ.

ಅಗ್ನಿ, ಇಂದ್ರ ಮೊದಲಾದ ಶಬ್ದಗಳು ಅಗ್ನಿ, ಇಂದ್ರ ಮೊದಲಾದ ದೇವತೆಗಳನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುವುದಿಲ್ಲ. ಮಹಾವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದನೆ ಮಾಡುತ್ತವೆ.

ಅಗ್ನ್ಯಾದಿ ದೇವತೆಗಳಲ್ಲಿ ಅಗ್ನಿ ಮೊದಲಾದ ಶಬ್ದಗಳಿಗೆ ಯೋಗವೃತ್ತಿಯು ಇರುವುದಿಲ್ಲ. ಬ್ರಹ್ಮನಲ್ಲಿಯೇ ಸಮಂಜಸವಾದ ಯೋಗವೃತ್ತಿಯು ಯುಕ್ತವಾಗುತ್ತದೆ. ಆದ್ದರಿಂದ ಮಹಾವಿಷ್ಣುವನ್ನು ಪ್ರತಿಪಾದನೆ ಮಾಡುವ ಅಗ್ನಿ ಮೊದಲಾದ ಶಬ್ದಗಳನ್ನು ವಿದ್ವಾಂಸರು ಕೇವಲ ಹಾನಾದಿ ವ್ಯವಹಾರಕ್ಕೋಸ್ಕರ ಅಗ್ನ್ಯಾದಿಗಳಲ್ಲಿ ವ್ಯವಹರಿಸುತ್ತಾರೆ. ವಿದ್ವಾಂಸರಲ್ಲದವರು ಈ ವಿಷಯವನ್ನು ತಿಳಿಯದೇ ಲೌಕಿಕವಸ್ತುಗಳಲ್ಲಿ ಪ್ರಯೋಗಿಸುತ್ತಾರೆ. ಹೀಗೆ ವಿರೋಧವನ್ನು ಪರಿಹರಿಸಬೇಕೆಂದು ಜೈಮಿನಿಋಷಿಗಳು ಅಭಿಪ್ರಾಯ ಪಡುತ್ತಾರೆ.

ತತ್ವಪ್ರಕಾಶಿಕಾ

ವಿಷ್ಣುಪರವೆಂದಾಗ ಲೋಕಪ್ರಸಿದ್ಧಿಗೆ ಬಾಧಕವಿಲ್ಲ

तत्वप्रकाशिका – ननु अग्न्यादिशब्दानामग्न्यादिवाचित्वाभावे ब्रह्मैकवाचित्वे च प्रसिद्धिविरेधः स्यात् । तस्याः कारणान्तराभावात् । अतः प्रसिद्ध्यन्ययानुपपत्त्याऽन्येषां वाचित्वमित्याशङ्कां परिहरत्सूत्रमुपन्यस्य व्याचष्टे – साक्षादिति।।

ಶಂಕಾ - ಅಗ್ನಿ ಮೊದಲಾದ ಶಬ್ದಗಳು ಅಗ್ನಿದೇವತೆಯನ್ನಾಗಲೀ, ಭೌತಿಕವಾದ ಅಗ್ನಿಯನ್ನಾಗಲೀ ಪ್ರತಿಪಾದಿಸದಿದ್ದಲ್ಲಿ ಕೇವಲ ಬ್ರಹ್ಮನನ್ನೇ ಪ್ರತಿಪಾದಿಸುತ್ತದೆಂದು ಹೇಳಿದಂತಾಗುತ್ತದೆ. ಆವಾಗ ಲೋಕಪ್ರಸಿದ್ಧಿಗೆ ವಿರೋಧ ಬರುತ್ತದೆ. ಲೋಕಪ್ರಸಿದ್ಧಿಗಾದರೂ ವಾಚಕತ್ವವನ್ನು ಬಿಟ್ಟು ಬೇರೆ ಕಾರಣವನ್ನು ಹೇಳಲು ಬರುವುದಿಲ್ಲ. ಆದ್ದರಿಂದ ಲೋಕಪ್ರಸಿದ್ಧಿಯ ಅನ್ಯಥಾನುಪಪತ್ತಿಯಿಂದ ಅಗ್ನಿ ಮೊದಲಾದ ದೇವತೆಗಳು ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾಗುತ್ತಾರೆಂದು ಹೇಳಲೇಬೇಕಾಗುತ್ತದಲ್ಲವೇ? ಈ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಸಾಕ್ಷಾತ್'' ಇತ್ಯಾದಿಯಾಗಿ.

ಅಮುಖ್ಯವೃತ್ತಿಯಿಂದ ಇತರರು ಪ್ರತಿಪಾದ್ಯರು

तत्वप्रकाशिका – यद्यपि अग्न्यादिशब्दा नाग्न्यादिवाचकाः किन्तु ब्रह्मवाचका एव । तथापि न प्रसिद्धिविरोधः । अनन्ययोगेन ब्रह्मवाचकैरपि तैर्ज्ञानिनो ह्यनादिसिध्यर्थमन्यत्राग्न्यादौ व्यवहरन्ति ।

ಸಮಾಧಾನ - ಅಗ್ನಿ ಮೊದಲಾದ ಶಬ್ದಗಳು ಅಗ್ನಿದೇವತೆ ಮೊದಲಾದವರನ್ನು ಮುಖ್ಯವಾಗಿ ಪ್ರತಿಪಾದಿಸುವುದಿಲ್ಲ. ಹೊರತಾಗಿ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆ. ಆದರೂ ಸಹ ಲೋಕಪ್ರಸಿದ್ಧಿಗೆ ವಿರೋಧ ಬರುವುದಿಲ್ಲ. ಈ ಎಲ್ಲ ಶಬ್ದಗಳು ಬೇರೆಲ್ಲೂ ಬಾರದೆ ಬ್ರಹ್ಮನನ್ನಷ್ಟೇ ಪ್ರತಿಪಾದಿಸಿದರೂ ಜ್ಞಾನಿಗಳು ಅನಾದಿಸಿದ್ಧವಾದ ವ್ಯವಹಾರವನ್ನು ಕೂಡಿಸುವುದಕ್ಕಾಗಿ ಅಮುಖ್ಯವೃತ್ತಿಯಿಂದ ಅಗ್ನಿದೇವತೆ ಮೊದಲಾದವರಲ್ಲಿ ಆ ಶಬ್ದಗಳನ್ನು ಪ್ರಯೋಗಿಸುತ್ತಾರೆ.

ಜೈಮಿನ್ಯಾಚಾರ್ಯರ ಪ್ರಕಾರ ವಿರೋಧ ಪರಿಹಾರ

तत्वप्रकाशिका – तदन्ये तु ज्ञानभावादेवेत्यभ्युपगमात् । एवमभ्युपगमे च प्रसिद्धेरन्यथोपपत्तिसिद्धेर्न तद्विरोध इति जैमिनिराचार्यो वक्तीत्यर्थः ।

ಜ್ಞಾನಿಗಳಲ್ಲದವರು ಈ ವಿಷಯವನ್ನು ತಿಳಿಯದೇ ಅಜ್ಞಾನದಿಂದ ಭಗವಂತನನ್ನು ಬಿಟ್ಟು ಬೇರೆಡೆಯೇ ಮುಖ್ಯವಾಗಿ ವ್ಯವಹಾರ ಮಾಡುತ್ತಾರೆ. ಹೀಗೆ ಆ ಎಲ್ಲ ಶಬ್ದಗಳಿಂದ ವಿಷ್ಣುವೇ ಮುಖ್ಯಪ್ರತಿಪಾದ್ಯನೆಂದು ಒಪ್ಪಿದಾಗ ಲೋಕಪ್ರಸಿದ್ಧಿಯು ಅನ್ಯಥಾ ಉಪಪನ್ನವಾಗುತ್ತದೆ. ಆದ್ದರಿಂದ ಯಾವುದೇ ವಿರೋಧಕ್ಕೂ ಅವಕಾಶವಿಲ್ಲವೆಂದು ಜೈಮಿನ್ಯಾಚಾರ್ಯರು ಹೇಳುತ್ತಾರೆಂದು ಸೂತ್ರದ ಅಭಿಪ್ರಾಯ.

ಜೈಮಿನ್ಯಾದಿಮತಗಳ ಉಲ್ಲೇಖಕ್ಕೆ ಏನು ಕಾರಣ ?

तत्वप्रकाशिका – ननु जैमिन्यादिमतानां भगवन्मताविरोधित्वे जैमिन्यादिग्रहणवैयर्थ्याद्विरोधित्वे च कथं विरुद्धराद्धान्तेन परिहार इत्यत आह – व्यासेति ।।

ಸೂತ್ರಕಾರರು ಜೈಮಿನ್ಯಾಚಾರ್ಯರ ಮತವನ್ನು ಏಕೆ ಉಲ್ಲೇಖಿಸಿದ್ದಾರೆ? ಏಕೆಂದರೆ ಒಂದು ವೇಳೆ ಜೈಮಿನಿ ಋಷಿ ಮುಂತಾದವರ ಮತಗಳು ವೇದವ್ಯಾಸರ ಅಭಿಪ್ರಾಯಕ್ಕೆ ವಿರೋಧವಾಗದಿದ್ದರೆ ಸೂತ್ರದಲ್ಲಿ ಜೈಮಿನ್ಯಾದಿಶಬ್ದಗಳ ಉಲ್ಲೇಖವು ವ್ಯರ್ಥವಾಗುತ್ತದೆ. ಒಂದು ವೇಳೆ ವೇದವ್ಯಾಸ ಮತಕ್ಕೆ ವಿರುದ್ಧವಾಗುವುದಾದರೆ ವಿರುದ್ಧವಾದ ಸಿದ್ಧಾಂತದಿಂದ ಪೂರ್ವಪಕ್ಷವು ಹೇಗೆ ಪರಿಹಾರವಾಗುತ್ತದೆ ಎಂಬ ಗೊಂದಲವನ್ನು ಪರಿಹರಿಸುವುದಕ್ಕಾಗಿ ''ವ್ಯಾಸಚಿತ್ತ'' ಎಂಬ ಸ್ಕಾಂದಪುರಾಣವನ್ನು ಉಲ್ಲೇಖಿಸುತ್ತಿದ್ದಾರೆ.

ಜೈಮಿನ್ಯಾದಿಗಳ ಮತವು ವೇದವ್ಯಾಸರ ಮತವೇ ಆಗಿದೆ

तत्वप्रकाशिका – जैमिन्यादिमतानां न व्यासमतविरोधस्तथापि तन्मतैकदेशोररीकाराभिप्रायेण जैमिन्यादिग्रहणोपपत्तिरिति भावः ।

चित्तस्थिताऽकाशादिति चित्तस्थितज्ञानाख्यकाशात् । बहुवचनं वक्ष्यमाणमत-विवक्षया ।। २८ ।।

ಜೈಮಿನ್ಯಾಚಾರ್ಯ ಮುಂತಾದವರ ಮತಕ್ಕೂ ವೇದವ್ಯಾಸರ ಮತಕ್ಕೂ ವಿರೋಧವು ಬರುವುದಿಲ್ಲ. ಏಕೆಂದರೆ ಜೈಮಿನಿ ಋಷಿಗಳು ಹಾಗೂ ಇತರರು ವೇದವ್ಯಾಸರ ಮತದ ಏಕದೇಶವನ್ನು ಅಂಗೀಕಾರ ಮಾಡಿರುವುದರಿಂದ ಸೂತ್ರದಲ್ಲಿ ಜೈಮಿನಿ ಇತ್ಯಾದಿ ಶಬ್ದಗಳ ಉಲ್ಲೇಖವು ಉಪಪನ್ನವಾಗುತ್ತದೆ. 'ಚಿತ್ತಸ್ಥಿತಆಕಾಶಾತ್' ಎಂಬ ಪದಕ್ಕೆ ಚಿತ್ತದಲ್ಲಿರುವ ಜ್ಞಾನವೆಂಬ ಆಕಾಶದಿಂದ ಎಂದರ್ಥ. ಭಾಷ್ಯದಲ್ಲಿ 'ಮತಾನಾಂ' ಎಂಬ ಬಹುವಚನವು ಮುಂದೆ ಹೇಳುವ ಶುಕಾಚಾರ್ಯರ ಮತವೇ ಮೊದಲಾದವನ್ನು ವಿವಕ್ಷಿಸಿ ಪ್ರಯೋಗಿಸಲ್ಪಟ್ಟಿದೆ.

ಭಾವದೀಪ

ಆಕಾಂಕ್ಷಿತಪದಗಳ ಪೂರ್ಣದಿಂದ ಭಾಷಾ ವ್ಯಾಖ್ಯಾನ

भावदीपः – साक्षादप्यविरोधं जैमिनिः ।। प्रसिद्धीति ।। व्यवहारविरोधः स्यादित्यर्थः । आकाङ्क्षितपूर्त्या भाष्यं व्याचष्टे – यद्यपीति ।।

।। ಸಾಕ್ಷಾದಪ್ಯವಿರೋಧಂ ಜೈಮಿನಿಃ ।।

''ಪ್ರಸಿದ್ಧಿ'' ಎಂದರೆ ವ್ಯವಹಾರವಿರೋಧ ಬರುತ್ತದೆ ಎಂದರ್ಥ. ಆಕಾಂಕ್ಷಿತವಾದದ್ದನ್ನು ಪೂರ್ಣ ಮಾಡುತ್ತಾ ಭಾಷ್ಯವನ್ನು''ಯದ್ಯಪಿ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

'ಸಾಕ್ಷಾತ್' ಎಂಬ ಪದದ ಅರ್ಥ

भावदीपः – सौत्रसाक्षात्पदार्थः – अनन्ययोगेनेति ।। वाच्यार्थधीव्यवहित-लक्षणादिकं विना मुख्यवृत्त्येत्यर्थः ।

ಸೂತ್ರದಲ್ಲಿರುವ ''ಸಾಕ್ಷಾತ್'' ಎಂಬ ಪದಕ್ಕೆ ''ಅನನ್ಯಯೋಗೇನ'' ಎಂದರ್ಥ. ವಾಚ್ಯಾರ್ಥ-ಜ್ಞಾನದಿಂದ ವ್ಯವಹಿತವಾದ ಲಕ್ಷಣಾದಿಗಳನ್ನು ಮಾಡದೆ ಮುಖ್ಯವೃತ್ತಿಯಿಂದ ಎಂದು ''ಸಾಕ್ಷಾತ್'' ಪದದ ಅರ್ಥ.

'ಅಪಿ' ಇತ್ಯಾದಿ ಪದಗಳ ವ್ಯಾಖ್ಯಾನ

भावदीपः – यद्यपीत्यादिना विवृतं सौत्रापिपदमनुवदति – ब्रह्मवाचकैरपीति।। ज्ञानिन इति तदन्य इति च भाष्यशेषोक्तिः । व्यवहारार्थमित्यस्यार्थः – हानादीति ।। अनभिज्ञानाच्चेत्यस्यार्थः – ज्ञानाभावादेवेति ।। चस्त्ववधारण इति भावः ।

''ಯದ್ಯಪಿ'' ಇತ್ಯಾದಿ ವಾಕ್ಯದಿಂದ ವಿವರಿಸಲ್ಪಟ್ಟ ಸೂತ್ರದಲ್ಲಿರುವ ''ಅಪಿ'' ಪದವನ್ನು ಅನುವಾದ ಮಾಡುತ್ತಿದ್ದಾರೆ ''ಬ್ರಹ್ಮವಾಚಕೈರಪಿ'' ಎಂಬುದಾಗಿ. ''ಜ್ಞಾನಿನಃ'' ಎಂಬುದಾಗಿ ಮತ್ತು ''ತದನ್ಯಃ'' ಎಂಬುದಾಗಿ ಭಾಷ್ಯದಲ್ಲಿ ಶೇಷಪೂರಣ ಮಾಡಿಕೊಳ್ಳಬೇಕು. ''ವ್ಯವಹಾರಾರ್ಥಂ'' ಎಂಬುದರ ಅರ್ಥವನ್ನು ''ಹಾನ'' ಇತ್ಯಾದಿಯಾಗಿ ಹೇಳಿದ್ದಾರೆ. ''ಅನಭಿಜ್ಞಾನಾಚ್ಚ'' ಎಂಬ ಭಾಷ್ಯದ ಪದಕ್ಕೆ ''ಜ್ಞಾನಾಭಾವಾದೇವ'' ಎಂದು ವ್ಯಾಖ್ಯಾನಿಸಿದ್ದಾರೆ. ಇಲ್ಲಿರುವ ''ಚ'' ಶಬ್ದವು ಅವಧಾರಣಾರ್ಥದಲ್ಲಿದೆ.

ಅನುಷಂಗದ ಮೂಲಕ ಟೀಕೆಯನ್ನು ಅರ್ಥೈಸಿಕೊಳ್ಳಬೇಕು

भावदीपः – हानादिसिद्ध्यर्थमग्न्यादौ व्यवहरन्तीत्यनुषङ्गः ।। अन्यथेति ।। ज्ञानिनां हानादिप्रयोजनोपाधिनाऽन्येषां तु विष्णौ मुख्यत्वाज्ञाननेनेत्यर्थः ।। बहुवचनमिति ।। मतानामिति अन्ये इति च बहुवचनमित्यर्थः ।।

ಉಪಾದಾನಾದಿಗಳು ಹಾಗೂ ಹಾನಾದಿಗಳು ಸಿದ್ಧವಾಗಬೇಕೆಂದು 'ಅಗ್ನ್ಯಾದಿಗಳಲ್ಲಿ ವ್ಯವಹರಿಸುತ್ತಾರೆ' ಎಂದು ಅನುಷಂಗ ಮಾಡಬೇಕು. ''ಅನ್ಯಥಾ'' ಎಂದರೆ ಜ್ಞಾನಿಗಳಿಗೆ ಹಾನಾದಿಪ್ರಯೋಜನವೆಂಬ ಉಪಾಧಿಯಿಂದ ಬೇರೆಯವರಿಗೆ ವಿಷ್ಣುವಿನಲ್ಲಿ ಮುಖ್ಯವಾದ ಪ್ರಯೋಗವು ತಿಳಿಯದಿರುವುದರಿಂದ ಎಂದರ್ಥ. ''ಬಹುವಚನಂ'' ಎಂಬ ಟೀಕೆಗೆ ''ಮತಾನಾಂ'' ಎಂಬಲ್ಲಿರುವ ಬಹುವಚನವೆಂದು, ಮತ್ತು ''ಅನ್ಯೇ'' ಎಂಬಲ್ಲಿರುವ ಬಹುವಚನವೆಂದು ಅರ್ಥ.

ಬ್ರಹ್ಮಸೂತ್ರ

'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಎಂಬ ಸೂತ್ರ ವ್ಯಾಖ್ಯಾನ

ಬ್ರಹ್ಮಸೂತ್ರಮ್ –।। अभिव्यक्तेरित्याश्मरथ्यः ।। ೨೯।।

ಸೂತ್ರಾರ್ಥ - ಅಗ್ನ್ಯಾದಿಸೂಕ್ತಗಳಿಂದ ವಿಷ್ಣುವನ್ನು ಉಪಾಸನೆಮಾಡಿದರೆ ಅಗ್ನ್ಯಾದಿಗಳಲ್ಲೇ ವಿಷ್ಣುವು ಪ್ರತ್ಯಕ್ಷನಾಗುತ್ತಾನೆ. ಈ ದೃಷ್ಟಿಯಿಂದ ಅಗ್ನಿಸೂಕ್ತ, ವಾಯುಸೂಕ್ತವೆಂಬ ನಿಯಮವು ಉಪಪನ್ನವಾಗುತ್ತದೆಂದು ಆಶ್ಮರಥ್ಯಾಚಾರ್ಯರು ಹೇಳಿದ್ದಾರೆ.

ಅಭಿವ್ಯಕ್ತೇಃ = ಅಗ್ನ್ಯಾದಿಗಳಲ್ಲಿ ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಂತಹ ಅಗ್ನ್ಯಾದಿಗಳಲ್ಲಿ ಬ್ರಹ್ಮನು ಪ್ರತ್ಯಕ್ಷನಾಗುತ್ತಾನೆಂದು ಹೇಳಿರುವುದರಿಂದ, ಇತಿ = ತನ್ನಿಮಿತ್ತವಾಗಿ ಅಗ್ನಿ ಮೊದಲಾದ ಸೂಕ್ತಗಳ ವ್ಯವಸ್ಥೆಯು ಉಪಪನ್ನವಾಗುತ್ತದೆ ಎಂದು, ಆಶ್ಮರಥ್ಯಃ = ಆಶ್ಮರಥ್ಯಾಚಾರ್ಯರು ಹೇಳುತ್ತಾರೆ.

ಬ್ರಹ್ಮಸೂತ್ರಭಾಷ್ಯ

ಉಪಾಸನೆಗಾಗಿ ಸೂಕ್ತ ನಿಯಮವೆಂದು ಆಶ್ಮರಥ್ಯರು

ಬ್ರಹ್ಮಸೂತ್ರಭಾಷ್ಯಮ್ –

तत्र तत्र प्रसिद्धावप्यग्न्यादिषु ब्रह्मणोऽभिव्यक्तेरग्न्यादिसूक्तनियम इत्याश्मरथ्यः ।। ೨೯ ।।

ಅಗ್ನಿ, ವಾಯು ಮೊದಲಾದ ಸೂಕ್ತಗಳಿಂದಲೂ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಆದರೂ ಸಹ ಅಗ್ನಿ ಮೊದಲಾದ ಸೂಕ್ತಗಳ ಉಪಾಸನೆಯಿಂದ ಸ್ವೇಚ್ಛೆಯಿಂದ ವಿಷ್ಣುವೇ ಪ್ರಾದುರ್ಭೂತನಾಗುತ್ತಾನೆ. ಈ ಕಾರಣದಿಂದ ಅಗ್ನಿಸೂಕ್ತ, ವಾಯುಸೂಕ್ತ ಎಂಬ ನಿಯಮವು ಯೋಗ್ಯವಾಗಿದೆಯೆಂದು ಆಶ್ಮರಥ್ಯಾಚಾರ್ಯರು ಹೇಳುತ್ತಾರೆ.

ಪ್ರತಿಪದಾರ್ಥ -- ಲೌಕಿಕ ಪ್ರಸಿದ್ಧಿಯು ಅಜ್ಞಾನಮೂಲವಾಗಿರಬಹುದು. ಆದರೆ ವೇದದಲ್ಲಿ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ಪ್ರಭೇದಿಂದ ಅಗ್ನ್ಯಾದಿಗಳೂ ಸಹ ಪ್ರತಿಪಾದ್ಯರಾಗಬಹುದಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಆಶ್ಮರಥ್ಯಃ = ಆಶ್ಮರಥ್ಯಾಚಾರ್ಯರು, ತತ್ರ ತತ್ರ = ಆಯಾ ಅಗ್ನಿ ವಾಯು ಮೊದಲಾದವರ ಸೂಕ್ತಗಳಲ್ಲಿ, ಪ್ರಸಿದ್ಧಾವಪಿ = ಅಗ್ನಿ,ವಾಯು ಮುಂತಾದ ಶಬ್ದಗಳು ಅನ್ಯತ್ರಪ್ರಸಿದ್ಧವಾಗಿದ್ದರೂ, ಅಗ್ನ್ಯಾದಿಷು = ಅಗ್ನಿಮೊದಲಾದ ದೇವತೆಗಳಲ್ಲಿ, ಸನ್ನಿಹಿತನಾಗಿದ್ದರಿಂದ, ಅಭಿವ್ಯಕ್ತೇಃ = ಭಗವಂತನು ಅಭಿವ್ಯಕ್ತನಾಗುತ್ತಾನೆ. ಆದ್ದರಿಂದ ಅಗ್ನ್ಯಾದಿಸೂಕ್ತನಿಯಮಃ = ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ಪ್ರಭೇದವು ಸೂಕ್ತವಾಗುತ್ತದೆ. ಇತಿ = ಹೀಗೆ ಹೇಳಿದ್ದಾರೆ.

ಸತ್ತರ್ಕದೀಪಾವಳಿ

ಇಂದ್ರಿಯಾದಿಗಳಲ್ಲಿ ಸರ್ವೋತ್ತಮತ್ವವು ಅಸಂಭಾವಿತ

सत्तर्कदीपावलिः – अभिव्यक्तेरित्याश्मरथ्यः ।। १-२-२९ ।।

छान्दोग्यादिवैश्वानरविद्यावदग्न्यादिसूक्तानां विष्णुपरत्वमभ्युपगतं 'विश्वे देवाः अनवः सन् अभियानः त्वमग्ने त्वमसि तस्थिवांसम् ।' 'नकिरिन्द्र त्वदुत्तरो न ज्यायाम् अस्ति वृत्रहन्' इत्यादिविष्णुलिङ्गादेव । सर्वोत्तमत्वादिधर्माणामिन्द्रादिष्वसम्भवात् ।

ಛಾಂದೋಗ್ಯದಲ್ಲಿರುವ ವೈಶ್ವಾನರವಿದ್ಯೆಯು ಹೇಗೆ ವಿಷ್ಣುಪರವಾಗಿದೆಯೋ ಅದರಂತೆ ಅಗ್ನ್ಯಾದಿಸೂಕ್ತಗಳೂ ಸಹ ವಿಷ್ಣುಪರವೇ ಆಗಿದೆ. ''ವಿಶ್ವೇ ದೇವಾಃ ಅನವಃ ಸನ್ ಅಭಿಯಾನಃ ತ್ವಮಗ್ನೇ ತ್ವಮಸಿ ತಸ್ಥಿವಾಂಸಮ್'' 'ನಕಿರಿಂದ್ರ ತ್ವದುತ್ತರೋ ನ ಜ್ಯಾಯಾಮ್ ಅಸ್ತಿ ವೃತ್ರಹನ್' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ವಿಷ್ಣುಲಿಂಗವೇ ಈ ವಿಷಯದಲ್ಲಿ ಆಧಾರವಾಗಿದೆ. ಸರ್ವೋತ್ತಮತ್ವವೇ ಮೊದಲಾದ ಧರ್ಮಗಳು ಇಂದ್ರಾದಿಗಳಲ್ಲಿ ಅಸಂಭಾವಿತವಾಗಿವೆ.

ಉಪಾಸನೆಗೋಸ್ಕರ ಸೂಕ್ತಾದಿಗಳ ವ್ಯವಸ್ಥೆ

सत्तर्कदीपावलिः – एवं सति सर्वं विष्णुसूक्तमेव स्यात् ।। न त्वग्निसूक्तमिदमिदमिन्द्रसूक्तमित्याशङ्कां परिहरति – अभिव्यक्तेरित्यादिना ।।

अग्न्यादिसूक्तेषु मुख्यतो विष्णोः अभिधेयत्वसिद्धावपि अग्न्यादिसूक्तोपास्यमानस्याग्न्यादिषु प्रादुर्भूयमानत्वाद् अग्न्यादिष्वनुस्मर्यमाणत्वाद् अग्न्यादिसूक्तैरग्न्याधिष्ठितविष्णूपासकस्याग्न्याद्यधिष्ठितविष्णुप्राप्तेरग्न्यादिसूक्तव्यवस्येत्यर्थः ।।

ಹಾಗಾದರೆ ಎಲ್ಲವೂ ಸಹ ವಿಷ್ಣುಸೂಕ್ತವೇ ಎಂದಾಗಬೇಕಾದೀತು ಹೊರತು ಇದು ಅಗ್ನಿಸೂಕ್ತ ಇದು ಇಂದ್ರಸೂಕ್ತ ಎಂಬ ವ್ಯವಸ್ಥೆಯೇ ಇಲ್ಲದಂತಾಗಬೇಕಾದೀತು. ಈ ಆಶಂಕೆಯನ್ನು ಪರಿಹರಿಸಲು "ಅಭಿವ್ಯಕ್ತೇಃ" ಎಂಬ ಸೂತ್ರವು ಹೊರಟಿದೆ. ಅಗ್ನ್ಯಾದಿಸೂಕ್ತಗಳಲ್ಲಿ ಮುಖ್ಯವಾಗಿ ವಿಷ್ಣುವೇ ಪ್ರತಿಪಾದ್ಯನು ಎಂದು ಸಿದ್ಧವಾದರೂ ಸಹ ಅಗ್ನ್ಯಾದಿಸೂಕ್ತಗಳಿಂದ ಯಾರು ಹೇಗೆ ಉಪಾಸನೆ ಮಾಡುತ್ತಾರೋ ಅವರಿಗೆ ಭಗವಂತನು ಅಂತಹ (ಪ್ರತೀಕದಲ್ಲಿ) ದೇವತೆಗಳಲ್ಲಿಯೇ ಪ್ರಾದುರ್ಭೂತನಾಗಿ ಅನುಗ್ರಹಿಸುತ್ತಾನೆ. ಹಾಗೂ ಅಗ್ನ್ಯಾದಿಅಧಿಷ್ಠಾನದಲ್ಲಿ ಉಪಾಸನೆ ಮಾಡುವವರಿಗೆ ಆಯಾಯಾ ಅಧಿಷ್ಠಾನಗತ ಭಗವಂತನ ಪ್ರಾಪ್ತಿಯಾಗುತ್ತದೆ. ಹೀಗೆ ಉಪಾಸನೆಗೋಸ್ಕರ ಸೂಕ್ತಾದಿಗಳ ವ್ಯವಸ್ಥೆಯು ಉಪಪನ್ನವಾಗಿದೆ.

ಇಲ್ಲಿಗೆ ಪದ್ಮನಾಭತೀರ್ಥಭಟ್ಟಾರಕರಿಂದ ವಿರಚಿತವಾದ ಸತರ್ಕದೀಪಾವಳಿಯ ಕನ್ನಡಾನುವಾದದಲ್ಲಿ
ಪ್ರಥಮಾಧ್ಯಾಯದ ದ್ವಿತೀಯಪಾದವು ಸಂಪೂರ್ಣವಾಯಿತು ॥
॥ ಶ್ರೀಕೃಷ್ಣಾರ್ಪಣಮಸ್ತು ॥

* * * * *

ತತ್ವಪ್ರದೀಪ

ಉಪಾಸನೆಗಾಗಿ ಸೂಕ್ತವೈವಿಧ್ಯ

तत्वप्रदीपः – तर्हि कथम् 'अग्निसूक्तमिदम्, वायुसूक्तमिदम्' इति नियमः? इत्यत आह – अभिव्यक्तेरित्याश्मरथ्यः ।। तत्र तत्र सूक्ते ब्रह्मण एव वाच्यत्वेन प्रसिद्धावप्यग्न्यादिसूक्तोपासकानाम् अग्न्यादिषु ब्रह्मणोऽभिव्यक्तेरग्न्यादिसूक्तनियम इत्याश्मरथ्यः ।।छ।।

ಹಾಗಾದರೆ 'ಇದು ಅಗ್ನಿಸೂಕ್ತ, ಇದು ವಾಯುಸೂಕ್ತ' ಎಂಬ ನಿಯಮವನ್ನು ಹೇಗೆ ಕೂಡಿಸುವುದು ? ಎಂಬ ಪ್ರಶ್ನೆಗೆ 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ ಎಂಬ ಮುಂದಿನ ಸೂತ್ರದಲ್ಲಿ ಉತ್ತರಿಸುತ್ತಿದ್ದಾರೆ.

ಅಗ್ನ್ಯಾದಿ ಸೂಕ್ತಗಳಿಂದ ಪರಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ. ಆದರೂ ಕೂಡ ಅಗ್ನ್ಯಾದಿ ಸೂಕ್ತಗಳ ಉಪಾಸಕರಿಗೆ ಅಗ್ನ್ಯಾದಿಗಳಲ್ಲಿಯೇ ವಿಷ್ಣುವು ತಮ್ಮ ಇಚ್ಛೆಯಿಂದ ಅಭಿವ್ಯಕ್ತನಾಗುತ್ತಾನೆ. ಆದ್ದರಿಂದ 'ಇದು ಅಗ್ನಿಸೂಕ್ತ, ಇದು ವಾಯುಸೂಕ್ತ' ಎಂಬ ನಿಯಮವು ಯೋಗ್ಯವಾಗುತ್ತದೆ. ಹೀಗೆ ಆಶ್ಮರಥ್ಯಾಚಾರ್ಯರು ಅಭಿಪ್ರಾಯ ಪಡುತ್ತಾರೆ.

ತತ್ತ್ವಪ್ರಕಾಶಿಕಾ

ಸಕಲ ಶಬ್ದಗಳು ವಿಷ್ಣುಪರವಾದರೆ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಎಂದು ಹೇಳುವುದು ಹೇಗೆ ?

तत्वप्रकाशिका – ननु लौकिकप्रसिद्धेरज्ञानादिमूलत्वेनान्यथोपपत्तावपि वैदिकाग्न्यादिसूक्तविद्यादि प्रसिद्ध्यन्यथानुपपत्त्याऽग्न्यादीनां वाच्यत्वं स्यात् । तत्राज्ञानादिमूलत्वकल्पनाऽयोगेनान्यथोपपत्त्यभावात् । नापि व्यवहारर्थत्वेना न्यथोपपत्तिरनादित्वादित्याशङ्कां परिहरत्सूत्रं पठित्वा, व्याचष्टे – अभिव्यक्तेरिति ।। न वैदिकाग्न्यादिसूक्तादिप्रसिद्ध्यन्यथानुपपत्त्याऽन्येषां सूक्तादिप्रतिपाद्यत्वम् । तत्र तत्र सूक्तादौ परब्रह्मण एव प्रतिपाद्यत्वेऽग्न्यादीन ामप्रतिपाद्यत्वेऽप्यग्न्यादिसूक्तादिभिर्ब्रह्मोपास्तावगन्यादिष्वेव स्वेच्छयाब्रह्मणोऽ-भिव्यक्तिनियमात्तदभिप्रायेण प्रसिद्धेरुपपत्तेरित्याश्मरथ्याचार्यो वक्तीत्यर्थः ।। २९ ।।

ಪ್ರಶ್ನೆ - ಅಜ್ಞಾದಿಶಬ್ದವಿಷಯದಲ್ಲಿ ಲೋಕಪ್ರಸಿದ್ಧಿಯು ಅಜ್ಞಾನ ಮೂಲಕವೆಂಬ ಕಲ್ಪನೆಯಿಂದಾ ಅನ್ಯಥಾ ವ್ಯವಹಾರವನ್ನು ಮಾಡಬಹುದೆಂದು ಸಮರ್ಥಿಸಲಾಯಿತು.

ಆದರೂಸಹ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ, ಇತ್ಯಾದಿಯಾದ ವೈದಿಕ ವ್ಯವಹಾರ ಪ್ರಸಿದ್ಧಿಗೆ ಅನ್ಯತಾ ಉಪಪತ್ತಿಯನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಅಗ್ನ್ಯಾದಿ ಶಬ್ದಗಳು ಅಗ್ನಿ ಮೊದಲಾದ ಪದಾರ್ಥವಾಚಕವೆಂದು ಒಪ್ಪಬೇಕಲ್ಲವೆ? ಏಕೆಂದರೆ ಇಂತಹ ವ್ಯವಹಾರಕ್ಕೆ ಅಜ್ಞಾನ ಮೂಲಕತ್ವವನ್ನು ಹೇಳಲು ಸಾಧ್ಯವಿಲ್ಲ. ಆಯಾ ಪದಾರ್ಥಗಳ ವಾಚಕವೆಂದೇ ಹೇಳಬೇಕು. ಇನ್ನು ಕೇವಲ ಹಾನ - ಉಪಾದಾನ ಮೊದಲಾದ ವ್ಯವಹಾರಕ್ಕೋಸ್ಕರ ಜ್ಞಾನಿಗಳು ಹಾಗೆ ಕಲ್ಪನೆ ಮಾಡಿದ್ದಾರೆಂಬ ಸಮಾಧಾನವನ್ನೂ ಸಹ ಹೇಳಲಾಗದು. ವೇದವು ಅಪೌರುಷೇಯವಾದ್ದರಿಂದ ವೈದಿಕವ್ಯವಹಾರ ವಿಷಯದಲ್ಲಿ ಹೀಗೆ ಕಲ್ಪಿಸುವುದು ತಪ್ಪಾಗುತ್ತದಲ್ಲವೆ?

ಉತ್ತರ - ಈ ಪ್ರಶ್ನೆಗೆ ಪರಿಹಾರವನ್ನು ಹೇಳುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ. 'ಅಭಿವ್ಯಕ್ತೇಃ' ಇತ್ಯಾದಿಯಾಗಿ.

ಭಾವದೀಪ

ಟೀಕೆಯಲ್ಲಿರುವ ಕಠಿಣ ಪದಗಳ ಅರ್ಥ

भावदीपः – अभिव्यक्तेरित्याश्मरथ्यः ।। अज्ञानादीति ।। अन्यत्र मुख्यत्वभ्रान्तिरादिपदार्थः ।। व्यवहारेति ।। इदं सूक्तमत्रोपादेयम् इदमत्र हेयमित्यादिव्यवहारार्थत्वेनेत्यर्थः

॥ ಅಭಿವ್ಯಕ್ತೇರಿತ್ಯಾಶ್ಮರಥ್ಯಃ ॥

ಟೀಕಾದಲ್ಲಿರುವ ''ಅಜ್ಞಾನಾದಿ'' ಎಂಬಲ್ಲಿರುವ 'ಆದಿ' ಪದಕ್ಕೆ ಬೇರೆಕಡೆಯೂ ಮುಖ್ಯಾರ್ಥವನ್ನೇ ಹೇಳುತ್ತದೆ ಎಂಬ ಭ್ರಾಂತಿ ಎಂದರ್ಥ. ''ವ್ಯವಹಾರ'' ಇತ್ಯಾದಿ ಟೀಕೆಗೆ ''ಇದಂ ಸೂಕ್ತಮತ್ರೋಪಾದೇಯಮ್ ಇದಮತ್ರ ಹೇಯಂ'' - ಅಂದರೆ ಈ ಸೂಕ್ತವು ಈ ವಿಷಯದಲ್ಲಿ ಸ್ವೀಕಾರಕ್ಕೆ ಯೋಗ್ಯವಾಗಿದೆ, ಕೆಲವೆಡೆ ಸ್ವೀಕಾರಕ್ಕೆ ಯೋಗ್ಯವಲ್ಲವೆಂಬ ಮೊದಲಾದ ವ್ಯವಹಾರ ಎಂದರ್ಥ.

'तत्र तत्र प्रसिद्धावपि' ಎಂಬ ಭಾಷ್ಯ ವ್ಯಾಖ್ಯಾನ

भावदीपः – तत्र तत्र प्रसिद्धावपीत्युक्तिलब्धमाह – वैदिकेति ।। तत्र तत्रेत्यादिभाष्यस्योत्तरवाक्येन साक्षादन्वयायापिपदसमुच्चयं वदन्नर्थमाह – तत्र तेति ।।

ಭಾಷ್ಯದಲ್ಲಿರುವ ''तत्र तत्र प्रसिद्धावपि'' ಎಂಬ ಮಾತಿನ ತಾತ್ಪರ್ಯವನ್ನು ''वैदिकाग्न्यादि'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ''तत्र तत्र ಇತ್ಯಾದಿ'' ಎಂಬ ಭಾಷ್ಯದ ಮುಂದಿನ ವಾಕ್ಯಗಳಿಗೆ ನೇರವಾಗಿ ಅನ್ವಯ ತಿಳಿಯದಿರುವುದರಿಂದ ಪದಸಮುಚ್ಚಯ ಮಾಡಿ ಅರ್ಥವನ್ನು ''तत्र तत्र'' ಎಂಬ ಟೀಕಾ ಗ್ರಂಥದಿಂದ ಹೇಳುತ್ತಿದ್ದಾರೆ.

ಕರ್ಮಪರವಾದ ಸೂಕ್ತಗಳಿಂದಲೂ ಉಪಾಸನೆ ಮಾಡಬಹುದು

भावदीपः – कर्माधीनत्वं वा अन्यत्राभिव्यक्तावशक्तत्वं वा निराह – स्वेच्छयेति ।। वक्तीति पदमनुवृत्त्यान्वयमाह – वक्तीत्यर्थ इति ।।

ಅಗ್ನಿಯೇ ಮೊದಲಾದ ಸೂಕ್ತಗಳು ಕರ್ಮಪರವಾಗಿವೆ ಅಥವಾ ಅವುಗಳಲ್ಲಿ ಬ್ರಹ್ಮನನ್ನು ಉಪಾಸನೆ ಮಾಡಿದವರಿಗೆ ಅಲ್ಲಿ ಅವನು ವ್ಯಕ್ತನಾಗಲು ಶಕ್ತನಲ್ಲ ಎಂಬ ಶಂಕೆಯನ್ನು ನಿರಾಕರಣೆ ಮಾಡುತ್ತಿದ್ದಾರೆ ''स्वेच्छया'' ಎಂಬುದರಿಂದ. ಭಾಷ್ಯದ ಮಾತಿಗೆ 'वक्ति' ಎಂಬ ಪದವನ್ನು ಸೇರಿಸಿ ಅನ್ವಯವನ್ನು ''वक्त्येत्यर्थः'' ಎಂದು ಹೇಳಿದ್ದಾರೆ.

ಬ್ರಹ್ಮಸೂತ್ರ

'अनुस्मृतेर्बादरिः' ಎಂಬ ಸೂತ್ರ ವಾಖ್ಯಾನ

ब्रह्मसूत्रम् – ।। अनुस्मृतेर्बादरिः ।। ३० ।।

ಸೂತ್ರಾರ್ಥ -- ಅಗ್ನಿಮೊದಲಾದ ಸೂಕ್ತವನ್ನು ಉಪಾಸನೆಮಾಡುವವರು ಅಗ್ನಿ ಮೊದಲಾದವರ ಮಾಧ್ಯಮದಲ್ಲೇ ಧ್ಯಾನಮಾಡಬೇಕೆಂದು ತಿಳಿಸಲು ಅಗ್ನಿಸೂಕ್ತ ವಾಯುಸೂಕ್ತ ಮೊದಲಾದ ವ್ಯವಸ್ಥೆಯು ಉಪಪನ್ನವಾಗುತ್ತದೆಂದು ಶುಕಾಚಾರ್ಯರು ಹೇಳುತ್ತಾರೆ.

ಅರ್ಥ -- ಅನುಸ್ಮೃತೇಃ = ಅಗ್ನಿಸೂಕ್ತ, ವಾಯುಸೂಕ್ತ ಮೊದಲಾದವುಗಳಿಂದ ಉಪಾಸನೆ ಮಾಡುವವರು ಅಗ್ನ್ಯಾದಿ ಮಾಧ್ಯಮಗಳಲ್ಲೇ ಧ್ಯಾನಮಾಡಬೇಕಾದ್ದರಿಂದ ಅಗ್ನಿ ಮೊದಲಾದ ಸೂಕ್ತಗಳ ವ್ಯವಸ್ಥೆಯು ಉಪಪನ್ನವಾಗುತ್ತದೆ ಎಂದು, ಬಾದರಿಃ = ಶುಕಾಚಾರ್ಯರು ಹೇಳುತ್ತಾರೆ.

ಬ್ರಹ್ಮಸೂತ್ರಭಾಷ್ಯ

ಶುಕಾಚಾರ್ಯರ ಪ್ರಕಾರ ಉಪಾಸಕರಿಗೆ ಅಧಿಷ್ಠಾನವನ್ನು ತಿಳಿಸಲು ಸೂಕ್ತ ನಿಯಮ

ब्रह्मसूत्रभाष्यम् – तत्र तत्रोक्तस्य विष्णोरग्न्यादिष्वनुस्मर्यमाणत्वात्तन्नियम इति बादरिः ।।३०।।

ಅನುವಾದ - ಅಗ್ನಿಸೂಕ್ತ, ವಾಯುಸೂಕ್ತ ಮೊದಲಾದವುಗಳಲ್ಲಿ ಹೇಳಲ್ಪಟ್ಟ ಗುಣಗಳಿಂದ ಕೂಡಿರುವವನು ವಿಷ್ಣುವೇ ಆಗಿದ್ದಾನೆ. ಅಂತಹ ವಿಷ್ಣುವನ್ನು ಅಗ್ನಿ, ವಾಯು ಮೊದಲಾದ ಪ್ರತೀಕಗಳಲ್ಲಿ ಉಪಾಸನೆ ಮಾಡಬೇಕಾದ್ದರಿಂದ ಅಗ್ನಿಸೂಕ್ತ, ವಾಯುಸೂಕ್ತ ಎಂಬ ನಿಯಮವು ಸೂಕ್ತವಾಗುತ್ತದೆಂದು ಬಾದರಿ ಆಚಾರ್ಯರು ಹೇಳುತ್ತಾರೆ.

ಪ್ರತಿಪದಾರ್ಥ -- ಮತ್ತೊಂದು ಪ್ರಕಾರದಿಂದ ಅಗ್ನಿಸೂಕ್ತ ವಾಯುಸೂಕ್ತ ಮೊದಲಾದ ನಿಯಮವು ಯುಕ್ತವಾಗುತ್ತದೆಂದು ಸಮರ್ಥಿಸುತ್ತಿದ್ದಾರೆ.

ತತ್ರ ತತ್ರ = ಆಯಾ ಸೂಕ್ತಗಳಲ್ಲಿ, ಉಕ್ತಸ್ಯ = ಹೇಳಲ್ಪಟ್ಟ, ವಿಷ್ಣೋಃ = ಪರಮಾತ್ಮನಿಗೆ, ಅಗ್ನ್ಯಾದಿಷು = ಅಗ್ನಿ ಮೊದಲಾದ ದೇವತೆಗಳಲ್ಲಿ, ಅನುಸ್ಮರ್ಯಮಾಣತ್ವಾತ್ = ಆಯಾ ಪ್ರತೀಕಗಳಿಂದ ಭಗವಂತನ ಆಯಾ ರೂಪಗಳ ಉಪಾಸನೆಯನ್ನು ಹೇಳಿರುವುದರಿಂದ, ತನ್ನಿಯಮಃ = ಅಗ್ನಿಸೂಕ್ತ ವಾಯುಸೂಕ್ತ ಇತ್ಯಾದಿ ನಿಯಮವು ಯುಕ್ತವಾಗಿದೆ, ಇತಿ = ಈ ಕ್ರಮದಲ್ಲಿ, ಬಾದರಿಃ = ಶುಕಾಚಾರ್ಯರು ಹೇಳುತ್ತಾರೆ.

ತತ್ತ್ವಪ್ರದೀಪ

ಸೂಕ್ತನಿಯಮದಲ್ಲಿ ಶುಕರ ಅಭಿಪ್ರಾಯ

तत्वप्रदीपः – ''अनुस्मृतेर्बादरिः'' ।। तत्र तत्राग्न्यादिसूक्तेषूक्तस्य विष्णोरग्न्यादिषु तत्तदन्तर्यामितया अनुस्मर्यमाणत्वात् सूक्तनियम इति बादरिः। बादरात्मजः(बादरायणात्मजः –पा) शुक इत्यर्थः ।।छ।।

ಅಗ್ನಿಸೂಕ್ತ, ವಾಯುಸೂಕ್ತ ಮೊದಲಾದವುಗಳಲ್ಲಿ ಹೇಳಿರುವ ಗುಣಗಳಿಂದ ಅಂತರ್ಯಾಮಿಯಾದ ವಿಷ್ಣುವನ್ನೇ ಆಯಾ ಅಧಿಷ್ಠಾನಗಳಲ್ಲಿ ಉಪಾಸನೆ ಮಾಡಬೇಕು. ಈ ಕಾರಣದಿಂದ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ನಿಯಮವು ಯುಕ್ತವಾಗುತ್ತದೆ. ಹೀಗೆ ಬಾದರಾತ್ಮಜರಾದ ಶುಕಾಚಾರ್ಯರು ಅಭಿಪ್ರಾಯ ಪಡುತ್ತಾರೆ.

ವಿಶೇಷವಿಚಾರ - ಅಗ್ನಿಸೂಕ್ತವನ್ನು ಉಪಾಸನೆ ಮಾಡುವವರಿಗೆ ಅಗ್ನಿಯಲ್ಲಿಯೇ ಪರಮಾತ್ಮನು ಕಾಣಿಸುತ್ತಾನೆ ಎಂಬುದಾಗಿ ಆಶ್ಮರಥ್ಯಾಚಾರ್ಯರು ಹೇಳಿದರು. ಪ್ರಕೃತ ಶುಕಾಚಾರ್ಯರು ಅಗ್ನಿಸೂಕ್ತದಲ್ಲಿ ಹೇಳಲ್ಪಟ್ಟ ಗುಣಗಳಿಂದ ಅಗ್ನಿಯ ಮಾಧ್ಯಮದಿಂದ ವಿಷ್ಣುವಿನ ಉಪಾಸನೆ ಮಾಡಬೇಕು. ಹೊರತು, ಅಗ್ನಿಸೂಕ್ತವನ್ನು ಹೇಳಿ ವಾಯುವಿನಲ್ಲಿ ಭಗವದುಪಾಸನೆಯನ್ನು ಮಾಡಬಾರದು. ಈ ದೃಷ್ಟಿಯಿಂದ ಅಗ್ನಿಸೂಕ್ತಾದಿಗಳ ವ್ಯವಸ್ಥೆಯು ಯುಕ್ತವಾಗುತ್ತದೆ ಎಂದು ಹೇಳುತ್ತಾರೆ. ಈ ವ್ಯತ್ಯಾಸವನ್ನು ಗಮನಿಸಬೇಕು.

ಪಂಡಿತಾಚಾರ್ಯರು 'ಬಾದರಿ' ಎಂಬ ಪದಕ್ಕೆ 'ಬಾದರಾತ್ಮಜಃ ಶುಕಃ' ಎಂಬ ವ್ಯಾಖ್ಯಾನವನ್ನು ಮಾಡಿದ್ದಾರೆ. ಬದರಿಯಲ್ಲಿ ನೆಲೆಸಿರುವ ವೇದವ್ಯಾಸದೇವರು 'ಬಾದರ' ಎಂದು ಕರೆಸಿಕೊಳ್ಳುತ್ತಾರೆ. ಅವರ ಮಗ ಆದ ಕಾರಣ ಶುಕಾಚಾರ್ಯರು 'ಬಾದರಿ' ಎಂದು ಕರೆಸಿಕೊಳ್ಳುತ್ತಾರೆ. ತತ್ತ್ವಪ್ರಕಾಶಿಕೆಯಲ್ಲಿ 'ಬಾದರಿ ಆಚಾರ್ಯಃ' ಎಂದಷ್ಟೇ ಬರೆದಿದ್ದಾರೆ. ತತ್ತ್ವಪ್ರದೀಪದಲ್ಲಿ 'ಬಾದರಾತ್ಮಜಃ ಶುಕಃ' ಎಂದು ಸ್ಪಷ್ಟಪಡಿಸಿದ್ದಾರೆ.

ತತ್ತ್ವಪ್ರಕಾಶಿಕಾ

ವಿವಿಧ ಅಧಿಷ್ಠಾನಗಳಲ್ಲಿ ಭಗವಂತನ ಉಪಾಸನೆ

तत्वप्रकाशिका – ।। अनुस्मृतेर्बादरिः ।।

प्रकारान्तरेण सूक्तादिनियमस्यान्यथोपपत्तिं वदत्सूत्रमुपन्यस्य व्याचष्टे – अनुस्मृतेरिति ।। विष्णोरेव अग्न्यादिविद्याप्रतिपाद्यत्वेऽपि तस्य तत्तत्सू(क्तोपास) क्ताद्युपासकैरग्न्यादिष्वेव प्रतिपत्त्यत्वाभिप्रायेणाग्न्यादि-सूक्तादिनियमोपपत्तेर्न तदन्यथानुपपत्त्याऽन्येषां वाच्यत्वं वाच्यमिति बादरिराचार्यो वक्तीत्यर्थः ।।३०।।

ಮತ್ತೊಂದು ಬಗೆಯಲ್ಲಿ ಅಗ್ನ್ಯಾದಿಸೂಕ್ತಗಳ ನಿಯಮಕ್ಕೆ ಅನ್ಯಥೋಪಪತ್ತಿಯನ್ನು ಹೇಳುವ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಅನುಸ್ಮೃತೇಃ'' ಇತ್ಯಾದಿಯಾಗಿ. ವಸ್ತುತಃ ಅಗ್ನಿವಿದ್ಯಾಂ ಮೊದಲಾದ ವಿದ್ಯೆಗಳಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಆದರೂ ಸಹ ಆಯಾ ಸೂಕ್ತಗಳಿಂದ ಉಪಾಸನೆ ಮಾಡುವವರಿಗೆ ಭಗವಂತನು ಆಯಾ ದೇವತೆಗಳಲ್ಲಿಯೇ ಅನುಸಂಧಾನಮಾಡಲು ಅರ್ಹನಾಗಿದ್ದಾನೆಂಬ ಅಭಿಪ್ರಾಯದಿಂದ ಅಗ್ನ್ಯಾದಿಸೂಕ್ತಗಳ ನಿಯಮವು ಉಪಪನ್ನವಾಗುತ್ತದೆ. ಆದ್ದರಿಂದ ಅಗ್ನ್ಯಾದಿಸೂಕ್ತಗಳ ನಿಯಮದ ಅನ್ಯಥಾನುಪಪತ್ತಿಯಿಂದ ಬೇರೆಯವರಿಗೆ ಆಯಾ ಶಬ್ದಗಳ ವಾಚ್ಯತ್ವವನ್ನು ಒಪ್ಪಬೇಕು ಎಂದು ಬಾದರಿಆಚಾರ್ಯರು ಅಂದರೆ ಶುಕಾಚಾರ್ಯರು ಹೇಳುತ್ತಾರೆ.

ಭಾವದೀಪ

भावदीपः – अनुस्मृतेर्बादरिः ।। तत्र तत्रोक्तस्य विष्णोरित्यस्यार्थः – विष्णोरेवेति ।। अग्न्यादीनामप्रतिपाद्यत्वेऽपीत्येवार्थः ।।

।। ಅನುಸ್ಮೃತೇರ್ಬಾದರಿಃ ।।

''ತತ್ರ ತತ್ರೋಕ್ತಸ್ಯ ವಿಷ್ಣೋಃ'' ಎಂಬ ಭಾಷ್ಯದ ಪದಗಳಿಗೆ ''ವಿಷ್ಣೋರೇವ'' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. ಅಂದರೆ ಅಗ್ನಿ ಮೊದಲಾದವರು ಪ್ರತಿಪಾದ್ಯರಾಗದಿದ್ದರೂ ಸಹ ಎಂದರ್ಥ.

ಬ್ರಹ್ಮಸೂತ್ರ

'ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् –।। सम्पत्तेरिति जैमिनिस्तथा हि दर्शयति ।। ३१ ।।

ಅಗ್ನ್ಯಾದಿಸೂಕ್ತಗಳನ್ನು ಉಪಾಸನೆ ಮಾಡುವವರಿಗೆ 'ಸಂಪತ್ತೇಃ' ಅಗ್ನ್ಯಾದಿಗಳ ಪ್ರಾಪ್ತಿಯು ಆಗುವುದರಿಂದ ಸೂಕ್ತನಿಯಮವು ಕೂಡುತ್ತದೆ; ಹೀಗೆ ಜೈಮಿನಿಋಷಿಗಳು ಹೇಳುತ್ತಾರೆ. 'ಭಗವಂತನನ್ನು ಹೇಗೆ ಉಪಾಸನೆ ಮಾಡುತ್ತಾನೋ ಅಂತಹ ಫಲವನ್ನೇ ಹೊಂದುತ್ತಾನೆ' ಎಂಬ ಶ್ರುತಿಯು ಜೈಮಿನಿಋಷಿಗಳ ಅಭಿಪ್ರಾಯವನ್ನು ಅನುಮೋದಿಸುತ್ತದೆ.

ಅರ್ಥ -- ಹಿ = ಯಾವ ಕಾರಣದಿಂದ, ಭಗವಂತನನ್ನು ಹೇಗೆ ಉಪಾಸನೆ ಮಾಡುತ್ತಾನೋ ಅಂತಹ ಫಲವನ್ನೇ ಪಡೆಯುತ್ತಾನೆಂಬ 'ತಂ ಯಥಾ' ಎಂಬ ಶ್ರುತಿಪ್ರಸಿದ್ಧಿಯು ಇರುವುದರಿಂದ, ತಥಾ ದರ್ಶಯತಿ = ಯಾವ ರೀತಿಯಾಗಿ ಜೈಮಿನಿ ಮತವು ಇರುತ್ತದೋ ಹಾಗೆ ಪ್ರತಿಪಾದಿಸಿದ್ದಾರೆ. ಆದ್ದರಿಂದ ಜೈಮಿನಿ ಋಷಿಗಳು ತಾವು ಹೇಳಿದ ಅಭಿಪ್ರಾಯಕ್ಕೆ ಅನುಕೂಲವಾದ ಶ್ರುತ್ಯಂತರದಿಂದ, ಸಂಪತ್ತೇಃ = ಅಗ್ನಿಮೊದಲಾದ ಸೂಕ್ತಗಳನ್ನು ಉಪಾಸನೆ ಮಾಡುವವರಿಗೆ ಅಗ್ನ್ಯಾದಿಗಳ ಪ್ರಾಪ್ತಿಯು ಆಗುತ್ತದೆ, ಇತಿ = ಎಂದು ವಿವಕ್ಷಿಸಿದ್ದಾರೆ. ಈ ದೃಷ್ಟಿಯಿಂದ ಸೂಕ್ತಾದಿ ನಿಯಮವು ಯುಕ್ತವಾಗುತ್ತದೆ.

ಬ್ರಹ್ಮಸೂತ್ರಭಾಷ್ಯ

ಉಪಾಸಕನಿಗೆ ತಕ್ಕ ಫಲವು ಪ್ರಾಪ್ತವಾಗುತ್ತದೆಂದು ಜೈಮಿನಿಗಳ ಭರವಸೆ

ब्रह्मसूत्रभाष्यम् – साक्षादप्यविरोधं वदन् जैमिनिः सूक्तादिनियममग्न्यादि-सम्प्राप्त्या मन्यते ।

ನೇರವಾಗಿ ವಿಷ್ಣುವನ್ನೇ ಪ್ರತಿಪಾದಿಸುವ ಶಬ್ದಗಳನ್ನು ಲೌಕಿಕ ವಸ್ತುಗಳಲ್ಲಿ ಪ್ರಯೋಗಿಸುವುದು ತಪ್ಪಲ್ಲ. ಹೀಗೆ ಜೈಮಿನಿ ಋಷಿಗಳು ಅಗ್ನ್ಯಾದಿಪ್ರಾಪ್ತಿನಿಮಿತ್ತಕವಾಗಿ ಸೂಕ್ತದ ವ್ಯವಸ್ಥೆಯನ್ನು ಅಂಗೀಕರಿಸುತ್ತಾರೆ.

ಪ್ರತಿಪದಾರ್ಥ -- ಮತ್ತೊಂದು ಕ್ರಮದಿಂದಲೂ ಸೂಕ್ತಾದಿಗಳ ನಿಯಮವು ಯುಕ್ತವಾಗಿದೆಯೆಂದು ಸಮರ್ಥಿಸುತ್ತಿದ್ದಾರೆ.

ಸಾಕ್ಷಾದಪಿ = ನೇರವಾಗಿ ಪರಮಾತ್ಮನನ್ನೇ ಪ್ರತಿಪಾದಿಸದಿದ್ದರೂ, ಅವಿರೋಧಂ = ವಿರೋಧವಿಲ್ಲವೆಂದು, ವದನ್ = ಹೇಳುವ, ಜೈಮಿನಿಃ = ಜೈಮಿನಿ ಋಷಿಗಳು, ಅಗ್ನ್ಯಾದಿಸಂಪ್ರಾಪ್ತ್ಯಾ = ಅಗ್ನಿ ಮೊದಲಾದ ಪ್ರತೀಕದಲ್ಲಿ ಅನುಷ್ಠಾನಭೇದದಿಂದ, ಸಂಪ್ರಾಪ್ತ್ಯಾ = ಫಲಭೇದವು ಇರುವುದರಿಂದ, ಸೂಕ್ತಾದಿನಿಯಮಃ = ಅಗ್ನಿಸೂಕ್ತ ವಾಯುಸೂಕ್ತ ಎಂಬ ನಿಯಮವು ಯುಕ್ತವಾಗುತ್ತದೆ. ಇತಿ = ಹೀಗೆ, ಮನ್ಯತೇ = ತಿಳಿಯುತ್ತಾರೆ.

ಉಪಾಸನೆಗೆ ತಕ್ಕ ಫಲ

ಬ್ರಹ್ಮಸೂತ್ರಭಾಷ್ಯಮ್ – 'ತಂ ಯಥಾ ಯಥೋಪಾಸತೇ ತದೇವ ಭವತಿ' ಇತಿ ದರ್ಶಯತಿ ।।೩೧।।

'ಉಪಾಸಕನು ಭಗವಂತನನ್ನು ಹೇಗೆ ಉಪಾಸನೆ ಮಾಡುತ್ತಾನೋ ಅಂತಹ ಫಲವನ್ನೇ ಹೊಂದುತ್ತಾನೆ ಎಂದು ಶ್ರುತಿ ಹೇಳಿದೆ.

ಪ್ರತಿಪದಾರ್ಥ -- ಅಗ್ನ್ಯಾದಿಗಳಲ್ಲಿ ಭಗವಂತನನ್ನು ಉಪಾಸನೆ ಮಾಡಿದರೆ ಅಗ್ನಿ ಮೊದಲಾದ ದೇವತೆಗಳ ಪ್ರಾಪ್ತಿಯು ಹೇಗಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ತಂ = ಅಂತಹ ಪರಮಾತ್ಮನನ್ನು, ಯಥಾ ಯಥಾ ಉಪಾಸತೇ = ಯಾವ ಪ್ರತೀಕದಲ್ಲಿ ಯಾವ ರೂಪದಿಂದ ಉಪಾಸನೆ ಮಾಡುತ್ತಾನೋ, ತದೇವ ಭವತಿ = ಆಯಾ ರೂಪಗಳನ್ನೇ ಫಲವನ್ನಾಗಿ ಪಡೆಯುತ್ತಾನೆ, ಇತಿ = ಹೀಗೆ, ದರ್ಶಯತಿ = ಶ್ರುತಿಪ್ರಮಾಣವಿದೆ.

ಸರ್ವಶಬ್ದವಾಚಕತ್ವದ ಬಗ್ಗೆ ಜೈಮಿನಿಋಷಿಗಳ ಅಭಿಪ್ರಾಯ

तत्वप्रदीपः – ''सम्पत्तेरिति जैमिनिस्तथाहि दर्शयति'' ।। साक्षात् परममुख्यतया ब्रह्मवाचकत्वेऽपीतरत्र व्यवहारे प्रयोजनं तत्र व्यवहाराभावे केषाञ्चिद्धेतुं च वदन् जैमिनिस्सूक्तमन्त्रादिनियममभ्यादिसूक्तादिभिर्भगवदुपास

कानाम् अग्न्यादिसम्प्राप्त्या मन्यते । तदेव भवति तथैव भवति, यत्प्रकारेणोपास्ते तत्प्रकारेण भवति । अतोऽग्न्यादावुपासकोऽग्न्यादौ सम्पद्यते ।।छ।।

ನೇರವಾಗಿ ಪರಮಮುಖ್ಯವೃತ್ತಿಯಿಂದ ಶಬ್ದಗಳು ವಿಷ್ಣುವನ್ನೇ ಪ್ರತಿಪಾದನೆ ಮಾಡುತ್ತವೆ. ಆದರೂ ಕೂಡ ಲೌಕಿಕವಸ್ತುಗಳಲ್ಲಿ ವ್ಯವಹಾರ ಮಾಡಲು ಪ್ರಯೋಜನವನ್ನು ಹಾಗೂ ಪರಮಾತ್ಮನ ವಿಷಯದಲ್ಲಿ ವ್ಯವಹಾರ ಮಾಡದಿರಲು ಕೆಲವು ಹೇತುವನ್ನು ಜೈಮಿನಿಮಹರ್ಷಿಗಳು ಹೀಗೆ ಹೇಳಿದ್ದಾರೆ - ಸೂಕ್ತ ಹಾಗೂ ಮಂತ್ರ ಮೊದಲಾದವುಗಳ ನಿಯಮವನ್ನು ಅಗ್ನಿಸೂಕ್ತದಿಂದ ವಿಷ್ಣುವನ್ನು ಉಪಾಸನೆ ಮಾಡಿದರೆ, ಅಗ್ನಿಯು ಪ್ರಾಪ್ತನಾಗುತ್ತಾನೆ. ಆದ್ದರಿಂದ ಅದು ಅಗ್ನಿಸೂಕ್ತ ಎಂದು ಕರೆಸಿಕೊಳ್ಳುತ್ತದೆ. ವಾಯುವಿನ ಸೂಕ್ತದಿಂದ ವಿಷ್ಣುವನ್ನು ಉಪಾಸನೆ ಮಾಡಿದರೆ ವಾಯುಪ್ರಾಪ್ತಿಯಾಗುತ್ತದೆ. ಆದ್ದರಿಂದ ಅದು ವಾಯುಸೂಕ್ತ ಎನಿಸುತ್ತದೆ.

'तदेव भवति' ಎಂಬುದಕ್ಕೆ 'तथैव भवति' ಎಂದರ್ಥ. ಭಕ್ತನು ತಾನು ಭಜಿಸಿದ ಭಗವಂತನ ರೂಪವನ್ನು ತಾಳುತ್ತಾನೆ ಎಂದರ್ಥ. ಯಾವ ಪ್ರಕಾರದಿಂದ ಉಪಾಸನೆಯನ್ನು ಮಾಡುತ್ತಾನೋ, ಅದೇ ಪ್ರಕಾರವನ್ನು ಹೊಂದುತ್ತಾನೆ ಎಂದಭಿಪ್ರಾಯ ಹೊರತು, ಭಗವಂತನೇ ಆಗುತ್ತಾನೆ ಎಂದರ್ಥವಲ್ಲ. ಆದ್ದರಿಂದ ಅಗ್ನ್ಯಾದಿಗಳಲ್ಲಿ ಭಗವಂತನನ್ನು ಉಪಾಸನೆ ಮಾಡುವುದರಿಂದ ಅಗ್ನಿಯನ್ನು ಪಡೆಯುತ್ತಾನೆ ಎಂದು ಹೇಳಿದಂತಾಯಿತು.

ತತ್ತ್ವಪ್ರಕಾಶಿಕಾ

ಜೈಮಿನ್ಯಾಚಾರ್ಯರ ಅಭಿಪ್ರಾಯ

तत्वप्रकाशिका – सम्पत्तेरिति जैमिनिः ।।

रीत्यन्तरेण सूक्तादिनियमस्यान्यथोपपत्तिं कथयत्सूत्रमुपन्यस्य, व्याचष्टे – सम्पत्तेरिति ।। अग्न्यादिसूक्तादिषु परब्रह्मण एव प्रतिपाद्यत्वेऽपि

अग्न्यादिसूक्तादिभिरग्न्यादौ भगवदुपास्त्या अग्न्यादिप्राप्त्यभिप्रायेण सूक्तादि-नियमोपपत्तेर्न तदन्यथानुपपत्त्याऽन्येषां वाच्यत्वं मन्तव्यमिति जैमिनिराचार्यो मन्यत इत्यर्थः ।

ಮತ್ತೊಂದು ಬಗೆಯಲ್ಲಿ ಅಗ್ನ್ಯಾದಿಸೂಕ್ತಗಳ ನಿಯಮವು ಅನ್ಯಥಾ ಉಪಪನ್ನವಾಗುತ್ತದೆಂದು ಹೇಳುವಂತಹ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಸಂಪತ್ತೇಃ'' ಇತ್ಯಾದಿಯಾಗಿ. ಅಗ್ನಿಮೊದಲಾದ ಸೂಕ್ತಗಳಲ್ಲಿ ಪರಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ. ಆದರೂ ಸಹ ಆಯಾ ಸೂಕ್ತಗಳಿಂದ ಅಗ್ನಿಮೊದಲಾದವರಲ್ಲಿ ಭಗವಂತನೇ ಉಪಾಸನೆಮಾಡಲು ಅರ್ಹನಾಗಿದ್ದಾನೆ. ಹಾಗೆ ಉಪಾಸನೆ ಮಾಡಿದಾಗ ಅಗ್ನ್ಯಾದಿಗಳ ಪ್ರಾಪ್ತಿಯು ಆಗುತ್ತದೆಂಬ ಅಭಿಪ್ರಾಯದಿಂದ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ನಿಯಮಗಳು ಉಪಪನ್ನವಾಗುತ್ತವೆ. ಆದ್ದರಿಂದ ಇಂತಹ ಸೂಕ್ತವ್ಯವಸ್ಥೆಯ ಅನ್ಯಥಾನುಪಪತ್ತಿಯಿಂದ ಬೇರೆಯವರಿಗೆ ಆಯಾ ಶಬ್ದಗಳ ವಾಚ್ಯತ್ವವನ್ನು ಒಪ್ಪಬೇಕು ಎಂದು ಜೈಮಿನಿ ಆಚಾರ್ಯರು ಹೇಳುತ್ತಾರೆ.

ಮತ್ತೊಮ್ಮೆ ಜೈಮಿನ್ಯಾಚಾರ್ಯರ ಉಲ್ಲೇಖಕ್ಕೆ ಏನು ಕಾರಣ ?

तत्त्वप्रकाशिका – जैमिनिमतं किमर्थं पुनरुच्यते इति मन्दाशङ्कानिवृत्त्यर्थं लौकिकव्यवहारे साक्षाद्ब्रह्मवाचकत्वेऽपि शब्दानामविरोधं वदन् जैमिनिः सूक्तादिव्यवहारस्याग्न्यादिप्राप्त्याऽन्यथोपपत्तिं वर्णयतीत्युक्तम् ।

ಸೂತ್ರಕಾರರು ಜೈಮಿನಿ ಆಚಾರ್ಯರ ಮತವನ್ನು ಮತ್ತೆ ಏಕೆ ಹೇಳಿದ್ದಾರೆ? ಎಂಬ ಪ್ರಶ್ನೆಯು ಮಂದರಿಗೆ ಬರುತ್ತದೆ. ಇದನ್ನು ನಿರಾಕರಿಸುವುದಕ್ಕಾಗಿ ಲೌಕಿಕವ್ಯವಹಾರದಲ್ಲಿ ಸಕಲಶಬ್ದಗಳು ನೇರವಾಗಿ ಬ್ರಹ್ಮನನ್ನು ಪ್ರತಿಪಾದಿಸಬಹುದು. ಆದರೂ ಸಹ ಶಬ್ದಗಳಿಗೆ ವಿರೋಧವಿಲ್ಲವೆಂದು ಹೇಳುವ ಜೈಮಿನ್ಯಾಚಾರ್ಯರು ಸೂಕ್ತಾದಿಗಳ ವಿಷಯದಲ್ಲಿ ವೈದಿಕವ್ಯವಹಾರದ ಮೂಲಕ ಅಗ್ನ್ಯಾದಿಗಳ ಪ್ರಾಪ್ತಿಯು ಆಗುತ್ತದೆಂದು ಅನ್ಯಥಾ ಉಪಪನ್ನವಾಗುತ್ತದೆಂದು ವರ್ಣಿಸುತ್ತಾರೆ ಎಂದು ಹೇಳಲಾಗಿದೆ.

ವಿವಿಧ ಉಪಾಸನೆಗೆ ಶ್ರುತಿಯೇ ಆಧಾರ

तत्वप्रकाशिका – नन्वग्न्यादिषु भगवदुपास्तावग्न्यादिप्राप्तिर्भवतीत्येतत् कुत इत्यतः सूत्रसूचितां श्रुतिमुदाहरति – तमिति ।। तदेव भवति प्राप्नुवन्ति। अत्र व्यवहारस्योपचरितत्वाङ्गीकारे प्रागुक्तैवानुपपतिः ।। ३१ ।।

ಅಗ್ನಿ ಮೊದಲಾದ ಅಧಿಷ್ಠಾನಗಳಲ್ಲಿ ಭಗವಂತನನ್ನು ಉಪಾಸನೆ ಮಾಡಿದರೆ ಅಗ್ನ್ಯಾದಿಗಳ ಪ್ರಾಪ್ತಿಯು ಆಗುತ್ತದೆಂದು ಯಾವ ಪ್ರಮಾಣದಿಂದ ಹೇಳುತ್ತೀರಿ? ಎಂಬ ಪ್ರಶ್ನೆಗೆ ಸೂತ್ರದಲ್ಲೇ ಸೂಚಿತವಾದ ಶ್ರುತಿಯನ್ನು "ತಂ ಯಥಾ" ಇತ್ಯಾದಿಯಾಗಿ ಉದಾಹರಿಸುತ್ತಿದ್ದಾರೆ. 'ತದೇವ ಭವತಿ' ಎಂದರೆ ಅವನನ್ನೇ ಹೊಂದುತ್ತಾರೆ ಎಂದರ್ಥ. ಇಲ್ಲಿ ವ್ಯವಹಾರಕ್ಕೆ ಔಪಚಾರಿಕತ್ವವನ್ನು ಅಂಗೀಕರಿಸಲು ಹಿಂದೆ ಹೇಳಿದ ಅನುಪಪತ್ತಿಯೇ ಕಾರಣವಾಗಿದೆಯೆಂದು ವಿವಕ್ಷಿಸಬೇಕು.

ಭಾವದೀಪ

'ಪ್ರಾಪ್ನುವಂತಿ' ಎಂಬುದು ಏಕವಚನವೇ ಆಗಿದೆ

भावदीपः – सम्पत्तेरिति जैमिनिः ।। तत्र तत्रोक्तस्य विष्णोरित्यतस्त-दनुवृत्त्यार्थमाह – अग्न्यादीति ।। परब्रह्मण एवेति ।। अग्न्यादीनाम-प्रतिपाद्यत्वेऽपीत्यर्थतयाऽवधारणोक्तिः अर्थभेदस्यस्पष्टत्वान्मन्दाशङ्क्येत्युक्तम्।। प्राप्नुवन्तीति ।। 'भ्रू प्राप्तौ' इति धातोः परस्मैपदमेकवचनं च छान्दसमिति भावः ।

॥ संपत्तेरिति जैमिनिस्तथा हि दर्शयति ॥

ಹಿಂದಿನ ಸೂತ್ರದ "ತತ್ರ ತತ್ರೋಕ್ತಸ್ಯ ವಿಷ್ಣೋಃ" ಎಂಬ ಭಾಷ್ಯವನ್ನು ಇಲ್ಲಿಯೂ ಸಹ ಅನುವೃತ್ತಿ ಮಾಡಿಕೊಂಡು ಅರ್ಥವನ್ನು ಹೇಳುತ್ತಿದ್ದಾರೆ "ಅಗ್ನ್ಯಾದಿ" ಇತ್ಯಾದಿಯಾಗಿ. "ಪರಬ್ರಹ್ಮಣ ಏವ" ಎಂಬಲ್ಲಿ ಅಗ್ನ್ಯಾದಿಗಳು ಪ್ರತಿಪಾದ್ಯರಾಗದಿದ್ದರೂ ಸಹ ಎಂಬ ಅರ್ಥವನ್ನು ವಿವಕ್ಷಿಸುವುದಕ್ಕಾಗಿ "ಏವ"ಕಾರವನ್ನು ಹೇಳಿದ್ದಾರೆ. ಅರ್ಥಭೇದವು ಸ್ಪಷ್ಟವಾಗಿ ತಿಳಿಯದಿರುವುದರಿಂದ "ಮಂದಾ

ಶಂಕಾ'' ಎಂಬ ಪದವನ್ನು ಬಳಸಿದ್ದಾರೆ. ''ಪ್ರಾಪ್ನುವಂತಿ'' ಎಂಬ ಧಾತು ''ಭೂಪ್ರಾಪ್ತೌ'' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಪರಸ್ಮೈಪದದ ಏಕವಚನ ರೂಪವೇ ಆಗಿದೆ ಎಂದು ಛಾಂದಸಪ್ರಯೋಗದಿಂದ ತಿಳಿಯಬೇಕು.

ಮುಖ್ಯಾರ್ಥ ಪರಿತ್ಯಾಗ ಮಾಡಿ ಲಕ್ಷಣಾ ಮಾಡಬಹುದೇ ?

ಭಾವದೀಪಃ – ನನು ಮञ्चक्रोशनमिति व्यवहारस्य क्रोशनवत् पुरुषसम्बन्धादुपचरितत्वमिव अग्निसूक्तमित्यादिव्यवहारस्य सूक्तवत् पुरुषाभिव्यक्त्यनुस्मृतिसम्पत्त्यधिष्ठानत्वादुपचरितत्वमुक्तं तदयुक्तं निर्बीजत्वात् । अग्न्यादिप्रतिपादकत्वरूपमुख्यार्थेऽनुपपत्त्यभावादित्यत आह – अत्रेति ।।

''ಮಂಚಾಃ ಕ್ರೋಶಂತಿ'' ಎಂಬ ವ್ಯವಹಾರದಲ್ಲಿ ಯಾವ ರೀತಿಯಾಗಿ ಅಳುವ ಪುರುಷರ ಸಂಬಂಧವು ಮಂಚದಲ್ಲಿರುವುದರಿಂದ ಔಪಚಾರಿಕವಾಗಿ ''ಮಂಚವೇ ಅಳುತ್ತಿದೆ'' ಎಂದು ಪ್ರಯೋಗಿಸುತ್ತಾರೋ ಅದರಂತೆ ''ಅಗ್ನಿಸೂಕ್ತಂ'' ''ಇಂದ್ರಸೂಕ್ತಂ'' ಇತ್ಯಾದಿ ವ್ಯವಹಾರವೂ ಸಹ ಸೂಕ್ತವುಳ್ಳಂತಹ ಪುರುಷನ ಅಭಿವ್ಯಕ್ತಿ, ಅನುಸ್ಮೃತಿ ಮತ್ತು ಸಂಪ್ರಾಪ್ತಿಗಳ ಅಧಿಷ್ಠಾನನೆಂದು ಔಪಚಾರಿಕವಾಗಿ ಪ್ರಯೋಗಿಸಬಹುದೆಂದು ಹೇಳಿದರೆ ಇದು ತಪ್ಪು. ಏಕೆಂದರೆ ಅಗ್ನಿ ಮೊದಲಾದವರನ್ನು ಸೂಕ್ತವು ಪ್ರತಿಪಾದಿಸುತ್ತದೆ ಎಂದು ಹೇಳಿದಾಗ ಮುಖ್ಯಾರ್ಥದಲ್ಲಿ ಅನುಪಪತ್ತಿಯು ಇರುವುದಿಲ್ಲ. ಹೀಗಿರುವಾಗ ಮುಖ್ಯಾರ್ಥವನ್ನು ಬಿಟ್ಟು ಲಕ್ಷಣಾ ಮಾಡುವುದರಲ್ಲಿ ಅರ್ಥವಿಲ್ಲವೆಂಬ ಆಕ್ಷೇಪಕ್ಕೆ ''ಅತ್ರ'' ಇತ್ಯಾದಿ ವಾಕ್ಯಗಳಿಂದ ಉತ್ತರಿಸುತ್ತಿದ್ದಾರೆ.

ಲೋಕವ್ಯವಹಾರಕ್ಕೆ ಔಪಚಾರಿಕತ್ವವನ್ನು ಹೇಳಬೇಕು

ಭಾವದೀಪಃ – यथा हि वामनशब्दादिरूपनिरवकाशश्रुत्यादेरन्यत्रानुपपत्त्या अन्यत्यागेन विष्णुमेवोपेत्याङ्गुष्ठमात्रत्वमङ्गुष्ठपरिमितहृदयाकाशे स्थितत्वेन हेतुनोपचरितमिति हृद्यपेक्षया तु मनुष्याधिकारत्वादित्यत्र वक्ष्यते, तथा तत्र तत्र सूक्तेषु अग्न्यादेरेव प्रतिपाद्यत्वे निरवकाशविष्णुश्रुतिलिङ्गादेः 'सर्वनामा सर्वकर्मा' इत्यादिश्रुत्यादेश्चानुप-

पत्तिरेव सूक्तस्य विष्णुपरत्वं मुख्यमुपेत्य व्यवहारस्योपचरतत्त्वाङ्गीकारे बीजमित्यर्थः ।

ಯಾವರೀತಿಯಾಗಿ ವಾಮನ ಶಬ್ದ ಮೊದಲಾದ ನಿರವಕಾಶ ಶ್ರುತಿಗಳ ಆಧಾರದಿಂದ ಬೇರೆ ಕಡೆ ಅನುಪಪತ್ತಿ ಇರುವ ಕಾರಣ ಅನ್ಯಾರ್ಥಗಳನ್ನು ಬಿಟ್ಟು ವಿಷ್ಣುವೇ ಅಂಗುಷ್ಠಪರಿಮಾಣದಿಂದ ಹೃದಯಾಕಾಶದಲ್ಲಿರುವ ಕಾರಣ ವಿಷ್ಣುವೆಂಬ ಅರ್ಥವನ್ನೇ ಅಂಗೀಕರಿಸಲಾಗುತ್ತದೆ. ''ಅಂಗುಷ್ಠಪರಿಮಿತಹೃದಯಾಕಾಶೇ ಸ್ಥಿತತ್ವ'' ಮೊದಲಾದ ಹೇತುಗಳಿಂದ ಬೇರೆ ಅರ್ಥಗಳಲ್ಲಿ ಔಪಚಾರಿಕವಾಗಿ ಪ್ರಯೋಗವನ್ನು ಮಾಡಾಲಾಗಿದೆ. ಈ ವಿಷಯವನ್ನು ''ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್'' ಎಂಬ ಸೂತ್ರದಲ್ಲಿ ಮುಂದೆ ಹೇಳುತ್ತಾರೆ. ಅದರಂತೆ ಆಯಾ ಸೂತ್ರಗಳಲ್ಲಿ ಅಗ್ನಿ ಮೊದಲಾದ ದೇವತೆಗಳೇ ಪ್ರತಿಪಾದ್ಯರಾದರೆ ನಿರವಕಾಶವಾದ ವಿಷ್ಣುಶ್ರುತಿ, ವಿಷ್ಣುವಿನ ಲಿಂಗ, ''ಸರ್ವನಾಮಾ, ಸರ್ವಕರ್ಮಾ'' ಇತ್ಯಾದಿ ಶ್ರುತಿಗಳೂ ಸಹ ಅನುಪಪನ್ನವಾಗುತ್ತವೆ. ಆದ್ದರಿಂದ ಅಗ್ನಿಸೂಕ್ತವೇ ಮೊದಲಾದವುಗಳು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆ ಎಂದು ಒಪ್ಪಬೇಕು. ಲೋಕದ ವ್ಯವಹಾರಕ್ಕೆ ಔಪಚಾರಿಕತ್ವವನ್ನು ಅಂಗೀಕರಿಸಲು ಇದೇ ಮುಖ್ಯಕಾರಣವೆಂದು ತಿಳಿಯಬೇಕು.

ಋಗ್ಭಾಷ್ಯದಲ್ಲಿ ಸೂಕ್ತ ವ್ಯವಸ್ಥೆ

भावदीपः – यत्तु ऋग्भाष्ये 'पृथग् रूपाणि विष्णोस्तु देवतान्तरगाणि च । अग्न्यादिसूक्तवाच्यानि नाम्ना सूक्तभिधा भवेत् ।।' इत्यग्न्यादिशब्दयोगः सूक्तादिव्यवस्थापक इत्युक्तम् । तत्तु सौरसावित्रविष्णुवामनादि-सूक्तव्यवस्थार्थमिति ज्ञेयम् ।।

ಋಗ್‌ಭಾಷ್ಯದಲ್ಲಿ ''ಪೃಥಗ್ರೂಪಾಣಿ ವಿಷ್ಣೋಸ್ತು ದೇವತಾಂತರಗಾಣಿ ಚ । ಅಗ್ನ್ಯಾದಿ ಸೂಕ್ತವಾಚ್ಯಾನಿ ನಾಮ್ನಾ ಸೂಕ್ತಭಿಧಾ ಭವೇತ್'' । ಎಂಬುದಾಗಿ ಅಗ್ನಿ ಮೊದಲಾದ ಶಬ್ದಗಳ ಯೋಗವೇ ಸೂಕ್ತಾದಿಗಳಿಗೆ ವ್ಯವಸ್ಥಾಪಕವಾಗಿದೆ ಎಂದು ಹೇಳಿದ್ದಾರೆ. ಈ ಮಾತು ಸೌರ, ಸಾವಿತ್ರ, ವಿಷ್ಣು, ವಾಮನ ಮೊದಲಾದ ಸೂಕ್ತಗಳ ವ್ಯವಸ್ಥೆಗೋಸ್ಕರ ಹೇಳಿದ್ದೆಂದು ತಿಳಿಯಬೇಕು. ವಸ್ತುತಃ ಸೂರ್ಯ ಸವಿತೃ ಶಬ್ದಗಳು ಒಬ್ಬನೇ ವ್ಯಕ್ತಿಯನ್ನು ಪ್ರತಿಪಾದಿಸಿವುದಾದರೂ ಸೂಕ್ತದಲ್ಲಿ ಭೇದವಿದೆ.

ಏಕೆಂದರೆ ಆಯಾ ಶಬ್ದಗಳ ಯೋಗಾರ್ಥವು ಭಿನ್ನಭಿನ್ನವಾದ್ದರಿಂದ ಸೂಕ್ತಾರ್ಥವೂ ಸಹ ಭಿನ್ನಭಿನ್ನವಾಗಿದೆ ಎಂದು ಋಗ್‌ಭಾಷ್ಯದ ಪ್ರಕಾರ ತಿಳಿಯಬೇಕು.

ಬ್ರಹ್ಮಸೂತ್ರ

'ಆಮನಂತಿ ಚೈನಮಸ್ಮಿನ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् –।। आमनन्ति चैनमस्मिन् ।। ३२।।

ಈ ವಿಷ್ಣುವನ್ನು ಅಗ್ನ್ಯಾದಿಗಳಲ್ಲಿ 'ಯೋಽಗ್ನೌ ತಿಷ್ಠನ್' ಇತ್ಯಾದಿಯಾಗಿ ವೇದಗಳು ಹೇಳುತ್ತವೆ.

'ಚ' ಶಬ್ದವು ಆಶಂಕೆಯನ್ನು ಪರಿಹರಿಸುತ್ತಿದೆ. ಯಾವ ಕಾರಣದಿಂದ ಏನಂ = ವಿಷ್ಣುವನ್ನು, ಅಸ್ಮಿನ್ = ಅಗ್ನ್ಯಾದಿಗಳಲ್ಲಿ, ಆಮನಂತಿ = ಇದ್ದಾನೆಂದು ಹೇಳುತ್ತಾರೋ 'ಯೋಽಗ್ನೌ ತಿಷ್ಠನ್' ಇತ್ಯಾದಿ ಶ್ರುತಿಗಳು ಹಾಗೆ ಪ್ರತಿಪಾದಿಸುತ್ತವೆಯೋ; ಆ ಕಾರಣದಿಂದ ಅಗ್ನ್ಯಾದಿಗಳಲ್ಲಿ ವಿಷ್ಣೂಪಾಸನೆಯಿಂದ ಅಗ್ನಿಯ ಪ್ರಾಪ್ತಿಯು ಆಗುತ್ತದೆಂಬ ಶಂಕೆಯು ಪರಿಹೃತವಾಯಿತು. ಏಕೆಂದರೆ ಅಗ್ನ್ಯಾದಿ ಪದಗಳಿಂದ ಭಗವಂತನ ಪ್ರಾಪ್ತಿಯೇ ಸಮ್ಮತವಾದ್ದರಿಂದ.

॥ ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಪ್ರಥಮಾಧ್ಯಾಯದ ಎರಡನೆಯ ಪಾದವು ಸಮಾಪ್ತವಾಯಿತು ॥

ಬ್ರಹ್ಮಸೂತ್ರಭಾಷ್ಯ

ಅಗ್ನ್ಯಾದಿ ದೇವತೆಗಳಲ್ಲಿ ಆಯಾ ಹೆಸರಿನಿಂದಲೇ ವಿಷ್ಣುವಿನ ಸನ್ನಿಧಾನ

ब्रह्मसूत्रभाष्यम् – न ह्यन्योपासकोऽन्यं प्राप्नुत इति युज्यत इत्यत आह – ।। आमनन्ति चैनमस्मिन् ।। एनं विष्णुमस्मिन्नग्न्यादावामनन्ति ।

ಅನುವಾದ - ಒಬ್ಬನನ್ನು ಉಪಾಸನೆ ಮಾಡಿದರೆ ಮತ್ತೊಬ್ಬನನ್ನು ಪಡೆಯುತ್ತಾನೆಂಬುದು ತಪ್ಪಲ್ಲವೇ? ಎಂದರೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ. ಈ ವಿಷ್ಣುವನ್ನು ಅಗ್ನ್ಯಾದಿಗಳಲ್ಲಿ ಯಾರು ಇದ್ದಾನೆಂದು ತಿಳಿಯುತ್ತಾರೋ ಎಂಬುದಾಗಿ 'ಯೋ ಅಗ್ನೌ ತಿಷ್ಠನ್' ಇತ್ಯಾದಿ ಶ್ರುತಿಗಳು ಹೇಳುತ್ತಿವೆ. ಅಂದರೆ ಅಗ್ನ್ಯಾದಿದೇವತೆಗಳಲ್ಲಿ ತೇಜೋರೂಪನಾದ

ಅಮೃತಸ್ವರೂಪನಾದ ಕ್ಷರಾಕ್ಷರಪುರುಷಶಬ್ದವಾಚ್ಯನಾದ ಪರಮಾತ್ಮನೇ ನೆಲೆಸಿದ್ದಾನೆಂದು ಶ್ರುತಿಗಳು ಹೇಳುತ್ತಿವೆ.

ಪ್ರತಿಪದಾರ್ಥ -- ಅನ್ಯೋಪಾಸಕಃ = ಬೇರೊಬ್ಬನನ್ನು ಉಪಾಸನೆ ಮಾಡುವವನು, ಅನ್ಯಂ = ಮತ್ತೊಬ್ಬನನ್ನು, ಪ್ರಾಪ್ನುತೇ = ಹೊಂದುತ್ತಾನೆ, ಇತಿ = ಹೀಗೆ ಹೇಳುವುದು, ನ ಯುಜ್ಯತೇ = ಯುಕ್ತವಾಗುವುದಿಲ್ಲ. ಇತ್ಯತ ಆಹ = ಈ ಪ್ರಶ್ನೆಗೆ ಸೂತ್ರಕಾರರೇ ಉತ್ತರಿಸುತ್ತಿದ್ದಾರೆ.

ಏನಂ = ಈ ವಿಷ್ಣುವನ್ನು, ಅಸ್ಮಿನ್ ಅಗ್ನ್ಯಾದೌ = ಈ ಅಗ್ನ್ಯಾದಿ ದೇವತೆಗಳಲ್ಲಿ, ಆಮನಂತಿ = ಇದ್ದಾನೆಂದು 'ಯೋಽಗ್ನೌ ತಿಷ್ಠನ್' ಇತ್ಯಾದಿ ಶ್ರುತಿಗಳು ಹೇಳುತ್ತಿವೆ.

ಅಗ್ನಿಯಲ್ಲಿ ನೆಲೆಸಿದವನು ಪರಮಾತ್ಮನೇ ಆಗಿದ್ದಾನೆ

ಬ್ರಹ್ಮಸೂತ್ರಭಾಷ್ಯಮ್ –

'ಯೋಽಗ್ನೌ ತಿಷ್ಠನ್' (ಬೃ. ೫-೭-೫.) 'ಯ ಏಷ ಏತಸ್ಮಿನ್ನಗ್ನೌ ತೇಜೋಮಯೋಽಮೃತಮಯಃ ಪುರುಷಃ' (ಛಾಂ. ೪-೫-೩.) ಇತ್ಯಾದಿನಾ ।। ೩೨ ।।

।। ಇತಿ ವೈಶ್ವಾನರಾಧಿಕರಣಮ್ ।। ೭ ।।

।। ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ ಬ್ರಹ್ಮಸೂತ್ರಭಾಷ್ಯೇ ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ ।।

ಅನುವಾದ - ''ಯಾವಾತನು ಅಗ್ನಾದಿ ದೇವತೆಗಳಲ್ಲಿ ಇದ್ದಾನೋ ಅವನು ಪರಮಾತ್ಮ''ನೆಂದು ಬೃಹದಾರಣ್ಯಕಶ್ರುತಿಯು ಹೇಳುತ್ತಿದೆ. ಅಗ್ನಿಯಲ್ಲಿ ತೇಜೋರೂಪನಾಗಿ, ಅಮೃತಸ್ವರೂಪನಾಗಿಯೂ, ಕ್ಷರಾಕ್ಷರಪುರುಷಶಬ್ದವಾಚ್ಯನಾಗಿಯೂ ಪರಮಾತ್ಮನೇ ಇದ್ದಾನೆಂದು ಬೃಹದಾರಣ್ಯಕಶ್ರುತಿಯು ಹೇಳುತ್ತಿದೆ.

ಪ್ರತಿಪದಾರ್ಥ -- ಆ ಶ್ರುತಿಗಳನ್ನು ಉದಾಹರಿಸುತ್ತಿದ್ದಾರೆ. ಯಃ = ಆ ಭಗವಂತನೇ ಅಗ್ನೌ = ಅಗ್ನ್ಯಾದಿಗಳಲ್ಲಿ, ತಿಷ್ಠನ್ = ಇರುವವನಾಗಿ ಎಂದು ಬೃಹದಾರಣ್ಯಕ ಶ್ರುತಿಯು ಹೇಳಿದೆ, ಮತ್ತು ಯಃ = ಯಾವ,

ಏಷಃ = ಈ ಭಗವಂತನು, ಏತಸ್ಮಿನ್ = ಈ, ಅಗ್ನೌ = ಅಗ್ನಿಯಲ್ಲಿ, ತೇಜೋಮಯಃ = ಜ್ಯೋತಿಸ್ವರೂಪನು, ಅಮೃತಮಯಃ = ಅಮೃತಸ್ವರೂಪನು, ಪುರುಷಃ = ಕ್ಷರಾಕ್ಷರಪುರುಷಶಬ್ದವಾಚ್ಯನು, ಇತ್ಯಾದಿನಾ = ಇವೇ ಮೊದಲಾದ ಶ್ರುತಿಗಳಿಂದ ಮೇಲೆ ಹೇಳಿದ ವಿಷಯವೆಲ್ಲವೂ ನಿರ್ಣಯವಾಗುತ್ತವೆ. ಈ ಎಲ್ಲ ಕಾರಣಗಳಿಂದ ಭಗವಂತನೇ ವೈಶ್ವಾನರ ಎಂಬ ನಾಮಾತ್ಮಕಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ನಿರ್ಧಾರವಾಯಿತು.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ಪ್ರಥಮಾಧ್ಯಾಯದ ಎರಡನೆಯ ಪಾದವು ಸಮಾಪ್ತವಾಯಿತು ॥

ತತ್ತ್ವಪ್ರದೀಪ

ಅಗ್ನ್ಯಾದಿಗಳಲ್ಲಿರುವವನು ಪರಮಾತ್ಮನೇ

तत्वप्रदीपः – तामेव भगवतस्तत्र तत्र स्थितिं स्पष्टयत्यतिशङ्कां परिहरन् – आमनन्ति चैनमस्मिन् ।। नैकत्रैवामनन्ति वाजसनेयिनः । चकारादन्यत्र च 'यश्चायमस्मिन्' इत्यादौ ।

ಪರಮಾತ್ಮನಲ್ಲಿ ಅಗ್ನಿಯ ಉಪಾಸನೆಯಿಂದ ಪರಮಾತ್ಮನು ಹೇಗೆ ಪ್ರಾಪ್ತನಾಗುತ್ತಾನೆ ? ಎಂಬ ಅಧಿಕಾಶಂಕೆಗೆ ಅವಕಾಶವಿಲ್ಲ. ಅಗ್ನ್ಯಾದಿಗಳಲ್ಲಿ ಭಗವಂತನೇ ಅಂತರ್ಯಾಮಿಯಾಗಿ ನೆಲೆಸಿದ್ದಾನೆಂಬುದನ್ನು ಸ್ಪಷ್ಟಪಡಿಸುತ್ತಾ 'ಆಮನಂತಿ ಚೈನಮಸ್ಮಿನ್' ಎಂಬ ಸೂತ್ರದಿಂದ ಪರಿಹರಿಸುತ್ತಿದ್ದಾರೆ.

ವಾಜಸನೇಯ ಶಾಖೆಯವರು ಮಾತ್ರ ಅಗ್ನ್ಯಾದಿಗಳಲ್ಲಿ ಭಗವಂತನು ಅಂತರ್ಯಾಮಿಯಾಗಿ ನೆಲೆಸಿದ್ದಾನೆಂದು ಹೇಳುತ್ತಿರುವುದಲ್ಲ. ಉಳಿದ ಶಾಖಿಗಳೂ ಕೂಡ ಹೇಳುತ್ತಿದ್ದಾರೆಂಬುದನ್ನು ಸೂತ್ರಕಾರರು 'ಚ' ಶಬ್ದದಿಂದ ತಿಳಿಸಿದ್ದಾರೆ. ಈ ಭಾಷ್ಯದ ಅರ್ಥವನ್ನೇ ಭಾಷ್ಯದಲ್ಲಿ 'ಇತ್ಯಾದಿನಾ' ಎಂದು ಹೇಳಿದ್ದಾರೆ.

ಆದ್ದರಿಂದ 'ಯಶ್ಚಾಯಮಸ್ಮಿನ್' ಎಂಬ ಶಾಖೆಯಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ.

ಸೂತ್ರದ ಚಶಬ್ದಾರ್ಥ

तत्त्वप्रदीपः – अन्ये चाऽमनन्ति 'एतमस्यामेतं दिवि' इत्यादिं । अन्ये च 'तत्सृष्ट्वा तदेवानुप्राविशत्' इत्यादि । स्मरन्ति च 'यच्चन्द्रमसि यच्चाग्नौ' इत्यादि ।।७।।

।। इति वैश्वानराधिकरणम् ।।

।। इति तत्त्वप्रदीपे प्रथमाध्यायस्य द्वितीयः पादः ।। श्रीमध्वेशार्पणमस्तु ।।

ಮತ್ತು 'ಅನ್ಯೇ ಚಾऽಮನಂತಿ' 'ಯ ಏಷ ಏತಸ್ಮಿನ್' ಎಂಬುದಾಗಿ ಬೇರೆ ಶಾಖಿಗಳೂ ಕೂಡ ಅದನ್ನೇ ಹೇಳುತ್ತಾರೆ. 'ಅನ್ಯೇ ಚಾऽಮನಂತಿ 'ಏತಮಸ್ಯಾಮೇತಂ ದಿವಿ' ಎಂಬ ವಾಕ್ಯವಿರುವ ಶಾಖೆಯಲ್ಲಿಯೂ ಕೂಡ ಪರಮಾತ್ಮನೇ ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ.

ಇನ್ನೂ ಕೆಲವು ಶಾಖಿಗಳು 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್' ಇತ್ಯಾದಿಯಾಗಿ ಪ್ರತಿಯೊಂದು ಪದಾರ್ಥಗಳಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿದ್ದಾನೆಂದು ಹೇಳುತ್ತಾರೆ.

ಕೇವಲ ಬೇರೆ ಬೇರೆ ಶಾಖಿಗಳು ಮಾತ್ರ ಹೇಳುವುದಲ್ಲ. 'ಸ್ಮರಂತಿ ಚ' ಸ್ಮೃತಿಯೂ ಕೂಡ 'ಯಚ್ಚಂದ್ರಮಸಿ ಯಚ್ಚಾಗ್ನೌ' ಇತ್ಯಾದಿಯಾಗಿ ಚಂದ್ರಸೂರ್ಯಾದಿಗಳಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವವನು ಪರಮಾತ್ಮನೆಂದು ಹೇಳುತ್ತಿದೆ. ಹೀಗೆ ಸೂತ್ರದಲ್ಲಿರುವ 'ಚ' ಶಬ್ದಕ್ಕೆ ಅನೇಕ ಮಜಲಿನ ಅರ್ಥವನ್ನು ತಿಳಿಯಬೇಕು.

ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ರಚಿಸಿದ ತತ್ವಪ್ರದೀಪದಲ್ಲಿ
ಎರಡನೆಯ ಪಾದವು ಸಮಾಪ್ತವಾಯಿತು

ತತ್ತ್ವಪ್ರಕಾಶಿಕಾ

ಭಗವಂತನು ದೊರೆಯಬೇಕಾದರೆ ಅವನನ್ನೇ ಉಪಾಸನೆ ಮಾಡಬೇಕು

तत्वप्रकाशिका – ।। आमनन्ति चैनमस्मिन् ।।

यदुक्तम् 'अग्न्यादिसूक्तादिभिर्ब्रह्मोपासकस्याग्न्यादिप्राप्तिः' इति तच्छ्रुत्युक्तमपि न युक्तम् । 'मद्भक्ता यान्ति मामपि' इत्यादेरन्योपासकस्यान्यप्राप्तेरयोगात्। 'श्रुतोपनिषत्कगत्यभिधानाच्च' इत्यादौ तदनभ्युपगमाच्चेति भावेनाऽशङ्क्य, तत्परिहाराय(रतया) सूत्रमवतार्य व्याचष्टे – न हीति ।।

ಹಿಂದೆ ಅಗ್ನಿ ಮೊದಲಾದ ಸೂಕ್ತಗಳಿಂದ ಬ್ರಹ್ಮನನ್ನು ಯಾರು ಉಪಾಸನೆ ಮಾಡುತ್ತಾರೋ ಅಂತಹವರಿಗೆ ಅಗ್ನ್ಯಾದಿ ದೇವತೆಗಳು ಪ್ರಾಪ್ತರಾಗುತ್ತಾರೆಂದು ಜೈಮಿನಿಗಳ ಅಭಿಪ್ರಾಯವೆಂದು ಹೇಳಲಾಯಿತು. ಈ ವಿಷಯವು ಶ್ರುತಿಯಲ್ಲಿ ಹೇಳಲ್ಪಟ್ಟಿದ್ದರೂ ಸಹ ಅಯುಕ್ತವಾಗಿದೆ. ಏಕೆಂದರೆ ಮದ್ಭಕ್ತಾ ಯಾಂತಿ ಮಾಮಪಿ' ನನ್ನ ಭಕ್ತರು ನನ್ನನ್ನೇ ಹೊಂದುತ್ತಾರೆ ಹೀಗೆ ಭಗವಂತನ ಮಾತಿನಿಂದ ಮತ್ತೊಬ್ಬನನ್ನು ಉಪಾಸನೆ ಮಾಡುವವನಿಗೆ ಇನ್ನೊಬ್ಬನು ದೊರೆಯಲಾರನು. 'ಶ್ರುತೋಪನಿಷತ್ಕಗತ್ಯಭಿಧಾನಾಚ್ಚ' ಎಂಬ ಸೂತ್ರದಲ್ಲಿಯೂ ಇದೇ ವಿಷಯವನ್ನು ಹೇಳಿದ್ದಾರೆ. ಈ ಅಭಿಪ್ರಾಯದ ಶಂಕೆಯನ್ನು ಪರಿಹಾರಮಾಡುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ನಹಿ'' ಇತ್ಯಾದಿಯಾಗಿ.

ಸರ್ವಗತನಾದ ಪರಮಾತ್ಮನೇ ವೈಶ್ವಾನರನೆಂದು ಸಿದ್ಧವಾಯಿತು

तत्वप्रकाशिका – न विष्णूपासकस्याग्न्यादिप्राप्त्युक्तिरयुक्ता । अग्न्यादिप्राप्तिपदेन तदन्तर्गतभगवत्प्राप्तेर्विवक्षित्वात् । यतोऽग्न्यादावपि विष्णुमामनन्ति श्रुतय इति भावः । चशब्दः शङ्काव्यावर्तकः । अतोऽयं वैश्वानरो विष्णुरेवेति तस्यैव सर्वगतत्वमिति सिद्धम् ।। ३२ ।।

।। इति श्रीमज्जयतीर्थभिक्षुविरचितायां तत्वप्रकाशिकायाम्
वैश्वनराधिकरणम् प्रथमाध्यायस्य द्वितीयः पादः।।

ವಿಷ್ಣುವನ್ನು ಉಪಾಸನೆಮಾಡುವ ಭಕ್ತನಿಗೆ ಅಗ್ನಿ ಮೊದಲಾದವರ ಪ್ರಾಪ್ತಿಯಾಗುವುದು ಎಂದು ಹೇಳಿದ್ದು ಅಯುಕ್ತವಲ್ಲ. ಏಕೆಂದರೆ ಅಗ್ನ್ಯಾದಿಪ್ರಾಪ್ತಿ ಎಂಬ ಪದದಿಂದ ಅಗ್ನ್ಯಾದ್ಯಂತರ್ಗತನಾದ ಭಗವಂತನು ದೊರೆಯುತ್ತಾನೆಂಬ ವಿವಕ್ಷೆಯು ಇರುತ್ತದೆ. ಏಕೆಂದರೆ ಶ್ರುತಿಯು ಅಗ್ನ್ಯಾದಿಗಳಲ್ಲಿ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂದು ಹೇಳುತ್ತಿದೆ. ಸೂತ್ರದಲ್ಲಿರುವ ಚಶಬ್ದವು ಈ ಶಂಕೆಯನ್ನು ಪರಿಹರಿಸುತ್ತಿದೆ. ಆದ್ದರಿಂದ ವೈಶ್ವಾನರ ಎಂಬ ನಾಮಾತ್ಮಕಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ. ಆದ್ದರಿಂದ ಅವನೇ ಸರ್ವಗತನೆಂದು ಸಿದ್ಧವಾಗುತ್ತದೆ.

ಇಲ್ಲಿಗೆ ಶ್ರೀಜಯತೀರ್ಥಭಿಕ್ಷುಗಳಿಂದ ವಿರಚಿತವಾದ ತತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ
ಪ್ರಥಮಾಧ್ಯಾಯದ ದ್ವಿತೀಯಪಾದವು ಸಮಾಪ್ತವಾಯಿತು.

ಭಾವದೀಪ

ಸೂತ್ರದ ಚಶಬ್ದಾರ್ಥ

भावदीपः – आमनन्ति चैनमस्मिन् ।। तदनभ्युपगमाच्चेति ।। 'नह्यन्यविद्ययाऽन्यगतिर्युक्ता' इति कगत्यन्यथानुपपत्त्या कशब्दितब्रह्मण एव प्रकरणित्वाभ्युपगमादिति भावः । सौत्रचशब्दार्थमाह – न विष्विवत्यादिना ।।

।। ಆಮನಂತಿ ಚೈನಮಸ್ಮಿನ್ ।।

ಟೀಕೆಯಲ್ಲಿ ''ತದನಭ್ಯುಪಗಮಾಚ್ಚ'' ಎಂದು ಹೇಳಿದ್ದಾರೆ, ಏಕೆಂದರೆ ಒಬ್ಬನ ವಿದ್ಯೆಯಿಂದ ಮತ್ತೊಬ್ಬನ ಗತಿಯು ಯುಕ್ತವಾಗುವುದಿಲ್ಲ. ಹೀಗೆ ಕಗತ್ಯನ್ಯಥಾನುಪಪತ್ತಿಯಿಂದ ''ಕ'' ಎಂಬ ಶಬ್ದದಿಂದ ಪ್ರತಿಪಾದ್ಯನಾದ ಬ್ರಹ್ಮನೇ ಪ್ರಕರಣದಲ್ಲಿ ಪ್ರತಿಪಾದ್ಯನಾಗಿದ್ದಾನೆಂದು ಅಂಗೀಕರಿಸಿರುವುದರಿಂದ ಎಂದು ಅಭಿಪ್ರಾಯ. ಸೂತ್ರದಲ್ಲಿರುವ ''ಚ'' ಶಬ್ದದ ಅರ್ಥವನ್ನು ''ನ ವಿಷ್ಣೂಪಾಸಕ'' ಇತ್ಯಾದಿ ವಾಕ್ಯಗಳಿಂದ ಸ್ಪಷ್ಟಪಡಿಸಿದ್ದಾರೆ.

ಸೂತ್ರದಲ್ಲಿರುವ ಚಶಬ್ದ ವ್ಯಾಖ್ಯಾನ

भावदीपः – उपपादकत्वेन सूत्रखण्डभाष्यं व्याचष्टे – यत इति ।। आमनन्ति नामनन्ति चेति भ्रान्तिनिरासायाऽह – चशब्द इति ।। यद्वा समुच्चेयाभावाद् व्यर्थोऽयं चशब्द इत्यत आह – चशब्द इति ।। तत्प्रकारः प्राग् विवृत इति भावः ।

ಈ ವಿಷಯದಲ್ಲಿ ಉಪಪಾದಕವಾಗಿ ಸೂತ್ರದ ಒಂದು ಭಾಗದ ಭಾಷ್ಯವನ್ನು ''ಯತಃ'' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. ಸೂತ್ರದಲ್ಲಿರುವ ಚ ಶಬ್ದದಿಂದ ''ಆಮನಂತಿ ನಾಮನಂತಿ ಚ'' ಎಂಬುದಾಗಿ ಭ್ರಾಂತಿಯು ಬರುತ್ತದೆ. ಅದನ್ನು ನಿರಾಕರಿಸುವುದಕ್ಕಾಗಿ ''ಚ ಶಬ್ದಃ'' ಎಂದು ಹೇಳಿದ್ದಾರೆ. ಅಥವಾ ''ಚ'' ಶಬ್ದಕ್ಕೆ ಸಮುಚ್ಚಯವೆಂಬ ಅರ್ಥವಿಲ್ಲದ ಕಾರಣ ಸೂತ್ರದಲ್ಲಿರುವ ಚ ಶಬ್ದವು ವ್ಯರ್ಥವಾಗುತ್ತದಲ್ಲವೆ? ಎಂಬ ಪ್ರಶ್ನೆಗೂ ಸಹ ಉತ್ತರಿಸುವುದಕ್ಕಾಗಿ ''ಚ ಶಬ್ದಃ'' ಎಂದು ಹೇಳಿದ್ದಾರೆ. ಇದರ ಬಗ್ಗೆ ಹಿಂದೆಯೇ ವಿವರಿಸಿದ್ದಾಗಿದೆ.

ತತ್ತ್ವಪ್ರದೀಪದಲ್ಲಿ ಮಾಡಿದ ಚಶಬ್ದವ್ಯಾಖ್ಯಾನ

भावदीपः – तत्त्वप्रदीपे तु 'नैकत्रैवामनन्ति वाजसनेयिनः । चकारादन्यत्रच 'यश्चायमस्मिन्' इत्यादौ अन्ये चामनन्ति 'एतमस्याम् एतं दिवि' इत्यादि अन्यत्र 'तत् सृष्ट्वा तदवानुप्राविशद्' इत्यादि स्मरन्ति च । यच्चन्द्रमसि यच्चाग्नौ इत्यादीत्युक्तम् ।

ತತ್ತ್ವಪ್ರದೀಪದಲ್ಲಿಯಾದರು ''ಬೃಹದಾರಣ್ಯಕದಲ್ಲಿ ಮಾತ್ರ ಹೀಗೆ ಹೇಳುವುದಲ್ಲ, ಸೂತ್ರದಲ್ಲಿ ''ಚ'' ಶಬ್ದವನ್ನು ಹೇಳಿದ್ದರಿಂದ ಬೇರೆ ವೇದಾಧ್ಯಯನವನ್ನು ಮಾಡುವವರೂ ಸಹ ''ಯಶ್ಚಾಯಮಸ್ಮಿನ್'' ಇತ್ಯಾದಿಯಾಗಿ ಹೇಳುತ್ತಾರೆ. ''ಏತಮಸ್ಯಾಮ್ ಏತಂ ದಿವಿ'' ಇತ್ಯಾದಿಯಾಗಿ ಮತ್ತು ''ತತ್ಸೃಷ್ಟ್ವಾ ತದೇವಾನುಪ್ರಾವಿಶಾತ್'' ಇತ್ಯಾದಿಯಾಗಿ ಬೇರೆ ಶ್ರುತಿಯಲ್ಲಿಯೂ ಮತ್ತು ''ಯಚ್ಚಂದ್ರಮಸಿ ಯಚ್ಚಾಗ್ನೌ'' ಇತ್ಯಾದಿ ಸ್ಮೃತಿಯಲ್ಲಿಯೂ ಭಗವಂತನೇ ಅಗ್ನಿ ಮೊದಲಾದವರಲ್ಲಿ ನೆಲಸಿದ್ದಾನೆಂದು ಹೇಳಲಾಗಿದೆ'' ಹೀಗೆ ವ್ಯಾಖ್ಯಾನಿಸಿದ್ದಾರೆ.

ಸೂತ್ರದಲ್ಲಿ ಪ್ರಯೋಗಿಸಿದ ಸಾಧ್ಯಹೇತುಗಳ ಬಗ್ಗೆ

ಭಾವದೀಪಃ – अत इति ।। आत्मशब्दश्रुतिस्मृतिसमाख्याप्रकरणरूप-साधकभावात् । परकीयश्रुतिलिङ्गविद्याभेदव्यवहारविरोधादिबाधकाभावाच्चेति सर्वसौत्रहेतुभागार्थः । वैश्वानरो विष्णुरिति साध्यभागार्थः । एवेति 'अत एव न देवता भूतं च' इति सूत्रार्थः ।

''अतः'' ಎಂಬ ಪದಕ್ಕೆ ಆತ್ಮಶಬ್ದ, ಶ್ರುತಿ, ಸ್ಮೃತಿ, ಸಮಾಖ್ಯಾ, ಪ್ರಕರಣ ಎಂಬ ಸಾಧಕ ಪ್ರಮಾಣವಿರುವುದರಿಂದ ಎಂದರ್ಥ. ಪರಕೀಯರು ಹೇಳುವ ಶ್ರುತಿ,ಲಿಂಗ, ವಿದ್ಯಾಭೇದ, ವ್ಯವಹಾರವಿರೋಧ ಮೊದಲಾದ ಯಾವುದೇ ಬಾಧಕಗಳೂ ಸಹ ಇಲ್ಲದ ಕಾರಣದಿಂದ ಎಂಬುದಾಗಿ ಸಕಲ ಸೂತ್ರಗಳಲ್ಲಿರುವ ಹೇತುಭಾಗದ ಅರ್ಥವಾಗಿದೆ. ವೈಶ್ವಾನರನಾದವನು ವಿಷ್ಣುವೇ ಆಗಿದ್ದಾನೆಂಬುದು ಸಾಧ್ಯಭಾಗದ ಅರ್ಥವಾಗಿದೆ. ''ಏವ'' ಎಂಬುದು ''ಅತ ಏವ ನ ದೇವತಾ ಭೂತಂ ಚ '' ಎಂಬ ಸೂತ್ರದ ಅರ್ಥವಾಗಿದೆ.

'ವೈಶ್ವಾನರನು ವಿಷ್ಣು' ಎಂದು ಉಪಸಂಹಾರ ಮಾಡಿದರೆ ಸಾಲದು

ಭಾವದೀಪಃ – वाजसनेयेत्यादिवक्यस्याप्यत्र प्रागुक्तत्वात् तत्रत्यस्य विष्णुत्वोपसंहारे तत्र तत्र सर्वगतत्वाभावेन सर्वगतत्वाक्षेपसमाध्य-योगादयमित्युक्तम् । छान्दोग्यस्थ इत्यर्थः ।

ಬೃಹದಾರಣ್ಯಕವಾಕ್ಯವನ್ನು ಹಿಂದೆ ಹೇಳಿದ್ದರಿಂದ ಆ ವಾಕ್ಯವು ವಿಷ್ಣುಪರವೆಂದು ಉಪಸಂಹಾರ ಮಾಡಿದರೆ ಆ ವಾಕ್ಯಗಳಲ್ಲಿ ಸರ್ವಗತತ್ವವು ಕೇಳಿಸದ ಕಾರಣ ಸರ್ವಗತತ್ವದ ಆಕ್ಷೇಪಕ್ಕೆ ಸಮಾಧಾನವನ್ನು ಹೇಳಿದಂತಾಗುವುದಿಲ್ಲ. ಆದ್ದರಿಂದ ''ಅಯಂ'' ಎಂಬ ಪದಕ್ಕೆ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನು ಎಂದು ಅರ್ಥವನ್ನು ತಿಳಿಯಬೇಕು.

ಸರ್ವಗತನಾದ ವಿಷ್ಣುವೇ ವೈಶ್ವಾನರನೆಂದು ಉಪಸಂಹಾರ ಮಾಡಬೇಕು

ಭಾವದೀಪಃ – सर्वगतत्वमिति फलोक्तिः । अत्राभिविमानपदोक्तं पूर्वत्र

ततमपदोक्तं सर्वगतत्वमित्यर्थः । प्रादेशमात्रत्वं तु सर्वगतस्याप्यङ्गुष्ठ-मात्रत्वमिव अधिकार्याद्यपेक्षया हृद्यपेक्षया त्वित्यत्र समाहितं भविष्यति ।

''ಸರ್ವಗತತ್ವಂ'' ಎಂದು ಕೊನೆಯಲ್ಲಿ ಈ ಅಧಿಕರಣದ ಫಲವನ್ನು ಹೇಳಿದ್ದಾರೆ. ಪ್ರಕೃತ ''ಅಭಿವಿಮಾನ''ಎಂಬ ಪದದಿಂದ ಹಿಂದೆ ಹೇಳಿದ ''ತತಂ'' ಎಂಬ ಪದದಿಂದ ಹೇಳಲ್ಪಟ್ಟ ಸರ್ವಗತತ್ವವು ಸಿದ್ಧವಾಯಿತೆಂದು ತಿಳಿಯಬೇಕು. ಅದರೂ ಸಹ ಭಗವಂತನಿಗೆ ಪ್ರಾದೇಶಪರಿಮಾಣವು ಹೇಗೆ ಕೂಡುತ್ತದೆ? ಎಂದರೆ, ಸರ್ವಗತನಾದರೂ ಅಂಗುಷ್ಠಪರಿಮಾಣವು ಹೇಗೆ ಬರುತ್ತದೋ ಅದರಂತೆ ಅಧಿಕಾರಿಯ ವಿವಕ್ಷೆಯಿಂದ ''ಹೃದ್ಯಪೇಕ್ಷಯಾ ತು'' ಎಂಬಲ್ಲಿ ಪ್ರಾದೇಶ ಪರಿಮಾಣವನ್ನು ಭಗವಂತನಿಗೆ ಸಮರ್ಥಿಸುತ್ತಾರೆ.

'ಪ್ರಾದೇಶಮಾತ್ರಂ' ಎಂಬ ಶ್ರುತಿಯನ್ನು ವಿವಕ್ಷಿಸಬೇಕು

भावदीपः – केचित् स्वदेहान्तर्हृदयावकाशे प्रादेशमात्रं पुरुषं वसन्तमित्यादिस्मृतेरिति भावः ।

ಕೆಲವರು ತಮ್ಮ ದೇಹದ ಹೃದಯಾಕಾಶದಲ್ಲಿ ಪ್ರಾದೇಶ ಪರಿಮಾಣದಿಂದ ವಾಸಿಸುವ ಪುರುಷನನ್ನು ''ಪ್ರಾದೇಶಮಾತ್ರಂ ಪುರುಷಂ ವಸಂತಂ'' ಇತ್ಯಾದಿ ಶ್ರುತಿಗಳಿರುವುದರಿಂದ ಯುಕ್ತವಾಗುತ್ತದೆಂದು ಹೇಳುತ್ತಾರೆ.

ಅಗ್ನಿಗೂ ವೈಶ್ವಾನರನಿಗೂ ಅಭೇದವಿಲ್ಲ

भावदीपः – यत्त्वत्र केनचिद् वैश्वानरो भूत्वेत्यत्र वैश्वानराग्न्यभेदादिवि कल्पपूर्वं दूषणमुक्तम्, तन्न । वैश्वानरनामको वैश्वानररूपविशेषो भूत्वेत्यर्थोक्तौ दोषाभावात् ।

ಕೆಲವರು 'ವೈಶ್ವಾನರ' ಎಂಬಲ್ಲಿ ವೈಶ್ವಾನರನಿಗೆ ಅಗ್ನಿಯಿಂದ ಅಭೇದವನ್ನು ಆಶಂಕಿಸಿ ದೋಷವನ್ನು ಹೇಳಿದ್ದಾರೆ. ಇದು ತಪ್ಪು. ''ವೈಶ್ವಾನರೋ ಭೂತ್ವಾ'' ಎಂಬಲ್ಲಿ ವೈಶ್ವಾನರನೆಂಬ ಹೆಸರುಳ್ಳ ಭಗವಂತನ ರೂಪವಿಶೇಷವೇ ಹೇಳಲ್ಪಟ್ಟಿದೆ. ಹೀಗೆ ಅರ್ಥೈಸಿದಾಗ ಯಾವುದೇ ದೋಷ ಇರುವುದಿಲ್ಲ.

ಸೂತ್ರದಲ್ಲಿ ಪ್ರಕರಣಾತ್ ಎಂದಷ್ಟೇ ಹೇಳಿದರೆ ಸಾಲದು

भावदीपः – यच्च तृतीये प्रकरणा!दित्येव वाच्ये असम्भवादित्युक्तिरयुक्तेति, तच्च न । प्रकरणस्य निरवकाशत्वोक्त्यर्थत्वात्तथोक्तेः ।

ಮೂರನೆಯ ಸೂತ್ರದಲ್ಲಿ ''ಪ್ರಕರಣಾತ್' ಎಂದಷ್ಟೇ ಹೇಳಬಹುದಾಗಿತ್ತು ''ಅಸಂಭವಾತ್'' ಎಂಬ ಪದವನ್ನು ಹೇಳಬೇಕಾಗಿರಲಿಲ್ಲವೆಂದು ಕೆಲವರು ಹೇಳುತ್ತಾರೆ. ಇದೂ ಸಹ ತಪ್ಪು. ಏಕೆಂದರೆ ಪ್ರಕರಣವು ನಿರವಕಾಶವಾಗಿದೆ ಎಂಬುದನ್ನು ತಿಳಿಸಲು ''ಅಸಂಭವಾಚ್ಚ'' ಎಂಬುದಾಗಿ ಹೇಳಿದ್ದಾರೆ.

ವೈಶ್ವಾನರನೇ ಪುರುಷ

भावदीपः – यच्च पुरुषसूक्तवैश्वानरविद्ययोर्भिन्नार्थत्वेन वैश्वानरस्य पुरुषविधत्वायोग इति, तन्न । टीकायामेव पूर्वं समाधानाद्

ಪುರುಷಸೂಕ್ತ ಹಾಗೂ ವೈಶ್ವಾನರವಿದ್ಯೆ ಇವೆರಡು ಬೇರೆಬೇರೆಯಾಗಿರುವುದರಿಂದ ವೈಶ್ವಾರನಿಗೆ ಪುರುಷರೂಪವು ಕೂಡುವುದಿಲ್ಲವೆಂದು ಹೇಳುತ್ತಾರೆ. ಇದೂ ಸಹ ತಪ್ಪು. ಏಕೆಂದರೆ, ಈ ವಿಷಯವನ್ನು ಈ ಹಿಂದೆ ಟೀಕೆಯಲ್ಲಿ ನಿರಾಕರಿಸಿದ್ದಾರೆ.

'ಬೇರೆಯವರು ಪ್ರತಿಪಾದ್ಯರಲ್ಲ' ಎಂಬುದನ್ನು ಅವಶ್ಯ ತಿಳಿಯಬೇಕು

भावदीपः – यदपि शब्दानां ब्रह्मणि समन्वयेऽप्यन्यत्र वृत्तेः सूत्रे प्रतिषिद्धत्वा-भावेनान्यत्र व्यवहारविरोधशङ्कानुदयात्तत्समाधानार्थं साक्षादित्यादिपञ्चसूत्री व्यर्थेत्यादि । तदप्यसारम् । प्रतिनयं तत्त्वित्यध्याहारेणान्यत्र वृत्तेः प्रतिषिद्धत्वात् । अतो यथा भाष्यटीकायामुक्त एव सूत्रार्थः समञ्जस इति।।

।। इति श्रीराघवेन्द्रयतिकृते भावदीपे वैश्वनराधिकरणम् ।।

ಎಲ್ಲಾ ಸೂತ್ರಗಳಲ್ಲಿ ಶಬ್ದಗಳು ಬ್ರಹ್ಮನಲ್ಲಿ ಸಮನ್ವಯವಾಗುತ್ತಿವೆಯೆಂದಷ್ಟೇ ಹೇಳುತ್ತಿದ್ದಾರೆ; ಬೇರೆ ಕಡೆ ಶಬ್ದಗಳು ಬರುವುದೇ ಇಲ್ಲವೆಂದು ಎಲ್ಲಿಯೂ ನಿಷೇಧ ಮಾಡಿಲ್ಲ. ಹೀಗಿರುವಾಗ ವ್ಯವಹಾರವಿರೋಧದ ಶಂಕೆಗೆ ಅವಕಾಶವಿಲ್ಲದ್ದರಿಂದ ಅದನ್ನು ಸಮಾಧಾನ ಮಾಡುವುದಕ್ಕಾಗಿ

''ಸಾಕ್ಷಾತ್'' ಇತ್ಯಾದಿಯಾದ ಐದು ಸೂತ್ರಗಳು ಹೊರಟ್ಟಿದ್ದು ವ್ಯರ್ಥವಲ್ಲವೇ? ಎಂದು ಆಕ್ಷೇಪಿಸಬಹುದು. ಇದೂ ಸಹ ತಪ್ಪು. ಪ್ರತಿಯೊಂದು ಅಧಿಕರಣಗಳಲ್ಲಿಯೂ, 'ತತ್ತು' ಎಂಬ ಪದದ ಅಧ್ಯಾಹಾರವಿರುವುದರಿಂದ ವಿಷ್ಣು ಒಬ್ಬನೇ ಆಯಾ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ ಬೇರೆಯವರು ಪ್ರತಿಪಾದ್ಯರಾಗುವುದಿಲ್ಲವೆಂದು ನಿಷೇಧ ಮಾಡಲಾಗಿದೆ. ಆದ್ದರಿಂದ ಭಾಷ್ಯ ಹಾಗೂ ಟೀಕೆಗಳಲ್ಲಿ ವ್ಯಾಖ್ಯಾನ ಮಾಡಿದ ಅರ್ಥವೇ ಸೂತ್ರಗಳ ನಿಜವಾದ ಅರ್ಥವಾಗಿದೆ, ಅತ್ಯಂತ ಸಮಂಜಸವೂ ಆಗಿದೆ.

॥ ಇಲ್ಲಿ ಶ್ರೀಮದ್ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ ಗ್ರಂಥದ ಕನ್ನಡಾನುವಾದದಲ್ಲಿ ಮೊದಲನೆಯ ಅಧ್ಯಾಯದ ಎರಡನೆಯ ಪಾದವು ಸಮಾಪ್ತವಾಯಿತು.॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

ತಂತ್ರದೀಪಿಕೆಯಲ್ಲಿ ವೈಶ್ವಾನರಾಧಿಕರಣದ ಸೂತ್ರಗಳು

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

प्रणम्य गुणसम्पूर्णं दोषातीतं रमापतिम् ।

पूर्णबोधं गुरूनन्यान् कुर्मः सूत्रार्थसङ्ग्रहम् ।।

प्रथमाध्यायस्य द्वितीयः पादः

वैश्वानराधिकरणम् (१।२।७)

।। वैश्वानरः साधारणशब्दविशेषात् ।। १-२-२४ ।।

अत्र नये पाचकत्वाद्यनेकलिङ्गयुतं वैश्वानरनाम समन्वीयते ।

ಈ ಅಧಿಕರಣದಲ್ಲಿ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳಿಂದ ಕೂಡಿರುವ 'ವೈಶ್ವಾನರ' ಎಂಬ ನಾಮಾತ್ಮಕಶಬ್ದವನ್ನು ಸಮನ್ವಯಮಾಡುತ್ತಿದ್ದಾರೆ.

तत्त्वित्यस्ति । ''आत्मानं वैश्वानरमुपास्ते'', ''अयमग्निर्वैश्वानरः''इत्यादौ श्रुतो वैश्वानरो ब्रह्मैव न त्वग्निः । कुतः? साधारणशब्दस्य अग्नाविष्णुसाधारणस्यापि वैश्वानरशब्दस्य विशेषादात्मपदेन विशेषणादित्यर्थः।

ಈ ಸೂತ್ರದಲ್ಲಿ 'ತತ್ತು' ಎಂಬ ಪದಗಳು ಅನುವೃತ್ತವಾಗುತ್ತವೆ. 'ಆತ್ಮಾನಂ ವೈಶ್ವಾನರಮುಪಾಸ್ತೇ' 'ಅಯಮಗ್ನಿರ್ವೈಶ್ವಾನರಃ' ಇತ್ಯಾದಿ ವಾಕ್ಯಗಳಲ್ಲಿ ಶ್ರುತನಾದ ವೈಶ್ವಾನರನು ಬ್ರಹ್ಮನೇ ಆಗಿದ್ದಾನೆ; ಹೊರತು ಅಗ್ನಿಯಲ್ಲ. ಏಕೆಂದರೆ, ಸಾಧಾರಣಶಬ್ದಸ್ಯ = ಅಗ್ನಿ ಮತ್ತು ವಿಷ್ಣು ಇಬ್ಬರಲ್ಲಿಯೂ ವೈಶ್ವಾನರಶಬ್ದವು ಸಮಾನವಾಗಿರಬಹುದು. ಆದರೆ ಆ ವೈಶ್ವಾನರಶಬ್ದಕ್ಕೆ ವಿಶೇಷಾತ್ = ಆತ್ಮಪದವು ವಿಶೇಷಣವಾಗಿರುವುದರಿಂದ ಎಂದು.

आत्मशब्दः अग्नावमुख्योऽपि युज्यत इत्यतः समाख्यामाह -

।। स्मर्यमाणमनुमानं स्यादिति ।। १-२-२५ ।।

ಆತ್ಮಶಬ್ದವು ಅಗ್ನಿಯಲ್ಲಿ ಅಮುಖ್ಯವಾಗಿದ್ದರೂ ಸಹ ಅಮುಖ್ಯಪ್ರಯೋಗವನ್ನು ಮಾಡಬಹುದಲ್ಲವೇ ಎಂಬ ಆಕ್ಷೇಪಕ್ಕೆ ಸಮಾಧಾನ ನೀಡಲು ಸಮಾಖ್ಯಾಪ್ರಮಾಣವನ್ನು ಹೇಳುತ್ತಿದ್ದಾರೆ. ''ಸ್ಮರ್ಯಮಾಣಂ ಅನುಮಾನಂ ಸ್ಯಾದಿತಿ''.

वैश्वानरो ब्रह्मेत्यस्ति । तेन इतिशब्दान्वयः । अनुमीयतेऽनेनेत्यनुमानम्। ''अहं वैश्वानरः'' इति गीतायां स्मर्यमाणं विष्णोवैश्वानरत्वमत्रापि स एव वैश्वानर इत्यस्यानुमापकं स्यादित्यर्थः ।

'ವೈಶ್ವಾನರಃ ಬ್ರಹ್ಮ' ಎಂಬ ಎರಡು ಪದಗಳನ್ನು ಅನುವೃತ್ತಿಮಾಡಿಕೊಳ್ಳಬೇಕು. ಇವುಗಳ ಜೊತೆಗೆ ಇತಿ ಶಬ್ದವು ಅನ್ವಯವನ್ನು ಹೊಂದುತ್ತದೆ. ಯಾವುದರಿಂದ ಅನುಮಾನಮಾಡಲ್ಪಡುತ್ತದೋ ಅದು 'ಅನುಮಾನ' ಎನಿಸುತ್ತದೆ. 'ಅಹಂ ವೈಶ್ವಾನರಃ' ಎಂಬುದಾಗಿ ಗೀತೆಯಲ್ಲಿ ವಿಷ್ಣುವಿಗೆ ಹೇಳಲ್ಪಟ್ಟ ವೈಶ್ವಾನರತ್ವವೇ ವೈಶ್ವಾನರಪ್ರಕರಣದಲ್ಲಿಯೂ ಸಹ ವೈಶ್ವಾನರನು ವಿಷ್ಣುವೇ ಆಗಿದ್ದಾನೆ ಎಂಬುದಕ್ಕೆ ಅನುಮಾಪಕವಾಗಿದೆ ಎಂದರ್ಥ.

''अहं वैश्वानरः'' इति स्मृतिसमाख्यानादिति भावः ।

'ಅಹಂ ವೈಶ್ವಾನರಃ' ಎಂಬ ಗೀತಾಸ್ಮೃತಿರೂಪಸಮಾಖ್ಯಾಪ್ರಮಾಣವಿರುವುದರಿಂದ ವೈಶ್ವಾನರ-ವಿದ್ಯೆಯಲ್ಲಿ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಯಿತು.

उक्तमाक्षिप्याह -

।। शब्दादिभ्योऽन्तः प्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते ।। १-२-२६ ।।

ಹಿಂದೆ ಹೇಳಿದ್ದನ್ನು ಆಕ್ಷೇಪಮಾಡಿ ಸಮಾಧಾನವನ್ನು ನೀಡುವ ಸೂತ್ರವನ್ನು ಪಠಿಸುತ್ತಿದ್ದಾರೆ. 'ಶಬ್ದಾದಿಭ್ಯೋಽಂತಃಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾತ್ ಪುರುಷವಿಧಮಪಿ ಚೈನಮಧೀಯತೇ''.

आदिपदाल्लिङ्गानि । अन्तःप्रतिष्ठानेन तत्कर्मोपलक्ष्यते । ''अयमग्निः'' इत्याद्यग्निशब्दात् ''वैश्वानरे तद् हुतम्'' इति ''हृदयं गार्हपत्यम्'' इत्यादिना होमाद्याधारत्वगार्हपत्याद्यङ्गत्वलिङ्गेभ्यो ''योऽयमन्तःपुरुषे'', ''येनेदमन्नं पच्यते'' इत्यन्तःप्रतिष्ठानेन पचनव्यापारात् पाचकत्वेनान्तः-प्रतिष्ठानादिति वा वैश्वानरो न ब्रह्मेति चेत् ।

'ಶಬ್ದಾದಿಭ್ಯಃ' ಎಂಬಲ್ಲಿರುವ ಆದಿಪದದಿಂದ ಲಿಂಗಗಳನ್ನು ವಿವಕ್ಷಿಸಬೇಕು. 'ಅಯಮಗ್ನಿರ್ವೈಶ್ವಾನರಃ ಯೋಽಯಮಂತಃಪುರುಷೇ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಅಂತಃಪ್ರತಿಷ್ಠಾನದಿಂದ ಅಗ್ನಿಯ ಕಾರ್ಯವನ್ನು ಉಪಲಕ್ಷಣಯಾ ವಿವಕ್ಷಿಸಬೇಕು. ಅಯಮಗ್ನಿಃ ಎಂಬಲ್ಲಿ ಅಗ್ನಿಶಬ್ದದಿಂದ 'ವೈಶ್ವಾನರೇ ತದ್ಧುತಂ ಭವತಿ' ಎಂಬುದಾಗಿ ಮತ್ತು 'ಹೃದಯಂ ಗಾರ್ಹಪತ್ಯೇ' ಎಂಬುದರಿಂದ ಹೇಳಲ್ಪಟ್ಟ ಹೋಮಾದ್ಯಾಧಾರತ್ವ ಗಾರ್ಹಪತ್ಯಾದ್ಯಂಗತ್ವ ಮೊದಲಾದ ಲಿಂಗಗಳಿಂದ ಮತ್ತು 'ಯೋಽಯಮಂತಃಪುರುಷೇ ಯೇನೇದಮನ್ನಂ ಪಚ್ಯತೇ' ಎಂಬುದಾಗಿ ಅಂತಃಪ್ರತಿಷ್ಠಿತನಾಗಿ ಮಾಡಲ್ಪಡುವ ಪಚನಕ್ರಿಯೆಯೆಂಬ ವ್ಯಾಪಾರದಿಂದ ಅಥವಾ ಪಾಚಕನಾಗಿ ಅಂತಃಪ್ರತಿಷ್ಠಿತ- ನಾಗಿರುವುದರಿಂದ ವೈಶ್ವಾನರನು ಬ್ರಹ್ಮನಾಗಲು ಸಾಧ್ಯವಿಲ್ಲವೆಂದು ಆಕ್ಷೇಪ.

न । कुतः? तथा अग्न्यादिनामलिङ्गकर्मवत्त्वेन दृष्ट्युपदेशाद् उपासनोपदेशात् तेषां सावकाशत्वादिति भावः । दृष्टिपदात् नाविद्यमानध्यानमिति सूचितम् ।

ಇದು ಸರಿಯಲ್ಲ. ಏಕೆಂದರೆ, ತಥಾ = ಅಗ್ನ್ಯಾದಿನಾಮಗಳು ಲಿಂಗ ಮತ್ತು ಕ್ರಿಯೆ ಇವುಗಳು ವಿಷ್ಣುವಿನಲ್ಲಿಯೇ ಯುಕ್ತವಾಗುತ್ತವೆ. ಏಕೆಂದರೆ, ತಥಾ ದೃಷ್ಟ್ಯುಪದೇಶಾತ್ = ಉಪಾಸನೆಯನ್ನು

ಉಪದೇಶಿಸುವುದಕ್ಕಾಗಿ ಹಾಗೆ ಹೇಳಿರುತ್ತಾರೆ. ಅಗ್ನ್ಯಾದಿನಾಮಗಳು, ಲಿಂಗಗಳು ಮತ್ತು ಕ್ರಿಯೆಗಳು ಹೀಗೆ ವಿಷ್ಣುವಿನಲ್ಲಿ ಸಾವಕಾಶವಾಗಿವೆಯೆಂದು ತಿಳಿಯಬೇಕು. ದೃಷ್ಟಿಪದದಿಂದ ಇಲ್ಲದಿರುವ ವಿಷಯವನ್ನು ಧ್ಯಾನಮಾಡಲು ಸಾಧ್ಯವಿಲ್ಲವೆಂದು ಸೂಚಿಸಿದ್ದಾರೆ.

किञ्च ''को न आत्मा किं ब्रह्म'' इत्युपक्रमोक्तात्मत्वाद्यसम्भवात् । ब्रह्मप्रकरणाच्चेति यावत् । अपि किञ्चेत्यर्थः ।

ಮತ್ತು 'ಕೋ ನ ಆತ್ಮಾ ಕಿಂ ಬ್ರಹ್ಮ' ಎಂಬುದಾಗಿ ಉಪಕ್ರಮದಲ್ಲಿ ಹೇಳಿರುವ ಆತ್ಮತ್ವಾದಿಗಳು ಅಯುಕ್ತವಾದ್ದರಿಂದ ಮತ್ತು ಬ್ರಹ್ಮಪ್ರಕರಣವಾಗಿರುವುದರಿಂದ ಎಂದು ಅಭಿಪ್ರಾಯ. ಅಪಿ = ಅಷ್ಟೇ ಅಲ್ಲದೆ ಎಂದರ್ಥ.

एनं वैश्वानरं पुरुषविधं पुरुषो यद्विधस्तद्विधमधीयते छन्दोगा यतोऽतोऽपीति योज्यम् ।

ಏನಂ = ಈ ವೈಶ್ವಾನರನನ್ನು, ಪುರುಷವಿಧಂ = ಪುರುಷನು ಯಾವ ವಿಧದಲ್ಲಿದ್ದಾನೋ ಆ ವಿಧದಲ್ಲಿ, ಅಧೀಯತೇ = ಛಂದೋಗರು ಯಾವ ಕಾರಣದಿಂದ ಅಧ್ಯಯನ ಮಾಡುತ್ತಾರೋ ಆ ಕಾರಣದಿಂದ ಎಂದು ಯೋಜನೆ ಮಾಡಿಕೊಳ್ಳಬೇಕು.

''शीर्ष्णो द्यौः समवर्तत'' इत्यादिना पुरुषसूक्तोक्तपुरुषविधमेवैनं ''मूर्धैव सुतेजाः'' इत्यादिना अधीयत इति तत्समाख्यानादपीत्यर्थः । चशब्दः पुरुषसूक्तस्य वैष्णवत्वप्रसिद्धिद्योतकः ।

'ಶೀರ್ಷ್ಣೋ ದ್ಯೌಃ ಸಮವರ್ತತ' ಇತ್ಯಾದಿಯಾಗಿ ಪುರುಷಸೂಕ್ತದಲ್ಲಿ ಹೇಳಲ್ಪಟ್ಟಿರುವ ಪುರುಷನಂತೆಯೇ ಈ ವೈಶ್ವಾನರನೂ ಸಹ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ಇರುತ್ತಾನೆಂದು ಅಧ್ಯಯನ ಮಾಡುತ್ತಾರೆ. ಆದ್ದರಿಂದ ಪುರುಷಸೂಕ್ತದ ಸಮಾಖ್ಯಾಪ್ರಮಾಣದಿಂದಲೂ ಸಹ ಎಂದು ಅರ್ಥ. ಚಶಬ್ದವು ಪುರುಷಸೂಕ್ತಕ್ಕೆ ವೈಷ್ಣವತ್ವಪ್ರಸಿದ್ಧಿಯನ್ನು ಸೂಚಿಸುತ್ತದೆ.

अन्तःप्रतिष्ठानस्य कर्मत्वाद् पृथगुक्तिः । तत्वप्रदीपे तु प्रधानलिङ्गत्वात् पृथगुक्तमित्युक्तम् । तथा चेतोऽर्पणेत्यत्र प्रसिद्धशब्दत्यागे प्रयोजनोक्तिः । इह तु शब्दादेः सावकाशत्वोक्तिरिति मेदः ।।

ಅಂತಃಪ್ರತಿಷ್ಠಾನವು ಕ್ರಿಯಾರೂಪವಾಗಿದೆ. ಆದ್ದರಿಂದ ಪ್ರತ್ಯೇಕವಾಗಿ ಹೇಳಿದ್ದಾರೆ. ತತ್ವಪ್ರದೀಪದಲ್ಲಾದರೋ ಪ್ರಧಾನಲಿಂಗವಾದ್ದರಿಂದ ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆಂದು ಹೇಳಿದ್ದಾರೆ.

'ತಥಾ ಚೇತೋऽರ್ಪಣ' ಎಂಬಲ್ಲಿ ಪ್ರಸಿದ್ಧಶಬ್ದವನ್ನು ಪರಿತ್ಯಾಗಮಾಡಲು ಪ್ರಯೋಜನವನ್ನು ಹೇಳಿದ್ದಾರೆ. ಆದರೆ ಇಲ್ಲಿ ಶಬ್ದ ಮೊದಲಾದವುಗಳಿಗೆ ಸಾವಕಾಶತ್ವವನ್ನು ಹೇಳಲಾಗಿದೆಯೆಂದು ಎರಡು ಸೂತ್ರಗಳಿಗೂ ವೈಲಕ್ಷಣ್ಯವಿದೆ.

प्रसिद्धेर्देवता भूतं च किं न स्यादित्यत आह -

।। अत एव न देवता भूतं च ।। १-२-२७ ।।

ಪ್ರಸಿದ್ಧಿಯ ಕಾರಣದಿಂದ ಅಗ್ನಿದೇವತೆಯಾಗಲೀ, ಜಡವಾದ ಅಗ್ನಿಯಾಗಲೀ, ಏಕೆ ವೈಶ್ವಾನರನೆನಿಸಬಾರದು? ಎಂಬ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಿದ್ದಾರೆ. 'ಅತ ಏವ ನ ದೇವತಾ ಭೂತಂ ಚ'

आत्मशब्दादिति हेतोरेवाग्निर्देवता तेजोभूतं च वैश्वानरो न भवतीत्यर्थः ।

ಸೂತ್ರಾರ್ಥ ಹೀಗಿದೆ. ಆತ್ಮಶಬ್ದ ಮೊದಲಾದ ಹೇತುವಿನಿಂದಲೇ ಅಗ್ನಿದೇವತೆಯಾಗಲೀ ಜಡವಾದ ತೇಜಸ್ಸಿನ ರೂಪದಲ್ಲಿರುವ ಅಗ್ನಿಯಾಗಲೀ ವೈಶ್ವಾನರವಲ್ಲವೆಂದು ಅರ್ಥ.

अग्न्यादिशब्दानां ब्रह्मैकवाचित्वेऽग्न्यादौ व्यवहारविरोधः फलाभावादित्यत आह -

।। साक्षादप्यविरोधं जैमिनिः ।। १-२-२८ ।।

ಅಗ್ನ್ಯಾದಿಶಬ್ದಗಳು ಕೇವಲ ಬ್ರಹ್ಮನನ್ನು ಪ್ರತಿಪಾದಿಸುವುದಾದರೆ ನಿಷ್ಫಲವಾಗುತ್ತವೆ. ಆದ್ದರಿಂದ ಅಗ್ನ್ಯಾದಿಗಳಲ್ಲಿ ವ್ಯವಹಾರಮಾಡುವುದರ ವಿರೋಧಬರುತ್ತದಲ್ಲವೇ? ಈ ಆಕ್ಷೇಪಕ್ಕೆ ಸಮಾಧಾನವನ್ನು ನೀಡುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. 'ಸಾಕ್ಷಾದಪ್ಯವಿರೋಧಂ ಜೈಮಿನಿಃ'.

वाच्यार्थधीव्यवहितं लक्षणादिकं विना साक्षात् मुख्यवृत्त्या ब्रह्मणः अग्न्यादिशब्दार्थत्वेऽप्यन्यत्र व्यवहाराविरोधं जैमिनिराहेत्यर्थः । हानाद्यर्थत्वादिति भावः ।

ಸೂತ್ರಾರ್ಥ ಹೀಗಿದೆ -- ವಾಚ್ಯಾರ್ಥಜ್ಞಾನದಿಂದ ತಡೆಯಲ್ಪಟ್ಟ ಲಕ್ಷಣಾ ಮೊದಲಾದವುಗಳಿಲ್ಲದೆ ಸಾಕ್ಷಾತ್ = ಮುಖ್ಯವೃತ್ತಿಯಿಂದ ಬ್ರಹ್ಮನು ಅಗ್ನಿ ಮೊದಲಾದ ಪದಗಳ ಅರ್ಥನಾಗಿದ್ದಾನೆ. ಆದರೂ ಸಹ ಬೇರೆ ಕಡೆ ವ್ಯವಹಾರವನ್ನು ಮಾಡುವುದಕ್ಕಾಗಿ ಪ್ರಯೋಗಿಸಲಾಗಿದೆಯೆಂದು ಜೈಮಿನಿ ಋಷಿಗಳು ಹೇಳುತ್ತಾರೆಂದರ್ಥ. ಪರಿತ್ಯಾಗಮಾಡುವಿಕೆ, ಸ್ವೀಕರಿಸುವಿಕೆ ಮೊದಲಾದ ಪ್ರಯೋಜನಗಳಿರುವುದರಿಂದ ವ್ಯವಹಾರವು ನಿಷ್ಫಲವಲ್ಲವೆಂದು ಅಭಿಪ್ರಾಯ.

अग्न्यादिशब्दानां ब्रह्मणि मुख्यत्वे सूक्तादिव्यवस्था न स्यादित्यत आह -

।। अभिव्यक्तेरित्याश्मरथ्यः ।। १-२-२९।।

ಅಗ್ನಿಮೊದಲಾದ ಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿ ಇರುತ್ತವೆಂದು ಹೇಳುವುದಾದರೆ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಮೊದಲಾದ ವ್ಯವಸ್ಥೆಗಳು ತಪ್ಪಾಗುತ್ತವಲ್ಲವೇ? ಎಂಬ ಆಕ್ಷೇಪಕ್ಕೆ ಉತ್ತರಿಸುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ '.

अग्न्यादिसूक्तादिनियम इति शेषः । अग्न्यादिसूक्तादिभिर्ब्रह्मोपास्तावग्न्यादिष्वेव तस्याभिव्यक्तेरिति भावेनाग्न्यादिसूक्तादिनियम इत्याश्मरथ्यो मन्यत इत्यर्थः ।

ಸೂತ್ರಾರ್ಥ ಹೀಗಿದೆ -- ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ನಿಯಮವು ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಅಗ್ನ್ಯಾದಿಸೂಕ್ತಗಳಿಂದ ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನ್ಯಾದಿಗಳಲ್ಲಿಯೇ ಬ್ರಹ್ಮನ ಅಭಿವ್ಯಕ್ತಿಯಾಗುತ್ತದೆಂಬ ಅಭಿಪ್ರಾಯದಿಂದ ಅಗ್ನ್ಯಾದಿಸೂಕ್ತ ಮೊದಲಾದ ನಿಯಮವು ಇರುತ್ತದೆಂದು ಆಶ್ಮರಥ್ಯಾಚಾರ್ಯರು ತಿಳಿಯುತ್ತಾರೆಂದರ್ಥ.

प्रकारान्तरेण व्यवस्थामाह -

।। अनुस्मृतेर्बादरिः ।। १-२-३० ।।

ಮತ್ತೊಂದು ಪ್ರಕಾರದಿಂದ ಸೂಕ್ತವ್ಯವಸ್ಥೆಯನ್ನು ಹೇಳಲು ಮುಂದಿನ ಸೂತ್ರವು ಹೊರಟಿದೆ 'ಅನುಸ್ಮೃತೇರ್ಬಾದರಿಃ '

तत्तत्सूक्ताद्युपासकैरग्न्यादिष्वेव ब्रह्मणोऽनुस्मृतेर्हेतोः सूक्तादिव्यवस्थेति बादरिर्मन्यते । अनुस्मृतेः पूर्वत्वेऽयभिव्यक्त्यनन्तरमपि सा कार्येति द्योतयितुं तदनन्तरमुक्तिः ।

ಆಯಾ ಸೂಕ್ತಗಳ ಉಪಾಸನೆ ಮಾಡುವುದರಿಂದ ಅಗ್ನ್ಯಾದಿಗಳಲ್ಲಿಯೇ ಬ್ರಹ್ಮನನ್ನು ಧ್ಯಾನಮಾಡಬೇಕು ಎಂಬ ಕಾರಣದಿಂದ ಸೂಕ್ತಾದಿಗಳ ವ್ಯವಸ್ಥೆಯು ಯುಕ್ತವಾಗಿದೆಯೆಂದು ಶುಕಾಚಾರ್ಯರು ತಿಳಿಯುತ್ತಾರೆ. ಅಭಿವ್ಯಕ್ತಿಗಿಂತ ಅನುಸ್ಮೃತಿಯನ್ನು ಮೊದಲು ಹೇಳಬೇಕಿತ್ತು; ಆದರೂ ಸಹ ಅಭಿವ್ಯಕ್ತಿಯ ಅನಂತರವೂ ಸಹ ಅನುಸ್ಮೃತಿಯನ್ನು ಮಾಡಬಹುದೆಂದು ಸೂಚಿಸುವುದಕ್ಕಾಗಿ ಮೊದಲು ಅಭಿವ್ಯಕ್ತಿಯನ್ನು ಹೇಳಿರುತ್ತಾರೆ.

निमित्तान्तरमाह -

।। सम्पत्तेरिति जैमिनिस्तथा हि दर्शयति ।। १-२-३१ ।।

ಮತ್ತೊಂದು ಕಾರಣವನ್ನು ಹೇಳುವ ಸೂತ್ರ ಹೀಗಿದೆ - 'ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ'

अग्न्यादिसूक्ताद्युपासकानामग्न्यादिप्राप्तेर्निमित्तादिति भावेन सूक्तादिनियम इति जैमिनिर्मन्यते । तदुपास्तौ तत्प्राप्तिः कुतः? तथा हि दर्शयति । ''तं यथा यथोपासते तदेव भवति'' इति हि प्रसिद्धा श्रुतिः जैमिनिमतं यथा तथा दर्शयतीत्यर्थः। भवतीत्यस्य प्राप्नुवन्तीत्यर्थः।

ಅಗ್ನ್ಯಾದಿ ಸೂಕ್ತಗಳಿಂದ ಉಪಾಸನೆ ಮಾಡುವವರಿಗೆ ಅಗ್ನ್ಯಾದಿಗಳ ಪ್ರಾಪ್ತಿಯಾಗುತ್ತದೆ. ಈ ಕಾರಣದಿಂದ ಸೂಕ್ತಾದಿಗಳ ನಿಯಮವು ಯುಕ್ತವಾಗುತ್ತದೆಂದು ಜೈಮಿನಿ ಋಷಿಗಳು ತಿಳಿಯುತ್ತಾರೆ. ಅಗ್ನ್ಯಾದಿ ಸೂಕ್ತಗಳಿಂದ ಉಪಾಸನೆ ಮಾಡಿದರೆ ಅಗ್ನ್ಯಾದಿಗಳು ದೊರೆಯುತ್ತಾರೆಂದು ಹೇಗೆ ತಿಳಿಯುತ್ತದೆ? ಎಂಬ ಪ್ರಶ್ನೆಗೆ 'ತಥಾ ಹಿ ದರ್ಶಯತಿ' ಎಂದು ಉತ್ತರಿಸಿದ್ದಾರೆ. ಅಂದರೆ ತಂ ಯಥಾ ಯಥಾ ಉಪಾಸತೇ ತದೇವ ಭವತಿ ಎಂದು ಪ್ರಸಿದ್ಧವಾದ ಶ್ರುತಿಯು ಜೈಮಿನಿಯ ಅಭಿಪ್ರಾಯವನ್ನು ಸಮ್ಮತಿಸುತ್ತದೆ. ಭವತಿ ಎಂಬುದಕ್ಕೆ ಹೊಂದುತ್ತಾರೆ ಎಂಬರ್ಥವು ಅರ್ಥಾತ್ ಸಿದ್ಧವಾಗುತ್ತದೆ.

ब्रह्मोपास्तावग्न्यादिप्राप्तिः कथमित्यत आह -

।। आमनन्ति चैनमस्मिन् ।। १-२-३२ ।।

ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನ್ಯಾದಿಗಳು ದೊರೆಯುತ್ತಾರೆಂದು ಹೇಗೆ ಹೇಳಲು ಸಾಧ್ಯ ? ಎಂಬ ಪ್ರಶ್ನೆಗೆ ಸಮಾಧಾನ ನೀಡಲು ಮುಂದಿನ ಸೂತ್ರ ಹೊರಟಿದೆ. 'ಆಮನಂತಿ ಚೈನಮಸ್ಮಿನ್'

चशब्दः शङ्काव्यावर्तकः । एनं विष्णुमस्मिन्नग्न्यादौ । तस्य देवता भूतश्चेति प्रकृतत्वात् । ''योऽग्नौ तिष्ठन्'' इत्यादिना आमनन्ति श्रुतय इत्यर्थः । अग्न्यादिप्राप्तिपदेन तत्स्थब्रह्मप्राप्तेर्विवक्षितत्वादिति भावः । श्रुत्यनुसारादेनमिति पुंनिर्देशः ।

ಸೂತ್ರದಲ್ಲಿರುವ ಚಶಬ್ದವು ಆಕ್ಷೇಪವನ್ನು ವ್ಯಾವೃತ್ತಿ ಮಾಡುತ್ತಿದೆ. ಏನಂ = ವಿಷ್ಣುವನ್ನು ಅಸ್ಮಿನ್ = ಅಗ್ನ್ಯಾದಿಗಳಲ್ಲಿ. ಅಗ್ನ್ಯಾದಿಗಳು ದೇವತಾಭೂತಂ ಚ ಎಂಬುದಾಗಿ ಪ್ರಸಕ್ತರಾಗಿರುವುದರಿಂದ 'ಯೋಽಗ್ನೌ ತಿಷ್ಠನ್' ಇತ್ಯಾದಿಯಾಗಿ ಆಮನಂತಿ = ಶ್ರುತಿಗಳು ಹೇಳುತ್ತವೆ ಎಂದರ್ಥ. ಅಗ್ನ್ಯಾದಿಪ್ರಾಪ್ತಿ ಎಂಬ ಪದದಿಂದ ಅಗ್ನ್ಯಾದಿಗಳಲ್ಲಿರುವ ಬ್ರಹ್ಮನ ಪ್ರಾಪ್ತಿಯೇ ವಿವಕ್ಷಿತವಾಗಿದೆಯೆಂದು ಅಭಿಪ್ರಾಯ. ಶ್ರುತಿಯನ್ನು ಅನುಸರಿಸಿ ಏನಂ ಎಂಬುದಾಗಿ ಪುಲ್ಲಿಂಗ ಪ್ರಯೋಗವನ್ನು ಮಾಡಿದ್ದಾರೆ.

जैमिन्याद्युक्तिस्तेषां प्रसिद्ध्यर्था । शब्दानां लोकव्यवहाराविरोधं वदन् सूक्तादिनियमं चाहेति जैमिनेर्द्विरुपादानम् ।।७।।

ಜೈಮಿನ್ಯಾದಿಗಳನ್ನು ಸೂತ್ರಕಾರರು ಏಕೆ ಉಲ್ಲೇಖಿಸಿದ್ದಾರೆಂದರೆ, ಶಿಷ್ಯರನ್ನು ಪ್ರಸಿದ್ಧಿಪಡಿಸುವುದಕ್ಕಾಗಿ. ಶಬ್ದಗಳಿಗೆ ಲೋಕವ್ಯವಹಾರದ ವಿರೋಧವಿಲ್ಲವೆಂದು ಹೇಳುತ್ತಾ, ಸೂಕ್ತಾದಿಗಳ ನಿಯಮವನ್ನೂ ಸಹ ಹೇಳುತ್ತಾರೆಂಬ ಕಾರಣದಿಂದ ಜೈಮಿನಿಗಳನ್ನು ಎರಡು ಬಾರಿ ಸೂತ್ರಕಾರರು ಉಲ್ಲೇಖಿಸಿದ್ದಾರೆ.

अत्राद्यनये विष्णोस्सर्वशक्तिप्रबोधकत्वं सर्वगतस्याप्यल्पस्थानस्थितत्वं च। अत्तेति नयेऽदनक्रिया । गुहानये सारभोक्तृत्वमेकस्याप्यनेकत्वं च । अन्तरनये ब्रह्मादेरीशं विना स्वावरनेतृत्वायोगः । अन्तर्यामिनये सर्वस्य

तच्छीर्यत्वात् तत्तन्त्रत्वाद्वा तच्छरीरत्वम् । अदृश्यत्वनये गोत्राद्यभावस्येशाख्यधर्मितो भेदेऽपि दृश्याद्यन्योन्याभावस्य तत्स्वरूपत्वं सिद्धम् । अन्त्यनये सूक्तादिव्यवस्थेत्यादि ध्येयम्।।

इति श्रीमद्राघवेन्द्रयतिकृतायां तन्त्रदीपिकायां प्रथमाध्यायस्य द्वितीयः पादः

ಈ ಪಾದದ ಮೊದಲನೆಯ ಅಧಿಕರಣದಲ್ಲಿ ವಿಷ್ಣುವಿಗೆ ಸರ್ವಶಕ್ತಿಪ್ರಬೋಧಕತ್ವ ಎಂಬ ಧರ್ಮವನ್ನು ಮತ್ತು ಸರ್ವಗತನಾದರೂ ಸಹ ಅಲ್ಪಸ್ಥಾನಸ್ಥಿತನಾಗಿದ್ದಾನೆಂದು ಹೇಳಲಾಗಿದೆ. ಅತ್ಯತ್ವಾಧಿಕರಣದಲ್ಲಿ ಅದನರೂಪ ಕ್ರಿಯೆಯನ್ನು ಸಮನ್ವಯ ಮಾಡಲಾಗಿದೆ. ಗುಹಾಧಿಕರಣದಲ್ಲಿ ಸಾರಭೋಕ್ತೃತ್ವವನ್ನು ಹಾಗೂ ಒಬ್ಬನಿಗೇ ಅನೇಕತ್ವವನ್ನೂ ಸಹ ಹೇಳಲಾಗಿದೆ.

ಅಂತರಾಧಿಕರಣದಲ್ಲಿ ಪರಮಾತ್ಮನನ್ನು ಬಿಟ್ಟು ಬ್ರಹ್ಮಾದಿಗಳಿಗೆ ತಮಗಿಂತ ನೀಚರನ್ನು ಪ್ರೇರಣೆ ಮಾಡುವ ಶಕ್ತಿಯು ಇಲ್ಲವೆಂದು ನಿರೂಪಿಸಲಾಗಿದೆ. ಅಂತರ್ಯಾಮ್ಯಧಿಕರಣದಲ್ಲಿ ಎಲ್ಲವೂ ಸಹ ಭಗವಂತನಿಂದ ನಾಶವಾಗುವುದರಿಂದ ಅಥವಾ ಅವನ ಅಧೀನವಾಗುವುದರಿಂದ ಅವನ ಶರೀರವಾಗಿದೆಯೆಂದು ನಿರೂಪಿಸಲಾಗಿದೆ. ಅದೃಶ್ಯತ್ವಾಧಿಕರಣದಲ್ಲಿ ಗೋತ್ರಾದ್ಯಭಾವರೂಪ ಧರ್ಮವು ಭಗವಂತನೆಂಬ ಧರ್ಮಿಯಿಂದ ಭಿನ್ನವಾಗಿದ್ದರೂ ದೃಶ್ಯಾದಿಗಳ ಭೇದರೂಪಧರ್ಮವು ಪರಮಾತ್ಮನ ಸ್ವರೂಪವೆಂದು ಸಾಧಿಸಲಾಗಿದೆ. ಕೊನೆಯ ಅಧಿಕರಣದಲ್ಲಿ ಸೂಕ್ತಾದಿವ್ಯವಸ್ಥೆಯನ್ನು ಮಾಡಲಾಗಿದೆಯೆಂದು ತಿಳಿಯಬೇಕು.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥರಿಂದ ರಚಿತವಾದ ತಂತ್ರದೀಪಿಕಾ ಗ್ರಂಥದ ಕನ್ನಡಾನುವಾದದಲ್ಲಿ
ಮೊದಲನೆಯ ಅಧ್ಯಾಯದ ಎರಡನೆಯ ಪಾದವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥.

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ವೈಶ್ವಾನರಾಧಿಕರಣ
ಮತ್ತು
ವಿಮರ್ಶೆ

ಶಾಂಕರ ಭಾಷ್ಯದಲ್ಲಿ ಸೂತ್ರಾರ್ಥವನ್ನು ಹೀಗೆ ಹೇಳಿದ್ದಾರೆ - ಛಾಂದೋಗ್ಯದಲ್ಲಿ 'ಅಯಮಗ್ನಿರ್ವೈಶ್ವಾನರಃ' ಎಂಬುದಾಗಿ ವೈಶ್ವಾನರ ಶಬ್ದವು ಕೇಳಿಸುತ್ತಿದೆ. ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂವರಲ್ಲಿಯೂ ವೈಶ್ವಾನರ ಶಬ್ದವು ಸಮಾನವಾಗಿ ಪ್ರಯೋಗಿಸಲ್ಪಡುತ್ತದೆ. ಪ್ರಕರಣದ ಪ್ರಾರಂಭದಲ್ಲಿ ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾದ ಆತ್ಮಶಬ್ದವು ಕೇಳಿಸುತ್ತಿರುವುದರಿಂದ ಜೀವನೂ ಸಹ ವೈಶ್ವಾನರನೆನಿಸಬಹುದು. ಇಷ್ಟು ಪೂರ್ವಪಕ್ಷ.

ವೈಶ್ವಾನರ ಹಾಗೂ ಆತ್ಮಶಬ್ದಗಳು ಸಾಧಾರವಾಗಿದ್ದರೂ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ಸ್ವರ್ಗಾದಿಲೋಕಗಳೇ ವೈಶ್ವಾರನ ಅವಯವವಾಗಿದೆಯೆಂದು ಶ್ರುತಿಹೇಳುತ್ತಿದೆ. ಹೀಗೆ ಜೀವನಲ್ಲಿಲ್ಲದ ವಿಶೇಷಣಗಳನ್ನು ವೈಶ್ವಾನರಲ್ಲಿ ಹೇಳಿದ್ದರಿಂದ ಬ್ರಹ್ಮನೇ ಇಲ್ಲಿ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧಾಂತ.

ವೈಶ್ವಾನರ ಶಬ್ದವು ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂರರಲ್ಲಿಯೂ ಸಾಧಾರಣವಾಗಿದೆ. ಆದ್ದರಿಂದ ಬ್ರಹ್ಮನು ವೈಶ್ವಾನರನಾಗುವುದಿಲ್ಲವೆಂಬ ವ್ಯಾಖ್ಯಾನವೇ ತಪ್ಪು. 'ಸೋऽಯಮಾತ್ಮಾ ಚತುಷ್ಪಾತ್, ಸ್ಥೂಲಭುಗ್ವೈಶ್ವಾನರಃ' ಎಂದು ಮಾಂಡೂಕ್ಯೋಪನಿಷತ್ತಿನಲ್ಲಿ ವೈಶ್ವಾನರಶಬ್ದವನ್ನು ಬ್ರಹ್ಮನಲ್ಲಿಯೂ ಮಾಡಲಾಗಿದೆ. ಹೀಗಿರುವಾಗ ವೈಶ್ವಾನರ ಶಬ್ದವು ಮೂರರಲ್ಲಿ ಮಾತ್ರ ಸಾಧಾರಣವೆಂದು ಹೇಳಿದ್ದು ಅಯುಕ್ತವಾಗುತ್ತದೆ.

ಮತ್ತು ಜಾಠರಾಗ್ನಿಯೂ ಸಹ ಅಗ್ನಿಜಾತಿಯಾದ್ದರಿಂದ ಭೂತಾಗ್ನಿಯಲ್ಲಿಯೇ ಸೇರುವಾಗ ಪ್ರತ್ಯೇಕವಾಗಿ ಪರಿಗಣಿಸಿದ್ದು ತಪ್ಪಾಗುತ್ತದೆ.

ಆತ್ಮ ಶಬ್ದವು ಜೀವ ಹಾಗೂ ಬ್ರಹ್ಮರಲ್ಲಿ ಸಾಧಾರವಾಗಿವೆಯೆಂದು ಅದ್ವೈತಿಗಳು ಹೇಳಿದರು. ಆದರೆ ಭಾಷ್ಯದಲ್ಲಿ ಉದಾಹರಿಸಿದ ಅನೇಕ ಶ್ರುತಿ, ಸ್ಮೃತಿಗಳಿಂದ ಬ್ರಹ್ಮನಲ್ಲಿ ಮಾತ್ರ ಆತ್ಮಶಬ್ದವು ಮುಖ್ಯವಾಗಿರುತ್ತದೆಂದು ತಿಳಿಯುತ್ತವೆ. ಹೀಗಿರುವಾಗ ಜೀವಬ್ರಹ್ಮರಲ್ಲಿ ಸಾಧಾರಣವಾಗಿದೆಯೆಂದು ಹೇಳುವುದು ಅಯುಕ್ತವಾಗಿದೆ.

ನೀವೂ ಸಹ ಆತ್ಮಶಬ್ದವು ಬ್ರಹ್ಮನಲ್ಲಿ ಅಸಾಧಾರಣವಾಗಿದೆಯೆಂದು 'ದ್ಯುಭ್ವಾದ್ಯಾಯತನಮ್' ಎಂಬ ಸೂತ್ರದಲ್ಲಿ ಒಪ್ಪಿದ್ದೀರಿ. ಇಲ್ಲದಿದ್ದರೆ 'ತಮೇವೈಕಂ ಜಾನಥ ಆತ್ಮಾನಮ್' ಎಂಬಲ್ಲಿ ಆತ್ಮಶಬ್ದವು ಜೀವಪ್ರತಿಪಾದಕವಾಗುವುದರಿಂದ ಸೂತ್ರದಲ್ಲಿ 'ಅತಚ್ಚಬ್ದಾತ್' ಎಂಬ ಹೇತುವಿನಿಂದ ಜೀವನನ್ನು ನಿರಾಸ ಮಾಡಿದಂತಾಗುವುದಿಲ್ಲ. 'ಸ್ವಶಬ್ದಾತ್' ಎಂಬ ಸೂತ್ರದ ಭಾಗದಿಂದ ಹೇಳಲ್ಪಟ್ಟ ಆತ್ಮಶಬ್ದದಿಂದ ದ್ಯುಭ್ವಾದ್ಯಾಯತನನಾಗುವವನು ಬ್ರಹ್ಮನೇ ಆಗಿದ್ದಾನೆಂದೂ ಸಹ ನಿರ್ಣಯಿಸಲು ಆಗುವುದಿಲ್ಲ. ಆದ್ದರಿಂದ ಆದ್ವೈತಿಗಳ ಪ್ರಥಮಸೂತ್ರವ್ಯಾಖ್ಯಾನವು ಅಸಾಧುವಾಗಿದೆ.

ರಾಮಾನುಜರ ಪ್ರಥಮಸೂತ್ರವ್ಯಾಖ್ಯಾನ ಹೀಗಿದೆ - ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ, ಪರಬ್ರಹ್ಮ ಈ ನಾಲ್ಕರಲ್ಲಿಯೂ ಸಾಧಾರಣವಾದ ವೈಶ್ವಾನರಶಬ್ದಕ್ಕೆ ಪರಮಾತ್ಮನಲ್ಲಿ ಮಾತ್ರ ಇರುವ ಧರ್ಮಗಳನ್ನು ವಿಶೇಷಣವನ್ನಾಗಿ ಹೇಳಲಾಗಿದೆ. ಮುಮುಕ್ಷುಗಳಾದ ಔಪಮನ್ಯವೇ ಮೊದಲಾದ ಐದು ಮಂದಿ ಶಿಷ್ಯಂದಿರು ಬ್ರಹ್ಮನ ಜಿಜ್ಞಾಸೆಯನ್ನು ಮಾಡಿದ್ದಾರೆ. ಆವಾಗ ವೈಶ್ವಾನರನೇ ಬ್ರಹ್ಮನೆಂದು ರಾಜನು ಉಪದೇಶಿಸಿದ್ದಾನೆ. ಹೀಗೆ ಜಿಜ್ಞಾಸಾಮಾನತ್ವ ಮುಂತಾದ ಬ್ರಹ್ಮನ ಲಿಂಗಗಳಿಂದ ವೈಶ್ವಾನರನಿಗೆ ವಿಶೇಷಣಗಳನ್ನು ಹೇಳಿದ್ದರಿಂದ ವೈಶ್ವಾನರನು ಬ್ರಹ್ಮನೇ ಆಗುತ್ತಾನೆಂದು ಸಿದ್ಧಾಂತ ಮಾಡಿದ್ದಾರೆ.

ಆದ್ವೈತಿಗಳಂತೆ ಇವರ ವ್ಯಾಖ್ಯಾನವೂ ಇರುತ್ತದೆ. ಎಂದರೆ ಜಾಠರಾಗ್ನಿಯನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದು ತಪ್ಪಾಗುತ್ತದೆಂಬುದು ಇವರಿಗೂ ಸಮಾನ ಎಂದರ್ಥ.

ಮತ್ತು 'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ವೈಶ್ವಾನರನಲ್ಲಿ ನೇರವಾಗಿ ವಿಶೇಷಣವಾಗಿರುವ ಆತ್ಮಶ್ರುತಿಯಿಂದಲೇ ಬ್ರಹ್ಮನು ವೈಶ್ವಾನರನಾಗಿದ್ದಾನೆಂದು ಹೇಳಲು ಬರುವಾಗ ಪ್ರಕರಣದಿಂದ ಲಭಿಸುವ ಲಿಂಗವೆಂಬ ವಿಶೇಷಣದಿಂದ ಪರಮಾತ್ಮನನ್ನು ವೈಶ್ವಾನರನೆಂದು ನಿರ್ಣಯಿಸುವುದು ಅಯುಕ್ತವಾಗಿದೆ.

ಆದ್ವೈತಿಗಳ ಎರಡನೆಯ ಸೂತ್ರವ್ಯಾಖ್ಯಾನ ಹೀಗಿದೆ -

'ಸ್ಮರ್ಯಮಾಣಂ ಅನುಮಾನಂ ಸ್ಯಾದಿತಿ'

ಯಸ್ಯಾಗ್ನಿರಾಸ್ಯಂ ದ್ಯೌರ್ಮೂರ್ಧಾ ಖಂ ನಾಭಿಶ್ಚರಣೌ ಕ್ಷಿತಿಃ।
ಸೂರ್ಯಶ್ಚಕ್ಷುರ್ದಿಶಃ ಶ್ರೋತ್ರಂ ತಸ್ಮೈ ಲೋಕಾತ್ಮನೇ ನಮಃ..... ॥

ಯಾರಿಗೆ ಅಗ್ನಿಯು ಮುಖವಾಗಿದೆಯೋ, ಸ್ವರ್ಗಲೋಕವು ತಲೆಯಾಗಿದೆಯೋ, ಆಕಾಶವು ನಾಭಿಯಾಗಿದೆಯೋ, ಭೂಮಿಯು ಕಾಲುಗಳೋ, ಸೂರ್ಯನು ಚಕ್ಷುಸ್ಸೋ, ಸಕಲ ದಿಕ್ಕುಗಳು ಕಿವಿಯೋ, ಅಂತಹ ಲೋಕಸ್ವರೂಪನಿಗೆ ನಮಸ್ಕಾರ.

ಹೀಗೆ ಶ್ರುತಿ ವಾಕ್ಯದಿಂದ ಈಶ್ವರನು ತ್ರಿಲೋಕಸ್ವರೂಪನೆಂದು ತಿಳಿಯುತ್ತದೆ. ಈ ಸ್ಮೃತಿವಾಕ್ಯಕ್ಕೆ ಮೂಲಭೂತವಾಗಿ ಒಂದು ಶ್ರುತಿಯು ಇರಲೇಬೇಕು. ಆ ಶ್ರುತಿಯು ಈ ವಾಕ್ಯದಲ್ಲಿ ಹೇಳಲ್ಪಟ್ಟ ವಿಷಯವನ್ನೇ ಪ್ರತಿಪಾದಿಸಬೇಕು. ಅದು ಯಾವುದೆಂದರೆ 'ಮೂರ್ಧ್ನೈವ ಸುತೇಜಾಃ' ಇತ್ಯಾದಿಯಾಗಿ ವೈಶ್ವಾನರವಿದ್ಯೆಯಲ್ಲಿ ಪ್ರಸಕ್ತವಾಗುವ ಶ್ರುತಿವಾಕ್ಯ. ಸ್ಮೃತಿವಾಕ್ಯದಲ್ಲಿ ಬ್ರಹ್ಮನು ಪ್ರತಿಪಾದ್ಯನಾದ್ದರಿಂದ ಅದಕ್ಕೆ ಮೂಲಭೂತವಾದ ವೈಶ್ವಾನರ ಶ್ರುತಿಯೂ ಸಹ ಬ್ರಹ್ಮಪರವಾಗಬೇಕೆಂದು ಎರಡನೇ ಸೂತ್ರದ ಅರ್ಥ.

ಇದು ತಪ್ಪು. 'ಚಕ್ಷುಷೀ ಚಂದ್ರಸೂರ್ಯೌ ದಿಶಃ ಶ್ರೋತ್ರೇ' ಇತ್ಯಾದಿಯಾಗಿ ಆಥರ್ವಣ ಶ್ರುತಿಯೂ ಸಹ ನೀವು ಉಲ್ಲೇಖಿಸಿದ ಸ್ಮೃತಿಗೆ ಮೂಲವಾಗಬಹುದು. ಹೀಗಿರುವಾಗ ವೈಶ್ವಾನರವಿದ್ಯೆಯೇ ಮೂಲಶ್ರುತಿಯೆಂದು ನಿರ್ಣಯಿಸಲಾಗದು.

ಮತ್ತು 'ಅಹಂ ವೈಶ್ವಾನರಃ' ಎಂಬ ಸ್ಮೃತಿವಾಕ್ಯವು ನೇರವಾಗಿ ಈಶ್ವರನಿಗೆ ವೈಶ್ವಾನರತ್ವವನ್ನು ಸಮರ್ಥಿಸುತ್ತಿರುವಾಗ ಬಕಬಂಧಪ್ರಯಾಸವು ಅಯುಕ್ತವಾಗಿದೆ. (ಬಕಪಕ್ಷಿಯನ್ನು ಹಿಡಿಯುವುದಕ್ಕಾಗಿ ಬೆಣ್ಣೆಯನ್ನು ಬಕಪಕ್ಷಿಯ ತಲೆಯ ಮೇಲೆ ಇಟ್ಟು ಅದು ಕರಗಿ ಕಣ್ಣಲ್ಲಿ ಹೋದಾಗ ಅದನ್ನು ಹಿಡಿಯೋಣವೆಂದು ಯೋಚನೆ ಮಾಡುವುದು ಹೇಗೆ ಅತ್ಯಂತ ಪ್ರಯಾಸವೋ, ಅದರಂತೆ ನೇರವಾಗಿಯೇ ವಿಷ್ಣುವನ್ನು ವೈಶ್ವಾನರನೆಂದು ಹೇಳುವ ಸ್ಮೃತಿವಾಕ್ಯವು ಇರಬೇಕಾದರೆ ಅಸ್ಪಷ್ಟವಾದ ಮತ್ತೊಂದು ಸ್ಮೃತಿವಾಕ್ಯದ ಆಧಾರದ ಮೂಲಕ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿರ್ಣಯಿಸುವುದು ಅತ್ಯಂತ ಪ್ರಯಾಸಕರವಾಗಿದೆ.)

ರಾಮಾನುಜರು ಎರಡನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ - ದ್ಯುಲೋಕದಿಂದ ಪ್ರಾರಂಭಿಸಿ ಪೃಥಿವೀಲೋಕದ ತನಕ ಎಲ್ಲ ಲೋಕಗಳನ್ನು ಶ್ರುತಿ, ಸ್ಮೃತಿಗಳಲ್ಲಿ ಈಶ್ವರನ ಅವಯವಗಳನ್ನಾಗಿ ನಿರೂಪಿಸಲಾಗಿದೆ. ಇಂತಹ ಅವಯವಗಳು ಬ್ರಹ್ಮನಿಗಿರುತ್ತದೆಂದು 'ಅಗ್ನಿರ್ಮೂರ್ಧಾ' ಇತ್ಯಾದಿ ಸ್ಮೃತಿಗಳು ಹೇಳುತ್ತಿದೆ. ಅದನ್ನೇ ವೈಶ್ವಾನರನಿಗೆ ಇಲ್ಲಿ ಹೇಳುತ್ತಿರುವುದರಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆನ್ನಲು ನಿರ್ಧಾರಕ ಪ್ರಮಾಣವಾಗಿದೆ.

ಇದೂ ಸಹ ತಪ್ಪು. ಸ್ಮರ್ಯಮಾಣಶಬ್ದಕ್ಕೆ ಗೀತಾಸ್ಮೃತಿಯ ಆಧಾರವಿದೆಯೆಂದು ಸುಲಭವಾಗಿ ವ್ಯಾಖ್ಯಾನಿಸಲು ಬರುವಾಗ 'ಪ್ರತ್ಯಭಿಜ್ಞಾಯಮಾನ' ಎಂಬರ್ಥವನ್ನು ಹೇಳಿದರೆ ಸ್ವಾರಸ್ಯವು ಭಂಗವಾಗುತ್ತದೆ. ಮತ್ತು 'ಅಹಂ ವೈಶ್ವಾನರಃ' ಇತ್ಯಾದಿ ಸ್ಮೃತಿಗಳಲ್ಲಿ ಹೇಳಿದ್ದನ್ನು 'ಆತ್ಮಾನಂ ವೈಶ್ವಾನರಮ್' ಎಂಬ ಶ್ರುತಿಯು ಪ್ರತ್ಯಭಿಜ್ಞಾ ಮಾಡುತ್ತಿದೆ. ಹೀಗೆ ಶ್ರುತಿಪ್ರತ್ಯಭಿಜ್ಞಾವನ್ನೇ ಹೇಳಲು ಬರುವಾಗ ಲಿಂಗಪ್ರತ್ಯಭಿಜ್ಞಾವನ್ನು ಹೇಳುವುದು ಅಯುಕ್ತವಾಗುತ್ತದೆ.

'ಶಬ್ದಾದಿಭ್ಯೋಽಂತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದ ಸಂಭಾವತ್ಪುರುಷವಿಧಮಪಿ ಚೈನಮಧೀಯತೇ' ಎಂಬ ಮೂರನೆಯ ಸೂತ್ರಕ್ಕೆ ಅದ್ವೈತಿಗಳ ಸೂತ್ರವ್ಯಾಖ್ಯಾನ ಹೀಗಿದೆ - ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಬ್ರಹ್ಮನನ್ನು ಬಿಟ್ಟು ಬೇರೆ ಪದಾರ್ಥವನ್ನೇ ಪ್ರತಿಪಾದಿಸುತ್ತಿದೆ. 'ತದ್ಯದ್‌ಭುಕ್ತಂ' ಎಂಬುದು ಪ್ರಾಣಾಹುತಿಗೆ ಅಧಿಕರಣವಾದ ಅಗ್ನಿಯನ್ನು ಹೇಳುತ್ತಿದೆ. 'ಪುರುಷೇ ಅಂತಃಪ್ರತಿಷ್ಠಿತಮ್' ಎಂಬ ವಾಕ್ಯವು ಉದರದಲ್ಲಿ ಇರುತ್ತದೆಂದು ಹೇಳಿದೆ. ಈ ಎಲ್ಲಾ ಕಾರಣಗಳಿಂದ ಇಲ್ಲಿ ಹೇಳಲ್ಪಟ್ಟ ವೈಶ್ವಾನರನು ಜಾಠರಾಗ್ನಿಯೇ ಆಗಬೇಕೆಂದು ಹೇಳುವುದು ಸರಿಯಲ್ಲ. 'ಮನೋ ಬ್ರಹ್ಮೇತಿ ಉಪಾಸೀತ' ಮನಸ್ಸನ್ನೇ ಬ್ರಹ್ಮನೆಂದು ಉಪಾಸನೆ ಮಾಡಬೇಕೆಂದು ಹೇಳಿದಂತೆ, ಜಾಠರಾಗ್ನಿಯನ್ನೇ ಬ್ರಹ್ಮನೆಂದು ಉಪಾಸನೆ ಮಾಡುವುದಕ್ಕಾಗಿ ವೈಶ್ವಾರನಲ್ಲಿ ಬ್ರಹ್ಮತ್ವವನ್ನು ಶ್ರುತಿ ಹೇಳುತ್ತಿದೆ.

ಅಥವಾ ಜಾಠರಾಗ್ನಿಯು ವೈಶ್ವಾನರನಿಗೆ ಉಪಾಧಿಯಾಗಿದೆ. 'ಮನೋಮಯಃ ಪ್ರಾಣಶರೀರಃ' ಇತ್ಯಾದಿಗಳಲ್ಲಿ ಮನೋಮಯತ್ವಾದಿಗಳು ಉಪಾಧಿಯಾದಂತೆ ಜಾಠರಾಗ್ನಿಯೂ ಸಹ ಉಪಾಧಿ-ಯಾಗಿದೆ. ಕೇವಲ ಜಾಠರಾಗ್ನಿಯನ್ನು ಇಲ್ಲಿ ಹೇಳಿದರೆ 'ಸ ಏಷೋಽಗ್ನಿಃ ವೈಶ್ವಾನರಃ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪುರುಷತ್ವವು ಅಸಂಭಾವಿತವಾಗುತ್ತದೆ. ಮತ್ತು 'ಮೂರ್ಧ್ನೈವ ಸುತೇಜಾಃ' ಇತ್ಯಾದಿಗಳೂ ಸಹ ಅಸಂಭಾವಿತವಾಗುತ್ತದೆ. ಬ್ರಹ್ಮನು ಸರ್ವಾತ್ಮಕನಾದ್ದರಿಂದ ಮತ್ತು ಪುರುಷನೂ, ಪುರುಷಾಂತರ್ಗತನೂ ಆಗಿರುವುದರಿಂದ ಇವೆಲ್ಲವೂ ಉಪಪನ್ನವಾಗುತ್ತದೆ. ಆದ್ದರಿಂದ ವೈಶ್ವಾನರನು ಬ್ರಹ್ಮನೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಹೀಗೆ ಅದ್ವೈತಿಗಳು ಮೂರನೆಯ ಸೂತ್ರವನ್ನು ವ್ಯಾಖ್ಯಾನಿಸುತ್ತಾ 'ತಥಾ ದೃಷ್ಟ್ಯುಪದೇಶಾತ್' ಎಂಬ ಪದಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯಾನವನ್ನು ಮಾಡಿದ್ದಾರೆ.

ಹೀಗೆ ವೈಶ್ವಾನರನು ಬ್ರಹ್ಮನಿಗೆ ಪ್ರತೀಕ ಅಥವಾ ಉಪಾಧಿಯೆಂದು 'ತಥಾ ದೃಷ್ಟ್ಯುಪದೇಶಾತ್' ಎಂಬ ಸೂತ್ರದ ಭಾಗಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯಾನಿಸಿದರು. ಇವುಗಳಲ್ಲಿ ಮೊದಲನೆಯ ಪಕ್ಷ ತಪ್ಪು. ವೈಶ್ವಾನರನು ಮನಸ್ಸಿನಂತೆ ಪ್ರತೀಕನಾದರೆ ಆ ಶಬ್ದವು ಬ್ರಹ್ಮನಿಗೆ ಹೇಗೆ ವಾಚಕವಾಗುತ್ತದೆ? 'ಮನ' ಎಂಬ ಶಬ್ದವು ಬ್ರಹ್ಮನನ್ನು ಹೇಗೆ ಪ್ರತಿಪಾದಿಸುವುದಿಲ್ಲವೋ ಅದರಂತೆ ವೈಶ್ವಾನರಶಬ್ದವೂ ಸಹ ಬ್ರಹ್ಮನನ್ನು ಪ್ರತಿಪಾದಿಸುವುದಿಲ್ಲ. ಮತ್ತು ಇಂತಹ ಪ್ರತೀಕಗಳಲ್ಲಿ ಬ್ರಹ್ಮೋಪಾಸನೆಯನ್ನು ಮಾಡುವುದರಿಂದ 'ಸರ್ವೇ ಪಾಪ್ಮಾನಃ ಪ್ರದೂಯಂತೇ' ಎಂಬುದಾಗಿ ಸಕಲ ಪಾಪಗಳು ಕ್ಷಯವಾಗುತ್ತವೆಂದು ಶ್ರುತಿ ಹೇಳಿದೆ. ಇದು ಕೇವಲ ಪ್ರತೀಕದ ಉಪಾಸನೆಯಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಎರಡನೆಯ ಪಕ್ಷವೂ ಸಹ ತಪ್ಪು. ಸೋಪಾಧಿಕಬ್ರಹ್ಮನ ಉಪಾಸನೆಯಿಂದ ಅಥವಾ ಜ್ಞಾನದಿಂದ ಸಕಲಪಾಪಗಳು ಕ್ಷಯವಾಗಲು ಸಾಧ್ಯವಿಲ್ಲ. ಅದು ನಿರ್ಗುಣೋಪಾಸನೆಯಿಂದಷ್ಟೇ ಸಾಧ್ಯ.

ಇನ್ನು 'ಪುರುಷವಿಧಮಪಿ' ಎಂಬಲ್ಲಿರುವ ಪುರುಷವಿಧ ಶಬ್ದಕ್ಕೆ ಸ್ವರ್ಗಲೋಕವೇ ಶಿರಸ್ಸಾಗಿದೆಯೆಂದು ಅರ್ಥವನ್ನು ಹೇಳಿದ್ದಾರೆ. ಇದು ತಪ್ಪು. ಪ್ರಥಮಸೂತ್ರದಲ್ಲಿರುವ 'ವಿಶೇಷಾತ್' ಎಂಬ ಪದಕ್ಕೂ ಸಹ ಅದ್ವೈತಿಗಳು ಹೀಗೆಯೇ ವ್ಯಾಖ್ಯಾನ ಮಾಡಿದ್ದಾರೆ. ಅದೇ ದ್ಯುಮೂರ್ಧತ್ವವನ್ನು ಇಲ್ಲಿಯೂ ಹೇಳಿದರೆ ಪುನರುಕ್ತಿ ದೋಷವು ಬರುತ್ತಿದೆ.

'ಸಾಕ್ಷದಪ್ಯವಿರೋಧಮ್' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸಿದ್ದಾರೆ - ಜಾಠರಾಗ್ನಿಯು ಬ್ರಹ್ಮನ ಪ್ರತೀಕವಾಗಿದೆ. ಅಥವಾ ಉಪಾಧಿಯಾಗಿದೆಯೆಂದು ಕಲ್ಪನೆ ಮಾಡದಿದ್ದರೂ ಸಾಕ್ಷಾತ್ತಾಗಿ ಅಂದರೆ ಕೇವಲ ಬ್ರಹ್ಮನ ಉಪಾಸೆಯನ್ನು ಸ್ವೀಕಾರ ಮಾಡಿದರೂ ಸಹ ವಿರೋಧ ಬರುವುದಿಲ್ಲ. ಕೇವಲ ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳಿಂದ ಬ್ರಹ್ಮನ ಗುಣವು ತಿಳಿಯುತ್ತಿದೆ. ಮೇಲಿನ ಸ್ಥಾನಕ್ಕೆ ಕರೆದೊಯ್ಯುತ್ತಾನಾದ್ದರಿಂದ ಅಗ್ನಿಯೆನಿಸಿದ್ದಾನೆ. ವಿಶ್ವನರನಿಗೆ ಸಂಬಂಧಿಸಿದ್ದನಾದ್ದರಿಂದ ವೈಶ್ವಾನರ-ನೆನಿಸಿದ್ದಾನೆ. ಹೀಗೆ ಬ್ರಹ್ಮನನ್ನು ಉಪಾಸನೆ ಮಾಡಲು ಬರುತ್ತದೆಂದು ಸೂತ್ರದ ಅಭಿಪ್ರಾಯ.

ಇದೂ ಸಹ ತಪ್ಪು. 'ಸಾಕ್ಷಾತ್' ಎಂಬ ಶಬ್ದಕ್ಕೆ 'ವ್ಯವಧಾನವಿಲ್ಲದೆ' ಎಂಬರ್ಥವು ಲೋಕಪ್ರಸಿದ್ಧವಾಗಿದೆ. ಅದನ್ನು ಬಿಟ್ಟು 'ಕೇವಲ' ಎಂಬರ್ಥವನ್ನು ಹೇಳುವುದು ಅತ್ಯಂತ ಕ್ಲಿಷ್ಟಕರವಾದದ್ದು. ಮತ್ತು ಇಲ್ಲಿರುವ ಅಗ್ನಿ, ವೈಶ್ವಾನರ ಶಬ್ದಗಳಿಗೆ ಯೌಗಿಕಾರ್ಥವನ್ನು ಅಂಗೀಕರಿಸಿದರೆ ಹಿಂದೆ ಪ್ರಸಕ್ತವಾದ ಆಕಾಶಾದಿಶಬ್ದಗಳಿಗೆ ಹಾಗೂ ಮುಂದೆ ಬರುವ ಅಕ್ಷರಾದಿಶಬ್ದಗಳಿಗೂ ಸಹ

ಯೌಗಿಕಾರ್ಥವನ್ನು ಅದ್ವೈತಿಗಳು ಒಪ್ಪಬೇಕಾಗುತ್ತದೆ. ಆವಾಗ ನಮ್ಮ ಮತದಂತೆ ಸಮನ್ವಯಾಧ್ಯಾಯವು ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಗುಣಪೂರ್ಣತ್ವವನ್ನು ಸಮರ್ಥಿಸುವುದರಲ್ಲೇ ಪರ್ಯವಸಾನವಾಗಿ ಅದ್ವೈತಿಗಳು ಸಮನ್ವಯಾಧ್ಯಾಯದಿಂದ ಬ್ರಹ್ಮನಲ್ಲಿ ಸಕಲಗುಣಪರಿಪೂರ್ಣತ್ವವನ್ನು ಒಪ್ಪಿದಂತಾಗುತ್ತದೆ.

ಬ್ರಹ್ಮನ ವಿಷಯದಲ್ಲಿ ಪ್ರಾದೇಶಮಾತ್ರಪರಿಮಾಣವನ್ನು ಹೇಳುವ ಶ್ರುತಿಯು ಅಯುಕ್ತವಾಗಿದೆಯಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ 'ಅಭಿವ್ಯಕ್ತೇಃ' ಇತ್ಯಾದಿ ಸೂತ್ರಗಳು ಹೊರಟಿವೆಯೆಂದು ಅದ್ವೈತಿಗಳು ವ್ಯಾಖ್ಯಾನಿಸುತ್ತಾರೆ. ಇದೂ ಸಹ ತಪ್ಪು. ಏಕೆಂದರೆ ಹಿಂದೆ 'ಅರ್ಭಕೌಕಸ್ತ್ವಾನ್ನೇತಿ ಚೇನ್ನ' ಎಂಬ ಸೂತ್ರದಿಂದ ಹಾಗೂ ಈ ಅಧಿಕರಣದಲ್ಲಿರುವ 'ತಥಾ ದೃಷ್ಟ್ಯುಪದೇಶಾತ್' ಎಂಬ ಸೂತ್ರದ ಭಾಗದಿಂದಲೇ ಪ್ರಾದೇಶಪರಿಮಾಣವು ಬ್ರಹ್ಮನಲ್ಲಿ ಇರುತ್ತದೆಂದು ಸಾಧಿಸಿದ್ದಾಗಿದೆ. ಪುನಃ ಈ ಸೂತ್ರದಲ್ಲಿಯೂ ಅದನ್ನೇ ಹೇಳಿದರೆ ಪುನರುಕ್ತಿ ಬರುತ್ತದೆ. ಅದ್ವೈತಿಗಳ ಮತದ ಈ ನಿರಾಕರಣೆಯು ಕೇವಲ ದಿಕ್‌ಪ್ರದರ್ಶನವಾಗಿದೆ.

ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಅದ್ವೈತಿಗಳು ವೈಶ್ವಾನರನಿಗೆ ಜೀವತ್ವವನ್ನು ನಿಷೇಧ ಮಾಡಿ ಬ್ರಹ್ಮತ್ವವನ್ನು ಸಾಧಿಸಿದ್ದರಿಂದ ಜೀವಬ್ರಹ್ಮ ಭೇದವನ್ನೇ ಒಪ್ಪಿಕೊಂಡಿದ್ದಾರೆ.

ರಾಮಾನುಜರ ಉಳಿದ ಸೂತ್ರಗಳ ವ್ಯಾಖ್ಯಾನ ಹೀಗಿದೆ -

'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' - ವ್ಯಾಪ್ತನಾದ ಪರಮಾತ್ಮನು ಪ್ರಾದೇಶಪರಿಮಾಣದಲ್ಲಿರಲು ಹೇಗೆ ಸಾಧ್ಯ ? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ 'ಅಭಿವ್ಯಕ್ತೇಃ' ಎಂಬ ಸೂತ್ರವು ಹೊರಟಿದೆ. ಉಪಾಸನೆ ಮಾಡುವುದಕ್ಕಾಗಿ ಬುದ್ಧಿಯ ಸೌಕರ್ಯಕ್ಕೋಸ್ಕರ ಶ್ರುತಿಯು ವೈಶ್ವಾನರನನ್ನು 'ಪ್ರಾದೇಶ ಮಾತ್ರಮ್' ಎಂದು ಪರಿಚ್ಛೇದವನ್ನು ಹೇಳುತ್ತಿದೆ. ಇದು ಆಶ್ಮರಥ್ಯಾಚಾರ್ಯರ ಅಭಿಪ್ರಾಯ.

'ಅನುಸ್ಮೃತೇಃ ಬ್ಯಾದರಿಃ' - ಪ್ರಕರಣದ ಕೊನೆಯಲ್ಲಿ 'ಯಸ್ತು ಏತಮ್ ಏವಮ್' ಎಂಬುದಾಗಿ ದ್ಯುಲೋಕವನ್ನೇ ಶಿರಸ್ಸನ್ನಾಗಿ ಉಳ್ಳವನೆಂದು ವೈಶ್ವಾರನನ್ನು ಉಪಾಸನೆ ಮಾಡಬೇಕೆಂದು ಹೇಳಲಾಗಿದೆ. ಅದಕ್ಕಾಗಿ ಈ ಪ್ರಕರಣದಲ್ಲಿ ಪುರುಷನಂತೆ ಅಂಗಾಂಗಗಳನ್ನು ವರ್ಣಿಸಲಾಗಿದೆ. ಇದು ಬಾದರಿಯ ಮತ. ಹೀಗೆ ಪುರುಷವಿಧತ್ವವನ್ನು ಏಕೆ ಹೇಳಿದ್ದು ಎಂಬ ಶಂಕೆಯನ್ನು ನಿರಾಕರಿಸುವುದಕ್ಕೋಸ್ಕರ ಈ ಸೂತ್ರವು ಹೊರಟಿದೆ.

'ಸಂಪತ್ತೇರಿತಿ ಜೈಮಿನಿಸ್ತಥಾಹಿ ದರ್ಶಯತಿ' - ವೈಶ್ವಾನರನ ಅನೇಕ ಅವಯವಗಳನ್ನು ಯಜ್ಞದ ಅಂಗಗಳೆಂದು ವರ್ಣಿಸಲಾಗಿದೆ. 'ಅವನ ಎದೆಯು ಯಜ್ಞವೇದಿಕೆ' ಇತ್ಯಾದಿಯಾಗಿ. ಇದಕ್ಕೆ ಕಾರಣವೇನೆಂದರೆ ನಾವು ಪ್ರತಿನಿತ್ಯ ಆಚರಿಸುವ ಪ್ರಾಣಾಗ್ನಿಹೋತ್ರವು ಸಫಲವಾಗಬೇಕೆಂದು ಶ್ರುತಿಯು ಹಾಗೇ ಹೇಳಿದೆ. ಹೀಗೆ ಪ್ರಾಣಾಹುತಿಗೆ ಅಗ್ನಿಹೋತೃತ್ವವೆಂಬ ಸಂಪತ್ತಿಗೋಸ್ಕರ ಯಜ್ಞಾಂಗ ಕಲ್ಪನೆಯು ಯುಕ್ತವಾಗಿದೆಯೆಂದು ಈ ಸೂತ್ರವು ಹೇಳುತ್ತಿದೆ. ಆದ್ದರಿಂದ ಭಗವಂತನ ಎದೆ ಮೊದಲಾದವು ಯಜ್ಞವೇದಿಕೆಯಾಗಲು ಹೇಗೆ ಸಾಧ್ಯ ? ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಈ ಸೂತ್ರ ಹೊರಟಿದೆ.

'ಆಮನಂತಿ ಚೈನಮಸ್ಮಿನ್' ಪರಮಾತ್ಮನನ್ನು ಉಪಾಸಕನ ದೇಹದಲ್ಲಿ ಪ್ರಾಣಾಹುತಿಗೆ ಆಧಾರನನ್ನಾಗಿ ಛಾಂದೋಗರು ಹೇಳುತ್ತಾರೆ.

ಹೀಗೆ ರಾಮಾನುಜರು ಒಂಭತ್ತು ಸೂತ್ರಗಳನ್ನು ವ್ಯಾಖ್ಯಾನಿಸಿದ್ದಾರೆ.

ಇದು ತಪ್ಪು. ರಾಮಾನುಜ ಭಾಷ್ಯದ ಪ್ರಕಾರ ಈ ಎಲ್ಲ ಸೂತ್ರಗಳು ಬೇರೆ ಬೇರೆ ವಿಷಯವನ್ನು ಸಮರ್ಥಿಸುತ್ತಿವೆ. ಹೀಗಿರುವಾಗ ಆಶ್ಮಾರಥ್ಯಾದಿ ಪದಗಳಿಂದ ಸೂಚಿತವಾದ ವಿಕಲ್ಪವು ಅಸ್ವರಸವಾಗುತ್ತದೆ. ಮತ್ತು ಪ್ರತಿಯೊಂದು ಸೂತ್ರಗಳಲ್ಲಿ ಸಾಧ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಆದರೆ ನಮ್ಮ ಪ್ರಕಾರ 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಇತ್ಯಾದಿ ಸೂತ್ರಗಳು ಬೇರೆ ಬೇರೆ ಋಷಿಗಳ ಹೆಸರುಗಳನ್ನು ಉಲ್ಲೇಖ ಮಾಡಿ ಒಂದೇ ವಿಷಯದಲ್ಲಿ ಅಭಿಪ್ರಾಯಭೇದವನ್ನು ಹೇಳುತ್ತಿವೆ. ಹೀಗೆ ವ್ಯಾಖ್ಯಾನಿಸುವುದೇ ಸ್ವರಸ.

ಇಲ್ಲಿಗೆ ವೈಶ್ವಾನರಾಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು.

ಪ್ರಥಮಾಧ್ಯಾಯದ ಎರಡೆಯ ಪಾದವು ಸಮಾಪ್ತವಾಯಿತು

॥ ಶ್ರೀಮದ್ಭೇಶಾರ್ಪಣಮಸ್ತು ॥

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ದುಭ್ವಾದ್ಯಧಿಕರಣ

ಬ್ರಹ್ಮಸೂತ್ರ, ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ

ವಿಶೇಷ ವಿಚಾರದೊಂದಿಗೆ ಕನ್ನಡಭಾಷೆಯಲ್ಲಿ ಅನುವಾದ

ಮತ್ತು

ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆ

॥ ಹರಿಃ ಓಂ ॥

॥ ಶ್ರೀವೇದವ್ಯಾಸಾಯ ನಮಃ ॥

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಗುರುಭ್ಯೋ ನಮಃ ॥

॥ ಶ್ರೀಮದ್ರಾಘವೇಂದ್ರತೀರ್ಥಗುರುಭ್ಯೋ ನಮಃ ॥

॥ ಶ್ರೀಗುರುಭ್ಯೋ ನಮಃ ॥

ದುಭ್ವಾದ್ಯಧಿಕರಣ

ಬ್ರಹ್ಮಸೂತ್ರ

'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಎಂಬ ಸೂತ್ರ ವ್ಯಾಖ್ಯಾನ

।। अथ तृतीयः पादः ।।

।। अथ द्युभ्वाद्यधिकरणम् ।।

ब्रह्मसूत्रम् – ।। द्युभ्वाद्यायतनं स्वशब्दात् ।। १ ।।

'ಯಸ್ಮಿನ್ ದ್ಯೌಃ' ಎಂಬ ಮಂತ್ರದಲ್ಲಿ ಸ್ವರ್ಗ, ಭೂಮಿ ಮೊದಲಾದವುಗಳಿಗೆ ಆಶ್ರಯನಾಗಿ ಹೇಳಲ್ಪಟ್ಟವನು ವಿಷ್ಣುವೇ ಆಗಿದ್ದಾನೆ. ವಿಷ್ಣುವಿಗೆ ಮಾತ್ರ ಸಂಬಂಧಿಸಿದ ಆತ್ಮಶಬ್ದವು ಈ ವಿಷಯದಲ್ಲಿ ಆಧಾರವಾಗಿದೆ.

ಅರ್ಥ -- ದ್ಯುಭ್ವಾದ್ಯಾಯತನಂ = 'ಯಸ್ಮಿನ್' ಎಂಬ ಮಾಂಡೂಕ್ಯೋಪನಿಷತ್ತಿನವಾಕ್ಯದಲ್ಲಿ ಸ್ವರ್ಗ ಭೂಮಿ ಮೊದಲಾದವುಗಳಿಗೆ ಆಶ್ರಯನಾಗಿ ಹೇಳಲ್ಪಟ್ಟಿರುವವನು ವಿಷ್ಣುವೇ ಆಗಿದ್ದಾನೆ ಹೊರತು ಬೇರೆಯವರಲ್ಲ. ಏಕೆಂದರೆ ಸ್ವಶಬ್ದಾತ್ = ಸ್ವ ಎಂಬ ಶಬ್ದವೇ ಸ್ವಶಬ್ದ ಎನಿಸುತ್ತದೆ. ವಿಷ್ಣುವಿಗೆ ಮಾತ್ರ ವಾಚಕವಾದ ಆತ್ಮಶಬ್ದದ ಆಧಾರದಿಂದ.

ಜಗದ್ಗುರು ಶ್ರೀಮಧ್ವಾಚಾರ್ಯರಿಂದ ವಿರಚಿತವಾದ

ಬ್ರಹ್ಮಸೂತ್ರಭಾಷ್ಯ

ಉಭಯತ್ರಪ್ರಸಿದ್ಧ ಶಬ್ದಗಳ ಸಮನ್ವಯಕ್ಕಾಗಿ ಮೂರನೆಯ ಪಾದ

ब्रह्मसूत्रभाष्यम् – तत्र चान्यत्र च प्रसिद्धानां शब्दानां विष्णौ समन्वयं (प्रायेण) अस्मिन् पादे दर्शयति ।

ಅನುವಾದ - ಭಗವಂತನಲ್ಲಿ ಮತ್ತು ಬೇರೆಯವರಲ್ಲಿ ಪ್ರಸಿದ್ಧವಾಗಿರುವ ಶಬ್ದಗಳ ಸಮನ್ವಯವನ್ನು ವಿಷ್ಣುವಿನಲ್ಲಿ ಪರಮಮುಖ್ಯವೃತ್ತಿಯಿಂದ ಮಾಡಿ ತೋರಿಸುತ್ತಿದ್ದಾರೆ. ಮತ್ತು ಅದಕ್ಕೆ ಸಂಬಂಧಪಟ್ಟ ಕೆಲವು ಬೇರೆ ವಿಷಯಗಳ ಪ್ರಸಕ್ತಿಯು ಈ ಪಾದದಲ್ಲಿ ಇರುತ್ತದೆ.

ಪ್ರತಿಪದಾರ್ಥ - ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕಶಬ್ದಗಳ ಸಮನ್ವಯ ಮಾಡುವುದಕ್ಕಾಗಿ ಮೂರನೆಯ ಪಾದವು ಹೊರಟಿದೆ. ಈ ವಿಷಯವನ್ನು ಭಾಷ್ಯಕಾರರು ಹೇಳುತ್ತಿದ್ದಾರೆ.

ತತ್ರ = ಭಗವಂತನಲ್ಲಿ, ಚ ಮತ್ತು ಅನ್ಯತ್ರ = ಬೇರೆಯವರಲ್ಲಿ, ಪ್ರಸಿದ್ಧಾನಾಂ ಶ್ರುತಿಯಿಂದ ಹಾಗೂ ವ್ಯವಹಾರದಿಂದ ಪ್ರಸಿದ್ಧವಾದ, ಶಬ್ದಾನಾಂ = ನಾಮಾತ್ಮಕಶಬ್ದಗಳ ಹಾಗೂ ಲಿಂಗಾತ್ಮಕಶಬ್ದಗಳ, ವಿಷ್ಣೌ = ನಾರಾಯಣನಲ್ಲಿ, ಸಮನ್ವಯಂ = ಪರಮಮುಖ್ಯವೃತ್ತಿಯಿಂದ ಸಮನ್ವಯವನ್ನು, ಅಸ್ಮಿನ್ = ಈ, ಪಾದೇ = ಮೂರನೆಯ ಪಾದದಲ್ಲಿ, ಪ್ರಾಯೇಣ = ಬಹುತೇಕವಾಗಿ, (ತತ್ತ್ವಪ್ರದೀಪದ ಪಾಠದಲ್ಲಿ 'ಪ್ರಾಯೇಣ' ಎಂಬ ಪದವಿಲ್ಲ) ದರ್ಶಯತಿ = ತೋರಿಸುತ್ತಿದ್ದಾರೆ. (ದೇವತಾಧಿಕರಣ ಹಾಗೂ ಅಪಶೂದ್ರಾಧಿಕರಣಗಳಲ್ಲಿ ಸಮನ್ವಯ ಮಾಡದ ಕಾರಣ ಪ್ರಾಯೇಣ ಎಂದು ಹೇಳಿದ್ದಾರೆ.)

ರುದ, ಜೀವ ಇವರುಗಳೇಕೆ ದ್ಯುಭ್ವಾದ್ಯಾಯತನರಲ್ಲ

ब्रह्मसूत्रभाष्यम् – विष्णोः परविद्याविषयत्वमुक्तम् । तत्र 'यस्मिन् द्यौः पृथिवी चान्तरिक्षमोतं मनः सह प्राणैश्च सर्वैः । तमेवैकं जानथ आत्मानम्'

(मुं. २-२-५.) इत्यत्र । 'प्राणानां ग्रन्थिरसि रुद्रो माऽऽविशान्तकः' (महाना-३५.)'प्राणेश्वरः कृत्तिवासाः पिनाकी' (घृतसूक्तम्) इत्यादिना रुद्रस्य प्राणाधारत्वप्रतीतेः 'स एषोऽन्तश्चरते बहुधा जायमानः' (मुं.२-२-६.)इति जीवलिङ्गाच्च तयोः प्राप्तिरिति ।।

ಅದೃಶ್ಯತ್ವಾಧಿಕರಣದಲ್ಲಿ ಪರವಿದ್ಯೆಗೆ ವಿಷಯನಾದವನು ವಿಷ್ಣು ಎಂದು ಹೇಳಲಾಯಿತು. ಆದರೆ ಆ ಪರವಿದ್ಯಾವಿಷಯತ್ವವು ಅಥರ್ವಣಶ್ರುತಿಯಲ್ಲಿ ''ಯಸ್ಮಿನ್ ದ್ಯೌಃ'' ಇತ್ಯಾದಿಯಾಗಿ ಯಾವ ವ್ಯಕ್ತಿಯು ದ್ಯುಲೋಕ, ಭೂಲೋಕ ಮೊದಲಾದವುಗಳಿಗೆ ಆಶ್ರಯನಾಗಿದ್ದಾನೋ ಅಂತಹವನಲ್ಲಿ ಹೇಳಲ್ಪಟ್ಟಿದೆ. ಅಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವು ರುದ್ರದೇವರಲ್ಲಿ ಅಥವಾ ಜೀವರಲ್ಲಿ ಹೇಳಬಹುದು. ಏಕೆಂದರೆ ಸ್ವರ್ಗಲೋಕ ಭೂಲೋಕ ಇವುಗಳಿಗೆ ಆಶ್ರಯನಾದವನು ಇಂದ್ರಿಯಗಳಿಗೆ ಆಧಾರನಾಗಿದ್ದಾನೆಂದು 'ಮನಃ ಸಹ ಪ್ರಾಣೈಶ್ಚ ಸರ್ವೈಃ ' ಎಂಬ ಶ್ರುತಿಯಲ್ಲಿ ಹೇಳಲಾಗಿದೆ. 'ಪ್ರಾಣಾನಾಂ ಗ್ರಂಥಿರಸಿ ರುದ್ರೋ ಮಾವಿಶಾಂತಕಃ' ಎಂಬ ಶ್ರುತಿಯಲ್ಲಿ ಪ್ರಾಣ ಮೊದಲಾದ ಇಂದ್ರಿಯಗಳಿಗೆ ಆಶ್ರಯನಾದವನು ರುದ್ರ ಎಂದು ತಿಳಿಯುತ್ತದೆ. ಮತ್ತು ಪ್ರಾಣೇಶ್ವರನೆಂದರೆ ರುದ್ರನೇ ಆಗಿದ್ದಾನೆಂದು 'ಪ್ರಾಣೇಶ್ವರಃ ಕೃತ್ತಿವಾಸಾ ಪಿನಾಕೀ' ಎಂಬ ಘೃತಸೂಕ್ತವು ಹೇಳುತ್ತಿದೆ.

ಅಥವಾ ದ್ಯುಭ್ವಾದಿಲೋಕಗಳಿಗೆ ಆಶ್ರಯನಾದವನು ಜೀವನೂ ಸಹ ಆಗಬಹುದು. 'ಸ 'ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬ ಈ ಶ್ರುತಿಯು ಜೀವನು ಅನೇಕ ಶರೀರಗಳಲ್ಲಿ ಹುಟ್ಟಿ , ಅದರೊಳಗಿರುತ್ತಾನೆಂಬ ಜೀವನ ಧರ್ಮವನ್ನು ಹೇಳಿದೆ. ಆದ್ದರಿಂದ ರುದ್ರ ಅಥವಾ ಜೀವರುಗಳೇ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗಕ್ಕೆ ಆಶ್ರಯರಾಗಿದ್ದಾರೆಂದು ಪೂರ್ವಪಕ್ಷ ಪ್ರಾಪ್ತವಾಗುತ್ತದೆ.

> ಪ್ರತಿಪದಾರ್ಥ -- ಮೊದಲನೆಯ ಈ ಅಧಿಕರಣದಲ್ಲಿ ದ್ಯುಭ್ವಾದ್ಯಾಯತನತ್ವ (ಸ್ವರ್ಗಲೋಕ, ಭೂಲೋಕ ಮೊದಲಾದವುಗಳಿಗೆ ಆಶ್ರಯನಾಗಿರುವಿಕೆ) ಎಂಬ ಲಿಂಗಾತ್ಮಕಶಬ್ದವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡಲಾಗಿದೆ. ಅದಕ್ಕಾಗಿ ಮೊದಲು ರುದ್ರ, ಅಥವಾ ಜೀವಸಾಮಾನ್ಯರೇ ದ್ಯುಭ್ವಾದ್ಯಾಯತನ-ರಾಗಿದ್ದಾರೆಂಬ ಪೂರ್ವಪಕ್ಷವನ್ನು ತೋರಿಸುತ್ತಿದ್ದಾರೆ.

ವಿಷ್ಣೋಃ = ನಾರಾಯಣನಿಗೆ, ಪರವಿದ್ಯಾವಿಷಯತ್ವಂ = ಪರವಿದ್ಯೆಗೆ ವಿಷಯತ್ವವನ್ನು ಉಕ್ತಮ್ = ಹಿಂದಿನ ಅದೃಶ್ಯತ್ವಾಧಿಕರಣದಲ್ಲಿ ಹೇಳಲಾಯಿತು, ತತ್ರ = ಈ ಪರವಿದ್ಯಾವಿಷಯತ್ವವಿಷಯದಲ್ಲಿ ಅಥರ್ವಣೋಪನಿಷತ್ತಿನಲ್ಲಿ, ಯಸ್ಮಿನ್ = ಯಾವನಲ್ಲಿ ದ್ಯುಲೋಕವೆನಿಸಿದ ಸ್ವರ್ಗವು, ಚ = ಮತ್ತು, ಪೃಥಿವೀ = ಭೂಲೋಕವು, ಅಂತರಿಕ್ಷಂ = ಆಕಾಶವು ಓತಂ ಆಶ್ರಯಿಸಿಕೊಂಡಿವೆಯೋ ಮತ್ತು, ಸರ್ವೈಃ = ಎಲ್ಲಾ, ಪ್ರಾಣೈಃ = ಪ್ರಾಣ ಅಪಾನ ಮೊದಲಾದ ಪ್ರಾಣಗಳಿಂದ ಸಹ ಕೂಡಿರುವ, ಮನಃ = ಮನಸ್ಸು, ಓತಂ = ಯಾವ ವ್ಯಕ್ತಿಯನ್ನು ಆಶ್ರಯಿಸಿವೆಯೋ, ತಮೇವ = ಅವನನ್ನೇ, ಏಕಂ = ಮುಖ್ಯವಾಗಿ, ಆತ್ಮಾನಮ್ = ಆತ್ಮಶಬ್ದವಾಚ್ಯನನ್ನಾಗಿ, ಜಾನಥ = ತಿಳಿಯಿರಿ. ಇತ್ಯತ್ರ = ಹೀಗೆ ಈ ಶ್ರುತಿಯಲ್ಲಿ, ಅಂತಹ ವ್ಯಕ್ತಿಯೇ ಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಲಾಗಿದೆ.

ಮತ್ತು ಪ್ರಾಣಾನಾಂ = ಪ್ರಾಣಗಳಿಗೆ, ಗ್ರಂಥಿಃ = ನಿಯಾಮಕನು, ಅಸಿ = ಆಗಿರುವಿ. ಅಂತಕಃ = ಸಂಹಾರಕನೂ ಸಹ ನೀನೇ ಆಗಿರುವಿ. ಅಂತಹ ರುದ್ರನೇ ಮಾವಿಶ = ನನ್ನನ್ನು ಪ್ರವೇಶಿಸಬೇಡ. ಪ್ರಾಣೇಶ್ವರಃ = ಪ್ರಾಣಗಳಿಗೆ ಒಡೆಯನಾದ, ಕೃತ್ತಿವಾಸಾಃ = ಗಜಚರ್ಮಧಾರಿಯಾದ, ಪಿನಾಕೀ = ಪಿನಾಕವೆಂಬ ಧನುಸ್ಸನ್ನು ಧರಿಸಿದವನು, ಇತ್ಯಾದಿನಾ = ಇವೇ ಮೊದಲಾದ ವಾಕ್ಯಗಳಿಂದ, ಪ್ರಾಣಾಧಾರತ್ವಸ್ಯ = ಪ್ರಾಣಗಳಿಗೆ ಆಶ್ರಯವಾಗಿರುವಿಕೆ ಎಂಬ ಧರ್ಮವು, ರುದ್ರಸ್ಯ = ರುದ್ರದೇವರಿಗೆ, ಪ್ರತೀತೇಃ = ತೋರುತ್ತದೆ. ಆದಕಾರಣ;

ಮತ್ತು ಸ ಏಷಃ = ಇವನೇ, ಅಂತಃ = ಸಕಲಪ್ರಾಣಿಗಳ ಹೃದಯದಲ್ಲಿ, ಚರತೇ = ಸಂಚರಿಸುತ್ತಾನೆ. ಬಹುಧಾ = ಅನೇಕ ರೂಪಗಳನ್ನು ಹೊಂದಿ, ಜಾಯಮಾನಃ = ಹುಟ್ಟುತ್ತಾನೆ. ಇತಿ = ಹೀಗೆ, ಜೀವಲಿಂಗಾಚ್ಚ = ಜೀವನ ಲಿಂಗಗಳೂ ಸಹ ಇರುವುದರಿಂದ, ತಯೋಃ = ರುದ್ರ, ಹಾಗೂ ಜೀವರಿಗೆ, ಪ್ರಾಪ್ತಿಃ = ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಪ್ರಾಪ್ತವಾಗುತ್ತದೆ. ಇತಿ = ಇಷ್ಟು ಪೂರ್ವಪಕ್ಷ.

ಸ್ವರ್ಗಾದಿ ಲೋಕಗಳಿಗೆ ಮಹಾವಿಷ್ಣುವೇ ಆಧಾರ

ब्रह्मसूत्रभाष्यम् – अत उच्यते –

।। द्युभ्वाद्यायतनं स्वशब्दात् ।। १ ।।

'तमेवैकं जानथ आत्मानम्' (मुं.२–२–५) इत्यात्मशब्दाद् द्युभ्वाद्यायतनं विष्णुरेव ।

'आत्मब्रह्मादयः शब्दास्तमृते विष्णुमव्ययम् ।
न सम्भवन्ति यस्मात् तैर्नैवाऽसौ गुणपूर्णता ।।'
इति हि ब्रह्मवैवर्ते ।।१।।

ಹೀಗೆ ಪೂರ್ವಪಕ್ಷವು ಪ್ರಾಪ್ತವಾದರೆ ಸೂತ್ರಕಾರರು ನಿರಾಕರಿಸುತ್ತಿದ್ದಾರೆ.

'ತಮೇವೈಕಂಜಾನಥ' ಎಂಬಮಾಂಡೂಕ್ಯೋಪನಿಷತ್ತಿನಮಾತಿನಂತೆದ್ಯುಭ್ವಾದ್ಯಾಯತನನಾದವನು ಆತ್ಮನಾಗಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗುತ್ತಾನೆ; ಹೊರತು ರುದ್ರನಾಗಲೀ, ಜೀವನಾಗಲೀ ಆಗುವುದಿಲ್ಲ.

ಏಕೆಂದರೆ ಆತ್ಮಾ, ಬ್ರಹ್ಮ ಮೊದಲಾದ ಶಬ್ದಗಳೆಲ್ಲವೂ ನಾಶರಹಿತನಾದ ವಿಷ್ಣುವನ್ನೇ ಪ್ರತಿಪಾದಿಸುತ್ತವೆ; ಹೊರತು ಬೇರೆಯವರನ್ನಲ್ಲ. ಚತುರ್ಮುಖಾದಿ ದೇವತೆಗಳೆಲ್ಲರೂ ಗುಣಪೂರ್ಣರಾಗದ ಕಾರಣ ಆತ್ಮಾದಿಶಬ್ದಗಳು ಅವರನ್ನು ಪ್ರತಿಪಾದಿಸುವುದಿಲ್ಲ. ಹೀಗೆ ಬ್ರಹ್ಮವೈವರ್ತಪುರಾಣವು ಹೇಳಿದೆ.

ಪ್ರತಿಪದಾರ್ಥ -- ಹೀಗೆ ಪೂರ್ವಪಕ್ಷವು ಪ್ರಾಪ್ತವಾದರೆ ಸಿದ್ಧಾಂತವನ್ನು ಸ್ಥಾಪನೆ ಮಾಡುವ ಸೂತ್ರವನ್ನು ಹೇಳಿ ವ್ಯಾಖ್ಯಾನಿಸುತ್ತಿದ್ದಾರೆ.

ತಮೇವ = ವಿಷ್ಣುವನ್ನೇ, ಏಕಂ = ಪ್ರಧಾನವಾಗಿ, ಆತ್ಮಾನಂ = ಆತ್ಮಶಬ್ದವಾಚ್ಯನೆಂದು, ಜಾನಥ = ತಿಳಿಯಿರಿ. ಇತಿ = ಹೀಗೆ, ಆತ್ಮಶಬ್ದಾತ್ = ವಿಷ್ಣುವನ್ನೇ ಪ್ರತಿಪಾದಿಸುವ ಆತ್ಮಶಬ್ದವು ಕೇಳಿಸುತ್ತಿರುವುದರಿಂದ, ವಿಷ್ಣುರೇವ = ಮಹಾವಿಷ್ಣುವೇ, ದ್ಯುಭ್ವಾದ್ಯಾಶ್ರಯಃ = ಸ್ವರ್ಗ ಭೂಮಿ ಮೊದಲಾದ ಲೋಕಗಳಿಗೆ ಆಶ್ರಯನಾಗುತ್ತಾನೆ.

ಆತ್ಮಬ್ರಹ್ಮಾದಯಃ = ಆತ್ಮಾ ಬ್ರಹ್ಮ ಮೊದಲಾದ, ಶಬ್ದಾಃ = ಶಬ್ದಗಳು, ಅವ್ಯಯಂ = ನಾಶರಹಿತನಾದ, ವಿಷ್ಣುಂ = ವಿಷ್ಣುವನ್ನು, ಋತೇ = ಹೊರತಾಗಿ,

ನ ಸಂಭವಂತಿ = ಚತುರ್ಮುಖಾದಿ ದೇವತೆಗಳಲ್ಲಿ ಕೂಡುವುದಿಲ್ಲ. ಯಸ್ಮಾತ್ = ಏಕೆಂದರೆ, ತೈಃ = ಚತುರ್ಮುಖಬ್ರಹ್ಮ ರುದ್ರಾದಿಗಳಿಂದ, ಗುಣಪೂರ್ಣತಾ = ಸಕಲಗುಣಪರಿಪೂರ್ಣತೆಯು, ನೈವಾಪ್ತಾ = ಹೊಂದಲ್ಪಟ್ಟಿರುವುದಿಲ್ಲ. ಇತಿ = ಹೀಗೆ ಬ್ರಹ್ಮವೈವರ್ತೇ = ಬ್ರಹ್ಮವೈವರ್ತಪುರಾಣದಲ್ಲಿ ಹೇಳಲಾಗಿದೆ.

ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ

ಸತ್ತರ್ಕದೀಪಾವಳಿ

ಮೂರನೆಯ ಪಾದದ ಪ್ರಮೇಯ

।। द्युभ्वाद्यायतनं स्वशब्दात् ।।

सत्तर्कदीपावलिः – श्रीदशप्रमतिभ्यो नमः ।। 'विष्णौ तदितरत्रप्रसिद्धानां शब्दानां विष्णौ मुख्यवृत्तिः' अस्मिन् पादे बाहुल्येन प्रदर्श्यत इत्याह – तच्चेति ।। 'यस्मिन् द्यौः' इत्याद्यामायते ।

ದಶಪ್ರಮತಿಗಳಿಗೆ ಸಾಷ್ಟಾಂಗ ನಮಸ್ಕಾರ. ವಿಷ್ಣುವಿನಲ್ಲಿ ಹಾಗೂ ಬೇರೆಯವರಲ್ಲಿ ಪ್ರಸಿದ್ಧವಾದ ಶಬ್ದಗಳನ್ನು ಮುಖ್ಯವೃತ್ತಿಯಿಂದ ಮಹಾವಿಷ್ಣುವಿನಲ್ಲಿ ಬಹುಲವಾಗಿ ಈ ಪಾದದಲ್ಲಿ ಸಮರ್ಥಿಸುತ್ತಿದ್ದಾರೆಂದು ''ತತ್ರ'' ಇತ್ಯಾದಿ ಭಾಷ್ಯದಿಂದ ತಿಳಿಸಿದ್ದಾರೆ. 'ಯಸ್ಮಿನ್ ದ್ಯೌಃ' ಇತ್ಯಾದಿ ಶ್ರುತಿಯು ಅಧಿಕರಣದ ವಿಷಯವಾಕ್ಯ.

ಗ್ರಂಥಿಶಬ್ದದ ಅರ್ಥ

सत्तर्कदीपावलिः – तत्र श्रूयमाणो द्युभ्वाद्याश्रयो रुद्रस्तावद् भवेत् । 'ओतं मनः सह प्राणैश्च सर्वैः' इति प्राणाधारत्वेनोच्यमानत्वात् । 'प्राणानां ग्रन्थिरसि प्राणेश्वरः' इति च श्रुत्यन्तरेण प्राणाधारत्वस्य रुद्रधर्मत्वेनोक्तत्वात्। 'ग्रथ्यते तस्मिन्' इति ग्रन्थिः = धारकः ।

ಈ ವಿಷಯವಾಕ್ಯದಲ್ಲಿ ಶ್ರುತನಾದ ದ್ಯುಭ್ವಾದ್ಯಾಶ್ರಯನು ರುದ್ರನೇ ಆಗುತ್ತಾನೆ. ಏಕೆಂದರೆ 'ಓತಂ ಮನಃ ಸಹ ಪ್ರಾಣೈಶ್ಚ ಸರ್ವೈಃ' ಇತ್ಯಾದಿಯಾಗಿ ಪ್ರಾಣಾಧಾರತ್ವೇನ ರುದ್ರನು ಪ್ರತಿಪಾದ್ಯನಾಗಿದ್ದಾನೆ. 'ಪ್ರಾಣಾನಾಂ ಗ್ರಂಥಿರಸಿ ಪ್ರಾಣೇಶ್ವರಃ' ಎಂಬ ಮತ್ತೊಂದು ಶ್ರುತಿಯಿಂದ ಪ್ರಾಣಾಧಾರವು ರುದ್ರನ ಧರ್ಮವೆಂದು ಸಿದ್ಧವಾಗಿದೆ. ಏಕೆಂದರೆ ಗ್ರಂಥಿಶಬ್ದಕ್ಕೆ ''ಗ್ರಥ್ಯತೇ ತಸ್ಮಿನ್'' ಎಂಬ ನಿಷ್ಪತ್ತಿಯಂತೆ ಧಾರಣೆ ಮಾಡಿದವನು ಎಂದರ್ಥ.

ಜೀವನು ದ್ಯುಭ್ವಾದ್ಯಾಶ್ರಯತನನು ಏಕಲ್ಲ ?

सत्तर्कदीपावलिः – 'स एषोऽन्तरश्चरते बहुधा जायमानः' इति परामृष्टत्वात् द्युभ्वाद्याश्रयो जीवो वा भवेद् बहुधाजननस्य जीवलिङ्गत्वात् ।

'ಸ ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬ ಶ್ರುತಿಯನ್ನು ಪ್ರಕೃತ ವಿಷಯವಾಕ್ಯದಲ್ಲಿ ಪರಾಮರ್ಶಮಾಡಿಕೊಳ್ಳುವುದರಿಂದ ದ್ಯುಭ್ವಾದ್ಯಾಶ್ರಯನಾದವನು ಜೀವನು ಆಗಬಹುದು. ಬಹುಧಾ ಜಾಯಮಾನತ್ವವು ಜೀವನ ಅಸಾಧಾರಣಲಿಂಗವಾಗಿದೆ.

ಪರವಿದ್ಯೆಗೆ ವಿಷಯನಾದವನೇ ದ್ಯುಭ್ವಾದ್ಯಾಶ್ರಯನು

सत्तर्कदीपावलिः – द्युभ्वाद्याश्रयस्यैव 'अथ परा यया तदक्षरमधिगम्यते' इत्युपक्रम्योक्तत्वात् यदुक्तं 'परविद्याविषयत्वं विष्णुधर्मः' इति प्राक्, तदपि न सिद्ध्यति । तदाह – विष्णोरित्यादिना ।।

ಯಾರು ದ್ಯುಭ್ವಾದ್ಯಾಶ್ರಯನೋ, ಅವನು 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬ ಶ್ರುತಿಯಲ್ಲಿ ಪರವಿದ್ಯಾವಿಷಯನಾಗಿದ್ದಾನೆಂದು ಹೇಳಲಾಗಿದೆ. ಪರವಿದ್ಯಾವಿಷಯತ್ವವು

ವಿಷ್ಣುಧರ್ಮವೆಂದು ಹಿಂದೆ ಅದೃಶ್ಯತ್ವಾಧಿಕರಣದಲ್ಲಿ ಸ್ಥಾಪನೆ ಮಾಡಿದ ಸಿದ್ಧಾಂತವೂ ಕೂಡ ಈಗ ಸಿದ್ಧವಾಗುವುದಿಲ್ಲ. ಈ ವಿಷಯವನ್ನು ಭಾಷ್ಯದಲ್ಲಿ 'ವಿಷ್ಣೋಃ' ಇತ್ಯಾದಿಯಾಗಿ ತಿಳಿಸಿರುತ್ತಾರೆ.

ಆತ್ಮಶಬ್ದದ ಮುಖ್ಯಾರ್ಥ ಯಾರು ?

सत्तर्कदीपावलिः – एतन्निराकर्तुं सूत्रं पठित्वा व्याचष्टे – द्युभ्वेत्यादिना।। 'तमेवैकं जानथ आत्मानम्' इत्यात्मशब्देन विशेषितत्वात् द्युभ्वाद्याश्रयो विष्णुरेव ।

ಈ ಪೂರ್ವಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿ ಸೂತ್ರವನ್ನು ಪಠಣವನ್ನು ಮಾಡಿ ವ್ಯಾಖ್ಯಾನಮಾಡುತ್ತಿದ್ದಾರೆ 'ದ್ಯುಭ್ವಾದ್ಯಾಯತನಂ' ಇತ್ಯಾದಿಯಾಗಿ. 'ತಮೇವೈಕಂ ಜಾನಥ ಆತ್ಮಾನಂ' ಎಂಬ ಶ್ರುತಿಯಲ್ಲಿ ಆತ್ಮಶಬ್ದವನ್ನು ವಿಶೇಷಣವನ್ನಾಗಿ ನೀಡಿರುವುದರಿಂದ ದ್ಯುಭ್ವಾದ್ಯಾಯತನಾದವನು ವಿಷ್ಣುವೇ ಆಗುತ್ತಾನೆ.

ಆತ್ಮ ಎಂದರೆ ಮಹಾವಿಷ್ಣು ಮಾತ್ರ

सत्तर्कदीपावलिः – गुणैरातत्त्ववाच्यात्मशब्दो न विष्णोरन्यत्र स्वार्थं लभते । तथाहि उक्तम् – आत्मब्रह्मेति ।। 'अमृतस्यैष सेतुः' इति मुक्ताधारत्वेनोच्यमानत्वादपि द्युभ्वाद्याश्रयो विष्णुः ।

ಗುಣಗಳಿಂದ ತುಂಬಿರುವ ವಿಷ್ಣುವೇ ಆತ್ಮಶಬ್ದ ಪ್ರತಿಪಾದ್ಯನಾಗುತ್ತಾನೆ. ಬೇರೆಡೆ ಆತ್ಮಶಬ್ದವು ಸ್ವಾರ್ಥವನ್ನು ಹೊಂದುವುದಿಲ್ಲ. ಇದನ್ನೇ ''ಆತ್ಮಬ್ರಹ್ಮಾದಯಃ'' ಎಂಬ ಶ್ಲೋಕದಿಂದ ಸ್ಪಷ್ಟಪಡಿಸಿದ್ದಾರೆ. 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯಲ್ಲಿ ಮುಕ್ತರಿಗೆ ಆಧಾರತ್ವೇನ ಪ್ರತಿಪಾದ್ಯನೆಂದು ಹೇಳಲ್ಪಟ್ಟವನೂ ಕೂಡ ದ್ಯುಭ್ವಾದ್ಯಾಶ್ರಯನಾದ ಮಹಾವಿಷ್ಣುವೇ ಆಗಿದ್ದಾನೆಂದು ಹೊರತು, ಬೇರೆಯವರಲ್ಲ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ

ತತ್ತ್ವಪ್ರದೀಪ

ಪರವಿದ್ಯೆಗೆ ವಿಷಯನಾದವನೇ ಪ್ರಾಣಾಧಾರ

तत्वप्रदीपः – अथोभयत्र प्रसिद्धानां नामलिङ्गात्मकानां शब्दानां समन्वयः कथ्यते । ''अथ परा यया तदक्षरमधिगम्यते'' इत्यादिना विष्णोः परविद्याविषयत्वमुक्तम् । तत्र परविद्याविषये, तस्यामेव श्रुतौ 'यस्मिन् द्यौः पृथिवी चान्तरिक्षमोतं मनस्सह प्राणैश्च सर्वैः । तमेवैकं जानथ आत्मानम्' इत्यत्र द्युभ्वाद्यायतनवाक्यैः श्रूयमाणं प्राणाधारत्वं श्रुत्यन्तरे रुद्रस्य प्रतीयत इत्यन्वयः ।।

ಮೂರನೆಯ ಪಾದವು ಪ್ರಾರಂಭವಾಗುತ್ತಿದೆ. ಈ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳ ಹಾಗೂ ಲಿಂಗಾತ್ಮಕಶಬ್ದಗಳ ಸಮನ್ವಯವನ್ನು ಸಮರ್ಥಿಸುತ್ತಿದ್ದಾರೆ.

'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಇತ್ಯಾದಿಯಾದ ಅದೃಶ್ಯತ್ವಾಧಿಕರಣದಲ್ಲಿ ಉಲ್ಲೇಖಿಸಿದ ಶ್ರುತಿಯಲ್ಲಿ ವಿಷ್ಣು ಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಲಾಗಿದೆ. ಯಾರು ಪರವಿದ್ಯೆಗೆ ವಿಷಯನಾಗಿದ್ದಾನೋ, ಅದೇ ಶ್ರುತಿಯು ಅವನಲ್ಲಿ 'ಯಸ್ಮಿನ್‌ದ್ಯೌಃ ಪೃಥಿವೀ ಚಾಂತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಮ್' ಎಂಬುದಾಗಿ ದ್ಯುಭ್ವಾದ್ಯಾಯತನ ವಾಕ್ಯಗಳಿಂದ ಪ್ರಾಣಾಧಾರತ್ವವನ್ನು ಹೇಳುತ್ತಿದೆ. ಈ ಪ್ರಾಣಾಧಾರತ್ವವು ರುದ್ರನಲ್ಲೇ ಪ್ರತೀತವಾಗುತ್ತಿದೆ ಎಂಬುದಾಗಿ ಭಾಷ್ಯದ ವಾಕ್ಯಗಳಿಗೆ ಅನ್ವಯಪ್ರಕಾರವಾಗಿ ಅರ್ಥವನ್ನು ತಿಳಿಯಬೇಕು.

ಪ್ರಾಣಾಧಾರನೇ ದುಭ್ವಾದ್ಯಾಶ್ರಯ

तत्वप्रदीपः – अयमभिसन्धिः – विष्णोः परविद्याविषयत्वमुक्तम् । तच्च परविद्याविषयत्वं द्युभ्वाद्यायतनस्योच्यते तमेवैकं जानथ आत्मानमित्यत्र ।

अनन्ययोगेन प्रधानज्ञेयत्वं त्रोच्यते । तदेव च परविद्याविषयत्वम् । तस्य च द्युभ्वाद्यायतनस्य प्राणाधारत्वं श्रूयते 'ओतं मनः सह प्राणैश्च सर्वैः' इति ।

ಭಾಷ್ಯದ ಅಭಿಪ್ರಾಯ ಹೀಗಿದೆ - ವಿಷ್ಣುವಿಗೆ ಪರವಿದ್ಯಾವಿಷಯತ್ವವನ್ನು ಹಿಂದೆ ಅದೃಶ್ಯತ್ವಾಧಿಕರಣದಲ್ಲಿ ಹೇಳಲಾಯಿತು. ಆದರೆ ಈ ಪರವಿದ್ಯಾವಿಷಯತ್ವವು ಶ್ರುತಿಗಳಲ್ಲಿ ದ್ಯುಭ್ವಾದ್ಯಾಯತನನಿಗೆ ಹೇಳಲ್ಪಟ್ಟಿದೆ 'ತಮೇವೈಕಂ ಜಾನಥ ಆತ್ಮಾನಮ್' ಇತ್ಯಾದಿಯಾಗಿ. ಅಷ್ಟೇ ಅಲ್ಲದೇ ಬೇರೆಯವರನ್ನು ತಿಳಿಯದೇ ಪರವಿದ್ಯಾವಿಷಯವನ್ನು ಪ್ರಧಾನವಾಗಿ ತಿಳಿಯಬೇಕೆಂದೂ ಕೂಡ ಈ ಶ್ರುತಿಯು ಹೇಳುತ್ತಿದೆ. ಪ್ರಧಾನವಾಗಿ ತಿಳಿಯಬೇಕಾದ ಈ ವ್ಯಕ್ತಿಯೇ ಪರವಿದ್ಯೆಗೆ ವಿಷಯನಾಗಿದ್ದಾನೆ. ಈ ಪರವಿದ್ಯಾವಿಷಯನಾದವನು ದ್ಯುಭ್ವಾದ್ಯಾಶ್ರಯ-ನಾಗಿದ್ದಾನೆ. ಅವನೇ ಪ್ರಾಣಾಧಾರನಾಗಿದ್ದಾನೆಂದು 'ಓತಂ ಮನಃ ಸಹ ಪ್ರಾಣೈಶ್ಚ ಸರ್ವೈಃ' ಎಂಬುದಾಗಿ ಶ್ರುತಿಯು ಸ್ಪಷ್ಟವಾಗಿ ಹೇಳುತ್ತಿದೆ.

ರುದ್ರ, ಜೀವ, ವಾಯು ಇವರುಗಳು ದುಭ್ವಾದ್ಯಾಶ್ರಯರರೇ ?

तत्वप्रदीपः – तच्च प्राणाधारत्वं श्रुत्यन्तरे रुद्रस्य प्रतीयते, प्राणानां ग्रन्थिरसीत्यादौ, प्राणेश्वर इत्यादौ च । अस्यामेवोपरि जीवलिङ्गं च । वायोश्च तत्र तत्र प्रसिद्धं प्राणाधारत्वम् ।

ಈ ಪ್ರಾಣಾಧಾರತ್ವವನ್ನು ನಾರಾಯಣೋಪನಿಷತ್ತು 'ಪ್ರಾಣಾನಾಂ ಗ್ರಂಥಿರಸಿ' ಇತ್ಯಾದಿಯಾಗಿ ರುದ್ರನಲ್ಲಿ ಹೇಳುತ್ತಿದೆ. 'ಪ್ರಾಣೇಶ್ವರಃ ಕೃತ್ತಿವಾಸಃ' ಎಂಬ ಘೃತಸೂಕ್ತವೂ ಕೂಡ ಇದನ್ನೇ ಸ್ಪಷ್ಟಪಡಿಸುತ್ತಿದೆ.

ಮತ್ತು ಇದೇ ಶ್ರುತಿಯ ಮುಂದಿನ ಭಾಗದಲ್ಲಿ ಜೀವಲಿಂಗವೂ ಕೂಡ ಕೇಳಿಸುತ್ತಿದೆ. ಮುಖ್ಯವಾಯುವಿನಲ್ಲಿಯೂ ಪ್ರಾಣಾಧಾರತ್ವವು ಪ್ರಸಿದ್ಧವಾಗಿರುವುದು ಅನೇಕ ಶ್ರುತಿಗಳಲ್ಲಿದೆ. ಆದ್ದರಿಂದ ರುದ್ರ, ಜೀವ, ವಾಯು ಇವರುಗಳಲ್ಲಿ ಪರವಿದ್ಯಾವಿಷಯತ್ವವು ತಿಳಿಯುತ್ತದೆ ಎಂಬುದು ಒಟ್ಟು ಭಾಷ್ಯದ ಅಭಿಪ್ರಾಯ.

ವಿಶೇಷವಿಚಾರ - ದ್ಯುಭ್ವಾದ್ಯಾಯತನನು ಅಥವಾ ಪ್ರಾಣಾಧಾರನು ಜೀವನಾಗಿದ್ದಾನೆನ್ನಲು ಭಾಷ್ಯದಲ್ಲಿ ನೇರವಾದ ಶ್ರುತಿಯನ್ನು ಉಲ್ಲೇಖ ಮಾಡಿಲ್ಲ. ಆದರೆ

ಬಹುಧಾ ಜಾಯಮಾನಃ' ಎಂಬುದಾಗಿ ಜೀವಲಿಂಗವನ್ನು ಹೇಳುವ ಮುಂಡಕದ ಮಾತನ್ನು ಉಲ್ಲೇಖಿಸಿದ್ದಾರೆ. ಅನೇಕ ಬಾರಿ ಹುಟ್ಟುವಿಕೆ ಎಂಬುದು ಜೀವನಲ್ಲಿ ಮುಖ್ಯವಾಗಿ ಕೂಡುತ್ತದೆ. ಈ ಬಹುಧಾ ಜಾಯಮಾನತ್ವವನ್ನು ವಿಷ್ಣುವಿನಲ್ಲಿ ಮುಖ್ಯವಾಗಿ ಹೇಳಲು ಬರುವುದಿಲ್ಲ. ಈ ಲಿಂಗದ ಬಲದಿಂದ 'ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಂ' ಇತ್ಯಾದಿ ವಾಕ್ಯವೂ ಕೂಡ ಜೀವಪರವಾಗಿಯೇ ವ್ಯಾಖ್ಯಾನ ಮಾಡಬೇಕೆಂಬುದು ಭಾಷ್ಯದ ಅಭಿಪ್ರಾಯ.

ಆದರೆ ರುದ್ರನ ವಿಷಯದಲ್ಲಿ 'ಪ್ರಾಣಾನಾಂ ಗ್ರಂಥಿರಸಿ' ಇತ್ಯಾದಿ ಬೇರೆ ಶ್ರುತಿಯನ್ನು ಆಧಾರವನ್ನಾಗಿ ನೀಡಿದ್ದಾರೆ. ಜೀವನ ವಿಷಯದಲ್ಲಿ 'ಯಸ್ಮಿನ್ ದ್ಯೌಃ' ಎಂಬ ವಾಕ್ಯವನ್ನೇ ದ್ಯುಭ್ವಾದ್ಯಾಯತನಕ್ಕೆ ಆಶ್ರಯವನ್ನಾಗಿ ತಿಳಿಯಬೇಕು.

ವಾಯುದೇವರ ವಿಷಯದಲ್ಲೂ ಕೂಡ ಪ್ರತ್ಯೇಕವಾದ ಶ್ರುತಿಯನ್ನು ಭಾಷ್ಯದಲ್ಲಿ ಉಲ್ಲೇಖ ಮಾಡಿಲ್ಲ. ಏಕೆಂದರೆ 'ಯಸ್ಮಿನ್ ದ್ಯೌಃ ಪೃಥಿವೀ' ಎಂಬ ಶ್ರುತಿಯೇ ವಾಯುಪರವಾಗಿಯೂ ಕೂಡ ವ್ಯಾಖ್ಯಾನ ಮಾಡಬಹುದು. ಭೂರ್ಲೋಕ, ಭುವರ್ಲೋಕ, ಸುವರ್ಲೋಕಗಳಿಗೆ ಆಶ್ರಯರಾದವರು ವಾಯುದೇವರು ಹಾಗೂ ಇಂದ್ರಿಯಾಭಿಮಾನಿದೇವತೆಗಳಲ್ಲಿ ಶ್ರೇಷ್ಠರಾದ ಕಾರಣ ಅವರೇ ಪ್ರಾಣಾಧಾರರಾಗಿದ್ದಾರೆ. ಹೀಗೆ ವಾಯುವೂ ಕೂಡ ದ್ಯುಭ್ವಾದ್ಯಾಯತನ ಎನಿಸಬಹುದು.

ಅಧಿಕರಣದ ಸಂಶಯ

तत्वप्रदीपः – तत्र संशयः । किमिदं द्युभ्वाद्यायतनं रुद्रस्स्यादुत जीवमात्रमाहोस्विद्वायुरुत विष्णुरेवेति । द्युभ्वाद्यायतनमिति सूत्रभाष्ये एव सन्देहपदमावेदयतः । अस्यैव हि विष्णुत्वं सिद्धान्ततः सूत्र्यते भाष्यते च ।

ಈ ಅಧಿಕರಣದ ಸಂಶಯಕೋಟಿ ಹೀಗಿದೆ - ದ್ಯುಭ್ವಾದ್ಯಾಯತನನಾದವನು ರುದ್ರನೋ, ಜೀವನೋ, ಅಥವಾ ವಾಯುವೋ ಅಥವಾ ಮಹಾವಿಷ್ಣುವೋ? ಈ ಸಂಶಯವು 'ದ್ಯುಭ್ವಾದ್ಯಾಯಶ್ರಯಃ ವಿಷ್ಣುರೇವ' ಎಂಬ ಸೂತ್ರಭಾಷ್ಯದಿಂದ ತಿಳಿಯುತ್ತದೆ. ದ್ಯುಭ್ವಾದ್ಯಾಯತನ-ನಾದವನು ಮಹಾವಿಷ್ಣುವೇ ಆಗಿದ್ದಾನೆ ಎಂದು ಸೂತ್ರದಲ್ಲಿ ಹಾಗೂ ಭಾಷ್ಯದಲ್ಲಿ ಸಿದ್ಧಾಂತ ಮಾಡಿದ್ದಾರೆ.

ಎಲ್ಲಾ ಅಧಿಕರಣಗಳಲ್ಲಿ ಸಂಶಯಕೋಟಿ ತಿಳಿಯುವ ಬಗ್ಗೆ

तत्वप्रदीपः – यस्य च यथात्वं सिद्धान्तयति तस्य तदन्यथात्वं पूर्वपक्षयतीति श्लिष्टम् । पूर्वपक्षसिद्धान्तनिर्णेयधर्मधर्मिण एव च संशयाधिकरणत्वम् । तावेव च धर्मौ सर्वत्र संशयकोटितामाटीकेते ।

ಯಾವ ಅಧಿಕರಣದಲ್ಲಿ ಹೇಗೆ ಸಿದ್ಧಾಂತ ಮಾಡಲಾಗುತ್ತದೋ, ಅದಕ್ಕೆ ವಿರುದ್ಧವಾದದ್ದೇ ಪೂರ್ವಪಕ್ಷ- ವಾಗುತ್ತದೆಂಬುದು ಲೋಕಪ್ರಸಿದ್ಧಿ. ಏಕೆಂದರೆ ಪೂರ್ವಪಕ್ಷದಲ್ಲಿ ನಿರ್ಣಯ ಮಾಡುವ ಧರ್ಮದ ಧರ್ಮಿಯು ಹಾಗೂ ಸಿದ್ಧಾಂತದಲ್ಲಿ ನಿರ್ಣಯ ಮಾಡಲ್ಪಡುವ ಧರ್ಮದ ಧರ್ಮಿಯು ಸಂಶಯಕ್ಕೆ ಅಧಿಕರಣವಾಗಿರುತ್ತದೆ. ಈ ಎರಡು ಧರ್ಮಗಳೇ ಸಂಶಯಕೋಟಿಗೆ ಆಶ್ರಯವಾಗುತ್ತವೆ. ಆದ್ದರಿಂದ ಪೂರ್ವಪಕ್ಷ ಹಾಗೂ ಸಿದ್ಧಾಂತಕೋಟಿಗಳಿಂದಲೇ ಸಂಶಯವನ್ನು ತಿಳಿಯಬೇಕು.

ಈ ಪ್ರಸಿದ್ಧನ್ಯಾಯವನ್ನು ಅನುಸರಿಸಿರಿ

तत्वप्रदीपः – अयमतिप्रसिद्धो न्यायस्सर्वत्रानुसारयितव्यो यद्याद्रियन्ते विद्वांसः ।

ಪ್ರಸಿದ್ಧವಾದ ಈ ನ್ಯಾಯವನ್ನು ಎಲ್ಲಾ ಅಧಿಕರಣಗಳಲ್ಲಿಯೂ ಅನುಸರಿಸಬೇಕು. ಸಂಶಯವನ್ನು ತಿಳಿಯಬೇಕೆಂಬ ಆದರವುಳ್ಳ ವಿದ್ವಾಂಸರು ಪೂರ್ವಪಕ್ಷ ಹಾಗೂ ಸಿದ್ಧಾಂತಗಳ ಧರ್ಮವನ್ನೇ ಸಂಶಯಕೋಟಿಯನ್ನಾಗಿ ತಿಳಿಯಬೇಕು. (ಆದ್ದರಿಂದ ನಾವು ಪ್ರತ್ಯೇಕವಾಗಿ ಸಂಶಯಕೋಟಿಯನ್ನು ಉಲ್ಲೇಖ ಮಾಡುವುದಿಲ್ಲ.

ನಾವೇಕೆ ಎಲ್ಲಾ ಅಧಿಕರಣಗಳಲ್ಲಿ ಸಂಶಯಾದಿಗಳನ್ನು ತೋರಿಸುವುದಿಲ್ಲ?

तत्वप्रदीपः – न पुनरतिगहनार्थत्वावगाहसन्नाहिनो महदनुसेविनः प्रत्यधिकरणं प्रक्रियाप्रकथनरूपां बहिर्मुखसुखावहामनल्पजल्पमालामाद्रियेरन्। नहि मणिगणमार्गणपरा निपुणाधियोऽनुपदं स्वपरगुप्तिपाटनपटवोऽधिजलधि लहरीपटलपरिवृत्ति-परिगणनकौतुकेन समयमतिपातयन्ति ।

ಶ್ರೀಮದಾಚಾರ್ಯರ ಅನುಸೇವಿಗಳಾದ ಜ್ಞಾನಿಗಳು ಅತ್ಯಂತ ಗಹನವಾದ ಅರ್ಥತತ್ವವನ್ನು ತಿಳಿಯುವುದರಲ್ಲೇ ಆಸಕ್ತರಾಗಿರುತ್ತಾರೆ. ಇಂಥವರಿಗೆ ಪ್ರತಿಯೊಂದು ಅಧಿಕರಣಗಳಲ್ಲಿ ಅಧಿಕರಣರಚನೆಗೆ ಉಪಯುಕ್ತವಾದ ಸಂಶಯಾದಿಗಳ ಪ್ರಕ್ರಿಯೆಯ ತಿಳಿಯುವಿಕೆಯು ಇಷ್ಟವಾಗುವುದಿಲ್ಲ. ಇದು ಕೇವಲ ಬಹಿರ್ಮುಖವಾದ ಸುಖಕಾರಕವಷ್ಟೇ ಹೊರತು, ತತ್ವಬುಭುತ್ಸುಗಳಿಗೆ ಸುಖಪ್ರದವಲ್ಲ. ಆದ್ದರಿಂದ ಬಹಳವಾದ ಹುರುಳಿಲ್ಲದ ಮಾತುಗಳನ್ನು ಪ್ರತಿಯೊಂದು ಅಧಿಕರಣಗಳಲ್ಲಿ ಜ್ಞಾನಿಗಳು ಇಷ್ಟಪಡಲಾರರು.

ನಿಪುಣಮತಿಗಳು ತತ್ವಮಣಿಗಳ ಅನ್ವೇಷಣದಲ್ಲಿ ರತರಾಗಿರುತ್ತಾರೆ. ಪ್ರತಿಕ್ಷಣವೂ ತಮ್ಮ ಸಿದ್ಧಾಂತದ ರಕ್ಷಣೆಯನ್ನು ಮಾಡಿಕೊಳ್ಳುವುದಷ್ಟೇ ಅಲ್ಲದೇ ಪರಪಕ್ಷದ ನಿರಾಕರಣದಲ್ಲಿ ಆಸಕ್ತರಾಗಿರುತ್ತಾರೆ. ಇಂಥವರು ಸಮುದ್ರದಡದಲ್ಲಿ ಕುಳಿತು ಅಲೆಗಳನ್ನು ಎಣಿಸುವ ಕುತೂಹಲದಲ್ಲಿ ಸಮಯ ವ್ಯರ್ಥ ಮಾಡಲಾರರು.

ಕಠಿಣಪದಾರ್ಥ - 'ಅತಿಗಹನಾರ್ಥತ್ವಾವಗಾಹಸನ್ನಾಹಿನಃ' = ಅತ್ಯಂತ ಗಹನವಾದ ಅರ್ಥತತ್ವವನ್ನು ತಿಳಿಯುವುದರಲ್ಲಿ ಆಸಕ್ತರಾದ, ಮಹದನುಸೇವಿನಃ = ಶ್ರೀಮದಾಚಾರ್ಯರನ್ನು ನಿರಂತರ ಸೇವಿಸುವ ಜ್ಞಾನಿಗಳು, ಪ್ರತ್ಯಧಿಕರಣಂ = ಪ್ರತಿಯೊಂದು ಅಧಿಕರಣದಲ್ಲಿ, ಪ್ರಕ್ರಿಯಾ ಪ್ರಕಥನರೂಪಾಂ = ಪ್ರಾಂಚರು ಹೇಳುವ ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ, ಪ್ರಯೋಜನ ಇವುಗಳೇ ಪ್ರಕ್ರಿಯಾಪ್ರಕಥನ ಇವುಗಳು, ಬಹಿರ್ಮುಖಸುಖಾವಹಾಮ್ = ಹೊರಗಿನಿಂದಷ್ಟೇ ಸುಖಪ್ರದವಾದ, ಅನಪಲ್ಪಜಲ್ಪಮಾಲಾಂ = ಬಹಳವಾದ ಹುರುಳಿಲ್ಲದ ಮಾತುಗಳ ಪರಂಪರೆಯನ್ನು, ನ ಪುನಃ ಆದ್ರಿಯೇರನ್ = ಮತ್ತೆ ಮತ್ತೆ ಇಷ್ಟ ಪಡುವುದಿಲ್ಲ. ಮಣಿಗಣಮಾರ್ಗಣಪರಾಃ = ಮಣಿಗಳ ಸಮೂಹವನ್ನು ಹುಡುಕುವುದರಲ್ಲಿ ನಿಷ್ಠರಾದ, ನಿಪುಣಾಧಿಯಃ = ಚತುರಮತಿಗಳು, ಅನುಪದಂ = ನಿರಂತರವಾಗಿ, ಸ್ವಪರಗುಪ್ತಿಪಾಟನ-ಪಟವಃ = ತಮ್ಮ ಪಕ್ಷವನ್ನು ರಕ್ಷಣೆ ಮಾಡಿಕೊಳ್ಳುತ್ತಾ ಪರಪಕ್ಷವನ್ನು ನಿರಾಕರಣೆ ಮಾಡುವುದರಲ್ಲಿ, ಪಟುಗಳಾದ ಜ್ಞಾನಿಗಳು, ಅಧಿಜಲಧಿ = ಸಮುದ್ರತಟದಲ್ಲಿ, ಲಹರೀಪಟಲಪರಿವೃತ್ತಿಪರಿಗಣನಕೌತುಕೇನ = ಪುನಃ ಪುನಃ ಬರುತ್ತಿರುವ ಅಲೆಗಳ ಎಣಿಸುವಿಕೆಯ ಕುತೂಹಲದಲ್ಲಿ,

ಸಮಯಂ = ಕಾಲವನ್ನು, ನಹಿ ಅತಿಪಾತಯಂತಿ = ವ್ಯರ್ಥ ಮಾಡಲಾರರು.

ವಿಶೇಷವಿಚಾರ - ಸಮುದ್ರದಲ್ಲಿ ಅಮೂಲ್ಯವಾದ ಮಣಿಗಳನ್ನು ಹುಡುಕುವುದರಲ್ಲಿ ನಿಪುಣರಾದ ವ್ಯಕ್ತಿಗಳು ಪ್ರತಿಕ್ಷಣವು ತಮಗಿರುವ ಆಪತ್ತನ್ನು ಪರಿಹರಿಸಿಕೊಂಡು, ತಮ್ಮ ಮಣಿಗಳ ಅನ್ವೇಷಣೆಗೆ ಅಡ್ಡಿಪಡಿಸುವ ಪ್ರಾಣಿಗಳನ್ನು ಸಂಹಾರ ಮಾಡುವುದರಲ್ಲೇ ಆಸಕ್ತರಾಗಿರುತ್ತಾರೆ ಹೊರತು, ದಡದಲ್ಲಿ ಕುಳಿತು ಅಲೆಗಳನ್ನು ಎಣಿಸುವ ಕುತೂಹಲದಲ್ಲಿ ಕಾಲವನ್ನು ವ್ಯರ್ಥಮಾಡಲಾರರು. ಇದರಂತೆ ನಿಜವಾದ ತತ್ವಜ್ಞಾನಿಯೂ ಕೂಡ ತತ್ವವೆಂಬ ಮಣಿಗಳ ಅನ್ವೇಷಣೆಯಲ್ಲಿಯೇ ಆಸಕ್ತನಾದಾಗ ತನ್ನ ಸಿದ್ಧಾಂತದ ಪರಿರಕ್ಷಣೆಯನ್ನು ಮಾಡಿಕೊಳ್ಳುವುದಷ್ಟೇ ಅಲ್ಲದೇ ಪರಪಕ್ಷದ ನಿರಾಕರಣೆಯಲ್ಲಿ ಪ್ರತಿಕ್ಷಣವು ಆಸಕ್ತನಾಗಿರುತ್ತಾನೆ. ಇಂಥವನು ಪ್ರತಿಯೊಂದು ಅಧಿಕರಣಗಳ ಸಂಶಯಗಳ ಪರಿಗಣನೆಯಲ್ಲಿ, ಅಧಿಕರಣಗಳ ಗಣನೆಯಲ್ಲಾಗಲೀ ಸಮಯವನ್ನು ವ್ಯರ್ಥಮಾಡಲಾರನಷ್ಟೇ.

ಅಧಿಕರಣಗಳ ರಚನೆಗೆ ದಿಕ್‌ಪ್ರದರ್ಶನ ಮಾಡಿದ್ದೇವೆ

तत्वप्रदीपः – ननु संशयनिर्णयप्रयोजनादीनामनधिगतौ केयमधिकरण-परिभाषा । किमत्रानधिगतम् ? पूत्रोत्तरपक्षयुक्तिकथनात्मके विचारे विशेषयुक्त्या सिद्धान्तावधारणात्मको निर्णयस्तत्र तत्र प्रसिद्धः । प्रयोजनं च तत्तत्समन्वयसिद्धिः समन्वयाध्याये । एवमुत्तरत्रापीति दिङ्मात्रमत्र प्रदर्शितम्।।

ಸಂಶಯ, ಸಿದ್ಧಾಂತ, ಪ್ರಯೋಜನ ಇವುಗಳನ್ನು ತಿಳಿಯದಿದ್ದರೆ, ಅಧಿಕರಣ ಪರಿಭಾಷೆಯನ್ನೇ ತಿಳಿಯಲು ಸಾಧ್ಯವಾಗುವುದಿಲ್ಲ ಅಲ್ಲವೆ ?

ಹೀಗೆ ಪ್ರಶ್ನಿಸುವುದೇ ತಪ್ಪು. ತಿಳಿಯದ ವಿಚಾರ ಯಾವುದಿದೆ ಇಲ್ಲಿ ? ಏಕೆಂದರೆ ಪೂರ್ವಪಕ್ಷಯುಕ್ತಿ ಹಾಗೂ ಸಿದ್ಧಾಂತಯುಕ್ತಿಗಳನ್ನು ಹೇಳುವ ಸಂದರ್ಭದಲ್ಲಿ ವಿಶೇಷ-ಯುಕ್ತಿಯಿಂದ ಸಿದ್ಧಾಂತದ ಅವಧಾರಣೆಯನ್ನು ಎಲ್ಲೆಡೆಯೂ ಮಾಡಲಾಗುತ್ತದೆ. ಇದು ಪ್ರಸಿದ್ಧವೇ ಆಗಿದೆ. ಪ್ರಯೋಜನವು ಆಯಾ ಶಬ್ದಗಳ ಸಮನ್ವಯದ ಸಿದ್ಧರೂಪವೇ ಆಗಿದೆ. ಆದ್ದರಿಂದ ಎಲ್ಲವೂ ಕೂಡ ಸ್ವತಃ ತಿಳಿದುಕೊಳ್ಳಲು ಬರುತ್ತಿರುವಾಗ ಪ್ರತಿಯೊಂದು

ಅಧಿಕರಣಗಳಲ್ಲಿಯೂ ಅದನ್ನೇ ಏಕೆ ಹೇಳಬೇಕು ? ಆದ್ದರಿಂದ ಎಲ್ಲಾ ಅಧಿಕರಣಗಳಲ್ಲಿ ಸಂಶಯಾದಿಗಳನ್ನು ತಿಳಿಯುವ ಕ್ರಮವನ್ನು ಇಲ್ಲಿ ಕೇವಲ ದಿಕ್‌ಪ್ರದರ್ಶನ ಮಾಡಿರುತ್ತೇವೆ.

ವಿಶೇಷವಿಚಾರ - ಸೂತ್ರದಲ್ಲಿ 'ದ್ಯುಭ್ವಾದ್ಯಾಯತನಂ ಸ್ವ ಶಬ್ದಾತ್' ಎಂದು 'ಸ್ವ'ಶಬ್ದದ ಬಲದಿಂದ ದ್ಯುಭ್ವಾದ್ಯಾಯತನಾದವನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತ ಮಾಡಿದ್ದಾರೆ. ಈ ಸಿದ್ಧಾಂತದಿಂದ ವಿಷ್ಣು ದ್ಯುಭ್ವಾದ್ಯಾಯತನ ಅಲ್ಲ ಎಂಬ ಪೂರ್ವಪಕ್ಷವು ಅರ್ಥಾತ್ ಸಿದ್ಧವಾಗುತ್ತದೆ. ಆ ಪೂರ್ವಪಕ್ಷವನ್ನು ಶ್ರೀಮದಾಚಾರ್ಯರು ಭಾಷ್ಯದಲ್ಲಿ ತೋರಿಸಿದ್ದಾರೆ. ಆದರೆ ಸಂಶಯವನ್ನು ಸೂತ್ರದಲ್ಲಿ ಅಥವಾ ಭಾಷ್ಯದಲ್ಲಿ ತೋರಿಸಿರುವುದಿಲ್ಲ. 'ಸಂಶಯ ತೋರಿಸದೇ ಇದ್ದರೆ ಇದನ್ನು ಅಧಿಕರಣವೆಂದು ಹೇಗೆ ಪರಿಗಣಿಸುವುದು. ಏಕೆಂದರೆ

ವಿಷಯೋ ವಿಷಯಶ್ಚೈವ ಪೂರ್ವಪಕ್ಷಸ್ತಥೋತ್ತರಃ।
ಪ್ರಯೋಜನಂ ಚ ಪಂಚೈತೇ ಪ್ರಾಂಚೋऽಧಿಕರಣಂ ವಿದುಃ॥

ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ, ಪ್ರಯೋಜನ ಈ ಐದು ಇದ್ದರೆ ಮಾತ್ರ ಅಧಿಕರಣವಾಗಲು ಸಾಧ್ಯ. ಆದರೆ ಬ್ರಹ್ಮಸೂತ್ರದಲ್ಲಿರುವ ಯಾವ ಅಧಿಕರಣದಲ್ಲಿಯೂ ಭಾಷ್ಯಕಾರರು ಸಂಶಯವನ್ನು ತೋರಿಸಿರುವುದಿಲ್ಲ. ಭಾಷ್ಯಕ್ಕೆ ವ್ಯಾಖ್ಯಾನ ಮಾಡಲು ಹೊರಟಿರುವ ತತ್ವಪ್ರದೀಪದಲ್ಲಿಯೂ ಕೂಡ ಸಂಶಯವನ್ನು ತೋರಿಸುತ್ತಿಲ್ಲ. ಇದು ಏಕೆ ? ಈ ಪ್ರಶ್ನೆಗೆ ಪಂಡಿತಾಚಾರ್ಯರು ಇಲ್ಲಿ ನಿಖರವಾಗಿ ಉತ್ತರವನ್ನು ಹೇಳುತ್ತಿದ್ದಾರೆ.

ಪ್ರತಿಯೊಂದು ಅಧಿಕರಣಗಳಲ್ಲಿಯೂ ಸಂಶಯವು ಇದ್ದೇ ಇರುತ್ತದೆ. ಬುದ್ಧಿವಂತರಿಗೆ ಈ ಸಂಶಯವು ಸುಲಭವಾಗಿ ತಿಳಿಯುತ್ತಿರುವಾಗ ಪುನಃ ಅದನ್ನು ನಾವೇಕೆ ತಿಳಿಸಬೇಕು ಎಂಬುದು ಪಂಡಿತಾಚಾರ್ಯರ ಅಭಿಪ್ರಾಯ.

ಪೂರ್ವಪಕ್ಷಧರ್ಮ ಹಾಗೂ ಸಿದ್ಧಾಂತಧರ್ಮಗಳನ್ನು ಸೇರಿಸಿದಾಗ ಸಂಶಯವು ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ಭಾಷ್ಯಕಾರರು ಸಂಶಯವನ್ನು ಎಲ್ಲಿಯೂ ಕೂಡ ತೋರಿಸಿರುವುದಿಲ್ಲ. ತತ್ವಪ್ರದೀಪಕಾರರೂ ಕೂಡ ಸಂಶಯವನ್ನು ಯಾವ ಅಧಿಕರಣ-ದಲ್ಲಿಯೂ ತೋರಿಸಿರುವುದಿಲ್ಲ.

ಪಂಡಿತಾಚಾರ್ಯರು ಸಂಶಯ, ಪ್ರಯೋಜನ ಇವುಗಳನ್ನು ಪ್ರತ್ಯೇಕವಾಗಿ ತೋರಿಸಬೇಕಾಗಿಲ್ಲವೆಂದು ಸ್ಪಷ್ಟವಾದ ನಿಲುವನ್ನು ಹೊಂದಿದ್ದಾರೆ. ಜ್ಞಾನಿಗಳಿಗೆ ತತ್ವಜ್ಞಾನದ

ತುಡಿತ ಬಹಳವಿದ್ದಾಗ ಅಧಿಕರಣಶರೀರಕ್ಕಾಗಿ ತಿಳಿಯಬೇಕಾದ ಸಂಶಯಾದಿಗಳ ವಿಚಾರವು ಅನುಪಯುಕ್ತವೆಂಬುದು ಇವರ ಅಭಿಪ್ರಾಯ.

ಶ್ರೀಮಟ್ಟೀಕಾಕೃತ್ಪಾದರು ತತ್ವಪ್ರಕಾಶಿಕೆಯ ಪ್ರತಿಯೊಂದು ಅಧಿಕರಣಗಳಲ್ಲಿ ಸಂಶಯ, ಪ್ರಯೋಜನ ಇವುಗಳೆಲ್ಲವನ್ನೂ ತೋರಿಸುತ್ತಾರೆ. ಆದ್ದರಿಂದ ಪಂಡಿತಾಚಾರ್ಯರ ಮಾತಿಗೆ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆ ಸಹಜ. ಆದರೆ ಜ್ಞಾನಿಗಳ ದೃಷ್ಟಿಯಲ್ಲಿ ಪಂಡಿತಾಚಾರ್ಯರ ಮಾತು ಹೊರಟಿರುತ್ತದೆ. ಮಂದಮತಿಗಳಿಗೆ ಶ್ರೀಮಟ್ಟೀಕಾಕೃತ್ಪಾದರು ಸಂಶಯಗಳನ್ನು ಪ್ರದರ್ಶನ ಮಾಡುತ್ತಾರೆ ಎಂದು ತಿಳಿಯಬೇಕು. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

ವಿಷಯಾದಿಗಳನ್ನು ನೀವೇ ತಿಳಿದುಕೊಳ್ಳಿ

तत्वप्रदीपः – अनयैव दिशा विषयादयस्तत्र तत्र विशेषतो गवेषणीयाः। प्रकिया च त्रिचतुरेषु स्थानेषु व्याक्रियमाणा किमिति मतिं नारोहेत् ।

ಇದೇ ಕ್ರಮದಲ್ಲಿ ವಿಷಯಾದಿಗಳನ್ನು ಆಯಾ ಅಧಿಕರಣಗಳಲ್ಲಿ ಹುಡುಕಿ ತಿಳಿದುಕೊಳ್ಳಬೇಕು. (ಉಪನಿಷತ್ ವಾಕ್ಯವನ್ನು ಗಮನಿಸಿ, ಅಧಿಕರಣದ ವಿಷಯವು ಏನು ? ಎಂಬುದನ್ನು ವಿಚಾರ ಮಾಡಬೇಕು)

ಅಧಿಕರಣಗಳಿಗೆ ಆವಶ್ಯಕವಾದ ಪ್ರಕ್ರಿಯೆಯನ್ನು ಮೂರ್ನಾಕು ಸ್ಥಳದಲ್ಲಿ ನಾವು ತೋರಿಸಿದ್ದೇವೆ. ಇಷ್ಟು ಹೇಳಿದರೂ ಬುದ್ಧಿಗೆ ಅರ್ಥವಾಗುವುದಿಲ್ಲವೇನು ?

ಈ ಅಧಿಕರಣದ ಪೂರ್ವಪಕ್ಷ

तत्वप्रदीपः – तदेवं विचार्यमाणे द्युभ्वाद्यायतनं रुद्र इति प्राप्तं, जीव इति वा, उक्तयुक्तेरेव । वायुरिति च पक्षान्तरम् । 'प्राणभृच्च' इति सौत्राच्चकारान्न जीवो वायुश्चेति सिद्धान्तभाष्ये प्रतिषेत्स्यमानत्वाच्च ।

ಹೀಗೆ ವಿಚಾರ ಮಾಡಿದಾಗ ಪ್ರಕೃತ ದ್ಯುಭ್ವಾದ್ಯಧಿಕರಣದಲ್ಲಿ ಪೂರ್ವಪಕ್ಷ ಹೀಗಿದೆ - ದುಭ್ವಾದ್ಯಾಯತನಾದವನು ರುದ್ರ ಅಥವಾ ಜೀವ. ಹಿಂದೆ ಹೇಳಿದ ಯುಕ್ತಿಗಳು ಈ

ವಿಷಯದಲ್ಲಿ ಗಮಕಗಳಾಗಿವೆ. ವಾಯುವೂ ಕೂಡ ದುಭ್ವಾದ್ಯಾಯತನ ಎಂಬುದು ಮತ್ತೊಂದು ಪೂರ್ವಪಕ್ಷ. 'ಪ್ರಾಣಭೃಚ್ಚ' ಎಂಬ ಸೂತ್ರದಲ್ಲಿರುವ 'ಚ'ಕಾರದಿಂದ ಜೀವ ಹಾಗೂ ವಾಯು ಇಬ್ಬರನ್ನು ಸಿದ್ಧಾಂತ ಭಾಷ್ಯದಲ್ಲಿ ನಿಷೇಧ ಮಾಡಲಾಗಿದೆ. ಆದ್ದರಿಂದ ಇಬ್ಬರೂ ಕೂಡ ಪೂರ್ವಪಕ್ಷಕ್ಕೆ ವಿಷಯರಾಗಿದ್ದಾರೆ ಎಂದು ಇಲ್ಲಿ ತಿಳಿಯಬೇಕು.

ವಿಷ್ಣುವೇ ದುಭ್ವಾದ್ಯಾಶ್ರಯನೆಂದು ಸಿದ್ಧಾಂತ

तत्वप्रदीपः – वायोः प्राप्तौ तु प्राणाधारत्वं, हेतुरिति प्रसिद्धत्वादनुक्तिः। अत आह – द्युभ्वाद्यायतनं स्वशब्दात् । द्युभ्वाद्यायतनं विष्णुरेव, आत्मशब्दात् । विष्णोः स्वरूपस्यैव साक्षाद्वाचको ह्ययमात्मशब्दः ।। ।।

ವಾಯುವೇ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಪ್ರಾಣಾಧಾರತ್ವವು ಹೇತುವಾಗಿದೆ. ಇದು ಪ್ರಸಿದ್ಧಯುಕ್ತಿಯಾದ್ದರಿಂದ ಪ್ರತ್ಯೇಕವಾಗಿ ಭಾಷ್ಯಕಾರರು ಹೇಳಿರುವುದಿಲ್ಲ. ಈ ಪೂರ್ವಪಕ್ಷದ ನಿರಾಕರಣೆಗಾಗಿ 'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಎಂಬ ಸೂತ್ರವು ಹೊರಟಿದೆ. ದ್ಯುಭ್ವಾದ್ಯಾಯತನನಾದವನು ವಿಷ್ಣುವೇ ಆಗಿದ್ದಾನೆ. ಆತ್ಮ ಶಬ್ದ ಇರುವುದರಿಂದ. ಆತ್ಮಶಬ್ದವು ಸಾಕ್ಷಾತ್ತಾಗಿ ವಿಷ್ಣುಸ್ವರೂಪವಾಚಕವಾಗಿದೆ.

ಪಾಠಾಂತರದ ಬಗ್ಗೆ - 'ದ್ಯುಭ್ವಾದ್ಯಾಯಶ್ರಯಃ ವಿಷ್ಣುರೇವ' ಎಂಬುದು ಪ್ರಚಲಿತ ಪಾಠ. ಆದರೆ 'ದ್ಯುಭ್ವಾದ್ಯಾಯತನಮಿತಿ ಸೂತ್ರಭಾಷ್ಯೈವ ಸಂದೇಹಪದಂ ಆವೇದಯತಃ' ಎಂಬ ತತ್ವಪ್ರದೀಪವನ್ನು ಗಮನಿಸಿದಾಗ 'ದ್ಯುಭ್ವಾದ್ಯಾಯತನಂ ವಿಷ್ಣುರೇವ' ಎಂಬುದೇ ತತ್ವಪ್ರದೀಪಕಾರರಿಗೆ ಸಮ್ಮತವಾದ ಪಾಠವೆಂದು ತಿಳಿಯುತ್ತದೆ. ಹೃಷೀಕೇಶತೀರ್ಥರ ಪಾಠವೂ ಕೂಡ 'ದ್ಯುಭ್ವಾದ್ಯಾಯತನಂ ವಿಷ್ಣುರೇವ' ಎಂಬುದಾಗಿಯೇ ಕಾಣಿಸುತ್ತದೆ.

ವಿಶೇಷವಿಚಾರ - ಸೂತ್ರಕಾರರು 'ಆತ್ಮಶಬ್ದಾತ್' ಎಂದು ಹೇಳುವ ಬದಲು, 'ಸ್ವಶಬ್ದಾತ್' ಎಂದು ಹೇಳಿದ್ದಾರೆ. ಕಾರಣವೇನೆಂದರೆ ಆತ್ಮಶಬ್ದವು ವಿಷ್ಣುವಿನ ಅಸಾಧಾರಣವಾದ ಶಬ್ದವಾಗಿದೆ. ಮತ್ತು ಬ್ರಹ್ಮಶಬ್ದವನ್ನೂ ಕೂಡ ಇದರಿಂದ ಸಂಗ್ರಹಿಸಲು 'ಸ್ವಶಬ್ದಾತ್' ಎಂದಿದ್ದಾರೆ. 'ಆತ್ಮಶಬ್ದಾತ್' ಎಂದಷ್ಟೇ ಹೇಳಿದ್ದಲ್ಲಿ, ಬ್ರಹ್ಮಶಬ್ದವೆಂಬ ಹೇತುವನ್ನು ಹೇಳಲು ಬರುತ್ತಿರಲಿಲ್ಲ.

ಆತ್ಮಶಬ್ದವನ್ನು ಹೇತುವನ್ನಾಗಿ ಹೇಳಲು ಮತ್ತೊಂದು ಕಾರಣವಿದೆ. ನಾಮ ಹಾಗೂ ಲಿಂಗಗಳಲ್ಲಿ ನಾಮವೇ ಪ್ರಬಲವಾದ ಹೇತುವಾಗುತ್ತದೆ. 'ದಂಡವನ್ನು ಹಿಡಿದವನು' ಬಂದನು ಎಂದು ಹೇಳಿದಾಗ ಯಾರು ಬೇಕಾದರೂ ಕೂಡ ಆಗಬಹುದು. ಆದರೆ ದೇವದತ್ತನು ಬಂದನು ಎಂದು ಹೇಳಿದಾಗ ಮತ್ತೊಬ್ಬರನ್ನು ತಿಳಿಯಲು ಬರುವುದಿಲ್ಲ. ಹೀಗೆ ಲಿಂಗಕ್ಕಿಂತ ನಾಮವು ಪ್ರಬಲವಾಗಿರುವುದು ಲೋಕಸಿದ್ಧವಾಗಿದೆ. ಪ್ರಕೃತ ದ್ಯುಭ್ವಾದ್ಯಾಯತನನಾದವನು ಮಹಾವಿಷ್ಣುವೇ ಆಗಿದ್ದಾನೆನ್ನಲು ಉಳಿದೆಲ್ಲಾ ಲಿಂಗಗಳನ್ನು ಬಿಟ್ಟು, ಆತ್ಮಶಬ್ದವೆಂಬ ನಾಮವನ್ನೇ ಹೇತುವನ್ನಾಗಿ ಹೇಳುತ್ತಿದ್ದಾರೆ. ಈ ಆತ್ಮಶಬ್ದವು ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಕೂಡ ಇರಲು ಸಾಧ್ಯವಿಲ್ಲವಾದ್ದರಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗುತ್ತಾನೆ ಎಂಬುದು ಸೂತ್ರಕಾರರ ಅಭಿಪ್ರಾಯ.

ಸೂತ್ರದಲ್ಲಿ 'ಸ್ವಶಬ್ದಾತ್' ಎಂದು ಹೇಳದೆ, 'ಆತ್ಮಶಬ್ದಾತ್' ಎಂದು ಹೇಳಿದರೆ ಆತ್ಮಶಬ್ದವೂ ಕೂಡ ವಿಷ್ಣುಪರವಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಸಮರ್ಥನೆ ಮಾಡಬೇಕಾಗುತ್ತದೆ. 'ತಚ್ಛಬ್ದಾತ್' ಎಂದು ಹೇಳಿದರೆ ಶಬ್ದವಿಶೇಷಣ ಪ್ರತೀತಿಯು ಉಂಟಾಗುವುದಿಲ್ಲ. ಆದ್ದರಿಂದ ಆತ್ಮಶಬ್ದವು ವಿಷ್ಣುಪರವಾಗಿದೆ ಎಂದೂ ಕೂಡ ತಿಳಿಯಬೇಕು. ಶಬ್ದವಿಶೇಷದ ಪ್ರತೀತಿಯೂ ಉಂಟಾಗಬೇಕು. ಈ ಎರಡರ ಲಾಭಕ್ಕಾಗಿ ಸೂತ್ರಕಾರರು 'ಸ್ವಶಬ್ದಾತ್' ಎಂದು ಹೇಳಿರುತ್ತಾರೆ. 'ಸ್ವಸ್ಯ ಶಬ್ದಃ ಸ್ವಶಬ್ದಃ' ಎಂಬ ವಿಗ್ರಹವನ್ನು ಆಶ್ರಯಿಸಿದಾಗ ಆತ್ಮಶಬ್ದವು ವಿಷ್ಣುವಿನ ಅಸಾಧಾರಣಶಬ್ದವಾಗಿದೆ ಎಂಬುದು ಸ್ಪಷ್ಟವಾಗಿದೆ. ಈ ಅಭಿಪ್ರಾಯದಿಂದಲೇ ಪಂಡಿತಾಚಾರ್ಯರು 'ವಿಷ್ಣೋಃ ಸ್ವರೂಪಸ್ಯೈವ ಸಾಕ್ಷಾದ್ವಾಚಕೋ ಹ್ಯಯಮಾತ್ಮಶಬ್ದಃ' ವಿಷ್ಣುವಿನ ಸ್ವರೂಪವನ್ನೇ ನೇರವಾಗಿ ಆತ್ಮಶಬ್ದವು ಪ್ರತಿಪಾದನೆ ಮಾಡುತ್ತದೆ ಎಂದು ಹೇಳಿರುತ್ತಾರೆ.

ಆತ್ಮಶಬ್ದದ ಮುಖ್ಯಾರ್ಥ ವಿಷ್ಣುವೇ ಏಕೆ ?

तत्वप्रदीपः – मुक्तोपसृप्यव्यदेशात् ।। 'अमृतस्यैष सेतुः' इति मुक्तस्याऽश्रयत्वेनोपसृप्यत्वव्यपदेशाच्च विष्णुरेवात्रोच्यते । परायणं पराणां मुक्तानामयनम् ।।

'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯು ಮುಕ್ತರಿಗೆ ಮಹಾವಿಷ್ಣುವೇ ಆಶ್ರಯನಾಗಿದ್ದಾನೆಂದು ಹೇಳುತ್ತಿದೆ. ಆದ್ದರಿಂದ ವಿಷ್ಣುವೇ ಆತ್ಮಶಬ್ದದ ಮುಖ್ಯಾರ್ಥನಾಗುತ್ತಾನೆ. 'ಪರಾಯಣಂ' ಎಂಬ ಶಬ್ದಕ್ಕೆ ಮುಕ್ತರಿಗೆ ಆಶ್ರಯನಾದವನು ಎಂದರ್ಥ.

ವಿಶೇಷವಿಚಾರ - 'ಅಮೃತಸ್ಯೈಷ ಸೇತುಃ' ಎಂಬುದಾಗಿ ಮುಕ್ತೋಪಸೃಪ್ಯತ್ವವನ್ನು ಹೇಳಿರುವುದರಿಂದ ಮಹಾವಿಷ್ಣುವೇ ಆತ್ಮಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ ಎಂಬುದು ಸೂತ್ರದ ಮೊದಲನೆಯ ಅರ್ಥ.

ಮುಕ್ತೋಪಸೃಪ್ಯತ್ವವನ್ನು ಹೇಳಿದ ಮಾತ್ರಕ್ಕೆ ಮಹಾವಿಷ್ಣು ಏಕೆ ಆತ್ಮಶಬ್ದದಿಂದ ಪ್ರತಿಪಾದ್ಯನಾಗಬೇಕು ? ಎಂಬ ಪ್ರಶ್ನೆಗೂ ಕೂಡ ಇದೇ ಸೂತ್ರವು ಉತ್ತರಿಸುತ್ತಿದೆ. 'ಬ್ರಹ್ಮಜೀವಾತ್ಮೋऽಪಿ ಪರಂ' ಇತ್ಯಾದಿಯಾಗಿ ತೈತ್ತಿರೀಯಶ್ರುತಿಯು ವಿಷ್ಣುವೇ ಮುಕ್ತೋಪಸೃಪ್ಯನಾಗಿದ್ದಾನೆಂದು ಹೇಳುತ್ತಿದೆ. ಆದ್ದರಿಂದ ಇವನೇ ಆತ್ಮಶಬ್ದ ಪ್ರತಿಪಾದ್ಯನಾಗುತ್ತಾನೆ. ಇದು ಸೂತ್ರದ ಎರಡನೆಯ ಅರ್ಥ.

'ಉಪಸೃಪ್ಯ' ಶಬ್ದಕ್ಕೆ ಎರಡು ಬಗೆಯ ಅರ್ಥವನ್ನು ಭಾಷ್ಯದ ಮಾತುಗಳಿಂದ ತಿಳಿಯಬೇಕು. ೧. ಭೂಮಿಯಲ್ಲೇ ಎತ್ತರವಿರುವ ಶ್ವೇತದ್ವೀಪಕ್ಕೆ ಯಾವ ಯೋಗಿಯು ಹೋಗುವುದಿಲ್ಲವೋ, ಅವನು ಮುಕ್ತನಾಗುವುದಿಲ್ಲ ಎಂದು ಆದಿತ್ಯಪುರಾಣವು ಹೇಳುತ್ತಿದೆ. ಈಗ ಉಪಶಬ್ದಕ್ಕೆ 'ಎತ್ತರ' ಎಂಬರ್ಥವನ್ನು ವಿವಕ್ಷಿಸಬೇಕು.

ಶ್ವೇತದ್ವೀಪಕ್ಕೆ ತೆರಳಿದ ಅನಂತರ ಮುಕ್ತನು 'ಉಪಸೃಪ್ಯನ' ಮಾಡುತ್ತಾನೆ ಎಂದರೆ 'ಪರಮಾತ್ಮನ ಸಮೀಪಕ್ಕೆ ಹೋಗುತ್ತಾನೆ' ಎಂದರ್ಥ. ಈಗ ಉಪಶಬ್ದಕ್ಕೆ 'ಹತ್ತಿರ' ಎಂದರ್ಥ. ಹೀಗೆ ಉಪಸೃಪ್ಯಶಬ್ದಕ್ಕೆ ಎರಡು ಅರ್ಥಗಳನ್ನು ತಿಳಿಯಬೇಕು.

ಸ್ವರ್ಗಾದಿ ಲೋಕಗಳಿಗೆ ಆಶ್ರಯನಾದವನು 'ಆತ್ಮಾ' ಎಂದು ಉಪನಿಷತ್ತಿನಲ್ಲಿ ಹೇಳುತ್ತಿದೆ. ಆತ್ಮಶಬ್ದಕ್ಕೆ ಮುಖ್ಯಾರ್ಥ ವಿಷ್ಣುವಾದರೂ ಕೂಡ ಜೀವಾದಿಗಳು ಅಮುಖ್ಯಾರ್ಥರಾಗುತ್ತಾರೆ. ಆದ್ದರಿಂದ ಹಿಂದಿನ ಸೂತ್ರದ ಪೂರ್ವಪಕ್ಷದ ಯುಕ್ತಿಯ ಆಧಾರದಿಂದ ಬೇರೆ ಜೀವರೂ ಕೂಡ ಲೋಕಕ್ಕೆ ಆಶ್ರಯರಾಗಬಹುದು. ಈ ಪ್ರಶ್ನೆಗೆ 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರವು ಉತ್ತರವನ್ನು ನೀಡುತ್ತಿದೆ. ಆಥರ್ವಣಶ್ರುತಿಯಲ್ಲಿ ಲೋಕಕ್ಕೆ ಆಶ್ರಯನಾದ ಆತ್ಮನು ಮುಕ್ತರಿಂದ ಗಮ್ಯನಾಗಿದ್ದಾನೆಂದು ಹೇಳಲಾಗಿದೆ. ಇದು ವಿಷ್ಣುವಿನ ಧರ್ಮವೇ ಹೊರತು, ಜೀವಾದಿಗಳ ಧರ್ಮವಲ್ಲ. ಈ ಕಾರಣದಿಂದ ಆತ್ಮಶಬ್ದಕ್ಕೆ ಅಮುಖ್ಯಾರ್ಥ ಮಾಡಬಾರದೆಂಬುದು ಈ ಸೂತ್ರದ ಹೃದಯ.

ಗಮನಿಸ ಬೇಕಾದ ವಿಚಾರ - ಶ್ರೀಮದಾಚಾರ್ಯರು 'ಬಹುನಾऽತ್ರ ಕೀಮುಕ್ತೇನ' ಇಲ್ಲಿ ಆದಿತ್ಯಪುರಾಣದ ವಚನವನ್ನು ಉಲ್ಲೇಖಿಸಿದ್ದಾರೆ. ಸಾಮಾನ್ಯವಾಗಿ ಆಚಾರ್ಯರು ಮಹಾಪುರಾಣಗಳನ್ನು ಉಲ್ಲೇಖಿಸುತ್ತಾರೆ. ಇಲ್ಲಿ ಉಪಪುರಾಣವಾದ ಆದಿತ್ಯಪುರಾಣವನ್ನು

ಉಲ್ಲೇಖಿಸಿರುವುದು ಗಮನಾರ್ಹವಿಷಯ. ಮತ್ತು 'ಧ್ಯೇಯಃ ಸದಾ' ಇತ್ಯಾದಿಯಾಗಿ ನರಸಿಂಹಪುರಾಣದ ಮಾತನ್ನು ಮತ್ತೊಂದು ಕಡೆ ಉಲ್ಲೇಖಿಸಿದ್ದಾರೆ. ಅದೂ ಕೂಡ ಉಪಪುರಾಣವಾಗಿದೆ. ಬಹುಷಃ ಆದಿತ್ಯಪುರಾಣ ಹಾಗೂ ನರಸಿಂಹ ಪುರಾಣಗಳೆಂಬ ಎರಡು ಉಪಪುರಾಣಗಳನ್ನು ಬಿಟ್ಟು, ಬೇರೆ ಉಪಪುರಾಣಗಳನ್ನು ಉಲ್ಲೇಖಿಸಿರುವುದು ಕಾಣಿಸುತ್ತಿಲ್ಲ.

ಪಾಠಾಂತರ ಬಗ್ಗೆ - 'ಏಷಃ ಶಾಸ್ತ್ರವಿನಿರ್ಣಯಃ' ಎಂಬುದು ಪ್ರಚಲಿತ ಪಾಠ. ಆದರೆ 'ಏಷಃ ಶಾಸ್ತ್ರಸ್ಯ ನಿರ್ಣಯಃ' ಎಂಬುದು ಪ್ರಾಚೀನಪಾಠ. 'ಶಾಸ್ತ್ರಸ್ಯ ನಿರ್ಣಯಃ' ಎಂಬ ಪ್ರಚಲಿತಪಾಠಕ್ಕೆ ಉಪೋದ್ಬಲಕವಾಗಿ ಯಾವುದೇ ವ್ಯಾಖ್ಯಾನಗಳಲ್ಲಿ ಪ್ರತೀಕಗ್ರಹಣವು ಕಾಣಿಸುತ್ತಿಲ್ಲ. ಆದ್ದರಿಂದ 'ಶಾಸ್ತ್ರಸ್ಯ ನಿರ್ಣಯಃ' ಎಂಬ ಪ್ರಾಚೀನಪಾಠವನ್ನು ಅನುಸುರಿಸವುದು ಸೂಕ್ತವಾಗಿದೆ.

ಶೈವರು ಅನುಮಾನ ಮಾಡುವರು

तत्वप्रदीपः – नाऽनुमानमतच्छब्दात् ।। 'आनुमानम्' अनुमानात्मकागम-परिकल्पितं रुद्राख्यं ब्रह्मात्र न वाच्यम् । शैवागमे क्वचिदुक्तसाधनानुष्ठानेन यथोक्तदृष्टफलोदयोपलम्भात्तद्दृष्टान्तेनेशवाक्यत्वहेतुनाऽन्यत्रापि प्रामाण्यमनुमीयते।

'ಆನುಮಾನಮ್' ಅನುಮಾನ ಸ್ವರೂಪವಾದ ಶೈವಾಗಮದಿಂದ ಪರಿಕಲ್ಪಿತವಾದ ರುದ್ರ ಎಂಬ ಬ್ರಹ್ಮನು ಪ್ರಕೃತ ಪ್ರತಿಪಾದ್ಯನಾಗುವುದಿಲ್ಲ. ಏಕೆಂದರೆ ಶೈವಾಗಮದಲ್ಲಿ ಕೆಲವು ಮಾತುಗಳಂತೆ ಸಾಧನೆಯನ್ನು ಮಾಡಿದಾಗ ಫಲ ದೊರೆಯುವುದು ಕಾಣಿಸುತ್ತಿದೆ. ಇದರ ದೃಷ್ಟಾಂತದಿಂದ ಮತ್ತು ಈಶವಾಕ್ಯತ್ವ ಎಂಬ ಹೇತುವಿನಿಂದ ಬೇರೆ ಶೈವಪುರಾಣದಲ್ಲಿರುವ ಬೇರೆ ವಾಕ್ಯಗಳೂ ಕೂಡ ಪ್ರಮಾಣವಾಗಿವೆ ಎಂದು ಶೈವರು ಅನುಮಾನ ಮಾಡುತ್ತಾರೆ.

ಶೈವಾಗಮವೇ ಅನುಮಾನಾತ್ಮಕ

तत्वप्रदीपः – एवमनुमानादाप्तप्रामाण्यस्तदागमः 'अनुमानात्मकः' उच्यते।

ಹೀಗೆ ಅನುಮಾನದಿಂದ ಶೈವಾಗಮವನ್ನು ಆಪ್ತವಾಕ್ಯವೆಂಬುದಾಗಿ ಪ್ರಮಾಣವೆನ್ನುತ್ತಾರೆ. ಆದ್ದರಿಂದ ಶೈವಾಗಮವು ಅನುಮಾನಾತ್ಮಕವಾಗಿದೆ ಎಂಬುದು ಭಾಷ್ಯಕಾರರ ಅಭಿಪ್ರಾಯ.

ಶೈವಾಗಮವು ಅಪ್ರಮಾಣ

तत्वप्रदीपः – न च तेन प्रामाण्यं साधयितुं शक्यते । तेनैव यथोक्तदृष्टफलव्यभिचारिणा वाक्यान्तरेण कृत्स्नस्याप्यप्रामाण्यसाधनसौकर्यात्।

ಕೆಲವು ವಾಕ್ಯಗಳು ದೃಷ್ಟಫಲಕವಾಗಿರುವುದರಿಂದ ಶೈವಾಗಮಕ್ಕೆ ಪ್ರಾಮಾಣ್ಯವನ್ನು ಸಾಧಿಸಬಹುದಲ್ಲವೇ? ಎಂದು ಪ್ರಶ್ನಿಸಲಾಗದು. ಏಕೆಂದರೆ ಅಂಥದ್ದೇ ಕೆಲವು ವಾಕ್ಯಗಳಿಂದ ದೃಷ್ಟಫಲವು ವ್ಯಭಿಚರಿತವಾಗಿರುವುದು ಕಂಡಿದೆ. ಇಂಥ ವಾಕ್ಯಗಳ ದೃಷ್ಟಾಂತದಿಂದ ಬೇರೆ ವಾಕ್ಯಗಳಿಗೂ ಅಪ್ರಾಮಾಣ್ಯವನ್ನು ಸುಲಭವಾಗಿ ಸಾಧನೆ ಮಾಡಬಹುದು.

ಪಶುಪತಿ ನಿರ್ದುಷ್ಟನಲ್ಲ

तत्वप्रदीपः – अत एव 'परिकल्पितरुद्रः' इति समगिरत भगवान् । विस्पष्टमाचष्ट चानुव्याख्याने ''तद्व्यभिचारिणा । अप्रामाण्यानुमा च स्यात्'' इति । स्वयं च भगवत्तमः पशुपतेरसामञ्जस्यमसर्वज्ञत्वादिकं च सूत्रयिष्यति ।

ಆದ್ದರಿಂದಲೇ ಭಾಷ್ಯಕಾರರು 'ಪರಿಕಲ್ಪಿತರುದ್ರಃ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಅತ್ಯಂತ ಸ್ಪಷ್ಟವಾಗಿ ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಿರುತ್ತಾರೆ - 'ತದ್ಗವ್ಯಭಿಚಾರಿಣಾ । ಅಪ್ರಾಮಾಣ್ಯಾನುಮಾ ಚ ಸ್ಯಾತ್' ಶೈವಾಗಮದ ಕೆಲವು ವಾಕ್ಯಗಳು ವ್ಯಭಿಚರಿತ-ವಾಗಿರುವುದರಿಂದ ಅಪ್ರಾಮಾಣ್ಯವನ್ನು ಅನುಮಾನ ಮಾಡಬಹುದು ಎಂದು. ಸ್ವತಃ ಭಗವತ್ತಮರಾದ ಸೂತ್ರಕಾರರೂ ಕೂಡ ಪಶುಪತಿಗೆ ನಿರ್ದುಷ್ಟತ್ವವಿಲ್ಲವೆಂದು ಸಮರ್ಥಿಸಿ, ಅಸರ್ವಜ್ಞತ್ವಾದಿಗಳನ್ನು ಹೇಳುವವರಿದ್ದಾರೆ.

ಪರೋವರೀಯಾನ್ ಮಹಾವಿಷ್ಣು

तत्वप्रदीपः – 'परः परो वरीयान्' परा वाग्देवी, परतः परो विरिञ्चः, ततोऽपि वरा प्रकृतिः, वरीयान् विष्णुः ।। अत्र तरबीयसुनौ तमबिष्ठनर्थौ ।

'ಪರಃ ಪರೋ ವರೀಯಾನ್' ಎಂಬ ಶ್ರುತಿಯಲ್ಲಿ 'ಪರಾ ಎಂಬ ಶಬ್ದಕ್ಕೆ ವಾಗಭಿಮಾನಿಯಾದ 'ಸರಸ್ವತಿ' ಎಂದರ್ಥ. ಅವಳಿಗಿಂತ ಶ್ರೇಷ್ಠರಾದವರು ಚತುರ್ಮುಖಬ್ರಹ್ಮ, ಅವರಿಗಿಂತ ಶ್ರೇಷ್ಠರಾದವರು ಪ್ರಕೃತಿ, ಪ್ರಕೃತಿಗಿಂತ ಶ್ರೇಷ್ಠನಾದವನು ಮಹಾವಿಷ್ಣು ಎಂಬುದು ಇದರ ಅಭಿಪ್ರಾಯ. ಇಲ್ಲಿ 'ತರಪ್' ಮತ್ತು 'ಈಯಸೂನ್' ಪ್ರತ್ಯಯಗಳು ತರಪ್ ಹಾಗೂ ಇಷ್ಠನ್ ಪ್ರತ್ಯಯಗಳ ಅರ್ಥಗಳಲ್ಲಿ ಪ್ರಯೋಗಿಸಲಾಗಿದೆ.

ಶರ್ವಃ ಶಂರೋಧನಾದ್ ಹರಿಃ

ತತ್ವಪ್ರದೀಪಃ – ''ಯತ್ರೋಭಯೋಃ ಪ್ರಯೋಗೋ ನ ತತ್ರೈಕಾರ್ಥೌ ತರಪ್ತಮಾಪೌ'' ಇತಿ ಚ ಶಬ್ದನಿರ್ಣಯೇ । 'ಶರ್ವಶ್ಶಂರೋಧನಾದ್ಧರಿಃ ಮುಕ್ತಿಪರ್ಯನ್ತಂ ಸ್ವರೂಪಭೂತಮಪಿ ಶಂ ರುದ್ಧ್ವಾ ವರ್ತತೇ ಹಿ ।। ।।

'ಯತ್ರೋಭಯೋಃ ಪ್ರಯೋಗಃ ನ ತತ್ರೈಕಾರ್ಥೌ ತರಪ್ತಮಾಪೌ' ಎಂದು ಶಬ್ದನಿರ್ಣಯವು ಇದನ್ನು ಸ್ಪಷ್ಟಪಡಿಸಿದೆ. 'ಶರ್ವಃ ಶಂರೋಧನಾದ್ಧರಿಃ' ಎಂಬ ಪ್ರಮಾಣಶ್ಲೋಕವು ಮುಕ್ತಿಯ ತನಕ ಮೋಕ್ಷಯೋಗ್ಯಜೀವರ ಸ್ವರೂಪಭೂತವಾದ ಸುಖವನ್ನು ಮೋಕ್ಷಪರ್ಯಂತವಾಗಿ ಅನುಭವಕ್ಕೆ ಗೋಚರವಾಗದಂತೆ ತಡೆಹಿಡಿಯುವುದರಿಂದ ಮಹಾವಿಷ್ಣು 'ಶರ್ವ' ಎಂದು ಕರೆಸಿಕೊಳ್ಳುತ್ತಾನೆ ಎಂದರ್ಥ.

ಶ್ರೀಮಜ್ಜಯತೀರ್ಥಭಿಕ್ಷುಗಳಿಂದ ವಿರಚಿತವಾದ

ತತ್ವಪ್ರಕಾಶಿಕಾ

ತೃತೀಯಪಾದ ಪ್ರತಿಪಾದ್ಯವಾದ ಪ್ರಮೇಯ

ತತ್ವಪ್ರಕಾಶಿಕಾ – ।। ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ।।

ಏತತ್ಪಾದಪ್ರತಿಪಾದ್ಯಂ ದರ್ಶಯತಿ – ತತ್ರ ಚೇತಿ ।। ಹರೌ ತದಿತರತ್ರ ಚ ಶ್ರುತ್ಯಾದಿ-ಪ್ರಸಿದ್ಧನಾಮಲಿಙ್ಗಾತ್ಮಕಶಬ್ದಾನಾಂ ವಿಷ್ಣ್ವೇಕವಾಚಿತ್ವಂ ಪ್ರಬಲಹೇತುಭಿಃ ಪ್ರತಿಪಾದಯತ್ಯ-ಸ್ಮಿನ್ಪಾದೇ ಸೂತ್ರಕಾರ ಇತ್ಯರ್ಥಃ ।

ಈ ಪಾದದಲ್ಲಿ ಪ್ರತಿಪಾದ್ಯವಾದ ವಿಷಯವನ್ನು 'ತತ್ರ ಚ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ಶ್ರೀಹರಿಯಲ್ಲಿ ಮತ್ತು ಬೇರೆ ಕಡೆ ಶ್ರುತಿ ಮೊದಲಾದ ಪ್ರಮಾಣಗಳಿಂದ ಪ್ರಸಿದ್ಧವಾಗಿರುವ ನಾಮಾತ್ಮಕಶಬ್ದಗಳನ್ನು ಹಾಗೂ ಲಿಂಗಾತ್ಮಕಶಬ್ದಗಳನ್ನು ಕೇವಲ ವಿಷ್ಣುಪರವಾಗಿ ಅನೇಕ ಪ್ರಬಲವಾದ ಹೇತುಗಳಿಂದ ಈ ಪಾದದಲ್ಲಿ ಸೂತ್ರಕಾರರು ಪ್ರತಿಪಾದಿಸುತ್ತಿದ್ದಾರೆ.

ಭಾಷ್ಯದಲ್ಲಿ 'ಪ್ರಾಯೇಣ' ಎಂದೇಕೆ ಹೇಳಿರುವರು ?

तत्वप्रकाशिका – चशब्दौ मिथःसमुच्चयार्थौ । देवताद्यधिकरणव्यावृत्त्यर्थम् – प्रायेणेति ।।

'ತತ್ರ ಚ ಅನ್ಯತ್ರ ಚ' ಎಂಬಲ್ಲಿರುವ ಎರಡು ಚಶಬ್ದಗಳು ಪರಸ್ಪರ ಸಮುಚ್ಚಯವನ್ನು ತೋರಿಸುತ್ತಿವೆ. ದೇವತಾಧಿಕರಣ ಹಾಗೂ ಅಪಶೂದ್ರಾಧಿಕರಣಗಳು ಈ ನಿಯಮಕ್ಕೆ ಸಂಬಂಧಪಟ್ಟಿಲ್ಲವೆಂದು ತಿಳಿಸುವುದಕ್ಕಾಗಿ ಭಾಷ್ಯದಲ್ಲಿ 'ಪ್ರಾಯೇಣ' ಎಂದು ಹೇಳಿದ್ದಾರೆ.

ಅಧಿಕರಣದ ವಿಷಯವಾಕ್ಯ ಯಾವುದು ?

तत्वप्रकाशिका – (अ)तत्र 'रुद्रो वाव लोकाधारः' 'वायुना वै गौतमसूत्रेणायं च लोकः परश्च लोकः सर्वाणि भूतानि सन्दृब्धानि भवन्ति' 'आकाश एव तदोतं च प्रोतं च' 'सर्वे वा एते प्राणाश्च प्राणिनश्च देवाश्च दिव्यानि च लोकाश्च लोकिनश्च अलोकाश्चालोकिनश्च विष्णावेवोताश्च प्रोताश्च' इत्यादिनोभयत्र प्रसिद्धद्युभ्वाद्यायतनत्वलिङ्गस्य भगवति समन्वयप्रतिपादनादस्ति शास्त्रादिसङ्गतिः ।

ಈ ಅಧಿಕರಣದ ವಿಷಯವಾಕ್ಯ ಹೀಗಿದೆ ''ರುದ್ರೋ ವಾವ ಲೋಕಾಧಾರಃ' ರುದ್ರನೇ ಸರ್ವಲೋಕಗಳಿಗೆ ಆಶ್ರಯನಾಗಿದ್ದಾನೆಂದು, ಮತ್ತು 'ವಾಯುನಾ ವೈ ಗೌತಮ ಸೂತ್ರೇಣಾಯಂಚ ಪರಶ್ಚ ಲೋಕಃ ಸರ್ವಾಣಿ ಭೂತಾನಿ ಸಂದೃಬ್ಧಾನಿ ಭವಂತಿ' ಯಾರನ್ನು ಆಶ್ರಯಿಸಿ ಸಕಲ ಜಗತ್ತು ನಿಂತಿದೆಯೋ ಅಂತಹ ವಾಯುವೇ ಈ ಲೋಕಕ್ಕೂ ಮತ್ತು ಪರಲೋಕಕ್ಕೂ, ಸಕಲಭೂತಗಳಿಗೂ ಆಶ್ರಯನಾಗಿದ್ದಾನೆ. ಮತ್ತು 'ಆಕಾಶ ಏವ ತದೋತಂ ಚ

ಪ್ರೋತಂ ಚ' 'ಆಕಾಶದಲ್ಲಿಯೇ ಸಕಲ ಪ್ರಪಂಚವೂ ಓತಪ್ರೋತವಾಗಿ ಸೇರಿಕೊಂಡಿದೆ' ಎಂದು ಮತ್ತು 'ಸರ್ವೇ ವಾ ಏತೇ ಪ್ರಾಣಾಶ್ಚ ಪ್ರಾಣಿನಶ್ಚ ದೇವಾಶ್ಚ ದಿವ್ಯಾನಿ ಚ ಲೋಕಾಶ್ಚ ಲೋಕಿನಶ್ಚ ಅಲೋಕಾಶ್ಚ ಅಲೋಕಿನಶ್ಚ ವಿಷ್ಣ್ವೇವ ಓತಾಶ್ಚ ಪ್ರೋತಾಶ್ಚ' ಸಕಲ ಇಂದ್ರಿಯಗಳು, ಪ್ರಾಣಿಗಳು, ದೇವತೆಗಳು, ಸ್ವರ್ಗದಲ್ಲಿರುವ ಸಕಲ ಪದಾರ್ಥಗಳು, ಭೂರ್ಭುವಾದಿ ಲೋಕಗಳು ಹಾಗೂ ಅಲ್ಲಿರುವ ಅಭಿಮಾನಿ ದೇವತೆಗಳು, ಲೋಕಾಲೋಕಗಳು ಅಲ್ಲಿರುವ ಮುಕ್ತಜೀವರುಗಳು ಹೀಗೆ ಸಕಲ ಪದಾರ್ಥಗಳೂ ವಿಷ್ಣುವಿನಲ್ಲಿ ಓತಪ್ರೋತವಾಗಿ ನೆಲೆಸಿವೆ ಇವೇ ಮೊದಲಾದ ಶ್ರುತಿಗಳಿಂದ ದ್ಯುಭ್ವಾದ್ಯಾಯತನತ್ವಲಿಂಗವು ಉಭಯತ್ರಪ್ರಸಿದ್ಧವಾಗಿದೆ. ಇಂತಹ ದ್ಯುಭ್ವಾದ್ಯಾಯತನತ್ವ-ಲಿಂಗವನ್ನು ಈ ಅಧಿಕರಣದಲ್ಲಿ ವಿಷ್ಣುವಿನಲ್ಲೇ ಸಮನ್ವಯಮಾಡಲಾಗಿದೆ. ಆದ್ದರಿಂದ ಈ ಅಧಿಕರಣಕ್ಕೆ ಶಾಸ್ತ್ರಸಂಗತಿ ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ.

ಶ್ರುತ್ಯಾದಿಸಂಗತಿಗಳು

तत्वप्रकाशिका – श्रुत्यादिसङ्गतिं विषयवाक्यमुदाहृत्य विषयसंशय-सयुक्तिकपूर्वपक्षान् दर्शयति – विष्णोरिति ।।

ಇನ್ನು ಶ್ರುತಿಸಂಗತಿ, ಅಧಿಕರಣಸಂಗತಿ ಹಾಗೂ ವಿಷಯವಾಕ್ಯ ಇವುಗಳನ್ನು ತೋರಿಸುತ್ತಾ ವಿಷಯ, ಸಂಶಯ ಹಾಗೂ ಯುಕ್ತಿಬದ್ಧವಾದ ಪೂರ್ವಪಕ್ಷಗಳನ್ನು ''ವಿಷ್ಣೋಃ'' ಎಂಬ ಭಾಷ್ಯದಿಂದ ತೋರಿಸುತ್ತಿದ್ದಾರೆ.

ದ್ಯುಭ್ವಾದ್ಯಾಯತನನೇ ಪರವಿದ್ಯೆಗೆ ವಿಷಯ

तत्वप्रकाशिका – अदृश्यत्वादिगुणकाक्षरस्य विष्णोः परविद्याविषयत्व-मुक्तम् । तत्परविद्याविषयत्वमाथर्वणे यस्मिन्द्यौरित्युक्तस्य द्युभ्वाद्यायतनस्योच्यते। 'तमेवैकं जानथ आत्मानमन्या वाचो विमुञ्चथामृतस्यैष सेतुः' इति ।

ಹಿಂದಿನ ಪಾದದಲ್ಲಿರುವ ಅದೃಶ್ಯತ್ವಾಧಿಕರಣದಲ್ಲಿ ಅದೃಶ್ಯತ್ವ ಮೊದಲಾದ ಗುಣವುಳ್ಳ ಅಕ್ಷರನಾಮಕನಾದ ವಿಷ್ಣುವಿಗೆ ಪರವಿದ್ಯಾವಿಷಯತ್ವವನ್ನು ಹೇಳಲಾಗಿದೆ. ಆದರೆ ಇದೇ ಪರವಿದ್ಯಾ ವಿಷಯತ್ವವನ್ನು ಆಥರ್ವಣೋಪನಿಷತ್ತು 'ಯಸ್ಮಿನ್ ದ್ಯೌಃ' ಎಂಬ ವಾಕ್ಯದಿಂದ

ಪ್ರತಿಪಾದ್ಯನಾದ ದ್ಯುಭ್ವಾದ್ಯಾಯತನನಿಗೆ ಹೇಳುತ್ತಿದೆ. 'ತಮೇವೈಕಂ ಜಾನಥ ಆತ್ಮಾನಮನ್ಯಾವಾಚೋ ವಿಮುಂಚಥ ಅಮೃತಸ್ಯೈಷ ಸೇತುಃ' 'ವಿಷ್ಣುವನ್ನೇ ಮುಖ್ಯವಾಗಿ ತಿಳಿಯಿರಿ. ಉಳಿದ ವಿಷಯಗಳನ್ನು ಬಿಡಿರಿ. ಅವನೇ ಮುಕ್ತರಿಗೆಲ್ಲಾ ಆಧಾರನಾಗಿದ್ದಾನೆ' ಇತ್ಯಾದಿವಾಕ್ಯದಿಂದ ದ್ಯುಭ್ವಾದ್ಯಾಯತನನಲ್ಲಿ ಪರವಿದ್ಯಾ ವಿಷಯತ್ವವು ಹೇಳಲ್ಪಟ್ಟಿದೆ.

ದ್ಯುಭ್ವಾದ್ಯಾಯತನನು ಯಾರು ?

तत्वप्रकाशिका – स च यदि विष्णोरितरः स्यात्तदा परविद्याविषयत्वमन्यस्य प्रसज्येतेत्यवश्यं निर्णेयः । तद् द्युभ्वाद्यायतनत्वं विषयः ।

ಈ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಒಂದುವೇಳೆ ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಬರುವುದಾದರೆ ಪರವಿದ್ಯಾವಿಷಯತ್ವ ಎಂಬ ಧರ್ಮವೂ ಸಹ ಬೇರೆಯವರಲ್ಲೇ ಬರಬೇಕಾಗುತ್ತದೆ. ಆದ್ದರಿಂದ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವು ಯಾರಲ್ಲಿದೆ ಎಂದು ಅವಶ್ಯವಾಗಿ ನಿರ್ಣಯ ಮಾಡಬೇಕು. ಆದ್ದರಿಂದ ಈ ಅಧಿಕರಣಕ್ಕೆ ಅಂತಹ ದ್ಯುಭ್ವಾದ್ಯಾಯತನತ್ವವೇ ವಿಷಯವಾಗಿದೆ.

ಸಂದೇಹ ಹಾಗೂ ಪೂರ್ವಪಕ್ಷ

तत्वप्रकाशिका – तत्किं विष्णोरन्येषां वेति सन्देहः । उक्तसाधारण्यमेव सन्देहबीजम् । द्युभ्वाद्यायतनत्वं रुद्रप्रधानजीववायूनामिति पूर्वः पक्षः ।

ಈ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿ ಮಾತ್ರವಿದೆಯೋ ಅಥವಾ ಬೇರೆಯವರಲ್ಲಿಯೂ ಇದೆಯೋ ಎಂದು ಸಂಶಯ. ಈ ಹಿಂದೆ ಹೇಳಿದ ಎರಡೂ ಪ್ರಕಾರದ ಸಾಧಾರಣವಾದ ಶ್ರುತಿಗಳೇ ಸಂದೇಹಕ್ಕೆ ಕಾರಣಗಳಾಗಿವೆ. ದ್ಯುಭ್ವಾದ್ಯಾಯತನತ್ವವು ರುದ್ರ, ಪ್ರಧಾನ, ಜೀವ, ಹಾಗೂ ವಾಯು ಮೊದಲಾದವರಲ್ಲಿ ಯಾರಲ್ಲಾದರೂ ಬರಬಹುದೆಂದು ಪೂರ್ವಪಕ್ಷ.

ರುದ್ರನೇ ದ್ಯುಭ್ವಾದ್ಯಾಯತನನೆಂದು ಪೂರ್ವಪಕ್ಷ

तत्वप्रकाशिका – अत्रोक्तप्राणाधारत्वस्य 'प्राणानां गन्थिरसि' 'प्राणेश्वरः' इत्यादिना रुद्रे प्रतीतेः । तथा द्युभ्वन्तरिक्षायतनत्वस्य च 'रुद्रो वाव लोकाधारः' इति तस्मिन्नुक्तत्वात् ।

ಈ ಅಧಿಕರಣದ ವಿಷಯವಾಕ್ಯದಲ್ಲಿ ಕೇಳಿಸುತ್ತಿರುವ ಪ್ರಾಣಾಧಾರತ್ವ ಎಂಬ ಧರ್ಮವು 'ಪ್ರಾಣಾನಾಂ ಗ್ರಂಥಿರಸಿ' ಎಂಬ ಶ್ರುತಿಯಿಂದ ಮತ್ತು 'ಪ್ರಾಣೇಶ್ವರಃ' ಎಂಬ ಶ್ರುತಿಯಿಂದಲೂ ರುದ್ರನಲ್ಲೇ ಪ್ರತೀತವಾಗುತ್ತಿದೆ. ಇದರಂತೆ ದ್ಯುಲೋಕ, ಭೂಲೋಕ, ಅಂತರಿಕ್ಷ ಮೊದಲಾದವುಗಳಿಗೆ ಆಶ್ರಯನಾದವನೂ ಸಹ ರುದ್ರನೇ ಆಗಿದ್ದಾನೆಂದು ''ರುದ್ರೋ ವಾವ ಲೋಕಾಧಾರಃ'' ಎಂಬ ಶ್ರುತಿಯಿಂದ ಸ್ಪಷ್ಟವಾಗುತ್ತದೆ.

ಶ್ರುತಿಯಲ್ಲಿರುವ ರುದ್ರನ ಅಸಾಧಾರಣಲಿಂಗಗಳು

तत्वप्रकाशिका – मनआयतनत्वं च तस्मिन् 'मनो वै रुद्र ओतं च प्रोतं च' इति प्रतीयते । न चैतच्छ्रुतीनां विष्णुविषयत्वम् । अन्तकः कृत्तिवासाः पिनाकीत्यादिरुद्रलिङ्गात् ।

ಮತ್ತು ಮನಸ್ಸಿಗೆ ಆಶ್ರಯನಾದವನೂ ಸಹ ರುದ್ರನೇ ಆಗಿದ್ದಾನೆಂದು 'ಮನೋ ವೈ ರುದ್ರ ಓತಂ ಚ ಪ್ರೋತಂ ಚ' ಎಂಬ ಶ್ರುತಿಯಿಂದ ತಿಳಿಯುತ್ತದೆ. ಈ ಎಲ್ಲ ಶ್ರುತಿಗಳೂ ವಿಷ್ಣುವಿಷಯಕವಾಗಿದೆಯಲ್ಲವೇ ಎಂದು ಪ್ರಶ್ನಿಸಬಾರದು. ಏಕೆಂದರೆ ಈ ಶ್ರುತಿಗಳಲ್ಲಿ ಅಂತಕಃ, ಕೃತ್ತಿವಾಸಾಃ, ಪಿನಾಕೀ ಮೊದಲಾದ ರುದ್ರಲಿಂಗಗಳೇ ಕೇಳಿಸುತ್ತಿವೆ.

ರುದ್ರನೇ ದ್ಯುಭ್ವಾದ್ಯಾಯತನನೆನಲು ಅನುಮಾನ

तत्वप्रकाशिका – दृष्टफलविधायकरुद्रवाक्यदृष्टान्तेन तत्सर्वाश्रयत्व-प्रतिपादकवाक्यप्रामाण्यानुमानेन च तस्य सर्वाश्रयत्वसिद्धेः ।

ರುದ್ರನೇ ದ್ಯುಭ್ವಾದ್ಯಾಯತನನಾಗಿದ್ದಾನೆ ಎಂಬ ವಿಷಯದಲ್ಲಿ ಅನುಮಾನವೂ ಸಹ ಪ್ರಮಾಣವಾಗಿದೆ. ರುದ್ರನನ್ನು ವರ್ಣಿಸುವ ಕೆಲವು ಶ್ರುತಿವಾಕ್ಯಗಳಿಂದ ದೃಷ್ಟಫಲವು ಸಿಗುತ್ತಿದೆ. ಇಂತಹ ದೃಷ್ಟಫಲವಿಧಾಯಕವಾದ ರುದ್ರಪರವಾಕ್ಯದ ದೃಷ್ಟಾಂತದಿಂದ ರುದ್ರನೇ ಸರ್ವಾಶ್ರಯ-ನಾಗಿದ್ದಾನೆಂದು ಪ್ರತಿಪಾದಿಸುವ ವಾಕ್ಯಕ್ಕೂ ಸಹ ಪ್ರಾಮಾಣ್ಯವನ್ನು ಸಮರ್ಥಿಸಲು ಬರುತ್ತದೆ. ಹಿ-ಗೆ ಅನುಮಾನಪ್ರಮಾಣದಿಂದ ರುದ್ರನೇ ಸರ್ವಾಶ್ರಯನೆಂದು ಸಿದ್ಧನಾಗುತ್ತಾನೆ.

ಜಡವಾದ ಪ್ರಕೃತಿ ದ್ಯುಭ್ವಾದ್ಯಾಯತನನೆಂದು ಮತ್ತೊಂದು ಪೂರ್ವಪಕ್ಷ

तत्वप्रकाशिका – द्युभ्वादीनां प्रकृतिकार्यत्वात्तदाश्रयत्वं प्रकृतेर्युक्तम् । 'यद्भूतं च भवच्च भविष्यच्चेत्याचक्षते आकाश एव तदोतं च प्रोतं च' इति श्रुतेश्च पूर्ववत्प्रकृतेः सर्वाश्रयत्वाभिधायककापिलागमप्रामाण्यानुमानाच्च ।

ಎರಡನೇ ಪೂರ್ವಪಕ್ಷ -- ಅಥವಾ ಜಡವಾದ ಪ್ರಕೃತಿಯೇ ದ್ಯುಭ್ವಾದ್ಯಾಯತನವಾಗಬಹುದು. ಏಕೆಂದರೆ, ದ್ಯುಲೋಕ, ಭೂಲೋಕ ಎಲ್ಲವೂ ಸಹ ಪ್ರಕೃತಿಯ ಕಾರ್ಯವಾಗಿವೆ. ಈ ಪದಾರ್ಥಗಳಿಗೆಲ್ಲ ಪ್ರಕೃತಿಯೇ ಆಶ್ರಯವಾಗುತ್ತದೆಂಬುದು ಸಮಂಜಸವಾಗಿದೆ. 'ಯದ್ಭೂತಂ ಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ ಆಕಾಶ ಏವ ತದೋತಂ ಚ ಪ್ರೋತಂ ಚ' 'ಹಿಂದೆ ಹುಟ್ಟಿದ, ಈಗ ಹುಟ್ಟುತ್ತಿರುವ, ಮುಂದೆ ಹುಟ್ಟಲಿರುವ ಸಕಲಪದಾರ್ಥಗಳೂ ಆಕಾಶದಲ್ಲೇ ಅಂದರೆ ಪ್ರಕೃತಿಯಲ್ಲೇ ಓತಪ್ರೋತವಾಗಿ ಆಶ್ರಯಿಸಿವೆ' ಎಂಬ ಶ್ರುತಿಯ ಆಧಾರದಿಂದ ಪ್ರಕೃತಿಗೆ ಸರ್ವಾಶ್ರಯತ್ವವನ್ನು ಹೇಳಬಹುದು. ಅಥವಾ ರುದ್ರನ ವಿಷಯದಲ್ಲಿ ಅನುಮಾನಪ್ರಾಮಾಣ್ಯವನ್ನು ಹೇಳಿದಂತೆ ಪ್ರಕೃತಿಯ ವಿಷಯದಲ್ಲಿಯೂ ಅನುಮಾನಪ್ರಮಾಣವನ್ನು ಹೇಳಬಹುದು. ಪ್ರಕೃತಿಯನ್ನು ವರ್ಣಿಸುವ ಕೆಲವು ವಾಕ್ಯಗಳಿಗೆ ದೃಷ್ಟಫಲದ ಮೂಲಕವಾಗಿ ಪ್ರಾಮಾಣ್ಯವು ಕಂಡಿರುವುದರಿಂದ ಅದರ ದೃಷ್ಟಾಂತದಿಂದ ಪ್ರಕೃತಿಗೆ ಸರ್ವಾಶ್ರಯತ್ವವನ್ನು ಹೇಳುವ ಕಾಪಿಲಾಗಮಕ್ಕೂ ಸಹ ಪ್ರಾಮಾಣ್ಯವನ್ನು ಅನುಮಾನದಿಂದ ಸಾಧಿಸಬಹುದು. ಹೀಗೆ ಶ್ರುತಿ ಹಾಗೂ ಅನುಮಾನಗಳ ಪ್ರಮಾಣದ ಆಧಾರದಿಂದ ಪ್ರಕೃತಿಯು ದ್ಯುಭ್ವಾದ್ಯಾಯತನವಾಗಿದೆ ಎಂದು ಹೇಳಬಹುದು.

ಜೀವನೂ ಸಹ ದ್ಯುಭ್ವಾದ್ಯಾಯತನನೆಂದು ಮೂರನೆಯ ಪೂರ್ವಪಕ್ಷ

तत्वप्रकाशिका – 'अरा इव रथनाभौ संहता यत्र नाड्यः स एषोऽन्तश्चरते बहुधा जायमानः' इति द्युभ्वाद्यायतने जीवलिङ्गश्रवणाज्जीवस्य तद्युक्तम् । तस्य जीवत्वादेव प्राणित्वप्रसिद्धेश्च ।

ಮೂರನೆಯ ಪೂರ್ವಪಕ್ಷ -- ಅಥವಾ ಜೀವನೂ ಸಹ ದ್ಯುಭ್ವಾದ್ಯಾಯತನನಾಗಬಹುದು. ಏಕೆಂದರೆ, 'ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ ಸ ಏಷೋಽಂತಶ್ಚರತೇ ಬಹುಧಾ

ಜಾಯಮಾನಃ' 'ಯಾವ ರೀತಿಯಾಗಿ ರಥಚಕ್ರದಲ್ಲಿರುವ ರಂಧ್ರಗಳಲ್ಲಿ ಅರವು (ಚಕ್ರಕ್ಕೆ ಆಧಾರವಾಗಿರುವ ಅಚ್ಚು) ಜೋಡಿಸಲ್ಪಟ್ಟಿರುತ್ತದೋ ಆದೇ ರೀತಿಯಾಗಿ ಈ ದೇಹದಲ್ಲಿ ನಾಡಿಗಳು ಜೋಡಿಸಲ್ಪಟ್ಟಿರುತ್ತವೆ. ಮತ್ತು ಅನೇಕವಿಧವಾದ ಶರೀರದಿಂದ ಹುಟ್ಟುವ ಜೀವನು ಎಲ್ಲಕ್ಕೂ ಆಶ್ರಯನಾಗಿದ್ದಾನೆ' ಹೀಗೆ ಶ್ರುತಿ ಇರುವುದರಿಂದ ದ್ಯುಭ್ವಾದ್ಯಾಯತನನಲ್ಲಿ ನಾನಾವಿಧಶರೀರೋತ್ಪನ್ನತ್ವ ಎಂಬ ಜೀವನ ಲಿಂಗವು ಕೇಳಿಸುತ್ತಿದೆ. ಹಾಗಾಗಿ ಜೀವನೂ ಸಹ ದ್ಯುಭ್ವಾದ್ಯಾಯತನನಾಗಬಹುದು. 'ಜೀವ ಪ್ರಾಣಧಾರಣೇ' ಎಂಬ ಧಾತುವಿನಂತೆ ಜೀವಶಬ್ದದಿಂದ ಪ್ರಾಣಧಾರಣತ್ವವೆಂಬ ಪ್ರವೃತ್ತಿನಿಮಿತ್ತವು ತಿಳಿಯುತ್ತದೆ. ಆದ್ದರಿಂದ ಜೀವನಲ್ಲಿ ಪ್ರಾಣಾಶ್ರಯತ್ವವು ಸ್ಪಷ್ಟವಾಗುತ್ತದೆ. ಈ ಕಾರಣಗಳಿಂದ ಜೀವನು ದ್ಯುಭ್ವಾದ್ಯಾಯತನನಾಗುತ್ತಾನೆ.

'ವಾಯು' ದ್ಯುಭ್ವಾದ್ಯಾಯತನನೆಂದು ನಾಕನೆಯ ಪೂರ್ವಪಕ್ಷ

तत्वप्रकाशिका – विषयभूतलोकाधारत्वस्य 'वायुना वै गौतमसूत्रेण' इति वायौ श्रुतिसिद्धत्वात् तस्य द्युभ्वाद्यायतनत्वं युक्तम् । तस्य प्राणाधारत्वप्रसिद्धेश्च ।

ನಾಕನೆಯ ಪೂರ್ವಪಕ್ಷ. ಅಥವಾ ವಾಯುವು ದ್ಯುಭ್ವಾದ್ಯಾಯತನನಾಗಬಹುದು. ವಿಷಯವಾಕ್ಯದಲ್ಲಿ ಕೇಳಿಸುತ್ತಿರುವ ಲೋಕಾಧಾರತ್ವವು 'ವಾಯುನಾ ವೈ ಗೌತಮಸೂತ್ರೇಣ' ಎಂಬ ಶ್ರುತಿವಾಕ್ಯದಿಂದ ವಾಯುವಿನಲ್ಲಿ ಸಿದ್ಧವಾಗುತ್ತದೆ. ಮತ್ತು ವಾಯುದೇವನು ಪ್ರಾಣಗಳಿಗೆ ಆಶ್ರಯನಾಗಿದ್ದಾನೆಂಬುದು ಪ್ರಸಿದ್ಧವೇ ಆಗಿದೆ. ಹಾಗಾಗಿ ವಾಯುದೇವನೂ ಸಹ ದ್ಯುಭ್ವಾದ್ಯಾಯತನನಾಗುತ್ತಾನೆ.

ವಿಷ್ಣು ದ್ಯುಭ್ವಾದ್ಯಾಯತನನ್ನೆನ್ನಲು ಬಾಧಕಗಳು

तत्वप्रकाशिका – विष्णोर्द्युभ्वाद्यायतनत्वप्रसिद्धावपि नासावत्रोच्यते । बहुधा जन्मबाधात् ।

ವಿಷ್ಣುವು ದ್ಯುಭ್ವಾದ್ಯಾಯತನನಾಗಿದ್ದಾನೆಂದು ಪ್ರಸಿದ್ಧಿ ಇರಬಹುದು. ಆದರೆ ಈ ಪ್ರಕರಣದಲ್ಲಿ ಇಲ್ಲಿಯ ತನಕ ಸಮರ್ಥಿಸಿದ ಅನೇಕ ಯುಕ್ತಿಗಳಿಂದ ವಿಷ್ಣುವನ್ನು

ದ್ಯುಭ್ವಾದ್ಯಾಯತನನೆಂದು ಹೇಳಲಾಗದು. ಅಷ್ಟೇ ಅಲ್ಲದೆ ಅನೇಕ ವಿಧವಾದ ಜನ್ಮವನ್ನು ತಾಳುತ್ತಾನೆಂಬ ಬಹುಧಾಜಾಯಮಾನತ್ವವೆಂಬ ಬಾಧಕಲಿಂಗವೂ ಸಹ ವಿಷ್ಣುವಿಷಯದಲ್ಲಿ ಕಾಣಿಸುತ್ತಿದೆ.

ಜೀವೇಶ್ವರರಿಗೆ ಅಭೇದವಿರುವುದರಿಂದ ಪೂರ್ವಪಕ್ಷವು ಪ್ರಬಲವಾಗಿದೆ

तत्वप्रकाशिका – परविद्याविषयत्वलिङ्गाद् विष्णुरिति चेन्न । जीवेशाभेदेन ब्रह्मगतलिङ्गस्यापि जीवे सम्भवात् ।

ಈ ಪ್ರಕರಣವು ಪರವಿದ್ಯಾವಿಷಯಕವಾದ್ದರಿಂದ ವಿಷ್ಣುವನ್ನೇ ಪ್ರತಿಪಾದಿಸಬೇಕಲ್ಲವೇ ಎಂದೂ ಶಂಕಿಸಬಾರದು. ಏಕೆಂದರೆ ಜೀವೇಶ್ವರರಿಗೆ ಅಭೇದವಿರುವುದರಿಂದ ಪರವಿದ್ಯಾ-ವಿಷಯತ್ವವೆಂಬ ಈಶ್ವರನ ಧರ್ಮವು ಜೀವನಲ್ಲಿಯೂ ಬರುತ್ತದೆ.

ಕಾರಣದ ಧರ್ಮ ಕಾರ್ಯದಲ್ಲಿದೆ, ಕಾರ್ಯದ ಧರ್ಮ ಕಾರಣದಲ್ಲಿಲ್ಲ

तत्वप्रकाशिका – नच तथा बहुधा जन्म सम्भवति । कारणगतस्यैव कार्ये सम्भवात् ।

ಆದರೆ ಜೀವನಲ್ಲಿರುವ ಬಹುಧಾಜಾಯಮಾನತ್ವವೆಂಬ ಲಿಂಗವನ್ನು ಅಭೇದವಿರುವ ಪ್ರಯುಕ್ತ ಈಶ್ವರನಲ್ಲಿ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಕಾರಣದಲ್ಲಿರುವ ಧರ್ಮವನ್ನು ಕಾರ್ಯದಲ್ಲಿ ಒಪ್ಪಬಹುದೇ ಹೊರತು; ಕಾರ್ಯದಲ್ಲಿರುವ ಧರ್ಮವನ್ನು ಕಾರಣದಲ್ಲಿ ಒಪ್ಪಲು ಸಾಧ್ಯವಿಲ್ಲ.

ರುದ್ರಾದಿಗಳೇ ಪರವಿದ್ಯೆಗೆ ವಿಷಯ

तत्वप्रकाशिका – अतः परविद्याविषयो द्युभ्वाद्याश्रयो विष्णोरितर एवेति तस्यैवादृश्यत्वादिगुणकत्वमिति भावः ।

ಆದ್ದರಿಂದ ಯಾವ ವ್ಯಕ್ತಿಯು ಪರವಿದ್ಯಾವಿಷಯನಾಗಿದ್ದಾನೋ ಅವನೇ ದ್ಯುಭ್ವಾದ್ಯಾಶ್ರಯ-ನಾಗಿದ್ದಾನೆ. ಹಾಗಾಗಿ ವಿಷ್ಣು ಪರವಿದ್ಯಾವಿಷಯನೆಂದು ಹೇಳಲಾಗದ ಕಾರಣ

ದ್ಯುಭ್ವಾದ್ಯಾಶ್ರಯನೂ ಸಹ ಆಗುವುದಿಲ್ಲ. ರುದ್ರಾದಿಗಳೇ ಆಗುತ್ತಾರೆ. ಅಂತಹ ರುದ್ರಾದಿಗಳಲ್ಲೇ ಅದೃಶ್ಯತ್ವಾದಿಗುಣಗಳನ್ನು ಹೇಳಬೇಕೆಂದು ಪೂರ್ವಪಕ್ಷದ ಅಭಿಪ್ರಾಯ.

ಸಿದ್ಧಾಂತಸ್ಥಾಪನೆಗೆ ಅವತಾರಿಕೆ

तत्वप्रकाशिका – सिद्धान्तयत् सूत्रमवतार्य व्याचष्टे – अत इति ।। द्युभ्वाद्यायतनत्वे स्वशब्दपर्यायात्मशब्दश्रवणाद्द्युभ्वाद्यायतनं विष्णुरेवेत्यर्थः । आत्मशब्दादपि कुतो विष्णुरित्यत आह – आत्मेति ।।१।।

ಸಿದ್ಧಾಂತವನ್ನು ಸ್ಥಾಪಿಸುವ ಸೂತ್ರಕ್ಕೆ ಅವತಾರಿಕೆಯನ್ನು ಕೊಡುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ. ''ಅತಃ'' ಎಂಬುದಾಗಿ. ದ್ಯುಭ್ವಾದ್ಯಾಯತನನಾದವನಲ್ಲಿ ಸ್ವಶಬ್ದದ ಪರ್ಯಾಯಶಬ್ದವೆನಿಸಿದ ಆತ್ಮಶಬ್ದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗುತ್ತಾನೆ ಎಂದರ್ಥ. ಆತ್ಮಶಬ್ದವಿದ್ದರೂ ವಿಷ್ಣು ಎಂಬರ್ಥವನ್ನೇ ಏಕೆ ಸ್ವೀಕರಿಸಬೇಕು? ಎಂಬ ಪ್ರಶ್ನೆಗೆ ''ಆತ್ಮ'' ಎಂಬ ಸ್ಮೃತಿವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ವಿಶೇಷವಿಚಾರ - ಸೂತ್ರದಲ್ಲಿ 'ಸ್ವಶಬ್ದಾತ್' ಎಂದು ಹೇಳಿದ್ದಾರೆ. ವಿಷ್ಣುವಿನಲ್ಲಿ ಅಸಾಧಾರಣವಾಗಿ ಪ್ರಯೋಗಿಸಲ್ಪಟ್ಟ ಆತ್ಮಶಬ್ದವು ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಎಂದು ಇದರ ಅರ್ಥ. ಈ ಅರ್ಥವನ್ನು ವಿವಕ್ಷಿಸುವುದಾದರೆ ಸಹಜವಾಗಿ ಶಂಕೆಯು ಉದ್ಭವಿಸುತ್ತದೆ. ಸೂತ್ರಕಾರರು 'ಆತ್ಮಶಬ್ದಾತ್' ಎಂದೇ ಹೇಳಬಹುದಿತ್ತಲ್ಲವೇ? ನೇರವಾಗಿ ಇದರಿಂದ ಹೇತುವನ್ನು ತಿಳಿಸಿದಂತಾಗುತ್ತಿತ್ತು. 'ಸ್ವಶಬ್ದಾತ್' ಎಂದು ಹೇಳಿದರೆ ವಿಷ್ಣುವಿಗೆ ಸಂಬಂಧಪಟ್ಟ ಶಬ್ದ ಯಾವುದೆಂದು ಮೊದಲು ವಿಮರ್ಶಿಸಿ ಅನಂತರ ಅದು ಆತ್ಮಶಬ್ದವಾಗಿದೆಯೆಂಬುದನ್ನು ಅನ್ಯಥ್ಯಾನುಪಪತ್ತಿ ಪ್ರಮಾಣದಿಂದ ತಿಳಿಯಬೇಕಾಗುತ್ತದೆ. ಇದು ವಕ್ರ ಮಾರ್ಗ. ಸೂತ್ರಕಾರರು ನೇರ ಮಾರ್ಗವನ್ನೇಕೆ ಬಿಟ್ಟರು? ವಕ್ರಮಾರ್ಗವನ್ನೇಕೆ ಹಿಡಿದರು? ಎಂದು.

ಇದು ಮಂದಮತಿಗಳಿಗೆ ಬರುವ ಪ್ರಶ್ನೆಯಷ್ಟೇ ಹೊರತು, ಇದರಲ್ಲಿ ಹುರುಳಿಲ್ಲ. 'ಸ್ವಶಬ್ದಾತ್' ಎಂಬ ಶಬ್ದಪ್ರಯೋಗದ ಹಿಂದೆ ಬಹಳ ಅರ್ಥವನ್ನು ತುಂಬಿದ್ದಾರೆ ಸೂತ್ರಕಾರರು. 'ಆತ್ಮಾ' ಎಂಬ ಶಬ್ದವು ವಿಷ್ಣುವಿನಲ್ಲಿ ಅಸಾಧಾರಣವಾಗಿದೆ ಮತ್ತು ಈ ಶಬ್ದವಿಶೇಷವನ್ನೇ ಸ್ವೀಕರಿಸಬೇಕು ಎಂಬೆರಡು ವಿಚಾರಗಳನ್ನು ತಿಳಿಸುವುದಕ್ಕಾಗಿ 'ಸ್ವಶಬ್ದಾತ್' ಎಂದು

ಹೇಳಿರುವರು. ಒಂದು ವೇಳೆ ಆತ್ಮಶಬ್ದವನ್ನೇ ಬಾಯಿಬಿಟ್ಟು ಹೇಳಿದ್ದರೆ, ಅದು ವಿಷ್ಣುವಿನಲ್ಲಿ ಅಸಾಧಾರಣವಾಗಿದೆಯೆಂದು ತಿಳಿಯುತ್ತಿರಲಿಲ್ಲ. ಇದು ಶಬ್ದವಿಶೇಷವೆಂದೂ ಸಹ ತಿಳಿಯುತ್ತಿರಲಿಲ್ಲ. 'ಸ್ವ ಇತಿ ಶಬ್ದಃ = ಸ್ವಶಬ್ದಃ' ಎಂಬ ಕರ್ಮಧಾರಯವನ್ನು ಆಶ್ರಯಿಸಿದಾಗ ಶಬ್ದವಿಶೇಷವನ್ನೇ ಸ್ವೀಕರಿಸಬೇಕೆಂಬ ಪ್ರಯೋಜನವು ಲಾಭವಾಗುತ್ತದೆ. 'ಸ್ವಸ್ಯ ಶಬ್ದಃ' 'ಸ್ವಶಬ್ದಃ' ಎಂಬ ಷಷ್ಠೀತತ್ಪುರುಷವನ್ನು ಆಶ್ರಯಿಸಿದಾಗ ವಿಷ್ಣುವಿನ ಅಸಾಧಾರಣ ಶಬ್ದವಾಗಿದೆಯೆಂದು ತಿಳಿಯುತ್ತದೆ. 'ಆತ್ಮಶಬ್ದಾತ್' ಎಂಬ ಪದಪ್ರಯೋಗದಿಂದ ಈ ಎರಡು ಸಮಾಸಗಳೂ ತಿಳಿಯಲು ಸಾಧ್ಯವಿರಲಿಲ್ಲ. ಈ ಎರಡು ಸಮಾಸಗಳಿಂದ ತಿಳಿಯುವ ಪ್ರಮೇಯವೂ ಸಹ ಸಿದ್ಧವಾಗುತ್ತಿರಲಿಲ್ಲ.

ಅಥವಾ ಸ್ವಶಬ್ದವನ್ನು ದೃಷ್ಟಾಂತವೆಂದು ತಿಳಿಯಬಹುದು. ಲೋಕದಲ್ಲಿ ೧. ತಾನು, ೨. ದುಡ್ಡು, ೩. ಬಂಧು ಮೊದಲಾದ ಅರ್ಥಗಳಲ್ಲಿ 'ಸ್ವ' ಎಂಬ ಶಬ್ದವನ್ನು ಪ್ರಯೋಗಿಸುವುದು ಕಂಡಿದೆ. ಆದರೂ ಸಹ ಚತುರ್ಮುಖನನ್ನು 'ಸ್ವಭೂಃ' ಎಂದು ಕರೆಯಲಾಗುತ್ತದೆ. ಏಕೆಂದರೆ 'ಸ್ವ' ಎನಿಸಿದ ಭಗವಂತನಿಂದ ಹುಟ್ಟಿದ್ದವನಾದ್ದರಿಂದ. ಇದರಿಂದ 'ಸ್ವ' ಶಬ್ದವು ಶ್ರೀಹರಿಯಲ್ಲೇ ಮುಖ್ಯವಾಗಿದೆಯೆಂದು ತಿಳಿಯುತ್ತದೆ. ಅದರಂತೆ ಆತ್ಮಶಬ್ದವನ್ನೂ ಲೋಕದಲ್ಲಿ ಬೇರೆಡೆ ಪ್ರಯೋಗಿಸಬಹುದು. ಆದರೆ ಚತುರ್ಮುಖನನ್ನೇ 'ಆತ್ಮಭೂಃ' ಎಂದೂ ಸಹ ಕರೆಯುತ್ತಾರೆ. ಹಾಗಾದರೆ ಆತ್ಮಶಬ್ದಕ್ಕೆ ಮುಖ್ಯಪ್ರತಿಪಾದ್ಯನು ವಿಷ್ಣುವೇ ಆಗಿದ್ದಾನೆಂದು ಅರ್ಥೈಸಬೇಕು. ಹೀಗೆ ಸ್ವಶಬ್ದವು ಹೇಗೆ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೋ? ಅದರಂತೆ ಆತ್ಮಶಬ್ದವೂ ಸಹ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆಂಬ ಇತ್ಯಾದಿ ವಿಚಾರಗಳನ್ನು ಸೂತ್ರಕಾರರು ಇಲ್ಲಿ ಸೆರೆಹಿಡಿದಿದ್ದಾರೆ.

ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ

ಭಾವದೀಪ

ಸ್ವತಃ ಭಾಷ್ಯಕಾರರೇ ಪಾದಪ್ರಮೇಯವನ್ನು ಏಕೆ ಹೇಳುತ್ತಿರುವರು ?

ಭಾವದೀಪಃ – द्युभ्वाद्यायतनं स्वशब्दात् ।। पूर्वोक्तदिशा पादार्थत्वाप्रतीतेराह – एतदिति ।। हराविति ।। एषां शब्दानां लोके हराविवान्यत्रप्रयोगाद्

व्यक्तिविशेषनिर्णयाय श्रुत्यन्तरान्वेषणे श्रुत्यन्तरेऽन्यत्रेव हरावपि प्रयोगात् श्रुतिसाधारण्येन वा आदिपदोक्तेन भूमाक्षरादिनये वक्ष्यमाणदिशा प्रक्रमसमाख्यासाधारण्येन वा प्रवृत्तिनिमित्तसाधारण्येन वा पूर्वोक्तन्यायलोकप्रयोगाभ्यां वा प्रसिद्धानामेकोपस्थापनदशायामन्यस्याप्युपस्थापकानामिति यावत् साक्षाद्धर्मिवाचिनां धर्मद्वारा धर्मिवाचिनां च शब्दानामित्यर्थः ।

ಈ ಪಾದದಲ್ಲಿಯೂ ಸಹ ಹಿಂದಿನಂತೆ ಯಾವ ಪ್ರಮೇಯವನ್ನು ಹೇಳುತ್ತಿದ್ದಾರೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದ್ದರಿಂದ ಸ್ವತಃ ಭಾಷ್ಯಕಾರರೇ ಪಾದಪ್ರಮೇಯವನ್ನು "ಏತತ್" ಇತ್ಯಾದಿ ವಾಕ್ಯಗಳಿಂದ ತಿಳಿಸುತ್ತಿದ್ದಾರೆ. "ಹರೌ" ಎಂಬುದಕ್ಕೆ ಹೀಗರ್ಥ - ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಶಬ್ದಗಳು ಭಗವಂತನಲ್ಲಿ ಹೇಗೆ ಪ್ರಸಿದ್ಧವಾಗಿವೆಯೋ ಅದರಂತೆ ಲೋಕದಲ್ಲಿಯೂ ಬೇರೆ ಕಡೆ ಪ್ರಸಿದ್ಧವಾಗಿವೆ. ಹೀಗಿರುವಾಗ ಇಂತಹ ವ್ಯಕ್ತಿಯನ್ನೇ ಪ್ರತಿಪಾದಿಸುತ್ತವೆ ಎಂದು ನಿರ್ಣಯಿಸಲು ಒಂದು ಶ್ರುತಿಯನ್ನು ಅನ್ವೇಷಣೆ ಮಾಡುವುದಾದರೆ ಮತ್ತೊಂದು ಶ್ರುತಿಯಲ್ಲಿ ಬೇರೆ ವ್ಯಕ್ತಿಗಳಲ್ಲಿ ಪ್ರಯೋಗಿಸಿದಂತೆ ಶ್ರೀಹರಿಯಲ್ಲೂ ಪ್ರಯೋಗಿಸಿರುವುದು ಕಾಣಿಸುತ್ತದೆ. ಹೀಗೆ ಭಗವಂತನಲ್ಲಿ ಮತ್ತು ಬೇರೆ ವಿಷಯದಲ್ಲಿ ಶ್ರುತಿಯು ಸಾಧಾರಣವಾಗಿದೆ. ಆದಿ ಪದದಿಂದ ಭೂಮಾಧಿಕರಣ ಮತ್ತು ಅಕ್ಷರಾಧಿಕರಣಗಳಲ್ಲಿ ಹೇಳುವಂತೆ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣವು ಎರಡು ವಿಷಯಗಳಲ್ಲಿ ಸಾಧಾರಣವಾಗಿರುವುದರಿಂದ ಈ ಶಬ್ದಗಳು ಉಭಯತ್ರ ಪ್ರಸಿದ್ಧವಾಗಿವೆ. ಅಥವಾ ಎರಡೂ ಕಡೆ ಪ್ರವೃತ್ತಿನಿಮಿತ್ತವು ಸಾಧಾರಣವಾಗಿರುವುದರಿಂದ ಉಭಯತ್ರ ಪ್ರಸಿದ್ಧವಾಗಿವೆ. ಅಥವಾ ಹಿಂದೆ ಹೇಳಿದ ನ್ಯಾಯ ಹಾಗೂ ಲೋಕಪ್ರಯೋಗಗಳಿಂದ ಉಭಯತ್ರ ಪ್ರಸಿದ್ಧವಾಗಿವೆ. ಅಂದರೆ ಶಬ್ದವು ಒಬ್ಬನನ್ನು ತಿಳಿಸುವಾಗ ಮತ್ತೊಬ್ಬನ ಸ್ಮರಣೆಯೂ ಸಹ ಬರುತ್ತದೆಂದು ಅಭಿಪ್ರಾಯ. ಈ ಎಲ್ಲಾ ಕಾರಣಗಳಿಂದ ನೇರವಾಗಿ ಧರ್ಮಿವಾಚಿಯಾದ ಮತ್ತು ಧರ್ಮದ ಮುಖಾಂತರ ಧರ್ಮಿವಾಚಿವಾದ ಶಬ್ದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ ಎಂದು ತಿಳಿಯಬೇಕು.

ವಿಶೇಷವಿಚಾರ - ನಾಮಪಾದದಲ್ಲಿ ಸಕಲ ನಾಮಾತ್ಮಕಶಬ್ದಗಳು ಭಗವಂತನ ಹೆಸರುಗಳಾಗಿವೆಯೆಂಬುದನ್ನು ವಿಚಾರ ಮಾಡಿದ್ದಾಯಿತು. ಯೌಗಿಕವಾದ ಸಕಲ ಶಬ್ದಗಳು ಲಿಂಗಸ್ವರೂಪದಲ್ಲಿರುವುದರಿಂದ ಅವುಗಳೂ ಸಹ ಭಗವಂತನ ಗುಣಪ್ರತಿಪಾದಕಗಳಾಗಿವೆಯೆಂಬುದನ್ನೂ ಸಹ ಎರಡನೇ ಪಾದದಲ್ಲಿ ವಿಚಾರ ಮಾಡಿದ್ದಾಯಿತು.

ಶಬ್ದಗಳು ಭಗವಂತನನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಲೋಕರೂಢಿಯಂತೆ ಲೌಕಿಕಪದಾರ್ಥಗಳನ್ನೇ ಪ್ರತಿಪಾದಿಸುತ್ತದೆಂಬುದು ಪೂರ್ವಪಕ್ಷಕಾರನ ಆಗ್ರಹ. ಪ್ರತಿಯೊಂದು ಶಬ್ದಗಳೂ ಭಗವತ್ತತ್ತ್ವಪ್ರತಿಪಾದಕಗಳಾಗಿವೆ. ಭಗವಂತನನ್ನು ಬಿಟ್ಟು ಇತರ ಯಾವುದೇ ಪದಾರ್ಥಗಳನ್ನೂ ಸಹ ಪ್ರತಿಪಾದಿಸಲು ಸಾಧ್ಯವೇ ಇಲ್ಲವೆಂಬುದು ಸಿದ್ಧಾಂತಿಗಳ ಆಗ್ರಹ. ಇವರಿಬ್ಬರನ್ನೂ ಸಮಾಧಾನ ಮಾಡಲು ಒಂದು ಉಪಾಯವನ್ನು ಹುಡುಕಬಹುದು. ಸಕಲ ಶಬ್ದಗಳು ಹಾಗೂ ಲಿಂಗಗಳು ಲೌಕಿಕಪದಾರ್ಥಗಳನ್ನೂ ಪ್ರತಿಪಾದಿಸುತ್ತವೆ. ವಿಷ್ಣುವನ್ನೂ ಸಹ ಪ್ರತಿಪಾದಿಸುತ್ತವೆ. ಹೀಗೆ ಹೇಳಿದಾಗ ಇಬ್ಬರಿಗೂ ಗಲಾಟೆಯಾಗಲು ಸಾಧ್ಯವೇ ಇಲ್ಲ. ಆದ್ದರಿಂದ ಉಭಯತ್ರಪ್ರಸಿದ್ಧವೆಂದು ಶಬ್ದಗಳನ್ನು ಒಪ್ಪೋಣ ಏನು ತೊಂದರೆ? ಎಂಬ ಪ್ರಶ್ನೆಯನ್ನು ಅನೇಕ ಮಂದಿ ಮಾಡುತ್ತಾರೆ. ಅದಕ್ಕೆ ಉತ್ತರ ನೀಡುವುದಕ್ಕಾಗಿಯೇ ಮೂರನೇ ಪಾದವು ಹೊರಡುತ್ತಿದೆ. ಈ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ಶಬ್ದಗಳೆಲ್ಲವೂ ಭಗವಂತನನ್ನೇ ಪ್ರತಿಪಾದಿಸುತ್ತವೆಂದು ಸಾಧಿಸುತ್ತಿದ್ದಾರೆ.

ತಿಳಿಯಬೇಕಾದ ವಿಚಾರವಿಷ್ಟು. ಹಿಂದಿನ ಎರಡು ಪಾದಗಳಲ್ಲಿ ಸಕಲಶಬ್ದಗಳಿಗೆ ಭಗವಂತನಲ್ಲಿ ತಾತ್ಪರ್ಯವಿದೆಯೆಂದು ಹೇಳಿದ್ದಾರೆ ಹೊರತು, ಮುಖ್ಯವಾಚ್ಯತ್ವವನ್ನು ಸಮರ್ಥಿಸಿರುವುದಿಲ್ಲ. ತಾತ್ಪರ್ಯವಿರುವ ಪ್ರಯುಕ್ತ ವಿಷ್ಣುಪರವಾಗುತ್ತವೆಂಬುದಂತೂ ಅನೇಕ ನ್ಯಾಯಗಳಿಂದ ತಿಳಿಯುತ್ತವೆ. ಆದರೆ ಲೋಕರೂಢಿಯೂ ಸಹ ಬೇರೆ ಪದಾರ್ಥ-ಗಳಲ್ಲಿರುವುದರಿಂದ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುವಂತೆ ಇತರ ಪದಾರ್ಥಗಳನ್ನೂ ಸಹ ಪ್ರತಿಪಾದಿಸುತ್ತವೆ. ಹಾಗಾಗಿ ಹಿಂದಿನ ಎರಡು ಪಾದಗಳಲ್ಲಿ ಯಾವ ಶಬ್ದಗಳನ್ನೆಲ್ಲ ಸಮನ್ವಯ ಮಾಡಿದರೋ ಅವೆಲ್ಲವೂ ವಿಷ್ಣುವಿನಲ್ಲೂ ಬರುತ್ತವೆ. ಲೋಕದಲ್ಲಿಯೂ ಬರುತ್ತವೆ. ವಿಷ್ಣುವಿನಲ್ಲಿ ಮಾತ್ರ ಬರುತ್ತವೆಂಬ ನಿರ್ಧಾರವನ್ನು ಮಾಡಲು ಸಾಧ್ಯವಿಲ್ಲ. ಹಾಗಾಗಿ ಹಿಂದಿನೆರಡು ಪಾದಗಳಲ್ಲಿ ಸಮನ್ವಯ ಮಾಡಿದ ಶಬ್ದಗಳನ್ನು ಪುನಃ ಸಮನ್ವಯ ಮಾಡುವ ಅನಿವಾರ್ಯತೆ ಬಹಳವಾಗಿ ಕಾಣಿಸುತ್ತದೆ. ಅದಕ್ಕೋಸ್ಕರವೇ ಈ ಪಾದ ಹೊರಟಿದೆ. ಈ ಪಾದವು ಹೊರಟಿದ್ದರೆ ಸಕಲ ಶಬ್ದಗಳೂ ಉಭಯತ್ರಪ್ರಸಿದ್ಧವೆಂದಾಗಿ ಭಗವಂತನಲ್ಲಿ ಸಕಲಶಬ್ದದ ಸಮನ್ವಯವೂ ಸಿದ್ಧವಾಗದೆ. ಸಕಲ ಗುಣಪರಿಪೂರ್ಣತ್ವದ ಸಿದ್ಧಿಯೂ ಸಹ ಆಗದಿರುವ ಪ್ರಸಂಗ ಬರುತ್ತಿತ್ತು.

ಈ ಪಾದದಲ್ಲಿ ಈಗಾಗಲೇ ಹೇಳಿದಂತೆ ಕೇವಲ ನಾಮಾತ್ಮಕ ಶಬ್ದಗಳ ಸಮನ್ವಯವಷ್ಟೇ ಅಲ್ಲ, ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನೂ ಸಹ ಮಾಡುತ್ತಿದ್ದಾರೆ. ಒಟ್ಟು ಹದಿನಾಕು

ಅಧಿಕರಣಗಳು ಈ ಪಾದದಲ್ಲಡಗಿವೆ. ಅವುಗಳಲ್ಲಿ ಮೊದಲನೆಯದು ದ್ಯುಭ್ವಾದ್ಯಧಿಕರಣ. ಸರ್ವಾಧಾರತ್ವವೆಂಬ ಲಿಂಗವನ್ನು ಈ ಮೊದಲನೆಯ ಅಧಿಕರಣದಲ್ಲಿ ವಿಷ್ಣುಮಾತ್ರಪರವೆಂದು ಸಮನ್ವಯ ಮಾಡುತ್ತಾರೆ. ಮುಂದಿನ ಭೂಮಾಧಿಕರಣದಲ್ಲಿ 'ಭೂಮಾ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು, ಅದರ ಮುಂದಿನ ಅಕ್ಷರಾಧಿಕರಣದಲ್ಲಿ 'ಅಕ್ಷರ' ಎಂಬ ನಾಮಾತ್ಮಕ ಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥನೆ ಮಾಡುತ್ತಾರೆ.

ನಾಲ್ಕನೆಯ ಸದಧಿಕರಣದಲ್ಲಿ ಅನೇಕ ಪ್ರಕರಣಗಳ ಸಮೂಹಾತ್ಮಕವಾದ ಸ್ಥಾನವೆಂಬುದನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಾರೆ. ಐದನೆಯ ದಹರಾಧಿಕರಣದಲ್ಲಿ 'ಹೃತ್ಪದ್ಮಸ್ಥತ್ವ' ಲಿಂಗವನ್ನು, ಅನುಕೃತ್ಯಧಿಕರಣದಲ್ಲಿ 'ಅನುಕೂಲ್ಯೇನಗೃಹ್ಯಮಾಣತ್ವ' ಎಂಬ ಲಿಂಗವನ್ನು ಸಮನ್ವಯ ಮಾಡಿದ್ದಾರೆ. ಮುಂದಿನ ವಾಮನಾಧಿಕರಣದಲ್ಲಿ ಈಶಾನ ಶಬ್ದವನ್ನು ಕಂಪನಾಧಿಕರಣದಲ್ಲಿ ವಜ್ರ ಶಬ್ದವನ್ನು, ಜ್ಯೋತಿರಧಿಕರಣದಲ್ಲಿ ಜ್ಯೋತಿಶಬ್ದವನ್ನು, ಆಕಾಶಾಧಿಕರಣದಲ್ಲಿ ಆಕಾಶ ಶಬ್ದವನ್ನು, ಸುಷುಪ್ತ್ಯಧಿಕರಣದಲ್ಲಿ ಸ್ವಪ್ನಾದಿದ್ರಷ್ಟೃತ್ವವೆಂಬ ಲಿಂಗವನ್ನು, ಬ್ರಾಹ್ಮಣಾಧಿಕರಣದಲ್ಲಿ ಬ್ರಾಹ್ಮಣ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರೆ. ಮಧ್ಯದಲ್ಲಿ ದೇವತಾಧಿಕರಣ ಹಾಗೂ ಅಪಶೂದ್ರಾಧಿಕರಣಗಳು ಬರುತ್ತವೆ. ಆದರೆ ಈ ಎರಡು ಅಧಿಕರಣಗಳಲ್ಲಿ ದೇವತೆಗಳಿಗೆ ಮಾತ್ರ ವೇದಾಧಿಕಾರವಿದೆ. ಶೂದ್ರಾದಿಗಳಿಗೆ ವೇದಾಧಿಕಾರವಿಲ್ಲವೆಂಬ ವಿಚಾರವನ್ನು ಮಾಡಿದ್ದಾರೆ. ಆದ್ದರಿಂದ ಯಾವುದೇ ಲಿಂಗವನ್ನಾಗಲೀ, ಹೆಸರನ್ನಾಗಲೀ, ಈ ಎರಡು ಅಧಿಕರಣಗಳಲ್ಲಿ ಸಮನ್ವಯ ಮಾಡದೆ ಪ್ರಾಸಂಗಿಕವಾದ ವಿಚಾರಗಳನ್ನಷ್ಟೇ ತಿಳಿಸಿದ್ದಾರೆ.

ಮೊದಲನೇ ಈ ದ್ಯುಭ್ವಾದ್ಯಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಉಭಯತ್ರಪ್ರಸಿದ್ಧವಾಗಿದೆ ಹೊರತು, ಅನ್ಯತ್ರ-ಪ್ರಸಿದ್ಧವಲ್ಲ. ವಸ್ತುತಃ ಜಾಯಮಾನತ್ವವೆಂಬ ಅನ್ಯತ್ರಪ್ರಸಿದ್ಧವಾದ ಲಿಂಗದ ಜೊತೆಗೆ ಇದನ್ನು ಹೇಳಿರುವುದರಿಂದ ಇದೂ ಸಹ ಅನ್ಯತ್ರಪ್ರಸಿದ್ಧವೆಂಬ ಭ್ರಾಂತಿ ಬರುತ್ತದೆ. ಆದರೆ ರುದ್ರನಲ್ಲಿ ಹಾಗೂ ವಿಷ್ಣುವಿನಲ್ಲಿ ಸಾಧಾರಣವಾದ ಶ್ರುತಿಯನ್ನು ನೋಡಿದಾಗ ದ್ಯುಭ್ವಾದ್ಯಾಯತನತ್ವವು ಸ್ವಾಭಾವಿಕವಾಗಿ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯುತ್ತದೆ. ಅನ್ಯತ್ರಪ್ರಸಿದ್ಧವೆಂದು ಹೇಳಬೇಕಾದರೆ ಅನ್ಯತ್ರಪ್ರಸಿದ್ಧವಾದ ಜಾಯಮಾನತ್ವವೆಂಬ ಲಿಂಗವನ್ನು ಅಪೇಕ್ಷಿಸಬೇಕು. ಉಭಯತ್ರಪ್ರಸಿದ್ಧವೆಂಬ ಲಿಂಗವನ್ನು ಹೇಳಬೇಕಾದರೆ ಮತ್ತೊಂದನ್ನು ಅಪೇಕ್ಷಿಸಬೇಕಾಗಿಲ್ಲ. ಸ್ವಾಭಾವಿಕವಾಗಿಯೇ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯಬಹುದು. ಸಾಪೇಕ್ಷಕ್ಕಿಂತ ನಿರಪೇಕ್ಷವು ಪ್ರಬಲವಾಗಿರುವುದರಿಂದ ದ್ಯುಭ್ವಾದ್ಯಾಯತನತ್ವವನ್ನು ಉಭಯತ್ರಪ್ರಸಿದ್ಧವಾದ ಲಿಂಗವೆಂದೇ ಪರಿಗಣಿಸಬೇಕು.

ಪಾದಗಳಲ್ಲಿರುವ ಪೌರ್ವಾಪರ್ಯ

ಭಾವದೀಪಃ – ಪೂರ್ವಂ ನಾಮಲಿಙ್ಗಾನಾಂ ಪ್ರಾಧಾನ್ಯಾಪ್ರಾಧಾನ್ಯಾಭ್ಯಾಂ ಪೌರ್ವಾಪರ್ಯಾತ್ ಪಾದಭೇದೇನ ಸಮನ್ವಯೋಕ್ತಾವಪಿ ಇಹ ನಾಮ್ನಾಂ ಪ್ರಾಧಾನ್ಯಾತ್ ಲಿಙ್ಗಾನಾಂ ಸಮನ್ವಿತತ್ವೇನ ಬುದ್ಧಿಸ್ಥತ್ವಾದ್ ಉಭಯಾನುರೋಧೇನೋಭಯೇಷಾಮಪ್ಯೇಕತ್ರೈವ ಸಮನ್ವಯೋಕ್ತಿರಿತಿ ಭಾವಃ । ಪ್ರಾಗೇವ ವಿಷ್ಣೌ ದತ್ತಪದತ್ವಾತ್ ಕಿಮತ್ರ ಕಾರ್ಯಮಿತ್ಯತಃ ಸಮನ್ವಯಪದಾರ್ಥಂ ವ್ಯನಕ್ತಿ – ವಿಷ್ಣ್ವೇಕವಾಚಿತ್ವಮಿತಿ ।।

ಹಿಂದಿನ ಎರಡು ಪಾದಗಳಲ್ಲಿ ನಾಮಾತ್ಮಕಶಬ್ದಗಳು ಪ್ರಧಾನವಾದ್ದರಿಂದ ಅವುಗಳನ್ನು ಮೊದಲು ಸಮನ್ವಯ ಮಾಡಿದ್ದರು. ಲಿಂಗಾತ್ಮಕಶಬ್ದಗಳು ಅಪ್ರಧಾನವಾದ್ದರಿಂದ ಅನಂತರ ಸಮನ್ವಯ ಮಾಡಿದ್ದರು. ಆದ್ದರಿಂದ ಪ್ರಥಮಪಾದಕ್ಕೂ ದ್ವಿತೀಯಪಾದಕ್ಕೂ ಇರುವ ಪೌರ್ವಾಪರ್ಯವು ಸಮಂಜಸವಾಗಿದೆ ಮತ್ತು ಪಾದಭೇದದಿಂದ ಸಮನ್ವಯ ಮಾಡಿದ್ದೂ ಸಹ ಯುಕ್ತವಾಗಿದೆ. ಅದರಂತೆ ಈ ಪಾದದಲ್ಲಿಯೂ ನಾಮಾತ್ಮಕಶಬ್ದಗಳು ಪ್ರಧಾನವಾದ್ದರಿಂದ ಮತ್ತು ಲಿಂಗಾತ್ಮಕಶಬ್ದಗಳನ್ನು ಅವ್ಯವಹಿತವಾದ ಹಿಂದಿನ ಪಾದದಲ್ಲಿ ಸಮನ್ವಯ ಮಾಡಿದ್ದರಿಂದ ಬುದ್ಧಿಸ್ಥಿತವಾದ್ದರಿಂದ ಎರಡನ್ನೂ ಅನುಸರಿಸಿ ನಾಮಾತ್ಮಕ ಹಾಗೂ ಲಿಂಗಾತ್ಮಕಶಬ್ದಗಳನ್ನು ಈ ಒಂದೇ ಪಾದದಲ್ಲಿ ಸಮನ್ವಯ ಮಾಡಲು ಹೊರಟಿದ್ದಾರೆಂದು ತಿಳಿಯಬೇಕು. ಹಿಂದಿನ ಪಾದದಲ್ಲಿಯೇ ಸಕಲವಿಧವಾದ ಶಬ್ದಗಳನ್ನು ಸಮನ್ವಯ ಮಾಡಿದ ಮೇಲೆ ಇಲ್ಲಿ ಸಮನ್ವಯ ಮಾಡಲು ಏನು ಉಳಿದಿದೆ? ಎಂಬ ಪ್ರಶ್ನೆಗೆ ಉತ್ತರಿಸಲು ಸಮನ್ವಯ ಪದದ ಅರ್ಥವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ವಿಷ್ಣ್ವೇಕವಾಚಿತ್ವಂ'' ಇತ್ಯಾದಿಯಾಗಿ.

ನಾಮಲಿಂಗಾತ್ಮಕ ಶಬ್ದಗಳ ಸಮನ್ವಯ

ಭಾವದೀಪಃ – 'ತತ್ರಾನ್ಯತ್ರಪ್ರಸಿದ್ಧಾನಾಂ ಲಿಙ್ಗನಾಮ್ನಾಂ ಪುನರ್ಹರಿಃ । ವಿಶೇಷಾನ್ಮುಖ್ಯತೋ ವೃತ್ತಿಂ ಸ್ವಸ್ಮಿನ್ನೇವಾತ್ರ ವಕ್ತ್ಯಜಃ' ಇತ್ಯನುವ್ಯಾಖ್ಯಾನೋಕ್ತೇಃ ।

''ತತ್ರಾನ್ಯತ್ರ ಪ್ರಸಿದ್ಧಾನಾಂ ಲಿಂಗನಾಮ್ನಾಂ ಪುನರ್ಹರಿಃ । ವಿಶೇಷಾನ್ಮುಖ್ಯತೋ ವೃತ್ತಿಂ ಸ್ವಸ್ಮಿನ್ನೇವಾತ್ರ ವಕ್ಷ್ಯಜಃ'' ಉಭಯತ್ರ ಪ್ರಸಿದ್ಧವಾದ ಲಿಂಗಾತ್ಮಕ ಹಾಗೂ ನಾಮಾತ್ಮಕವಾದ ಶಬ್ದಗಳ ಸಮನ್ವಯವನ್ನು ಪುನಃ ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. ಏಕೆಂದರೆ ವಿಶೇಷವಾಗಿ ಭಗವಂತನೇ ಆಯಾ ಪದಗಳಿಂದ ಪ್ರತಿಪಾದ್ಯನಾಗಿದ್ದಾನೆ ಎಂಬ ಅನುವ್ಯಾಖ್ಯಾನದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಶ್ರುತಿಸಾಧಾರಣ್ಯದಿಂದ ಉಭಯತ್ರಪ್ರಸಿದ್ಧಿ

भावदीपः – अन्यथा तत्त्वित्यवधारणायोग इति भावः । श्रुत्यादिप्रसिद्धेत्युक्तं श्रुतिसाधारण्येनोभयत्र प्रसिद्धत्वं तत्त्वित्यवधारणायोग इति भावः । श्रुत्यादिप्रसिद्धेत्युक्तं श्रुतिसाधारण्येनोभयत्र प्रसिद्धत्वं न्यायविवरणोक्तश्रुत्युक्त्या व्यञ्जयन्नस्य पादान्तर्भावमाह – तत्रेति ।।

ಹೀಗೆ ಒಪ್ಪದಿದ್ದರೆ ''ತತ್ತು'' ಎಂಬ ಅವಧಾರಣವು ಅಯುಕ್ತವಾಗುತ್ತದೆಂದು ಅಭಿಪ್ರಾಯ. ''ಶ್ರುತ್ಯಾದಿಪ್ರಸಿದ್ಧ'' ಇತ್ಯಾದಿಯಾಗಿ ಹೇಳಲ್ಪಟ್ಟಿದ್ದನ್ನು ಶ್ರುತಿಸಾಧಾರಣ್ಯದಿಂದ ಉಭಯತ್ರಪ್ರಸಿದ್ಧಿಯನ್ನು ತಿಳಿಯಬೇಕು. ಈ ವಿಷಯದಲ್ಲಿ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ಶ್ರುತಿಯಿಂದ ಸ್ಪಷ್ಟಪಡಿಸುತ್ತಾ ಪಾದಾಂತರ್ಭಾವವನ್ನು ಈ ಅಧಿಕರಣಕ್ಕೆ ''ತತ್ರ'' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ವಿಶೇಷವಿಚಾರ - ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ? ಇವುಗಳೂ ಸಹ ಅನ್ಯತ್ರಪ್ರಸಿದ್ಧವೇ ಆಗುತ್ತವೆ. ಏಕೆಂದರೆ ಭೂಮಾಧಿಕರಣದಲ್ಲಿ ಮುಖ್ಯಪ್ರಾಣನನ್ನು ಪ್ರತಿಪಾದಿಸುವ 'ಭೂಮಾ' ಎಂಬ ಶಬ್ದವು 'ಪ್ರಾಣೋನೂತ್ಕ್ರಮತಿ' ಎಂಬ ನಿರವಕಾಶವಾದ ಉತ್ಕ್ರಮಣವೆಂಬ ಲಿಂಗದಿಂದ ಮುಖ್ಯಪ್ರಾಣನಲ್ಲಿ ಪ್ರಸಿದ್ಧವಾಗಿದೆ. ಅಕ್ಷರಾಧಿಕರಣದಲ್ಲಿ ಸಮನ್ವಯ ಮಾಡಬೇಕಾದ ಅಕ್ಷರಶಬ್ದವೂ ಸಹ ಮತ್ತೊಂದು ಶ್ರುತಿಯಿಂದ ಸಿದ್ಧವಾದ ಚಂದ್ರಾದ್ಯಾಧಾರತ್ವವೆಂಬ ಲಕ್ಷ್ಮೀದೇವಿಯ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ಸದಧಿಕರಣದಲ್ಲಿ ಸಮನ್ವಯ ಮಾಡಬೇಕಾದ 'ಸತ್' ಶಬ್ದವೂ ಸಹ 'ಬಹುಸ್ಯಾಮ್' ಎಂಬ ಶ್ರುತಿಯಿಂದ ಸಿದ್ಧವಾದ ವಿಕಾರ ಎಂಬ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ದಹರಾಧಿಕರಣದಲ್ಲಿ ಸಮನ್ವಯ ಮಾಡುವ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವೂ ಆಕಾಶಶ್ರುತಿಯಿಂದ ಅನ್ಯತ್ರಪ್ರಸಿದ್ಧವಾಗಿದೆ. ಹೀಗಿರುವಾಗ ಇವುಗಳನ್ನೆಲ್ಲಾ ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ?

ಈ ಆಕ್ಷೇಪಕ್ಕೆ ಈಗಾಗಲೇ ಹೇಳಿದ ನಾಲ್ಕು ಬಗೆಯ ಸಮಾಧಾನವನ್ನು ತಿಳಿದುಕೊಳ್ಳಬೇಕು.

೧. 'ದ್ಯುಭ್ವಾದ್ಯಾಯತನತ್ವ' ಮೊದಲಾದ ಲಿಂಗಗಳಿಗೆ ಸಮಾನವಾದ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧಿಯೂ ಇರುತ್ತದೆ. ಉಭಯತ್ರಪ್ರಸಿದ್ಧಿಯೂ ಸಹ ಇರುತ್ತದೆ. ಇವೆರಡರಲ್ಲಿ ಉಭಯತ್ರಪ್ರಸಿದ್ಧತ್ವವನ್ನು ವಿವಕ್ಷಿಸಬೇಕು.

೨. ಅನ್ಯತ್ರಪ್ರಸಿದ್ಧಿಯು, ಅನ್ಯತ್ರಪ್ರಸಿದ್ಧವಾದ ಮತ್ತೊಂದು ಲಿಂಗವನ್ನು ಅಪೇಕ್ಷಿಸುತ್ತದೆ. ಉಭಯತ್ರಪ್ರಸಿದ್ಧಿಯು ಮತ್ತೊಂದು ಲಿಂಗವನ್ನು ಅಪೇಕ್ಷಿಸದೇ ಸಮಾಖ್ಯಾಶ್ರುತಿಯ ಬಲದಿಂದ ಸ್ವತಃ ಉಭಯತ್ರಪ್ರಸಿದ್ಧವಾಗುತ್ತದೆ. ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದನ್ನೇ ಆಧರಿಸಬೇಕಾದ್ದರಿಂದ ದ್ಯುಭ್ವಾದ್ಯಾಯತನತ್ವಾದಿಗಳೆಲ್ಲವೂ ಉಭಯತ್ರಪ್ರಸಿದ್ಧವೆಂದು ವಿವಕ್ಷಿಸಬೇಕು.

೩. ದ್ಯುಭ್ವಾದ್ಯಾಯತನತ್ವಾದಿಗಳಿಗೆ ಅನ್ಯತ್ರಪ್ರಸಿದ್ಧತ್ವವನ್ನು ಒಪ್ಪುವುದೇ ಬೇಕಾಗಿಲ್ಲ. ಏಕೆಂದರೆ 'ಶ್ರುತ್ಯಾದಿತೋ ಲೋಕತೋ ವಾऽಪೀತರೇಷು ಪ್ರಸಿದ್ಧತಾ' ಎಂಬ ಅನ್ಯತ್ರಪ್ರಸಿದ್ಧಿಯ ಲಕ್ಷಣದಲ್ಲಿ 'ಶ್ರುತ್ಯಾದಿತೌಲ್ಯಾಭಾವೇ ಸತಿ' ಎಂಬುದನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ಸರ್ವಗತತ್ವಾದಿಲಿಂಗಗಳಿಗೆ ಹಾಗೂ ಭೂಮಾದಿ ಶಬ್ದಗಳಿಗೆ ಅನ್ಯತ್ರಪ್ರಸಿದ್ಧಿಯ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧತ್ವವಿದ್ದರೂ ಸಹ ಎಲ್ಲಿ ಶ್ರುತ್ಯಾದಿತೌಲ್ಯವು ಇರುವುದಿಲ್ಲವೋ ಅಲ್ಲಿಯೂ ಸಹ ಅನ್ಯತ್ರಪ್ರಸಿದ್ಧಿಯ ಲಕ್ಷಣಬರುತ್ತದೆ. ಭೂಮಾ, ದ್ಯುಭ್ವಾದ್ಯಾಯತನತ್ವ ಮೊದಲಾದೆಡೆ ಸಮಾಖ್ಯಾಶ್ರುತಿಯ ತೌಲ್ಯವಿರುವುದರಿಂದ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು.

೪. ಅನ್ಯತ್ರಪ್ರಸಿದ್ಧವಾದ ಲಿಂಗದ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗುತ್ತದೆಂಬ ಪರಿಕಲ್ಪನೆಯನ್ನೇ ಒಪ್ಪುವುದಿಲ್ಲ; ಹೊರತಾಗಿ ಸ್ವಾಭಾವಿಕವಾಗಿ ಯಾವುದು ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿರುತ್ತದೋ, ಅದನ್ನು ಮಾತ್ರ ಅನ್ಯತ್ರಪ್ರಸಿದ್ಧವೆಂದು ಹೇಳಬೇಕು. ಸರ್ವಗತತ್ವಾದಿಗಳೆಲ್ಲವೂ ಅನ್ಯತ್ರಪ್ರಸಿದ್ಧವಾದ ಶ್ರುತ್ಯಾದಿಗಳ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗಿರುವುದಲ್ಲ. ಹೊರತಾಗಿ ಬೇರೆಕಡೆ ಪ್ರಸಿದ್ಧವಾಗಿವೆಯೆಂಬುದನ್ನು ತಿಳಿಸಲು ಮಾತ್ರ ಅಯಾ ಅಧಿಕರಣಗಳಲ್ಲಿ ಶ್ರುತ್ಯಾದಿ ಪ್ರಮಾಣಗಳನ್ನು ಹೇಳಿರುತ್ತಾರೆ.

ಪ್ರಕೃತ ದ್ಯುಭ್ವಾದ್ಯಾಯತನತ್ವಾದಿಗಳಲ್ಲಿ ಲೋಕರೂಢಿಯಿಂದ ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧತ್ವವು ಇಲ್ಲದ ಕಾರಣ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು. ಹಾಗಾಗಿ ಸರ್ವಗತತ್ವಾದಿಧರ್ಮಗಳು ಅನ್ಯತ್ರಪ್ರಸಿದ್ಧವಾದ ಶಬ್ದಗಳೇ ಆಗುತ್ತವೆ. ದ್ಯುಭ್ವಾದ್ಯಾಯತನತ್ವಗಳು ಉಭಯತ್ರಪ್ರಸಿದ್ಧವೇ ಆಗುತ್ತವೆ ಪರಸ್ಪರ ಸಾಂಕರ್ಯ ದೋಷಕ್ಕೆ ಅವಕಾಶವಿರುವುದಿಲ್ಲ.

ಪಾಠಾಂತರದ ಬಗ್ಗೆ

भावदीपः – एवं पादार्थे सतीत्यर्थः । अत्रेति पाठे अधिकरण इत्यर्थः।

ಹೀಗೆ ಪಾದಾರ್ಥವು ಸಿದ್ಧವಾಗುತ್ತಿರಲು ಎಂದರ್ಥ. ಕೆಲವು ಪುಸ್ತಕಗಳಲ್ಲಿ "ಅತ್ರ" ಎಂಬ ಪಾಠವಿದೆ. ಆಗ 'ಈ ಅಧಿಕರಣದಲ್ಲಿ' ಎಂದು ಹೇಳಬೇಕು.

'रुद्रो वाव लोकाधारः' ಎಂಬುದೇಕೆ ವಿಷಯವಾಕ್ಯ ?

भावदीपः – साधारण्योक्तिपरन्यायविवरणे 'रुद्रो वै लोकायतनम्' इति वाक्योक्तावपि पूर्वपक्षन्यायविवरणे 'रुद्रो वा लोकाधारः' इति वाक्यदर्शनात्तस्यैवात्रोक्तिः स्यूतमस्मिन् जगदिति सूत्रम् ।

ಎರಡೂ ಕಡೆ ಸಾಧಾರಣವಾದ ಶ್ರುತಿಯನ್ನು ಹೇಳುವ ನ್ಯಾಯವಿವರಣದಲ್ಲಿ "ರುದ್ರೋ ವೈ ಲೋಕಾಯತನಮ್" ಎಂಬ ವಾಕ್ಯವನ್ನು ಉಲ್ಲೇಖಿಸಿರಬಹುದು. ಆದರೆ ಪೂರ್ವಪಕ್ಷವನ್ನು ಹೇಳುವ ನ್ಯಾಯವಿವರಣದಲ್ಲಿ "ರುದ್ರೋ ವಾವ ಲೋಕಾಧಾರಃ" ಎಂಬ ವಾಕ್ಯವನ್ನು ತೋರಿಸಿದ್ದಾರೆ. ಆದ್ದರಿಂದ ಅದೇ ವಾಕ್ಯವನ್ನು ಪ್ರಕೃತ ಟೀಕಾರಾಯರು ಉಲ್ಲೇಖಿಸಿದ್ದಾರೆ. "ಸ್ಯೂತಮಸ್ಮಿನ್ ಜಗತ್" ಅಂದರೆ ಇವನಲ್ಲಿ ಜಗತ್ತು ಆಶ್ರಯ ಪಡೆದಿದೆ ಎಂಬುದಾಗಿ ಸೂತ್ರಶಬ್ದಕ್ಕೆ "ಆಧಾರ" ಎಂದರ್ಥ.

ಆಕಾಶಶಬ್ದಕ್ಕೆ ಪ್ರಕೃತಿ ಎಂದೇಕೆ ಅರ್ಥ ?

भावदीपः – सन्दृब्धानि सङ्गतान्येव । तदाधारतया स्थितान्येवेति । न्यायविवरणस्थादिपदोपात्तां श्रुतिमाह – आकाश इति ।। प्रकृतावित्यर्थः । आकाशशब्दः प्रकृतिपर इत्यक्षरनये स्पष्टमिति भावः ।

ಸಂದೃಬ್ಧಾನಿ = ಸಂಗತವೇ ಆದ ಅವನಲ್ಲೇ ಆಶ್ರಯವನ್ನು ಹೊಂದಿ ನೆಲೆಸಿರುವ ಎಂದರ್ಥ. ನ್ಯಾಯವಿವರಣದಲ್ಲಿರುವ 'ಆದಿ' ಪದದಿಂದ ಸ್ವೀಕರಿಸಲ್ಪಟ್ಟ ಶ್ರುತಿಯನ್ನು "ಆಕಾಶಃ" ಎಂಬುದಾಗಿ ಹೇಳಿದ್ದಾರೆ. ಆಕಾಶ ಶಬ್ದಕ್ಕೆ 'ಪ್ರಕೃತಿ' ಎಂದರ್ಥ. ಏಕೆಂದರೆ ಅಕ್ಷರಾಧಿಕರಣದಲ್ಲಿ ಆಕಾಶ ಶಬ್ದವನ್ನು ಪ್ರಕೃತಿಯಲ್ಲಿ ಪ್ರಯೋಗಿಸಿದ್ದು ಸ್ಪಷ್ಟವಾಗಿದೆ ಎಂದು ತಿಳಿಯಬೇಕು.

'ಸರ್ವೇ ವಾ' ಎಂಬ ಶ್ರುತ್ಯರ್ಥ

ಭಾವದೀಪಃ – विष्णुपरत्वेन साक्षादुपात्तश्रुतिमाह – सर्वे वा इति ।। प्राणा इन्द्रियाणि । प्राणिनो देहिनः । प्राणिग्रहणेन गृहीतानामपि देवानां प्राधान्यज्ञापनाय पुनर्ग्रहणम् । दिवि भवानि दिव्यानि कल्पतरुप्रभृतीनि वस्तूनि । लोका भूरादयः । तदभिमानिनो लोकिनः । पूर्ववत् पुनर्ग्रहणम् । भूरादिभ्योऽन्ये वैकुण्ठादयोऽलोकाः। तद्गता मुक्ता अलोकिनः ।

ನೇರವಾಗಿ ವಿಷ್ಣುವನ್ನು ಪ್ರತಿಪಾದಿಸುವ ಶ್ರುತಿಯನ್ನು ''ಸರ್ವೇ ವಾ'' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. ಈ ಶ್ರುತಿಯಲ್ಲಿರುವ ''ಪ್ರಾಣಾಃ'' ಎಂದರೆ ಇಂದ್ರಿಯಗಳು ಎಂದರ್ಥ. 'ಪ್ರಾಣಿನಃ' ಎಂಬ ಶಬ್ದಕ್ಕೆ ದೇಹವುಳ್ಳವರು ಎಂದರ್ಥ. ವಸ್ತುತಃ ಪ್ರಾಣಿ ಶಬ್ದದಿಂದಲೇ ದೇವತೆಗಳು ಸಂಗ್ರಹವಾಗುತ್ತಾರೆ. ಆದರೂ ಸಹ ದೇವತೆಗಳಿಗೆ ಪ್ರಾಧಾನ್ಯವನ್ನು ಸೂಚಿಸುವುದಕ್ಕಾಗಿ ಪ್ರತ್ಯೇಕವಾಗಿ ದೇವತಾಪದವನ್ನು ಹೇಳಲಾಗಿದೆ. 'ದಿವಿ ಭವಾನಿ ದಿವ್ಯಾನಿ ಎಂದರೆ ಕಲ್ಪತರು ಮೊದಲಾದ ವಸ್ತುಗಳು. ಲೋಕ ಎಂದರೆ ಭೂಲೋಕವೇ ಮೊದಲಾದವುಗಳು. ಅವುಗಳಿಗೆ ಅಭಿಮಾನಿಗಳಾದವರು ಲೋಕಿಗಳು. ಹಿಂದಿನಂತೆ ಇಲ್ಲಿಯೂ ಸಹ ''ಪುನಃ'' ಶಬ್ದವನ್ನು ಹೇಳಿದ್ದಾರೆ. ಅಲೋಕ ಶಬ್ದಕ್ಕೆ ವೈಕುಂಠವೆಂದರ್ಥ. ಅಲ್ಲಿರುವ ಮುಕ್ತರು ಅಲೋಕಿಗಳು.

ಉಭಯತ್ರವೆಂದೇ ಏಕೆ ಹೇಳಿದ್ದಾರೆ ?

ಭಾವದೀಪಃ – ओताश्च प्रोताश्चेति ।। अत्यन्तमाश्रिता इत्यर्थः । इत्यन्यत्र टीकाकृद्व्याख्यातेयं श्रुतिः ।। उभयत्रेति ।। हरौ तदितरत्र चेत्यर्थः । विष्ण्वितरकोटेरनेकत्वेऽपि विष्ण्वितरत्वे नैकीकरणादुभयत्रेत्युक्तिः ।

''ಓತಾಶ್ಚ ಪ್ರೋತಾಶ್ಚ'' ಎಂಬ ಶಬ್ದಕ್ಕೆ ಬೇರೆ ಆಶ್ರಯವಿಲ್ಲದೆ ಅನನ್ಯವಾಗಿ ಆಶ್ರಯಿಸಿದವರು ಎಂದರ್ಥ. ಹೀಗೆ ಟೀಕಾರಾಯರೇ ಈ ಶ್ರುತಿಗೆ ಬೇರೆ ಕಡೆ ಅರ್ಥವನ್ನು ಹೇಳಿದ್ದಾರೆ. ''ಉಭಯತ್ರ'' ಎಂಬ ಶಬ್ದಕ್ಕೆ ಭಗವಂತನಲ್ಲಿ ಮತ್ತು ಬೇರೆ ಪದಾರ್ಥಗಳಲ್ಲಿ ಎಂದರ್ಥ. ವಿಷ್ಣುವಿಗಿಂತ ಭಿನ್ನವಾದ ಕೋಟಿಗಳು ಅನೇಕವಿದ್ದರೂ ಸಹ ಅವೆಲ್ಲವನ್ನು ಒಂದೇ ಪಕ್ಷದಲ್ಲಿ ಸೇರಿಸಲಾಗಿದೆ. ಆದ್ದರಿಂದ ಉಭಯತ್ರವೆಂಬ ಮಾತು ಸಮಂಜಸವಾಗಿದೆ. ಇಲ್ಲದಿದ್ದರೆ ''ಅನೇಕತ್ರ'' ಎಂದು ಹೇಳಬೇಕಾಗಿತ್ತು.

ಉಭಯತ್ರಪ್ರಸಿದ್ಧಿಯನ್ನು ಹೀಗೆ ತಿಳಿಯಬೇಕು

ಭಾವದೀಪಃ – जीवस्यापीतरकोटित्वेनात्राभिमतत्वेऽपि जीवपरसमाख्या भावेन तत्साधारण्याभावेऽपि पूर्वपक्षकोटिषु रुद्रवायुप्रकृतिषु क्वचित् प्रसिद्धिमात्रेणोभयत्र प्रसिद्धिसम्भवादिति भावः ।

ವಸ್ತುತಃ ಜೀವನೂ ಸಹ ಇಲ್ಲಿ ವಿಷ್ಣುವಿಗಿಂತ ಇತರಕೋಟಿಯಲ್ಲಿ ಪ್ರವಿಷ್ಟನಾಗಿದ್ದರೂ ಜೀವವಿಷಯಕವಾಗಿ ಸಮಾಖ್ಯಾಪ್ರಮಾಣವು ಇರುವುದಿಲ್ಲ. ಆದ್ದರಿಂದ ತತ್‌ಸಾಧಾರಣವಾದ ಶ್ರುತಿಯನ್ನು ಹೇಳಲಾಗದು. ಆದರೆ ಪೂರ್ವಪಕ್ಷ ಕೋಟಿಯಲ್ಲಿ ರುದ್ರ, ವಾಯು, ಪ್ರಕೃತಿಗಳು ಇರುವುದರಿಂದ ಅವುಗಳ ವಿಷಯದಲ್ಲಿ ಶ್ರುತಿಯು ಸಾಧಾರಣವಾಗಿರುವುದರಿಂದ ಕೆಲವಡೆ ಪ್ರಸಿದ್ಧವಾದ ಮಾತ್ರದಿಂದಲೇ ಉಭಯತ್ರ ಪ್ರಸಿದ್ಧವೆಂದು ಹೇಳಬಹುದು.

ಉಭಯತ್ರಪ್ರಸಿದ್ಧಿಯ ಬಗ್ಗೆ ತಾತ್ಪರ್ಯಚಂದ್ರಿಕೆಯಲ್ಲಿ

ಭಾವದೀಪಃ – यद्वा इत्यादिनेत्यादिपदेन जायमानत्वलिङ्गग्रहः । अधिकं चन्द्रिकायां बोध्यम् । भाष्ये प्रकृतिकोटेरनुक्तावपि तत्त्वनिर्णये न प्रकृतिजीवाविति‌युक्त्या भाष्येऽपि सा उपलक्ष्येति भावः ।

ಅಥವಾ "ಇತ್ಯಾದಿನಾ" ಎಂಬಲ್ಲಿರುವ 'ಆದಿ' ಪದದಿಂದ "ಜಾಯಮಾನತ್ವ" ಎಂಬ ಲಿಂಗವನ್ನು ಸ್ವೀಕರಿಸಬಹುದು. ಆವಾಗ ಜೀವನಲ್ಲಿಯೂ ಶ್ರುತಿಸಾಧಾರಣ್ಯವು ಬರುವುದರಿಂದ ಉಭಯತ್ರ-ಪ್ರಸಿದ್ಧಿಯನ್ನು ಕೂಡಿಸಬಹುದು. ಹೆಚ್ಚಿನ ವಿಚಾರವನ್ನು ಚಂದ್ರಿಕೆಯಿಂದಲೇ ತಿಳಿದುಕೊಳ್ಳಬೇಕು. ಭಾಷ್ಯದಲ್ಲಿ ಪ್ರಕೃತಿಯೆಂಬ ಪೂರ್ವಪಕ್ಷಕೋಟಿಯನ್ನು ಹೇಳಿರುವುದಿಲ್ಲ. ಆದರೆ ತತ್ವನಿರ್ಣಯದಲ್ಲಿ "ನ ಪ್ರಕೃತಿಜೀವೌ" ಎಂದು ಹೇಳಿದ್ದರಿಂದ ಪ್ರಕೃತ ಭಾಷ್ಯದಲ್ಲಿಯೂ ಅದು ವಿವಕ್ಷಿತವಾಗಿದೆ ಎಂದು ಉಪಲಕ್ಷಣಯಾ ತಿಳಿದುಕೊಳ್ಳಬೇಕು.

ಮೂರು ಅಂತರ್ಭಾವಸಂಗತಿಗಳು ಹೀಗಿವೆ

ಭಾವದೀಪಃ – तथाच वक्ष्यत्यभाषितमित्यादिना स्वयमेव ।। शास्त्रादीति ।। भगवतीत्युक्त्या शास्त्रे समन्वयेत्युक्त्याऽध्याये उभयत्रप्रसिद्धिरित्युक्त्या पादे अन्तर्भावसङ्गतिरुपपादितेति व्यक्तम् । एवमग्रेऽपि ।

ಮುಂದೆಯೂ ಸಹ ''ವಕ್ಷ್ಯತ್ಯಭಾಷಿತಂ'' ಇತ್ಯಾದಿಯಾಗಿ ಇದನ್ನು ಸ್ವತಃ ಭಾಷ್ಯಕಾರರೇ ಹೇಳಿದ್ದಾರೆ. ''ಶಾಸ್ತ್ರಾದಿ'' ಎಂಬ ಟೀಕೆಗೆ ಹೀಗರ್ಥ - 'ಭಗವತಿ' ಎಂದು ಹೇಳಿದ್ದರಿಂದಲೇ ಶಾಸ್ತ್ರಸಂಗತಿಯನ್ನು ಹೇಳಿದಂತಾಯಿತು. ''ಸಮನ್ವಯಾತ್'' ಎಂದು ಹೇಳಿದ್ದರಿಂದ ಅಧ್ಯಾಯಸಂಗತಿಯನ್ನು ಹೇಳಿದಂತಾಯಿತು. ''ಉಭಯತ್ರಪ್ರಸಿದ್ಧಿಃ'' ಎಂದು ಹೇಳಿದ್ದರಿಂದ ಪಾದಸಂಗತಿಯನ್ನು ಹೇಳಿದಂತಾಯಿತು. ಹೀಗೆ ಮೂರು ಬಗೆಯ ಅಂತರ್ಭಾವಸಂಗತಿಯು ಸ್ಪಷ್ಟವಾಗಿ ತಿಳಿಯುತ್ತದೆ. ಮುಂದೆಯೂ ಹೀಗೆಯೇ ಅಂತರ್ಭಾವ-ಸಂಗತಿಗಳನ್ನು ತಿಳಿಯಬೇಕು.

ಸಂಗತಿಪರವಾದ ಭಾಷ್ಯ

भावदीपः – इत्यन्तभाष्यं सङ्गतिपरत्वेन तावद् व्याचष्टे – अदृश्यत्वादीति।। उक्तमित्यन्तभाष्यस्यायमर्थः । आत्मानमित्यत्रेत्यन्तवाक्यार्थः – तत्परविद्याविषयत्वमित्यादि ।।

''ಇತಿ'' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ ''ಅದೃಶ್ಯತ್ವಾದಿ'' ಇತ್ಯಾದಿಯಾಗಿ. ''ಉಕ್ತಂ'' ಎಂಬಲ್ಲಿಯ ತನಕದ ಭಾಷ್ಯದ ಅರ್ಥ ಹೀಗಿದೆ - ''ಆತ್ಮಾನಂ'' ಎಂಬಲ್ಲಿ ''ಇತಿ'' ಎಂಬಲ್ಲಿಯ ತನಕದ ವಾಕ್ಯದ ಅರ್ಥವನ್ನು ''ತತ್ಪರವಿದ್ಯಾವಿಷಯತ್ವಂ'' ಇತ್ಯಾದಿಯಾಗಿ ಹೇಳಿದ್ದಾರೆ.

ವಿಶೇಷವಿಚಾರ - ದ್ಯುಭ್ವಾದ್ಯಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಸಂಗತಿಯನ್ನು ತೋರಿಸಬೇಕಾಗಿಲ್ಲ. ಏಕೆಂದರೆ ಎರಡನೇ ಪಾದದ ಪ್ರಾರಂಭದಲ್ಲಿ ಹೇಳಿದ ಪ್ರಕಾರ ಹಿಂದಿನ ಪಾದದ ಕೊನೆಯ ಅಧಿಕರಣದಿಂದ ಮುಂದಿನ ಪಾದದ ಮೊದಲನೆಯ ಅಧಿಕರಣಕ್ಕೆ ಅವಾಂತರ ಸಂಗತಿಯ ಅಪೇಕ್ಷೆಯು ಇರುವುದಿಲ್ಲ. ಅಥವಾ ಸಂಗತಿ ಸಹಜವಾಗಿ ಇದ್ದರೆ ಅದನ್ನು ಬಿಡಬೇಕಾಗಿಲ್ಲ. ಆದ್ದರಿಂದ ಹಿಂದಿನ ವೈಶ್ವಾನರಾಧಿಕರಣದಲ್ಲಿ ಆತ್ಮಶಬ್ದವನ್ನು ಪ್ರಧಾನ ಹೇತುವನ್ನಾಗಿ ಹೇಳಿದ್ದಾರೆ. ಆ ಆತ್ಮಶಬ್ದವು ವಿಷ್ಣುವಿನಲ್ಲಿ ಕೂಡುವುದಿಲ್ಲವೆಂದು ಆಕ್ಷೇಪಿಸುತ್ತಿರುವುದರಿಂದ 'ಆತಿದೇಶಿಕೀ' ಎಂಬ ಅವಾಂತರ ಸಂಗತಿಯನ್ನು ತಿಳಿಯಬಹುದು.

ಈ ಅಧಿಕರಣದ ಸಂಶಯಕೋಟಿಗಳು ಹೀಗಿವೆ - 'ಯಸ್ಮಿನ್ದ್ಯೌಃ' ಇತ್ಯಾದಿ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ರುದ್ರಾದಿಗಳಲ್ಲಿ ಬರುತ್ತದೋ? ಅಥವಾ ವಿಷ್ಣುವಿನಲ್ಲೋ ? ಈ ಸಂಶಯದ ಪರಿಹಾರಕ್ಕಾಗಿ ಆತ್ಮಶಬ್ದಾದಿಗಳು

ಗೌಣವೋ? ಅಥವಾ ಮುಖ್ಯವೋ? ಇದರ ಪರಿಹಾರಕ್ಕಾಗಿ ಆತ್ಮಶಬ್ದಾದಿಗಳು ಮುಖ್ಯವಾದರೆ ಬಾಧಕವಿದೆಯೋ? ಇಲ್ಲವೋ? ಇದರ ಪರಿಹಾರಕ್ಕಾಗಿ ಜಾಯಮಾನತ್ವಲಿಂಗವು ವಿಷ್ಣುವಿನಲ್ಲಿ ಯುಕ್ತವಾಗುತ್ತದೋ? ಇಲ್ಲವೋ? ಇದರ ಪರಿಹಾರಕ್ಕಾಗಿ ಶರೀರ ಸ್ವೀಕಾರವೇ ಜನನವೋ? ಅಥವಾ ಪ್ರಾದುರ್ಭಾವವೂ ಸಹ ಜನನವೆನಿಸುತ್ತದೋ? ಎಂಬ ಸಂಶಯವು ಪರಿಹಾರವಾಗಬೇಕು.

ಸಿದ್ಧಾಂತದ ಉಪಯೋಗಕ್ಕಾಗಿ ವಾಕ್ಯಶೇಷ

भावदीपः – अत्र भाष्यानुक्तवाक्यशेषोक्तिः सिद्धान्तोपयोगाय वा मुक्तिहेतुज्ञानस्यैव परविद्यात्वात् जानथ इत्युक्तज्ञानस्यामृतपदलभ्य मुक्तिहेतुत्वसूचनाय वेति भावः ।

ಭಾಷ್ಯದಲ್ಲಿ ಉಲ್ಲೇಖಿಸದ ವಾಕ್ಯಶೇಷವನ್ನು ಹೇಳಿದ್ದಕ್ಕೆ ಏನು ಕಾರಣವೆಂದರೆ ಮುಂದೆ ಸಿದ್ಧಾಂತಕ್ಕೆ ಉಪಯೋಗ ವಾಗಬೇಕೆಂದು, ಅಥವಾ ಮೋಕ್ಷಕ್ಕೆ ಕಾರಣವಾದ ಜ್ಞಾನವೇ ಪರವಿದ್ಯೆಯಾದ್ದರಿಂದ ಎಂದು. ''ಜಾನಥ'' ಎಂಬುದರಿಂದ ಹೇಳಲ್ಪಟ್ಟ ಭಗವಂತನ ಜ್ಞಾನವು ಅಮೃತಪದದಿಂದ ತಿಳಿಯುವ ಮೋಕ್ಷಕ್ಕೆ ಕಾರಣವಾಗಿದೆ ಎಂದು ಸೂಚಿಸುವುದಕ್ಕಾಗಿಯೂ ವಾಕ್ಯಶೇಷವು ಸಾರ್ಥಕವಾಗಿದೆ.

ತತ್ವಪ್ರದೀಪದಲ್ಲಿ ವಾಕ್ಯಶೇಷದ ಬಗ್ಗೆ ವ್ಯಾಖ್ಯಾನ

भावदीपः – तत्वप्रदीपे तु अनन्ययोगेन प्रधानज्ञेयत्वं ह्यत्रोच्यते । तदेव च परविद्याविषयत्वमिति यथाश्रुतभाष्येणैव परविद्याविषयत्वलाभो व्याख्यातः ।

ತತ್ವಪ್ರದೀಪದಲ್ಲಿಯಾದರೂ, ಅನನ್ಯಯೋಗದಿಂದ ಪ್ರಧಾನವಾಗಿ ತಿಳಿಯುವುದಕ್ಕಾಗಿ ವಾಕ್ಯಶೇಷವನ್ನು ತಿಳಿಯಬೇಕು. ಅದೇ ಪರವಿದ್ಯೆಗೆ ವಿಷಯವಾಗುತ್ತದೆ ಹೀಗೆ ಯಥಾಶ್ರುತವಾಗಿ ಭಾಷ್ಯದಿಂದ ಪರವಿದ್ಯಾವಿಷಯತ್ವವು ಲಾಭವಾಗುತ್ತದೆ ಎಂದು ವ್ಯಾಖ್ಯಾನಿಸಿದ್ದಾರೆ.

'ಪ್ರಾಣಾನಾಂ ಗ್ರಂಥಿರಸಿ' ಎಂಬ ಭಾಷ್ಯದ ವ್ಯಾಖ್ಯಾನ

भावदीपः – 'प्राणानां ग्रन्थिरसि' इत्यादिकृत्स्नभाष्यशेषस्य तात्पर्यम् – स चेति ।। द्युभ्वाद्यायतनभूत आत्मेत्यर्थः । द्युभ्वाद्यायतनस्योच्यत

इत्युक्तस्य तच्चेति पदे परामर्शे कार्येऽपि 'स च' इति तादृशात्मपरामर्शस्तु परविद्याविषयत्वाक्षेपसौकर्याय ।

"प्राणानाम् ग्रंथिरसि" ಇತ್ಯಾದಿಯಾದ ಸಮಸ್ತಭಾಷ್ಯದ ತಾತ್ಪರ್ಯವನ್ನು "स च" ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ದ್ಯುಭ್ವಾದ್ಯಾಯತನನಾದ ಆತ್ಮನು ಎಂದು "स च" ಎಂಬ ಪದಕ್ಕೆ ಅರ್ಥ. "द्युभ्वाद्यायतनस्योच्यते" 'ದ್ಯುಭ್ವಾದ್ಯಾಯತನನಿಗೆ ಹೇಳಲಾಗುತ್ತದೆ' ಎಂದು ಹೇಳಲ್ಪಟ್ಟಿದ್ದನ್ನು "तस्य" ಎಂಬ ಪದದಿಂದ ಪರಾಮರ್ಶ ಮಾಡಬಹುದು. ಆದರೂ ಸಹ "स च" ಎಂಬುದಾಗಿ ಪರಾಮರ್ಶ ಮಾಡಲು ಕಾರಣವೇನೆಂದರೆ ಪರಾವಿದ್ಯಾವಿಷಯತ್ವದ ಆಕ್ಷೇಪಕ್ಕೆ ಅನುಕೂಲವಾಗುವುದಕ್ಕಾಗಿ.

ರುದ್ರಾದಿಗಳು ದ್ಯುಭ್ವಾದ್ಯಾಯತನರಾಗುತ್ತಾರೆನ್ನಲು ಕಾರಣ

भावदीपः – इतरस्त्यादिति ।। रुद्रादिसमाख्याबलाद् रुद्रादिरित्यर्थः । उक्तमित्यन्तभाष्यस्य भावमाह – तदेति ।। इति सङ्गतिसम्भवादित्यर्थः ।

"इतरः स्यात्" ಎಂದರೆ ರುದ್ರಾದಿ ಶ್ರುತಿಯ ಸಮಾಖ್ಯಾಪ್ರಮಾಣದಿಂದ ರುದ್ರಾದಿಗಳು ದ್ಯುಭ್ವಾದ್ಯಾಯತನರಾಗುತ್ತಾರೆ ಎಂದರ್ಥ. "ಉಕ್ತಂ" ಎಂಬಲ್ಲಿಯ ತನಕದ ಭಾಷ್ಯದ ಅಭಿಪ್ರಾಯವನ್ನು "तदा" ಎಂಬುದರಿಂದ ಹೇಳಿದ್ದಾರೆ. ಹೀಗೆ ಸಂಗತಿಯು ಕೂಡುವುದರಿಂದ ಎಂದು ಇದರರ್ಥ.

'ಅನ್ಯೇಷಾಂ' ಎಂಬ ಬಹುವಚನ ಪ್ರಯೋಗದ ಸ್ವಾರಸ್ಯ

भावदीपः – सूत्रे धर्मिनिर्देशेऽपि तयोरिति भाष्यानुरोधाद् द्युभ्वाद्यातनत्वं विषय इत्युक्तम् । आदिपदेनान्तरिक्षप्राणमनसां सङ्ग्रहः । भाष्ये तयोरिति द्विवचनोक्तावपि अग्रे वायुश्च इत्युक्तेरन्येषामित्युक्तम् ।

ಸೂತ್ರದಲ್ಲಿ ಧರ್ಮಿಯನ್ನು ನಿರ್ದೇಶ ಮಾಡಿದ್ದರೂ ಭಾಷ್ಯದಲ್ಲಿ "तयोः" ಇತ್ಯಾದಿಯಾಗಿ ಹೇಳಿರುವುದರಿಂದ ಅದಕ್ಕನುಸಾರಿಯಾಗಿ ದ್ಯುಭ್ವಾದ್ಯಾಯತನತ್ವವು ವಿಷಯವಾಗಿದೆ ಎಂದು ಹೇಳಿದ್ದಾರೆ. ಆದಿಪದದಿಂದ ಆಕಾಶ, ಪ್ರಾಣ, ಮನಸ್ಸು ಇವುಗಳನ್ನೆಲ್ಲಾ ಸಂಗ್ರಹಿಸಬೇಕು. ಭಾಷ್ಯದಲ್ಲಿ "तयोः" ಎಂಬುದಾಗಿ ದ್ವಿವಚನದಿಂದ ಇಬ್ಬರೇ ಪೂರ್ವಪಕ್ಷಕ್ಕೆ ವಿಷಯವೆಂದು ಹೇಳಿದ್ದರೂ ಸಹ ಮುಂದೆ "वायुश्च" ಎಂದು ಹೇಳಿದ್ದರಿಂದ ಟೀಕೆಯಲ್ಲಿ "अन्येषाम्" ಎಂದು ಬಹುವಚನಪ್ರಯೋಗವನ್ನೇ ಮಾಡಿದ್ದಾರೆ.

ಸಂಗತಿಪರವಾದ ಭಾಷ್ಯವೇ ಪೂರ್ವಪಕ್ಷ ಪರ

भावदीपः – तदेव भाष्यं पूर्वपक्षतद्युक्तितत्फलोक्तिपरतया व्याकुर्वन् तयोः प्राप्तिरिति प्रतिज्ञांशं व्याचष्टे – द्युभ्वादीति ।। तयोरित्युपलक्षणमिति भावः ।

ಅದೇ ಭಾಷ್ಯವನ್ನು ಪೂರ್ವಪಕ್ಷ, ಪೂರ್ವಪಕ್ಷಯುಕ್ತಿ ಹಾಗೂ ಪೂರ್ವಪಕ್ಷಫಲಪರವಾಗಿ ವ್ಯಾಖ್ಯಾನಿಸುತ್ತಾ "ತಯೋಃ ಪ್ರಾಪ್ತಿಃ" ಎಂಬ ಪ್ರತಿಜ್ಞಾಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ "ದ್ಯುಭ್ವಾದಿ" ಇತ್ಯಾದಿಯಾಗಿ. ಭಾಷ್ಯದಲ್ಲಿರುವ "ತಯೋಃ" ಎಂಬ ಪದವು ಉಪಲಕ್ಷಣವೆಂದು ತಿಳಿಯಬೇಕು. ನಾಕು ಬಗೆಯ ಪೂರ್ವಪಕ್ಷಕೋಟಿಗಳಲ್ಲಿ ಮೊದಲೆರಡು ಪೂರ್ವಪಕ್ಷಕೋಟಿಗಳು "ನಾನುಮಾನಂ" ಎಂಬುದರಿಂದ ವ್ಯಾವರ್ತ್ಯವಾಗಿವೆ. ಮತ್ತೆರಡು ಪೂರ್ವಪಕ್ಷಕೋಟಿಗಳು "ಪ್ರಾಣಭೃಚ್ಚ" ಎಂಬುದರಿಂದ ವ್ಯಾವರ್ತ್ಯವಾಗಿವೆ ಎಂದು ತಿಳಿಯಬೇಕು.

ಸೂತ್ರಗಳಿಂದ ವ್ಯಾವರ್ತ್ಯವಾದ ಪೂರ್ವಪಕ್ಷ

भावदीपः – एतत्कोटिचतुष्टयं द्विशो द्विशः क्रमेण नानुमानं प्राणभृच्चेति सूत्रद्वयव्यावर्त्यं बोध्यम् । अत एवैवं निर्देशः । यस्मिन्नित्यादेः प्रतीतेरित्यन्तस्यार्थः – अत्रेत्यादि ।। यस्मिन् द्यौरित्यादिवाक्योक्तेत्यर्थः । अत्र श्रुतौ 'जानथ आत्मानम्' इति विवृतिः सर्ववैलक्षण्यप्रदर्शनायेति तत्त्वप्रदीपोक्तिः । अतच्छब्दादिति सौत्रखण्डव्यावर्त्योक्तिपरं प्राणानामित्यादि-भाष्यं व्याकुर्वन् प्राणाधारत्वप्रत्यायकांशमाह – प्राणानामिति ।।

ಈ ನಾಕುಕೋಟಿಗಳನ್ನು ಎರಡು ಎರಡನ್ನಾಗಿ ವಿಭಾಗ ಮಾಡಿ, ನಾನುಮಾನಂ ಹಾಗೂ ಪ್ರಾಣಭೃಚ್ಚ ಇವೆರಡು ಸೂತ್ರಗಳಿಂದ ವ್ಯಾವರ್ತ್ಯವಾಗಿವೆಯೆಂದು ತಿಳಿಯಬೇಕು. ಆದ್ದರಿಂದಲೇ ಈ ಕ್ರಮದಲ್ಲಿ ನಿರ್ದೇಶ ಮಾಡಿದ್ದಾರೆ. "ಯಸ್ಮಿನ್" ಎಂಬಲ್ಲಿಂದ ಪ್ರಾರಂಭಿಸಿ "ಪ್ರತೀತೇಃರಿತಿ" ಎಂಬಲ್ಲಿಯ ತನಕ ಇರುವ ವಾಕ್ಯದ ಭಾಷ್ಯದ ಅರ್ಥವನ್ನು "ಅತ್ರ" ಇತ್ಯಾದಿ ವಾಕ್ಯಗಳಿಂದ ಮಾಡುತ್ತಿದ್ದಾರೆ. "ಯಸ್ಮಿನ್ ದ್ಯೌಃ" ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಎಂದರ್ಥ. ಈ ಶ್ರುತಿಯಲ್ಲಿ "ಜಾನಥ ಆತ್ಮಾನಂ" ಪದಗಳಿಗೆ ಯೋಜನೆ ಮಾಡಿದ್ದು ಏಕೆಂದರೆ ಸಕಲವೈಲಕ್ಷಣ್ಯವನ್ನು ತೋರಿಸುವುದಕ್ಕಾಗಿ ಎಂದು ತತ್ವಪ್ರದೀಪಕಾರರು

ಹೇಳಿದ್ದಾರೆ. ''ಅತಶ್ಚಬ್ಬಾತ್'' ಎಂಬ ಸೂತ್ರದ ಭಾಗದಿಂದ ನಿರಾಕೃತವಾಗುವ ಪೂರ್ವಪಕ್ಷವನ್ನು ಮತ್ತು ''ಪ್ರಾಣಾನಾಂ'' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನಿಸುವವರಾಗಿ ''ಪ್ರಾಣಾನಾಂ'' ಇತ್ಯಾದಿ ಟೀಕೆಯು ಹೊರಟಿದೆ.

ಮೂರು ಬಗೆಯ ಲಿಂಗಗಳಿಗೆ ಮೂರು ಬಗೆಯ ಸಮಾಖ್ಯಾ ಪ್ರಮಾಣಗಳು

ಭಾವದೀಪಃ – ಶ್ರುತ್ಯರ್ಥಸ್ತು 'तदभिध्यानादेव तु तल्लिङ्गात् सः' इत्यत्राग्रे टीकायां व्यक्तः । न्यायविवरणे 'यस्मिन् द्यौः' इत्यत्रोक्तानां लिङ्गानामन्यत्र रुद्रादिविषयत्वे शब्दबाहुल्यमित्युक्तलिङ्गत्रये समाख्यात्रयमुक्तम् । तत्रैकत्र प्राणाधारत्वलिङ्गे वाक्यद्वयोक्त्या एका समाख्या भाष्ये प्रकटिता । शिष्टं द्वयं स्वयमाह – तथेति ।।

''ಪ್ರಾಣಾನಾಂ'' ಎಂಬ ಶ್ರುತಿಯ ಅರ್ಥವನ್ನು ಸ್ವತಃ ಟೀಕಾರಾಯರೇ ಮುಂದೆ ''ತದಭಿಧ್ಯಾನಾದೇವ ತು ತಲ್ಲಿಂಗಾತ್ ಸಃ'' ಎಂಬ ಸೂತ್ರದ ವ್ಯಾಖ್ಯಾನದ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತಾರೆ. ''ಯಸ್ಮಿನ್ ದ್ಯೌಃ'' ಎಂಬ ಶ್ರುತಿಯಿಂದ ತಿಳಿಯುವ ಲಿಂಗಗಳು ರುದ್ರನಲ್ಲಿ ಬರುತ್ತವೆಂದು ಹೇಳುವಲ್ಲಿ ಅನೇಕ ಶ್ರುತಿಗಳು ಆಧಾರವಾಗಿದೆ. ಆದ್ದರಿಂದ ಮೂರು ಬಗೆಯ ಲಿಂಗಗಳಿಗೆ ಮೂರು ಬಗೆಯ ಸಮಾಖ್ಯಾಪ್ರಮಾಣಗಳನ್ನು ಹೇಳಿದ್ದಾರೆ. ಅಂತಹ ಮೂರು ಸಮಾಖ್ಯಾಪ್ರಮಾಣಗಳಲ್ಲಿ ಪ್ರಾಣಾಧಾರತ್ವ ಲಿಂಗಕ್ಕೆ ಎರಡು ಶ್ರುತಿಗಳನ್ನು ಉಲ್ಲೇಖಿಸುವ ಮೂಲಕ ಒಂದು ಸಮಾಖ್ಯಾಪ್ರಮಾಣವನ್ನು ಭಾಷ್ಯಕಾರರೇ ತೋರಿಸಿದ್ದಾರೆ. ಉಳಿದ ಎರಡು ಸಮಾಖ್ಯಾ- ಪ್ರಮಾಣಗಳನ್ನು ಸ್ವತಃ ಟೀಕಾರಾಯರು ''ತಥಾ'' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ.

ರುದ್ರನು ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು 'ರುದ್ರೋ ವಾವ' ಎಂಬ ಶ್ರುತಿಯ ಸಮಾಖ್ಯಾನ

ಭಾವದೀಪಃ – लोकाधार इति समाख्यया ऐकार्थ्याय द्युभ्वन्तरिक्षेत्येतावदुक्तिः। यद्वा द्युभ्वाद्यायतनस्येत्युक्ते पूर्वत्रेवाऽदिपदेन प्राणमनसोरपि ग्रहणशङ्का स्यादित्यतो द्युभ्वन्तरिक्षेत्युक्तिः । तस्मिन्निति स्ववचनम् । प्रतीयत इत्यन्वयः ।

ದ್ಯುಲೋಕಕ್ಕೆ ಆಶ್ರಯವಾಗಿರುವಿಕೆ ಹಾಗೂ ಅಂತರಿಕ್ಷಕ್ಕೆ ಆಶ್ರಯವಾಗಿರುವಿಕೆ ಎಂಬ ಲಿಂಗಕ್ಕೆ ''ರುದ್ರೋ ವಾವ ಲೋಕಾಧಾರಃ'' ಎಂಬ ಶ್ರುತಿಯು ಸಮಾಖ್ಯಾಪ್ರಮಾಣವಾಗಿದೆ. ಲಿಂಗ ಹಾಗೂ ಶ್ರುತಿಗಳು ಒಂದೇ ಅರ್ಥದಲ್ಲಿ ಇವೆ ಎಂಬುದನ್ನು ತಿಳಿಸುವುದಕ್ಕಾಗಿ ಟೀಕೆಯಲ್ಲಿ ''ದ್ಯುಭ್ವಂತರಿಕ್ಷ'' ಎಂದು ಹೇಳಿದ್ದಾರೆ. ಅಥವಾ ''ದ್ಯುಭ್ವಾದ್ಯಾಯತನಸ್ಯ'' ಎಂದು ಹೇಳಿದರೆ ಹಿಂದಿನಂತೆ ಇಲ್ಲಿಯೂ ಸಹ ''ಆದಿ'' ಪದದಿಂದ ಪ್ರಾಣನಿಗೆ ಆಶ್ರಯವಾಗಿರುವಿಕೆ ಹಾಗೂ ಮನಸ್ಸಿಗೆ ಆಶ್ರಯವಾಗಿರುವಿಕೆ ಎಂಬೆರಡು ಧರ್ಮಗಳೂ ಸಹ ಸಂಗ್ರಹವಾಗುತ್ತಿದ್ದವು. ಅದಕ್ಕೋಸ್ಕರ ಸ್ಪಷ್ಟವಾಗಿ ''ದ್ಯುಭ್ವಂತರಿಕ್ಷ'' ಎಂದು ಹೇಳಿದ್ದಾರೆ. ''ತಸ್ಮಿನ್'' ಎಂಬುದು ಟೀಕಾರಾಯರ ಮಾತೇ ಹೊರತು ಶ್ರುತಿಯಲ್ಲ. ''ಪ್ರತೀಯತೇ'' ಎಂಬುದನ್ನು ಇಲ್ಲಿಯೂ ಸಹ ಅನ್ವಯ ಮಾಡಿಕೊಳ್ಳಬೇಕು.

ಬಹುಶ್ರುತಿಗಳಲ್ಲಿರುವ ಲಿಂಗಬಾಹ್ಯುಲವು ರುದ್ರನಲ್ಲೇ

भावदीपः –'मनो वै रुद्रः' इति तु समाख्याश्रुतिः । भाष्ये श्रुतिशेषोक्तेरुपयोगं शङ्कापूर्वमाह – नचेति ।। अन्तर्नये आधिदैविक-सर्वशब्दानां महायोगविद्वद्रूढिभ्यां विष्णुनिष्ठत्वोक्तेरिति भावः । अनेक-श्रुत्युक्तिलिङ्गबाहुल्योक्त्यर्थेति मत्वोक्तमित्यादीति । एतेनान्यत्रोक्त-समाख्यात्रये प्राणाधारत्वसमाख्याया एव भाष्ये पाठः श्रुत्युज्जीवकलिङ्गोक्त्यर्थः।

''ಮನೋ ವೈ ರುದ್ರಃ'' ''ಮನಸ್ಸಿಗೆ ಆಶ್ರಯವಾಗಿರುವಿಕೆ'' ಎಂಬುದು ಸಮಾಖ್ಯಾಶ್ರುತಿಯಾಗಿದೆ. ಭಾಷ್ಯದಲ್ಲಿ ''ಕೃತ್ತಿವಾಸಾಃ ಪಿನಾಕೀ'' ಎಂಬ ಶ್ರುತಿಯ ಉಳಿದ ಭಾಗವನ್ನು ಉಲ್ಲೇಖಿಸಲು ಕಾರಣವೇನು ಎಂಬುದನ್ನು ''ನಚ'' ಎಂಬ ವಾಕ್ಯದಿಂದ ಶಂಕಾಪೂರ್ವಕವಾಗಿ ವಿವರಿಸುತ್ತಿದ್ದಾರೆ. ಅಂತರಾಧಿಕರಣದಲ್ಲಿ ಆಧಿದೈವಿಕವಾದ ಸಕಲ ಶಬ್ದಗಳನ್ನು ಮಹಾಯೋಗ ಹಾಗೂ ವಿದ್ವದ್ರೂಢಿಗಳಿಂದ ವಿಷ್ಣುವಿನಲ್ಲೇ ಬರುತ್ತವೆ ಎಂದು ಸಮರ್ಥಿಸಲಾಗಿದೆ. ಆದ್ದರಿಂದ ''ಪ್ರಾಣೇಶ್ವರಃ'' ಎಂಬ ಶ್ರುತಿಯು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು ''ನಚ'' ಎಂಬ ವಾಕ್ಯದಿಂದ ಆಶಂಕಿಸುತ್ತಿದ್ದಾರೆ. ಟೀಕೆಯಲ್ಲಿ ''ಇತ್ಯಾದಿ'' ಎಂದು ಹೇಳಿದ್ದರಿಂದ ಅನೇಕ ಶ್ರುತಿಗಳಲ್ಲಿ ಹೇಳಲ್ಪಟ್ಟ ಲಿಂಗಬಾಹುಲ್ಯವು ರುದ್ರನಲ್ಲೇ ಬರುತ್ತದೆಂದು ತಿಳಿಸಿದ್ದಾರೆ. ಆದ್ದರಿಂದ ಅಂತಕತ್ವ, ಕೃತ್ತಿವಾಸತ್ವ ಮೊದಲಾದ ಲಿಂಗಗಳಷ್ಟೇ ಅಲ್ಲ ಇನ್ನೂ ಹೆಚ್ಚಿನ ಲಿಂಗಗಳಿವೆ ಎಂದು ತಿಳಿಯಬೇಕು.

ಮೂರು ಬಗೆಯ ಸಮಾಖ್ಯಾಪ್ರಮಾಣಗಳಿವೆ ಎಂದು ನ್ಯಾಯವಿವರಣದಲ್ಲಿ ಹೇಳಲಾಗಿದೆ. ಅವುಗಳಲ್ಲಿ ಪ್ರಾಣಾಧಾರತ್ವವೆಂಬ ಸಮಾಖ್ಯಾಪ್ರಮಾಣವನ್ನಷ್ಟೇ ಭಾಷ್ಯದಲ್ಲಿ ಹೇಳಿದ್ದಾರೆ. ಹೀಗೆ ಭಾಷ್ಯದಲ್ಲಿ ಏಕೆ ಹೇಳಿದ್ದಾರೆಂದರೆ ಶ್ರುತಿಗೆ ಉಜ್ಜೀವಕವಾದ ಲಿಂಗವಿದೆ ಎಂದು ತಿಳಿಸುವುದಕ್ಕಾಗಿ.

ಪೂರ್ವಪಕ್ಷ ಶ್ರುತಿಗಳು ನಿರವಕಾಶ

भावदीपः – बाहुल्यं लिङ्गशब्दानामित्यनुव्याख्याने लिङ्गोक्तिः शब्दोज्जीवनायेति च दर्शितम् । तथाचात्र समाख्याश्रुतौ विष्णुलिङ्गाभावात् प्रत्युतान्यलिङ्गानामेव श्रवणेनान्तर्नयन्यायाविषयत्वात् श्रुतयोऽपि निरवकाशा इति भावः ।

''ಬಾಹುಲ್ಯಂ ಲಿಂಗಶಬ್ದಾನಾಂ'' ಎಂಬ ಅನುವ್ಯಾಖ್ಯಾನದಲ್ಲಿ ಶ್ರುತಿಯನ್ನು ಉಪೋದ್ಬಲಿಸುವುದಕ್ಕಾಗಿ ಲಿಂಗವು ಆವಶ್ಯಕವೆಂದು ಹೇಳಿದ್ದಾರೆ. ಅದ್ದರಿಂದ ಪ್ರಕೃತ ಸಮಾಖ್ಯಾಶ್ರುತಿಯಲ್ಲಿ ಯಾವುದೇ ವಿಷ್ಣುಲಿಂಗಗಳು ಇರುವುದಿಲ್ಲ ಹೊರತಾಗಿ ರುದ್ರಾದಿಗಳ ಲಿಂಗವೇ ಕೇಳಿಸುತ್ತಿವೆ. ಈ ಕಾರಣದಿಂದ ರುದ್ರಪ್ರತಿಪಾದಕವಾದ ಶಬ್ದಗಳು ಅಂತರಾಧಿಕರಣದ ನ್ಯಾಯಕ್ಕೆ ವಿಷಯವಾಗುವುದಿಲ್ಲ. ಆದ್ದರಿಂದಲೇ 'ಶ್ರುತಿಗಳೆಲ್ಲವೂ ನಿರವಕಾಶವೇ ಆಗಿವೆ' ಎಂದು ಪೂರ್ವಪಕ್ಷದ ಅಭಿಪ್ರಾಯ.

ಅನುಮಾನಾತ್ಮಕ ಆಗಮದಿಂದ ರುದ್ರನು ಪ್ರತಿಪಾದ್ಯನಲ್ಲ

भावदीपः – नानुमानात्मकागमपरिकल्पितरुद्रोऽत्र वाच्य इति भाष्योक्तां सौत्रानुमानपदलब्धां युक्तिमाह – दृष्टफलेति ।। रुद्रवाक्येति ।। पाशुपदाति-रूपेत्यर्थः ।।

''ನಾನುಮಾನಾತ್ಮಕಾಗಮಪರಿಕಲ್ಪಿತರುದ್ರೋಽತ್ರ ವಾಚ್ಯಃ'' - ಅನುಮಾನರೂಪವಾದ ಆಗಮದಿಂದ ರುದ್ರನು ಇಲ್ಲಿ ಪ್ರತಿಪಾದ್ಯನಾಗುವುದಿಲ್ಲ ಎಂಬ ಮುಂದಿರುವ ಭಾಷ್ಯದಲ್ಲಿ ಹೇಳಲ್ಪಟ್ಟ ಸೂತ್ರದಲ್ಲಿರುವ ಅನುಮಾನ ಪದದಿಂದ ತಿಳಿಯುವ ಯುಕ್ತಿಯನ್ನು ''ದೃಷ್ಟಫಲ'' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ. ''ರುದ್ರವಾಕ್ಯದೃಷ್ಟಾಂತೇನ'' ಎಂದರೆ ಪಾಶುಪತಾದಿ ಶಾಸ್ತ್ರದಲ್ಲಿ ರುದ್ರವಿಷಯಕವಾದ ವಾಕ್ಯಗಳ ದೃಷ್ಟಾಂತದಿಂದ ಎಂದರ್ಥ.

'ನೈವ ಶಾಸ್ತ್ರಂ ಕುರ್ವರ್ತ್ಮ ತತ್'

ಭಾವದೀಪಃ – ಅನುಮಾನೇನ ಚೇತಿ ।। ನ ಕೇವಲಂ ಶ್ರುತಿಲಿಙ್ಗಬಾಹುಲ್ಯೇನ ರುದ್ರಪರತ್ವೇನ ಸಿದ್ಧಸಮಾಖ್ಯಾನಾದಿತಿ ಚಾರ್ಥಃ । ತಥಾಚ 'ನೈವ ಶಾಸ್ತ್ರಂ ಕುವರ್ತ್ಮ ತದ್' ಇತಿ ಪೂರ್ವಂ ತದಪ್ರಾಮಾಣ್ಯಮುಕ್ತಮಿತಿ ನ ಶಙ್ಕ್ಯಮಿತಿ ಭಾವಃ ।

ಕೇವಲ ಶ್ರುತಿಲಿಂಗಗಳ ಬಾಹುಲ್ಯದಿಂದಷ್ಟೇ ಶ್ರುತಿಗಳು ರುದ್ರಪರವೆಂದಲ್ಲ ಹಿಂದೆ ಹೇಳಲ್ಪಟ್ಟ ಸಮಾಖ್ಯಾಪ್ರಮಾಣಗಳಿಂದಲೂ ರುದ್ರನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ''ಅನುಮಾನೇನ ಚ''ಎಂಬಲ್ಲಿರುವ 'ಚ' ಶಬ್ದದಿಂದ ತಿಳಿಸಿದ್ದಾರೆ. ಆದ್ದರಿಂದ ''ನೈವ ಶಾಸ್ತ್ರಂ ಕುವರ್ತ್ಮ ತತ್'' ಎಂಬುದಾಗಿ ಹಿಂದೆ ರುದ್ರಾದಿ ಶಾಸ್ತ್ರಗಳಿಗೆ ಅಪ್ರಾಮಾಣ್ಯವನ್ನು ವಿವಕ್ಷಿಸಬಾರದು ಎಂದು ಪೂರ್ವಪಕ್ಷಕಾರರು ಅಭಿಪ್ರಾಯ ಪಡುತ್ತಾರೆ.

ಶಾಸ್ತ್ರಯೋನಿತ್ವಾಧಿಕರಣದಲ್ಲಿ ಹೇಳಲ್ಪಟ್ಟ ಯುಕ್ತಿಯ ವಿರೋಧ

ಭಾವದೀಪಃ – ಯದ್ಯಪಿ

'ಶೈವಾದ್ಯಾಗಮಸಮ್ಪ್ರಾಪ್ತದೃಷ್ಟಗೇನ ಫಲೇನ ಚ ।
ತದ್ವಾಕ್ಯೋಪಮಯಾನ್ಯಚ್ಚ ಪ್ರಮಾಣತ್ವೇऽನುಮೀಯತೇ ।।
ಈಶವಾಕ್ಯತ್ವತ ಇತಿ ಚೇದ್ ತದ್ವ್ಯಭಿಚಾರಿಣಾ ।
ಅಪ್ರಾಮಾಣ್ಯಾನುಮಾ ಚ ಸ್ಯಾದ್... ।।'

ಇತಿ ಶಾಸ್ತ್ರಯೋನಿನಯಾನುವ್ಯಾಖ್ಯಾನೇ ಏವೈಷಾ ಯುಕ್ತಿರಾಶಙ್ಕ್ಯ ನಿರಸ್ತಾ ।

ವಸ್ತುತಃ

''ಶೈವಾದ್ಯಾಗಮಸಂಪ್ರಾಪ್ತದೃಷ್ಟಗೇನ ಫಲೇನ ಚ।
ತದ್ವಾಕ್ಯೋಪಮಯಾನ್ಯಚ್ಚ ಪ್ರಮಾಣತ್ವೇऽನುಮೀಯತೇ।
ಈಶವಾಕ್ಯತ್ವದ ಇತಿ ಚೇತ್ತದ್ವ್ಯಭಿಚಾರಿಣಾ।
ಅಪ್ರಾಮಾಣ್ಯಾನುಮಾ ಚ ಸ್ಯಾತ್''

ಮೂರು ಬಗೆಯ ಸಮಾಖ್ಯಾಪ್ರಮಾಣಗಳಿವೆ ಎಂದು ನ್ಯಾಯವಿವರಣದಲ್ಲಿ ಹೇಳಲಾಗಿದೆ. ಅವುಗಳಲ್ಲಿ ಪ್ರಾಣಾಧಾರತ್ವವೆಂಬ ಸಮಾಖ್ಯಾಪ್ರಮಾಣವನ್ನಷ್ಟೇ ಭಾಷ್ಯದಲ್ಲಿ ಹೇಳಿದ್ದಾರೆ. ಹೀಗೆ ಭಾಷ್ಯದಲ್ಲಿ ಏಕೆ ಹೇಳಿದ್ದಾರೆಂದರೆ ಶ್ರುತಿಗೆ ಉಜ್ಜೀವಕವಾದ ಲಿಂಗವಿದೆ ಎಂದು ತಿಳಿಸುವುದಕ್ಕಾಗಿ.

ಪೂರ್ವಪಕ್ಷ ಶ್ರುತಿಗಳು ನಿರವಕಾಶ

भावदीपः – बाहुल्यं लिङ्गशब्दानामित्यनुव्याख्याने लिङ्गोक्तिः शब्दोज्जीवनायेति च दर्शितम् । तथाचात्र समाख्याश्रुतौ विष्णुलिङ्गाभावात् प्रत्युतान्यलिङ्गानामेव श्रवणेनान्तर्नयन्यायाविषयत्वात् श्रुतयोऽपि निरवकाशा इति भावः ।

''ಬಾಹುಲ್ಯಂ ಲಿಂಗಶಬ್ದಾನಾಂ'' ಎಂಬ ಅನುವ್ಯಾಖ್ಯಾನದಲ್ಲಿ ಶ್ರುತಿಯನ್ನು ಉಪೋದ್ಬಲಿಸುವುದಕ್ಕಾಗಿ ಲಿಂಗವು ಆವಶ್ಯಕವೆಂದು ಹೇಳಿದ್ದಾರೆ. ಅದ್ದರಿಂದ ಪ್ರಕೃತ ಸಮಾಖ್ಯಾಶ್ರುತಿಯಲ್ಲಿ ಯಾವುದೇ ವಿಷ್ಣುಲಿಂಗಗಳು ಇರುವುದಿಲ್ಲ ಹೊರತಾಗಿ ರುದ್ರಾದಿಗಳ ಲಿಂಗವೇ ಕೇಳಿಸುತ್ತಿವೆ. ಈ ಕಾರಣದಿಂದ ರುದ್ರಪ್ರತಿಪಾದಕವಾದ ಶಬ್ದಗಳು ಅಂತರಾಧಿಕರಣದ ನ್ಯಾಯಕ್ಕೆ ವಿಷಯವಾಗುವುದಿಲ್ಲ. ಆದ್ದರಿಂದಲೇ 'ಶ್ರುತಿಗಳೆಲ್ಲವೂ ನಿರವಕಾಶವೇ ಆಗಿವೆ' ಎಂದು ಪೂರ್ವಪಕ್ಷದ ಅಭಿಪ್ರಾಯ.

ಅನುಮಾನಾತ್ಮಕ ಆಗಮದಿಂದ ರುದ್ರನು ಪ್ರತಿಪಾದ್ಯನಲ್ಲ

भावदीपः – नानुमानात्मकागमपरिकल्पितरुद्रोऽत्र वाच्य इति भाष्योक्तां सौत्रानुमानपदलब्ध्यां युक्तिमाह – दृष्टफलेति ।। रुद्रवाक्येति ।। पाशुपदाति-रूपेत्यर्थः ।।

''ನಾನುಮಾನಾತ್ಮಕಾಗಮಪರಿಕಲ್ಪಿತರುದ್ರೋಽತ್ರ ವಾಚ್ಯಃ'' - ಅನುಮಾನರೂಪವಾದ ಆಗಮದಿಂದ ರುದ್ರನು ಇಲ್ಲಿ ಪ್ರತಿಪಾದ್ಯನಾಗುವುದಿಲ್ಲ ಎಂಬ ಮುಂದಿರುವ ಭಾಷ್ಯದಲ್ಲಿ ಹೇಳಲ್ಪಟ್ಟ ಸೂತ್ರದಲ್ಲಿರುವ ಅನುಮಾನ ಪದದಿಂದ ತಿಳಿಯುವ ಯುಕ್ತಿಯನ್ನು ''ದೃಷ್ಟಫಲ'' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ. ''ರುದ್ರವಾಕ್ಯದೃಷ್ಟಾಂತೇನ'' ಎಂದರೆ ಪಾಶುಪತಾದಿ ಶಾಸ್ತ್ರದಲ್ಲಿ ರುದ್ರವಿಷಯಕವಾದ ವಾಕ್ಯಗಳ ದೃಷ್ಟಾಂತದಿಂದ ಎಂದರ್ಥ.

'ನೈವ ಶಾಸ್ತ್ರಂ ಕುರ್ವರ್ತ್ಮ ತತ್'

ಭಾವದೀಪಃ – अनुमानेन चेति ।। न केवलं श्रुतिलिङ्गबाहुल्येन रुद्रपरत्वेन सिद्धसमाख्यानादिति चार्थः । तथाच 'नैव शास्त्रं कुवर्त्म तद्' इति पूर्वं तदप्रामाण्यमुक्तमिति न शङ्क्यमिति भावः ।

ಕೇವಲ ಶ್ರುತಿಲಿಂಗಗಳ ಬಾಹುಲ್ಯದಿಂದಷ್ಟೇ ಶ್ರುತಿಗಳು ರುದ್ರಪರವೆಂದಲ್ಲ ಹಿಂದೆ ಹೇಳಲ್ಪಟ್ಟ ಸಮಾಖ್ಯಾಪ್ರಮಾಣಗಳಿಂದಲೂ ರುದ್ರನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ''ಅನುಮಾನೇನ ಚ''ಎಂಬಲ್ಲಿರುವ 'ಚ' ಶಬ್ದದಿಂದ ತಿಳಿಸಿದ್ದಾರೆ. ಆದ್ದರಿಂದ ''ನೈವ ಶಾಸ್ತ್ರಂ ಕುವರ್ತ್ಮತತ್'' ಎಂಬುದಾಗಿ ಹಿಂದೆ ರುದ್ರಾದಿ ಶಾಸ್ತ್ರಗಳಿಗೆ ಅಪ್ರಾಮಾಣ್ಯವನ್ನು ವಿವಕ್ಷಿಸಬಾರದು ಎಂದು ಪೂರ್ವಪಕ್ಷಕಾರರು ಅಭಿಪ್ರಾಯ ಪಡುತ್ತಾರೆ.

ಶಾಸ್ತ್ರಯೋನಿತ್ವಾಧಿಕರಣದಲ್ಲಿ ಹೇಳಲ್ಪಟ್ಟ ಯುಕ್ತಿಯ ವಿರೋಧ

ಭಾವದೀಪಃ – यद्यपि

'शैवाद्यागमसम्प्राप्तदृष्टगेन फलेन च ।
तद्वाक्योपमयान्यच्च प्रमाणत्वेऽनुमीयते ।।
ईशवाक्यत्वत इति चेद् तद्व्यभिचारिणा ।
अप्रामाण्यानुमा च स्याद्... ।।'

इति शास्त्रयोनिनयानुव्याख्याने एवैषा युक्तिराशङ्क्य निरस्ता ।

ವಸ್ತುತಃ

''शैवाद्यागमसंप्राप्तदृष्टगेन फलेन च ।
तद्वाक्योपमयान्यच्च प्रमाणत्वेऽनुमीयते ।
ईशवाक्यत्वत इति चेत्तद्व्यभिचारिणा ।
अप्रामाण्यानुमा च स्यात्''

ಇತ್ಯಾದಿಯಾಗಿ ಶಾಸ್ತ್ರಯೋನಿತ್ವಾಧಿಕರಣದ ಅನುವ್ಯಾಖ್ಯಾನದಲ್ಲೇ ಈ ಯುಕ್ತಿಯನ್ನು ಆಶಂಕಿಸಿ ನಿರಾಕರಿಸಿದ್ದಾರೆ. ಶೈವಾದ್ಯಾಗಮಗಳಲ್ಲಿ ಹೇಳಿದ ಕೆಲವು ವಾಕ್ಯಗಳಲ್ಲಿ ಕರ್ತವ್ಯಗಳನ್ನು ಆಚರಣೆ ಮಾಡಿದಾಗ ಫಲ ದೊರೆಯುವುದು ಕಂಡಿದೆ. ಈ ವಾಕ್ಯದ ಉದಾಹರಣೆಯಿಂದ ಸಮಗ್ರ ಶೈವಾದ್ಯಾಗಮಗಳು ಪ್ರಮಾಣವಾಗಿವೆ ಎಂದು ಅನುಮಾನ ಮಾಡುವುದಾದರೆ, ಅದೇ ಶೈವಾದ್ಯಾಗಮಗಳಲ್ಲಿರುವ ಕೆಲವು ವಾಕ್ಯಗಳಲ್ಲಿ ಹೇಳಲ್ಪಟ್ಟ ಕರ್ತವ್ಯಗಳನ್ನು ಆಚರಣೆ ಮಾಡಿದಾಗ ಫಲದೊರೆಯದೇ ಇರುವುದೂ ಕೂಡ ಕಂಡಿದೆ. ಆ ವಾಕ್ಯದ ಉದಾಹರಣೆಯಿಂದ ಸಮಗ್ರ ಶೈವಾದ್ಯಾಗಮಕ್ಕೆ ಅಪ್ರಾಮಾಣ್ಯವನ್ನೂ ಕೂಡ ಅನುಮಾನದಿಂದ ಸಾಧಿಸಬೇಕಾದೀತು.

ಪೂರ್ವಪಕ್ಷವು ಬಹುಪ್ರಮಾಣಗಳಿಂದ ಬಲಿಷ್ಠವಾಗಿದೆ

भावदीपः – तथापीह श्रुतिलिङ्गबाहुल्येन प्रबलसमाख्यारूपहेत्वन्तरेण पूर्वपक्षे तद्बलेनेयमभ्युच्चयत्वेनोक्ता । यथा सर्वत्रप्रसिद्धेत्यत्रार्भकौकस्त्वेन सिद्धे चोद्येऽभ्युच्चयत्वेन चक्षुर्मयत्वाद्युक्तिस्तद्वत् । अत एवात्र सूत्रादाव-तच्छब्दादिति रुद्रश्रुतिलिङ्गासत्त्वोक्त्या समाख्यायाः सावकाशत्वमेवोच्यते न त्वागमाप्रामाण्यमिति भावः ।

ಆದರೂ ಸಹ ಪ್ರಕೃತ ಶ್ರುತಿ ಲಿಂಗಗಳ ಬಾಹುಲ್ಯವಿರುವುದರಿಂದ ಅಷ್ಟೇಅಲ್ಲದೆ ಪ್ರಬಲವಾದ ಸಮಾಖ್ಯಾಪ್ರಮಾಣವಿರುವುದರಿಂದ ಪೂರ್ವಪಕ್ಷವು ಹೆಚ್ಚಿನ ಪ್ರಮಾಣಗಳಿಂದ ಬಲಿಷ್ಠವಾಗಿದೆ. ಆದ್ದರಿಂದ ಹಿಂದಿನ ಶಾಸ್ತ್ರಾಯೋನಿತ್ವಾಧಿಕರಣದ ಮಾತನ್ನು ಇಲ್ಲಿ ವಿವಕ್ಷಿಸಬಾರದು. ಯಾವರೀತಿಯಾಗಿ ''ಸರ್ವತ್ರ ಪ್ರಸಿದ್ಧೋಪದೇಶಾತ್'' ಎಂಬ ಸೂತ್ರದಲ್ಲಿ ಅರ್ಭಕೌಕಸ್ತ್ವ ಲಿಂಗದಿಂದಲೇ ಪೂರ್ವಪಕ್ಷವು ದೃಢವಾಗಿದ್ದರೂ ಚಕ್ಷುರ್ಮಯತ್ವ ಮೊದಲಾದ ಹೆಚ್ಚಿನ ಯುಕ್ತಿಗಳಿಂದ ಪೂರ್ವಪಕ್ಷವನ್ನು ದೃಢಪಡಿಸುವಂತೆ ಇಲ್ಲಿಯೂ ಸಹ ತಿಳಿಯಬೇಕು. ಆದ್ದರಿಂದಲೇ ಪ್ರಕೃತ ಸೂತ್ರಗಳಲ್ಲಿ ''ಅತಚ್ಛಬ್ದಾತ್'' ಎಂಬುದರಿಂದ ರುದ್ರ ಪ್ರತಿಪಾದ್ಯವಾದ ಶ್ರುತಿ ಲಿಂಗಗಳು ಇಲ್ಲವೆಂದೇ ಹೇಳಿದ್ದಾರೆ. ಇದರಿಂದ ಸಮಾಖ್ಯಾಪ್ರಮಾಣವನ್ನು ಸಾವಕಾಶವೆಂದು ಹೇಳಿದ್ದಾರೆ ಹೊರತು ಆಗಮಕ್ಕೆ ಅಪ್ರಮಾಣ್ಯವನ್ನು ಹೇಳಿರುವುದಿಲ್ಲವೆಂದು ತಿಳಿಯಬೇಕು.

'ರುದ್ರೋ ವಾವ ಲೋಕಾಧಾರಃ' ಎಂಬ ಶ್ರುತಿಯಿಂದ ಸರ್ವಾಧಾರತ್ವದ ಆಕ್ಷೇಪ

ಭಾವದೀಪಃ – ಯದ್ವಾ 'ರುದ್ರೋ ವಾವ ಲೋಕಾಧಾರಃ' ಇತ್ಯಾದಿಶ್ರುತ್ಯಾ ರುದ್ರಾದೇಃ ಸರ್ವಾಧಾರತ್ವಪ್ರಾಪ್ತೌ ತದ್ಬಲೇನ ತಾದೃಶಾಗಮಸ್ಯಾಪಿ ಪ್ರಾಮಾಣ್ಯಸಮ್ಭವೇನಾಪ್ರಾಮಾಣ್ಯಾನುಮಾನ ಸ್ಯ ಬಾಧಿತತ್ವಾತ್ತದವಷ್ಟಮ್ಭೇನಪೂರ್ವಪಕ್ಷೋ ಯುಕ್ತಃ । ಸಮಾಧಿಸ್ತು ಸಮಾಖ್ಯಾಯಾ ವಿಷ್ಣುಪರತ್ವಸಾಧನೇನೈವ ಸೇತ್ಸ್ಯತೀತಿ ಭಾವಃ ।

ಅಥವಾ "ರುದ್ರೋ ವಾವ ಲೋಕಾಧಾರಃ" ಇತ್ಯಾದಿ ಶ್ರುತಿಯಿಂದ ರುದ್ರಾದಿಗಳಲ್ಲಿಯೂ ಸರ್ವಾಧಾರತ್ವವು ಪ್ರಾಪ್ತವಾಗುತ್ತದೆ. ಸರ್ವಾಧಾರತ್ವದ ಬಲದಿಂದ ರುದ್ರ ಪ್ರತಿಪಾದಕವಾದ ಆಗಮಕ್ಕೆ ಪ್ರಾಮಾಣ್ಯವು ಬರುತ್ತದೆ. ಇದರಿಂದ ಅಪ್ರಾಮಾಣ್ಯಾನುಮಾನವು ಬಾಧಿತವಾಗುತ್ತದೆ. ಅದರ ಬಲದಿಂದ ಪೂರ್ವಪಕ್ಷವು ದೃಢವಾಗುತ್ತದೆ. ಸಮಾಖ್ಯಾಪ್ರಮಾಣಕ್ಕೆ ವಿಷ್ಣುಪರತ್ವವನ್ನು ಸಾಧಿಸುವುದರಿಂದಲೇ ಇದರ ನಿರಾಕರಣೆಯನ್ನು ಮಾಡಿದಂತಾಗುತ್ತದೆ ಎಂದು ತಿಳಿಯಬೇಕು.

ತತ್ವನಿರ್ಣಯದಲ್ಲಿ ಹೇಳಿದ ಪೂರ್ವಪಕ್ಷವನ್ನೇ ಪ್ರಬಲಗೊಳಿಸಿದ್ದಾರೆ

ಭಾವದೀಪಃ – तत्त्वनिर्णयोक्तप्रकृतिकोटिमपि सोपपत्तिकमुपपादयति – द्युभ्वादीनामिति ।। 'खण्डितं रूपमेवात्र विकारोऽपि विकारिणः' इत्युक्त्या भेदस्यापि भावेनाश्रयाश्रयिभावो न विरुद्ध इत्युपेत्य युक्तमित्युक्तम् ।

ತತ್ವನಿರ್ಣಯದಲ್ಲಿ ಪ್ರಕೃತಿಯೂ ಸಹ ದ್ಯುಭ್ವಾದ್ಯಾಯತನವಾಗಬಹುದೆಂದು ಹೇಳಿದ್ದಾರೆ. ಅದನ್ನು ಉಪಪತ್ತಿಸಹಿತವಾಗಿ ಟೀಕೆಯಲ್ಲಿ "ದ್ಯುಭ್ವಾದೀನಾಂ" ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. "ಖಂಡಿತಂ ರೂಪಮೇವಾತ್ರ ವಿಕಾರೋಽಪಿ ವಿಕಾರಿಣಃ" ಎಂಬ ಮಾತಿನಂತೆ ಕಾರ್ಯ ಹಾಗೂ ಕಾರಣಗಳಿಗೆ ಭೇದವು ಇರುತ್ತದೆ. ಈ ದೃಷ್ಟಿಯಿಂದ ಆಶ್ರಯಾಶ್ರಯಿಭಾವವನ್ನು ಹೇಳುವುದು ವಿರುದ್ಧವಲ್ಲವೆಂದು ವಿವಕ್ಷಿಸಿ "ಉಕ್ತಂ" ಎಂಬ ಪದವನ್ನು ಟೀಕೆಯಲ್ಲಿ ಪ್ರಯೋಗಿಸಿದ್ದಾರೆ.

'ಪ್ರಾಣಭೃಚ್ಚ' ಎಂಬ ಸೂತ್ರದಿಂದ ಸೂಚಿತವಾದ ಮೊದಲನೆಯ ಯುಕ್ತಿ

ಭಾವದೀಪಃ – 'यत्किञ्च जगत्यां जगद्' इति निर्देशवदिति भावः ।। पूर्ववदिति ।। दृष्टफलेत्यादिपूर्वोक्तदिशेत्यर्थः । 'स एषोऽन्तः' इति भाष्यं

सर्वनामपरामर्शं दर्शयन् व्याचष्टे – अरा इवेति ।। 'प्राणभृच्च' इति सौत्रपद-सूचितां युक्तिमाह – तस्येति ।।

"ಯತ್ಕಿಂಚ ಜಗತ್ಯಾಂ ಜಗತ್" ಎಂಬಲ್ಲಿ ಕಾರ್ಯಕಾರಣಗಳಿಗೆ ಆಶ್ರಯಾಶ್ರಯಿಭಾವವನ್ನು ಹೇಳಿದಂತೆ ಇಲ್ಲಿಯೂ ತಿಳಿಯಬೇಕು. "ಪೂರ್ವವತ್" ಎಂದರೆ "ದೃಷ್ಟಫಲವಿಧಾಯಕ" ಇತ್ಯಾದಿ ವಾಕ್ಯದಲ್ಲಿ ಹೇಳಿದ ಪ್ರಕಾರವೆಂದರ್ಥ. "ಸ ಏಷೋऽಂತಶ್ಚರತೇ" ಎಂಬ ಭಾಷ್ಯವನ್ನು ಸರ್ವನಾಮದಿಂದ ಯಾವುದನ್ನು ಪರಾಮರ್ಶಿಸಬೇಕೆಂದು ತೋರಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ "ಅರಾ ಇವ ರಥನಾಭೌ" ಎಂಬ ವಾಕ್ಯದಿಂದ. "ಪ್ರಾಣಭೃಚ್ಚ" ಎಂಬ ಸೂತ್ರದಲ್ಲಿ ಸೂಚಿತವಾದ ಯುಕ್ತಿಯನ್ನು "ತಸ್ಯ" ಎಂಬ ವಾಕ್ಯದಿಂದ ಹೇಳಿದ್ದಾರೆ.

'ಪ್ರಾಣಭೃಚ್ಚ' ಎಂಬ ಸೂತ್ರದಿಂದ ಸೂಚಿತವಾದ ಎರಡನೆಯ ಯುಕ್ತಿ

भावदीपः – 'जीव प्राणधारणे' इति धातोरिति भावेन जीवत्वादेवेत्युक्तिः। 'प्राणभृच्च' इति चशब्दसूचितकोटिं सयुक्तिकं व्यनक्ति – विषयेति ।। प्रसिद्धेश्चेति ।। 'एवमेवैष प्राण इतरान् प्राणान् पृथक् पृथगेव सन्निधत्ते' इत्यादाविति्यर्थः ।।

'ಜೀವ ಪ್ರಾಣಧಾರಣೇ' ಎಂಬ ಧಾತುವಿರುವುದರಿಂದ ಜೀವನಲ್ಲಿ ಪ್ರಾಣಾಧಾರತ್ವಲಿಂಗವು ಯುಕ್ತವಾಗುತ್ತದೆ ಎಂದು ತಿಳಿಯಬೇಕು. "ಪ್ರಾಣಭೃಚ್ಚ" ಎಂಬ ಸೂತ್ರದಲ್ಲಿ 'ಚ' ಶಬ್ದದಿಂದ ಸೂಚಿತವಾದ ಮತ್ತೊಂದು ಪೂರ್ವಪಕ್ಷಕೋಟಿಯನ್ನು ಯುಕ್ತಿಬದ್ಧವಾಗಿ ವ್ಯಾಖ್ಯಾನಿಸುತ್ತಿದ್ದಾರೆ "ವಿಷಯ" ಇತ್ಯಾದಿಯಾಗಿ. "ಪ್ರಸಿದ್ಧೇಶ್ಚ" ಎಂದರೆ "ಏವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್ ಪೃಥಗೇವ ಸನ್ನಿಧತ್ತೇ" ಇತ್ಯಾದಿ ವಾಕ್ಯಗಳಲ್ಲಿ ಪ್ರಾಣಾಧಾರತ್ವವು ಪ್ರಸಿದ್ಧವಾಗಿದೆಯೆಂದು ತಿಳಿಯಬೇಕು.

ವಿಷ್ಣುವಿನಲ್ಲಿ ದ್ಯುಭ್ವಾದ್ಯಾಯತನತ್ವವನ್ನು ತಿಳಿಯಬಾರದು

भावदीपः – विष्णोरिति ।। प्रागुक्तश्रुताविति भावः ।। बहुधा जन्मेति ।। जीवे तु 'ज्ञोऽत एव' इत्यत्रत्यन्यायेन देहाभिप्रायेण जन्मनो योगेऽपि

देहतोऽप्यजायमाने हरौ जन्मायोगादिति भावः । प्रागुक्तदिशा निरवकाशत्वेन प्रबलरुद्रसमाख्याबाधाच्चेत्यपि ज्ञेयम् ।

''ವಿಷ್ಣೋಃ'' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಅಂದರೆ ವಿಷಯವಾಕ್ಯವನ್ನು ಪ್ರದರ್ಶಿಸುವ ಸಂದರ್ಭದಲ್ಲಿ ಹೇಳಿದ ಶ್ರುತಿಯಿಂದ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿ ಸಿದ್ಧವಾಗಿದೆ ಎಂದು ಅಭಿಪ್ರಾಯ. ''ಬಹುಧಾ ಜನ್ಮಬಾಧಾತ್'' ಎಂದರೆ ಜೀವನಲ್ಲಿ ''ಜ್ಞೋऽತ ಏವ'' ಎಂಬ ಸೂತ್ರದ ಪ್ರಕಾರ ಅನೇಕ ದೇಹಗಳು ಬರುವ ಕಾರಣ ಅನೇಕ ಜನ್ಮಗಳನ್ನು ಅಂಗೀಕರಿಸಬಹುದು. ಆದರೆ ವಿಷ್ಣುವಿನಲ್ಲಿ ಅನೇಕ ದೇಹಗಳಿಂದ ಜನ್ಮ ಬರಲು ಸಾಧ್ಯವಿಲ್ಲದ ಕಾರಣ ಯಾವುದೇ ಪ್ರಕಾರದಲ್ಲಿಯೂ ಜನ್ಮವನ್ನು ಕೂಡಿಸಲಾಗದೆಂದು ತಿಳಿಯಬೇಕು. ಮತ್ತು ಹಿಂದೆ ಹೇಳಿದಪ್ರಕಾರ ನಿರವಕಾಶತ್ವದಿಂದ ಹಾಗೂ ಪ್ರಬಲವಾದ ರುದ್ರನಲ್ಲಿರುವ ಸಮಾಖ್ಯಾಪ್ರಮಾಣದಿಂದ ಬಾಧಬರುವ ಕಾರಣ ವಿಷ್ಣುವಿಗೆ ದ್ಯುಭ್ವಾದ್ಯಾಯತನತ್ವವನ್ನು ಹೇಳಬಾರದು.

'ಭೇದವ್ಯಪದೇಶಾಚ್ಚ' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷ

भावदीपः – भेदसूत्रव्यावर्त्यमाह – जीवेशेति ।। ब्रह्मगतेति ।। तथाच प्रागुक्तहेयत्वावचनादिकं जीवे सम्भवतीति न तेनापि विष्णोरवकाश इति भावः ।। अत इति ।। उक्तरीत्या निरवकाशसमाख्याऽगमप्रामाण्यानुमान-जायमानत्वप्राणाधारत्वलिङ्गरूपाणामितरप्रापकाणां विष्णौ बाधकानां सत्वात् ।

ಭೇದಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ''ಜೀವೇಶ'' ಎಂಬುದರಿಂದ ತೋರಿಸುತ್ತಿದ್ದಾರೆ. ಬ್ರಹ್ಮಗತ ಎಂದರೆ ಹೀಗರ್ಥ - ಹಿಂದಿನ ಸೂತ್ರಗಳಲ್ಲಿ ಹೇಳಲ್ಪಟ್ಟ ಹೇಯತ್ವಾದಿಗಳೂ ಸಹ ಜೀವನಲ್ಲಿ ಉಪಪನ್ನವಾಗುತ್ತವೆ. ಆದ್ದರಿಂದಲೇ ಅವುಗಳಿಂದಲೂ ವಿಷ್ಣುವಿಗೆ ದ್ಯುಭ್ವಾದ್ಯಾಯತನತ್ವವು ಹೇಳಲು ಸಾಧ್ಯವಿಲ್ಲವೆಂದು ತಿಳಿಯಬೇಕು. ''ಅತಃ'' ಎಂದರೆ ಹಿಂದೆ ಹೇಳಿದಪ್ರಕಾರ ನಿರವಕಾಶವಾದ ಸಮಾಖ್ಯಾಪ್ರಮಾಣದ ಆಧಾರದಿಂದ ಆಗಮಪ್ರಮಾಣತ್ವವನ್ನು ಸಮರ್ಥಿಸುವ ಲಿಂಗಗಳೆಲ್ಲವೂ ರುದ್ರಾದಿಗಳಿಗೆ ಸಾಧಕವಾಗಿವೆ ಮತ್ತು ವಿಷ್ಣುವಿಗೆ ಬಾಧಕವೇ ಆಗಿವೆ ಆದ್ದರಿಂದ ಎಂದರ್ಥ.

ವಿಶೇಷವಿಚಾರ - ಈ ಅಧಿಕರಣದ ಪೂರ್ವಪಕ್ಷ ಹೀಗಿದೆ - ದ್ಯುಭ್ವಾದ್ಯಾಯತನರಾದವರು, ರುದ್ರ, ಪ್ರಕೃತಿ, ವಾಯುದೇವತೆ ಅಥವಾ ಜೀವ ಇವರುಗಳೇ ಆಗುತ್ತಾರೆ. ಪ್ರತಿಯೊಬ್ಬರೂ ಸಹ ದ್ಯುಭ್ವಾದ್ಯಾಯತನರಾಗಿದ್ದಾರೆನ್ನಲು ಪ್ರಮಾಣವಿದೆ.

ರುದ್ರನ ವಿಷಯದಲ್ಲಿರುವ ಪ್ರಮಾಣ. 'ರುದ್ರೋ ವಾವ ಲೋಕಾಧಾರಃ' 'ಪ್ರಾಣಾನಾಂ ಗ್ರಂಥಿರಸಿ ರುದ್ರಃ' ಇತ್ಯಾದಿ ಶ್ರುತಿ ವಾಕ್ಯವು ರುದ್ರನು ದ್ಯುಲೋಕ, ಭೂಲೋಕ ಮೊದಲಾದವುಗಳಿಗೆ ಆಶ್ರಯನಾಗಿದ್ದಾನೆ. ಪ್ರಾಣಾಧಾರನೂ ಆಗಿದ್ದಾನೆ ಎಂದು ತಿಳಿಯುತ್ತದೆ.

'ಭೂತಂಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ, ಆಕಾಶ ಏವ ತದೋತಂ ಚ ಪ್ರೋತಂ ಚ' ಎಂಬ ಶ್ರುತಿಯು ಹಿಂದಿನ ಮುಂದಿನ ಮತ್ತು ಈಗಿನ ಪದಾರ್ಥಗಳೆಲ್ಲವೂ ಪ್ರಕೃತಿಯಲ್ಲೇ ಅನನ್ಯವಾಗಿ ಆಶ್ರಯಿಸಿಕೊಂಡಿದೆ ಎಂದು ಹೇಳಲಾಗಿದೆ. ಇದರಿಂದ ದ್ಯುಲೋಕವೇ ಮೊದಲಾದವುಗಳಿಗೆ ಆಶ್ರಯವಾದದ್ದು ಪ್ರಕೃತಿಯೆಂದು ತಿಳಿಯುತ್ತದೆ.

'ವಾಯುನಾ ವೈ ಗೌತಮಸೂತ್ರೇಣಾಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ಸಂದೃಬ್ಧಾನಿ' ಎಲೈ ! ಗೌತಮನೇ ಈ ಎಲ್ಲಾ ಲೋಕವು ಸಕಲ ಭೂತಗಳು ವಾಯುವನ್ನು ಆಶ್ರಯಿಸಿಕೊಂಡಿವೆ ಎಂಬ ಶ್ರುತಿಯು ದ್ಯುಭ್ವಾದ್ಯಾಯತನತ್ವವನ್ನು ವಾಯುದೇವತೆಯಲ್ಲಿ ಹೇಳುತ್ತಿದೆ. ಹೀಗೆ ರುದ್ರ, ಪ್ರಕೃತಿ, ಹಾಗೂ ವಾಯುದೇವತೆಯ ವಿಷಯದಲ್ಲಿ ಸಮಾಖ್ಯಾಪ್ರಮಾಣಗಳು ಕಾಣಿಸುತ್ತಿವೆ.

ಜೀವನೂ ಸಹ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಬಹುದು. ಏಕೆಂದರೆ ಜಾಯಮಾನತ್ವವೆಂಬ ಲಿಂಗವು ಆ ಪ್ರಕರಣದಲ್ಲಿ ಕೇಳಿಸುತ್ತಿದೆ.

ಪ್ರಶ್ನೆ - ನೀವು ಹೇಗೆ ರುದ್ರಾದಿಗಳ ವಿಷಯದಲ್ಲಿ ಸಮಾಖ್ಯಾಪ್ರಮಾಣವನ್ನು ನೀಡಿದಿರೋ, ಅದರಂತೆ 'ಲೋಕಾಶ್ಚ ಲೋಕಿನಶ್ಚ ವಿಷ್ಣಾವೇವೋತಾಶ್ಚ ಪ್ರೋತಾಶ್ಚ' ಎಂಬುದಾಗಿ ವಿಷ್ಣುವಿನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವು ಕಾಣಿಸುತ್ತಿದೆ. ಇದರ ಆಧಾರದಿಂದ ದ್ಯುಭ್ವಾದ್ಯಾಯತನನಾದವನು ವಿಷ್ಣುವಾಗಿದ್ದಾನೆಂದೂ ಸಹ ಹೇಳಬಹುದಲ್ಲವೇ?

ಉತ್ತರ - ಹಾಗೇ ಹೇಳಲಾಗದು ಏಕೆಂದರೆ ರುದ್ರನ ವಿಷಯದಲ್ಲಿ ಸಮಾಖ್ಯಾ-ಪ್ರಮಾಣವು ಅತ್ಯಂತ ಬಲಿಷ್ಠವಾಗಿದೆ - 'ಪ್ರಾಣಾನಾಂ ಗ್ರಂಥಿರಸಿ ರುದ್ರಃ, ಪ್ರಾಣೇಶ್ವರಃ ಕೃತ್ತಿವಾಸಾಃ ಪಿನಾಕೀ, ರುದ್ರೋ ವಾವ ಲೋಕಾಧಾರಃ' ಎಂಬುದಾಗಿ ರುದ್ರನ ವಿಷಯದಲ್ಲಿ ಪ್ರಾಣಾಧಾರತ್ವ, ಪ್ರಾಣೇಶ್ವರತ್ವ, ಕೃತ್ತಿವಾಸಸ್ ಮೊದಲಾದ ಶಬ್ದವಾಚ್ಯತ್ವ ಹೀಗೆ ಅನೇಕ ಶ್ರುತಿ ಹಾಗೂ ಲಿಂಗಗಳು ಕೇಳಿಸುತ್ತಿವೆ. ಇವುಗಳ ಆಧಾರದಿಂದ ರುದ್ರಸಮಾಖ್ಯೆಯು ಅತ್ಯಂತ ಬಲಿಷ್ಠವಾಗಿದೆಯೆಂದು ತಿಳಿಯುತ್ತದೆ.

ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ಬಾಹುಲ್ಯಂ ಲಿಂಗಶಬ್ದಾನಾಮ್' ಎಂಬ ಮಾತಿನಿಂದ ಲಿಂಗ ಹಾಗೂ ಶ್ರುತಿಗಳು ರುದ್ರನ ವಿಷಯದಲ್ಲಿ ಬಹಳ ಇವೆ ಎಂದು ಹೇಳಿರುತ್ತಾರೆ.

'ವಿಷ್ಣೋಃ ದ್ಯುಭ್ವಾದ್ಯಾಯತನತ್ವಪ್ರಸಿದ್ಧಾವಪಿ' ಇತ್ಯಾದಿ ಟೀಕೆಯಲ್ಲಿ ವಿಷ್ಣುವಿಷಯಕವಾದ-ಸಮಾಖ್ಯಾಪ್ರಮಾಣವನ್ನು ಬಾಧಿಸುವುದಕ್ಕಾಗಿ ಜಾಯಮಾನತ್ವಲಿಂಗವನ್ನು ಹೇಳಿರುತ್ತಾರೆ. ಏಕೆಂದರೆ ವಿಷ್ಣು ಸಮಾಖ್ಯೆಗಿಂತ ರುದ್ರ ಸಮಾಖ್ಯೆಯು ಶ್ರುತಿ, ಲಿಂಗಗಳ ಆಧಾರದಿಂದ ಪ್ರಬಲವಾಗಿರಬಹುದು. ಆದರೆ ವಾಯು ಹಾಗೂ ಪ್ರಕೃತಿ ವಿಷಯಕವಾದ ಸಮಾಖ್ಯಾಪ್ರಮಾಣಕ್ಕೆ ಶ್ರುತಿ ಹಾಗೂ ಲಿಂಗಗಳ ಬಲದಿಂದ ಪ್ರಾಬಲ್ಯವನ್ನು ಹೇಳಲು ಸಾಧ್ಯವಿಲ್ಲ; ಹೊರತಾಗಿ ಜಾಯಮಾನತ್ವದಿಂದಲೇ ಪ್ರಾಬಲ್ಯವನ್ನು ಹೇಳಬೇಕು. ಈ ಉದ್ದೇಶದಿಂದ ಜಾಯಮಾನತ್ವಲಿಂಗವನ್ನು ಟೀಕೆಯಲ್ಲಿ ಹೇಳಿರುತ್ತಾರೆ.

ಪ್ರಶ್ನೆ - ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣಕ್ಕಿಂತ ಉಳಿದವರ ಸಮಾಖ್ಯಾ-ಪ್ರಮಾಣವು ಬಲಿಷ್ಠವೆಂದು ಸಮರ್ಥಿಸಿದಿರಿ. ಆದರೆ 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಪ್ರಾರಂಭವಾಗಿರುವುದರಿಂದ ಇದು ವಿಷ್ಣುಪ್ರಕರಣವೆಂದು ನಿರ್ಣಯವಾಗುತ್ತದೆ. ಅಷ್ಟೇ ಅಲ್ಲದೆ 'ಅಮೃತಸ್ಯೈಷ ಸೇತುಃ' ಎಂಬುದಾಗಿ ಮುಕ್ತೋಪಸೃಪ್ಯತ್ವವೆಂಬ ವಿಷ್ಣುಲಿಂಗವೇ ಕೇಳಿಸುತ್ತಿದೆ. ವಿಷ್ಣುವಿಷಯಕವಾದ ಪ್ರಕರಣದಿಂದಾಗಲೀ, ಲಿಂಗದಿಂದಾಗಲೀ, ರುದ್ರವಿಷಯಕವಾದ ಸಮಾಖ್ಯಾಪ್ರಮಾಣವೇ ಬಾಧಿತವಾಗಬೇಕು.

ಮುಕ್ತೋಪಸೃಪ್ಯತ್ವವೇ ಮೊದಲಾದವುಗಳು ವಿಷ್ಣುವಿನ ಲಿಂಗಗಳಾಗಿವೆಯೆಂಬ ವಿಚಾರವು 'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' 'ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ' ಇತ್ಯಾದಿ ಸೂತ್ರಗಳಿಂದ ಸಿದ್ಧವಾಗಿದೆ. ಸಮಾಖ್ಯಾಪ್ರಮಾಣಕ್ಕಿಂತ ಲಿಂಗ ಹಾಗೂ ಪ್ರಕರಣಗಳು ಬಲಿಷ್ಠವಾಗಿರುವ ಕಾರಣ ವಿಷ್ಣುವೇ ದ್ಯುಭ್ವಾದ್ಯಾಯತನನಾಗಬೇಕು.

ಉತ್ತರ - ರುದ್ರವಿಷಯಕವಾದ ಸಮಾಖ್ಯಾಪ್ರಮಾಣವು ನಿರವಕಾಶವಾದ ಪ್ರಯುಕ್ತ ಅತ್ಯಂತ ಬಲಿಷ್ಠವಾಗಿದೆಯೆಂದು ಹೇಳುತ್ತೇವೆ.

ಪ್ರಶ್ನೆ - ರುದ್ರವಿಷಯಕವಾದ ಸಮಾಖ್ಯಾಪ್ರಮಾಣವು ನಿರವಕಾಶವಾಗಿಲ್ಲ. ಏಕೆಂದರೆ ಅಂತರಧಿಕರಣದ ನ್ಯಾಯದಿಂದ ರುದ್ರಾದಿಶಬ್ದಗಳೆಲ್ಲವೂ ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಅಂತಿಮಪ್ರಾಣಾಧಿಕರಣದಲ್ಲಿರುವ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಿಂದ ಏನಾಕಿತ್ವವೇ ಮೊದಲಾದ ಲಿಂಗಗಳೆಲ್ಲವೂ ಅಂತರ್ಯಾಮಿ ವಿವಕ್ಷೆಯಿಂದ ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಆದ್ದರಿಂದ ವಿಷ್ಣುವಿಷಯಕವಾದ ಲಿಂಗಪ್ರಕರಣಗಳೇ ಪ್ರಬಲವಾಗಬೇಕಲ್ಲವೇ?

ಉತ್ತರ - 'ಸ ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬ ಶ್ರುತಿಯಲ್ಲಿ ಜಾಯಮಾನತ್ವವೆಂಬ ಲಿಂಗವು ಕೇಳಿಸುತ್ತಿದೆ. ಈ ಲಿಂಗದಿಂದ ವಿಷ್ಣುವಿಷಯಕವಾದ ಲಿಂಗಾದಿಗಳು ಬಾಧಿತವಾಗುತ್ತವೆ. ವಿಷ್ಣುವಿನಲ್ಲಿ ಹುಟ್ಟುವಿಕೆಯನ್ನು ಹೇಳಲು ಸಾಧ್ಯವೇ ಇಲ್ಲ.

ಪ್ರಶ್ನೆ - 'ತಮೇವೈಕಂ ಜಾನಥ ಆತ್ಮಾನಮ್' ಎಂಬ ಆತ್ಮಶ್ರುತಿಯಿಂದ ಜಾಯಮಾನತ್ವವೆಂಬ ಲಿಂಗವೇ ಬಾಧಿತವಾಗುತ್ತದೆ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ವಿಷ್ಣುವಿಷಯಕವಾದ ಲಿಂಗವನ್ನು ಬಾಧಿಸಲು ಹೇಗೆ ಸಾಧ್ಯ ?

ಆತ್ಮಶಬ್ದವು ವಿಷ್ಣುವಿನಲ್ಲಿ ಮಾತ್ರ ಬರುತ್ತದೆಂಬ ವಿಚಾರವನ್ನು 'ಗೌಣಶ್ಚೇನ್ನಾತ್ಮಶಬ್ದಾತ್, ಸಾಧಾರಣಶಬ್ದವಿಶೇಷಾತ್' ಇತ್ಯಾದಿ ಸೂತ್ರಗಳಿಂದ ಸಾಧಿಸಲಾಗಿದೆ. ಆದ್ದರಿಂದ ಆತ್ಮಶ್ರುತಿಗೆ ಸಾವಕಾಶತ್ವವನ್ನು ಹೇಳಲು ಸಾಧ್ಯವಿಲ್ಲ.

ಇನ್ನು ಜೀವಾದಿ ವಿಷಯಕವಾದ ಜಾಯಮಾನತ್ವವೆಂಬ ಲಿಂಗವು ವಿಷ್ಣುವಿನಲ್ಲೇ ಸಾವಕಾಶವಾಗಿದೆ. ಏಕೆಂದರೆ 'ಕ್ರಿಯಾಪ್ರವರ್ತಕತ್ವೇನ ಪ್ರಾದುರ್ಭಾವೋ ಹರೇರ್ಜನಿಃ' ಎಂಬ ಆನಂದಮಯಾಧಿಕರಣದ ಅನುವ್ಯಾಖ್ಯಾನದಲ್ಲಿ, 'ಭಗವಂತನ ಪ್ರಾದುರ್ಭಾವವೇ ಅವನ ಹುಟ್ಟುವಿಕೆಯೆನಿಸುತ್ತಿದೆ'. ಎಂದು ಸಮರ್ಥಿಸಿದ್ದಾರೆ. 'ಕಾರಣತ್ವೇನ ಚಾಕಾಶಾದಿಷು' ಎಂಬ ಸೂತ್ರದಲ್ಲಿಯೂ ಸಹ ಭಗವಂತನ ಹುಟ್ಟುವಿಕೆಯೆಂಬ ಶಬ್ದಕ್ಕೆ ಪ್ರಾದುರ್ಭಾವ, ಅಭಿವ್ಯಕ್ತಿ ಮೊದಲಾದ ಅರ್ಥಗಳನ್ನೇ ಹೇಳಿದ್ದಾರೆ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ಸಾವಕಾಶವಾಗಿದೆ. ಇಂತಹ ಲಿಂಗದಿಂದ ವಿಷ್ಣುವಿಷಯಕವಾದ ಲಿಂಗ, ಪ್ರಕರಣಾದಿಗಳಿಗೆ ಬಾಧದೋಷವನ್ನು ಹೇಳಲು ಸಾಧ್ಯವೇ ಇಲ್ಲ. ಹೀಗಿರುವಾಗ ಕೇವಲ ಸಮಾಖ್ಯಾಪ್ರಮಾಣಗಳ ಆಧಾರದಿಂದ ರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗಿದ್ದಾರೆಂದು ಹೇಗೆ ಹೇಳುತ್ತೀರಿ?

ಆನಂದಮಯಾಧಿಕರಣದ ಅನುವ್ಯಾಖ್ಯಾನದಲ್ಲಿ ಜಾಯಮಾನತ್ವಲಿಂಗವನ್ನು ಸಾವಕಾಶವೆಂದು ಹೇಳಿದ್ದು ಸತ್ಯ. ಆದರೆ ಈ ಅಧಿಕರಣದ ಸಿದ್ಧಾಂತದಿಂದ ನಿರ್ಣಯವಾದ ಪ್ರಾದುರ್ಭಾವವೆಂಬ ಅರ್ಥವನ್ನು ವಿವಕ್ಷಿಸಿ ಅಲ್ಲಿ ಹೇಳಿದ್ದಾರೆ ಹೊರತು, ಆ ಅಧಿಕರಣದ ಸಿದ್ಧಾಂತವೆಂದು ಪರಿಗಣಿಸಿ ಜಾಯಮಾನತ್ವವು ಪ್ರಾದುರ್ಭಾವ ರೂಪವಾಗಿದೆಯೆಂದು ಹೇಳಿರುವುದಲ್ಲ; ಹೊರತು ಈ ಅಧಿಕರಣದ ಪೂರ್ವಪಕ್ಷ ಸಂದರ್ಭದಲ್ಲಿ ಜಾಯಮಾನತ್ವವು ಸಾವಕಾಶವಾಗಿಲ್ಲ.

'ಕಾರಣತ್ವೇನ ಚ ಆಕಾಶಾದಿಷು' ಎಂಬ ಸೂತ್ರದಲ್ಲಿಯೂ ಒಬ್ಬನೇ ವ್ಯಕ್ತಿಗೆ ಕಾರ್ಯಕಾರಣಭಾವವು ವಿರುದ್ಧವಾಗುತ್ತದೆಂಬ ಆಶಂಕೆಗೆ ಪರಿಹಾರವನ್ನು ನೀಡಿದ್ದಾರೆ

ಹೊರತು, ಈ ಅಧಿಕರಣದಲ್ಲಿ ಸಮರ್ಥಿಸುತ್ತಿರುವಂತೆ ಅಜನ್ಯನಾದ ಪರಮಾತ್ಮನಿಗೆ ಜನ್ಮವು ವಿರುದ್ಧವಾಗುತ್ತದೆಯಲ್ಲವೇ? ಎಂಬ ಶಂಕೆಯನ್ನು ಪರಿಹರಿಸುತ್ತಿಲ್ಲ. ಆದ್ದರಿಂದಲೇ 'ಕಾರಣತ್ವೇನ' ಎಂಬ ಸೂತ್ರದ ಟೀಕೆಯಲ್ಲಿ 'ಸ್ವಸ್ಯೈವ ಕಾರ್ಯಕಾರಣಭಾವೋ ವಿರುದ್ಧಃ' ತಾನೊಬ್ಬನಿಗೇ ಕಾರ್ಯ-ಕಾರಣ ಭಾವವು ವಿರುದ್ಧವಾಗುತ್ತದೆಂದು ಹೇಳಿದ್ದಾರೆ. ಅನುವ್ಯಾಖ್ಯಾನದಲ್ಲಿಯೂ ಸಹ 'ವಿರೋಧಃ ಕಾರ್ಯತದ್ವತೋಃ' ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಅಜನ್ಯನಾದ ಪರಮಾತ್ಮನಿಗೆ ಜಾಯಮಾನತ್ವವನ್ನು ಹೇಗೆ ಕೂಡಿಸಬೇಕೆಂಬ ವಿಚಾರವನ್ನು ಈ ಅಧಿಕರಣದಲ್ಲಿ ಮಾತ್ರ ಮಾಡುತ್ತಿದ್ದಾರೆ ಹೊರತು, ಬೇರೆ ಅಧಿಕರಣಗಳಲ್ಲಿ ಮಾಡಿರುವುದಿಲ್ಲ. ಹಾಗಾಗಿ ಜಾಯಮಾನತ್ವಲಿಂಗವನ್ನು ನಿರವಕಾಶವೆಂದು ವಿವಕ್ಷಿಸಿ ಪೂರ್ವಪಕ್ಷವನ್ನು ಮಾಡಬಹುದು.

ಜಾಯಮಾನತ್ವವೆಂಬ ಲಿಂಗವು ನಿರವಕಾಶವಾಗಿದೆಯೆಂಬುದನ್ನು ಹೀಗೆ ತಿಳಿಯಬೇಕು - ಜನನ ಹಾಗೂ ಮರಣಗಳು ಸಮಾನಾಧಿಕರಣವಾಗಿವೆಯೆಂದು ಲೋಕಪ್ರಸಿದ್ಧವಾಗಿವೆ. ಅಂದರೆ ಜನನವು ಯಾವ ವ್ಯಕ್ತಿಗಾಗುತ್ತದೋ, ಅವನಿಗೆ ಮರಣವೂ ಆಗಬೇಕು. ಮರಣವೆಂದರೆ ದೇಹತ್ಯಾಗವೆಂದರ್ಥ. ಇಂತಹ ಮರಣವನ್ನು ಚೇತನನಲ್ಲಿಯೇ ಹೇಳಬೇಕು. 'ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ' ಎಂಬುದಾಗಿ ಹುಟ್ಟುವಿಕೆ ಮೊದಲಾದ ಧರ್ಮಗಳನ್ನು ಹೊಂದಿದ ಚೇತನನಲ್ಲಿಯೇ ಜನನವು ಕೇಳಿಸುತ್ತಿದೆ.

ಜೀವನು ಅನಾದಿಯಾಗಿದ್ದರೂ ಸಹ ಶರೀರವನ್ನು ಸ್ವೀಕರಿಸುವಿಕೆಯೆಂಬ ಜನ್ಮವನ್ನು ಅವನಿಗೆ ಹೇಳಬಹುದು. ಅಥವಾ ಪರಾಧೀನವಿಶೇಷವಾಪ್ತಿಯೆಂಬ ಜನ್ಮವನ್ನು ಜೀವಾದಿಗಳಿಗೆ ಎಂದರೆ ಪ್ರಕೃತ್ಯಾದಿಗಳಿಗೆ ಹೇಳಬಹುದು. ಆದರೆ ಬ್ರಹ್ಮನಿಗೆ ಈ ಎರಡೂ ವಿಧದ ಜನ್ಮವನ್ನು ಹೇಳಲು ಸಾಧ್ಯವಿಲ್ಲವೆಂದು ಎರಡನೆಯ ಅಧ್ಯಾಯದಲ್ಲಿ ಸಮರ್ಥಿಸುತ್ತಾರೆ.

'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ವಾಕ್ಯವು ಜೀವನನ್ನು ಪ್ರತಿಪಾದಿಸುತ್ತಿದೆ ಹೊರತು ಬ್ರಹ್ಮನನ್ನಲ್ಲ. ಸ್ವರೂಪತಃ ಜೀವನಿಗೆ ಜನ್ಮವಿಲ್ಲದ ಕಾರಣ ಅಜಾಯಮಾನನೆನಿಸಿದ್ದಾನೆ. ದೇಹದ ಮೂಲಕವಾಗಿ ಜನನವಿರುವ ಪ್ರಯುಕ್ತ 'ಬಹುಧಾ ವಿಜಾಯತೇ' ಎಂದು ಅನೇಕ ಬಾರಿ ಹುಟ್ಟುತ್ತಾನೆಂದು ಕರೆಸಿಕೊಂಡಿದ್ದಾನೆ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ನಿರವಕಾಶವಾಗಿದೆ. ಭಾಷ್ಯದಲ್ಲಿ ಹೇಳಲ್ಪಟ್ಟ ಪ್ರಬಲವಾದ ಈ ಲಿಂಗದಿಂದ ದ್ಯುಭ್ವಾದ್ಯಾಯತನರಾದವರು ರುದ್ರಾದಿಗಳೇ ಆಗಿದ್ದಾರೆಂಬ ಪೂರ್ವಪಕ್ಷವನ್ನು ಮಾಡಬಹುದು.

ಅನುವ್ಯಾಖ್ಯಾನ ಹಾಗೂ ನ್ಯಾಯವಿವರಣೆಗಳಲ್ಲಿ ಹೇಳಲ್ಪಟ್ಟ ರುದ್ರಾದಿವಿಷಯಕವಾದ ಸಮಾಖ್ಯಾಪ್ರಮಾಣಗಳೂ ಸಹ ನಿರವಕಾಶವೇ ಆಗಿವೆ. ಏಕೆಂದರೆ ರುದ್ರಾದಿ ಸಮಾಖ್ಯಾಪ್ರಮಾಣಗಳಲ್ಲಿ ಯಾವುದೇ ವಿಷ್ಣುಲಿಂಗಗಳು ಕೇಳಿಸುತ್ತಿಲ್ಲ. ಆದ್ದರಿಂದ ರುದ್ರಾದಿಶಬ್ದಗಳು ಅಂತರಧಿಕರಣ ಮುಂತಾದ್ದರ ನ್ಯಾಯಕ್ಕೆ ವಿಷಯವಾಗಿರುವುದಿಲ್ಲ. ಒಂದು ವೇಳೆ ವಿಷ್ಣುಲಿಂಗಗಳು ಕೇಳಿಸುತ್ತಿದ್ದರೆ ಆವಾಗ ರುದ್ರ ಮೊದಲಾದ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುತ್ತಿದ್ದವು.

ಹೀಗೆ ಜಾಯಮಾನತ್ವಲಿಂಗದಿಂದ ಅಥವಾ ಸಮಾಖ್ಯಾಪ್ರಮಾಣದಿಂದ ಪೂರ್ವಪಕ್ಷವನ್ನು ಮಾಡಬಹುದೆಂದು ತಿಳಿಯಬೇಕು. ಇದರಂತೆ ಬೇರೆ ಪೂರ್ವಪಕ್ಷವನ್ನೂ ಸಹ ಟೀಕೆಯಲ್ಲಿ ಹೇಳಿದಂತೆ ಉಪಪಾದಿಸಬೇಕು. ಆತ್ಮಶಬ್ದಾದಿಗಳನ್ನು ನಿರವಕಾಶವಾದ ಜಾಯಮಾನತ್ವವೆಂಬ ಲಿಂಗಕ್ಕೆ ಅನುಸಾರಿಯಾಗಿ ಜೀವಾದಿಗಳಲ್ಲಿ ಹೇಗಾದರೂ ಕೂಡಿಸಬೇಕು. ಅಂದರೆ ವಿಷ್ಣು ಹಾಗೂ ಜೀವರಿಗೆ ಅಭೇದವಿರುವ ಪ್ರಯುಕ್ತ ಆತ್ಮಶಬ್ದವನ್ನು ಹಾಗೂ ಮುಕ್ತೋಪಸೃಪ್ಯತ್ವವೇ ಮೊದಲಾದ ಲಿಂಗಗಳನ್ನು ಜೀವನಲ್ಲಿ ಕೂಡಿಸಬೇಕೆಂದು ತಿಳಿಯಬೇಕು. ಹೀಗೆ ಜಾಯಮಾನತ್ವವೆಂಬ ಲಿಂಗದಿಂದ ರುದ್ರಾದಿ ಸಮಾಖ್ಯಾಪ್ರಮಾಣಗಳಿಂದ, ಹಾಗೂ ಅಭೇದವಿರುವ ಪ್ರಯುಕ್ತ ಪೂರ್ವಪಕ್ಷವು ಸ್ಥಾಪಿತವಾಗುತ್ತದೆ.

ನಾಕು ಪೂರ್ವಪಕ್ಷಗಳ ಉಪಸಂಹಾರ

भावदीपः – अभेदेन परविद्याविषयत्वादिब्रह्मलिङ्गानां जीवे सम्भवाच्चेत्यर्थः। तयोरित्युपलक्षणं मत्वा चतुर्णामुपसंहारः – विष्णितर इति ।।

ಜೀವ ಹಾಗೂ ಬ್ರಹ್ಮರಿಗೆ ಅಭೇದವಿರುವ ಪ್ರಯುಕ್ತ ಪರವಿದ್ಯಾವಿಷಯತ್ವವೇ ಮೊದಲಾದ ಬ್ರಹ್ಮಲಿಂಗಗಳೆಲ್ಲವೂ ಜೀವನಲ್ಲಿ ಬರಬಹುದೆಂದು ಅರ್ಥ. ''ತಯೋಃ'' ಎಂಬುದು ಉಪಲಕ್ಷಣವಾಗಿದೆ. ಆದ್ದರಿಂದ ನಾಲ್ಕು ಬಗೆಯ ಪೂರ್ವಪಕ್ಷದ ಉಪಸಂಹಾರವನ್ನು ''ವಿಷ್ಣ್ವಿತರಃ '' ಎಂದು ಹೇಳಿದ್ದಾರೆ.

ವಿಷ್ಣುರೇವ ಎಂಬ ಅವಧಾರಣದ ಅರ್ಥ

भावदीपः – एवेत्युक्तिस्तु चतुर्णां मध्येऽन्यतमानिर्णयेऽपि पूर्वपक्षस्य न सन्देहादविशेषः । विष्णितर एवेत्यवधारणसम्भवादिति दर्शयितुम् ।

उक्तमित्यन्तभाष्यतात्पर्यमाह – तस्यैवेति ।। 'तमेव' इति भाष्यं हेत्वसाध्ययो-र्वैय्यधिकरण्यनिरासाय व्याचष्टे – द्युभ्वादीति ।।

''ವಿಷ್ಣುರೇವ'' ಎಂಬಲ್ಲಿ ಅವಧಾರಣವನ್ನು ಮಾಡಿದ್ದರಿಂದ ನಾಲ್ಕರ ಮಧ್ಯದಲ್ಲಿ ಯಾರಾದರೊಬ್ಬರು ದ್ಯುಭ್ವಾದ್ಯಾಯತನರಾಗಬಹುದು. ಆದ್ದರಿಂದ ಪೂರ್ವಪಕ್ಷವು ಸಂದೇಹಕ್ಕಿಂತ ಭಿನ್ನವಾಗುವುದಿಲ್ಲವೆಂಬ ಗೊಂದಲಕ್ಕೆ ಅವಕಾಶವಿಲ್ಲ. ಏಕೆಂದರೆ ''ವಿಷ್ಣ್ವಿತರಃ ಏವ'' ಎಂಬ ಪ್ರಕಾರದಲ್ಲಿ ಪೂರ್ವಪಕ್ಷವನ್ನು ಮಾಡಬಹುದು. ''ಉಕ್ತಂ'' ಎಂಬಲ್ಲಿಯ ತನಕದ ಭಾಷ್ಯದ ತಾತ್ಪರ್ಯವನ್ನು ''ತಸ್ಯೈವ'' ಎಂಬುದರಿಂದ ಹೇಳುತ್ತಿದ್ದಾರೆ. ''ತಮೇವ'' ಎಂಬ ಭಾಷ್ಯವು ಹೇತು ಹಾಗೂ ಸಾಧ್ಯಗಳಿಗೆ ವ್ಯಧಿಕರಣವಾಗುತ್ತದೆ ಎಂಬ ಶಂಕೆಯನ್ನು ನಿರಾಕರಿಸುವುದಕ್ಕಾಗಿ ''ದ್ಯುಭ್ವಾದಿ'' ಎಂದು ವ್ಯಾಖ್ಯಾನಿಸುತ್ತಿದ್ದಾರೆ.

ಸಿದ್ಧಾಂತವು ಸೂತ್ರಕ್ಕೆ ವಿಸಂವಾದವಲ್ಲ

भावदीपः – सूत्रविसंवादनिरासाय स्वशब्दपर्यायात्मशब्दाच्च न प्रकृतिजीवावभिधीयेते इति तत्त्वनिर्णयोक्तमर्थमाह – स्वशब्देति ।। श्रुतौ स्वशब्दाभावाद्वाचकशब्दान्तरस्याप्यदर्शनादिति तट्टीकोक्तं तात्पर्यं ध्येयम् । अधिकं चन्द्रिकायाम् । तत्त्वित्यनुवृत्तस्यार्थः – विष्णुरेवेति ।। १ ।।

ಇಲ್ಲಿರುವ ಸಿದ್ಧಾಂತವು ಸೂತ್ರಕ್ಕೆ ವಿಸಂವಾದವಾಗಿಲ್ಲವೆಂದು ತಿಳಿಸುವುದಕ್ಕಾಗಿ ಸ್ವಶಬ್ದಕ್ಕೆ ಪರ್ಯಾಯಶಬ್ದವಾದ ಆತ್ಮಶಬ್ದದ ಬಲದಿಂದ ಪ್ರಕೃತಿಯಾಗಲಿ ಜೀವರಾಗಲಿ ಪ್ರತಿಪಾದ್ಯ-ರಾಗುವುದಿಲ್ಲವೆಂದು ಹೇಳಿದ್ದಾರೆ. ಇದು ತತ್ವನಿರ್ಣಯದಲ್ಲಿ ಹೇಳಿರುವ ಅರ್ಥವಾಗಿದೆ. ಈ ವಿವಕ್ಷೆಯಿಂದ ''ಸ್ವಶಬ್ದ'' ಇತ್ಯಾದಿ ವಾಕ್ಯವು ಹೊರಟಿದೆ. ಶ್ರುತಿಯಲ್ಲಿ ಸ್ವಶಬ್ದವು ಕೇಳಿಸುತ್ತಿಲ್ಲ ಬೇರೆ ಶಬ್ದಗಳು ಕೇಳಿಸುತ್ತಿಲ್ಲ ಎಂಬ ಶಂಕೆಗೆ ಅವಕಾಶವಿಲ್ಲ. ಹೆಚ್ಚಿನ ವಿಚಾರವನ್ನು ಚಂದ್ರಿಕೆಯಿಂದ ತಿಳಿಯಬೇಕು. ''ತತ್ತು'' ಎಂಬ ಅನುವೃತ್ತಿಯಿಂದ ತಿಳಿಯುವ ಅರ್ಥವನ್ನು ''ವಿಷ್ಣುರೇವ'' ಎಂದು ಹೇಳಿದ್ದಾರೆ.

ವಿಶೇಷವಿಚಾರ - ಸಿದ್ಧಾಂತ ಹೀಗಿದೆ - ಲೋಕದಲ್ಲಿ ಅಚೇತನ ಪದಾರ್ಥದ ಹುಟ್ಟುವಿಕೆಯು, ಚೇತನಪದಾರ್ಥದ ಹುಟ್ಟುವಿಕೆಗಿಂತ ವಿಲಕ್ಷಣವಾಗಿರುವುದು ಕಂಡಿದೆ. ಅದರಂತೆ ಚೇತನ ಹಾಗೂ ಅಚೇತನಗಳ ಹುಟ್ಟುವಿಕೆಗಿಂತ ಬ್ರಹ್ಮನ ಹುಟ್ಟುವಿಕೆಯು ವಿಲಕ್ಷಣವಾಗಿದೆ.

'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ವಾಕ್ಯದಿಂದ ಬ್ರಹ್ಮನಿಗೂ ಸಹ ಜನನವು ಇದೆಯೆಂಬುದು ಪ್ರಮಿತವಾಗಿದೆ. ಆದ್ದರಿಂದ ಪ್ರಸಿದ್ಧವಾದ ಚೇತನ ಹಾಗೂ ಅಚೇತನಗಳ ಜನನಕ್ಕಿಂತ ವಿಲಕ್ಷಣವಾದ ಪ್ರಾದುರ್ಭಾವವನ್ನು ಬ್ರಹ್ಮನ ಜನನವೆಂದು ಹೇಳಬಹುದು.

ಪರಮಾತ್ಮನಿಗೆ ಪ್ರಾದುರ್ಭಾವವೆಂಬ ಜನನವನ್ನೇ ಹೇಳಬೇಕು. ಏಕೆಂದರೆ ನಿರ್ದುಷ್ಟವಾದ ಚೈತನ್ಯಾತ್ಮಕವಾದ ನಿತ್ಯವಾದ ತನ್ನ ಸ್ವರೂಪವೇ ಆದ ಸುಖವನ್ನು ಹೊಂದಿದವನಾಗಿ ಬೇರೆ ಬೇರೆ ರೂಪಗಳಿಂದ ತನ್ನ ಶರೀರವನ್ನು ಪ್ರಕಟಪಡಿಸುತ್ತಾನೆ. ಇದನ್ನೇ ವಿಷ್ಣುವಿನ ಜನನವೆನ್ನಬಹುದು. ಬೇರೆ ರೀತಿಯ ಜನನವಿರುವುದಿಲ್ಲ. ಇತ್ಯಾದಿ ಸ್ಮೃತಿಗಳಿಂದ ಮತ್ಸ್ಯ, ಕೂರ್ಮ ಮೊದಲಾದ ರೂಪಗಳಿಂದ ಭಗವಂತನ ಪ್ರಾದುರ್ಭಾವವೇ ಜನನವೆನಿಸುತ್ತದೆಂದು ತಿಳಿಯುತ್ತದೆ.

'ಅಜಾಯಮಾನಃ' ಎಂಬ ವಾಕ್ಯವೂ ಸಹ ಬ್ರಹ್ಮಪರವೇ ಆಗಿದೆ. ಏಕೆಂದರೆ 'ತಮೇವಂ ವಿದ್ವಾನಮೃತ ಇಹ ಭವತಿ' ಇತ್ಯಾದಿಯಾಗಿ ಮುಕ್ತೋಪಸೃಪ್ಯತ್ವವೆಂಬ ನಿರವಕಾಶವಾದ ಲಿಂಗವಿರುವುದರಿಂದ ಮತ್ತು ಪುರುಷಸೂಕ್ತದಲ್ಲಿಯೂ ಹೇಳಿರುವುದರಿಂದ ಎಂದರೆ ಪುರುಷಸೂಕ್ತವು ವಿಷ್ಣುಪರವಾದ್ದರಿಂದ ಈ ವಾಕ್ಯವೂ ವಿಷ್ಣುಪರವೇ ಆಗುತ್ತದೆ. ಆದ್ದರಿಂದ ಜೀವಪರವಾಗಿ ಈ ವಾಕ್ಯವನ್ನು ಅರ್ಥೈಸಬಾರದು.

ಆದ್ದರಿಂದ ಸೂತ್ರದಲ್ಲಿರುವ 'ಸ್ವಶಬ್ದಾತ್' ಎಂಬ ಭಾಗದಿಂದ ತಿಳಿಸಿದ ಆತ್ಮಶ್ರುತಿಗೆ ಅನುಸಾರಿಯಾಗಿ ಜಾಯಮಾನತ್ವವೆಂಬ ಲಿಂಗವನ್ನೇ ಗೌಣವನ್ನಾಗಿ ಮಾಡಬೇಕು ಹೊರತು, ಜಾಯಮಾನತ್ವವೆಂಬ ಲಿಂಗದಿಂದ ಆತ್ಮಶ್ರುತಿಗೆ ಗೌಣಾರ್ಥವನ್ನು ಮಾಡಬಾರದು.

ರುದ್ರಾದಿಗಳ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವೂ ಸಾವಕಾಶವಾಗಿದೆ. ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಅನೇಕ ಶ್ರುತಿಸ್ಮೃತಿಗಳಿಂದ ರುದ್ರ, ಅಂತಕ ಮೊದಲಾದ ಶಬ್ದಗಳೆಲ್ಲವೂ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ. ಮುಕ್ತೋಪಸೃಪ್ಯತ್ವವೆಂಬ ಲಿಂಗವೂ ಸಹ ವಿಷ್ಣುವಿಷಯದಲ್ಲಿ ನಿರವಕಾಶವಾಗಿದೆಯೆಂದು ಭಾಷ್ಯದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದಾರೆ.

ಬ್ರಹ್ಮಸೂತ್ರ

'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। मुक्तोपसृप्यव्यपदेशात् ।। २ ।।

'ಅಮೃತಸ್ಯೈಷ ಸೇತುಃ' ಎಂಬುದಾಗಿ ಮುಕ್ತರಿಂದ ಪ್ರಾಪ್ಯನಾದವನು ಭಗವಂತನೆಂದು ಹೇಳಿರುವುದರಿಂದ ಆತ್ಮಶಬ್ದಕ್ಕೆ ಗೌಣನಾದ ಜೀವನೆಂಬ ಅರ್ಥವನ್ನು ಹೇಳಬಾರದು.

ದ್ಯುಭ್ವಾದ್ಯಾಯತನನಾದವನು ವಿಷ್ಣುವೇ; ಹೊರತು ಬೇರೆಯವರಲ್ಲ. ಏಕೆಂದರೆ, ಮುಕ್ತೋಪ-ಸೃಪ್ಯವ್ಯಪದೇಶಾತ್ = ಇದು ಭಾವಪ್ರಧಾನನಿರ್ದಿಷ್ಟವಾಗಿದೆ. ಅಂದರೆ ದ್ಯುಭ್ವಾದಿಗಳಿಗೆ ಆಶ್ರಯನಾದ ವ್ಯಕ್ತಿಗೆ 'ಅಮೃತಸ್ಯೈಷ ಸೇತುಃ' ಎಂಬುದಾಗಿ ಮುಕ್ತಪ್ರಾಪ್ಯತ್ವವನ್ನು ಹೇಳಲಾಗಿದೆ. ಇದು ಜೀವಾದಿಗಳಲ್ಲಿ ಕೂಡುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಮುಕ್ತಪ್ರಾಪ್ಯನೇ ಆತ್ಮಶಬ್ದವಾಚ್ಯ

ब्रह्मसूत्रभाष्यम् – 'अमृतस्यैष सेतुः' (मुं. २-२-५.) इति ।

ಅನುವಾದ - ಮುಕ್ತರಿಂದ ಹೊಂದಲ್ಪಡುವ ವ್ಯಕ್ತಿಯೇ ಆತ್ಮಶಬ್ದವಾಚ್ಯನೆಂದು 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯಲ್ಲಿ ಹೇಳಲಾಗಿದೆ. ಆದ್ದರಿಂದಲೂ ಪರಮಾತ್ಮನೇ ದ್ಯುಭ್ವಾದ್ಯಾಯತನ-ನಾಗುತ್ತಾನೆ.

ಪ್ರತಿಪದಾರ್ಥ -- ಆತ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿರಬಹುದು. ಆದರೆ ಜೀವನ ಲಕ್ಷಣಗಳು ಕೇಳಿಸುತ್ತಿರುವುದರಿಂದ ಅಮುಖ್ಯವಾಗಿ ಆತ್ಮಶಬ್ದವಾಚ್ಯನಾದ ಜೀವನನ್ನೇ ಏಕೆ ವಿವಕ್ಷಿಸಬಾರದು? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಅಮೃತಸ್ಯ = ಮುಕ್ತರ ಸಮುದಾಯಕ್ಕೆ, ಏಷಃ = ಈ ಪರಮಾತ್ಮನೇ, ಸೇತುಃ = ಆಶ್ರಯನಾಗಿದ್ದಾನೆ. ಇತಿ = ಹೀಗೆ ಮುಂಡಕಶ್ರುತಿಯು ಹೇಳಿದೆ.

ಮುಕ್ತಪ್ರಾಪ್ಯನಾದವನು ಮಹಾವಿಷ್ಣುವೇ

ब्रह्मसूत्रभाष्यम् –

'ब्रह्मविदाप्नोति परम् ।' (तै. २–१.)
'नारायणं महाज्ञेयं विश्वाऽत्मानं परायणम्' (महाना.११)
'मुक्तानां परमा गतिः' (महाभा.)
'एतमानन्दमयमात्मानमुपसङ्क्रामति' (तै. २–८.)

इत्यादिना तस्यैव मुक्तप्राप्यत्वव्यपदेशात् ।

ಅನುವಾದ – ತೈತ್ತಿರೀಯದಲ್ಲಿಯೂ ಹೀಗೆ ಹೇಳಲಾಗಿದೆ – 'ಯಾರು ಬ್ರಹ್ಮನನ್ನು ತಿಳಿಯುತ್ತಾನೋ ಅವನು ಬ್ರಹ್ಮನನ್ನೇ ಹೊಂದುತ್ತಾನೆ' ಎಂದು. ಮಹಾನಾರಾಯಣೋಪನಿಷತ್ತಿನಲ್ಲಿ 'ಎಲ್ಲ ಜಗತ್ತು ವಿಶೇಷವಾಗಿ ತಿಳಿಯಲು ಯೋಗ್ಯನಾದ ಎಲ್ಲೆಡೆ ವ್ಯಾಪ್ತನಾದ ನಾರಾಯಣನನ್ನು ಆಶ್ರಯಿಸಿಕೊಂಡಿದೆ' ಎಂದು ಹೇಳಲಾಗಿದೆ.

ಮಹಾಭಾರತದಲ್ಲಿ 'ಮುಕ್ತರಿಗೆ ಮುಖ್ಯಾಶ್ರಯನಾಗಿರುವವನು ವಿಷ್ಣುವೇ ಆಗಿದ್ದಾನೆ' ಎಂದು ಹೇಳಲಾಗಿದೆ.

ತೈತ್ತಿರೀಯೋಪನಿಷತ್ತಿನಲ್ಲಿ 'ಆನಂದಸ್ವರೂಪನಾದ ಬ್ರಹ್ಮಶಬ್ದದಿಂದ ಪ್ರಸಿದ್ಧನಾದ ಪರಮಾತ್ಮನನ್ನು ಮುಕ್ತರು ಹೊಂದುತ್ತಾರೆ' ಎಂದು ಹೇಳಲಾಗಿದೆ.

ಇವೇ ಮೊದಲಾದ ಅನೇಕಪ್ರಮಾಣಗಳಿಂದ ಆ ಪರಮಾತ್ಮನೇ ಮುಕ್ತರಿಂದ ಹೊಂದಲು ಯೋಗ್ಯನಾಗಿದ್ದಾನೆಂಬ ಮಾತುಗಳನ್ನು ಕೂಡಿಸಬೇಕು.

ಪ್ರತಿಪದಾರ್ಥ --ದ್ಯುಭ್ವಾದ್ಯಾಯತನತ್ವಕ್ಕೆ ಮುಕ್ತಪ್ರಾಪ್ಯತ್ವವು ಹೇತುವಾಗಿದೆ-ಯೆಂದು ಹೇಗೆ ಹೇಳುತ್ತೀರಿ ? ಎಂದು ಆಶಂಕಿಸಿ ಪರಿಹರಿಸುತ್ತಿದ್ದಾರೆ.

ಬ್ರಹ್ಮವಿತ್ = ಪರಬ್ರಹ್ಮನನ್ನು ತಿಳಿದವನು, ಪರಂ = ಮೋಕ್ಷವನ್ನು, ಆಪ್ನೋತಿ = ಹೊಂದುತ್ತಾನೆ, ಮತ್ತು ಮಹಾಜ್ಞೇಯಂ = ವಿಶೇಷವಾಗಿ ತಿಳಿಯಲು ಅರ್ಹನಾದ, ವಿಶ್ವಾತ್ಮಾನಂ = ಎಲ್ಲೆಡೆ ವ್ಯಾಪ್ತನಾದ,

ನಾರಾಯಣಂ = ಶ್ರೀಮನ್ನಾರಾಯಣನನ್ನು ಪರಾಯಣಂ ಮುಕ್ತರಿಗೆ ಆಶ್ರಯನನ್ನಾಗಿ ತಿಳಿ.

ಮತ್ತು ಮುಕ್ತಾನಾಂ = ಮುಕ್ತರಿಗೆ, ಪರಮಾಗತಿಃ = ಮುಖ್ಯಾಶ್ರಯನಾದವನು ವಿಷ್ಣುವೇ ಆಗಿದ್ದಾನೆ.

ಮತ್ತು ಆನಂದಮಯಂ = ಆನಂದಸ್ವರೂಪನಾದ, ಏತಂ = ಬ್ರಹ್ಮಶಬ್ದ-ಪ್ರತಿಪಾದ್ಯನಾದ, ಆತ್ಮಾನಂ = ಪರಮಾತ್ಮನನ್ನು, ಉಪಸಂಕ್ರಾಮತಿ = ಮುಕ್ತರು ಹೊಂದುತ್ತಾರೆ. ಇತ್ಯಾದಿನಾ = ಇವೇ ಮೊದಲಾದ ಪ್ರಮಾಣದಿಂದ, ತಸ್ಯೈವ = ಆ ಪರಮಾತ್ಮನಿಗೇ, ಮುಕ್ತಪ್ರಾಪ್ಯತ್ವವ್ಯಪದೇಶಾತ್ = ಮುಕ್ತರಿಂದ ಹೊಂದುವಿಕೆಯನ್ನು ಹೇಳಿರುವುದರಿಂದ.

ಮುಖ್ಯಪ್ರಾಪ್ಯತ್ವವೆಂದರೆ ಏನು ?

ಬ್ರಹ್ಮಸೂತ್ರಭಾಷ್ಯಮ್ –

'बहुनाऽत्र किमुक्तेन यावच्छ्वेतं न गच्छति ।
योगी तावन्न मुक्तः स्यादेष शास्त्रस्य विनिर्णयः ।।'

इत्यादित्यपुराणे ।।२।।

'ಹೆಚ್ಚು ಏಕೆ ಮಾತನಾಡಬೇಕು? ಯಾರು ಅಪರೋಕ್ಷಜ್ಞಾನಿಯಾಗಿರುತ್ತಾನೋ ಅವನು ಶ್ವೇತದ್ವೀಪವೆಂಬ ವಿಷ್ಣುವಿನ ಸ್ಥಳವನ್ನು ಹೊಂದಿ ಅವನ ದರ್ಶನವನ್ನು ಪಡೆಯುವ ತನಕ ಪರಮಾತ್ಮನ ಇಚ್ಛಾರೂಪವಾದ ಆವರಣವನ್ನು ಕಳೆದುಕೊಳ್ಳಲಾರ' ಹೀಗೆ ಆದಿತ್ಯಪುರಾಣದಲ್ಲಿ ಹೇಳಲಾಗಿದೆ.

ಪ್ರತಿಪದಾರ್ಥ -- ಅತ್ರ = ಈ ವಿಷಯದಲ್ಲಿ, ಬಹುನಾ = ಹೆಚ್ಚಾದ, ಉಕ್ತೇನ = ಹೇಳುವುದರಿಂದ, ಕಿಂ = ಏನು ಪ್ರಯೋಜನ? ಯೋಗಿಃ = ಅಪರೋಕ್ಷಜ್ಞಾನಿಯು ಯಾವತ್ = ಎಲ್ಲಿಯ ತನಕ, ಶ್ವೇತಂ = ಶ್ವೇತದ್ವೀಪದಲ್ಲಿರುವ ಭಗವಂತನನ್ನು, ನ ಗಚ್ಛತಿ = ಹೊಂದುವುದಿಲ್ಲವೋ, ತಾವತ್ = ಅಲ್ಲಿಯ ತನಕ, ಮುಕ್ತಃ = ಮುಕ್ತನು, ನ = ಆಗುವುದಿಲ್ಲ. ಏಷಃ = ಇದೇ, ಶಾಸ್ತ್ರಸ್ಯ = ಸಕಲಶಾಸ್ತ್ರಗಳ, ನಿರ್ಣಯಃ = ನಿಶ್ಚಯವು, ಇತಿ =

ಹೀಗೆ, ಆದಿತ್ಯಪುರಾಣೇ = ಆದಿತ್ಯಪುರಾಣದಲ್ಲಿ ಹೇಳಲಾಗಿದೆ. ಈ ಎಲ್ಲ ಕಾರಣಗಳಿಂದ ಮುಕ್ತಪ್ರಾಪ್ಯನಾಗಿ ಆತ್ಮಶಬ್ದವಾಚ್ಯನಾದವನು ವಿಷ್ಣುವೇ ಆಗುತ್ತಾನೆ ಅಂತಹ ವಿಷ್ಣುವೇ ದ್ಯುಭ್ವಾದ್ಯಾಯತನನೂ ಸಹ ಆಗುತ್ತಾನೆಂದು ತಿಳಿಯಬೇಕು.

ಸತ್ತರ್ಕದೀಪಾವಳಿ

ಮುಕ್ತರಿಗೆ ಆಶ್ರಯ ಶ್ವೇತದ್ವೀಪ

सत्तर्कदीपावलिः – 'ब्रह्मविदाप्नोति परम्' इत्यादिवचनान्तरैः विष्णुरेव हि मुक्ताश्रयत्वेनोच्यते । तदाह – मुक्तेत्यादिना ।। पराणां मुक्तानाम् अयनं श्रुतं श्वेतद्वीपाख्यं विष्णुस्थानमित्यर्थः ।

'ಬ್ರಹ್ಮವಿದಾಪ್ನೋತಿ ಪರಮ್' ಇವೇ ಮೊದಲಾದ ಬೇರೆ ಬೇರೆ ಶ್ರುತಿಗಳ ಮಾತುಗಳಿಂದ ಮಹಾವಿಷ್ಣುವೇ ಮುಕ್ತರಿಗೆ ಆಶ್ರಯನಾಗಿದ್ದಾನೆಂದು ಹೇಳಲಾಗಿದೆ. ಅದನ್ನೇ ಪ್ರಕೃತ ಭಾಷ್ಯದಲ್ಲಿ ಹೇಳುತ್ತಿದ್ದಾರೆ.

'ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್' ಎಂಬಲ್ಲಿ 'ಪರಾಯಣಂ' ಎಂಬ ಪದಕ್ಕೆ ಮುಕ್ತರಿಗೆ ಶ್ವೇತದ್ವೀಪವೆಂಬ ವಿಷ್ಣುವಿನ ಸ್ಥಾನವು ಆಶ್ರಯವಾಗಿದೆ ಎಂದು ಅರ್ಥ.

ತತ್ತ್ವಪ್ರಕಾಶಿಕಾ

ಆತ್ಮಶಬ್ದಕ್ಕೆ ಅಮುಖ್ಯಾರ್ಥವನ್ನು ಸ್ವೀಕರಿಸಬಹುದೇ ?

तत्त्वप्रकाशिका – ननु विष्णौ मुख्योऽप्यात्मशब्दो जीवलिङ्गबलादमुख्यार्थः किं न स्यात् । तथा च न विष्णोर्द्युभ्वाद्यायतनत्वमित्याशङ्कां परिहरत्सूत्रमुपन्यस्य तदुपात्तश्रुतिमेवोदाहरति – मुक्तेति ।।

ಆತ್ಮಶಬ್ದವು ವಿಷ್ಣುವನ್ನೇ ಪ್ರಧಾನವಾಗಿ ಪ್ರತಿಪಾದಿಸಬಹುದು. ಆದರೆ ಬಹುಧಾ-ಜಾಯಮಾನತ್ವ ಮೊದಲಾದ ಜೀವನ ಲಿಂಗಗಳಿರುವುದರಿಂದ ಆತ್ಮಶಬ್ದಕ್ಕೆ ಅಮುಖ್ಯಾರ್ಥವನ್ನೇಕೆ ಸ್ವೀಕರಿಸಬಾರದು? ಅಮುಖ್ಯಾರ್ಥನಾದ ಜೀವನೆಂಬರ್ಥವನ್ನು ಸ್ವೀಕರಿಸಿದರೆ ವಿಷ್ಣು ದ್ಯುಭ್ವಾದ್ಯಾಯತನನಾಗುವುದಿಲ್ಲ. ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ, ಸೂತ್ರದಿಂದ ಸೂಚಿತವಾದ ಶ್ರುತಿಯನ್ನೇ ಉದಾಹರಿಸುತ್ತಿದ್ದಾರೆ ''ಮುಕ್ತ'' ಇತ್ಯಾದಿ ಭಾಷ್ಯದಿಂದ.

ದ್ಯುಭ್ವಾದ್ಯಾಯತನನೇ ಮುಕ್ತರಿಂದ ಪ್ರಾಪ್ಯ

तत्वप्रकाशिका – नाऽत्मशब्दस्यामुख्यार्थत्वं परिकल्प्य द्युभ्वाद्यायतनत्व-मन्यत्र नेतुं शक्यम् । द्युभ्वाद्यायतनस्य मुक्तप्राप्यत्वोक्तेर्विष्णुत्व-निश्चयादित्यर्थः । 'अमृतस्य' इति जातावेकवचनम् । मुक्तप्राप्यत्वं कुतो विष्णुत्वनिश्चायकम्? इत्यत आह – ब्रह्मविदिति ।।

ಆತ್ಮಶಬ್ದಕ್ಕೆ ಅಮುಖ್ಯಾರ್ಥನಾದ ಜೀವನೆಂಬರ್ಥವನ್ನು ಪರಿಕಲ್ಪಿಸಿ ದ್ಯುಭ್ವಾದ್ಯಾಯತನತ್ವವೆಂಬ ಧರ್ಮವನ್ನುಬೇರೆ ಕಡೆ ಒಯ್ಯಲು ಸಾಧ್ಯವಿಲ್ಲ. ಏಕೆಂದರೆ ಯಾವ ವ್ಯಕ್ತಿಯು ದ್ಯುಭ್ವಾದ್ಯಾಯತನನಾಗಿದ್ದಾನೋ ಅಂತಹವನು ಮುಕ್ತರಿಂದ ಪ್ರಾಪ್ಯನಾಗಿದ್ದಾನೆಂದು ಹೇಳಿರುವ ಕಾರಣ ಆ ವ್ಯಕ್ತಿಯು ವಿಷ್ಣುವೇ ಆಗಬೇಕು. 'ಅಮೃತಸ್ಯ' ಎಂಬಲ್ಲಿರುವ ಏಕವಚನವು ಸಮುದಾಯಾಭಿಪ್ರಾಯದಲ್ಲಿದೆ. ಮುಕ್ತಪ್ರಾಪ್ಯತ್ವವು ಹೇಗೆ ವಿಷ್ಣುನಿಶ್ಚಾಯಕ? ಎಂಬ ಪ್ರಶ್ನೆಗೆ ''ಬ್ರಹ್ಮವಿತ್'' ಎಂಬುದರಿಂದ ಉತ್ತರಿಸಿದ್ದಾರೆ.

ಬೇರೆಯವರು ಮುಕ್ತರಿಂದ ಪ್ರಾಪ್ಯರಲ್ಲ

तत्वप्रकाशिका – पराणां मुक्तानामयनमाश्रयः । एतद्वाक्यैरस्तु विष्णोर्मुक्तप्राप्यत्वं तदन्यस्यापि किं न स्यादित्यत आह – बह्वनेति ।।२।।

''ಪರಾಯಣಂ'' ಎಂಬಲ್ಲಿರುವ 'ಪರ'ಶಬ್ದಕ್ಕೆ ಮುಕ್ತರಿಗೆ ಎಂದರ್ಥ. 'ಅಯನಂ' ಎಂದರೆ ಆಶ್ರಯನಾಗಿದ್ದಾನೆಂದರ್ಥ. ಈ ವಾಕ್ಯಗಳಿಂದ ವಿಷ್ಣುವಿಗೆ ಮುಕ್ತಪ್ರಾಪ್ಯತ್ವಧರ್ಮವು ಬರಲಿ,

ಆದರೆ ಬೇರೆಯವರಲ್ಲಿಯೂ ಬರಬಹುದಲ್ಲವೇ? ಎಂಬ ಪ್ರಶ್ನೆಗೆ ''ಬಹುನಾ'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಭಾವದೀಪ

ಸೂತ್ರಕ್ಕೆ ಅವತಾರಿಕೆ

ಭಾವದೀಪಃ – मुक्तोपसृप्यव्यपदेशात् ।। सूत्रे चशब्दाभावात् पूर्वहेतोरन्यथोपपत्तिनिरासकत्वेनावतारयति – नन्विति ।।

ಸೂತ್ರದಲ್ಲಿ ''ಚ'' ಶಬ್ದವಿಲ್ಲದಕಾರಣ ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ ಹೇತು ಅನ್ಯಥಾ ಉಪಪನ್ನವಾಗುತ್ತದೆ ಎಂಬ ಆಶಂಕೆಯನ್ನು ನಿರಾಕರಿಸುವುದಕ್ಕಾಗಿ ಸೂತ್ರಕ್ಕೆ ಅವತಾರಿಕೆಯನ್ನು ಹೇಳುತ್ತಿದ್ದಾರೆ ''ನನು'' ಇತ್ಯಾದಿ ವಾಕ್ಯದಿಂದ.

ಸೂತ್ರದಲ್ಲಿ ಸಾಧ್ಯದ ಅಧ್ಯಾಹಾರವು ಆವಶ್ಯಕ

ಭಾವದೀಪಃ – इत्यन्तभाष्यस्य सूत्रेणान्वयमुपेत्य भावप्राधान्येन योग्यसाध्याध्याहारपूर्वं सूत्रार्थमाह – नाऽत्मशब्दस्येति ।। मुक्तानामिति वाक्यमनुरुध्याऽह – जाताविति ।।

''ಇತಿ'' ಎಂಬಲ್ಲಿಯತನಕದ ಭಾಷ್ಯಕ್ಕೆ ಅನ್ವಯವನ್ನು ಒಪ್ಪಿ ಭಾವಪ್ರಧಾನ ನಿರ್ದೇಶದಿಂದ ಯೋಗ್ಯವಾದ ಸಾಧ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂಬ ವಿವಕ್ಷೆಯಿಂದ ಸೂತ್ರಾರ್ಥವನ್ನು ಹೇಳುತ್ತಿದ್ದಾರೆ ''ನಾऽತ್ಮಶಬ್ದಸ್ಯ'' ಇತ್ಯಾದಿಯಾಗಿ. ''ಮುಕ್ತಾನಾಂ'' ಎಂದು ಬಹುವಚನವಿರುವುದರಿಂದ ಇದಕ್ಕೆ ಅನುಸಾರಿಯಾಗಿ ''ಜಾತೌ'' ಎಂದು ಹೇಳಿದ್ದಾರೆ.

'ವಿಷ್ಣುರೇವ' ಎಂದೇಕೆ ಭಾಷ್ಯದಲ್ಲಿ ಹೇಳಿರುವರು ?

ಭಾವದೀಪಃ – भाष्ये तस्यैवेत्यस्य विष्णोरेवेत्यर्थमुपेत्यावतारयति – मुक्तप्राप्यत्वमिति ।। प्रकृतोपयोगायार्थमाह – पराणामिति ।।

ಭಾಷ್ಯದಲ್ಲಿರುವ ''ತಸ್ಯೈವ'' ಎಂಬ ಪದಕ್ಕೆ 'ವಿಷ್ಣುವಿಗಷ್ಟೇ' ಎಂಬ ಅರ್ಥವನ್ನು ಅಂಗೀಕರಿಸಿ ಅವತಾರಿಕೆ ನೀಡುತ್ತಿದ್ದಾರೆ ''ಮುಕ್ತಪ್ರಾಪ್ಯತ್ವಂ'' ಇತ್ಯಾದಿಯಾಗಿ. ಪ್ರಕೃತಕ್ಕೆ ಉಪಯೋಗವಾಗುವುದಕ್ಕಾಗಿ ಅರ್ಥವನ್ನು ''ಪರಾಣಾಂ'' ಎಂಬುದರಿಂದ ಹೇಳಿದ್ದಾರೆ.

'ಪರಾಣಾಂ' ಇತ್ಯಾದಿ ಟೀಕೆಯ ವ್ಯಾಖ್ಯಾನ

भावदीपः – विश्वात्मानं विश्वस्वामिनम् । द्वितीयान्तानां 'तद् विश्वमुपजीवति' इति पूर्वोक्तकर्तृक्रियाभ्यामन्वयः ।। २ ।।

''ವಿಶ್ವಾತ್ಮಾನಂ''ಎಂಬ ಶಬ್ದಕ್ಕೆ ವಿಶ್ವಕ್ಕೆ ಸ್ವಾಮಿಯಾದವನನ್ನು ಎಂದರ್ಥ. ದ್ವಿತೀಯಾಂತವಾದ ಶಬ್ದಗಳಿಗೆ ಹಿಂದೆ ಹೇಳಿದ ಕರ್ತೃಕ್ರಿಯೆಗಳೊಂದಿಗೆ ಅನ್ವಯ ಮಾಡಬೇಕು.

ವಿಶೇಷವಿಚಾರ - 'ಮುಕ್ತೋಪಸೃಪ್ಯ ವ್ಯಪದೇಶಾತ್' ಎಂಬ ಎರಡನೆಯ ಸೂತ್ರವು ವಿಷಯವಾಕ್ಯಕ್ಕಿಂತ ಸ್ವಲ್ಪವೇ ವ್ಯವಹಿತವಾದ ಲಿಂಗವೆಂಬ ಸಾಧಕ ಪ್ರಮಾಣವನ್ನು ಹೇಳುತ್ತಿದೆ. ವಿಷಯವಾಕ್ಯಕ್ಕೆ ಹತ್ತಿರವಿರುವ ಮುಕ್ತೋಪಸೃಪ್ಯತ್ವವೆಂಬ ಲಿಂಗವನ್ನು ಹೇಳುತ್ತಿರುವ ಪ್ರಯುಕ್ತ ಮೊದಲನೆಯ ಸೂತ್ರದ ಅನಂತರ ಈ ಸೂತ್ರವು ಹೊರಟಿದ್ದು ಅರ್ಥಪೂರ್ಣವಾಗಿದೆ.

ದ್ಯುಭ್ವಾದ್ಯಾಯತನನಾಗಿರುವವನು ವಿಷ್ಣುವೇ ಆಗಿದ್ದಾನೆನ್ನಲು ಪ್ರಥಮಸೂತ್ರದಲ್ಲಿ ಆತ್ಮಶಬ್ದವನ್ನು ಆಧಾರವನ್ನಾಗಿ ಹೇಳಿದರು. ಅದೇ ವಿಷಯದಲ್ಲಿ ಮುಕ್ತೋಪಸೃಪ್ಯತ್ವವೆಂಬ ಲಿಂಗವನ್ನು ಈ ಸೂತ್ರವು ಹೇಳುತ್ತಿರುವ ಕಾರಣ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಬೇಕಿತ್ತಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಟೀಕೆಯಲ್ಲಿ ಹೇಳಿದ ಪ್ರಕಾರ ಪ್ರಥಮಸೂತ್ರದಲ್ಲಿ ಆತ್ಮಶ್ರುತಿಯನ್ನು ಆಧಾರವನ್ನಾಗಿ ಹೇಳಿದಮೇಲೆ ಜಾಯಮಾನತ್ವವೆಂಬ ನಿರವಕಾಶಲಿಂಗದಿಂದ ಜೀವನಲ್ಲಿ ಆತ್ಮಶಬ್ದವನ್ನು ಆಕ್ಷೇಪಿಸಲಾಗಿದೆ. ಆ ಆಕ್ಷೇಪವನ್ನು ನಿರಾಕರಿಸುವುದಕ್ಕೋಸ್ಕರ ಈ ಸೂತ್ರವು ಹೊರಡುತ್ತಿದೆ. ಅಂದರೆ ಪ್ರಥಮಸೂತ್ರದ ಮೇಲೆ ಬರುವ ಆಕ್ಷೇಪದ ನಿರಾಕರಣೆಗಾಗಿ ಈ ಸೂತ್ರ ಹೊರಟಿರುವುದರಿಂದ ಚ ಶಬ್ದದ ಆವಶ್ಯಕತೆ ಇರುವುದಿಲ್ಲ. ಜಾಯಮಾನತ್ವವೆಂಬ ಲಿಂಗದಿಂದ ಬರುವ ಆಕ್ಷೇಪಕ್ಕಿಂತ ಮೊದಲು ಈ ಸೂತ್ರ ಸ್ವತಂತ್ರವಾಗಿ ಹೊರಡಲು ಸಾಧ್ಯವಿಲ್ಲ.

ಸೂತ್ರದಲ್ಲಿರುವ 'ಉಪಸೃಪ್ಯತ್ವ' ಎಂಬ ಹೇತುವಿಗೆ ಶ್ರುತಿಯಲ್ಲಿರುವ ಸೇತು ಶಬ್ದದಿಂದ 'ಪ್ರಾಪ್ಯಾಂತರರಹಿತತ್ವೇ ಸತಿ ಪ್ರಾಪ್ಯತ್ವಮ್' ಎಂಬರ್ಥವನ್ನು ಹೇಳಿದಂತಾಗುತ್ತದೆ.

ಹೀಗೆ ಹೇಳದಿದ್ದರೆ ಮುಕ್ತಿಯನ್ನು ಕುರಿತು ಹೊರಡುವ ವ್ಯಕ್ತಿಯು ಅರ್ಚಿರ್ಲೋಕ, ಅಹರ್ಲೋಕ ಇವುಗಳ ಮಾರ್ಗದಲ್ಲಿ ಹೋಗುವುದರಿಂದ ಆಯಾ ಲೋಕಗಳ ಅಭಿಮಾನಿ ದೇವತೆಗಳಲ್ಲಿಯೂ ಮುಕ್ತಪ್ರಾಪ್ಯತ್ವವು ಬರಬೇಕಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿರುವ ಸೇತು ಶಬ್ದದಿಂದ ಮತ್ತೊಬ್ಬರು ಪ್ರಾಪ್ಯರಿರಬಾರದು ಮತ್ತು ಪ್ರಾಪ್ಯನಾಗಿರಬೇಕೆಂಬ ಅರ್ಥವನ್ನು ವಿವಕ್ಷಿಸಬೇಕು. ಈಗ ವಿಷ್ಣುವನ್ನು ಹೊಂದಿದ ಮೇಲೆ ಬೇರೆ ಯಾರನ್ನೂ ಸಹ ಹೊಂದದ ಕಾರಣ ಮುಕ್ತಪ್ರಾಪ್ಯತ್ವವು ವಿಷ್ಣುವಿನಲ್ಲಿ ಮಾತ್ರ ಬರುತ್ತದೆ.

ಆದ್ದರಿಂದಲೇ ಶ್ರೀಮದಾಚಾರ್ಯರು ಭಾಷ್ಯದಲ್ಲಿ 'ಅಮೃತಸ್ಯೈಷ ಸೇತುಃ' ಎಂಬ ಸೇತುಪದ ಘಟಿತವಾಗಿರುವಂತಹ ವಿಷಯವಾಕ್ಯವನ್ನೇ ಉದಾಹರಿಸಿದ್ದಾರೆ ಹೊರತು, 'ಪರಾತ್ಪರಂ ಪುರುಷಮುಪೈತಿ' ಎಂಬ ವಾಕ್ಯವನ್ನು ಉದಾಹರಿಸಿಲ್ಲ. ಏಕೆಂದರೆ ಸೇತು ಪದವು ಯಾವ ಅರ್ಥವನ್ನು ಹೇಳುತ್ತಿದೆಯೋ? ಆ ಅರ್ಥವನ್ನು ಇಲ್ಲಿರುವ 'ಉಪೈತಿ' ಎಂಬ ಪದವು ಹೇಳುತ್ತಿಲ್ಲ. ಆದ್ದರಿಂದ ಮುಕ್ತೋಪಸೃಪ್ಯತ್ವವೆಂಬ ಲಿಂಗಕ್ಕೆ ವ್ಯಭಿಚಾರಾದಿ ದೋಷಗಳು ಬರುವುದಿಲ್ಲ.

ಬ್ರಹ್ಮಸೂತ್ರ

'ನಾऽನುಮಾನಮತಚ್ಛಬ್ದಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। नाऽनुमानमतच्छब्दात् ।। ३ ।।

ಅನುಮಾನಸಿದ್ಧವಾದ ಪ್ರಾಮಾಣ್ಯವುಳ್ಳ ಆನುಮಾನಂ = ಪಾಶುಪತ, ಸಾಂಖ್ಯ ಮೊದಲಾದ ಶಾಸ್ತ್ರಗಳಲ್ಲಿ ಉಲ್ಲೇಖಿಸಲ್ಪಟ್ಟ ರುದ್ರಪ್ರಕೃತ್ಯಾದಿಗಳು ದ್ಯುಭ್ವಾದಿಲೋಕಗಳಿಗೆ ಆಶ್ರಯರಾಗುವುದಿಲ್ಲ. ಅವರನ್ನು ಹೇಳುವ ಶಬ್ದಗಳು ಈ ಪ್ರಕರಣದಲ್ಲಿ ಕಾಣಿಸುವುದಿಲ್ಲ.

ಅನುಮಾನಮ್ = ಅನುಮಾನಸಿದ್ಧವಾದ ಪ್ರಾಮಾಣ್ಯದಿಂದ ಕೂಡಿರುವ ಪಾಶುಪತಾದ್ಯಾಗಮಗಳಿಂದ ದ್ಯುಭ್ವಾದಿಗಳಿಗೆ ಆಶ್ರಯನೆಂದು ಊಹಿಸಲ್ಪಟ್ಟ ರುದ್ರ, ಪ್ರಧಾನ ಮೊದಲಾದವುಗಳು, ನ = ದ್ಯುಭ್ವಾದ್ಯಾಶ್ರಯರು ಆಗುವುದಿಲ್ಲ. ಏಕೆಂದರೆ ಅತಚ್ಛಬ್ದಾತ್ = ಭಸ್ಮಧರ ಮೊದಲಾದ ಶಬ್ದಗಳು ಉಗ್ರತ್ವ ಮೊದಲಾದ ಲಿಂಗಗಳು ಇಲ್ಲದಿರುವುದರಿಂದ.

ಬ್ರಹ್ಮಸೂತ್ರಭಾಷ್ಯ

ರುದ್ರನು ದ್ಯುಭ್ವಾದ್ಯಾಯತನನಲ್ಲ

ब्रह्मसूत्रभाष्यम् – नानुमानात्मकाऽगमपरिकल्पितरुद्रोऽत्र वाच्यः ।

ಅನುವಾದ - ಅನುಮಾನರೂಪವಾದ ಶೈವಾಗಮದಿಂದ ಕಲ್ಪಿತನಾದ ರುದ್ರನು ದ್ಯುಭ್ವಾದ್ಯಾಯತನ ಮೊದಲಾದ ಶಬ್ದಗಳಿಂದ ವಾಚ್ಯನೆಂದು ಅಥರ್ವಣಶ್ರುತಿಯಿಂದ ಸಾಧಿಸಲಾಗುವುದಿಲ್ಲ.

ಪ್ರತಿಪದಾರ್ಥ -- ಹಿಂದೆ ಹೇಳಿದ ಪ್ರಕಾರ ರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗಬಹುದಲ್ಲವೇ ಎಂಬ ಪ್ರಶ್ನೆಗೆ ಪೂರ್ವಪಕ್ಷ ವಿಷಯದಲ್ಲಿ ಯಾವುದೇ ಸಾಧಕಪ್ರಮಾಣಗಳಿಲ್ಲವೆಂದು ಸೂತ್ರಕಾರರು ಹೇಳುತ್ತಿದ್ದಾರೆ.

ಅತ್ರ = ಅಥರ್ವಣಶ್ರುತಿಯಲ್ಲಿ, ಅನುಮಾನಾಗಮಪರಿಕಲ್ಪಿತಃ = ಸ್ವತಃ ಪ್ರಾಮಾಣ್ಯವಿಲ್ಲದ ಅನುಮಾನದಿಂದ ಅಥವಾ ಶೈವಾಗಮದಿಂದ ಕಲ್ಪಿತನಾದ, ರುದ್ರಃ = ರುದ್ರನು, ಅತ್ರ = ಅಥರ್ವಣಶ್ರುತಿಯಿಂದ, ನ ವಾಚ್ಯಃ = ದ್ಯುಭ್ವಾದ್ಯಾಯತನಶಬ್ದಗಳಿಂದ ವಾಚ್ಯನಾಗುವುದಿಲ್ಲ.

ರುದ್ರನಿಗೆ ಸಂಬಂಧಪಟ್ಟ ಯಾವುದೇ ಲಿಂಗಗಳು ಕೇಳಿಸುತ್ತಿಲ್ಲ

ब्रह्मसूत्रभाष्यम् – भस्मधरोग्रत्वादितच्छब्दाभावात् ।

ಅನುವಾದ - ಏಕೆಂದರೆ ರುದ್ರನಿಗೆ ಸಂಬಂಧಿಸಿದ ಭಸ್ಮಧರ ಮೊದಲಾದ ಹೆಸರುಗಳಾಗಲೀ ಉಗ್ರತ್ವ, ಕ್ರೂರತ್ವ ಮೊದಲಾದ ಲಿಂಗಗಳಾಗಲೀ ಇಲ್ಲಿ ಕೇಳಿಸುತ್ತಿಲ್ಲ.

ಪ್ರತಿಪದಾರ್ಥ -- ಸೂತ್ರದಲ್ಲಿರುವ ಪ್ರತಿಜ್ಞಾಭಾಗವನ್ನು ವ್ಯಾಖ್ಯಾನಿಸಿ ಹೇತುಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಭಸ್ಮಧರ = ಭಸ್ಮವಿಭೂಷಿತನು, ಉಗ್ರತ್ವ = ಭಯಂಕರನು, ಇವೇ ಮೊದಲಾದ, ತಚ್ಛಬ್ದಾಃ = ರುದ್ರಪ್ರತಿಪಾದಕವಾದ ಶಬ್ದಗಳು ಹಾಗೂ ಲಿಂಗಗಳು, ಅಭಾವಾತ್ = ಇಲ್ಲಿ ಕೇಳಿಸದ ಕಾರಣ ವಿಷ್ಣುವೇ ಶ್ರುತಿಪ್ರತಿಪಾದ್ಯನಾಗಿದ್ದಾನೆ.

ಇಲ್ಲಿರುವ ಧರ್ಮಗಳು ವಿಷ್ಣುವಿಗೆ ಮಾತ್ರ ಸಂಬಂಧಪಟ್ಟವೆ

ब्रह्मसूत्रभाष्यम् – 'सोऽन्तकः स रुद्रः स प्राणभृत् स प्राणनायकः स ईशो यो हरिर्योऽनन्तो यो विष्णुर्यः परोवरीयान्' इत्यादिना प्राणग्रन्थिरुद्रत्वादेर्विष्णोरेवोक्तत्वात् ।

ಅನುವಾದ - ಯಾವ ವ್ಯಕ್ತಿಯು ಸಂಹಾರಕಾರಣನೆಂದು ಶ್ರುತಿ ಹೇಳಿದೆಯೋ ಅವನು ವಿಷ್ಣುವೇ ಆಗಿದ್ದಾನೆ. ಮತ್ತು ಯಾವ ವ್ಯಕ್ತಿಯು ರುದ್ರನೆಂದು ಕೇಳಿಸುತ್ತಿದ್ದಾನೋ ಅವನೇ ಮುಖ್ಯಪ್ರಾಣ-ಧಾರಕನೆಂದೂ, ಸಕಲಪ್ರಾಣಿನಿಯಾಮಕನೆಂದೂ, ಈಶ್ವರಶಬ್ದವಾಚ್ಯನೂ, ಸರ್ವೋತ್ತಮನೂ, ಬ್ರಹ್ಮರುದ್ರಾದಿಗಳಿಗಿಂತ ಶ್ರೇಷ್ಠನೂ ಆಗಿದ್ದಾನೆಂದು ಹೇಳಲ್ಪಟ್ಟಿದ್ದಾನೆ. ಈ ಎಲ್ಲ ವಿಶೇಷಣಗಳೂ ವಿಷ್ಣುವಿನಲ್ಲೇ ಯುಕ್ತವಾಗುತ್ತದೆಂದು ಅನೇಕ ಪ್ರಮಾಣಗಳ ಆಧಾರದಿಂದ ಸಿದ್ಧವಾಗುತ್ತದೆ. ಆದ್ದರಿಂದ ಪ್ರಾಣಗ್ರಂಥಿತ್ವ, ರುದ್ರತ್ವಮೊದಲಾದ ಧರ್ಮಗಳು ವಿಷ್ಣುವಿಗೆ ಮಾತ್ರ ಸಂಬಂಧ ಪಟ್ಟಿರುತ್ತವೆ.

ಪ್ರತಿಪದಾರ್ಥ -- ಆಥರ್ವಣೋಪನಿಷತ್ತಿನಲ್ಲಿ ರುದ್ರಾದಿ ಜ್ಞಾಪಕವಾದ ಲಿಂಗಗಳು ಇಲ್ಲದಿರಬಹುದು ಆದರೆ ಮಹಾನಾರಾಯಣೋಪನಿಷತ್ತಿನಲ್ಲಿ ಪ್ರಾಣಾಧಾರತ್ವವೇ ಮೊದಲಾದ ಲಿಂಗಗಳಿರುವುದರಿಂದ ಸಮಾಖ್ಯಾ-ಶ್ರುತಿಯ ಆಧಾರದಿಂದ ರುದ್ರನನ್ನು ದ್ಯುಭ್ವಾದ್ಯಾಯತನನೆಂದು ಹೇಳಬಹುದಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಯಃ = ಯಾವ ವ್ಯಕ್ತಿಯು, ಹರಿಃ = ಹರಿಯೆಂಬ ಶಬ್ದದಿಂದ ಪ್ರತಿಪಾದ್ಯ-ನಾಗಿದ್ದಾನೋ, ಯಃ = ಯಾವಾತನು, ಅನಂತಃ = ನಾಶವಿಲ್ಲದವನು, ಯಃ = ಯಾವಾತನು, ವಿಷ್ಣುಃ = ವಿಷ್ಣುಪದವಾಚ್ಯನೋ, ಸಃ = ಅವನೇ, ಅಂತಕಃ = ಅಂತಕ ಎಂಬ ಪದದಿಂದ ಪ್ರತಿಪಾದ್ಯನು, ಸಃ = ಅವನೇ, ರುದ್ರಃ = ರುದ್ರಪದವಾಚ್ಯನು, ಸಃ = ಅವನೇ, ಪ್ರಾಣಭೃತ್ = ಮುಖ್ಯಪ್ರಾಣಗಳಿಗೆ ಆಶ್ರಯನು, ಸಃ = ಅವನೇ, ಪ್ರಾಣನಾಯಕಃ = ಸಕಲ ಪ್ರಾಣಿಗಳಿಗೆ ನಿಯಾಮಕನು, ಸಃ = ಅವನೇ, ಈಶಃ = ಈಶ್ವರಶಬ್ದದಿಂದ ಪ್ರತಿಪಾದ್ಯನು. ಮತ್ತು ಪರಃ = ಸರ್ವೋತ್ತಮನು, ಪರೋವರೀಯಾನ್ = ರುದ್ರನಿಂದ ಉತ್ತಮಳಾದ ಸರಸ್ವತೀದೇವಿಗಿಂತ ಶ್ರೇಷ್ಠನಾದ ಬ್ರಹ್ಮನಿಗಿಂತ ಉತ್ತಮಳಾದ ಲಕ್ಷ್ಮೀದೇವಿಗಿಂತ ಉತ್ತಮ-ನಾದ್ದರಿಂದ ಪರೋವರೀಯಾನ್ ಎನಿಸಿರುವವನು. ಇತ್ಯಾದಿನಾ =

ಇವೇ ಮೊದಲಾದ ಪ್ರಮಾಣಗಳಿಂದ, ಪ್ರಾಣಗ್ರಂಥಿ = ಪ್ರಾಣಾಧಾರಕತ್ವ, ರುದ್ರತ್ವಾದೇಃ = ರುದ್ರಾದಿ ಪದವಾಚ್ಯತ್ವ ಮೊದಲಾವುಗಳು, ವಿಷ್ಣೋರೇವ = ವಿಷ್ಣುವಿಗೆ ಮಾತ್ರ, ಉಕ್ತತ್ವಾತ್ = ಹೇಳಲ್ಪಟ್ಟವೆ.

ರುದ್ರಾದಿಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯ

ब्रह्मसूत्रभाष्यम् – ब्रह्माण्डे च –

'रुजं द्रावयते यस्माद् रुद्रस्तस्माज्जनार्दनः ।
ईशानादेव चेशानो महादेवो महत्त्वतः ।।
पिबन्ति ये नरा नाकं मुक्ताः संसारसागरात् ।
तदाधारो यतो विष्णुः पिनाकीति ततः (श्रुतः)स्मृतः[१] ।।
शिवः सुखात्मकत्वेन शर्वः शंरोधनाद्धरिः ।
कृत्त्यात्मकमिमं देहं यतो वस्ते प्रवर्तयन् ।।
कृत्तिवासास्ततो देवो विरिञ्चश्च विरेचनात् ।
बृंहणाद् ब्रह्मनामाऽसावैश्वर्यादिन्द्र उच्यते ।।

ಅನುವಾದ - ಬ್ರಹ್ಮಾಂಡಪುರಾಣದಲ್ಲಿ ಹೀಗೆ ಹೇಳಲಾಗಿದೆ – 'ರೋಗವನ್ನು ನಾಶಮಾಡುವುದರಿಂದ ಜನಾರ್ದನನು ರುದ್ರನೆನಿಸಿದ್ದಾನೆ. ಜಗತ್ತನ್ನು ನಿಯಮನ ಮಾಡುವುದರಿಂದ ಈಶಾನ ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಸರ್ವೋತ್ತಮನಾದ್ದರಿಂದ ಪ್ರಕಾಶಮಾನನಾಗಿದ್ದಾನೆ. ಅವನೇ ಮಹಾದೇವ ಎಂಬ ಶಬ್ದಪ್ರತಿಪಾದ್ಯನು, ಸಂಸಾರಸಾಗರದಿಂದ ಮುಕ್ತರಾದವರು ಪರಮಸುಖವನ್ನು ಅನುಭವಿಸುವ ಕಾರಣ ಅವರು ಪಿನಾಕರು ಎನಿಸುತ್ತಾರೆ. ಅಂತಹವರಿಗೆ ಆಧಾರನಾದ್ದರಿಂದ ಭಗವಂತನಿಗೆ 'ಪಿನಾಕೀ' ಎಂಬ ಹೆಸರು ಬಂದಿದೆ. ಸುಖಿಸ್ವರೂಪನಾದ್ದರಿಂದ ಶಿವ ಎನಿಸಿದ್ದಾನೆ. ಉತ್ತಮಜೀವರ ಸ್ವರೂಪಭೂತವಾದ ಸುಖವನ್ನು ಮೋಕ್ಷದ ತನಕ ಅನುಭವಕ್ಕೆ ಬಾರದಂತೆ ತಡೆ ಹಿಡಿಯುವ ಕಾರಣ ಶರ್ವ ಎನಿಸಿದ್ದಾನೆ. ಚರ್ಮಮಯವಾದ ಈ ಶರೀರವನ್ನು ಪ್ರೇರಣೆ ಮಾಡುವುದರಿಂದ ಕೃತ್ತಿವಾಸ ಎನಿಸಿದ್ದಾನೆ. ಜಗತ್ತನ್ನು ತನ್ನ ಹೊಟ್ಟೆಯಿಂದ ಹೊರಹಾಕುವುದರಿಂದ ವಿರಿಂಚ ಎನಿಸಿದ್ದಾನೆ. ಗುಣಪೂರ್ಣತ್ವವನ್ನು ಹೊಂದಿರುವ ಕಾರಣ ಬ್ರಹ್ಮ ಎನಿಸಿದ್ದಾನೆ. ಐಶ್ವರ್ಯವುಳ್ಳವನಾದ್ದರಿಂದ ಇಂದ್ರನಾಗಿದ್ದಾನೆ' ಎಂಬುದಾಗಿ.

(೧) 'ಶ್ರುತಃ ಎಂಬ ಪ್ರಚಲಿತ ಪಾಠ, 'ಸ್ಮೃತಃ' ಎಂಬುದು ಪ್ರಾಚೀನ ಪಾಠ.

ಪ್ರತಿಪದಾರ್ಥ -- ಸಮಾಖ್ಯಾಶ್ರುತಿಯಿಂದ ರುದ್ರಾದಿಶಬ್ದಗಳು ವಿಷ್ಣುವನ್ನು ಹೇಗೆ ಪ್ರತಿಪಾದಿಸಲು ಸಾಧ್ಯ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಬ್ರಹ್ಮಾಂಡೇ ಚ = ಬ್ರಹ್ಮಾಂಡಪುರಾಣದಲ್ಲೂ ಹೀಗೆ ಹೇಳಲಾಗಿದೆ

ಜನಾರ್ದನಃ = ಶ್ರೀಮನ್ನಾರಾಯಣನು, ರುಜಂ = ಸಂಸಾರರೋಗವನ್ನು, ದ್ರಾವಯತೇ = ನಾಶಮಾಡುತ್ತಾನೆ, ತಸ್ಮಾತ್ = ಆ ಕಾರಣದಿಂದ, ರುದ್ರಃ = ರುದ್ರ ಎಂಬ ಪದದಿಂದ ಪ್ರತಿಪಾದ್ಯನು. ಮತ್ತು ಈಶಾನಾತ್ = ಜಗತ್ತನ್ನು ಪ್ರೇರಣೆ ಮಾಡುವ ಕಾರಣ, ಈಶಾನಃ = ಈಶ ಎಂಬ ಶಬ್ದದಿಂದ ಪ್ರತಿಪಾದ್ಯನು. ಮಹತ್ವತಃ = ಸರ್ವೋತ್ತಮನಾದ್ದರಿಂದ, ಮಹಾದೇವಃ = ಮಹಾದೇವಶಬ್ದವಾಚ್ಯನು. ಸಂಸಾರಸಾಗರಾತ್ = ಸಮುದ್ರದಂತಿರುವ ಸಂಸಾರದಿಂದ, ಮುಕ್ತಾಃ = ಮುಕ್ತರಾದ, ಯೇ ನರಾಃ = ಯಾವ ಸಜ್ಜನರು, ನಾಕಂ = ದುಃಖರಹಿತವಾದ ಸುಖವನ್ನು, ಪಿಬಂತಿ = ಅನುಭವಿಸುತ್ತಾರೋ, ಯತಃ = ಯಾವ ಕಾರಣದಿಂದ, ತೇಷಾಂ = ಅಂತಹ ಮುಕ್ತರಿಗೆ, ವಿಷ್ಣುಃ = ಭಗವಂತನು, ತದಾಧಾರಃ = ಆಶ್ರಯನಾಗಿದ್ದಾನೋ, ತತಃ = ಆ ಕಾರಣದಿಂದಲೇ, ಪಿನಾಕೀ = ಪಿನಾಕೀ ಎಂಬ ಶಬ್ದದಿಂದ, ಶ್ರುತಃ = ಶ್ರುತಿಗಳಿಂದ ಪ್ರಮಿತನಾದವನು. ಹರಿಃ = ಪರಮಾತ್ಮನು, ಸುಖಾತ್ಮಕತ್ವಾತ್ = ಸುಖಸ್ವರೂಪನಾದ್ದರಿಂದ, ಶಿವಃ = ಶಿವಶಬ್ದವಾಚ್ಯನು, ಶಂ = ಸುಖವನ್ನು, ರೋಧನಾತ್ = ಮುಕ್ತಿಯೋಗ್ಯರಿಗೆ ತಡೆದು ಹಿಡಿದಿದ್ದರಿಂದ, ಶರ್ವಃ = ಶರ್ವಶಬ್ದವಾಚ್ಯನು. ಕೃತ್ತ್ವಾತ್ಮಕಂ = ಚರ್ಮಮಯವಾದ, ಇಮಂ = ಈ, ದೇಹಂ = ಶರೀರವನ್ನು, ಪ್ರವರ್ತಯನ್ = ಪ್ರೇರಣೆಮಾಡುವವನಾಗಿ, ಯತಃ = ಯಾವ ಕಾರಣದಿಂದ, ವಸ್ತೇ = ವಾಸ ಮಾಡಿದ್ದಾನೋ, ತತಃ = ಆ ಕಾರಣದಿಂದ, ಕೃತ್ತಿವಾಸಾಃ = ಕೃತ್ತಿವಾಸಾ ಎಂಬ ಪದದಿಂದ ಪ್ರತಿಪಾದ್ಯನು. ವಿರೇಚನಾತ್ = ಜಗತ್ತನ್ನು ಹೊರಹಾಕುವುದರಿಂದ, ವಿರಿಂಚಃ = ವಿರಿಂಚ ಪದದಿಂದ ವಾಚ್ಯನು, ಬೃಂಹಣಾತ್ = ಪೂರ್ಣನಾದ್ದರಿಂದ, ಅಸೌ = ಈ ಪರಮಾತ್ಮನೇ, ಬ್ರಹ್ಮನಾಮ = ಬ್ರಹ್ಮ ಎಂಬ ಶಬ್ದದಿಂದ ಪ್ರತಿಪಾದ್ಯನು, ಐಶ್ವರ್ಯಾತ್ = ಐಶ್ವರ್ಯವುಳ್ಳವ-

ನಾದ್ದರಿಂದ, ಇಂದ್ರಃ = ಇಂದ್ರಶಬ್ದವಾಚ್ಯನು, ಹೀಗೆ, ಉಚ್ಯತೇ = ಪ್ರತಿಪಾದ್ಯನಾಗಿದ್ದಾನೆ.(ಹೇಳಲ್ಪಟ್ಟಿದ್ದಾನೆ).

ನಾನಾವಿಧ ಶಬ್ದಗಳಿಂದ ತ್ರಿವಿಕ್ರಮನೇ ಪ್ರತಿಪಾದ್ಯ

ಬ್ರಹ್ಮಸೂತ್ರಭಾಷ್ಯಮ್ –

'ಏವಂ ನಾನಾವಿಧೈಃ ಶಬ್ದೈರೇಕ ಏವ ತ್ರಿವಿಕ್ರಮಃ ।
ವೇದೇಷು ಸಪುರಾಣೇಷು ಗೀಯತೇ ಪುರುಷೋತ್ತಮಃ ।।' ಇತಿ ।

ಅನುವಾದ - ಹೀಗೆ ಅನೇಕವಿಧವಾದ ಶಬ್ದಗಳಿಂದ ಒಬ್ಬನೇ ತ್ರಿವಿಕ್ರಮರೂಪಿಯಾದ ಪರಮಾತ್ಮನನ್ನು ಅನೇಕಶ್ರುತಿ ಹಾಗೂ ಪುರಾಣಗಳಲ್ಲಿ ಸ್ತೋತ್ರಮಾಡಲಾಗಿದೆ.

ಪ್ರತಿಪದಾರ್ಥ -- ಇಲ್ಲಿಯ ತನಕ ರುದ್ರಾದಿಶಬ್ದಗಳಿಗೆ ವಿಷ್ಣುವಿನಲ್ಲಿ ಮಹಾಯೋಗವನ್ನು ಹೇಳಿದ್ದಾಯಿತು. ಈಗ ವಿದ್ವದ್‌ರೂಢಿಯನ್ನು ಹೇಳುತ್ತಿದ್ದಾರೆ.

ಏವಂ = ಈ ರೀತಿಯಾಗಿ, ನಾನಾವಿಧೈಃ = ಅನೇಕವಿಧವಾದ, ಶಬ್ದೈಃ = ಪದಗಳಿಂದ, ತ್ರಿವಿಕ್ರಮಃ = ಮಹಾಪರಾಕ್ರಮಿಯಾದ, ಏಕ ಏವ = ಒಬ್ಬನೇ ಭಗವಂತನು, ಸಪುರಾಣೇಷು = ಪುರಾಣಗಳಿಂದ ಸಹಿತವಾದ, ವೇದೇಷು = ಶ್ರುತಿಗಳಲ್ಲಿ, ಪುರುಷೋತ್ತಮಃ ಇತಿ = ಕ್ಷರಾಕ್ಷರ-ಪುರುಷರಿಗಿಂತ ಉತ್ತಮನೆಂದು, ಗೀಯತೇ = ಕರೆಸಿಕೊಂಡಿದ್ದಾನೆ.

ವಾಮನಪುರಾಣದಿಂದ ಸರ್ವಶಬ್ದ ವಾಚ್ಯತ್ವ

ಬ್ರಹ್ಮಸೂತ್ರಭಾಷ್ಯಮ್ – ವಾಮನೇ ಚ –

'ನ ತು ನಾರಾಯಣಾದೀನಾಂ ನಾಮ್ನಾಮನ್ಯತ್ರ ಸಮ್ಭವಃ ।
ಅನ್ಯನಾಮ್ನಾಂ ಗತಿರ್ವಿಷ್ಣುರೇಕ ಏವ ಪ್ರಕೀರ್ತಿತಃ ।।' ಇತಿ ।

ಅನುವಾದ - ವಾಮನಪುರಾಣದಲ್ಲಿ ಹೀಗಿದೆ – ರುದ್ರ ಮೊದಲಾದ ನಾಮಗಳು ಭಗವಂತನನ್ನು ಪ್ರತಿಪಾದಿಸಬಹುದು. ಆದರೆ ನಾರಾಯಣ ಮೊದಲಾದ ನಾಮಗಳು ಬೇರೆ ಯಾರನ್ನೂ ಪ್ರತಿಪಾದಿಸುವುದಿಲ್ಲ ಎಂದು.

ಪ್ರತಿಪದಾರ್ಥ -- ರುದ್ರಾದಿಶಬ್ದಗಳು ವಿಷ್ಣುಪರವೆಂದು ಹೇಳಿದಿರಿ. ಇದರಂತೆ ನಾರಾಯಣಾದಿ ಶಬ್ದಗಳೂ ಸಹ ರುದ್ರಪರವೇ ಆಗಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ವಾಮನೇ ಚ = ವಾಮನಪುರಾಣದಲ್ಲೂ ಹೀಗಿದೆ. ನಾರಾಯಣಾದೀನಾಂ = ನಾರಾಯಣ ಮೊದಲಾದ, ನಾಮ್ನಾಂ = ನಾಮಾತ್ಮಕವಾದ ಪದಗಳಿಗೆ, ಅನ್ಯತ್ರ = ವಿಷ್ಣುವನ್ನು ಬಿಟ್ಟು ಬೇರೆ ದೇವತೆಗಳಲ್ಲಿ, ಸಂಭವಃ = ಪ್ರತಿಪಾದ್ಯತ್ವವು, ನತು = ಕೂಡುವುದಿಲ್ಲ. ಆನ್ಯನಾಮ್ನಾಂ = ರುದ್ರ ಮೊದಲಾದ ಬೇರೆ ಶಬ್ದಗಳಿಗೆ, ವಿಷ್ಣುಃ = ನಾರಾಯಣನು, ಏಕ ಏವ = ಒಬ್ಬನೇ, ಗತಿಃ = ಆಶ್ರಯನು, ಇತಿ = ಹೀಗೆ, ಪ್ರಕೀರ್ತಿತಃ = ಪ್ರಮಾಣಗಳಿಂದ ಕರೆಸಿಕೊಂಡಿದ್ದಾನೆ.

ನಾರಾಯಣನು ದೇವತೆಗಳಿಂದ ತನ್ನ ಹೆಸರುಗಳನ್ನು ನೀಡಿದ್ದಾನೆ

ಬ್ರಹ್ಮಸೂತ್ರಭಾಷ್ಯಮ್ – ಸ್ಕಾನ್ದೇ ಚ –

'ಋತೇ ನಾರಾಯಣಾದೀನಿ ನಾಮಾನಿ ಪುರುಷೋತ್ತಮಃ ।
ಪ್ರಾದಾದನ್ಯತ್ರ ಭಗವಾನ್ ರಾಜೇವರ್ತೇ ಸ್ವಕಂ ಪುರಮ್ ।।' ಇತಿ ।

ಅನುವಾದ - ಸ್ಕಾಂದಪುರಾಣದಲ್ಲೂ ಹೀಗಿದೆ 'ಯಾವ ರೀತಿಯಾಗಿ ರಾಜನಾದವನು ತನ್ನ ರಾಜ್ಯವನ್ನು ಬಿಟ್ಟು ಇತರ ಸಣ್ಣ ಸಣ್ಣ ಪ್ರದೇಶಗಳನ್ನು ಉಳಿದ ಸಾಮಂತರಾಜರಿಗೆ ಬಿಟ್ಟು ಕೊಡುತ್ತಾನೋ ಅದರಂತೆ ಪುರುಷೋತ್ತಮನಾದ ಭಗವಂತನು ನಾರಾಯಣ ಮೊದಲಾದ ಕೆಲವು ವಿಶೇಷವಾದ ತನ್ನ ಹೆಸರುಗಳನ್ನು ತನ್ನಲ್ಲೇ ಇಟ್ಟುಕೊಂಡು ಬೇರೆ ಹೆಸರುಗಳನ್ನು ಮಾತ್ರ ದೇವತೆಗಳಿಗೆ ನೀಡಿದ್ದಾನೆ' ಎಂದು.

ಪ್ರತಿಪದಾರ್ಥ -- ರುದ್ರ ಮೊದಲಾದ ಶಬ್ದಗಳು ಭಗವಂತನ ಹೆಸರೇ ಆಗಿದ್ದರೂ ರುದ್ರಾದಿಗಳನ್ನು ಪ್ರತಿಪಾದಿಸುವಂತೆ ನಾರಾಯಣಾದಿ ಶಬ್ದಗಳೂ ಸಹ ರುದ್ರಾದಿಗಳನ್ನು ಏಕೆ ಪ್ರತಿಪಾದಿಸಬಾರದು ಎಂಬ ಪ್ರಶ್ನೆ ಉತ್ತರಿಸುತ್ತಿದ್ದಾರೆ.

ಸ್ಕಾಂದೇ ಚ = ಸ್ಕಾಂದಪುರಾಣದಲ್ಲೂ, ನಾರಾಯಣಾದೀನಿ = ನಾರಾಯಣ ಮೊದಲಾದ, ನಾಮಾನಿ = ಹೆಸರುಗಳನ್ನು, ಋತೇ = ಬಿಟ್ಟು,
ನಾಮಾನಿ = ಉಳಿದ ಹೆಸರುಗಳನ್ನು, ಅನ್ಯತ್ರ = ಬೇರೆ ಜಗತ್ತಿಗೆ, ಪುರುಷೋತ್ತಮಃ = ಕ್ಷರಾಕ್ಷರಪುರುಷಶ್ರೇಷ್ಠನಾದ ಶ್ರೀಹರಿಯು, ಪ್ರಾದಾತ್ = ಕೊಟ್ಟನು. ಹೇಗೆಂದರೆ ರಾಜಾ = ಮಹಾರಾಜನು, ಸ್ವಕಂ ಪುರಮ್ = ತನ್ನ ಪಟ್ಟಣವನ್ನು ಬಿಟ್ಟು, ಋತೇ = ಬಿಟ್ಟು ಮಿಕ್ಕ ಊರುಗಳನ್ನು, ಇವ = ಹೇಗೆ ಕೊಡುತ್ತಾನೋ ಹಾಗೆ ತಿಳಿಯಬೇಕು. ಇತಿ = ಹೀಗೆ ಹೇಳಲ್ಪಟ್ಟಿದೆ.

ಬ್ರಾಹ್ಮಪುರಾಣದಲ್ಲಿ ಹೆಸರುಗಳನ್ನು ಹಂಚಿದ ಬಗ್ಗೆ

ब्रह्मसूत्रभाष्यम् —

'चतुर्मुखः शतानन्दो ब्रह्मणः पद्मभूरिति ।
उग्रो भस्मधरो नग्नः कपालीति शिवस्य च ।
विशेषनामानि ददौ स्वकीयान्यपि केशवः ।। इति च ब्राह्मे ।।३।।

ಅನುವಾದ - ಬ್ರಹ್ಮನಿಗೆ ಚತುರ್ಮುಖ, ಶತಾನಂದ, ಪದ್ಮಭೂಃ ಮೊದಲಾದ ಹೆಸರುಗಳನ್ನು ನೀಡಿದನು. ಶಿವನಿಗೆ ಉಗ್ರ, ಭಸ್ಮಧರ, ನಗ್ನ, ಕಪಾಲಿ ಎಂಬ ಹೆಸರುಗಳನ್ನು ನೀಡಿದನು. ಹೀಗೆ ತನ್ನ ಹೆಸರುಗಳನ್ನು ಇತರರಿಗೆ ನೀಡಿದನೆಂದು ಬ್ರಾಹ್ಮಪುರಾಣವು ಹೇಳಿದೆ.

ಪ್ರತಿಪದಾರ್ಥ -- ಹಾಗಾದರೆ ರುದ್ರಾದಿ ಶಬ್ದಗಳೆಲ್ಲವೂ ಭಗವಂತನದ್ದೇ ಆದಲ್ಲಿ ಭಸ್ಮಧರ ಉಗ್ರ ಇತ್ಯಾದಿ ಶಬ್ದಗಳಿಂದ ರುದ್ರನನ್ನು ಏಕೆ ಕರೆಯುತ್ತಾರೆ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಬ್ರಹ್ಮಣಃ = ಚತುರ್ಮುಖ ಬ್ರಹ್ಮದೇವರಿಗೆ, ಚತುರ್ಮುಖಃ = ಚತುರ್ಮುಖನೆಂದು, ಶತಾನಂದಃ = ಶತಾನಂದನೆಂದು, ಪದ್ಮಭೂಃ = ಪದ್ಮಜನೆಂದು, ಶಿವಸ್ಯ = ರುದ್ರದೇವರಿಗೆ, ಉಗ್ರಃ = ಉಗ್ರನು, ಭಸ್ಮಧರಃ = ಭಸ್ಮಧರನು, ನಗ್ನಃ = ದಿಗಂಬರನು, ಕಪಾಲಿ = ಕಪಾಲಿಯು ಇತ್ಯಾದಿ ಹೆಸರುಗಳನ್ನು, ಸ್ವಕೀಯಾನಿ = ತನ್ನದೇ ಆದ, ವಿಶೇಷನಾಮಾನಿ =

ಕೆಲವು ವಿಶೇಷಹೆಸರುಗಳನ್ನು, ಕೇಶವಃ = ಬ್ರಹ್ಮರುದ್ರಾದಿ ಪ್ರೇರಕನಾದ ಪರಮಾತ್ಮನು, ದದೌ = ನೀಡಿದನು. ಇತಿ ಚ = ಹೀಗೂ ಕೂಡ, ಬ್ರಾಹ್ಮೇ = ಬ್ರಹ್ಮಪುರಾಣದಲ್ಲಿ ಹೇಳಲ್ಪಟ್ಟಿದೆ.

ಸತ್ತರ್ಕದೀಪಾವಳಿ

ಪ್ರಥಮಸೂತ್ರದ ಮೇಲೆ ಬಂದ ಆಕ್ಷೇಪದ ಪರಿಹಾರಕ್ಕಾಗಿ ಮುಂದಿನ ಸೂತ್ರ

सत्तर्कदीपावलिः – यदुक्तं 'रुद्रो द्युभ्वाद्याश्रयः' इति, तन्निराकुर्वत् सूत्रं पठित्वा व्याचष्टे – नानुमानमित्यादिना ।। अनुमानम् = अनुमानसम्बन्धीत्यर्थः। यद्वचनं रुद्रप्रापकमुदाहृतं 'प्राणानां ग्रन्थिरसि' इति तद्विष्णौ श्रुत्या 'रुजं द्रावयते' इत्यादि पुराणवाक्यैश्च घटयति । सोऽन्तक इति ।। 'असुरं शं निरुद्धयति' इति शर्व इत्यर्थः । नच 'नारायणं महाज्ञेयम्' इत्यादि श्रुतयो रुद्रादिषु घटन्तामिति वाच्यम् । तेषु नारायणादिशब्दासम्भवात्। तदाह – नत्विति।। एतदेव विवृणोति – ऋत इति ।।

ರುದ್ರನೇ ದ್ಯುಭ್ವಾದ್ಯಾಶ್ರಯನಾಗಿದ್ದಾನೆಂದು ಪ್ರಥಮಸೂತ್ರದಲ್ಲಿ ಮಾಡಿದ ಪೂರ್ವಪಕ್ಷವನ್ನು ಈ ಸೂತ್ರವು ನಿರಾಕರಣೆ ಮಾಡುತ್ತಿದೆ. ಅದನ್ನು ಭಾಷ್ಯಕಾರರು 'ನಾನುಮಾನಮ್' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ. ಅನುಮಾನಮ್' ಎಂಬ ಶಬ್ದಕ್ಕೆ ಅನುಮಾನಕ್ಕೆ ಸಂಬಂಧಪಟ್ಟದ್ದು ಎಂದರ್ಥ. ಯಾವ ಪ್ರಮಾಣವು ರುದ್ರನೇ ದ್ಯುಭ್ವಾದ್ಯಾಶ್ರಯನಾಗಿದ್ದಾನೆನ್ನಲು ಆಧಾರವಾಗಿತ್ತೊ, ಅದನ್ನು ಉದಾಹರಿಸಿ 'ಪ್ರಾಣಾನಾಂ ಗ್ರಂಥಿರಸಿ' ಎಂಬ ಶ್ರುತಿಯಲ್ಲಿ ಹೇಳಿದಂತೆ ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ರುಜಂ ದ್ರಾವಯತೇ' ಎಂಬ ಪುರಾಣವಾಕ್ಯವನ್ನೂ ಕೂಡ ಮಹಾವಿಷ್ಣುವಿನಲ್ಲಿಯೇ ಸಮನ್ವಯ ಮಾಡುತ್ತಿದ್ದಾರೆ 'ಸೋऽಂತಕಃ' ಇತ್ಯಾದಿಯಾಗಿ.

'ಶಿವಃ ಸುಖಾತ್ಮಕತ್ವೇನ ಶರ್ವಃ ಶಂರೋಧನಾದ್ಧರಿಃ' ಎಂಬ ಸಂಬೋಧನಾದಲ್ಲಿರುವ 'ಶರ್ವ' ಎಂಬ ಶಬ್ದಕ್ಕೆ ಅಸುರ ಜನರ ದುಃಖವನ್ನು ಪರಿಹರಿಸುವವನು ಎಂದರ್ಥ.

'ನಾರಾಯಣಂ ಮಹಾಜ್ಞೇಯಂ' ಇತ್ಯಾದಿ ಶ್ರುತಿಗಳು ರುದ್ರನಲ್ಲಿ ಏಕೆ ಸಾವಕಾಶವಾಗಬಾರದು? ಎಂದು ಪ್ರಶ್ನಿಸಬಾರದು. ರುದ್ರಾದಿಗಳಲ್ಲಿ ನಾರಾಯಣ ಮೊದಲಾದ ಶಬ್ದಗಳು ಅತ್ಯಂತ ಅಸಂಭಾವಿತವಾಗಿವೆ. ಇದನ್ನೇ 'ನ ತು ನಾರಾಯಣಾದೀನಾಮ್' ಎಂಬ ಸ್ಕಾಂದಪುರಾಣವು ಸ್ಪಷ್ಟಪಡಿಸುತ್ತಿದೆ. ಸ್ಕಾಂದಪುರಾಣದ ಅಭಿಪ್ರಾಯವನ್ನೇ 'ಋತೇ ನಾರಾಯಣಾದೀನಿ' ಎಂಬ ಮುಂದಿನ ಶ್ಲೋಕವು ವಿವರಿಸುತ್ತಿದೆ.

ತತ್ವಪ್ರಕಾಶಿಕಾ

ರುದ್ರ ಪ್ರಕೃತ್ಯಾದಿಗಳೇಕೆ ದ್ಯುಭ್ವಾದ್ಯಾಯತನರಲ್ಲ

तत्वप्रकाशिका – ननु प्रागुक्तरीत्या रुद्रप्रकृत्योः किं न स्याद् द्युभ्वाद्यायतनत्वमित्याशङ्कां परिहरत्सूत्रं पठित्वा व्याचष्टे – नानुमानमिति ।।

ಆಕ್ಷೇಪ - ಹಿಂದೆ ಹೇಳಿದ ಪ್ರಕಾರ ರುದ್ರ, ಪ್ರಕೃತಿ ಮೊದಲಾದವುಗಳಿಗೆ ದ್ಯುಭ್ವಾದ್ಯಾಯತನತ್ವವು ಯುಕ್ತವಾಗುತ್ತದೆಂದು ಏಕೆ ಒಪ್ಪಬಾರದು? ಎಂಬ ಆಶಂಕೆಯನ್ನು ಪರಿಹಾರಮಾಡುವುದಕ್ಕಾಗಿ ಸೂತ್ರವನ್ನು ಹೇಳುತ್ತಾ ''ನಾನುಮಾನಮ್'' ಇತ್ಯಾದಿಯಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ರುದ್ರಾದಿ ಪ್ರತಿಪಾದಕ ಶಬ್ದಗಳೇ ಇಲ್ಲ

तत्वप्रकाशिका – प्रागुक्तानुमानसिद्धप्रामाण्ये पाशुपताद्यागमे सर्वाश्रयत्वेन (परिकल्पिते) कल्पिते रुद्रप्रधाने अत्र प्रकरणे सर्वाधारतया प्रतिपाद्ये न भवतः । तच्छ्रुतिलिङ्गाद्यभावादिति भावः ।

ಹಿಂದೆ ಹೇಳಿದಂತೆ ಯಾವ ಆಗಮಗಳಿಗೆ ಪ್ರಾಮಾಣ್ಯವು ಅನುಮಾನದಿಂದ ಸಿದ್ಧವಾಗುತ್ತದೋ ಅಂತಹ ಪಾಶುಪತಾದ್ಯಾಗಮಗಳಲ್ಲಿ ಸರ್ವಾಶ್ರಯವೆಂದು ಕಲ್ಪಿತವಾದ ರುದ್ರ ಹಾಗೂ ಪ್ರಧಾನಗಳು ಈ ಪ್ರಕರಣದಲ್ಲಿ ಸರ್ವಾಧಾರತ್ವೇನ ಪ್ರತಿಪಾದ್ಯವಾಗಿವೆ ಎಂದು

ಹೇಳಲಾಗದು. ಏಕೆಂದರೆ, ರುದ್ರ ಹಾಗೂ ಪ್ರಧಾನರನ್ನು ಪ್ರತಿಪಾದಿಸುವ ಶಬ್ದವಾಗಲೀ ಲಿಂಗವಾಗಲೀ ಕಾಣಿಸುತ್ತಿಲ್ಲ.

ಪೂರ್ವಪಕ್ಷಿಗೆ ಸಮ್ಮತವಾದ ಅನುಮಾನವು ದುಷ್ಟವಾಗಿದೆ

तत्वप्रकाशिका – आगमप्रामाण्यसाधकानुमानं तु फलविसंवादिरुद्रादिवाक्यदृष्टान्तेन विप्रतिपन्नवाक्याप्रामाण्यसाधनसम्भवात् प्रतिपक्षग्रस्तमतिप्रसङ्गदुष्टं चेत्युपेक्ष्यम् ।

ಪಾಶುಪತಾದ್ಯಾಗಮಗಳ ಪ್ರಾಮಾಣ್ಯಕ್ಕೆ ಸಾಧಕವಾದ ಯಾವ ಅನುಮಾನವು ಪೂರ್ವಪಕ್ಷಿಗೆ ಸಮ್ಮತವಾಗಿದೆಯೋ ಅಂತಹ ಅನುಮಾನವು ಫಲವಿಸಂವಾದಿಯಾದ ರುದ್ರಾದಿವಾಕ್ಯದ ದೃಷ್ಟಾಂತದಿಂದ ವಿಪ್ರತಿಪನ್ನವಾದ ವಾಕ್ಯಕ್ಕೆ ಅಪ್ರಾಮಾಣ್ಯವನ್ನು ಸಾಧಿಸಬಹುದು. ಹೀಗೆ ಪಾಶುಪತಾದ್ಯಾಗಮಪ್ರಾಮಾಣ್ಯಸಾಧಕವಾದ ಅನುಮಾನವು ಸತ್‌ಪ್ರತಿಪಕ್ಷವೆಂಬ ಹೇತ್ವಾಭಾಸದಿಂದ ಯುಕ್ತವಾದ್ದರಿಂದ ಅಸಾಧಕವಾಗಿದೆ. ಮತ್ತು ಅತಿಪ್ರಸಂಗದೋಷದಿಂದಲೂ ಕೂಡಿರುವುದರಿಂದ ಅತ್ಯಂತ ಉಪೇಕ್ಷೆಗೆ ಯೋಗ್ಯವಾಗಿದೆ.

ಪ್ರಕೃತಿಪರ ಪೂರ್ವಪಕ್ಷ ಭಾಷ್ಯಕಾರರಿಗೆ ಸಮ್ಮತವೇ ?

तत्वप्रकाशिका – अभाषितं प्रधानं किं संयोज्यते? इति चेन्न । न प्रकृतिजीवावभिधीयेते इत्यन्यत्रोक्तत्वात् । नच प्रकृतिपदेनापि रुद्रः । पृथगुभयग्रहणे बाधकाभावात् ।

ಭಾಷ್ಯದಲ್ಲಿ ಉಲ್ಲೇಖ ಮಾಡದೇ ಇರುವ ಪ್ರಕೃತಿಯನ್ನು ನೀವೇಕೆ ಸ್ವೀಕರಿಸುತ್ತಿದ್ದೀರಿ? ಎಂದರೆ ಭಾಷ್ಯಕಾರರು ವಿಷ್ಣುತತ್ವನಿರ್ಣಯದಲ್ಲಿ 'ನ ಪ್ರಕೃತಿ ಜೀವಾವಭಿಧೀಯತೇ' ಎಂಬುದಾಗಿ ಹೇಳಿದ್ದಾರೆ. ಅದನ್ನು ವಿವಕ್ಷಿಸಿ ಇಲ್ಲಿ ಪ್ರಕೃತಿಯನ್ನು ಪೂರ್ವಪಕ್ಷಕೋಟಿಯಲ್ಲಿ ಸೇರಿಸಲಾಗಿದೆ.

ವಿಷ್ಣುತತ್ವವಿನಿರ್ಣಯದಲ್ಲಿ ಹೇಳಲ್ಪಟ್ಟ ಪ್ರಕೃತಿಪದದಿಂದ ರುದ್ರನನ್ನು ಸ್ವೀಕರಿಸಲು ಬರುವುದಿಲ್ಲ. ಏಕೆಂದರೆ, ರುದ್ರ ಹಾಗೂ ಪ್ರಕೃತಿ ಇಬ್ಬರನ್ನೂ ಪ್ರತ್ಯೇಕವಾಗಿ ಸ್ವೀಕರಿಸಿದರೆ

ಯಾವುದೇ ಬಾಧಕವು ಬರುತ್ತಿಲ್ಲ. ಆದ್ದರಿಂದ ವಿಷ್ಣುತತ್ವವಿನಿರ್ಣಯದಲ್ಲಿ ಪ್ರಕೃತಿ ಹಾಗೂ ರುದ್ರ ಇಬ್ಬರನ್ನೂ ಪ್ರತ್ಯೇಕವಾಗಿ ಪೂರ್ವಪಕ್ಷಕೋಟಿಯಲ್ಲಿ ಸ್ವೀಕರಿಸಲಾಗಿದೆ.

ರುದ್ರಜ್ಞಾಪಕವಾದ ಲಿಂಗಗಳು ಎಲ್ಲಿವೆ ?

तत्वप्रकाशिका – नन्वत्र रुद्रादिज्ञापकाभावेऽपि श्रुत्यन्तरे 'प्राणानां ग्रन्थिरसि रुद्रः' इत्याद्युक्तेर्द्युभ्वाद्यायतनत्वं रुद्रादेः किं न स्यात्? इत्यत आह – स इति ।।

ಆಕ್ಷೇಪ - ಈ ಪ್ರಕರಣದಲ್ಲಿ ರುದ್ರನಿಗೆ ಜ್ಞಾಪಕವಾದ ಯಾವುದೇ ಲಿಂಗಗಳು ಕೇಳಿಸುತ್ತಿಲ್ಲ. ಆದರೂ ಸಹ ಬೇರೆ ಶ್ರುತಿಯಲ್ಲಿ 'ಪ್ರಾಣಾನಾಂ ಗ್ರಂಥಿರಸಿ ರುದ್ರಃ' ಎಂದು ಕೇಳಿಸುತ್ತಿದೆ. ಆದ್ದರಿಂದ ದ್ಯುಭ್ವಾದ್ಯಾಯತನನಾದವನು ರುದ್ರನೇಕಾಗಬಾರದು? ಎಂಬ ಪ್ರಶ್ನೆಗೆ ''ಸಃ'' ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

ದ್ಯುಭ್ವಾದ್ಯಾಯತನತ್ವವು ವಿಷ್ಣುವಿನ ಲಿಂಗ

तत्वप्रकाशिका – श्रुत्यन्तरोक्तमपि द्युभ्वाद्यायतनत्वं विष्णोरेव । नच रुद्रादिश्रुतिलिङ्गविरोधः । श्रुतिबलेन रुद्रादिश्रुतेरन्तकत्वादिलिङ्गस्य च विष्ण्वेकनिष्ठत्वादिति भावः ।

ಬೇರೆ ಶ್ರುತಿಯಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವವೂ ಸಹ ವಿಷ್ಣುವಿನ ಧರ್ಮವೇ ಆಗಿದೆ. ಆ ಶ್ರುತಿವಾಕ್ಯಗಳಲ್ಲಿ ರುದ್ರಾದಿಶಬ್ದ, ಅಂತಕತ್ವಾದಿಲಿಂಗ ಇವುಗಳ ವಿರೋಧವೂ ಸಹ ಬರುವುದಿಲ್ಲ. ವಿಷ್ಣುಶ್ರುತಿಯ ಬಲದಿಂದ ರುದ್ರಾದಿಶ್ರುತಿಗಳಿಗೆ ಹಾಗೂ ಅಂತಕತ್ವಾದಿಲಿಂಗಗಳಿಗೆ ಕೇವಲ ವಿಷ್ಣುಪರತ್ವವನ್ನು ಸಾಧಿಸಬಹುದು.

ಎರಡು ಪ್ರಶ್ನೆಯ ಉತ್ತರಕ್ಕಾಗಿ ಬ್ರಹ್ಮಾಂಡಪುರಾಣದ ಮಾತು

तत्वप्रकाशिका – ननु रुद्रादिशब्दानां विष्णुपरत्वं किं योगेन रूढ्या वा। नाद्यः । योगस्य दौर्बल्यात् । न द्वितीयः । तदभावात् । उभयत्र रूढिसद्भावे

पुनर्निश्चयायोगात् । नहि श्रुत्यन्तरे विष्णुलिङ्गाद्यस्तीत्यत आह – ब्रह्माण्डे चेति ।।

ರುದ್ರಾದಿಶಬ್ದಗಳು ವಿಷ್ಣುಪರವಾಗುತ್ತವೆಂದು ಯೌಗಿಕವೃತ್ತಿಯಿಂದ ಹೇಳುತ್ತಿದ್ದೀರೋ ಅಥವಾ ರೂಢಿಯಿಂದ ಹೇಳುತ್ತಿದ್ದೀರೋ? ಎಂದು ಪ್ರಶ್ನೆ. ಯೋಗವು ದುರ್ಬಲವಾದ್ದರಿಂದ ಪ್ರಥಮಪಕ್ಷವು ಅಯುಕ್ತವಾಗುತ್ತದೆ. ರೂಢಿಯು ವಿಷ್ಣುವಿನಲ್ಲಿ ಇಲ್ಲದ ಕಾರಣ ಎರಡನೆಯ ಪಕ್ಷವು ಅಯುಕ್ತವಾಗಿದೆ. ವಿಷ್ಣು ಹಾಗೂ ರುದ್ರ ಇಬ್ಬರಲ್ಲಿಯೂ ರುದ್ರಾದಿಶಬ್ದಗಳ ರೂಢಿಯನ್ನು ಒಪ್ಪಿದರೆ ಯಾವಪಕ್ಷವೂ ಸಹ ನಿಶ್ಚಯವಾಗುವುದಿಲ್ಲ. ಆದ್ದರಿಂದ ರುದ್ರಾದಿಶಬ್ದಗಳಿಂದ ವಿಷ್ಣುವೇ ವಾಚ್ಯನಾಗುತ್ತಾನೆಂದು ನಿಮ್ಮಿಂದ ನಿರ್ಣಯಿಸಲಾಗದು. ಮತ್ತು ಬೇರೆ ಶ್ರುತಿಗಳಲ್ಲಿ ವಿಷ್ಣುಲಿಂಗಾದಿಗಳು ಕಾಣಿಸುತ್ತಿಲ್ಲ. ಈ ಎರಡು ವಿಧ ಪ್ರಶ್ನೆಗಳಿಗೆ ''ಬ್ರಹ್ಮಾಂಡೇ ಚ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

'वेदेषु सपुराणेषु गीयते'

तत्वप्रकाशिका – रुद्रादिशब्दानां विष्णौ योगमुक्त्वा 'वेदेषु सपुराणेषु गीयते' इति विद्वद्रूढिकथनाद्रूढिमात्रान्महायोगविद्वद्रूढ्योः प्राबल्याद्युक्तः श्रुत्यन्तरेऽपि विष्णोः प्रतिपाद्यत्वनिश्चय इति भावः ।

ರುದ್ರ ಮೊದಲಾದ ಶಬ್ದಗಳಿಗೆ ವಿಷ್ಣುವಿನಲ್ಲಿ ಯೋಗಾರ್ಥವನ್ನು ಹೇಳಬಹುದು. ಮತ್ತು 'वेदेषु सपुराणेषु गीयते' ಎಂಬ ವಾಕ್ಯದಿಂದ ವಿದ್ವದ್‌ರೂಢಿಯನ್ನೂ ಸಹ ಹೇಳಿದ್ದಾರೆ. ಕೇವಲ ರೂಢಿಗಿಂತ ಮಹಾಯೋಗ ಹಾಗೂ ವಿದ್ವದ್‌ರೂಢಿಗಳು ಪ್ರಬಲವಾಗಿರುತ್ತವೆ. ಆದ್ದರಿಂದ ಬೇರೆ ಶ್ರುತಿಯಲ್ಲಿಯೂ ವಿಷ್ಣುವೇ ಪ್ರತಿಪಾದ್ಯನೆಂದು ನಿಶ್ಚಯವಾಗುತ್ತದೆಂದು ಅಭಿಪ್ರಾಯ.

ನಾರಾಯಣಶಬ್ದವು ರುದ್ರನನ್ನೇಕೆ ಹೇಳಬಾರದು ?

तत्वप्रकाशिका – ननु यदि रुद्रादिशब्दानां विष्णुपरत्वमुक्त्वा श्रुतीनामनिर्णायकत्वमुच्यते तर्हि नारायणादिनाम्नां रुद्रादिपरत्वे 'नारायणं महाज्ञेयम्' इत्यादिश्रुतीनामनिर्णायकत्वं स्यादित्यत आह – वामने चेति ।।

ಒಂದು ವೇಳೆ ರುದ್ರ ಮೊದಲಾದ ಶಬ್ದಗಳು ವಿಷ್ಣುಪರ ಎಂದು ಹೇಳಿ, ರುದ್ರಾದಿಶ್ರುತಿಗಳು ರುದ್ರಾದಿಗಳನ್ನು ಪ್ರತಿಪಾದಿಸಲು ಅನಿರ್ಣಾಯಕವಾಗುತ್ತವೆ ಎಂದು ಹೇಳಿದಿರಿ. ಇದರಂತೆ 'ನಾರಾಯಣ' ಮೊದಲಾದ ಶಬ್ದಗಳೂ ಸಹ ರುದ್ರಾದಿಪರವಾದರೆ 'ನಾರಾಯಣಂ ಮಹಾಜ್ಜ್ಞೇಯಂ' ಇತ್ಯಾದಿ ಶ್ರುತಿಗಳಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಆಕ್ಷೇಪಕ್ಕೆ ''ವಾಮನೇ ಚ'' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಅಮುಖ್ಯವೃತ್ತಿಯಿಂದ ನಾರಾಯಣಾದಿ ಶಬ್ದಗಳು ಇತರರಲ್ಲಿ ಏಕೆ ಬರುವುದಿಲ್ಲ ?

तत्वप्रकाशिका – भगवन्नामत्वाविशेषाद्रुदादिनामवन्नारायणादिनाम्नामपि रुद्रादौ वृत्तिः किं न स्यादित्यत आह – स्कान्दे चेति ।।

ಸಕಲಶಬ್ದಗಳೂ ಸಹ ನಾಮತ್ವ ಎಂಬ ಸಾಧಾರಣಧರ್ಮದಿಂದ ಭಗವಂತನನ್ನೇ ಮುಖ್ಯ-ವೃತ್ತಿಯಿಂದ ಪ್ರತಿಪಾದಿಸುತ್ತವೆ. ಉಳಿದ ರುದ್ರಾದಿ ವ್ಯಕ್ತಿಗಳನ್ನು ರುದ್ರಾದಿಶಬ್ದಗಳು ಅಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೆಂದು ಹೇಳುತ್ತಿದ್ದೀರಿ. ಇದರಂತೆ ನಾರಾಯಣ ಮೊದಲಾದ ಶಬ್ದಗಳೂ ಸಹ ಅಮುಖ್ಯವೃತ್ತಿಯಿಂದ ರುದ್ರಾದಿಗಳನ್ನು ಪ್ರತಿಪಾದಿಸಬಹುದಲ್ಲವೇ? ಎಂಬ ಪ್ರಶ್ನೆಗೆ ''ಸ್ಕಾಂದೇ ಚ'' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ.

ರುದ್ರಾದಿಶಬ್ದಗಳು ವಿಷ್ಣುಪ್ರತಿಪಾದಕವಾದರೆ ವ್ಯವಹಾರ ಹೇಗೆ ?

तत्वप्रकाशिका – यद्येवं रुद्रादिशब्दा विष्ण्वेकपरास्तर्हि किमुच्यते भस्मधरोग्रत्वादीनां तच्छब्दत्वम् । विष्णुदत्तत्वाभिप्रायेणेति चेत्तर्हि रुद्रादिशब्दा अपि तादृशा इति न कथं तैर्निर्णय इत्यत आह – चतुर्मुख इति ।। ३ ।।

ಹೀಗೆ ರುದ್ರಾದಿಶಬ್ದಗಳೆಲ್ಲವೂ ವಿಷ್ಣುವನ್ನೇ ಪ್ರತಿಪಾದಿಸುವುದಾದರೆ ಭಸ್ಮಧರ, ಉಗ್ರ ಮೊದಲಾದ ಶಬ್ದಗಳನ್ನು ರುದ್ರಾದಿಗಳಲ್ಲಿ ಹೇಗೆ ಪ್ರಯೋಗಿಸುವುದು? ಎಂದರೆ ಆ ಶಬ್ದಗಳನ್ನು ಭಗವಂತನೇ ರುದ್ರಾದಿಗಳಿಗೆ ನೀಡಿದ್ದಾನೆಂದು ಉತ್ತರಿಸಬೇಕು. ಹಾಗಾದರೆ ರುದ್ರಾದಿಶಬ್ದಗಳನ್ನೂ ಸಹ ಭಸ್ಮಧರಾದಿ ಶಬ್ದಗಳಂತೆ ಭಗವಂತನು ರುದ್ರಾದಿಗಳಿಗೆ ನೀಡಿರಬಹುದಲ್ಲವೇ? ಆಗ ಆ

ರುದ್ರಾದಿಶಬ್ದಗಳು ನಿರ್ಣಾಯಕವಾಗಬಹುದಲ್ಲವೇ? ಈ ಎರಡು ಬಗೆಯ ಶಬ್ದಗಳಲ್ಲಿ ವಿವೇಚನೆಯನ್ನು ಹೇಗೆ ಮಾಡುತ್ತೀರಿ? ಎಂಬ ಪ್ರಶ್ನೆಗೆ ''ಚತುರ್ಮುಖಃ'' ಎಂಬ ಭಾಷ್ಯದಿಂದ ಉತ್ತರಿಸುತ್ತಿದ್ದಾರೆ.

ಭಾವದೀಪ

ಭಾಷ್ಯದಲ್ಲಿರುವ ರುದ್ರಪದವು ತ್ರಿಗುಣತ್ವಾದಿಗಳಿಗೆ ಉಪಲಕ್ಷಕ

भावदीपः – नानुमानमतच्छब्दात् ।। भाष्ये रुद्रपदमुपलक्षणं मत्वा रुद्रप्रकृत्यानुगुण्येन भाष्यं व्याचष्टे – प्रागुक्तेति ।। अत्रेत्यनुवादः । भस्मधरेत्यत्रापि त्रिगुणत्वादेर्ग्रहणं मत्वाऽह – तत् श्रुतीति ।

ನಾನುಮಾನಮತಚ್ಚಬ್ದಾತ್

ಭಾಷ್ಯದಲ್ಲಿರುವ ರುದ್ರವೆಂಬ ಪದವು ಉಪಲಕ್ಷಣವಾಗಿದೆ ಎಂದು ತಿಳಿದು ರುದ್ರ ಹಾಗೂ ಪ್ರಕೃತಿಗೆ ಅನುಗುಣವಾಗಿ ಭಾಷ್ಯದಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ ''ಪ್ರಾಗುಕ್ತರೀತ್ಯಾ'' ಇತ್ಯಾದಿ ಟೀಕೆಯಿಂದ. ''ಅತ್ರ ಪ್ರಕರಣೇ'' ಎಂಬಲ್ಲಿರುವ ಅತ್ರವೆಂಬ ಪದವು ಭಾಷ್ಯದಲ್ಲಿರುವ ಪದದ ಅನುವಾದ ರೂಪವಾಗಿದೆ. ''ಭಸ್ಮಧರ'' ಎಂಬಲ್ಲಿಯೂ ತ್ರಿಗುಣತ್ವ ಮೊದಲಾದ ಪ್ರಕೃತಿಯಲ್ಲಿರುವ ಶಬ್ದಗಳನ್ನು ಉಪಲಕ್ಷಣಯಾ ಸ್ವೀಕರಿಸಬೇಕೆಂದು ತಿಳಿದು ''ತತ್ ಶ್ರುತಿಃ'' ಎಂಬ ವಾಕ್ಯವು ಹೊರಟಿದೆ.

ಪೂರ್ವಪಕ್ಷಕಾರರ ಅನುಮಾನಕ್ಕೆ ದೋಷ

भावदीपः – आदिपदेन समाख्याग्रहः। अतद्धर्माभिलापादितिवदयं निर्देशः। तद्व्यभिचारिणा । अप्रामाण्यानुमा च स्यादिति । अतिप्रसङ्गोऽनुमेयदृशेति च शास्त्रयोनिसूत्रानुभाष्यमनुरुध्याऽह – फलविसंवादीति ।।

ಲಿಂಗಾದ್ಯಭಾವಾತ್'' ಎಂಬಲ್ಲಿರುವ ಆದಿ ಪದದಿಂದ ರುದ್ರನ ವಿಷಯದಲ್ಲಿರುವ ಸಮಾಖ್ಯಾ-ಪ್ರಮಾಣವನ್ನು ಸ್ವೀಕರಿಸಬೇಕು. ಯಾವರೀತಿಯಾಗಿ ''ಅತದ್ಧರ್ಮಾಭಿಲಾಪಾತ್'' ಎಂಬ ಸೂತ್ರಕ್ಕೆ ''ತದ್ಧರ್ಮಾಭಿಲಾಪಾಭಾವಾತ್'' ಎಂದು ಅರ್ಥೈಸುತ್ತೇವೆಯೋ ಅದರಂತೆ ಪ್ರಕೃತ ''ಅತತ್‌ಶಬ್ದಾತ್'' ಎಂಬುದಕ್ಕೆ ''ತತ್ ಶಬ್ದ ಲಿಂಗಾದ್ಯಭಾವಾತ್'' ಎಂದು ಅರ್ಥೈಸಬೇಕು. ''ಅಪ್ರಾಮಾಣ್ಯಾನುಮಾ ಚ

ಸ್ಯಾತ್'' ಎಂಬುದಾಗಿ ಅನುಮಾನಕ್ಕೆ ಹೇಳಲ್ಪಟ್ಟ ಅಪ್ರಾಮಾಣ್ಯವನ್ನು ಮತ್ತು ''ಅತಿಪ್ರಸಂಗೋ೭ನುಮೇಯದೃಶ''ಎಂಬುದಾಗಿ ಅನುಮಾನಕ್ಕೆ ಅತಿಪ್ರಸಂಗವನ್ನು ಶಾಸ್ತ್ರಯೋನಿತ್ವಸೂತ್ರದ ಭಾಷ್ಯದಲ್ಲಿ ಹೇಳಿರುತ್ತಾರೆ. ಅದಕ್ಕೆ ಅನುಸಾರಿಯಾಗಿ ''ಫಲವಿಸಂವಾದ'' ಎಂಬ ವಾಕ್ಯವು ಹೊರಟಿರುತ್ತದೆ.

ಆಗಮಪ್ರಮಾಣಸಾಧಕ ಅನುಮಾನಕ್ಕೆ ಸತ್ಪ್ರತಿಪಕ್ಷ ಹಾಗೂ ಅತಿಪ್ರಸಂಗ

भावदीपः – अतिप्रसङ्गेति ।। बौद्धागमेऽपि किञ्चित्फलोपलम्भदर्शनेन तत्रापि विप्रतिपन्नभागप्रामाण्यानुमानसम्भवादिति भावः । तत्त्वप्रदीपादि-प्राचीनटीकारीत्या शङ्कते – अभाषितमिति ।।

ಆಗಮಪ್ರಾಮಾಣ್ಯಸಾಧಕವಾದ ಅನುಮಾನಕ್ಕೆ ಸತ್ಪ್ರತಿಪಕ್ಷದೋಷವಷ್ಟೇ ಅಲ್ಲ ಅತಿಪ್ರಸಂಗದೋಷವೂ ಸಹ ಬರುತ್ತದೆ. ಏಕೆಂದರೆ ಬೌದ್ಧಾಗಮಗಳಲ್ಲಿ ಕೆಲವಡೆ ಫಲಗಳು ಕಾಣಿಸುತ್ತಿರುವುದರಿಂದ ವಿಪ್ರತಿಪನ್ನವಾದ ಬೌದ್ಧಾಗಮಗಳ ಪ್ರಾಮಾಣ್ಯವನ್ನುಜ ಕಠಿಣವಾಕ್ಯಗಳ ದೃಷ್ಟಾಂತಗಳಿಂದ ಸಾಧಿಸಬಹುದು. ಹೀಗೆ ಅತಿಪ್ರಸಂಗವನ್ನು ಹೇಳಬೇಕು. ತತ್ವಪ್ರದೀಪ ಮೊದಲಾದ ಪ್ರಾಚೀನ ಟೀಕಾಕಾರರ ಪ್ರಕಾರ ಆಶಂಕಿಸುತ್ತಿದ್ದಾರೆ ''ಅಭಾಷಿತಂ'' ಇತ್ಯಾದಿ ವಾಕ್ಯಗಳಿಂದ.

ಭಾಷ್ಯಕಾರರಿಗೆ ಅಸಮ್ಮತವಾದದ್ದನ್ನು ಟೀಕೆಯಲ್ಲಿ ಹೇಳಿಲ್ಲ

भावदीपः – भाष्यकृदनुक्तमित्यर्थः । अन्यत्र विष्णुतत्त्वनिर्णये ।। पृथगिति ।। तत्र प्रकृतिपदेन प्रकृतेः, अत्र रुद्रपदेन रुद्रस्येति पृथगुभयग्रहण इत्यर्थः ।। श्रुतिबलेनेति ।। 'सोऽन्तकः' इत्यादिश्रुतिबलेनेत्यर्थः।

''ಅಭಾಷಿತಂ'' ಎಂಬ ಶಬ್ದಕ್ಕೆ 'ಭಾಷ್ಯಕಾರರಿಂದ ಹೇಳಲ್ಪಡದೆ ಇರುವ' ಎಂದರ್ಥ. ''ಅನ್ಯತ್ರ'' ಎಂಬ ಶಬ್ದಕ್ಕೆ ವಿಷ್ಣುತತ್ವನಿರ್ಣಯದಲ್ಲಿ ಎಂದರ್ಥ. ''ಪೃಥಗ್'' ಎಂದರೆ 'ವಿಷ್ಣುತತ್ವನಿರ್ಣಯ-ದಲ್ಲಿರುವ ಪ್ರಕೃತಿ ಪದದಿಂದ ಪ್ರಕೃತಿಯನ್ನು ಸ್ವೀಕರಿಸಿ ಇಲ್ಲಿರುವ ರುದ್ರಪದದಿಂದ ರುದ್ರನನ್ನು ಸ್ವೀಕರಿಸಿ ಪ್ರತ್ಯೇಕವಾಗಿ ಎರಡನ್ನು ವಿವಕ್ಷಿಸಿದಾಗ' ಎಂದರ್ಥ. ''ಶ್ರುತಿಬಲೇನ'' ಎಂದರೆ ''ಸೋ೭ಂತಕಃ'' ಎಂಬ ಮುಂತಾದ ಶ್ರುತಿಗಳ ಬಲದಿಂದ ಎಂದರ್ಥ.

ಅಂತರಾಧಿಕರಣದಿಂದ ಗತಾರ್ಥವಲ್ಲ

ಭಾವದೀಪಃ – ನನ್ವನ್ತರ್ನಯನ್ಯಾಯೇನ ನಿರ್ಣಯಃ ಸ್ಯಾದಿತ್ಯತ ಆಹ – ನಹೀತಿ ।। ಶ್ರುತ್ಯನ್ತರ ಇತಿ ।। ರುದ್ರಸಮಾಖ್ಯಾರೂಪಶ್ರುತ್ಯನ್ತರ ಇತ್ಯರ್ಥಃ । ಯೇನ ನಿರ್ಣಯಃ ಸ್ಯಾದಿತಿ ಭಾವಃ ।

ಅಂತರಾಧಿಕರಣದ ನ್ಯಾಯದಿಂದ ವಿಷ್ಣುವೇ ರುದ್ರಾದಿ ಶಬ್ದಗಳಿಂದ ಪ್ರತಿಪಾದ್ಯನೆಂದು ನಿರ್ಣಯಿಸಬಹುದಲ್ಲವೇ? ಎಂಬ ಪ್ರಶ್ನೆಗೆ ''ನ ಹಿ'' ಎಂಬ ವಾಕ್ಯವು ಹೊರಟಿದೆ. ''ಶ್ರುತ್ಯಂತರ'' ಎಂದರೆ ರುದ್ರಸಾಧಾಕವಾದ ಸಮಾಖ್ಯಾರೂಪವಾದ ಮತ್ತೊಂದು ಶ್ರುತಿಯಲ್ಲಿ ಎಂದರ್ಥ. ಹಾಗೇನಾದರೂ ರುದ್ರಸಮಾಖ್ಯಾನಶ್ರುತಿಯಲ್ಲಿ ವಿಷ್ಣುಲಿಂಗಗಳು ಇದ್ದಿದ್ದರೆ ನಿರ್ಣಯಸಬಹುದಿತ್ತು ಎಂದು ಅಭಿಪ್ರಾಯ.

ರುದ್ರಾದಿ ಪ್ರತಿಪಾದಕ ಲಿಂಗಗಳು ಸಾವಕಾಶವಾಗಿವೆ

ಭಾವದೀಪಃ – तेषामेव लिङ्गशब्दानां 'प्राणानां ग्रन्थिरसि' इत्यादीनां विष्णौ मुख्यवृत्तिरिति बलवत्त्वं तस्य हि रुग्द्रावणादिकर्तृत्वं मुख्यमिति न्यायविवरणविवरणपरतयोक्तस्मृतेस्तात्पर्यमाह – रुद्रादीति ।। समाख्या सावकाशेति सूचितम् । वामने चेत्यादिभाष्यं विष्णुसमाख्याया निरवकाशत्वोक्तिपरमिति व्यञ्जयन्नाह – यदि रुद्रादीति ।। ३ ।।

''तेषामेव लिंगशब्दानाम् प्राणानाम् ग्रंथिरसि ಇತ್ಯಾದೀನಾಂ ವಿಷ್ಣೌ ಮುಖ್ಯವೃತ್ತಿರಿತಿ ಬಲವತ್ತ್ವಂ ತಸ್ಯ ಹಿ ರುಗ್ ದ್ರಾವಣಾದಿಕರ್ತೃತ್ವಂ ಮುಖ್ಯಮ್'' - ರುದ್ರನಲ್ಲಿಯೇ ಇರುವ ಲಿಂಗ ಹಾಗೂ ಶ್ರುತಿಗಳು ''ಪ್ರಾಣಾನಾಂ ಗ್ರಂಥಿರಸಿ ಇತ್ಯಾದಿ ಶ್ರುತಿಗಳೂ ಸಹ ವಿಷ್ಣುವಿನಲ್ಲಿಯೇ ಮುಖ್ಯವಾಗಿ ಉಪಪನ್ನವಾಗುತ್ತವೆ. ಆದ್ದರಿಂದ ದುಃಖವನ್ನು ಮುಖ್ಯವಾಗಿ ಪರಿಹರಿಸುವ ವಿಷ್ಣುವಿನಲ್ಲಿ ರುದ್ರಶಬ್ದವು ಉಪಪನ್ನವಾಗುತ್ತದೆ ಎಂಬ ನ್ಯಾಯವಿವರಣವನ್ನು ವಿವರಿಸುವುದಕ್ಕಾಗಿ ಹಿಂದೆ ಹೇಳಲ್ಪಟ್ಟ ಸ್ಮೃತಿಯ ತಾತ್ಪರ್ಯವನ್ನು ''ರುದ್ರಾದಿ'' ಎಂಬ ಮಾತುಗಳಿಂದ ಹೇಳುತ್ತಿದ್ದಾರೆ.

ಇದರಿಂದ ರುದ್ರಸಮಾಖ್ಯಾಶ್ರುತಿಯು ಸಾವಕಾಶವಾಗಿದೆ ಎಂದು ಸೂಚಿಸಿದರು. ''ವಾಮನೇ ಚ'' ಮೊದಲಾದ ಭಾಷ್ಯವು ವಿಷ್ಣುಸಮಾಖ್ಯಾಪ್ರಮಾಣವು ನಿರವಕಾಶವಾಗಿದೆ ಎಂಬುದನ್ನು ಸಮರ್ಥನೆ ಮಾಡುತ್ತಿದೆ. ಈ ಅಭಿಪ್ರಾಯದಿಂದ ''ಯದಿ ರುದ್ರಾದಿ'' ಎಂಬ ವಾಕ್ಯವು ಹೊರಟಿದೆ.

ವಿಶೇಷವಿಚಾರ - 'ನಾನುಮಾನಮತಚ್ಛಬ್ದಾತ್' ಎಂಬುದು ಮೂರನೇ ಸೂತ್ರ. ಈ ಸೂತ್ರವು ಪರಪಕ್ಷದಲ್ಲಿ ಯಾವುದೇ ಸಾಧಕಪ್ರಮಾಣಗಳಿಲ್ಲದಿರುವುದನ್ನು ಸಾಧಿಸುವುದಕ್ಕಾಗಿ ಹೊರಟಿದೆ. ಹಿಂದಿನೆರಡು ಸೂತ್ರಗಳಲ್ಲಿ ಸಾಧಕಪ್ರಮಾಣಗಳಿವೆಯೆಂದು ಹೇಳಿದ್ದಾಯಿತು. ಮುಂದೆ ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲವೆಂದು ಹೇಳುವುದೇ ಸಂಗತವಾಗುವುದರಿಂದ ಇದನ್ನು ಮೂರನೆಯ ಸೂತ್ರವನ್ನಾಗಿ ಪರಿಗಣಿಸಿದ್ದಾರೆ.

ಸೂತ್ರದಲ್ಲಿರುವ 'ನಾನುಮಾನಮ್' ಎಂಬುದನ್ನು 'ನ ಅನುಮಾನಮ್' ಎಂದು ಅಥವಾ 'ನ ಆನುಮಾನಮ್' ಎಂದೂ ಸಹ ಪದವಿಭಾಗ ಮಾಡಬಹುದು. 'ಅನುಮೀಯತೇ ಇತಿ ಅನುಮಾನಮ್' ಎಂಬ ವ್ಯುತ್ಪತ್ತಿಯನ್ನು ಅನುಮಾನ ಶಬ್ದಕ್ಕೆ ತಿಳಿಯಬೇಕು. 'ಆ ಅನುಮಾನಮ್' ಎಂದು ಪದವಿಭಾಗಮಾಡಿದಾಗ ಅನುಮಾನ ಶಬ್ದದ ಮೇಲೆ ಶ್ಕೇಷೇ ಎಂಬ ಸೂತ್ರದಿಂದ ಅಣ್ ಪ್ರತ್ಯಯವು ಪ್ರಾಪ್ತವಾದರೆ ಆದಿವೃದ್ಧಿಯೂ ಬಂದು 'ಆನುಮಾನಮ್' ಎಂಬ ಶಬ್ದವು ನಿಷ್ಪನ್ನವಾಗಿದೆ. ಅನುಮಾನ ಶಬ್ದಕ್ಕಾಗಲೀ, ಆನುಮಾನ ಶಬ್ದಕ್ಕಾಗಲೀ ಅನುಮಾನವೇ ಪ್ರಧಾನವಾಗಿವುಳ್ಳ, ಪಾಶುಪತ, ಸಾಂಖ್ಯ, ಮೊದಲಾದ ಆಗಮಗಳು ಎಂದರ್ಥ. ಇಂತಹ ಆಗಮಗಳಿಂದ ರುದ್ರ ಹಾಗೂ ಪ್ರಧಾನಗಳೇ ದ್ಯುಭ್ವಾದ್ಯಾಯತನರಾಗಿದ್ದಾರೆಂದು ತಿಳಿಯುತ್ತದೆ. ಈ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಪ್ರತಿಪಾದಿಸುವುದಕ್ಕಾಗಿ ಸೂತ್ರವು ಹೊರಟಿದೆ.

ಹೀಗೆ ಹೇಳಿದ್ದರಿಂದ ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲವೆಂದು ಹೇಳುವ ಮೂಲಕ ಜಾಯಮಾನ ಮೊದಲಾದ ಜೀವಪ್ರತಿಪಾದಕ ಶಬ್ದಗಳೂ ಸಹ ಪ್ರಕರಣದಲ್ಲಿರುವುದಿಲ್ಲವೆಂದು ತಿಳಿಸಿದ್ದಾರೆ.

ಬ್ರಹ್ಮನಲ್ಲಿಯೂ ಸಾಧಕವಾದ ಪ್ರಮಾಣಗಳಿವೆಯೆಂದು ಸೂಚಿಸಿದ್ದರಿಂದ ಸ್ವಪಕ್ಷದಲ್ಲಿ ಬಾಧಕಗಳನ್ನು ಇದೇ ಸೂತ್ರವು ಪರಿಹರಿಸುತ್ತಿದೆ.

ಆದ್ದರಿಂದ ರುದ್ರಸಮಾಖ್ಯಾಪ್ರಮಾಣಗಳಲ್ಲಿ ರುದ್ರ, ಪಿನಾಕಿ ಮೊದಲಾದ ರುದ್ರಪ್ರತಿಪಾದಕವಾದ ಶಬ್ದಗಳಾವುದೂ ಸಹ ಮುಖ್ಯವಾಗಿರುವುದಿಲ್ಲ.

ಇದೇ ರೀತಿಯಾಗಿ ವಿಷ್ಣುಸಮಾಖ್ಯಾ ಪ್ರಮಾಣಗಳಲ್ಲಿ ವಿಷ್ಣು ಮೊದಲಾದ ಶಬ್ದಗಳು ರುದ್ರಾದಿಗಳನ್ನು ಪ್ರತಿಪಾದಿಸುವುದಿಲ್ಲ. ಏಕೆಂದರೆ 'ನತು ನಾರಾಯಣಾದೀನಾಂ ನಾಮ್ನಾಮನ್ಯತ್ರ ಸಂಭವಃ । ಅನ್ಯನಾಮ್ನಾಂ ಗತಿರ್ವಿಷ್ಣೋಃ' ನಾರಾಯಣ ಪ್ರತಿಪಾದಕವಾದ ಶಬ್ದಗಳು ಬೇರೆಡೆ ಬರಲು ಸಾಧ್ಯವಿಲ್ಲ. ಆದರೆ ಬೇರೆ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುತ್ತವೆ ಇತ್ಯಾದಿಯಾಗಿ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಶ್ರುತಿಯು ಈ ವಿಷಯದಲ್ಲಿ ಆಧಾರವಾಗಿದೆ.

ಆದ್ದರಿಂದ ರುದ್ರಾದಿಸಮಾಖ್ಯಾ ಪ್ರಮಾಣವು ಸಾವಕಾಶವಾಗಿದೆ. ವಿಷ್ಣುಸಮಾಖ್ಯಾ ಪ್ರಮಾಣವಾದರೂ ನಿರವಕಾಶವಾಗಿದೆ ಎಂದು ಸೂಚಿಸಿದ್ದಾರೆ.

ಅನುವ್ಯಾಖ್ಯಾನದಲ್ಲಿ 'ಬಾಹುಲ್ಯಂ ಲಿಂಗಶಬ್ದಾನಾಮ್' ಎಂಬುದರಿಂದ ಪ್ರಾರಂಭಿಸಿ 'ಪೂರ್ವಪಕ್ಷೇಷು ಯುಕ್ತಯಃ' ಎಂಬಲ್ಲಿಯ ತನಕ ಪೂರ್ವಪಕ್ಷಿಯುಕ್ತಿಗಳನ್ನು ಹೇಳಿ 'ತಾ ಏವ ಬಲವತ್ಯಸ್ತು ಗತ್ಯಂತರವಿವರ್ಜಿತಾಃ । ಸಿದ್ಧಾಂತಯುಕ್ತಯೋ ಜ್ಞೇಯಾಃ' ಎಂಬುದಾಗಿ ಯಾವ ಯಾವ ಸಿದ್ಧಾಂತ ನ್ಯಾಯಗಳನ್ನು ಹೇಳಿರುತ್ತಾರೋ ಅವುಗಳೂ ಸಹ ಸೂತ್ರಾರೂಢವಾಗಿವೆಯೆಂದು ತಿಳಿಯಬೇಕು.

ಸೂತ್ರದಲ್ಲಿ 'ಅತಚ್ಚಬ್ದಾತ್' ಎಂಬ ಪದವಿದೆ. ಇಲ್ಲಿ ಪ್ರಸಜ್ಯಪ್ರತಿಷೇಧಾರ್ಥದಲ್ಲಿ ನಞ್ ಇರುತ್ತದೋ? ಅಥವಾ ಪರ್ಯುದಾಸಾರ್ಥದಲ್ಲಿರುತ್ತದೋ? ಎಂಬ ವಿಚಾರವು ಪ್ರಾಪ್ತವಾದರೆ ಪ್ರಸಜ್ಯಪ್ರತಿಷೇಧಾರ್ಥದಲ್ಲಿ 'ನಞ್' ಸಮಾಸವನ್ನು ಮಾಡಲಾಗಿದೆಯೆಂದೇ ಹೇಳಬೇಕು. ವಾಸ್ತವಿಕವಾಗಿ ಪ್ರಸಜ್ಯಪ್ರತಿಷೇಧಾರ್ಥದಲ್ಲಿರುವ ನಞ್ ಎಂಬುದು ಕ್ರಿಯಾಸಾಪೇಕ್ಷಿತವಾಗಿರುತ್ತದೆ. ಅಂತಹ ನಞ್‌ಗೆ ಮುಂದಿನ ತತ್‌ಶಬ್ದದ ಜೊತೆಗೆ ಸಾಮರ್ಥ್ಯವಿಲ್ಲದ ಕಾರಣ ಸಮಾಸವಾಗುವುದಿಲ್ಲ. ಆದರೆ 'ಅಸೂರ್ಯಂ ಪಶ್ಯಾಃ ರಾಜದಾರಾಃ', 'ಅಶ್ರಾದ್ಧಭೋಜೀ ಬ್ರಾಹ್ಮಣಃ' ಇತ್ಯಾದಿಯಾಗಿ ಪ್ರಸಜ್ಯ ಪ್ರತಿಷೇಧಾರ್ಥದಲ್ಲಿಯೂ ನಞ್ ಸಮಾಸವನ್ನು ವೈಯ್ಯಾಕರಣರು ಒಪ್ಪಿದ್ದು ಕಾಣಿಸುತ್ತದೆ. ಪಾಣಿನಿಯು 'ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ಸೂತ್ರದಲ್ಲಿ ಕಾರಕೇ ಎಂಬ ಪದವನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದರಿಂದಲೇ ಪ್ರಸಜ್ಯಪ್ರತಿಷೇಧಾರ್ಥದಲ್ಲಿಯೂ ನಞ್ ಸಮಾಸವಾಗುತ್ತದೆಂದು ತಿಳಿಸಿರುತ್ತಾನೆ. ಅಥವಾ 'ನಿರ್ಮಕ್ಷಿಕಮ್' ಇತ್ಯಾದಿ ಪ್ರಯೋಗದಂತೆ 'ಅತಚ್ಚಬ್ದಾತ್' ಎಂಬ ಪದವನ್ನು ಅವ್ಯಯೀಭಾವ ಸಮಾಸವನ್ನು ಆಶ್ರಯಿಸಿ. ('ಅರ್ಥಾಭಾವೇ ಅವ್ಯಯೀಭಾವಃ' ಎಂಬುದಾಗಿ ಅವ್ಯಯೀಭಾವ ಸಮಾಸವನ್ನು ಆಶ್ರಯಿಸಿ) ಪ್ರಯೋಗಿಸಿದ್ದಾರೆ. ಹೀಗೆ ವೈಯ್ಯಾಕರಣಗಳ ಪ್ರಯೋಗ ಅಥವಾ ಅವ್ಯಯೀಭಾವ ಸಮಾಸಗಳನ್ನು

ದೃಷ್ಟಾಂತವಾಗಿಟ್ಟುಕೊಂಡು ಭಾಷ್ಯದಲ್ಲಿ 'ಅತಶ್ಚಬ್ದಾತ್' ಎಂಬುದಕ್ಕೆ 'ತಚ್ಚಬ್ದಾ ಅಭಾವಾತ್' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.

ಅವ್ಯಯೀಭಾವ ಸಮಾಸ ಮಾಡಿದರೆ 'ಅವ್ಯಯೀಭಾವಸ್ಯ' ಎಂಬ ಸೂತ್ರಾನುಸಾರ ಸಮಾಸದಿಂದ ಅವ್ಯಯತ್ವ ಬಂದು 'ನಾವ್ಯಯೀಭಾವಸ್ಯಾತೋಽತ್ವ ಪಂಚಮ್ಯಾಃ' ಎಂಬ ಸೂತ್ರದಿಂದ 'ಅಂ' ಆದೇಶ ಬಂದು 'ಅತಶ್ಚಬ್ದಮ್' ಎಂದಾಗಬೇಕಲ್ಲವೇ? ಎಂದರೆ ಪಂಚಮಿಯನ್ನು ಬಿಟ್ಟು ಉಳಿದೆಡೆ 'ಅಂ' ಆದೇಶಬರುತ್ತದೆಂದು ಹೇಳಿದ್ದರಿಂದ; 'ಅತಶ್ಚಬ್ದಾತ್' ಎಂಬುದು ಪಂಚಮೀ ವಿಭಕ್ತಿಯಲ್ಲಿರುವ ಪ್ರಯುಕ್ತ 'ಅಂ' ಆದೇಶ ಬರುವುದಿಲ್ಲ.

ಹೀಗೆ 'ಅತದ್ಧರ್ಮಾಭಿಲಾಪಾತ್' ಎಂಬ ಸೂತ್ರದಲ್ಲಿಯೂ ಸಮಾಸ ವಿಚಾರವನ್ನು ಎರಡು ಬಗೆಯಲ್ಲಿ ತಿಳಿದುಕೊಳ್ಳಬೇಕು.

ಬ್ರಹ್ಮಸೂತ್ರ

'ಪ್ರಾಣಭೃಚ್ಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। प्राणभृच्च ।। ४ ।।

ವಾಯು ಮತ್ತು ಜೀವರು ಹಿಂದೆ ಹೇಳಿದ ಆತ್ಮಶಬ್ದಮತ್ತು ಮುಕ್ತಪ್ರಾಪ್ಯತ್ವಲಿಂಗಗಳಿಂದಲೇ ದ್ಯುಭ್ವಾದ್ಯಾಶ್ರಯರಾಗುವುದಿಲ್ಲ.

ಜೀವನೂ ಸಹ ಈ ಹಿಂದಿನ ಕಾರಣದಿಂದಲೇ ದ್ಯುಭ್ವಾದ್ಯಾಶ್ರಯನಾಗುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಆತ್ಮಶಬ್ದ - ಮುಕ್ತಪ್ರಾಪ್ಯತ್ವಗಳು ಜೀವ ಹಾಗೂ ವಾಯುದೇವರಲ್ಲಿ ಇಲ್ಲ

ब्रह्मसूत्रभाष्यम् –
एतैरेव हेतुभिर्न जीवो वायुश्च ।

ಅನುವಾದ - ಈ ಹಿಂದಿನ ಕಾರಣಗಳಿಂದಲೇ ಜೀವನಾಗಲೀ ವಾಯುದೇವನಾಗಲೀ ದ್ಯುಭ್ವಾದ್ಯಾಯತನರೆಂದು ವಿವಕ್ಷಿಸಲು ಸಾಧ್ಯವಿಲ್ಲ.

ಪ್ರತಿಪದಾರ್ಥ -- 'ಸ ಏಷೋಂ೦ತಶ್ಚರತೇ' ಎಂಬುದಾಗಿ ಜೀವಲಿಂಗ ಕೇಳಿಸುತ್ತಿರುವುದರಿಂದ ಜೀವನಾಗಲೀ ಅಥವಾ ವಾಯುವಾಗಲೀ ದ್ಯುಭ್ವಾದ್ಯಾಯತನರಾಗಬಹುದಲ್ಲವೇ ಎಂಬ ಆಶಂಕೆಯನ್ನು ಪರಿಹರಿಸುವ ಮೂಲಕ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ಏತೈರೇವ = ಹಿಂದೆ ಹೇಳಿದ, ಹೇತುಭಿಃ = ಕಾರಣಗಳಿಂದಲೇ, ಜೀವಃ = ಜೀವನು, ಚ = ಮತ್ತು, ವಾಯುಃ = ವಾಯುದೇವನು, ನ = ದ್ಯುಭ್ವಾದ್ಯಾಯತನರಾಗುವುದಿಲ್ಲ.

ಬಹುಧಾಜಾಯಮಾನತ್ವವು ವಿಷ್ಣುವಿನ ಧರ್ಮ

ब्रह्मसूत्रभाष्यम् – 'अजायमानो बहुधा विजायते' (तै.आ.३–१३–१) इति तस्यैव बहुधा जन्मोक्तेः ।।४।।

ಅನುವಾದ - ಏಕೆಂದರೆ ವಿಷ್ಣುವಿಗೆ ವಿಕಾರವಿಲ್ಲದ್ದರಿಂದ ರಾಮ, ಕೃಷ್ಣ ಮೊದಲಾದ ಅನೇಕರೂಪಗಳಿಂದ ಅವತರಿಸುತ್ತಾನೆ. ಹೀಗೆ ಶ್ರುತಿ ಇರುವುದರಿಂದ 'ಬಹುಧಾ ಜಾಯಮಾನಃ' ಎಂದು ವಿಷ್ಣುವಿಗೆ ಬಹುವಿಧ ಅವತಾರವನ್ನು ಹೇಳಲಾಗಿದೆ.

ಪ್ರತಿಪದಾರ್ಥ -- ಏಕೆಂದರೆ ಅಜಾಯಮಾನಃ = ಜನ್ಮರಹಿತನಾದರೂ, ಬಹುಧಾ = ಅನಂತರೂಪಗಳಿಂದ, ವಿಜಾಯತೇ = ಪ್ರಕಟನಾಗುತ್ತಾನೆ, ಇತಿ = ಹೀಗೆ, ತಸ್ಯೈವ = ಆ ವಿಷ್ಣುವಿಗೇ, ಬಹುಧಾ = ನಾನಾವಿಧವಾಗಿ, ಜನ್ಮೋಕ್ತೇಃ = ಪ್ರಾದುರ್ಭಾವಾದಿಗಳನ್ನು ಶ್ರುತಿಯು ಹೇಳಿರುವುದರಿಂದ.

ಸತ್ತರ್ಕದೀಪಾವಳಿ

ಜೀವಪ್ರಾಪಕ ಪೂರ್ವಪಕ್ಷಕ್ಕಾಗಿ ಮೂರನೆಯ ಸೂತ್ರ

सत्तर्कदीपावलिः – यदुक्तं 'जीवो द्युभ्वाद्याश्रयः' इति तं निराकुर्वत् सूत्रं पठित्वा व्याचष्टे – प्राणेत्यादिना ।। उक्तहेतुभिर्यथा द्युभ्वाश्रयो वायुर्न भवति । तथा सुतरां जीवोऽपि । यत् तत्प्रापकं वचनमुक्तम् 'स एषोन्तश्चरते' इति तद्विष्णोः श्रुत्या घटयति । अजायमान इति ।।

ಹಿಂದೆ ಜೀವನು ದ್ಯುಭ್ವಾದ್ಯಾಯಶ್ರನಾಗಿದ್ದಾನೆಂದು ಪೂರ್ವಪಕ್ಷ ಮಾಡಲಾಗಿತ್ತು. ಅದನ್ನು ನಿರಾಕರಣೆ ಮಾಡುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ ''ಪ್ರಾಣಭೃಚ್ಚ'' ಇತ್ಯಾದಿಯಾಗಿ. ಹಿಂದೆ ಹೇಳಿದ ಹೇತುಗಳಿಂದ ದ್ಯುಭ್ವಾದ್ಯಾಶ್ರಯನಾದವನು ವಾಯುದೇವನು ಹೇಗೆ ಆಗುವುದಿಲ್ಲವೋ, ಅದರಂತೆ ಜೀವನೂ ಸಹ ಸುತರಾಂ ದ್ಯುಭ್ವಾದ್ಯಾಶ್ರಯನಾಗುವುದಿಲ್ಲ. ಜೀವಪ್ರಾಪಕವಾದ ಯಾವ ಶ್ರುತಿವಾಕ್ಯವನ್ನು ಹೇಳಲಾಗಿತ್ತೋ, ಅಂತಹ 'ಸ ಏಷೋಂತಶ್ಚರತೇ' ಎಂಬ ವಾಕ್ಯವನ್ನು ವಿಷ್ಣುವಿನಲ್ಲಿ ಶ್ರುತಿಯ ಆಧಾರದಿಂದ ಸಮನ್ವಯಗೊಳಿಸುತ್ತಿದ್ದಾರೆ ''ಅಜಾಯಮಾನಃ'' ಇತ್ಯಾದಿಯಾಗಿ.

ತತ್ತ್ವಪ್ರಕಾಶಿಕಾ

ಜೀವ ಹಾಗೂ ವಾಯು ಇವರು ದ್ಯುಭ್ವಾದ್ಯಾಯತನರು ಏಕಲ್ಲ ?

तत्वप्रकाशिका – उक्तप्राप्त्या जीववायू किमत्र वाच्यौ न स्यातामित्याशङ्कां परिहरत्सूत्रं पठित्वा व्याचष्टे – प्राणभृच्चेति ।। चशब्दात् प्रागुक्तहेतूनां नञश्च समाकर्षः । आत्मशब्दो मुक्तोपसृप्यत्वमतच्छब्दस्तत्प्रापकश्रुतीनां विष्णुपरत्वमित्युक्तहेतवः ।

ಹಿಂದೆ ಪೂರ್ವಪಕ್ಷಮಾಡುವಾಗ ಜೀವ ಹಾಗೂ ವಾಯುದೇವತೆಯು ಏಕೆ ದ್ಯುಭ್ವಾದ್ಯಾಯತನರಾಗಿರಬಾರದು ಎಂದು ಆಶಂಕಿಸಲಾಗಿತ್ತು. ಅದನ್ನು ಪರಿಹಾರಮಾಡುವುದಕ್ಕಾಗಿ ಸೂತ್ರವನ್ನು ಪಠಿಸಿ ''ಪ್ರಾಣಭೃಚ್ಚ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಸೂತ್ರದಲ್ಲಿರುವ ಚಶಬ್ದವು ಹಿಂದೆ ಹೇಳಿರುವ ಆತ್ಮಶಬ್ದಾದಿ ಹೇತುಗಳನ್ನು ಮತ್ತು 'ನಾನುಮಾನಮ್' ಎಂಬಲ್ಲಿರುವ ನಞ್‌ನ್ನು ಅನುಕರ್ಷ ಮಾಡುತ್ತಿದೆ. ಆತ್ಮಶಬ್ದ, ಮುಕ್ಯೋಪಸೃಪ್ಯತ್ವ, ಅತಚ್ಛಬ್ದ ಮತ್ತು ತತ್ಪ್ರಾಪಕವಾದ ಶ್ರುತಿ ಇವುಗಳೆಲ್ಲಾ ವಿಷ್ಣುವನ್ನು ಪ್ರತಿಪಾದಿಸುತ್ತಿವೆ ಎಂದಷ್ಟೇ ಅಲ್ಲ. ಜೀವ ಹಾಗೂ ವಾಯುದೇವತೆಯಲ್ಲಿ ಈ ಯಾವ ಹೇತುಗಳೂ ಸಹ ಬರುವುದಿಲ್ಲ.

ಬಹುಧಾಜಾಯಮಾನತ್ವವು ಜೀವಪ್ರಾಪಕಲಿಂಗವಲ್ಲ

तत्वप्रकाशिका – ननु 'वायुना वै गौतम' इत्यादिश्रुतेर्विष्णुपरत्वेन वायुसाधकत्वाभावेऽपि बहुधा जन्मलिङ्गेन जीवोऽत्र वाच्यः किं न स्यादित्यत आह – अजायमान इति ।।४।।

'ವಾಯುನಾ ವೈ ಗೌತಮ' ಇತ್ಯಾದಿ ಶ್ರುತಿಗಳು ವಿಷ್ಣುಪರವಾಗಿರುವುದರಿಂದ ವಾಯುವನ್ನು ಪ್ರತಿಪಾದಿಸಲಾರವು. ಆದರೂ ಸಹ ಬಹುಧಾಜಾಯಮಾನತ್ವವೆಂಬ ಲಿಂಗವಿರುವುದರಿಂದ ಜೀವನು ಏಕೆ ಪ್ರತಿಪಾದ್ಯನಾಗಬಾರದು ಎಂಬ ಪ್ರಶ್ನೆಗೆ ''ಅಜಾಯಮಾನಃ'' ಎಂಬ ಭಾಷ್ಯವು ಉತ್ತರಿಸುತ್ತಿದೆ.

ಭಾವದೀಪ

ತಾತ್ಪರ್ಯಚಂದ್ರಿಕೆಯಲ್ಲಿ ಸೂತ್ರದಲ್ಲಿರುವ 'ಚ'ಶಬ್ದ ವ್ಯಾಖ್ಯಾನ

भावदीपः – प्राणभृच्च ।। उक्तप्राप्येति ।। लिङ्गसमाख्याभ्यामुक्त-प्राप्येत्यर्थः। भाष्ये चशब्दस्य वायुसमुच्चायकत्वमात्रभ्रमं वारयति – चशब्दादिति ।। न केवलं वायोः समुच्चयः, किन्तु प्रागुक्तहेतूनां नञश्च समाकर्ष इत्यर्थः । तथैव चन्द्रिकोक्तेः।

ಪ್ರಾಣಾಭೃಚ್ಚ

ಟೀಕೆಯಲ್ಲಿರುವ ''ಉಕ್ತಪ್ರಾಪ್ತ್ಯಾ'' ಎಂಬ ಪದಕ್ಕೆ ಲಿಂಗ ಹಾಗೂ ಸಮಾಖ್ಯಾಪ್ರಮಾಣಗಳಿಂದ ಹಿಂದೆ ಹೇಳಿದ ಪ್ರಕಾರ ಎಂದರ್ಥ. ಭಾಷ್ಯದಲ್ಲಿ ''ವಾಯುಶ್ಚ'' ಎಂಬುದಾಗಿ ಹೇಳಿರುತ್ತಾರೆ. ಇಲ್ಲಿರುವ ''ಚ'' ಶಬ್ದವು ಕೇವಲ ವಾಯುವನ್ನು ಮಾತ್ರ ಜೀವನ ಜೊತೆಗೆ ಸಮುಚ್ಚಯ ಮಾಡುತ್ತಿದೆ ಎಂಬ ಭ್ರಮವನ್ನು ನಿರಾಕರಿಸಲು ''ಚ ಶಬ್ದಾತ್'' ಎಂಬ ಟೀಕೆಯು ಹೊರಟಿದೆ. ಕೇವಲ ವಾಯುವನ್ನಷ್ಟೇ ''ಚ'' ಶಬ್ದವು ಸಮುಚ್ಚಯ ಮಾಡುತ್ತಿಲ್ಲ ಹೊರತಾಗಿ ಹಿಂದೆ ಹೇಳಲ್ಪಟ್ಟ ಹೇತುಗಳನ್ನು ಮತ್ತು 'ನಞ್' ಎಂಬುದನ್ನು ಸಮಾಕರ್ಷ ಮಾಡುವುದಕ್ಕಾಗಿಯೂ ''ಚ'' ಶಬ್ದವು ಹೇಳಲ್ಪಟ್ಟಿದೆ. ಚಂದ್ರಿಕಾ ಗ್ರಂಥದಲ್ಲಿ ಹೀಗೆ ವ್ಯಾಖ್ಯಾನಿಸಿರುತ್ತಾರೆ.

ಸೂತ್ರದಲ್ಲಿರುವ ಚಶಬ್ದದಿಂದ ಎಷ್ಟು ಹೇತುಗಳನ್ನು ಅನುಕರ್ಷ ಮಾಡಬೇಕು ?

ಭಾವದೀಪಃ – हेतुभिरिति बहुवचनार्थं व्यनक्ति – **आत्मशब्द इति** ।। विष्णावेवाऽत्मशब्दस्य रूढत्वान्न शिवादिकान् । 'श्रुतिर्वक्ति' इति एतदधिकरणानुव्याख्याने । तथा आत्मशब्दं यतो हेतुं कृत्वा जीवं न्यवारयत् । स्वशब्दात् प्राणभृच्चैव नोक्त इत्येव वेदराट् इति फलाध्यायाद्यपादीयानुव्याख्याने । तथा स्वशब्दपर्यायात्मशब्दादिति तत्वनिर्णये । आत्मशब्दादिति हेतोश्चानुकर्षणार्थ इति सुधायां चात्मशब्द मात्रानुकर्षोक्तिस्तु तत्र तन्मात्रोपयोगाद्वा वर्णकान्तराभिप्रायेण वेति ध्येयम् ।

''ಹೇತುಭಿಃ'' ಎಂಬುದಾಗಿ ಬಹುವಚನವನ್ನು ಭಾಷ್ಯದಲ್ಲಿ ಪ್ರಯೋಗಿಸಿದ್ದಾರೆ. ಅದರ ಅರ್ಥವನ್ನು ಆತ್ಮಶಬ್ದ ಎಂಬ ವಾಕ್ಯದಿಂದ ವಿವರಿಸುತ್ತಿದ್ದಾರೆ.

ವಿಷ್ಣುವಿನಲ್ಲೇ ಆತ್ಮಶಬ್ದವು ರೂಢವಾಗಿರುವುದರಿಂದ ಶ್ರುತಿಯು ರುದ್ರಾದಿಗಳನ್ನು ಹೇಳಿರುವುದಿಲ್ಲ. ಹೀಗೆ ಈ ಅಧಿಕರಣದ ಅನುವ್ಯಾಖ್ಯಾನದಲ್ಲಿ ಆತ್ಮಶಬ್ದವನ್ನಷ್ಟೇ ಸೂತ್ರದಲ್ಲಿ ಅನುಕರ್ಷ ಮಾಡಿದ್ದಾರೆ. ಮತ್ತು ''ಆತ್ಮಶಬ್ದಂ ಯತೋ ಹೇತುಂ ಕೃತ್ವಾ ಜೀವಂ ನ್ಯವಾರಯತ್ ಸ್ವಶಬ್ದಾತ್ ಪ್ರಾಣಭೃಚ್ಚೈವ ನೋಕ್ತ ಇತ್ಯೇವ ವೇದರಾಟ್'' - ಆತ್ಮಶಬ್ದವೆಂಬ ಹೇತುವಿನಿಂದ ಜೀವನನ್ನು ನಿರಾಕರಿಸಲಾಗಿದೆ ಎಂಬುದಾಗಿ

ಫಲಾಧ್ಯಾಯದ ಮೊದಲನೇ ಪಾದದ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಇದರಂತೆ ''ಸ್ವಶಬ್ದಪರ್ಯಾಯ-ಆತ್ಮಶಬ್ದಾತ್'' ಎಂದು ''ಚ'' ಶಬ್ದಕ್ಕೆ ಪರ್ಯಾಯಪದವಾದ ಆತ್ಮಶಬ್ದದಿಂದ ಎಂಬುದಾಗಿ ತತ್ವನಿರ್ಣಯದಲ್ಲಿಯೂ ಹೇಳಿದ್ದಾರೆ. ಇದರಂತೆ ''ಆತ್ಮಶಬ್ದಾದಿತಿ ಹೇತೋಶ್ಚಾನುಕರ್ಷಣಾರ್ಥಃ'' 'ಆತ್ಮಶಬ್ದಾತ್' ಎಂಬುದನ್ನು ಅನುಕರ್ಷ ಮಾಡುವುದಕ್ಕಾಗಿ ಎಂಬುದಾಗಿ ಸುಧೆಯಲ್ಲಿಯೂ ಸಹ ಹೇಳಿದ್ದಾರೆ. ಹೀಗೆ ಎಲ್ಲೆಡೆಯೂ ಕೇವಲ ಆತ್ಮಶಬ್ದದ ಅನುಕರ್ಷವಷ್ಟೇ ವಿವಕ್ಷಿತವಾಗಿರುವಾಗ ಪ್ರಕೃತ ಟೀಕೆಯಲ್ಲಿ ''ಮುಕ್ತೋಪಸೃಪ್ಯತ್ವ'', ''ಅತತ್ ಶಬ್ದ'', ''ತತ್ಪ್ರಕಶ್ರುತಿ'' ಇವುಗಳನ್ನೆಲ್ಲ ಅನುಕರ್ಷ ಮಾಡಿಕೊಳ್ಳಬೇಕೆಂದು ಹೇಳಿದ್ದು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಅನುವ್ಯಾಖ್ಯಾನಾದಿಗಳಲ್ಲಿ ಆತ್ಮಶಬ್ದಕ್ಕಷ್ಟೇ ಉಪಯೋಗವಿರುವುದರಿಂದ ಹಾಗೆ ಹೇಳಿದ್ದಾರೆ. ಅಥವಾ ಇದು ಮತ್ತೊಂದು ವ್ಯಾಖ್ಯಾನವೆಂದೂ ಸಹ ತಿಳಿಯಬಹುದು.

ರುದ್ರಾದಿಶಬ್ದಗಳಿಗೆ ವಿಷ್ಣುಪರತ್ವವೂ ಕೂಡ ಸೂತ್ರದ ಹೇತು

ಭಾವದೀಪಃ – तत्प्रापकेति ।। अतच्छब्दादित्यस्य रुद्रप्रधानवाचिशब्दा-भावादित्यर्थोक्त्या तत्प्रापकरुद्रादिशब्दानांविष्णुपरत्वस्यार्थसिद्धत्वात् सोऽपि सौत्रो हेतुः । अत एवातच्छब्दात् प्राणभृच्चेत्येतद्भाष्य एव रुद्रादिशब्दानां विष्णुपरत्वमुक्तमिति भावः ।

ಟೀಕೆಯಲ್ಲಿ ''ತತ್ಪ್ರಾಪಕಶ್ರುತೀನಾಂ'' ಎಂದು ಹೇಳಿದ್ದಾರೆ. ಅಂದರೆ ರುದ್ರಾದಿಪ್ರಾಪಕವಾದ ಶ್ರುತಿಗಳೂ ಸಹ ಹೇತುವಾಗಿವೆ. ಏಕೆಂದರೆ ''ಅತಶ್ಚಬ್ದಾತ್'' ಎಂಬ ಸೂತ್ರದ ಭಾಗದಿಂದ ರುದ್ರ ಪ್ರಧಾನ ಮೊದಲಾದವುಗಳನ್ನು ಪ್ರತಿಪಾದಿಸುವ ಶಬ್ದಗಳು ಇಲ್ಲದ ಕಾರಣ ಎಂಬರ್ಥವನ್ನು ಹೇಳಲಾಗಿದೆ. ಆದ್ದರಿಂದ ರುದ್ರ ಪ್ರಾಪಕವಾದ ಆ ಎಲ್ಲ ಶಬ್ದಗಳು ವಿಷ್ಣುಪರವೆಂಬರ್ಥವು ಹಿಂದಿನ ಸೂತ್ರದಿಂದಲೇ ಸಿದ್ಧವಾಗಿದೆ. ಆದ್ದರಿಂದ ತತ್ಪ್ರಾಪಕಶ್ರುತಿ ಎಂಬುದೂ ಸಹ ಸೂತ್ರದಲ್ಲಿ ವಿವಕ್ಷಿತವಾದ ಹೇತುವೇ ಆಗುತ್ತದೆ. ಆದ್ದರಿಂದಲೇ 'ಅತತ್ ಶಬ್ದಾತ್' 'ಪ್ರಾಣಭೃಚ್ಚ' ಎಂಬ ಸೂತ್ರಗಳ ಭಾಷ್ಯದಲ್ಲಿಯೇ ರುದ್ರಾದಿ ಶಬ್ದಗಳಿಗೆ ವಿಷ್ಣುಪರತ್ವವನ್ನು ಹೇಳಿರುತ್ತಾರೆ ಎಂದು ತಿಳಿಯಬೇಕು.

'ಅನ್ಯನಾಮ್ನಾಂ ಗತಿರ್ವಿಷ್ಣುಃ'

ಭಾವದೀಪಃ – इत्यादिश्रुतेरिति ।। वायुसमाख्यायाः एवं नानाविधैः

शब्दैरिति 'अन्यनाम्नां गतिर्विष्णुः' इति चोक्तदिशा महायोगविद्वद्गूढिभ्यां विष्णुपरत्वेनेत्यर्थः ।

ವಾಯುಶ್ರುತಿಯ ಸಮಾಖ್ಯೆಯನ್ನು ಈ ಹಿಂದೆ ''ಏವಂ ನಾನಾವಿಧೈಃ ಶಬ್ದೈಃ'' ಎಂಬುದಾಗಿ ಮತ್ತು ''ಅನ್ಯನಾಮ್ನಾಂ ಗತಿರ್ವಿಷ್ಣುಃ'' ಎಂಬುದಾಗಿಯೂ ಮಹಾಯೋಗ ಹಾಗೂ ವಿದ್ವದ್ಗೂಢಿಗಳಿಂದ ವಿಷ್ಣು ಪರವೆಂದು ಸಮರ್ಥಿಸಲಾಯಿತು ಆದ್ದರಿಂದ ಎಂದರ್ಥ.

ಬೃಹದಾರಣ್ಯಕದ ಪಂಚಮಾಧ್ಯಾಯದಲ್ಲಿ ವಾಯುದೇವನ ಬಗ್ಗೆ

भावदीपः – यद्यपि बृहदारण्यके पञ्चमे 'तच्चेत् त्वं याज्ञवल्क्यसूत्रम् अविद्वान् तं चान्तर्यामिणं ब्रह्म गवीरुदजसे' इति । 'वेद वा अहं गौतम तत् सूत्रं तं चान्तर्यामिणम्' इति च सूत्रान्तर्यामिणोर्द्वयोरप्युक्त्या 'स्यूतं जगदिदं यस्मिन् सूत्रं वायुरसौ स्मृतः' इति तद्भाष्योक्त्या च वायुशब्दो वायुपर इति प्रतीयते ।

ವಸ್ತುತಃ ಬೃಹದಾರಣ್ಯಕೋಪನಿಷತ್ತಿನ ಪಂಚಮಾಧ್ಯಾಯದಲ್ಲಿ 'ತಚ್ಚೇತ್ ತ್ವಂ ಯಾಜ್ಞವಲ್ಕ್ಯ-ಸೂತ್ರಮವಿದ್ವಾನ್ ತಂ ಚಾಂತರ್ಯಾಮಿಣಂ ಬ್ರಹ್ಮ ಗವೀರುದಜಸೇ' ಎಂದು, ಮತ್ತು 'ವೇದ ವಾ ಅಹಂ ಗೌತಮ ಸೂತ್ರಂ ತಂ ಚಾಂತರ್ಯಾಮಿಣಂ' ಎಂಬುದಾಗಿಯೂ ಸೂತ್ರ ಮತ್ತು ಅಂತರ್ಯಾಮಿಗಳ ಬಗ್ಗೆ ಹೇಳಲಾಗಿದೆ. ಇದೇ ಸಂದರ್ಭದ ಭಾಷ್ಯದಲ್ಲಿ 'ಸ್ಯೂತಂ ಜಗದಿದಂ ಯಸ್ಮಿನ್ ಸೂತ್ರಂ ವಾಯುರಸೌ ಸ್ಮೃತಃ' ಎಂಬುದಾಗಿ ಹೇಳಿರುವುದರಿಂದ ಬೃಹಾದಾರಣ್ಯಕ ಭಾಷ್ಯದ ಮಾತಿನಂತೆ ವಾಯುಶಬ್ದವು ವಾಯುಪರವೆಂದೇ ತಿಳಿಯುತ್ತದೆ.

ವಿಶೇಷವಿಚಾರ - ತಚ್ಚೇತ್ ತ್ವಂ ಯಾಜ್ಞವಲ್ಕ್ಯಸೂತ್ರಮ್ ಅವಿದ್ವಾನ್ ತಂ ಚಾಂತರ್ಯಾಮಿಣಮಿತಿ। ಯೋ ವಾ ಇದಂ ಕಶ್ಚಿದ್ ಬ್ರೂಯಾದ್ ವೇದ ವೇದೇತಿ। ಯಥಾ ವೇತ್ಥ ತಥಾ ಬ್ರೂಹೀತಿ।

ನಾನು ಆ ಸೂತ್ರ ಮತ್ತು ಅಂತರ್ಯಾಮಿಗಳ ಸ್ವರೂಪವನ್ನು ತಿಳಿದಿದ್ದೇನೆ. ಯಾಜ್ಞವಲ್ಕ್ಯರೇ, ನೀವು ಸೂತ್ರ ಮತ್ತು ಅಂತರ್ಯಾಮಿಗಳ ಸ್ವರೂಪವನ್ನು ತಿಳಿಯದೆ ಬ್ರಹ್ಮಜ್ಞಾನಿಗಳಿಗೆ ಸೇರಬೇಕಾದ ಗೋವುಗಳನ್ನು ತೆಗೆದುಕೊಂಡು ಹೋದರೆ ನಿಮ್ಮ ತಲೆಯು

ಬಿದ್ದುಹೋಗುತ್ತದೆ ಎಂದು ಉದ್ದಾಲಕನು ಹೇಳಿದನು. ಗೌತಮರೇ, 'ಆ ಸೂತ್ರವನ್ನು ಮತ್ತು ಆ ಅಂತರ್ಯಾಮಿಯನ್ನು ನಾನು ತಿಳಿದಿದ್ದೇನೆ ಎಂದು ಯಾಜ್ಞವಲ್ಕ್ಯರು ಹೇಳಿದರು. ಇದನ್ನು ನಾನು ತಿಳಿದಿದ್ದೇನೆ, ನಾನು ತಿಳಿದಿದ್ದೇನೆ' ಎಂದು ಯಾರು ಬೇಕಾದರೂ ಆತ್ಮಶ್ಲಾಘನೆ ಮಾಡಿಕೊಳ್ಳಬಹುದು. ಅದರಿಂದ ಪ್ರಯೋಜನವಿಲ್ಲ. ತಿಳಿದಿದ್ದರೆ ತಿಳಿದಂತೆ ಹೇಳಿರಿ ಎಂದು ಉದ್ದಾಲಕನು ಹೇಳಿದನು.

ಸ್ಯೂತಂ ಜಗದಿದಂ ಯಸ್ಮಿನ್ ಸೂತ್ರಂ ವಾಯುರಸೌ ಸ್ಮೃತಃ।
ತಂ ಚಾಪಿ ಯಮಯೇದ್ ಯಸ್ಮಾದ್ ಅಂತರ್ಯಾಮಿ ಹರಿಃಸ್ಮೃತಃ।

ಈ ಜಗತ್ತು ಯಾರಲ್ಲಿ ಆಶ್ರಯ ಪಡೆದಿದೆಯೋ ಅವನು ಸೂತ್ರನೆನಿಸುವನು. ಆದ್ದರಿಂದ ವಾಯುವೇ ಸೂತ್ರನೆನಿಸಿದ್ದಾನೆ. ಅವನಿಗೂ ನಿಯಾಮಕನಾದುದರಿಂದ ಹರಿಯು ಅಂತರ್ಯಾಮಿ ಎನಿಸಿದ್ದಾನೆ.

ಅಂತರ್ಯಾಮಿ ಪರವಾಗಿ ಉಪನಿಷತ್ತನ್ನು ಅರ್ಥೈಸಬೇಕು

ಭಾವದೀಪಃ – तथापि 'तं चापि यमयेद् यस्मादन्तर्यामी हरिः स्मृतः' इति तद्भाष्योक्त्यैव पादान्त्यप्राणनयन्यायेन वाय्वन्तर्यामिविवक्षया विष्णुपरत्वेनेत्युक्तम् । यथोत्तरनये प्राणपदस्य विष्णुपरत्वं वक्ष्यति । नचैतदर्थद्वयं विरुद्धम् अन्तर्यामिविवक्षयेत्यादि ।

ಆದರೂ ಸಹ "ತಂ ಚಾಪಿ ಯಮಯೇದ್ಯಸ್ಮಾದಂತರ್ಯಾಮೀ ಹರಿಃ ಸ್ಮೃತಃ" ಎಂದು ಅದೇ ಅಧಿಕರಣದ ಭಾಷ್ಯದಲ್ಲಿ ವಾಯುಶಬ್ದದಿಂದ ಅಂತರ್ಯಾಮಿಯಾದ ಭಗವಂತನು ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆಂದು ಹೇಳಿರುತ್ತಾರೆ. ಅಷ್ಟೇ ಅಲ್ಲದೆ ಅಂತಿಮಪ್ರಾಣಾಧಿಕರಣದ ನ್ಯಾಯದಿಂದ ಅಂತರ್ಯಾಮಿವಿವಕ್ಷೆಯಿಂದ ಹಾಗೆ ವಾಯುಪರವಾಗಿ ಹೇಳಿರಬಹುದೆಂದು ತಿಳಿಯಬೇಕು. ಮುಂದಿನ ಅಧಿಕರಣದಲ್ಲಿ ಪ್ರಾಣಪದವು ವಿಷ್ಣುಪರವೆಂದು 'ನಚ' ಏತದರ್ಥದ್ವಯಂ ವಿರುದ್ಧಮ್ ಅಂತರ್ಯಾಮಿವಿವಕ್ಷಯಾ' ಎಂದು ಒಂದೇ ಪ್ರಾಣಪದಕ್ಕೆ ಎರಡು ಅರ್ಥಗಳನ್ನು ಹೇಳುವುದು ವಿರುದ್ಧವಲ್ಲ ಅಂತರ್ಯಾಮಿಯೆಂದು ವಿವಕ್ಷಿಸಿದ್ದರಿಂದ. ಇತ್ಯಾದಿಯಾಗಿ ಹೇಳುತ್ತಾರೆ.

ಉಳಿದವರ ಲಿಂಗಗಳು ಸಾವಕಾಶ

भावदीपः – वक्ष्यते च 'जीवमुख्यप्राणलिङ्गात्' इति चेत्तद् व्याख्यातमिति सूत्रेऽपि । 'आकाश एव तदोतं च' इति श्रुतेस्तु आकाशस्य प्रकृतित्वेऽपि 'अम्बरान्तधृतेः' इति अक्षरनये 'पृथिव्यादि प्रकृत्यन्तम्' इति स्मृत्या प्रकृतिद्वारा सर्वस्याक्षराख्यविष्ण्वाश्रितत्वस्यैवाग्रेऽभिधानाद् विष्णोर्द्युभ्वाद्यायतनत्वपरत्वेन सावकाशत्वं स्पष्टमिति भावः ।। इत्यत आहेति ।। अजायमान इति वाक्यं च विष्णुपरं पुरुषसूक्तस्थत्वात्तस्य च वैष्णवत्वं प्रागेव साधितमिति भावः ।। ४ ।।

'ಜೀವಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಲ್ಲಿಯೂ ಸಹ ಅದನ್ನು ಮುಂದೆ ಹೇಳುತ್ತಾರೆ. ಆಕಾಶ ಏವ ತದೋತಂ ಚ' ಎಂಬ ಶ್ರುತಿಯಲ್ಲಿಯೂ ಸಹ ಆಕಾಶಶಬ್ದವು ಪ್ರಕೃತಿಪರವಾಗಿರಬಹುದು. ಆದರೂ ಸಹ 'ಅಂಬರಾಂತಧೃತೇಃ' ಎಂಬುದಾಗಿ ಅಕ್ಷರಾಧಿಕರಣದಲ್ಲಿ ''ಪೃಥಿವ್ಯಾದಿಪ್ರಕೃತ್ಯಂತಂ'' ಎಂಬ ಸ್ಮೃತಿಯಿಂದ ಪ್ರಕೃತಿಯ ಮುಖಾಂತರ ಎಲ್ಲವೂ ಅಕ್ಷರನೆಂಬ ವಿಷ್ಣುವಿನಲ್ಲಿ ನೆಲಸಿದೆ ಎಂದು ಮುಂದೆ ಹೇಳುತ್ತಾರೆ. ಆದ್ದರಿಂದ ವಿಷ್ಣುವಿಗೆ ದ್ಯುಭ್ವಾದ್ಯಾಯತನಪರತ್ವವು ಇರುವುದರಿಂದ ಸಾವಕಾಶವಾಗಿದೆ ಎಂಬುದು ಸ್ಪಷ್ಟವಾಗಿದೆ.

ಟೀಕೆಯಲ್ಲಿರುವ ''ಇತ್ಯತ ಆಹ'' ಇತ್ಯಾದಿ ಪದಗಳ ಅರ್ಥ ಹೀಗಿದೆ - ''ಅಜಾಯಮಾನ'' ಎಂಬ ವಾಕ್ಯವೂ ಸಹ ವಿಷ್ಣುಪರವಾಗಿದೆ. ಏಕೆಂದರೆ ಪುರುಷಸೂಕ್ತದಲ್ಲಿಯೂ ಈ ವಿಚಾರವು ಪ್ರಸಕ್ತವಾಗಿರುವುದರಿಂದ ಇದು ವಿಷ್ಣುಪ್ರತಿಪಾದಕವಾಗಿದೆ ಎಂದು ಈ ಹಿಂದೆ ಸಾಧಿಸಿದ್ದೇವೆ.

ವಿಶೇಷವಿಚಾರ - 'ಪ್ರಾಣಭೃಚ್ಚ ' ಎಂಬುದು ನಾಕನೆಯ ಸೂತ್ರ. ಈ ಸೂತ್ರದಲ್ಲಿ ಜೀವ ಹಾಗೂ ವಾಯು ಇಬ್ಬರು ದ್ಯುಭ್ವಾದ್ಯಾಯತನರಲ್ಲವೆಂದು ಸಮರ್ಥಿಸಲಾಗಿದೆ. ಚಶಬ್ದದಿಂದ ಹಿಂದಿನೆರಡು ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಗಳನ್ನು ಅನುಕರ್ಷ ಮಾಡಬೇಕು. ಹಾಗಾದರೆ ಒಟ್ಟಿಗೆ ಮೂರು ಸೂತ್ರಗಳನ್ನು ಪಠಿಸಬಹುದಿತ್ತು. ಬೇರೆ ಬೇರೆ ಸೂತ್ರಗಳನ್ನಾಗಿ ಏಕೆ ವಿಂಗಡಿಸಿದರು ? ಎಂದರೆ ಮುಂದಿನ ಸೂತ್ರದಲ್ಲಿ 'ಪ್ರಾಣಭೃಚ್ಚ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳುವುದಕ್ಕಾಗಿ ಬೇರೆ ಬೇರೆ ಸೂತ್ರಗಳಾಗಿ ವಿಭಾಗ ಮಾಡಿದ್ದಾರೆ.

ಅದ್ವೈತಿಗಳು ಜೀವನಿಗೆ ಹೇಗೆ ಬ್ರಹ್ಮಾಭೇದವನ್ನು ಒಪ್ಪುತ್ತಾರೋ, ಅದರಂತೆ ಸಾಂಖ್ಯರಾಗಲೀ, ಶೈವರಾಗಲೀ ಜೀವನಿಂದ ಪ್ರಧಾನಾದಿಗಳಿಗೆ ಅಭೇದವನ್ನು ಒಪ್ಪುವುದಿಲ್ಲ. ಹಾಗೇ ಒಪ್ಪಿದ್ದಲ್ಲಿ 'ನಾನುಮಾನಮ್' ಇತ್ಯಾದಿ ಮೂರುಸೂತ್ರಗಳಲ್ಲಿ ಹೇಳಲ್ಪಟ್ಟ ಎಲ್ಲಾ ಹೇತುಗಳನ್ನು ಅನುಕರ್ಷ ಮಾಡಬಹುದಿತ್ತು. ಮತ್ತು 'ಅನ್ಯಮೀಶಮ್' ಎಂಬುದಾಗಿ ಹೇಳಲ್ಪಟ್ಟ ಭೇದವ್ಯಪದೇಶವು ಪ್ರಧಾನಾದಿಗಳನ್ನು ವಿಷಯೀಕರಿಸುವುದಿಲ್ಲ. ಆದ್ದರಿಂದ 'ಭೇದವ್ಯಪದೇಶಾತ್' ಎಂಬ ಮುಂದಿನ ಸೂತ್ರವು ಕೇವಲ ಜೀವಪಕ್ಷವನ್ನು ನಿರಾಸ ಮಾಡುತ್ತಿರುವುದರಿಂದ ಯೋಗವಿಭಾಗ ಮಾಡುವುದು ಸಾರ್ಥಕವಾಗಿದೆ.

'ಪ್ರಾಣಭೃಚ್ಚ' ಎಂಬ ಸೂತ್ರದಲ್ಲಿರುವ ಚಶಬ್ದವು ಟೀಕೆಯಲ್ಲಿ ಹೇಳಿದಂತೆ ಹಿಂದಿನ ಸೂತ್ರಗಳಲ್ಲಿರುವ ಹೇತುಗಳನ್ನಾಗಲೀ ನಞ್ ಎಂಬುದನ್ನಾಗಲೀ ಅನುಕರ್ಷಣೆ ಮಾಡುವುದಕ್ಕಾಗಿ ಮಾತ್ರ ಹೇಳಿರುವುದಲ್ಲ. ಹೊರತಾಗಿ ವಾಯುದೇವತೆಯನ್ನು ಸಮುಚ್ಚಯ ಮಾಡುವುದಕ್ಕಾಗಿಯೂ ಹೇಳಲ್ಪಟ್ಟಿದೆಯೆಂದು ತಿಳಿಯಬೇಕು.

ಬ್ರಹ್ಮಸೂತ್ರ

'ಭೇದವ್ಯಪದೇಶಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् –।। भेदव्यपदेशात् ।। ९ ।।

'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯಲ್ಲಿ ಜೀವಬ್ರಹ್ಮರಿಗೆ ಭೇದವನ್ನು ಹೇಳಿರುವುದರಿಂದಲೂ ಅವರಿಬ್ಬರಿಗೆ ಐಕ್ಯವನ್ನು ಹೇಳಬಾರದು.

'ಅನ್ಯಮೀಶಮ್' ಎಂಬುದಾಗಿ ಜೀವ ಹಾಗೂ ಪರಮಾತ್ಮರಿಗೆ ಭೇದವನ್ನು ಹೇಳಿರುವುದರಿಂದ ಅವರಿಬ್ಬರಿಗೆ ಐಕ್ಯವನ್ನು ಹೇಳಬಾರದು.

ಬ್ರಹ್ಮಸೂತ್ರಭಾಷ್ಯ

ಜೀವ-ಬ್ರಹ್ಮರಿಗೆ ಅಭೇದವನ್ನು ಹೇಳಬಾರದು

ब्रह्मसूत्रभाष्यम् — न चैक्यं वाच्यम् । 'जुष्टं यदा पश्यत्यन्यमीशमस्य महिमानम्' (अन्यमीशमस्य) (मुं.३-१-२) इति भेदव्यपदेशात् ॥९॥

ಅನುವಾದ - ಈ ಪ್ರಕರಣದಲ್ಲಿ ಜೀವ ಮತ್ತು ಭಗವಂತನಿಗೆ ಐಕ್ಯವು ವಿವಕ್ಷಿತವೆಂದು ಹೇಳುವುದು ಸರಿಯಲ್ಲ. ಏಕೆಂದರೆ ಪೂಜೆಗೆ ಅರ್ಹನಾದ ಪರಮಾತ್ಮನನ್ನು ಯಾವಾಗ ತನ್ನಿಂದ ಭಿನ್ನನನ್ನಾಗಿ, ಒಡೆಯನನ್ನಾಗಿ ನೋಡುತ್ತಾನೋ ಆವಾಗ ಅಂತಹ ಪರಮಾತ್ಮನ ಮಹಿಮೆಯನ್ನು ತಿಳಿದು ಶೋಕಸಾಗರವನ್ನು ದಾಟುತ್ತಾನೆ. ಹೀಗೆ ಜೀವೇಶ್ವರರ ಭೇದವು ಉಪದೇಶಿಸಿರುವುದರಿಂದ.

ಪ್ರತಿಪದಾರ್ಥ -- ಜೀವನೇ ದ್ಯುಭ್ವಾದ್ಯಾಯತನನಾಗಲಿ; ಜೀವ ಹಾಗೂ ಪರಮಾತ್ಮರಿಗೆ ಐಕ್ಯವಿರುವುದರಿಂದ ಆತ್ಮಶಬ್ದಾದಿಗಳ ವಿರೋಧವೂ ಸಹ ಬರುವುದಿಲ್ಲವಲ್ಲವೇ ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ಐಕ್ಯಂ = ಜೀವೇಶ್ವರರ ಅಭೇದವನ್ನು, ನಚ ವಾಚ್ಯಂ = ಹೇಳಬಾರದು. ಏಕೆಂದರೆ ಜುಷ್ಟಂ = ಪೂಜೆಗೆ ಅರ್ಹನಾದ ಪರಮಾತ್ಮನನ್ನು, ಯದಾ = ಯಾವಾಗ, ಅನ್ಯಂ = ತನ್ನಿಂದ ಭಿನ್ನನ್ನಾಗಿ, ಈಶಂ = ಒಡೆಯನನ್ನಾಗಿ, ಪಶ್ಯತಿ = ನೋಡುತ್ತಾನೋ, ತದಾ = ಆವಾಗ, ಅಸ್ಯ = ಈ ಪರಮಾತ್ಮನ, ಮಹಿಮಾನಂ = ಮಹಿಮೆಯನ್ನು ತಿಳಿದು, ವೀತಶೋಕಃ = ಶೋಕರಹಿತನಾಗುತ್ತಾನೆ. ಇತಿ = ಹೀಗೆ, ಭೇದವ್ಯಪದೇಶಾತ್ = ಜೀವೇಶ್ವರರ ಭೇದದ ಉಪದೇಶವಿರುವುದರಿಂದ.

ಸತ್ತರ್ಕದೀಪಾವಳಿ

'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯ ವ್ಯಾಖ್ಯಾನ

सत्तर्कदीपावलिः – जुष्टं यदा पश्यत्यन्यमीशम् इति ।। जीवात् द्युभ्वाद्याश्रयस्यात्मनो भेदव्यपदेशादपि नासौ जीव इत्याह – भेदेति ।। अनेन यत् पराभिमतं जीवेशैक्यं तदपि निरस्तं भवति ।।

ಭಾಷ್ಯದಲ್ಲಿ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯನ್ನು ಜೀವಬ್ರಹ್ಮರ ಭೇದವಿಷಯದಲ್ಲಿ ಉಲ್ಲೇಖಿಸಿದ್ದಾರೆ. ಅಂದರೆ ಜೀವನಿಗಿಂತ ದ್ಯುಭ್ವಾದ್ಯಾಶ್ರಯನಾದ ಆತ್ಮನಿಗೆ ಭೇದವನ್ನು ಹೇಳಿರುವ ಕಾರಣ ಜೀವನೇ ದ್ಯುಭ್ವಾದ್ಯಾಶ್ರಯನಾಗಲು ಸಾಧ್ಯವಿಲ್ಲವೆಂದರ್ಥ. ಇದನ್ನು 'ಭೇದವ್ಯಪದೇಶಾತ್' ಎಂಬ ಮಾತಿನಿಂದ ಸ್ಪಷ್ಟಪಡಿಸಿದ್ದಾರೆ. ಇದರಿಂದ ಅದ್ವೈತಿಗಳಿಗೆ ಅಭಿಪ್ರೇತವಾದ ಜೀವಬ್ರಹ್ಮೈಕ್ಯವನ್ನು ನಿರಾಕರಿಸಿದಂತಾಯಿತು.

ತತ್ವಪ್ರದೀಪ

ಜೀವನು ದ್ಯುಭ್ವಾದ್ಯಾಯತನನಲ್ಲ ಎಂದು ಹೇಳಲಾಯಿತು

तत्वप्रदीपः – अनन्यसाधारणतया ब्रह्मणस्त्वस्यैव वाचकादात्मशब्दान्मुक्तोपसृप्यव्यदेशाज्जीववाचकशब्दाभावाच्च न जीवो द्युभ्वाद्यायतनमित्यभिहितम् ।। ।।

ಪ್ರಥಮಸೂತ್ರದಲ್ಲಿ ಆತ್ಮಶಬ್ದವು ವಿಷ್ಣುವಿನಲ್ಲಿ ಬಿಟ್ಟು ಬೇರೆ ಯಾರಲ್ಲಿಯೂ ಬರುವುದಿಲ್ಲವೆಂದು ಹೇಳಲಾಯಿತು. ಎರಡನೆಯ ಸೂತ್ರದಲ್ಲಿ ಮುಕ್ತೋಪಸೃಪ್ಯತ್ವದ ವ್ಯಪದೇಶವು ವಿಷ್ಣುವಿನಲ್ಲಿ ಮಾತ್ರ ಯುಕ್ತವಾಗುವುದರಿಂದ ಅವನೇ ಆತ್ಮಶಬ್ದಪ್ರತಿಪಾದ್ಯ-ನಾಗುತ್ತಾನೆಂದು ಕಾರಣವನ್ನು ನೀಡಲಾಯಿತು. ಮತ್ತು ಜೀವವಾಚಕವಾದ ಯಾವುದೇ ಶಬ್ದಗಳಿಲ್ಲದ ಕಾರಣ ಜೀವನು ದ್ಯುಭ್ವಾದ್ಯಾಯತನನಾಗುವುದಿಲ್ಲವೆಂದು ಸಮರ್ಥಿಸಿದ್ದಾಯಿತು.

ಜೀವಪರಮಾತ್ಮರಿಗೆ ಅಭೇದವಿದೆಯೆಂದು ಪೂರ್ವಪಕ್ಷ

तत्वप्रदीपः – तथाऽप्यनाद्यविद्यानिबन्धनभ्रमाभिनिवेशपरवशहृदयतया परमपुरुषशारीरयोरभेदमेव तत्वं मन्वानास्तदभेदेन शारीरस्य द्युभ्वाद्यायतनत्वमिति शङ्कते ।

ಆದರೂ ಕೂಡ ಅನಾದಿಯಾದ ಅಜ್ಞಾನದ ಅಧೀನವಾಗಿ ಅದ್ವೈತಿಗಳು ಭ್ರಮೆಗೀಡಾಗಿದ್ದಾರೆ. ಇದರಿಂದಲೇ ಜೀವಪರಮಾತ್ಮನಿಗೆ ಅಭೇದದಲ್ಲಿ ಹೇಳಬೇಕೆಂಬ ಅಭಿನಿವೇಶದ ಮನಸ್ಸನ್ನು ಹೊಂದಿರುತ್ತಾರೆ. ಅಂಥವರಿಗೆ ಪರಮಪುರುಷನಾದ ಮಹಾವಿಷ್ಣುವಿಗೂ, ಶಾರೀರನಾದ ಜೀವನಿಗೂ ಅಭೇದವೇ ಸತ್ಯವೆಂಬ ಬುದ್ಧಿಯಿರುತ್ತದೆ. ಇಂಥವರ ಪ್ರಕಾರ ಪರಮಪುರುಷನು ದ್ಯುಭ್ವಾದ್ಯಾಯತನನಾದ ಮೇಲೆ ಜೀವನೂ ಕೂಡ ದ್ಯುಭ್ವಾದ್ಯಾಯತನನಾಗುತ್ತಾನೆ ಎಂಬ ಆಶಂಕೆ ಪ್ರಾಪ್ತವಾಗುತ್ತದೆ.

ಈ ಪ್ರಕರಣದಲ್ಲಿ ಜೀವೇಶ್ವರಭೇದವೇ ಪ್ರತಿಪಾದ್ಯವಾಗಿದೆ

तत्वप्रदीपः – तदपाकरोति – 'भेदव्यपदेशात्' । 'नचैक्यं वाच्यम्' ।

ಇಂಥ ಅದ್ವೈತಮತವನ್ನು ನಿರಾಕರಣೆ ಮಾಡುವುದಕ್ಕಾಗಿ 'ಭೇದವ್ಯಪದೇಶಾತ್' ಎಂಬ ಸೂತ್ರವು ಹೊರಟಿದೆ. ಜೀವಬ್ರಹ್ಮರಿಗೆ ಐಕ್ಯವನ್ನು ಸರ್ವಥಾ ತಿಳಿಯಬಾರದು. ಏಕೆಂದರೆ ಬ್ರಹ್ಮಾದಿಗಳಿಂದ ವಂದ್ಯನಾದ ತನಗಿಂತ ಭಿನ್ನನಾದ ಪರಮಾತ್ಮನನ್ನು ಜೀವನು ತಿಳಿದರೆ ಶೋಕಸಾಗರವನ್ನು ದಾಟುತ್ತಾನೆ ಎಂಬುದಾಗಿ ಈ ಪ್ರಕರಣದ ಶ್ರುತಿಯು ಜೀವೇಶ್ವರರಿಗೆ ಭೇದವನ್ನೇ ಹೇಳುತ್ತಿದೆ.

'ನಚ ಐಕ್ಯಂ ವಾಚ್ಯಮ್' ಎಂಬ ಭಾಷ್ಯದ ಮಾತಿಗೆ ಅನೇಕ ಮಜಲಿನ ಅರ್ಥಗಳು

तत्वप्रदीपः – अयमर्थः । यदिदं जीवपरयोरैक्यमभिधीयते तत्सत्यं मिथ्या वा ? सत्यं चेन्न वाच्यम् । सत्यस्यावाच्यत्वात् । न च लक्ष्यमिति वाच्यम्। वाच्यस्यैव लक्ष्यत्वात् ।

ಭಾಷ್ಯದ ಅಭಿಪ್ರಾಯ ಹೀಗಿದೆ - ಒಂದು ವೇಳೆ ಜೀವಪರಮಾತ್ಮರಿಗೆ ಐಕ್ಯವನ್ನು ವಿವಕ್ಷಿಸುವುದಾದಲ್ಲಿ ಅಂಥ ಐಕ್ಯವು ಸತ್ಯವೋ, ಮಿಥ್ಯೆಯೋ ? ಎಂಬುದಾಗಿ ಪ್ರಶ್ನಿಸುತ್ತೇವೆ. ಸತ್ಯವೆಂದು ಉತ್ತರಿಸಿದರೆ 'ನಚ ಐಕ್ಯಂ ವಾಚ್ಯಮ್' ಎಂಬ ಭಾಷ್ಯದ ಮಾತು ಉತ್ತರಿಸುತ್ತಿದೆ. ಐಕ್ಯವು ಸತ್ಯವಾದರೆ ವೇದಪ್ರತಿಪಾದ್ಯವಾಗಲು ಸಾಧ್ಯವಿಲ್ಲ. ಏಕೆಂದರೆ ಅದ್ವೈತಿಗಳು ಸತ್ಯವಾದ ಪದಾರ್ಥಕ್ಕೆ ಅವಾಚ್ಯತ್ವವನ್ನು ಒಪ್ಪಿರುತ್ತಾರೆ.

ಐಕ್ಯವು ವಾಚ್ಯವಲ್ಲ ಲಕ್ಷ್ಯವೆಂದು ಉತ್ತರಿಸಲು ಸಾಧ್ಯವಿಲ್ಲ, ವಾಚ್ಯವಾದದ್ದೇ ಲಕ್ಷ್ಯವಾಗುತ್ತದೆ. (ಈ ವಿಷಯವನ್ನು ಈಕ್ಷತ್ಯಧಿಕರಣದಲ್ಲಿ ಸಮರ್ಥಿಸಿದ್ದಾಗಿದೆ)

ವಿಶೇಷವಿಚಾರ - ಐಕ್ಯವು ಸತ್ಯವೆಂದು ಹೇಳಿದರೆ 'ನಚ ಐಕ್ಯಂ ವಾಚ್ಯಮ್' ಎಂಬ ಶ್ರೀಮದಾಚಾರ್ಯರ ವಾಕ್ಯವು ಉತ್ತರಿಸುತ್ತಿದೆ. ಅದರಂತೆ ಐಕ್ಯವು ಹೇಳಿದರೂ ಕೂಡ ಇದೇ ಭಾಷ್ಯವು ಉತ್ತರಿಸುತ್ತಿದೆ. ಐಕ್ಯವು ಲಕ್ಷ್ಯವಾಗಲು ಸಾಧ್ಯವಿಲ್ಲ ಎಂದು ಆಚಾರ್ಯರ ಅಭಿಪ್ರಾಯ.

ಭೇದವೇ ಶ್ರುತಿಪ್ರತಿಪಾದ್ಯ

तत्वप्रदीपः – अथ न तथा, तथाऽपि न वाच्यम् । नत्वविद्यमानमस्तीति वाच्यमभ्रान्तानाम् । अथ मिथ्याशब्दोऽनिर्वाच्यवाचीति मन्वीथाः, तथाऽपि नैक्यं श्रौतमिति वाच्यम् । अनिर्वाच्यत्वादेव । नत्वनिर्वाच्यं श्रुतिप्रतिपाद्यं तत्पक्षेऽपि । ऐक्यस्य मिथ्यात्वे भेदस्यैव सत्यत्वात् तस्य च श्रुतौ व्यपदेशाच्च ''समाने वृक्षे पुरुषो निमग्नोऽनीशया शोचति मुह्यमानः । जुष्टं यदा पश्यत्यन्यमीशमस्य महिमानमिति वीतशोकः'' इति ।

ಐಕ್ಯವು ಮಿಥ್ಯಾ ಎಂದೂ ಕೂಡ ಹೇಳಲಾಗದು. ಮಿಥ್ಯಾವೆಂದರೂ ಕೂಡ ಐಕ್ಯವನ್ನು ವೇದಪ್ರತಿಪಾದ್ಯವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಭ್ರಾಂತಿಯನ್ನು ಹೊಂದದ ಬುದ್ಧಿವಂತರು ಎಂದೂ ಕೂಡ ಮಿಥ್ಯಾಭೂತವಾದ ಪದಾರ್ಥವಿದೆಯೆಂದು ಹೇಳುವುದಿಲ್ಲ.

ಮಿಥ್ಯಾಶಬ್ದಕ್ಕೆ ಅನಿರ್ವಾಚ್ಯ ಎಂದರ್ಥ ಹೊರತು, ಅಸತ್ಯವೆಂದಲ್ಲ ಎನ್ನುವುದಾದರೆ ಈ ಪಕ್ಷದಲ್ಲಿಯೂ ಐಕ್ಯವು ಶ್ರುತಿಪ್ರತಿಪಾದ್ಯವಾಗುವುದಿಲ್ಲ. ಏಕೆಂದರೆ ಅನಿರ್ವಾಚ್ಯವಾಗಿರು-

ವುದರಿಂದಲೇ, ಯಾವ ಶಬ್ದದಿಂದಲೂ ನಿರ್ವಚನಕ್ಕೆ ಅನರ್ಹವಾದದ್ದು, ಶ್ರುತಿಯಿಂದ ಪ್ರತಿಪಾದ್ಯವಾಗುತ್ತದೆ ಎಂದು ನೀವೂ ಕೂಡ ಅಂಗೀಕರಿಸಿರುವುದಿಲ್ಲ.

ಮತ್ತು ಐಕ್ಯವು ಮಿಥ್ಯಾ ಎಂದು ಹೇಳಿದರೆ, ಅದಕ್ಕೆ ವಿರುದ್ಧವಾದ ಭೇದವು ಸತ್ಯವೆಂದಾಯಿತು. ಅಂಥ ಸತ್ಯವಾದ ಭೇದವನ್ನು ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ ಎಂದೇ ನೀವು ಒಪ್ಪಿದಂತಾಗುತ್ತದೆ.

ಭೇದವನ್ನು ಶ್ರುತಿಯನ್ನು ಹೀಗೆ ಪ್ರತಿಪಾದನೆ ಮಾಡುತ್ತಿದೆ -

ದೇಹವೆಂಬ ಒಂದೇ ಅಶ್ವತ್ಥವೃಕ್ಷದಲ್ಲಿ ಜೀವನು ಶ್ರೀಹರಿಯ ಜೊತೆ ನೆಲೆಸಿದ್ದಾನೆ. ಆದರೆ ಶ್ರೀಹರಿಯ ಶಕ್ತಿಯಿಂದ ತಾನೇ ಶರೀರಾದಿಗಳಿಗೆ ಒಡೆಯನೆಂಬ ಮೋಹಕ್ಕೆ ತುತ್ತಾಗಿದ್ದಾನೆ. ಆದ್ದರಿಂದಲೇ ದುಃಖಭಾಗಿಯಾಗಿದ್ದಾನೆ. ರಮಾ ಬ್ರಹ್ಮಾದಿಗಳಿಂದ ಉಪಾಸ್ಯನಾದ ಶ್ರೀಹರಿಯನ್ನು ತನಗಿಂತ ಭಿನ್ನನೆಂದು ಯಾವಾಗ ತಿಳಿಯುತ್ತಾನೋ, ಆಗ ಮಾತ್ರ ಜೀವನು ದುಃಖಗಳನ್ನೆಲ್ಲ ದಾಟಲು ಸಾಧ್ಯ.

ಹೀಗೆ ಆಥರ್ವಣಶ್ರುತಿಯು ಜೀವಪರಮಾತ್ಮನಿಗೆ ಭೇದವನ್ನೇ ಹೇಳುತ್ತಿದೆ.

ವಿಶೇಷವಿಚಾರ -

'ನಚ ಐಕ್ಯಂ ವಾಚ್ಯಮ್' ಎಂಬ ಭಾಷ್ಯದ ಮಾತಿಗೆ ಹಿಂದೆ ಎರಡರ್ಥಗಳನ್ನು ಹೇಳಿದರು. ಈಗ ಪುನಃ ಎರಡು ಅರ್ಥಗಳನ್ನು ಹೇಳುತ್ತಿದ್ದಾರೆ -

೧. ಐಕ್ಯವನ್ನು ಮಿಥ್ಯಾ ಎಂದರೆ 'ನಚ ಐಕ್ಯಂ ವಾಚ್ಯಮ್' ಎಂಬ ಭಾಷ್ಯವು ಉತ್ತರಿಸುತ್ತಿದೆ. ಮಿಥ್ಯಾಭೂತವಾದದ್ದನ್ನು ವೇದವು ಪ್ರತಿಪಾದನೆ ಮಾಡುವುದಿಲ್ಲ.

೨. ಐಕ್ಯವನ್ನು ಅನಿರ್ವಚನೀಯ ಎಂದು ಹೇಳಿದಾಗಲೂ 'ನಚ ಐಕ್ಯಂ ವಾಚ್ಯಮ್' ಎಂಬ ಭಾಷ್ಯವೇ ಉತ್ತರಿಸುತ್ತಿದೆ. ಅನಿರ್ವಾಚ್ಯವಾದದ್ದನ್ನು ಶ್ರುತಿಪ್ರತಿಪಾದ್ಯವಲ್ಲವೆಂದು ಅದ್ವೈತಿಗಳೇ ಒಪ್ಪಿರುತ್ತಾರೆ.

ನಾಸ್ತೀಶೋಽಸ್ಯಾ ಯತೋಽನ್ಯೋ ಹಿ ತತೋಽನೀಶಾ ಹರೇರ್ಮತಿಃ । ತಯಾ ಮುಹ್ಯತಿ ಜೀವಸ್ತಮನ್ಯಂ ಜ್ಞಾತ್ವಾ ವಿಮುಚ್ಯತೇ ॥ ಜೀವಾದನ್ಯಃ ಸ್ವತಂತ್ರೋ ಯೋ ಯತೋಽತಃ ಪುರುಷೋತ್ತಮಃ ॥ ಇತಿ ಬ್ರಹ್ಮಸಾರೇ ॥

ಪರಮಾತ್ಮನ ಶಕ್ತಿಗೆ ನಿಯಾಮಕವು ಮತ್ತೊಂದು ಇಲ್ಲದ ಕಾರಣ ಅದು 'ಅನೀಶಾ' ಎನಿಸಿದೆ. ಈ ಶಕ್ತಿಯಿಂದ ಜೀವನು ಶರೀರಾದಿ ಮೋಹಕ್ಕೊಳಗಾಗುತ್ತಾನೆ. ಪರಮಾತ್ಮ ಬ್ರಹ್ಮಾದಿಗಳಿಗಿಂತಲೂ, ಲಕ್ಷ್ಮೀದೇವಿಗಿಂತಲೂ ಉತ್ತಮನಾಗಿದ್ದು ಪುರುಷೋತ್ತಮನೆನಿಸಿರುವುದರಿಂದ ಅವನು ಸ್ವತಂತ್ರ. ಜೀವನಿಗಿಂತ ಪರಮಾತ್ಮನು ಭಿನ್ನನಾಗಿದ್ದಾನೆ. ಜೀವನು ಪರಮಾತ್ಮನನ್ನು ಭಿನ್ನನೆಂದು ತಿಳಿದ ಬಳಿಕವೇ ಅವನಿಗೆ ಸಂಸಾರದಿಂದ ಮುಕ್ತಿ ಎಂದು ಬ್ರಹ್ಮಸಾರವೆಂಬ ಗ್ರಂಥದಲ್ಲಿ ಹೇಳಿದೆ.

ಶ್ರುತಿಯಿಂದ ಜೀವ-ಬ್ರಹ್ಮಭೇದ ಸ್ಥಾಪನೆ

तत्वप्रदीपः – समाने शरीरे निकृष्टत्वेन स्थितो जीवोऽनीशतया भेदे मुह्यमानः शोचति । जुष्टं देवैः अस्य जीवस्येशमन्यं यदा पश्यति महिमानं महिमगुणात्मकं तदा तथैव वीतशोको भवति । न दुःखलेशमपि स्पृशति । न तु महिमगुणविहीनमनन्यमनीशसेवितं पश्यन् वीतशोको भवतीति सतात्पर्यं भेदव्यपदेशात् भिन्न एव प्राणभृत्परमात्मनः ।।

ಒಂದೇ ಶರೀರದಲ್ಲಿ ನಿಕೃಷ್ಟನಾಗಿರುವ ಜೀವನು ಅನೀಶನಾಗಿರುವುದರಿಂದಲೇ ದುಃಖವನ್ನು ಹೊಂದಿರುತ್ತಾನೆ. ಆದ್ದರಿಂದಲೇ ಭೇದದ ವಿಷಯದಲ್ಲಿ ಮೋಹವನ್ನು ಹೊಂದಿದ್ದಾನೆ. ದೇವತೆಗಳಿಂದ ಆರಾಧ್ಯನಾದ ಪರಮಾತ್ಮನನ್ನು ಜೀವನು ಯಾವಾಗ ತನಗಿಂತ ಭಿನ್ನನೆಂದು ತಿಳಿಯುತ್ತಾನೋ, ಆಗ ದುಃಖದ ಸಮುದ್ರವನ್ನು ದಾಟುತ್ತಾನೆ. ದುಃಖದ ಲವಲೇಶವನ್ನೂ ಕೂಡ ಸ್ಪರ್ಶಮಾಡಲಾರ. ಇದರ ಹೊರತಾಗಿ ಪರಮಾತ್ಮನು ಮಹಾಮಹಿಮೆಗುಣಗಳುಳ್ಳವನೆಂದು ತಿಳಿಯದಿದ್ದರೆ ಮತ್ತು ಮತ್ತು ತನಗಿಂತ ಭಿನ್ನನೆಂದು ತಿಳಿಯದಿದ್ದರೆ, ಮತ್ತು ಬ್ರಹ್ಮಾದಿಗಳಿಂದ ವಂದ್ಯನೆಂದು ತಿಳಿಯದ್ದಿದರೆ ವೀತಶೋಕಾದಿಗಳು ಸಾಧ್ಯವಿಲ್ಲ. ಹೀಗೆ ತಾತ್ಪರ್ಯಪುರಸ್ಸರವಾಗಿ ಶ್ರುತಿಯು ಭೇದವನ್ನೇ ಸಮರ್ಥನೆ ಮಾಡುತ್ತಿರುವುದರಿಂದ ಪ್ರಾಣಭಿನ್ನಾಮಕನಾದ ಪರಮಾತ್ಮನಿಗಿಂತ ಜೀವನು ಭಿನ್ನನೇ ಆಗಿದ್ದಾನೆಂದು ನಿರ್ಣಯವಾಯಿತು.

ವಿಶೇಷವಿಚಾರ - 'ಅನೀಶಯಾ' ಎಂಬ ಪದಕ್ಕೆ ಶ್ರೀಮದಾಚಾರ್ಯರು ಮತ್ತೊಂದು ನಿಯಾಮಕನಿಲ್ಲದ ಈಶ್ವರನ ಇಚ್ಛೆಯಿಂದ ಎಂದು ವ್ಯಾಖ್ಯಾನ ಮಾಡಿದ್ದಾರೆ. ಪಂಡಿತಾಚಾರ್ಯರು 'ಅನೀಶತ್ವೇನ' ಎಂಬುದಾಗಿ ಭಾವಪ್ರಧಾನ ನಿರ್ದೇಶ ಮಾಡಿ, ಅನೀಶನಾಗಿರುವ ಕಾರಣದಿಂದಲೇ ದುಃಖಿಯಾಗಿದ್ದಾನೆಂದು ವ್ಯಾಖ್ಯಾನ ಮಾಡಿದ್ದಾರೆ.

ತತ್ತ್ವಪ್ರಕಾಶಿಕಾ

ಬಹುಧಾಜಾಯಮಾನತ್ವವೆಂಬ ಲಿಂಗಸಮನ್ವಯದ ಬಗ್ಗೆ

तत्वप्रकाशिका – ननु किं जीवलिङ्गस्य विष्णुपरत्वप्रतिपादनायासेन। जीवस्यैव द्युभ्वाद्यायतनत्वं किं न स्यात्? न चोक्तहेतुविरेधः । जीवेशाभेदाभिप्रायेण जीवेऽप्यात्मशब्दाद्युक्ति सम्भवादित्याशङ्कां परिहरत् सूत्रं पठित्वा व्याचष्टे – भेदेति ।। नैक्याभिप्रायेण जीव एवाऽत्मशब्दादिप्रयोगोऽत्रेति वाच्यम् । अत्रैवान्यमीशमिति जीवेशभेदव्यपदेशादित्यर्थः ।।५।।

ಬಹುಧಾ ಜಾಯಮಾನತ್ವವೆಂಬ ಜೀವಲಿಂಗವು ವಿಷ್ಣುಪರವಾಗುತ್ತದೆಂದು ಪ್ರತಿಪಾದಿಸಲು ಅಷ್ಟೊಂದು ಕಷ್ಟಪಡುವ ಅವಶ್ಯಕತೆ ಇರುವುದಿಲ್ಲ. ಜೀವನಿಗೆ ದ್ಯುಭ್ವಾದ್ಯಾಯತನತ್ವವನ್ನು ಹೇಳುವುದರಿಂದಲೇ ಸುಲಭವಾಗಿ ಸಮಸ್ಯೆಯು ಪರಿಹಾರವಾಗುತ್ತದೆ. ಹಾಗಾದರೆ ಹಿಂದೆ ಹೇಳಿರುವ ಆತ್ಮಶ್ರುತಿ ಮೊದಲಾದವುಗಳ ವಿರೋಧ ಬರುತ್ತದಲ್ಲವೇ ಎಂಬ ಶಂಕೆಗೆ ಅವಕಾಶವಿಲ್ಲ. ಏಕೆಂದರೆ ಜೀವ ಹಾಗೂ ಈಶರಿಗೆ ಅಭೇದವೇ ಇರುತ್ತದೆ. ಆದ್ದರಿಂದ ಬ್ರಹ್ಮನಲ್ಲಿ ಬರುವ ಆತ್ಮಶ್ರುತಿಯು ಜೀವನಲ್ಲಿಯೂ ಸಹ ಸಂಭವಿಸುತ್ತದೆ. ಈ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ, ''ಭೇದ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಇಲ್ಲಿ ಜೀವ ಹಾಗೂ ಈಶ್ವರನಿಗೆ ಐಕ್ಯವಿರುವುದರಿಂದ ಜೀವನಲ್ಲಿ ಆತ್ಮಶಬ್ದಪ್ರಯೋಗ-ವಿದೆಯೆಂದು ಹೇಳಬಾರದು. ಏಕೆಂದರೆ ಇದೇ ಶ್ರುತಿಯಲ್ಲಿ ಅನ್ಯಮೀಶಮ್' ಎಂಬುದಾಗಿ ಜೀವ ಹಾಗೂ ಈಶ್ವರರಿಗೆ ಭೇದವನ್ನೇ ಪ್ರತಿಪಾದಿಸಲಾಗಿದೆ.

ಭಾವದೀಪ

'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಯ ವ್ಯಾಖ್ಯಾನ

ಭಾವದೀಪಃ – ಭೇದವ್ಯಪದೇಶಾತ್ ।। ಉಕ್ತಹೇತೂನಾಂ ಸತ್ತ್ವಾತ್ ತದ್ವಿರೋಧೇನ ಶಙ್ಕನಾರ್ಹಮೇಕತ್ವಂ ಕಥಮಾಶಙ್ಕ್ಯ ನಿರಸ್ಯತ ಇತ್ಯತೋ ನಚೈಕತ್ವಮಿತಿ ಭಾಷ್ಯಂ ವ್ಯಾಚಷ್ಟೇ – ನೈಕ್ಯೇತಿ ।। ಅತ್ರೈವೇತಿ ।। ಏತತ್ಪ್ರಕರಣ ಏವೇತ್ಯರ್ಥಃ ।। ಶ್ರುತ್ಯರ್ಥಸ್ತು ಸರ್ವಸೇವ್ಯಂ ಜೀವಾದನ್ಯಂ ತದೇತತ್ ಸತ್ಯಮಿತ್ಯಾದಿಪ್ರಾಗುಕ್ತಪ್ರಕಾರೇಣಾಸ್ಯ ಮಹಿಮಾನಂ ಚ ಯದಾ ಪಶ್ಯತಿ ತದಾ ಮುಕ್ತೋ ಭವತೀತ್ಯಾನನ್ದಮಯನಯ ಏವೋಕ್ತ ಇತಿ ಭಾವಃ । ವಿಶೇಷಣಭೇದೇತಿ ಸೂತ್ರೇ ತು ಅರ್ಥಾನ್ತರಮುಪೇತ್ಯ ರುದ್ರಾದನ್ಯತ್ವಪರತ್ವೇನ ವ್ಯಾಖ್ಯಾನಂ ಕೃತಮ್ ।। ೫ ।।

ಭೇದವ್ಯಪದೇಶಾತ್

ಹಿಂದೆ ಹೇಳಲ್ಪಟ್ಟ ಹೇತುಗಳೆಲ್ಲವೂ ವಿಷ್ಣುವಿನಲ್ಲಿಯೇ ಇರುತ್ತವೆ. ಆದ್ದರಿಂದ ಅವುಗಳ ವಿರೋಧದಿಂದ ಜೀವನಲ್ಲಿ ದ್ಯುಭ್ವಾದ್ಯಾಯತನತ್ವವನ್ನು ಶಂಕಿಸಲೇ ಸಾಧ್ಯವಾಗದು ಹೀಗಿರುವಾಗ ಜೀವಪಕ್ಷವನ್ನು ಅವಲಂಬಿಸಿ ಹೇಗೆ ಆಶಂಕಿಸುತ್ತಿದ್ದಿರೀ? ಎಂಬ ಪ್ರಶ್ನೆಗೆ ''ನಚ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಶಂಕೆಯನ್ನು ಪರಿಹರಿಸುವುದಕ್ಕಾಗಿ ''ನ ಚೈಕತ್ವಂ'' ಎಂಬ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ನೈಕ್ಯಾಭಿಪ್ರಾಯೇಣ'' ಟೀಕಾ ವಾಕ್ಯದಿಂದ. ''ಅತ್ರೈವ'' ಎಂಬ ಪದಕ್ಕೆ ಈ ಪ್ರಕರಣದಲ್ಲಿ ಎಂದರ್ಥ.

ಶ್ರುತ್ಯರ್ಥಹೀಗಿದೆ - ಜುಷ್ಟಂ = ಎಲ್ಲರಿಂದ ಸೇವ್ಯನಾದ, ಮಹಿಮಾನಾಂ = ಜೀವಾದನ್ಯಂ ತದೇತತ್ಸತ್ಯಂ ಇತ್ಯಾದಿಯಾಗಿ ಹಿಂದೆ ಹೇಳಿದ ಪ್ರಕಾರವಾಗಿ ಇವನ ಮಹಿಮೆಯನ್ನು, ಯದಾ= ಯಾವಾಗ, ಪಶ್ಯತಿ = ನೋಡುತ್ತಾನೋ, ತದಾ = ಆವಾಗ, ಮುಕ್ತೋ ಭವತಿ = ಮೋಕ್ಷವನ್ನು ಹೊಂದುತ್ತಾನೆ. ಹೀಗೆ ಆನಂದಮಯಾಧಿಕರಣದಲ್ಲಿ ಈ ಶ್ರುತ್ಯರ್ಥವು ಸ್ಪಷ್ಟವಾಗಿ ನಿರೂಪಿತವಾಗಿದೆ. ''ವಿಶೇಷಣಭೇದಃ'' ಎಂಬ ಸೂತ್ರದಲ್ಲಿ ಈ ಶ್ರುತಿಗೆ ಮತ್ತೊಂದು ಅರ್ಥವನ್ನು ಅಂಗೀಕರಿಸಿ ರುದ್ರನಿಗಿಂತ ಭಗವಂತನು ಬಿಂಬನಾಗಿದ್ದಾನೆ ಎಂಬ ಅರ್ಥವನ್ನು ಅಂಗೀಕರಿಸಿ ವ್ಯಾಖ್ಯಾನಿಸಿದ್ದಾರೆ.

'जीवादन्यः स्वतंत्रो यः'

भावदीपः – अन्यमीशमिति ।। जीवेशभेदेति ।। पश्यतीति सन्निहितो जीव एव यदि न्यायेनान्यत्वप्रतियोगितयाऽवेति । 'जीवादन्यः स्वतन्त्रो यः' इत्याथर्वणभाष्योक्तेरिति भावः ।

''ಅನ್ಯಮೀಶಂ'' ಎಂದು ಜೀವೇಶಭೇದವನ್ನು ಹೇಳಿದ್ದಾರೆ. ''ಜುಷ್ಟಂ ಯದಾ ಪಶ್ಯತಿ'' ಎಂಬಲ್ಲಿ ಸನ್ನಿಹಿತನಾದ ಜೀವನೇ ನ್ಯಾಯದಿಂದ ಅನ್ಯತ್ವದಲ್ಲಿ ಪ್ರತಿಯೋಗಿ ಆಗಿದ್ದಾನೆಂದು ಅನ್ವಯವಾಗುತ್ತದೆ. ಏಕೆಂದರೆ ''ಜೀವಾದನ್ಯಃ ಸ್ವತಂತ್ರೋ ಯಃ'' ಎಂಬುದಾಗಿ ಆಥರ್ವಣೋಪನಿಷತ್‌ಭಾಷ್ಯದಲ್ಲಿ ಹೇಳಿರುವುದರಿಂದ ಎಂದು ಅಭಿಪ್ರಾಯ.

ವಿಶೇಷವಿಚಾರ - 'ಭೇದವ್ಯಪದೇಶಾತ್' ಎಂಬುದು ಐದನೆಯ ಸೂತ್ರ. ಜೀವ ಹಾಗೂ ಬ್ರಹ್ಮರಿಗೆ ಅಭೇದವನ್ನೇ ಒಪ್ಪೋಣ. ಹೀಗೆ ಒಪ್ಪುವುದರಿಂದ ಎರಡು ಪಕ್ಷಗಳನ್ನು ಬಾಧವಿಲ್ಲದೇ ಉಪಪಾದಿಸಬಹುದು. ಹೀಗೆಯೇ ವ್ಯಾಖ್ಯಾನಿಸಲು ಬರುವಾಗ ಒಂದು ಪಕ್ಷಕ್ಕೆ ಬಾಧವನ್ನು ಹೇಳುವುದು ತಪ್ಪಾಗುತ್ತದಲ್ಲವೇ? ಈ ಆಶಂಕೆಯನ್ನು ನಿರಾಕರಿಸುವುದಕ್ಕಾಗಿ 'ಭೇದವ್ಯಪದೇಶಾತ್' ಎಂಬ ಸೂತ್ರವು ಹೊರಟಿದೆ. ಹಿಂದಿನ ವಿಷಯದ ಮೇಲೆ ಬರುವ ಅಭೇದಾಶಂಕೆಯನ್ನು ನಿರಾಕರಿಸುವುದಕ್ಕಾಗಿ ಈ ಸೂತ್ರ ಹೊರಟಿರುವುದರಿಂದ 'ಚ' ಶಬ್ದವನ್ನು ಹೇಳಿರುವುದಿಲ್ಲ. ಮತ್ತು ಸ್ವಪಕ್ಷಸಾಧಕವಾದ 'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಮತ್ತು 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರಗಳ ಅನಂತರವೂ ಸಹ ಇದು ಪ್ರಸಕ್ತವಾಗುವುದಿಲ್ಲ. ಇಲ್ಲದಿದ್ದರೆ ಸ್ವಪಕ್ಷಸಾಧಕವಾದ್ದರಿಂದ ಸೂತ್ರದಲ್ಲಿ 'ಚ' ಶಬ್ದವಿರಬೇಕಿತ್ತು. ಮತ್ತು ಸ್ವಪಕ್ಷಸಾಧಕಗಳ ಮಧ್ಯದಲ್ಲಿಯೇ ಇರಬೇಕಿತ್ತೆಂಬ ಆಕ್ಷೇಪಕ್ಕೆ ಅವಕಾಶವಿರುತ್ತಿತ್ತು.

'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಯು ಈಶನು ಭಿನ್ನನಾಗಿದ್ದಾನೆಂದಷ್ಟೇ ಹೇಳುತ್ತಿದೆ. ಭೇದಕ್ಕೆ ಪ್ರತಿಯೋಗಿಯಾದವನು ಯಾರೆಂದು ನಿಖರವಾಗಿ ಹೇಳಿರುವುದಿಲ್ಲ. ಈ ಸಂದರ್ಭದಲ್ಲಿ ಪೂರ್ವಮೀಮಾಂಸೆಯ ಪದನ್ಯಾಯದಿಂದ ಜೀವನೇ ಪ್ರತಿಯೋಗಿ-ಯಾದ್ದಾನೆಂದು ತಿಳಿಯಬೇಕು. 'ಸಪ್ತಮಂ ಪದಮ್' ಎಂಬ ಶ್ರುತಿಯಲ್ಲಿ ಪದಶಬ್ದಕ್ಕೆ ಸನ್ನಿಹಿತವಾದ ಒಂದು ವರ್ಷದ ಹಸುವಿನ ಹೆಜ್ಜೆಯನ್ನೇ ಅರ್ಥವನ್ನಾಗಿ ಪರಿಗಣಿಸಬೇಕೆಂದು ಪೂರ್ವಮೀಮಾಂಸೆಯಲ್ಲಿ ಹೇಗೆ ನಿರ್ಣಯಿಸಿದ್ದಾರೋ, ಅದರಂತೆ ಪ್ರಕೃತದಲ್ಲಿಯೂ

'ಪಶ್ಯತಿ' ಎಂಬುದಾಗಿ 'ದರ್ಶನಕರ್ತೃತ್ವೇನ' ಪ್ರಸಕ್ತನಾದ ಜೀವನನ್ನೇ ಭೇದಕ್ಕೆ ಪ್ರತಿಯೋಗಿಯಾಗಿದ್ದಾನೆಂದು ಪರಿಗಣಿಸಬೇಕು. ಈ ಅಭಿಪ್ರಾಯದಿಂದ ಭಾಷ್ಯಕಾರರು ಜೀವೇಶಭೇದವಿಷಯದಲ್ಲಿ ಈ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಿರುತ್ತಾರೆ.

ಅದೃಶ್ಯತ್ವಾಧಿಕರಣದ 'ವಿಶೇಷಣಭೇದವ್ಯಪದೇಶಾಭ್ಯಾಂಚ ನೇತರೌ' ಎಂಬ ಸೂತ್ರದಲ್ಲಿ ರುದ್ರನಿಗಿಂತ ವಿಷ್ಣು ಭಿನ್ನನಾಗಿದ್ದಾನೆಂದು ಈ ಶ್ರುತಿಗೆ ವ್ಯಾಖ್ಯಾನಿಸಿದ್ದಾರೆ. ಲೋಕದಲ್ಲಿ ''ಇದು ಬೇರೆ ದಾರಿ'' ಎಂದು ಹೇಳಿದರೆ ಪ್ರಸಿದ್ಧವಾದ ದಾರಿಗಿಂತ ಇದು ಭಿನ್ನವಾದ ದಾರಿಯೆಂದು ಹೇಗೆ ತಿಳಿಯುತ್ತದೋ? ಅದರಂತೆ 'ಅನ್ಯಮೀಶಮ್' ಎಂದು ಹೇಳಿದಾಗ ಪ್ರಸಿದ್ಧನಾದ ಈಶನಿಗಿಂತ ಭಿನ್ನನಾದ ಈಶನೆಂದು ತಿಳಿಯುತ್ತದೆ. ಅಂದರೆ ಈಶಶಬ್ದದಿಂದ ಪ್ರಸಿದ್ಧನಾಗಿ ಯಾವ ರುದ್ರನು ವಾಚ್ಯನಾಗಿದ್ದಾನೋ, ಅಂತಹ ಈಶನಿಗಿಂತ ಭಿನ್ನನಾದ ಮತ್ತೊಬ್ಬ ಈಶನೆಂಬ ಪ್ರತೀತಿಯು ಬರುತ್ತದೆ. ಹೀಗೆ ರುದ್ರನಿಗಿಂತ ವಿಷ್ಣು ಭಿನ್ನನಾಗಿದ್ದಾನೆಂದು ಈ ಶ್ರುತಿಯಿಂದ ತಿಳಿದಂತಾಗುತ್ತದೆ. ಹೀಗೆ ಅದೃಶ್ಯತ್ವಾಧಿಕರಣದಲ್ಲಿ ಮಾಡಲ್ಪಟ್ಟ ವ್ಯಾಖ್ಯಾನವು ಇಲ್ಲಿ ಮಾಡುತ್ತಿರುವ ವ್ಯಾಖ್ಯಾನಕ್ಕಿಂತ ಮತ್ತೊಂದು ಬಗೆಯ ವ್ಯಾಖ್ಯಾನವೆಂದು ತಿಳಿಯಬೇಕು. ಆದ್ದರಿಂದ ಒಂದು ವ್ಯಾಖ್ಯಾನಕ್ಕೆ ಮತ್ತೊಂದು ವ್ಯಾಖ್ಯಾನದಿಂದ ವಿರೋಧವನ್ನು ಹೇಳಲು ಸಾಧ್ಯವಿಲ್ಲ.

ಬ್ರಹ್ಮಸೂತ್ರ

'ಪ್ರಕರಣಾತ್' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। प्रकरणात् ।। ६ ।।

'ದ್ವೇ ವಿದ್ಯೇ ವೇದಿತವ್ಯೇ' ಎಂದು ಪ್ರಕರಣವು ಪ್ರಾರಂಭವಾಗಿರುವುದರಿಂದ ಇದು ಬ್ರಹ್ಮಪ್ರಕರಣವೇ ಆಗುತ್ತದೆ. ಆದ್ದರಿಂದ ಬ್ರಹ್ಮನೇ ಇಲ್ಲಿ ಈಶಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

'ಅನಶ್ನನ್ನನ್ಯಃ' ಎಂಬ ಆಥರ್ವಣಶ್ರುತಿಯು ವಿಷ್ಣುಪ್ರಕರಣದಲ್ಲಿದೆ. ಇಲ್ಲಿ ಜೀವನಿಗೆ ವಿಷ್ಣುವಿನಿಂದ ಭೇದವೇ ಹೇಳಲ್ಪಟ್ಟಿದೆ. ಮತ್ತೊಬ್ಬನಿಂದ ಭೇದವು ಹೇಳಿರುವುದಿಲ್ಲ.

ಬ್ರಹ್ಮಸೂತ್ರಭಾಷ್ಯ

ಬ್ರಹ್ಮಪ್ರಕರಣದಲ್ಲಿರುವ ಶಬ್ದಗಳಿಂದ ಬ್ರಹ್ಮನೇ ಪ್ರತಿಪಾದ್ಯ

ब्रह्मसूत्रभाष्यम् – 'द्वे विद्ये वेदितव्ये' (मुं.१-१-४) इति तस्यैव ह्येतत् प्रकरणम् ।।६।।

ಅನುವಾದ - ವಿದ್ಯೆಗಳು ಪರವಿದ್ಯೆ, ಅಪರವಿದ್ಯೆ ಎಂದು ಎರಡು ವಿಧ; ಹೀಗೆ ಪ್ರಸ್ತುತವಾದ ಪ್ರಕರಣವು ಪರವಿದ್ಯಾವಿಷಯನಾದ ವಿಷ್ಣುವಿಗೆ ಮಾತ್ರ ಸಂಬಂಧಪಟ್ಟದೆ. ಆದ್ದರಿಂದ ಭೇದವನ್ನು ಹೇಳುವ 'ಅನ್ಯಮೀಶಂ' ಎಂಬ ವಾಕ್ಯದಲ್ಲಿ ಪ್ರತಿಪಾದ್ಯನಾದ ಈಶನೆಂದರೆ ವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ -- ಜೀವನು ಯಾರೋ ಒಬ್ಬ ಒಡೆಯನಿಂದ ಭಿನ್ನನಾಗಿದ್ದಾನೆಂದು ಹೇಳಲಾಗಿದೆ. ಆದರೆ ಪರಮಾತ್ಮನಿಂದ ಜೀವನು ಭಿನ್ನನೆಂದು ಹೇಳಿಲ್ಲವಲ್ಲ ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ವಿದ್ಯೇ = ಬ್ರಹ್ಮವಿದ್ಯೆಯು, ದ್ವೇ = ಎರಡು ವಿಧವಾಗಿ, ವೇದಿತವ್ಯೇ = ತಿಳಿಯಬೇಕು, ಇತಿ = ಹೀಗೆ ಆರಂಭಮಾಡಿ, ತಸ್ಯೈವ ಹಿ = ವಿಷ್ಣುವಿನದ್ದೇ, ಏತತ್ ಪ್ರಕರಣಮ್ = ಈ ಪ್ರಕರಣವೆಂದು ನಿಶ್ಚಯವಾಗುತ್ತದೆ.

ಸತ್ತರ್ಕದೀಪಾವಳಿ

'द्वे विद्ये वेदितव्ये ಎಂಬ ಶ್ರುತಿಯ ವ್ಯಾಖ್ಯಾನ

सत्तर्कदीपावलिः – 'द्वे विद्ये वेदितव्ये परा चैवापरा च' 'अथ परा यया तदक्षरमधिगम्यते' इति परविद्याविषयस्य विष्णोः प्रक्रान्तत्वात् । तद्भावाभावात् स एवात्र द्युभ्वाद्याश्रयत्वेनोच्यते नान्य इत्याह – प्रकरणादिति।।

'ದ್ವೇ ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ' 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಪರವಿದ್ಯಾವಿಷಯನಾದ ವಿಷ್ಣುವೇ ಉಪಕ್ರಮದಲ್ಲಿ ಪ್ರಸಕ್ತನಾಗಿದ್ದಾನೆ. ವಿಷ್ಣುವಿಗೆ ಪರವಿದ್ಯಾವಿಷಯತ್ವವನ್ನು ಹೇಳಲು ಯಾವುದೇ ಬಾಧಕಪ್ರಮಾಣಗಳಿಲ್ಲದ ಕಾರಣ ಅಂತಹ ವಿಷ್ಣುವೇ ದ್ಯುಭ್ವಾದ್ಯಾಶ್ರಯನಾಗುತ್ತಾನೆ, ಹೊರತು ಬೇರೆಯವರಲ್ಲವೆಂದು 'ಪ್ರಕರಣಾತ್' ಎಂಬ ಸೂತ್ರವು ಹೇಳುತ್ತಿದೆ.

ತತ್ವಪ್ರದೀಪ

ಸಂಪೂರ್ಣ ಪ್ರಕರಣವು ಜೀವೇಶಭೇದ ಪರವಾಗಿದೆ

तत्वप्रदीपः – प्रकरणात् ।। 'द्वे विद्ये वेदितव्ये' इत्यारभ्य ''यत्तदद्रेश्यमग्राह्यमगोत्रमवर्णमचक्षुः श्रोत्रं तदपाणिपादं नित्यं विभुं सर्वगतं सुसूक्ष्मं तदव्ययं यद्भूतयोनिं परिपश्यन्ति धीराः'' इति जीवेशभेदस्य ह्येतत्प्रकरणम् । अदृश्यत्वापाणिपादत्वसर्वगतत्वभूतकारणत्वादिधर्मैर्जीवात् भिन्नो हीशोऽत्र प्रकृतः ।। ।।

'ದ್ವೇ ವಿದ್ಯೇ ವೇದಿತವ್ಯೇ' ಎಂದು ಪ್ರಾರಂಭಿಸಿ 'ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃ ಶ್ರೋತ್ರಂ ತದಪಾಣಿಪಾದಂ ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿ ಧೀರಾಃ' ಎಂಬಲ್ಲಿಯ ತನಕ ಜೀವೇಶಭೇದವನ್ನೇ ಈ ಪ್ರಕರಣವು ಪ್ರತಿಪಾದನೆ ಮಾಡುತ್ತಿದೆ. ಅದೃಶ್ಯತ್ವ, ಅಪಾಣಿಪಾದತ್ವ, ಸರ್ವಗತತ್ವ, ಭೂತಕಾರಣತ್ವ ಮೊದಲಾದ ಧರ್ಮಗಳಿಗಿರುವುದರಿಂದ ಪರಮಾತ್ಮನು ಜೀವನಿಗಿಂತ ಭಿನ್ನನೇ ಆಗಿದ್ದಾನೆ ಹೀಗೆ ಪ್ರಕರಣದಲ್ಲಿ ವಿಷಯವು ಪ್ರಕೃತವಾಗಿದೆ.

ವಿಶೇಷವಿಚಾರ - ಅಥರ್ವಣೋಪನಿಷತ್ತಿನ ಪ್ರಾರಂಭದಲ್ಲಿಯೇ ಪರವಿದ್ಯೆ ಹಾಗೂ ಅಪರವಿದ್ಯೆಗಳ ಪ್ರಸಕ್ತಿ ಹೀಗೆ ಪ್ರಾಪ್ತವಾಗಿದೆ -

ತಸ್ಮೈ ಸ ಹೋವಾಚ । ದ್ವೇ ವಿದ್ಯೇ ವೇದಿತವ್ಯೇ । ಇತಿ ಹ ಸ್ಮ ಯದ್ಬ್ರಹ್ಮವಿದೋ ವದಂತಿ । ಪರಾ ಚ ಅಪರಾ ಚ ॥

ಶೌನಕರಿಗೆ ಅಂಗಿರಸರು ಉಪದೇಶಿಸಿದರು - 'ಪರಮ ಮುಖ್ಯವೃತ್ತಿಯಿಂದ ಪರಮಾತ್ಮನ ಪಾರಮ್ಯವನ್ನು ಬೋಧಿಸುವ ವೇದ ವಿದ್ಯೆಯು ಅಮುಖ್ಯವೃತ್ತಿಯಿಂದ ಕರ್ಮದೇವತೆ ಮೊದಲಾದುವನ್ನೂ ಪ್ರತಿಪಾದಿಸುತ್ತಾ ಪರ ಮತ್ತು ಅಪರ ಎಂದು ಎರಡು ವಿಧವಾಗಿದೆ. ಈ ಎರಡು ವಿಧವಾದ ವಿದ್ಯೆಯನ್ನೂ ತಿಳಿಯಬೇಕು ಎಂದು ಬ್ರಹ್ಮಜ್ಞಾನಿಗಳು ಹೇಳಿದ್ದಾರೆ.

ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋऽಥರ್ವವೇದಃ । ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ । ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ॥

ಈ ಪರಾಪರ ವಿದ್ಯೆಗಳಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವ ವೇದ, ವರ್ಣಗಳ ಸ್ಥಾನ-ಪ್ರಯತ್ನಗಳನ್ನು ನಿರೂಪಿಸುವ ಶಿಕ್ಷಾ ಗ್ರಂಥಗಳು, ಪ್ರಸಿದ್ಧವಾದ ಪ್ರಯೋಗಗಳನ್ನು ಬೋಧಿಸುವ ಬೌಧಾಯನ, ಆಶ್ವಲಾಯನ, ಆಪಸ್ತಂಬಾದಿ ಕಲ್ಪಗ್ರಂಥಗಳು, ಈ ಶಬ್ದವು ಸಾಧು, ಇದು ಅಸಾಧು ಎಂದು ನಿರೂಪಿಸುವ ವ್ಯಾಕರಣ ಶಾಸ್ತ್ರವು, ವೈದಿಕವಾದ ಇಂದ್ರ ಗೌ ಮೊದಲಾದ ಶಬ್ದಗಳ ಅರ್ಥ ವೈಶಾಲ್ಯವನ್ನು ಬಣ್ಣಿಸುವ ನಿರುಕ್ತ ಗ್ರಂಥಗಳು, ಗಾಯತ್ರಿ ಉಷ್ಣಿಕ್ ಅನುಷ್ಟುಪ್ ಮೊದಲಾದ ಛಂದಸ್ಸುಗಳ ಸ್ವರೂಪ ಮತ್ತು ಭೇದಗಳನ್ನು ತಿಳಿಸುವ ಛಂದಃ ಶಾಸ್ತ್ರಗಳು ಮತ್ತು ಕಾಲ ನಿರ್ಣಾಯಕವಾದ ಜ್ಯೋತಿಃಶಾಸ್ತ್ರವು, ಇವು ಅಪರ ವಿದ್ಯೆಯಾಗಿರುತ್ತವೆ.

ಪರವಿದ್ಯೆಯನ್ನು ನಿರೂಪಿಸಿದ ನಂತರ ಅಪರ ವಿದ್ಯೆಯು ನಿರೂಪಿಸಲ್ಪಡುತ್ತದೆ. ಯಾವುದರಿಂದ ಅವಿನಾಶಿಯಾದ ಪರತತ್ವವು ತಿಳಿಯಲ್ಪಡುವುದೋ ಅದು ಪರವಿದ್ಯೆ ಎನಿಸುವುದು.

ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದಂ ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿ ಧೀರಾಃ ॥

ಅವಿನಾಶಿಯಾದ ಪರತತ್ತ್ವವನ್ನು ಪ್ರತ್ಯಕ್ಷ, ಅನುಮಾನ ಅಥವಾ ಪೌರುಷೇಯಾಗಮಗಳು ತಿಳಿಸಲಾರವು. ಅದು ಗೋತ್ರರಹಿತ, ವರ್ಣರಹಿತ, ಪ್ರಾಕೃತವಾದ ಕಣ್ಣು, ಕೈಕಾಲು ಮೊದಲಾದ ಇಂದ್ರಿಯಗಳಿಲ್ಲದುದು. ಅವಿನಾಶಿ, ಸರ್ವಸಮರ್ಥ, ಎಲ್ಲೆಡೆ ಇರುವುದು, ಅತ್ಯಂತ ಸೂಕ್ಷ್ಮ

ಮತ್ತು ಜಗದ ಹುಟ್ಟು ಇರುವು ಕೊನೆಗಳಿಗೆ ಕಾರಣವಾದುದು. ಇಂತಹ ಪರಮಾತ್ಮನನ್ನು ಜ್ಞಾನಿಗಳು ಋಗಾದಿ ವೇದಗಳಿಂದ ತಿಳಿಯುತ್ತಾರೆ. ಆದ್ದರಿಂದ ಜ್ಞಾನಿಗಳಿಗೆ ಪರಮಾತ್ಮನ ತಿಳಿವು ನೀಡುವ ಸಾಧನಗಳು ಋಗಾದಿ ವೇದಗಳೇ ಹೊರತು ಬೇರೆ ಅಲ್ಲ. ಆದ್ದರಿಂದ ಅವುಗಳೇ ಪರವಿದ್ಯೆಯೆನಿಸುತ್ತವೆ ಎನ್ನಬೇಕು.

ಹೀಗೆ ಸಂಪೂರ್ಣ ಪ್ರಕರಣವು ಪರಮಾತ್ಮನ ವಿದ್ಯೆಯನ್ನು ಮಾತ್ರ ಪಡೆದಿದ್ದೀ, ಉಳಿದವರ ವಿದ್ಯೆಯನ್ನು ಅಪರವಿದ್ಯೆಯೆಂಬುದಾಗಿ ಗುರುತಿಸುತ್ತಿದೆ. ಆದ್ದರಿಂದ ಜೀವೇಶಭೇದವನ್ನು ಒಪ್ಪಲೇಬೇಕು. ಪರವಿದ್ಯೆ, ಅಪರವಿದ್ಯೆ ಎಂಬ ವಿಭಾಗವೇ ಅಯುಕ್ತವಾಗುತ್ತವೆ. ಮತ್ತು 'ಯತ್ತದದ್ರೇಶ್ಯಂ' ಎಂಬ ಶ್ರುತಿಯಲ್ಲಿ ಪರತತ್ವವೆನಿಸಿದ ಪರಮಾತ್ಮನಲ್ಲಿ ಅದೃಶ್ಯತ್ವಾದಿಗುಣಗಳನ್ನು ಹೇಳುತ್ತಿದೆ. ಈ ಗುಣಗಳು ಜೀವನಲ್ಲಿ ಸರ್ವಥಾ ಬರುವುದಿಲ್ಲ. ಆದ್ದರಿಂದಲೂ ಜೀವೇಶಭೇದವನ್ನು ಒಪ್ಪುವುದು ಅತ್ಯಂತ ಅನಿವಾರ್ಯ.

ತತ್ತ್ವಪ್ರಕಾಶಿಕಾ

ಜೀವೇಶಭೇದವು ಶ್ರುತ್ಯುಕ್ತ

तत्वप्रकाशिका – नन्वत्र जीवस्य कस्माच्चिदीशादन्यत्वमुच्यते न परमात्मनोऽतो न तयोभेद इत्याशङ्कां परिहरत् सूत्रमुपन्यस्य व्याचष्टे – प्रकरणादिति ।। नात्र जीवपरमात्मभेदोक्त्यभावः। ईशशब्देनैव परमात्मोक्तेः । तदेव कुतः । 'द्वे विद्ये वेदितव्ये' इति परविद्याविषयवस्तुनोऽत्रारभ्याधीतत्वेनास्य विष्णुप्रकरणत्वादिति भावः ।।६।।

'जुष्टं यदा पश्यति' ಎಂಬ ಶ್ರುತಿಯಲ್ಲಿ ಈಶಪದವಾಚ್ಯನಾದ ವ್ಯಕ್ತಿಗೂ ಮತ್ತು ಜೀವನಿಗೂ ಭೇದವು ಹೇಳಲ್ಪಟ್ಟಿದೆ; ಹೊರತು ಪರಮಾತ್ಮನಿಗೂ ಮತ್ತು ಜೀವನಿಗೂ ಅಭೇದವು ಹೇಳಲ್ಪಟ್ಟಿಲ್ಲ. ಹೀಗಿರುವಾಗ ಜೀವೇಶಭೇದವು ಶ್ರುತ್ಯುಕ್ತವಾಗಿದೆಯೆಂದು ಹೇಗೆ ಹೇಳುತ್ತೀರಿ? ಎಂಬ ಆಕ್ಷೇಪಕ್ಕೆ ಪರಿಹಾರವನ್ನು ನೀಡುವ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಪ್ರಕರಣಾತ್'' ಇತ್ಯಾದಿಯಾಗಿ.

ಈ ಶ್ರುತಿಯಲ್ಲಿ ಜೀವಹಾಗೂ ಪರಮಾತ್ಮರಿಗೆ ಭೇದವು ಹೇಳಿಲ್ಲವೆಂದು ತಿಳಿಯಬಾರದು. ಏಕೆಂದರೆ, ಶ್ರುತಿಯಲ್ಲಿ ಈಶಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ. ಇದನ್ನಾದರೂ ಹೇಗೆ ನಿರ್ಣಯಿಸುತ್ತೀರಿ? ಎಂದರೆ 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಅಂತಹ ವ್ಯಕ್ತಿಯು ಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಲಾಗಿದೆ. ಹೀಗೆ ಪ್ರಾರಂಭಮಾಡಿ ಜೀವೇಶಭೇದವನ್ನು ವರ್ಣನೆ ಮಾಡಿರುವುದರಿಂದ ಇವೆಲ್ಲವೂ ಸಮಗ್ರವಾಗಿ ವಿಷ್ಣುಪ್ರಕರಣವೇ ಆಗಿದೆಯೆಂದು ನಿರ್ಣಯವಾಗುತ್ತದೆ.

ಭಾವದೀಪ

ಸೂತ್ರದಲ್ಲಿ ಸಾಧ್ಯ ಅಧ್ಯಾಹಾರ ಆವಶ್ಯಕ

भावदीपः – प्रकरणात् ।। ईशादन्यत्वमिति ।। जीवादन्यत्वस्योक्त्या तदन्यत्वं जीवेऽर्थात् सिद्धमित्येवमुक्तिः । एकप्रमेयतात्पर्यकानेकवाक्यात्मकप्रकरणस्य स्वान्तर्गतवाक्यं स्वतात्पर्यविषयपरमित्यनुमितिद्वारा तदन्तर्गत-विप्रतिपन्नशब्दार्थनिर्णायकत्वेन साक्षाज्जीवपरमात्मभेदसाधकत्वाद् योग्य-साध्योक्ति पूर्वं परम्परया प्रकरणादिति हेतुं योजयति – नात्रेति ।

''ಈಶಾದನ್ಯತ್ವಂ'' ಎಂಬ ಶಬ್ದಕ್ಕೆ ಹೀಗರ್ಥ- ಜೀವರಿಗಿಂತ ಭೇದವನ್ನು ಹೇಳಿರುವುದರಿಂದ ಈಶನಗಿಂತ ಭೇದವು ಜೀವನಲ್ಲಿದೆ ಎಂಬುದು ಅರ್ಥಾತ್ ಸಿದ್ಧವಾಗುತ್ತದೆ. ಒಂದೇ ಪ್ರಮೇಯದಲ್ಲಿ ತಾತ್ಪರ್ಯವುಳ್ಳ ಅನೇಕ ವಾಕ್ಯಗಳ ಸಮೂಹವೇ ಪ್ರಕರಣ ಎನಿಸುತ್ತದೆ. ''ಸ್ವಾಂತರ್ಗತವಾಕ್ಯಂ ಸ್ವತಾತ್ಪರ್ಯವಿಷಯಪರಂ'' ಎಂಬ ಅನುಮಿತಿಯ ಮುಖಾಂತರ ಆ ವಾಕ್ಯಗಳ ಮಧ್ಯದಲ್ಲಿ ಸೇರಿರುವ ವಿಪ್ರತ್ತಿಪನ್ನವಾದ ಶಬ್ದಾರ್ಥವನ್ನು ನಿರ್ಣಯಮಾಡುತ್ತವೆ ಹೊರತು ನೇರವಾಗಿ ಜೀವಪರಮಾತ್ಮ ಭೇದವನ್ನು ನಿರ್ಣಯಿಸುವುದಿಲ್ಲ. ಈ ಕಾರಣದಿಂದ ಯೋಗ್ಯವಾದ ಸಾಧ್ಯವನ್ನು ಹೇಳುವ ಮೂಲಕ 'ಪ್ರಕರಣಾತ್' ಎಂಬ ಹೇತುವನ್ನು ಪರಂಪರಯಾ ಯೋಜನೆ ಮಾಡುತ್ತಿದ್ದಾರೆ ''ನಾತ್ರ'' ಇತ್ಯಾದಿ ವಾಕ್ಯದಿಂದ.

ಶ್ರುತಿಲಿಂಗಗಳು ಪರಮಾತ್ಮ ಪರ

ಭಾವದೀಪಃ – तदेवेति ।। परमात्मार्थकत्वमेवेत्यर्थः । श्रुतिलिङ्गादेरुपक्रमादौ श्रुतत्वे तन्निर्णायकत्वेन लिङ्गत्वस्य वक्ष्यमाणत्वात् ।

'ತದೇವ' ಎಂಬ ಪದಕ್ಕೆ ಪರಮಾತ್ಮವೆಂಬ ಅರ್ಥವೇ ಎಂದರ್ಥ. ಶ್ರುತಿ ಹಾಗೂ ಲಿಂಗಾದಿಗಳು ಉಪಕ್ರಮಾದಿಗಳಲ್ಲಿ ಕೇಳಿಸುತ್ತಿದ್ದರೂ ಅದನ್ನು ನಿರ್ಣಯ ಮಾಡುವುದಕ್ಕಾಗಿ ಲಿಂಗವನ್ನು ಮುದೆ ಹೇಳುತ್ತಾರೆ.

ಪರವಿದ್ಯಾವಿಷಯತ್ವವು ಉಪಕ್ರಮದಲ್ಲಿದೆ

ಭಾವದೀಪಃ – इह च परविद्याविषयत्वलिङ्गस्योपक्रमे श्रवणेनोपक्रमस्य वैष्णवत्वात्तदादिवाक्यसन्दर्भस्योपक्रान्तार्थविष्णुतात्पर्यकत्वरूपं तत्प्रकरणत्वमवधार्यत इति भावेन भाष्यं व्याचष्टे – द्वे विद्ये इति ।। प्रतीकग्रहणमेतत् ।

ಪ್ರಕೃತ ಪರವಿದ್ಯಾವಿಷಯತ್ವವೆಂಬ ಲಿಂಗವು ಪ್ರಾರಂಭದಲ್ಲಿ ಕೇಳಿಸುತ್ತಿದೆ. ಆದ್ದರಿಂದ ಉಪಕ್ರಮವು ವಿಷ್ಣುಪರವಾಗಿದೆ ಎಂದು ತಿಳಿಯುತ್ತದೆ. ಹೀಗೆ ಪ್ರಾರಂಭವಾಗುವ ಸಮಗ್ರ ವಾಕ್ಯಗಳೆಲ್ಲವು ವಿಷ್ಣುವಿನಲ್ಲಿಯೇ ತಾತ್ಪರ್ಯವನ್ನು ಹೊಂದಿರುತ್ತವೆ ಎಂದು ಪ್ರಕರಣವು ಹೀಗೆ ಸಾಧಿಸುತ್ತದೆ ಎಂದು ತಿಳಿಯಬೇಕು. ಈ ಅಭಿಪ್ರಾಯದಿಂದ ಭಾಷ್ಯವನ್ನು ''ದ್ವೇ ವಿದ್ಯೇ'' ಎಂಬ ಟೀಕಾವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಇದನ್ನು ಪ್ರತೀಕಗ್ರಹಣವೆಂದು ತಿಳಿಯಬೇಕು.

'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬ ಶ್ರುತಿಯ ವ್ಯಾಖ್ಯಾನ

ಭಾವದೀಪಃ – 'अथ परा, यया तदक्षरमधिगम्यते' इत्यनेनेत्यर्थः । आरभ्य उपक्रम्य । परविद्याविषयवस्तूपक्रम्य तस्यैतद्वाक्यसन्दर्भे पठितत्वादस्य वाक्यसन्दर्भस्य तत्प्रकरणत्वमित्यर्थः ।

''ಅಥ ಪರಾ ಯಯಾ ತದಕ್ಷರಮಧಿಗಮ್ಯತೇ'' ಎಂಬುದರಿಂದ ಪರವಿದ್ಯಾವಿಷಯತ್ವವು ತಿಳಿಯುತ್ತಿದೆ ಎಂದರ್ಥ. ''ಆರಭ್ಯ'' ಪದಕ್ಕೆ 'ಉಪಕ್ರಮಿಸಿ' ಎಂದರ್ಥ. ಪರವಿದ್ಯಾವಿಷಯನಾದ

ವಸ್ತುವನ್ನು ಪ್ರಾರಂಭದಲ್ಲಿ ಹೇಳಿ ಅದೇ ವಾಕ್ಯಗಳ ಸಂದರ್ಭದಲ್ಲಿ ದ್ಯುಭ್ವಾದ್ಯಾಶ್ರಯತ್ವವನ್ನು ಪಠಿಸಿರುವುದರಿಂದ ಎಲ್ಲಾ ವಾಕ್ಯಗಳು ವಿಷ್ಣುಪರವೆಂದು ತಿಳಿಯುತ್ತವೆ. ಈ ವಿಷಯದಲ್ಲಿ ವಿಷ್ಣುಪ್ರಕರಣವು ಹೇತುವಾಗಿದೆ ಎಂದು ಭಾವಿಸಬೇಕು.

ಉಪಕ್ರಮದಲ್ಲಿ ಪ್ರಸಕ್ತನಾದ ವ್ಯಕ್ತಿಯೇ ಸಮಗ್ರ ಪ್ರಕರಣ ಪ್ರತಿಪಾದ್ಯ

भावदीपः – 'प्राणो ब्रह्म' इत्यादौ प्राणस्योपक्रमेऽपि तदुत्तरत्र विष्णुश्रुतिलिङ्गादिना प्राणस्याधीतत्वाभावेन तत्प्रकरणत्वं नेति व्यभिचारादुपक्रमादित्यनुक्त्वा उपक्रम्याधीतत्वादित्युक्तम् । जायमानत्वादेर्बाधकस्य निरासेन साधकानामुक्त्या चोपक्रान्तविष्णोरेव सर्वत्राधीतत्वस्योक्तत्वान्ना सिद्धिरिति भावः ।। ६ ।।

''प्राणो ब्रह्म'' ಇತ್ಯಾದಿ ಸ್ಥಳಗಳಲ್ಲಿ ವಸ್ತುತಃ ಪ್ರಾಣನೇ ಉಪಕ್ರಮದಲ್ಲಿ ಕೇಳಿಸುತ್ತಿದ್ದರೂ ಮುಂದೆ ವಿಷ್ಣುಲಿಂಗಾದಿಗಳು ಇರುವುದರಿಂದ ಪ್ರಾಣನನ್ನು ತಿಳಿಯಲು ಸಾಧ್ಯವಿಲ್ಲ. ಹಾಗಾಗಿ ಇದನ್ನು ಪ್ರಾಣಪ್ರಕರಣವೆಂದು ಹೇಳಿದರೆ ವ್ಯಭಿಚಾರ ಬರುತ್ತದೆ. ಹಾಗಾಗಿ ''ಉಪಕ್ರಮಾತ್'' ಎಂದಷ್ಟೇ ಹೇಳದೆ ''ಉಪಕ್ರಮ್ಯಾಧೀತತ್ವಾತ್'' ಎಂಬುದಾಗಿ ಟೀಕೆಯಲ್ಲಿ ಹೇಳಿರುತ್ತಾರೆ. ''ಜಾಯಮಾನತ್ವಾದೇಃ'' ಮೊದಲಾದ ಬಾಧಕಗಳನ್ನು ನಿರಾಸೆ ಮಾಡುವ ಮೂಲಕ ಸಾಧಕಗಳನ್ನು ಹೇಳಿರುವುದರಿಂದ ಉಪಕ್ರಮದಲ್ಲಿ ಪ್ರಸಕ್ತನಾದ ವಿಷ್ಣುವೇ ಸಮಗ್ರ ಪ್ರಕರಣದಿಂದ ಅಧ್ಯಯನ ಮಾಡಲು ಅರ್ಹನಾಗಿದ್ದಾನೆ. ಆದ್ದರಿಂದ ''ವಿಷ್ಣುಪ್ರಕರಣತ್ವಾತ್'' ಎಂಬ ಹೇತುವಿಗೆ ಅಭ್ಯುಚ್ಚಯ ದೋಷವು ಬರುವುದಿಲ್ಲವೆಂದು ತಿಳಿಯಬೇಕು.

ವಿಶೇಷವಿಚಾರ – 'ಪ್ರಕರಣಾತ್' ಎಂಬುದು ಆರನೆಯ ಸೂತ್ರ. ಭೇದವ್ಯಪದೇಶವನ್ನು ಹೇಳಿದ ಮೇಲೆ ಆ ಭೇದವು ಅನ್ಯವಿಷಯಕವಾಗಬಹುದಲ್ಲವೇ? ಎಂಬ ಆಶಂಕೆಯು ಪ್ರಾಪ್ತವಾಗುತ್ತದೆ. ಅದರ ನಿರಾಸಕ್ಕೋಸ್ಕರ ಈ ಸೂತ್ರವು ಹೊರಟಿದೆ. ಪ್ರಕರಣದ ಬಲದಿಂದ ಜೀವಬ್ರಹ್ಮಭೇದವನ್ನೇ ಸಾಧಿಸಬೇಕೆಂದು ಈ ಸೂತ್ರವು ಸಾಧಿಸುತ್ತಿದೆ. ಆದ್ದರಿಂದ ಈ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಿರುವುದಿಲ್ಲ.

ಬ್ರಹ್ಮಸೂತ್ರ

'ಸ್ಥಿತ್ಯದನಾಭ್ಯಾಂಚ' ಎಂಬ ಸೂತ್ರ ವ್ಯಾಖ್ಯಾನ

ब्रह्मसूत्रम् – ।। स्थित्यदनाभ्यां च ।।७।।

ಬ್ರಹ್ಮನಿಗೆ ಕರ್ಮಫಲ ಭೋಗವಿಲ್ಲ. ಜೀವನಿಗೆ ಕರ್ಮಫಲಭೋಗದಿಂದಲೇ ಜೀವನ. ಹೀಗೆ ವಿರುದ್ಧವಾದ ಧರ್ಮಗಳನ್ನು ಜೀವೇಶ್ವರರಿಗೆ ಹೇಳಿರುವುದರಿಂದಲೂ ಅವರಿಬ್ಬರಿಗೆ ಐಕ್ಯವನ್ನು ವಿವಕ್ಷಿಸಬಾರದು.

ಈಶ ಹಾಗೂ ಜೀವರಿಗೆ 'ದ್ವಾ ಸುಪರ್ಣಾ' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಕರ್ಮಫಲಭೋಗದಿಂದ ಜೀವನ ಸ್ಥಿತಿ, ಕರ್ಮಫಲಭೋಗವಿಲ್ಲದೆ ಬ್ರಹ್ಮನ ಸ್ಥಿತಿ ಹೀಗೆ ವಿರುದ್ಧವಾದ ಧರ್ಮಗಳನ್ನು ಹೇಳಿರುವುದರಿಂದ ಐಕ್ಯವನ್ನು ಹೇಳಬಾರದು.

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ದ್ಯುಭ್ವಾದ್ಯಧಿಕರಣವು ಸಮಾಪ್ತವಾಯಿತು ।।

ಬ್ರಹ್ಮಸೂತ್ರಭಾಷ್ಯ

ವಿರುದ್ಧ ಧರ್ಮವುಳ್ಳ ಜೀವೇಶ್ವರರಿಗೆ ಅಭೇದವು ಕೂಡದು

ब्रह्मसूत्रभाष्यम् –
'द्वा सुपर्णा सयुजा सखाया समानं वृक्षं परिषस्वजाते ।
तयोरन्यः पिप्पलं स्वाद्वत्त्यनश्नन्नन्यो अभिचाकशीति ।।' (मुं.३-१-१)
इतीशजीवयोः स्थित्यदनोक्तेः ।।७।।

।। इति द्युभ्वाद्यधिकरणम् ।। १ ।।

ಅನುವಾದ - ''ಎರಡು ಹಕ್ಕಿಗಳು ಸ್ನೇಹಿತರಂತೆ ದೇಹವೆಂಬ ಒಂದೇ ಮರದಲ್ಲಿ ಆಶ್ರಯಿಸಿಕೊಂಡಿವೆ ಆ ಪಕ್ಷಿಗಳಲ್ಲಿ ಜೀವನೆಂಬ ಪಕ್ಷಿಯು ಅಶ್ವತ್ಥವೃಕ್ಷದ ಫಲವನ್ನು ರಸವತ್ತಾಗಿದೆ ಎಂಬ ಭ್ರಾಂತಿಯಿಂದ ತಿನ್ನುತ್ತದೆ. ಮತ್ತೊಂದು ಈಶ ಎಂಬ ಪಕ್ಷಿಯು ಏನನ್ನೂ ತಿನ್ನದೆ ವರ್ಚಸ್ವಿಯಾಗಿ ಒಂದೇ ರೀತಿಯಾಗಿ ಕುಳಿತಿದೆ''. ಹೀಗೆ ಈಶ ಮತ್ತು ಜೀವರಿಗೆ ತಿನ್ನದಿರುವಿಕೆ ಮತ್ತು ತಿನ್ನುವಿಕೆ ಎಂಬ ವಿರುದ್ಧಧರ್ಮಗಳನ್ನು ಹೇಳಿರುವ ಕಾರಣ ಜೀವೇಶ್ವರರ ಅಭೇದವು ಅಸಂಭಾವಿತವಾಗಿದೆ. ಈ ಎಲ್ಲ ಕಾರಣಗಳಿಂದ ದ್ಯುಭ್ವಾದ್ಯಾಯತನತ್ವ ಎಂಬ ಧರ್ಮವು ಭಗವಂತನಲ್ಲಿಯೇ ಸಮನ್ವಯವಾಗುತ್ತದೆ.

ಪ್ರತಿಪದಾರ್ಥ -- ಜೀವೇಶಭೇದಕ್ಕೆ ಶ್ರುತಿಯಷ್ಟೇ ಪ್ರಮಾಣವಲ್ಲ ಲಿಂಗವೂ ಪ್ರಮಾಣವಾಗಿದೆಯೆಂದು ಸೂತ್ರಕಾರರೇ ಹೇಳುತ್ತಿದ್ದಾರೆ.

ಸಯುಜಾ = ಒಟ್ಟಿಗೆ ಸೇರಿ, ಸಖಾಯ = ಸ್ನೇಹಿತರಂತೆ ವರ್ತಿಸುವ, ದ್ವಾ = ಎರಡು, ಸುಪರ್ಣಾ = ಜೀವ ಹಾಗೂ ಈಶ್ವರರೆಂಬ ಪಕ್ಷಿಗಳು, ಸಮಾನಂ ವೃಕ್ಷಂ = ದೇಹವೆಂಬ ಒಂದೇ ಮರವನ್ನು, ಪರಿಷಸ್ವಜಾತೇ = ಆಲಂಗಿಸಿವೆ. ತಯೋಃ = ಈ ಎರಡು ಪಕ್ಷಿಗಳಲ್ಲಿ, ಏಕಂ = ಜೀವನೆಂಬ ಪಕ್ಷಿಯು,
ಪಿಪ್ಪಲಂ = ಅಶ್ವತ್ಥಫಲವನ್ನು, ಸ್ವಾದ್ವತ್ತಿ = ಬಹು ರುಚಿಯಾಗಿದೆಯೆಂಬ ಭ್ರಾಂತಿಯಿಂದ ತಿನ್ನುತ್ತದೆ. ಅನ್ಯಃ = ಮತ್ತೊಂದು ಈಶನೆಂಬ ಪಕ್ಷಿಯು, ಅನಶ್ನನ್ = ಏನನ್ನೂ ತಿನ್ನದೆ, ಅಭಿಚಾಕಶೀತಿ = ಒಂದೇ ರೀತಿಯಲ್ಲಿ ವರ್ಚಸ್ವಿಯಾಗಿ ಕುಳಿತಿದೆ. ಇತಿ ಈಶಜೀವಯೋಃ = ಹೀಗೆ ಭಗವಂತನಿಗೆ ಮತ್ತು ಜೀವರಿಗೆ, ಸ್ಥಿತ್ಯದನೋಕ್ತೇಃ = ತಿನ್ನುವಿಕೆ ಹಾಗೂ ತಿನ್ನದಿರುವಿಕೆ ಎಂಬ ಈ ವಿರುದ್ಧಧರ್ಮಗಳನ್ನು ಹೇಳಿರುವುದರಿಂದ ಜೀವೇಶ್ವರರ ಅಭೇದವು ಅಸಂಭಾವಿತವಾಗಿದೆ. ಆದ್ದರಿಂದ ದ್ಯುಭ್ವಾದ್ಯಾಯತನತ್ವ ಮೊದಲಾದ ಧರ್ಮಗಳೆಲ್ಲವೂ ಭಗವಂತನಲ್ಲಿಯೇ ಸಮನ್ವಯ-ವಾಗುತ್ತವೆ.

॥ ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಬ್ರಹ್ಮಸೂತ್ರಭಾಷ್ಯದ ಕನ್ನಡಾನುವಾದದಲ್ಲಿ ದ್ಯುಭ್ವಾದ್ಯಧಿಕರಣವು ಸಮಾಪ್ತವಾಯಿತು ॥

ಸತ್ತರ್ಕದೀಪಾವಳಿ

'ದ್ವಾ ಸುಪರ್ಣಾ' ಎಂಬ ಶ್ರುತಿಯ ಸಮನ್ವಯ

सत्तर्कदीपावलिः – 'द्वा सुपर्णा' इत्यनेन पापकर्तुर्जीवात् कर्मफलमनश्नुतो दीप्यमानस्य द्युभ्वाद्याश्रयस्य भेदव्यपदेशादपि नासौ जीव इत्याह – स्थितीति ।। अतो द्युभ्वाद्याश्रयो विष्णुरिति सिद्धम् ।।

।। इति श्रीपद्मनाभतीर्थविरचितसत्तर्कदीपावळ्याम्: द्युभ्वाद्यधिकरणम् ।।

'ದ್ವಾ ಸುಪರ್ಣಾ' ಇತ್ಯಾದಿ ಶ್ರುತಿಯಲ್ಲಿ ಪಾಪಕರ್ಮದಲ್ಲಿ ಮುಳುಗಿದ ಜೀವನಿಗಿಂತ ಕರ್ಮಫಲವನ್ನು ಭೋಗಿಸದ ದೇದೀಪ್ಯಮಾನನಾದ ದ್ಯುಭ್ವಾದ್ಯಾಶ್ರಯನಿಗೆ ಭೇದವನ್ನು ಹೇಳಿರುವ ಕಾರಣದಿಂದಲೂ ಜೀವನು ದ್ಯುಭ್ವಾದ್ಯಾಶ್ರಯನಾಗಲು ಸಾಧ್ಯವಿಲ್ಲ. ಇದನ್ನು ಪ್ರತಿಪಾದಿಸುವುದಕ್ಕಾಗಿ 'ಸ್ಥಿತ್ಯದನಾಭ್ಯಾಂ ಚ' ಎಂಬ ಸೂತ್ರವು ಹೊರಟಿದೆ. ಜೀವನಿಗಿಂತ ವಿಲಕ್ಷಣವಾದ ಧರ್ಮವನ್ನು ಶ್ರುತಿ ವಿಷ್ಣುವಿಗೆ ಹೇಳುತ್ತಿದೆ. ಆದ್ದರಿಂದ ದ್ಯುಭ್ವಾದ್ಯಾಶ್ರಯನಾದವನು ವಿಷ್ಣುವೇ ಆಗುತ್ತಾನೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ವಿರಚಿತವಾದ ಸತ್ತರ್ಕದೀಪಾವಳಿಯಲ್ಲಿ ದ್ಯುಭ್ವಾದ್ಯಧಿಕರಣದ ಕನ್ನಡಾನುವಾದವು ಸಮಾಪ್ತವಾಯಿತು ॥

ತತ್ವಪ್ರದೀಪ

ಕರ್ಮಫಲಭೋಕ್ತೃವಲ್ಲದ ಈಶ್ವರನ ಜೊತೆ ಜೀವನಿಗೆ ಐಕ್ಯವು ಸಲ್ಲದು

तत्वप्रदीपः – स्थित्यदनाभ्यां च ।। ईशस्यानश्नतः स्थित्युक्तेर्जीवस्य कर्मफलादनोक्तेश्च न तयोरैक्यं वाच्यम् ।

ಈಶ್ವರನು ಕರ್ಮಫಲವನ್ನು ಭುಂಜಿಸದೇ ಕುಳಿತಿದ್ದಾನೆ. ಜೀವನಾದರೂ ಕರ್ಮಫಲವನ್ನು ಭೋಗಿಸುತ್ತಾ ಕುಳಿತಿದ್ದಾನೆ. ಹೀಗೆ ಉಪನಿಷತ್ತು ಹೇಳುತ್ತಿರುವುದರಿಂದ ಜೀವೇಶ್ವರರಿಗೆ ಐಕ್ಯವನ್ನು ಸರ್ವಥಾ ವಿವಕ್ಷಿಸಬಾರದು.

ಭಾಗವತದಲ್ಲಿ 'ದ್ವಾಸುಪರ್ಣಾ' ಶ್ರುತ್ಯರ್ಥ

तत्वप्रदीपः –

''सुपर्णावेतौ सयुजौ सखायौ यदृच्छया कृतनीडौ च वृक्षे ।
एकस्तयोः खादति पिप्पलान्नमन्यो निरन्नोऽपि बलेन भूयान् ।।
आत्मानमन्यं च स वेद विद्वानपिप्पलादो न तु पिप्पलादः ।
योऽविद्ययाऽन्धस्स तु नित्यबद्धो विद्यामयो यस्स तु नित्यमुक्तः ।।''

इति च भागवते ।

ಸುಪರ್ಣಾವೇತೌ ಸಯುಜೌ ಸಖಾಯೌ ಯದೃಚ್ಛಯಾ ಕೃತನೀಡೌ ಚ ವೃಕ್ಷೇ ।
ಏಕಸ್ತಯೋಃ ಖಾದತಿ ಪಿಪ್ಪಲಾನ್ನಮನ್ಯೋ ನಿರನ್ನೋಽಪಿ ಬಲೇನ್ ಬೂಯಾನ್ ।।

ದೇಹವೆಂಬ ಅಶ್ವತ್ಥವೃಕ್ಷದಲ್ಲಿ ಜೀವ-ಪರಮಾತ್ಮ ಎಂಬೆರಡು ಸ್ನೇಹಿತ ಪಕ್ಷಿಗಳು ಒಟ್ಟಿಗೆ ಗೂಡು ಮಾಡಿವೆ. ಅವೆರಡರಲ್ಲಿ ಜೀವವೆಂಬ ಹಕ್ಕಿಯು ಕರ್ಮಫಲವೆಂಬ ಅಶ್ವತ್ಥಫಲವನ್ನು ತಿನ್ನುತ್ತಿದೆ. ಹಣ್ಣನ್ನು ತಿನ್ನದಿದ್ದರೂ ಪರಮಾತ್ಮನ ಎಂಬ ಮತ್ತೊಂದು ಹಕ್ಕಿಯು ಬಲಿಷ್ಠವಾಗಿದೆ.

ಆತ್ಮಾನಮನ್ಯಂ ಚ ಸ ವೇದ ವಿದ್ವಾನಪಿಪ್ಪಲಾದೋ ನ ತು ಪಿಪ್ಪಲಾದಃ ।
ಯೋಽವಿದ್ಯಯಾಽಂಧಃ ಸ ತು ನಿತ್ಯಬದ್ಧೋ ವಿದ್ಯಾಮಯೋ ಯಃ ಸ ತು ನಿತ್ಯಮುಕ್ತಃ ।।
(ಇತಿ ಚ ಭಾಗವತೇ)

ತನ್ನನ್ನು ಹಾಗೂ ತನಗಿಂತ ಭಿನ್ನನಾದ ಜೀವನನ್ನು ತಿಳಿದಿರುವ ಪರಮಾತ್ಮನು ಪಿಪ್ಪಲ ಫಲವನ್ನು ತಿನ್ನದ ಕಾರಣ 'ಅಪಿಪ್ಪಲಾದ' ಎಂದು ಕರೆಸಿಕೊಳ್ಳುತ್ತಾನೆ. ಆದ್ದರಿಂದ ಇವನು ವಿದ್ವಾನ್ ಎಂದು ಕರೆಸಿಕೊಳ್ಳುತ್ತಾನೆ. ಪಿಪ್ಪಲಾದನೆನಿಸಿದ ಜೀವನು ವಿದ್ವಾನ್ ಎಂದು

ಕರೆಸಿಕೊಳ್ಳುವುದಿಲ್ಲ. ಅಜ್ಞಾನದಿಂದ ಕುರುಡನಾದ ಜೀವನು ನಿತ್ಯಬದ್ಧನಾಗಿದ್ದಾನೆ. ಜ್ಞಾನಸ್ವರೂಪನಾದ ಆ ಪರಮಾತ್ಮನು ನಿತ್ಯಮುಕ್ತನಾಗಿದ್ದಾನೆ. ಹೀಗೆ ಭಾಗವತವು ಹೇಳುತ್ತಿದೆ.

ಭೋಗನಿರ್ಣಯದಲ್ಲಿ 'ದ್ವಾ ಸುಪರ್ಣಾ' ಶ್ರುತ್ಯರ್ಥ

तत्वप्रदीपः –
''अनर्तृत्वं हरेर्दुःखानर्तृत्वादुच्यते सदा ।
विषयान् विनाऽपि पूर्णत्वात् स्वरूपानन्दभोगिनः ।।
शुभमत्त्येव हि सदा सर्वत्रावस्थितं विभुः ।
स्वादोरदनवद्धत्ति जीवोऽस्वाद्वपि यत्सदा ।
अनारतं पारवश्यात् स्वाद्वत्तीति ततः श्रुतः'' इति भोगनिर्णये ।।

ಅನರ್ತೃತ್ವಂ ಹರೇರ್ದುಃಖಾನರ್ತೃತ್ವಾದುಚ್ಯತೇ ಸದಾ ।
ವಿಷಯಾನ್ ವಿನಾऽಪಿ ಪೂರ್ಣತ್ವಾತ್ ಸ್ವರೂಪಾನಂದಭೋಗಿನಃ ।।

ದುಃಖಭೋಗವನ್ನು ಯಾವಾಗಲೂ ಅನುಭವಿಸದ ಕಾರಣ ಶ್ರೀಹರಿಯಲ್ಲಿ ಅನರ್ತೃತ್ವವನ್ನು ಹೇಳಲಾಗುತ್ತದೆ. ಸ್ವರೂಪಾನಂದವನ್ನು ಭೋಗಿಸುವ ಶ್ರೀಹರಿಯು ವಿಷಯಭೋಗಗಳಿಲ್ಲದ್ದರೂ ಕೂಡ ಪೂರ್ಣನಾಗಿದ್ದಾನೆ.

ಶುಭಮತ್ತ್ಯೇವ ಹಿ ಸದಾ ಸರ್ವತ್ರಾವಸ್ಥಿತಂ ವಿಭುಃ ।
ಸ್ವಾದೋರದನವದ್ಧತ್ತಿ ಜೀವೋऽಸ್ವಾದ್ವಪಿ ಯತ್ಸದಾ ।
ಅನಾರತಂ ಪಾರವಶ್ಯಾತ್ ಸ್ವಾದ್ವತ್ತೀತಿ ತತಃ ಶ್ರುತಃ ।।

ಇತಿ ಭೋಗನಿರ್ಣಯೇ

ಎಲ್ಲರಲ್ಲಿ ನೆಲೆಸಿರುವ ವ್ಯಾಪ್ತನಾದ ಶ್ರೀಹರಿಯು ಶುಭವನ್ನಷ್ಟೇ ಸದಾ ಭುಂಜಿಸುತ್ತಾನೆ. ಜೀವನು ಅಸ್ವಾದುವಾದುದ್ದನ್ನು ಸ್ವಾದುಪದಾರ್ಥವನ್ನು ಮೆಲ್ಲುವಂತೆ ನಿರಂತರವಾಗಿ ಭುಂಜಿಸುತ್ತಾನೆ. ನಿರಂತರವಾಗಿ ಅಸ್ವತಂತ್ರನಾದ ಕಾರಣ ಸ್ವಾದುವನ್ನು ತಿನ್ನುತ್ತಾನೆಂದು ಶ್ರುತಿಯು ಹೇಳುತ್ತದೆ.

ಹೀಗೆ ಭೋಗನಿರ್ಣಯವು ಹೇಳುತ್ತದೆ.

ಪರಮಭೋಗದಲ್ಲಿ 'ದ್ವಾ ಸುಪರ್ಣಾ' ಶ್ರುತ್ಯರ್ಥ

तत्वप्रदीपः –

''अस्वादु स्वादुवद्धत्ति जीवो नैव जनार्दनः ।
अतो नात्तीति वचनमश्नतोऽपि शुभं सदा'' इति परमभोगे ।।

ಅಸ್ವಾದು ಸ್ವಾದುವದ್ಧತ್ತಿ ಜೀವೋ ನೈವ ಜನಾರ್ದನಃ ।
ಅತೋ ನಾಸ್ತೀತಿ ವಚನಮಶ್ನತೋಽಪಿ ಶುಭಂ ಸದಾ ।।

ಇತಿ ಪರಮಭೋಗೇ ।।

ಅಸ್ವಾದು ಪದಾರ್ಥವನ್ನು ಸ್ವಾದುಪದಾರ್ಥದಂತೆ ಭುಂಜಿಸುವವನು ಜೀವನು ಮಾತ್ರ ಹೊರತು ಜನಾರ್ದನನಲ್ಲ. ಆದ್ದರಿಂದ ಜನಾರ್ದನನು ಏನನ್ನೂ ತಿನ್ನುವುದಿಲ್ಲ ಎಂಬ ಮಾತು ಅಸ್ವಾದು ಪದಾರ್ಥವನ್ನು ತಿನ್ನುವುದಿಲ್ಲ ಎಂಬರ್ಥದಲ್ಲಿ ಪ್ರಯುಕ್ತವಾಗುತ್ತದೆ. ಆದರೆ ಶುಭಪದಾರ್ಥವನ್ನು ನಿರಂತರವಾಗಿ ಅನುಭವಿಸುತ್ತಾನೆ.

ಸ್ವಾಭಾವ್ಯದಲ್ಲಿ 'ದ್ವಾ ಸುಪರ್ಣಾ' ಶ್ರುತ್ಯರ್ಥ

तत्वप्रदीपः –

''साशनानशनत्वेन नरदेवौ यथोदितौ ।
अत्तिं विनाऽप्यदौर्बल्यात् तथाऽनत्तिर्हरेर्भुजः'' इति स्वाभाव्ये ।।

ಸಾಶನಾನಶನತ್ವೇನ ನರದೇವೌ ಯಥೋದಿತೌ ।
ಅತ್ತಿಂ ವಿನಾऽಪ್ಯದೌರ್ಬಲ್ಯಾತ್ ತಥಾऽನತ್ತಿರ್ಹರೇರ್ಭುಜಃ ।।

ಇತಿ ಸ್ವಾಭಾವ್ಯೇ ।।

ಜೀವನು ಊಟ ಮಾಡುತ್ತಾನೆ, ಈಶನು ಊಟ ಮಾಡುವುದಿಲ್ಲ, ಈಶನು ಊಟ ಮಾಡದಿದ್ದರೂ ಬಲಿಷ್ಠನಾಗಿದ್ದಾನೆ. ಆದ್ದರಿಂದ ಅವನ ಬಗ್ಗೆ ಶ್ರುತಿಯು ಏನನ್ನು ತಿನ್ನುವುದಿಲ್ಲವೆಂದು ಹೇಳುತ್ತದೆ. ಹೀಗೆ ಸ್ವಾಭಾವ್ಯವಚನವಿದೆ.

ಕೂರ್ಮಸಂಹಿತೆಯಲ್ಲಿ 'ದ್ವಾ ಸುಪರ್ಣಾ' ಶ್ರುತ್ಯರ್ಥ

तत्वप्रदीपः –

''सुपर्णौ द्वौ शरीरस्थौ जीवश्च परमस्तथा ।
पारवश्यादनाज्जीवस्तत्रात्तीति श्रुतौ श्रुतः ।।
स्ववशेनादनाद्विष्णुर्नात्तीत्यत्ताऽपि संश्रुतः ।
स एव हि शुभस्यात्ता जीवोऽत्त्यस्यैव वेदनात् ।।''

इति कूर्मसंहितायाम् ।।

ಸುಪರ್ಣೌ ದ್ವೌ ಶರೀರಸ್ಥೌ ಜೀವಶ್ಚ ಪರಮಸ್ತಥಾ ।
ಪಾರವಶ್ಯಾದನಾಜ್ಜೀವಸ್ತತ್ರಾತ್ತೀತಿ ಶ್ರುತೌ ಶ್ರುತಃ ॥
ಸ್ವವಶೇನಾದನಾದ್ವಿಷ್ಣುರ್ನಾತ್ತೀತ್ಯತ್ತಾऽಪಿ ಸಂಶ್ರುತಃ ।
ಸ ಏವ ಹಿ ಶುಭಸ್ಯಾತ್ತಾ ಜೀವೋऽತ್ತ್ಯಸ್ಯೈವ ವೇದನಾತ್ ॥

ಇತಿ ಕೂರ್ಮಸಂಹಿತಾಯಾಮ್

ಪ್ರಾಕೃತ ಶರೀರದಲ್ಲಿ ಜೀವ ಹಾಗೂ ಪರಮಾತ್ಮ ಎಂಬೆರಡು ಹಕ್ಕಿಗಳು ನೆಲೆಸಿವೆ. ಅಸ್ವತಂತ್ರನಾಗಿ ಭುಂಜಿಸುವ ಕಾರಣ ಜೀವನು 'ಅತ್ತಿ' ಎಂದು ಶ್ರುತನಾಗಿದ್ದಾನೆ. ಸ್ವತಂತ್ರವಾಗಿ ಭುಂಜಿಸುವ ಕಾರಣ ವಿಷ್ಣುವು 'ನ ಅತ್ತಿ' ಎಂದು ಶ್ರುತನಾಗಿದ್ದಾನೆ. ಆ ವಿಷ್ಣುವೊಬ್ಬನೇ ಶುಭವಾದ ಸಾರಭಾಗವನ್ನು ತಿನ್ನುತ್ತಾನೆ. ಜೀವನು ದುಃಖದಿಂದ ಕರ್ಮಫಲವನ್ನು ಅನುಭವಿಸುತ್ತಾನೆ. ಹೀಗೆ ಕೂರ್ಮಸಂಹಿತೆಯು 'ದ್ವಾಸುಪರ್ಣಾ' ಎಂಬ ಶ್ರುತಿಯನ್ನು ವ್ಯಾಖ್ಯಾನ ಮಾಡುತ್ತದೆ.

ಅತತ್ವಾವೇದಕವಾದರೆ ಪ್ರಮಾಣವೇ ಅಲ್ಲ

तत्वप्रदीपः – भेदवाक्यमतत्वावेदकमिति चेत् तदयुक्तम् । अतत्वावेदकं चेन्न प्रमाणम् । प्रमाणं चेन्नातत्वावेदकम् ।

ಭೇದವಾಕ್ಯಗಳೆಲ್ಲವೂ ಅತತ್ತ್ವಾವೇದಕವಲ್ಲವೇ ? ಎಂಬ ಆಕ್ಷೇಪ ಅಯುಕ್ತವಾಗಿದೆ. ಅತತ್ತ್ವಾವೇದಕವಾದಲ್ಲಿ ಪ್ರಮಾಣವೆಂದೇ ಹೇಳಲಾಗದು. ಪ್ರಮಾಣವೆಂದು ಹೇಳಿದರೆ ಅತತ್ತ್ವಾವೇದಕವಾಗುವುದಿಲ್ಲ.

ವಿಶೇಷವಿಚಾರ - ಅದ್ವೈತಿಗಳು - 'ದ್ವಾಸುಪರ್ಣಾ' ಇತ್ಯಾದಿ ಶ್ರುತಿಗಳು ಭೇದವನ್ನು ಪ್ರತಿಪಾದನೆ ಮಾಡುತ್ತಿದೆ ಎಂದು ಒಪ್ಪುತ್ತೇವೆ. ಆದರೆ ಆ ಭೇದವು ವ್ಯಾವಹಾರಿಕವೇ ಹೊರತು ಪಾರಮಾರ್ಥಿಕವಲ್ಲ. ಅಂಥ ವೇದಪ್ರತಿಪಾದಕವಾದ ವಾಕ್ಯಗಳೆಲ್ಲವೂ ಅತತ್ತ್ವಾವೇದಕಗಳಾಗಿವೆ. ಆದ್ದರಿಂದ ನಮ್ಮ ಐಕ್ಯಸಿದ್ಧಾಂತಕ್ಕೆ ಭೇದವಾಕ್ಯಗಳ ವಿರೋಧವು ಪ್ರಾಪ್ತವಾಗುವುದಿಲ್ಲ.

ತತ್ತ್ವವಾದಿಗಳು - ನಿಮ್ಮ ಅಭಿಪ್ರಾಯವೇನು ? 'ದ್ವಾ ಸುಪರ್ಣಾ' ಇತ್ಯಾದಿ ವಾಕ್ಯಗಳು ಅತತ್ತ್ವಾವೇದಕವೆಂದರೆ ಏನರ್ಥ ? ಪ್ರಮಾಣವಲ್ಲವೆಂದೋ? ಪ್ರಮಾಣವೆಂದೋ ? ತತ್ತ್ವಾವೇದಕವಾಕ್ಯಗಳು ಯಾವುವು ?

ಅದ್ವೈತಿಗಳು - ಪ್ರಮಾಣಗಳು ಎರಡು ವಿಧ - ೧) ತತ್ತ್ವಾವೇದಕಪ್ರಮಾಣ, ೨) ಅತತ್ತ್ವಾವೇದಕಪ್ರಮಾಣ ಎಂದು. ಪಂಚಮಹಾವಾಕ್ಯಗಳು ತತ್ತ್ವಾವೇದಕಪ್ರಮಾಣಗಳಾಗಿವೆ. ಉಳಿದೆಲ್ಲಾ ವೇದವಾಕ್ಯಗಳು ಅತತ್ತ್ವಾವೇದಕಪ್ರಮಾಣ ವಾಕ್ಯಗಳಾಗಿವೆ. ಪ್ರಕೃತ ಭೇದಪ್ರತಿಪಾದಕವಾದ 'ದ್ವಾಸುಪರ್ಣಾ' ಇತ್ಯಾದಿ ವಾಕ್ಯಗಳೂ ಕೂಡ ಅತತ್ತ್ವಾವೇದಕ-ಪ್ರಮಾಣಗಳೆಂದು ಪರಿಗಣಿಸುತ್ತೇವೆ. ಐಕ್ಯಸಿದ್ಧಾಂತಕ್ಕೆ ಅತತ್ತ್ವಾವೇದಕಪ್ರಮಾಣಗಳಿಂದ ವಿರೋಧ ಬಂದರೂ ಕೂಡ, ತತ್ತ್ವಾವೇದಕಪ್ರಮಾಣಗಳಿಂದ ವಿರೋಧ ಬಾರದ ಕಾರಣ ಅಭೇದಪ್ರತಿಪಾದನೆಗೆ ಯಾವುದೇ ಭಂಗ ಬರುವುದಿಲ್ಲ.

ತತ್ತ್ವವಾದಿಗಳು - ನಿಮ್ಮ ಈ ಮಾತೇ ವ್ಯಾಹತವಾಗಿದೆ. ಅತತ್ತ್ವಾವೇದಕ ಎಂಬ ಪದಕ್ಕೆ ತತ್ತ್ವವನ್ನು ತಿಳಿಸದೇ ಇರುವ ಪ್ರಮಾಣ ಎಂದರ್ಥ. ಆದ್ದರಿಂದ 'ಅತತ್ತ್ವಾವೇದಕಪ್ರಮಾಣ' ಎಂಬ ಮಾತೇ ವ್ಯಾಹತವಾಯಿತು. ಅತತ್ತ್ವಾವೇದಕ ಎಂದರೆ ಪ್ರಮಾಣವಲ್ಲ ಎಂದರ್ಥ. ಪುನಃ ಪ್ರಮಾಣ ಎಂಬ ಪದದಿಂದ ಪ್ರಾಮಾಣ್ಯವನ್ನು ಹೇಳಿದರೆ ಸ್ವವಚನ ವಿರೋಧ ಬರುತ್ತದೆ. ಇನ್ನು ಪ್ರಮಾಣ ಎಂದು ಹೇಳಿದರೆ ಅತತ್ತ್ವಾವೇದಕ ಆಗುವುದಿಲ್ಲ. ಆದ್ದರಿಂದ 'ಪ್ರಮಾಣವು ಅತತ್ತ್ವಾವೇದಕವಾಗಿದೆ' ಎಂಬುದೂ ಕೂಡ ವ್ಯಾಹತವಾಗುತ್ತದೆ.

ಅತತ್ತ್ವಾವೇದಕವಾದ ರಜತಭ್ರಾಂತಿಯು ಅಪ್ರಮಾಣ

तत्त्वप्रदीपः – अतत्त्ववेदकत्वाद्धि रजतभ्रान्तिरमानमित्युच्यते ।

ಅತತ್ತ್ವಾವೇದಕವಾಗಿರುವುದರಿಂದ ರಜತಭ್ರಾಂತಿಯು ಅಪ್ರಮಾಣವಾಗಿದೆ ಎಂದು ಎಲ್ಲರೂ ಹೇಳುತ್ತಾರೆ.

ವಿಶೇಷ ವಿಚಾರ - ಅದ್ವೈತಿಗಳು - ಶುಕ್ತಿಯನ್ನು ನೋಡಿದಾಗ 'ಇದಂ ರಜತಂ' ಎಂದು ವ್ಯವಹರಿಸುತ್ತಾರೆ. ಈ ವ್ಯವಹಾರವು ತತ್ಕಾಲದಲ್ಲಿ ಹೇಗೆ ಸತ್ಯವಾಗಿದೆಯೋ, ಅದರಂತೆ ಭೇದಪ್ರತಿಪಾದಕವಾದ ವಾಕ್ಯಗಳು ತತ್ಕಾಲದಲ್ಲಷ್ಟೇ ಸತ್ಯವಾಗಿರುತ್ತದೆ. ಆದ್ದರಿಂದ ಇಂಥ ವಾಕ್ಯಗಳನ್ನು ಅತತ್ತ್ವಾವೇದಗಳೆಂದು ಹೇಳುತ್ತೇವೆ.

ತತ್ತ್ವವಾದಿಗಳು - ಶುಕ್ತಿಯನ್ನು ನೋಡಿದಾಗ 'ಇದಂ ರಜತಂ' ಎಂದು ಜ್ಞಾನ ಬರುತ್ತದೆ. ಇದು ಭ್ರಾಂತ್ಯಾತ್ಮಕವಾದ್ದರಿಂದ ಅಪ್ರಮಾಣವೆಂದು ಎಲ್ಲರೂ ಒಪ್ಪಿದ್ದಾರೆ. ಹೊರತು, ವ್ಯವಹಾರ ಕಾಲದಲ್ಲಿ ಪ್ರಮಾಣವಾದ್ದರಿಂದ ತತ್ತ್ವಾವೇದಕಪ್ರಮಾಣವೆಂದು ಯಾರೂ ಹೇಳುವುದಿಲ್ಲ. ಶುಕ್ತಿರಜತಜ್ಞಾನವು ಹೇಗೆ ಅಪ್ರಾಮಾಣವೋ, ಅದರಂತೆ ನೀವು ಹೇಳುವ ವಿಶ್ವವಿಥ್ಯಾತ್ವವೂ ಕೂಡ ಅಪ್ರಮಾಣವೇ ಆಗಬೇಕು. ಹೀಗಿರುವಾಗ ಶುಕ್ತಿರಜತಜ್ಞಾನವನ್ನು ಅತತ್ತ್ವಾವೇದಕ-ಪ್ರಮಾಣವೆಂದು ಒಪ್ಪಲು ಹೇಗೆ ಸಾಧ್ಯವಿಲ್ಲವೋ ? ಅದರಂತೆ ಭೇದಪ್ರತಿಪಾದಕವಾದ ವಾಕ್ಯಗಳನ್ನೂ ಕೂಡ ಅತತ್ತ್ವಾವೇದಕಪ್ರಮಾಣವೆಂದು ಒಪ್ಪಲು ಸಾಧ್ಯವೇ ಇಲ್ಲ.

ಗಗನ ಮಾಲಿನ್ಯದಲ್ಲಿ ವ್ಯಭಿಚಾರ

तत्त्वप्रदीपः – तदापाततो बाध्यते, अस्य तु देशकालादिभिः सहैव बाधः, अत एतत् प्रमाणमिति चेन्न । गगनतलमलिनतादिज्ञाने व्यभिचारात् ।

ಶುಕ್ತಿರಜತಭ್ರಾಂತಿಯು ಆಪಾತತಃ ಬಾಧ್ಯವಾಗುತ್ತದೆ. ಪ್ರಪಂಚದ ಭ್ರಾಂತಿಯು ದೇಶಕಾಲಾದಿಗಳ ಜೊತೆ ಬಾಧ್ಯವಾಗುತ್ತದೆ. ಆದ್ದರಿಂದ ಪ್ರಪಂಚಜ್ಞಾನವನ್ನು ಪ್ರಮಾಣವೆಂದು ಹೇಳಬಹುದಲ್ಲವೇ ? ಹೀಗೆ ಆಕ್ಷೇಪ ಮಾಡಬಾರದು. ಗಗನದಲ್ಲಿ ಯಾವ ನೈಲ್ಯಜ್ಞಾನ ಬರುತ್ತದೋ, ಇದರಲ್ಲಿ (ಗಗನದಲ್ಲಿ ಕಾಣಿಸುವ ಮಾಲಿನ್ಯದಲ್ಲಿ) ವ್ಯಭಿಚಾರದೋಷವು ಪ್ರಾಪ್ತವಾಗುತ್ತದೆ.

ವಿಶೇಷವಿಚಾರ - ಅದ್ವೈತಿಗಳು - ಶುಕ್ತಿರಜತಜ್ಞಾನಕ್ಕೂ, ಪ್ರಪಂಚಜ್ಞಾನಕ್ಕೂ ವೈಲಕ್ಷಣ್ಯವಿದೆ. ಶುಕ್ತಿಯನ್ನು ನೋಡಿ, 'ಇದಂ ರಜತಂ' ಎಂಬ ಭ್ರಾಂತಿಯು ಬಂದರೆ ಪರೀಕ್ಷೆ ಮಾಡಿದ ಮೇಲೆ ರಜತ ಮಾತ್ರ ಬಾಧ್ಯವಾಗುತ್ತದೆ. ಹೊರತು, ದೇಶಕಾಲಗಳು ಬಾಧ್ಯವಾಗುವುದಿಲ್ಲ. ಆದರೆ ಪ್ರಪಂಚದ ಬಗ್ಗೆ ಯಾವ ಭ್ರಾಂತಿಯು ಬರುತ್ತಿದೆಯೋ, ಇದು ದೇಶಕಾಲಾದಿಗಳ ಜೊತೆಯೇ ಬಾಧ್ಯವಾಗುತ್ತದೆ. ಹೀಗೆ ಎರಡೂ ಕಡೆ ವ್ಯತ್ಯಾಸವಿರುವುದರಿಂದ ಶುಕ್ತಿರಜತ ಜ್ಞಾನವು ಅತತ್ತ್ವಾವೇದಕವಾದಂತೆ ಭೇದಜ್ಞಾನವು ಅತತ್ತ್ವಾವೇದಕವಾಗಬೇಕಾಗಿಲ್ಲ. ಯಾವ ವಸ್ತುವು ದೇಶಕಾಲಾದಿಗಳನ್ನು ಬಿಟ್ಟು, ತಾನಷ್ಟೇ ಬಾಧ್ಯವಾಗುತ್ತದೋ, ಅದು ಪ್ರಮಾಣವೆಂದು ಕರೆಸಿಕೊಳ್ಳುವುದಿಲ್ಲ. ಯಾವ ವಸ್ತು ದೇಶಕಾಲಾದಿಗಳ ಜೊತೆ ಬಾಧ್ಯವಾಗುತ್ತದೋ, ಅದು ಅತತ್ತ್ವಾವೇದಕ ಪ್ರಮಾಣವೆಂದು ಕರೆಸಿಕೊಳ್ಳುತ್ತದೆ.

ತತ್ತ್ವವಾದಿಗಳು - 'ಗಗನಂ ನೀಲಂ' ಎಂಬ ಭ್ರಾಂತಿಯು ಗಗನವಿರುವಷ್ಟು ಕಾಲವು ಇದ್ದೇ ಇರುತ್ತದೆ. ಆದ್ದರಿಂದ ದೇಶಕಾಲಾದಿಗಳ ಜೊತೆ ಬಾಧ್ಯವಾಗುವುದನ್ನು ನೀವು ಅತತ್ತ್ವಾವೇದಕ ಪ್ರಮಾಣವೆಂದು ಕರೆಯುವುದಾದರೆ, 'ಗಗನಂ ನೀಲಂ' ಎಂಬ ಜ್ಞಾನವನ್ನು ಕೂಡ ಅತತ್ತ್ವಾವೇದಕ ಪ್ರಮಾಣವೆಂದು ಕರೆಯಬೇಕಾಗುತ್ತದೆ. ಆದರೆ ಪ್ರತಿಯೊಬ್ಬರೂ ಕೂಡ ಗಗನದಲ್ಲಿ ತೋರುವ ನೀಲವು ಅತ್ಯಂತ ಅಸತ್ತಾಗಿದೆಯೆಂದು ಒಪ್ಪಿರುತ್ತಾರೆ. ಅದನ್ನು ನೀವು ಪ್ರಮಾಣವೆಂದು ಒಪ್ಪಿದಂತಾಯಿತು.

ದೇಶಕಾಲಗಳಿಗೆ ಬಾಧ್ಯತ್ವ ಹೇಳಲಾಗದು

तत्त्वप्रदीपः – देशकालादीनां बाधश्च नैव भावी, नित्यत्वात् तेषाम् । अन्यथा क्वत्र कदा कस्येति पृष्टे किमुत्तरं स्यात् । चेतनस्य स्वात्मनि सर्वगते ज्ञानोत्तरकालमविद्या सविलासा निवर्तते, न च तदा क्वापि किञ्चिदनिवृत्तमस्तीति चेदेवं तर्हि देशकालादीनां न बाधोऽभ्युपगतः । बाधावधित्वाद्यभ्युपगमात् ।

ಮತ್ತು ದೇಶಕಾಲಾದಿಗಳು ಮುಂದೊಂದು ದಿನ ಬಾಧ್ಯ ಆಗುತ್ತವೆಂದು ಹೇಳಲು ಸಾಧ್ಯವಿಲ್ಲ. ಅವುಗಳು ನಿತ್ಯವಾದ ಪದಾರ್ಥಗಳಾಗಿವೆ. ಹೀಗೊಪ್ಪದಿದ್ದರೆ ಎಲ್ಲಿ, ಯಾವಾಗ, ಯಾರಿಗೆ ಬಾಧವು ಬರುತ್ತದೆಂದು ಪ್ರಶ್ನಿಸಿದರೆ ನಿಮ್ಮಲ್ಲಿ ಉತ್ತರವಿಲ್ಲ. ಚೇತನನಿಗೆ ಸರ್ವಗತನಾದ ತನ್ನಲ್ಲಿ ಅಪರೋಕ್ಷಜ್ಞಾನ ಬಂದ ಅನಂತರ ಅವಿದ್ಯೆಯು ತನ್ನ ಕಾರ್ಯಗಳ ಜೊತೆ ನಿವೃತ್ತಿಯಾಗುತ್ತದೆಂದು ಹೇಳಬೇಕು. ಆಗ ಅನಿವೃತ್ತವಾದದ್ದು ಯಾವುದೂ ಕೂಡ

ಇರುವುದಿಲ್ಲವೆಂದು ನೀವು ಉತ್ತರಿಸಬೇಕು. ಹಾಗಾದರೆ ದೇಶಕಾಲಾದಿಗಳಿಗೆ ಬಾಧವನ್ನು ಒಪ್ಪಿದಂತಾಗುವುದಿಲ್ಲ. ಏಕೆಂದರೆ ಬಾಧಕ್ಕೂ ಕೂಡ ಅವಧಿಯನ್ನು ಒಪ್ಪಿರುತ್ತೀರಿ.

ವಿಶೇಷವಿಚಾರ - ತತ್ವವಾದಿಗಳು - ಅದ್ವೈತಿಗಳಿಗೆ ಮತ್ತೊಂದು ದೋಷ - ಪ್ರಪಂಚವು ದೇಶಕಾಲಾದಿಗಳ ಜೊತೆ ಬಾಧ್ಯವಾಗುತ್ತದೆ ಎಂದು ಹೇಳಿದಿರಿ. ಈ ಬಾಧವು ಮುಂದೊಂದು ಕಾಲದಲ್ಲಿ ಆಗುತ್ತದೆ ಎಂದು ಹೇಳಲು ನಿಮ್ಮಿಂದ ಸಾಧ್ಯವಿಲ್ಲ. ಏಕೆಂದರೆ ದೇಶ ಹಾಗೂ ಕಾಲಗಳೆರಡು ನಿತ್ಯವಾದ ಪದಾರ್ಥಗಳಾಗಿವೆ. ಹೀಗೊಪ್ಪದಿದ್ದರೆ ಯಾವಾಗ, ಯಾರಿಗೆ, ಎಲ್ಲಿ ಬಾಧಜ್ಞಾನ ಬರುತ್ತದೆ? ಎಂಬುದಕ್ಕೆ ನೀವು ಉತ್ತರಿಸಬೇಕು.

ಅದ್ವೈತಿಗಳು - ಶುದ್ಧಚೇತನವು ಸರ್ವತ್ರ ವ್ಯಾಪ್ತವಾಗಿದೆ. ಅವಿದ್ಯೆಯ ಸಂಪರ್ಕದಿಂದ ಇದು ಜೀವಭಾವವನ್ನು ತಾಳಿದೆ. ಅವಿದ್ಯೆಯ ಕಾರ್ಯದಿಂದ ಭೇದದ ಭ್ರಾಂತಿಯನ್ನು ಪಡೆದಿದೆ. ಯಾವಾಗ ಶುದ್ಧಚೈತನ್ಯಕ್ಕೆ ಅಪರೋಕ್ಷಜ್ಞಾನವುಂಟಾಗುತ್ತದೋ, ಆಗ ಎಲ್ಲವೂ ಕೂಡ ಬಾಧಿತವಾಗುತ್ತದೆ. ತನ್ನನ್ನು ಬಿಟ್ಟು ಬೇರೆ ಯಾವುದು ಉಳಿದಿರುವುದಿಲ್ಲವಾದ್ದರಿಂದ ದೇಶಕಾಲಗಳೂ ಕೂಡ ಬಾಧಿತವಾಗುತ್ತದೆ. ತದನಂತರ ಕಾಲದಲ್ಲಿ ಯಾವುದೊಂದು ಪದಾರ್ಥಗಳೂ ಕೂಡ ಇರಲು ಸಾಧ್ಯವಿಲ್ಲ.

ತತ್ವವಾದಿಗಳು - ಹಾಗಾದರೆ ನೀವು ದೇಶಕಾಲಗಳಿಗೆ ಬಾಧವನ್ನು ಒಪ್ಪಿದಂತಾಗಲಿಲ್ಲ. ಅಪರೋಕ್ಷಜ್ಞಾನೋತ್ತರಕಾಲದಲ್ಲಿ ಎಲ್ಲವೂ ಬಾಧಿತವಾಯಿತು ಎಂದು ಹೇಳಿದಾಗ, ಅವಧಿಯನ್ನು ಒಪ್ಪಿಕೊಂಡಂತಾಯಿತು. ಆ ಅವಧಿಯೇ ದೇಶ ಮತ್ತು ಕಾಲಗಳೆಂದು ನಾವು ಹೇಳುತ್ತಿದ್ದೇವೆ. ಅವಧಿಯನ್ನು ಒಪ್ಪಿ, ದೇಶಕಾಲಗಳಿಗೆ ಬಾಧ್ಯತ್ವವನ್ನು ಒಪ್ಪುವುದು ವ್ಯಾಹತವಾದದ್ದು. ಅವಧಿಯೆಂದರೆ ದೇಶಕಾಲಗಳಿಗೆ ಬಾಧವಿಲ್ಲ ಎಂದರ್ಥ. ಪುನಃ ಬಾಧ್ಯವಾಗುತ್ತದೆ ಎಂದು ಹೇಳಿದರೆ ಸ್ವವಚನ ವಿರೋಧವು ಪ್ರಾಪ್ತವಾಗುತ್ತದೆ.

ನಿರವಧಿಕವಾದ ಬಾಧವೇ ಇಲ್ಲ

तत्त्वप्रदीपः – न च निरवधिको बाधो युक्तः । तस्मादतत्त्वावेदक-प्रमाणवचनवत् तल्लक्षणवाक्यमपि स्वव्याहतम् ।

ಅವಧಿಯಿಲ್ಲದ ಬಾಧವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಅತತ್ವಾವೇದಕಪ್ರಮಾಣ ಎಂಬ ಮಾತಿನಂತೆ ಅದರ ಲಕ್ಷಣವನ್ನು ಹೇಳುವ ವಾಕ್ಯವೂ ಕೂಡ ಸ್ವವ್ಯಾಹತವಾಯಿತು.

ವಿಶೇಷವಿಚಾರ - ಅದ್ವೈತಿಗಳು - ಸಾವಧಿಕವಾದ ಬಾಧವನ್ನು ಒಪ್ಪಿದರೆ ವ್ಯಾಹತಿದೋಷಕ್ಕೆ ಅವಕಾಶವಿರುತ್ತಿತ್ತು. ನಿರವಧಿಕವಾದ ಬಾಧವನ್ನು ಒಪ್ಪುತ್ತೇವೆ. ಆಗ ವ್ಯಾಹತಿಯನ್ನು ಹೇಗೆ ಹೇಳುವಿರಿ ?

ತತ್ವವಾದಿಗಳು - ನಿರವಧಿಕವಾದ ಬಾಧ ಇರಲು ಸಾಧ್ಯವೇ ಇಲ್ಲ. ಬಾಧಿತವಾಗುತ್ತಿದೆ ಎಂದರೆ ಅದಕ್ಕೊಂದು ಅವಧಿ ಇರಲೇಬೇಕು. ಅದು ನಿರವಧಿಕವೆಂದರೆ ಪುನಃ ಈ ಮಾತು ಸ್ವವಾಹ್ಯತವಾಗುತ್ತದೆ. ಆದ್ದರಿಂದ ಅತತ್ವಾವೇದಕಪ್ರಮಾಣ ಎಂಬ ನಿಮ್ಮ ಪ್ರತೀತಿಯು ವ್ಯಾಹತವಾಯಿತು. ಅದನ್ನು ಉಪಪಾದನೆ ಮಾಡಲು ಹೊರಟ ಲಕ್ಷಣವೂ ಕೂಡ ವ್ಯಾಹತವಾಯಿತು. ಹೀಗೆ ನಿಮ್ಮ ಸಿದ್ಧಾಂತವೇ ಸ್ವವ್ಯಾಹತಿ ಎಂಬ ಕೂಪದಲ್ಲಿ ಬಿದ್ದಿದೆ.

ವೇದಪ್ರಾಮಾಣ್ಯದ ಮುಖವಾಡ ಹಾಕಿಕೊಂಡ ಪ್ರಚ್ಛನ್ನಶೂನ್ಯವಾದಿಗಳು

तत्वप्रदीपः – अपि चैवंवादिना वादिना कृत्स्नोऽप्यतत्त्ववेदको वेदो ह्यवादि । न हि वेदैकदेशेऽप्यभेदवादं वदन्ति कोविदाः । तदहो महानेष संरम्भो वेदप्रामाण्ये प्रच्छन्नशून्यवादिनः ।

ಮತ್ತು ಹೀಗೆ ಹೇಳುವ ಮಾಯಾವಾದಿಯು ಸಮಗ್ರ ವೇದವನ್ನೂ ಕೂಡ ಅತತ್ವಾವೇದಕವೆಂದು ಹೇಳಬೇಕು. ಏಕೆಂದರೆ ವೇದದ ಏಕದೇಶವೂ ಕೂಡ ಅಭೇದವನ್ನು ಹೇಳುತ್ತದೆ ಎಂದು ಯಾವ ವಿದ್ವಾಂಸರೂ ಒಪ್ಪುವುದಿಲ್ಲ. ಅಬ್ಬಾ ! ಎಷ್ಟು ಆಶ್ಚರ್ಯ !! ವೇದವನ್ನು ಹಾಳುಗೆಡಲು ಪ್ರಚ್ಛನ್ನಶೂನ್ಯವಾದಿಗಳ ವೇದಪ್ರಾಮಾಣ್ಯದ ಸಮರ್ಥನೆಯ ಆಸಕ್ತಿ ಮಹಾದಾಶ್ಚರ್ಯಕರವಾಗಿದೆ.

ವಿವರಣೆ - ಅದ್ವೈತಿಗಳು - ಸಮಗ್ರ ವೇದವು ಅತತ್ವಾವೇದಕವೆಂದು ನಾವು ಹೇಳುವುದಿಲ್ಲ. ತತ್ವಾವೇದಕವಾಕ್ಯಗಳಿಂದ ವೇದಪ್ರಾಮಾಣ್ಯವನ್ನು ಸಮರ್ಥಿಸುತ್ತೇವೆ.

ತತ್ವವಾದಿಗಳು - ಅದ್ವೈತಿಗಳು ಸಮಗ್ರವೇದವನ್ನೂ ಕೂಡ ಅತತ್ವಾವೇದಕವೆಂದೇ ಒಪ್ಪಬೇಕು. ಯಾರೊಬ್ಬ ಪಂಡಿತನೂ ಕೂಡ ಒಂದೇ ಒಂದು ವಾಕ್ಯವನ್ನು ಅಭೇದಪರವೆಂದು ಹೇಳುವುದಿಲ್ಲ. ಹಾಗೇನಾದರೂ ಅಭೇದಪರವಾದ ಒಂದಾದರೂ ವಾಕ್ಯವಿದ್ದಲ್ಲಿ ಅದಕ್ಕೆ ತತ್ವಾವೇದಕತ್ವವನ್ನು ಅದ್ವೈತಿಗಳು ಒಪ್ಪಬೇಕಿತ್ತು. ಹೀಗೆ ವೇದಪ್ರಾಮಾಣ್ಯವನ್ನು ಸಮರ್ಥಿಸಲು

ಹೊರಟ ಅದ್ವೈತಿಗಳು ಸಂಪೂರ್ಣ ವೇದವನ್ನೇ ನಾಶ ಮಾಡುವ ಉದ್ದೇಶವುಳ್ಳವರಾಗಿದ್ದಾರೆ. ಇದರಿಂದ ಇವರ ಪ್ರಚ್ಛನ್ನಶೂನ್ಯವಾದವು ಸ್ಪಷ್ಟವಾಗುತ್ತದೆ.

'ತತ್ತ್ವಮಸಿ' ಎಂಬ ವಾಕ್ಯವೂ ಕೂಡ ತತ್ತ್ವಾವೇದಕವಲ್ಲ

तत्वप्रदीपः – अस्ति तत्त्वमस्यादिवाक्यं तत्वावेदकमिति चेन्न । मुख्यार्थपरित्यागात् । मुख्यार्थो हि शब्दस्यार्थतत्वम् । तत्यागे कथं तत्वावेदकम् ।

ತತ್ತ್ವಮಸ್ಯಾದಿ ವಾಕ್ಯಗಳು ತತ್ತ್ವಾವೇದಕವಾಗಿವೆ ಎಂದು ಹೇಳಲಾಗದು. ಈ ವಾಕ್ಯಗಳನ್ನೂ ಕೂಡ ಅದ್ವೈತಿಗಳಾದ ನೀವು ಮುಖ್ಯಾರ್ಥವನ್ನು ಪರಿತ್ಯಾಗ ಮಾಡಿರುವಿರಿ. ಮುಖ್ಯಾರ್ಥವನ್ನು ಒಪ್ಪಿದರೆ ಮಾತ್ರ ಅರ್ಥತತ್ವವನ್ನು ಹೇಳಲು ಸಾಧ್ಯ. ಮುಖ್ಯಾರ್ಥವನ್ನೇ ಪರಿತ್ಯಾಗ ಮಾಡಿದ ಮೇಲೆ ಸದ್ಯಕ್ಕೆ ಅರ್ಥತತ್ವವೇ ಇಲ್ಲವೆಂದಂತಾಯಿತು. ಆಗ ತತ್ತ್ವಾವೇದಕವಾಗಲು ಹೇಗೆ ಸಾಧ್ಯ ?

ವಿಶೇಷವಿಚಾರ - ಅದ್ವೈತಿಗಳು - ತತ್ತ್ವಾವೇದಕವಾದ ವಾಕ್ಯಗಳೇ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' ಮೊದಲಾದ ಪಂಚಮಹಾವಾಕ್ಯಗಳು ತತ್ತ್ವಾವೇದಕಗಳಾಗಿವೆಯೆಂದು ನಾವು ಒಪ್ಪುತ್ತೇವೆ. ಈ ಪಂಚಮಹಾವಾಕ್ಯಗಳನ್ನು ಬಿಟ್ಟು ಉಳಿದ ವಾಕ್ಯಗಳೆಲ್ಲವೂ ಅತತ್ತ್ವಾವೇದಕ ಪ್ರಮಾಣವೆಂದು ಹೇಳುತ್ತೇವೆ.

ತತ್ತ್ವವಾದಿಗಳು - 'ತತ್ತ್ವಮಸಿ' ಎಂಬ ವಾಕ್ಯಕ್ಕೂ ಕೂಡ ತತ್ತ್ವಾವೇದಕತ್ವವನ್ನು ನಿಮಗೆ ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಇಲ್ಲಿಯೂ ಕೂಡ ನೀವು ಮುಖ್ಯಾರ್ಥವನ್ನು ಪರಿತ್ಯಾಗ ಮಾಡುವಿರಿ. 'ತತ್' ಹಾಗೂ 'ತ್ವಂ' ಎಂಬೆರಡು ಪದಗಳ ಮುಖ್ಯಾರ್ಥವನ್ನು ಬಿಟ್ಟು ಶುದ್ಧಚೈತನ್ಯವೆಂಬ ಅಮುಖ್ಯಾರ್ಥವನ್ನು ಸ್ವೀಕರಿಸಿ, ಐಕ್ಯವನ್ನು ಸಮರ್ಥಿಸಿದಿರಿ, ಮುಖ್ಯಾರ್ಥವನ್ನು ಒಪ್ಪಿದರೆ ಮಾತ್ರ ಶಬ್ದವು ಅರ್ಥತತ್ತ್ವವನ್ನು ಪ್ರತಿಪಾದನೆ ಮಾಡುತ್ತದೆ. ಮುಖ್ಯಾರ್ಥವನ್ನೇ ಪರಿತ್ಯಾಗ ಮಾಡಿದ ಮೇಲೆ ಅರ್ಥತತ್ತ್ವವನ್ನು ಶಬ್ದಗಳು ತಿಳಿಸುವುದಿಲ್ಲವೆಂದು ಹೇಳಿದಂತಾಯಿತು. ಹೀಗಿರುವಾಗ ತತ್ತ್ವಾವೇದಕತ್ವವನ್ನು 'ತತ್ತ್ವಮಸಿ' ಎಂಬ ವಾಕ್ಯಕ್ಕೆ ಹೇಗೆ ಹೇಳುವಿರಿ ?

ತತ್ತ್ವಮಸಿ ಎಂಬಲ್ಲಿ ಜಹದಜಹಲ್ಲಕ್ಷಣ ಮಾಡಬಹುದೇ ?

तत्वप्रदीपः – सत्यमेतत् सति सम्भवे, असम्भवे तु स्यादेव तत्वं लक्ष्यमपि । तत्पदार्थः परोक्षं सर्वज्ञं सुखरूपं ब्रह्म, त्वंपदार्थोऽपरोक्षोऽल्पज्ञो दुःखी जीवः, तयोरैक्यविवक्षायां मुख्यार्थासम्भवात्, जहदजहल्लक्षणया चैतन्यमात्रं लक्ष्यते 'सोऽयं देवदत्तः' इतिवत्

ಹೌದು ! ಒಂದು ವೇಳೆ ಮುಖ್ಯಾರ್ಥವು ಉಪಪನ್ನವಾಗುವುದಾದರೆ ಆಗ ಅಮುಖ್ಯಾರ್ಥವನ್ನು ಸ್ವೀಕರಿಸುವುದು ತಪ್ಪಾಗುತ್ತದೆ. ಮುಖ್ಯಾರ್ಥವೇ ಅಸಂಭಾವಿತವಾದಾಗ ಅಮುಖ್ಯಾರ್ಥವೇ ತತ್ವವಾಗುತ್ತವೆ. ಆದರಲ್ಲಿ ಲಕ್ಷಣಾವೃತ್ತಿಯನ್ನು ಮಾಡಿ ತತ್ವಾವೇದಕತ್ವವನ್ನು ನಾವು ಸಮರ್ಥಿಸುತ್ತೇವೆ. ಏಕೆಂದರೆ ತತ್ಪದಾರ್ಥವು ಪರೋಕ್ಷನಾದ, ಸರ್ವಜ್ಞನಾದ, ಸುಖಸ್ವರೂಪನಾದ ಬ್ರಹ್ಮನಾಗಿರುತ್ತಾನೆ. 'ತ್ವಂ' ಪದಾರ್ಥವು ಅಪರೋಕ್ಷನಾದ, ಅಲ್ಪಜ್ಞನಾದ, ದುಃಖಿಯಾದ ಜೀವನಾಗಿರುತ್ತಾನೆ. ಇವರಿಬ್ಬರಿಗೆ ಐಕ್ಯವನ್ನು ವಿವಕ್ಷಿಸದರೆ ಮುಖ್ಯಾರ್ಥವೇ ಅಸಂಭಾವಿತವಾಗುತ್ತದೆ. ಆದ್ದರಿಂದ ಜಹದಜಹಲ್ಲಕ್ಷಣಾವೃತ್ತಿಯನ್ನು ಒಪ್ಪಿ ಚೈತನ್ಯಮಾತ್ರವು ಲಕ್ಷ್ಯವಾಗುತ್ತದೆಂದು ಸಮರ್ಥಿಸುತ್ತೇವೆ. 'ಸೋಽಯಂ ದೇವದತ್ತಃ' ಎಂಬುದೇ ಇದಕ್ಕೆ ಉದಾಹರಣೆಯಾಗಿದೆ.

ವಿಶೇಷವಿಚಾರ - ಆದ್ವೈತಿಗಳು - 'ತತ್ತ್ವಮಸಿ' ಎಂಬ ವಾಕ್ಯವು ತತ್ವಾವೇದಕವಾಗುವುದಿಲ್ಲ ಎಂಬ ದೋಷಕ್ಕೆ ಅವಕಾಶವಿಲ್ಲ. ಏಕೆಂದರೆ ಮುಖ್ಯಾರ್ಥವು ಸಂಭಾವಿತವಾಗಿದ್ದಾಗ ವಿನಾಕಾರಣ ಅದನ್ನು ಪರಿತ್ಯಾಗ ಮಾಡಿ, ಅಮುಖ್ಯಾರ್ಥವನ್ನು ಸ್ವೀಕರಿಸಿದರೆ ತತ್ವಾವೇದಕವಾಗುವುದಿಲ್ಲವೆಂದು ಹೇಳಬಹುದಿತ್ತು. ಆದರೆ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ಮುಖ್ಯಾರ್ಥವನ್ನು ಸ್ವೀಕರಿಸಲು ಸಾಧ್ಯವೇ ಇಲ್ಲ. ಅಸಂಭಾವಿತವಾದ ಅರ್ಥವನ್ನು ವಿವಕ್ಷಿಸಿದರೆ ಮುಖ್ಯಾರ್ಥವು ಕೂಡುವುದಿಲ್ಲ. ಆದ್ದರಿಂದ ತತ್‌ಪದಾರ್ಥದಲ್ಲಿ-ಪರೋಕ್ಷತ್ವ, ಸರ್ವಜ್ಞತ್ವ ಮೊದಲಾದ ಧರ್ಮಗಳನ್ನು ಬಿಟ್ಟು, ಚೈತನ್ಯಾಂಶವನ್ನು ಮಾತ್ರ ಅರ್ಥವನ್ನಾಗಿ ಸ್ವೀಕರಿಸುತ್ತೇವೆ. 'ತ್ವಂ' ಪದಾರ್ಥದಲ್ಲಿಯೂ ಕೂಡ ಅಪರೋಕ್ಷತ್ವ, ಅಲ್ಪಜ್ಞತ್ವ, ವಿಶಿಷ್ಟತ್ವ ಮೊದಲಾದ ಧರ್ಮಗಳನ್ನು ಬಿಟ್ಟು ಚೈತನ್ಯಾಂಶವನ್ನು ಮಾತ್ರ ಸ್ವೀಕರಿಸುತ್ತೇವೆ. ಇಂಥ ಚೈತನ್ಯದಲ್ಲಿ 'ತತ್ತ್ವಮಸಿ' ಎಂಬ ವಾಕ್ಯಕ್ಕೆ ಲಕ್ಷಣಾವೃತ್ತಿಯನ್ನು ಒಪ್ಪಿದಾಗ ತತ್ವಾವೇದಕವೆಂದು ಹೇಳಲು ಯಾವುದೇ ತೊಂದರೆ ಬರುವುದಿಲ್ಲ.

ಉದಾಹರಣೆ - 'ಸೋऽಯಂ ದೇವದತ್ತಃ' ಎಂಬ ಪ್ರತ್ಯಭಿಜ್ಞಾನದಲ್ಲಿ ತತ್ಕಾಲವಿಶಿಷ್ಟನಾದ ದೇವದತ್ತನಿಗೂ, ಏತದ್ದೇಶಕಾಲವಿಶಿಷ್ಟನಾದ ದೇವದತ್ತನಿಗೂ ಐಕ್ಯವು ಪ್ರತಿಭಾಸವಾಗುತ್ತಿದೆ. ತದ್ದೇಶಕಾಲಗಳು ಈಗಿಲ್ಲದ ಕಾರಣ ದೇವದತ್ತ ಎಂಬ ಸ್ವರೂಪಾಂಶವನ್ನು ಮಾತ್ರ ವಿವಕ್ಷಿಸಿ, ಐಕ್ಯವನ್ನು ಹೇಗೆ ಎಲ್ಲರೂ ಕೂಡ ಹೇಳಲೇಬೇಕೋ, ಅದರಂತೆ ಪ್ರಕೃತದಲ್ಲಿಯೂ ವಿಶೇಷಣಾಂಶವನ್ನು ಬಿಟ್ಟು ವಿಶೇಷಾಂಶಕ್ಕೆ ಮಾತ್ರ ಐಕ್ಯವನ್ನು ವಿವಕ್ಷಿಸಬೇಕು.

'ಸೋऽಯಂ ದೇವದತ್ತಃ' ಎಂಬಲ್ಲಿ ಲಕ್ಷಣಾವೃತ್ತಿ ಅಲ್ಲ

तत्त्वप्रदीपः – इति चेन्न । तत्कालविशिष्टस्यैव देवदत्तस्य पर्यायेणै-तत्कालविशिष्टत्वोपपत्तेर्न तत्र लक्षणा, मुख्यार्थसम्भवादित्यदृष्टान्तः ।

'ಸೋऽಯಂ ದೇವದತ್ತಃ' ಎಂಬ ದೃಷ್ಟಾಂತವನ್ನು ನೀಡಿದ್ದೇ ಅಯುಕ್ತವಾಗಿದೆ. ಏಕೆಂದರೆ ತತ್ಕಾಲವಿಶಿಷ್ಟನಾದ ದೇವದತ್ತನು ಏತತ್ಕಾಲವಿಶಿಷ್ಟನಾಗಿದ್ದಾನೆಂದು ಈ ವಾಕ್ಯದ ಅರ್ಥ. ಇಲ್ಲಿ ಮುಖ್ಯಾರ್ಥವೇ ಯುಕ್ತವಾಗುತ್ತಿರುವಾಗ ಲಕ್ಷಣಾವೃತ್ತಿಯನ್ನು ಏಕೆ ಅಂಗೀಕಾರಮಾಡಬೇಕು ? ಆದ್ದರಿಂದ 'ಸೋऽಯಂ ದೇವದತ್ತಃ' ಎಂಬುದು ದೃಷ್ಟಾಂತವಾಗುವುದಿಲ್ಲ.

ವಿಶೇಷವಿಚಾರ - ತತ್ವವಾದಿಗಳು - ಅದ್ವೈತಿಗಳಾದ ನೀವು 'ಸೋऽಯಂ ದೇವದತ್ತಃ' ಎಂಬ ಉದಾಹರಣೆಯಿಂದ ತತ್ತ್ವಮಸಿ ಎಂಬ ವಾಕ್ಯದಲ್ಲಿ ಲಕ್ಷಣಾವೃತ್ತಿಯನ್ನು ಮಾಡಬೇಕೆಂಬುದು ಸಮರ್ಥಿಸುತ್ತೀರಿ. ಆದರೆ ಈ ಉದಾಹರಣೆಯೇ ವಿಷಮವಾಗಿದೆ. 'ಸೋऽಯಂ ದೇವದತ್ತಃ' ಎಂಬಲ್ಲಿ ತದ್ದೇಶಕಾಲಗಳು ಈಗ ಇಲ್ಲದಿದ್ದರೂ ತದ್ದೇಶಕಾಲವಿಶಿಷ್ಟನಾದ ದೇವದತ್ತನು ಇರುವುದರಿಂದ ಅವನಲ್ಲಿ ಏತತದ್ದೇಶತ್ಕಾಲವಿಶಿಷ್ಟವನ್ನು ತಿಳಿಯುತ್ತಿದ್ದಾನೆ. ಇಂಥ ಸಂದರ್ಭದಲ್ಲಿ ಮುಖ್ಯಾರ್ಥದಲ್ಲಿ ಬಾಧಕವಿಲ್ಲದ ಕಾರಣ ಲಕ್ಷಣಾವೃತ್ತಿಯನ್ನು ಯಾರೂ ಒಪ್ಪಿರುವುದಿಲ್ಲ. ಆದ್ದರಿಂದ ಇದು ಉದಾಹರಣೆಯೇ ಆಗುವುದಿಲ್ಲ.

ವಾಚ್ಯವಿಶಿಷ್ಟವಾದದ್ದೇ ಲಕ್ಷ್ಯವಾಗುತ್ತದೆ

तत्त्वप्रदीपः – यत्र चासम्भवस्तत्र वाच्यपरित्यागेऽपि तद्विशिष्टमेव लक्ष्यते न स्वरूपमात्रम् । यथा मञ्चाः क्रोशन्तीत्युक्ते मञ्चसम्बद्धाः पुरुषा लक्ष्यन्ते न पुरुषमात्रम् । गङ्गायां कटकमास्त इत्यादौ गङ्गाविशिष्टतीरं लक्ष्यते

न तीरमात्रम् । अन्यथा तीरान्तरव्यावृत्तेरलभ्यत्वात् । तस्मात् वाच्यविशिष्टमेव लक्ष्यं तत्त्वं नाविशिष्टम्।

'मंचाः क्रोशंति' ಎಂಬಲ್ಲಿ ಮಂಚಸಂಬಂಧವನ್ನು ಹೊಂದಿರುವ ಪುರುಷರು ಲಕ್ಷಣಾವೃತ್ತಿಗೆ ವಿಷಯರಾಗುತ್ತಾರೆ ಹೊರತು, ಕೇವಲ ಪುರುಷನು ವಿಷಯನಾಗುವುದಿಲ್ಲ. 'ಗಂಗಾಯಾಂ ಕಟಮಾಸ್ತೇ' ಎಂಬಲ್ಲಿಯೂ ಗಂಗಾವಿಶಿಷ್ಟವಾದ ತೀರವೇ ಲಕ್ಷ್ಯವಾಗುತ್ತದೆ ಹೊರತು, ಕೇವಲ ತೀರವು ಲಕ್ಷ್ಯವಾಗುವುದಿಲ್ಲ. ಹೀಗೊಪ್ಪದಿದ್ದರೆ ತುಂಗಾತೀರದ ವ್ಯಾವೃತ್ತಿಯೇ ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವಾಚ್ಯವಿಶಿಷ್ಟವೇ ಲಕ್ಷ್ಯವೆಂದು ಹೇಳಬೇಕು. ವಾಚ್ಯಾವಿಶಿಷ್ಟವಾದದ್ದು ಲಕ್ಷ್ಯವೆಂದು ಹೇಳಬಾರದು.

ವಿಶೇಷವಿಚಾರ - ಆದ್ವೈತಿಗಳು ವಾಚ್ಯವಿಶಿಷ್ಟವಲ್ಲದ ಪದಾರ್ಥದಲ್ಲಿ ಲಕ್ಷ್ಯತ್ವವನ್ನು ಒಪ್ಪುತ್ತಾರೆ. ಲಕ್ಷಣಾವೃತ್ತಿಯನ್ನು ಒಪ್ಪಬೇಕೆಂದರೆ ಅದು ವಾಚ್ಯಾರ್ಥದಿಂದ ವಿಶಿಷ್ಟವೇ ಆಗಿರಬೇಕು. ವಾಚ್ಯಾರ್ಥದಿಂದ ವಿಶಿಷ್ಟವಾಗದಿದ್ದರೆ ಅದರಲ್ಲಿ ಲಕ್ಷಣಾ ಮಾಡಲು ಸಾಧ್ಯವೇ ಆಗುವುದಿಲ್ಲ. ಉದಾಹರಣೆ - 'ಮಂಚಾಃ ಕ್ರೋಶಂತಿ' ಎಂಬಲ್ಲಿ ಮಂಚಸ್ಥನಾದ ಪುರುಷನಲ್ಲಿ ಲಕ್ಷಣಾವೃತ್ತಿಯನ್ನು ಹೇಳುತ್ತೇವೆ. ಮಂಚಶಬ್ದದ ವಾಚ್ಯಾರ್ಥವಾದ ಮಂಚದಿಂದ ವಿಶಿಷ್ಟವಾದ ಪುರುಷನೇ ಲಕ್ಷ್ಯನಾಗುತ್ತಾನೆ. ಇದರಂತೆ 'ಗಂಗಾಯಾಂ ಘೋಷಃ' ಎಂಬಲ್ಲಿಯೂ ಗಂಗಾವಿಶಿಷ್ಟವಾದ ತೀರವೇ ಲಕ್ಷ್ಯವಾಗುತ್ತದೆ. ಇಲ್ಲದಿದ್ದರೆ ತುಂಗಾತೀರ ಎಂಬಲ್ಲಿ ಏಕೆ ಲಕ್ಷಣಾ ಮಾಡುವುದಿಲ್ಲ ? ಆದ್ದರಿಂದ ಅದ್ವೈತಿಗಳು ವಾಚ್ಯಾರ್ಥವನ್ನೇ ಒಪ್ಪದಿದ್ದರೆ ಲಕ್ಷ್ಯಾರ್ಥವನ್ನೂ ಕೂಡ ಅವರಿಂದ ಒಪ್ಪಲು ಸಾಧ್ಯವಾಗುವುದಿಲ್ಲ.

ವಾಚ್ಯಾರ್ಥದಿಂದ ಅವಿಶಿಷ್ಟವಾದದ್ದರಲ್ಲಿ ಲಕ್ಷಣಾವೂ ಕೂಡುವುದಿಲ್ಲ

तत्त्वप्रदीपः – अविशिष्टे लक्षणानुपपत्तेश्च । तत्र यद्वाक्यमविशिष्टं लक्षयति, तदतत्त्वावेदकं स्यात् । लक्ष्यतत्त्वस्य विशिष्टानियमात् । अविशिष्टमेव च त्वं लिलक्षयिषसि । अन्यथाऽखण्डार्थासिद्धेः । तस्माल्लक्षणयाऽप्यतत्त्वावेदकमेव तत्त्वमस्यादिवाक्यम् ।

ವಾಚ್ಯಾರ್ಥದಿಂದ ವಿಶಿಷ್ಟವಾಗದಿದ್ದರೆ ಲಕ್ಷಣಾವೃತ್ತಿಯು ಅನುಪಪನ್ನವೇ ಆಗುತ್ತವೆ. ಏಕೆಂದರೆ ಯಾವ ವಾಕ್ಯವು ಅವಿಶಿಷ್ಟವಾದದ್ದನ್ನು ಲಕ್ಷಣಾವೃತ್ತಿಯಿಂದ ತಿಳಿಸುತ್ತದೋ, ಅದು

ಅತತ್ವಾವೇದಕ ಎಂದು ಹೇಳಬೇಕು. ಏಕೆಂದರೆ ಲಕ್ಷ್ಯತತ್ತ್ವವು ವಾಕ್ಯಾರ್ಥದಿಂದ ವಿಶಿಷ್ಟವಾಗಿರಬೇಕೆಂದು ನೀನು ಹೇಳಿರುವುದಿಲ್ಲ. ಅವಿಶಿಷ್ಟವಾದದ್ದನ್ನೇ ಲಕ್ಷಣಾವೃತ್ತಿಗೆ ವಿಷಯವಾಗುತ್ತದೆ ಎಂದು ಹೇಳಿರುವಿ. ಹೀಗೊಪ್ಪದಿದ್ದರೆ ಅಖಂಡಾರ್ಥವೇ ಸಿದ್ಧವಾಗದಿರಬೇಕಾದೀತು. ಆದ್ದರಿಂದ ಲಕ್ಷಣಾವೃತ್ತಿಯಿಂದಲೂ ಕೂಡ ತತ್ತ್ವಮಸ್ಯಾದಿ ವಾಕ್ಯಗಳು ಅತತ್ವಾವೇದಕವೆಂದು ಸಮರ್ಥಿಸಿದಂತಾಯಿತು.

ಅದ್ವೈತಿಗಳೇ ! ಪ್ರಮಾಣಸಿದ್ಧವಾದ ಭೇದನಿರಾಸಕ್ಕಾಗಿ ಏಕಿಷ್ಟು ಉತ್ಸಾಹ ?

तत्वप्रदीपः – अपि च यदि सर्वज्ञत्वादिगुणविशिष्टं ब्रह्म वेदवाच्यम्, अज्ञानदुःखादिमांश्च जीवः प्रत्यक्षसिद्धः कोऽयमत्रासम्भवः सम्भाव्यते । कुतश्च महता संरम्भेण तन्निरासे प्रयत्यते ।

ಮತ್ತೊಂದು ದೋಷ. ಸರ್ವಜ್ಞತ್ವಾದಿಗುಣವಿಶಿಷ್ಟನಾದ ಬ್ರಹ್ಮನು ವೇದದಿಂದ ಪ್ರತಿಪಾದ್ಯನೆಂದು ಹೇಳಿದಿರಿ. ಜೀವನಾದರೋ ಅಜ್ಞಾನದುಃಖಗಳುಳ್ಳವನಾಗಿದ್ದಾನೆಂದು ಪ್ರತ್ಯಕ್ಷದಿಂದ ಸಿದ್ಧವಾಗಿದೆ. ಹೀಗಿರುವಾಗ ಇಲ್ಲಿ ಅಸಂಭಾವಿತವಾದದ್ದು ಯಾವುದಿದೆ ? ಯಾವ ಕಾರಣಕ್ಕೋಸ್ಕರ ಅತಿಯಾದ ಉತ್ಸಾಹದಿಂದ ಸಿದ್ಧವಾದ ಭೇದದ ನಿರಾಸಕ್ಕಾಗಿ ಪ್ರಯತ್ನವನ್ನು ಮಾಡುತ್ತಿರುವಿರಿ.

ವಿಶೇಷವಿಚಾರ - ಮುಖ್ಯಾರ್ಥವು ಅಸಂಭಾವಿತವಾದಾಗ ಮಾತ್ರ ಅಮುಖ್ಯಾರ್ಥವನ್ನು ಸ್ವೀಕಾರ ಮಾಡಬೇಕು. ಆದರೆ ಜೀವಬ್ರಹ್ಮರ ಭೇದವೆಂಬ ಮುಖ್ಯಾರ್ಥವು ಅಸಂಭಾವಿತವೇ ಅಲ್ಲ. ಏಕೆಂದರೆ ವೇದದಿಂದ ಬ್ರಹ್ಮನು ಸಿದ್ಧನಾಗುತ್ತಾನೆ ಎಂದು ನೀವೂ ಕೂಡ ಒಪ್ಪಿರುವಿ. ಅದೇ ವೇದವು ಬ್ರಹ್ಮನಲ್ಲಿ ಸರ್ವಜ್ಞತ್ವಾದಿ ಧರ್ಮಗಳನ್ನು ಪ್ರತಿಪಾದನೆ ಮಾಡಿದೆ. ಆದ್ದರಿಂದ ಧರ್ಮಿಯು ಸಿದ್ಧವಾಗುವಾಗಲೇ ಸರ್ವಜ್ಞತ್ವಾದಿವಿಶಿಷ್ಟವಾಗಿಯೇ ಸಿದ್ಧವಾಗುತ್ತಿದೆ. ಇದಕ್ಕೆ ವಿರುದ್ಧವಾದ ಧರ್ಮಗಳಿಂದ ಜೀವನು ಸಿದ್ಧವಾಗುತ್ತಿದ್ದಾನೆ. ಪ್ರತಿಯೊಬ್ಬರಿಗೂ ಅಜ್ಞಾನ, ದುಃಖ ಮೊದಲಾದವುಗಳ ಅನುಭವವಿದೆ. ಹೀಗೆ ಜೀವಬ್ರಹ್ಮರ ವೈಲಕ್ಷಣ್ಯವು ಪ್ರಮಾಣಪ್ರಮಿತವಾಗಿರುವಾಗ ಮುಖ್ಯಾರ್ಥವು ಅಸಂಭಾವಿತವಾಗಿದೆಯೆಂದು ಕಲ್ಪನೆ ಮಾಡಲು ಅದ್ವೈತಿಗಳಿಗೆ ಸಾಧ್ಯವಿಲ್ಲ. ಪ್ರಮಾಣಪ್ರಮಿತವಾದದ್ದನ್ನು ಬಿಟ್ಟು, ಅಮುಖ್ಯಾರ್ಥವನ್ನು ಸ್ವೀಕಾರ ಮಾಡುವುದು ಮೂರ್ಖತನವೇ ಆಗುತ್ತದೆ.

ಅಪ್ರಮಿತವಾದ ಐಕ್ಯವನ್ನು ವಿವಕ್ಷಿಸಬಾರದು

तत्त्वप्रदीपः – ऐक्यविवक्षायां मुख्यासम्भव इति चेन्न । प्रमाणसिद्ध-वैलक्षण्ययोरैक्यविवक्षाया एवासम्भवात् । अत एव ह्यादित्यो यूप इत्यादौ स्वरूपैक्यं मुखतः प्रतीतमप्यपहाय गौणैक्यं विवक्षितं विचक्षणाः समाचक्षते ।

ಜೀವಬ್ರಹ್ಮರಿಗೆ ಐಕ್ಯವನ್ನು ವಿವಕ್ಷಿಸಿದಾಗ, ಮುಖ್ಯಾರ್ಥವು ಅಸಂಭಾವಿತವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ವೈಲಕ್ಷಣ್ಯವು ಪ್ರಮಾಣಸಿದ್ಧವಾಗಿರುವಾಗ ಐಕ್ಯವಿವಕ್ಷೆ ಮಾಡುವುದೇ ಅಸಂಭಾವಿತವಾಗುತ್ತದೆ. ಆದ್ದರಿಂದ 'ಆದಿತ್ಯೋ ಯೂಪಃ' ಇತ್ಯಾದಿ ಸ್ಥಳದಲ್ಲಿ ಸ್ವರೂಪೈಕ್ಯವು ಮುಖತಃ ಪ್ರತೀತವಾಗುತ್ತಿದ್ದರೂ ಕೂಡ ಅದನ್ನು ಬಿಟ್ಟು ಗೌಣವಾದ ಐಕ್ಯವನ್ನು ಬುದ್ಧಿವಂತರು ವಿವಕ್ಷಿಸುತ್ತಾರೆ.

ವಿಶೇಷವಿಚಾರ – 'ಸಿಂಹೋ ದೇವದತ್ತಃ' 'ಆದಿತ್ಯೋ ಯೂಪಃ' ಇತ್ಯಾದಿಯಾಗಿ ದೇವದತ್ತನನ್ನೇ ಸಿಂಹವೆಂದು, ಯೂಪವನ್ನೇ ಆದಿತ್ಯವೆಂದು ಪ್ರಯೋಗಿಸುವುದು ಲೋಕದಲ್ಲಿ ಕಂಡಿದೆ. ಆಪಾತತಃ ಐಕ್ಯವು ಈ ವಾಕ್ಯದಿಂದ ತಿಳಿಯುವುದಾದರೂ ಕೂಡ ಪ್ರತ್ಯಕ್ಷವಿರುದ್ಧವಾದ್ದರಿಂದ ಈ ಅರ್ಥವನ್ನು ಬಿಟ್ಟು, ಗೌಣಾರ್ಥವನ್ನು ಜ್ಞಾನಿಗಳು ವಿವಕ್ಷಿಸುತ್ತಾರೆ. ಆದ್ದರಿಂದ ಪ್ರಮಾಣಪ್ರಮಿತವಾದದ್ದೇ ಮುಖ್ಯಾರ್ಥವಾಗುತ್ತದೆ. ಅದರಂತೆ ಪ್ರಕೃತದಲ್ಲಿ ಜೀವ-ಬ್ರಹ್ಮರ ವೈಲಕ್ಷಣ್ಯವು ಪ್ರಮಾಣಪ್ರಮಿತವಾಗಿದೆ. ಇದೇ ಮುಖ್ಯಾರ್ಥವಾಗುತ್ತದೆ ಹೊರತು, ಅಪ್ರಮಿತವಾದ ಐಕ್ಯವು ಮುಖ್ಯಾರ್ಥವಾಗುವುದಿಲ್ಲ. ಆದ್ದರಿಂದ ಪ್ರಮಿತವಾದ ವೈಲಕ್ಷಣ್ಯವನ್ನು ಬಿಟ್ಟು ಅಪ್ರಮಿತವಾದ ವೈಲಕ್ಷಣ್ಯವನ್ನು ವಿವಕ್ಷಿಸಬಾರದು.

ತತ್ತ್ವಮಸಿ ಶ್ರುತಿಯಿಂದ ಐಕ್ಯವನ್ನು ವಿವಕ್ಷಿಸಲಾಗದು

तत्त्वप्रदीपः – न च वाच्यमतत्त्वावेदकसिद्धत्वेन मानासिद्धत्वाज्जीवपर-वैलक्षण्यस्य तत्त्वमस्यादिवाक्येन मुख्यमैक्यं विवक्ष्यत इति । तत्त्वमस्यादेरतत्त्वावेदकत्वोक्तेः ।

ಜೀವಬ್ರಹ್ಮರ ವೈಲಕ್ಷಣ್ಯವು ಅತತ್ವಾವೇದಕಪ್ರಮಾಣದಿಂದ ಸಿದ್ಧವಾಗಿದೆ. ಜೀವಬ್ರಹ್ಮರ ಐಕ್ಯವು ತತ್ವಾವೇದಕವಾದ ತತ್ವಮಸ್ಯಾದಿ ವಾಕ್ಯಗಳಿಂದ ಸಿದ್ಧವಾಗಿದೆ. ಆದ್ದರಿಂದ ತತ್ವಾವೇದಕವಾದ ತತ್ತ್ವಮಸ್ಯಾದಿ ವಾಕ್ಯಗಳಿಂದ ಸಿದ್ಧವಾದ ಐಕ್ಯವನ್ನು ವಿವಕ್ಷಿಸಿ, ಅತತ್ವಾವೇದಕ ಪ್ರಮಾಣದಿಂದ ಸಿದ್ಧವಾದ ಜೀವಬ್ರಹ್ಮರ ವೈಲಕ್ಷಣ್ಯವನ್ನು ಪರಿತ್ಯಾಗ ಮಾಡಬೇಕು.

ಹೀಗೆ ಆಕ್ಷೇಪ ಮಾಡಬಾರದು. ಏಕೆಂದರೆ ತತ್ವಮಸ್ಯಾದಿ ವಾಕ್ಯಗಳೂ ಕೂಡ ಅತತ್ವಾವೇದಕಗಳಾಗಿದೆ ಎಂದು ಈಗಾಗಲೇ ಸಮರ್ಥಿಸಿದ್ದೇವೆ.

ಭೇದವಾಕ್ಯವು ಅತತ್ವಾವೇದಕವೆಂದರೆ ಅನ್ಯೋನ್ಯಾಶ್ರಯದೋಷ

तत्वप्रदीपः – कथं च भेदप्रमाणास्यातत्वावेदकत्वमुच्यते?

'भेदस्यासत्यत्वादिति चेत् तदेव कथं प्रमाणसिद्धस्य' न तत्प्रमाण-मतत्वावेदकत्वादिति चेत् सेयमितरेतराश्रयता । तस्मान्नैक्यसिद्धिः। न चैतदभेदपरम्, अतत्त्वमसीतिभेदपरत्वोपपत्तेः ।

ಭೇದಪ್ರಮಾಣವು ಅತತ್ವಾವೇದಕವೆಂದು ಅದ್ವೈತಿಗಳಾದ ನೀವು ಹೇಗೆ ಹೇಳುವಿರಿ ?

ಭೇದವು ಮಿಥ್ಯಾಭೂತವಾದ್ದರಿಂದ ಎಂದು ಉತ್ತರಿಸಲು ಸಾಧ್ಯವಿಲ್ಲ. ಪ್ರಮಾಣಸಿದ್ಧವಾದ ಭೇದವು ಹೇಗೆ ತಾನೆ ಮಿಥ್ಯಾಭೂತವಾಗಲು ಸಾಧ್ಯ ? ಆ ಪ್ರಮಾಣವು ಅತತ್ವಾವೇದಕವೆಂದು ಹೇಳಬೇಕು. ಆಗ ಅನ್ಯೋನ್ಯಾಶ್ರಯದೋಷವು ಬರುತ್ತದೆ. ಆದ್ದರಿಂದ ಐಕ್ಯವು ಸಿದ್ಧವಾಗುವುದಿಲ್ಲ.

ವಿಶೇಷವಿಚಾರ - ತತ್ವವಾದಿಗಳು - ಭೇದಪ್ರತಿಪಾದಕವಾದ ಪ್ರಮಾಣಗಳು ಅತತ್ವಾವೇದಕ. ಐಕ್ಯಪ್ರತಿಪಾದಕವಾದ ಪ್ರಮಾಣಗಳು ತತ್ವಾವೇದಕವೆಂದು ಹೇಗೆ ಹೇಳುವಿರಿ?

ಅದ್ವೈತಿಗಳು - ಭೇದವು ಮಿಥ್ಯಾಭೂತವಾದ್ದರಿಂದ ತತ್‌ಪ್ರತಿಪಾದಕವಾದ ಪ್ರಮಾಣಗಳು ಅತತ್ವಾವೇದಕ. ಐಕ್ಯವು ಸತ್ಯವಾದ್ದರಿಂದ ತ್‌ತ್‌ಪ್ರತಿಪಾದಕವಾದ ಪ್ರಮಾಣಗಳು ತತ್ವಾವೇದಕವೆಂದು ಹೇಳುತ್ತೇವೆ.

ತತ್ವವಾದಿಗಳು - ಭೇದವು ಪ್ರಮಾಣಸಿದ್ಧವಾಗಿರುವಾಗ ಅದನ್ನು ಮಿಥ್ಯಾಭೂತವೆಂದು ಹೇಗೆ ಹೇಳುವಿರಿ ?

ಅದ್ವೈತಿಗಳು - ಭೇದಪ್ರತಿಪಾದಕವಾದ ಪ್ರಮಾಣವು ಅತತ್ವಾವೇದಕವಾದ್ದರಿಂದ ಅದರಿಂದ ಸಿದ್ಧವಾಗುವ ಭೇದವೂ ಕೂಡ ಮಿಥ್ಯಾಭೂತವೆಂದು ಹೇಳುತ್ತೇವೆ.

ತತ್ವವಾದಿಗಳು - ಹಾಗಾದರೆ ನಿಮಗೆ ಅನ್ಯೋನ್ಯಾಶ್ರಯದೋಷವು ಪ್ರಾಪ್ತವಾಯಿತು? ಭೇದಪ್ರತಿಪಾದಕವಾದ ಪ್ರಮಾಣಗಳಿಗೆ ಅತತ್ವಾವೇದಕತ್ವವು ಸಿದ್ಧವಾಗಬೇಕಾದರೆ ಐಕ್ಯಪ್ರತಿಪಾದಕವಾದ ವಾಕ್ಯಗಳಿಂದ ಸಿದ್ಧವಾದ ಐಕ್ಯವು ಸತ್ಯವೆಂದು ಸಿದ್ಧವಾಗಬೇಕು. ಇದು ಸತ್ಯವೆಂದು ಸಿದ್ಧವಾಗಬೇಕಾದರೆ ಭೇದವು ಮಿಥ್ಯಾಭೂತವೆಂದು ಸಿದ್ಧವಾಗಬೇಕು. ಅದಕ್ಕಾಗಿ ಭೇದಪ್ರತಿಪಾದಕವಾದ ವಾಕ್ಯಗಳಿಗೆ ಅತತ್ವಾವೇದಕತ್ವವು ಸಿದ್ಧವಾಗಬೇಕು. ಐಕ್ಯವಾಕ್ಯವು ಮುಖ್ಯವೆಂದು ಸಿದ್ಧವಾದರೆ ಭೇದವಾಕ್ಯವು ಅತತ್ವಾವೇದಕವೆಂದು ಸಿದ್ಧವಾಗುತ್ತದೆ. ಭೇದವಾಕ್ಯವು ಅತತ್ವಾವೇದಕವೆಂದು ಸಿದ್ಧವಾದರೆ, ಐಕ್ಯವಾಕ್ಯವು ಮುಖ್ಯವೆಂದು ಸಿದ್ಧವಾಗುತ್ತದೆ. ಹೀಗೆ ಅದ್ವೈತಿಗಳಿಗೆ ಅನ್ಯೋನ್ಯಾಶ್ರಯ ದೋಷವು ಬರುತ್ತದೆ.

ಎಲ್ಲವೂ ಸತ್ಯ

तत्वप्रदीपः – ''ऐतदात्म्यमिदं सर्वं तत्सत्यम्'' इति दुःखादेः सत्यत्वप्रतिज्ञानात् । एतत्सृष्टत्वादेतत्पालितत्वादेतदात्माधीनमिदं सर्वम् । तस्मात् सत्यम् । एतस्य सत्यस्य सृष्टिक्षमत्वात् । ''अथ हैनमाहुः सत्यकर्मेति सत्यं ह्येवेदं विश्वमसौ सृजत'' इति हि श्रुतिः ।

'ಐತದಾತ್ಮ್ಯಮಿದಂ ಸರ್ವಂ ತತ್ ಸತ್ಯಮ್' ಇತ್ಯಾದಿ ಶ್ರುತಿಯು ದುಃಖಾದಿಗಳಿಗೆ ಸತ್ಯತ್ವವನ್ನು ಪ್ರತಿಜ್ಞಾಪುರಸ್ಸರವಾಗಿ ಸಾಧಿಸುತ್ತಿದೆ. ಬ್ರಹ್ಮನಿಂದ ಹುಟ್ಟಿರುವುದರಿಂದ ಅವನಿಂದ ಪಾಲಿತವಾದ್ದರಿಂದ ಇದೆಲ್ಲವೂ ಕೂಡ ಅವನ ಅಧೀನವಾಗಿದೆ ಎಂಬುದು ಈ ಶ್ರುತಿಯ ಅಭಿಪ್ರಾಯ. ಆದ್ದರಿಂದಲೇ ಇದೆಲ್ಲವೂ ಸತ್ಯಭೂತವಾಗಿದೆ. ಪ್ರಪಂಚದಲ್ಲಿ ಸತ್ಯತ್ವವಿದ್ದರೆ ಮಾತ್ರ ಇದರ ಸೃಷ್ಟ್ಯಾದಿಗಳನ್ನು ಮಾಡಲು ಸಾಧ್ಯವಾಗುತ್ತದೆ. 'ಅಥ ಹೈನಮಾಹುಃ ಸತ್ಯಕರ್ಮೇತಿ ಸತ್ಯಂ ಹ್ಯೇವೇದಂ ವಿಶ್ವಮಸೌ ಸೃಜತೇ' ಎಂಬ ಶ್ರುತಿಯು ಸತ್ಯವಾದದ್ದರ ಸೃಷ್ಟಿಮಾಡುವ ಕಾರಣದಿಂದಲೇ ಅವನಿಗೆ ಸತ್ಯಕರ್ಮ ಎಂದು ಹೇಳುತ್ತಿದೆ.

ಜಗತ್ತು ಸತ್ಯ ಎಂಬುದೇ ಜ್ಞಾನಿಗಳ ಮತ

तत्वप्रदीपः –
''मतं हि ज्ञानिनामेतन्मितं त्रातं च विष्णुना ।
तस्मात् सत्यमिति प्रोक्तं परमो हरिरेव तु'' इति च ।।

अतो नैव तत्पक्षे तत्त्वमस्यादिवाक्यं तत्वावेदकं वेदितव्यम् ।

ಈ ಜಗತ್ತು ವಿಷ್ಣುವಿನಿಂದ ಸಂಪೂರ್ಣವಾಗಿ ತಿಳಿಯಲ್ಪಟ್ಟಿದೆ ಮತ್ತು ರಕ್ಷಣೆ ಮಾಡಲ್ಪಟ್ಟಿದೆ. ಆದ್ದರಿಂದ 'ಸತ್ಯ' ಎಂದು ಕರೆಸಿಕೊಳ್ಳುತ್ತದೆ. ಈ ಜಗತ್ತಿಗಿಂತ ಅತ್ಯಂತ ಉತ್ಕೃಷ್ಟನಾದವನು ಪರಮಾತ್ಮನೊಬ್ಬನೇ ಆಗಿದ್ದಾನೆ. ಇದು ಜ್ಞಾನಿಗಳ ಮತ. ಈ ಪ್ರಮಾಣದಿಂದಲೂ ಕೂಡ ಜಗತ್ತು ಸತ್ಯವೆಂದು ಸಿದ್ಧವಾಗುತ್ತದೆ. ಆದ್ದರಿಂದ ಅದ್ವೈತಿಗಳ ಪಕ್ಷದಲ್ಲಿ ತತ್ತ್ವಮಸ್ಯಾದಿ ವಾಕ್ಯವು ತತ್ವಾವೇದಕವಾಗುವುದಿಲ್ಲವೆಂದು ತಿಳಿಯಬೇಕು.

ಶ್ರೇಯೋರ್ಥಿಗಳು ಅದ್ವೈತಮತವನ್ನು ಹೇಯವೆನ್ನುತ್ತಾರೆ

तत्वप्रदीपः – तदखिलेऽपि वेदे पादप्रसारणन्यायेनाप्रामाण्य-प्रतिपादनाभिप्रायः प्रियमायस्य प्रविकसितोऽत्यन्तमन्ततः । अतः श्रेयोर्थिभिरत्यन्तहेयं तन्मतमिति मतिमन्तो मन्यन्ते ।।

।। इति द्युभ्वाद्यधिकरणम् ।।

ಹೀಗೆ ಅದ್ವೈತಿಗಳು ಪಾದಪ್ರಸಾರಣನ್ಯಾಯದಿಂದ (ಒಂದೊಂದೇ ಹೆಜ್ಜೆಯನ್ನು ಇಡುವ ಮೂಲಕ) ಸಮಗ್ರವೇದಕ್ಕೆ ಅಪ್ರಾಮಾಣ್ಯವನ್ನು ಪ್ರತಿಪಾದನೆ ಮಾಡುವ ಅಭಿಪ್ರಾಯವುಳ್ಳವರಾಗಿದ್ದಾರೆ. ಅವರಿಗೆ ಅತ್ಯಂತ ಪ್ರಿಯವಾದ ಮಾಯೆಯನ್ನು ಪ್ರಚಾರ ಮಾಡುವುದೇ ಅವರ ಅಂತಿಮಗುರಿಯಾಗಿದೆ. ಸತ್ಯಸ್ಥಾಪನೆಯು ಅವರ ಉದ್ದೇಶವೇ ಆಗಿಲ್ಲ. ಆದ್ದರಿಂದ ಶ್ರೇಯಸ್ಸನ್ನು ಅಪೇಕ್ಷಿಸುವ ಬುದ್ಧಿವಂತರು ಅದ್ವೈತಮತವನ್ನು ಅತ್ಯಂತ ಹೇಯವೆಂದೇ ಪರಿಗಣಿಸುತ್ತಾರೆ.

।। ಇಲ್ಲಿಗೆ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಂದ ವಿರಚಿತವಾದ ತತ್ವಪ್ರದೀಪದಲ್ಲಿ
ದ್ಯುಭ್ವಾದ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ।।

ತತ್ತ್ವಪ್ರಕಾಶಿಕಾ

ಜೀವೇಶರ ಅಭೇದವು ಪ್ರಕರಣ ಪ್ರತಿಪಾದ್ಯವಲ್ಲ

तत्वप्रकाशिका – ।। न जीवेशाभेदोऽत्र प्रकरणे विवक्षित इत्येतमर्थं हेत्वन्तरेण साधयत् सूत्रमुपन्यस्य व्याचष्टे – स्थितीति ।।

ಜೀವ ಹಾಗೂ ಪರಮಾತ್ಮನಿಗೆ ಅಭೇದವನ್ನು ಈ ಪ್ರಕರಣವು ಪ್ರತಿಪಾದಿಸುತ್ತಿಲ್ಲ ಎಂಬುದನ್ನು ಮತ್ತೊಂದು ಹೇತುವಿನಿಂದ ಸಾಧಿಸುವಂತಹ ಸೂತ್ರವನ್ನು ಪಠಿಸಿ ''ಸ್ಥಿತಿ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಜೀವಪರಮಾತ್ಮರೆಂಬ ಎರಡು ಹಕ್ಕಿಗಳು

तत्वप्रकाशिका – संयुक्तौ सखायौ द्वौ सुपर्णरूपौ जीवेशौ देहाख्यं पिप्पलमालिलिङ्गतुः । तयोः सुपर्णयोर्मध्येऽन्यो जीवोऽश्वत्थफलरूपं देहजनितकर्मफलमस्वाद्वेव स्वादुत्वेनात्ति । अन्य ईश्वरस्तदनश्नन्नभितः प्रकाशते । नतु स्वस्थित्यै तदपेक्षत इति जीवेशयोः कर्मफलोपजीवनतद्रहिता वस्थानाभ्यामुक्ताभ्यां च नैक्यं वाच्यमित्यर्थः ।

ಪರಸ್ಪರಸಂಬಂಧವನ್ನು ಹೊಂದಿರುವ, ಪರಸ್ಪರವಾಗಿ ಪ್ರೇಮಿಸುವ, ಎರಡು ಪಕ್ಷಿರೂಪದಲ್ಲಿರುವ ಜೀವ ಹಾಗೂ ಈಶ್ವರರು ದೇಹವೆಂಬ ಪಿಪ್ಪಲಮರವನ್ನು ಆಲಂಗಿಸಿದ್ದಾರೆ. ಆ ಎರಡು ಪಕ್ಷಿಗಳ ಮಧ್ಯದಲ್ಲಿ ಜೀವನೆಂಬ ಒಂದು ಪಕ್ಷಿಯು ಅಶ್ವತ್ಥಮರದ ಫಲವನ್ನು ತಿನ್ನುತ್ತಿದೆ. ಈ ಫಲವು ದೇಹದಿಂದ ಹುಟ್ಟುವ ಕರ್ಮಫಲ ರೂಪವಾಗಿದೆ. ಆದ್ದರಿಂದಲೇ ಮಧುರವಾಗಿರುವುದಿಲ್ಲ. ಆದರೂ ಸಹ ಮಧುರವೆಂಬ ಭ್ರಾಂತಿಯಿಂದ ಜೀವನು ಆ ಫಲವನ್ನು ಅನುಭವಿಸಿ ತಿನ್ನುತ್ತಿದ್ದಾನೆ. ಆದರೆ ಭಗವಂತನೆಂಬ ಮತ್ತೊಂದು ಪಕ್ಷಿಯು ಅಂತಹ ಫಲವನ್ನು ಆಸ್ವಾದನೆ ಮಾಡದೇ ಎಲ್ಲೆಡೆ ಪ್ರಕಾಶಮಾನವಾಗಿದೆ. ದಷ್ಟಪುಷ್ಟವೂ ಆಗಿದೆ. ಮತ್ತು ತನ್ನ

ಬದುಕಿಗಾಗಿ ಆ ಫಲವನ್ನು ಅದು ಅಪೇಕ್ಷಿಸುವುದಿಲ್ಲ. ಹೀಗೆ ಜೀವ ಹಾಗೂ ಈಶ್ವರನಿಗೆ ಕರ್ಮಫಲೋಪಜೀವನ ಹಾಗೂ ಕರ್ಮಫಲೋಪಜೀವನರಹಿತ ಅವಸ್ಥಾನ ಎಂಬೆರೆಡು ವಿರುದ್ಧವಾದ ಧರ್ಮಗಳಿರುತ್ತವೆ. ಆದ್ದರಿಂದ ಜೀವೇಶ್ವರರಿಗೆ ಐಕ್ಯವನ್ನು ಹೇಳಬಾರದು.

ಸೂತ್ರದಲ್ಲಿ ಶ್ರುತಿಕ್ರಮದ ಉಲ್ಲಂಘನೆ ಮಾಡಿಲ್ಲ

तत्वप्रकाशिका – अत्र श्रुतिक्रमोल्लङ्घनमीश्वरस्य प्राधान्यज्ञापनार्थम् । स्थितिपदस्याल्पाक्षरत्वराच्च । व्यावहारिकभेदः श्रुत्योच्यत इति चेत् ।

ಸೂತ್ರದಲ್ಲಿ ಜೀವ ಹಾಗೂ ಈಶ್ವರನೆಂದು ಕ್ರಮವಾಗಿ ಶ್ರುತಿಗೆ ಅನುಸಾರಿಯಾಗಿ ಹೇಳಬೇಕಿತ್ತು. ಈ ಕ್ರಮವನ್ನು ಉಲ್ಲಂಘನೆ ಮಾಡಿ ಸ್ಥಿತಿ ಮತ್ತು ಅದನವೆಂದು ಏಕೆ ಹೇಳಿದ್ದಾರೆಂದರೆ ಈಶ್ವರನು ಪ್ರಧಾನನಾಗಿದ್ದಾನೆಂದು ಸೂಚಿಸುವುದಕ್ಕಾಗಿ. ಮತ್ತು ಸ್ಥಿತಿ, ಅದನಗಳಲ್ಲಿ ''ಸ್ಥಿತಿ'' ಎಂಬುದು ಅಲ್ಪಾಕ್ಷರಗಳುಳ್ಳದ್ದರಿಂದ ದ್ವಂದ್ವಸಮಾಸದಲ್ಲಿ ಅಲ್ಪಾಕ್ಷರವುಳ್ಳ ಪದವೇ ಮೊದಲು ಬರುತ್ತದೆಂಬ ದೃಷ್ಟಿಯಿಂದಲೂ ಸ್ಥಿತಿಯನ್ನೇ ಮೊದಲು ಹೇಳಿದ್ದಾರೆ.

ಪ್ರಕೃತ ಶ್ರುತಿಯಲ್ಲಿ ವ್ಯಾವಹಾರಿಕಭೇದವನ್ನೇ ಹೇಳಿರಬಹುದಲ್ಲವೇ? ಎಂದು ಪ್ರಶ್ನಿಸಬಾರದು.

ವ್ಯಾವಹಾರಿಕ ಸತ್ಯವು ಅಪ್ರಾಮಾಣಿಕ

तत्वप्रकाशिका – व्यावहारिक इति सत्यो मिथ्या वा । आद्ये किमनिष्टम्। न द्वितीयः । मिथ्याभिधायकत्वेऽतत्वावेदकत्वेन श्रुतेरप्रामाण्यापातात्। तत्वावेदकत्वलक्षणप्रामाण्याभावेऽपि व्यावहारिकं तदस्तीति चेत् । तत्वाविषयत्वे प्रामाण्यवाचोयुक्तेरयुक्तत्वात् ।

ವ್ಯಾವಹಾರಿಕಭೇದವು ಸತ್ಯವೋ, ಸುಳ್ಳೋ ? ಎಂದು ಪ್ರಶ್ನೆ. ಸತ್ಯವೆಂದರೆ ನಮಗೆ ಅದು ಇಷ್ಟವೇ ಆಗಿದೆ. ಸುಳ್ಳೆಂದರೆ ಶ್ರುತಿಯು ಮಿಥ್ಯಾಪ್ರತಿಪಾದಕವಾದ್ದರಿಂದ ಅತತ್ವಾವೇದಕ-ವಾಗುತ್ತದೆ. ಆಗ ಶ್ರುತಿಗೆ ಅಪ್ರಾಮಾಣ್ಯದೋಷವು ಬರುತ್ತದೆ. ಇನ್ನು ತತ್ವಾವೇದಕತ್ವವೆಂಬ ಪ್ರಾಮಾಣ್ಯವು ಶ್ರುತಿಗೆ ಬಾರದಿರಬಹುದು. ಆದರೆ ವ್ಯಾವಹಾರಿಕವಾದ ಪ್ರಾಮಾಣ್ಯವನ್ನು

ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ, ತಾತ್ವಿಕವಾದ ವಿಷಯವನ್ನು ಪ್ರತಿಪಾದನೆ ಮಾಡದ ಶ್ರುತಿಯು ಪ್ರಾಮಾಣ್ಯಹೊಂದಿದೆ ಎಂಬ ಪ್ರಯೋಗವು ಅತ್ಯಂತ ಅಯುಕ್ತವಾಗಿದೆ.

ಶ್ರುತಿಯು ಅನುವಾದಕವಲ್ಲ

तत्वप्रकाशिका – मिथ्याभेदानुवादित्वान्न दोष इति चेन्न । वैयर्थ्यात् । निषेधायेति चेन्न । तदभावात् ।

ಶ್ರುತಿಯು ಮಿಥ್ಯಾಭೂತವಾದ ಭೇದವನ್ನು ಕೇವಲ ಅನುವಾದ ಮಾಡುತ್ತಿದೆ. ಆದ್ದರಿಂದ ವಿರೋಧವಿರುವುದಿಲ್ಲವೆಂಬ ಆಕ್ಷೇಪವನ್ನು ಮಾಡಬಾರದು. ಏಕೆಂದರೆ, ಅನುಮಾನಕ್ಕೆ ಇಲ್ಲಿ ಯಾವುದೇ ಪ್ರಯೋಜನವು ಇರುವುದಿಲ್ಲ. ನಿಷೇಧಮಾಡುವುದೇ ಪ್ರಯೋಜನವೆಂದರೆ ಅಂತಹ ಭೇದವನ್ನು ನಿಷೇಧಮಾಡುವ ಯಾವುದೇ ಶ್ರುತಿಯು ಇರುವುದಿಲ್ಲ.

'ತತ್ತ್ವಮಸಿ' ಎಂಬ ಶ್ರುತಿಯು ಅದ್ವೈತಪರವಲ್ಲ

तत्वप्रकाशिका – तत्त्वमसीत्यादिनिषेधोऽस्तीति चेत् । तदनुवादेनायमेव निषेधः किं न स्यात् । अद्वैतस्य प्रमाणान्तरेणासिद्धेर्न तदनुवाद इति चेत् । तत्किं निषेधाय प्रमाणप्राप्त्या भाव्यं प्राप्तिमात्रेण वा । आद्ये निषेधायोगः । द्वितीयेऽस्त्यद्वैतेऽपि तादृशी प्राप्तिः ।

'ತತ್ತ್ವಮಸಿ' ಎಂದು ನಿಷೇಧಕಶ್ರುತಿ ಇದೆಯಲ್ಲವೇ ? ಎಂದರೆ 'ತತ್ ತ್ವಮಸಿ' ಎಂಬ ಶ್ರುತಿಯಿಂದ ಅಭೇದವನ್ನು ಅನುವಾದ ಮಾಡಿ 'ದ್ವಾಸುಪರ್ಣಾ' ಎಂಬ ಶ್ರುತಿಯೇ ಅದನ್ನು ನಿಷೇಧಿಸುತ್ತಿದೆ ಎಂದು ವಿಪರೀತವಾಗಿ ಏಕೆ ಹೇಳಬಾರದು?

ಅದ್ವೈತವು ಬೇರೆ ಪ್ರಮಾಣದಿಂದ ಸಿದ್ಧವಾಗದ ಕಾರಣ 'ತತ್ತ್ವಮಸಿ' ಎಂಬ ಶ್ರುತಿಯು ಅನುವಾದರೂಪವಾಗಲು ಸಾಧ್ಯವಿಲ್ಲವಲ್ಲವೇ ? ಎಂದು ಶಂಕಿಸಬಾರದು. ನಿಷೇಧಕ್ಕೋಸ್ಕರ ಪ್ರಮಾಣದಿಂದ ಪ್ರಾಪ್ತವಾಗಿರಬೇಕೋ ಅಥವಾ ಹೇಗಾದರೂ ಪ್ರಾಪ್ತವಾಗಿದ್ದರೆ ಮಾತ್ರ ಸಾಕೋ

ಎಂದು ಪ್ರಶ್ನಿಸುತ್ತೇವೆ. ಪ್ರಥಮಪಕ್ಷದಲ್ಲಿ ಪ್ರಮಾಣದಿಂದ ಪ್ರಾಪ್ತವಾದದ್ದನ್ನು ನಿಷೇಧಮಾಡಲು ಸಾಧ್ಯವೇ ಇಲ್ಲ. ಹೇಗಾದರೂ ಪ್ರಾಪ್ತವಾಗಿರಬಹುದೆಂದರೆ ಅದ್ವೈತವೂ ಸಹ ಪ್ರಾಪ್ತವಾಗಿರಬಹುದು. ಆದ್ದರಿಂದ ಅಂತಹ ಅದ್ವೈತವನ್ನು 'ದ್ವಾಸುಪರ್ಣಾ' ಎಂಬ ಶ್ರುತಿಯು ನಿಷೇಧಿಸಬಹುದು.

'ಭೇದಃ ಮಿಥ್ಯಾ ಭೇದತ್ವಾತ್' ಎಂಬ ಅನುಮಾನವು ಬಾಧಿತ

तत्वप्रकाशिका – जीवेशयोः प्रमाणं विनाऽसिद्धेः कथं तदभेदस्य कथंचित् प्राप्तिरिति चेत् समं भेदेऽपि । कुतश्चैतच्छ्रुतेर्मिथ्याभेदवादित्वं सिद्धम् । जीवेशभेदस्य मिथ्यात्वादेवेति चेत् । तदेव कुतः? न हि भेदमिथ्यात्वे प्रत्यक्षमस्ति । न चानुमानं श्रुतिसिद्धार्थबाधकम् । स्वस्यैव तद्विरोधेनाऽप्रामाण्यात् ।

ಜೀವ ಹಾಗೂ ಈಶ್ವರರು ಪ್ರಮಾಣವಿಲ್ಲದೆ ಸಿದ್ಧವಾಗುವುದಿಲ್ಲ. ಆದ್ದರಿಂದ ಅವರಲ್ಲಿ ಅಭೇದವು ಕಥಂಚಿತ್ ಪ್ರಾಪ್ತವಾಗಬಹುದಲ್ಲವೇ ಎಂದರೆ ಭೇದವಿಷಯದಲ್ಲಿಯೂ ಹೀಗೆಯೇ ಹೇಳುತ್ತೇವೆ. 'ದ್ವಾ ಸುಪರ್ಣಾ' ಎಂಬ ಶ್ರುತಿಗೆ ಮಿಥ್ಯಾಭೇದವಿಷಯತ್ವವನ್ನು ಹೇಗೆ ಸಾಧಿಸುತ್ತೀರಿ? ಜೀವೇಶಭೇದವು ಮಿಥ್ಯಾಭೂತವಾದ್ದರಿಂದಲೇ 'ದ್ವಾ ಸುಪರ್ಣಾ' ಶ್ರುತಿಯು ಮಿಥ್ಯಾಭೂತವಾದ ಭೇದವನ್ನು ಹೇಳುತ್ತಿದೆಯೆಂದು ಆಕ್ಷೇಪಿಸಿದರೆ, ಆ ಜೀವೇಶಭೇದದ ಮಿಥ್ಯಾತ್ವವು ಹೇಗೆ ಸಿದ್ಧವಾಯಿತೆಂದು ಪ್ರಶ್ನಿಸುತ್ತೇವೆ. ಭೇದಮಿಥ್ಯಾತ್ವವಿಷಯದಲ್ಲಿ ಪ್ರತ್ಯಕ್ಷವು ಪ್ರಮಾಣವಾಗಲು ಸಾಧ್ಯವಿಲ್ಲ. ಅನುಮಾನವು ಶ್ರುತಿಸಿದ್ಧವಾದ ಭೇದವನ್ನು ಬಾಧಿಸುವ ತನಕ ಪ್ರಮಾಣವಾಗುವುದಿಲ್ಲ. ಏಕೆಂದರೆ, ಸ್ವತಃ ತಾನೇ ಅಂದರೆ 'ಭೇದಃ ಮಿಥ್ಯಾ ಭೇದತ್ವಾತ್' ಎಂಬ ಅನುಮಾನವು 'ದ್ವಾ ಸುಪರ್ಣಾ' ಎಂಬ ಶ್ರುತಿಯಿಂದ ಬಾಧಿತವಾಗಿರುವುದರಿಂದ ಅಪ್ರಮಾಣವಾಗಿದೆ.

ಶ್ರುತಿ ಹಾಗೂ ಅನುಮಾನಗಳು ಭಿನ್ನವಿಷಯಕವಲ್ಲ

तत्वप्रकाशिका – श्रुतेर्भेदमात्रपरत्वादनुमानस्य च तद्भेदस्यैव मिथ्यात्वे प्रवृत्तत्वेन भिन्नविषयत्वान्न विरोध इति चेत्तर्हि प्रत्यक्षस्यौष्ण्यमात्र-

विषयत्वादनुमानस्य च तदौष्ण्यस्यैव मिथ्यात्वसाधकत्वेन भिन्नविषयत्वमिति बाधोच्छेदः स्यात् ।

ಶ್ರುತಿಯು ಕೇವಲ ಭೇದವಿಷಯಕವಾದರೆ ಅನುಮಾನವುಭೇದಮಿಥ್ಯಾತ್ವವನ್ನು ಸಾಧಿಸುತ್ತಿದೆ. ಆದ್ದರಿಂದ ಇವೆರಡು ಭಿನ್ನವಿಷಯಕಗಳಾದ್ದರಿಂದ ಪರಸ್ಪರ ವಿರೋಧವಿಲ್ಲವೆಂದು ಶಂಕಿಸಬಾರದು. ಪ್ರತ್ಯಕ್ಷಪ್ರಮಾಣದಿಂದ ಅಗ್ನಿಯು ಉಷ್ಣವಾಗಿದೆಯೆಂದು ತಿಳಿಯುತ್ತದೆ. ಅನುಮಾನದಿಂದ 'वह्निः अनुष्णः द्रव्यत्वात्' ಎಂಬ ಅನುಮಾನದಿಂದ ಅದೇ ಅಗ್ನಿಯು ಉಷ್ಣವಾಗಿಲ್ಲವೆಂದು ಸಾಧಿಸಬಹುದು. ಇಂತಹ ಸಂದರ್ಭದಲ್ಲಿ ಪ್ರತ್ಯಕ್ಷ ಹಾಗೂ ಅನುಮಾನಗಳು ಭಿನ್ನವಿಷಯಕವಾದ್ದರಿಂದ ಬಾಧವೆಂಬ ಹೇತ್ವಾಭಾಸವೇ ಅಸಿದ್ಧವಾಗಬೇಕಾದೀತು.

ಆಗಮವು ಭೇದಮಿಥ್ಯಾತ್ವವನ್ನು ಹೇಳಿಲ್ಲ

तत्वप्रकाशिका – न चागमेन भेदमिथ्यात्वसिद्धिः । तदभावादेव । न च तत्सत्यत्वे मानाभावः । स्वरूपाभिधायकस्यैव सत्यत्वे प्रामाण्यात् । अन्यथा तस्य वैयर्थ्यात् ।

ಇನ್ನು ಆಗಮದಿಂದ ಭೇದಮಿಥ್ಯಾತ್ವವು ಸಿದ್ಧವಾಗುತ್ತದೆಂದು ಹೇಳಬಾರದು. ಏಕೆಂದರೆ ಅಂತಹ ಆಗಮವೇ ಕಾಣಿಸುತ್ತಿಲ್ಲ. ಭೇದಸತ್ಯತ್ವದ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲವೆಂದು ಹೇಳಬಾರದು. ಭೇದಪ್ರತಿಪಾದಕವಾದ ಶ್ರುತಿಗಳೇ ಭೇದಸತ್ಯತ್ವ-ವಿಷಯದಲ್ಲಿಯೂ ಪ್ರಮಾಣಗಳಾಗಿವೆ. ಇಲ್ಲದಿದ್ದರೆ ಶ್ರುತಿಗಳು ಭೇದವನ್ನು ಪ್ರತಿಪಾದಿಸುವ ವಿಷಯದಲ್ಲಿ ಅರ್ಥವೇ ಇರುವುದಿಲ್ಲ.

ವಿಷ್ಣುವೇ ಪರವಿದ್ಯೆಗೆ ವಿಷಯನೆಂದು ಒಪ್ಪಬೇಕು

तत्वप्रकाशिका – अतो न मिथ्याभेदपरत्वं श्रुतेरित्यलम् । तस्माद् विष्णुरेव द्युभ्वाद्यायतनं परविद्याविषयश्चेति सिद्धम् ।। ७ ।।

।। इति श्रीमज्जयतीर्थभिक्षुविरचितायां तत्वप्रकाशिकायाम् द्युभ्वाद्यधिकरणम् ।।

ಆದ್ದರಿಂದ 'ಜುಷ್ಟಂ ಯದಾ ಪಶ್ಯತಿ' ಇತ್ಯಾದಿ ಭೇದಪ್ರತಿಪಾದಕವಾದ ಶ್ರುತಿಗಳು ಮಿಥ್ಯಾಭೂತವಾದ ಭೇದವನ್ನುಪ್ರತಿಪಾದಿಸುತ್ತವೆಂದು ಹೇಳಬಾರದು. ಈ ಎಲ್ಲ ಕಾರಣಗಳಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆ. ಪರವಿದ್ಯೆಗೆ ಅವನೇ ವಿಷಯನಾಗಿದ್ದಾನೆಂದು ನಿರ್ಣಯವಾಗುತ್ತದೆ.

॥ ಇಲ್ಲಿಗೆ ಶ್ರೀಮಜ್ಜಯತೀರ್ಥಮುನಿಗಳಿಂದ ವಿರಚಿತವಾದ ತತ್ವಪ್ರಕಾಶಿಕಾಟೀಕೆಯಲ್ಲಿ ದ್ಯುಭ್ವಾದ್ಯಧಿಕರಣದ ಕನ್ನಡಾನುವಾದವು ಸಂಪೂರ್ಣವಾಯಿತು ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಭಾವದೀಪ

ಜೀವನು ದ್ಯುಭ್ವಾದ್ಯಾಯತನನಲ್ಲ ಎನ್ನಲು ಮತ್ತೊಂದು ಹೇತು

भावदीपः – स्थित्यदनाभ्यां च ।। सूत्रे चशब्दादाह – हेत्वन्तरेणेति ।। कर्मफलोपजीवनतद्रहितावस्थानलक्षणभेदकोक्तिरूपहेत्वन्तरेणेत्यर्थः ।। पिप्पलमिति।। अश्वत्थमित्यर्थः ।

ಸ್ಥಿತ್ಯದನಾಭ್ಯಾಂ ಚ

ಸೂತ್ರದಲ್ಲಿ ''ಚ'' ಶಬ್ದವನ್ನು ಹೇಳಿರುವುದರಿಂದ ''ಹೇತ್ವಂತರೇಣ'' ಎಂದು ಹೇಳಿರುತ್ತಾರೆ. ಅಂದರೆ ''ಕರ್ಮಫಲೋಪಜೀವನ ತದ್ರಾಹಿತ್ಯ'' ಎಂಬ ಎರಡು ವಿರುದ್ಧವಾದ ಧರ್ಮಗಳನ್ನು ಹೇಳಿರುವಿಕೆ'' ಎಂಬ ಮತ್ತೊಂದು ಹೇತುವಿನಿಂದ ಎಂದರ್ಥ. ''ಪಿಪ್ಪಲಂ'' ಎಂಬ ಶಬ್ದಕ್ಕೆ ಅಶ್ವತ್ಥವೃಕ್ಷ ಎಂದರ್ಥ.

ಏಕಾದಶಸ್ಕಂಧದಲ್ಲಿ 'ದ್ವಾ ಸುಪರ್ಣಾ' ಶ್ರುತ್ಯರ್ಥ

भावदीपः – 'तस्येदाहुः' इति वाक्यशेषविरोधनिरासायाह – अस्वाद्वेवेति।। 'एकस्तयोः खादति पिप्पलान्नमन्यो निरन्नोऽपि बलेन भूयान्'

इत्येकादशस्कन्धवाक्ये अत्तिं विनाप्यदौर्बल्यादिति तात्पर्योक्तिमनुरुद्ध्यार्थमाह – अन्य ईश्वर इत्यादिना ।।

''तस्येदाहुः'' ಎಂಬ ವಾಕ್ಯಶೇಷದ ವಿರೋಧವನ್ನು ಪರಿಹರಿಸುವುದಕ್ಕಾಗಿ ''अस्वाद्वन्योऽ'' ಎಂದು ಹೇಳಿರುತ್ತಾರೆ. ಅಂದರೆ ಎರಡು ಪಕ್ಷಿಗಳಲ್ಲಿ ಒಂದು ಪಕ್ಷಿ ಅಶ್ವತ್ಥವೃಕ್ಷದ ಫಲವನ್ನು ತಿನ್ನುತ್ತಿದೆ. ಮತ್ತೊಂದು ಅಶ್ವತ್ಥವೃಕ್ಷದ ಫಲವನ್ನು ತಿನ್ನುತ್ತಿಲ್ಲ. ಆದರೂ ಸಹ ಬಹಳವಾಗಿ ಬಲಿಷ್ಠವಾಗಿದೆ. ಎಂಬುದಾಗಿ ''एकस्तयोः खादति पिप्पलान्नमन्यो निरन्नोऽपि बलेन भूयान्'' ಎಂದು ಏಕಾದಶ ಸ್ಕಂಧದ ಭಾಗವತದಲ್ಲಿ ಹೇಳಲಾಗಿದೆ. ಈ ವಾಕ್ಯಕ್ಕೆ ಶ್ರೀಮದಾಚಾರ್ಯರು ತಾತ್ಪರ್ಯದಲ್ಲಿ ''अत्तिं विनाप्यदौर्बल्यात्'' ಎಂದು ವ್ಯಾಖ್ಯಾನಿಸಿದ್ದಾರೆ. ಅದನ್ನು ಅನುಸರಿಸಿ ಪ್ರಕೃತ ಟೀಕಾರಾಯರು ''अन्य ईश्वर'' ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ತಾತ್ಪರ್ಯಚಂದ್ರಿಕೆಯಲ್ಲಿ ಬುದ್ಧಿಜೀವಪರತ್ವದ ನಿರಾಕರಣೆ

भावदीपः – गुहानये 'शुभं पिबति' इति वाक्यानुरोधादर्थान्तरमुक्तम् । भाष्योक्तं सूत्रारूढं दर्शयति – कर्मेत्यादिना ।। अत्र श्रुतेर्बुद्धिजीवपरत्वं चन्द्रिकायां निरस्तम् । विस्तृतं च गुरुपादैः श्रुतितात्पर्यकौमुद्याम् ।

ಗುಹಾಧಿಕರಣದಲ್ಲಿ ''शुभं पिबति'' ಎಂಬ ಪ್ರಮಾಣವನ್ನು ಉಲ್ಲೇಖಿಸಿದ್ದರು. ಅದಕ್ಕೆ ಈ ಅರ್ಥವು ಮತ್ತೊಂದು ವ್ಯಾಖ್ಯಾನವಾಗಿದೆ ಎಂದು ತಿಳಿಯಬೇಕು. ಭಾಷ್ಯದಲ್ಲಿ ಹೇಳಲ್ಪಟ್ಟ ವಿಚಾರವನ್ನು ಸೂತ್ರಾರೂಢ ಮಾಡುತ್ತಿದ್ದಾರೆ ''ಕರ್ಮ'' ಇತ್ಯಾದಿ ವಾಕ್ಯದಿಂದ. ಇಲ್ಲಿರುವ ಶ್ರುತಿಯು ಬುದ್ಧಿ ಹಾಗೂ ಜೀವರನ್ನು ಪ್ರತಿಪಾದಿಸಬಹುದಲ್ಲವೆ? ಜೀವೇಶ್ವರರನ್ನೇ ಏಕೆ ಪ್ರತಿಪಾದಿಸಬೇಕು? ಎಂಬ ಶಂಕೆಯನ್ನು ತಾತ್ಪರ್ಯಚಂದ್ರಿಕೆಯಲ್ಲಿ ನಿರಾಕರಿಸಿದ್ದಾರೆ. ಮತ್ತು ಗುರುಗಳು ಮಾಡಿರುವ ಶ್ರುತಿತಾತ್ಪರ್ಯಕೌಮುದಿಯಲ್ಲಿ ಹೆಚ್ಚಿನ ವಿಚಾರವನ್ನು ತಿಳಿಯಬೇಕು.

'ಅದನಸ್ಥಿತಿಭ್ಯಾಂ' ಎಂದೇಕೆ ಸೂತ್ರದಲ್ಲಿ ಹೇಳಿಲ್ಲ?

भावदीपः – अत्र श्रुतावदनस्यादित्वेन सूत्रेऽप्यदनस्थितिभ्यामित्युक्त्या भाव्यम्, अत आह – श्रुतीति ।। सूत्रे श्रुत्युक्तक्रमोल्लङ्घनमित्यर्थः । 'अभ्यर्हितं पूर्वम्' अल्पाच्तरं पूर्वम्' इति व्याकरणस्मृतेरिति भावः ।

ಈ ಶ್ರುತಿಯಲ್ಲಿ ಅದನವನ್ನು ಮೊದಲು ಹೇಳಲಾಗಿದೆ ಅದಕ್ಕೆ ಅನುಸಾರಿಯಾಗಿ ಸೂತ್ರದಲ್ಲಿ ಅದನಸ್ಥಿತಿಭ್ಯಾಂ ಎಂದು ಹೇಳಬೇಕಿತ್ತಲ್ಲವೆ? ಎಂಬ ಪ್ರಶ್ನೆಗೆ ''ಶ್ರುತಿ'' ಇತ್ಯಾದಿ ಟೀಕೆಯಿಂದ ಉತ್ತರಿಸುತ್ತಿದ್ದಾರೆ. ಸೂತ್ರದಲ್ಲಿ ಶ್ರುತಿಯ ಕ್ರಮವನ್ನು ಉಲ್ಲಂಘಿಸಿದ್ದಾರೆ ಎಂದರ್ಥ. ''ಅಭ್ಯರ್ಹಿತಂ ಪೂರ್ವಂ'' ಎಂಬುದಾಗಿ ಯಾವುದು ಅಲ್ಪವಾದ ಅಚ್ ಅಕ್ಷರಗಳಿಂದ ಕೂಡಿರುತ್ತದೆಯೋ ಅದೇ ಪದವು ಮೊದಲು ಬರಬೇಕೆಂದು ವ್ಯಾಕರಣದಲ್ಲಿ ಹೇಳಿರುತ್ತಾರೆ.

'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಗೆ ಏನರ್ಥ ?

भावदीपः – श्रुतेर्व्यावहारिकभेदपरत्वेन वा व्यावहारिकप्रामाण्येन मिथ्याभेदपरत्वेन वा मिथ्याभेदानुवादित्वेन वाऽन्यथोपपत्तिमाशङ्क्य निराकरोति – व्यावहारिक इत्यादिना ।। व्यावहारिकम् अतत्त्वावेदकत्वरूपम्।

ಶ್ರುತಿಯು ವ್ಯಾವಹಾರಿಕವಾದ ಭೇದವನ್ನು ಪ್ರತಿಪಾದಿಸಬಹುದು, ಅಥವಾ ವ್ಯಾವಹಾರಿಕ-ಪ್ರಾಮಾಣ್ಯದಿಂದ ಮಿಥ್ಯಾಭೂತವಾದ ಭೇದವನ್ನು ಪ್ರತಿಪಾದಿಸಬಹುದು. ಅಥವಾ ಮಿಥ್ಯಾಭೂತವಾದ ಭೇದವನ್ನು ಅನುವಾದ ಮಾಡಬಹುದು. ಹೀಗೆ ''ಜುಷ್ಟಂ ಯದಾ ಪಶ್ಯತಿ'' ಎಂಬ ಶ್ರುತಿಗೆ ಅದ್ವೈತಕ್ಕೆ ವಿರೋಧ ಬಾರದಂತೆ ಅರ್ಥೈಸಬಹುದಲ್ಲವೆ? ಎಂದು ಆಕ್ಷೇಪಿಸಿ ನಿರಾಕರಿಸುತ್ತಿದ್ದಾರೆ 'ವ್ಯಾವಹಾರಿಕಃ' ಇತ್ಯಾದಿ ವಾಕ್ಯದಿಂದ. ವ್ಯಾವಹಾರಿಕವು ಅತತ್ವಾವೇದಕರೂಪವಾಗಿದೆ.

'ವಾಚೋ ಯುಕ್ತೇಃ' ಎಂಬ ಪ್ರಯೋಗ ವ್ಯಾಕರಣ ಸಮ್ಮತ

भावदीपः – वाचोयुक्तेरित्येकं पदम् । वाक्यप्रयोगस्येत्यर्थः । 'वाग्दिक्पश्यद्भ्यो युक्तिदण्डहरेषु' इत्यलुक्समासः ।। वैय्यर्थ्यादिति ।। 'अप्राप्ते शास्त्रमर्थवद्' इति न्यायादिति भावः ।

''ವಾಚೋ ಯುಕ್ತೇಃ'' ಎಂಬುದು ಒಂದೇ ಪದವಾಗಿದೆ. ವಾಕ್ಯಪ್ರಯೋಗದ ಎಂದರ್ಥ. ಏಕೆಂದರೆ 'ವಾಗ್ದಿಕ್ಪಶ್ಯದ್ಭ್ಯೋ ಯುಕ್ತಿದಂಡಹರೇಷು' ಎಂಬ ಸೂತ್ರದಿಂದ ಅಲುಕ್ ಸಮಾಸವಾಗಿದೆ ಅಂದರೆ 'ವಾಚೋ' ಎಂಬಲ್ಲಿರುವ 'ಸುಪ್' ಪ್ರತ್ಯಯವು ಲೋಪವಾಗಿರುವುದಿಲ್ಲ. ''ವೈಯರ್ಥ್ಯಾತ್'' ಎಂದು ಟೀಕೆಯಲ್ಲಿದೆ. ಅಂದರೆ ''ಅಪ್ರಾಪ್ತೇ ಶಾಸ್ತ್ರಮರ್ಥವತ್'' ಅಪೂರ್ವವಾದ ವಿಚಾರದಲ್ಲಪ್ಪೇ ಶಾಸ್ತ್ರವು ಪ್ರಮಾಣವಾಗುತ್ತದೆ ಎಂಬ ನ್ಯಾಯವಿರುವುದರಿಂದ ಹೀಗೆ ಹೇಳಿದ್ದಾರೆ.

ನಿರಾಕರಣೆಗಾಗಿ ಅನುವಾದವಲ್ಲ

ಭಾವದೀಪಃ – यद्वा, अनुवादो ह्यर्थवादवत् स्तुत्यर्थं वा 'दध्ना जुहोति' इतिवत् क्वचिद्विधानार्थं वा 'नेह नानास्ति किञ्चन' इत्यत्र किञ्चनेतिवन्निषेधार्थं वा । न पक्षत्रयमपि । अदर्शनादित्यर्थः । शङ्कक: स्वाशयं व्यनक्ति – निषेधायेति ।।

ಅಥವಾ ಯಾವರೀತಿಯಾಗಿ ಅರ್ಥವಾದವು ಸ್ತುತಿಗೋಸ್ಕರ ಇರುತ್ತದೆಯೋ ಅದರಂತೆ. ಅಥವಾ ''ದಧ್ನಾ ಜುಹೋತಿ'' ಎಂಬಲ್ಲಿ ದದಿಯನ್ನು ವಿಧಾನ ಮಾಡುವುದಕ್ಕಾಗಿ ಅನುವಾದ ಮಾಡಿರುತ್ತಾರೋ ಅದರಂತೆ ಇಲ್ಲಿಯೂ ಸಹ ವಿಧಾನ ಮಾಡುವುದಕ್ಕಾಗಿ ಅನುವಾದ ಮಾಡಿರಬಹುದು. ಅಥವಾ ''ನೇಹ ನಾಸ್ತಿ ಕಿಂಚನ'' ಎಂಬ ಶ್ರುತಿಯಲ್ಲಿ ನಿಷೇಧ ಮಾಡುವುದಕ್ಕೋಸ್ಕರ ಇಲ್ಲಿ ಅನುವಾದ ಮಾಡಿರಬಹುದು. ಹೀಗೆ ಮೂರೂ ಪಕ್ಷಗಳನ್ನು ನಿರಾಕರಿಸಿದ್ದಾರೆ. ಏಕೆಂದರೆ ಭೇದವನ್ನು ನಿಷೇಧ ಮಾಡುವ ಯಾವುದೇ ಶ್ರುತಿಗಳು ಕಾಣುಸುತ್ತಿಲ್ಲವೆಂದರ್ಥ. ಆಶಂಕೆ ಮಾಡುವ ಪೂರ್ವಪಕ್ಷಕಾರನು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದಾನೆ ''ನಿಷೇಧಾಯ'' ಇತ್ಯಾದಿಯಾಗಿ.

ಭೇದನಿಷ್ಠಾತ್ವವು ಸಿದ್ಧವಾಗುವುದಿಲ್ಲ

ಭಾವದೀಪಃ – तादृशी प्राप्तिरिति ।। आनन्दमये उक्तदिशेति भावः । अङ्गीकृत्य चेदमुक्तम् । वस्तुतो भेदमिथ्यात्वमेव न सिद्धम्, येन तदनुवाद इत्याह – कृतश्चेति ।।

''ತಾದೃಶೀ ಪ್ರಾಪ್ತಿಃ'' ಅಂದರೆ ಆನಂದಮಯಾಧಿಕರಣದಲ್ಲಿ ಹೇಳಿದ ಪ್ರಕಾರವಾಗಿ ತಿಳಿಯಬೇಕೆಂದು ಅಭಿಪ್ರಾಯ. ವಸ್ತುತಃ ಇದನ್ನು ಅಂಗೀಕರಿಸಿ ಹೇಳಿದ್ದಾರೆ. ವಿಚಾರ ಮಾಡಿದರೆ ಭೇದಮಿಥ್ಯಾತ್ವವೇ ಸಿದ್ಧವಾಗಿರುವುದಿಲ್ಲ. ಹಾಗೆ ಸಿದ್ಧವಾಗಿದ್ದಲ್ಲಿ ಅದು ಅನುವಾದ ರೂಪವೆಂದು ಹೇಳಬಹುದಿತ್ತು. ಇದನ್ನು ''ಕೃತಶ್ಚ'' ಎಂಬ ವಾಕ್ಯದಿಂದ ನಿರೂಪಿಸುತ್ತಿದ್ದಾರೆ.

'नानुमानमतच्छब्दात्' ಎಂಬ ಸೂತ್ರವನ್ನು ಅನುವೃತ್ತಿ ಮಾಡಬೇಕು

ಭಾವದೀಪಃ – 'नानुमानमतच्छब्दाद्' इति सूत्रमत्रानुवर्त्य तस्यानुमानं भेदमिथ्यात्वे मानं न । कुतः अतच्छब्दात् । मिथ्यात्वविरुद्धभेदसत्यत्व-बोधकशब्दादिति वृत्त्यन्तरं मनसि निधायाह – नचेति ।।

''नानुमानमतच्छब्दाद्'' ಎಂಬ ಸೂತ್ರವನ್ನು ಇಲ್ಲಿ ಅನುವೃತ್ತಿ ಮಾಡಿಕೊಂಡು ಅಂತಹ ಅನುಮಾನವು ಭೇದಮಿಥ್ಯಾತ್ವ ವಿಷಯದಲ್ಲಿ ಪ್ರಮಾಣವಾಗುವುದಿಲ್ಲ. ಏಕೆಂದರೆ ''ಅತತ್ ಶಬ್ದಾತ್'' 'ಮಿಥ್ಯಾತ್ವಕ್ಕೆ ವಿರುದ್ಧವಾದ ಭೇದ ಸತ್ಯತ್ವವನ್ನು ಪ್ರತಿಪಾದಿಸುವ ಶಬ್ದಗಳು ಇರುವುದರಿಂದ' ಎಂಬುದಾಗಿ ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ''ನ ಚ'' ಇತ್ಯಾದಿ ಟೀಕಾ ಗ್ರಂಥವು ಹೊರಟಿದೆ.

ಮಿಥ್ಯಾತ್ವಸಾಧಕ ಅನುಮಾನಕ್ಕೆ ಶ್ರುತಿವಿರೋಧ

ಭಾವದೀಪಃ – अनुमानं 'भेदो मिथ्या भेदत्वाद्' इत्यनुमानमित्यर्थः । एतेन सर्वत्र प्रसिद्धेति नयोक्तं 'द्वा सुपर्णा' इत्यादिश्रुतिविरोधाच्चेत्युक्तं विवृतं ध्येयम् । अतच्छब्दादित्यस्य अनुमानमूलभऊतभेदमिथ्यात्वबोधक-शब्दस्याभावादित्यप्यर्थान्तरमुपेत्याह – तदभावादेवेति ।।

ಅನುಮಾನಂ ಎಂದರೆ ''ಭೇದೋ ಮಿಥ್ಯಾ ಭೇದತ್ವಾದ್'' ಎಂಬ ಅನುಮಾನ ಎಂದರ್ಥ. ಹೀಗೆ ಹೇಳಿದ್ದರಿಂದ ಸರ್ವಗತತ್ವಾಧಿಕರಣದಲ್ಲಿ ಹೇಳಲ್ಪಟ್ಟ ''ದ್ವಾ ಸುಪರ್ಣಾ'' ಇತ್ಯಾದಿ ಶ್ರುತಿಯ ವಿರೋಧವೂ ಸಹ ಅದ್ವೈತವಾದಿಗಳಿಗೆ ಬರುತ್ತದೆ ಎಂದು ಹೇಳಿದಂತಾಯಿತು. 'ಅತಃ' ಎಂಬ ಪದಕ್ಕೆ ಅನುಮಾನಕ್ಕೆ ಮೂಲಭೂತವಾದ ಭೇದ ಮಿಥ್ಯಾತ್ವ ಪ್ರತಿಪಾದಕವಾದ ಶಬ್ದವಿಲ್ಲದ ಕಾರಣ ಎಂಬ ಮತ್ತೊಂದು ಬಗೆಯ ಅರ್ಥವನ್ನು ಅಂಗೀಕರಿಸಿ ''ತದಭಾವಾದೇವ'' ಎಂದು ಟೀಕೆಯಲ್ಲಿ ಹೇಳಿರುತ್ತಾರೆ.

ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲ

ಭಾವದೀಪಃ – अत इति ।। श्रुतेरप्रामाण्यापत्तेर्मिथ्यात्वसाधकाभावात् स्वतःप्रामाण्येन स्वबोध्यस्य सत्यत्वप्राप्तेश्चेत्यर्थः ।। तस्मादिति ।। आत्म-

श्रुत्यमृतसेतुत्वलिङ्गरूपसाधकभावात् तच्छब्दरूपबाधकाभावात् परपक्षे साधकाभावाद् भेदभेदकयोरुक्त्याऽभेदायोगाच्चेति सर्वसूत्रहेत्वंशार्थः।

''ಅತಃ'' ಎಂದರೆ ಶ್ರುತಿಗೆ 'ಅಪ್ರಾಮಾಣ್ಯದೋಷವು ಬರಬೇಕಾದ್ದರಿಂದ' 'ಮಿಥ್ಯಾತ್ವಸಾಧಕವಾದ ಪ್ರಮಾಣಗಳು ಇಲ್ಲದ್ದರಿಂದ' 'ಪ್ರಾಮಾಣ್ಯಸ್ವತಸ್ತ್ವವಿರುವುದರಿಂದ ಸ್ವಬೋಧ್ಯವಾದ ಅರ್ಥವು ಸತ್ಯವೇ ಆಗಿರುವುದರಿಂದ' ಎಂಬುದಾಗಿ ಮೂರುಬಗೆಯ ಅರ್ಥವನ್ನು ತಿಳಿಯಬೇಕು. ''ತಸ್ಮಾತ್'' ಎಂದರೆ ಆತ್ಮಶ್ರುತಿ, ಅಮೃತತ್ವ ಎಂಬ ಸಾಧಕ ಪ್ರಮಾಣಗಳು ಇರುವುದರಿಂದ ಮತ್ತು ''ತತ್'' ಶಬ್ದವೆಂಬ ಬಾಧಕಪ್ರಮಾಣಗಳು ಇಲ್ಲದ್ದರಿಂದ ಮತ್ತು ಪರಪಕ್ಷದಲ್ಲಿ ಸಾಧಕಪ್ರಮಾಣಗಳು ಇಲ್ಲದ ಕಾರಣ ಮತ್ತು ಭೇದವು ಯುಕ್ತವಾಗುವುದರಿಂದ ಅಭೇದವು ಅಯುಕ್ತವಾಗುವುದರಿಂದ ಎಂಬುದಾಗಿ ಎಲ್ಲ ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಗಳು ಇರುವುದರಿಂದ ಎಂದರ್ಥ.

ತಾತ್ಪರ್ಯಚಂದ್ರಿಕೆಯಲ್ಲಿ ಸೂತ್ರಾರ್ಥಗಳ ಸ್ವಾರಸ್ಯ

भावदीपः – विष्णुरेवेत्यादिप्रतिज्ञार्थः । परविद्येति भाष्योपसंहारः । अत्र सूत्राक्षरस्वारस्यादिकं चन्द्रिकायां व्यक्तमुक्तम् । तेन कस्यचिन्नूतनस्य दूषणावकाशो नेति ज्ञेयम् ।। ७ ।।

।। इति श्रीराघवेन्द्रयतिकृते भावदीपे द्युभ्वाद्यधिकरणम् ।।

''ವಿಷ್ಣುರೇವ'' ಎಂಬುದು ಪ್ರತಿಜ್ಞೆಯಾಗಿದೆ. ''ಪರವಿದ್ಯಾ'' ಎಂಬುದಾಗಿ ಭಾಷ್ಯವನ್ನು ಉಪಸಂಹಾರ ಮಾಡಿದ್ದಾರೆ. ಈ ಅಧಿಕರಣದ ಸೂತ್ರಾರ್ಥಗಳ ಸ್ವಾರಸ್ಯವನ್ನು ಚಂದ್ರಿಕೆಯಿಂದ ತಿಳಿಯಬೇಕು. ಹಾಗೆ ತಿಳಿಯುವುದರಿಂದ ಕೆಲವರು ಆಪಾದಿಸುವ ಹೊಸ ದೋಷಗಳಿಗೆ ಅವಕಾಶವಿಲ್ಲವೆಂಬ ವಿಚಾರವು ಮನದಟ್ಟಾಗುತ್ತದೆ.

ವಿಶೇಷವಿಚಾರ - 'ಸ್ಮೃತ್ಯದನಾಭ್ಯಾಂ ಚ' ಎಂಬುದು ಏಳನೆಯ ಸೂತ್ರ. ಭೇದವ್ಯಪದೇಶದ ವಿಷಯದಲ್ಲಿ ಕೇವಲ ಶ್ರುತಿಯು ಮಾತ್ರ ಪ್ರಮಾಣವಲ್ಲ. ಲಿಂಗವೂ ಸಹ ಪ್ರಮಾಣವಾಗಿದೆಯೆಂದು ಈ ಸೂತ್ರವು ಸಮರ್ಥಿಸುತ್ತಿದೆ. ಆದ್ದರಿಂದಲೇ 'ಚ' ಶಬ್ದವನ್ನು ಸೂತ್ರಕಾರರು ಹೇಳಿದ್ದಾರೆ.

ವಾಸ್ತವಿಕವಾಗಿ ಶ್ರುತಿಯಲ್ಲಿ ಅದನವನ್ನು ಮೊದಲು ಹೇಳಿರುವುದರಿಂದ ಸೂತ್ರದಲ್ಲಿಯೂ ಅದನವನ್ನೇ ಮೊದಲು ಹೇಳಬೇಕಿತ್ತು. ಆದರೆ ಸ್ಥಿತಿಯು ಈಶ್ವರನಿಗೆ ಸಂಬಂಧಿಸಿದ್ದರಿಂದ ಪ್ರಧಾನವಾಗಿದೆ. ಅಪ್ರಧಾನವನ್ನು ಹೇಳುವುದಕ್ಕಿಂತ ಮೊದಲು ಪ್ರಧಾನವನ್ನು ಹೇಳುವುದು ಸಮಂಜಸವೆಂಬ ಅಭಿಪ್ರಾಯದಿಂದ ಸ್ಥಿತಿಯನ್ನೇ ಮೊದಲು ಹೇಳಿರುತ್ತಾರೆ. ಅಥವಾ 'ಅದನ' ಶಬ್ದಕ್ಕಿಂತ 'ಸ್ಥಿತಿ' ಶಬ್ದವು ಕಮ್ಮಿ ಅಚಕ್ಕರಗಳಿಂದ ಕೂಡಿದೆ. ಆದ್ದರಿಂದ 'ಅಲ್ಪಾಚ್‌ತರಂ ಪೂರ್ವಮ್' ಎಂಬ ಸೂತ್ರಾನುಸಾರ ಸ್ಥಿತಿಶಬ್ದಕ್ಕೆ ಪ್ರಾಥಮ್ಯವು ಯುಕ್ತವಾಗಿದೆ.

ಆಕ್ಷೇಪ - 'ದ್ವಾ ಸುಪರ್ಣಾ' ಎಂಬ ಶ್ರುತಿಯಲ್ಲಿ ಸ್ಥಿತಿ ಹಾಗೂ ಅದನಗಳೆಂಬ ಲಿಂಗಗಳು ಕೇಳಿಸುತ್ತಿವೆ. ಈ ಲಿಂಗಗಳ ಬಲದಿಂದ ಜೀವ ಹಾಗೂ ಬ್ರಹ್ಮರಿಗೆ ಭೇದವು ಸಿದ್ಧವಾಗುತ್ತದೆಂದು ಹೇಳಿದಿರಿ. ಆದರೆ ಇವು ಬುದ್ಧಿ ಹಾಗೂ ಜೀವರ ಧರ್ಮವಾದ್ದರಿಂದ ಇವೆರಡರ ಭೇದವೇ ಶ್ರುತಿಗೆ ಸಮ್ಮತವಾಗಿದೆ. ಆದ್ದರಿಂದ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಬುದ್ಧಿ ಹಾಗೂ ಜೀವ ವಿಷಯಕವೆಂದು ಹೇಳಬೇಕು. ಆದ್ದರಿಂದಲೇ ಪೈಂಗಿರಹಸ್ಯದ ಬ್ರಾಹ್ಮಣವಾಕ್ಯದಲ್ಲಿ 'ತಾವೇತೌ ಸತ್ವಕ್ಷೇತ್ರಜ್ಞೌ' ಎಂಬುದಾಗಿ ಈ ಮಂತ್ರಕ್ಕೆ ಸತ್ವ ಹಾಗೂ ಕ್ಷೇತ್ರಜ್ಞರು ವಿಷಯರಾಗಿದ್ದಾರೆಂದು ವ್ಯಾಖ್ಯಾನಿಸಲಾಗಿದೆ. 'ಸತ್ವ' ಎಂದರೆ ಬುದ್ಧಿಯೆಂದರ್ಥ, 'ಕ್ಷೇತ್ರಜ್ಞ' ಎಂದರೆ ಜೀವನೆಂದರ್ಥ. ಒಟ್ಟಾರೆ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಬುದ್ಧಿಜೀವವಿಷಯಕವೇ ಆಯಿತು.

ಸಮಾಧಾನ - ಅದ್ವೈತಿಗಳ ಈ ಆಕ್ಷೇಪವು ತಪ್ಪು. ಪೈಂಗಿ ರಹಸ್ಯ ಬ್ರಾಹ್ಮಣದಲ್ಲಿ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಸತ್ವ ಹಾಗೂ ಕ್ಷೇತ್ರಜ್ಞಗಳನ್ನು ವಿಷಯೀಕರಿಸುತ್ತಿದೆಯೆಂದು ಹೇಳಲಾಗಿದೆ; ಹೊರತು ಬುದ್ಧಿ ಹಾಗೂ ಜೀವರನ್ನು ವಿಷಯೀಕರಿಸುತ್ತಿದೆಯೆಂದು ಹೇಳಿಲ್ಲ. ಸತ್ವಶಬ್ದಕ್ಕೆ ಬುದ್ಧಿಯೆಂಬ ವ್ಯಾಖ್ಯಾನವು ಅಯುಕ್ತ; ಹೊರತಾಗಿ ಜೀವನೆಂದೇ ಅರ್ಥ. ಏಕೆಂದರೆ ರಘುವಂಶದಲ್ಲಿ 'ಊನಂ ನ ಸತ್ವೇಷ್ವಧಿಕೋ ಬಬಾಧೇ' ಎಂಬುದಾಗಿ ಅನೇಕ ಪ್ರಾಣಿಗಳಿರುವಾಗ ಸಣ್ಣಪ್ರಾಣಿಗಳನ್ನು ದೊಡ್ಡಪ್ರಾಣಿಗಳು ಹಿಂಸಿಸಲಿಲ್ಲ ಎಂದು ಹೇಳಲಾಗಿದೆ. ಇಲ್ಲಿರುವ ಸತ್ವಶಬ್ದಕ್ಕೆ ಪ್ರಾಣಿಯೆಂದರ್ಥ. ಮತ್ತು ಅಮರಕೋಶದಲ್ಲಿಯೂ 'ಸತ್ವಮಸ್ತ್ರೀ ತು ಜಂತುಷು' ಎಂಬುದಾಗಿ 'ಜಂತು' ಎಂಬರ್ಥದಲ್ಲಿ ಸತ್ವಶಬ್ದವನ್ನು ಪ್ರಯೋಗಿಸಲಾಗಿದೆ. 'ಜಂತು' ಎಂದರೆ ಜೀವನೆಂದೇ ಅರ್ಥ. ಮತ್ತು 'ಸತ್ವಂ ಜೀವ ಇತಿ ಪ್ರೋಕ್ತಃ' ಎಂಬ ಸ್ಮೃತಿಪ್ರಮಾಣವೂ ಇರುವುದರಿಂದ ಸತ್ವಶಬ್ದಕ್ಕೆ ಜೀವನೆಂಬ ವ್ಯಾಖ್ಯಾನವು ಅನಿವಾರ್ಯ.

॥ ಇಲ್ಲಿಗೆ ಶ್ರೀಮದ್‌ರಾಘವೇಂದ್ರತೀರ್ಥರಿಂದ ವಿರಚಿತವಾದ ಭಾವದೀಪದ
ದ್ಯುಭ್ವಾದ್ಯಧಿಕರಣದ ಕನ್ನಡ ಅನುವಾದವು ಮುಗಿಯಿತು ॥

॥ ಶ್ರೀ ಮದ್ವೇಶಾರ್ಪಣಮಸ್ತು ॥

।। श्रीजानकीवदनाम्भोजराजहंसाय रामचन्द्राय नमः ।।

ತಂತ್ರದೀಪಿಕೆಯಲ್ಲಿ ದುಭ್ವಾದ್ಯಧಿಕರಣದ ಸೂತ್ರಗಳು

।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

अथ प्रथमाध्यायस्य तृतीयः पादः

द्युभ्वाद्यधिकरणम् (१)

अत्र पादे उभयत्र प्रसिद्धनामलिङ्गात्मकद्विविधशब्दसमन्वय उच्यते-

।। द्युभ्वाद्यायतनं स्वशब्दात् ।। १-३-१ ।।

ಈ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳನ್ನು ಹಾಗೂ ಲಿಂಗಾತ್ಮಕ-ಶಬ್ದಗಳನ್ನು ಸಮನ್ವಯ ಮಾಡಲಾಗಿದೆ.

'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ '

अत्र नये तादृशं सर्वाधारत्वलिङ्गं समन्वीयते ।

ಈ ಅಧಿಕರಣದಲ್ಲಿ ಉಭಯತ್ರಪ್ರಸಿದ್ಧವಾದ ಸರ್ವಾಧಾರತ್ವ ಎಂಬ ಲಿಂಗದ ಸಮನ್ವಯವನ್ನು ಮಾಡಲಾಗಿದೆ.

तत्त्वित्यस्ति । ''यस्मिन् द्यौः पृथिवी चान्तरिक्षम्'' इत्यादिनोक्तं द्युभ्वाद्यायतनं ततु ब्रह्मैव । न तु प्रधानं वायुरुद्रजीवा वा । स्वशब्दात् स्वेति शब्दः स्वशब्दस्तस्मात् । श्रुतौ स्वशब्दाभावात् तत्पर्यायात्मशब्दो

ग्राह्यः । सभाराजेत्यत्र पाणिनीये राजशब्दवत् । तमेवैकं जानथ आत्मानमित्यात्मशब्दादित्यर्थः ।

ಸೂತ್ರಾರ್ಥ ಹೀಗಿದೆ -- ''ತತ್ತು'' ಎಂಬ ಪದಗಳು ಅನುವೃತ್ತವಾಗಿವೆ. 'ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಮ್' ಇತ್ಯಾದಿಶ್ರುತಿಯಿಂದ ಹೇಳಲ್ಪಟ್ಟ ದ್ಯುಭ್ವಾದ್ಯಾಯತನನು ತತ್ತು = ಬ್ರಹ್ಮನೇ ಆಗಿದ್ದಾನೆ. ಪ್ರಧಾನವಾಗಲೀ, ವಾಯು, ರುದ್ರ, ಜೀವ ಮೊದಲಾದವರಾಗಲೀ ದ್ಯುಭ್ವಾದ್ಯಾಯತನರಾಗಿಲ್ಲ. ಏಕೆಂದರೆ ಸ್ವಶಬ್ದಾತ್ = ಸ್ವ ಎಂಬ ಶಬ್ದವೇ ಸ್ವಶಬ್ದ. ಆದರಿಂದ ಎಂದರ್ಥ. ವಸ್ತುತಃ ಶ್ರುತಿಯಲ್ಲಿ ಸ್ವ ಎಂಬ ಶಬ್ದವು ಇರುವುದಿಲ್ಲ. ಆದ್ದರಿಂದ ಅದಕ್ಕೆ ಪರ್ಯಾಯಪದವಾದ ಆತ್ಮಶಬ್ದವನ್ನು ಸ್ವೀಕರಿಸಬೇಕು.

'ಸಭಾ ರಾಜಾಮನುಷ್ಯಪೂರ್ವಾ' (ಪಾ.ಸೂ.೨/೪/೨೩) ಎಂಬ ಪಾಣಿನಿಸೂತ್ರದಲ್ಲಿ ರಾಜಾ ಎಂಬ ಶಬ್ದದಿಂದ ಅದರ ಪರ್ಯಾಯಪದವನ್ನು ಸ್ವೀಕರಿಸದಂತೆ ಇಲ್ಲಿಯೂ ಸಹ ತಿಳಿಯಬೇಕು. 'ತಮೇವೈಕಂ ಜಾನಥ ಆತ್ಮಾನಮ್' ಎಂಬುದಾಗಿ ಆತ್ಮಶಬ್ದವಿರುವುದರಿಂದ ಎಂದರ್ಥ.

आत्मशब्दादिति वाच्ये स्वेत्युक्तिः स्वस्य ब्रह्मण एव शब्द इत्यपि विग्रहेणासाधारण्यं ज्ञापयितुम् । तच्छब्दादित्युक्तावपि शब्दविशेषो न ज्ञापितः स्यादिति ।

ಹಾಗಾದರೆ ಸೂತ್ರದಲ್ಲಿ 'ಆತ್ಮಶಬ್ದಾತ್' ಎಂದೇ ಹೇಳಬೇಕಿತ್ತು. ಆದರೂ ಸಹ 'ಸ್ವಶಬ್ದಾತ್' ಎಂದು ಹೇಳಲು ಕಾರಣವಿದೆ. ಸ್ವಸ್ಯ = ತನಗೆ ಅಂದರೆ ಬ್ರಹ್ಮನಿಗೇ ಸಂಬಂಧಪಟ್ಟ ಶಬ್ದ ಎಂಬ ವಿಗ್ರಹದಿಂದ ಆತ್ಮಶಬ್ದದ ಅಸಾಧಾರಣ್ಯವನ್ನು ಸೂಚಿಸಲು ಸ್ವಶಬ್ದಾತ್ ಎಂದು ಹೇಳಿದ್ದಾರೆ. ವಸ್ತುತಃ ಆತ್ಮಶಬ್ದವನ್ನು ಸಂಗ್ರಹಿಸಲು ತಚ್ಛಬ್ದಾತ್ ಎಂದೂ ಸಹ ಹೇಳಬಹುದಿತ್ತು. ಆದರೆ ಅದರಿಂದ ಶಬ್ದವಿಶೇಷವಾದ ಆತ್ಮಶಬ್ದವು ಸೂಚಿತವಾಗುವುದಿಲ್ಲ. ಅದಕ್ಕೋಸ್ಕರ 'ಸ್ವಶಬ್ದಾತ್' ಎಂದೇ ಹೇಳಿರುತ್ತಾರೆ.

जायमानत्वरूपजीवलिङ्गादात्मशब्दः अमुख्यः किं न स्यादित्यत आह-

॥ मुक्तोपसृप्यव्यपदेशात् ॥ १-३-२ ॥

ಜಾಯಮಾನತ್ವವೆಂಬ ಜೀವನ ಲಿಂಗವಿರುವಪ್ರಯುಕ್ತ ಆತ್ಮಶಬ್ದವು ಏಕೆ ಅಮುಖ್ಯವಾಗಬಾರದು? ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ. ಮುಕ್ತೋಪಸೃಪ್ಯವ್ಯಪದೇಶಾತ್ .

द्व्येकयोरित्यादाविव भावप्रधानोऽयम् । उपसृप्यत्वं प्राप्यान्तरशून्यत्वे सति प्राप्यत्वम् । तेनान्तरा प्राप्ये न व्यभिचारः ।

'द्व्येकयोः द्विवचनैकवचने' (೧/೪/೨೨) ಎಂಬ ಪಾಣಿನೀಯ ಸೂತ್ರದಲ್ಲಿ ದ್ವಿಶಬ್ದ ಹಾಗೂ ಏಕಶಬ್ದಗಳು ದ್ವಿತ್ವ ಮತ್ತು ಏಕತ್ವವೆಂಬ ಭಾವಪ್ರಧಾನದಿಂದ ಹೇಗೆ ನಿರ್ದಿಷ್ಟವಾಗಿವೆಯೋ ಅದರಂತೆ ಉಪಸೃಪ್ಯ ಎಂಬ ಪದವು ಉಪಸೃಪ್ಯತ್ವವೆಂಬ ಭಾವಪ್ರಧಾನದಲ್ಲಿ ನಿರ್ದೇಶಿಸಲ್ಪಟ್ಟಿದೆ. ಉಪಸೃಪ್ಯತ್ವ ಎಂದರೆ 'ಪ್ರಾಪ್ಯವಾದ ಮತ್ತೊಂದು ಪದಾರ್ಥವಿಲ್ಲದೆ ತಾನು ಮಾತ್ರ ಪ್ರಾಪ್ಯವಾಗಿದೆ' ಎಂದು. ಹೀಗೆ ಹೇಳಿದ್ದರಿಂದ ಅದರ ಮೊದಲು ಮತ್ತೊಂದು ಪ್ರಾಪ್ಯವಾದದ್ದು ಇದ್ದರೂ ಸಹ ವ್ಯಭಿಚಾರವಿಲ್ಲ. ಅಂದರೆ ವಿಷ್ಣುವನ್ನು ಹೊಂದಿದ ಮೇಲೆ ಮತ್ತೊಬ್ಬರನ್ನು ಹೊಂದಬೇಕಾಗಿಲ್ಲ. ಅವನನ್ನು ಹೊಂದುವ ಮೊದಲು ಬೇರೆ ಸ್ಥಾನಗಳನ್ನು ಹೊಂದಿರಬಹುದು ಎಂದರ್ಥ.

''अमृतस्यैष सेतुः'' इत्यमृतशब्दितमुक्तोपसृप्यत्वव्यपदेशात् नात्मशब्दोऽमुख्य इति योज्यम् । अमृतसेत्विति वाच्ये मुक्तेत्याद्युक्तिः तदर्थोक्त्यर्था । एवमन्यत्रापि ।।

ಅಮೃತಸ್ಯೈಷ ಸೇತುಃ ಎಂಬಲ್ಲಿರುವ ಅಮೃತಶಬ್ದದಿಂದ ಮುಕ್ತಪ್ರಾಪ್ಯತ್ವವು ಹೇಳಲ್ಪಟ್ಟಿದೆ. ಇದರಿಂದ ಆತ್ಮಶಬ್ದವು ಅಮುಖ್ಯವಲ್ಲವೆಂದು ತಿಳಿಯುತ್ತದೆಂದು ಯೋಜನೆ ಮಾಡಿಕೊಳ್ಳಬೇಕು. ಅಮೃತಸೇತು ವ್ಯಪದೇಶಾಚ್ಚ ಎಂದೇ ಸೂತ್ರದಲ್ಲಿ ಹೇಳಬಹುದಿತ್ತು. ಆದರೆ ಮುಕ್ತೋಪಸೃಪ್ಯವ್ಯಪದೇಶಾತ್ ಎಂದು ಹೇಳಿರುವುದು ಅಮೃತಸೇತುಪದದ ಅರ್ಥವನ್ನು ಹೇಳುವುದಕ್ಕಾಗಿ ಎಂದು ತಿಳಿಯಬೇಕು. ಇದರಂತೆ ಬೇರೆ ಕಡೆಯೂ ಸಹ ತಿಳಿದುಕೊಳ್ಳಬೇಕು.

रुद्रप्रकृती किं न स्याताम् । ''रुद्रो वा व लोकाधारः भूतं च भवच्च भविष्यच्च'' इत्यदेः । अत आह -

।। नानुमानमतच्छब्दात् ।। १-३-३ ।।

'ರುದ್ರೋ ವಾವ ಲೋಕಾಧಾರಃ' 'ಭೂತಂ ಚ ಭವಚ್ಚ ಭವಿಷ್ಯಚ್ಚ' ಇತ್ಯಾದಿ ಪ್ರಮಾಣಗಳ ಆಧಾರದಿಂದ ರುದ್ರ ಅಥವಾ ಪ್ರಕೃತಿಗಳು ಏಕೆ ದ್ಯುಭ್ವಾದ್ಯಾಯತನರಾಗಬಾರದು? ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ. 'ನಾನುಮಾನಮತಚ್ಛಬ್ದಾತ್'

द्युभ्वाद्यायतनमित्यस्ति । अनुमीयत इत्यनुमानशब्देन वा अनुमानशब्दाच्छैषिकेऽणि कृते अनुमानशब्देन वा अनुमानप्रधानपाशुपत-सांख्यसिद्धस्द्रप्रधाने ग्रह्ये ।

'ದ್ಯುಭ್ವಾದ್ಯಾಯತನಂ' ಎಂಬ ಪದವನ್ನು ಇಲ್ಲಿಯೂ ಅನುವೃತ್ತಿಮಾಡಿಕೊಳ್ಳಬೇಕು. 'ಅನುಮಾನದಿಂದ ಸಾಧಿಸಲ್ಪಡುವುದು' ಎಂಬರ್ಥದಲ್ಲಿರುವ ಅನುಮಾನಶಬ್ದದಿಂದ ಅಥವಾ ಅನುಮಾನಶಬ್ದದ ಮುಂದೆ 'ತಸ್ಯೇದಂ' ಎಂಬ ಪಾಣಿನಿಯ ಸೂತ್ರದಿಂದ ಅಣ್ ಪ್ರತ್ಯಯವನ್ನು ಸೇರಿಸಿದಾಗ ಅನುಮಾನಂ ಎಂಬ ರೂಪವು ಸಿದ್ಧವಾಗುತ್ತದೆ. ಹೀಗೆ ಶೈಷಿಕಅಣ್ ಪ್ರತ್ಯಯವನ್ನು ಸೇರಿಸಿದಾಗ ನಿಷ್ಪನ್ನವಾಗುವ ಅನುಮಾನಶಬ್ದದಿಂದಾಗಲೀ ಅಥವಾ ಅನುಮಾನವನ್ನೇ ಪ್ರಧಾನವನ್ನಾಗಿ ಭಾವಿಸುವ ಪಾಶುಪತ ಅಥವಾ ಸಾಂಖ್ಯಮತಗಳಿಂದಾಗಲೀ ಸಿದ್ಧವಾಗುವ ರುದ್ರ ಹಾಗೂ ಪ್ರಕೃತಿಗಳನ್ನು ವಿವಕ್ಷಿಸಬೇಕು.

रुद्रः प्रधानं च न द्युभ्वाद्यायतनम् । अतच्छब्दात् । तयोः रुद्रप्रकृत्योर्भस्मधरोग्रत्वत्रिगुणत्वादिशब्दानामभावादित्यर्थः ।

ಸೂತ್ರಾರ್ಥ ಹೀಗಿದೆ - ರುದ್ರ, ಪ್ರಧಾನ ಮೊದಲಾದವರು ದ್ಯುಭ್ವಾದ್ಯಾಯತನರಲ್ಲ. ಏಕೆಂದರೆ, ಅತಚ್ಛಬ್ದಾತ್ = ರುದ್ರ ಹಾಗೂ ಪ್ರಕೃತಿಗಳಿಗೆ ಸಂಬಂಧಿಸಿದ ಭಸ್ಮಧರ, ಉಗ್ರತ್ವ, ತ್ರಿಗುಣತ್ವ ಮೊದಲಾದ ಶಬ್ದಗಳಿಲ್ಲದಿರುವುದರಿಂದ ಎಂದರ್ಥ.

रुद्रपिनाक्यादिशब्दानाम् ''अन्यनाम्नां गतिर्विष्णुः'' इत्यादेर्न तच्छब्दत्वमिति भावः । अतद्धर्मेतिवदयं निर्देशो बोध्यः ।

ರುದ್ರ, ಪಿನಾಕೀ ಮೊದಲಾದ ಶಬ್ದಗಳು 'ಅನ್ಯನಾಮ್ನಾಂ ಗತಿರ್ವಿಷ್ಣುಃ' ಇತ್ಯಾದಿಯಾದ ಪ್ರಮಾಣಗಳಿಗೆ ಅನುಸಾರಿಯಾಗಿ ರುದ್ರನ ಶಬ್ದಗಳಲ್ಲವೆಂದು ತಿಳಿಯಬೇಕು.ಅತಚ್ಛಬ್ದ ಎಂಬುದು ಅತದ್ಧರ್ಮ ಎಂಬ ಶಬ್ದದಂತೆ ನಿಷ್ಪನ್ನವಾಗಿದೆಯೆಂದು ತಿಳಿಯಬೇಕು.

रुद्रप्रकृत्योर्द्वयोरुपादानाय वा टीकोक्तरीत्या पूर्वपक्षयुक्तिसूचनाय वा तदागमानाममानत्वसूचनाय वा वक्ष्यमाणदिशा वृत्त्यन्तरसूचनाय वा नानुमानमित्युक्तिः ।

ರುದ್ರ ಹಾಗೂ ಪ್ರಕೃತಿಗಳೆರಡನ್ನೂ ಸ್ವೀಕರಿಸುವುದಕ್ಕಾಗಿ ಅಥವಾ ಟೀಕೆಯಲ್ಲಿ ಹೇಳಿದಂತೆ ಪೂರ್ವಪಕ್ಷಯುಕ್ತಿಯನ್ನು ಸೂಚಿಸುವುದಕ್ಕಾಗಿ ಅಥವಾ ಪಾಶುಪತಾದ್ಯಾಗಮಗಳ ಅಪ್ರಾಮಾಣ್ಯವನ್ನು ಸೂಚಿಸುವುದಕ್ಕಾಗಿ ಅಥವಾ ಮುಂದೆ ಹೇಳುವ ಪ್ರಕಾರ ಮತ್ತೊಂದು ವ್ಯಾಖ್ಯಾನವನ್ನು ಸೂಚಿಸುವುದಕ್ಕಾಗಿ 'ನಾನುಮಾನಮ್' ಎಂದು ಸೂತ್ರಕಾರರು ಹೇಳಿರುತ್ತಾರೆ.

जीववायू किमत्र वाच्यौ न स्याताम् । जायमान इति लिङ्गात् ''वायुना वै गौतम'' इत्यादेः । अत आह -

॥ प्राणभृच्च ॥ १-३- ४ ॥

ಜಾಯಮಾನತ್ವ ಎಂಬ ಲಿಂಗವಿರುವುದರಿಂದ ಹಾಗೂ 'ವಾಯುನಾ ವೈ ಗೌತಮಃ' ಇತ್ಯಾದಿ ಶ್ರುತಿಗಳು ಪ್ರಮಾಣವಾಗಿರುವುದರಿಂದ ಜೀವ ಹಾಗೂ ವಾಯು ಇವರುಗಳು ಏಕೆ ದ್ಯುಭ್ವಾದ್ಯಾಯತನರಾಗುವುದಿಲ್ಲ? ಎಂಬ ಆಕ್ಷೇಪಕ್ಕೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ. 'ಪ್ರಾಣಭೃಚ್ಚ'

चशब्दान्नेति स्वशब्दादिहेतवश्चानुकृष्यन्ते । वायुश्च समुच्चीयते । आत्मशब्दमुक्तोपसृप्यत्वात् तच्छब्देभ्यो जीववायू न द्युभ्वाद्यायतनमित्यर्थः। जायमानादिशब्दोऽभिव्यक्त्यादिना विष्णौ युक्त इति भावः ॥

'ಚ' ಶಬ್ದದಿಂದ 'ನ' ಎಂಬುದನ್ನು ಸ್ವಶಬ್ದ ಮೊದಲಾದ ಹೇತುಗಳನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಮತ್ತು ವಾಯುವನ್ನೂ ಸಮುಚ್ಚಯ ಮಾಡಬೇಕು. ಆತ್ಮಶಬ್ದ, ಮುಕ್ತೋಪಸೃಪ್ಯತ್ವ ಮತ್ತು ಜೀವ ಹಾಗೂ ವಾಯುಗಳಲ್ಲಿ ಪ್ರಸಿದ್ಧವಾದ ಶಬ್ದವಿಲ್ಲದಿರುವುದು ಈ ಹೇತುಗಳಿಂದ ಜೀವ ಹಾಗೂ ವಾಯುಗಳು ದ್ಯುಭ್ವಾದ್ಯಾಯತನರಾಗುವುದಿಲ್ಲವೆಂದರ್ಥ.

'ಜನಿ ಪ್ರಾದುರ್ಭಾವೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಜಾಯಮಾನಶಬ್ದಕ್ಕೆ ಪ್ರಾದುರ್ಭಾವವೆಂಬ ಅರ್ಥವನ್ನು ವಿಷ್ಣುವಿನಲ್ಲಿ ಹೇಳುವುದು ಯುಕ್ತವೇ ಆಗಿದೆಯೆಂದು ತಿಳಿಯಬೇಕು.

जीव इति वाच्ये'प्राणभृत्' इत्युक्तिः सह प्राणैः इत्युक्तप्राणभृत्वम् तस्य युक्तमिति पूर्वपक्षयुक्ति सूचनाय ।

ವಸ್ತುತಃ ಸೂತ್ರದಲ್ಲಿ 'ಪ್ರಾಣಭೃತ್' ಎಂದು ಹೇಳುವ ಬದಲು ಜೀವಃ ಎಂದು ಹೇಳಬಹುದಿತ್ತು. ಆದರೆ 'ಸಃ ಪ್ರಾಣೈಶ್ಚ ಸರ್ವೈಃ' ಎಂಬಲ್ಲಿ ಹೇಳಲ್ಪಟ್ಟ ಪ್ರಾಣಾಧಾರತ್ವವು ಜೀವನಲ್ಲಿ ಯುಕ್ತವಾಗಿದೆ.ಎಂಬ ಪೂರ್ವಪಕ್ಷಯುಕ್ತಿಯನ್ನು ಸೂಚಿಸುವ ಉದ್ದೇಶಕ್ಕಾಗಿ ಪ್ರಾಣಭೃತ್ ಎಂದೇ ಹೇಳಿದ್ದಾರೆ.

योग विभाग उत्तरार्थः । व्याकरणे 'रञ्जेश्च' इत्यादिवत् अत्र श्रुतौ जीवमात्रलिङ्गसत्वेन तदैक्येस्यैव अग्रेनिरासात् । अत एव अस्य स्वशब्देनोक्तिः ।

ವ್ಯಾಕರಣದಲ್ಲಿ 'ರಂಜೈಶ್ಚ' ಎಂಬ ಸೂತ್ರವನ್ನು ಮುಂದಿನ ಸೂತ್ರದಲ್ಲಿ ಅನುವೃತ್ತಿ ಮಾಡುವುದಕ್ಕಾಗಿ ಪ್ರತ್ಯೇಕಗೊಳಿಸಲಾಗಿದೆ. ಅದರಂತೆ ಇಲ್ಲಿಯೂ ಸಹ 'ಪ್ರಾಣಭೃಚ್ಚ' ಎಂಬ ಸೂತ್ರವನ್ನುಮುಂದಿನ ಸೂತ್ರದಲ್ಲಿ ಅನುವೃತ್ತಿ ಮಾಡುವುದಕ್ಕಾಗಿ ಪ್ರತ್ಯೇಕವಾಗಿ ರಚಿಸಿದ್ದಾರೆಂದು ತಿಳಿಯಬೇಕು. ಏಕೆಂದರೆ 'ಯಸ್ಮಿನ್ ದ್ಯೌಃ' ಎಂಬ ಶ್ರುತಿಯಲ್ಲಿ ಜೀವನ ಲಿಂಗವಷ್ಟೇ ಇರುವುದರಿಂದ ಅವನಿಂದ ಐಕ್ಯವನ್ನು ಮುಂದೆ ನಿರಾಕರಿಸುತ್ತಾರೆ. ಆದ್ದರಿಂದಲೇ ಜೀವನಲ್ಲಿ ಪ್ರಸಿದ್ಧವಾಗಿರುವ 'ಪ್ರಾಣಭೃತ್' ಎಂಬ ಶಬ್ದವನ್ನು ಇಲ್ಲಿ ಹೇಳಿದ್ದಾರೆ.

ननूभयप्रापकाबाधेन जीवब्रह्माभेदोऽस्त्वित्यत आह -

॥ भेदव्यपदेशात् ॥ १-३-५ ॥

ಜೀವಪ್ರಾಪಕವಾದ ಲಿಂಗಗಳು ಮತ್ತು ಬ್ರಹ್ಮಪ್ರಾಪಕವಾದ ಲಿಂಗಗಳೆರಡೂ ಅಬಾಧಿತ-ವಾಗಿರುವುದರಿಂದ ಜೀವಬ್ರಹ್ಮ ಅಭೇದವನ್ನೇ ಒಪ್ಪಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. ಭೇದವ್ಯಪದೇಶಾತ್ '

''जुष्टं यदा पश्यत्यन्यमीशम्'' इतीहैव जीवब्रह्मभेदव्यपदेशान्नैक्यमित्यर्थः।

ಸೂತ್ರಾರ್ಥ ಹೀಗಿದೆ -- 'ಜುಷ್ಟಂ ಯದಾ ಪಶ್ಯತಿ ಅನ್ಯಮೀಶಮ್' ಎಂಬ ಮಾಂಡೂಕ್ಯೋಪನಿಷತ್ತಿನಲ್ಲಿ ಜೀವಬ್ರಹ್ಮಭೇದವನ್ನು ಹೇಳಿರುವುದರಿಂದ ಜೀವಬ್ರಹ್ಮೈಕ್ಯವನ್ನು ಹೇಳಬಾರದೆಂದರ್ಥ.

ईशशब्दं ब्रह्मेति कुतः? येन जीवब्रह्मभेदोक्तिः स्यादित्यत आह -

॥ प्रकरणात् ॥ १-३-६ ॥

ಈಶಶಬ್ದವಾಚ್ಯನು ಬ್ರಹ್ಮನೇ ಆಗಿದ್ದಾನೆಂದು ಹೇಗೆ ಹೇಳುತ್ತೀರಿ? ಒಂದುವೇಳೆ ಬ್ರಹ್ಮನು ಈಶಶಬ್ದವಾಚ್ಯನಾದಲ್ಲಿ ಮಾತ್ರ ಜೀವಬ್ರಹ್ಮರಿಗೆ ಭೇದವನ್ನು ಹೇಳಬಹುದು. ಈ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ. 'ಪ್ರಕರಣಾತ್'

''द्वे विद्ये वेदितव्ये'' इति परविद्याविषयवस्तुन आरभ्याधीतत्वेन ब्रह्मप्रकरणादीशशब्दार्थो ब्रह्मेत्यर्थः ॥

ಸೂತ್ರಾರ್ಥ ಹೀಗಿದೆ - 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಮಾಂಡೂಕ್ಯೋಪನಿಷತ್ತಿನಲ್ಲಿ ಪರವಿದ್ಯೆಗೆ ವಿಷಯವಾದ ಯಾವ ವಸ್ತುವಿದೆಯೋ ಅದನ್ನೇ ಪ್ರಾರಂಭದಲ್ಲಿ ಹೇಳಿ ಮುಂದೆ ವಿಷಯವನ್ನು ನಿರೂಪಣೆ ಮಾಡಿರುವುದರಿಂದ ಸಂಪೂರ್ಣಪ್ರಕರಣವು ಬ್ರಹ್ಮಪರವೆಂದು ಸಿದ್ಧವಾಗುತ್ತದೆ. ಆದ್ದರಿಂದ ಅಲ್ಲಿರುವ ಈಶಶಬ್ದವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆಂದರ್ಥ.

न केवलं श्रुतिबलाद्भेदः, लिङ्गादपीत्याह -

॥ स्थित्यदनाभ्यां च ॥ १-३-७ ॥

ಶ್ರುತಿಬಲದಿಂದಷ್ಟೇ ಅಲ್ಲ ಲಿಂಗದ ಬಲದಿಂದಲೂ ಸಹ ಭೇದವು ಸಿದ್ಧವಾಗುತ್ತದೆಂದು ಹೇಳುತ್ತಿದ್ದಾರೆ. 'ಸ್ಥಿತ್ಯದನಾಭ್ಯಾಂ ಚ'.

नैक्यमित्यस्ति । स्थितिः कर्मफलोपजीवनं विनाऽवस्थानम् । अदनं तदुपजीवनम् । ताभ्यां च जीवब्रह्मणोर्नैक्यमित्यर्थः ।

ಸೂತ್ರಾರ್ಥ ಹೀಗಿದೆ - 'ನ' 'ಐಕ್ಯಂ' ಎಂಬೆರೆಡು ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಸ್ಥಿತಿಃ ಎಂದರೆ ಕರ್ಮಫಲವನ್ನು ಉಪಜೀವನ ಮಾಡದೇ ಇರುವವನು. ಅದನ ಎಂದರೆ ಅದನ್ನು ಉಪಜೀವಿಸಿಕೊಂಡಿರುವವನು. ಇವೆರಡರಿಂದ ಜೀವಬ್ರಹ್ಮರಿಗೆ ಅಭೇದವಿಲ್ಲವೆಂದು ತಿಳಿಯುತ್ತದೆ.

''अन्यः पिप्पलं स्वाद्वत्त्यनश्नन्यो अभिचाकशीति'' इति जीवेशयोरदनतद्रहितस्थित्युक्तेरिति भावः ।

'ಅನ್ಯಃ ಪಿಪ್ಪಲಂ ಸ್ವಾದ್ವತ್ತ್ಯನನಶ್ನನ್ಯೋ ಅಭಿಚಾಕಶೀತಿ' ಎಂಬುದಾಗಿ ಮಾಂಡೂಕ್ಯೋಪನಿಷತ್ತಿನಲ್ಲಿ ಜೀವೇಶ್ವರರಿಗೆ ತಿನ್ನುವಿಕೆ ಮತ್ತು ತಿನ್ನದಿರುವಿಕೆ ಎಂಬ ಧರ್ಮವನ್ನು ಹೇಳಿರುವುದರಿಂದ ಇಬ್ಬರಿಗೂ ಭೇದವಿದೆಯೆಂದು ತಿಳಿಯಬೇಕು.

श्रुतावदनस्यादित्वेन अदनस्थितिभ्यामिति वाच्ये स्थितेरीशसम्बन्धित्वेनाभ्यर्हितत्वादल्पाक्षरत्वाच्च व्यत्यासः ।

ಶ್ರುತಿಯಲ್ಲಿ ಅದನವನ್ನು ಮೊದಲು ಹೇಳಲಾಗಿದೆ. ಅದಕ್ಕನುಗುಣವಾಗಿ ಸೂತ್ರದಲ್ಲಿಯೂ ಅದನವನ್ನೇ ಮೊದಲು ಹೇಳಿ 'ಅದನಸ್ಥಿತಿಭ್ಯಾಂ' ಎಂದು ಹೇಳಬೇಕಿತ್ತು. ಆದರೂ ಸಹ ಸ್ಥಿತಿಯು ಈಶನಿಗೆ ಸಂಬಂಧಿಸಿದ್ದರಿಂದ ಶ್ರೇಷ್ಠವಾಗಿದೆ. ಮತ್ತು ಸ್ಥಿತಿಶಬ್ದವು ಅದನ ಶಬ್ದಕ್ಕಿಂತ ಅಲ್ಪಾಕ್ಷರವುಳ್ಳದ್ದಾಗಿದೆ. ಈ ಎರಡು ಕಾರಣಗಳಿಂದ ಅದನಶಬ್ದವನ್ನು ಅನಂತರ ಹೇಳಿ ಸ್ಥಿತಿಶಬ್ದವನ್ನು ಮೊದಲು ಹೇಳಿದ್ದಾರೆ.

अत्र नानुमानमतच्छब्दादित्यनुवृत्त्या अनुमानं भेदमिथ्यात्वे न मानम्। तद्विरुद्धमतत् भेदसत्यत्वम् । अतच्छब्दात् भेदसत्यत्वबोधकशब्दात् । अनुमानमूलभूतशब्दाभावाच्चेति वृत्त्यन्तरमुक्त्वा भेदमिथ्यात्वं निरसनीयामिति वदन्ति ।।१।।

'ನಾನುಮಾನಮತಚ್ಛಬ್ದಾತ್' ಎಂಬ ಸೂತ್ರವನ್ನು ಅನುವೃತ್ತಿಮಾಡಿ ಅನುಮಾನವು ಭೇದಮಿಥ್ಯಾತ್ವವಿಷಯದಲ್ಲಿ ಪ್ರಮಾಣವಲ್ಲವೆಂದು ತಿಳಿಸಿದ್ದಾರೆ. 'ಅತತ್' ಎಂದರೆ

ಭೇದಮಿಥ್ಯಾತ್ವಕ್ಕೆ ವಿರುದ್ಧವಾದ ಭೇದಸತ್ಯತ್ವವು ಎಂದರ್ಥ. 'ಅತಶ್ಚಬ್ದಾತ್' ಎಂದರೆ ಭೇದಸತ್ಯತ್ವಕ್ಕೆ ಬೋಧಕವಾದ ಶ್ರುತಿಯಿರುವುದರಿಂದ ಮತ್ತು ಅನುಮಾನಕ್ಕೆ ಮೂಲಭೂತವಾದ ಶ್ರುತಿಯಿಲ್ಲದಿರುವುದರಿಂದ ಎಂದು ಮತ್ತೊಂದು ವ್ಯಾಖ್ಯಾನವನ್ನು ತಿಳಿದು, ಭೇದಮಿಥ್ಯಾತ್ವವನ್ನು ನಿರಾಕರಿಸಬೇಕೆಂದು ಹೇಳುತ್ತಾರೆ.

॥ ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ದ್ಯುಭ್ವಾದ್ಯಧಿಕರಣವು ಮುಗಿಯಿತು ॥

ಅದ್ವೈತ-ವಿಶಿಷ್ಟಾದ್ವೈತಮತದಲ್ಲಿ ದ್ಯುಭ್ವಾದ್ಯಧಿಕರಣ ಮತ್ತು ವಿಮರ್ಶೆ

ಶಾಂಕರ ಭಾಷ್ಯದ ಪ್ರಕಾರ ಸೂತ್ರಾರ್ಥ ಹೀಗಿದೆ - 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯಲ್ಲಿ ಏಷಃ = ಹಿಂದೆ ದ್ಯುಭ್ವಾದ್ಯಾಯತನನೆಂದು ಹೇಳಲ್ಪಟ್ಟಿರುವವನು, ಅಮೃತಸ್ಯ = ಅಮೃತಕ್ಕೆ ಸಂಬಂಧಿಯಾಗಿದ್ದಾನೆ, ಸೇತುಃ = ಸೇತುವೂ ಸಹ ಆಗಿರುತ್ತಾನೆ. ಹೀಗೆ ಕೇಳಿಸುತ್ತಿದೆ. ಇದರಿಂದ ಯಾವಾತನು ಅಮೃತಸೇತು-ವಾಗಿದ್ದಾನೋ, ಅವನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ತಿಳಿಯುತ್ತದೆ. ಬ್ರಹ್ಮನಿಗಿಂತ ಬೇರೊಂದು ಪದಾರ್ಥವು ಅಮೃತವಾಗಿದ್ದಲ್ಲಿ, ಅದಕ್ಕೆ ಸಂಬಂಧಿಯಾದವನು ಬ್ರಹ್ಮನೆಂದು ಹೇಳಬಹುದಿತ್ತು. ಆದರೆ ಬ್ರಹ್ಮನೇ ಅಮೃತಸ್ವರೂಪನಾದ್ದರಿಂದ 'ಅಮೃತಸ್ಯ' ಎಂದು ಷಷ್ಠ್ಯಂತ ಪದಪ್ರಯೋಗವನ್ನು ಬ್ರಹ್ಮನಲ್ಲಿ ಹೇಳಲಾಗದು.

ಸೇತುವು ಪರಿಮಿತಿವುಳ್ಳದ್ದಾಗಿರುತ್ತದೆ. ಬ್ರಹ್ಮನು ಅಪರಿಮಿತನಾದ್ದರಿಂದ ಸೇತುವಾಗಲೂ ಸಹ ಸಾಧ್ಯವಿಲ್ಲ. ಆದ್ದರಿಂದ ದ್ಯುಭ್ವಾದ್ಯಾಯತನನಾದವನು ಬ್ರಹ್ಮನಲ್ಲ. ಹೊರತು ರುದ್ರ, ವಾಯು, ಪ್ರಕೃತಿ, ಜೀವ, ಹಿರಣ್ಯಗರ್ಭ ಇವರಲ್ಲಿ ಯಾರಾದರೊಬ್ಬರೂ ಸಹ ದ್ಯುಭ್ವಾದ್ಯಾಯತನರಾಗಬಹುದೆಂದು ಪೂರ್ವಪಕ್ಷ.

ಯಾವುದು ಸೇತುವಾಗಿರುತ್ತದೋ, ಅದು ಜಲವನ್ನು ಧಾರಣೆ ಮಾಡಿರುತ್ತದೆ. ಪ್ರಧಾನಾದಿಗಳನ್ನು ಸೇತುವೆಂದು ಹೇಳಿದರೆ ಜಲವನ್ನು ಧಾರಣೆಮಾಡಿರುವಿಕೆಯೆಂಬುದನ್ನು ಅವುಗಳಲ್ಲಿ ಉಪಪನ್ನ-ವಾಗುವುದಿಲ್ಲ. ಆದ್ದರಿಂದ ರೂಢವಾದ ಸೇತುತ್ವವನ್ನು ಪೂರ್ವಪಕ್ಷಕಾರರಿಗೆ ವಿವಕ್ಷಿಸಲು ಸಾಧ್ಯವಿಲ್ಲ.

ಇನ್ನು ಪೂರ್ವಪಕ್ಷಕಾರರು 'ಸೇತು'ಶಬ್ದಕ್ಕೆ ಯೌಗಿಕಾರ್ಥವನ್ನು ಹೇಳಬೇಕು. ಹಾಗಾದರೆ ಸಿದ್ಧಾಂತದಲ್ಲಿಯೂ ಯೌಗಿಕಾರ್ಥವನ್ನು ಒಪ್ಪಿ ಬ್ರಹ್ಮನಲ್ಲಿಯೇ ಅಮೃತಸೇತುತ್ವವನ್ನು ಉಪಪಾದಿಸ-ಬಹುದು - ಅಮೃತಪದವನ್ನು ಭಾವಪ್ರಧಾನ ನಿರ್ದೇಶ ಮಾಡಿದಾಗ ಮೋಕ್ಷವೆಂಬರ್ಥವು ಲಭಿಸುತ್ತದೆ. ಇಂತಹ ಮೋಕ್ಷಕ್ಕೆ ಧಾರಕನಾದ್ದರಿಂದ ಬ್ರಹ್ಮನು ಅಮೃತಸೇತುವೆನಿಸಿದ್ದಾನೆ.

ಅಥವಾ 'ಅಮೃತಸ್ಯೈಷಃ' ಎಂಬಲ್ಲಿರುವ 'ಏತತ್' ಶಬ್ದವು ಬ್ರಹ್ಮಪರವಲ್ಲ ಹೊರತಾಗಿ, ಜ್ಞಾನಪರವಾಗಿದೆ. ವಸ್ತುತಃ 'ತಮೇವೈಕಂ ಜಾನಥ' ಎಂಬ ಹಿಂದಿನ ಶ್ರುತಿಯಲ್ಲಿ 'ತಮ್' ಎಂಬ ಪದದಿಂದ ಬ್ರಹ್ಮನೇ ಉದ್ದೇಶ್ಯನಾಗಿ ಪ್ರಕೃತನಾಗಿದ್ದಾನೆ. ಆದರೂ ಸಹ ಅಂತಹ ಬ್ರಹ್ಮನಲ್ಲಿ 'ಜಾನಥ' ಎಂಬುದಾಗಿ ಜ್ಞಾನವನ್ನು ವಿಧಾನ ಮಾಡುತ್ತಿದೆ. ಉದ್ದೇಶ್ಯಕ್ಕಿಂತ ವಿಧೇಯವೇ ಪ್ರಧಾನವಾಗಿರುತ್ತದೆ. ಇಲ್ಲಿ ಪ್ರಧಾನವಾದ 'ಜಾನಥ' ಎಂಬಲ್ಲಿರುವ ಜ್ಞಾನವನ್ನು 'ಏಷಃ' ಎಂಬ ಪದವು ಪರಾಮರ್ಶಿಸುತ್ತಿದೆ. ನಪುಂಸಕಲಿಂಗದಲ್ಲಿರುವ ಜ್ಞಾನವನ್ನು 'ಏಷಃ' ಎಂಬ ಪುಲ್ಲಿಂಗಪದ ಪ್ರಯೋಗದಿಂದ ಹೇಗೆ ಪರಾಮರ್ಶಿಸಲು ಸಾಧ್ಯ ? ಎಂದರೆ, 'ಶೈತ್ಯಂ ಹಿ ಯತ್ ಸಾ ಪ್ರಕೃರ್ತಿಜಲಸ್ಯ' ಎಂಬಲ್ಲಿ 'ಶೈತ್ಯಂ' ಎಂಬುದು ನಪುಂಸಕಲಿಂಗದಲ್ಲಿದ್ದರೂ 'ಸಾ' ಎಂಬುದಾಗಿ ಸ್ತ್ರೀಲಿಂಗನಿರ್ದೇಶವನ್ನು 'ಪ್ರಕೃತಿಃ' ಎಂಬ ಪದಕ್ಕೆ ಅನುಸಾರಿಯಾಗಿ ಪ್ರಯೋಗಿಸಿರುವುದು ಕಾಣಿಸುತ್ತದೆ. ಅದರಂತೆ ಪ್ರಕೃತದಲ್ಲಿಯೂ 'ಸೇತುಃ' ಎಂಬ ಪದವು ಪುಲ್ಲಿಂಗದಲ್ಲಿರುವುದರಿಂದ ಅದನ್ನನುಸರಿಸಿ 'ಏಷಃ' ಎಂದು ಪುಲ್ಲಿಂಗವನ್ನೇ ಪ್ರಯೋಗಿಸಲಾಗಿದೆ. ಆದ್ದರಿಂದ 'ತಮೇವೈಕಮ್' ಎಂಬ ಶ್ರುತಿಗೆ 'ಪರಮಾತ್ಮನನ್ನೇ ತಿಳಿಯಿರಿ. ಬೇರೆ ಮಾತುಗಳನ್ನು ಆಡಬೇಡಿ. ಈ ಜ್ಞಾನವೇ ಮೋಕ್ಷಕ್ಕೆ ಸಾಧನವಾಗಿದೆ' ಎಂದು ಅರ್ಥವನ್ನು ಹೇಳಿದಂತಾಯಿತು. ಹೀಗೆ ಸೇತುಶಬ್ದಕ್ಕೆ ಸಾಧನವೆಂದು ಗೌಣಾರ್ಥವನ್ನು ಸ್ವೀಕರಿಸಿದಾಗ ಅಮೃತಸೇತುತ್ವವು ಬ್ರಹ್ಮನೇ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಬಾಧಕವಾಗುವುದಿಲ್ಲ. ಇಷ್ಟು ಸಿದ್ಧಾಂತ.

ಅದ್ವೈತಿಗಳ ಈ ಅಧಿಕರಣ ರಚನೆಯು ಅಸಾಧುವಾಗಿದೆ. ಏಕೆಂದರೆ ಬ್ರಹ್ಮನಲ್ಲಿ ಅತ್ಯಂತ ಅಸಂಭಾವಿತವಾದ ಜಾಯಮಾನತ್ವಲಿಂಗದಿಂದಲೇ ಸುಲಭವಾಗಿ ಪೂರ್ವಪಕ್ಷವನ್ನು ಮಾಡುವುದು ಉಚಿತವಾಗಿದೆ. ಅದನ್ನು ಬಿಟ್ಟು ಅಮೃತಸೇತುತ್ವ ಲಿಂಗವು ಉಪಪನ್ನವಾಗುವುದಿಲ್ಲವೆಂಬ ಪೂರ್ವಪಕ್ಷ ಮಾಡುವುದು ಉಚಿತವಲ್ಲ. ಮತ್ತು ಪೂರ್ವಪಕ್ಷ ಮಾಡುವಾಗ ಬ್ರಹ್ಮನನ್ನು ಬಿಟ್ಟು ಬೇರೆ ಯಾವುದೇ

ಪದಾರ್ಥವು ಅಮೃತಸ್ವರೂಪವಲ್ಲ ಎಂದು ಹೇಳಿದರು. ಆದ್ದರಿಂದ ಅಮೃತಸೇತುತ್ವವನ್ನು ಜೀವನಲ್ಲಿಯೂ ಸಹ ಉಪಪಾದಿಸುವುದು ಕಷ್ಟವೇ ಆಗಿದೆ. ಅಮೃತಸ್ವರೂಪನೇ ಆಗದಿರುವ ಜೀವನು ಅಮೃತಕ್ಕೆ ಆಶ್ರಯನಾಗಲು ಹೇಗೆ ಸಾಧ್ಯ ? ಮತ್ತು ಅದ್ವೈತಸಿದ್ಧಾಂತದಲ್ಲಿ ಜಾಯಮಾನತ್ವವೆಂಬ ಪೂರ್ವಪಕ್ಷ ಲಿಂಗಕ್ಕೆ ಸಮಾಧಾನವನ್ನು ಹೇಳಿರುವುದಿಲ್ಲ.

ಅಮೃತ ಶಬ್ದಕ್ಕೆ ಭಾವಪ್ರಧಾನ ನಿರ್ದೇಶ ಮಾಡಿ ಮೋಕ್ಷವೆಂಬರ್ಥವನ್ನು ಅಂಗೀಕರಿಸಿದರೂ ಸಹ ಅದ್ವೈತಮತದಲ್ಲಿ ಮೋಕ್ಷಕ್ಕೆ ಬ್ರಹ್ಮನು ಆಶ್ರಯನಾಗಿದ್ದಾನೆಂದು ಸಮರ್ಥಿಸಲು ಬರುವುದಿಲ್ಲ. ಏಕೆಂದರೆ ಸತ್ಯಸ್ವರೂಪವಾದ ಮೋಕ್ಷವು ಬ್ರಹ್ಮಸ್ವರೂಪವಾಗಿದೆಯೆಂದು ಅವರ ವಾದ. ಬ್ರಹ್ಮಸ್ವರೂಪವೇ ಆಗಿರುವ ಮೋಕ್ಷಕ್ಕೆ ಬ್ರಹ್ಮನು ಹೇಗೆ ತಾನೆ ಧಾರಕನಾಗುತ್ತಾನೆ ?

ಇನ್ನು 'ನ ಸನ್ನಾಸನ್ನ ಸದಸತ್ ನಾನಿರ್ವಾಚ್ಯಶ್ಚ ತತ್ಕ್ಷಯಃ' ಎಂಬ ಪಂಚಮ ಪ್ರಕಾರವನ್ನೇ ಮೋಕ್ಷವೆಂದು ಹೇಳಬೇಕು. ಆದರೆ ಅವಿದ್ಯೆಯು ಜೀವಾಶ್ರಿತವಾಗಿದೆಯೆಂಬ ಪಕ್ಷವನ್ನು ವಿವಕ್ಷಿಸಿದರೆ ಅವಿದ್ಯಾಧ್ವಂಸರೂಪವಾದ ಮೋಕ್ಷವೂ ಸಹ ಜೀವಾಶ್ರಿತವೇ ಆಗಬೇಕು. ಅಂದರೆ ಧ್ವಂಸ ಮತ್ತು ಪ್ರತಿಯೋಗಿಗಳಿಗೆ ಸಾಮಾನ್ಯಾಧಿಕರಣ್ಯವು ಸರ್ವಾನುಮತವಾಗಿರುವುದರಿಂದ ಮೋಕ್ಷಕ್ಕೆ ಆಶ್ರಯನು ಜೀವನೇ ಆಗುತ್ತಾನೆ ಹೊರತು, ಬ್ರಹ್ಮನಲ್ಲ.

ಅವಿದ್ಯೆಯು ಚಿನ್ಮಾತ್ರಾಶ್ರಿತವಾಗಿದೆಯೆಂಬ ವಿವರಣಪಕ್ಷವನ್ನು ಒಪ್ಪಿದರೆ ಮೋಕ್ಷವು ಬಂಧಕ್ಕೆ ಆಶ್ರಯನಾದ ಜೀವನಲ್ಲಿಯೇ ಬರುತ್ತದೆ ಹೊರತು, ಬ್ರಹ್ಮನಲ್ಲಿ ಬರುವುದಿಲ್ಲ. ಯಾರಿಗೆ ಬಂಧವಾಗಿರುತ್ತದೋ, ಅವನಿಗೇ ಮೋಕ್ಷವಾಗಬೇಕಾದ್ದರಿಂದ ಜೀವನು ಬಂಧಕ್ಕೆ ಆಶ್ರಯನಾಗಿದ್ದಾನೆಂದರೆ ಮೋಕ್ಷಕ್ಕೂ ಸಹ ಅವನೇ ಆಶ್ರಯನಾಗಬೇಕು. ಹೀಗೆ ಈ ಪಕ್ಷದಲ್ಲಿಯೂ ಮೋಕ್ಷಾಶ್ರಯತ್ವವು ಬ್ರಹ್ಮನಲ್ಲಿ ಬರುವುದಿಲ್ಲ.

ಸಂಸಾರ ಬಂಧವು ಚಿನ್ಮಾತ್ರದಲ್ಲೇ ಆಶ್ರಿತವಾಗಿದೆ ಹೊರತು, ಜೀವನಲ್ಲಲ್ಲ. ಬಂಧಕ್ಕೆ ಆಶ್ರಯನಾದ ಚಿನ್ಮಾತ್ರನು ಮೋಕ್ಷಕ್ಕೂ ಸಹ ಆಶ್ರಯನಾಗುತ್ತಾನೆಂದು ಹೇಳಬಹುದಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ದರ್ಪಣ ಮೊದಲಾದ ಉಪಾಧಿಯಲ್ಲಿರುವ ಶ್ಯಾಮವರ್ಣ ಮೊದಲಾದವು ಪ್ರತಿಬಿಂಬದಲ್ಲೇ ಬರುತ್ತವೆ ಹೊರತು, ಬಿಂಬನಲ್ಲಿ ಬರುವುದಿಲ್ಲ. ಅದರಂತೆ ಅವಿದ್ಯಾರೂಪವಾದ ಉಪಾಧಿಯಲ್ಲಿರುವ ಅವಿದ್ಯಾಕಾರ್ಯವೆನಿಸಿದ ಸಂಸಾರವು ಪ್ರತಿಬಿಂಬ ಸ್ಥಾನದಲ್ಲಿರುವ ಜೀವನಿಗೆ ಅಂಟುತ್ತದೆ ಹೊರತು, ಬಿಂಬಸ್ಥಾನದಲ್ಲಿರುವ ಚಿನ್ಮಾತ್ರನಿಗೆ ಅಂಟುವುದಿಲ್ಲವೆಂದು ಅದ್ವೈತಿಗಳ ಸಿದ್ಧಾಂತ. ಇದು ತಪ್ಪಾಗುತ್ತದೆ. ನೀವು ಪ್ರಕೃತವಾದ ಸಂಸಾರಬಂಧವನ್ನು ಚಿನ್ಮಾತ್ರದಲ್ಲಿ ಒಪ್ಪಿದರೆ ಉಪಾಧಿಯಲ್ಲಿರುವ ದೋಷವು

ಬಿಂಬದಲ್ಲಿ ಒಪ್ಪಿದಂತಾಗುತ್ತದೆ. ಆದರಿಂದ ಮುಕ್ತಾಶ್ರಯತ್ವವನ್ನು ಕೂಡಿಸಲು ಸಾಧ್ಯವಿಲ್ಲದ ಕಾರಣ ಅಮೃತಸೇತುವೆನಿಸುವುದಿಲ್ಲ. ಆದ್ದರಿಂದಲೇ ದ್ಯುಭ್ವಾದ್ಯಾಯತನನೂ ಸಹ ಆಗಲು ಸಾಧ್ಯವಿಲ್ಲ.

ಆದ್ವೈತಿಗಳ ಎರಡನೆಯ ವ್ಯಾಖ್ಯಾನವೂ ಸಹ ಅಸಾಧುವಾಗಿದೆ. 'ಏಷಃ' ಎಂಬಲ್ಲಿರುವ 'ಏತತ್' ಶಬ್ದವು ಜ್ಞಾನವನ್ನು ಪರಾಮರ್ಶಿಸುತ್ತಿದೆಯೆಂಬ ಅವರ ವಿಚಾರವು ಅಸಾಧುವಾಗಿದೆ. ಏಕೆಂದರೆ ಬೃಹದಾರಣ್ಯಕೋಪನಿಷತ್ತಿನಲ್ಲಿ 'ಏಷಸೇತುರ್ವಿಧೃತಿಃ' ಎಂಬುದಾಗಿ ಬ್ರಹ್ಮನು ಸೇತುವಾಗಿದ್ದಾನೆಂದು ಹೇಳಲಾಗಿದೆ. ಅಂತಹ ಬ್ರಹ್ಮನೇ ಇಲ್ಲಿಯೂ ಸಹ ಸೇತುಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬ ಪ್ರತ್ಯಭಿಜ್ಞೆಯೇ ಬರುತ್ತದೆ ಹೊರತು, ಜ್ಞಾನವೆಂಬ ಅರ್ಥದ ಚಿಂತನೆ ಯಾರಿಗೂ ಸಹ ಬರುವುದಿಲ್ಲ.

ಮತ್ತು ಇದೇ ಪ್ರಕರಣದ ಮುಂದಿನ ವಾಕ್ಯದಲ್ಲಿ 'ಸ ಏಷೋऽಂತಶ್ಚರತೇ' ಎಂಬಲ್ಲಿ 'ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಸಂಪ್ರತಿಷ್ಠಿತಃ' ಎಂಬ ಅದರ ಮುಂದಿನ ವಾಕ್ಯದಲ್ಲಿ 'ಏತತ್' ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ ಎಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿರುವ 'ಏತತ್' ಶಬ್ದದಿಂದಲೂ ಅವನೇ ಪ್ರತಿಪಾದ್ಯನಾಗಬೇಕು.

'ಏತತ್' ಶಬ್ದವು ಎಲ್ಲೆಡೆ ಸಿದ್ಧರೂಪವಾದ ವಸ್ತುವನ್ನೇ ಪರಾಮರ್ಶ ಮಾಡುತ್ತದೆ. ಆದ್ದರಿಂದ ಪ್ರಕೃತ 'ಏಷಃ' ಎಂಬಲ್ಲಿರುವ 'ಏತತ್' ಶಬ್ದವೂ ಸಹ ಸಿದ್ಧನಾದ ಬ್ರಹ್ಮನನ್ನೇ ಪರಾಮರ್ಶ ಮಾಡುತ್ತದೆ ಹೊರತು, ಸಾಧ್ಯವಾದ ಜ್ಞಾನವನ್ನು ಪರಾಮರ್ಶ ಮಾಡಲು ಸಾಧ್ಯವಿಲ್ಲ. ಮತ್ತು ಪುಲ್ಲಿಂಗದಲ್ಲಿರುವ 'ಏತತ್' ಶಬ್ದದಿಂದ ಪುಲ್ಲಿಂಗದಿಂದ ಹಿಂದೆ ಪ್ರಸಕ್ತವಾಗಿರುವ 'ತಮ್' ಎಂಬ ತತ್‌ಶಬ್ದದಿಂದ ಹಾಗೂ 'ಆತ್ಮಾನಮ್' ಎಂಬಲ್ಲಿರುವ 'ಆತ್ಮ' ಶಬ್ದದಿಂದ ಪ್ರಕೃತನಾದ ಬ್ರಹ್ಮನನ್ನೇ ಪರಾಮರ್ಶಿಸುವುದು ಉಚಿತ. ಆತ್ಮಶಬ್ದದಿಂದ ಪ್ರಕೃತನಾದವನನ್ನು ಪರಾಮರ್ಶಿಸುವುದು ಇನ್ನೂ ಹೆಚ್ಚು ಉಚಿತ. 'ಜಾನಥ' ಎಂಬುದರಿಂದ ಪ್ರಸಕ್ತವಾದ ಜ್ಞಾನಕ್ಕಿಂತಲೂ ಅತ್ಯಂತ ಹತ್ತಿರವಾದ ಆತ್ಮಶಬ್ದದಿಂದ ಹಿಂದೆ ಆತ್ಮಶಬ್ದದಿಂದ ಪ್ರಸಕ್ತನಾದ ಬ್ರಹ್ಮನನ್ನು ಪರಾಮರ್ಶಿಸುವುದೇ ಸೂಕ್ತವಾಗಿದೆ. ಆದ್ದರಿಂದ ವ್ಯವಹಿತವಾದ ನಪುಂಸಕಲಿಂಗದಿಂದ ಪ್ರಸಕ್ತವಾದ ಮತ್ತು ಸಾಧ್ಯವಾದ ಜ್ಞಾನವನ್ನು ಪರಾಮರ್ಶಿಸುವುದಕ್ಕಿಂತಲೂ ಸಿದ್ಧನಾದ, ಹತ್ತಿರದಲ್ಲೇ ಇರುವ ಆತ್ಮಶಬ್ದದಿಂದ ಹಾಗೂ ಪುಲ್ಲಿಂಗಶಬ್ದದಿಂದಲೇ ಪ್ರಸಕ್ತನಾದ ಬ್ರಹ್ಮನನ್ನು ಪರಾಮರ್ಶಿಸುವುದು ಅತ್ಯಂತ ಅರ್ಥಪೂರ್ಣವಾಗಿದೆ.

ಮತ್ತು ಪ್ರಥಮಸೂತ್ರದಲ್ಲಿ ದ್ಯುಭ್ವಾದ್ಯಾಯತನತ್ವವೆಂಬ ಧರ್ಮವನ್ನು ಬ್ರಹ್ಮನಲ್ಲಿ ಸಮರ್ಥಿಸಲು ಆದ್ವೈತಿಗಳಿಗೆ ಸಾಧ್ಯವಿಲ್ಲ. ಈ ಪಾದದಲ್ಲಿ ನಿರ್ವಿಶೇಷಬ್ರಹ್ಮನ ಸ್ವರೂಪದ ವಿಚಾರವಷ್ಟೇ

ಪ್ರಸಕ್ತವಾಗುವುದರಿಂದ ದ್ಯುಭ್ವಾದ್ಯಾಯತನತ್ವದ ಭ್ರಮೆಗೆ ಬ್ರಹ್ಮನು ಅಧಿಷ್ಠಾನನಾಗಿದ್ದಾನೆಂದಷ್ಟೇ ಹೇಳಬೇಕು. ಅದನ್ನು ಬಿಟ್ಟು ದ್ಯುಭ್ವಾದ್ಯಾಯತನತ್ವವೆಂಬ ಧರ್ಮವನ್ನು ಸಮರ್ಥಿಸಲು ಸಾಧ್ಯವಿಲ್ಲ.

ಆದ್ದರಿಂದಲೇ ಶ್ರುತಿಯಲ್ಲಿರುವ ಓತಶಬ್ದವು ಸೂತ್ರದಲ್ಲಿರುವ 'ಆಯತನ' ಶಬ್ದವೂ ಸಹ ಅಯುಕ್ತವಾಗುತ್ತದೆ. ಏಕೆಂದರೆ ಶುಕ್ತಿಯಲ್ಲಿ ರೂಪ್ಯವು ಆರೋಪಿತವಾಗಿದೆಯೆಂದು ಹೇಳುತ್ತಾರೆ ಹೊರತು, ಓತವಾಗಿದೆಯೆಂದು ಯಾರೂ ಹೇಳುವುದಿಲ್ಲ.

ಸೂತ್ರದ ಹೇತುಭಾಗಕ್ಕೆ ಮಾಡಿದ ವ್ಯಾಖ್ಯಾನವೂ ಸಹ ಸಾಧುವಲ್ಲ. 'ಸ್ವಶಬ್ದಾತ್' ಎಂಬುದಕ್ಕೆ 'ಆತ್ಮಶಬ್ದಾತ್' ಎಂದೂ ಅಂತಹ ಶಬ್ದವನ್ನು ಬ್ರಹ್ಮಪ್ರತಿಪಾದಿಕವಾಗಿದೆಯೆಂದೂ ವ್ಯಾಖ್ಯಾನಿಸಿದ್ದಾರೆ. ಇದು ತಪ್ಪು. ಆತ್ಮಶಬ್ದದಿಂದ ಶಕ್ತಿವೃತ್ತಿಯಿಂದ ಬ್ರಹ್ಮನು ಪ್ರತಿಪಾದ್ಯನಾಗಿದ್ದಾನೆಂದು ಹೇಳಲು ಸಾಧ್ಯವಿಲ್ಲ. ಈ ಪಾದವು ನಿರ್ವಿಶೇಷಬ್ರಹ್ಮ ಪ್ರತಿಪಾದಕವಾಗಿರುವುದರಿಂದ ಆತ್ಮಶಬ್ದವಾಚ್ಯತ್ವವು ನಿರ್ವಿಶೇಷನಲ್ಲಿ ಅಯುಕ್ತವಾಗಿದೆ. ಲಕ್ಷಣಯಾ ನಿರ್ವಿಶೇಷಪ್ರತಿಪಾದ್ಯನಾಗಿದ್ದಾನೆಂದರೆ ಪ್ರಕೃತಿ ಮೊದಲಾದವುಗಳಲ್ಲಿಯೂ ಲಕ್ಷಣಯಾ ಆತ್ಮಶಬ್ದವಾಚ್ಯತ್ವವನ್ನು ಹೇಳಬಹುದು. ಹಾಗೂ ಸವಿಶೇಷನು ಈ ಪಾದದಿಂದ ಪ್ರತಿಪಾದ್ಯನೇ ಆಗಿರುವುದಿಲ್ಲ.

ಅದ್ವೈತಿಗಳ ಎರಡನೆಯ ಸೂತ್ರವ್ಯಾಖ್ಯಾನವೂ ಸಹ ಅಸಾಧುವಾಗಿದೆ.

೨. 'ಮುಕ್ತೋಪಸೃಪ್ಯವ್ಯಪದೇಶಾತ್' - ರಾಗದ್ವೇಷಾದಿಗಳಿಂದ ಮುಕ್ತನಾದವನಿಂದ ಬ್ರಹ್ಮನು ಜ್ಞೇಯನಾಗಿದ್ದಾನೆಂದು 'ಭಿದ್ಯತೇ ಹೃದಯಗ್ರಂಥಿಃ' ಎಂಬಲ್ಲಿ ಹೇಳಲಾಗಿದೆ. ಮತ್ತು 'ತಮೇವೈಕಂ ಜಾನಥ ಆತ್ಮಾನಮ್ ಅನ್ಯಾ ವಾಚೋ ವಿಮುಂಚತ' ಎಂಬುದಾಗಿ ಎಲ್ಲಾವಿಧ ಮಾತುಗಳನ್ನು ಬಿಟ್ಟು ಬ್ರಹ್ಮನನ್ನೇ ತಿಳಿಯಬೇಕೆಂದು ಹೇಳಲಾಗಿದೆ. ಹೀಗೆ ವಾಗ್ವಿಮೋಕ್ತೃತ್ವ ಪೂರ್ವಕವಾಗಿ ಜ್ಞೇಯತ್ವವನ್ನು ಹೇಳಿರುವುದರಿಂದಲೂ ಬ್ರಹ್ಮನೇ ದ್ಯುಭ್ವಾದ್ಯಾಯತನನಾಗಿದ್ದಾನೆ. ಅಥವಾ 'ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ' ಎಂಬಲ್ಲಿ ಮುಕ್ತರಿಂದ ಪ್ರಾಪ್ಯನಾಗಿದ್ದಾನೆಂದು ಹೇಳಿರುವ ಕಾರಣದಿಂದಲೂ ಬ್ರಹ್ಮನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ಸೂತ್ರಾರ್ಥ.

ಇದು ತಪ್ಪು. ಯಾವುದೇ ಉಪಪದವಿಲ್ಲದೇ 'ಮುಕ್ತ' ಎಂಬ ಶಬ್ದವನ್ನು ಪ್ರಯೋಗಿಸಿದರೆ ಸಂಸಾರದಿಂದ ಮುಕ್ತನಾಗಿದ್ದಾನೆಂಬರ್ಥವನ್ನೇ ಸ್ವೀಕರಿಸಬೇಕೆಂಬುದು ಪ್ರಸಿದ್ಧವಾಗಿದೆ. ಅದನ್ನು ಬಿಟ್ಟು ರಾಗದ್ವೇಷಾದಿಗಳಿಂದ ಮುಕ್ತನಾಗಿದ್ದಾನೆಂದು ವ್ಯಾಖ್ಯಾನಿಸುವುದು ತಪ್ಪಾಗುತ್ತದೆ. ಮತ್ತು 'ಉಪ' ಎಂಬ ಉಪಸರ್ಗದಿಂದ ಕೂಡಿರುವ 'ಸೃಪ್' ಧಾತುವು ಸಮೀಪವನ್ನು ಹೊಂದಿದ ಎಂಬರ್ಥವನ್ನೇ ಹೇಳುತ್ತದೆ

ಹೊರತು, ಜ್ಞಾನವೆಂಬರ್ಥವನ್ನು ಹೇಳುವುದಿಲ್ಲ. ಆದ್ದರಿಂದ ಉಪಪೂರ್ವಕವಾದ 'ಸೃಪ್' ಧಾತುವಿಗೆ ಜ್ಞಾನವೆಂಬರ್ಥವನ್ನು ಮಾಡಿದ್ದು ತಪ್ಪಾಗುತ್ತದೆ.

ಮತ್ತು ಅದ್ವೈತ ಮತದಲ್ಲಿ ಬ್ರಹ್ಮನು ಮುಕ್ತರಿಗಿಂತ ಅಭಿನ್ನನಾಗಿದ್ದಾನೆ. ಹೀಗಿರುವಾಗ ಮುಕ್ತನಾದವನು ಬ್ರಹ್ಮನನ್ನು ಹೊಂದುತ್ತಾನೆಂದು ಹೇಳುವುದು ತಪ್ಪಾಗುತ್ತದೆ. ಸಗುಣಬ್ರಹ್ಮನನ್ನು ಹೊಂದುತ್ತಾನೆಂದು ಹೇಳಿದರೆ ಈ ಪಾದದಲ್ಲಿ ಅದು ಅಸಂಗತವಾಗುತ್ತದೆ.

ಸಗುಣಬ್ರಹ್ಮನನ್ನು ಹೊಂದುತ್ತಾನೆಂದು ಹೇಳುವುದಾದರೆ ಸೂತ್ರದಲ್ಲಿರುವ ಮುಕ್ತಶಬ್ದವು ಹಾಗೂ ಶ್ರುತಿಯಲ್ಲಿರುವ 'ನಾಮರೂಪಾದ್ವಿಮುಕ್ತಃ' ಎಂಬ ಶಬ್ದವು ಅಸ್ವರಸವಾಗುತ್ತದೆ.

೩. 'ನಾನುಮಾನಂ ಅತಚ್ಛಬ್ದಾತ್' - ಪ್ರಧಾನವನ್ನು ಪ್ರತಿಪಾದಿಸುವ ಶಬ್ದವಿಲ್ಲದ ಕಾರಣ ಲೋಕಾಧಾರವಾಗಿ ಪ್ರಧಾನವು ಪ್ರಸಕ್ತವಾಗಿಲ್ಲ.

ಹೀಗೆ ಮೂರನೆಯ ಸೂತ್ರವನ್ನು ಅದ್ವೈತಿಗಳು ವ್ಯಾಖ್ಯಾನಿಸುತ್ತಾರೆ. ಇದೂ ಸಹ ತಪ್ಪು. 'ಅತಚ್ಛಬ್ದಾತ್' ಎಂಬುದಕ್ಕೆ ಪ್ರಧಾನಪ್ರತಿಪಾದಕವಾದ ಶಬ್ದವಿರುವುದಿಲ್ಲವೆಂದು ವ್ಯಾಖ್ಯಾನಿಸುವುದಾದರೆ ನಿರ್ವಿಶೇಷನಲ್ಲಿಯೂ ಇದು ಸಮಾನವಾಗಿದೆ. ಪ್ರಧಾನವಾಚಕವಾದ ಶಬ್ದವು ಹೇಗಿಲ್ಲವೋ, ಅದರಂತೆ ನಿರ್ವಿಶೇಷಬ್ರಹ್ಮವಾಚಕವಾದ ಶಬ್ದವೂ ಸಹ ಇಲ್ಲಿ ಇರುವುದಿಲ್ಲ. 'ಅತಚ್ಛಬ್ದಾತ್' ಎಂಬುದಕ್ಕೆ ಪ್ರಧಾನದಲ್ಲಿ ಲಕ್ಷಕವಾದ ಶಬ್ದವಿರುವುದಿಲ್ಲವೆಂದು ವ್ಯಾಖ್ಯಾನಿಸುವುದಾದರೆ ಇದು ಅಸಿದ್ಧವಾಗಿದೆ. ಲಕ್ಷಕಶಬ್ದಾಭಾವವು ನಿರ್ವಿಶೇಷಬ್ರಹ್ಮನಲ್ಲಿ ಅಸಿದ್ಧವಾದಂತೆ ಪ್ರಧಾನದಲ್ಲಿಯೂ ಸಹ ಅಸಿದ್ಧವೇ ಆಗಿದೆ.

೪. 'ಪ್ರಾಣಭೃಚ್ಚ' - ಸರ್ವಜ್ಞತ್ವವು ಕೇಳಿಸುತ್ತಿರುವುದರಿಂದಲೇ ಜೀವಾತ್ಮನು ಲೋಕಾಧಾರನಾಗುವುದಿಲ್ಲ.

ಈ ರೀತಿಯ ಅದ್ವೈತಿಗಳ ನಾಲ್ಕನೆಯ ಸೂತ್ರವ್ಯಾಖ್ಯಾನವೂ ಸಹ ಅಸಾಧುವಾಗಿದೆ. ಏಕೆಂದರೆ 'ಯಃ ಸರ್ವಜ್ಞಃ' ಎಂಬಲ್ಲಿ 'ಸರ್ವಜ್ಞ' ಶಬ್ದವು ಕೇಳಿಸುತ್ತಿರುವುದರಿಂದ ಜೀವನನ್ನು ನಿಷೇಧ ಮಾಡುವುದಾದರೆ ನಿರ್ವಿಶೇಷಬ್ರಹ್ಮನನ್ನೂ ಸಹ ನಿಷೇಧ ಮಾಡಬೇಕು. ಏಕೆಂದರೆ ಸರ್ವಜ್ಞತ್ವವು ಸವಿಶೇಷಬ್ರಹ್ಮನಲ್ಲಿ ಮಾತ್ರವಿದೆ ಹೊರತು, ನಿರ್ವಿಶೇಷ ಬ್ರಹ್ಮನಲ್ಲಿ ಇರುವುದಿಲ್ಲ.

೫. 'ಭೇದವ್ಯಪದೇಶಾತ್' - 'ತಮೇವೈಕಂ ಜಾನಥ' ಎಂಬುದಾಗಿ ಯಾರು ಲೋಕಕ್ಕೆ ಆಧಾರನಾಗಿದ್ದಾನೋ ಅವನು ಜ್ಞೇಯನಾಗಿದ್ದಾನೆಂದು ಹೇಳಿರುವುದರಿಂದ ಮತ್ತು ಜೀವನು ಜ್ಞಾತೃವಾಗಿದ್ದಾನೆಂದು ಹೇಳಿರುವುದರಿಂದ ಜೀವನೇ ಲೋಕಾಧಾರನಾಗಲು ಸಾಧ್ಯವಿಲ್ಲ.

ಇದು ಎರಡನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ. ಇದೂ ಸಹ ತಪ್ಪು. 'ಅನ್ಯಮೀಶಮ್' ಎಂಬುದಾಗಿ ಶ್ರುತಿಯು ಭೇದವನ್ನು ನೇರವಾಗಿಯೇ ಹೇಳುತ್ತಿದೆ. ಇದನ್ನು ಬಿಟ್ಟು ಭೇದಕವ್ಯಪದೇಶನ್ನು ಹೇಳುವುದು ತಪ್ಪಾಗುತ್ತದೆ. ಅಂದರೆ ನೇರವಾದ ಭೇದವನ್ನು ವಿವಕ್ಷಿಸದೇ ಅರ್ಥಾತ್ ತಿಳಿಯುವ ಭೇದವನ್ನು ವಿವಕ್ಷಿಸುವುದು ಅಸಾಧುವಾಗಿದೆ.

ಹಿಂದೆ ಹೇಳಿದ ಕ್ರಮದಲ್ಲಿಯೇ ಬೇರೆ ಸೂತ್ರಗಳಲ್ಲಿರುವ ಅನುಪಪತ್ತಿಯನ್ನು ಚಿಂತನೆ ಮಾಡಿ ತಿಳಿದುಕೊಳ್ಳಬೇಕು. ಅದು ಹೀಗಿದೆ -

೬. 'ಪ್ರಕರಣಾತ್' - 'ತಸ್ಮಿನ್ ಭಗವತೋ ವಿಜ್ಞಾತೇ ಸರ್ವವಿದಂ ವಿಜ್ಞಾತಂ ಭವತಿ' ಎಂದು ಉಪನಿಷತ್ತಿನ ಪ್ರಾರಂಭದಲ್ಲಿ ಲೋಕಾಧಾರನಾಗಿರುವನನ್ನು ಬ್ರಹ್ಮನೆಂದು ಹೇಳಲಾಗಿದೆ. ಆದ್ದರಿಂದ ಅವನೇ ಲೋಕಾಧಾರನು.

೭. 'ಸ್ಥಿತ್ಯದನಾಭ್ಯಾಂ ಚ' - 'ಪಿಪ್ಪಲಂಸ್ವಾದುಅತ್ತಿ' ಎಂಬುದಾಗಿ ಕರ್ಮಫಲಭೋಗವನ್ನು ಜೀವನಲ್ಲಿ; 'ಅನಶ್ನನ್‌ಅನ್ಯಃ' ಎಂಬುದಾಗಿ ಕರ್ಮಫಲ ಅಭೋಗವನ್ನು ಬ್ರಹ್ಮನಲ್ಲಿ ಹೇಳುವ ಮೂಲಕ ವಿರುದ್ಧ ಧರ್ಮಗಳನ್ನು ಶ್ರುತಿಯು ತಿಳಿಸುತ್ತಿದೆ. ಬ್ರಹ್ಮನಲ್ಲಿ ಹೀಗೆ ಜೀವನ ಭೇದವನ್ನು ಹೇಳಿರುವುದರಿಂದ ಬ್ರಹ್ಮನು ಪ್ರಸಕ್ತನಾಗಲೇಬೇಕು. ಹೀಗೆ ಪ್ರಸಕ್ತನಾದ ಬ್ರಹ್ಮನನ್ನೇ ದ್ಯುಭ್ವಾದ್ಯಾಯತನನೆಂದು ಶ್ರುತಿ ಹೇಳುತ್ತಿದೆ. ಈ ಕ್ರಮದ ಅದ್ವೈತಿಗಳ ಈ ಎರಡೂ ಸೂತ್ರಗಳ ವ್ಯಾಖ್ಯಾನವೂ ಸಹ ಅಸಾಧುವಾಗಿದೆ. 'ಪ್ರಕರಣಾತ್' ಎಂಬುದು ಅದ್ವೈತ ಮತದಲ್ಲಿ ಪ್ರಧಾನ ಹೇತುವಾಗಿರುವುದರಿಂದ 'ಚ' ಶಬ್ದವನ್ನು ಹೇಳಬೇಕಿತ್ತು. ಮತ್ತು ಏಳನೆಯ ಸೂತ್ರದಲ್ಲಿ ಭೇದಕಧರ್ಮವನ್ನೇ ಪುನಃ ಹೇಳಿದ್ದರಿಂದ 'ಭೇದವ್ಯಪದೇಶಾತ್' ಎಂಬ ಸೂತ್ರದಿಂದ ಪುನರುಕ್ತಿಯು ಬರುತ್ತದೆ.

ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಅದ್ವೈತಿಗಳು ಭೇದಸ್ಥಾಪನೆಯನ್ನೇ ಮಾಡಿದ್ದಾರೆ. 'ಭೇದವ್ಯಪದೇಶಾತ್' ಎಂಬ ಸೂತ್ರದಿಂದ ಜೀವಬ್ರಹ್ಮಭೇದವನ್ನು ಹೇಳಿರುವುದರಿಂದ 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರದಿಂದಲೂ ಮುಕ್ತಿಯಲ್ಲಿಯೂ ಜೀವಬ್ರಹ್ಮರಿಗೆ ಭೇದವಿರುತ್ತದೆಂದು ಹೇಳಿರುವುದರಿಂದ ಅವರ ಅಭೇದವಾದಕ್ಕೆ ಈ ಅಧಿಕರಣವು ಪ್ರತಿಕೂಲವೇ ಆಗಿದೆ.

ರಾಮಾನುಜರ ಅಧಿಕರಣ ಶರೀರ ಹೀಗಿದೆ - 'ಗೌಣಶ್ಚೇನ್ನ ಆತ್ಮಶಬ್ದಾತ್' ಎಂಬ ಆನಂದಮಯಾಧಿ-ಕರಣದ ಸೂತ್ರದಲ್ಲಿ ಆತ್ಮಶಬ್ದವೆಂಬ ಹೇತು ಅಚಿತ್ತತ್ವವನ್ನು ವ್ಯಾವೃತ್ತಿ ಮಾಡುತ್ತಿದೆ. ಆದ್ದರಿಂದ ಪ್ರಕೃತ ದ್ಯುಭ್ವಾದ್ಯಾಯತನವಾದ ಪದಾರ್ಥವು ಆತ್ಮಶಬ್ದ ಪ್ರತಿಪಾದ್ಯವಾಗಿದೆಯೆಂದು ಹೇಳುತ್ತಿರುವುದರಿಂದ

ಪ್ರಧಾನವು ಲೋಕಾಧಾರವಾಗಬಹುದಲ್ಲವೇ? ಎಂಬ ಶಂಕೆಯೇ ಹುಟ್ಟಲು ಸಾಧ್ಯವಿಲ್ಲ. ಆದ್ದರಿಂದ ಜೀವನೇ ಲೋಕಾಧಾರನಾಗಿದ್ದಾನೆಂದು ಪೂರ್ವಪಕ್ಷವೆಂದು ಹೇಳುತ್ತಾರೆ.

ಹಿಂದೆ ಪ್ರಕೃತಿಯಲ್ಲಿ ಆತ್ಮಶಬ್ದವಿಲ್ಲವೆಂದಷ್ಟೇ ಹೇಳಿದ್ದಾರೆ ಹೊರತು, ರುದ್ರಾದಿಗಳಲ್ಲಿ ಆತ್ಮಶಬ್ದವಿಲ್ಲವೆಂದೇನೂ ಹೇಳಿರುವುದಿಲ್ಲ. ಹೀಗೆ ರುದ್ರಾದಿವ್ಯಾವರ್ತಕವಾಗಿ ಯಾವ ಹೇತುಗಳನ್ನು ಹೇಳದ ಕಾರಣ ಕೇವಲ ಜೀವನೊಬ್ಬನೇ ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆಂಬ ಅವಧಾರಣೆಯು ಅಯುಕ್ತವಾಗುತ್ತದೆ.

ಮತ್ತು 'ನಾನುಮಾನಮ್' ಎಂಬ ಸೂತ್ರದಲ್ಲಿ ಪ್ರಧಾನವು ಲೋಕಾಧಾರವಲ್ಲವೆಂದು ನಿರಾಕರಿಸಲಾಗಿದೆ. ಅದಕ್ಕನುಗುಣವಾಗಿ ಪ್ರಧಾನವಿಷಯಕವಾದ ಪೂರ್ವಪಕ್ಷವನ್ನು ಮಾಡಲೇಬೇಕು.

'ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ' ಎಂಬ ಆನಂದಮಯಾಧಿಕರಣದ ಸೂತ್ರದಲ್ಲಿಯೇ ಮುಕ್ತೋಪಸೃಪ್ಯತ್ವವನ್ನು ಜೀವವ್ಯಾವರ್ತಕವಾಗಿ ಹೇಳಲಾಗಿದೆ. ಅದೇ ಮುಕ್ತೋಪಸೃಪ್ಯತ್ವಲಿಂಗವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಜೀವನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗಲು ಸಾಧ್ಯವಿಲ್ಲ. ಆತ್ಮಶಬ್ದದ ಪ್ರಯೋಗವೂ ಈ ಪ್ರಕರಣದಲ್ಲಿರುವುದರಿಂದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿದ್ದಲ್ಲಿ ಜೀವನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗದಿರಬೇಕಾದೀತೆಂಬ ಪ್ರತಿಬಂದಿಗೆ ನಿಮ್ಮಲ್ಲಿ ಉತ್ತರವಿಲ್ಲ.

ಜಾಯಮಾನತ್ವವೇ ಮೊದಲಾದ ನಿರವಕಾಶಲಿಂಗಗಳ ಬಲದಿಂದ ಮುಕ್ತೋಪಸೃಪ್ಯತ್ವವನ್ನು ಜೀವನಲ್ಲಿ ಗೌಣ ಮಾಡಬೇಕು. ಹೀಗೆ ಹೇಳುವುದಾದರೆ ಅದೇ ಜಾಯಮಾನತ್ವಾದಿ ಲಿಂಗಗಳಿಂದ ಆತ್ಮಶಬ್ದವನ್ನೂ ಸಹ 'ಪ್ರಕಾಶಾತ್ಮಾ ಪ್ರದೀಪಃ' ಎಂಬಲ್ಲಿ ಸ್ವರೂಪವೆಂಬರ್ಥದಲ್ಲಿ ಆತ್ಮಶಬ್ದವನ್ನು ಗೌಣವನ್ನಾಗಿ ವಿವಕ್ಷಿಸುವಂತೆ ಪ್ರಧಾನವಿಷಯದಲ್ಲಿಯೂ 'ಆತ್ಮೀಯ' ಎಂಬರ್ಥದಲ್ಲಿ ಆತ್ಮಶಬ್ದವನ್ನು ಪ್ರಯೋಗಿಸಬಹುದು. ಹೀಗೆ ಗೌಣಾರ್ಥವನ್ನು ಮಾಡುವ ಮೂಲಕ ಆತ್ಮಶಬ್ದದ ವಿರೋಧವನ್ನು ಪರಿಹರಿಸಿ ಪ್ರಧಾನವಿಷಯಕವಾದ ಪೂರ್ವಪಕ್ಷವನ್ನು ಮಾಡಬಹುದು.

ವಿಚಾರ ಮಾಡಿದರೆ ಪ್ರಧಾನವಿಷಯಕವಾದ ಪೂರ್ವಪಕ್ಷವೇ ಅತ್ಯಂತ ಸಾಧುವಾಗುತ್ತದೆ. ನಮ್ಮಂತಹ ಜೀವರಲ್ಲಿ ಸಕಲಲೋಕಾಧಾರತ್ವವೂ ಅನುಭವ ವಿರುದ್ಧ. ಆದರೆ ಎಲ್ಲಾ ಪದಾರ್ಥಗಳಿಗೂ ಉಪಾದಾನವಾದ ಪ್ರಕೃತಿಯಲ್ಲಿ ಲೋಕಾಧಾರತ್ವವನ್ನು ಸುಲಭವಾಗಿ ಉಪಪಾದಿಸಬಹುದು. ಆದ್ದರಿಂದ ಜೀವನು ಲೋಕಾಧಾರನಾಗಿದ್ದಾನೆಂಬ ಪೂರ್ವಪಕ್ಷವು ಅಸಂಭಾವಿತವಾಗಿದೆ. ಪ್ರಧಾನದಲ್ಲಿ ಅದೇ ಪೂರ್ವಪಕ್ಷವು ಅತ್ಯಂತ ಯುಕ್ತವಾಗುತ್ತದೆ.

ಮತ್ತು ಮೊದಲನೆಯ ಸೂತ್ರದಲ್ಲಿ 'ಸ್ವಶಬ್ದಾತ್' ಎಂಬುದಕ್ಕೆ 'ಬ್ರಹ್ಮನ ಅಸಾಧಾರಣ ಶಬ್ದಗಳಿರುವುದರಿಂದ' ಎಂಬರ್ಥವನ್ನು ನೀವು ಹೇಳುತ್ತೀರಿ. ಹಾಗಾದರೆ 'ಸ್ವಶಬ್ದಾತ್' ಎಂಬ ಹೇತುಭಾಗದಿಂದಲೇ 'ಅಮೃತಸ್ಯೈಷ ಸೇತುಃ' 'ಯಃ ಸರ್ವಜ್ಞಃ' ಇತ್ಯಾದಿ ವಾಕ್ಯಗಳಲ್ಲಿ ಹೇಳಲ್ಪಟ್ಟ ಮುಕ್ತೋಪಸೃಪ್ಯತ್ವ, ಸರ್ವಜ್ಞತ್ವ ಮೊದಲಾದವುಗಳನ್ನೂ ಸಹ ಸಂಗ್ರಹಿಸಬಹುದು. ಪುನಃ 'ಮುಕ್ತೋಪ ಸೃಪ್ಯವ್ಯಪದೇಶಾತ್', 'ಪ್ರಕರಣಾತ್' ಇತ್ಯಾದಿ ಸೂತ್ರಗಳನ್ನು ಹೇಳಿದ್ದು ವ್ಯರ್ಥವಾಗುತ್ತದೆ. ಆದ್ದರಿಂದ ರಾಮಾನುಜರ ಅಧಿಕರಣಶರೀರವು ಅಸಾಧುವಾಗಿದೆ.

ಈ ಅಧಿಕರಣಕ್ಕೆ ಅದೃಶ್ಯತ್ವಾಧಿಕರಣದಿಂದ ಪುನರುಕ್ತಿ ಬರುತ್ತದೆ. ಏಕೆಂದರೆ 'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯಗಳೆಲ್ಲವೂ ಬ್ರಹ್ಮಪರವೆಂದು ಅದೃಶ್ಯತ್ವಾಧಿಕರಣದಲ್ಲಿ ಸಾಧನೆ ಮಾಡಿದ್ದರಿಂದ ಆ ಪ್ರಕರಣದಲ್ಲಿರುವ 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯಗಳೂ ಸಹ ಬ್ರಹ್ಮಪರವೆಂದೇ ಸಿದ್ಧವಾಗುತ್ತವೆ. ಹೀಗಿರುವಾಗ ಲೋಕಾಧಾರತ್ವವೂ ಬ್ರಹ್ಮನಲ್ಲಿದೆಯೆಂದು ಹಿಂದಿನ ಅಧಿಕರಣದಿಂದ ಸಿದ್ಧವಾದ ಮೇಲೆ ಈ ಅಧಿಕರಣವನ್ನು ಆರಂಭಿಸಿದ್ದು ವ್ಯರ್ಥವಲ್ಲವೇ?

ಈ ಪುನರುಕ್ತಿ ದೋಷವನ್ನು ಆದ್ವೈತಿಗಳು ಹೀಗೆ ಪರಿಹರಿಸುತ್ತಾರೆ - 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯವು 'ಯತ್ತದದ್ರೇಶ್ಯಮ್' ಎಂಬ ಪ್ರಕರಣದಲ್ಲಿ ಇರುವುದೇ ಇಲ್ಲವೆಂಬ ಕೃತ್ವಾಚಿಂತೆಯನ್ನು ಮಾಡಿಕೊಂಡು ಈ ಅಧಿಕರಣದ ಪೂರ್ವಪಕ್ಷವು ಹುಟ್ಟುತ್ತಿದೆ. ಆದ್ದರಿಂದ ಪುನರುಕ್ತಿ ದೋಷ ಬರುವುದಿಲ್ಲ.

ಹಾಗಾದರೆ 'ಪ್ರಕರಣಾತ್' ಎಂಬ ಸೂತ್ರವು 'ಯಸ್ಮಿನ್‌ದ್ಯೌಃ' ಎಂಬ ವಾಕ್ಯವು ಬ್ರಹ್ಮಪ್ರಕರಣದಲ್ಲಿರುವುದರಿಂದ ಬ್ರಹ್ಮಪರವಾಗಿದೆಯೆಂದು ಸಮರ್ಥಿಸುತ್ತಿದೆ. ಇದು ಅಯುಕ್ತ-ವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಕೃತ್ವಾಚಿಂತೆಯನ್ನು ಮಾಡಿಕೊಂಡು ಅಧಿಕರಣವು ಆರಂಭಣೀಯವಾಗಿದೆಯೆಂದು ತಿಳಿಸುವುದಕ್ಕಾಗಿಯೇ ಈ ಸೂತ್ರವು ಹೊರಟಿದೆ. ಹೀಗೆ ಆದ್ವೈತಿಗಳು ನೀಡುವ ಸಮಾಧಾನ.

ಇದು ತಪ್ಪು. ಬೇರೆ ಗತಿಯಿಲ್ಲದಿದ್ದಾಗ ಮಾತ್ರ ಕೃತ್ವಾಚಿಂತೆಯನ್ನು ಅವಲಂಬಿಸಬೇಕು. ಆದರೆ ಜಾಯಮಾನತ್ವಾದಿ ಲಿಂಗಗಳಿಂದ ಅಧಿಕಾಶಂಕೆಯನ್ನು ಈ ಅಧಿಕರಣದಲ್ಲಿ ಮಾಡಲು ಬರುತ್ತದೆ. ಅಥವಾ ಸಂಪೂರ್ಣ ಪ್ರಕರಣವೇ ಬ್ರಹ್ಮಪರವಾಗುವುದಿಲ್ಲವೆಂದೂ ಸಹ ಆಶಂಕಿಸಬಹುದು. ಅಥವಾ

ಪ್ರಧಾನವು ಲೋಕಾಧಾರವಾಗಬಹುದಲ್ಲವೇ? ಎಂಬ ಶಂಕೆಯೇ ಹುಟ್ಟಲು ಸಾಧ್ಯವಿಲ್ಲ. ಆದ್ದರಿಂದ ಜೀವನೇ ಲೋಕಾಧಾರನಾಗಿದ್ದಾನೆಂದು ಪೂರ್ವಪಕ್ಷವೆಂದು ಹೇಳುತ್ತಾರೆ.

ಹಿಂದೆ ಪ್ರಕೃತಿಯಲ್ಲಿ ಆತ್ಮಶಬ್ದವಿಲ್ಲವೆಂದಷ್ಟೇ ಹೇಳಿದ್ದಾರೆ ಹೊರತು, ರುದ್ರಾದಿಗಳಲ್ಲಿ ಆತ್ಮಶಬ್ದವಿಲ್ಲವೆಂದೇನೂ ಹೇಳಿರುವುದಿಲ್ಲ. ಹೀಗೆ ರುದ್ರಾದಿವ್ಯಾವರ್ತಕವಾಗಿ ಯಾವ ಹೇತುಗಳನ್ನು ಹೇಳದ ಕಾರಣ ಕೇವಲ ಜೀವನೊಬ್ಬನೇ ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆಂಬ ಅವಧಾರಣೆಯು ಅಯುಕ್ತವಾಗುತ್ತದೆ.

ಮತ್ತು 'ನಾನುಮಾನಮ್' ಎಂಬ ಸೂತ್ರದಲ್ಲಿ ಪ್ರಧಾನವು ಲೋಕಾಧಾರವಲ್ಲವೆಂದು ನಿರಾಕರಿಸಲಾಗಿದೆ. ಅದಕ್ಕನುಗುಣವಾಗಿ ಪ್ರಧಾನವಿಷಯಕವಾದ ಪೂರ್ವಪಕ್ಷವನ್ನು ಮಾಡಲೇಬೇಕು.

'ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ' ಎಂಬ ಆನಂದಮಯಾಧಿಕರಣದ ಸೂತ್ರದಲ್ಲಿಯೇ ಮುಕ್ತೋಪಸೃಪ್ಯತ್ವವನ್ನು ಜೀವವ್ಯಾವರ್ತಕವಾಗಿ ಹೇಳಲಾಗಿದೆ. ಅದೇ ಮುಕ್ತೋಪಸೃಪ್ಯತ್ವಲಿಂಗವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಜೀವನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗಲು ಸಾಧ್ಯವಿಲ್ಲ. ಆತ್ಮಶಬ್ದದ ಪ್ರಯೋಗವೂ ಈ ಪ್ರಕರಣದಲ್ಲಿರುವುದರಿಂದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿದ್ದಲ್ಲಿ ಜೀವನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗದಿರಬೇಕಾದೀತೆಂಬ ಪ್ರತಿಬಂದಿಗೆ ನಿಮ್ಮಲ್ಲಿ ಉತ್ತರವಿಲ್ಲ.

ಜಾಯಮಾನತ್ವವೇ ಮೊದಲಾದ ನಿರವಕಾಶಲಿಂಗಗಳ ಬಲದಿಂದ ಮುಕ್ತೋಪಸೃಪ್ಯತ್ವವನ್ನು ಜೀವನಲ್ಲಿ ಗೌಣ ಮಾಡಬೇಕು. ಹೀಗೆ ಹೇಳುವುದಾದರೆ ಅದೇ ಜಾಯಮಾನತ್ವಾದಿ ಲಿಂಗಗಳಿಂದ ಆತ್ಮಶಬ್ದವನ್ನೂ ಸಹ 'ಪ್ರಕಾಶಾತ್ಮಾ ಪ್ರದೀಪಃ' ಎಂಬಲ್ಲಿ ಸ್ವರೂಪವೆಂಬರ್ಥದಲ್ಲಿ ಆತ್ಮಶಬ್ದವನ್ನು ಗೌಣವನ್ನಾಗಿ ವಿವಕ್ಷಿಸುವಂತೆ ಪ್ರಧಾನವಿಷಯದಲ್ಲಿಯೂ 'ಆತ್ಮೀಯ' ಎಂಬರ್ಥದಲ್ಲಿ ಆತ್ಮಶಬ್ದವನ್ನು ಪ್ರಯೋಗಿಸಬಹುದು. ಹೀಗೆ ಗೌಣಾರ್ಥವನ್ನು ಮಾಡುವ ಮೂಲಕ ಆತ್ಮಶಬ್ದದ ವಿರೋಧವನ್ನು ಪರಿಹರಿಸಿ ಪ್ರಧಾನವಿಷಯಕವಾದ ಪೂರ್ವಪಕ್ಷವನ್ನು ಮಾಡಬಹುದು.

ವಿಚಾರ ಮಾಡಿದರೆ ಪ್ರಧಾನವಿಷಯಕವಾದ ಪೂರ್ವಪಕ್ಷವೇ ಅತ್ಯಂತ ಸಾಧುವಾಗುತ್ತದೆ. ನಮ್ಮಂತಹ ಜೀವರಲ್ಲಿ ಸಕಲಲೋಕಾಧಾರತ್ವವೂ ಅನುಭವ ವಿರುದ್ಧ. ಆದರೆ ಎಲ್ಲಾ ಪದಾರ್ಥಗಳಿಗೂ ಉಪಾದಾನವಾದ ಪ್ರಕೃತಿಯಲ್ಲಿ ಲೋಕಾಧಾರತ್ವವನ್ನು ಸುಲಭವಾಗಿ ಉಪಪಾದಿಸಬಹುದು. ಆದ್ದರಿಂದ ಜೀವನು ಲೋಕಾಧಾರನಾಗಿದ್ದಾನೆಂಬ ಪೂರ್ವಪಕ್ಷವು ಅಸಂಭಾವಿತವಾಗಿದೆ. ಪ್ರಧಾನದಲ್ಲಿ ಅದೇ ಪೂರ್ವಪಕ್ಷವು ಅತ್ಯಂತ ಯುಕ್ತವಾಗುತ್ತದೆ.

ಮತ್ತು ಮೊದಲನೆಯ ಸೂತ್ರದಲ್ಲಿ 'ಸ್ವಶಬ್ದಾತ್' ಎಂಬುದಕ್ಕೆ 'ಬ್ರಹ್ಮನ ಅಸಾಧಾರಣ ಶಬ್ದಗಳಿರುವುದರಿಂದ' ಎಂಬರ್ಥವನ್ನು ನೀವು ಹೇಳುತ್ತೀರಿ. ಹಾಗಾದರೆ 'ಸ್ವಶಬ್ದಾತ್' ಎಂಬ ಹೇತುಭಾಗದಿಂದಲೇ 'ಅಮೃತಸ್ಯೈಷ ಸೇತುಃ' 'ಯಃ ಸರ್ವಜ್ಞಃ' ಇತ್ಯಾದಿ ವಾಕ್ಯಗಳಲ್ಲಿ ಹೇಳಲ್ಪಟ್ಟ ಮುಕ್ತೋಪಸೃಪ್ಯತ್ವ, ಸರ್ವಜ್ಞತ್ವ ಮೊದಲಾದವುಗಳನ್ನೂ ಸಹ ಸಂಗ್ರಹಿಸಬಹುದು. ಪುನಃ 'ಮುಕ್ತೋಪ ಸೃಪ್ಯವ್ಯಪದೇಶಾತ್', 'ಪ್ರಕರಣಾತ್' ಇತ್ಯಾದಿ ಸೂತ್ರಗಳನ್ನು ಹೇಳಿದ್ದು ವ್ಯರ್ಥವಾಗುತ್ತದೆ. ಆದ್ದರಿಂದ ರಾಮಾನುಜರ ಅಧಿಕರಣಶರೀರವು ಅಸಾಧುವಾಗಿದೆ.

ಈ ಅಧಿಕರಣಕ್ಕೆ ಅದೃಶ್ಯತ್ವಾಧಿಕರಣದಿಂದ ಪುನರುಕ್ತಿ ಬರುತ್ತದೆ. ಏಕೆಂದರೆ 'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯಗಳೆಲ್ಲವೂ ಬ್ರಹ್ಮಪರವೆಂದು ಅದೃಶ್ಯತ್ವಾಧಿಕರಣದಲ್ಲಿ ಸಾಧನೆ ಮಾಡಿದ್ದರಿಂದ ಆ ಪ್ರಕರಣದಲ್ಲಿರುವ 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯಗಳೂ ಸಹ ಬ್ರಹ್ಮಪರವೆಂದೇ ಸಿದ್ಧವಾಗುತ್ತವೆ. ಹೀಗಿರುವಾಗ ಲೋಕಾಧಾರತ್ವವೂ ಬ್ರಹ್ಮನಲ್ಲಿದೆಯೆಂದು ಹಿಂದಿನ ಅಧಿಕರಣದಿಂದ ಸಿದ್ಧವಾದ ಮೇಲೆ ಈ ಅಧಿಕರಣವನ್ನು ಆರಂಭಿಸಿದ್ದು ವ್ಯರ್ಥವಲ್ಲವೇ?

ಈ ಪುನರುಕ್ತಿ ದೋಷವನ್ನು ಆದ್ವೈತಿಗಳು ಹೀಗೆ ಪರಿಹರಿಸುತ್ತಾರೆ - 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯವು 'ಯತ್ತದದ್ರೇಶ್ಯಮ್' ಎಂಬ ಪ್ರಕರಣದಲ್ಲಿ ಇರುವುದೇ ಇಲ್ಲವೆಂಬ ಕೃತ್ವಾಚಿಂತೆಯನ್ನು ಮಾಡಿಕೊಂಡು ಈ ಅಧಿಕರಣದ ಪೂರ್ವಪಕ್ಷವು ಹುಟ್ಟುತ್ತಿದೆ. ಆದ್ದರಿಂದ ಪುನರುಕ್ತಿ ದೋಷ ಬರುವುದಿಲ್ಲ.

ಹಾಗಾದರೆ 'ಪ್ರಕರಣಾತ್' ಎಂಬ ಸೂತ್ರವು 'ಯಸ್ಮಿನ್‌ದ್ಯೌಃ' ಎಂಬ ವಾಕ್ಯವು ಬ್ರಹ್ಮಪ್ರಕರಣದಲ್ಲಿರುವುದರಿಂದ ಬ್ರಹ್ಮಪರವಾಗಿದೆಯೆಂದು ಸಮರ್ಥಿಸುತ್ತಿದೆ. ಇದು ಅಯುಕ್ತ-ವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಕೃತ್ವಾಚಿಂತೆಯನ್ನು ಮಾಡಿಕೊಂಡು ಅಧಿಕರಣವು ಆರಂಭಣೀಯವಾಗಿದೆಯೆಂದು ತಿಳಿಸುವುದಕ್ಕಾಗಿಯೇ ಈ ಸೂತ್ರವು ಹೊರಟಿದೆ. ಹೀಗೆ ಆದ್ವೈತಿಗಳು ನೀಡುವ ಸಮಾಧಾನ.

ಇದು ತಪ್ಪು. ಬೇರೆ ಗತಿಯಿಲ್ಲದಿದ್ದಾಗ ಮಾತ್ರ ಕೃತ್ವಾಚಿಂತೆಯನ್ನು ಅವಲಂಬಿಸಬೇಕು. ಆದರೆ ಜಾಯಮಾನತ್ವಾದಿ ಲಿಂಗಗಳಿಂದ ಅಧಿಕಾಶಂಕೆಯನ್ನು ಈ ಅಧಿಕರಣದಲ್ಲಿ ಮಾಡಲು ಬರುತ್ತದೆ. ಅಥವಾ ಸಂಪೂರ್ಣ ಪ್ರಕರಣವೇ ಬ್ರಹ್ಮಪರವಾಗುವುದಿಲ್ಲವೆಂದೂ ಸಹ ಆಶಂಕಿಸಬಹುದು. ಅಥವಾ

ಅದೃಶ್ಯತ್ವಪ್ರಕರಣದಲ್ಲಿರುವ 'ಯಸ್ಮಿನ್‌ದ್ಯೌಃ' ಎಂಬ ವಾಕ್ಯಕ್ಕೆ ಸಂಗತಿಯಿಲ್ಲದ ಕಾರಣ, ಉತ್ಕರ್ಷ ಮಾಡಿ ಬೇರೆ ಪ್ರಕರಣದಲ್ಲಿ ಅದನ್ನು ಅನ್ವಯ ಮಾಡಬೇಕು. ಹೀಗೆ ಅನೇಕ ವಿಧದಲ್ಲಿ ಪೂರ್ವಪಕ್ಷವನ್ನು ಮಾಡಲು ಬರುವಾಗ ಬೇರೆ ಗತಿಯಿಲ್ಲದೇ ಕೃತ್ವಾಚಿಂತೆಯನ್ನು ಮಾಡಿದ್ದೇವೆಂಬ ಉತ್ತರವು ತಪ್ಪಾಗುತ್ತದೆ.

ರಾಮಾನುಜರ ಪುನರುಕ್ತಿ ಪರಿಹಾರ ಹೀಗಿದೆ - ಇಂದ್ರಿಯಾಧಾರತ್ವವೇ ಮೊದಲಾದ ಲಿಂಗಗಳ ಬಲದಿಂದ ಬ್ರಹ್ಮಪ್ರಕರಣವು ವಿಚ್ಛೇದವಾಗುತ್ತದೆ. ಆದ್ದರಿಂದ 'ಯಸ್ಮಿನ್‌ದ್ಯೌಃ' ಎಂಬ ವಾಕ್ಯವು ಜೀವವಿಷಯಕವಾಗಬಹುದೆಂದು ಪೂರ್ವಪಕ್ಷ ಹುಟ್ಟಿದಾಗ ಅದರ ನಿರಾಸಕ್ಕೋಸ್ಕರ ಈ ಅಧಿಕರಣವು ಸಾರ್ಥಕವಾಗಿದೆಯೆನ್ನುತ್ತಾರೆ.

ಇವರ ವಾದವೂ ಸಹ ತಪ್ಪು. ಭಾಷ್ಯ ಹಾಗೂ ಟೀಕೆಗಳಲ್ಲಿ ಹೇಳಿದ ಪ್ರಕಾರ 'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯಗಳೂ ಸಹ ಜೀವವಿಷಯಕವೇ ಆಗಿವೆಯೆಂಬುದಾಗಿ ಏಕವಾಕ್ಯತ್ವವನ್ನು ವಿವಕ್ಷಿಸಿಯೇ ಪೂರ್ವಪಕ್ಷವನ್ನು ಮಾಡಲು ಬರುವಾಗ ಪ್ರಕರಣವು ವಿಚ್ಛೇದವಾಗಿದೆಯೆಂಬ ಉತ್ತರವು ತಪ್ಪಾಗುತ್ತದೆ.

ಜೀವನು ದ್ಯುಭ್ವಾದ್ಯಾಯತನನಾಗಬಹುದೆಂದು ಶಂಕಿಸುವ ನಿನಗೆ ಅದೃಶ್ಯತ್ವಾದಿಗಳು ಜೀವನಲ್ಲಿ ಬರುತ್ತವೆ ಎಂಬ ಆಶಂಕೆಯು ಕಷ್ಟವಾಗುತ್ತದೇನು? ಅಂದರೆ ಕಷ್ಟಕರವಾದ ದ್ಯುಭ್ವಾದ್ಯಾಯತನತ್ವವನ್ನೇ ಆಶಂಕಿಸಿದ ಮೇಲೆ ಸುಲಭವಾದ ಅದೃಶ್ಯತ್ವಾದಿಗಳನ್ನು ಆಶಂಕಿಸುವುದೇನು ಶ್ರಮಸಾಧ್ಯವಲ್ಲ.

ಮತ್ತು ರಾಮಾನುಜರೂ ಸಹ 'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬಲ್ಲಿ ಏಕವಾಕ್ಯತಾಕ್ಕೋಸ್ಕರ 'ಮನೋಮಯಃ' ಇತ್ಯಾದಿಗಳಂತೆ 'ಸರ್ವಂ ಖಲ್ವಿದಂ ಬ್ರಹ್ಮ' ಮೊದಲಾದ ವಾಕ್ಯಗಳನ್ನು ಜೀವವಿಷಯಕವೆಂದೇ ಪೂರ್ವಪಕ್ಷ ಮಾಡಿದ್ದಾರೆ. ಆದ್ದರಿಂದ ಏಕವಾಕ್ಯತ್ವವನ್ನು ಒಪ್ಪಿಯೇ ಪೂರ್ವಪಕ್ಷ ಮಾಡಲು ಬರುವಾಗ ಪ್ರಕರಣಕ್ಕೆ ವಿಚ್ಛೇದ ಒಪ್ಪಿದ್ದು ತಪ್ಪಾಗುತ್ತದೆ.

ಇಲ್ಲಿಗೆ ದ್ಯುಭ್ವಾದ್ಯಧಿಕರಣದಲ್ಲಿ ಬ್ರಹ್ಮಸೂತ್ರಭಾಷ್ಯ, ಸತ್ತರ್ಕದೀಪಾವಳಿ, ತತ್ವಪ್ರದೀಪ, ತತ್ವಪ್ರಕಾಶಿಕಾ, ಭಾವದೀಪ ಇವುಗಳ ಅನುವಾದವು ಹಾಗೂ ತಂತ್ರದೀಪಿಕೆಯ ಜೊತೆ ಮತತ್ರಯ ವಿಮರ್ಶೆಯು ಸಮಾಪ್ತವಾಯಿತು

ಪರಿಶಿಷ್ಟ

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

अन्तराधिकरणम् - ४

अन्तर उपपत्तेः ॥ १-२-१३ ॥

स्थानादिव्यपदेशाच्च ॥ १-२-१४ ॥

सुखविशिष्टाभिधानादेव च ॥ १-२-१५ ॥

श्रुतोपनिषत्कगत्यभिधानाच्च ॥ १-२-१६ ॥

अनवस्थितेरसम्भवाच्च नेतरः ॥ १-२-१७ ॥

'सोऽहमस्मि, स एवाहमस्मि' इत्याद्यभ्यासार्थवादसहितबहुश्रुतिभ्योऽपि, निरवकाशोपपत्तेरेव प्राबल्यम् ॥

ನ್ಯಾಯವಿವರಣೆ ಅನುವಾದ

'ಸೋಽಹಮಸ್ಮಿ, ಸ ಏವಾಹಮಸ್ಮಿ' ಅಭ್ಯಾಸ ಅಥವಾ ಅರ್ಥವಾದದಿಂದ ಸಹಿತವಾದ ಬಹುಶ್ರುತಿಗಳು ಅಗ್ನಿಯನ್ನು ಪ್ರತಿಪಾದಿಸಬಹುದು. ಆದರೆ ಇವುಗಳಿಗಿಂತಲೂ ವಿಷ್ಣುವಿನಲ್ಲಿ ಪ್ರಸಿದ್ಧವಾದ ನಿರವಕಾಶವಾದ ಉಪಪತ್ತಿಗಳೇ ಪ್ರಬಲವಾಗಿವೆ. ಆದ್ದರಿಂದ ಚಕ್ಷುರಿಂದ್ರಿಯದಲ್ಲಿ ಅಂತರ್ಯಾಮಿಯಾಗಿ ರಮಣ ಮಾಡುವವವನು ಈಶ್ವರನೇ ಆಗಿದ್ದಾನೆ.

ಇಲ್ಲಿ ನ್ಯಾಯವಿವರಣದಲ್ಲಿ ಅಂತರಾಧಿಕರಣವು ಸಮಾಪ್ತವಾಯಿತು.

ನ್ಯಾಯವಿವರಣೆ ಪಂಚಿಕಾ

'य एषोऽन्तरक्षिणि पुरुषो दृश्यते' इत्यत्राक्षिस्थत्वेनाग्निरेवोच्यते । 'य एष आदित्ये पुरुषः सोऽहमस्मि' इत्यग्निना अक्ष्यादित्यस्थत्वेनात्मना उपदिष्टत्वात् । अक्ष्यादित्ययोरेकविधत्वात् ।

'य एषोऽन्तरक्षिणि पुरुषो दृश्यते' ಎಂಬ ಶ್ರುತಿಯಲ್ಲಿ ಚಕ್ಷುರಿಂದ್ರಿಯಲ್ಲಿದ್ದಾನೆಂದು ಪ್ರತಿಪಾದಿತನಾಗಿದವನು ಅಗ್ನಿಯೇ ಆಗಿದ್ದಾನೆ. ಏಕೆಂದರೆ 'य एष आदित्ये पुरुषः सोऽहमस्मि' ಎಂಬಲ್ಲಿ ಅಗ್ನಿಯು ತಾನು ಚಕ್ಷುರಿಂದ್ರಿಯದಲ್ಲಿಯೂ ಆದಿತ್ಯಮಂಡಲದಲ್ಲಿಯೂ ಇದ್ದೇನೆಂದು ಹೇಳಿಕೊಂಡಿದ್ದಾನೆ. ಅಕ್ಷಿ ಹಾಗೂ ಆದಿತ್ಯರಲ್ಲಿ ಏಕವಿಧತ್ವವಿರುವುದರಿಂದ ಒಬ್ಬನೇ ಎರಡೂ ಕಡೆ ಇದ್ದಾನೆಂದು ಹೇಳಬೇಕು.

नचात्रोपदिष्टो नाग्निरिति युक्तम् । 'अथ हाग्नयः समूदिरे', 'आहवनीयोऽनुशशास' इत्यादि बहुशोऽग्निश्रुतिसद्भावात् । नचाग्न्यादिश्रुतिरीश्वरविषयाः त्रेताग्निविषयतायाः स्फुटं प्रतीतेः ।

ಇಲ್ಲಿ ಉಪದೇಶಿಸುತ್ತಿರುವವನು ಅಗ್ನಿಯಲ್ಲವೆಂದು ಹೇಳಬಾರದು. ಏಕೆಂದರೆ 'अथ हाग्नयः समूदिरे', 'आहवनीयोऽनुशशास' ಇತ್ಯಾದಿಯಾಗಿ ಅನೇಕ ಬಾರಿ

ಅಗ್ನಿಶಬ್ದವು ಕೇಳಿಸುತ್ತಿದೆ. ಅಗ್ನಿಶ್ರುತಿಯು ಈಶ್ವರಪರವಾಗಿದೆಯೆಂದು ಹೇಳಬಾರದು. ಏಕೆಂದರೆ ಆಹವನೀಯವೇ ಮೊದಲಾದ ಮೂರು ಅಗ್ನಿಗಳನ್ನು ಪ್ರತಿಪಾದಿಸುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ.

'आत्मा मे भद्रसेनः' इतिवत्, 'सोऽहमस्मि' इत्युपचारः किं न भवेदिति चेन्न । 'सोऽहमस्मि' इत्यस्यार्थस्याभ्यासात् । 'अपहते पापकृत्याम्' इत्याद्यर्थवादाच्च । अभ्यासार्थवादयोश्च तात्पर्यलिङ्गयोरुपचारविरोधित्वात् ।

'ಆತ್ಮಾ ಮೇ ಭದ್ರಸೇನಃ' 'ಭದ್ರಸೇನನು ನನ್ನ ಆತ್ಮ' ಎಂದು ಹೇಳಿದಂತೆ 'ಸೋऽಹಮಸ್ಮಿ' ಎಂಬ ಅಗ್ನಿಯ ಉಪದೇಶವೂ ಸಹ ಏಕೆ ಔಪಚಾರಿಕವಾಗಬಾರದು? ಎಂದು ಪ್ರಶ್ನಿಸಬಾರದು. 'ಸೋऽಹಮಸ್ಮಿ' ಎಂಬುದಾಗಿ ಅನೇಕ ಬಾರಿ ಅಗ್ನಿಯು 'ಅಹಂ' ಎಂದು ಪ್ರಯೋಗಿಸಿದ್ದರಿಂದ ಅಭ್ಯಾಸ ಪ್ರಮಾಣದ ಆಧಾರದಿಂದ ಅಗ್ನಿಯೇ ಚಕ್ಷುರಂತಸ್ಥನೆಂದು ನಿರ್ಣಯವಾಗುತ್ತದೆ. ಮತ್ತು 'ಅಪಹತೇ ಪಾಪಕೃತ್ಯಾಂ' ಎಂಬ ಅರ್ಥವಾದ ಪ್ರಮಾಣದ ಆಧಾರದಿಂದಲೂ ಅಗ್ನಿಯೇ ಚಕ್ಷುರಂತಸ್ಥನಾಗಿದ್ದಾನೆ. ಅಭ್ಯಾಸ ಹಾಗೂ ಅರ್ಥವಾದವೆಂಬ ತಾತ್ಪರ್ಯಲಿಂಗಗಳು ಔಪಚಾರಿಕ ಪ್ರಯೋಗಕ್ಕೆ ವಿರೋಧಿಯಾಗಿವೆ.

नच 'प्राणो वा अहमस्मि' इतिवदन्तर्याम्यपेक्षयेति वाच्यम् । 'सोऽहमस्मि' इत्युक्त्वा पुनः 'स एवाऽहमस्मि' इति सावधारणमुक्तत्वात्। अवधारणेन च प्रकारान्तराणां सर्वेषां व्यावर्तितत्वात् । अत एवात्मादिश ब्दोऽप्यमुख्यार्थोऽङ्गीकार्य इत्येवं प्राप्ते

ಅಂತಿಮಪ್ರಾಣಾಧಿಕರಣದಲ್ಲಿ 'ಪ್ರಾಣೋ ವಾ ಅಹಮಸ್ಮಿ' ಎಂಬುದನ್ನು ಅಂತರ್ಯಾಮ್ಯಪೇಕ್ಷೆಯಿಂದ ಹೇಳಿದಂತೆ ಇಲ್ಲಿಯೂ ಸಹ ಅಗ್ನಿಯು ಹೇಳಲ್ಪಟ್ಟ 'ಅಹಂ' ಶಬ್ದವನ್ನು ಅಂತರ್ಯಾಮಿಪರವಾಗಿ ಕೂಡಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಸೋऽಹಮಸ್ಮಿ' ಎಂದು ಹೇಳಿ ಪುನಃ 'ಸ ಏವಾऽಹಮಸ್ಮಿ' ಎಂಬುದಾಗಿ ಅವಧಾರಣಸಹಿತವಾಗಿ ಅಹಂಶಬ್ದವನ್ನು ಪ್ರಯೋಗಿಸಿದ್ದರಿಂದ ಅಂತರ್ಯಾಮಿಪರವಾಗಿ ಅರ್ಥೈಸಬಾರದು.

ಅವಧಾರಣದಿಂದ ಬೇರೆ ಎಲ್ಲಾ ಪ್ರಕಾರಗಳನ್ನು ವ್ಯಾವೃತ್ತಿ ಮಾಡಲಾಗಿದೆ. ಆದ್ದರಿಂದಲೇ ಶ್ರುತಿಯಲ್ಲಿರುವ ಆತ್ಮ ಮೊದಲಾದ ಶಬ್ದಗಳಿಗೆ ಅಗ್ನಿಯಲ್ಲಿ ಅಮುಖ್ಯಾರ್ಥವನ್ನು ಹೇಳಬೇಕೆಂದು ಪೂರ್ವಪಕ್ಷ.

समाहितम् । चक्षुरन्तःस्थो विष्णुरेव, अमृताभयत्वोपपत्तेः । आत्मादिशब्दात् स्थानादिसामर्थ्याभिधानादेश्चेति । तत्र पूर्वोत्तर-पक्षयोरुभयोरपि प्रमाणवत्त्वात् कथं निर्णय इत्यत आह – सोऽहमिति ।।

ಈ ಪೂರ್ವಪಕ್ಷಕ್ಕೆ ಸಮಾಧಾನ ಹೀಗಿದೆ - ಚಕ್ಷುರಿಂದ್ರಿಯದಲ್ಲಿ ನೆಲೆಸಿರುವವನು ವಿಷ್ಣುವೇ ಆಗಿದ್ದಾನೆ. ಇದರಿಂದ ಅಮೃತತ್ವ ಅಭಯತ್ವ ಮೊದಲಾದವುಗಳನ್ನೂ ಸಹ ಉಪಪಾದಿಸಿದಂತಾಗುತ್ತದೆ. ಆತ್ಮ ಮೊದಲಾದ ಶಬ್ದಗಳ ಬಲದಿಂದ ವಿಷ್ಣುವೇ ಚಕ್ಷುರಂತಸ್ಥನೆಂದು ನಿರ್ಣಯವಾಗುತ್ತದೆ. ಮತ್ತು ವಿಷ್ಣುವಿನಲ್ಲಿರುವ ಅಸಂಗ ಎಂಬ ಶಕ್ತಿಯು ಚಕ್ಷುರಿಂದ್ರಿಯದಲ್ಲಿ ಬಂದಿರುವುದು ಮತ್ತೊಂದು ಕಾರಣ.

ಪೂರ್ವಪಕ್ಷ ಹಾಗೂ ಸಿದ್ಧಾಂತಗಳಿಗೆ ಸಮಾನವಾದ ಪ್ರಮಾಣಗಳಿರುವಾಗ ಹೇಗೆ ನಿರ್ಣಯಿಸುವುದು ? ಎಂಬ ಪ್ರಶ್ನೆಗೆ 'ಸೋऽಹಮಸ್ಮಿ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

उपपत्तेर्निरवकाशत्वं वदता, 'सोऽहमस्मि' इत्यादेः सावकाशत्वं सूचितम् । उपपत्तेरेव, किमुतात्मशब्दसहितायाः । तथाहि, अग्निः प्रसिद्ध एवास्तु, 'सोऽहस्मि' इत्यादि तु अन्तर्याम्यपेक्षया सावकाशम् । अवधारणं चान्तर्यामिणो विशेषाभावप्रतिपादनार्थम् । तथैवाभ्यासादिकं तात्पर्यद्योतकम् । उपपत्त्यादेस्तु निरवकाशत्वं स्फुटमेवेति ।।

ವಿಷ್ಣುವಿನಲ್ಲಿರುವ ಉಪಪತ್ತಿಗಳು ನಿರವಕಾಶಗಳಾಗಿವೆ ಎಂದು ಹೇಳಿದ್ದರಿಂದ 'ಸೋऽಹಮಸ್ಮಿ' ಎಂಬ ಅಭ್ಯಾಸ ಹಾಗೂ ಅರ್ಥವಾದಗಳಿಂದ ಸಹಿತವಾದ ಶ್ರುತಿಯು ಸಾವಕಾಶವಾಗಿದೆಯೆಂದು ಸೂಚಿಸಿದಂತಾಯಿತು. ಉಪಪತ್ತಿಯಿಂದಲೇ ನಿರ್ಣಯವಾಗುವಾಗ ಆತ್ಮ ಮೊದಲಾದ ಶ್ರುತಿಯ ಆಧಾರವಿರುವುದರಿಂದ ವಿಷ್ಣುವೇ ಚಕ್ಷುರಂತಸ್ಥನೆಂದು ಕೈಮುತ್ಯ ನ್ಯಾಯದಿಂದ ಸಿದ್ಧವಾಗುತ್ತದೆ.

ಅದು ಹೀಗೆ - ಪ್ರಸಿದ್ಧನಾದ ಅಗ್ನಿಯು ಉಪದೇಶಿಸಿದ್ದಾನೆಂದು ವಿವಕ್ಷಿಸಿದ್ದರೂ 'ಸೋಽಹ ಮಸ್ಮಿ' ಎಂಬ ಮಾತು ಅಂತರ್ಯಾಮಿಯನ್ನು ಪ್ರತಿಪಾದಿಸುವ ಮೂಲಕ ಸಾವಕಾಶವಾಗುತ್ತದೆ. ಅವಧಾರಣೆಯೂ ಅಂತರ್ಯಾಮಿಯಲ್ಲಿ ವಿಶೇಷವಿಲ್ಲವೆಂದು ತಿಳಿಸುತ್ತಿದೆ. ಇದರಂತೆ ಅಭ್ಯಾಸಾದಿಗಳೂ ಸಹ ತಾತ್ಪರ್ಯದ್ಯೋತಕವಾಗಿವೆ. ವಿಷ್ಣುವಿನಲ್ಲಿರುವ ಉಪಪತ್ಯಾದಿಗಳು ನಿರವಕಾಶವಾಗಿವೆಯೆಂಬುದು ಸ್ಪಷ್ಟವಾದ ವಿಷಯ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣಟೀಕೆಯ
ಕನ್ನಡಾನುವಾದದಲ್ಲಿ ಅಂತರಾಧಿಕರಣವು ಸಮಾಪ್ತವಾಯಿತು.

* * * * *

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

अन्तर्याम्यधिकरणम् (१।२।५)

पृथिव्यादिशरीरत्वं च न निरवकाशम् । यौगिकशरीरत्वोपपत्तेर्विष्णोरपि ॥५॥

ಅಂತರ್ಯಾಮಿಯು ವಿಷ್ಣುವಲ್ಲವೆನ್ನಲು ಪೃಥಿವ್ಯಾದಿಶರೀರತ್ವವು ನಿರವಕಾಶಲಿಂಗ-ವಾಗಿದೆಯೆಂದು ಪೂರ್ವಪಕ್ಷ.

ಶರೀರಶಬ್ದಕ್ಕೆ ಯೌಗಿಕಾರ್ಥವನ್ನು ಸ್ವೀಕರಿಸಿದಾಗ ಪೃಥಿವ್ಯಾದಿಶರೀರತ್ವವೆಂಬ ಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಗಿದೆಯೆಂದು ಸಿದ್ಧಾಂತ.

ಟೀಕಾ – अन्तर्याम्यधिदैवादिषु तद्धर्मव्यपदेशात् ।। निरवकाशेनामृतत्वादिनाऽक्षिस्थो हरिरेवेति प्रतिपादितेऽपि अन्तर्यामी विष्णोरन्य एव स्यात् । पृथिव्यादिशरीरस्य तत्रावकाशाभावादित्याशङ्कायामाह –पृथिव्यादीति ।।

ಹಿಂದಿನ ಅಧಿಕರಣದಲ್ಲಿ ಅಮೃತತ್ವ ಮೊದಲಾದ ನಿರವಕಾಶಲಿಂಗಗಳ ಬಲದಿಂದ ಚಕ್ಷುರಿಂದ್ರಿಯದಲ್ಲಿರುವವನು ಶ್ರೀಹರಿಯೇ ಆಗಿದ್ದಾನೆಂದು ಪ್ರತಿಪಾದಿಸಲಾಯಿತು. ಆದರೆ ಅಂತರ್ಯಾಮಿಯಾದವನು ವಿಷ್ಣುವಿಗಿಂತ ಭಿನ್ನನಾದ ವ್ಯಕ್ತಿಯೇ ಆಗಬೇಕು. ಏಕೆಂದರೆ ಅಂತರ್ಯಾಮಿ ಪ್ರಕರಣದಲ್ಲಿ ಪೃಥಿವೀ ಮೊದಲಾದವುಗಳು ಯಾರಿಗೆ ಶರೀರವಾಗಿವೆಯೋ ಅವನೇ ಎಲ್ಲರಲ್ಲೂ ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ. ಈ ಪೃಥಿವ್ಯಾದಿ-ಶರೀರತ್ವವೆಂಬ ಲಿಂಗವು ನಿರವಕಾಶವಾದ್ದರಿಂದ ವಿಷ್ಣುವನ್ನು ಅಂತರ್ಯಾಮಿಯೆಂದು ಹೇಗೆ ಹೇಳುತ್ತೀರಿ?

ಈ ಆಕ್ಷೇಪಕ್ಕೆ ''ಪೃಥಿವ್ಯಾದಿಶರೀರತ್ವಂ'' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ. ಪೃಥಿವ್ಯಾದಿಶರೀರತ್ವವು ನಿರವಕಾಶವಾಗಿಲ್ಲ.

कुतो न? इत्यत आह – यौगिकेति ।। अशरीरस्यापि विष्णोः 'शीर्यते नित्यमेवास्मात्' इत्युक्तरीत्या पृथिव्यादिना योगवृत्तिसिद्धशरीरशब्दवाच्यत्व-सम्भवादित्यर्थः ।

ಏಕೆ ನಿರವಕಾಶವಾಗಿಲ್ಲ? ಎಂಬ ಪ್ರಶ್ನೆಗೆ ''ಯೌಗಿಕ'' ಇತ್ಯಾದಿ ಮಾತುಗಳಿಂದ ಉತ್ತರಿಸುತ್ತಿದ್ದಾರೆ. ವಸ್ತುತಃ ಪೃಥಿವೀ ಮೊದಲಾದ ಭೂತಪದಾರ್ಥಗಳು ವಿಷ್ಣುವಿಗೆ ಶರೀರವಾಗಿಲ್ಲ. ಆದರೂ ಸಹ 'ಶೀರ್ಯತೇ ನಿತ್ಯಮೇವಾಸ್ಮಾತ್' ಎಂಬ ಅರ್ಥವನ್ನು ವಿವಕ್ಷಿಸಿದಾಗ ಪೃಥಿವ್ಯಾದಿಗಳು ಭಗವಂತನ ಶರೀರವಾಗಬಹುದು. ಅಂದರೆ ಯಾರ ದೆಸೆಯಿಂದ ಪೃಥಿವ್ಯಾದಿಗಳು ನಿತ್ಯವಾಗಿ ನಾಶವನ್ನು ಹೊಂದುತ್ತವೋ ಅಂತಹವನು ಶರೀರೀ ಎನಿಸಿದ್ದಾನೆ. ಹೀಗೆ ಯೋಗವೃತ್ತಿಯಿಂದ ಸಿದ್ಧವಾದ ಶರೀರಶಬ್ದವಾಚ್ಯತ್ವವನ್ನು ವಿಷ್ಣುವಿನಲ್ಲಿ ಕೂಡಿಸಬಹುದು.

योगवृत्त्या विष्णुं प्रति शरीरशब्दवाच्यानीति यावत् । अविदितत्वादिबलेन प्रथमप्राप्ताया अपि रूढेः परित्यागोपपत्तेरिति ।।

ಪೃಥಿವೀ ಮೊದಲಾದವುಗಳು ವಿಷ್ಣುವಿಗೆ ಯೌಗಿಕಾರ್ಥವನ್ನು ವಿವಕ್ಷಿಸಿದಾಗ ಶರೀರವಾಗುತ್ತವೆ. ಎಂದು ತಿಳಿಯಬೇಕು. ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ವಿಷ್ಣುವಿನಲ್ಲಿ ಯೌಗಿಕಾರ್ಥವನ್ನು ವಿವಕ್ಷಿಸುವುದು ತಪ್ಪಲ್ಲವೇ ಎಂದು ಪ್ರಶ್ನಿಸಬಾರದು. ಅವಿದಿತತ್ವವೇ ಮೊದಲಾದ ವಿಷ್ಣುವಿನ ಲಿಂಗಗಳು ಕೇಳಿಸುತ್ತಿವೆ. ಇವುಗಳ ಬಲದಿಂದ ಮೊದಲು ಪ್ರಾಪ್ತವಾದ ರೂಢಿಯನ್ನು ಬಿಟ್ಟು ಯೌಗಿಕಾರ್ಥವನ್ನು ಸ್ವೀಕರಿಸುವುದು ಸಮಂಜಸವಾಗುತ್ತದೆ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣೆಯ ಟೀಕೆಯ
ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಸಮಾಪ್ತವಾಯಿತು.

* * * * *

॥ ಶ್ರೀಗುರುಭ್ಯೋ ನಮಃ ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

अदृश्यत्वाधिकरणम् (१।२।६)

न्यायविवरणम् – 'अक्षरात् परतः परः' इति श्रुतेरपि नाक्षरात् सम्भवतीत्यस्याः निरवकाशत्वम् । अक्षरात् परतः परस्याप्यक्षरान्तरत्ववचनात्।।

ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಗಿಂತಲೂ ಅಕ್ಷರಾತ್ ಸಂಭವತೀಹ ವಿಶ್ವಮ್ ಎಂಬ ಶ್ರುತಿಗೆ ನಿರವಕಾಶತ್ವವನ್ನು ಹೇಳಬಾರದು. ಏಕೆಂದರೆ ಜಗತ್ತಿಗೆ ಕಾರಣವಾದ ಅಕ್ಷರಕ್ಕೆ ಈ

ಶ್ರುತಿಯಲ್ಲಿ ಅಕ್ಷರನಿಂದ ಉತ್ತಮೋತ್ತಮತ್ವವು ಹೇಳಲ್ಪಟ್ಟಿದೆ. ಅಕ್ಷರನಿಂದ ಉತ್ತಮೋತ್ತಮತ್ವ, ಹಾಗೂ ಅಕ್ಷರಶಬ್ದಪ್ರತಿಪಾದ್ಯತ್ವ ಒಬ್ಬನೇ ವ್ಯಕ್ತಿಗೆ ಅಸಂಭಾವಿತವಲ್ಲ. ಮೂರು ಬಗೆಯ ಅಕ್ಷರಗಳಿರುವುದರಿಂದ ಮುಖ್ಯವಾದ ಅಕ್ಷರಶಬ್ದವಾಚ್ಯನು ವಿಷ್ಣುವಾಗಿದ್ದಾನೆಂದಭಿಪ್ರಾಯ.

ಟೀಕಾ – अदृश्यत्वादिगुणको धर्मोक्तेः ।। 'यत् तदद्रेश्यम्' इत्युक्तं विष्णोरन्यत्रैव स्यात् । तस्मिन् 'अक्षरात् सम्भवतीह विश्वम्' इत्यक्षरशब्दश्रवणात्। तस्य च प्रधानादौ रूढत्वात् ।

'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂಬಲ್ಲಿ ಅಕ್ಷರಶಬ್ದವು ಪ್ರಕೃತ್ಯಾದಿಗಳಲ್ಲಿ ರೂಢವಾಗಿದೆ. ಆದ್ದರಿಂದ 'ಯತ್ ತದದ್ರೇಶ್ಯಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅದೃಶ್ಯತ್ವವು ವಿಷ್ಣುವಿಗೆ ಯುಕ್ತವಾಗುವುದಿಲ್ಲ; ಹೊರತು ಅಂತಹ ಪ್ರಕೃತ್ಯಾದಿಗಳೇ ಅದೃಶ್ಯತ್ವಾದಿಗುಣಗಳುಳ್ಳವುಗಳು. ಏಕೆಂದರೆ, ಅಕ್ಷರಶಬ್ದವು ಪ್ರಕೃತ್ಯಾದಿಗಳಲ್ಲಿ ರೂಢವಾಗಿದೆ.

यद्यपि पूर्ववददृश्यत्वादिबलेन रूढिं परित्यज्य योगवृत्त्याऽक्षरशब्दो विष्णौ सम्भवति । तथाप्यत्र न विष्णुविषयोऽङ्गीकर्तुं शक्यते ।

ವಸ್ತುತಃ ಹಿಂದಿನಅಧಿಕರಣದಲ್ಲಿ ಅದೃಶ್ಯತ್ವಾದಿಲಿಂಗಗಳ ಬಲದಿಂದ ರೂಢಿಯನ್ನು ಬಿಟ್ಟು ಯೌಗಿಕವೃತ್ತಿಯಿಂದ ವಿಷ್ಣುವಿನಲ್ಲಿ ಅಕ್ಷರಶಬ್ದಪ್ರತಿಪಾದ್ಯತ್ವವನ್ನು ಹೇಳಬಹುದು. ಆದರೂ ಸಹ ಪ್ರಕೃತ ಅಕ್ಷರಶಬ್ದವಾಚ್ಯತ್ವವನ್ನು ವಿಷ್ಣುವಿಗೆ ಹೇಳಲು ಸಾಧ್ಯವಿಲ್ಲ.

'अक्षरात् परतः परः' इत्युत्तरश्रुत्या अस्माददृश्यत्वादिगुणकाद् विश्वयोनेरक्षरात् परतः परस्याभिधानात् । न हि विष्णोः परोऽङ्गीक्रियते । इत्येवं प्राप्ते

ಏಕೆಂದರೆ 'ಅಕ್ಷರಾತ್ ಪರತಃ ಪರಃ' ಎಂಬ ಮುಂದಿನ ಶ್ರುತಿಯಿಂದ ಅದೃಶ್ಯತ್ವಾದಿಗುಣಗಳುಳ್ಳ ಜಗತ್ತಿಗೆ ಕಾರಣವಾದ ಅಕ್ಷರದಿಂದ ಉತ್ತಮೋತ್ತಮತ್ವವನ್ನು ವಿಷ್ಣುವಿನಲ್ಲಿ ಹೇಳಲಾಗಿದೆ. ಅಕ್ಷರಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಅವನಿಗಿಂತ ಉತ್ತಮನಾದ ಮತ್ತೊಬ್ಬ ವ್ಯಕ್ತಿಯು ಇರಬೇಕಾಗುತ್ತದೆ. ಇಷ್ಟು ಪೂರ್ವಪಕ್ಷ.

समाधत्ते – अक्षरादिति ।। 'श्रुतेः' इति पञ्चमी । अस्याः श्रुतेरिति वर्तते ।

ಈ ಪೂರ್ವಪಕ್ಷಕ್ಕೆ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯಿಂದ ಸಮಾಧಾನವನ್ನು ಹೇಳುತ್ತಿದ್ದಾರೆ. 'ಶ್ರುತೇಃ' ಎಂಬುದು ಪಂಚಮ್ಯಂತವಾದ ಪದವಾಗಿದೆ. 'ಅಸ್ಯಾಃ ಶ್ರುತೇಃ' ಎಂದು ಶೇಷಪೂರಣಮಾಡಿಕೊಂಡು ಅನ್ವಯ ಹೇಳಬೇಕು.

अक्षरात् परतः पराभिधान्यामुक्तश्रुतौ विद्यमानायामपि 'अक्षरात् सम्भवतीह विश्वम्' इत्यक्षरश्रुतेः विष्णौ निरवकाशत्वं नास्तीत्यर्थः ।

ಅಕ್ಷರನಿಂದ ಉತ್ತಮೋತ್ತಮತ್ವವನ್ನು ಹೇಳುವ ಅಕ್ಷರಾತ್ ಪರತಃ ಪರ ಎಂಬ ಶ್ರುತಿರಬಹುದು. ಆದರೂ ಸಹ 'ಅಕ್ಷರಾತ್ ಸಂಭವತೀಹ ವಿಶ್ವಮ್' ಅಕ್ಷರನಿಂದ ಈ ಜಗತ್ತು ಹುಟ್ಟುತ್ತದೆ ಎಂಬಅಕ್ಷರ ಶ್ರುತಿಯು ವಿಷ್ಣುವಿನಲ್ಲಿ ನಿರವಕಾಶವಾಗುವುದಿಲ್ಲ. ಅಂದರೆ ಈ ಶ್ರುತಿಯಲ್ಲಿರುವ ಅಕ್ಷರಶಬ್ದದಿಂದಲೂ ವಿಷ್ಣುವೇ ವಾಚ್ಯನಾಗುತ್ತಾನೆಂದರ್ಥ.

कुतः? अस्यैव विश्वयोनेरक्षरस्याक्षरात् परतः परत्वमुत्तरश्रुत्योच्यते । न त्वेतत्प्रतियोगिकपरत्वं वाऽनन्य इत्यङ्गीकारात् ।

ಏಕೆಂದರೆ, 'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂಬ ಶ್ರುತಿಯು ಯಾವ ವ್ಯಕ್ತಿಗೆ ಜಗತ್ಕಾರಣತ್ವವನ್ನು ಹೇಳುತ್ತಿದೆಯೋ ಅದೇ ವ್ಯಕ್ತಿಗೇ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯು ಉತ್ತಮೋತ್ತಮತ್ವವನ್ನು ಹೇಳುತ್ತಿದೆ. ಹೊರತು ಜಗತ್ಕಾರಣನಾದ ವ್ಯಕ್ತಿ-ಪ್ರತಿಯೋಗಿಕವಾದ ಪರತ್ವವನ್ನು ಬೇರೆಯವರಿಗೆ ಹೇಳುತ್ತಿಲ್ಲ ಎಂದು ಅಂಗೀಕರಿಸಲಾಗಿದೆ.

अक्षरात् परतः परत्वं चाक्षरत्वं चैकस्यैव व्याहतमित्यत आह – अक्षरादिति ।।

ಒಬ್ಬನೇ ವ್ಯಕ್ತಿಗೆ ಅಕ್ಷರನಿಂದ ಉತ್ತಮೋತ್ತಮತ್ವವು ಹಾಗೂ ಉತ್ತಮತ್ವವು ಕೂಡುವುದಿಲ್ಲವೆಂದು ಹೇಳಬಾರದು. ಏಕೆಂದರೆ, ವ್ಯಾಹತಿ ಬರುತ್ತದೆಂಬ ಆಕ್ಷೇಪಕ್ಕೆ 'ಅಕ್ಷರಾತ್ ಪರತಃ ಪರಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಶ್ರುತಿಯಲ್ಲಿ ಅಕ್ಷರನಿಂದ ಉತ್ತಮೋತ್ತಮತ್ವವು ಹೇಳಲ್ಪಟ್ಟಿದೆ. ಅಕ್ಷರನಿಂದ ಉತ್ತಮೋತ್ತಮತ್ವ, ಹಾಗೂ ಅಕ್ಷರಶಬ್ದಪ್ರತಿಪಾದ್ಯತ್ವ ಒಬ್ಬನೇ ವ್ಯಕ್ತಿಗೆ ಅಸಂಭಾವಿತವಲ್ಲ. ಮೂರು ಬಗೆಯ ಅಕ್ಷರಗಳಿರುವುದರಿಂದ ಮುಖ್ಯವಾದ ಅಕ್ಷರಶಬ್ದವಾಚ್ಯನು ವಿಷ್ಣುವಾಗಿದ್ದಾನೆಂದಭಿಪ್ರಾಯ.

टीका – अदृश्यत्वादिगुणको धर्मोक्तेः ।। 'यत् तदद्रेश्यम्' इत्युक्तं विष्णोरन्यत्रैव स्यात् । तस्मिन् 'अक्षरात् सम्भवतीह विश्वम्' इत्यक्षरशब्दश्रवणात्। तस्य च प्रधानादौ रूढत्वात् ।

'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂಬಲ್ಲಿ ಅಕ್ಷರಶಬ್ದವು ಪ್ರಕೃತ್ಯಾದಿಗಳಲ್ಲಿ ರೂಢವಾಗಿದೆ. ಆದ್ದರಿಂದ 'ಯತ್ ತದದ್ರೇಶ್ಯಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅದೃಶ್ಯತ್ವವು ವಿಷ್ಣುವಿಗೆ ಯುಕ್ತವಾಗುವುದಿಲ್ಲ; ಹೊರತು ಅಂತಹ ಪ್ರಕೃತ್ಯಾದಿಗಳೇ ಅದೃಶ್ಯತ್ವಾದಿಗುಣಗಳುಳ್ಳವುಗಳು. ಏಕೆಂದರೆ, ಅಕ್ಷರಶಬ್ದವು ಪ್ರಕೃತ್ಯಾದಿಗಳಲ್ಲಿ ರೂಢವಾಗಿದೆ.

यद्यपि पूर्ववददृश्यत्वादिबलेन रूढिं परित्यज्य योगवृत्त्याऽक्षरशब्दो विष्णौ सम्भवति । तथाप्यत्र न विष्णुविषयोऽङ्गीकर्तुं शक्यते ।

ವಸ್ತುತಃ ಹಿಂದಿನಅಧಿಕರಣದಲ್ಲಿ ಅದೃಶ್ಯತ್ವಾದಿಲಿಂಗಗಳ ಬಲದಿಂದ ರೂಢಿಯನ್ನು ಬಿಟ್ಟು ಯೌಗಿಕವೃತ್ತಿಯಿಂದ ವಿಷ್ಣುವಿನಲ್ಲಿ ಅಕ್ಷರಶಬ್ದಪ್ರತಿಪಾದ್ಯತ್ವವನ್ನು ಹೇಳಬಹುದು. ಆದರೂ ಸಹ ಪ್ರಕೃತ ಅಕ್ಷರಶಬ್ದವಾಚ್ಯತ್ವವನ್ನು ವಿಷ್ಣುವಿಗೆ ಹೇಳಲು ಸಾಧ್ಯವಿಲ್ಲ.

'अक्षरात् परतः परः' इत्युत्तरश्रुत्या अस्माददृश्यत्वादिगुणकाद् विश्वयोनेरक्षरात् परतः परस्याभिधानात् । न हि विष्णोः परोऽङ्गीक्रियते । इत्येवं प्राप्ते

ಏಕೆಂದರೆ 'ಅಕ್ಷರಾತ್ ಪರತಃ ಪರಃ' ಎಂಬ ಮುಂದಿನ ಶ್ರುತಿಯಿಂದ ಅದೃಶ್ಯತ್ವಾದಿಗುಣಗಳುಳ್ಳ ಜಗತ್ತಿಗೆ ಕಾರಣವಾದ ಅಕ್ಷರದಿಂದ ಉತ್ತಮೋತ್ತಮತ್ವವನ್ನು ವಿಷ್ಣುವಿನಲ್ಲಿ ಹೇಳಲಾಗಿದೆ. ಅಕ್ಷರಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಅವನಿಗಿಂತ ಉತ್ತಮನಾದ ಮತ್ತೊಬ್ಬ ವ್ಯಕ್ತಿಯು ಇರಬೇಕಾಗುತ್ತದೆ. ಇಷ್ಟು ಪೂರ್ವಪಕ್ಷ.

समाधत्ते – अक्षरादिति ।। 'श्रुतेः' इति पञ्चमी । अस्याः श्रुतेरिति वर्तते ।

ಈ ಪೂರ್ವಪಕ್ಷಕ್ಕೆ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯಿಂದ ಸಮಾಧಾನವನ್ನು ಹೇಳುತ್ತಿದ್ದಾರೆ. 'ಶ್ರುತೇಃ' ಎಂಬುದು ಪಂಚಮ್ಯಂತವಾದ ಪದವಾಗಿದೆ. 'ಅಸ್ಯಾಃ ಶ್ರುತೇಃ' ಎಂದು ಶೇಷಪೂರಣಮಾಡಿಕೊಂಡು ಅನ್ವಯ ಹೇಳಬೇಕು.

अक्षरात् परतः पराभिधान्यामुक्तश्रुतौ विद्यमानायामपि 'अक्षरात् सम्भवतीह विश्वम्' इत्यक्षरश्रुतेः विष्णौ निरवकाशत्वं नास्तीत्यर्थः ।

ಅಕ್ಷರನಿಂದ ಉತ್ತಮೋತ್ತಮತ್ವವನ್ನು ಹೇಳುವ ಅಕ್ಷರಾತ್ ಪರತಃ ಪರ ಎಂಬ ಶ್ರುತಿರಬಹುದು. ಆದರೂ ಸಹ 'ಅಕ್ಷರಾತ್ ಸಂಭವತೀಹ ವಿಶ್ವಮ್' ಅಕ್ಷರನಿಂದ ಈ ಜಗತ್ತು ಹುಟ್ಟುತ್ತದೆ ಎಂಬಅಕ್ಷರ ಶ್ರುತಿಯು ವಿಷ್ಣುವಿನಲ್ಲಿ ನಿರವಕಾಶವಾಗುವುದಿಲ್ಲ. ಅಂದರೆ ಈ ಶ್ರುತಿಯಲ್ಲಿರುವ ಅಕ್ಷರಶಬ್ದದಿಂದಲೂ ವಿಷ್ಣುವೇ ವಾಚ್ಯನಾಗುತ್ತಾನೆಂದರ್ಥ.

कुतः? अस्यैव विश्वयोनेरक्षरस्याक्षरात् परतः परत्वमुत्तरश्रुत्योच्यते । न त्वेतत्प्रतियोगिकपरत्वं वाऽनन्य इत्यङ्गीकारात् ।

ಏಕೆಂದರೆ, 'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂಬ ಶ್ರುತಿಯು ಯಾವ ವ್ಯಕ್ತಿಗೆ ಜಗತ್ಕಾರಣತ್ವವನ್ನು ಹೇಳುತ್ತಿದೆಯೋ ಅದೇ ವ್ಯಕ್ತಿಗೇ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯು ಉತ್ತಮೋತ್ತಮತ್ವವನ್ನು ಹೇಳುತ್ತಿದೆ. ಹೊರತು ಜಗತ್ಕಾರಣನಾದ ವ್ಯಕ್ತಿ-ಪ್ರತಿಯೋಗಿಕವಾದ ಪರತ್ವವನ್ನು ಬೇರೆಯವರಿಗೆ ಹೇಳುತ್ತಿಲ್ಲ ಎಂದು ಅಂಗೀಕರಿಸಲಾಗಿದೆ.

अक्षरात् परतः परत्वं चाक्षरत्वं चैकस्यैव व्याहतमित्यत आह – अक्षरादिति ।।

ಒಬ್ಬನೇ ವ್ಯಕ್ತಿಗೆ ಅಕ್ಷರನಿಂದ ಉತ್ತಮೋತ್ತಮತ್ವವು ಹಾಗೂ ಉತ್ತಮತ್ವವು ಕೂಡುವುದಿಲ್ಲವೆಂದು ಹೇಳಬಾರದು. ಏಕೆಂದರೆ, ವ್ಯಾಹತಿ ಬರುತ್ತದೆಂಬ ಆಕ್ಷೇಪಕ್ಕೆ 'ಅಕ್ಷರಾತ್ ಪರತಃ ಪರಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

स्यादियं व्याहतिर्यदि 'यस्मादक्षरात् परतः परः, तदेवाक्षरं स्वयमिति ब्रूमः । न चैवम् । 'अपरं त्वक्षरं या सा' इत्यादिनाऽक्षरत्रयाभिधानेनाक्षरात् परतः परस्याप्यक्षरान्तरत्ववचनात् ।

ಈ ವ್ಯಾಹತಿದೋಷವು ಬರುತ್ತಿತ್ತು. ಒಂದು ವೇಳೆ ಯಾವ ವ್ಯಕ್ತಿಯು ಅಕ್ಷರನಿಗಿಂತ ಉತ್ತಮೋತ್ತಮನಾಗಿದ್ದಾನೋ ಅವನೇ ಸ್ವತಃ ಅಕ್ಷರನೂ ಆಗಿದ್ದಾನೆಂದು ಹೇಳಿದ್ದರೆ. ಹಾಗೆ ಹೇಳುವುದಿಲ್ಲ. ಹೊರತಾಗಿ 'ಅಪರಂ ತ್ವಕ್ಷರಂ ಯಾ ಸಾ' ಇತ್ಯಾದಿಯಾಗಿ ಪ್ರಮಾಣವಿದೆ. ಮೂರುಪದಾರ್ಥಗಳು ಅಕ್ಷರವೆನಿಸಿವೆ. ಅವುಗಳಲ್ಲಿ ಮೊದಲನೆಯ ಅಕ್ಷರವು ಜಡರೂಪವಾಗಿದೆ. ಅದಕ್ಕಿಂತ ಉತ್ತಮವಾದ ಅಕ್ಷರವೆಂದರೆ ಲಕ್ಷ್ಮೀದೇವಿ. ಅವಳಿಗಿಂತ ಉತ್ತಮನಾದ ಅಕ್ಷರನೆಂದರೆ ಭಗವಂತನೆಂದು ತಿಳಿಯಬೇಕು. ಹೀಗೆ ಪ್ರಮಾಣವಚನದಲ್ಲಿ ಹೇಳಿದ್ದರಿಂದ ಅಕ್ಷರನಿಂದ ಉತ್ತಮೋತ್ತಮನಿಗೂ ಅಕ್ಷರಾಂತರತ್ವವು ಯುಕ್ತವಾಗುತ್ತದೆ. ಆದ್ದರಿಂದ ಮುಖ್ಯತಃ ಅಕ್ಷರಶಬ್ದವಾಚ್ಯನಾದವನು ವಿಷ್ಣುವೇ ಆಗುತ್ತಾನೆ.

परविद्याविषयत्वबलेन प्रकृतिपरित्यागाप्रकृतग्रहणयोरुपपत्तेरिति ।।

ಹೀಗೆ ಅರ್ಥವನ್ನು ಹೇಳಿದರೆ ಪ್ರಕೃತವಾದ ಪ್ರಧಾನವೆಂಬ ಅಕ್ಷರಶಬ್ದಾರ್ಥವನ್ನು ಬಿಟ್ಟು ಅಪ್ರಕೃತವಾದ ವಿಷ್ಣುವೆಂಬರ್ಥವನ್ನು ಸ್ವೀಕರಿಸಿದಂತಾಗಿ ಪ್ರಕೃತಹಾನ ಹಾಗೂ ಅಪ್ರಕೃತಕಲ್ಪನಾ ಎಂಬ ದೋಷಗಳು ಬರುತ್ತವಲ್ಲವೇ? ಎಂದು ಪ್ರಶ್ನಿಸಬಾರದು. ಪರವಿದ್ಯಾವಿಷಯತ್ವವೆಂಬ ಲಿಂಗದ ಬಲದಿಂದ ಇದು ದೋಷವಾಗುವುದಿಲ್ಲ. ಪ್ರಬಲವಾದ ಬಾಧಕವಿದ್ದಾಗ ಪ್ರಕೃತಹಾನ, ಅಪ್ರಕೃತಕಲ್ಪನೆಗಳು ದೋಷವಾಗುವುದಿಲ್ಲವೆಂದರ್ಥ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣೆಯ ಟೀಕೆಯ

ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು.

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

वैश्वानराधिकरणम् (१।२।७)

न्यायविवरणम् – श्रुतिसाधारण्ये विशेषश्रुत्यादेर्निश्चयः । उभयत्र विशेषश्रुत्यादौ पुनः सावकाशत्वनिरवकाशत्वबलान्निश्चयः ॥७॥

॥ इति न्यायविवरणे प्रथमाध्यायस्य द्वितीयः पादः ॥

ವೈಶ್ವಾನರಶ್ರುತಿಯು ಮಹಾವಿಷ್ಣುವಿನಲ್ಲಿ ಹಾಗೂ ಅಗ್ನ್ಯಾದಿದೇವತೆಗಳಲ್ಲಿ ಸಾಧಾರಣವಾಗಿದೆ. ಆದರೂ ಸಹ 'ಆತ್ಮಾನಂ ವೈಶ್ವಾನರಮುಪಾಸ್ತೇ' ಎಂಬುದಾಗಿ ವಿಷ್ಣುವಿನಲ್ಲಿ ಮಾತ್ರ ಪ್ರಸಿದ್ಧವಾದ ಆತ್ಮಪದವನ್ನು ವೈಶ್ವಾನರನಿಗೆ ವಿಶೇಷಣವನ್ನಾಗಿ ಹೇಳಿರುವುದರಿಂದ ಮತ್ತು 'ಅಹಂ ವೈಶ್ವಾನರಃ' ಇತ್ಯಾದಿಯಾದ ನಿರವಕಾಶಶ್ರುತಿಸ್ಮೃತಿಗಳ ಸಮಾಖ್ಯಾಬಲದಿಂದ ಮಹಾವಿಷ್ಣುವೇ ವೈಶ್ವಾನರನೆಂಬ ನಾಮಾತ್ಮಕಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ನಿಶ್ಚಯಿಸಬಹುದು. ಎರಡು ಪಕ್ಷಗಳಲ್ಲಿಯೂ ವಿಶೇಷ-ಶ್ರುತಿಗಳಿದ್ದರೂ ಸಹ ಸಾವಕಾಶತ್ವ, ಹಾಗೂ ನಿರವಕಾಶತ್ವಗಳ ಬಲದಿಂದ ಭಗವಂತನೇ ಶ್ರುತಿಪ್ರತಿಪಾದ್ಯನೆಂದು ನಿಶ್ಚಯಿಸಬಹುದು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ ನ್ಯಾಯವಿವರಣದಲ್ಲಿ ಪ್ರಥಮಾಧ್ಯಾಯ ದ್ವಿತೀಯಪಾದವು ಸಮಾಪ್ತವಾಯಿತು.

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

।। अथ प्रथमाध्यायस्य तृतीयः पादः ।।

द्युभ्वाद्यधिकरणम् (१।३।१)

न्यायविवरणम् – हरिः ॐ ।। 'प्राणानां ग्रन्थिरसि' । 'रुद्रो वै लोकायतनम् ।' 'वायुना वै गौतमसूत्रेणायं च लोकः परश्च लोकः सर्वाणि भूतानि सन्दृब्धानि भवन्ति' । 'सर्वे वा एते प्राणाश्च प्राणिनश्च देवाश्च दिव्यानि च लोकाश्च लोकिनश्चालोकाश्चालोकिनश्च विष्णावेवोताश्च प्रोताश्च भवन्ति' इत्यादेः द्युभ्वाद्यायतनत्वमज्ञानां साधारणं लिङ्गम् ।।१।।

'ಯಸ್ಮಿನ್ ದ್ಯೌಃ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವು ರುದ್ರ, ವಾಯು, ವಿಷ್ಣು ಮೂವರಲ್ಲಿಯೂ ಸಾಧಾರಣವಾಗಿದೆ. ಅದು ಹೀಗೆ --

'ಎಲೈ ರುದ್ರನೇ! ನೀನು ಇಂದ್ರಿಯಗಳಿಗೆ ಅಭಿಮಾನಿಯಾಗಿರುವಿ. ದೇವತೆಗಳಿಗೆ ಆಶ್ರಯನಾಗಿರುವಿ'. 'ಸಮಸ್ತಲೋಕಗಳಿಗೂ ಸಹ ಆಶ್ರಯನಾಗಿರುವಿ. ಹೀಗೆ ರುದ್ರನಲ್ಲಿ ಸಾಧಾರಣವಾಗಿದೆ'. ಮತ್ತು,

'ಎಲೈ ಗೌತಮರೇ ಸರ್ವಜಗತ್ತಿಗೆ ಆಶ್ರಯರಾಗಿರುವ ವಾಯುದೇವರಿಂದಲೇ ಈ ಲೋಕವು ಪರಲೋಕವು ಸಮಸ್ತ ಭೂತಗಳೂ ಸಹ ಸ್ಥಿತಿಯನ್ನು ಹೊಂದಿವೆ' ಹೀಗೆ ವಾಯುದೇವನಲ್ಲಿ ಪ್ರಸಿದ್ಧವಾಗಿದೆ'.

ಮತ್ತು, 'ಸರ್ವೇ ವಾ' ಇತ್ಯಾದಿಶ್ರುತಿಯಿಂದ ಎಲ್ಲ ಇಂದ್ರಿಯಗಳು, ದೇಹವುಳ್ಳ ಜೀವರು, ದೇವತೆಗಳು ಸ್ವರ್ಗಲೋಕದಲ್ಲಿರುವ ಕಲ್ಪವೃಕ್ಷ ಮೊದಲಾದ ವಸ್ತುಗಳು, ಭೂ ಮೊದಲಾದ ಲೋಕಗಳು, ಭೂರ್ಲೋಕಗಳಿಗೆ ಅಭಿಮಾನಿಯಾದ ದೇವತೆಗಳು ಭೂರಾದಿ ಲೋಕಗಳಿಗಿಂತ ಭಿನ್ನವಾದ ವೈಕುಂಠಾದಿಲೋಕಗಳು, ಆ ಲೋಕಗಳಲ್ಲಿರುವ ಸಕಲ ಮುಕ್ತಜೀವರು ಎಲ್ಲರೂ ಸಹ ವಿಷ್ಣುವನ್ನೇ ಆಶ್ರಯಿಸಿದ್ದಾರೆ. ಅವನನ್ನೇ ಅನನ್ಯವಾಗಿ ಹೊಂದಿದ್ದಾರೆ. ಹೀಗೆ ವಿಷ್ಣುವಿ-ನಲ್ಲಿಯೂ ಸಾಧಾರಣವಾಗಿದೆ.

ಇವೇ ಮೊದಲಾದ ಶ್ರುತಿಗಳಿಂದ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ನ್ಯಾಯಾನು-ಸಂಧಾನವಿಲ್ಲದ ಅಜ್ಞಾನಿಗಳಿಗೆ ರುದ್ರಾದಿಗಳಲ್ಲಿ ಸಾಧಾರಣವಾಗಿ ಪ್ರತೀತವಾಗುತ್ತದೆ. ಆದರೆ 'ರುಜಂ ದ್ರಾವಯತೇ ಯಸ್ಮಾತ್' ಇತ್ಯಾದಿ ನಿಷ್ಪತ್ತಿಯಿಂದ ರುದ್ರ, ವಾಯು ಮೊದಲಾದ ಶಬ್ದಗಳೆಲ್ಲವೂ ಭಗವತ್ಪರವೇ ಆಗಿದೆ ಎಂದು ತಿಳಿಯಬೇಕು.

टीका – तृतीयेऽस्मिन् पादे अनुव्याख्यायामधिकरणविषयाः सङ्गृह्योक्ताः।

लिङ्गं साधारणं शब्दौ स्थानं लिङ्गमनुग्रहः ।
पुनः शब्दा लिङ्गशब्दौ विचार्या द्विःस्थिता इह ।। इति ।

ಅನುವ್ಯಾಖ್ಯಾನದಲ್ಲಿ ಮೂರನೆಯ ಪಾದದ ಎಲ್ಲ ಅಧಿಕರಣಗಳ ವಿಷಯಗಳನ್ನು ಸಂಗ್ರಹಿಸಿ ಹೇಳಿರುತ್ತಾರೆ. ಅದು ಹೀಗೆ —

ಲಿಂಗಂ ಸಾಧಾರಣಂ ಶಬ್ದೌ ಸ್ಥಾನಂ ಲಿಂಗಮನುಗ್ರಹಃ ।
ಪುನಃ ಶಬ್ದಾ ಲಿಂಗಶಬ್ದೌ ವಿಚಾರ್ಯಾ ದ್ವಿಃಸ್ಥಿತಾ ಇಹ ॥

ರುದ್ರ, ವಾಯು, ವಿಷ್ಣು ಇವರೆಲ್ಲರಲ್ಲಿಯೂ ಸಾಧಾರಣವಾದ ದ್ಯುಭ್ವಾದ್ಯಾಯತನತ್ವವೆಂಬ ಲಿಂಗ; ಹಾಗೂ ಪ್ರಾಣ ವಿಷ್ಣು, ಇವರಲ್ಲಿ ಸಾಧಾರಣವಾದ ಭೂಮಾ ಎಂಬ ಶಬ್ದ; ವಿಷ್ಣು, ಹಾಗೂ ಚೇತನಪ್ರಕೃತಿಗಳಲ್ಲಿ ಸಾಧಾರಣವಾದ ಅಕ್ಷರಶಬ್ದ; ಹಾಗೂ ವಿಷ್ಣು ಪ್ರಕೃತಿಗಳಲ್ಲಿ ಸಾಧಾರಣವಾದ ಸೃಷ್ಟಿಸ್ಥಾನ; ವಿಷ್ಣು ಆಕಾಶ ಜೀವರಲ್ಲಿ ಸಾಧಾರಣವಾದ ಹೃತ್ಪದ್ಮಮಧ್ಯಸ್ಥವೆಂಬ ಲಿಂಗ; ಜ್ಞಾನಿ, ವಿಷ್ಣು ಇವರಲ್ಲಿ ಸಾಧಾರಣವಾದ ಅನುಕೂಲ್ಯದಿಂದ ಸ್ವೀಕರಿಸುವಿಕೆ; ಈಶಾನಶಬ್ದ, ವಜ್ರಶಬ್ದ, ಜ್ಯೋತಿಃಶಬ್ದ, ಆಕಾಶಶಬ್ದ ಹಾಗೂ ಸ್ವಪ್ನಾದಿದರ್ಶನರೂಪವಾದ ಲಿಂಗ,

ಬ್ರಾಹ್ಮಣಶಬ್ದ ಇವುಗಳು ಈ ಅಧಿಕರಣದಲ್ಲಿ ವಿಚಾರಮಾಡಲು ಆರ್ಹವಾಗಿವೆ -- ಎಂದು ಈ ಶ್ಲೋಕದ ಅಭಿಪ್ರಾಯ.

तदिदं दुर्गमार्थं न्यायमालावाक्यविवरणप्रसङ्गेनादौ तावत् तद्विवृणोति । विषयावगतिपूर्वकत्वात् पूर्वोत्तरपक्षन्यायावगतेः ।

ಈ ಶ್ಲೋಕದ ಅರ್ಥವು ಸ್ವಲ್ಪ ಕಠಿಣವಾಗಿರುವುದರಿಂದ ನ್ಯಾಯಮಾಲೆಯ ವಾಕ್ಯವನ್ನು ವಿವರಿಸುವ ಮೂಲಕ ಮೊದಲು ಅದನ್ನೇ ವಿವರಿಸುತ್ತಿದ್ದಾರೆ. ವಿಷಯವನ್ನು ತಿಳಿದ ಮೇಲಷ್ಟೇ ಪೂರ್ವಪಕ್ಷನ್ಯಾಯವನ್ನು ಹಾಗೂ ಸಿದ್ಧಾಂತನ್ಯಾಯವನ್ನು ತಿಳಿಯಲು ಸಾಧ್ಯ.

अत्र 'द्युभ्वाद्यायतनं स्वशब्दात्' इति प्रथमाधिकरणसाधारणं लिङ्गं विचार्यमित्युक्तम् । किं तल्लिङ्गम्? कुत्र च साधारणम्? कथं च साधारणम्? साधारणत्वे च कथं तस्य भगवदेकविषयता? इत्यत आह – प्राणानामिति ।।

ಮೊದಲು 'द्युभ्वाद्यायतनं स्वशब्दात्' ಎಂಬ ಪ್ರಥಮಾಧಿಕರಣದಲ್ಲಿ ಸಾಧಾರಣವಾದ ಲಿಂಗವು ವಿಚಾರ್ಯವಾಗಿದೆಯೆಂದು ಹೇಳಲಾಗಿದೆ. ಆ ಲಿಂಗವು ಯಾವುದು? ಯಾವ ವ್ಯಕ್ತಿಗಳಲ್ಲಿ ಅದು ಸಾಧಾರಣವಾಗಿದೆ? ಸಾಧಾರಣವಾಗಿರುವುದಾದರೂ ಹೇಗೆ? ಸಾಧಾರಣವಾಗಿರುವದಾದರೆ ಅದು ಹೇಗೆ ಕೇವಲ ಭಗವದ್ವಿಷಯಕವಾಗಿರುವುದು? ಈ ಎಲ್ಲ ಪ್ರಶ್ನೆಗಳಿಗೆ प्राणानाम ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

अत्र 'यस्मिन् द्यौः' इत्यादिवाक्योक्तं च द्युभ्वाद्यायतनत्वलिङ्गं विचार्यम्।

ಈ ಅಧಿಕರಣದಲ್ಲಿ 'यस्मिन् द्यौः' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವನ್ನು ವಿಚಾರ ಮಾಡಬೇಕು.

यद्यप्येतानि बहूनि लिङ्गानि । तथा च वक्ष्यति 'अत्रोक्तानां लिङ्गानाम्' इति । तथाऽप्येकवाक्योक्तत्वेनैकवचनम् । तच्च रुद्र-वायु-प्रकृति-जीव-विष्णूनां साधारणम् ।

ವಸ್ತುತಃ ಇಂತಹ ಅನೇಕ ಲಿಂಗಗಳನ್ನು ಇಲ್ಲಿ ವಿಚಾರಮಾಡಬೇಕು. ಆದ್ದರಿಂದಲೇ ಮುಂದೆ

'ಅತ್ರೋಕ್ತಾನಾಂ ಲಿಂಗಾನಾಮ್' ಎಂಬಲ್ಲಿ ಅನೇಕ ಲಿಂಗಗಳು ನಿರ್ಣಯಿಸಲ್ಪಟ್ಟಿವೆ ಎಂದು ಹೇಳಿರುತ್ತಾರೆ. ಆದರೂ ಸಹ ಈ ವಾಕ್ಯದಲ್ಲಿರುವ ಕೇವಲ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವನ್ನು ವಿವಕ್ಷಿಸಿ, ಲಿಂಗಮ್ ಎಂಬುದಾಗಿ ಏಕವಚನವನ್ನು ಪ್ರಯೋಗಿಸಿದ್ದಾರೆ. ಇಂತಹ ದ್ಯುಭ್ವಾದ್ಯಾಯತನತ್ವವು ರುದ್ರ, ವಾಯು, ಪ್ರಕೃತಿ, ಜೀವ ಹಾಗೂ ವಿಷ್ಣು ಇವರೆಲ್ಲರಲ್ಲಿಯೂ ಸಾಧಾರಣವಾಗಿದೆ.

'प्राणानां रुद्रो वा' इत्यादिवाक्याद् रुद्रनिष्ठतया प्रतीतेः । ग्रथ्यन्तेऽस्मिन्निति ग्रन्थिः ।

ಅದು ಹೀಗೆ -- 'ಪ್ರಾಣಾನಾಂ' 'ರುದ್ರೋ ವಾ' ಇತ್ಯಾದಿವಾಕ್ಯಗಳ ಬಲದಿಂದ ರುದ್ರನಲ್ಲಿ ದ್ಯುಭ್ವಾದ್ಯಾಯತನತ್ವವು ಕೇಳಿಸುತ್ತಿದೆ. ಗ್ರಂಥಿಃ ಎಂದರೆ 'ಗ್ರಥ್ಯಂತೇ ಅಸ್ಮಿನ್' ಎಂಬ ನಿಷ್ಪತ್ತಿಯಿಂದ ಆಶ್ರಯನಾಗಿದ್ದಾನೆಂದರ್ಥ.

'वायुना' इत्यादिश्रुतेर्वायुनिष्ठत्वावगमात् । सूतमत्र सर्वं जगदिति सूत्रम् । सन्दृब्धानि, सङ्गतान्येव तदाधारतयाऽवस्थितानीत्यर्थः ।

'ವಾಯುನಾ' ಇತ್ಯಾದಿ ಶ್ರುತಿಗಳ ಬಲದಿಂದ ದ್ಯುಭ್ವಾದ್ಯಾಯತನತ್ವವು ವಾಯುನಿಷ್ಠ-ವಾಗಿದೆಯೆಂದು ತಿಳಿಯುತ್ತದೆ. 'ಸೂತ್ರಮ್' ಎಂಬ ಪದಕ್ಕೆ 'ಸೂತಮತ್ರ ಸರ್ವಂ ಜಗತ್' ಎಂಬ ನಿಷ್ಪತ್ತಿಯಿಂದ ಸಕಲ ಜಗತ್ತು ಇವನನ್ನು ಆಶ್ರಯಿಸಿದೆ ಎಂದರ್ಥ. 'ಸಂದೃಬ್ಧಾನಿ' ಎಂಬ ಪದಕ್ಕೆ ಸಂಬಂಧವನ್ನು ಹೊಂದಿರುವ ಪದಾರ್ಥವೇ ಅವನನ್ನು ಆಶ್ರಯಿಸಿಕೊಂಡು ಇರುತ್ತದೆ ಎಂದರ್ಥ.

'सर्वे वा एते' इत्यादिश्रुतेर्विष्णुविषयत्वप्रदर्शनात् । प्राणाः = इन्द्रियाणि । प्राणिनः जीवाः । प्राणिग्रहणेन गृहीतानामपि देवानां प्राधान्यज्ञापनाय पुनर्ग्रहणम् ।

'ಸರ್ವೇ ವಾ ಏತೇ' ಇತ್ಯಾದಿಶ್ರುತಿಗಳ ಬಲದಿಂದ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿದೆ ಎಂದು ತಿಳಿಯುತ್ತದೆ. ಪ್ರಾಣಾಃ = ಇಂದ್ರಿಯಗಳು. ಪ್ರಾಣಿನಃ = ದೇಹವುಳ್ಳ ಜೀವರುಗಳು. ವಸ್ತುತಃ ಪ್ರಾಣ ಎಂಬ ಪದದಿಂದಲೇ ದೇವತೆಗಳ ಸಂಗ್ರಹವೂ ಸಹ ಆಗುತ್ತದೆ. ಆದರೆ ಉಳಿದ

ಪ್ರಾಣಿಗಳ ದೆಸೆಯಿಂದ ದೇವತೆಗಳು ಪ್ರಧಾನರಾಗಿದ್ದಾರೆಂದು ತಿಳಿಸಲು ಪ್ರತ್ಯೇಕವಾಗಿ ಅವರನ್ನು ಸ್ವೀಕರಿಸಲಾಗಿದೆ.

दिवि भवानि दिव्यानि कल्पतरुप्रभृतीनि वस्तूनि । लोकाः = भूरादयः । तदभिमानिनः = लोकिनः । पूर्ववत् पुनर्ग्रहणम् । भूरादिभ्योऽन्ये वैकुण्ठादयोऽलोकाः। तद्गता मुक्ता अलोकिनः । 'ओताश्च प्रोताश्च' इति एतमाश्रिता इत्यर्थः ।

दिवि भवानि दिव्यानि = ಸ್ವರ್ಗಲೋಕದಲ್ಲಿರುವ ಕಲ್ಪತರು ಮೊದಲಾದ ವಸ್ತುಗಳು. लोकाः = ಭೂಲೋಕಾದಿಗಳು, ತದಭಿಮಾನಿಯಾದ ಜೀವರುಗಳು; ಹಿಂದಿನಂತೆ ಇಲ್ಲಿಯೂ ಸಹ ಪ್ರತ್ಯೇಕವಾಗಿ ಹೇಳಬೇಕು. अलोकाः = ಭೂಲೋಕಾದಿಗಳಿಂತ ಭಿನ್ನವಾದ ವೈಕುಂಠಾದಿ ಲೋಕಗಳು, ಅವುಗಳಲ್ಲಿರುವ ಮುಕ್ತಜೀವರುಗಳು; अलोकिनः = ವೈಕುಂಠಾದಿಲೋಕ-ಗಳಲ್ಲಿರುವ ಮುಕ್ತಜೀವರುಗಳು, ओताश्च प्रोताश्च = ಓತಪ್ರೋತವಾಗಿ ಹೆಣೆದುಕೊಂಡಂತೆ ವಿಷ್ಣುವನ್ನು ಆಶ್ರಯಿಸಿದ್ದಾರೆ ಎಂದರ್ಥ.

'इत्यादेः' इत्यादिग्रहणेन प्रकृत्यादिनिष्ठत्वेऽपि प्रमाणमुदाहार्यमित्याचष्टे । तच्चान्यत्रोदाहृतम् । अज्ञानां न्यायानुसन्धानरहितानां मतेन । साधारणस्य कथं सिद्धान्ते असाधारणतया साध्यते? इति शङ्काऽनेन परिहृता । एवमुत्तरत्रापि ।।

ಇತ್ಯಾದೇಃ ಎಂಬುದಾಗಿ ಆದಿಪದವನ್ನು ಹೇಳಿರುವುದರಿಂದ ಪ್ರಕೃತ್ಯಾದಿನಿಷ್ಠವಾಗಿಯೂ ಸಹ ಹೀಗೆ ಪ್ರಮಾಣವನ್ನು ಉದಾಹರಿಸಬೇಕೆಂದು ತಿಳಿಸಿರುತ್ತಾರೆ. ಪ್ರಕೃತ್ಯಾದಿಗಳೂ ಸಹ ದ್ಯುಭ್ವಾದ್ಯಾಯತನಗಳಾಗಿವೆ ಎಂಬ ವಿಷಯದಲ್ಲಿರುವ ಶ್ರುತಿಯನ್ನು ಬೇರೆ ಕಡೆ ಉದಾಹರಿಸಲಾಗಿದೆ. अज्ञानाम् = ಜ್ಞಾನಾನುಸಂಧಾನವಿಲ್ಲದ ಅಜ್ಞಾನಿಗಳ ಪಕ್ಷದಲ್ಲಿ; ಸಾಧಾರಣವಾದ ಲಿಂಗವನ್ನು ಸಿದ್ಧಾಂತದಲ್ಲಿ ಕೇವಲ ವಿಷ್ಣುನಿಷ್ಠವಾಗಿ ಅಸಾಧಾರಣವೆಂದು ಹೇಗೆ ಸಾಧಿಸುತ್ತೀರಿ? ಎಂಬ ಶಂಕೆಯನ್ನು ಇದರಿಂದ ಪರಿಹರಿಸದಂತಾಯಿತು. ಮುಂದೆಯೂ ಸಹ ಹೀಗೆಯೇ ತಿಳಿದುಕೊಳ್ಳಬೇಕು.

ಇಲ್ಲಿಗೆ ನ್ಯಾಯವಿವರಣಟೀಕೆಯಲ್ಲಿ ದ್ಯುಭ್ವಾದ್ಯಧಿಕರಣವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

ವಿಷಯಾನುಕ್ರಮಣಿಕೆ

ಅಂತರಾಧಿಕರಣ

ಬ್ರಹ್ಮಸೂತ್ರ

'ಅಂತರ ಉಪಪತ್ತೇಃ' ಎಂಬ ಸೂತ್ರವ್ಯಾಖ್ಯಾನ ೨

ಬ್ರಹ್ಮಸೂತ್ರಭಾಷ್ಯ

ಆದಿತ್ಯನಲ್ಲಿರುವವನು ಯಾರು ? ೩

ಛಾಂದೋಗ್ಯದಲ್ಲಿ ಯಾರನ್ನು ಹೇಳಿದ್ದಾರೆ ? ೪

ಅಗ್ನಿಜ್ಞಾನದಿಂದ ಮೋಕ್ಷವೇ ? ೪

ಕಣ್ಣಿನಲ್ಲಿರುವವನು ವಿಷ್ಣುವೇ ೫

ಸಕಲಭಿನ್ನನಾದ ವಿಷ್ಣು ಸಕಲಶಬ್ದವಾಚ್ಯ ೬

ಸತ್ತರ್ಕದೀಪಾವಳಿ

ಅಂತರಾಧಿಕರಣದ ವಿಷಯವಾಕ್ಯವೇನು ? ೭

ಆದಿತ್ಯ ಪುರುಷಪ್ರಾಪಕ ಶ್ರುತಿಗಳು ಯಾವುವು ? ೭

ಆದಿತ್ಯಾಧಿಷ್ಠಾತೃವು ವಿಷ್ಣುವಲ್ಲ ೮

ವಿಷ್ಣುಜ್ಞಾನದಿಂದಲೇ ಮೋಕ್ಷವಾಗಬೇಕೆಂಬ ನಿಯಮವಿಲ್ಲ ೮

ಅಮೃತತ್ವಾದಿಧರ್ಮಗಳು ವಿಷ್ಣು ಮಾತ್ರ ನಿಷ್ಠ ೯

ಅಗ್ನಿಯಲ್ಲಿರುವ ಧರ್ಮಗಳು ಅಂತರ್ಯಾಮಿ ಪರವಾಗಿದೆ ೯

ತತ್ವಪ್ರದೀಪ

ಆದಿತ್ಯ, ಚಂದ್ರ, ವಿದ್ಯುತ್ ಇವರಲ್ಲಿರುವವನು ಅಗ್ನಿಯೆಂದು ಪೂರ್ವಪಕ್ಷ ೧೦

ಅಕ್ಷ್ಯಭಿಮಾನಿಯಲ್ಲಿರುವವನು ಅಗ್ನಿಯೇ ? ೧೧

ಅಗ್ನಿಜ್ಞಾನದಿಂದಲೇ ಮೋಕ್ಷ ೧೧

ಈ ಪ್ರಕರಣವು ಅಗ್ನಿಯನ್ನೇ ಹೇಳುತ್ತದೆ ೧೧

ವೇದಾರ್ಥ ನಿರ್ಣಯಕ್ಕಾಗಿ ಎಲ್ಲಾ ಅಧಿಕರಣಗಳು ಹೊರಟವೆ ೧೧

ಅನುವ್ಯಾಖ್ಯಾನದಲ್ಲಿ 'ಅಂತರ' ಪದದ ಸ್ವಾರಸ್ಯ ೧೯

ಚಕ್ಷುರಾಭಿಮಾನಿಯಲ್ಲಿರುವವನು ಮಹಾವಿಷ್ಣುವೇ ಹೊರತು ಅಗ್ನಿಯಲ್ಲ ೨೩

ಅಗ್ನಿಯ ಉಪದೇಶವು ಅಂತರ್ಯಾಮಿ ದೃಷ್ಟಿಯಿಂದ ೨೫

ಸೂರ್ಯಾದಿಗಳಲ್ಲಿರುವ ಪರಮಾತ್ಮನೇ 'ಅಹಂ'ಶಬ್ದ ವಾಚ್ಯ ೨೬

ತತ್ವಪ್ರಕಾಶಿಕಾ

ಅಂತರಾಧಿಕರಣದ ಶಾಸ್ತ್ರಸಂಗತಿ ಏನು ? ೨೮

ಅಂತರಾಧಿಕರಣದ ವಿಷಯವಾಕ್ಯ ಹೇಗಿದೆ ? ೨೯
ಕಣ್ಣನಲ್ಲಿರುವವನು ಯಾರು ? ೨೯
ಯಾವ ಉಪನಿಷತ್ತಿನ ವಾಕ್ಯದಲ್ಲಿ ಈ ವಿಚಾರ ಪ್ರಸಕ್ತವಾಗಿದೆ ೨೯
ಅಂತರಾಧಿಕರಣದ ಅಧಿಕರಣ ರಚನೆ ೩೦
ಅಗ್ನಿಯು ಅಕ್ಷಿಸ್ಥನೇ ? ೩೦
ಆದಿತ್ಯ-ಅಗ್ನಿಗಳಲ್ಲಿ ಇರುವ ಸಮಾನಧರ್ಮ ಯಾವುದು ? ೩೦
ಅಗ್ನಿ ಶ್ರುತಿಗಳು ಒಂದೋ ? ಅನೇಕವೋ ? ೩೧
ಅಭ್ಯಾಸವು ಸಮಾಖ್ಯಾಗಿಂತ ಪ್ರಬಲ ಪ್ರಮಾಣ ೩೧
ಅಭ್ಯಾಸಕ್ಕೆ ಬಾಧಕ ಪ್ರಮಾಣ ಯಾವುದು ? ೩೧
ಅರ್ಥವಾದವು ಅಭ್ಯಾಸಕ್ಕಿಂತ ಪ್ರಬಲ ೩೨
ಕೇವಲ ವಿಷ್ಣುಜ್ಞಾನವೇ ಮೋಕ್ಷಕಾರಕವಲ್ಲ ೩೨
ಉಪನಿಷತ್ತು ಯಾರಿಗೆ ಸರ್ವಪಾಪಾಶ್ಲೇಷತ್ವವನ್ನು ಹೇಳುತ್ತದೆ ? ೩೩
'ಅಗ್ನೀನಾಂ' ಎಂಬ ಬಹುವಚನ ಏಕೆ ? ೩೩
ಅಂತರಾಧಿಕರಣದ ಸಿದ್ಧಾಂತವೇನು ? ೩೩
ಅಮೃತತ್ವಾದಿ ಧರ್ಮಗಳು ವಿಷ್ಣುವಿನಲ್ಲೇ ಇವೆ ೩೪
ಅಗ್ನಿಗೆ ಅಮೃತತತ್ವಾದಿ ಧರ್ಮಗಳು ಸಂಗತವಾಗುವುದಿಲ್ಲ ೩೪
ಸೂತ್ರಕ್ಕೆ ಎರಡನೆಯ ವಿಧದ ವ್ಯಾಖ್ಯಾನ ೩೫
'ಸೋಽಹಮಸ್ಮಿ' ಎಂಬ ಶ್ರುತಿಗೆ ಗತಿ ಏನು ? ೩೫
ಅಂತರ್ಯಾಮಿ ಪರವಾಗಿ ವ್ಯಾಖ್ಯಾನಿಸಲು ಪ್ರಮಾಣದ ಆಧಾರ ೩೫
ಭಾಷ್ಯವಾಕ್ಯಗಳಿಗೆ ಸಂಗತಿಪರ ಅರ್ಥ ೩೬
ಆರ್ಥಿಕ ಪುನರುಕ್ತಿ ಹೇಗೆ ? ೩೬
ಛಾಂದೋಗ್ಯದಲ್ಲಿ ಎಲ್ಲಿ ಹೇಳಿದ್ದಾರೆ ? ೩೭
ಉಪನಿಷತ್ತಿನ ಪ್ರತಿಪದಾರ್ಥವೇನು ? ೩೭
ಆದಿತ್ಯಸ್ಥತ್ವ ಹಾಗೂ ಅಕ್ಷಿಸ್ಥತ್ವ ಶಬ್ದಾರ್ಥವೇನು ? ೩೯
ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟ ಆದಿತ್ಯಸ್ಥ ಯಾರು ? ೪೨
ಅಭಿಮಾನಿದೇವತೆಗಳಲ್ಲಿರುವನೆಂದು ಕೆಲವರ ವ್ಯಾಖ್ಯಾನ ೪೩
ಚಂದ್ರಿಕೆಯಲ್ಲಿ ಹೇಳಿದ ಸಮಾಧಾನ ೪೩
ಸಂಗತಿಪರ ಭಾಷ್ಯವೇ ಪೂರ್ವಪಕ್ಷ ಪರ ೪೪
ಭಾಷ್ಯದ ವ್ಯಾಖ್ಯಾನ ೪೪
ಅಕ್ಷಿ ಹಾಗೂ ಆದಿತ್ಯಶಬ್ದಗಳು ಜಡಪರವೇ ? ೪೫
ತತ್ತ್ವಪ್ರದೀಪದಲ್ಲಿ ಮಾಡಿದ ಚೇತನಪರ ವ್ಯಾಖ್ಯಾನ ೪೬
ಗಾರ್ಹಪತ್ಯಾಗ್ನಿಯು ಆದಿತ್ಯನಲ್ಲಿದ್ದಾನೆನ್ನಲು ದೃಷ್ಟಾಂತ ೪೭

ಭಾಷ್ಯದ ದ್ವಿಯುಕ್ತಿಯಿಂದ ವ್ಯಾವರ್ತ್ಯವಾದ ಪೂರ್ವಪಕ್ಷ ೪೯
ವಿಷ್ಣುಪರವಾಗಿ ಅರ್ಥೈಸಿದಾಗ ಹೆಚ್ಚಿನ ಅಪೂರ್ವತಾ ೫೦
ಭಾಷ್ಯದ ವಾಕ್ಯಗಳು ಫಲಪರವಾಗಿವೆ ೫೧
ಪೂರ್ವಪಕ್ಷ ಪರವೆಂಬ ಭ್ರಾಂತಿಯ ನಿವಾರಣೆ ೫೧
ವಕ್ರಸಂಗತಿಯಿಂದ ಅಧಿಕರಣವು ಆರಂಭಣೀಯವೇ ? ೫೨
ಸಂಗತಿಯ ಮಾಹಿತಿಗಾಗಿ ತಾತ್ಪರ್ಯಚಂದ್ರಿಕಾ ೫೩
'ಅಗ್ನಿನಾಮಿತಿ' ಎಂಬ ಭಾಷ್ಯದ ವ್ಯಾಖ್ಯಾನ ೫೬
ಅನುವ್ಯಾಖ್ಯಾನದಲ್ಲಿರುವ ಆತ್ಮಶಬ್ದಾರ್ಥದ ಸಂಗ್ರಹ ೫೬
ಭಾಷ್ಯ ಹಾಗೂ ಸೂತ್ರಗಳಿಗೆ ವಿಸಂವಾದವಿಲ್ಲವೆಂಬ ಸಮರ್ಥನೆ ೫೭
'ಲಿಂಗಾತ್' ಎಂದು ಹೇಳದೆ, 'ಉಪಪತ್ತೇಃ' ಎಂದೇಕೆ ಹೇಳಿರುವರು ? ೫೮
ಇದು ಮೂರನೆಯ ಹೇತು ೫೮
ಐತರೇಯಬ್ರಾಹ್ಮಣದಲ್ಲಿ ಹಾಗೂ ತೈತ್ತಿರೀಯದಲ್ಲಿ ಅಗ್ನಿಪರ ವಾಕ್ಯಗಳು ೫೯
ನ್ಯಾಯವಿವರಣದಿಂದ ವಿರೋಧವಿಲ್ಲ ೫೯
ಶ್ರುತಿಯು ಸ್ವಾಭಾವಿಕವಾಗಿಯೇ ಪ್ರಬಲ ೬೦
'ಅಹಂ' ಶಬ್ದವು ಆತ್ಮನಲ್ಲಿ ಸ್ವರಸವಾಗುತ್ತದೆ ೬೦
ಅಭ್ಯಾಸ ಹಾಗೂ ಅರ್ಥವಾದಗಳು ಸಾವಕಾಶವಾಗಿವೆ ೬೧

ಬ್ರಹ್ಮಸೂತ್ರ

'ಸ್ಥಾನಾದಿವ್ಯಪದೇಶಾಚ್ಚ' ಎಂಬ ಸೂತ್ರ ವ್ಯಾಖ್ಯಾನ ೬೨

ಬ್ರಹ್ಮಸೂತ್ರಭಾಷ್ಯ

ಸ್ಥಾನಶಕ್ತಿಯಿಂದಲೂ ವಿಷ್ಣುವೇ ಅಂತರನು ೬೩
ವಿಷ್ಣುವಿನ ಅಸಾಧಾರಣ ಗುಣಗಳು ೬೩
ಅಸಂಗನ ಸಂಪರ್ಕದಿಂದ ಚಕ್ಷುರಿಂದ್ರಿಯವು ಅಸಂಗವಾಗಿದೆ ೬೪

ಸತ್ತರ್ಕದೀಪಾವಳಿ

ಅಕ್ಷಿಸ್ಥನಾದವನು ವಿಷ್ಣುವೆನ್ನಲು ಮತ್ತೊಂದು ಹೇತು ೬೫

ತತ್ವಪ್ರದೀಪ

ವಿಷ್ಣುವೇ 'ವಾಮನಿ' ಹಾಗೂ 'ಭಾಮನಿ' ಆಗಿದ್ದಾನೆ ೬೬

ತತ್ವಪ್ರಕಾಶಿಕಾ

ವಿಷ್ಣುವಿನಲ್ಲಿ 'ಸರ್ಪಿರ್ಮಿಶ್ರೋದಕಂ ವಾ' ಎಂಬ ಶ್ರುತಿಯ ಸಮನ್ವಯ ೬೯
ಕಣ್ಣಿನಲ್ಲಿರುವ ಪರಮಾತ್ಮನ ಕಾರ್ಯ ೭೦
ಚಕ್ಷುರಂತಸ್ಥನು ವಿಷ್ಣುವೆನ್ನಲು ಹೇತುದ್ವಯಗಳು ೭೦

ಭಾವದೀಪ
ಚಕ್ಷುರಿಂದ್ರಿಯದಲ್ಲಿರುವವನು ವಿಷ್ಣುವೆಂದು ಹೇಗೆ ನಿರ್ಣಯವಾಗುತ್ತದೆ ? ೭೧
'ವಾಮನಿ' ಹಾಗೂ 'ಭಾಮನಿ' ಶಬ್ದಗಳ ಅರ್ಥ ೭೨
'ಸರ್ವಿರ್ವಾ' ಎಂಬ ಶ್ರುತಿಯಿಂದ ಅಸಂಗತ್ವವು ಅರ್ಥಾತ್ ಸಿದ್ಧವಾಗುತ್ತದೆ ೭೩
ತತ್ತ್ವಪ್ರದೀಪಕಾರರು ಹೇಳಿದ 'ವಾಮನಿ' ಹಾಗೂ 'ಭಾಮನಿ' ಪದಗಳ ಅರ್ಥ ೭೩
ವಾಮನ ಹಾಗೂ ಭಾಮನಗಳೇ, 'ವಾಮನಿ' ಹಾಗೂ 'ಭಾಮನಿ' ೭೪
ಬ್ರಹ್ಮಸೂತ್ರ
'ಸುಖವಿಶಿಷ್ಟಾಭಿಧಾನಾದೇವ ಚ' ಎಂಬ ಸೂತ್ರ ವ್ಯಾಖ್ಯಾನ ೭೪
ಬ್ರಹ್ಮಸೂತ್ರಭಾಷ್ಯ
ಬ್ರಹ್ಮಪ್ರಕರಣದಲ್ಲಿ ಅಗ್ನಿಯು ಪ್ರಸಕ್ತನಾಗಲಾರ ೭೫
ಸತ್ತರ್ಕದೀಪಾವಳಿ
ಅಲ್ಪಸುಖಿಯಾದ ಅಗ್ನಿಯು ಅಂತರನಲ್ಲ ೭೬
ತತ್ತ್ವಪ್ರದೀಪ
'ಕಂ ಬ್ರಹ್ಮ ಖಂ ಬ್ರಹ್ಮ' ಎಂಬ ಶ್ರುತಿಯ ಸಮನ್ವಯ ೭೭
ತತ್ತ್ವಪ್ರಕಾಶಿಕಾ
ಪೂರ್ಣಸುಖವುಳ್ಳ ವಿಷ್ಣುವೇ ಚಕ್ಷುರಂತಸ್ಥ ೭೯
ಪ್ರಕರಣದ ಪ್ರಾರಂಭದಲ್ಲಿ ವಿಷ್ಣುವೇ ಪ್ರಸಕ್ತನು ೮೦
ಪೂರ್ಣಜ್ಞಾನಸುಖಗಳು ವಿಷ್ಣುವಿನದ್ದೇ ಲಕ್ಷಣ ೮೧
ಭಾವದೀಪ
ಸೂತ್ರದ ಜೊತೆ ಭಾಷ್ಯದ ಅರ್ಥ ೮೨
ಉಪಕ್ರಮದಲ್ಲಿ ಕೇಳಿಸುತ್ತಿರುವ ಪೂರ್ಣಾನಂದತ್ವಾದಿ ಗುಣಗಳು ೮೨
ವಿಶಿಷ್ಟಸುಖವೆಂದು ಹೇಳಬೇಕಲ್ಲವೇ ? ೮೩
ವಿಷ್ಣುವಿನ ಲಕ್ಷಣಕ್ಕೆ ಅತಿವ್ಯಾಪ್ತಿ ಇಲ್ಲ ೮೪
ಅನ್ಯರ ಆನಂದವು ಅಲ್ಪವಾಗಿದ್ದರೂ ಪೂರ್ಣ ೮೪
ವಿಶಿಷ್ಟಸುಖ ಎಂಬ ಪ್ರಯೋಗದಿಂದ ತಿಳಿಯುವ ಪ್ರಮೇಯ ೮೫
ಬ್ರಹ್ಮಸೂತ್ರ
'ಶ್ರುತೋಪನಿಷತ್ಕಗತ್ಯಭಿಧಾನಾಚ್ಚ' ಎಂಬ ಸೂತ್ರ ವ್ಯಾಖ್ಯಾನ ೮೬
ಬ್ರಹ್ಮಸೂತ್ರಭಾಷ್ಯ
ಬ್ರಹ್ಮಪ್ರಾಪ್ತಿವೆಂಬ ಪ್ರಯೋಜನವೂ ಸಹ ಆಧಾರವಾಗಿದೆ ೮೬

ಸತ್ತರ್ಕದೀಪಾವಳಿ
ಅಗ್ನಿವಿದ್ಯೆಯಿಂದ ವಿಷ್ಣು ದೊರೆಯುವುದಿಲ್ಲ ೮೭
ತತ್ವಪ್ರದೀಪ
ಸೂತ್ರದಲ್ಲಿರುವ 'ಉಪನಿಷತ್ಕ' ಎಂಬ ಪದದ ಅರ್ಥ ೮೮
ತತ್ವಪ್ರಕಾಶಿಕಾ
ಅಕ್ಷಸ್ಥಪ್ರಕರಣವು ವಿಷ್ಣುವಿನದ್ದೋ, ಅಗ್ನಿಯದ್ದೋ ? ೮೯
ಅಗ್ನಿಪ್ರಕರಣವೆಂಬ ಪೂರ್ವಪಕ್ಷದ ನಿರಾಕರಣೆ ೯೧
'ಶ್ರುತೋಪನಿಷತ್ಕಗತಿ' ಎಂಬ ಸೂತ್ರದಲ್ಲಿರುವ ಪದಗಳ ವ್ಯಾಖ್ಯಾನ ೯೨
ಇದು ಅಗ್ನಿವಿದ್ಯೆ ಏಕಲ್ಲ ? ೯೩
ಅಗ್ನ್ಯಂತರ್ಗತ ಪರಮಾತ್ಮನ ಉಪಾಸನೆಯೇ ಪ್ರಕರಣದ ಉದ್ದೇಶ ೯೪
ಭಾವದೀಪ
ಮೂರು ವಿದ್ಯೆಯನ್ನು ಶ್ರುತಿ ಹೇಳುತ್ತಿಲ್ಲ ೯೪
ದೃಷ್ಟಾಂತಕ್ಕಾಗಿ 'ಪ್ರಾಣೋ ಬ್ರಹ್ಮ' ಎಂದು ಕೆಲವರ ಅಭಿಪ್ರಾಯ ೯೫
ಅಕ್ಷಸ್ಥ ಪ್ರಕರಣವು ವಿಷ್ಣು ಪ್ರತಿಪಾದಕವಲ್ಲವೆಂದು ಆಕ್ಷೇಪ ೯೫
ಅಗ್ನಿಪ್ರಕರಣವೆನ್ನಲು ನಿಶ್ಚಾಯಕ ಪ್ರಮಾಣ ೯೬
ನ್ಯಾಯವಿವರಣದಲ್ಲಿರುವ ಆದಿಪದಾರ್ಥ ೯೬
ಪ್ರಕರಣವು ಅಗ್ನಿವಿಷಯಕವಲ್ಲವೆಂಬ ಸಿದ್ಧಾಂತದ ಸ್ಥಾಪನೆ ೯೬
ಸೂತ್ರಕ್ಕೆ ಬೇರೆ ಬೇರೆ ಅರ್ಥಗಳು ೯೭
ಬ್ರಹ್ಮಪ್ರಾಪ್ತಿಯು ಫಲವೆಂದ ಮಾತ್ರಕ್ಕೆ ಅಗ್ನಿಪರವೇಕಲ್ಲ ? ೯೭
ಅನ್ಯವಿದ್ಯೆಯಿಂದ ಅನ್ಯಪ್ರಾಪ್ತಿಯು ಇಷ್ಟವಲ್ಲ ೯೮
ಸೂತ್ರದಲ್ಲಿರುವ 'ಉಪಪತ್ತೇಃ' ಎಂಬ ಪದದ ವ್ಯಾಖ್ಯಾನ ೯೯
ಪುರುಷಶಬ್ದ ಆತ್ಮಶಬ್ದಗಳೂ ಕೂಡ ಹೇತು ೯೯
ಆತ್ಮವಿದ್ಯೆಯ ವ್ಯಾಖ್ಯಾನ ೧೦೦
ಅಸ್ಮದ್‌ವಿದ್ಯೆ ಹಾಗೂ ಆತ್ಮವಿದ್ಯೆಗಳು ೧೦೦
ಬ್ರಹ್ಮಸೂತ್ರ
'ಅನವಸ್ಥಿತೇರಸಂಭವಾಚ್ಚ ನೇತರಃ' ಎಂಬ ಸೂತ್ರ ವ್ಯಾಖ್ಯಾನ ೧೦೧
ಬ್ರಹ್ಮಸೂತ್ರಭಾಷ್ಯ
ಅಗ್ನಿಯು ಅಂತರನಾದಲ್ಲಿ ಬಾಧಕವಿದೆ ೧೦೨
ಸತ್ತರ್ಕದೀಪಾವಳಿ
ಚಕ್ಷುರಿಂದ್ರಿಯನಿಯಾಮಕನು ಅಗ್ನಿಯಲ್ಲ ೧೦೩

ತತ್ತ್ವಪ್ರದೀಪ
ಅಗ್ನಿಯೇ ನಿಯಾಮಕನೆಂದರೆ ಅನವಸ್ಥಾದೋಷ ೧೦೪
ತತ್ತ್ವಪ್ರಕಾಶಿಕಾ
ವಿಪಕ್ಷೇ ಬಾಧಕ ಪ್ರಮಾಣ ೧೦೫
ಅಗ್ನಿಯು ಸ್ವತಂತ್ರನೆಂದು ಹೇಳಿ ಅನವಸ್ಥಾವನ್ನು ಪರಿಹರಿಸಲಾಗದು ೧೦೬
ಈಶ್ವರನೇ ಅಕ್ಷಿಸ್ಥನೆನ್ನಲು ಅನೇಕ ಪ್ರಮಾಣಗಳಿವೆ ೧೦೭
ಈಶ್ವರನನ್ನು ಒಪ್ಪದೇ ನಿಯಮ್ಯನಿಯಾಮಕಭಾವ ಕೂಡಿಸಲಾಗದು ೧೦೭
ಭಾವದೀಪ
ಅನವಸ್ಥಾದೋಷಕ್ಕೆ ಅಸಿದ್ಧಿಯ ಪರಿಹಾರ ೧೦೯
'ಅಸಂಭವಾತ್' ಎಂಬ ಭಾಷ್ಯಕ್ಕೆ ವ್ಯಾಘಾತವಿಲ್ಲ ೧೧೦
ರುದ್ರಾದಿಗಳ ನಿಯಾಮಕತ್ವವು ಭಗವದಧೀನ ೧೧೧
ಸಾಧಕಪ್ರಮಾಣಗಳು ಹಾಗೂ ಬಾಧಕಪ್ರಮಾಣಗಳು ೧೧೨
ಆದಿತ್ಯನೇ ಚಕ್ಷುರಂತಸ್ಥ ೧೧೨
ತಂತ್ರದೀಪಿಕೆಯಲ್ಲಿ ಸರ್ವಗತತ್ವಾಧಿಕರಣದ ಸೂತ್ರಗಳು ೧೧೪
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಅಂತರಾಧಿಕರಣ ೧೧೯

ಅಂತರ್ಯಾಮ್ಯಧಿಕರಣ

ಬ್ರಹ್ಮಸೂತ್ರ
'ಅಂತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್' ಎಂಬ ಸೂತ್ರ ವ್ಯಾಖ್ಯಾನ ೧೨೮
ಬ್ರಹ್ಮಸೂತ್ರಭಾಷ್ಯ
ಬೃಹದಾರಣ್ಯಕ ಅಂತರ್ಯಾಮಿಯ ಬಗ್ಗೆ ಏನು ಹೇಳುತ್ತದೆ ? ೧೨೯
ಅಂತರ್ಯಾಮಿಯು ಪ್ರಕೃತಿಯೋ ? ಜೀವನೋ ಆಗಬಹುದೇ ? ೧೩೦
ವಿಷ್ಣುವಿಗೆ ಸರ್ವಶರೀರತ್ವವಿದೆಯೇ ? ೧೩೧
ಅಂತರ್ಯಾಮಿಯು ವಿಷ್ಣುವೇ ? ೧೩೨
ಋಗ್ವೇದಸಂಹಿತೆ ಮತ್ತು ಆರಣ್ಯಕಗಳಲ್ಲಿ ಪ್ರತಿಪಾದ್ಯನಾದವನು ವಿಷ್ಣುವೇ ೧೩೩
ಸತ್ತರ್ಕದೀಪಾವಳಿ
ವಿಷ್ಣುವೇ ಅಂತರ್ಯಾಮಿ ಏಕಾಗಬೇಕು ? ೧೩೪
ಕಾಣ್ವರು ಅಂತರ್ಯಾಮಿಯ ಬಗ್ಗೆ ಏನು ಹೇಳುತ್ತಾರೆ ? ೧೩೫
ಶರೀರ ಶಬ್ದ ಯೌಗಿಕವೇ ? ೧೩೫

ತತ್ವಪ್ರದೀಪ
ವಿಷಯವಾಕ್ಯದ ಪೂರ್ಣಪಾಠ ೧೩೬
ಅಕ್ಷಿಪುರುಷನಲ್ಲಿ ಅಮೃತತ್ವ ೧೩೭
'ಸರ್ವಾತ್ಮಕತ್ವಾತ್ ಪ್ರಕೃತಿಃ' ಎಂಬ ಭಾಷ್ಯದ ವ್ಯಾಖ್ಯಾನ ೧೩೮
ಸರ್ವಾಂತರ್ಯಾಮಿ ಚಿತ್‌ಪ್ರಕೃತಿ ೧೩೮
ವಿಷ್ಣು ಅಂತರ್ಯಾಮಿ ಅಲ್ಲವೆಂದು ಪೂರ್ವಪಕ್ಷ ೧೩೯
ಮಹಾವಿಷ್ಣುವೇ ಅಂತರ್ಯಾಮಿಯೆಂದು ಸಿದ್ಧಾಂತ ೧೩೯
ತತ್ವಪ್ರಕಾಶಿಕಾ
ಈ ಅಧಿಕರಣಕ್ಕೆ ಶಾಸ್ತ್ರಾದಿ ಸಂಗತಿ ಹೇಗೆ ? ೧೪೬
ಈ ಅಧಿಕರಣದ ಶ್ರುತಿ ಸಂಗತಿ ಹೇಗೆ ? ೧೪೭
ಅಂತರ್ಯಾಮ್ಯಧಿಕರಣದ ವಿಷಯಾದಿಗಳು ೧೪೮
ಅಂತರ್ಯಾಮಿಯು ಪ್ರಕೃತಿಯಾಗಬಹುದೇ ? ೧೪೯
ಪೃಥಿವಿಯು ತನಗೆ ತಾನೇ ಆಧಾರನಾಗಲು ಸಾಧ್ಯವಿಲ್ಲ ೧೪೯
ಕಾರಣವು ಕಾರ್ಯದಲ್ಲಿರುತ್ತದೆ ೧೫೦
ಪೃಥಿವೀ ನಿಯಮನವೂ ಔಪಚಾರಿಕ ೧೫೦
ಜೀವನೂ ಅಂತರ್ಯಾಮಿಯಾಗಬಹುದು ೧೫೦
ಅಮೃತತ್ವ ಲಿಂಗ ವಿಷ್ಣುವಿನಲ್ಲಿಲ್ಲವೇ ? ೧೫೧
ಲಿಂಗವಿದ್ದರೂ ಸಹ ಶರೀರತ್ವ ಕೂಡಿಸಲು ಬರುವುದಿಲ್ಲ ೧೫೧
ಸಾವಕಾಶದಿಂದ ನಿರವಕಾಶಕ್ಕೆ ಬಾಧ ೧೫೧
ಅಮೃತತ್ವವು ವಿಷ್ಣುತ್ವ ಸಾಧಕಧರ್ಮವಲ್ಲ ಎಂದು ಪೂರ್ವಪಕ್ಷ ೧೫೨
ಅವಿದಿತತ್ವಾದಿಗಳು ವಿಷ್ಣುಧರ್ಮವೇ ಆಗಿವೆ ೧೫೨
ಪೃಥಿವ್ಯಾದಿಗಳು ಜಡವಲ್ಲ ೧೫೩
ಚಕ್ಷುರಾದಿಗಳು ಮಾತ್ರವೇ ಜಡ ೧೫೪
ಅವಿದಿತತ್ವಧರ್ಮವು ವಿಷ್ಣುಪರವಾಗಲು ಕಾರಣವೇನು ? ೧೫೪
ಶ್ರುತಿಯಲ್ಲಿ ಅಮೃತತ್ವ ಮತ್ತು ಅಭಯತ್ವ ಎಂಬ ಎರಡು ಧರ್ಮಗಳ ಪ್ರಸ್ತಾವವಿದೆ ೧೫೫
ಎರಡು ಶಾಖೆಗಳಲ್ಲಿ ಬಂದ ಒಂದೇ ವಾಕ್ಯ ಯಾವುದು ? ೧೫೫
ಪರಾಮೃಷ್ಟ ವಾಕ್ಯದ ಅನುವಾದ ೧೫೬
ಪೂರ್ವಪಕ್ಷ ಮತ್ತು ಸಿದ್ಧಾಂತ ಯುಕ್ತಿಯ ಸೂಚಕ ಪದ ಯಾವುದು ? ೧೫೬
'ಸಃ' ಎಂಬ ಭಾಷ್ಯದ ಶಬ್ದದಿಂದ ಯಾರು ವಿವಕ್ಷಿತರು ? ೧೫೭
ಟೀಕೆಯಲ್ಲಿರುವ ಅನ್ಯಪದದ ಅಭಿಪ್ರಾಯವೇನು ? ೧೫೮
ಸಂಗತಿಪರವಾದ ಭಾಷ್ಯವು ಪೂರ್ವಪಕ್ಷಪರವೂ ಆಗುತ್ತದೆ ೧೫೯
ಭಾಷ್ಯದಲ್ಲಿರುವ ಹೇತು ಹೇಗೆ ಸಂಗತವಾಗುತ್ತದೆ ? ೧೬೦

ವಿಷ್ಣುಕೃತವಾದ ತತ್ವವಿವೇಕ ಗ್ರಂಥ ಏನು ಹೇಳುತ್ತದೆ ? ೧೬೧
ಶಾರೀರಸೂತ್ರ ನಿರಾಕರಿಸುವ ಪೂರ್ವಪಕ್ಷ ಯಾವುದು ? ೧೬೧
ಭಾಷ್ಯದಲ್ಲಿ ಪೂರ್ವಪಕ್ಷದಲ್ಲಿ ಜೀವಪಕ್ಷದಲ್ಲಿ ಏನು ಹೇಳಿಲ್ಲ ? ೧೬೧
ಆದಿಪದದಿಂದ ಗ್ರಾಹ್ಯವಾದ ಶ್ರುತಿವಾಕ್ಯ ಯಾವುದು ? ೧೬೨
'ತೇಷಾಂ' ಎಂದು ಬಹುವಚನ ಏಕೆ ? ೧೬೨
ಉಪಾದಾನತ್ವವು ಮೂರು ವಿಧವಾಗಿಯೂ ಬ್ರಹ್ಮನಲ್ಲಿ ಇಲ್ಲ ೧೬೨
ವಿಷ್ಣುವಿಗೆ ಚಿನ್ಮಾತ್ರ ಶರೀರತ್ವ ಹೇಳುವ ಸೂತ್ರ ಯಾವುದು ? ೧೬೩
ಭಾಷ್ಯದಲ್ಲಿ ತತ್ತಜ್ಜೀವಃ ಎಂಬ ಪ್ರಯೋಗ ಏಕೆ ? ೧೬೩
'ಇತ್ಯಾದಿ' ಎಂಬ ಪದಕ್ಕೆ ಮೂರು ವಿಧವಾದ ಅರ್ಥ ೧೬೬
ಬೃಹದ್ಭಾಷ್ಯದಲ್ಲಿ ಹೇಳಿದ ಅಂತರತ್ವ ಸ್ವರೂಪವೇನು ? ೧೬೬
'ಅಂತರ' ಶಬ್ದದ ಅರ್ಥವೇನು ? ೧೬೭
ಭಾಷ್ಯದಲ್ಲಿ ಪಾಠಾಂತರ ೧೬೮
ನಿಷ್ಕೃಷ್ಟವಾದ ಸೂತ್ರಾರ್ಥ ಏನು ? ೧೬೮
ಸಕಲದೇವಾವೇದ್ಯತ್ವವೂ ವಿಷ್ಣುಲಿಂಗ ೧೬೯
ಪ್ರಕರಣಾನುಸಾರವಾಗಿ ಆದಿತ್ಯಾದಿಗಳನ್ನು ಜಡವಾಗಿ ಹಾಗೂ
ಅಂತರ್ಯಾಮಿಪರವಾಗಿ ಅರ್ಥೈಸಬೇಕು ೧೬೯
ಅಪ್ರತರ್ಕ್ಯಾದಿ ಶಬ್ದಗಳ ಅಂತರ್ಯವೇನು ? ೧೭೦
ಅಂತರ ಶಬ್ದಕ್ಕೆ ಎರಡನೆಯ ಮಜಲಿನ ಅರ್ಥ ೧೭೧

ಬ್ರಹ್ಮಸೂತ್ರ

'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬ ಸೂತ್ರ ವ್ಯಾಖ್ಯಾನ ೧೭೧

ಬ್ರಹ್ಮಸೂತ್ರಭಾಷ್ಯ

ಕಾಪಿಲಸ್ಮೃತಿಯಲ್ಲಿ ಯಾರು ಪ್ರಸಕ್ತರು ? ೧೭೨

ತತ್ವಪ್ರದೀಪ

ಪ್ರಕೃತಿಯು ಅಂತರ್ಯಾಮಿ ಅಲ್ಲವೆನ್ನಲು ಕಾರಣ ೧೭೨

ತತ್ವಪ್ರಕಾಶಿಕಾ

ಪ್ರಕೃತಿಗೆ ಅಂತರ್ಯಾಮಿತ್ವವನ್ನು ಎಲ್ಲಿ ನಿರಾಕರಿಸಿದ್ದಾರೆ ? ೧೭೩
ಸ್ಮಾರ್ತ ಶಬ್ದದ ಅರ್ಥವೇನು ? ೧೭೩
ಚಶಬ್ದವು ತುಶಬ್ದದ ಅರ್ಥವನ್ನು ಹೇಳುತ್ತದೆ ೧೭೪

ಭಾವದೀಪ

ಸೂತ್ರಕ್ಕೆ ನೇರವಾಗಿ ಟೀಕೆಯಲ್ಲಿ ವ್ಯಾಖ್ಯಾನ ೧೭೪
'ಅತದ್ಧರ್ಮ' ಶಬ್ದದ ಅಭಿಪ್ರಾಯವೇನು ? ೧೭೫

ಅವಿದಿತತ್ವಶಬ್ದದ ಸಮಾಸ ಹೇಗೆ ? ೧೭೫
ತತ್ವಪ್ರದೀಪದಲ್ಲಿನ ವ್ಯಾಖ್ಯಾನದ ಆಂತರ್ಯವೇನು ? ೧೭೬
ಬ್ರಹ್ಮಸೂತ್ರ
'ಶಾರೀರಿಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ' ಎಂಬ ಸೂತ್ರ ವ್ಯಾಖ್ಯಾನ ೧೭೬
ಬ್ರಹ್ಮಸೂತ್ರಭಾಷ್ಯ
ಶಾಖಾಭೇದದಿಂದ ಉಪಾಸನಾಭೇದವನ್ನು ಹೇಳಲಾಗಿದೆ ೧೭೭
ಜಗತ್ತು ವಿಷ್ಣುವಿಗೆ ಏಕೆ ಶರೀರ ? ೧೭೯
ತತ್ವಪ್ರದೀಪ
ಚಿತ್‌ಪ್ರಕೃತಿಯೂ ಕೂಡ ಅಂತರ್ಯಾಮಿಯಲ್ಲ ೧೮೦
ತತ್ವಪ್ರಕಾಶಿಕಾ
ಜೀವನಿಗೆ ಅಂತರ್ಯಾಮಿತ್ವವನ್ನು ವಿಶೇಷವಾಗಿ ನಿರಾಕರಿಸುವ ಯುಕ್ತಿ ಯಾವುದು ? ೧೮೨
ಶಾಖಾಭೇದದಿಂದ ಉಪಾಸನಾಭೇದ ಹೇಳುವ ಎರಡು ಶಾಖೆಗಳು ಯಾವುವು ? ೧೮೨
ವಿಜ್ಞಾನಶಬ್ದದಿಂದ ಪ್ರಕೃತನು ಯಾರು ? ೧೮೨
ವಿಷ್ಣುವಿನಲ್ಲಿ ಪ್ರಧಾನಧರ್ಮ ಹೇಳದ ಪ್ರಮಾಣ ಯಾವುದು ? ೧೮೩
ಶರೀರಶಬ್ದವನ್ನು ವಿಷ್ಣುವಿನಲ್ಲಿ ಯೌಗಿಕವಾಗಿ ಹೇಳಬೇಕು ೧೮೩
ಯೋಗರೂಢಿಗಳಲ್ಲಿ ಪ್ರಬಲ ಯಾವುದು ? ೧೮೪
ಭಾವದೀಪ
ಶಾರೀರಪದವನ್ನು ಅಪಕರ್ಷ ಮಾಡಬೇಕು ? ೧೮೫
ಸೂತ್ರದಲ್ಲಿನ ಚ ಶಬ್ದವು ಸಮುಚ್ಚಯಾರ್ಥಕವಾಗಿದೆಯೆ ? ೧೮೫
ವಿವಿಕ್ತಶಬ್ದದ ಆಂತರ್ಯವೇನು ? ೧೮೬
ಸಕಾಶಾತ್ ಎಂದು ಟೀಕೆಯಲ್ಲಿ ಏಕೆ ಹೇಳಿದ್ದಾರೆ ? ೧೮೭
ಭಾಷ್ಯದಲ್ಲಿ ಸಮಗ್ರ ಶ್ರುತಿವಾಕ್ಯ ಏಕೆ ? ೧೮೭
ಅಂತರ್ಯಾಮಿಗೆ ಭೇದ ಹೇಳುವ ಉಭಯ ಸಮ್ಮತವಾಕ್ಯ ಯಾವುದು ? ೧೮೮
ಬೃಹದ್ಭಾಷ್ಯದಲ್ಲಿ ಹೇಳಿದ ಅರ್ಥವಿಶೇಷವೇನು ? ೧೮೮
ವಿಷ್ಣುವಿಗೆ ಜಗಚ್ಛರೀರತ್ವದ ವಿಷಯದಲ್ಲಿ ನ್ಯಾಯವಿವರಣದ ವಿವರಣೆ ಏನು ? ೧೯೧
ಶರೀರತ್ವ ಕೂಡಿಸಲು ಎರಡು ವಿಧಗಳಿವೆಯೇ ? ೧೯೨
ಗೌಣಶರೀರತ್ವ ಉಲ್ಲೇಖದ ಆಂತರ್ಯವೇನು ? ೧೯೨
'ಇತಿವಚನಾತ್' ಎಂಬ ಭಾಷ್ಯದ ಅಭಿಪ್ರಾಯವೇನು ? ೧೯೩
ಸಿದ್ಧಾಂತಫಲವನ್ನು ಎಲ್ಲಿ ಹೇಳಿದ್ದಾರೆ ? ೧೯೩
ತಂತ್ರದೀಪಿಕೆಯಲ್ಲಿ ಅಂತರ್ಯಾಮ್ಯಧಿಕರಣದ ಸೂತ್ರಗಳು ೧೯೪
ಅಂತರ್ಯಾಮ್ಯಧಿಕರಣದ ಸೂತ್ರಾರ್ಥವೇನು ? ೧೯೫
ಸೂತ್ರದಲ್ಲಿ ಅಧಿದೈವ ಶಬ್ದದ ಪ್ರಯೋಗ ಏಕೆ ? ೧೯೫

ಪ್ರಕೃತಿ-ಜೀವರುಗಳಿಗೆ ಅಂತರ್ಯಾಮಿತ್ವವಿದೆಯೇ ? ೧೯೬
ಸ್ಮಾರ್ತಶಬ್ದಕ್ಕೆ ಸಾಂಖ್ಯಸ್ಮೃತಿಯಲ್ಲಿ ಹೇಳಿದ ಎಂದರ್ಥ ೧೯೬
ಶಾರೀರತ್ವವನ್ನು ಸಾವಕಾಶ ಮಾಡಲು ಬರುತ್ತದೆ ೧೯೭
ಸ್ಮಾರ್ತ ಶಬ್ದದ ಆಂತರ್ಯವೇನು ?' ೧೯೭
ಸೂತ್ರದಲ್ಲಿರುವ ಶಾರೀರಶಬ್ದದ ಅಭಿಪ್ರಾಯವೇನು ? ೧೯೭
ತತ್ತ್ವಪ್ರದೀಪದಲ್ಲಿ ಹೇಳಿದ ಸ್ಮಾರ್ತಶಬ್ದದ ಅಭಿಪ್ರಾಯವೇನು ? ೧೯೮
ಸೂತ್ರದಲ್ಲಿನ ನಞ್ ಅಭಿಪ್ರಾಯವೇನು ? ೧೯೮
ಜೀವಪಕ್ಷದಲ್ಲಿ ಭಾದಕವಿದೆಯೇ ? ೧೯೮
ಶಾರೀರನು ಅಂತರ್ಯಾಮಿಯಾಗದೇ ಇರಲು ಇಬ್ಬರ ಅಧ್ಯಯನ ಕಾರಣ ೧೯೯
ಜೀವಶಬ್ದಕ್ಕೆ ಎರಡು ಅರ್ಥ ೧೯೯
ಚಶಬ್ದಕ್ಕೆ ಪ್ರಾಚೀನ ಟೀಕಾ ಹಾಗೂ ನವೀನ ಟೀಕೆಗಳನುಸಾರ ಅರ್ಥವೇನು ? ೧೯೯
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಅಂತರ್ಯಾಮ್ಯಧಿಕರಣ ೨೦೦

ಅದೃಶ್ಯತ್ವಾಧಿಕರಣ

ಬ್ರಹ್ಮಸೂತ್ರ

'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ' ಎಂಬ ಸೂತ್ರ ವ್ಯಾಖ್ಯಾನ ೨೦೨

ಬ್ರಹ್ಮಸೂತ್ರಭಾಷ್ಯ

ಅದೃಶ್ಯತ್ವವಿರುವುದು ವಿಷ್ಣುವಿನಲ್ಲೋ, ಅಕ್ಷರನಲ್ಲೋ ? ೨೦೩
ಮುಂಡಕೋಪನಿಷತ್ತಿನಲ್ಲಿ ಅದೃಶ್ಯತ್ವದ ಬಗ್ಗೆ ೨೦೩
ಅದೃಶ್ಯತ್ವದ ಬಗ್ಗೆ ಸಂಶಯ ಬರಲು ಕಾರಣವೇನು ? ೨೦೫
ಅದೃಶ್ಯತ್ವವು ಪ್ರಕೃತಿಯಲ್ಲಿದೆ ೨೦೬
ಹಿರಣ್ಯಗರ್ಭನಲ್ಲೂ ಅದೃಶ್ಯತ್ವವಿದೆ ೨೦೭
ಅದೃಶ್ಯತ್ವವಿರುವುದು ಮಹಾವಿಷ್ಣುವಿನಲ್ಲಿ ಮಾತ್ರವೆಂದು ಸಿದ್ಧಾಂತ ೨೦೮

ಸತ್ತರ್ಕದೀಪಾವಳಿ

'ಅಕ್ಷರಾತ್ಪರತಃ ಪರಃ' ಎಂಬ ಶ್ರುತಿಯೇ ಪೂರ್ವಪಕ್ಷಕ್ಕೆ ಕಾರಣ ೨೨೦
ಚತುರ್ಮುಖನು ಅದೃಶ್ಯನೆನ್ನಲು ಕಾರಣ ೨೨೧
ಮಹಾವಿಷ್ಣುವೇಕೆ ಅದೃಶ್ಯನಲ್ಲ ೨೨೨
'ಅಥ ಪರಾ ಯಯಾ' ಎಂಬ ಶ್ರುತ್ಯರ್ಥ ೨೨೨
ಪರಾಪರವಿದ್ಯೆಯ ಬಗ್ಗೆ ೨೨೩
ಪರಮಸಂಹಿತೆಯಲ್ಲಿ ಪರವಿದ್ಯೆಯ ಬಗ್ಗೆ ನಿಖರ ಮಾಹಿತಿ ೨೨೩
ಪ್ರಕೃತಿ ಹಿರಣ್ಯಗರ್ಭರು ಅಕ್ಷರರಲ್ಲ ೨೨೪

ಅಕ್ಷರನೆಂದರೆ ಮಹಾವಿಷ್ಣುವೆ ೨೨೪
ರುದ್ರನು ಅದೃಶ್ಯನಾಗಲಾರ ೨೨೪
ಅಪ್ರಾಕೃತ ಸ್ವರೂಪನಾದ ಮಹಾವಿಷ್ಣುವೊಬ್ಬನೇ ಅಕ್ಷರಶ್ರುತಿ ಪ್ರತಿಪಾದ್ಯ ೨೨೫
ತತ್ವಪ್ರದೀಪ
'ಅದೃಶ್ಯತ್ವಾದಿಗುಣಾ ವಿಷ್ಣೋರುಕ್ತಾ:' ಎಂಬ ಭಾಷ್ಯಕ್ಕೆ ವ್ಯಾಖ್ಯಾನ ೨೨೬
ಮಹಾವಿಷ್ಣು ಅದೃಶ್ಯನಾದರೆ ಅಕ್ಷರತತ್ವಕ್ಕಿಂತ ಉತ್ತಮೋತ್ತಮನಾಗಲಾರ ೨೨೭
'ಅದೃಶ್ಯತ್ವಾದಿ' ಎಂಬ ಭಾಷ್ಯದಿಂದಲೇ ಅಧಿಕರಣಸಂಗತ್ಯಾದಿಗಳು ೨೨೭
ಅಕ್ಷರತತ್ವದಿಂದ ಜಗತ್ತಿನ ಸೃಷ್ಟಿ ೨೨೮
ಚಿತ್‌ಪ್ರಕೃತಿಯು ಅಕ್ಷರವೆಂದು ಪೂರ್ವಪಕ್ಷ ೨೩೦
ಅದೃಶ್ಯತ್ವಾದಿ ಗುಣಗಳುಳ್ಳವನು ಮಹಾವಿಷ್ಣುವೆನ್ನಲು ಸಿದ್ಧಾಂತ ೨೩೧
ವೇದದ ಉಪಾಂಗಗಳು ಹಾಗೂ ಪ್ರತ್ಯಂಗಗಳು ೨೩೨
ತತ್ವಪ್ರಕಾಶಿಕಾ
ಅನ್ಯತ್ರಪ್ರಸಿದ್ಧವಾದ ಅದೃಶ್ಯತ್ವವೆಂಬ ಲಿಂಗದಸಮನ್ವಯ ೨೩೨
ಅಕ್ಷರನನ್ನೇ ಅದೃಶ್ಯನೆನ್ನುತ್ತದೆ ಅಥರ್ವಣ ೨೩೩
ಅಧಿಕರಣದ ಸಂಪೂರ್ಣವಿಷಯವಾಕ್ಯ ೨೩೩
ಅದೃಶ್ಯನು ಬೇರೆಯವನಾದರೆ ಆನಂದಮಯನೂ ಅವನೇ ೨೩೪
ಅದೃಶ್ಯತ್ವಾದಿಗಳು ವಿಷ್ಣುವಿನಲ್ಲಿಲ್ಲವೆಂದು ಪೂರ್ವಪಕ್ಷ ೨೩೫
ಸರ್ವೋತ್ತಮನು ಅಕ್ಷರತತ್ವಕ್ಕಿಂತ ಶ್ರೇಷ್ಠನು ೨೩೫
ವಿಷ್ಣುವಿಗಿಂತ ಶ್ರೇಷ್ಠನು ಮತ್ತೊಬ್ಬನಿಲ್ಲ ಎಂಬುದೇ ಪೂರ್ವಪಕ್ಷದ ಬೀಜ ೨೩೬
'ಯತ್ತದದ್ರೇಶ್ಯಂ' ಎಂಬ ವಾಕ್ಯವು ಪ್ರಮಾಣವಾಗಬೇಕೆಂದರೆ ವಿಷ್ಣುವೇ ಅದೃಶ್ಯನಾಗಬೇಕು ೨೩೬
ಪೂರ್ವಪಕ್ಷಿಗಳ ಸಮರ್ಥನೆ ೨೩೬
ಚೇತನಪ್ರಕೃತಿಯು ಅದೃಶ್ಯವೆಂದು ಪೂರ್ವಪಕ್ಷ ೨೩೭
ಹಿರಣ್ಯಗರ್ಭನು ಅದೃಶ್ಯನೆಂದು ಪೂರ್ವಪಕ್ಷ ೨೩೮
ರುದ್ರನು ಅದೃಶ್ಯನೆಂದು ಪೂರ್ವಪಕ್ಷ ೨೩೮
ಎಲ್ಲಾ ಪೂರ್ವಪಕ್ಷಗಳ ನಿರಾಕರಣೆಗಾಗಿ ಸೂತ್ರದ ಪ್ರವೃತ್ತಿ ೨೩೯
ಪರವಿದ್ಯೆಗೆ ವಿಷಯನಾದವನೇ ಅದೃಶ್ಯನು ೨೩೯
ಪರವಿದ್ಯೆಗೆ ವಿಷಯನಾದವನು ಮಹಾವಿಷ್ಣು ಮಾತ್ರ ೨೩೯
ಪರವಿದ್ಯೆಗೆ ವಿಷಯನಾದವನ ಬಗ್ಗೆ ಶ್ರುತಿಯ ಆಧಾರ ೨೪೦
'ದ್ವೇ ವಿದ್ಯೇ ವೇದಿತವ್ಯೇ' ೨೪೦
ಋಗಾದ್ಯಾ ಅಪರವಿದ್ಯಾ ೨೪೦
'ಅದೃಶ್ಯತ್ವಾದಿ' ಎಂಬಲ್ಲಿರುವ ಆದಿಪದದ ವ್ಯಾಖ್ಯಾನ ೨೪೧
ಅಕ್ಷರನ ಬಗ್ಗೆ ಎಲ್ಲಿ ಪ್ರಸ್ತಾಪವಿದೆ ? ೨೪೨

ಟೀಕೆಯಲ್ಲಿ ಸಂಪೂರ್ಣ ವಿಷಯವಾಕ್ಯದ ಪ್ರದರ್ಶನಕ್ಕೆ ಕಾರಣ ೨೪೩
ಟೀಕೆಯಲ್ಲಿ ಸಮಗ್ರವಾಕ್ಯವನ್ನು ಉಲ್ಲೇಖಿಸಿದ್ದರ ಫಲ ೨೪೪
'ಯತ್ತದದ್ರೇಶ್ಯಂ' ಎಂಬ ಶ್ರುತ್ಯರ್ಥ ೨೪೪
ಮೂರು ದೃಷ್ಟಾಂತಗಳ ಸಾರ್ಥಕ್ಯ ೨೪೫
ಟೀಕೆಯಲ್ಲಿ ಶ್ರುತಿಯ ತಾತ್ಪರ್ಯ ೨೪೫
ಉಪಾದಾನತ್ವ ಯುಕ್ತಿಯ ಬಗ್ಗೆ ೨೪೫
ಹಿಂದಿನ ಅಧಿಕರಣದಿಂದ ಆಕ್ಷೇಪೀ ಸಂಗತಿ ೨೪೬
ಪಾದಸಂಗತಿಗಾಗಿ ಲಿಂಗಪದ ೨೪೬
ಸಂಗತಿಪರ ಭಾಷ್ಯವೇ ಪೂರ್ವಪಕ್ಷ ಪರ ೨೪೬
ವಿಷ್ಣುವೇಕೆ ಅದೃಶ್ಯನಲ್ಲ ? ೨೪೭
ಅಕ್ಷರಶಬ್ದವು ವಿಷ್ಣುವಿನಲ್ಲಿ ನಿರವಕಾಶ ೨೪೭
ಭಾಷ್ಯದಲ್ಲಿ 'ವಾಕ್ಯೇ' ಎಂಬುದನ್ನು ಅಧ್ಯಾಹಾರ ಮಾಡಬೇಕು ೨೪೮
ಅಕ್ಷರನಿಗಿಂತ ಉತ್ತಮನಿದ್ದಾನೆಯೇ ? ೨೪೮
ವಿಷ್ಣುವೇ ಶ್ರೇಷ್ಠನೆಂಬಲ್ಲಿ ಲಿಂಗ ೨೪೮
ಶ್ರುತಿಯಲ್ಲಿರುವ ಕಠಿಣಪದಾರ್ಥ ೨೫೦
ವಿಷ್ಣುವೇ ಸರ್ವೋತ್ತಮ ೨೫೧
ಪ್ರಕೃತಿ ಎಂದರೆ ಜಡಪ್ರಕೃತಿಯೆಂದು ವಿವಕ್ಷಿಸಬೇಕು ೨೫೧
ಊರ್ಣನಾಭಿಯ ದೃಷ್ಟಾಂತವೇಕೆ ? ೨೫೨
ಲಿಂಗಕ್ಕೆ ನಿರವಕಾಶತ್ವ ಸಮರ್ಥನೆ ೨೫೨
ದೃಷ್ಟಾಂತವೈಯರ್ಥ್ಯದ ಜೊತೆ ಮತ್ತೊಂದು ದೋಷ ೨೫೨
ದೃಷ್ಟಾಂತಕ್ಕೆ ವೈಯರ್ಥ್ಯವಿಲ್ಲ ೨೫೩
ಶ್ರುತಿಲಿಂಗಗಳೆರಡೂ ನಿರವಕಾಶ ೨೫೩
ಶಂಕಾಪೂರ್ವಕವಾಗಿ ಭಾಷ್ಯದ ಯೋಜನೆ ೨೫೪
ಅಕ್ಷರಾತ್ ಪರತಃ ಪರನು ಯಾರು ? ೨೫೫
ವಿಷ್ಣುವಿನಲ್ಲಿ ಅಕ್ಷರತ್ವವು ಕೂಡುವುದಿಲ್ಲ ೨೫೬
ತತ್ತ್ವಪ್ರದೀಪದಲ್ಲಿ ಅಕ್ಷರತತ್ತ್ವದ ಬಗ್ಗೆ ೨೫೬
ಈಶ ಪದವು ರುದ್ರಪ್ರತಿಪಾದಕವಲ್ಲ ೨೫೬
ರುದ್ರನನ್ನು ಅಕ್ಷರನೆನ್ನಬಹುದೇ ? ೨೫೭
ಆಕಾಂಕ್ಷೆಗೆ ಅನುಸಾರಿಯಾಗಿ ಭಾಷ್ಯ ವ್ಯಾಖ್ಯಾನ ೨೫೭
'ತನ್ಮತಿಃ' ಎಂಬಲ್ಲಿ ಯಾರನ್ನು ಪರಾಮರ್ಶಿಸಬೇಕು ? ೨೫೮
ಪರಾಪರವಿದ್ಯೆಗಳು ಭಿನ್ನವಿಷಯಕವೇ ? ೨೫೮
ಪ್ರವೃತ್ತಕರ್ಮ ನಿವೃತ್ತಕರ್ಮದಂತೆ ಪರಾಪರವಿದ್ಯೆಗಳು ೨೬೦

ಅಂಗಪ್ರತ್ಯಂಗಗಳ ಬಗ್ಗೆ ೨೬೧
ಬ್ರಹ್ಮಸೂತ್ರ
'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬ ಸೂತ್ರ ವ್ಯಾಖ್ಯಾನ ೨೬೧
ಬ್ರಹ್ಮಸೂತ್ರಭಾಷ್ಯ
ಸರ್ವಜ್ಞರಲ್ಲದ ಬ್ರಹ್ಮಾದಿಗಳು ಅದೃಶ್ಯರಲ್ಲ ೨೬೨
ಅಕ್ಷರತತ್ವಗಳು ಮೂರು ೨೬೩
ಈಶನೆಂದರೆ ರುದ್ರನಲ್ಲ ೨೬೪
ತತ್ವಪ್ರದೀಪ
'ಯಃ ಸರ್ವಜ್ಞಃ ಸರ್ವವಿತ್' ಎಂಬ ಶ್ರುತಿಯ ವ್ಯಾಖ್ಯಾನ ೨೬೫
ತತ್ವಪ್ರಕಾಶಿಕಾ
ಪೂರ್ವಪಕ್ಷದ ನಿರಾಕರಣೆಗಾಗಿ ವಿಶೇಷಯುಕ್ತಿ ೨೬೭
ಬ್ರಹ್ಮನ ತಪಸ್ಸು ಜ್ಞಾನಸ್ವರೂಪವೆನ್ನಲು 'ಯಃ ಸರ್ವಜ್ಞಃ' ಎಂಬ ಶ್ರುತಿ ೨೬೭
ಅದೃಶ್ಯತ್ವಾದಿಗುಣಗಳುಳ್ಳವನು ಚತುರ್ಮುಖನಲ್ಲ ೨೬೮
ಜ್ಞಾನ ಹಾಗೂ ವೇದನ ಪದಗಳ ವ್ಯಾಖ್ಯಾನ ೨೬೮
ಅಕ್ಷರಶಬ್ದವು ಇತರರಲ್ಲಿ ನಿರವಕಾಶವಲ್ಲವೇ ? ೨೬೮
'ಅಕ್ಷರಾತ್ ಪರತಃ ಪರಃ' ಎಂಬಲ್ಲಿ ಅವಧಿಯನ್ನು ಹೇಳಿಲ್ಲ ೨೬೯
ಅಕ್ಷರಪದದಿಂದ ಪ್ರತಿಪಾದ್ಯವಾದ ತತ್ವಗಳು ಮೂರು ೨೬೯
ಈಶನು ರುದ್ರನಲ್ಲದ ಕಾರಣ ಅದೃಶ್ಯನಾಗಲಾರ ೨೬೯
ರುದ್ರನು ಪರಮಾತ್ಮನಿಗಿಂತ ಭಿನ್ನನು ೨೭೦
ಬ್ರಹ್ಮ, ಅಕ್ಷರ ಈಶ ಶಬ್ದಗಳ ಮುಖ್ಯಾರ್ಥ ಮಹಾವಿಷ್ಣುವೇ ೨೭೦
ಭಾವದೀಪ
'ವಿಶೇಷಣಭೇದವ್ಯಪದೇಶಾಭ್ಯಾಂ ಚ' ಎಂಬಲ್ಲಿರುವ 'ಚ' ಶಬ್ದದ ವ್ಯಾಖ್ಯಾನ ೨೭೧
ಸ್ವಪಕ್ಷಸಾಧನೆಗೆ ಹೇತು ೨೭೧
ಕರ್ಮನಿರ್ಣಯದಲ್ಲಿ ಶ್ರುತಿಯ ವ್ಯಾಖ್ಯಾನ ೨೭೧
ಚಿತ್‌ಪ್ರಕೃತಿಯನ್ನು ಅಕ್ಷರವೆನ್ನಬಹುದೇ ? ೨೭೨
ಚತುರ್ಮುಖನನ್ನು ಅಕ್ಷರನೆನ್ನಬಹುದೇ ? ೨೭೨
ಗೀತಾಭಾಷ್ಯದಿಂದ ವಿರೋಧ ಪರಿಹಾರ ೨೭೩
'ಸರ್ವವಿತ್' ಪದದ ವ್ಯಾಖ್ಯಾನ ೨೭೩
ಸೂತ್ರಖಂಡಕ್ಕೆ ಮತ್ತೊಂದು ವ್ಯಾಖ್ಯಾನ ೨೭೬
ಪರತಃ ಪರತ್ವವು ಹೇಗೆ ವಿಶೇಷಣವಾಗುತ್ತದೆ ? ೨೭೬
ಅಥರ್ವಣಭಾಷ್ಯದಿಂದ ವಿರೋಧವಿಲ್ಲ ೨೭೭
ಪದಕ್ಕೆ ಅನೇಕಾರ್ಥ ಹೇಳುವುದು ತಪ್ಪಲ್ಲ ೨೭೭

ಬ್ರಹ್ಮಸೂತ್ರ

'ರೂಪೋಪನ್ಯಾಸಾಚ್ಚ' ಎಂಬ ಸೂತ್ರ ವ್ಯಾಖ್ಯಾನ ೨೭೮

ಬ್ರಹ್ಮಸೂತ್ರಭಾಷ್ಯ

ಶುದ್ಧವಾದ ಬಂಗಾರದ ವರ್ಣ ಭಗವಂತನಿಗೆ ಮಾತ್ರ ೨೭೯

'ರೂಪೋಪನ್ಯಾಸ' ಎಂಬ ಹೇತು ವಿಷ್ಣುತ್ವ ನಿಶ್ಚಾಯಕ ಹೇಗೆ ? ೨೮೦

'ರುಗ್ಮವರ್ಣಂ' ಎಂಬುದು ವಿಷ್ಣುವಿನ ವಿಶೇಷಣ ೨೮೧

ತತ್ತ್ವಪ್ರದೀಪ

'ಯದಾ ಪಶ್ಯಃ' ಇತ್ಯಾದಿ ಟೀಕೆಯ ವ್ಯಾಖ್ಯಾನ ೨೮೨

ತತ್ತ್ವಪ್ರಕಾಶಿಕಾ

ವಿಷ್ಣುವು ಅದೃಶ್ಯನೆನ್ನಲು ಮತ್ತೊಂದು ಹೇತು ೨೮೩

ಅದೃಶ್ಯತ್ವಗುಣವಿದೆಯೆನ್ನಲು ರುಗ್ಮವರ್ಣವು ಹೇತು ೨೮೪

ರೂಪೋಪನ್ಯಾಸವು ಇತರರಲ್ಲಿ ಇಲ್ಲವೇ ? ೨೮೪

'ಏಮಿಶ್ಯಾಣಿ ವ್ಯಮಿಶ್ರಯತ್' ಎಂಬುದರ ವ್ಯಾಖ್ಯಾನ ೨೮೫

ಅದೃಶ್ಯತ್ವಾದಿಗುಣಗಳುಳ್ಳ ಮಹಾವಿಷ್ಣುವೇ ಆನಂದಮಯನು ೨೮೫

'ವಿಷ್ಣುರೇವ' ಎಂಬ ಅವಧಾರಣದ ಕಾರಣ ೨೮೬

ಭಾಷ್ಯಕ್ಕೆ ಸೂತ್ರದ ಜೊತೆ ಅನ್ವಯ ೨೮೬

ಪುಣ್ಯ-ಪಾಪಗಳೆರಡು ಅನಿಷ್ಟ ೨೮೭

ಈಶನೆಂದರೆ ರುದ್ರನಲ್ಲ ೨೮೭

ಬ್ರಹ್ಮದೇವರಿಗೆ ರುದ್ರನು ಜನಕನಲ್ಲ ೨೮೮

'ಯದಾ ಪಶ್ಯಃ' ಇತ್ಯಾದಿ ಶ್ರುತಿಯ ವ್ಯಾಖ್ಯಾನ ೨೮೮

ವಾಕ್ಯಶೇಷದ ಅಧ್ಯಾಹಾರಕ್ಕೆ ಕಾರಣ ೨೮೯

ಮೂರು ಸೂತ್ರಗಳ ಹೇತ್ವರ್ಥ ೨೮೯

ಐದು ಬಗೆಯ ಸಂಶಯಗಳನ್ನು ಪರಿಹರಿಸಬಹುದೇ ? ೨೯೦

ಮೊದಲನೆಯ ದೃಷ್ಟಾಂತವನ್ನೇಕೆ ಬಿಟ್ಟರು ? ೨೯೦

ರುದ್ರವಿಷಯಕ ಪೂರ್ವಪಕ್ಷದ ಬಗ್ಗೆ ತಾತ್ಪರ್ಯಚಂದ್ರಿಕಾ ೨೯೦

ತಂತ್ರದೀಪಿಕೆಯಲ್ಲಿ ಅದೃಶ್ಯತ್ವಾಧಿಕರಣದ ಸೂತ್ರಗಳು ೨೯೧

ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ಅದೃಶ್ಯತ್ವಾಧಿಕರಣ ೨೯೬

ವೈಶ್ವಾನರಾಧಿಕರಣ

ಬ್ರಹ್ಮಸೂತ್ರ

'ವೈಶ್ವಾನರಃ ಸಾಧಾರಣಶಬ್ದವಿಶೇಷಾತ್' ಎಂಬ ಸೂತ್ರ ವ್ಯಾಖ್ಯಾನ ೩೦೨

ಬ್ರಹ್ಮಸೂತ್ರಭಾಷ್ಯ

ಸರ್ವಗತನಾದ ವೈಶ್ವಾನರನು ಯಾರು ? ೩೦೩
'ವೈಶ್ವಾನರ' ಎಂಬ ಹೆಸರು ಮಹಾವಿಷ್ಣುವಿಗೆ ಮಾತ್ರ ೩೦೪

ಸತ್ತರ್ಕದೀಪಾವಳಿ

ಹಿಂದಿನ ಅಧಿಕರಣದಿಂದ ಆಕ್ಷೇಪಿಕೀ ಸಂಗತಿ ೩೦೫

ತತ್ವಪ್ರದೀಪ

ಅಧಿಕರಣಗಳ ರಾಜ ವೈಶ್ವಾನರಾಧಿಕರಣ ೩೦೬
ಸರ್ವಗತನು ಅಭಿಮಾನ ಎನಿಸುತ್ತಾನೆ ೩೦೭
ಮುಂದಿನ ಪಾದಕ್ಕೆ ಈ ಅಧಿಕರಣ ಪೀಠಿಕೆ ೩೦೮

ತತ್ವಪ್ರಕಾಶಿಕಾ

ಲಿಂಗಪಾದದಲ್ಲಿ ನಾಮಸಮನ್ವಯ ೩೧೨
ನಾಮಸಮನ್ವಯ ಮಾಡಿದರೂ ಸಂಗತಿ ಇದೆ ೩೧೨
ಅದೃಶ್ಯತ್ವಾದಿಗುಣವುಳ್ಳವನು ಸರ್ವಗತ ೩೧೩
ವೈಶ್ವಾನರನೇ ಸರ್ವಗತ ೩೧೩
ಛಾಂದೋಗ್ಯದಲ್ಲಿ ಸರ್ವಗತನಾದ ವೈಶ್ವಾನರನ ಬಗ್ಗೆ ೩೧೩
ವೈಶ್ವಾನರನು ಯಾರೆಂದು ವಿಚಾರ ೩೧೪
ಅಧಿಕರಣದ ವಿಷಯ, ಸಂಶಯ, ಸಂಶಯಕಾರಣ ೩೧೪
ಅಗ್ನಿದೇವತೆಯೇ ವೈಶ್ವಾನರ ಎಂದು ಪೂರ್ವಪ್ಷ ೩೧೪
ವಿಷ್ಣುಲಿಂಗವು ಅಗ್ನಿ ಶ್ರುತಿಗಿಂತ ದುರ್ಬಲ ೩೧೪
ಲಿಂಗವು ನಿರವಕಾಶವಾಗಿದ್ದರೂ ಬಲಿಷ್ಠವಲ್ಲ ೩೧೫
ವಿಷ್ಣು ಪ್ರತಿಪಾದಕವಾದರೆ ಶ್ರುತಿಗಳಲ್ಲಿ ಭೇದವ್ಯವಹಾರದ ವಿರೋಧ ೩೧೫
ವೈಶ್ವಾನರ ಶ್ರುತಿಯು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಮಾನ ೩೧೫
ವೈಶ್ವಾನರನು ಮಹಾವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತ ೩೧೬
ನಿರವಕಾಶವಾದ ಆತ್ಮಶ್ರುತಿಯ ಬಲದಿಂದ ಮಹಾವಿಷ್ಣುವೇ ವೈಶ್ವಾನರ ೩೧೬
ಆತ್ಮಶಬ್ದವು ಇತರರಲ್ಲಿ ಸರ್ವಥಾ ಅಪ್ರಸಿದ್ಧ ೩೧೭

ಲೋಕಪ್ರಸಿದ್ಧಿಯು ಸಾವಕಾಶ ೩೧೭
ನಾಮಸಮನ್ವಯಕ್ಕೆ ಅನುವ್ಯಾಖ್ಯಾನದ ಆಧಾರ ೩೧೭
ಅಣುಭಾಷ್ಯದ ಪ್ರಕಾರ ವೈಶ್ವಾನರಶಬ್ದವು ಲಿಂಗಾತ್ಮಕ ೩೨೦
ಲಿಂಗಪಾದದಲ್ಲಿ ವೈಶ್ವಾನರ ಎಂಬ ನಾಮಸಮನ್ವಯವು ಅಪ್ರಸ್ತುತವಲ್ಲ ೩೨೦
ಪಾಚಕತ್ವ, ಹೋಮಾಧಾರತ್ವ ಗಾರ್ಹಪತ್ಯಾದ್ಯಂಗತ್ವ ಮೊದಲಾದ
ಅನೇಕ ಲಿಂಗಗಳ ಸಮನ್ವಯ ೩೨೧
ಪಾಚಕತ್ವವೂ ಕೂಡ ಲಿಂಗವೇ ಆಗಿದೆ ೩೨೧
ಸಂಗತಿಪರ ಭಾಷ್ಯಕ್ಕೆ ವ್ಯಾಖ್ಯಾನ ೩೨೩
ಛಾಂದೋಗ್ಯ ಹಾಗೂ ಬೃಹದಾರಣ್ಯಕಗಳಲ್ಲಿ ವಿಷಯವಾಕ್ಯ ೩೨೩
ವೈಶ್ವಾನರನು ವಿಷ್ಣುವಾಗದಿದ್ದರೆ ? ೩೨೪
ವಿಷ್ಣುವೊಬ್ಬನೇ ವೈಶ್ವಾನರ ೩೨೪
ಸಂಗತಿಪರ ಭಾಷ್ಯವೇ ಪೂರ್ವಪಕ್ಷಪರ ೩೨೫
'ವೈಶ್ವಾನರಸ್ಯ' ಎಂಬ ಪದಸೂಚಿತವಾದ ಪ್ರಮೇಯ ೩೨೫
ಪೂರ್ವಪಕ್ಷ ಹಾಗೂ ಸಿದ್ಧಾಂತದಲ್ಲಿ ಸಮಾನ ಬಲವಿದೆಯೇ ? ೩೨೫
ಶಬ್ದಗಳೇ ಇಲ್ಲವಾದರೆ ಲೋಕವ್ಯವಹಾರಗಳು ಹೇಗೆ ? ೩೨೬
ಹಿಂದಿನ ಅಧಿಕರಣಗಳ ಪ್ರಮೇಯವೂ ಕೂಡ ಆಕ್ಷೇಪಾರ್ಹ ೩೨೬
ಎಲ್ಲವೂ ವಿಷ್ಣುವಿದ್ಯೆಯಾದರೆ ಬರುವ ಆಕ್ಷೇಪ ೩೨೭
ಲೋಕವ್ಯವಹಾರವು ನಿರವಕಾಶವೆಂದು ಆಕ್ಷೇಪ ೩೨೮
'ಅಗ್ನಾವಿಷ್ಣ್ವಾ;' ಎಂಬ ಪ್ರಯೋಗವು ವ್ಯಾಕರಣ ಸಮ್ಮತ ೩೨೮
ಜಡವಾದ ಅಗ್ನಿಯ ಜೊತೆ ಐಕ್ಯವು ಕೂಡದು ೩೨೯
ಶ್ರುತಿಯು ಉಭಯಸಾಧಾರಣ ೩೨೯
'ಸರ್ವಗತತ್ವಮ್' ಇತ್ಯಾದಿ ಭಾಷ್ಯದ ತಾತ್ಪರ್ಯ ೩೨೯
ನ್ಯಾಯವಿವರಣದ ಪ್ರಕಾರ ಹೇತ್ವಂಶದ ವ್ಯಾಖ್ಯಾನ ೩೨೯
ವಿಶೇಷಣಪದದಿಂದ ವ್ಯಾವರ್ತ್ಯವಾದ ಪೂರ್ವಪಕ್ಷ ೩೩೦
ಬ್ರಹ್ಮಸೂತ್ರ
'ಸ್ಮರ್ಯಮಾಣಮನುಮಾನಂ ಸ್ಯಾದಿತಿ' ಎಂಬ ಸೂತ್ರವ್ಯಾಖ್ಯಾನ ೩೩೦
ಬ್ರಹ್ಮಸೂತ್ರಭಾಷ್ಯ
ಭಗವದ್ಗೀತೆಯ ಆಧಾರದಿಂದ ವೈಶ್ವಾರನನ್ನು ತಿಳಿಯಬೇಕು ೩೩೧
ಸತ್ತರ್ಕದೀಪಾವಳಿ
ವೈಶ್ವಾನರನು ವಿಷ್ಣುವೆನ್ನಲು ಭಗವದ್ವಾಕ್ಯ ಸಂವಾದ ೩೩೨

ತತ್ತ್ವಪ್ರದೀಪ

ವೈಶ್ವಾನರನು ವಿಷ್ಣುವೆನ್ನಲು ಗೀತೆಯ ಸಮಾಖ್ಯಾನ ೩೩೨

ತತ್ತ್ವಪ್ರಕಾಶಿಕಾ

ಹಿಂದಿನ ಸೂತ್ರದ ಮೇಲೆ ಅಧಿಕಾಶಂಕೆ ೩೩೩

ಬೇರೆ ಹೇತುವಿನಿಂದ ವೈಶ್ವಾನರತ್ವ ಪ್ರತಿಪಾದನೆ ೩೩೪

ಭಗವದ್ಗೀತೆಯಲ್ಲಿ ಹೇಳಿದ ವೈಶ್ವಾನರನೇ ವೈಶ್ವಾನರವಿದ್ಯೆಯಲ್ಲಿ ಪ್ರತಿಪಾದ್ಯನೇ ? ೩೩೪

ಭಾವದೀಪ

ಸೂತ್ರದಲ್ಲಿ ಚಶಬ್ದವಿಲ್ಲದ್ದರಿಂದ ಅವತಾರಿಕೆ ೩೩೫

ಅಗ್ನಿದೇವತೆ, ಭೂತಾಗ್ನಿ, ವಿಷ್ಣು ಈ ಮೂರೂ ಕೂಡ ವೈಶ್ವಾನರರೇ ? ೩೩೫

ಇಂದ್ರ, ಆಕಾಶ ಮೊದಲಾದ ಶಬ್ದಗಳೂ ಕೂಡ ಇಲ್ಲಿ ಆಕ್ಷೇಪಾರ್ಹ ೩೩೫

'ಅಹಂ ವೈಶ್ವಾನರೋ ಭೂತ್ವಾ' ಎಂಬ ಗೀತೆಯ ವಾಕ್ಯ ೩೩೬

'ವಿಶೇಷಶ್ರುತ್ಯಾದೇಃ' ಎಂಬ ನ್ಯಾಯವಿವರಣದಲ್ಲಿರುವ ಆದಿಪದಾರ್ಥ ೩೩೬

ಬ್ರಹ್ಮಸೂತ್ರ

'ಶಬ್ದಾದಿಭ್ಯಃ' ಇತ್ಯಾದಿ ಸೂತ್ರ ವ್ಯಾಖ್ಯಾನ ೩೩೭

ಬ್ರಹ್ಮಸೂತ್ರಭಾಷ್ಯ

'ವೈಶ್ವಾನರ' ಎಂಬ ಉಪಾಸನೆ ಅತ್ಯವಶ್ಯ ೩೩೮

ಸಕಲವೂ ಶ್ರೀಹರಿಯಲ್ಲಿಯೇ ಮುಖ್ಯ ೩೪೦

ಬ್ರಹ್ಮಪದವಾಚ್ಯನಾದವನೇ ವೈಶ್ವಾನರ ೩೪೨

ಪುರುಷಸೂಕ್ತ ಪ್ರತಿಪಾದ್ಯನೇ ವೈಶ್ವಾನರ ೩೪೩

ಸೂತ್ರದಲ್ಲಿರುವ ಚಶಬ್ದವ್ಯಾಖ್ಯಾನ ೩೪೫

ಪುರುಷಸೂಕ್ತವು ವಿಷ್ಣುಪರವೆನ್ನಲು ಪುರಾಣದ ಆಧಾರ ೩೪೫

ಪುರುಷಸೂಕ್ತವು ವಿಷ್ಣುಪರವೆನ್ನಲು ವೇದದ ಆಧಾರ ೩೪೬

ಪುರುಷಸೂಕ್ತವು ವಿಷ್ಣುಪರವೆನ್ನಲು ತಂತ್ರದ ಆಧಾರ ೩೪೭

ಜನ್ಯಜನಕಗಳಿಗೆ ಪುರಾಣಗಳಲ್ಲಿ ಅಭೇದವ್ಯವಹಾರ ೩೪೮

ಸತ್ತರ್ಕದೀಪಾವಳಿ

'ಶಬ್ದಾದಿಭ್ಯಃ' ಎಂಬ ಸೂತ್ರಕ್ಕೆ ಸಂಗತಿ ೩೪೯

'ಶಬ್ದಾದಿಭ್ಯ' ಎಂಬ ಸೂತ್ರಾರ್ಥ ೩೪೯

ಲಿಂಗದ ಆಧಾರದಿಂದ ಅಗ್ನಿಯು ವೈಶ್ವಾನರನೆಂದು ಆಕ್ಷೇಪ ೩೪೯

ಪಾಚಕತ್ವಧರ್ಮದಿಂದ ವಿಷ್ಣುವಿನ ಉಪಾಸನೆ ೩೫೦

ವೈಶ್ವಾನರನು ವಿಷ್ಣುವೆನ್ನಲು ಬ್ರಹ್ಮಶಬ್ದ ಹಾಗೂ ಪುರುಷಸೂಕ್ತಗಳ ಆಧಾರ ೩೫೦

ಪುರುಷಸೂಕ್ತ ಪ್ರತಿಪಾದ್ಯನೇ ಇಲ್ಲಿ ವಿವಕ್ಷಿತ ೩೫೧
'ಯಥೈವ ಪೌರುಷಂ ಸೂಕ್ತಮ್' ಎಂಬ ಪುರಾಣದ ವ್ಯಾಖ್ಯಾನ ೩೫೧
ದ್ಯುಲೋಕಾದಿಗಳಿಗೂ ಭಗವಂತನ ಅವಯವಗಳಿಗೂ ಅಭೇದವಿಲ್ಲ ೩೫೨
ಅವಯವಗಳಿಗೇಕೆ ಲೋಕಗಳ ಹೆಸರು ? ೩೫೨
'ಬ್ರಾಹ್ಮಣೋಽಸ್ಯ ಮುಖಮಾಸೀತ್' ಎಂಬ ಅಭೇದವ್ಯವಹಾರದ ಉದಾಹರಣೆ ೩೫೨
ತತ್ತ್ವಪ್ರದೀಪ
ವೈಶ್ವಾನರನ ಬಗ್ಗೆ ಬೃಹದಾರಣ್ಯಕ ಏನು ಹೇಳುತ್ತದೆ ? ೩೫೩
'ಮೂರ್ಧಾನಂ ದಿವಃ' ಎಂಬ ಶ್ರುತ್ಯರ್ಥ ೩೫೪
ವೈಶ್ವಾನರನಿಗೆ ಆಹುತಿ ನೀಡುವರು ೩೫೫
ಸೂತ್ರದ ಆದಿಪದದಿಂದ ಹೇಳಲ್ಪಟ್ಟ ಅಗ್ನಿಯ ಗಮಕಗಳು ೩೫೬
ಸಕಲವೂ ಮಹಾವಿಷ್ಣುವಿನದ್ದೇ ೩೫೯
ಉದ್ದಾಲಕರಿಗೆ ಅಶ್ವಪತಿರಾಜನಿಂದ ವೈಶ್ವಾನರನ ಉಪದೇಶ ೩೬೦
ಆತ್ಮ ಹಾಗೂ ಬ್ರಹ್ಮ ಯಾರೋ, ಅವನೇ ವೈಶ್ವಾನರ ೩೬೧
'ತಸ್ಯ ಹ ವಾ' ಇತ್ಯಾದಿ ಶ್ರುತ್ಯರ್ಥ ೩೬೨
ವೈಶ್ವಾನರನ ಕಣ್ಣಿನ ಉಪಾಸನೆ ೩೬೫
ವೈಶ್ವಾನರನ ಪ್ರಾಣವಾಯುವಿನ ಉಪಾಸನೆ ೩೬೭
ವೈಶ್ವಾನರ ಮಧ್ಯದೇಹದ ಉಪಾಸನೆ ೩೬೮
ವೈಶ್ವಾನರನ ಕಟಿಪ್ರದೇಶದ ಉಪಾಸನೆ ೩೭೦
ವೈಶ್ವಾನರನ ಪಾದಗಳ ಉಪಾಸನೆ ೩೭೧
'ಯಸ್ಮಾದಂಗಾತ್' ಇತ್ಯಾದಿ ಭಾಷ್ಯವ್ಯಾಖ್ಯಾನ ೩೭೨
ತತ್ತ್ವಪ್ರಕಾಶಿಕಾ
'ಶಬ್ದಾದಿಭ್ಯೋಽಂತಃಪ್ರತಿಷ್ಠಾನಾತ್' ಎಂಬ ಆಕ್ಷೇಪ ಭಾಗದ ವ್ಯಾಖ್ಯಾನ ೩೭೪
ಅಗ್ನಿಯು ಏಕೆ ವೈಶ್ವಾನರನಲ್ಲ ? ೩೭೪
ವೈಶ್ವಾನರ ಶ್ರುತಿಯಲ್ಲಿ ಅಗ್ನಿಶಬ್ದದ ಸಮಾನಾಧಿಕರಣ್ಯವಿದೆ ೩೭೫
ಅಗ್ನಿಯೇ ವೈಶ್ವಾನರನೆನ್ನಲು ಅನೇಕ ಲಿಂಗಗಳು ೩೭೫
'ಅಯಮಗ್ನಿರ್ವೈಶ್ವಾನರಃ' ಎಂಬ ಶ್ರುತಿಯ ಆಧಾರ ೩೭೫
ಛಾಂದೋಗ್ಯೋಪನಿಷತ್ತಿನಲ್ಲಿ ಅಗ್ನಿಲಿಂಗಗಳು ೩೭೬
ವೈಶ್ವಾನರ ಶಬ್ದವಿರುವ ವಾಕ್ಯಗಳೆಲ್ಲವೂ ಈ ಅಧಿಕರಣಕ್ಕೆ ವಿಷಯ ೩೭೬
'ಮೂರ್ಧಾನಂ ದಿವಃ' ಇತ್ಯಾದಿ ಶ್ರುತ್ಯರ್ಥ ೩೭೭
'ಅಗ್ನಿರ್ದೇವಾನಾಂ ಮುಖಮ್' ಇತ್ಯಾದಿ ಶ್ರುತಿಗಳ ಅರ್ಥ ೩೭೭

ಪೂರ್ವಪಕ್ಷದ ನಿರಾಕರಣೆ ೩೭೮
ಅಗ್ನಿದೇವತೆ ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಮಾಣಗಳು ಸಮಾನವಲ್ಲ ೩೭೮
ಅಗ್ನಿಲಿಂಗಗಳೆಲ್ಲವೂ ಸಾವಕಾಶ ೩೭೮
ಆತ್ಮಶಬ್ದಾದಿಗಳೇ ವಿಷ್ಣುತ್ವ ನಿರ್ಣಾಯಕ ೩೭೯
ಉಪಾಸನೆಗೆ ಹೇಳಿದ್ದು ಅಸತ್ತಲ್ಲ ೩೭೯
ವೈಶ್ವಾನರನೆಂದು ಉಪಾಸನೆ ಮಾಡಿರಿ ೩೮೦
ಇದು ವಿಷ್ಣುಪ್ರಕರಣ ಎನ್ನಲು ಆತ್ಮ ಹಾಗೂ ಬ್ರಹ್ಮಶಬ್ದಗಳೇ ಆಧಾರ ೩೮೦
ಸಮಾಖ್ಯಾಪ್ರಮಾಣದಿಂದ ವೈಶ್ವಾನರನಿಗೆ ವಿಷ್ಣುತ್ವ ಸಮರ್ಥನೆ ೩೮೧
ಪುರುಷಸೂಕ್ತವು ವಿಷ್ಣುಪರ ೩೮೧
ಭಾಷ್ಯದಲ್ಲಿ ಶ್ರುತಿಗಿಂತ ಮೊದಲು ಪುರಾಣ ಉಲ್ಲೇಖಿಸಲು ಏನು ಕಾರಣ ? ೩೮೨
'ದ್ಯುಲೋಕವು ವೈಶ್ವಾನರನ ತಲೆ' ಎಂಬುದರ ಅಭಿಪ್ರಾಯ ೩೮೩
ಜನ್ಯಜನಕಗಳಲ್ಲಿ ಅಭೇದವ್ಯವಹಾರವಿದೆ ೩೮೩
ಭಾವದೀಪ
ಆತ್ಮಶಬ್ದವು ಸಾವಕಾಶವಲ್ಲವೇ ? ಎಂದು ಆಕ್ಷೇಪ ೩೮೪
ಅಧಿಕರಣದ ವಿಷಯವಾಕ್ಯ ಯಾವುದು ? ೩೮೪
ಸೂತ್ರದಲ್ಲಿರುವ ಆದಿಪದಾರ್ಥವೇನು ? ೩೮೫
ಪಾಚಕತ್ವಧರ್ಮವನ್ನು ಪ್ರತ್ಯೇಕ ವಿವಕ್ಷಿಸಲು ತತ್ವಪ್ರದೀಪಕಾರರ ಅಭಿಪ್ರಾಯ ೩೮೫
ಭೋಜನವು ಮಹಾವಿಷ್ಣುವಿಗೆ ಮಾತ್ರ ನೀಡುವ ಆಹುತಿ ೩೮೫
ಭಿನ್ನಭಿನ್ನವಾಕ್ಯಗಳ ಉಲ್ಲೇಖವೇಕೆ ? ೩೮೬
ಟೀಕೆಯಲ್ಲಿ ವ್ಯಾಖ್ಯೇಯವಾದ ಮಂತ್ರ ೩೮೬
'ಮೂರ್ಧಾನಂ ದಿವಃ' ಎಂಬ ಶ್ರುತಿಯು ಪುರುಷಸೂಕ್ತದ ಅರ್ಥವನ್ನೇ ಹೇಳುತ್ತಿದೆ ೩೮೬
'ಅರತಿ' ಪದದ ಅರ್ಥ ೩೮೭
ಚಂಡಾಲನಿಗೆ ಕೊಡುವ ಉಚ್ಛಿಷ್ಟವೂ ಕೂಡ ಹೋಮವಾಗುತ್ತದೆ ೩೮೭
ಗಾಯತ್ರ್ಯಧಿಕರಣದಿಂದ ಪುನರುಕ್ತವಾಗುವುದಿಲ್ಲ ೩೯೦
ವಿಷ್ಣುವಿನಲ್ಲಿ ಪ್ರಸಿದ್ಧವಾದ ಆತ್ಮಶಬ್ದವು ನಿರವಕಾಶವಾಗಿದೆ ೩೯೦
ಗೀತೆಯ ಜೊತೆ ಬೇರೆ ಶ್ರುತಿವಾಕ್ಯವನ್ನು ವಿವಕ್ಷಿಸಬೇಕು ೩೯೧
'ಮೂರ್ಧ್ನೈವ ಸುತೇಜಾಃ' ಎಂಬ ಶ್ರುತಿಯು ಅಸದರ್ಥವನ್ನು ಪ್ರತಿಪಾದಿಸುತ್ತಿಲ್ಲ ೩೯೧
ತಾದಾತ್ಮ್ಯಾರ್ಥಕ್ಕಿಂತ ಅನ್ಯಾರ್ಥವನ್ನೇ ವಿವಕ್ಷಿಸಬೇಕು ೩೯೨
'ಯೋಷಿತಮಗ್ನಿಂ' ಎಂಬುದರ ಅರ್ಥ ೩೯೨
ಸಕಲ ಕರ್ಮ, ಸಕಲ ಲಿಂಗ, ಸಕಲ ಇಚ್ಛೆ, ಸಕಲ ಕ್ರಿಯೆ ಎಲ್ಲವೂ ವಿಷ್ಣುವದ್ದೇ ೩೯೩

ಸಕಲ ಗುಣಗಳು, ಸಕಲ ಧರ್ಮಗಳು ಭಗವಂತನದ್ದೇ	೩೯೩
ತತ್ತ್ವಪ್ರದೀಪದಲ್ಲಿ ಸಂಪೂರ್ಣ ಶ್ರುತ್ಯರ್ಥ	೩೯೪
ಆತ್ಮಶಬ್ದವು ಬೇರೆಯವರಲ್ಲಿ ಅತ್ಯಂತ ಅಸಂಭಾವಿತ	೩೯೪
'ಪ್ರಕರಣತ್ವಾಚ್ಚ' ಎಂಬ ಟೀಕಾಪಂಕ್ತಿಯಲ್ಲಿರುವ ಸ್ವಾರಸ್ಯ	೩೯೫
ಟೀಕೆಯಲ್ಲಿ ಪುನರುಕ್ತಿಯನ್ನು ಪರಿಹರಿಸಿದರು	೩೯೫
ಪುರುಷಸೂಕ್ತದಲ್ಲಿರುವ ಅನುರೂಪವಾಕ್ಯಗಳ ಉಲ್ಲೇಖ	೩೯೫
ಸೂತ್ರದಲ್ಲಿರುವ 'ಅಪಿ'ಶಬ್ದದ ವ್ಯಾಖ್ಯಾನ	೩೯೬
ಪ್ರಕರಣ ಹಾಗೂ ಸಮಾಖ್ಯಾ ಎರಡೂ ಕೂಡ ಆಧಾರವಾಗಿದೆ.	೩೯೬
'ಪುರಾಣಾದಿಷು' ಎಂಬ ಭಾಷ್ಯದಲ್ಲಿರುವ ಆದಿಪದಾರ್ಥ	೩೯೭
ಶ್ರುತಿಯಲ್ಲಿ ಏಕೆ ಅಭೇದವ್ಯವಹಾರ ?	೩೯೭
ಛಾಂದೋಗ್ಯಭಾಷ್ಯದಲ್ಲಿರುವ ವಿಷಯವಾಕ್ಯದ ಉಲ್ಲೇಖ	೩೯೭
ಆಧಾರಾಧೇಯಭಾವವೂ ಕೂಡ ಅಭೇದವ್ಯವಹಾರದಲ್ಲಿ ವಿವಕ್ಷಿತ	೩೯೮
ಬ್ರಹ್ಮಸೂತ್ರ	
'ಅತ ಏವ ನ ದೇವತಾ ಭೂತಂ ಚ' ಎಂಬ ಸೂತ್ರ ವ್ಯಾಖ್ಯಾನ	೩೯೯
ಬ್ರಹ್ಮಸೂತ್ರಭಾಷ್ಯ	
ಅಗ್ನಿ, ವೈಶ್ವಾನರ, ಜಾತವೇದ ಮೊದಲಾದ ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯ	೩೯೯
ಸತ್ತರ್ಕದೀಪಾವಳಿ	
ಅರ್ಥಾಂತರಗಳು ಬಾಧಿತವಾಗಿದೆ	೪೦೦
ತತ್ತ್ವಪ್ರದೀಪ	
ವೈಶ್ವಾನರ ಪ್ರಕರಣದಿಂದ ಪ್ರತಿಪಾದ್ಯನಾದವನು ಮಹಾವಿಷ್ಣು ಮಾತ್ರ	೪೦೧
ತತ್ತ್ವಪ್ರಕಾಶಿಕಾ	
ವೈಶ್ವಾನರ ಪ್ರಕರಣವು ಮಹಾವಿಷ್ಣು ಪ್ರತಿಪಾದಕವೆನ್ನಲು ಕಾರಣ	೪೦೨
ಭಾವದೀಪ	
ಅಗ್ನಿ ವೈಶ್ವಾನರಾದಿ ಇತ್ಯಾದಿ ವಾಕ್ಯಗಳ ಟೀಕೆಗೆ ಪರಿಪೂರ್ಣ ವ್ಯಾಖ್ಯಾನ	೪೦೩
ಏವಕಾರವು ನಿರವಕಾಶತ್ವವಾಚಕವಾಗಿದೆ	೪೦೪
'ಏ ಮೇ ಕರ್ಣಾ ಪತಯತಃ' ಇತ್ಯಾದಿ ಶ್ರುತಿಗಳಿಂದ ಯಾರು ಪ್ರತಿಪಾದ್ಯರು ?	೪೦೪
'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರ ವ್ಯಾಖ್ಯಾನ	೪೦೫
ಲೌಕಿಕ ವ್ಯವಹಾರಕ್ಕಾಗಿ ಸೂಕ್ತ ನಿಯಮವೆಂದು ಜೈಮಿನಿಗಳ ಅಭಿಪ್ರಾಯ	೪೦೫
ವೇದವ್ಯಾಸರ ಮನಸ್ಸು ಆಕಾಶದಂತೆ ವಿಶಾಲ	೪೦೬
ಬಾಧಕವಿಲ್ಲದಿದ್ದಾಗ ಮಾತ್ರ ಮುಖ್ಯಾರ್ಥ ಬಿಡಬೇಕು	೪೦೭

ಜೈಮಿನಿ, ಆಶ್ಮರಥ್ಯ ಮೊದಲಾದ ಋಷಿಗಳ ಅಭಿಪ್ರಾಯ	೪೦೮
ವ್ಯವಹಾರಕ್ಕೋಸ್ಕರ ಇತರರಲ್ಲಿ ಪ್ರಯೋಗ	೪೦೯
ವಿಷ್ಣುಪರವೆಂದಾಗ ಲೋಕಪ್ರಸಿದ್ಧಿಗೆ ಬಾಧಕವಿಲ್ಲ	೪೧೦
ಅಮುಖ್ಯವೃತ್ತಿಯಿಂದ ಇತರರು ಪ್ರತಿಪಾದ್ಯರು	೪೧೦
ಜೈಮಿನ್ಯಾಚಾರ್ಯರ ಪ್ರಕಾರ ವಿರೋಧ ಪರಿಹಾರ	೪೧೧
ಜೈಮಿನ್ಯಾದಿಮತಗಳ ಉಲ್ಲೇಖಕ್ಕೆ ಏನು ಕಾರಣ ?	೪೧೧
ಜೈಮಿನ್ಯಾದಿಗಳ ಮತವು ವೇದವ್ಯಾಸರ ಮತವೇ ಆಗಿದೆ	೪೧೧
ಆಕಾಂಕ್ಷಿತಪದಗಳ ಪೂರ್ಣದಿಂದ ಭಾಷಾ ವ್ಯಾಖ್ಯಾನ	೪೧೨
'ಸಾಕ್ಷಾತ್' ಎಂಬ ಪದದ ಅರ್ಥ	೪೧೨
'ಅಪಿ' ಇತ್ಯಾದಿ ಪದಗಳ ವ್ಯಾಖ್ಯಾನ	೪೧೩
ಅನುಷಂಗದ ಮೂಲಕ ಟೀಕೆಯನ್ನು ಅರ್ಥೈಸಿಕೊಳ್ಳಬೇಕು	೪೧೩
'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಎಂಬ ಸೂತ್ರ ವ್ಯಾಖ್ಯಾನ	೪೧೪
ಉಪಾಸನೆಗಾಗಿ ಸೂಕ್ತ ನಿಯಮವೆಂದು ಆಶ್ಮರಥ್ಯರು	೪೧೪
ಇಂದ್ರಿಯಾದಿಗಳಲ್ಲಿ ಸರ್ವೋತ್ತಮತ್ವವು ಅಸಂಭಾವಿತ	೪೧೫
ಉಪಾಸನೆಗೋಸ್ಕರ ಸೂಕ್ತಾದಿಗಳ ವ್ಯವಸ್ಥೆ	೪೧೫
ಉಪಾಸನೆಗಾಗಿ ಸೂಕ್ತವೈವಿಧ್ಯ	೪೧೬
ಸಕಲ ಶಬ್ದಗಳು ವಿಷ್ಣುಪರವಾದರೆ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಎಂದು ಹೇಳುವುದು ಹೇಗೆ ?	೪೧೭
ಟೀಕೆಯಲ್ಲಿರುವ ಕಠಿಣ ಪದಗಳ ಅರ್ಥ	೪೧೮
'ತತ್ರ ತತ್ರ ಪ್ರಸಿದ್ಧಾವಪಿ' ಎಂಬ ಭಾಷ್ಯ ವ್ಯಾಖ್ಯಾನ	೪೧೯
ಕರ್ಮಪರವಾದ ಸೂಕ್ತಗಳಿಂದಲೂ ಉಪಾಸನೆ ಮಾಡಬಹುದು	೪೧೯
'ಅನುಸ್ಮೃತೇರ್ಬಾದರಿಃ' ಎಂಬ ಸೂತ್ರ ವಾಖ್ಯಾನ	೪೧೯
ಶುಕಾಚಾರ್ಯರ ಪ್ರಕಾರ ಉಪಾಸಕರಿಗೆ ಅಧಿಷ್ಠಾನವನ್ನು ತಿಳಿಸಲು ಸೂಕ್ತ ನಿಯಮ	420
ಸೂಕ್ತನಿಯಮದಲ್ಲಿ ಶುಕರ ಅಭಿಪ್ರಾಯ	೪೨೧
ವಿವಿಧ ಅಧಿಷ್ಠಾನಗಳಲ್ಲಿ ಭಗವಂತನ ಉಪಾಸನೆ	೪೨೨
'ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ' ಎಂಬ ಸೂತ್ರ ವ್ಯಾಖ್ಯಾನ	೪೨೩
ಉಪಾಸಕನಿಗೆ ತಕ್ಕ ಫಲವು ಪ್ರಾಪ್ತವಾಗುತ್ತದೆಂದು ಜೈಮಿನಿಗಳ ಭರವಸೆ	೪೨೩
ಉಪಾಸನೆಗೆ ತಕ್ಕ ಫಲ	೪೨೪
ಸರ್ವಶಬ್ದವಾಚಕತ್ವದ ಬಗ್ಗೆ ಜೈಮಿನಿಋಷಿಗಳ ಅಭಿಪ್ರಾಯ	೪೨೪
ಜೈಮಿನ್ಯಾಚಾರ್ಯರ ಅಭಿಪ್ರಾಯ	೪೨೫
ಮತ್ತೊಮ್ಮೆ ಜೈಮಿನ್ಯಾಚಾರ್ಯರ ಉಲ್ಲೇಖಕ್ಕೆ ಏನು ಕಾರಣ ?	೪೨೬

ವಿವಿಧ ಉಪಾಸನೆಗೆ ಶ್ರುತಿಯೇ ಆಧಾರ ೪೨೭
'ಪ್ರಾಪ್ನುವಂತಿ' ಎಂಬುದು ಏಕವಚನವೇ ಆಗಿದೆ ೪೨೭
ಮುಖ್ಯಾರ್ಥ ಪರಿತ್ಯಾಗ ಮಾಡಿ ಲಕ್ಷಣಾ ಮಾಡಬಹುದೇ ? ೪೨೮
ಲೋಕವ್ಯವಹಾರಕ್ಕೆ ಔಪಚಾರಿಕತ್ವವನ್ನು ಹೇಳಬೇಕು ೪೨೮
ಋಗ್ಭಾಷ್ಯದಲ್ಲಿ ಸೂಕ್ತ ವ್ಯವಸ್ಥೆ ೪೨೯
'ಆಮನಂತಿ ಚೈನಮಸ್ಮಿನ್' ಎಂಬ ಸೂತ್ರ ವ್ಯಾಖ್ಯಾನ ೪೩೦
ಅಗ್ನ್ಯಾದಿ ದೇವತೆಗಳಲ್ಲಿ ಆಯಾ ಹೆಸರಿನಿಂದಲೇ ವಿಷ್ಣುವಿನ ಸನ್ನಿಧಾನ ೪೩೦
ಅಗ್ನಿಯಲ್ಲಿ ನೆಲೆಸಿದವನು ಪರಮಾತ್ಮನೇ ಆಗಿದ್ದಾನೆ ೪೩೧
ಅಗ್ನ್ಯಾದಿಗಳಲ್ಲಿರುವವನು ಪರಮಾತ್ಮನೇ ೪೩೨
ಸೂತ್ರದ ಚಶಬ್ದಾರ್ಥ ೪೩೩
ಭಗವಂತನು ದೊರೆಯಬೇಕಾದರೆ ಅವನನ್ನೇ ಉಪಾಸನೆ ಮಾಡಬೇಕು ೪೩೪
ಸರ್ವಗತನಾದ ಪರಮಾತ್ಮನೇ ವೈಶ್ವಾನರನೆಂದು ಸಿದ್ಧವಾಯಿತು ೪೩೪
ಸೂತ್ರದ ಚಶಬ್ದಾರ್ಥ ೪೩೫
ಸೂತ್ರದಲ್ಲಿರುವ ಚಶಬ್ದ ವ್ಯಾಖ್ಯಾನ ೪೩೬
ತತ್ತ್ವಪ್ರದೀಪದಲ್ಲಿ ಮಾಡಿದ ಚಶಬ್ದವ್ಯಾಖ್ಯಾನ ೪೩೬
ಸೂತ್ರದಲ್ಲಿ ಪ್ರಯೋಗಿಸಿದ ಸಾಧ್ಯಹೇತುಗಳ ಬಗ್ಗೆ ೪೩೭
'ವೈಶ್ವಾನರನು ವಿಷ್ಣು' ಎಂದು ಉಪಸಂಹಾರ ಮಾಡಿದರೆ ಸಾಲದು ೪೩೭
ಸರ್ವಗತನಾದ ವಿಷ್ಣುವೇ ವೈಶ್ವಾನರನೆಂದು ಉಪಸಂಹಾರ ಮಾಡಬೇಕು ೪೩೭
'ಪ್ರಾದೇಶಮಾತ್ರಂ' ಎಂಬ ಶ್ರುತಿಯನ್ನು ವಿವಕ್ಷಿಸಬೇಕು ೪೩೮
ಅಗ್ನಿಗೂ ವೈಶ್ವಾನರನಿಗೂ ಅಭೇದವಿಲ್ಲ ೪೩೮
ಸೂತ್ರದಲ್ಲಿ ಪ್ರಕರಣಾತ್ ಎಂದಷ್ಟೇ ಹೇಳಿದರೆ ಸಾಲದು ೪೩೯
ವೈಶ್ವಾನರನೇ ಪುರುಷ ೪೩೯
'ಬೇರೆಯವರು ಪ್ರತಿಪಾದ್ಯರಲ್ಲ' ಎಂಬುದನ್ನು ಅವಶ್ಯ ತಿಳಿಯಬೇಕು ೪೩೯
ತಂತ್ರದೀಪಿಕೆಯಲ್ಲಿ ವೈಶ್ವಾನರಾಧಿಕರಣದ ಸೂತ್ರಗಳು ೪೪೧
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ವೈಶ್ವಾನರಾಧಿಕರಣ ೪೫೦

ದ್ಯುಭ್ವಾದ್ಯಧಿಕರಣ

ಬ್ರಹ್ಮಸೂತ್ರ

'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಎಂಬ ಸೂತ್ರ ವ್ಯಾಖ್ಯಾನ ೪೫೮

ಬ್ರಹ್ಮಸೂತ್ರಭಾಷ್ಯ

ಉಭಯತ್ರಪ್ರಸಿದ್ಧ ಶಬ್ದಗಳ ಸಮನ್ವಯಕ್ಕಾಗಿ ಮೂರನೆಯ ಪಾದ ೪೫೯
ರುದ, ಜೀವ ಇವರುಗಳೀಕೆ ದ್ಯುಭ್ವಾದ್ಯಾಯತನರಲ್ಲ ೪೫೯
ಸ್ವರ್ಗಾದಿ ಲೋಕಗಳಿಗೆ ಮಹಾವಿಷ್ಣುವೇ ಆಧಾರ ೪೬೨

ಸತ್ತರ್ಕದೀಪಾವಳಿ

ಮೂರನೆಯ ಪಾದದ ಪ್ರಮೇಯ ೪೬೩
ಗ್ರಂಥಿಶಬ್ದದ ಅರ್ಥ ೪೬೪
ಜೀವನು ದ್ಯುಭ್ವಾದ್ಯಾಶ್ರಯತನನು ಏಕಲ್ಲ ? ೪೬೪
ಪರವಿದ್ಯೆಗೆ ವಿಷಯನಾದವನೇ ದ್ಯುಭ್ವಾದ್ಯಾಶ್ರಯನು ೪೬೪
ಆತ್ಮಶಬ್ದದ ಮುಖ್ಯಾರ್ಥ ಯಾರು ? ೪೬೫
ಆತ್ಮ ಎಂದರೆ ಮಹಾವಿಷ್ಣು ಮಾತ್ರ ೪೬೫

ತತ್ತ್ವಪ್ರದೀಪ

ಪರವಿದ್ಯೆಗೆ ವಿಷಯನಾದವನೇ ಪ್ರಾಣಾಧಾರ ೪೬೬
ಪ್ರಾಣಾಧಾರನೇ ದುಭ್ವಾದ್ಯಾಶ್ರಯ ೪೬೬
ರುದ್ರ, ಜೀವ, ವಾಯು ಇವರುಗಳು ದುಭ್ವಾದ್ಯಾಶ್ರಯರರೇ ? ೪೬೭
ಅಧಿಕರಣದ ಸಂಶಯ ೪೬೮
ಎಲ್ಲಾ ಅಧಿಕರಣಗಳಲ್ಲಿ ಸಂಶಯಕೋಟಿ ತಿಳಿಯುವ ಬಗ್ಗೆ ೪೬೯
ಈ ಪ್ರಸಿದ್ಧನ್ಯಾಯವನ್ನು ಅನುಸರಿಸಿರಿ ೪೬೯
ನಾವೇಕೆ ಎಲ್ಲಾ ಅಧಿಕರಣಗಳಲ್ಲಿ ಸಂಶಯಾದಿಗಳನ್ನು ತೋರಿಸುವುದಿಲ್ಲ ? ೪೬೯
ಅಧಿಕರಣಗಳ ರಚನೆಗೆ ದಿಕ್‌ಪ್ರದರ್ಶನ ಮಾಡಿದ್ದೇವೆ ೪೭೦
ವಿಷಯಾದಿಗಳನ್ನು ನೀವೇ ತಿಳಿದುಕೊಳ್ಳಿ ೪೭೩
ಈ ಅಧಿಕರಣದ ಪೂರ್ವಪಕ್ಷ ೪೭೩
ವಿಷ್ಣುವೇ ದುಭ್ವಾದ್ಯಾಶ್ರಯನೆಂದು ಸಿದ್ಧಾಂತ ೪೭೪
ಆತ್ಮಶಬ್ದದ ಮುಖ್ಯಾರ್ಥ ವಿಷ್ಣುವೇ ಏಕೆ ? ೪೭೫
ಶೈವರು ಅನುಮಾನ ಮಾಡುವರು ೪೭೭
ಶೈವಾಗಮವೇ ಅನುಮಾನಾತ್ಮಕ ೪೭೭
ಶೈವಾಗಮವು ಅಪ್ರಮಾಣ ೪೭೮
ಪಶುಪತಿ ನಿರ್ದುಷ್ಟನಲ್ಲ ೪೭೮
ಪರೋವರೀಯಾನ್ ಮಹಾವಿಷ್ಣು ೪೭೮

ಶರ್ವಃ ಶಂರೋಧನಾದ್ ಹರಿಃ ೪೭೯
ತತ್ತ್ವಪ್ರಕಾಶಿಕಾ
ತೃತೀಯಪಾದ ಪ್ರತಿಪಾದ್ಯವಾದ ಪ್ರಮೇಯ ೪೭೯
ಭಾಷ್ಯದಲ್ಲಿ 'ಪ್ರಾಯೇಣ' ಎಂದೇಕೆ ಹೇಳಿರುವರು ? ೪೮೦
ಅಧಿಕರಣದ ವಿಷಯವಾಕ್ಯ ಯಾವುದು ? ೪೮೦
ಶ್ರುತ್ಯಾದಿಸಂಗತಿಗಳು ೪೮೧
ದ್ಯುಭ್ವಾದ್ಯಾಯತನನೇ ಪರವಿದ್ಯೆಗೆ ವಿಷಯ ೪೮೧
ದ್ಯುಭ್ವಾದ್ಯಾಯತನನು ಯಾರು ? ೪೮೨
ಸಂದೇಹ ಹಾಗೂ ಪೂರ್ವಪಕ್ಷ ೪೮೨
ರುದ್ರನೇ ದ್ಯುಭ್ವಾದ್ಯಾಯತನನೆಂದು ಪೂರ್ವಪಕ್ಷ ೪೮೨
ಶ್ರುತಿಯಲ್ಲಿರುವ ರುದ್ರನ ಅಸಾಧಾರಣಲಿಂಗಗಳು ೪೮೩
ರುದ್ರನೇ ದ್ಯುಭ್ವಾದ್ಯಾಯತನನೆನಲು ಅನುಮಾನ ೪೮೩
ಜಡವಾದ ಪ್ರಕೃತಿ ದ್ಯುಭ್ವಾದ್ಯಾಯತನನೆಂದು ಮತ್ತೊಂದು ಪೂರ್ವಪಕ್ಷ ೪೮೪
ಜೀವನೂ ಸಹ ದ್ಯುಭ್ವಾದ್ಯಾಯತನನೆಂದು ಮೂರನೆಯ ಪೂರ್ವಪಕ್ಷ ೪೮೪
'ವಾಯು' ದ್ಯುಭ್ವಾದ್ಯಾಯತನನೆಂದು ನಾಕನೆಯ ಪೂರ್ವಪಕ್ಷ ೪೮೫
ವಿಷ್ಣು ದ್ಯುಭ್ವಾದ್ಯಾಯತನನ್ನೆನ್ನಲು ಬಾಧಕಗಳು ೪೮೫
ಜೀವೇಶ್ವರರಿಗೆ ಅಭೇದವಿರುವುದರಿಂದ ಪೂರ್ವಪಕ್ಷವು ಪ್ರಬಲವಾಗಿದೆ ೪೮೬
ಕಾರಣದ ಧರ್ಮ ಕಾರ್ಯದಲ್ಲಿದೆ, ಕಾರ್ಯದ ಧರ್ಮ ಕಾರಣದಲ್ಲಿಲ್ಲ ೪೮೬
ರುದ್ರಾದಿಗಳೇ ಪರವಿದ್ಯೆಗೆ ವಿಷಯ ೪೮೬
ಸಿದ್ಧಾಂತಸ್ಥಾಪನೆಗೆ ಅವತಾರಿಕೆ ೪೮೭
ಸ್ವತಃ ಭಾಷ್ಯಕಾರರೇ ಪಾದಪ್ರಮೇಯವನ್ನು ಏಕೆ ಹೇಳುತ್ತಿರುವರು ? ೪೮೮
ಪಾದಗಳಲ್ಲಿರುವ ಪೌರ್ವಾಪರ್ಯ ೪೯೨
ನಾಮಲಿಂಗಾತ್ಮಕ ಶಬ್ದಗಳ ಸಮನ್ವಯ ೪೯೨
ಶ್ರುತಿಸಾಧಾರಣ್ಯದಿಂದ ಉಭಯತ್ರಪ್ರಸಿದ್ಧಿ ೪೯೩
ಪಾಠಾಂತರದ ಬಗ್ಗೆ ೪೯೫
'ರುದ್ರೋ ವಾವ ಲೋಕಾಧಾರಃ' ಎಂಬುದೇಕೆ ವಿಷಯವಾಕ್ಯ ? ೪೯೫
ಆಕಾಶಶಬ್ದಕ್ಕೆ ಪ್ರಕೃತಿ ಎಂದೇಕೆ ಅರ್ಥ ? ೪೯೫
'ಸರ್ವೇ ವಾ' ಎಂಬ ಶ್ರುತ್ಯರ್ಥ ೪೯೬
ಉಭಯತ್ರವೆಂದೇ ಏಕೆ ಹೇಳಿದ್ದಾರೆ ? ೪೯೬
ಉಭಯತ್ರಪ್ರಸಿದ್ಧಿಯನ್ನು ಹೀಗೆ ತಿಳಿಯಬೇಕು ೪೯೭
ಉಭಯತ್ರಪ್ರಸಿದ್ಧಿಯ ಬಗ್ಗೆ ತಾತ್ಪರ್ಯಚಂದ್ರಿಕೆಯಲ್ಲಿ ೪೯೭
ಮೂರು ಅಂತರ್ಭಾವಸಂಗತಿಗಳು ಹೀಗಿವೆ ೪೯೭

ಸಂಗತಿಪರವಾದ ಭಾಷ್ಯ	೪೯೮
ಸಿದ್ಧಾಂತದ ಉಪಯೋಗಕ್ಕಾಗಿ ವಾಕ್ಯಶೇಷ	೪೯೯
ತತ್ತ್ವಪ್ರದೀಪದಲ್ಲಿ ವಾಕ್ಯಶೇಷದ ಬಗ್ಗೆ ವ್ಯಾಖ್ಯಾನ	೪೯೯
'ಪ್ರಾಣಾನಾಂ ಗ್ರಂಥಿರಸಿ' ಎಂಬ ಭಾಷ್ಯದ ವ್ಯಾಖ್ಯಾನ	೪೯೯
ರುದ್ರಾದಿಗಳು ದ್ಯುಭ್ವಾದ್ಯಾಯತನರಾಗುತ್ತಾರೆನ್ನಲು ಕಾರಣ	೫೦೦
'ಅನ್ಯೇಶಾಂ' ಎಂಬ ಬಹುವಚನ ಪ್ರಯೋಗದ ಸ್ವಾರಸ್ಯ	೫೦೦
ಸಂಗತಿಪರವಾದ ಭಾಷ್ಯವೇ ಪೂರ್ವಪಕ್ಷ ಪರ	೫೦೧
ಸೂತ್ರಗಳಿಂದ ವ್ಯಾವರ್ತ್ಯವಾದ ಪೂರ್ವಪಕ್ಷ	೫೦೧
ಮೂರು ಬಗೆಯ ಲಿಂಗಗಳಿಗೆ ಮೂರು ಬಗೆಯ ಸಮಾಖ್ಯಾ ಪ್ರಮಾಣಗಳು	೫೦೨
ರುದ್ರನು ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು 'ರುದ್ರೋ ವಾವ' ಎಂಬ ಶ್ರುತಿಯ ಸಮಾಖ್ಯಾನ	೫೦೨
ಬಹುಶ್ರುತಿಗಳಲ್ಲಿರುವ ಲಿಂಗಬಾಹ್ಯುಲವು ರುದ್ರನಲ್ಲೇ	೫೦೩
ಪೂರ್ವಪಕ್ಷ ಶ್ರುತಿಗಳು ನಿರವಕಾಶ	೫೦೪
ಅನುಮಾನಾತ್ಮಕ ಆಗಮದಿಂದ ರುದ್ರನು ಪ್ರತಿಪಾದ್ಯನಲ್ಲ	೫೦೪
'ನೈವ ಶಾಸ್ತ್ರಂ ಕುರ್ವರ್ತ್ಯ ತತ್'	೫೦೫
ಶಾಸ್ತ್ರಯೋನಿತ್ವಾಧಿಕರಣದಲ್ಲಿ ಹೇಳಲ್ಪಟ್ಟ ಯುಕ್ತಿಯ ವಿರೋಧ	೫೦೫
ಪೂರ್ವಪಕ್ಷವು ಬಹುಪ್ರಮಾಣಗಳಿಂದ ಬಲಿಷ್ಠವಾಗಿದೆ	೫೦೬
'ರುದ್ರೋ ವಾವ ಲೋಕಾಧಾರಃ' ಎಂಬ ಶ್ರುತಿಯಿಂದ ಸರ್ವಾಧಾರತ್ವದ ಆಕ್ಷೇಪ	೫೦೭
ತತ್ತ್ವನಿರ್ಣಯದಲ್ಲಿ ಹೇಳಿದ ಪೂರ್ವಪಕ್ಷವನ್ನೇ ಪ್ರಬಲಗೊಳಿಸಿದ್ದಾರೆ	೫೦೭
'ಪ್ರಾಣಭೃಚ್ಚ' ಎಂಬ ಸೂತ್ರದಿಂದ ಸೂಚಿತವಾದ ಮೊದಲನೆಯ ಯುಕ್ತಿ	೫೦೭
'ಪ್ರಾಣಭೃಚ್ಚ' ಎಂಬ ಸೂತ್ರದಿಂದ ಸೂಚಿತವಾದ ಎರಡನೆಯ ಯುಕ್ತಿ	೫೦೮
ವಿಷ್ಣುವಿನಲ್ಲಿ ದ್ಯುಭ್ವಾದ್ಯಾಯತನತ್ವವನ್ನು ತಿಳಿಯಬಾರದು	೫೦೮
'ಭೇದವ್ಯಪದೇಶಾಚ್ಚ' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷ	೫೦೯
ನಾಕು ಪೂರ್ವಪಕ್ಷಗಳ ಉಪಸಂಹಾರ	೫೧೪
ವಿಷ್ಣುರೇವ ಎಂಬ ಅವಧಾರಣದ ಅರ್ಥ	೫೧೪
ಸಿದ್ಧಾಂತವು ಸೂತ್ರಕ್ಕೆ ವಿಸಂವಾದವಲ್ಲ	೫೧೫
'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರ ವ್ಯಾಖ್ಯಾನ	೫೧೭
ಬ್ರಹ್ಮಸೂತ್ರಭಾಷ್ಯ	
ಮುಕ್ತಪ್ರಾಪ್ಯನೇ ಆತ್ಮಶಬ್ದವಾಚ್ಯ	೫೧೭
ಮುಕ್ತಪ್ರಾಪ್ಯನಾದವನು ಮಹಾವಿಷ್ಣುವೇ	೫೧೮
ಆತ್ಮಶಬ್ದಕ್ಕೆ ಅಮುಖ್ಯಾರ್ಥವನ್ನು ಸ್ವೀಕರಿಸಬಹುದೇ ?	೫೨೦
ದ್ಯುಭ್ವಾದ್ಯಾಯತನನೇ ಮುಕ್ತರಿಂದ ಪ್ರಾಪ್ಯ	೫೨೧

ಬೇರೆಯವರು ಮುಕ್ತರಿಂದ ಪ್ರಾಪ್ಯರಲ್ಲ ೫೨೧
ಸೂತ್ರಕ್ಕೆ ಅವತಾರಿಕೆ ೫೨೨
ಸೂತ್ರದಲ್ಲಿ ಸಾಧ್ಯದ ಅಧ್ಯಾಹಾರವು ಆವಶ್ಯಕ ೫೨೨
'ವಿಷ್ಣುರೇವ' ಎಂದೇಕೆ ಭಾಷ್ಯದಲ್ಲಿ ಹೇಳಿರುವರು ? ೫೨೨
'ಪರಾಣಾಂ' ಇತ್ಯಾದಿ ಟೀಕೆಯ ವ್ಯಾಖ್ಯಾನ ೫೨೩
'ನಾऽನುಮಾನಮತಚ್ಛಬ್ದಾತ್' ಎಂಬ ಸೂತ್ರ ವ್ಯಾಖ್ಯಾನ ೫೨೪
ರುದ್ರನು ದ್ಯುಭ್ವಾದ್ಯಾಯತನನಲ್ಲ ೫೨೫
ರುದ್ರನಿಗೆ ಸಂಬಂಧಪಟ್ಟ ಯಾವುದೇ ಲಿಂಗಗಳು ಕೇಳಿಸುತ್ತಿಲ್ಲ ೫೨೫
ಇಲ್ಲಿರುವ ಧರ್ಮಗಳು ವಿಷ್ಣುವಿಗೆ ಮಾತ್ರ ಸಂಬಂಧಪಟ್ಟವೆ ೫೨೬
ರುದ್ರಾದಿಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯ ೫೨೭
ನಾನಾವಿಧ ಶಬ್ದಗಳಿಂದ ತ್ರಿವಿಕ್ರಮನೇ ಪ್ರತಿಪಾದ್ಯ ೫೨೯
ವಾಮನಪುರಾಣದಿಂದ ಸರ್ವಶಬ್ದ ವಾಚ್ಯತ್ವ ೫೨೯
ನಾರಾಯಣನು ದೇವತೆಗಳಿಂದ ತನ್ನ ಹೆಸರುಗಳನ್ನು ನೀಡಿದ್ದಾನೆ ೫೩೦
ಬ್ರಾಹ್ಮಪುರಾಣದಲ್ಲಿ ಹೆಸರುಗಳನ್ನು ಹಂಚಿದ ಬಗ್ಗೆ ೫೩೧
ಪ್ರಥಮಸೂತ್ರದ ಮೇಲೆ ಬಂದ ಆಕ್ಷೇಪದ ಪರಿಹಾರಕ್ಕಾಗಿ ಮುಂದಿನ ಸೂತ್ರ ೫೩೨
ರುದ್ರ ಪ್ರಕೃತ್ಯಾದಿಗಳೇಕೆ ದ್ಯುಭ್ವಾದ್ಯಾಯತನರಲ್ಲ ೫೩೩
ರುದ್ರಾದಿ ಪ್ರತಿಪಾದಕ ಶಬ್ದಗಳೇ ಇಲ್ಲ ೫೩೩
ಪೂರ್ವಪಕ್ಷಿಗೆ ಸಮ್ಮತವಾದ ಅನುಮಾನವು ದುಷ್ಟವಾಗಿದೆ ೫೩೪
ಪ್ರಕೃತಿಪರ ಪೂರ್ವಪಕ್ಷ ಭಾಷ್ಯಕಾರರಿಗೆ ಸಮ್ಮತವೇ ? ೫೩೪
ರುದ್ರಜ್ಞಾಪಕವಾದ ಲಿಂಗಗಳು ಎಲ್ಲಿವೆ ? ೫೩೫
ದ್ಯುಭ್ವಾದ್ಯಾಯತನತ್ವವು ವಿಷ್ಣುವಿನ ಲಿಂಗ ೫೩೫
ಎರಡು ಪ್ರಶ್ನೆಯ ಉತ್ತರಕ್ಕಾಗಿ ಬ್ರಹ್ಮಾಂಡಪುರಾಣದ ಮಾತು ೫೩೫
'ವೇದೇಷು ಸಪುರಾಣೇಷು ಗೀಯತೇ' ೫೩೬
ನಾರಾಯಣಶಬ್ದವು ರುದ್ರನನ್ನೇಕೆ ಹೇಳಬಾರದು ? ೫೩೬
ಅಮುಖ್ಯವೃತ್ತಿಯಿಂದ ನಾರಾಯಣಾದಿ ಶಬ್ದಗಳು ಇತರರಲ್ಲಿ ಏಕೆ ಬರುವುದಿಲ್ಲ ? ೫೩೭
ರುದ್ರಾದಿಶಬ್ದಗಳು ವಿಷ್ಣುಪ್ರತಿಪಾದಕವಾದರೆ ವ್ಯವಹಾರ ಹೇಗೆ ? ೫೩೭
ಭಾಷ್ಯದಲ್ಲಿರುವ ರುದ್ರಪದವು ತ್ರಿಗುಣತ್ವಾದಿಗಳಿಗೆ ಉಪಲಕ್ಷಕ ೫೩೮
ಪೂರ್ವಪಕ್ಷಕಾರರ ಅನುಮಾನಕ್ಕೆ ದೋಷ ೫೩೮
ಆಗಮಪ್ರಮಾಣಸಾಧಕ ಅನುಮಾನಕ್ಕೆ ಸತ್ಪ್ರತಿಪಕ್ಷ ಹಾಗೂ ಅತಿಪ್ರಸಂಗ ೫೩೯
ಭಾಷ್ಯಕಾರರಿಗೆ ಅಸಮ್ಮತವಾದದ್ದನ್ನು ಟೀಕೆಯಲ್ಲಿ ಹೇಳಿಲ್ಲ ೫೩೯
ಅಂತರಾಧಿಕರಣದಿಂದ ಗತಾರ್ಥವಲ್ಲ ೫೪೦
ರುದ್ರಾದಿ ಪ್ರತಿಪಾದಕ ಲಿಂಗಗಳು ಸಾವಕಾಶವಾಗಿವೆ ೫೪೦

'ಪ್ರಾಣಭೃಚ್ಚ' ಎಂಬ ಸೂತ್ರ ವ್ಯಾಖ್ಯಾನ ೫೪೩
ಆತ್ಮಶಬ್ದ - ಮುಕ್ತಪ್ರಾಪ್ಯತ್ವಗಳು ಜೀವ ಹಾಗೂ ವಾಯುದೇವರಲ್ಲಿ ಇಲ್ಲ ೫೪೩
ಬಹುಧಾಜಾಯಮಾನತ್ವವು ವಿಷ್ಣುವಿನ ಧರ್ಮ ೫೪೪
ಜೀವಪ್ರಾಪಕ ಪೂರ್ವಪಕ್ಷಕ್ಕಾಗಿ ಮೂರನೆಯ ಸೂತ್ರ ೫೪೫
ಜೀವ ಹಾಗೂ ವಾಯು ಇವರು ದ್ಯುಭ್ವಾದ್ಯಾಯತನರು ಏಕಲ್ಲ ? ೫೪೫
ಬಹುಧಾಜಾಯಮಾನತ್ವವು ಜೀವಪ್ರಾಪಕಲಿಂಗವಲ್ಲ ೫೪೬
ತಾತ್ಪರ್ಯಚಂದ್ರಿಕೆಯಲ್ಲಿ ಸೂತ್ರದಲ್ಲಿರುವ 'ಚ'ಶಬ್ದ ವ್ಯಾಖ್ಯಾನ ೫೪೬
ಸೂತ್ರದಲ್ಲಿರುವ ಚಶಬ್ದದಿಂದ ಎಷ್ಟು ಹೇತುಗಳನ್ನು ಅನುಕರ್ಷ ಮಾಡಬೇಕು ? ೫೪೭
ರುದ್ರಾದಿಶಬ್ದಗಳಿಗೆ ವಿಷ್ಣುಪರತ್ವವೂ ಕೂಡ ಸೂತ್ರದ ಹೇತು ೫೪೮
'ಅನ್ಯನಾಮ್ನಾಂ ಗತಿರ್ವಿಷ್ಣುಃ' ೫೪೮
ಬೃಹದಾರಣ್ಯಕದ ಪಂಚಮಾಧ್ಯಾಯದಲ್ಲಿ ವಾಯುದೇವನ ಬಗ್ಗೆ ೫೪೯
ಅಂತರ್ಯಾಮಿ ಪರವಾಗಿ ಉಪನಿಷತ್ತನ್ನು ಅರ್ಥೈಸಬೇಕು ೫೫೦
ಉಳಿದವರ ಲಿಂಗಗಳು ಸಾವಕಾಶ ೫೫೧
'ಭೇದವ್ಯಪದೇಶಾತ್' ಎಂಬ ಸೂತ್ರ ವ್ಯಾಖ್ಯಾನ ೫೫೨
ಜೀವ-ಬ್ರಹ್ಮರಿಗೆ ಅಭೇದವನ್ನು ಹೇಳಬಾರದು ೫೫೩
'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯ ವ್ಯಾಖ್ಯಾನ ೫೫೪
ಜೀವನು ದ್ಯುಭ್ವಾದ್ಯಾಯತನನಲ್ಲ ಎಂದು ಹೇಳಲಾಯಿತು ೫೫೪
ಜೀವಪರಮಾತ್ಮರಿಗೆ ಅಭೇದವಿದೆಯೆಂದು ಪೂರ್ವಪಕ್ಷ ೫೫೫
ಈ ಪ್ರಕರಣದಲ್ಲಿ ಜೀವೇಶ್ವರಭೇದವೇ ಪ್ರತಿಪಾದ್ಯವಾಗಿದೆ ೫೫೫
'ನಚ ಏಕಂ ವಾಚ್ಯಮ್' ಎಂಬ ಭಾಷ್ಯದ ಮಾತಿಗೆ ಅನೇಕ ಮಜಲಿನ ಅರ್ಥಗಳು ೫೫೫
ಭೇದವೇ ಶ್ರುತಿಪ್ರತಿಪಾದ್ಯ ೫೫೬
ಶ್ರುತಿಯಿಂದ ಜೀವ-ಬ್ರಹ್ಮಭೇದ ಸ್ಥಾಪನೆ ೫೫೮
ಬಹುಧಾಜಾಯಮಾನತ್ವವೆಂಬ ಲಿಂಗಸಮನ್ವಯದ ಬಗ್ಗೆ ೫೫೯
'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಯ ವ್ಯಾಖ್ಯಾನ ೫೬೦
'ಜೀವಾದನ್ಯಃ ಸ್ತ್ವಂತ್ಯೋ ಯಃ' ೫೬೧
'ಪ್ರಕರಣಾತ್' ಎಂಬ ಸೂತ್ರ ವ್ಯಾಖ್ಯಾನ ೫೬೨
ಬ್ರಹ್ಮಪ್ರಕರಣದಲ್ಲಿರುವ ಶಬ್ದಗಳಿಂದ ಬ್ರಹ್ಮನೇ ಪ್ರತಿಪಾದ್ಯ ೫೬೩
'ದ್ವೇ ವಿದ್ಯೇ ವೇದಿತವ್ಯೇ ಎಂಬ ಶ್ರುತಿಯ ವ್ಯಾಖ್ಯಾನ ೫೬೩
ಸಂಪೂರ್ಣ ಪ್ರಕರಣವು ಜೀವೇಶಭೇದ ಪರವಾಗಿದೆ ೫೬೪
ಜೀವೇಶಭೇದವು ಶ್ರುತ್ಯುಕ್ತ ೫೬೬
ಸೂತ್ರದಲ್ಲಿ ಸಾಧ್ಯ ಅಧ್ಯಾಹಾರ ಆವಶ್ಯಕ ೫೬೭
ಶ್ರುತಿಲಿಂಗಗಳು ಪರಮಾತ್ಮ ಪರ ೫೬೮

ಪರವಿದ್ಯಾವಿಷಯತ್ವವು ಉಪಕ್ರಮದಲ್ಲಿದೆ	೫೬೮
'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬ ಶ್ರುತಿಯ ವ್ಯಾಖ್ಯಾನ	೫೬೮
ಉಪಕ್ರಮದಲ್ಲಿ ಪ್ರಸಕ್ತನಾದ ವ್ಯಕ್ತಿಯೇ ಸಮಗ್ರ ಪ್ರಕರಣ ಪ್ರತಿಪಾದ್ಯ	೫೬೯
'ಸ್ಥಿತ್ಯದನಾಭ್ಯಾಂಚ' ಎಂಬ ಸೂತ್ರ ವ್ಯಾಖ್ಯಾನ	೫೭೦
ವಿರುದ್ಧ ಧರ್ಮವುಳ್ಳ ಜೀವೇಶ್ವರರಿಗೆ ಅಭೇದವು ಕೂಡದು	೫೭೦
'ದ್ವಾಸುಪರ್ಣಾ' ಎಂಬ ಶ್ರುತಿಯ ಸಮನ್ವಯ	೫೭೨
ಕರ್ಮಫಲಭೋಕ್ತವಲ್ಲದ ಈಶ್ವರನ ಜೊತೆ ಜೀವನಿಗೆ ಐಕ್ಯವು ಸಲ್ಲದು	೫೭೨
ಭಾಗವತದಲ್ಲಿ 'ದ್ವಾಸುಪರ್ಣಾ' ಶ್ರುತ್ಯರ್ಥ	೫೭೩
ಭೋಗನಿರ್ಣಯದಲ್ಲಿ 'ದ್ವಾಸುಪರ್ಣಾ' ಶ್ರುತ್ಯರ್ಥ	೫೭೪
ಪರಮಭೋಗದಲ್ಲಿ 'ದ್ವಾಸುಪರ್ಣಾ' ಶ್ರುತ್ಯರ್ಥ	೫೭೫
ಸ್ವಾಭಾವ್ಯದಲ್ಲಿ 'ದ್ವಾಸುಪರ್ಣಾ' ಶ್ರುತ್ಯರ್ಥ	೫೭೫
ಕೂರ್ಮಸಂಹಿತೆಯಲ್ಲಿ 'ದ್ವಾಸುಪರ್ಣಾ' ಶ್ರುತ್ಯರ್ಥ	೫೭೬
ಅತತ್ವಾವೇದಕವಾದರೆ ಪ್ರಮಾಣವೇ ಅಲ್ಲ	೫೭೬
ಅತತ್ವಾವೇದಕವಾದ ರಜತಭ್ರಾಂತಿಯು ಅಪ್ರಮಾಣ	೫೭೮
ಗಗನ ಮಾಲಿನ್ಯದಲ್ಲಿ ವ್ಯಭಿಚಾರ	೫೭೮
ದೇಶಕಾಲಗಳಿಗೆ ಬಾಧ್ಯತ್ವ ಹೇಳಲಾಗದು	೫೭೯
ನಿರವಧಿಕವಾದ ಬಾಧವೇ ಇಲ್ಲ	೫೮೦
ವೇದಪ್ರಾಮಾಣ್ಯದ ಮುಖವಾಡ ಹಾಕಿಕೊಂಡ ಪ್ರಚ್ಛನ್ನಶೂನ್ಯವಾದಿಗಳು	೫೮೧
'ತತ್ತ್ವಮಸಿ' ಎಂಬ ವಾಕ್ಯವೂ ಕೂಡ ತತ್ವಾವೇದಕವಲ್ಲ	೫೮೨
ತತ್ತ್ವಮಸಿ ಎಂಬಲ್ಲಿ ಜಹದಜಹಲ್ಲಕ್ಷಣ ಮಾಡಬಹುದೇ ?	೫೮೩
'ಸೋಽಯಂ ದೇವದತ್ತಃ' ಎಂಬಲ್ಲಿ ಲಕ್ಷಣಾವೃತ್ತಿ ಅಲ್ಲ	೫೮೪
ವಾಚ್ಯವಿಶಿಷ್ಟವಾದದ್ದೇ ಲಕ್ಷ್ಯವಾಗುತ್ತದೆ	೫೮೪
ವಾಚ್ಯಾರ್ಥದಿಂದ ಅವಿಶಿಷ್ಟವಾದದ್ದರಲ್ಲಿ ಲಕ್ಷಣಾವೂ ಕೂಡುವುದಿಲ್ಲ	೫೮೫
ಅದ್ವೈತಿಗಳೇ ! ಪ್ರಮಾಣಸಿದ್ಧವಾದ ಭೇದನಿರಾಸಕ್ಕಾಗಿ ಏಕಿಷ್ಟು ಉತ್ಸಾಹ ?	೫೮೬
ಅಪ್ರಮಿತವಾದ ಐಕ್ಯವನ್ನು ವಿವಕ್ಷಿಸಬಾರದು	೫೮೭
ತತ್ತ್ವಮಸಿ ಶ್ರುತಿಯಿಂದ ಐಕ್ಯವನ್ನು ವಿವಕ್ಷಿಸಲಾಗದು	೫೮೭
ಭೇದವಾಕ್ಯವು ಅತತ್ವಾವೇದಕವೆಂದರೆ ಅನ್ಯೋನ್ಯಾಶ್ರಯದೋಷ	೫೮೮
ಎಲ್ಲವೂ ಸತ್ಯ	೫೮೯
ಜಗತ್ತು ಸತ್ಯ ಎಂಬುದೇ ಜ್ಞಾನಿಗಳ ಮತ	೫೯೦
ಶ್ರೇಯೋರ್ಥಿಗಳು ಅದ್ವೈತಮತವನ್ನು ಹೇಯವೆನ್ನುತ್ತಾರೆ	೫೯೦
ಜೀವೇಶರ ಅಭೇದವು ಪ್ರಕರಣ ಪ್ರತಿಪಾದ್ಯವಲ್ಲ	೫೯೧
ಜೀವಪರಮಾತ್ಮರೆಂಬ ಎರಡು ಹಕ್ಕಿಗಳು	೫೯೧

ಸೂತ್ರದಲ್ಲಿ ಶ್ರುತಿಕ್ರಮದ ಉಲ್ಲಂಘನೆ ಮಾಡಿಲ್ಲ	೫೯೨
ವ್ಯಾವಹಾರಿಕ ಸತ್ಯವು ಅಪ್ರಾಮಾಣಿಕ	೫೯೨
ಶ್ರುತಿಯು ಅನುವಾದಕವಲ್ಲ	೫೯೩
'ತತ್ತ್ವಮಸಿ' ಎಂಬ ಶ್ರುತಿಯು ಅದ್ವೈತಪರವಲ್ಲ	೫೯೩
'ಭೇದಃ ಮಿಥ್ಯಾ ಭೇದತ್ವಾತ್' ಎಂಬ ಅನುಮಾನವು ಬಾಧಿತ	೫೯೪
ಶ್ರುತಿ ಹಾಗೂ ಅನುಮಾನಗಳು ಭಿನ್ನವಿಷಯಕವಲ್ಲ	೫೯೪
ಆಗಮವು ಭೇದಮಿಥ್ಯಾತ್ವವನ್ನು ಹೇಳಿಲ್ಲ	೫೯೫
ಎಷ್ಟೂವೇ ಪರವಿದ್ಯೆಗೆ ವಿಷಯನೆಂದು ಒಪ್ಪಬೇಕು	೫೯೫
ಜೀವನು ದ್ಯುಭ್ವಾದ್ಯಾಯತನನಲ್ಲ ಎನ್ನಲು ಮತ್ತೊಂದು ಹೇತು	೫೯೬
ಏಕಾದಶಸ್ಕಂಧದಲ್ಲಿ 'ದ್ವಾ ಸುಪರ್ಣಾ' ಶ್ರುತ್ಯರ್ಥ	೫೯೬
ತಾತ್ಪರ್ಯಚಂದ್ರಿಕೆಯಲ್ಲಿ ಬುದ್ಧಿಜೀವಪರತ್ವದ ನಿರಾಕರಣೆ	೫೯೭
'ಅದನಸ್ಥಿತಿಭ್ಯಾಂ' ಎಂದೇಕೆ ಸೂತ್ರದಲ್ಲಿ ಹೇಳಿಲ್ಲ ?	೫೯೭
'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಗೆ ಏನರ್ಥ ?	೫೯೮
'ವಾಚೋ ಯುಕ್ತೇಃ' ಎಂಬ ಪ್ರಯೋಗ ವ್ಯಾಕರಣ ಸಮ್ಮತ	೫೯೮
ನಿರಾಕರಣೆಗಾಗಿ ಅನುವಾದವಲ್ಲ	೫೯೯
ಭೇದನಿಷ್ಠಾತ್ವವು ಸಿದ್ಧವಾಗುವುದಿಲ್ಲ	೫೯೯
'ನಾನುಮಾನಮತಚ್ಛಬ್ದಾತ್' ಎಂಬ ಸೂತ್ರವನ್ನು ಅನುವೃತ್ತಿ ಮಾಡಬೇಕು	೬೦೦
ಮಿಥ್ಯಾತ್ವಸಾಧಕ ಅನುಮಾನಕ್ಕೆ ಶ್ರುತಿವಿರೋಧ	೬೦೦
ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲ	೬೦೦
ತಾತ್ಪರ್ಯಚಂದ್ರಿಕೆಯಲ್ಲಿ ಸೂತ್ರಾರ್ಥಗಳ ಸ್ವಾರಸ್ಯ	೬೦೧
ತಂತ್ರದೀಪಿಕೆಯಲ್ಲಿ ದ್ಯುಭ್ವಾದ್ಯಧಿಕರಣದ ಸೂತ್ರಗಳು	೬೦೩
ಅದ್ವೈತಮತ ಹಾಗೂ ರಾಮಾನುಜಮತದಲ್ಲಿ ದ್ಯುಭ್ವಾದಧಿಕರಣ	೬೧೧
ಪರಿಶಿಷ್ಟ	೬೨೦-೬೩೬

ರಾಯರ ಹೃದಯಾಕಾಶದಲ್ಲಿ ಕಾಂತಿ ತುಂಬಿದೆ

ದಿನಕರ, ನಿಶಾಕರ, ಉಷ್ಣಕರರ ಪ್ರಕಾಶವೇನು,

ಗ್ರಹಗಳೇನು, ಅಗಣಿತ ನಕ್ಷತ್ರಗಳೇನು,

ಮಿಂಚುಗಳ ಸಮೂಹವೇನು,

ಮುತ್ತು ರತ್ನ ಹವಳಾದಿಗಳ ರಾಶಿಗಳೇನು,

ಎಲ್ಲದರ ಒಟ್ಟೂ ಕಾಂತಿಯನ್ನೂ ಮೀರಿದೆ.

ಈ ಎಲ್ಲಾ ಬೆಳಕುಗಳೂ ಅನಂತ ಪದಾರ್ಥಗಳನ್ನು ತೋರಬಲ್ಲವು.

ರಾಯರ ಅಂತರಂಗದ ಬೆಳಕು

ಅನಂತಾನಂತ ಕಲ್ಯಾಣಗುಣೈಕಧಾಮನ

ಚರಣ ಕಮಲವ ತೋರುವುದು !!

ಇಂದು ಶ್ರೀರಾಘವೇಂದ್ರ ಗುರುಸಾರ್ವಭೌಮರ

ಅಮೃತಮಯಕೃತಿಗಳಿಂದ ಫಲಗಳುಂಟಾಗಿ

ಮಧ್ವಸಿದ್ಧಾಂತವೆಂಬ ಮಹಾವೃಕ್ಷವು ಸೊಬಗಿನಿಂದ ಕಂಗೊಳಿಸುತ್ತಿದೆ.

ಪ್ರಕಾಶನ

ಶ್ರೀ ಗುರುಸಾರ್ವಭೌಮ ಸಂಶೋಧನ ಮಂದಿರ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಶ್ರೀ ರಾಘವೇಂದ್ರಸ್ವಾಮಿಗಳ ಮಠ

ಮಂತ್ರಾಲಯ - 518 345 (ಆಂಧ್ರ ಪ್ರದೇಶ)